ಭಗವಾನ್ ಶ್ರೀವೇದವ್ಯಾಸಪ್ರಣೀತ

ಮಹಾಭಾರತ

ಲಕ್ಷಾಲಂಕಾರಕ್ಕೆ ಅನುಗುಣವಾಗಿ
ಮಹಾಭಾರತತಾತ್ಪರ್ಯನಿರ್ಣಯದೊಂದಿಗೆ
ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ

ಆದಿಪರ್ವ

ಭಾಗ-2

ಪ್ರಕಾಶಕರು

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದೆ

ಪಲಿಮಾರು ಮಠ, ಉಡುಪಿ

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-2

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜತೀರ್ಥರ
ಲಕ್ಷಾಲಂಕಾರದೊಂದಿಗೆ ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ)

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್॥ ಪಿ. ಎಸ್. ಶೇಷಗಿರಿ ಆಚಾರ್ಯ,

ಮೈಸೂರು.

ಪ್ರಕಾಶಕರು :

ತತ್ವಸಂಶೋಧನಾ ಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ - ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಕೃತಿಗಳನ್ನು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ಷಷ್ಟಿಪೂರ್ತಿಯ ಸಮಾರಂಭದಲ್ಲಿ ಮನ್ಮಥ ಸಂ/ ಕಾರ್ತಿಕ ಬಹುಳ ತೃತೀಯಾ (28.11.2015) ದಂದು ತಿರುಮಲಕ್ಷೇತ್ರದಲ್ಲಿ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಅನಾವರಣಗೊಳಿಸಿ ಶ್ರೀನಿವಾಸನ ಅಡಿದಾವರೆಗಳಲ್ಲಿ ಸಮರ್ಪಿಸಿದರು.

ಆದಿಪರ್ವ ಭಾಗ-೨

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-44-6

ಪುಟಗಳು	-	VIII + 758= 766
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ವಸಂಶೋಧನ ಸಂಸತ್, ಪಲಿಮಾರು ಮಠ, ಉಡುಪಿ.
ಪುಟ ಸಂಯೋಜನೆ	-	ಎಂ. ಶರತ್ ಚಂದ್ರ
ಅಕ್ಷರ ಜೋಡಣೆ	-	ಬೆಮ್ಮತ್ತಿ ಶ್ರೀನಿವಾಸ ಮತ್ತು ಶ್ರೀಮತಿ ಎಸ್. ನಾಗಲತಾ
ಮುದ್ರಕರು	-	ಪವನ ಪ್ರಿಂಟರ್ಸ್, ಬೆಂಗಳೂರು. ✆ : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಿಷಯಾನುಕ್ರಮಣಿಕೆ

ಮಹಾಭಾರತ

ಆದಿಪರ್ವ ಭಾಗ-೨

		ಪುಟ ಸಂ.
1.	ಕುರುವಂಶ ಕಥನ ಪ್ರಾರಂಭ. ಸಂಕ್ಷೇಪವಾಗಿ ಯಾಯಾತಿಯ ಚರಿತೆಯ ನಿರೂಪಣೆ	1
2.	ಯಯಾತಿಯ ಚರಿತ್ರೆಯನ್ನು ವಿಸ್ತಾರವಾಗಿ ಹೇಳಲು ಪ್ರಾರಂಭ. ಕಚನು ಶುಕ್ರಾಚಾರ್ಯರಲ್ಲಿ ಶಿಷ್ಯವೃತ್ತಿಯನ್ನು ಮಾಡಿ, ಮೃತಸಂಜೀವನೀವಿದ್ಯೆಯನ್ನು ಸಂಪಾದಿಸುವುದು	13
3.	ಕಚನಲ್ಲಿ ದೇವಯಾನಿಯ ಪ್ರೀತಿ ಮತ್ತು ಪರಸ್ಪರ ಶಾಪದಾನ	31
4.	ಶರ್ಮಿಷ್ಠೆ ದೇವಯಾನಿಯರ ಕಲಹ, ಯಯಾತಿಯಿಂದ ದೇವಯಾನಿಯ ಉದ್ಧರಣ	36
5.	ಶುಕ್ರದೇವಯಾನಿಯರ ಸಂವಾದ	48
6.	ಶುಕ್ರರ ಕೋಪವಚನ, ವೃಷಪರ್ವನ ಕ್ಷಮಾಯಾಚನೆ ಮತ್ತು ಶರ್ಮಿಷ್ಠೆಯ ದಾಸ್ಯಭಾವ	54
7.	ಯಯಾತಿ ದೇವಯಾನಿಯರ ವಿವಾಹ, ಯಯಾತಿಯನ್ನು ಕುರಿತು ಶುಕ್ರಾಚಾರ್ಯರ ಆದೇಶ	62
8.	ದೇವಯಾನಿಗೆ ಪುತ್ರೋತ್ಪತ್ತಿ. ದೇವಯಾನಿಗೆ ತಿಳಿಯದಂತೆ ಶರ್ಮಿಷ್ಠೆಗೂ ಪುತ್ರೋತ್ಪತ್ತಿ	73
9.	ಯಯಾತಿ ಶರ್ಮಿಷ್ಠೆಯರ ಪ್ರಣಯ ಪ್ರಸಂಗ. ದೇವಯಾನಿಯು ದೂರು, ಶುಕ್ರಾಚಾರ್ಯರ ಶಾಪ ಮತ್ತು ಪಾಕ್ಷಿಕ ಪರಿಹಾರ	83
10.	ಶಾಪದಿಂದ ಯಯಾತಿಯ ವಿಹ್ವಲತೆ, ಉಳಿದ ಮಕ್ಕಳಿಂದ ನಿರಾಕರಣೆ, ಪೂರುವಿನ ಪಿತೃಭಕ್ತಿ, ಅವನಿಗೆ ಯಯಾತಿಯ ವರಪ್ರದಾನ	96
11.	ಯಯಾತಿಯ ವೈರಾಗ್ಯ, ಪೂರುವಿಗೆ ರಾಜ್ಯಾಭಿಷೇಕ ಮತ್ತು ಯಯಾತಿಯ ವನಪ್ರಾಪ್ತಿ	104

12. ತಪಸ್ಸನ್ನು ಆಚರಿಸಿ, ಯಯಾತಿಯ ಸ್ವರ್ಗಗಮನ,
ಇಂದ್ರನಿಂದ ಪತನ ಮತ್ತು ಪುನಃ ಸ್ವರ್ಗ ಪ್ರಾಪ್ತಿ 112

13. ಸ್ವರ್ಗದಲ್ಲಿ ಇಂದ್ರ ಯಯಾತಿಯ ಸಂವಾದ, ಪೂರುವಿಗೆ ರಾಜ್ಯವನ್ನು
ಕೊಡುವಾಗ ಯಯಾತಿಯ ಉಪದೇಶದ ಕಥನ 116

14. ಸಂವಾದದ ಮಧ್ಯದಲ್ಲಿ ಯಯಾತಿಯ ಅಹಂಕಾರವಚನ,
ಸ್ವರ್ಗದಿಂದ ಸಜ್ಜನರ ಮಧ್ಯೆ ಪತನ, ಅಷ್ಟಕಪ್ರಶ್ನ 122

15. ಯಯಾತಿಯಿಂದ ತನ್ನ ಪರಿಚಯ ಕಥನ, ಅಷ್ಟಕನೊಂದಿಗೆ ಸಂವಾದ 126

16. ಮೃತನಾದವನಿಗೆ ಸ್ವರ್ಗಾದಿಭೋಗಾನಂತರದಲ್ಲಿ ಶರೀರಾಂತರಪ್ರಾಪ್ತಿ
ಮತ್ತು ಪುನರ್ಜನ್ಮ ಪ್ರಕಾರದ ಕಥನ 134

17. ಅಷ್ಟಕಯಯಾತಿಸಂವಾದ, ಬ್ರಹ್ಮಚರ್ಯಾದಿ ಆಶ್ರಮಧರ್ಮಕಥನ 144

18. ಅಷ್ಟಕ ಮತ್ತು ಪ್ರತರ್ದನರ ಜೊತೆಯಲ್ಲಿ ಯಯಾತಿಯ ಸಂವಾದ,
ಅವರು ಕೊಡಲಿಚ್ಛಿಸಿದ ಪುಣ್ಯಲೋಕಗಳ ನಿರಾಕರಣೆ 150

19. ವಸುಮನಾ ಮತ್ತು ಶಿಬಿಯೊಡನೆ ಯಯಾತಿಯ ಸಂವಾದ,
ಅವರ ಪುಣ್ಯಲೋಕಗಳ ನಿರಾಕರಣೆ, ಪುನಃ ಅಷ್ಟಕನೊಡನೆ ಸಂವಾದ 157

20. ಸಿಂಹಾವಲೋಕನ ನ್ಯಾಯದಿಂದ ಪುನಃ ಪೂರುವಂಶ ಕಥನ 170

21. ದುಷ್ಮಂತನ ಸಾಮ್ರಾಜ್ಯದ ಸಂಕ್ಷೇಪವಾದ ವರ್ಣನೆ 174

22. ದುಷ್ಮಂತನ ಬೇಟೆ, ಅರಣ್ಯ ಪ್ರವೇಶ ಮತ್ತು ಮೃಗಗಳ ವಧೆ 177

23. ಬೇಟೆಯಾಡುವ ಪ್ರಸಂಗದಿಂದ ದುಷ್ಮಂತನ ಕಣ್ವಾಶ್ರಮ ಪ್ರಾಪ್ತಿ
ಮತ್ತು ಆ ಆಶ್ರಮದ ವರ್ಣನೆ 183

24. ಆಶ್ರಮದಲ್ಲಿ ದುಷ್ಮಂತ ಶಕುಂತಲೆಯರ ಸಮಾಗಮ, ಪರಸ್ಪರ ಸಂಭಾಷಣೆ 193

25. ವಿಶ್ವಾಮಿತ್ರರಿಂದ ಮೇನಕೆಯಲ್ಲಿ ಶಕುಂತಲೆಯ ಜನ್ಮಕಥನ 205

26. ದುಷ್ಮಂತ ಶಕುಂತಲೆಯರ ವಿವಾಹ, ಶಕುಂತಲೆಯ ಷರತ್ತು,
ಕಣ್ವರಿಂದ ವಿವಾಹದ ಅನುಮೋದನೆ 211

27. ಶಕುಂತಲೆಯ ಗರ್ಭವೃದ್ಧಿ, ಮೂರು ವರ್ಷಗಳ ನಂತರ ಪುತ್ರೋತ್ಪತ್ತಿ,
ಶಿಶುವಿನ ನಾಮಕರಣ ಮತ್ತು ಬಾಲಲೀಲೆಗಳು 225

28. ದುಷ್ಷಂತ ಶಕುಂತಲೆಯರ ಸಂವಾದ. ಶಕುಂತಲೆಯಿಂದ ಪತ್ನಿ ಮತ್ತು ಪುತ್ರರ ಮಹತ್ವದ ವರ್ಣನೆ 248

28. ಶಕುಂತಲೆಯ ವಾದ, ದುಷ್ಷಂತನ ನಿರಾಕರಣೆ, ಶಕುಂತಲೆಯ ಆಶ್ರಮಕ್ಕೆ ಹಿಂದಿರುಗುವ ಪ್ರಯತ್ನ 272

29. ಅಶರೀರವಾಣಿ. ದುಷ್ಷಂತನಿಂದ ಪತ್ನೀಪುತ್ರರ ಸ್ವೀಕಾರ, ಭರತನ ರಾಜ್ಯಾಭಿಷೇಕ ಮತ್ತು ಅವನ ಚರಿತೆ 282

30. ಭರತವಂಶದಲ್ಲಿ ಮಹಾಭಿಷಜನ ಜನನ. ಅವನಿಗೆ, ಗಂಗೆಗೆ ಬ್ರಹ್ಮಶಾಪ, ಗಂಗೆ ಮತ್ತು ಅಷ್ಟವಸುಗಳ ಸಂವಾದ 306

31. ಪ್ರತೀಪ-ಗಂಗೆಯರ ಪ್ರಸಂಗ, ಶಂತನುವಿನ ಜನ್ಮ. ಅವನಿಗೆ ರಾಜ್ಯಾಭಿಷೇಕ, ಮತ್ತು ಗಂಗೆಯ ಜೊತೆಯಲ್ಲಿ ಸಂವಾದ 311

32. ಗಂಗೆಯಿಂದ ಸಪ್ತಶಿಶುಗಳ ಹನನ, ಅಷ್ಟಮಶಿಶುವನ್ನು ಉಳಿಸಿ, ಶಂತನುವಿಗೆ ರಹಸ್ಯವನ್ನು ತಿಳಿಸಿ, ಸ್ವರ್ಗಲೋಕ ಗಮನ 328

33. ವಸುಗಳಿಗೆ ವಸಿಷ್ಠರಿಂದ ಶಾಪ ಬಂದ ಪ್ರಕಾರ 337

34. ಶಂತನುವಿನ ರಾಜ್ಯಭಾರ ಕ್ರಮ, ಗಂಗೆಯಿಂದ ದೇವವ್ರತನ ಸಮರ್ಪಣೆ, ದೇವವ್ರತನಿಗೆ ಯುವರಾಜ್ಯದಲ್ಲಿ ಅಭಿಷೇಕ 350

35. ಶಂತನು ದಾಶಕನ್ಯಾಪ್ರಸಂಗ, ಭೀಷ್ಮರ ಪಾತ್ರ, 'ಭೀಷ್ಮ' ಎಂಬ ನಾಮಕರಣ 359

36. ಶಂತನು-ಸತ್ಯವತಿಯರ ವಿವಾಹ, ಚಿತ್ರಾಂಗದನ ಉತ್ಪತ್ತಿ ಮತ್ತು ಮರಣ. ವಿಚಿತ್ರವೀರ್ಯ ರಾಜ್ಯಾಭಿಷೇಕ 378

37. ಭೀಷ್ಮರ ದಿಗ್ವಿಜಯ, ಕಾಶೀರಾಜನ ಕನ್ಯೆಯರ ಅಹರಣ, ಅಂಬೆಯ ಪ್ರಕರಣ 385

38. ಅಂಬೆಯ ಅಲೆದಾಟ, ದ್ರುಪದನ ಗೃಹದ್ವಾರದಲ್ಲಿ ಮಾಲೆಯ ನಿಕ್ಷೇಪ. ಶಿಖಂಡಿಯಿಂದ ಅದರ ಧಾರಣೆ ಮತ್ತು ಶಿಖಂಡಿಗೆ ಪುರುಷಭಾವ 408

39. ವಿಚಿತ್ರವೀರ್ಯನಿಗೆ ಅಂಬಿಕೆ, ಅಂಬಾಲಿಕೆಯರ ಜೊತೆಯಲ್ಲಿ ವಿವಾಹ, ವಿಚಿತ್ರವೀರ್ಯನ ಮರಣ. ಅವನ ಪತ್ನಿಯರಲ್ಲಿ ಮಕ್ಕಳನ್ನು ಪಡೆಯಲು ಭೀಷ್ಮರ ನಿರಾಕರಣೆ 415

40. ಭೀಷ್ಮರಿಂದ ಸತ್ಯವತಿಯನ್ನು ಕುರಿತು ದಿರ್ಘತಮಸರ ಚರಿತ್ರಕಥನ 422

41. ಕುಲವೃದ್ಧಿಗಾಗಿ ಭೀಷ್ಮ ಮತ್ತು ಸತ್ಯವತಿಯರ ಸಂವಾದ 432

42. ಸತ್ಯವತಿಯಿಂದ ಭೀಷ್ಮರನ್ನು ಕುರಿತು ವ್ಯಾಸರ ಜನ್ಮಕಥನ.
ತಾಯಿಯಿಂದ ಸ್ಮೃತರಾಗಿ ವ್ಯಾಸರ ಆಗಮನ 437

43. ವ್ಯಾಸರಿಂದ ಧೃತರಾಷ್ಟ್ರ, ಪಾಂಡು ಮತ್ತು ವಿದುರರ ಜನನ 454

44. ಯಮನಿಗೆ ಮಾಂಡವ್ಯರ ಶಾಪ ಮತ್ತು ವಿದುರನಾಗಿ ಅವತಾರ 464

45. ಕುಂತಿಯ ಪೂರ್ವವೃತ್ತಾಂತ, ದುರ್ವಾಸರ ಮಂತ್ರೋಪದೇಶ,
ಕರ್ಣನ ಉತ್ಪತ್ತಿ ಮತ್ತು ಪರಿತ್ಯಾಗ. ದಾಶರಾಜನಿಂದ ಕರ್ಣನ
ಸ್ವೀಕಾರ ಮತ್ತು ಸಂಕ್ಷೇಪವಾಗಿ ಕರ್ಣನ ಚರಿತ್ರೆ 489

46. ಪಾಂಡುವಿನ ವಿವಾಹ, ದಿಗ್ವಿಜಯ, ಅರಣ್ಯಗಮನ ಮತ್ತು ಕಿಂದಮಶಾಪ 504

47. ಪಾಂಡುವಿನ ಶೋಕ, ಕುಂತಿ ಮಾದ್ರಿಯರ ಜೊತೆಯಲ್ಲಿ ಸಂವಾದ,
ಸಂನ್ಯಾಸವನ್ನು ಸ್ವೀಕರಿಸದೆ, ವಾನಪ್ರಸ್ಥಧರ್ಮಾಚರಣೆ,
ವಿದುರನ ವಿವಾಹ ಮತ್ತು ಪುತ್ರೋತ್ಪತ್ತಿ 517

48. ಗಾಂಧಾರಿಯ ಗರ್ಭಧಾರಣೆ, ಪಾಂಡುವಿಗೆ ಪುತ್ರಚಿಂತೆ,
ಕುಂತಿಯಿಂದ ಪಾಂಡುವನ್ನು ಕುರಿತು ವ್ಯುಷಿತಾಶ್ವಚರಿತ ನಿರೂಪಣೆ 536

49. ಪಾಂಡುವಿನ ಉತ್ತರ, ಉದ್ದಾಲಕರ ಕಥೆ, ಕುಂತಿಯಿಂದ
ದುರ್ವಾಸರಿಂದ ಮಂತ್ರಪ್ರಾಪ್ತಿಯ ಕಥನ 552

50. ಪಾಂಡುವಿನ ಹರ್ಷ, ಯಮ ವಾಯುಗಳಿಂದ ಕುಂತಿಯಲ್ಲಿ
ಯುಧಿಷ್ಠಿರ ಭೀಮಸೇನರ ಉತ್ಪತ್ತಿ. ಅಶರೀರವಾಣಿ 572

51. ಗಾಂಧಾರಿಯಲ್ಲಿ ದುಶ್ಶಲೆಯ ಜನನ 588

52. ದುರ್ಯೋಧನಾದಿ ನೂರು ಪುತ್ರರ ನಾಮ ಕಥನ,
ಜಯದ್ರಥ ದುಶ್ಶಲೆಯರ ವಿವಾಹ 592

53. ಕುಂತಿಯಲ್ಲಿ ಇಂದ್ರನಿಂದ ಅರ್ಜುನನ ಉತ್ಪತ್ತಿ ಮತ್ತು ಅಶರೀರವಾಣಿ 597

54. ಅಶ್ವಿನೀದೇವತೆಗಳಿಂದ ಮಾದ್ರಿಯಲ್ಲಿ ನಕುಲ ಸಹದೇವರ ಜನನ,
ಪಾಂಡವರ ನಾಮಕರಣ, ಉಪನಯನ ಸಂಸ್ಕಾರ, ಮತ್ತು
ಶರ್ಯಾತಿಯ ಪುತ್ರನಾದ ಶುಕನಿಂದ ಶಸ್ತ್ರಾಭ್ಯಾಸ 616

55. ಯುಧಿಷ್ಠಿರ ಮೊದಲಾದವರ ಆಯುರ್ಭಾವ ಕಥನ 628

56. ಪಾಂಡುವಿನ ಮರಣ, ಮಾದ್ರಿಯ ಸಹಗಮನ, ಉತ್ತರಕ್ರಿಯೆ 633

57. ಯುಧಿಷ್ಠಿರಾದಿಗಳನ್ನು ಕರೆದುಕೊಂಡು ಹಸ್ತಿನಪುರಕ್ಕೆ ಬಂದು ಭೀಷ್ಮಾದಿಗಳಿಗೆ ಪಾಂಡವರನ್ನು ಸಮರ್ಪಿಸಿ ಋಷಿಗಳ ಪ್ರತಿನಿವೃತ್ತಿ 655

58. ಪಾಂಡು ಮತ್ತು ಮಾದ್ರಿಯರಿಗೆ ರಾಜೋಚಿತ ಉತ್ತರಕ್ರಿಯಾವಿಧಿ 665

59. ಪಾಂಡುವಿಗೆ ಶ್ರಾದ್ಧದಾನ, ವ್ಯಾಸರ ಮಾತಿನಂತೆ, ಸತ್ಯವತಿ, ಅಂಬಿಕೆ ಅಂಬಾಲಿಕೆಯರ ತಪೋವನಗಮನ 673

60. ಕುಮಾರರ ವಿಹಾರ, ಭೀಮನ ಪ್ರಾಬಲ್ಯ, ದುರ್ಯೋಧನನ ಈರ್ಷ್ಯೆ, ಭೀಮನನ್ನು ಕೊಲ್ಲಲು ಪ್ರಯತ್ನ 681

61. ದುರ್ಯೋಧನನಿಂದ ಪುನಃ ಭೀಮನಿಗೆ ವಿಷದಾನ, ಭೀಮನ ನಾಗಲೋಕ ಪ್ರಾಪ್ತಿ ಮತ್ತು ಅಲ್ಲಿ ಸನ್ಮಾನ 691

62. ಗೌತಮರಿಂದ ಶರಸ್ತಂಬದಲ್ಲಿ ಕೃಪ ಮತ್ತು ಕೃಪಿಯರ ಜನನ. ಶಂತನುವಿನಿಂದ ಆ ಶಿಶುಗಳ ಸ್ವೀಕಾರ 705

63. ದ್ರೋಣರ ಉತ್ಪತ್ತಿ, ಪರಶುರಾಮರಿಂದ ಅಸ್ತ್ರಪ್ರಾಪ್ತಿ. ಅಶ್ವತ್ಥಾಮರ ಜನನ 717

64. ದ್ರುಪದನಿಂದ ದ್ರೋಣರಿಗೆ ಅವಮಾನ, ದ್ರೋಣರ ಹಸ್ತಿನಪುರಗಮನ 726

65. ದ್ರೋಣ ಮತ್ತು ರಾಜಕುಮಾರರ ಸಮಾಗಮ, ದ್ರೋಣರ ಕೌಶಲ, ಭೀಷ್ಮರ ಆದೇಶದಂತೆ ಎಲ್ಲಾ ಕುಮಾರರಿಗೆ ದ್ರೋಣರಲ್ಲಿ ಶಿಷ್ಯವೃತ್ತಿ 733

66. ಏಕಲವ್ಯಕಥಾ, ಅವನ ಗುರುಭಕ್ತಿ ಮತ್ತು ಗುರುದಕ್ಷಿಣಾದಾನ 749

—0—

ಮಹಾಭಾರತ

ಆದಿಪರ್ವ - ಭಾಗ-೨

ಅರವತ್ತನಾಲ್ಕನೆಯ ಅಧ್ಯಾಯ

(ಕುರುವಂಶ ಕಥನ ಪ್ರಾರಂಭ. ಸಂಕ್ಷೇಪವಾಗಿ ಯಾಯಾತಿಯ ಚರಿತೆಯ ನಿರೂಪಣೆ.)

ಜನಮೇಜಯಃ

ತತ್ತಃ ಶ್ರುತಮಿದಂ ಬ್ರಹ್ಮನ್ ದೇವದಾನವರಕ್ಷಸಾಮ್ ।
ಅಂಶಾವತರಣಂ ಸಮ್ಯಗ್ ಗಂಧರ್ವಾಪ್ಸರಸಾಂ ತಥಾ ॥೧॥

ಇಮಂ ತು ಭೂಯ ಇಚ್ಛಾಮಿ ಕುರೂಣಾಂ ವಂಶಮಾದಿತಃ ।
ಕಥ್ಯಮಾನಂ ತ್ವಯಾ ವಿಪ್ರ ವಿಪ್ರರ್ಷಿಗಣಸನ್ನಿಧೌ ॥೨॥

ಬ್ರಾಹ್ಮಣಶ್ರೇಷ್ಠರೇ ತಮ್ಮಿಂದ ದೇವ, ದಾನವ, ರಾಕ್ಷಸರ ಮತ್ತು ಗಂಧರ್ವಾಪ್ಸರಸರ ಈ ಅಂಶಾವತರಣವನ್ನು ಚೆನ್ನಾಗಿ ಕೇಳಿದ್ದೇನೆ. ಎಲೈ ಬ್ರಾಹ್ಮಣರೇ, ಪುನಃ ನಾನು ಈ ವಿಪ್ರರ್ಷಿಗಳ ಸಮ್ಮುಖದಲ್ಲಿ ಕುರುಗಳ ವಂಶವನ್ನು ಮೊದಲಿನಿಂದಲೂ ಕೇಳ ಬಯಸುತ್ತೇನೆ.

ವೈಶಂಪಾಯನಃ

ಧರ್ಮಕಾಮಾರ್ಥಸಹಿತಂ ರಾಜರ್ಷೀಣಾಂ ಪ್ರಕೀರ್ತಿತಮ್ ।
ಪವಿತ್ರಂ ಕೀರ್ತ್ಯಮಾನಂ ಮೇ ನಿಬೋಧೇದಂ ಮನೀಷಿಣಾಮ್ ॥೩॥

ಎಲೈ ರಾಜನೇ ಮೇಧಾವಿಗಳೂ, ರಾಜರ್ಷಿಗಳೂ ಆದ ಅವರ ಪವಿತ್ರವಾದ ಧರ್ಮಾರ್ಥಕಾಮಸಹಿತವಾದ ಚರಿತ್ರೆಯನ್ನು ಹೇಳುತ್ತೇನೆ. ಅದನ್ನು ಕೇಳು.

ಪ್ರಜಾಪತೇಶ್ಚ ದಕ್ಷಸ್ಯ ಮನೋರ್ವೈವಸ್ವತಸ್ಯ ಚ ।
ಭರತಸ್ಯ ಕುರೋಃ ಪೂರೋರಾಜಮೀಢಸ್ಯ ಚಾನ್ವಯೇ ॥೪॥

ಯಾದವಾನಾಮಿಮಂ ವಂಶಂ ಪೌರವಾಣಾಂ ಚ ಸರ್ವಶಃ ।
ತಥೈವ ಭರತಾನಾಂ ಚ ಪುಣ್ಯಂ ಸ್ವಸ್ತ್ಯಯನಂ ಮಹತ್ ॥೫॥

ದಕ್ಷಪ್ರಜಾಪತಿಯ, ವೈವಸ್ವತ ಮನುವಿನ ಭರತನ, ಕುರು, ಪೂರು, ಆಜಮೀಢನ ವಂಶದಲ್ಲಿ ಬಂದ ಪೌರವರ ಮತ್ತು ಯಾದವರ ವಂಶವನ್ನೂ ಹಾಗೆಯೇ ಭರತನ ವಂಶವನ್ನೂ ಸಮಗ್ರವಾಗಿ ಹೇಳುತ್ತೇನೆ. ಈ ಮಹತ್ತಾದ ಚರಿತ್ರೆಯು ಪುಣ್ಯಪ್ರದವಾದುದು. ಮತ್ತು ಮಂಗಳಪ್ರದವಾದುದು . ಧನಪ್ರದವಾದುದು, ಕೀರ್ತಿ ಮತ್ತು ಆಯುಷ್ಯವನ್ನು ಪ್ರಧಾನ ಮಾಡುವಂತಹುದು.

ಧನ್ಯಂ ಯಶಸ್ಯಮಾಯುಷ್ಯಂ ಕೀರ್ತಯಿಷ್ಯಾಮಿ ತೇऽನಘ ।
ತೇಜೋಭಿರುದಿತಾಃ ಸರ್ವೇ ಮಹರ್ಷಿಸಮತೇಜಸಃ ॥೬॥

ಎಲೈ ನಿರ್ದುಷ್ಟನಾದವನೇ ಈ ರಾಜರುಗಳೆಲ್ಲರೂ ಮಹರ್ಷಿಗಳಿಗೆ ಸಮವಾದ ತೇಜಸುಳ್ಳವರು. ತೇಜಸ್ವಿಗಳಾಗಿಯೇ ಜನಿಸಿದರು. ಅವರ ಚರಿತ್ರೆಗಳನ್ನು ಹೇಳುತ್ತೇನೆ.

ದಶ ಪ್ರಚೇತಸಃ ಪುತ್ರಾ ಆಸನ್ ಪ್ರಾಚೀನಬರ್ಹಿಷಃ ।
ಮೇಘಜೀನಾಗ್ನಿನಾ ಹ್ಯೇತೇ ಪೂರ್ವಂ ದಗ್ಧಾ ಮಹೌಜಸಃ ॥೭॥

ಪ್ರಾಚೀನ ಬರ್ಹಿ ರಾಜನಿಗೆ ಪ್ರಚೇತಸ ಎಂಬ ಸಮಾನವಾದ ಹೆಸರಿನ ಹತ್ತು ಮಕ್ಕಳಾದರು. ಮಹಾಸಾಮರ್ಥ್ಯಶಾಲಿಗಳಾದ ಅವರು ಮೇಘದಿಂದ ಉಂಟಾದ ಅಗ್ನಿಯಿಂದ ದಹಿಸಲ್ಪಟ್ಟರು.

ತೇಭ್ಯಃ ಪ್ರಾಚೇತಸೋ ಜಜ್ಞೇ ದಕ್ಷೋ ದಕ್ಷಾದಿಮಾಃ ಪ್ರಜಾಃ ।
ಸಂಭೂತಾಃ ಪುರುಷವ್ಯಾಘ್ರ ಸ ಹಿ ಲೋಕಪಿತಾಮಹಃ ॥೮॥

ಆ ಹತ್ತುಜನ ಪ್ರಚೇತಸರ ಮಗನಾಗಿ ದಕ್ಷಪ್ರಜಾಪತಿಯು ಜನಿಸಿದನು. ಎಲೈ ಪುರುಷಶ್ರೇಷ್ಠನೇ ದಕ್ಷನಿಂದ ಈ ಎಲ್ಲಾ ಪ್ರಜೆಗಳು ಉದ್ಭವಿಸಿದರು. ದಕ್ಷನೇ ಲೋಕಪಿತಾಮಹ.

ಪರಿಕ್ಷ್ಯ ಸಹ ಸಂಗಮ್ಯ ದಕ್ಷಃ ಪ್ರಾಚೇತಸೋ ಮುನಿಃ ।
ಆತ್ಮತುಲ್ಯಾನಜನಯತ್ ಸಹಸ್ರಂ ಸಂಶಿತವ್ರತಾನ್ ॥೯॥

ತನ್ನ ಪತ್ನಿಯಾದ ಪರಿಕ್ಷಿಯ ಸಂಗದಿಂದ ಪ್ರಾಚೇತಸ ಮುನಿಯು ತನಗೆ ಸಮಾನರಾದಂತಹ ಒಳ್ಳೆಯ ವ್ರತನಿಷ್ಠರಾದಂತಹ ಸಹಸ್ರಪುತ್ರರನ್ನು ಪಡೆದನು.

ಸಹಸ್ರಸಂಖ್ಯಾನ್ ಸಹಿತಾನ್ ಪುತ್ರಾನ್ ದಕ್ಷಸ್ಯ ನಾರದಃ ।
ಮೋಕ್ಷಮಧ್ಯಾಪಯಾಮಾಸ ಸಾಂಖ್ಯಂ ಜ್ಞಾನಮನುತ್ತಮಮ್ ॥೧೦॥

ನಾರದರು ಆ ಸಹಸ್ರಪುತ್ರರಿಗೆ ಒಟ್ಟಿಗೆ ಮೋಕ್ಷಸಾಧನವಾದ ಶ್ರೇಷ್ಠವಾದ ಪರಿಶುದ್ಧಜ್ಞಾನವನ್ನು ಉಪದೇಶಿಸಿದರು.

ನಾಶೀಸ್ತ್ವಂ ಯೋಜಯಾಮಾಸ ದಿಗಂತಜ್ಞಾನಕರ್ಮಸು ।
ತತಃ ಪಂಚಾಶತಂ ಕನ್ಯಾ ಪುತ್ರಿಕಾಃ ಸಸೃಜೇ ಪುನಃ ॥೧೧॥

ಅಗಾಧವಾದ ಜ್ಞಾನವನ್ನು ಸಂಪಾದಿಸುವುದೇ ಕರ್ತವ್ಯವೆಂದು ಹೇಳಿ ನಾರದರು ಅವರೆಲ್ಲರಿಗೂ ಸಂನ್ಯಾಸದೀಕ್ಷೆಯನ್ನು ಕೊಟ್ಟರು. ಅನಂತರ ದಕ್ಷಪ್ರಜಾಪತಿಯು ಐವತ್ತು ಹೆಣ್ಣುಮಕ್ಕಳನ್ನು ಪಡೆದನು.

ಪ್ರಜಾಪತಿಃ ಪ್ರಜಾ ದಕ್ಷಃ ಸಿಸೃಕ್ಷುರ್ಜನಮೇಜಯ ।
ದದೌ ಸ ದಶ ಧರ್ಮಾಯ ಕಾಶ್ಯಪಾಯ ತ್ರಯೋದಶ ।
ಕಾಲಸ್ಯ ನಯನೇ ಯುಕ್ತಾಃ ಸಪ್ತವಿಂಶತಿ ಚೇಂದವೇ ॥೧೨॥

ಜನಮೇಜಯನೇ ದಕ್ಷಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸುವ ಇಚ್ಛೆಯಿಂದ ಹತ್ತುಕನ್ಯೆಯರನ್ನು ಯಮನಿಗೂ ಹದಿಮೂರು ಕನ್ಯೆಯರನ್ನು ಕಾಶ್ಯಪರಿಗೂ, ಕಾಲಚಕ್ರದಲ್ಲಿ ನಿಯೋಜಿಸಲ್ಪಟ್ಟ ಅಶ್ವಿನ್ಯಾದಿ ನಕ್ಷತ್ರನಾಮವುಳ್ಳ ಇಪ್ಪತ್ತೇಳು ಕನ್ಯೆಯರನ್ನು ಚಂದ್ರನಿಗೂ ಕೊಟ್ಟನು.

ತ್ರಯೋದಶಾನಾಂ ಪತ್ನೀನಾಂ ಯಾ ತು ದಾಕ್ಷಾಯಣೀ ವರಾ ।
ಮಾರೀಚಃ ಕಾಶ್ಯಪಸ್ತಸ್ಯಾಮದಿತ್ಯಾಂ ಸಮಜೀಜನತ್ ।
ಇಂದ್ರಾದೀನ್ ವೀರ್ಯಸಂಪನ್ನಾನ್ ವಿವಸ್ವಂತಮಥಾಪಿ ಚ ॥೧೩॥

ಹದಿಮೂರು ಕನ್ಯೆಯರಲ್ಲಿ ಶ್ರೇಷ್ಠಳಾದ ದಕ್ಷಕುಮಾರಿಯಾದ ಅದಿತಿಯನ್ನು ವಿವಾಹ ಮಾಡಿಕೊಂಡ ಮರೀಚಿಪುತ್ರರಾದ ಕಾಶ್ಯಪರು ಅವಳಲ್ಲಿ ಪರಾಕ್ರಮಿಗಳಾದ ಇಂದ್ರಾದಿಗಳನ್ನು ಮತ್ತು ವಿವಸ್ವಂತನನ್ನು ಮಗನನ್ನಾಗಿ ಪಡೆದರು.

ವಿವಸ್ವತಃ ಸುತೋ ಜಜ್ಞೇ ಯಮೋ ವೈವಸ್ವತಃ ಪ್ರಭುಃ ।
ಮಾರ್ತಾಂಡಸ್ಯ ಯಮೀ ಚಾಪಿ ಸುತಾ ರಾಜನ್ನಜಾಯತ ॥೧೪॥

ಎಲೈ ರಾಜನೇ ವಿವಸ್ವಾನ್ನಾಮಕ ಸೂರ್ಯನಿಗೆ ಯಮ ಮತ್ತು ಯಮಿ ಎಂಬ ಎರಡು ಮಕ್ಕಳಾದರು.

ಮಾರ್ತಾಂಡಸ್ಯ ಮನುರ್ಧೀಮಾನ್ ಅಜಾಯತ ಸುತಃ ಪ್ರಭುಃ ।
ಮನೋರ್ವಂಶೋ ಮಾನವಾನಾಂ ತತೋಽಯಂ ಪ್ರಥಿತೋ ಭುವಿ ॥೧೫॥

ವಿವಸ್ವಾನ್ನಾಮಕ ಸೂರ್ಯನ ಮಗನಾಗಿ ಸಮರ್ಥನಾದ ವೈವಸ್ವತಮನುವು ಜನಿಸಿದನು. ಮನುವಿನ ವಂಶವೇ ಮಾನವರ ವಂಶ. ಮಾನವವಂಶವು ಭೂಮಿಯಲ್ಲಿ ಮನುವಿನ ಹೆಸರಿನಿಂದಲೇ ಪ್ರಸಿದ್ಧವಾಗಿದೆ.

ಬ್ರಹ್ಮಕ್ಷತ್ರಾದಯಸ್ತಸ್ಮಾನ್ಮನೋರ್ಜಾತಾಸ್ತು ಮಾನವಾಃ ।
ತತ್ರಾಽಭವತ್ ತದಾ ರಾಜನ್ ಬ್ರಹ್ಮ ಕ್ಷತ್ರೇಣ ಸಂಹಿತಮ್ ।
ಬ್ರಾಹ್ಮಣಾ ಮಾನವಾಸ್ತೇಷಾಂ ಸಾಂಗಂ ವೇದಮಧಾರಯನ್ ॥೧೬॥

ಮನುವಿನಿಂದ ಬ್ರಾಹ್ಮಣ ಕ್ಷತ್ರಿಯ ಮೊದಲಾದ ಮಾನವರು ಜನಿಸಿದರು. ಆಗ ಬ್ರಾಹ್ಮಣರು ಮತ್ತು ಕ್ಷತ್ರಿಯರು ಜೊತೆಯಲ್ಲಿಯೇ ಇದ್ದರು. ಅವರಲ್ಲಿ ಬ್ರಾಹ್ಮಣರಾದ ಮಾನವರು ವೇದಗಳನ್ನು ಮತ್ತು ವೇದಾಂಗಗಳನ್ನು ಅಧ್ಯಯನ ಮಾಡಿ ಆ ವಿದ್ಯೆಯನ್ನು ಧರಿಸಿದರು.

ವೇನಂ ತ್ರಸ್ನುಂ ನರಿಷ್ಯಂತಂ ನಾಭಾಗೇಕ್ಷ್ವಾಕುಮೇವ ಚ ।
ಕರೂಶಮಥ ಶರ್ಯಾತಿಂ ತಥೈವಾತ್ರಾಷ್ಟಮೀಮಿಳಾಮ್ ॥೧೭॥

ವೃಷಧ್ರನವಮಾನಾಹುಃ ಕ್ಷತ್ರಧರ್ಮಪರಾಯಣಾನ್ ।
ತಥೈವ ದಿಷ್ಟದಶಮಾನ್ ಮನೋಃ ಪುತ್ರಾನ್ ಮಹಾಬಲಾನ್ ॥೧೮॥

ವೇನ, ತ್ರಸ್ನು, ನರಿಷ್ಯಂತ, ನಾಭಾಗ, ಇಕ್ಷ್ವಾಕು, ಕರೂಶ, ಶರ್ಯಾತಿ, ಎಂಟನೆಯವಳಾದ ಇಳಾ, ಒಂಭತ್ತನೆಯವನಾದ ವೃಷಧ್ರ, ಮತ್ತು ಹತ್ತನೆಯವನಾದ ದಿಷ್ಟ. ಇವರೆಲ್ಲರೂ ಮಹಾಬಲಿಷ್ಠರಾದ ಕ್ಷತ್ರಿಯಧರ್ಮಪರಾಯಣರಾದ ಮನುವಿನ ಪುತ್ರರು.

ಪಂಚಾಶತಂ ಮನೋಃ ಪುತ್ರಾಃ ತಥೈವಾನ್ಯೇऽಭವನ್ ಕ್ಷಿತೌ ।
ಅನ್ಯೋನ್ಯಭೇದಾತ್ ತೇ ಸರ್ವೇ ವಿನೇಶುರಿತಿ ನಃ ಶ್ರುತಮ್ ॥೧೯॥

ಇವರಲ್ಲದೆ ಮನುವಿಗೆ ಇನ್ನೂ ಐವತ್ತು ಮಕ್ಕಳಾದರು. ಪರಸ್ಪರ ವಿರೋಧದಿಂದ ಅವರೆಲ್ಲರೂ ನಾಶಹೊಂದಿದರೆಂದು ಕೇಳಿದ್ದೇವೆ.

ಪುರೂರವಾಸ್ತತೋ ವಿದ್ವಾನಿಳಾಯಾಂ ಸಮಪದ್ಯತ ।
ಸೈವ ತಸ್ಯಾಭವನ್ಮಾತಾ ಪಿತಾ ಬುಧ ಇತಿ ಶ್ರುತಮ್ ॥೨೦॥

ಅನಂತರ ಇಳೆಯಲ್ಲಿ ಪುರೂರವನು ಜನಿಸಿದನು. ಇಳೆಯು ಅವನ ತಾಯಿ, ಬುಧನು ಅವನ ತಂದೆಯೆಂದು ಕೇಳಿದ್ದೇವೆ.

ತ್ರಯೋದಶ ಸಮುದ್ರಸ್ಯ ದ್ವೀಪಾನಶ್ನನ್ ಪುರೂರವಾಃ ।
ಅಮಾನುಷೈರ್ವೃತಾನ್ ಸರ್ವಾನ್ ಮಾನುಷಃ ಸ ಮಹಾಯಶಾಃ ॥

ಮಾನುಷನಾದ ಪುರೂರವನು ಅಮಾನುಷದಿಂದ ನಿಬಿಡವಾದ ಸಮುದ್ರದ ಹದಿಮೂರು ದ್ವೀಪಗಳನ್ನು ಆಳಿದನು. ಅವನು ಮಹಾಯಶಸ್ವಿಯಾಗಿದ್ದನು.

ವಿಪ್ರೈಃ ಸ ವಿಗ್ರಹಂ ಚಕ್ರೇ ವೀರ್ಯೋನ್ಮತ್ತಃ ಪುರೂರವಾಃ ।
ಪ್ರಜಹಾರ ಸ ವಿಪ್ರಾಣಾಂ ರತ್ನಾನ್ಯುತ್ಕೋಶತಾಮಪಿ ।
ತುತೋಷ ನೈವ ರತ್ನಾನಾಂ ಲೋಭಾದಿತಿ ಚ ನಃ ಶ್ರುತಮ್ ॥೨೨॥

ವೀರ್ಯೋನ್ಮತ್ತನಾದ ಪುರೂರವನು ಬ್ರಾಹ್ಮಣರ ಜೊತೆಯಲ್ಲಿ ವಿರೋಧವನ್ನು ಮಾಡಿಕೊಂಡನು. ಬ್ರಾಹ್ಮಣರು ಕಿರುಚುತ್ತಿದ್ದರೂ ಅದನ್ನು ಎಣಿಸದೇ ಅವರ ರತ್ನವನ್ನು ಅಪಹಾರ ಮಾಡಿದನು. ಅವನ ಲೋಭವು ಎಷ್ಟಿತ್ತೆಂದರೆ ಅವನಿಗೆ ಎಂದೂ ಅದರಿಂದ ತೃಪ್ತಿಯಾಗಲಿಲ್ಲ.

ಸನತ್ಕುಮಾರಸ್ತಂ ರಾಜನ್ ಬ್ರಹ್ಮಲೋಕಾದುಪೇತ್ಯ ಚ ।
ಅನುನೀತಿಂ ತತಶ್ಚಕ್ರೇ ಪ್ರತ್ಯಗೃಹ್ಣಾನ್ನ ಚಾಪ್ಯಸೌ ॥೨೩॥

ಆಗ ಎಲೈ ರಾಜನೇ ಸನತ್ಕುಮಾರನು ಬ್ರಹ್ಮಲೋಕದಿಂದ ಬಂದು, ಅವನಿಗೆ ಹಿತವಾದ ನೀತಿಯನ್ನು ಬೋಧಿಸಿದನು. ಆದರೆ ಪುರೂರವನು ಅದನ್ನು ಸ್ವೀಕರಿಸಲಿಲ್ಲ.

ತತಃ ಸ ಋಷಿಭಿಃ ಕ್ರುದ್ಧೈಃ ಶಪ್ತಃ ಸದ್ಯೋ ವ್ಯನಶ್ಯತ ।
ಲೋಭಾನ್ವಿತೋ ಮಂದಬುದ್ಧಿರ್ನಷ್ಟಸಂಜ್ಞೋ ನರಾಧಿಪಃ ॥೨೪॥

ಆಗ ಲೋಭಯುಕ್ತನೂ, ಮಂದಬುದ್ಧಿಯೂ, ಪ್ರಜ್ಞಾನಾಶವನ್ನು ಹೊಂದಿದವನೂ ಆದ ಆ ರಾಜನು ಕ್ರುದ್ಧರಾದ ಋಷಿಗಳಿಂದ ಶಪ್ತನಾಗಿ ತಕ್ಷಣದಲ್ಲಿ ರಾಜ್ಯಭ್ರಷ್ಟನಾದನು.

ಸ ಚ ಗಂಧರ್ವಲೋಕಸ್ಥ ಉರ್ವಶ್ಯಾ ಸಹಿತೋ ಚಿರಾತ್ ।
ಆನಿನಾಯ ಕ್ರಿಯಾರ್ಥೇऽಗ್ನೀನ್ ಯಥಾವದ್ ವಿಹಿತಾಂಸ್ತಥಾ ॥೨೫॥

ಅವನು ಗಂಧರ್ವಲೋಕ ವಾಸಿಯಾದ ಉರ್ವಶಿ ಜೊತೆಯಲ್ಲಿ ಬಹುಕಾಲ ಜೀವಿಸಿ, ಯಜ್ಞಾರ್ಥವಾಗಿ ವಿಹಿತವಾದ ಮೂರು ಅಗ್ನಿಗಳನ್ನು ಯಥಾವತ್ತಾಗಿ ಸಂಪಾದಿಸಿದನು.

ಷಟ್ ಸುತಾ ಜಜ್ಞಿರೇ ಚೈಲಾದ್ ಆಯುರ್ಧೀಮಾನ್ ನರಸ್ತಥಾ ।
ಗ್ರಹಾಯುಶ್ಚ ವನಾಯುಶ್ಚ ಶ್ರುತಾಯುಶ್ಚೋರ್ವಶೀಸುತಾಃ ॥೨೬॥

ಇಳೆಯ ಮಗನಾದ ಪುರೂರವನಿಗೆ ಉರ್ವಶಿಯಲ್ಲಿ ಆರುಮಕ್ಕಳು ಜನಿಸಿದರು. ಅವರು ಆಯು, ಧೀಮಾನ್, ನರ, ಗ್ರಹಾಯು, ವನಾಯು ಮತ್ತು ಶ್ರುತಾಯು ಎಂಬುವರು.

ನಹುಷಂ ವೃದ್ಧಶರ್ಮಾಣಮಜಿನಂ ರಜಿಮೇನಸಮ್ ।
ಸ್ವರ್ಭಾನವೀಸುತಾನೇತಾನಾಯೋಃ ಪುತ್ರಾನ್ ಪ್ರಚಕ್ಷತೇ ॥೨೭॥

ಅವರಲ್ಲಿ ಆಯು ಸ್ವರ್ಭಾನುವಿನ ಮಗಳನ್ನು (ರಾಹುವಿನ ಮಗಳನ್ನು) ವಿವಾಹವಾಗಿ ನಹುಷ, ವೃದ್ಧಶರ್ಮಾ, ಅಜಿನ, ರಜಿ, ಏನಸ ಎಂಬ ಮಕ್ಕಳನ್ನು ಪಡೆದನು.

ಆಯುಷೋ ನಹುಷಃ ಪುತ್ರೋ ಧೀಮಾನ್ ಸತ್ಯಪರಾಕ್ರಮಃ ।
ರಾಜ್ಯಂ ಶಶಾಸ ಸುಮಹದ್ ಧರ್ಮೇಣ ಪೃಥಿವೀಪತಿಃ ॥೨೮॥

ಆಯುವಿನ ಪುತ್ರನಾದ ನಹುಷನು ಮೇಧಾವಿ ಮತ್ತು ಸತ್ಯಪರಾಕ್ರಮ-ವುಳ್ಳವನಾಗಿದ್ದು, ವಿಶಾಲವಾದ ಪೃಥಿವಿಯನ್ನು ಧರ್ಮದಿಂದ ಆಳಿದನು.

ಪಿತೄನ್ ದೇವಾನೃಷೀನ್ ವಿಪ್ರಾನ್ ಗಂಧರ್ವೋರಗರಾಕ್ಷಸಾನ್ ।
ನಹುಷಃ ಪಾಲಯಾಮಾಸ ಬ್ರಹ್ಮಕ್ಷತ್ರಮಥೋ ವಿಶಃ ॥೨೯॥

ನಹುಷನು ಪಿತೃಗಳನ್ನು, ದೇವತೆಗಳನ್ನು, ವಿಪ್ರರನ್ನು, ಗಂಧರ್ವೋರಗರಾಕ್ಷಸರನ್ನು, ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರನ್ನು ಪಾಲನೆ ಮಾಡಿದನು.

ಸ ಹತ್ವಾ ಶತ್ರುಸಂಘಾತಾನ್ ಋಷೀನ್ ಕರಮದಾಪಯತ್ ।
ಪಶುವಚ್ಚೈವ ತಾನ್ ಪೃಷ್ಠೇ ವಾಹಯಾಮಾಸ ವೀರ್ಯವಾನ್ ॥೩೦॥

ಅವನು ಶತ್ರುಗಳ ಸಮೂಹವನ್ನು ಸಂಹಾರ ಮಾಡಿ ಋಷಿಗಳೂ ಸಹ ಕಪ್ಪಕೊಡುವಂತೆ ಮಾಡಿದನು. ಪರಾಕ್ರಮಶಾಲಿಯಾದ ಅವನು ಋಷಿಗಳು ತನ್ನ ವಾಹನವನ್ನು (ಪಲ್ಲಕ್ಕಿಯನ್ನು) ಹೊತ್ತುತಿರುಗುವಂತೆ ಮಾಡಿದನು.

ಕಾರಯಾಮಾಸ ಚೇಂದ್ರತ್ವಮಭಿಭೂಯ ದಿವೌಕಸಃ ।
ತೇಜಸಾ ತಪಸಾ ಚೈವ ವಿಕ್ರಮೇಣೌಜಸಾ ತಥಾ ।
ವಿಶ್ಲಿಷ್ಟೋ ನಹುಷೋ ಶಪ್ತಃ ಸದ್ಯೋ ಹ್ಯಜಗರೋಽಭವತ್ ॥೩೧॥

ದೇವತೆಗಳನ್ನು ಪರಾಭವಗೊಳಿಸಿ, ಇಂದ್ರನ ಸ್ಥಾನವನ್ನು ಆಕ್ರಮಿಸಿ ರಾಜ್ಯವಾಳಿದನು. ಆದರೆ ಋಷಿಗಳ ಶಾಪಕ್ಕೆ ಒಳಗಾಗಿ ತೇಜಸ್ಸಿನಿಂದಲೂ, ತಪಸ್ಸಿನಿಂದಲೂ, ವಿಕ್ರಮದಿಂದಲೂ, ಬಲದಿಂದಲೂ, ಚ್ಯುತನಾಗಿ ತಕ್ಷಣದಲ್ಲಿಯೇ ಅಜಗರನಾದನು.

ಯತಿಂ ಯಯಾತಿಂ ಸಂಯಾತಿಮಾಯಾತಿಂ ಯಾತಿಮುದ್ಧವಮ್ ।
ನಹುಷೋ ಜನಯಾಮಾಸ ಷಟ್ ಪುತ್ರಾನಿಂದ್ರಿಯಾನಿವ ॥೩೨॥

ನಹುಷನು ಯತಿ, ಯಯಾತಿ, ಸಂಯಾತಿ, ಆಯಾತಿ, ಯಾತಿ ಮತ್ತು ಉದ್ಧವ ಎಂಬ ಆರು ಇಂದ್ರಿಯಗಳಂತಿರುವ ಆರುಮಕ್ಕಳನ್ನು ಪಡೆದನು.

ಯಯಾತಿರ್ನಾಹುಷಃ ಸಮ್ರಾಡಾಸೀತ್ ಸತ್ಯಪರಾಕ್ರಮಃ ।
ಸ ಪಾಲಯಾಮಾಸ ಮಹೀಮೀಜೇ ಚ ವಿವಿಧೈರ್ಮಖೈಃ ॥೩೩॥

ನಹುಷನ ಮಗನಾದ ಯಯಾತಿಯು ಸತ್ಯಪರಾಕ್ರಮನಾಗಿದ್ದು ಚಕ್ರವರ್ತಿಯಾದನು. ಅವನು ಭೂಮಿಯನ್ನು ಪಾಲಿಸಿ ಅನೇಕ ಯಜ್ಞಗಳಿಂದ ಭಗವಂತನನ್ನು ಆರಾಧಿಸಿದನು.

ಅತಿಭಕ್ತ್ಯಾ ಪಿತೄನಿಷ್ಟ್ವಾ ದೇವಾಂಶ್ಚ ಪ್ರಯತಃ ಸದಾ ।
ಅನ್ವಗೃಹ್ಣಾತ್ ಪ್ರಜಾಃ ಸರ್ವಾ ಯಯಾತಿರಪರಾಜಿತಃ ॥೩೪॥

ಅವನು ಅತಿಭಕ್ತಿಯಿಂದ ದೇವತೆಗಳನ್ನೂ, ಅತಿಶ್ರದ್ಧೆಯಿಂದ ಪಿತೃಗಳನ್ನೂ ಪೂಜಿಸಿ, ಯಾವಾಗಲೂ ವಿನಯಶೀಲನಾಗಿದ್ದು, ಅಪರಾಜಿತನಾಗಿದ್ದು, ಎಲ್ಲಾ ಪ್ರಜೆಗಳಿಗೂ ಅನುಗ್ರಹವನ್ನು ಮಾಡಿದನು.

ತಸ್ಯ ಪುತ್ರಾ ಮಹೇಷ್ವಾಸಾಃ ಸರ್ವೈಃ ಸಮುದಿತಾ ಗುಣೈಃ ।
ದೇವಯಾನ್ಯಾಂ ಮಹಾರಾಜ ಶರ್ಮಿಷ್ಠಾಯಾಂ ಚ ಜಜ್ಞಿರೇ ॥೩೫॥

ಎಲೈ ಮಹಾರಾಜನೇ ಅವನಿಗೆ ದೇವಯಾನಿಯಲ್ಲಿಯೂ ಮತ್ತು ಶರ್ಮಿಷ್ಠೆಯಲ್ಲಿಯೂ ಮಹಾಧನುರ್ವಿದ್ಯೆಯನ್ನು ಬಲ್ಲ, ಎಲ್ಲಾ ಗುಣಗಳಿಂದ ಕೂಡಿದ ಮಕ್ಕಳುಗಳಾದರು.

ದೇವಯಾನ್ಯಾಮಜಾಯೇತಾಂ ಯದುಸ್ತುರ್ವಶುರೇವ ಚ ।
ದ್ರುಹ್ಯುಶ್ಚಾನುಶ್ಚ ಪೂರುಶ್ಚ ಶರ್ಮಿಷ್ಠಾಯಾಂ ಪ್ರಜಜ್ಞಿರೇ ॥೩೬॥

ದೇವಯಾನಿಯಲ್ಲಿ ಯದು ಮತ್ತು ತುರ್ವಶು ಎಂಬ ಮಕ್ಕಳು, ಶರ್ಮಿಷ್ಠೆಯಲ್ಲಿ ದ್ರುಹ್ಯು, ಅನು ಮತ್ತು ಪೂರು ಎಂಬ ಮಕ್ಕಳು ಅವನಿಗೆ ಜನಿಸಿದರು.

ಸ ಶಾಶ್ವತೀಃ ಸಮಾ ರಾಜನ್ ಪ್ರಜಾ ಧರ್ಮೇಣ ಪಾಲಯತ್ ।
ಜರಾಮಗಚ್ಛದ್ ಘೋರಾಂ ತು ನಾಹುಷೋ ರೂಪನಾಶಿನೀಮ್ ॥

ಎಲೈ ರಾಜನೇ ಅವನು ಬಹುಕಾಲ ಧರ್ಮದಿಂದ ಪ್ರಜೆಗಳನ್ನು ಆಳಿ, ಜೀವನದ ಮಧ್ಯದಲ್ಲಿಯೇ ರೂಪ ಮತ್ತು ಬಲವನ್ನು ನಾಶಮಾಡುವ ಘೋರವಾದ ಮುಪ್ಪನ್ನು ಪಡೆದನು.

ಜರಾಭಿಭೂತಃ ಪುತ್ರಾನ್ ಸ ರಾಜಾ ವಚನಮಬ್ರವೀತ್ ।
ಯದುಂ ಪೂರುಂ ತುರ್ವಶುಂ ಚ ದ್ರುಹ್ಯುಂ ಚಾನುಂ ಚ ಭಾರತ ॥

ಯೌವನೇನ ಚರನ್ ಕಾಮಾನ್ ಯುವಾ ಯುವತಿಭಿಃ ಸಹ ।
ವಿಹರ್ತುಮಹಮಿಚ್ಛಾಮಿ ಸಾಹ್ಯಂ ಕುರುತ ಪುತ್ರಕಾಃ ॥೫೯॥

ಮುಪ್ಪಿನಿಂದ ಬಳಲಿದ ಅವನು ಮಕ್ಕಳಾದ ಯದು, ಪೂರು, ತುರ್ವಶು, ದ್ರುಹ್ಯು, ಅನುಗಳನ್ನು ಕರೆದು ಮಾತನಾಡಿದನು. ಮಕ್ಕಳೇ, ನಾನು ನಿಮ್ಮ ಯೌವನದಿಂದ ಕೂಡಿ ಯುವಕನಾಗಿ, ವಿಷಯಗಳನ್ನು ಅನುಭೋಗಿಸುತ್ತಾ ಯುವತಿಯರ ಜೊತೆಯಲ್ಲಿ ಸುಖವನ್ನು ಪಡೆಯಲು ಬಯಸುತ್ತೇನೆ. ನನಗೆ ಸಹಾಯವನ್ನು ಮಾಡಿ ಎಂದು ಕೇಳಿದನು.

ತಂ ಪುತ್ರೋ ದೈವಯಾನೇಯಃ ಪೂರ್ವಜೋ ಯದುರಬ್ರವೀತ್ ।
ಯತ್ ಕಾರ್ಯಂ ಭವತಾ ಕಾರ್ಯಮಸ್ಮಾಕಂ ಯೌವನೇನ ಚ ॥

ಅವನನ್ನು ಕುರಿತು ದೇವಯಾನಿಯ ಹಿರಿಯ ಮಗನಾದ ಯದುವು ತಂದೆಯೇ ಯೌವನದಿಂದ ನಿನಗೆ ಏನು ಪ್ರಯೋಜನ ಆಗಬೇಕಾಗಿದೆಯೋ, ಅದೇ ಪ್ರಯೋಜನವು ನಮಗೂ ಆಗಬೇಕಾಗಿದೆ. ಆದ್ದರಿಂದ ಕೊಡುವುದಿಲ್ಲ ಎಂದು ಹೇಳಿದನು.

ಯೌವನೇನ ತ್ವದೀಯೇನ ಚರೇಯಂ ವಿಷಯಾನಹಮ್ ।
ಯಜತೋ ದೀರ್ಘಸತ್ರೈರ್ಮೇ ಶಾಪಾಚ್ಚೋಶನಸೋ ಮುನೇಃ ॥೪೧॥

ಕಾಮಾರ್ಥಃ ಪರಿಹೀಣೋ ವೈ ತಪ್ಯೇಽಹಂ ತೇನ ಪುತ್ರಕಾಃ ।
ಮಾಮಕೇನ ಶರೀರೇಣ ರಾಜ್ಯಮೇತತ್ ಪ್ರಶಾಸ್ತು ವಃ ।
ಅಹಂ ತನ್ವಾ ಽಭಿನವಯಾ ಯುವಾ ಕಾಮಮವಾಪ್ನುಯಾಮ್ ॥೪೨॥

ಯಯಾತಿಯು ಪುನಃ ಅವರನ್ನು ಕುರಿತು ನನ್ನ ಮುಪ್ಪನ್ನು ತೆಗೆದುಕೋ. ನಿನ್ನ ಯೌವನದಿಂದ ನಾನು ಸುಖವನ್ನು ಅನುಭವಿಸುತ್ತೇನೆ. ಬಹುಕಾಲ ದೀರ್ಘಸತ್ರಗಳನ್ನು ನಡೆಸಿದ್ದರಿಂದಲೂ ಮತ್ತು ಶುಕ್ರಾಚಾರ್ಯರ ಶಾಪದಿಂದಲೂ ನಾನು ಕಾಮಭೋಗದಿಂದ ವಂಚಿತನಾಗಿ ಕಾಮಾರ್ಥಿಯಾಗಿದ್ದೇನೆ. ಆದ್ದರಿಂದ ನಾನು ಬಹಳ ತಾಪವನ್ನು ಪಡುತ್ತಿದ್ದೇನೆ. ಮಕ್ಕಳೇ, ನನ್ನ ಶರೀರವನ್ನು ತೆಗೆದುಕೊಂಡು ರಾಜ್ಯವನ್ನು

ಪಾಲಿಸಿ. ನಿಮ್ಮ ತರುಣಶರೀರದಿಂದ ನಾನು ಯುವಕನಾಗಿ ಕಾಮತೃಪ್ತಿಯನ್ನು ಪಡೆಯುವೆನು ಎಂದು ಹೇಳಿದನು.

ನ ತೇ ತಸ್ಯ ಪ್ರತ್ಯಗೃಹ್ಣನ್ ಯದುಪ್ರಭೃತಯೋ ಜರಾಮ್ ॥೪೩॥

ಆದರೆ ಯದು ಮೊದಲಾದ ನಾಲ್ಕು ಮಕ್ಕಳು ಅವನ ಜರೆಯನ್ನು ಸ್ವೀಕರಿಸಲಿಲ್ಲ.

ತಮಬ್ರವೀತ್ ತತಃ ಪೂರುಃ ಕನೀಯಾನ್ ಸತ್ಯವಿಕ್ರಮಃ ।
ರಾಜಂಶ್ಚರಾಭಿನವಯಾ ಕಾಮಾನ್ ಯೌವನಗೋಚರಾನ್ ।
ಅಹಂ ಜರಾಂ ಸಮಾಸ್ಥಾಯ ರಾಜ್ಯೇ ಸ್ಥಾಸ್ಯಾಮಿ ತೇ ಜ್ಞಯಾ ॥

ಆಗ ಕಿರಿಯ ಮಗನಾದ ಸತ್ಯವಿಕ್ರಮನಾದ ಪೂರುವು ರಾಜನೇ, ನನ್ನ ತರುಣಶರೀರದಿಂದ ಯೌವನಸುಖವನ್ನು ಅನುಭವಿಸು. ನಿನ್ನ ಜರೆಯನ್ನು ತೆಗೆದುಕೊಂಡು ನಿನ್ನ ಆಜ್ಞೆಯಿಂದ ನಾನು ರಾಜ್ಯವನ್ನು ಆಳುವೆನು ಎಂದು ಹೇಳಿದನು.

ಏವಮುಕ್ತಃ ಸ ರಾಜರ್ಷಿಸ್ತಪೋವೀರ್ಯಸಮಾಶ್ರಯಾತ್ ।
ಸಂಚಾರಯಾಮಾಸ ಜರಾಂ ತದಾ ಪುತ್ರೇ ಮಹಾತ್ಮನಿ ॥೪೫॥

ಪೌರವೇಣಾಥ ವಯಸಾ ರಾಜಾ ಯೌವನಮಾಸ್ಥಿತಃ ।
ಯಾಯಾತೇನಾಪಿ ವಯಸಾ ರಾಜ್ಯಂ ಪೂರುರಕಾರಯತ್ ॥೪೬॥

ಹೀಗೆ ಹೇಳಲ್ಪಟ್ಟ ರಾಜರ್ಷಿಯಾದ ಯಯಾತಿಯು ತನ್ನ ತಪೋವೀರ್ಯಬಲದಿಂದ ತನ್ನ ಮುಪ್ಪನ್ನು ಮಹಾತ್ಮನಾದ ಪುರುವಿಗೆ ವರ್ಗಾಯಿಸಿದನು. ಮತ್ತು ಪೌರವನ ವಯಸ್ಸನ್ನು ತೆಗೆದುಕೊಂಡು ರಾಜನು ಯುವಕನಾದನು. ಯಯಾತಿಯ ವಯಸ್ಸಿನಿಂದ ಪೂರುವು ರಾಜ್ಯವನ್ನು ಆಳಿದನು.

ಯಯಾತಿರಪಿ ಪತ್ನೀಭ್ಯಾಂ ದೀರ್ಘಕಾಲಂ ವಿಹೃತ್ಯ ಚ ।
ವಿಶ್ವಾಚ್ಯಾ ಸಹಿತೋ ರೇಮೇ ಪುನಶ್ಚೈತ್ರರಥೇ ವನೇ ।
ನಾಧ್ಯಗಚ್ಛತ್ ತದಾ ತೃಪ್ತಿಂ ಕಾಮಾನಾಂ ಸ ಮಹಾಯಶಾಃ ॥೪೭॥

ಯಯಾತಿಯಾದರೂ ಸಹ ತನ್ನ ಇಬ್ಬರು ಪತ್ನಿಯರು ಅದರಲ್ಲಿಯೂ ವಿಶ್ವಾಚಿಯ (ಶರ್ಮಿಷ್ಠೆಯ) ಸಹಿತನಾಗಿ, ಚೈತ್ರರಥ ಮೊದಲಾದ ವನಗಳಲ್ಲಿ ಬಹುಕಾಲ ರಮಿಸಿದನು. ಮಹಾಕೀರ್ತಿವಂತನಾದ ಅವನು ಇಷ್ಟಾದರೂ ಕಾಮದ ತೃಪ್ತಿಯನ್ನು

ಹೊಂದಲಿಲ್ಲ. ಮನಸ್ಸಿನಲ್ಲಿಯೇ ಅದನ್ನು ಗಮನಿಸಿ ಅವನು ದಿವ್ಯವಾದ ಒಂದುಗಾಥೆಯನ್ನು ಹಾಡಿದನು.

ಅವೇಕ್ಷ್ಯ ಮನಸಾ ತಸ್ಯ ದಿವ್ಯಾಂ ಗಾಥಾಂ ತತೋ ಜಗೌ ।
ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ॥೪೮॥

ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ।
ಯತ್ ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ನಾಲಮೇಕಸ್ಯ ತತ್ ಸರ್ವಮಿತಿ ಮತ್ವಾ ಶಮಂ ವ್ರಜೇತ್ ॥೪೯॥

ಪ್ರೀತಿಯ ವಸ್ತುಗಳ ಉಪಭೋಗದಿಂದ ಕಾಮವು ಎಂದಿಗೂ ಶಾಂತವಾಗುವುದಿಲ್ಲ. ಅದಕ್ಕೆ ಬದಲಾಗಿ ಅಗ್ನಿಗೆ ಆಜ್ಯರೂಪಹವಿಸ್ಸನ್ನು ಹಾಕಿದಂತೆ ಅಭಿವೃದ್ಧಿಯನ್ನೇ ಹೊಂದುತ್ತದೆ. ಭೂಮಿಯ ಮೇಲೆ ಎಷ್ಟು ಧನಧಾನ್ಯ ಹಿರಣ್ಯವು, ಎಷ್ಟು ಪಶುಗಳು, ಎಷ್ಟು ಸ್ತ್ರೀಯರು ಇದ್ದಾರೆಯೋ ಅವೆಲ್ಲವನ್ನೂ ಭೋಗಿಸಿದರೂ ಮನುಷ್ಯನಿಗೆ ಸಾಕು ಎಂಬ ಬುದ್ಧಿಯು ಬರುವುದಿಲ್ಲ.

ಯದಾ ನ ಕುರುತೇ ಭಾವಂ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಂಪದ್ಯತೇ ತದಾ ॥೫೦॥

ಯಾವಾಗ ಎಲ್ಲ ಪ್ರಾಣಿಗಳ ವಿಷಯದಲ್ಲಿ ಪಾಪದ ಆಲೋಚನೆಗಳನ್ನು ಕರ್ಮದಿಂದ, ಮನಸ್ಸಿನಿಂದ ಮತ್ತು ಮಾತಿನಿಂದ ತ್ಯಜಿಸುತ್ತಾನೆಯೋ ಆಗ ಅವನು ಪರಮಾತ್ಮನನ್ನು ಹೊಂದುತ್ತಾನೆ.

ನ ಬಿಭೇತಿ ಯದಾ ಚಾಯಂ ಯದಾ ವಾಽಸ್ಮಾನ್ನ ಬಿಭ್ಯತಿ ।
ಯದಾ ನೇಚ್ಛತಿ ನ ದ್ವೇಷ್ಟಿ ಬ್ರಹ್ಮ ಸಂಪದ್ಯತೇ ತದಾ ॥೫೧॥

ಯಾವಾಗ ಅವನು ಯಾರಿಗೂ ಹೆದರುವುದಿಲ್ಲವೋ, ಅವನಿಂದ ಯಾರಿಗೂ ಹೆದರಿಕೆವುಂಟಾಗುವುದಿಲ್ಲವೋ, ಯಾವಾಗ ಯಾವುದನ್ನೂ ಪ್ರೀತಿಸುವುದಿಲ್ಲವೋ, ಅಥವಾ ದ್ವೇಷಿಸುವುದಿಲ್ಲವೋ, ಆಗ ಪರಮಾತ್ಮನನ್ನು ಹೊಂದುತ್ತಾನೆ.

ಇತ್ಯವೇಕ್ಷ್ಯ ಮಹಾರಾಜಃ ಕಾಮಾನಾಂ ಫಲ್ಗುತಾಂ ನೃಪ ।
ತತೋ ವರ್ಷಸಹಸ್ರಾಂತೇ ಯಯಾತಿರಪರಾಜಿತಃ ।
ಅತೃಪ್ತ ಏವ ಕಾಮಾನಾಂ ಪೂರುಂ ಪುತ್ರಮುವಾಚ ಹ ॥೫೨॥

ಹೀಗೆ ಆಲೋಚಿಸಿ ಕಾಮಗಳ ಅಲ್ಪತೆಯನ್ನು ತಿಳಿದ ಮಹಾರಾಜನಾದ ಅಪರಾಜಿತನಾದ ಯಯಾತಿಯು ಒಂದು ಸಹಸ್ರವರ್ಷಗಳು ತುಂಬುತ್ತಿರಲು ಕಾಮದ ತೃಪ್ತಿಯನ್ನು ಪಡೆಯದೆಯೇ ಮಗನಾದ ಪೂರುವನ್ನು ಕುರಿತು ಹೇಳಿದನು.

ತ್ವಯಾ ದಾಯಾದವಾನಸ್ಮಿ ತ್ವಂ ಮೇ ವಂಶಕರಃ ಸುತಃ ।
ಪೌರವೋ ವಂಶ ಇತಿ ತೇ ಲೋಕೇ ಖ್ಯಾತಿಂ ಗಮಿಷ್ಯತಿ ॥೫೩॥

ನಿನ್ನಂತಹ ಮಗನಿಂದ ನಾನು ಪುತ್ರವಂತನಾಗಿದ್ದೇನೆ. ನೀನು ನನ್ನ ವಂಶಕರನಾದ ಪುತ್ರ. ಇನ್ನು ಮುಂದೆ ಈ ವಂಶವು ಪೌರವವಂಶ ಎಂದು ನಿನ್ನ ಹೆಸರಿನಿಂದಲೇ ಖ್ಯಾತಿಯನ್ನು ಗಳಿಸುವುದು.

ತತಃ ಸ ನೃಪಶಾರ್ದೂಲ ಪುತ್ರಂ ರಾಜ್ಯೇऽಭಿಷಿಚ್ಯ ಚ ।
ಕಾಲೇನ ಮಹತಾ ಪಶ್ಚಾತ್ ಕಾಲಧರ್ಮಮುಪೇಯಿವಾನ್ ॥೫೪॥

ಎಲೈ ನೃಪಶಾರ್ದೂಲನೇ ಅನಂತರ ಅವನು ಪೂರುವನ್ನು ರಾಜ್ಯದಲ್ಲಿ ಅಭಿಷೇಕಮಾಡಿ, ಬಹುಕಾಲ ತಪಸ್ಸನ್ನು ಮಾಡಿ ಸ್ವರ್ಗಸ್ಥನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಚತುಃಷಷ್ಟಿತಮೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ದ್ವಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಅರವತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಅರವತ್ತೈದನೆಯ ಅಧ್ಯಾಯ

(ಯಯಾತಿಯ ಚರಿತ್ರೆಯನ್ನು ವಿಸ್ತಾರವಾಗಿ ಹೇಳಲು ಪ್ರಾರಂಭ. ಕಚನು ಶುಕ್ರಾಚಾರ್ಯರಲ್ಲಿ ಶಿಷ್ಯವೃತ್ತಿಯನ್ನು ಮಾಡಿ, ಮೃತಸಂಜೀವನೀವಿದ್ಯೆಯನ್ನು ಸಂಪಾದಿಸುವುದು.)

ಜನಮೇಜಯಃ

ಯಯಾತಿಃ ಪೂರ್ವಕೋಽಸ್ಮಾಕಂ ದಶಮೋ ಯಃ ಪ್ರಜಾಪತೇಃ ।
ಕಥಂ ಸ ಶುಕ್ರತನಯಾಂ ಲೇಭೇ ಪರಮದುರ್ಲಭಾಮ್ ॥೧॥

ಪೂಜ್ಯರೇ ನಮ್ಮ ಪೂರ್ವಿಕನಾದ ಮತ್ತು ಪ್ರಜಾಪತಿಯಾದ ನಾರಾಯಣನಿಂದ ಹತ್ತನೆಯವನಾದ ಯಯಾತಿಯು ಪರಮದುರ್ಲಭಳಾದ ಶುಕ್ರಾಚಾರ್ಯರ ಮಗಳಾದ ದೇವಯಾನಿಯನ್ನು ಹೇಗೆ ಪಡೆದನು ?

ನಾರಾಯಣ, ಬ್ರಹ್ಮ, ಮರೀಚಿ, ಕಶ್ಯಪ, ಚಂದ್ರ, ಬುಧ, ಪೂರುರವ, ಆಯು, ನಹುಷ, ಯಯಾತಿ ಈ ಕ್ರಮದಲ್ಲಿ ಯಯಾತಿಯು ಹತ್ತನೆಯವನು.

ಏತದಿಚ್ಛಾಮ್ಯಹಂ ಶ್ರೋತುಂ ವ್ಯಾಸತೋ ದ್ವಿಜಸತ್ತಮ ।
ಆನುಪೂರ್ವ್ಯೇಣ ಯೇ ಚಾನ್ಯೇ ರಾಜಾನೋ ವಂಶಧಾರಿಣಃ ॥೨॥

ಎಲೈ ಬ್ರಾಹ್ಮಣಶ್ರೇಷ್ಠರೇ ಈ ವಿಷಯವನ್ನು ನಾನು ವಿಸ್ತಾರವಾಗಿ ಕೇಳಬಯಸುತ್ತೇನೆ. ಮತ್ತು ವಂಶಧರರಾದ ಬೇರೆ ರಾಜರ ಚರಿತ್ರೆಯನ್ನೂ ಕ್ರಮವಾಗಿ ಕೇಳಬಯಸುತ್ತೇನೆ.

ವೈಶಂಪಾಯನಃ

ಯಯಾತಿರ್ನಾಹುಷೋ ರಾಜಾ ದೇವರಾಜಸಮದ್ಯುತಿಃ ।
ತಂ ಶುಕ್ರವೃಷಪರ್ವಾಣೌ ವವ್ರಾತೇ ವರಮುತ್ತಮಮ್ ॥೩॥

ನಹುಷನ ಮಗನಾದ ಯಯಾತಿರಾಜನು ಇಂದ್ರನಿಗೆ ಸಮಾನವಾದ ಕಾಂತಿಯುಳ್ಳವನಾಗಿದ್ದನು. ಅವನನ್ನು ಶುಕ್ರಾಚಾರ್ಯರು ಮತ್ತು ವೃಷಪರ್ವ ಇಬ್ಬರೂ ಶ್ರೇಷ್ಠನಾದ ಅಳಿಯನನ್ನಾಗಿ ವರಿಸಿದರು.

ತದಹಂ ಸಂಪ್ರವಕ್ಷ್ಯಾಮಿ ಪೃಚ್ಛತಸ್ತೇ ಮಹೀಪತೇ ।
ದೇವಯಾನ್ಯಾಶ್ಚ ಸಂಯೋಗಂ ಯಯಾತೇರ್ನಾಹುಷಸ್ಯ ಚ ॥೪॥

ಎಲೈ ರಾಜನೇ ಈ ಪ್ರಶ್ನೆಯನ್ನು ಮಾಡುವ ನಿನಗೆ ದೇವಯಾನಿಗೂ, ಮತ್ತು ನಹುಷನ ಪುತ್ರನಾದ ಯಯಾತಿಗೂ ಹೇಗೆ ಸಂಬಂಧವುಂಟಾಯಿತೆಂದು ಚೆನ್ನಾಗಿ ತಿಳಿಸುವೆನು.

ಸುರಾಣಾಮಸುರಾಣಾಂ ಚ ಭೇದೋ ವೈ ಸಮಜಾಯತ ।
ಐಶ್ವರ್ಯಸ್ಯ ಚ ಸಂಘರ್ಷಾತ್ ತ್ರೈಲೋಕ್ಯಸ್ಯ ಚ ಕಾರಣಾತ್ ॥೫॥

ಸಂಪತ್ತಿನ ನಿಮಿತ್ತವಾದ ವಿರೋಧದಿಂದ, ಮತ್ತು ತ್ರಿಲೋಕಾಧಿಪತ್ಯದ ಕಾರಣದಿಂದ ದೇವತೆಗಳಿಗೂ ಮತ್ತು ಅಸುರರಿಗೂ ವೈರವುಂಟಾಯಿತು.

ದೇವಾ ದೈತ್ಯೈರ್ಯೋತ್ಸ್ಯಮಾನಾ ವವ್ರಿರೇಽಂಗಿರಸಂ ಮುನಿಮ್ ।
ಪೌರೋಹಿತ್ಯೇನ ರಾಜ್ಯಾರ್ಥಂ ಕಾವ್ಯಂ ತೂಶನಸಂ ಪರೇ ॥೬॥

ದೈತ್ಯರ ಜೊತೆಯಲ್ಲಿ ಯುದ್ಧವನ್ನು ಮಾಡುವ ದೇವತೆಗಳು ಅಂಗೀರಸರ ಮಕ್ಕಳಾದ ಬೃಹಸ್ಪತ್ಯಾಚಾರ್ಯರನ್ನು ಗುರುಗಳನ್ನಾಗಿ ವರಿಸಿದರು. ದೈತ್ಯರು ರಾಜ್ಯಲಾಭದ ಸಲುವಾಗಿ ಕವಿಯ ಮಕ್ಕಳಾದ ಶುಕ್ರಾಚಾರ್ಯರನ್ನು ಪುರೋಹಿತರನ್ನಾಗಿ ಆರಿಸಿಕೊಂಡರು.

ಬ್ರಾಹ್ಮಣೌ ತಾವುಭೌ ನಿತ್ಯಮನ್ಯೋನ್ಯಸ್ಪರ್ಧಿನೌ ಭೃಶಮ್ ।
ತತ್ರ ದೇವಾ ನಿಜಘ್ನುರ್ಯಾನ್ ದಾನವಾನ್ ಯುಧಿ ಸಂಗತಾನ್ ॥

ತಾನ್ ಪುನರ್ಜೀವಯಾಮಾಸ ಕಾವ್ಯೋ ವಿದ್ಯಾಬಲಾಶ್ರಯಾತ್ ।
ತತಸ್ತೇ ಪುನರುತ್ಥಾಯ ಯೋಧಯಾಂಚಕ್ರಿರೇ ಸುರಾನ್ ॥೮॥

ಅವರಿಬ್ಬರೂ ಬ್ರಾಹ್ಮಣರು ಮತ್ತು ಯಾವಾಗಲೂ ಪರಸ್ಪರವಾಗಿ ಬಹಳಸ್ಪರ್ಧೆಯುಳ್ಳವರು.ಅವರಲ್ಲಿ ದೇವತೆಗಳು ಯಾವ ದಾನವರನ್ನು ಯುದ್ಧದಲ್ಲಿ ಸಂಹಾರ ಮಾಡಿದರೋ ಅವರನ್ನು ಶುಕ್ರಾಚಾರ್ಯರು ತಮ್ಮ ವಿದ್ಯಾಬಲವನ್ನು ಆಶ್ರಯಿಸಿ ಬದುಕಿಸುತ್ತಿದ್ದರು. ಆಗ ಅವರು ಮೊದಲು ಮೃತರಾಗಿದ್ದವರು ಪುನಃ ಎದ್ದು ದೇವತೆಗಳ ಜೊತೆಯಲ್ಲಿ ಯುದ್ಧಮಾಡುತ್ತಿದ್ದರು.

ಅಸುರಾಸ್ತು ನಿಜಘ್ನುರ್ಯಾನ್ ಸುರಾನ್ ಸಮರಮೂರ್ಧನಿ ।
ಸ ತಾನ್ ನ ಜೀವಯಾಮಾಸ ಬೃಹಸ್ಪತಿರುದಾರಧೀಃ ॥೯॥

ಆದರೆ ಘೋರಯುದ್ಧದಲ್ಲಿ ಅಸುರರು ಯಾವ ದೇವತೆಗಳನ್ನು ಸಂಹಾರ ಮಾಡಿದರೋ ಅವರನ್ನು ಮೇಧಾವಿಗಳಾದ ಬೃಹಸ್ಪತ್ಯಾಚಾರ್ಯರು ಬದುಕಿಸುತ್ತಿರಲಿಲ್ಲ.

ನ ಹಿ ವೇದ ಸ ತಾಂ ವಿದ್ಯಾಂ ಯಾಂ ಕಾವ್ಯೋ ವೇದ ವೀರ್ಯವಾನ್ ।
ಸಂಜೀವಿನೀಂ ತತೋ ದೇವಾ ವಿಷಾದಮಗಮನ್ ಪರಮ್ ॥೧೦॥

ವೀರ್ಯವಂತರಾದ ಶುಕ್ರಾಚಾರ್ಯರು ಯಾವ ಮೃತಸಂಜೀವಿನಿ ವಿದ್ಯೆಯನ್ನು ತಿಳಿದಿದ್ದರೋ ಅದನ್ನು ಬೃಹಸ್ಪತಿಗಳು ತಿಳಿದಿರಲಿಲ್ಲ. ಆ ಕಾರಣದಿಂದ ದೇವತೆಗಳು ಬಹಳ ವಿಷಾದಕ್ಕೆ ಒಳಗಾದರು.

ತೇ ದೇವಾಽಥ ಭಯೋದ್ವಿಗ್ನಾಃ ಕಾವ್ಯಾದೌಶನಸಾತ್ ತದಾ ।
ಊಚುಃ ಕಚಮುಪಾಗಮ್ಯ ಜ್ಯೇಷ್ಠಂ ಪುತ್ರಂ ಬೃಹಸ್ಪತೇಃ ॥೧೧॥

ಶುಕ್ರಾಚಾರ್ಯರ ಭಯದಿಂದ ಬಳಲಿದ ಆ ದೇವತೆಗಳು ಆಗ ಬೃಹಸ್ಪತಿಯ ಜ್ಯೇಷ್ಠಪುತ್ರನಾದ ಕಚನ ಸಮೀಪಕ್ಕೆ ಬಂದು, ಹೀಗೆ ಮಾತನಾಡಿದರು.

ಭಜಮಾನಾನ್ ಭಜಸ್ವಾಸ್ಮಾನ್ ಕುರು ಸಾಹ್ಯಮನುತ್ತಮಮ್ ।
ಯಾ ವೈ ವಿದ್ಯಾ ನಿವಸತಿ ಬ್ರಾಹ್ಮಣೇಽಮಿತತೇಜಸಿ ॥೧೨॥

ಶುಕ್ರೇ ತಾಮಾಹರ ಕ್ಷಿಪ್ರಂ ಭಾಗಭಾಜ್ ನೋ ಭವಿಷ್ಯಸಿ।
ವೃಷಪರ್ವಸಮೀಪೇ ತು ಶಕ್ಯೋ ದ್ರಷ್ಟುಂ ತ್ವಯಾ ದ್ವಿಜಃ ॥೧೩॥

ಎಲೈ ಕಚನೇ ನಿನ್ನನ್ನು ಉಪಸತ್ತಿ ಮಾಡಿರುವ ನಮಗೆ ಶ್ರೇಷ್ಠವಾದ ಸಹಾಯವನ್ನು ಮಾಡಿ, ನೀನು ಉಪಕಾರವನ್ನು ಮಾಡಬೇಕು. ಅಮಿತ ತೇಜಸುಳ್ಳ ಶುಕ್ರಾಚಾರ್ಯರಲ್ಲಿ ಯಾವ ಮೃತಸಂಜೀವಿನಿ ವಿದ್ಯೆಯು ಇದೆಯೋ, ನೀನು ಅದನ್ನು ಬೇಗ ಸಂಪಾದಿಸಿಕೊಂಡು ಬಂದು ನಮ್ಮ ಭಾಗ್ಯಕ್ಕೆ ಹಕ್ಕುದಾರನಾಗಬೇಕು. ಬ್ರಾಹ್ಮಣರಾದ ಶುಕ್ರಾಚಾರ್ಯರು ನಿನಗೆ ವೃಷಪರ್ವ ರಾಜನ ಬಳಿ ಕಾಣಲು ಸಿಗುತ್ತಾರೆ.

ರಕ್ಷತೇ ದಾನವಾಂಸ್ತತ್ರ ನ ಸ ರಕ್ಷತ್ಯದಾನವಾನ್ ।
ತಮಾರಾಧಯಿತುಂ ಶಕ್ತೋ ಭವಾನ್ ಪೂರ್ವವಯೋ ಮುನಿಃ ॥೧೪॥

ಅವರು ದಾನವರನ್ನು ರಕ್ಷಿಸುತ್ತಾರೆ. ದೇವತೆಗಳನ್ನು ರಕ್ಷಿಸುವುದಿಲ್ಲ. ಅವರನ್ನು ಸಂತೋಷಪಡಿಸಲು ಚಿಕ್ಕವಯಸ್ಸಿನವನೂ, ಋಷಿಯೂ ಆದ ನೀನೇ ಸಮರ್ಥನಾದವನು.

ದೇವಯಾನೀಮಶೇಷೇಣ ಭಕ್ತ್ಯಾऽऽರಾಧಯ ಸುವ್ರತ ।
ತಾಮಾರಾಧಯಿತುಂ ಶಕ್ತೋ ನಾನ್ಯಃ ಕಶ್ಚನ ವಿದ್ಯತೇ ॥೧೫॥

ಎಲೈ ಒಳ್ಳೆಯ ವ್ರತವನ್ನು ಧರಿಸಿದವನೇ, ಶುಕ್ರಾಚಾರ್ಯರ ಮಗಳಾದ ದೇವಯಾನಿಯನ್ನು ಆದರದಿಂದ ಆರಾಧಿಸು. ಅವಳನ್ನು ಸಂತೋಷಪಡಿಸಲು ನಿನ್ನನ್ನು ಹೊರತು ಬೇರೆ ಯಾರಿಗೂ ಸಾಧ್ಯವಿಲ್ಲ.

ಶೀಲಮಾಧುರ್ಯದಾಕ್ಷಿಣ್ಯೈರಾದರೇಣ ದಮೇನ ಚ ।
ದೇವಯಾನ್ಯಾಂ ಹಿ ತುಷ್ಟಾಯಾಂ ವಿದ್ಯಾಂ ತಾಮಾಪ್ಸ್ಯಸಿ ಧ್ರುವಮ್ ॥

ಒಳ್ಳೆಯ ನಡತೆ, ಮಧುರವಾದ ಮಾತು ಮಾರ್ದವ, ಆದರ ಮತ್ತು ಇಂದ್ರಿಯನಿಗ್ರಹಗಳಿಂದ ಅವಳನ್ನು ಒಲಿಸು. ದೇವಯಾನಿಯು ತುಷ್ಟಳಾದರೆ ನೀನು ನಿಶ್ಚಯವಾಗಿಯೂ ಆ ವಿದ್ಯೆಯನ್ನು ಪಡೆಯುತ್ತೀಯೆ.

ತಥೇತ್ಯುಕ್ತ್ವಾ ಕಚಃ ಪ್ರಾಯಾನ್ಮುಹೂರ್ತೇऽಲಘುಮಾರ್ದವೇ ।
ತಥಾऽಭಿಪೂಜಿತೋ ದೇವೈಃ ಸಮೀಪಂ ವೃಷಪರ್ವಣಃ ॥೧೭॥

ಹಾಗೆಯೇ ಆಗಲಿ ಎಂದು ಕಚನು ಮೃದುವಾದ ಕಾರ್ಯಕ್ಕೆ ಅತ್ಯಂತ ಅನುಕೂಲವಾದ ಒಂದು ಮುಹೂರ್ತದಲ್ಲಿ ದೇವತೆಗಳಿಂದ ಪೂಜಿಸಿ ಬೀಳ್ಕೊಡಲ್ಪಟ್ಟು ವೃಷಪರ್ವನ ಸಮೀಪಕ್ಕೆ ಹೋದನು.

ಸ ಗತ್ವಾ ತ್ವರಿತೋ ರಾಜನ್ ದೇವೈಃ ಸಂಪ್ರೇಷಿತಃ ಕಚಃ ।
ಅಸುರೇಂದ್ರಪುರೇ ಶುಕ್ರಮಭಿವಾದ್ಯೇದಮಬ್ರವೀತ್ ॥೧೮॥

ಎಲೈ ರಾಜನೇ ದೇವತೆಗಳಿಂದ ಕಳುಹಿಸಲ್ಪಟ್ಟ ಆ ಕಚನು ಕ್ಷಿಪ್ರವಾಗಿ ಅಸುರೇಂದ್ರ ಪಟ್ಟಣಕ್ಕೆ ಹೋಗಿ, ಶುಕ್ರಾಚಾರ್ಯರಿಗೆ ನಮಸ್ಕರಿಸಿ ಹೀಗೆ ಮಾತನಾಡಿದನು.

ಋಷೇರಂಗಿರಸಃ ಪೌತ್ರಃ ಪುತ್ರಶ್ಚಾಹಂ ಬೃಹಸ್ಪತೇಃ ।
ನಾಮ್ನಾ ಕಚ ಇತಿ ಖ್ಯಾತಃ ಶಿಷ್ಯಂ ಗೃಹ್ಣಾತು ಮಾಂ ಋಷೇ ॥೧೯॥

ಎಲೈ ಋಷಿಶ್ರೇಷ್ಠರೇ ನಾನು ಅಂಗೀರಸ ಋಷಿಗಳ ಮೊಮ್ಮಗ. ಬೃಹಸ್ಪತ್ಯಾಚಾರ್ಯರ ಮಗ. ನನ್ನ ಹೆಸರು ಕಚ ಎಂದು ಪ್ರಸಿದ್ಧವಾಗಿದೆ. ತಾವು ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕು.

ಬ್ರಹ್ಮಚರ್ಯಂ ಚರಿಷ್ಯಾಮಿ ತತ್ತಸ್ಮೀಪೇ ಯಥಾऽऽತ್ಥ ಮಾಮ್ ।
ಅನುಮನ್ಯಸ್ವ ಮಾಂ ಬ್ರಹ್ಮನ್ ಸಹಸ್ರಪರಿವತ್ಸರಮ್ ॥೨೦॥

ತಮ್ಮ ಬಳಿಯಲ್ಲಿ ತಾವು ಹೇಳಿದಂತೆ ಕೇಳಿಕೊಂಡು ಒಂದು ಸಹಸ್ರವರ್ಷಗಳ ಕಾಲ ಶಿಷ್ಯವೃತ್ತಿಯನ್ನು ಮಾಡುತ್ತೇನೆ. ಪೂಜ್ಯರಾದ ತಾವು ಸಮ್ಮತಿಸಬೇಕು.

ಶುಕ್ರಃ

ಕಚ ಸ್ವಾಗತಮದ್ಯಾಸ್ತು ಪ್ರತಿಗೃಹ್ಣಾಮಿ ತೇ ವಚಃ ।
ಅರ್ಚಯಿಷ್ಯೇऽಹಮರ್ಚ್ಯಂ ತ್ವಾಮರ್ಚಿತೋऽಸ್ತು ಬೃಹಸ್ಪತಿಃ ॥೨೧॥

ಎಲೈ ಕಚನೇ ನಿನಗೆ ಸ್ವಾಗತ. ಈ ದಿನ ನಿನ್ನ ಮಾತನ್ನು ಸ್ವೀಕರಿಸುತ್ತೇನೆ. ಪೂಜನೀಯನಾದ ನಿನ್ನನ್ನು ಪೂಜಿಸುತ್ತೇನೆ. ಅದರಿಂದ ಬೃಹಸ್ಪತಿಗಳು ಪೂಜಿತರಾಗಲಿ.

ವೈಶಂಪಾಯನಃ

ಕಚಸ್ತು ತಂ ತಥೇತ್ಯುಕ್ತ್ವಾ ಪ್ರತಿಜಗ್ರಾಹ ತಂ ವ್ರತಮ್ ।
ಆದಿಷ್ಟಂ ಭೃಗುಪುತ್ರೇಣ ಶುಕ್ರೇಣೋಶನಸಾ ಸ್ವಯಮ್ ॥೨೨॥

ಕಚನಾದರೂ ಅವರನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿ ಭೃಗುಕುಲಪ್ರಸೂತರಾದ ಶುಕ್ರಾಚಾರ್ಯರು ತಾವೇ ಆದೇಶ ಮಾಡಿದಂತೆ ಆ ಶಿಷ್ಯವ್ರತವನ್ನು ಕೈಗೊಂಡನು.

ವ್ರತಂ ಸಂವ್ರತಕಾಲೇ ಸ ಯಥೋಕ್ತಂ ಸಂಗೃಹೀತವಾನ್ ।
ಆರಾಧಯನ್ನುಪಾಧ್ಯಾಯಂ ದೇವಯಾನೀಂ ಚ ಭಾರತ ॥೨೩॥

ವ್ರತಕಾಲವಾದ ಸಹಸ್ರವರ್ಷಗಳಲ್ಲಿ ಶುಕ್ರಾಚಾರ್ಯರನ್ನು ದೇವಯಾನಿಯನ್ನೂ ಸಂತೋಷಪಡಿಸುತ್ತಾ, ಗುರುಗಳು ಹೇಳಿದಂತೆ ವ್ರತವನ್ನು ಸರಿಯಾಗಿ ಆಚರಿಸಿದನು.

ನಿತ್ಯಮಾರಾಧಯಿಷ್ಯಂಸ್ತಾಂ ಯುವಾ ಯೌವನಗಾಂ ಮಖೇ ।
ಗಾಯನ್ ನೃತ್ಯನ್ ವಾದಯಂಶ್ಚ ದೇವಯಾನೀಮತೋಷಯತ್ ॥೨೪॥

ಯುವಕನಾದ ಅವನು ಯುವತಿಯಾದ ದೇವಯಾನಿಯನ್ನು ನಿತ್ಯಾಗ್ನಿಹೋತ್ರದ ಸಂದರ್ಭದಲ್ಲಿ ಯಾವಾಗಲೂ ಗಾನವನ್ನು ಮಾಡಿ, ನೃತ್ಯವನ್ನು ಮಾಡಿ, ವಾದ್ಯಗಳನ್ನು ನುಡಿಸಿ, ಸಂತೋಷಪಡಿಸಿದನು.

ತತ್ಸಹಸ್ರಂ ಗುರುಗವಾಂ ರಕ್ಷಿತ್ವಾ ವನ್ಯಮಾಹರತ್ ।
ದೇವಯಾನ್ಯಪಿ ತಂ ವಿಪ್ರಂ ನಿಯತವ್ರತಚಾರಿಣಮ್ ।
ಅನುಗಾಯಮಾನಾ ಲಲನಾ ರಹಃ ಪರ್ಯಚರತ್ ತಥಾ ॥೨೫॥

ಗುರುಗಳ ಸಹಸ್ರಗೋವುಗಳನ್ನು ಕಾಡಿನಲ್ಲಿ ರಕ್ಷಿಸಿ ಆಶ್ರಮಕ್ಕೆ ಕರೆತರುತ್ತಿದ್ದನು. ಲಲನೆಯಾದ ದೇವಯಾನಿಯಾದರೂ ನಿಯತವ್ರತಧಾರಿಯಾದ ಆ ಕಚನನ್ನು ಏಕಾಂತದಲ್ಲಿ ಅವನ ಜೊತೆಯಲ್ಲಿ ಗಾನವನ್ನು ಮಾಡುತ್ತಾ ಪರಿಚರಿಸಿದಳು.

ಗಾಯಂತಂ ಚೈವ ಶಲ್ಕಂ ಚ ದಾತಾರಂ ಪ್ರಿಯವಾದಿನಮ್ ।
ನಾರ್ಯೋ ನರಂ ಕಾಮಯಂತೇ ರೂಪಿಣಂ ಸ್ರಗ್ವಿಣಂ ತಥಾ ॥೨೬॥

ನಾರಿಯರು ಗಾನವನ್ನು ಮಾಡುವ ಮತ್ತೆ ಮತ್ತೆ ಪ್ರಿಯವನ್ನು ಮಾತನಾಡುವ ಮತ್ತು ಕೇಳಿದ ವಸ್ತುಗಳನ್ನು ತಂದುಕೊಡುವ ಸುಂದರರಾದ ಮಾಲೆಯನ್ನು ಧರಿಸಿದ ಪುರುಷರನ್ನು ಬಯಸುತ್ತಾರೆ.

ಪಂಚವರ್ಷಶತಾನ್ಯೇವಂ ಕಚಸ್ಯ ಚರತೋ ವ್ರತಮ್ ।
ತತ್ರಾತೀಯುರಥೋ ಬುದ್ಧ್ವಾ ದಾನವಾಸ್ತಂ ತತಃ ಕಚಮ್ ।
ತತಸ್ತೇ ಗಾಸ್ತು ರಕ್ಷಂತಂ ದಾನವಾಃ ಸಂಶಿತವ್ರತಮ್ ॥೨೭॥

ಜಘ್ನುರ್ಬೃಹಸ್ಪತೇರ್ದ್ವೇಷಾದ್ ವಿದ್ಯಾರಕ್ಷಾರ್ಥಮೇವ ಚ ।
ಹತ್ವಾ ಸಾಲಾವೃಕೇಭ್ಯಸ್ತಂ ಪ್ರಾಯಚ್ಛಂಸ್ತಿಲಶಃ ಕೃತಮ್ ॥೨೮॥

ವ್ರತವನ್ನು ಆಚರಿಸುವ ಕಚನಿಗೆ ಆಶ್ರಮದಲ್ಲಿ ಐನೂರು ವರ್ಷಗಳು ಹೀಗೆ ಕಳೆದವು. ಆಗ ದಾನವರು ಅವನನ್ನು ಗುರುತಿಸಿದರು. ಅನಂತರ ಅವರು ಬೃಹಸ್ಪತಿಗಳ ಮೇಲಿನ ದ್ವೇಷದಿಂದಲೂ ಮತ್ತು ಮೃತಸಂಜೀವಿನೀ ವಿದ್ಯೆಯನ್ನು ತಮ್ಮಲ್ಲೇ ರಕ್ಷಣೆ

ಮಾಡುವ ಉದ್ದೇಶದಿಂದಲೂ ಗೋವುಗಳನ್ನು ರಕ್ಷಿಸುತ್ತಿದ್ದ ಕಚನನ್ನು ಕೊಂದು, ಎಳ್ಳಿನಷ್ಟು ಸಣ್ಣ ಸಣ್ಣ ಚೂರುಗಳನ್ನಾಗಿ ಮಾಡಿ ತೋಳಗಳಿಗೆ ಎಸೆದರು.

ತತೋ ಗಾವೋ ನಿವೃತ್ತಾಸ್ತಾ ಅಗೋಪಾಃ ಸ್ವಂ ನಿವೇಶನಮ್ ।
ದೃಷ್ಟ್ವಾ ಸ್ಮ ರಹಿತಾ ಗಾಸ್ತು ಕಚೇ ನಾಭ್ಯಾಗತೇ ವನಾತ್ ।
ಉವಾಚ ವಚನಂ ಕಾಲೇ ದೇವಯಾನ್ಯಥ ಭಾರತ ॥೨೯॥

ಎಲೈ ಭಾರತನೇ, ದೇವಯಾನಿಯು ಗೋವುಗಳು ಹಿಂದಿರುಗಿದುದನ್ನೂ, ಮತ್ತು ಕಚನು ಕಾರ್ಯದಿಂದ ಬಾರದಿರುವುದನ್ನೂ ನೋಡಿ, ಆ ಸಮಯದಲ್ಲಿ ಶುಕ್ರಾಚಾರ್ಯರನ್ನು ಕುರಿತು ಮಾತನಾಡಿದಳು.

ಆಹುತಂ ಚಾಗ್ನಿಹೋತ್ರಂ ತೇ ಸೂರ್ಯಶ್ಚಾಸ್ತಂ ಗತಃ ಪ್ರಭೋ ।
ಅಗೋಪಾಶ್ಚಾಗತಾ ಗಾವಃ ಕಚಸ್ತಾತ ನ ದೃಶ್ಯತೇ ॥೩೦॥

ವ್ಯಕ್ತಂ ಗತೋ ಮೃತೋ ವಾಪಿ ಕಚಸ್ತಾತ ಭವಿಷ್ಯತಿ ।
ತಂ ವಿನಾ ನ ಚ ಜೀವೇಯಂ ಕಚಂ ಸತ್ಯಂ ಬ್ರವೀಮ್ಯಹಮ್ ॥೩೧॥

ಸಾಯಂಕಾಲದ ಅಗ್ನಿಹೋತ್ರವು ಜರುಗಿದೆ. ಸೂರ್ಯನು ಅಸ್ತಂಗತನಾಗಿದ್ದಾನೆ. ಎಲೈ ಸಮರ್ಥನೇ ಗೋವುಗಳು ರಕ್ಷಕನಿಲ್ಲದೇ ಹಿಂದೆ ಬಂದಿವೆ. ತಂದೆಯೇ ಆದರೆ ಕಚ ಮಾತ್ರ ಕಾಣಿಸುತ್ತಿಲ್ಲ. ಎಲೈ ತಂದೆಯೇ ನಿಶ್ಚಯವಾಗಿ ಕಚನು ಹೊರಟುಹೋಗಿದ್ದಾನೆ. ಅಥವಾ ಮೃತನಾಗಿದ್ದಾನೆ. ಅವನಿಲ್ಲದೇ ನಾನು ಬದುಕುವುದಿಲ್ಲ. ಈ ಮಾತು ಸತ್ಯ.

ಶುಕ್ರಃ

ಅಯಮೇಹೀತಿ ಶಬ್ದೇನ ಕಚಂ ಸಂಜೀವಯಾಮ್ಯಹಮ್ ॥೩೨॥

ಕಚ ಇಲ್ಲಿ ಬಾ ಎಂಬ ಶಬ್ದದಿಂದ ನಾನು ಕಚನನ್ನು ಬದುಕಿಸುತ್ತೇನೆ.

ವೈಶಂಪಾಯನಃ

ತತಃ ಸಂಜೀವಿನೀಂ ವಿದ್ಯಾಂ ಪ್ರಜಪ್ತ್ವಾ ಕಚಮಾಹ್ವಯತ್ ।
ಭಿತ್ತ್ವಾ ಭಿತ್ತ್ವಾ ಶರೀರಾಣಿ ವೃಕಾಣಾಂ ಸ ವಿನಿಷ್ಪತನ್ ॥೩೩॥

ಅನಂತರ ಶುಕ್ರಾಚಾರ್ಯರು ಸಂಜೀವಿನಿ ವಿದ್ಯೆಯನ್ನು ಜಪಿಸಿ ಕಚನನ್ನು ಆಹ್ವಾನ ಮಾಡಿದರು. ಕಚನು ತೋಳಗಳ ಶರೀರಗಳನ್ನು ಭೇದಿಸಿಕೊಂಡು ಹೊರಗೆ ಬಂದು ಪ್ರತ್ಯಕ್ಷನಾದನು.

ಆಹೂತಃ ಪ್ರಾದುರಭೂತ್ ಕಚೋ ರಿಪ್ವೋಽಥ ವಿದ್ಯಯಾ ।
ಹತೋಽಹಮಿತಿ ಚಾಚಷ್ಟ ಪೃಷ್ಟೋ ಭಾರ್ಗವಕನ್ಯಯಾ ॥೩೪॥

ಮೊದಲು ನಷ್ಟವಾಗಿದ್ದ ಅವನು ಶುಕ್ರಾಚಾರ್ಯರ ವಿದ್ಯೆಯಿಂದ ಆಹೂತನಾಗಿ ಬದುಕಿದನು. ದೇವಯಾನಿಯು ಕೇಳಲಾಗಿ ನಾನು ಮೃತನಾಗಿದ್ದೆ ಎಂದು ನಿರೂಪಿಸಿದನು.

ಕಚಃ

ಸಮಿತ್ಪುಷ್ಪಫಲಾದೀನಿ ಕಾಷ್ಠಭಾರಂ ಚ ಭಾಮಿನಿ ।
ಗೃಹೀತ್ವಾ ಭೂರಿಭಾರಾರ್ತೋ ವಟವೃಕ್ಷಂ ಸಮಾಶ್ರಿತಃ ॥೩೫॥

ಎಲೌ ಸುಂದರಿಯೇ ಸಮಿತ್ತು, ಪುಷ್ಪ, ಫಲ ಮತ್ತು ಕಟ್ಟಿಗೆಗಳನ್ನು ತರಲು ಕಾಡಿಗೆ ಹೋದ ನಾನು ಅವೆಲ್ಲವನ್ನೂ ತೆಗೆದುಕೊಂಡು ಬಹಳ ಭಾರದಿಂದ ಬಳಲಿ ಒಂದು ಆಲದ ಮರದ ಬುಡವನ್ನು ಸೇರಿದೆನು.

ಗಾವಶ್ಚ ಸಹಿತಾಃ ಸರ್ವಾ ವೃಕ್ಷಚ್ಛಾಯಾಂ ಸಮಾಶ್ರಿತಾಃ ।
ಅಸುರಾಸ್ತತ್ರ ಮಾಂ ದೃಷ್ಟ್ವಾ ಕಸ್ತ್ವಮಿತ್ಯಭ್ಯಚೋದಯನ್ ॥೩೬॥

ಎಲ್ಲಾ ಗೋವುಗಳು ಒಟ್ಟಾಗಿ ಆ ಮರದ ನೆರಳಿನಲ್ಲಿ ಸೇರಿದವು. ಅಸುರರು ಅಲ್ಲಿ ನನ್ನನ್ನು ನೋಡಿ, ನೀನು ಯಾರು ಎಂದು ಕೇಳಿದರು.

ಬೃಹಸ್ಪತಿಸುತಶ್ಚಾಹಂ ಕಚ ಇತ್ಯಭಿವಿಶ್ರುತಃ ।
ಇತ್ಯುಕ್ತಮಾತ್ರೇ ಮಾಂ ಪೇಶೀಕೃತ್ವಾ ತು ದಾನವಾಃ ।
ದತ್ತ್ವಾ ಸಾಲಾವೃಕೇಭ್ಯಸ್ತೇ ಸುಖಂ ಜಗ್ಮುಃ ಸ್ವಮಾಲಯಮ್॥೩೭॥

ನಾನು ಬೃಹಸ್ಪತಿಗಳ ಮಗನಾದ ಕಚ ಎಂಬುವನು ಎಂದು ಹೇಳಿದ ಕೂಡಲೇ ನನ್ನನ್ನು ದಾನವರು ಕೊಂದು ಒಂದು ಮಾಂಸದ ಮುದ್ದೆಯನ್ನಾಗಿ ಮಾಡಿ, ತೋಳಗಳಿಗೆ ಎಸೆದು ಸುಖವಾಗಿ ತಮ್ಮ ಮನೆಗಳಿಗೆ ಹೊರಟುಹೋದರು.

ಆಹೂತೋ ವಿದ್ಯಯಾಽನೇನ ಭಾರ್ಗವೇಣ ಮಹಾತ್ಮನಾ ।
ತ್ವತ್ಸಮೀಪಮಿಹಾಯಾತಃ ಕಥಂಚಿತ್ ಪ್ರಾಪ್ತಜೀವಿತಃ ॥೩೮॥

ಈ ಮಹಾತ್ಮರಾದ ನಿನ್ನ ತಂದೆಯಾದ ಶುಕ್ರಾಚಾರ್ಯರಿಂದ ತಮ್ಮ ವಿದ್ಯೆಯ ಬಲದಿಂದ ಆಹೂತನಾಗಿ ಹೀಗೆ ಜೀವವನ್ನು ಪಡೆದು, ನಿನ್ನ ಸಮೀಪಕ್ಕೆ ಬಂದಿದ್ದೇನೆ.

ಪುನಶ್ಚ ದೇವಯಾನ್ಯೋಕ್ತಃ ಪುಷ್ಪಾಣ್ಯಾಹರ ಮೇ ದ್ವಿಜ ।
ತಥೇತಿ ಸ ಗತಃ ಕೇಚಿದ್ ದಾನವಾ ದದೃಶುರ್ವನೇ ।
ಪುನಶ್ಚ ಪೋಥಯಿತ್ವಾ ತಂ ಸಮುದ್ರೇಽಂಭಸ್ಯಮಿಶ್ರಯನ್ ॥೩೯॥

ಪುನಃ ದೇವಯಾನಿಯು ಬ್ರಾಹ್ಮಣನೇ ನನಗೆ ಪುಷ್ಪಗಳನ್ನು ತೆಗೆದುಕೊಂಡು ಬಾ ಎಂದು ಹೇಳಿದಳು. ಹಾಗೆಯೇ ಆಗಲಿ ಎಂದು ಹೇಳಿ ಕಾಡಿಗೆ ಹೋದ ಕಚನನ್ನು ದಾನವರು ನೋಡಿದರು. ಪುನಃ ಅವನನ್ನು ಗುದ್ದಿ ಕೊಂದು ಸಮುದ್ರದ ನೀರಿನಲ್ಲಿ ಕದಡಿಬಿಟ್ಟರು.

ಚಿರಂ ಗತಂ ಪುನಃ ಕನ್ಯಾ ಪಿತ್ರೇ ತಂ ಸನ್ನ್ಯವೇದಯತ್ ।
ವಿಪ್ರೇಣ ಪುನರಾಹೂತೋ ವಿದ್ಯಯಾ ಬ್ರಾಹ್ಮಣಸ್ತದಾ ।
ಪುನರಾವೃತ್ಯ ವೃತ್ತಾಂತಂ ನ್ಯವೇದಯತ ತತ್ತ್ವತಃ ॥೪೦॥

ಕಚನು ಹೋಗಿ ಬಹಳ ಸಮಯವಾಯಿತೆಂದು ದೇವಯಾನಿಯು ಪುನಃ ತಂದೆಗೆ ನಿವೇದಿಸಿದಳು. ಪುನಃ ಶುಕ್ರಾಚಾರ್ಯರು ತಮ್ಮ ವಿದ್ಯೆಯಿಂದ ಅವನನ್ನು ಪುನಃ ಕರೆದಾಗ ಕಚನು ಹಿಂದಿರುಗಿ ಬಂದು ವೃತ್ತಾಂತವೆಲ್ಲವನ್ನೂ ಯಥಾರ್ಥವಾಗಿ ನಿವೇದಿಸಿದನು.

ದೇವಯಾನ್ಯಾ ಪುನರಪಿ ವನ್ಯಂ ಪುಷ್ಪಂ ಸಮಾಹರ ।
ಅಗಚ್ಛದ್ ವನಮಿತ್ಯುಕ್ತೋ ದಾನವಾ ದದೃಶುಃ ಪುನಃ ॥೪೧॥

ತೃತೀಯಮಪಿ ಹತ್ವಾ ತಂ ದಗ್ಧ್ವಾ ಪಿಷ್ಟ್ವಾ ಚ ಸೂಕ್ಷ್ಮತಃ ।
ಪ್ರಾಯಚ್ಛನ್ ಬ್ರಾಹ್ಮಣಾಯೈವ ಸುರಾಯಾಮಸುರಾಸ್ತದಾ ॥೪೨॥

ದೇವಯಾನಿಯು ಪುನಃ ಕಚನನ್ನು ಕುರಿತು ಕಾಡಿನಿಂದ ಹೂಗಳನ್ನು ತೆಗೆದುಕೊಂಡು ಬಾ ಎಂದು ಹೇಳಿದಳು. ಹೀಗೆ ಹೇಳಲ್ಪಟ್ಟ ಕಚನು ಕಾಡಿಗೆ ಹೋಗಲು ಪುನಃ ದಾನವರು

ಅನಂತರ ಶುಕ್ರಾಚಾರ್ಯರು ಸಂಜೀವಿನಿ ವಿದ್ಯೆಯನ್ನು ಜಪಿಸಿ ಕಚನನ್ನು ಆಹ್ವಾನ ಮಾಡಿದರು. ಕಚನು ತೋಳಗಳ ಶರೀರಗಳನ್ನು ಭೇದಿಸಿಕೊಂಡು ಹೊರಗೆ ಬಂದು ಪ್ರತ್ಯಕ್ಷನಾದನು.

ಆಹೂತಃ ಪ್ರಾದುರಭೂತ್ ಕಚೋ ರಿಷ್ಟೋऽಥ ವಿದ್ಯಯಾ ।
ಹತೋऽಹಮಿತಿ ಚಾಚಷ್ಟ ಪೃಷ್ಟೋ ಭಾರ್ಗವಕನ್ಯಯಾ ॥೩೪॥

ಮೊದಲು ನಷ್ಟವಾಗಿದ್ದ ಅವನು ಶುಕ್ರಾಚಾರ್ಯರ ವಿದ್ಯೆಯಿಂದ ಆಹೂತನಾಗಿ ಬದುಕಿದನು. ದೇವಯಾನಿಯು ಕೇಳಲಾಗಿ ನಾನು ಮೃತನಾಗಿದ್ದೆ ಎಂದು ನಿರೂಪಿಸಿದನು.

ಕಚಃ

ಸಮಿತ್ಪುಷ್ಪಫಲಾದೀನಿ ಕಾಷ್ಠಭಾರಂ ಚ ಭಾಮಿನಿ ।
ಗೃಹೀತ್ವಾ ಭೂರಿಭಾರಾರ್ತೋ ವಟವೃಕ್ಷಂ ಸಮಾಶ್ರಿತಃ ॥೩೫॥

ಎಲೌ ಸುಂದರಿಯೇ ಸಮಿತ್ತು, ಪುಷ್ಪ, ಫಲ ಮತ್ತು ಕಟ್ಟಿಗೆಗಳನ್ನು ತರಲು ಕಾಡಿಗೆ ಹೋದ ನಾನು ಅವೆಲ್ಲವನ್ನೂ ತೆಗೆದುಕೊಂಡು ಬಹಳ ಭಾರದಿಂದ ಬಳಲಿ ಒಂದು ಆಲದ ಮರದ ಬುಡವನ್ನು ಸೇರಿದೆನು.

ಗಾವಶ್ಚ ಸಹಿತಾಃ ಸರ್ವಾ ವೃಕ್ಷಚ್ಛಾಯಾಂ ಸಮಾಶ್ರಿತಾಃ ।
ಅಸುರಾಸ್ತತ್ರ ಮಾಂ ದೃಷ್ಟ್ವಾ ಕಸ್ತ್ವಮಿತ್ಯಭ್ಯಚೋದಯನ್ ॥೩೬॥

ಎಲ್ಲಾ ಗೋವುಗಳು ಒಟ್ಟಾಗಿ ಆ ಮರದ ನೆರಳಿನಲ್ಲಿ ಸೇರಿದವು. ಅಸುರರು ಅಲ್ಲಿ ನನ್ನನ್ನು ನೋಡಿ, ನೀನು ಯಾರು ಎಂದು ಕೇಳಿದರು.

ಬೃಹಸ್ಪತಿಸುತಶ್ಚಾಹಂ ಕಚ ಇತ್ಯಭಿವಿಶ್ರುತಃ ।
ಇತ್ಯುಕ್ತಮಾತ್ರೇ ಮಾಂ ಪೇಶೀಕೃತ್ವಾ ತು ದಾನವಾಃ ।
ದತ್ತ್ವಾ ಸಾಲಾವೃಕೇಭ್ಯಸ್ತೇ ಸುಖಂ ಜಗ್ಮುಃ ಸ್ವಮಾಲಯಮ್॥೩೭॥

ನಾನು ಬೃಹಸ್ಪತಿಗಳ ಮಗನಾದ ಕಚ ಎಂಬುವನು ಎಂದು ಹೇಳಿದ ಕೂಡಲೇ ನನ್ನನ್ನು ದಾನವರು ಕೊಂದು ಒಂದು ಮಾಂಸದ ಮುದ್ದೆಯನ್ನಾಗಿ ಮಾಡಿ, ತೋಳಗಳಿಗೆ ಎಸೆದು ಸುಖವಾಗಿ ತಮ್ಮ ಮನೆಗಳಿಗೆ ಹೊರಟುಹೋದರು.

ಆಹೂತೋ ವಿದ್ಯಯಾऽನೇನ ಭಾರ್ಗವೇಣ ಮಹಾತ್ಮನಾ ।
ತ್ವತ್ಸಮೀಪಮಿಹಾಯಾತಃ ಕಥಂಚಿತ್ ಪ್ರಾಪ್ತಜೀವಿತಃ ॥೩೮॥

ಈ ಮಹಾತ್ಮರಾದ ನಿನ್ನ ತಂದೆಯಾದ ಶುಕ್ರಾಚಾರ್ಯರಿಂದ ತಮ್ಮ ವಿದ್ಯೆಯ ಬಲದಿಂದ ಆಹೂತನಾಗಿ ಹೀಗೆ ಜೀವವನ್ನು ಪಡೆದು, ನಿನ್ನ ಸಮೀಪಕ್ಕೆ ಬಂದಿದ್ದೇನೆ.

ಪುನಶ್ಚ ದೇವಯಾನ್ಯೋಕ್ತಃ ಪುಷ್ಪಾಣ್ಯಾಹರ ಮೇ ದ್ವಿಜ ।
ತಥೇತಿ ಸ ಗತಃ ಕೇಚಿದ್ ದಾನವಾ ದದೃಶುರ್ವನೇ ।
ಪುನಶ್ಚ ಪೋಥಯಿತ್ವಾ ತಂ ಸಮುದ್ರೇऽಂಭಸ್ಯಮಿಶ್ರಯನ್ ॥೩೯॥

ಪುನಃ ದೇವಯಾನಿಯು ಬ್ರಾಹ್ಮಣನೇ ನನಗೆ ಪುಷ್ಪಗಳನ್ನು ತೆಗೆದುಕೊಂಡು ಬಾ ಎಂದು ಹೇಳಿದಳು. ಹಾಗೆಯೇ ಆಗಲಿ ಎಂದು ಹೇಳಿ ಕಾಡಿಗೆ ಹೋದ ಕಚನನ್ನು ದಾನವರು ನೋಡಿದರು. ಪುನಃ ಅವನನ್ನು ಗುದ್ದಿ ಕೊಂದು ಸಮುದ್ರದ ನೀರಿನಲ್ಲಿ ಕದಡಿಬಿಟ್ಟರು.

ಚಿರಂ ಗತಂ ಪುನಃ ಕನ್ಯಾ ಪಿತ್ರೇ ತಂ ಸನ್ನ್ಯವೇದಯತ್ ।
ವಿಪ್ರೇಣ ಪುನರಾಹೂತೋ ವಿದ್ಯಯಾ ಬ್ರಾಹ್ಮಣಸ್ತದಾ ।
ಪುನರಾವೃತ್ಯ ವೃತ್ತಾಂತಂ ನ್ಯವೇದಯತ ತತ್ತ್ವತಃ ॥೪೦॥

ಕಚನು ಹೋಗಿ ಬಹಳ ಸಮಯವಾಯಿತೆಂದು ದೇವಯಾನಿಯು ಪುನಃ ತಂದೆಗೆ ನಿವೇದಿಸಿದಳು. ಪುನಃ ಶುಕ್ರಾಚಾರ್ಯರು ತಮ್ಮ ವಿದ್ಯೆಯಿಂದ ಅವನನ್ನು ಪುನಃ ಕರೆದಾಗ ಕಚನು ಹಿಂದಿರುಗಿ ಬಂದು ವೃತ್ತಾಂತವೆಲ್ಲವನ್ನೂ ಯಥಾರ್ಥವಾಗಿ ನಿವೇದಿಸಿದನು.

ದೇವಯಾನ್ಯಾ ಪುನರಪಿ ವನ್ಯಂ ಪುಷ್ಪಂ ಸಮಾಹರ ।
ಅಗಚ್ಛದ್ ವನಮಿತ್ಯುಕ್ತೋ ದಾನವಾ ದದೃಶುಃ ಪುನಃ ॥೪೧॥

ತೃತೀಯಮಪಿ ಹತ್ವಾ ತಂ ದಗ್ಧ್ವಾ ಪಿಷ್ಟ್ವಾ ಚ ಸೂಕ್ಷ್ಮತಃ ।
ಪ್ರಾಯಚ್ಛನ್ ಬ್ರಾಹ್ಮಣಾಯೈವ ಸುರಾಯಾಮಸುರಾಸ್ತದಾ ॥೪೨॥

ದೇವಯಾನಿಯು ಪುನಃ ಕಚನನ್ನು ಕುರಿತು ಕಾಡಿನಿಂದ ಹೂಗಳನ್ನು ತೆಗೆದುಕೊಂಡು ಬಾ ಎಂದು ಹೇಳಿದಳು. ಹೀಗೆ ಹೇಳಲ್ಪಟ್ಟ ಕಚನು ಕಾಡಿಗೆ ಹೋಗಲು ಪುನಃ ದಾನವರು

ಅವನನ್ನು ನೋಡಿದರು. ಈ ಬಾರಿ ಅವನನ್ನು ಕೊಂದು, ಸುಟ್ಟು ಸಣ್ಣ ಪುಡಿಯನ್ನು ಮಾಡಿ, ಶುಕ್ರಾಚಾರ್ಯರಿಗೆ ಮದ್ಯದಲ್ಲಿ ಬೆರೆಸಿ ಸೇವಿಸಲು ಕೊಟ್ಟರು.

ದೇವಯಾನೀ ಶಂಕಮಾನಾ ದೃಷ್ಟ್ವಾ ಪಿತರಮಬ್ರವೀತ್ ।
ಪುಷ್ಪಾಹರಃ ಪ್ರೇಷಿತೋ ಮೇ ಕಚಸ್ತಾತ ನ ದೃಶ್ಯತೇ ।
ವ್ಯಕ್ತಂ ಗತೋ ಮೃತೋ ವಾಪಿ ಕಚಸ್ತಾತ ಮಹಾತಪಾಃ ॥೪೩॥

ದೇವಯಾನಿಯು ಪುನಃ ಸಂಶಯವುಳ್ಳವಳಾಗಿ, ತಂದೆಯನ್ನು ನೋಡಿ ತಂದೆಯೇ ಪುಷ್ಪವನ್ನು ತರಲು ನಾನು ಕಚನನ್ನು ಕಳುಹಿಸಿದ್ದೆ. ಆದರೆ ಕಚನು ಕಾಣಿಸುತ್ತಿಲ್ಲ. ಮಹಾತಪಸ್ವಿಯಾದ ಆ ಕಚನು ಎಲ್ಲಿಗೋ ಹೊರಟುಹೋಗಿದ್ದಾನೆ. ಅಥವಾ ಮೃತನಾಗಿದ್ದಾನೆ ಎಂದು ಹೇಳಿದಳು.

ಶುಕ್ರಃ

ಆಹೂತೋ ವಿದ್ಯಯಾऽಪೀಹ ನಾಭ್ಯೇತಿ ಕರವಾಣಿ ಕಿಮ್ ।
ಬೃಹಸ್ಪತೇಃ ಸುತಃ ಪುತ್ರಿ ಕಚಃ ಪ್ರೇತಗತಿಂ ಗತಃ ।
ವಿದ್ಯಯಾ ಜೀವಿತೋ ಹ್ಯೇಷ ಹನ್ಯತೇ ಕರವಾಣಿ ಕಿಮ್ ॥೪೪॥

ನಾನು ವಿದ್ಯೆಯಿಂದ ಕರೆದರೂ ಕಚನು ಬರುತ್ತಿಲ್ಲ. ಏನು ಮಾಡಲಿ? ಬೃಹಸ್ಪತಿಯ ಮಗನಾದ ಕಚನು ಮೃತನಾಗಿದ್ದಾನೆ. ಮಗಳೇ ಎಷ್ಟು ಸಲ ಬದುಕಿಸಿದರೂ ಪುನಃ ಅವನು ಕೊಲ್ಲಲ್ಪಡುತ್ತಾನೆ. ನಾನು ಏನು ಮಾಡಲಿ?

ತನ್ಮಾ ಶುಚೋ ಮಾ ರುದ ದೇವಯಾನಿ
ನ ತ್ವಾದೃಶೀ ಮರ್ತ್ಯಮನುಪ್ರಶೋಚೇತ್ ।
ಸುರಾಶ್ಚ ವಿಶ್ವೇ ಚ ಜಗಚ್ಚ ಸರ್ವ-
ಮುಪಸ್ಥಿತಾಂ ವೈ ವಿಪದಂ ವ್ರಜಂತಿ ॥೪೫॥

ಆದ್ದರಿಂದ ದೇವಯಾನಿಯು ಶೋಕಪಡಬೇಡ. ಮತ್ತು ಅಳಬೇಡ. ನಿನ್ನಂತಹವರು ಮರಣಶೀಲನಾದ ವ್ಯಕ್ತಿಯನ್ನು ಕುರಿತು ಶೋಕಿಸಬಾರದು. ದೇವತೆಗಳೇ ಆಗಲಿ, ಸಮಸ್ತ ಜಗತ್ತೇ ಆಗಲಿ ವಿಧಿಬರೆದ ವಿಪತ್ತನ್ನು ಹೊಂದಿಯೇ ಹೊಂದುತ್ತಾರೆ.

ದೇವಯಾನೀ

ಯಸ್ಯಾಂಗಿರಾ ವೃದ್ಧತಮಃ ಪಿತಾಮಹೋ
ಬೃಹಸ್ಪತಿಶ್ಚಾಪಿ ಪಿತಾ ಮಹರ್ಷಿಃ ।
ಋಷೇಃ ಪುತ್ರಂ ತವ ಶಿಷ್ಯಂ ಕಥಂ ನು
ಪಿತರ್ನ ಶೋಚಾಮಿ ಕಥಂ ನ ರುದ್ಯಾಮ್ ॥೪೬॥

ತಂದೆಯೇ ಯಾರಿಗೆ ವೃದ್ಧತಮನಾದ ಅಂಗೀರಸರು ಪಿತಾಮಹರೋ, ಮಹರ್ಷಿಗಳಾದ ಬೃಹಸ್ಪತಿಗಳು ಯಾರಿಗೆ ತಂದೆಯೋ, ಅಂತಹ ನಿನ್ನ ಶಿಷ್ಯನಾದ ಕಚನನ್ನು ಕುರಿತು ಹೇಗೆ ಶೋಕಪಡದಿರಲು ಸಾಧ್ಯ? ಹೇಗೆ ಅಳದೇ ಇರಲು ಸಾಧ್ಯ?

ಸ ಬ್ರಹ್ಮಚಾರೀ ಚ ತಪೋಧನಶ್ಚ
ನಿತ್ಯೋತ್ಥಿತಃ ಕರ್ಮಸು ಚೈವ ದಕ್ಷಃ ।
ಕಚಸ್ಯ ಮಾರ್ಗಂ ಪ್ರತಿಪತ್ಸ್ಯೇ ನ ಮೋಕ್ಷ್ಯೇ
ಪ್ರಿಯೋ ಹಿ ಮೇ ತಾತ ಕಚೋಽಭಿರೂಪಃ ॥೪೭॥

ಅವನು ಬ್ರಹ್ಮಚಾರಿ. ತಪೋಧನನಾದವನು. ನಿತ್ಯ ಉದ್ಯಮಶೀಲ. ಎಲ್ಲಾ ಕಾರ್ಯಗಳನ್ನು ದಕ್ಷತೆಯಿಂದ ಮಾಡುವವನು. ನಾನು ಕಚನ ಮಾರ್ಗವನ್ನೇ ಅನುಸರಿಸಿ ಹೋಗುತ್ತೇನೆ ಬಿಡುವುದಿಲ್ಲ. ಎಲೈ ತಂದೆಯೇ ಕಚನು ನನಗೆ ಅನುರೂಪನಾದವನು ಮತ್ತು ಪ್ರಿಯನಾದವನು.

ಶುಕ್ರಃ

ಅಸಂಶಯಂ ಮಾಮಸುರಾ ದ್ವಿಷಂತಿ
ಯೇ ಶಿಷ್ಯಂ ಮೇಽನಾಗಸಂ ಸೂದಯಂತಿ ।
ಅಬ್ರಾಹ್ಮಣಂ ಲೋಕಮಿಚ್ಛಂತಿ ಪಾಪಾ
ರೌದ್ರೀ ತಥಾ ದಾನವಾನಾಂ ಪ್ರವೃತ್ತಿಃ ।
ಅಪ್ಯಸ್ಯ ಪಾಪಸ್ಯ ಭವೇದಿಹಾಂತಃ
ಕಂ ಬ್ರಹ್ಮಹತ್ಯಾ ನ ದಹೇದಪೀಂದ್ರಮ್ ॥೪೮॥

ನಿಶ್ಚಯವಾಗಿ ನನ್ನನ್ನು ದಾನವರು ದ್ವೇಷಿಸುತ್ತಾರೆ. ಆದ್ದರಿಂದಲೇ ಅವರು ನಿರಪರಾಧಿಯಾದ ನನ್ನ ಶಿಷ್ಯನನ್ನು ಕೊಲ್ಲುತ್ತಿದ್ದಾರೆ. ಪಾಪಿಷ್ಠರಾದ ಅವರು ಲೋಕದಲ್ಲಿ

ಯಾರೂ ಬ್ರಾಹ್ಮಣರು ಇರಬಾರದೆಂದು ಬಯಸುತ್ತಾರೆ. ಅವರ ನಡೆವಳಿಕೆಯು ಯಾವಾಗಲೂ ಉಗ್ರವಾಗಿಯೇ ಇರುತ್ತದೆ. ಈಗ ಮಾಡಿದ ಪಾಪಕ್ಕೆ ಫಲವು ಸದ್ಯದಲ್ಲಿಯೇ ದೊರೆಯುತ್ತದೆ. ಬ್ರಹ್ಮಹತ್ಯವು ಯಾರನ್ನು ತಾನೇ ದಹಿಸುವುದಿಲ್ಲ? ಅದು ಇಂದ್ರನನ್ನೂ ಬಿಡುವುದಿಲ್ಲ.

ವೈಶಂಪಾಯನಃ

ಸಂಚೋದಿತೋ ದೇವಯಾನ್ಯಾ ಮಹರ್ಷಿಃ ಸಮುಪಾಹ್ವಯತ್ ।
ಸಂರಂಭೇಣೈವ ಕಾವ್ಯೋ ಹಿ ಬೃಹಸ್ಪತಿಸುತಂ ಕಚಮ್ ॥೪೯॥

ದೇವಯಾನಿಯಿಂದ ಪ್ರೇರಿತರಾಗಿ ಮಹರ್ಷಿಗಳಾದ ಶುಕ್ರಾಚಾರ್ಯರು ಸಿಟ್ಟಿನಿಂದ ಕೂಡಿದವರಾಗಿ ಬೃಹಸ್ಪತಿಯ ಮಗನಾದ ಕಚನನ್ನು ಆಹ್ವಾನಿಸಿದರು.

ಗುರೋರ್ಭೀತೋ ವಿದ್ಯಾಯಾ ಚೋಪಹೂತಃ ।
ಶನೈರ್ವಾಚಂ ಜಠರೇ ವ್ಯಾಜಹಾರ ॥೫೦॥

ಗುರುಗಳಿಗೆ ಹೆದರಿದವನಾಗಿ ಮತ್ತು ವಿದ್ಯೆಯಿಂದ ಕರೆಯಲ್ಪಟ್ಟವನಾಗಿ, ಅವರ ಜಠರದಲ್ಲಿದ್ದ ಕಚನು ಮೆಲ್ಲನೆ ಮಾತನಾಡಿದನು.

ಕಚಃ

ಪ್ರಸೀದ ಭಗವನ್ ಮಹ್ಯಂ ಕಚೋऽಹಮಭಿವಾದಯೇ ।
ಯಥಾ ಬಹುಮತಃ ಪುತ್ರಸ್ತಥಾ ಮನ್ಯತು ಮಾಂ ಭವಾನ್ ॥೫೧॥

ಪೂಜ್ಯರೇ ನನಗೆ ಅನುಗ್ರಹವನ್ನು ಮಾಡಿ. ಕಚನಾದ ನಾನು ನಮಸ್ಕರಿಸುತ್ತೇನೆ. ಹೇಗೆ ನಿಮ್ಮ ಪುತ್ರನು ನಿಮಗೆ ಪ್ರೀತ್ಯಾಸ್ಪದನಾಗಬಹುದೋ, ಹಾಗೆಯೇ ನನ್ನನ್ನು ಭಾವಿಸಿ.

ವೈಶಂಪಾಯನಃ

ತಮಬ್ರವೀತ್ ಕೇನ ಪಥೋಪನೀತೋ
ಮಮೋದರೇ ತಿಷ್ಠಸಿ ಬ್ರೂಹಿ ವಿಪ್ರ ।
ಅಸ್ಮಿನ್ ಮುಹೂರ್ತೇ ಹ್ಯಸುರಾನ್ ವಿನಾಶ್ಯ
ಗಚ್ಛಾಮಿ ದೇವಾನಹಮದ್ಯ ವಿಪ್ರ ॥೫೨॥

ಶುಕ್ರಾಚಾರ್ಯರು ಕಚನನ್ನು ಕುರಿತು, ಎಲೈ ಬ್ರಾಹ್ಮಣನೇ ಯಾವ ಮಾರ್ಗದಿಂದ ನೀನು ನನ್ನ ಉದರವನ್ನು ಸೇರಿದ್ದೀಯೆ ಹೇಳು. ಈ ಕ್ಷಣದಲ್ಲಿ ಎಲ್ಲಾ ಅಸುರರನ್ನು ವಿನಾಶ ಮಾಡಿ ನಾನು ದೇವತೆಗಳ ಪಕ್ಷಕ್ಕೆ ಹೋಗುತ್ತೇನೆ.

ಕಚಃ

ತವ ಪ್ರಸಾದಾನ್ನ ಜಹಾತಿ ಮಾಂ ಸ್ಮೃತಿಃ
ಸ ವೈ ಸರ್ವಂ ವೇದ್ಮಿ ಯಥಾ ಚ ವೃತ್ತಮ್ ।
ನನ್ವೇವ ತು ಸ್ಯಾತ್ ತಪಸೋ ವ್ಯಯೋ ಮೇ
ತತಃ ಕ್ಲೇಶಂ ಘೋರಮಿಮಂ ಸಹಾಮಿ ॥೫೩॥

ತಮ್ಮ ಅನುಗ್ರಹದಿಂದ ನನಗೆ ಸ್ಮೃತಿಯು ನಶಿಸಿಹೋಗಿಲ್ಲ. ಏನೇನು ನಡೆಯಿತೆಂದು ಎಲ್ಲವೂ ಜ್ಞಾಪಕದಲ್ಲಿದೆ. ನಾನೇ ನಿಮಗೆ ದೂರನ್ನು ಹೇಳಿದರೆ ನನ್ನ ತಪಸ್ಸು ವ್ಯಯವಾಗುವುದೆಂದು ತಿಳಿದು ಈ ಘೋರವಾದ ಕ್ಲೇಶವನ್ನು ಸಹಿಸಿಕೊಂಡಿದ್ದೇನೆ.

ಅಸುರೈಃ ಸುರಾಯಾಂ ಭವತೋಽಸ್ಮಿ ದತ್ತೋ
ಹತ್ವಾ ದಗ್ಧ್ವಾ ಚೂರ್ಣಯಿತ್ವಾ ಚ ಕಾವ್ಯ ।
ಬ್ರಾಹ್ಮೀಂ ಮಾಯಾಮಾಸುರೀ ಚಾದ್ಯ ಮಾಯಾ ।
ತ್ವಯಿ ಸ್ಥಿತೇ ಕಥಮೇವಾತಿವರ್ತೇತ್ ॥೫೪॥

ಅಸುರರು ನನ್ನನ್ನು ಕೊಂದು ಸುಟ್ಟು, ಪುಡಿ ಮಾಡಿ ನಿಮಗೆ ಮದ್ಯದಲ್ಲಿ ಸೇರಿಸಿಕೊಟ್ಟಿದ್ದಾರೆ. ಎಲೈ ಶುಕ್ರಾಚಾರ್ಯರೇ ಬ್ರಾಹ್ಮಣರ ಮಹಾತ್ಯೆಯನ್ನು ಅಸುರರ ಮಹಾತ್ಯೆಯು ಈ ದಿನ ಗೆದ್ದಿದೆ. ತಾವು ಬದುಕಿರುವಾಗ ಇದು ಹೇಗೆ ನಡೆಯಲು ಸಾಧ್ಯ ?

ಶುಕ್ರಃ

ಕಿಂ ತೇ ಪ್ರಿಯಂ ಕರವಾಣ್ಯದ್ಯ ವತ್ಸೇ
ವಧೇನ ಮೇ ಜೀವಿತಂ ಸ್ಯಾತ್ ಕಚಸ್ಯ ।
ನಾನ್ಯತ್ರ ಕುಕ್ಷೇರ್ಮಮ ಭೇದಾದ್ಧಿ ದೃಶ್ಯೇತ್
ಕನ್ಯೇ ಕಚೋ ಮದ್ಗತೋ ದೇವಯಾನಿ ॥೫೫॥

ಮಗಳೇ, ಈಗ ನಿನಗೆ ಏನು ಪ್ರಿಯವನ್ನುಂಟು ಮಾಡಲಿ? ನಾನು ಮೃತನಾದರೆ ಕಚನು ಬದುಕುತ್ತಾನೆ. ನನ್ನ ಕುಕ್ಷಿಯನ್ನು ಭೇದಿಸಿಕೊಂಡು ಬರುವುದನ್ನು ಬಿಟ್ಟು ಬೇರೆ ಉಪಾಯವಿಲ್ಲ. ಮಗಳೇ, ಕಚನು ನನ್ನ ಉದರದಲ್ಲಿದ್ದಾನೆ.

ದ್ವೌ ಮೇ ಶೋಕೌ ವಹ್ನಿಕಲ್ಪೌ ದಹೇತಾಂ
ಕಚಸ್ಯ ನಾಶಸ್ತವ ಚೈವೋಪಘಾತಃ ।
ಕಚಸ್ಯ ನಾಶೇ ಮಮ ಶರ್ಮ ನಾಸ್ತಿ
ತವೋಪಘಾತೇ ಜೀವಿತುಂ ನಾಸ್ಮಿ ಶಕ್ತಾ ॥೫೬।

ಎರಡು ಶೋಕಗಳು ನನ್ನನ್ನು ಅಗ್ನಿಯಂತೆ ಸುಡುತ್ತಿವೆ. ಮೊದಲನೆಯದು ಕಚನ ನಾಶ. ಕಚನ ನಾಶದಿಂದ ನಿನಗೆ ಆಗುವ ಅಪಘಾತವೂ ನನ್ನ ನಾಶೇ. ಕಚನನ್ನು ಉಳಿಸಬೇಕಾದರೆ ನನ್ನ ನಾಶವಾಗಬೇಕು. ನನ್ನ ಉದರವನ್ನು ಸೀಳಿಕೊಂಡು ಬರುತ್ತಾನೆ. ಆದ್ದರಿಂದ ನನ್ನ ನಾಶದಿಂದ ನಿನಗೆ ಆಗುವ ಆಘಾತವೂ ನನ್ನ ನಾಶವೇ. ನಿನಗೆ ಆಘಾತವಾದರೆ ನಾನು ಜೀವಿಸಲಾರೆ.

ಸಂಸಿದ್ಧರೂಪೋಽಸಿ ಬೃಹಸ್ಪತೇಃ ಸುತಃ
ಯತ್ ತ್ವಾಂ ಭಕ್ತ್ಯಾ ಭಜತೇ ದೇವಯಾನೀ ।
ವಿದ್ಯಾಮಿಮಾಂ ಪ್ರಾಪ್ನುಹಿ ಜೀವನೀಂ ತ್ವಂ
ನ ಚೇದಿಂದ್ರಃ ಕಚರೂಪೀ ತ್ವಮದ್ಯ ॥೫೭॥

ಬೃಹಸ್ಪತಿಯ ಸುತನಾದ ಎಲೈ ಕಚನೇ, ದೇವಯಾನಿ ನಿನ್ನನ್ನು ಇಷ್ಟು ಪ್ರೀತಿಸುವ ಕಾರಣದಿಂದ ನೀನು ವಿದ್ಯೆಯಲ್ಲಿ ಸಿದ್ಧಿಯನ್ನು ಪಡೆದಿರುವಿ. ನೀನು ಕಚರೂಪದಿಂದ ಬಂದ ಇಂದ್ರನಲ್ಲದಿದ್ದರೆ ಈ ನನ್ನ ಮೃತಸಂಜೀವಿನಿ ವಿದ್ಯೆಯನ್ನು ಪಡೆ.

ನ ನಿವರ್ತೇತ್ ಪುನರ್ಜೀವನ್ ಕಶ್ಚಿದನ್ಯೋ ಮಮೋದರಾತ್ ।
ಬ್ರಾಹ್ಮಣಂ ವರ್ಜಯಿತ್ವಾ ತು ತಸ್ಮಾದ್ ವಿದ್ಯಾಮವಾಪ್ನುಹಿ ॥೫೮॥

ನನ್ನ ಉದರವನ್ನು ಸೇರಿದವನು ಬ್ರಾಹ್ಮಣನನ್ನು ಬಿಟ್ಟು ಬೇರೆ ಯಾವನೂ ಬದುಕಿ ಹೊರಗೆ ಬರಲು ಸಾಧ್ಯವಿಲ್ಲ. ಆದ್ದರಿಂದ ವಿದ್ಯೆಯನ್ನು ಪಡೆ.

ಪುತ್ರೋ ಭೂತ್ವಾ ಭಾವಯ ಭಾವಿತೋ ಮಾಂ
ಅಸ್ಮದ್ದೇಹಾದುಪನಿಷ್ಕ್ರಮ್ಯ ತಾತ ।

ಸಮೀಕ್ಷೇಥಾ ಧರ್ಮವತೀಮವೇಕ್ಷಾಂ
ಗುರೋಃ ಸಕಾಶಾತ್ ಪ್ರಾಪ್ಯ ವಿದ್ಯಾಃ ಸವಿದ್ಯಃ ॥೫೯॥

ನನ್ನಿಂದ ಗೌರವಿಸಲ್ಪಟ್ಟ ನೀನು ಮಗನಾಗಿ ನನ್ನನ್ನು ಗೌರವಿಸು. ಮಗು, ಈ ದೇಹದಿಂದ ಹೊರಗೆ ಬಂದು ಗುರುವಿನ ಅನುಗ್ರಹದಿಂದ ವಿದ್ಯೆಯನ್ನು ಪಡೆದವನಾಗಿ, ಧರ್ಮದ ದೃಷ್ಟಿಯನ್ನೇ ಹೊಂದುವವನಾಗು. (ಧರ್ಮವನ್ನು ವೀಕ್ಷಿಸಿ ಅದೇ ವಿದ್ಯೆಯಿಂದ ನನ್ನನ್ನು ಬದುಕಿಸು.)

ವೈಶಂಪಾಯನಃ

ಗುರೋಃ ಸಕಾಶಾತ್ ಸಮವಾಪ್ಯ ವಿದ್ಯಾಂ
ಭಿತ್ತ್ವಾ ಪಾರ್ಶ್ವಂ ನಿರ್ವಿಚಕ್ರಾಮ ವಿಪ್ರಃ ।
ಕಚೋಽಭಿರೂಪೋ ತತ್ಕ್ಷಣಾದ್ ಬ್ರಾಹ್ಮಣಸ್ಯ
ಶುಕ್ರಾತ್ಯಯೇ ಪೌರ್ಣಮಾಸ್ಯಾಮಿವೇಂದುಃ ॥೬೦॥

ಗುರುಗಳಿಂದ ವಿದ್ಯೆಯನ್ನು ಸಿದ್ಧಿಸಹಿತವಾಗಿ ಹೊಂದಿದವನಾಗಿ ಗುರುಗಳ ಪಾರ್ಶ್ವವನ್ನು ಭೇದಿಸಿಕೊಂಡು ಕಚನು ಹೊರಗೆ ಬಂದನು. ಆಕ್ಷಣದಲ್ಲಿಯೇ ಸುಂದರರೂಪವನ್ನು ಧರಿಸಿದ ಕಚನು ಶುಕ್ರಾಚಾರ್ಯರಿಂದ ಹೊರಗೆ ಬಂದು ಶುಕ್ಲಪಕ್ಷದ ಕೊನೆಯ ದಿವಸ ಪೌರ್ಣಮಿಯಲ್ಲಿ ಇರುವ ಚಂದ್ರನಂತೆ ಬೆಳಗಿದನು.

ದೃಷ್ಟ್ವಾ ಶಯಾನಂ ಬ್ರಾಹ್ಮಣಂ ಬ್ರಹ್ಮರಾಶಿ-
ಮುತ್ಥಾಪಯಾಮಾಸ ಮೃತಂ ಕಚಶ್ಚ ।
ವಿದ್ಯಾಂ ಸಿದ್ಧಾಂ ಸಮವಾಪ್ಯಾಭಿವಾದ್ಯ
ತತಃ ಕಚಸ್ತಂ ಗುರುಮಿತ್ಯುವಾಚ ॥೬೬॥

ನೆಲದ ಮೇಲೆ ಮಲಗಿರುವ ಬ್ರಹ್ಮಜ್ಞಾನಿಗಳಾದ ಶುಕ್ರಾಚಾರ್ಯರನ್ನು ಕಚನು ವಿದ್ಯೆಯಿಂದ ಬದುಕಿಸಿದನು. ಸಿದ್ಧವಾದ ವಿದ್ಯೆಯನ್ನು ಪಡೆದು ಗುರುಗಳಿಗೆ ನಮಸ್ಕರಿಸಿ, ಅನಂತರ ಕಚನು ಈ ಮಾತುಗಳನ್ನು ಹೇಳಿದನು.

ಕಚಃ

ಯಃ ಶ್ರೋತ್ರಯೋರಮೃತಂ ಸನ್ನಿಷಿಂಚೇದ್
ವಿದ್ಯಾಮವಿದ್ಯಸ್ಯ ಯಥಾ ಮಮಾಯಮ್ ।

ತಂ ಮನ್ಯೇಽಹಂ ಪಿತರಂ ಮಾತರಂ ಚ
ತಸ್ಮೈ ನ ದ್ರುಹ್ಯೇತ್ ಕೃತಮಸ್ಯ ಜಾನನ್ ॥೬೭॥

ಈ ಗುರುಗಳು ನನಗೆ ಮಾಡಿದಂತೆ ಅವಿದ್ಯಾವಂತನಿಗೆ ವಿದ್ಯೆಯೆಂಬ ಅಮೃತವನ್ನು ಕಿವಿಗಳಲ್ಲಿ ಸುರಿಯುತ್ತಾರೋ, ಅವರನ್ನು ನಾನು ತಂದೆಯೆಂದೂ, ತಾಯಿಯೆಂದೂ ತಿಳಿಯುತ್ತೇನೆ. ಅವರು ಮಾಡಿದ ಉಪಕಾರವನ್ನು ಸ್ಮರಣೆ ಮಾಡುವವನು ಎಂದೂ ಅವರಿಗೆ ದ್ರೋಹವನ್ನು ಮಾಡಬಾರದು.

ಋತಸ್ಯ ದಾತಾರಮನುತ್ತಮಸ್ಯ
ನಿಧಿಂ ನಿಧೀನಾಂ ಚತುರನ್ವಯಾನಾಮ್ ।
ಯೇ ನಾದ್ರಿಯಂತೇ ಗುರುಮರ್ಚನೀಯಂ
ಪಾಪಾನ್ ಲೋಕಾಂಸ್ತೇ ವ್ರಜಂತ್ಯಪ್ರತಿಷ್ಠಾನ್ ॥೬೮॥

ನಾಲ್ಕು ವೇದಗಳ ಸಾರವಾದ ಶಾಸ್ತ್ರಗಳೆಂಬ ನಿಧಿಯನ್ನು, ಮತ್ತು ಶ್ರೇಷ್ಠವಾದ ಯಥಾರ್ಥಜ್ಞಾನವನ್ನು ಯಾರು ಕೊಡುತ್ತಾರೆಯೋ, ಅಂತಹ ಆದರಣೀಯವಾದ ಗುರುವನ್ನು ಯಾರು ಆದರಿಸುವುದಿಲ್ಲವೋ, ಅವರು ಪಾಪಿಷ್ಠವಾದ ಲೋಕಗಳನ್ನು ಹೊಂದುತ್ತಾರೆ.

ವೈಶಂಪಾಯನಃ

ಶೃಣ್ವತ್ಸು ಭೂತೇಷ್ವಿದಮಾಹ ಕಾವ್ಯಃ
ಸಮುತ್ಥಿತೋ ಬ್ರಹ್ಮರಾಶಿಃ ಪುರಾಣಃ ।
ಸುರಾಪಾನಾದ್ ವಂಚನಾಂ ಪ್ರಾಪ್ಯತೀವ್ರಾಂ
ಸಂಜ್ಞಾನಾಶಂ ಪಾಪಕೃತ್ಯಾಫಲಂ ಯತ್ ॥೬೯॥

ಎಲ್ಲರೂ ಕೇಳುತ್ತಿರುವಂತೆ ಶುಕ್ರಾಚಾರ್ಯರು ಪುರಾತನವಾದ ವೇದಗಳ ರಾಶಿಯಂತೆ ಎದ್ದವರಾಗಿ ಮದ್ಯಪಾನದಿಂದ ವಂಚನೆಗೊಳಗಾಗಿ ತೀವ್ರವಾದ ಸ್ಮೃತಿನಾಶವನ್ನು ಹೊಂದಿದವರಾಗಿ, ಆ ಪಾಪಕರ್ಮದ ಫಲವನ್ನು ನೋಡಿ ಹೀಗೆ ಮಾತನಾಡಿದರು -

ದೃಷ್ಟ್ವಾ ಕಚಂ ಚಾಪಿ ತಥಾ ಸಜೀವಿತಂ
ಪೀತ್ವಾ ಸುರಾಂ ಸುರಯಾ ಮೋಹಿತಃ ಸನ್ ।

ಸಮನ್ಯುರುತ್ಥಾಯ ಮಹಾನುಭಾವಃ
ತದೋಶನಾ ವಿಪ್ರಹಿತಂ ಚಿಕೀರ್ಷುಃ ।
ಕಾವ್ಯಃ ಸ್ವಯಂ ವಾಕ್ಯಮಿದಂ ಜಗಾದ
ಸುರಾಪಾನಂ ವೈ ಪ್ರತಿಶಂಕಮಾನಃ ॥೭೦॥

ಕಚನು ಹಾಗೇ ಬದುಕಿರುವುದನ್ನು ನೋಡಿ, ಮೊದಲು ಸುರಾಪಾನ ಮಾಡುವುದರಿಂದ ಮೋಹಿತರಾಗಿದ್ದ ಅವರು ಸಿಟ್ಟಿನಿಂದ ಎದ್ದುನಿಂತು, ವಿಪ್ರಕಾರ್ಯವನ್ನು ಮಾಡುವವರಾಗಿ, ಈ ಸುರಾಪಾನದ ದೋಷವನ್ನು ಗಮನಿಸಿದವರಾಗಿ ಮಹಾನುಭಾವರಾದ ಅವರು ಈ ಮಾತುಗಳನ್ನು ಹೇಳಿದರು.

ಯೋ ಬ್ರಾಹ್ಮಣೋಽದ್ಯಪ್ರಭೃತೀಹ ಕಶ್ಚಿ-
ನ್ಮೋಹಾತ್ ಸುರಾಂ ಪಾಸ್ಯತಿ ಮಂದಬುದ್ಧಿಃ ।
ಅಪೇತಧರ್ಮೋ ಬ್ರಹ್ಮಹಾ ಚೈವ ಸ ಸ್ಯಾದ್
ಅಸ್ಮಿಂಲ್ಲೋಕೇ ಗರ್ಹಿತಃ ಸ್ಯಾತ್ ಪರೇ ಚ ॥೭೧॥

ಇಂದಿನಿಂದ ಪ್ರಾರಂಭಿಸಿ ಯಾವ ಬ್ರಾಹ್ಮಣನು ಮಂದಬುದ್ಧಿಯಾಗಿ ಮೋಹದಿಂದ ಸುರಾಪಾನವನ್ನು ಮಾಡುತ್ತಾನೆಯೋ, ಅವನು ಧರ್ಮಭ್ರಷ್ಟನೂ, ಬ್ರಹ್ಮಹತ್ಯಾದೋಷಭಾಗಿಯೂ ಆಗಿ ಭೂಲೋಕದಲ್ಲಿಯೂ, ಪರಲೋಕದಲ್ಲಿಯೂ ಗರ್ಹಿತನಾಗುವನು.

ಮಯಾ ಚೇಮಾಂ ವಿಪ್ರಧರ್ಮೋತ್ತಸೀಮಾಂ
ಮರ್ಯಾದಾಂ ವೈ ಸ್ಥಾಪಿತಾಂ ಸರ್ವಲೋಕೇ ।
ಸಂತೋ ವಿಪ್ರಾಃ ಶುಶ್ರುವಾಂಸೋ ಗುರೂಣಾಂ
ದೇವಾ ಲೋಕಾಶ್ಚೋಪಶೃಣ್ವಂತು ಸರ್ವೇ ॥೭೨॥

ನಾನು ಈ ದಿನ ಸ್ಥಾಪಿಸಿದ ಈ ಬ್ರಾಹ್ಮಣ ಧರ್ಮದ ಮರ್ಯಾದೆಯನ್ನು ಎಲ್ಲ ಲೋಕಗಳಲ್ಲಿರುವ ಸಜ್ಜನರಾದ ಬ್ರಾಹ್ಮಣರು ಗುರುಗಳನ್ನು ಶುಶ್ರೂಷೆ ಮಾಡುವ ಶಿಷ್ಯರು, ದೇವತೆಗಳು ಮತ್ತು ಉಳಿದ ಎಲ್ಲಾ ಜನರೂ ಕೇಳಬೇಕು.

ಇತೀದಮುಕ್ತ್ವಾ ತು ಮಹಾನುಭಾವ-
ಸ್ತಪೋನಿಧೀನಾಂ ನಿಧಿರಪ್ರಮೇಯಃ ।
ತಾನ್ ದಾನವಾನ್ ದೇವವಿಮೂಢಬುದ್ಧೀನ್ ।
ಇದಂ ಸಮಾಹೂಯ ವಚೋಽಭ್ಯುವಾಚ ॥೭೩॥

ಇಷ್ಟು ಹೇಳಿ ತಪೋನಿಧಿಗಳಿಗೆ ನಿಧಿಗಳಾದ ಅಪ್ರಮೇಯರಾದ ಮಹಾನುಭಾವರಾದ ಶುಕ್ರಾಚಾರ್ಯರು ದೈವವಿಮೋಹಿತ ಬುದ್ಧಿಯುಳ್ಳ ಆ ದಾನವರನ್ನು ಕರೆದು ಹೀಗೆ ಮಾತನಾಡಿದರು -

ಆಚಕ್ಷೇ ವೋ ದಾನವಾ ಬಾಲಿಶಾಃ ಸ್ಥ
ಸಿದ್ಧಃ ಕಚೋ ಯಾಸ್ಯತಿ ಮತ್ಸಕಾಶಾತ್ ।
ಸಂಜೀವಿನೀಂ ಪ್ರಾಪ್ಯ ವಿದ್ಯಾಂ ಮಹಾರ್ಥಾಂ
ತುಲ್ಯಪ್ರಭಾವೋ ಬ್ರಹ್ಮಣಾ ಬ್ರಹ್ಮಭೂತಃ ॥೭೪॥

ಎಲೈ ದಾನವರೇ ನಿಮ್ಮನ್ನು ಕುರಿತು ಹೇಳುತ್ತಿದ್ದೇನೆ. ನೀವು ಬಹಳ ಬುದ್ಧಿಯುಳ್ಳವರು. ಕಚನು ನನ್ನಿಂದ ಸಂಜೀವಿನಿ ವಿದ್ಯೆಯ ಸಿದ್ಧಿಯನ್ನು ಪಡೆದು ಹೋಗುತ್ತಿದ್ದಾನೆ. ಮಹಾಪ್ರಯೋಜನವನ್ನು ಕೊಡುವ ಈ ವಿದ್ಯೆಯನ್ನು ಸಂಪಾದಿಸಿದ ಅವನು ಭಗವನ್ನಿಷ್ಠನಾಗಿ ಬೃಹಸ್ಪತಿಗಳಿಗೆ ಸಮಾನವಾದ ಸಾಮರ್ಥ್ಯವುಳ್ಳವನಾಗುತ್ತಾನೆ.

ಯೋಽಕಾರ್ಷೀದ್ ದುಷ್ಕರಂ ಕರ್ಮ ದೇವಾನಾಂ ಕಾರಣಾತ್ ಕಚಃ ।
ನ ಚೇತ್ ಕಿಂಚಿಚ್ಚರಾಂ ಗಚ್ಛೇಃ ಯಾಜ್ಞೇಯಶ್ಚ ಭವಿಷ್ಯಸಿ ॥೭೫॥

ಎಲೈ ಕಚನೇ ನೀನು ದೇವತೆಗಳ ಸಲುವಾಗಿ ದುಷ್ಕರವಾದ ಕರ್ಮವನ್ನು ಮಾಡಿದೆ. ನೀನು ನಿನಗಿಂತ ವಯಸ್ಸಿನಲ್ಲಿ ಅಧಿಕಳಾದ, ವನಿತೆಯ ಸಮಾಗಮವನ್ನು ಮಾಡದಿದ್ದರೆ ನೀನು ಯಜ್ಞಫಲಕ್ಕೆ ಭಾಗಿಯಾಗುತ್ತೀಯೆ ಎಂದು ಆಶೀರ್ವಾದವನ್ನು ಮಾಡಿದರು.

ಗುರೋರುಷ್ಯ ಸಕಾಶೇ ತು ದಶ ವರ್ಷಶತಾನಿ ಚ ।
ಅನುಜ್ಞಾತಃ ಕಚೋ ಗಂತುಮಿಯೇಷ ತ್ರಿದಶಾಲಯಮ್ ॥೭೬॥

ಗುರುಗಳ ಸಮೀಪದಲ್ಲಿ ಒಂದುಸಾವಿರ ವರ್ಷಗಳ ಕಾಲ ಇದ್ದು ಗುರುಗಳ ಅನುಜ್ಞೆಯನ್ನು ಪಡೆದು ಕಚನು ಸ್ವರ್ಗಕ್ಕೆ ಹೋಗಲು ಬಯಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಪಂಚಷಷ್ಟಿತಮೋಽಧ್ಯಾಯಃ ॥
॥ ಇತಿ ಸಂಭವಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಅರವತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಅರವತ್ತಾರನೆಯ ಅಧ್ಯಾಯ

(ಕಚನಲ್ಲಿ ದೇವಯಾನಿಯ ಪ್ರೀತಿ ಮತ್ತು ಪರಸ್ಪರ ಶಾಪದಾನ.)

ವೈಶಂಪಾಯನಃ

ಸಮಾವೃತ್ತವ್ರತಂ ತಂ ತು ನಿಸೃಷ್ಟಂ ಗುರುಣಾ ಕಚಮ್ ।
ಪ್ರಸ್ಥಿತಂ ತ್ರಿದಶಾವಾಸಂ ದೇವಯಾನೀದಮಬ್ರವೀತ್ ॥೧॥

ತನ್ನ ವ್ರತವನ್ನು ಪೂರ್ತಿಗೊಳಿಸಿ. ಗುರುಗಳ ಅನುಜ್ಞೆಯನ್ನು ಪಡೆದು, ಸ್ವರ್ಗವನ್ನು ಕುರಿತು ಹೊರಟ ಕಚನನ್ನು ಕುರಿತು ದೇವಯಾನಿಯು ಹೀಗೆ ಹೇಳಿದಳು -

ಋಷೇರಂಗಿರಸಃ ಪೌತ್ರ ವೃತ್ತೇನಾಭಿಜನೇನ ಚ ।
ಭ್ರಾಜಸೇ ವಿದ್ಯಯಾ ಚೈವ ತಪಸಾ ಚ ದಮೇನ ಚ ॥೨॥

ಅಂಗೀರಸಋಷಿಗಳ ಮೊಮ್ಮಗನಾದ ನೀನು, ನಿನ್ನ ಶ್ರೇಷ್ಠವಾದ ಜನ್ಮದಿಂದ ನಡತೆಯಿಂದ ವಿದ್ಯೆಯಿಂದ ತಪಸ್ಸಿನಿಂದ ಮತ್ತು ಇಂದ್ರಿಯನಿಗ್ರಹದಿಂದ ಕಂಗೊಳಿಸುತ್ತಿದ್ದೀಯೆ.

ಋಷಿರ್ಯಥಾಂಗಿರಾ ಮಾನ್ಯಃ ಪಿತುರ್ಮಮ ಮಹಾತಪಾಃ ।
ತಥಾ ಮಾನ್ಯಶ್ಚ ಪೂಜ್ಯಶ್ಚ ಭೂಯೋ ಮಮ ಬೃಹಸ್ಪತಿಃ ॥೩॥

ಮಹಾತಪಸ್ವಿಯಾದ ಅಂಗಿರಸಋಷಿಗಳು ಹೇಗೆ ನನ್ನ ತಂದೆಗೆ ಮಾನ್ಯರೋ, ಹಾಗೇ ನನಗೆ ನಿನ್ನ ತಂದೆಯಾದ ಬೃಹಸ್ಪತಿಯು ಇನ್ನೂ ಹೆಚ್ಚು ಮಾನ್ಯನೂ, ಪೂಜ್ಯನೂ ಆಗಿದ್ದಾನೆ.

ಏವಂ ಜ್ಞಾತ್ವಾ ವಿಜಾನೀಹಿ ಯದ್ ಬ್ರವೀಮಿ ತಪೋಧನ ।
ವ್ರತಸ್ಥೇ ನಿಯಮೋಪೇತೇ ಯಥಾ ವರ್ತಾಮ್ಯಹಂ ತ್ವಯಿ ॥೪॥

ತ್ವಂ ಸಮಾವೃತ್ತವಿದ್ಯೋ ಮಾಂ ಭಕ್ತಾಂ ಭಜಿತುಮರ್ಹಸಿ ।
ಗೃಹಾಣ ಪಾಣಿಂ ವಿಧಿವನ್ಮಮ ಮಂತ್ರಪುರಸ್ಸರಮ್ ॥೫॥

ಎಲೈ ತಪೋಧನನೇ, ಇದನ್ನು ಗಮನಿಸಿ ನಾನು ಹೇಳುವುದನ್ನು ಕೇಳು. ನೀನು ರಥವನ್ನು ಧರಿಸಿ, ನಿಯಮಯುಕ್ತನಾಗಿದ್ದಾಗ ನಿನ್ನ ಜೊತೆಯಲ್ಲಿ ನಾನು ಸರಿಯಾಗಿ ವರ್ತಿಸಿದ್ದರೆ ವ್ರತವನ್ನು ಮುಗಿಸಿ ವಿದ್ಯೆಯನ್ನು ಸಂಪಾದಿಸಿದ ನೀನು ನಿನ್ನಲ್ಲಿ ಅನುರಕ್ತಳಾದ ನನ್ನನ್ನು ಅನುರಾಗದಿಂದ ಸ್ವೀಕರಿಸಬೇಕು. ವಿಧಿವತ್ತಾಗಿ ಮಂತ್ರಪುರಸ್ಸರವಾಗಿ ನನ್ನ ಪಾಣಿಗ್ರಹಣವನ್ನು ಮಾಡಿಕೋ.

ಕಚಃ

ಪೂಜ್ಯೋ ಮಾನ್ಯಶ್ಚ ಭಗವಾನ್ ಯಥಾ ತವ ಪಿತಾ ಮಮ ।
ತಥಾ ತ್ವಮನವದ್ಯಾಂಗಿ ಪೂಜನೀಯತಮಾ ಮಮ ॥೬॥

ಎಲೌ ಸುಂದರಿಯೇ ನಿನ್ನ ತಂದೆಯಾದ ಪೂಜ್ಯನಾದ ಶುಕ್ರನು ನನಗೆ ಹೇಗೆ ಮಾನ್ಯನೋ, ಹಾಗೆಯೇ ನೀನು ಅವನಿಗಿಂತಲೂ ಹೆಚ್ಚು ಮಾನ್ಯಳಾದವಳು.

ಆತ್ಮಪ್ರಾಣೈಃ ಪ್ರಿಯತಮಾ ಭಾರ್ಗವಸ್ಯ ಶುಚಿಸ್ಮಿತೇ ।
ತ್ವಂ ಭದ್ರೇ ಧರ್ಮತಃ ಪೂಜ್ಯಾ ಗುರುಪುತ್ರೀ ಮತಾ ಮಮ ॥೭॥

ಎಲೈ ಶುಚಿಸ್ಮಿತೆಯೇ ನೀನು ಶುಕ್ರಾಚಾರ್ಯರಿಗೆ ತಮ್ಮ ಪ್ರಾಣಕ್ಕಿಂತ ಪ್ರಿಯಳಾದವಳು. ಮಂಗಳಸ್ವರೂಪಳೇ ಗುರುಪುತ್ರಿಯಾದ ನೀನು ಧರ್ಮದ ದೃಷ್ಟಿಯಿಂದ ನನ್ನಿಂದ ಪೂಜ್ಯಳು ಎಂದು ನನ್ನ ಅಭಿಪ್ರಾಯ.

ಗುರೋರ್ಗರೀಯಸೀ ವೃತ್ತ್ಯಾ ತಸ್ಮಾದ್ ಗುರುತರೀ ಮಮ ।
ನ ಮಾಮರ್ಹಸಿ ಕಲ್ಯಾಣಿ ವಕ್ತುಮೇವಂ ಶುಚಿಸ್ಮಿತೇ ॥೮॥

ನಿನ್ನ ನಡತೆಯಿಂದ ನನ್ನ ಗುರುಗಳನ್ನೂ ಮೀರಿಸಿದ್ದೀಯೆ, ಆದ್ದರಿಂದ ಗುರುಗಳಿಗಿಂತ ಮಿಗಿಲಾದವಳು ನೀನು. ಕಲ್ಯಾಣಿಯೇ ಮತ್ತು ಶುಚಿಸ್ಮಿತೆಯೇ ನನ್ನನ್ನು ಕುರಿತು ಹೀಗೆ ಮಾತನಾಡಬಾರದು.

ಯಥಾ ಮಮ ಗುರುರ್ನಿತ್ಯಂ ಶುಕ್ರೋ ಮಾನ್ಯಃ ಪಿತಾ ತವ ।
ದೇವಯಾನಿ ತಥಾ ತ್ವಂ ಹಿ ನೈವಂ ವಕ್ತುಮಿಹಾರ್ಹಸಿ ॥೯॥

ದೇವಯಾನಿ ನಿನ್ನ ತಂದೆಯಾದ ಶುಕ್ರನು ನನಗೆ ಗುರುವಾಗಿ ಹೇಗೆ ಯಾವಾಗಲೂ ಮಾನ್ಯನಾಗಿದ್ದಾನೆಯೋ, ಹಾಗೆಯೇ ನೀನೂ ಸಹ. ಆದ್ದರಿಂದ ಹೀಗೆ ಮಾತನಾಡಬೇಡ.

ದೇವಯಾನೀ

ಗುರುಪುತ್ರಸ್ಯ ಪುತ್ರೋ ಮೇ ನನು ತ್ವಮಸಿ ಮೇ ಪಿತುಃ ।
ತಸ್ಮಾನ್ಮಾನ್ಯಶ್ಚ ಪೂಜ್ಯಶ್ಚ ಮಮಾಪಿ ತ್ವಂ ದ್ವಿಜೋತ್ತಮ ॥೧೦॥

ಎಲೈ ಬ್ರಾಹ್ಮಣಶ್ರೇಷ್ಠನೇ ನನ್ನ ತಂದೆಯ ಗುರುಸ್ಥಾನದಲ್ಲಿರುವ ಆಂಗಿರಸ ಪುತ್ರರಾದ ಬೃಹಸ್ಪತಿಗಳ ಪುತ್ರನು ನೀನು. ಆದ್ದರಿಂದ ನೀನು ನನಗೂ ಸಹ ಮಾನ್ಯನೂ, ಪೂಜ್ಯನೂ ಆಗಿದ್ದೀಯೆ.

ವಿಶಸ್ಯಮಾನೇ ತ್ವಸುರೈಃ ಕಚ ತ್ವಯಿ ಪುನಃ ಪುನಃ ।
ತದಾಪ್ರಭೃತಿ ಯಾ ಪ್ರೀತಿಸ್ತಾಂ ತ್ವಮೇವ ಸ್ಮರಸ್ವ ಮೇ ॥೧೧॥

ನಿನ್ನನ್ನು ಅಸುರರು ಮತ್ತೆ ಮತ್ತೆ ಕೊಂದು ಕತ್ತರಿಸಿದಾಗಿನಿಂದ ನಿನ್ನಲ್ಲಿ ನನಗೆ ಎಂತಹ ಪ್ರೀತಿಯಿದೆ ಎಂದು ನೀನೇ ಸ್ಮರಿಸಿಕೋ.

ಸೌಹೃದೇನಾನುರಕ್ತಾಂ ಚ ಭಕ್ತಾಂ ಭಜಿತುಮರ್ಹಸಿ ।
ನ ಮಾಮರ್ಹಸಿ ಧರ್ಮಜ್ಞ ತ್ಯಕ್ತುಂ ಭಕ್ತಾಮನಾಥವತ್ ॥೧೨॥

ಪ್ರಣಯದಿಂದ ಅನುರಕ್ತಳಾದ ನನ್ನನ್ನು ನಿನ್ನ ಸೇವಕಿಯಾಗಿ, ಪ್ರಿಯೆಯಾಗಿ ಸ್ವೀಕರಿಸು. ಧರ್ಮಜ್ಞನಾದ ನೀನು ಅನುರಕ್ತಳಾದ ನನ್ನನ್ನು ಅನಾಥಳಂತೆ ತ್ಯಾಗಮಾಡುವುದು ಉಚಿತವಲ್ಲ.

ಕಚಃ

ಅನಿಯೋಜ್ಯೇ ನಿಯೋಕ್ತುಂ ಮಾಂ ದೇವಯಾನಿ ನ ಚಾರ್ಹಸಿ ।
ಪ್ರಸೀದ ಸುಭ್ರು ತ್ವಂ ಮಹ್ಯಂ ಗುರೋರ್ಗುರುತರೀ ಶುಭೇ ॥೧೩॥

ಎಲೌ ದೇವಯಾನಿಯೇ, ಮಾಡಬಾರದ ಕೆಲಸವನ್ನು ಮಾಡುವಂತೆ ನೀನು ನನಗೆ ಒತ್ತಾಯ ಮಾಡಬಾರದು. ಸುಂದರಿಯೇ, ಮಂಗಳಸ್ವರೂಪಳೇ ನನ್ನ ಮೇಲೆ ದಯೆಯನ್ನು ತೋರು. ನೀನು ನನ್ನ ಗುರುಗಳಿಗಿಂತ ಶ್ರೇಷ್ಠಳಾದವಳು.

ಯತ್ತ್ವೋಷಿತಂ ವಿಶಾಲಾಕ್ಷಿ ತ್ವಯಾ ಚಂದ್ರನಿಭಾನನೇ ।
ತತ್ರಾಹಮುಷಿತೋ ಭದ್ರೇ ಕುಕ್ಷೌ ಕಾವ್ಯಸ್ಯ ಭಾಮಿನಿ ॥೧೪॥

ಎಲೌ ಚಂದ್ರಮುಖಿಯೇ, ಸುಂದರಿಯೇ, ಮಂಗಳಸ್ವರೂಪಳೇ ನೀನು ಶುಕ್ರಾಚಾರ್ಯರ ಯಾವ ಉದರದಲ್ಲಿ ವಾಸಮಾಡಿದೆಯೋ, ನಾನೂ ಸಹ ಅಲ್ಲಿಯೇ ವಾಸಮಾಡಿದೆ.

ಮಮ ತ್ವಂ ಭಗಿನೀ ಭದ್ರೇ ಮೈವಂ ವೋಚಃ ಶುಭಾನನೇ ।
ಸುಖಮಸ್ಮ್ಯುಷಿತೋ ಭದ್ರೇ ನ ಮನ್ಯುರ್ಮಮ ವಿದ್ಯತೇ ॥೧೫॥

ಆದ್ದರಿಂದ ಸುಂದರಮುಖವುಳ್ಳವಳೇ, ನನಗೆ ನೀನು ತಂಗಿಯಾಗಿ ಹೀಗೆ ಮಾತನಾಡಬೇಡ. ಮಂಗಳಸ್ವರೂಪಳೇ ನಿಮ್ಮ ಮನೆಯಲ್ಲಿ ನಾನು ಸುಖವಾಗಿ ಕಾಲ ಕಳೆದಿದ್ದೇನೆ. ನನಗೆ ನಿನ್ನ ಮೇಲೆ ಕೋಪವಿಲ್ಲ.

ಆಪೃಚ್ಛೇ ತ್ವಾಂ ಗಮಿಷ್ಯಾಮಿ ಶಿವಮಾಶಾಸ್ವ ಮೇ ಪಥಿ ।
ಅವಿರೋಧೇನ ಧರ್ಮಸ್ಯ ಸ್ಮರ್ತವ್ಯೋಽಹಂ ಕಥಾಂತರೇ ।
ಅಪ್ರಮತ್ತೋತ್ಥಿತಾ ನಿತ್ಯಮಾರಾಧಯ ಗುರುಂ ಮಮ ॥೧೬॥

ನಿನ್ನ ಅನುಮತಿಯನ್ನು ಕೇಳುತ್ತಿದ್ದೇನೆ. ನನಗೆ ದಾರಿಯಲ್ಲಿ ಶುಭವಾಗಲಿ ಎಂದು ಆಶೀರ್ವಾದ ಮಾಡು. ಧರ್ಮಕ್ಕೆ ವಿರೋಧ ಬರದಂತೆ ಬೇರೆ ಮಾತುಗಳ ಮಧ್ಯದಲ್ಲಿ ನನ್ನನ್ನು ಒಮ್ಮೆ ಸ್ಮರಿಸಿಕೋ. ಜಾಗರೂಕಳಾಗಿದ್ದು ನನ್ನ ಗುರುಗಳನ್ನು ಆರಾಧಿಸುವುದರಲ್ಲಿ ಯಾವಾಗಲೂ ಉದ್ಯುಕ್ತಳಾಗಿರು.

ದೇವಯಾನೀ

ಧರ್ಮಕಾರ್ಯೇ ನಿಯುಂಜಾನಾ ಕನ್ಯಾ ಸಂಪ್ರಾಪ್ತಯೌವನಾ ।
ಧರ್ಮಮೇವ ಪ್ರಯುಂಜಾನಾ ಪ್ರತ್ಯಾಖ್ಯಾತಾ ತ್ವಯಾಽನಘ ।
ತಸ್ಮಾತ್ ಕಚ ನ ತೇ ವಿದ್ಯಾ ಸಿದ್ಧಿಮೇಷಾ ಗಮಿಷ್ಯತಿ ॥೧೭॥

ಯೌವನವನ್ನು ಪಡೆದ ಕನ್ಯೆಯಾದ ನಾನು ನಿನ್ನನ್ನು ಧರ್ಮಕಾರ್ಯದಲ್ಲಿಯೇ ಒತ್ತಾಯ ಮಾಡಿದರೂ ನೀನು ನನ್ನನ್ನು ನಿರಾಕರಿಸಿದ್ದೀಯೆ. ಆದ್ದರಿಂದ ಅನಘನಾದ ಎಲೈ ಕಚನೇ, ನೀನು ಪಡೆದ ಮೃತಸಂಜೀವಿನಿ ವಿದ್ಯೆಯು ನಿನಗೆ ಫಲಿಸುವುದಿಲ್ಲ.

ಕಚಃ

ಶುಕ್ರಪುತ್ರೀತಿ ಮತ್ವಾಽಹಂ ಪ್ರತ್ಯಾಖ್ಯಾಸ್ಯೇ ನ ದೋಷತಃ ।
ಗುರುಣಾ ಚಾಭ್ಯನುಜ್ಞಾತೋ ಧರ್ಮತಃ ಪ್ರಬ್ರವೀಮ್ಯಹಮ್ ॥೧೮॥

ಶುಕ್ರಾಚಾರ್ಯರ ಮಗಳೆಂದು ತಿಳಿದು ನಿನ್ನ ಮಾತನ್ನು ನಿರಾಕರಿಸಿದೆ ಹೊರತು ದೋಷಬುದ್ಧಿಯಿಂದಲ್ಲ. ಗುರುಗಳ ಅಪ್ಪಣೆಯನ್ನು ಪಡೆದು ನಾನು ಧರ್ಮದಿಂದಲೇ ಮಾತನಾಡುತ್ತಿದ್ದೇನೆ.

ಆರ್ಷಂ ಧರ್ಮಂ ಬ್ರುವಾಣೋಽಹಂ ದೇವಯಾನಿ ಯಥಾ ತ್ವಯಾ।
ಶಪ್ತೋಽಸ್ಮ್ಯನರ್ಹಃ ಶಾಪಸ್ಯ ಕಾಮತೋಽವ್ಯ ನ ಧರ್ಮತಃ ॥೧೯॥

ದೇವಯಾನಿಯೇ, ಋಷಿಧರ್ಮವನ್ನು ಹೇಳುವ, ಶಾಪಕ್ಕೆ ಅನರ್ಹನಾದ ನನ್ನನ್ನು ನೀನು ಕಾಮದಿಂದ ಶಪಿಸಿದ್ದೀಯೆ. ಧರ್ಮದಿಂದಲ್ಲ.

ತಸ್ಮಾದ್ ಭವತ್ಯಾ ಯಃ ಕಾಮೋ ನ ತಥಾ ಸಂಭವಿಷ್ಯತಿ ।
ಋಷಿಪುತ್ರೋ ನ ತೇ ಕಶ್ಚಿದ್ ದ್ವಿಜಃ ಪಾಣಂ ಗ್ರಹೀಷ್ಯತಿ ॥೨೦॥

ಆದ್ದರಿಂದ ನಿನ್ನ ಕಾಮವು ಹೇಗಿದೆಯೋ ಹಾಗೇ ಎಂದೂ ಪೂರೈಸುವುದಿಲ್ಲ. ಋಷಿಪುತ್ರನಾದ ಯಾವ ಬ್ರಾಹ್ಮಣನೂ ನಿನ್ನನ್ನು ಪಾಣಿಗ್ರಹಣ ಮಾಡಿಕೊಳ್ಳುವುದಿಲ್ಲ.

ಫಲಿಷ್ಯತಿ ಚ ವೈ ವಿದ್ಯಾ ನೇತಿ ಯಚ್ಚಾತ್ಥ ಮಾಂ ತಥಾ ।
ಅಧ್ಯಾಪಯಿಷ್ಯಾಮಿ ತು ಯಂ ತಸ್ಯ ವಿದ್ಯಾ ಫಲಿಷ್ಯತಿ ॥೨೧॥

ನಿನ್ನ ವಿದ್ಯೆಯು ಫಲಿಸದೇ ಹೋಗಲಿ ಎಂದು ನೀನು ನನಗೆ ಶಾಪವಿತ್ತಿದ್ದೀಯೆ. ಅದು ಹಾಗೆಯೇ ಆಗಲಿ. ಆದರೆ ನಾನು ಯಾರಿಗೆ ಆ ವಿದ್ಯೆಯನ್ನು ಉಪದೇಶಿಸುತ್ತೇನೆಯೋ, ಅವರಿಗೆ ಆ ವಿದ್ಯೆಯು ಫಲಿಸುತ್ತದೆ.

ವೈಶಂಪಾಯನಃ

ಏವಮುಕ್ತ್ವಾ ದ್ವಿಜಶ್ರೇಷ್ಠೋ ದೇವಯಾನೀಂ ಕಚಸ್ತದಾ ।
ತ್ರಿದಶೇಶಾಲಯಂ ಶೀಘ್ರಂ ಜಗಾಮ ದ್ವಿಜಸತ್ತಮಃ ॥೨೨॥

ದ್ವಿಜಶ್ರೇಷ್ಠನಾದ ಕಚನು ದೇವಯಾನಿಯನ್ನು ಕುರಿತು ಹೀಗೆ ಹೇಳಿ ಸ್ವರ್ಗವನ್ನು ಕುರಿತು ಶೀಘ್ರವಾಗಿ ಪ್ರಯಾಣ ಮಾಡಿದನು.

ತಮಾಗತಮಭಿಪ್ರೇತ್ಯ ದೇವಾಶ್ಚೇಂದ್ರಪುರೋಗಮಾಃ ।
ಬೃಹಸ್ಪತಿಂ ಸಭಾಜ್ಯೇದಂ ಕಚಮಾಹುರ್ಮುದಾನ್ವಿತಾಃ ॥೨೩॥

ಕಚನು ಹಿಂದಿರುಗಿದುದನ್ನು ನೋಡಿ ಇಂದ್ರ ಮೊದಲಾದ ದೇವತೆಗಳು ಬೃಹಸ್ಪತ್ಯಾಚಾರ್ಯರರನ್ನು ಸತ್ಕರಿಸಿ ಕಚನನ್ನು ಕುರಿತು ಸಂತೋಷದಿಂದ ಹೀಗೆ ಹೇಳಿದರು -

ದೇವಾಃ

ಯತ್ತ್ವಮಸ್ಮದ್ಧಿತಂ ಕರ್ಮ ಕೃತವಾನ್ ಪರಮಂ ಮಹತ್ ।
ನ ತೇ ಯಶೋ ಜರಾಂ ಗಂತಾ ಭಾಗಭಾಕ್ ತ್ವಂ ಭವಿಷ್ಯಸಿ ॥೨೪॥

ನೀನು ನಮ್ಮ ಸಲುವಾಗಿ ಬಹುದೊಡ್ಡದಾದ ಹಿತವಾದ ಕಾರ್ಯವನ್ನು ಮಾಡಿದುದರಿಂದ ನಿನ್ನ ಕೀರ್ತಿಯು ಎಂದೂ ಮುಪ್ಪನ್ನು ಹೊಂದದಿರಲಿ. ನಮ್ಮ ಭಾಗಕ್ಕೆ (ಸ್ತುತಿಗೆ, ಸಂಪತ್ತಿಗೆ, ಐಶ್ವರ್ಯಕ್ಕೆ) ನೀನು ಭಾಗಧಾರಿಯಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಷಟ್‌ಷಷ್ಟಿತಮೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೇಳನೆಯ ಅಧ್ಯಾಯ

(ಶರ್ಮಿಷ್ಠೆ ದೇವಯಾನಿಯರ ಕಲಹ, ಯಯಾತಿಯಿಂದ ದೇವಯಾನಿಯ ಉದ್ಧರಣ)

ವೈಶಂಪಾಯನಃ

ಕೃತವಿದ್ಯೇ ಕಚೇ ಪ್ರಾಪ್ತೇ ಹೃಷ್ಟರೂಪಾ ದಿವೌಕಸಃ ।
ಕಚಾದಧೀತ್ಯ ತಾಂ ವಿದ್ಯಾಂ ಕೃತಾರ್ಥಾ ಭರತರ್ಷಭ ॥೧॥

ಎಲೈ ಭರತರ್ಷಭನೇ, ಕಚನು ವಿದ್ಯೆಯನ್ನು ಸಂಪಾದಿಸಿ ಹಿಂದಿರುಗುತ್ತಿರಲು ದೇವತೆಗಳು ಕಚನಿಂದ ಆ ವಿದ್ಯೆಯನ್ನು ಕಲಿತು ಕೃತಾರ್ಥರಾದರು.

ತತೋ ದೇವಾಃ ಸಮಾಗಮ್ಯ ಶತಕ್ರತುಮಥಾಬ್ರುವನ್ ।
ಕಾಲಸ್ತೇ ವಿಕ್ರಮಸ್ಯಾಯಂ ಜಹಿ ಶತ್ರೂನ್ ಪುರಂದರ ॥೨॥

ಅನಂತರ ದೇವತೆಗಳು ಇಂದ್ರನನ್ನು ಸಮೀಪಿಸಿ ಎಲೈ ಪುರಂದರನೇ, ಇದು ನಿನ್ನ ವಿಕ್ರಮದಕಾಲ, ಶತ್ರುಗಳನ್ನು ಸಂಹರಿಸು ಎಂದು ಹೇಳಿದರು.

ಏವಮುಕ್ತಸ್ತು ಭಗವಾನ್ ಸಹ ತೈಸ್ತ್ರಿದಿವೇಶ್ವರೈಃ ।
ತಥೇತ್ಯುಕ್ತ್ವಾ ಽಭಿಚಕ್ರಾಮ ಸೋಽಪಶ್ಯತ ವನೇ ಸ್ತ್ರಿಯಃ ॥೩॥

ಹೀಗೆ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟ ಪೂಜ್ಯನಾದ ಇಂದ್ರನು ಹಾಗೆಯೇ ಆಗಲಿ ಎಂದು ಹೇಳಿ ಹೊರಟು ಕಾಡಿನಲ್ಲಿ ಸ್ತ್ರೀಯರನ್ನು ನೋಡಿದನು.

ಕ್ರೀಡಂತೀನಾಂ ಕನ್ಯಕಾನಾಮಾರಾಮೇ ನಂದನೋಪಮೇ ।
ವಾಯುಭೂತ್ವಾ ಸ ವಸ್ತ್ರಾಣಿ ಸರ್ವಾಣ್ಯೇವ ವ್ಯಮಿಶ್ರಯತ್ ॥೪॥

ನಂದನವನಸದೃಶವಾದ ಕನ್ಯಾಗಾರದ ವನದಲ್ಲಿ ಜಲಕ್ರೀಡೆ- ಯಾಡುತ್ತಿರುವ ಅವರನ್ನು ನೋಡಿ ಇಂದ್ರನು ವಾಯುರೂಪವನ್ನು ತಾಳಿ ದಡದ ಮೇಲಿದ್ದ ಅವರ ವಸ್ತ್ರಗಳನ್ನು ಮಿಶ್ರಣವನ್ನು ಮಾಡಿದನು.

ತತೋ ಜಲಾತ್ ಸಮುತ್ತೀರ್ಯ ತಾಃ ಕನ್ಯಾಃ ಸಹಿತಾಸ್ತದಾ ।
ವಸ್ತ್ರಾಣಿ ಜಗೃಹುಸ್ತಾನಿ ಯಥಾ ಽಽಸನ್ನಾನ್ಯನೇಕಶಃ ॥೫॥

ಅನಂತರ ಆ ಕನ್ಯೆಯರೆಲ್ಲರೂ ನೀರಿನಿಂದ ಮೇಲಕ್ಕೆ ಎದ್ದು ಬಂದು ತಮ್ಮತಮ್ಮ ಸಮೀಪವಿದ್ದ ವಸ್ತ್ರಗಳನ್ನು ಕೈಗೆತ್ತಿಕೊಂಡರು.

ತತ್ರ ವಾಸೋ ದೇವಯಾನ್ಯಾಃ ಶರ್ಮಿಷ್ಠಾ ಜಗೃಹೇ ತದಾ ।
ವ್ಯತಿಮಿಶ್ರಮಜಾನಂತೀ ದುಹಿತಾ ವೃಷಪರ್ವಣಃ ॥೬॥

ಅವರಲ್ಲಿ ವೃಷಪರ್ವನ ಮಗಳಾದ ಶರ್ಮಿಷ್ಠೆಯು ವಸ್ತ್ರಗಳ ಮಿಶ್ರಣವನ್ನು ತಿಳಿಯದೆ ದೇವಯಾನಿಯ ವಸ್ತ್ರವನ್ನು ತೆಗೆದುಕೊಂಡಳು.

ತತಸ್ತಯೋರ್ಮಿಥಸ್ತತ್ರ ವಿರೋಧಃ ಸಮಜಾಯತ ।
ದೇವಯಾನ್ಯಾಶ್ಚ ರಾಜೇಂದ್ರ ಶರ್ಮಿಷ್ಠಾಯಾಶ್ಚ ತತ್ಕೃತೇ ॥೭॥

ಅನಂತರ ಅಲ್ಲಿ ವಸ್ತ್ರದ ಸಲುವಾಗಿ ದೇವಯಾನಿ ಮತ್ತು ಶರ್ಮಿಷ್ಠೆಯರಿಗೆ ಪರಸ್ಪರವಾಗಿ ಕಲಹವು ಉಂಟಾಯಿತು.

ದೇವಯಾನೀ

ಕಸ್ಮಾದ್ ಗೃಹ್ಣಾಸಿ ಮೇ ವಸ್ತ್ರಂ ಶಿಷ್ಯಭೂತಾ ಮಮಾಸುರಿ ।
ಸಮುದಾಚಾರಹೀನಾಯಾ ನ ತೇ ಶ್ರೇಯೋ ಭವಿಷ್ಯತಿ ॥೮॥

ಎಲೌ ಅಸುರಪುತ್ರಿಯೇ ನನ್ನ ಶಿಷ್ಯಳಾಗಿದ್ದು ನನ್ನ ವಸ್ತ್ರಗಳನ್ನು ಏಕೆ ತೆಗೆದುಕೊಳ್ಳುತ್ತಿದ್ದೀಯೆ? ಶ್ರೇಷ್ಠ ಆಚಾರಹೀನಳಾದ ನಿನಗೆ ಒಳ್ಳೆಯದಾಗುವುದಿಲ್ಲ.

ಶರ್ಮಿಷ್ಠಾ

ಆಸೀನಂ ಚ ಶಯಾನಂ ಚ ಪಿತಾ ತೇ ಪಿತರಂ ಮಮ ।
ಸ್ತೌತಿ ವಂದತಿ ಚಾಭೀಕ್ಷ್ಣಂ ನೀಚೈಃ ಸ್ಥಿತ್ವಾ ವಿನೀತವತ್ ॥೯॥

ಕುಳಿತಿರುವ ಅಥವಾ ಮಲಗಿರುವ ನನ್ನ ತಂದೆಯನ್ನು ನಿನ್ನ ತಂದೆಯು ಕೆಳಗೆ ನಿಂತು ವಿನಯದಿಂದ ಯಾವಾಗಲೂ ಸ್ತೋತ್ರಮಾಡುತ್ತಾನೆ ಮತ್ತು ನಮಸ್ಕರಿಸುತ್ತಾನೆ.

ಸ್ತುವತೋ ದುಹಿತಾ ತ್ವಂ ವೈ ಯಾಚತಃ ಪ್ರತಿಗೃಹ್ಣತಃ ।
ಸುತಾऽಹಂ ಸ್ತೂಯಮಾನಸ್ಯ ದದತೋऽಪ್ರತಿಗೃಹ್ಣತಃ ॥೧೦॥

ನೀನು ಸ್ತೋತ್ರಮಾಡುವವನ, ಬೇಡುವವನ ಮತ್ತು ಸ್ವೀಕರಿಸುವವನ ಮಗಳು. ನಾನು ಸ್ತೋತ್ರಮಾಡಲ್ಪಡುವವನ, ಕೊಡುವವನ ಸ್ವೀಕಾರಮಾಡದಿರುವವನ ಮಗಳು.

ಆಧೂನ್ವಸ್ವ ವಿಧೂನ್ವಸ್ವ ದ್ರುಹ್ಯ ಕುಪ್ಯ ಚ ಯಾ ಕಿಲ ।
ಅನಾಯುಧಾ ಸಾಯುಧಾಯಾ ರಿಕ್ತಾ ಕ್ಷುಭ್ಯಸಿ ಭಿಕ್ಷುಕಿ ॥೧೧॥

ಎಲೌ ಭಿಕ್ಷುಕಿಯೇ, ಹಾರಾಡು, ತೂರಾಡು, ಕೋಪವನ್ನು ಮಾಡು, ದ್ರೋಹವನ್ನು ಮಾಡು, ಏನು ಬೇಕಾದರೂ ಮಾಡು. ಅನಾಯುಧಳಾಗಿ ಬರಿಗೈಯುಲ್ಲಿರುವ ನೀನು ಆಯುಧಹಸ್ತಳಾದ ನನ್ನ ಮೇಲೆ ಹೊಟ್ಟೆಕಿಚ್ಚುಪಡುತ್ತಿದ್ದೀಯೆ.

ಲಪ್ಸ್ಯಸೇ ಪ್ರತಿಯೋದ್ಧಾರಂ ನ ಹಿ ತ್ವಾಂ ಗಣಯಾಮ್ಯಹಮ್ ।
ಪ್ರತಿಕೂಲಂ ವದಸಿ ಚೇದಿತಃ ಪ್ರಭೃತಿ ಯಾಚಕಿ ।
ಆಕೃಷ್ಯ ಮಮ ದಾಸೀಭಿಃ ಪ್ರಸ್ಥಾಸ್ಯಾಮಿ ಬಹಿರ್ಬಹಿಃ ॥೧೨॥

ನಿನಗೆ ಬ್ರಾಹ್ಮಣ ಕನ್ಯೆಯರ ಸಮುದಾಯವೇ ನನ್ನ ವಿರುದ್ಧ ಪ್ರತಿಭಟಿಸಲು ದೊರೆಯಬಹುದು. ಬೇರೆ ಯಾರಾದರೂ ದೊರೆಯಬಹುದು, ನಾನು ನಿನ್ನನ್ನು ಗಣನೆಗೇ ತಂದುಕೊಳ್ಳುವುದಿಲ್ಲ. ಭಿಕ್ಷೆಬೇಡುವವಳೇ, ಇನ್ನು ಮುಂದೆ ನನಗೇನಾದರೂ ವಿರೋಧವಾಗಿ ಮಾತನಾಡಿದರೆ ನಿನ್ನನ್ನು ನನ್ನ ದಾಸಿಯರಿಂದ ಎಳೆಸಿ ಊರಿನ ಹೊರಗೆ ಬಹುದೂರದಲ್ಲಿ ಹಾಕಿಸುತ್ತೇನೆ.

ವೈಶಂಪಾಯನಃ

ಸಾ ಮೂರ್ಚ್ಛಿತಾ ದೇವಯಾನೀಂ ಗತ್ವಾ ಹೃತ್ವಾ ಚ ವಾಸಸೀ ।
ಶರ್ಮಿಷ್ಠಾ ಪ್ರಾಕ್ಷಿಪತ್ ಕೂಪೇ ತತಃ ಸ್ವಂ ಪುರಮಾವಿಶತ್ ॥೧೩॥

ಕ್ರೋಧಮೂರ್ಚ್ಛಿತಳಾದ ಶರ್ಮಿಷ್ಠೆಯು ದೇವಯಾನಿಯ ಸಮೀಪಕ್ಕೆ ಹೋಗಿ ಅವಳ ಕೈಯಲ್ಲಿದ್ದ ವಸ್ತ್ರಗಳನ್ನು ಕಿತ್ತುಕೊಂಡು ಅವಳನ್ನು ಒಂದು ಬಾವಿಗೆ ಎಸೆದು ತನ್ನ ಪಟ್ಟಣಕ್ಕೆ ಹಿಂದಿರುಗಿದಳು.

ಹತೇಯಮಿತಿ ವಿಜ್ಞಾಯ ಶರ್ಮಿಷ್ಠಾ ಪಾಪನಿಶ್ಚಯಾ ।
ಅನವೇಕ್ಷ್ಯ ಯಯೌ ವೇಶ್ಮ ಕ್ರೋಧವೇಗಪರಾಯಣಾ ॥೧೪॥

ಪಾಪನಿಶ್ಚಯವುಳ್ಳ ಶರ್ಮಿಷ್ಠೆಯು ಕ್ರೋಧವೇಗಕ್ಕೆ ವಶವಾಗಿ ಅವಳು ಮೃತಳಾದಳೆಂದು ತಿಳಿದು ಕೂಪದ ಕಡೆಗೆ ನೋಡದೇ ಮನೆಗೆ ಹಿಂದಿರುಗಿದಳು.

ಪ್ರವಿಶ್ಯ ಸ್ವಗೃಹಂ ಸ್ವಸ್ಥಾ ಧರ್ಮಮಾಸುರಮಾಶ್ರಿತಾ ।
ಅಥ ತಂ ದೇಶಮಾಗಚ್ಛದ್ ಯಯಾತಿರ್ನಹುಷಾತ್ಮಜಃ ॥೧೫॥

ಆಸುರಸ್ವಭಾವದವಳಾಗಿದ್ದ ಕಾರಣದಿಂದ ತನ್ನ ಮನೆಗೆ ಹಿಂದಿರುಗಿ ಸಮಾಧಾನದಿಂದಲೇ ಇದ್ದಳು. ಅನಂತರ ಆ ಪ್ರದೇಶಕ್ಕೆ ನಹುಷನ ಮಗನಾದ ಯಯಾತಿಯು ಬಂದನು.

ಶ್ರಾಂತಯುಗ್ಯಹಯಃ ಶ್ರೀಮಾನ್ ಮೃಗಲಿಪ್ಸುಃ ಪಿಪಾಸಿತಃ ।
ಸ ನಾಹುಷಃ ಪ್ರೇಕ್ಷಮಾಣ ಉದಪಾನಂ ಗತೋದಕಮ್ ।
ದದರ್ಶ ಕನ್ಯಾಂ ರೂಪೇಣ ದೀಪ್ತಾಮಗ್ನಿಶಿಖಾಮಿವ ॥೧೬॥

ಬೇಟೆಯಾಡಲು ಹೊರಟಿದ್ದ ಅವನ ರಥಕ್ಕೆ ಹೂಡಲು ಯೋಗ್ಯವಾದ ಕುದುರೆಗಳು ದಣಿದು, ಅವನೂ ಬಾಯಾರಿಕೆಯಿಂದ ಕೂಡಿದವನಾಗಿದ್ದು ನೀರಿನ ಪಾತ್ರವನ್ನು

ಹುಡುಕುತ್ತಾ ನೀರು ಇಂಗಿಹೋಗಿದ್ದ ಆ ಕೂಪದ ಬಳಿಗೆ ಬಂದು ನೋಡಿದನು. ಅದರಲ್ಲಿ ಅವನು ರೂಪದಿಂದ ಅಗ್ನಿಶಿಖೆಯಂತೆ ಬೆಳಗುತ್ತಿದ್ದ ಕನ್ಯೆಯನ್ನು ನೋಡಿದನು.

ತಾಂ ದೃಷ್ಟ್ವಾ ರೂಪಸಂಪನ್ನಾಂ ಸರ್ವಾಲಂಕಾರಭೂಷಿತಾಮ್ ।
ಸರ್ವಲಕ್ಷಣಸಂಪನ್ನಾಮಪೃಚ್ಛತ್ ಸ ನರಾಧಿಪಃ ॥೧೭॥

ಸರ್ವಲಕ್ಷಣಸಂಪನ್ನಳೂ, ಸರ್ವಾಲಂಕಾರಭೂಷಿತಳೂ ಸೌಂದರ್ಯವತಿಯೂ ಆದ ಅವಳನ್ನು ನೋಡಿ ಯಯಾತಿ ರಾಜನು ಅವಳನ್ನು ಕೇಳಿದನು.

ತಾಮಪೃಚ್ಛತ್ ಸ ದೃಷ್ಟ್ವೈವ ಕನ್ಯಾಮಮರವರ್ಣಿನೀಮ್ ।
ಸಾಂತ್ವಯಿತ್ವಾ ನರಶ್ರೇಷ್ಠ ಸಾಮ್ನಾ ಪರಮವಲ್ಗುನಾ ॥೧೮॥

ದೇವತೆಯಂತಿರುವ ಕನ್ಯೆಯನ್ನು ನೋಡಿದ ರಾಜನು ಅವಳನ್ನು ಮಧುರವಾದ ಮಾತುಗಳಿಂದ ಸಮಾಧಾನಪಡಿಸಿ ಅವಳನ್ನು ಕೇಳಿದನು.

ಕಾ ತ್ವಂ ತಾಮ್ರನಖೀ ಶ್ಯಾಮಾ ಸುಮೃಷ್ಟಮಣಿಕುಂಡಲಾ ।
ದೀರ್ಘಂ ಧ್ಯಾಯಸಿ ಚಾತ್ಯರ್ಥಂ ಕಸ್ಮಾಚ್ಚಸಿ ಚಾತುರಾ ॥೧೯॥

ಕಥಂ ಚ ಪತಿತಾ ಹ್ಯಸ್ಮಿನ್ ಕೂಪೇ ವೀರುತ್ತೃಣಾವೃತೇ ।
ದುಹಿತಾ ಚೈವ ಕಸ್ಯ ತ್ವಂ ಸರ್ವಂ ವದ ಸುಮಧ್ಯಮೇ ॥೨೦॥

ಕೆಂಪಾದ ಉಗುರುಗಳುಳ್ಳ, ಶ್ಯಾಮರೂಪವುಳ್ಳ, ಒಳ್ಳೆಯ ಕರ್ಣಕುಂಡಲಗಳನ್ನು ಧರಿಸಿದ ನೀನು ಯಾರು ? ತುಂಬಾ ಯೋಚನೆಯನ್ನು ಮಾಡುತ್ತಿದ್ದೀಯೆ. ಏಕೆ ಉದ್ವೇಗದಿಂದ ಉಸಿರಾಡುತ್ತಿದ್ದೀಯೆ?

ಈ ಹುಲ್ಲು ಗಿಡಗಳಿಂದ ತುಂಬಿರುವ ಬಾವಿಯೊಳಗೆ ನೀನು ಹೇಗೆ ಬಿದ್ದೆ? ನೀನು ಯಾರ ಮಗಳು? ಸುಂದರಿಯೇ ನನಗೆ ಎಲ್ಲವನ್ನು ಹೇಳು.

ದೇವಯಾನೀ

ಯೋಽಸೌ ದೇವೈರ್ಹತಾನ್ ದೈತ್ಯಾನುತ್ಥಾಪಯತಿ ವಿದ್ಯಯಾ ।
ತಸ್ಯ ಶುಕ್ರಸ್ಯ ಕನ್ಯಾಽಹಮಿದಮಾಸಾದಿತಂ ಮಯಾ ॥೨೧॥

ದೇವತೆಗಳಿಂದ ಕೊಲ್ಲಲ್ಪಟ್ಟ ದೈತ್ಯರನ್ನು ಯಾರು ತಮ್ಮ ವಿದ್ಯೆಯ ಬಲದಿಂದ ಬದುಕಿಸುತ್ತಾರೋ ಅಂತಹ ಶುಕ್ರಾಚಾರ್ಯರ ಮಗಳು ನಾನು. ನನಗೆ ಇಂತಹ ಪರಿಸ್ಥಿತಿಯು ಪ್ರಾಪ್ತವಾಗಿದೆ.

ಪೃಚ್ಛಸೇ ಮಾಂ ಕಸ್ತ್ವಮಸಿ ರೂಪವೀರ್ಯಬಲಾನ್ವಿತಃ ।
ಬ್ರೂಹ್ಯತ್ರಾಗಮನಂ ಕಿಂ ವಾ ಶ್ರೋತುಮಿಚ್ಛಾಮಿ ತತ್ತ್ವತಃ ॥೨೨॥

ನೀನು ಯಾರು ಎಂದು ನನ್ನನ್ನು ಕೇಳುತ್ತಿದ್ದೀಯೆ. ನಾನೂ ಸಹ ರೂಪವೀರ್ಯಬಲಾನ್ವಿತನಾದ ನೀನು ಯಾರು? ಇಲ್ಲಿಗೆ ಏಕೆ ಬಂದೆ ಎಂಬುದನ್ನು ಯಥಾರ್ಥವಾಗಿ ಕೇಳಲು ಬಯಸುತ್ತೇನೆ.

ಯಯಾತಿಃ

ಯಯಾತಿರ್ನಾಹುಷೋಽಹಂ ತು ಶ್ರಾಂತೋಽದ್ಯ ಮೃಗಕಾಂಕ್ಷಯಾ।
ಅತ್ರಾಹಮಾಗತೋ ಭದ್ರೇ ದೃಷ್ಟವಾನಸ್ಮಿ ತ್ವಾಮಿಹ ॥೨೩॥

ಎಲೈ ಮಂಗಳಸ್ವರೂಪಳೇ, ನಾನು ನಹುಷನ ಮಗನಾದ ಯಯಾತಿ. ಬೇಟೆಯಾಡಲು ಹೊರಟ ನಾನು ಶ್ರಾಂತನಾಗಿ ಇಲ್ಲಿಗೆ ಬಂದು ಈ ಕೂಪದಲ್ಲಿ ನಿನ್ನನ್ನು ನೋಡಿದೆ.

ದೇವಯಾನೀ

ಏಷ ಮೇ ದಕ್ಷಿಣೋ ರಾಜನ್ ಪಾಣಿಸ್ತಾಮ್ರನಖಾಂಗುಲಿಃ ।
ಸಮುದ್ಧರ ಗೃಹೀತ್ವಾ ತು ಕುಲೀನಸ್ತ್ವಂ ಹಿ ಮೇ ಮತಃ ॥೨೪॥

ಎಲೈ ರಾಜನೇ, ಇದು ಕೆಂಪಾದ ಉಗುರುಗಳುಳ್ಳ ಬೆರಳುಳ್ಳ ನನ್ನ ಹಸ್ತ. ಇದನ್ನು ಹಿಡಿದುಕೊಂಡು ನನ್ನನ್ನು ಮೇಲಕ್ಕೆತ್ತು. ನೀನು ಸತ್ಕುಲಪ್ರಸೂತನಾಗಿದ್ದೀಯೆ ಎಂದು ನನ್ನ ಅಭಿಪ್ರಾಯ.

ಭೂಯೋಽಪಿ ತ್ವಾಮುಪಾಗಮೇ ವೀರ್ಯವಂತಂ ಮನಸ್ವಿನಮ್ ।
ಅಸ್ಮಾನ್ಮಾಂ ಸಂಶಯಾದ್ ರಾಜನ್ ಮೋಕ್ಷಯಾಶು ವಿಶಾಂಪತೇ ॥೨೫॥

ಪರಾಕ್ರಮಶಾಲಿಯೂ, ಧೈರ್ಯಶಾಲಿಯೂ ಆದ ನಿನ್ನನ್ನು ಮತ್ತೂ ಪ್ರಾರ್ಥಿಸುತ್ತೇನೆ. ಎಲೈ ಪ್ರಜಾಪಾಲಕನಾದ ರಾಜನೇ, ನನ್ನನ್ನು ಈ ಸಂಕಟದಿಂದ ಪಾರುಮಾಡು.

ವೈಶಂಪಾಯನಃ

ಸ್ತ್ರೀ ಚೈಷಾ ಬ್ರಾಹ್ಮಣೀ ಚೇತಿ ವಿಜ್ಞಾಯೈನಾಂ ಸ ನಾಹುಷಃ ।
ಗೃಹೀತ್ವಾ ದಕ್ಷಿಣಂ ಪಾಣಿಮುಜ್ಜಹಾರ ತತೋಽವಟಾತ್ ॥೨೬॥

ಅವಳು ಬ್ರಾಹ್ಮಣ ಸ್ತ್ರೀ ಎಂದು ತಿಳಿದು ಯಯಾತಿಯು ಅವಳ ದಕ್ಷಿಣಪಾಣಿಯನ್ನು ಹಿಡಿದು ಕೂಪದಿಂದ ಅವಳನ್ನು ಮೇಲಕ್ಕೆತ್ತಿದನು.

ಉದ್ಧೃತ್ಯ ಚೈನಾಂ ತರಸಾ ತಸ್ಮಾತ್ ಕೂಪಾನ್ನರಾಧಿಪಃ ।
ಗಚ್ಛ ಭದ್ರೇ ಯಥಾಕಾಮಂ ನ ಭಯಂ ವಿದ್ಯತೇ ತವ ॥೨೭॥

ಆ ರಾಜನು ಶೀಘ್ರವಾಗಿ ಅವಳನ್ನು ಕೂಪದಿಂದ ಮೇಲೆತ್ತಿ ಮಂಗಳಸ್ವರೂಪಳೇ, ಶೀಘ್ರವಾಗಿ ನಿನಗೆ ಬೇಕಾದ ಕಡೆ ಹೋಗು, ನಿನಗೆ ಯಾವ ಭಯವೂ ಇಲ್ಲ ಎಂದು ಹೇಳಿದನು.

ಇತ್ಯುಚ್ಯಮಾನಾ ನೃಪತಿಂ ದೇವಯಾನೀದಮುತ್ತರಮ್ ।
ಉವಾಚ ಮಾಮುಪಾದಾಯ ಗಚ್ಛ ಶೀಘ್ರಂ ಪ್ರಿಯೋಽಸಿ ಮೇ ॥೨೮॥

ಹೀಗೆ ಹೇಳಲ್ಪಟ್ಟ ದೇವಯಾನಿಯು ಆ ರಾಜನನ್ನು ಕುರಿತು ನೀನು ನನಗೆ ಪ್ರಿಯನಾದವನು, ಆದ್ದರಿಂದ ನನ್ನನ್ನು ಕರೆದುಕೊಂಡೇ ಬೇಗ ಹೋಗು ಎಂದು ಉತ್ತರವನ್ನು ಕೊಟ್ಟಳು.

ಗೃಹೀತಾಽಹಂ ತ್ವಯಾ ಪಾಣೌ ತಸ್ಮಾದ್ ಭರ್ತಾ ಭವಿಷ್ಯಸಿ ।
ಇತ್ಯೇವಮುಕ್ತೋ ನೃಪತಿರಾಹ ಕ್ಷತ್ರಕುಲೋದ್ಭವಃ ॥೨೯॥

ನೀನು ನನ್ನ ಪಾಣಿಗ್ರಹಣವನ್ನು ಮಾಡಿದ್ದೀಯೆ, ಆದ್ದರಿಂದ ನೀನೇ ನನ್ನ ಪತಿ. ಅವಳ ಈ ಮಾತುಗಳನ್ನು ಕೇಳಿ ಕ್ಷತ್ರಿಯಕುಲದಲ್ಲಿ ಜನಿಸಿದ ರಾಜನು ಹೀಗೆ ಮಾತನಾಡಿದನು -

ತ್ವಂ ಭದ್ರೇ ಬ್ರಾಹ್ಮಣೇ ತಸ್ಮಾನ್ನಯಾ ನಾರ್ಹಸಿ ಸಂಗಮಮ್ ।
ಸರ್ವಲೋಕಗುರುಃ ಕಾವ್ಯಸ್ತ್ವಂ ತಸ್ಯ ದುಹಿತಾ ಹಿ ವೈ ।
ತಸ್ಮಾದಪಿ ಭಯಂ ಮೇಽದ್ಯ ತಸ್ಮಾತ್ ಕಲ್ಯಾಣಿ ನಾರ್ಹಸಿ ॥೩೦॥

ಮಂಗಳಸ್ವರೂಪಳೇ, ನೀನು ಬ್ರಾಹ್ಮಣಸ್ತ್ರೀ ಆಗಿದ್ದೀಯೆ. ಆದ್ದರಿಂದ ನನ್ನ ಸಮಾಗಮವು ನಿನಗೆ ಯೋಗ್ಯವಲ್ಲ, ಅಷ್ಟೇ ಅಲ್ಲದೆ ಸರ್ವಲೋಕಗುರುಗಳಾದ ಶುಕ್ರಾಚಾರ್ಯರ ಮಗಳು ನೀನು. ನನಗೆ ಶುಕ್ರಾಚಾರ್ಯರ ಭಯವೂ ಇದೆ. ಆದ್ದರಿಂದ ಎಲೌ ಕಲ್ಯಾಣಿಯೇ ಹೀಗೆ ಮಾತನಾಡಬೇಡ.

ದೇವಯಾನೀ

ಯದಿ ಮದ್ವಚನಾದದ್ಯ ಮಾಂ ನೇಚ್ಛಸಿ ನರಾಧಿಪ ।
ತ್ವಾಮೇವ ವರಯೇ ಪಿತ್ರಾ ಪಶ್ಚಾಜ್ಜ್ಞಾಸ್ಯಸಿ ಗಚ್ಛ ಹಿ ॥೩೧॥

ಎಲೈ ರಾಜನೇ ನನ್ನ ಮಾತಿನಂತೆ ನೀನು ನನ್ನನ್ನು ಬಯಸದಿದ್ದರೆ ನನ್ನ ತಂದೆಯ ಮೂಲಕ ನಾನು ನಿನ್ನನ್ನೇ ವರಿಸುತ್ತೇನೆ. ಈ ವಿಷಯವು ನಿನಗೆ ಮತ್ತೆ ತಿಳಿಯುತ್ತದೆ. ಈಗ ಹೋಗು.

ವೈಶಂಪಾಯನಃ

ಆಮಂತ್ರಯಿತ್ವಾ ಸುಶ್ರೋಣೀಂ ಯಯಾತಿಃ ಸ್ವಪುರಂ ಯಯೌ ।
ನೃಪೇ ತು ಗತಮಾತ್ರೇ ಸಾ ದೇವಯಾನೀ ಶುಚಿಸ್ಮಿತಾ ।
ಕ್ವಚಿದಾರ್ತಾ ಚ ರುದತೀ ವೃಕ್ಷಮಾಶ್ರಿತ್ಯ ತಿಷ್ಠತಿ ॥೩೨॥

ಸುಂದರಿಯಾದ ದೇವಯಾನಿಯ ಅನುಮತಿಯನ್ನು ಪಡೆದು ಯಯಾತಿಯು ತನ್ನ ಪಟ್ಟಣಕ್ಕೆ ಹಿಂದಿರುಗಿದನು. ರಾಜನು ಹೊರಟ ತಕ್ಷಣವೇ ಅಲ್ಲಿಯವರೆಗೂ ನಗುತ್ತಿದ್ದ ದೇವಯಾನಿಯು ತಕ್ಷಣ ಆರ್ತಳಾಗಿ ಅಳುತ್ತಾ ಒಂದು ವೃಕ್ಷಮೂಲವನ್ನು ಸೇರಿದಳು.

ತತಶ್ಚಿರಾಯಮಾಣಾಯಾಂ ದುಹಿತರ್ಯಾಹ ಭಾರ್ಗವಃ ।
ಧಾತ್ರಿ ತ್ವಮಾನಯ ಕ್ಷಿಪ್ರಂ ದೇವಯಾನೀಂ ಸುಮಧ್ಯಮಾಮ್ ।
ಇತ್ಯುಕ್ತಮಾತ್ರೇ ಸಾ ಧಾತ್ರೀ ತ್ವರಿತಾ ಹ್ವಯಿತುಂ ಗತಾ ॥೩೩॥

ಮಗಳು ಬಹಳ ಸಮಯವಾದರೂ ಬರದಿರುವುದನ್ನು ನೋಡಿ ಶುಕ್ರಾಚಾರ್ಯರು ಅವಳ ಧಾತ್ರಿಯನ್ನು ಕರೆದು ಸುಂದರಿಯಾದ ದೇವಯಾನಿಯನ್ನು ಶೀಘ್ರವಾಗಿ ಕರೆದುಕೊಂಡು ಬಾ ಎಂದು ಹೇಳಿದರು. ಹೀಗೆ ಹೇಳಲ್ಪಟ್ಟ ಧಾತ್ರಿಯು ದೇವಯಾನಿಯನ್ನು ಕರೆಯಲು ಶೀಘ್ರವಾಗಿ ಹೋದಳು.

ಯತ್ರ ಯತ್ರ ಸಖೀಭಿಃ ಸಾ ಗತಾ ಪದಮಮಾರ್ಗತ ।
ಸಾ ದದರ್ಶ ತಥಾ ದೀನಾಂ ಶ್ರಮಾರ್ತಾಂ ರುದತೀಂ ಸ್ಥಿತಾಮ್ ॥೩೪॥

ಅವಳು ಸ್ನೇಹಿತೆಯರ ಜೊತೆಯಲ್ಲಿ ಹೋಗಿದ್ದ ಸ್ಥಳಗಳಲ್ಲೆಲ್ಲಾ ಹುಡುಕಿಕೊಂಡು ಹೋಗಿ ಒಂದು ಮರದ ಕೆಳಗೆ ದೀನಳಾಗಿ ನಿಂತು ಶ್ರಮದಿಂದ ಕೂಡಿ ಅಳುತ್ತಿರುವ ದೇವಯಾನಿಯನ್ನು ನೋಡಿದಳು.

ಧಾತ್ರೀ

ವೃತ್ತಂ ತೇ ಕಿಮಿದಂ ಭದ್ರೇ ಶೀಘ್ರಂ ವದ ಪಿತಾऽऽಹ್ವಯತ್ ।
ಧಾತ್ರೀಮಾಹ ಸಮಾಹೂಯ ಶರ್ಮಿಷ್ಠಾವ್ರಜಿನಂ ಕೃತಮ್ ॥೩೫॥

ಮಂಗಳಸ್ವರೂಪಳೇ, ಇದೇನು ನಿನ್ನ ರೀತಿ? ಬೇಗ ಹೇಳು. ತಂದೆಯು ಕರೆಯುತ್ತಿದ್ದಾರೆ ಎಂದು ಹೇಳಿದಳು. ಆಗ ದೇವಯಾನಿಯು ಅವಳನ್ನು ಹತ್ತಿರ ಕರೆದು ಶರ್ಮಿಷ್ಠೆಯು ಮಾಡಿದ ದುಷ್ಕೆಲಸವನ್ನು ಹೇಳಿದಳು.

ತ್ವರಿತಾ ಘೂರ್ಣಿಕೇ ಗಚ್ಛ ಸರ್ವಮಾಚಕ್ಷ್ವ ಮೇ ಪಿತುಃ ।
ನಹೀದಾನೀಂ ಪ್ರವೇಕ್ಷ್ಯಾಮಿ ನಗರಂ ವೃಷಪರ್ವಣಃ ॥೩೬॥

ಘೂರ್ಣಿಕೆಯೇ ಬೇಗ ಹೋಗಿ ಎಲ್ಲವನ್ನೂ ನನ್ನ ತಂದೆಗೆ ತಿಳಿಸು. ನಾನು ಈಗ ವೃಷಪರ್ವನ ಪಟ್ಟಣಕ್ಕೆ ಬರುವುದಿಲ್ಲ.

ವೈಶಂಪಾಯನಃ

ಧಾತ್ರೀ ಪ್ರತ್ವರಿತಂ ಗತ್ವಾ ಘೂರ್ಣಿಕಾऽಸುರಮಂದಿರಮ್ ।
ದೃಷ್ಟ್ವಾ ಕಾವ್ಯಮುವಾಚೇದಂ ಸಂಭ್ರಮಾವಿಷ್ಟಚೇತನಾ ॥೩೭॥

ಧಾತ್ರಿಯಾದ ಘೂರ್ಣಿಕೆಯು (ಇದು ಧಾತ್ರಿಯ ಹೆಸರು) ಬೇಗ ವೃಷಪರ್ವನ ಮಂದಿರಕ್ಕೆ ಹೋಗಿ ಗಾಬರಿಗೊಂಡವಳಾಗಿ ಶುಕ್ರಾಚಾರ್ಯರನ್ನು ನೋಡಿ, ಹೀಗೆ ಹೇಳಿದಳು -

ಆಚಷ್ಟ ತೇ ಮಹಾಪ್ರಾಜ್ಞ ದೇವಯಾನೀ ವನೇ ಗತಾ ।
ಶರ್ಮಿಷ್ಠಯಾ ಮಹಾಭಾಗ ದುಹಿತ್ರಾ ವೃಷಪರ್ವಣಃ ॥೩೮॥

ಎಲೈ ಮಹಾಪ್ರಾಜ್ಞರೇ ಮತ್ತು ಭಾಗ್ಯಶಾಲಿಗಳೇ, ವೃಷಪರ್ವನ ಮಗಳಾದ ಶರ್ಮಿಷ್ಠೆಯ ನಿಮಿತ್ತದಿಂದ ದೇವಯಾನಿಯು ಕಾಡಿಗೆ ಹೋಗಿದ್ದಾಳೆ.

ಶ್ರುತ್ವಾ ದುಹಿತರಂ ಕಾವ್ಯೋ ಹತಾಂ ಶರ್ಮಿಷ್ಠಯಾ ತತಃ
ತ್ವರಯಾ ನಿರ್ಯಯೌ ದುಃಖಾನ್ಮಾರ್ಗಮಾಣಃ ಸುತಾಂ ವನೇ ॥೩೯॥

ಶುಕ್ರಾಚಾರ್ಯರು ತನ್ನ ಮಗಳು ದೇವಯಾನಿಯಿಂದ ಘರ್ಷಿತಳಾದ ವಿಷಯವನ್ನು ಕೇಳಿ ದುಃಖದಿಂದ ಕಾಡಿನಲ್ಲಿ ಅವಳನ್ನು ಹುಡುಕಿಕೊಂಡು ಬೇಗ ಹೊರಟರು.

ದೃಷ್ಟ್ವಾ ದುಹಿತರಂ ಕಾವ್ಯೋ ದೇವಯಾನೀಂ ತಥಾಗತಾಮ್ ।
ವಾಹುಭ್ಯಾಂ ಸಂಪರಿಷ್ವಜ್ಯ ದುಃಖಿತೋ ವಾಕ್ಯಮಬ್ರವೀತ್ ॥೪೦॥

ಶುಕ್ರಾಚಾರ್ಯರು ಆ ಪರಿಸ್ಥಿತಿಯಲ್ಲಿದ್ದ ತನ್ನ ಮಗಳಾದ ದೇವಯಾನಿಯನ್ನು ನೋಡಿ ಬಾಹುಗಳಿಂದ ಆಲಿಂಗಿಸಿ ದುಃಖದಿಂದ ಈ ಮಾತುಗಳನ್ನು ಆಡಿದರು.

ಆತ್ಮದೋಷೈರ್ಹಿ ಗಚ್ಛಂತಿ ಸರ್ವೇ ದುಃಖಸುಖೇ ಜನಾಃ ।
ಪುರಾ ದುಶ್ಚರಿತಂ ಮನ್ಯೇ ಯಸ್ಮಾತ್ ತೇ ನಿಷ್ಕೃತಿಃ ಕೃತಾ ॥೪೧॥

ಎಲ್ಲ ಜೀವರು ತಾವು ಮಾಡಿದ ತಪ್ಪುಗಳಿಂದ ಅಥವಾ ಒಳ್ಳೆಯ ಕೆಲಸದಿಂದ ಜೀವನದಲ್ಲಿ ಸುಖದುಃಖಗಳನ್ನು ಹೊಂದುತ್ತಾರೆ. ನೀನು ಹಿಂದೆ ಮಾಡಿದ ಒಂದು ಪಾಪ ಇರಬೇಕು. ಆದ್ದರಿಂದ ನಿನಗೆ ಇಂತಹ ಅವಮಾನ ಉಂಟಾಯಿತು.

ದೇವಯಾನೀ

ದುಷ್ಕೃತಿರ್ವಾಸ್ತು ವಾ ಮಾಸ್ತು ಶೃಣುಷ್ವ ವಚನಂ ಮಮ ।
ಶರ್ಮಿಷ್ಠಯಾ ದುರುಕ್ತಾಸ್ಮಿ ದುಹಿತ್ರಾ ವೃಷಪರ್ವಣಃ ।
ಸತ್ಯಂ ಕಿಲೈತತ್ ಸಾ ಪ್ರಾಹ ದೈತ್ಯಾನಾಮಸಿ ಗಾಯನಃ ॥೪೨॥

ಪಾಪವು ಇರಲಿ ಅಥವಾ ಬಿಡಲಿ ನನ್ನ ಮಾತನ್ನು ಕೇಳು. ವೃಷಪರ್ವನ ಮಗಳಾದ ಶರ್ಮಿಷ್ಠೆಯು ನನ್ನನ್ನು ನಿಂದಿಸಿದ್ದಾಳೆ. ನೀನು ನೀನು ದೈತ್ಯರ ಗಾಯಕ ಎಂದು ಹೇಳಿದ ಅವಳ ಮಾತು ಸತ್ಯವೇ. ನೀನೇ ಹೇಳು.

ಏವಂ ಮಾಮವದತ್ ಕ್ರೋಧಾದ್ ಬಹುಶೋ ವಾರ್ಷಪರ್ವಣೀ ।
ವಚನಂ ತೀಕ್ಷ್ಣಪರುಷಂ ಕ್ರೋಧರಕ್ತೇಕ್ಷಣಾ ಭೃಶಮ್ ॥೪೩॥

ವೃಷಪರ್ವನ ಮಗಳಾದ ಅವಳು ಕ್ರೋಧದಿಂದ ತುಂಬಾ ಕೆಂಪಾದ ಕಣ್ಣುಳ್ಳವಳಾಗಿ ಮತ್ತೆ ಮತ್ತೆ ನನ್ನನ್ನು ಕುರಿತು, ಈ ಮಾತುಗಳನ್ನು ಆಡಿದಳು.

ಸ್ತುವತೋ ದುಹಿತಾ ತ್ವಂ ವೈ ಯಾಚತಃ ಪ್ರತಿಗೃಹ್ನತಃ ।
ಸುತಾऽಹಂ ಸ್ತೂಯಮಾನಸ್ಯ ದದತೋऽಪ್ರತಿಗೃಹ್ಣತಃ ॥೪೪॥

ನೀನು ಸ್ತೋತ್ರಮಾಡುವವನ, ಭಿಕ್ಷೆಬೇಡುವವನ ಮತ್ತು ಸ್ವೀಕಾರ ಮಾಡುವವನ ಮಗಳು. ನಾನು ಸ್ತೋತ್ರಮಾಡಲ್ಪಡುವವಳ, ಕೊಡುವವನ, ಸ್ವೀಕಾರ ಮಾಡದವನ ಮಗಳು.

ಇತಿ ಮಾಮಾಹ ಶರ್ಮಿಷ್ಠಾ ಬಹುಶೋ ವಾರ್ಷಪರ್ವಣೀ ।
ಕ್ರೋಧಸಂರಕ್ತನಯನಾ ದರ್ಪಪೂರ್ಣಾನನಾ ತತಃ ॥೪೫॥

ಹೀಗೆ ವೃಷ್ಣಪರ್ವನ ಮಗಳಾದ ಶರ್ಮಿಷ್ಠೆಯು ಕೋಪದಿಂದ ಕೆಂಪಾದ ಕಣ್ಣುಗಳಿಂದ ಮುಖದಲ್ಲಿ ಅಹಂಕಾರವನ್ನು ತುಂಬಿಕೊಂಡು ಅನೇಕಬಾರಿ ನನಗೆ ಹೇಳಿದಳು.

ಯದ್ಯಹಂ ಸ್ತುವತಸ್ತಾತ ದುಹಿತಾ ಪ್ರತಿಗೃಹ್ಣತಃ ।
ಪ್ರಸಾದಯಿಷ್ಯೇ ಶರ್ಮಿಷ್ಠಾಮಿತ್ಯುಕ್ತಾ ಹಿ ಸಖೀ ಮಯಾ ॥೪೬॥

ಎಲೈ ಪೂಜ್ಯನೇ! ಹೀಗೆ ಹೇಳುತ್ತಿರುವ ಶರ್ಮಿಷ್ಠೆಗೆ ಅಂಜಿ ಅವಳ ಸಖಿಯ ಮೂಲಕ ಹೀಗೆ ಪ್ರಾರ್ಥಿಸಿದೆ. 'ಬೇಡುವವನ ಮಗಳಾದ ನಾನೂ ನಿನ್ನ ಬಳಿ ಬೇಡುತ್ತೇನೆ. ಸಿಟ್ಟುಬಿಡು' ಎಂದು.

ಉಕ್ತಾऽಪ್ಯೇವಂ ಭೃಶಂ ಕ್ರುದ್ಧಾ ಮಾಂ ಗೃಹ್ಯ ವಿಜನೇ ವನೇ ।
ಕೂಪೇ ಪ್ರಕ್ಷೇಪಯಾಮಾಸ ಪ್ರಕ್ಷಿಪ್ಯೈವ ಗೃಹಂ ಯಯೌ ॥೪೭॥

ನಾನು ಹೀಗೆ ಹೇಳಿದರೂ ಸಹ ಅವಳು ಬಹಳ ಸಿಟ್ಟಿನಿಂದ ನನ್ನನ್ನು ಎತ್ತಿ, ನನ್ನನ್ನು ನಿರ್ಜನವಾದ ವನದಲ್ಲಿ ಒಂದು ಕೂಪದಲ್ಲಿ ಎಸೆದು ಮನೆಗೆ ಹೊರಟು ಹೋದಳು.

ಶುಕ್ರಃ

ಸ್ತುವತೋ ದುಹಿತಾ ನ ತ್ವಂ ವಂದಿನಃ ಪ್ರತಿಗೃಹ್ಣತಃ ।
ಅಸ್ತೋತುಃ ಸ್ತೂಯಮಾನಸ್ಯ ದುಹಿತಾ ದೇವಯಾನ್ಯಸಿ ॥೪೮॥

ದೇವಯಾನಿ ನೀನು ಸ್ತೋತ್ರಮಾಡುವವನ ವಂದಿಯ ಸ್ವೀಕಾರ ಮಾಡುವವನ ಮಗಳಲ್ಲ. ನೀನು ಯಾರನ್ನೂ ಸ್ತೋತ್ರಮಾಡದಿರುವ ಎಲ್ಲರಿಂದಲೂ ಸ್ತೋತ್ರಮಾಡಲ್ಪಡುವ ನನ್ನ ಮಗಳು.

ವೃಷಪರ್ವಾ ಚ ತದ್ ವೇದ ಶಕ್ರೋ ರಾಜಾ ಚ ನಾಹುಷಃ ।
ಅಚಿಂತ್ಯಂ ಬ್ರಹ್ಮ ಕಲ್ಯಾಣಿ ಐಶ್ವರ್ಯಂ ಹಿ ಬಲಂ ಮಮ ॥೪೯॥

ಈ ವಿಷಯವು ವೃಷಪರ್ವನಿಗೆ ಗೊತ್ತು. ಇಂದ್ರನಿಗೆ ತಿಳಿದಿದೆ. ಯಯಾತಿಗೂ ಈ ವಿಷಯವು ತಿಳಿದಿದೆ. ನನ್ನ ಬಲವೆಂದರೆ ನನ್ನ ಬ್ರಾಹ್ಮಣ ತೇಜಸ್ಸು. ಕಲ್ಯಾಣಿಯೇ ಅದು ನನ್ನ ಐಶ್ವರ್ಯ.

ದೇವಯಾನಿ! ನೀಚನಾದ ವೃಷಪರ್ವನ ಸ್ತೋತ್ರವನ್ನು ನಾನು ವಂದಿ ಮಾಗಧರಂತೆ ಮಾಡಬೇಕಿಲ್ಲ. ನನ್ನ ಬಳಿ ವೇದವಿದೆ. ಪರಬ್ರಹ್ಮ ಪ್ರತಿಪಾದಕವಾದ ವೇದಗಳಿಂದ ಹರಿಯನ್ನು ಸ್ತುತಿಸುವ ನಾನು ಈ ಅಸುರನನ್ನು ಸ್ತುತಿಸಲಾರೆ. ಇದು ನಿಂದ್ಯ ಕರ್ಮ.

ವೃಷಪರ್ವಾ ಚ ತಂ ವೇದ ಶಕ್ರೋ ರಾಜಾ ಚ ನಾಹುಷಃ ।
ಅಚಿಂತ್ಯಂ ಬ್ರಹ್ಮ ಕಲ್ಯಾಣಿ ನಾಹಂ ಗಾಯೀ ನ ವಂದಿಕಃ ॥೫೦॥

ಕಲ್ಯಾಣಿ, ಇದನ್ನು ವೃಷಪರ್ವನೂ, ಇಂದ್ರನೂ, ಯಯಾತಿರಾಜನೂ ತಿಳಿದಿದ್ದಾರೆ. ಬ್ರಹ್ಮತೇಜಸ್ಸು ಯಾರ ಚಿಂತನೆಗೂ ನಿಲುಕದ್ದು. ನಾನು ಇನ್ನೊಬ್ಬರನ್ನು ಗಾನಮಾಡುವವನಲ್ಲ. ಹೊಗಳುವವನೂ ಅಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಸಪ್ತಷಷ್ಟಿತಮೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಅರವತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ವೃಷಪರ್ವನ ಮಗಳಾದ ಅವಳು ಕ್ರೋಧದಿಂದ ತುಂಬಾ ಕೆಂಪಾದ ಕಣ್ಣುಳ್ಳವಳಾಗಿ ಮತ್ತೆ ಮತ್ತೆ ನನ್ನನ್ನು ಕುರಿತು, ಈ ಮಾತುಗಳನ್ನು ಆಡಿದಳು.

ಸ್ತುವತೋ ದುಹಿತಾ ತ್ವಂ ವೈ ಯಾಚತಃ ಪ್ರತಿಗೃಹ್ನತಃ ।
ಸುತಾऽಹಂ ಸ್ತೂಯಮಾನಸ್ಯ ದದತೋऽಪ್ರತಿಗೃಹ್ಣತಃ ॥೪೪॥

ನೀನು ಸ್ತೋತ್ರಮಾಡುವವನ, ಭಿಕ್ಷೆಬೇಡುವವನ ಮತ್ತು ಸ್ವೀಕಾರ ಮಾಡುವವನ ಮಗಳು. ನಾನು ಸ್ತೋತ್ರಮಾಡಲ್ಪಡುವವಳ, ಕೊಡುವವನ, ಸ್ವೀಕಾರ ಮಾಡದವನ ಮಗಳು.

ಇತಿ ಮಾಮಾಹ ಶರ್ಮಿಷ್ಠಾ ಬಹುಶೋ ವಾರ್ಷಪರ್ವಣೀ ।
ಕ್ರೋಧಸಂರಕ್ತನಯನಾ ದರ್ಪಪೂರ್ಣಾನನಾ ತತಃ ॥೪೫॥

ಹೀಗೆ ವೃಷ್ಪರ್ವನ ಮಗಳಾದ ಶರ್ಮಿಷ್ಠೆಯು ಕೋಪದಿಂದ ಕೆಂಪಾದ ಕಣ್ಣುಗಳಿಂದ ಮುಖದಲ್ಲಿ ಅಹಂಕಾರವನ್ನು ತುಂಬಿಕೊಂಡು ಅನೇಕಬಾರಿ ನನಗೆ ಹೇಳಿದಳು.

ಯದ್ಯಹಂ ಸ್ತುವತಸ್ತಾತ ದುಹಿತಾ ಪ್ರತಿಗೃಃಹ್ಣತಃ ।
ಪ್ರಸಾದಯಿಷ್ಯೇ ಶರ್ಮಿಷ್ಠಾಮಿತ್ಯುಕ್ತಾ ಹಿ ಸಖೀ ಮಯಾ ॥೪೬॥

ಎಲೈ ಪೂಜ್ಯನೇ! ಹೀಗೆ ಹೇಳುತ್ತಿರುವ ಶರ್ಮಿಷ್ಠೆಗೆ ಅಂಜಿ ಅವಳ ಸಖಿಯ ಮೂಲಕ ಹೀಗೆ ಪ್ರಾರ್ಥಿಸಿದೆ. 'ಬೇಡುವವನ ಮಗಳಾದ ನಾನೂ ನಿನ್ನ ಬಳಿ ಬೇಡುತ್ತೇನೆ. ಸಿಟ್ಟುಬಿಡು' ಎಂದು.

ಉಕ್ತಾऽಪ್ಯೇವಂ ಭೃಶಂ ಕ್ರುದ್ಧಾ ಮಾಂ ಗೃಹ್ಯ ವಿಜನೇ ವನೇ ।
ಕೂಪೇ ಪ್ರಕ್ಷೇಪಯಾಮಾಸ ಪ್ರಕ್ಷಿಪ್ಯೈವ ಗೃಹಂ ಯಯೌ ॥೪೭॥

ನಾನು ಹೀಗೆ ಹೇಳಿದರೂ ಸಹ ಅವಳು ಬಹಳ ಸಿಟ್ಟಿನಿಂದ ನನ್ನನ್ನು ಎತ್ತಿ, ನನ್ನನ್ನು ನಿರ್ಜನವಾದ ವನದಲ್ಲಿ ಒಂದು ಕೂಪದಲ್ಲಿ ಎಸೆದು ಮನೆಗೆ ಹೊರಟು ಹೋದಳು.

ಶುಕ್ರಃ

ಸ್ತುವತೋ ದುಹಿತಾ ನ ತ್ವಂ ವಂದಿನಃ ಪ್ರತಿಗೃಹ್ಣತಃ ।
ಅಸ್ತೋತುಃ ಸ್ತೂಯಮಾನಸ್ಯ ದುಹಿತಾ ದೇವಯಾನ್ಯಸಿ ॥೪೮॥

ದೇವಯಾನಿ ನೀನು ಸ್ತೋತ್ರಮಾಡುವವನ ವಂದಿಯ ಸ್ವೀಕಾರ ಮಾಡುವವನ ಮಗಳಲ್ಲ. ನೀನು ಯಾರನ್ನೂ ಸ್ತೋತ್ರವಾಡದಿರುವ ಎಲ್ಲರಿಂದಲೂ ಸ್ತೋತ್ರಮಾಡಲ್ಪಡುವ ನನ್ನ ಮಗಳು.

ವೃಷಪರ್ವಾ ಚ ತದ್ ವೇದ ಶಕ್ರೋ ರಾಜಾ ಚ ನಾಹುಷಃ ।
ಅಚಿಂತ್ಯಂ ಬ್ರಹ್ಮ ಕಲ್ಯಾಣಿ ಐಶ್ವರ್ಯಂ ಹಿ ಬಲಂ ಮಮ ॥೪೯॥

ಈ ವಿಷಯವು ವೃಷಪರ್ವನಿಗೆ ಗೊತ್ತು. ಇಂದ್ರನಿಗೆ ತಿಳಿದಿದೆ. ಯಯಾತಿಗೂ ಈ ವಿಷಯವು ತಿಳಿದಿದೆ. ನನ್ನ ಬಲವೆಂದರೆ ನನ್ನ ಬ್ರಾಹ್ಮಣ ತೇಜಸ್ಸು. ಕಲ್ಯಾಣಿಯೇ ಅದು ನನ್ನ ಐಶ್ವರ್ಯ.

ದೇವಯಾನಿ! ನೀಚನಾದ ವೃಷಪರ್ವನ ಸ್ತೋತ್ರವನ್ನು ನಾನು ವಂದಿ ಮಾಗಧರಂತೆ ಮಾಡಬೇಕಿಲ್ಲ. ನನ್ನ ಬಳಿ ವೇದವಿದೆ. ಪರಬ್ರಹ್ಮ ಪ್ರತಿಪಾದಕವಾದ ವೇದಗಳಿಂದ ಹರಿಯನ್ನು ಸ್ತುತಿಸುವ ನಾನು ಈ ಅಸುರನನ್ನು ಸ್ತುತಿಸಲಾರೆ. ಇದು ನಿಂದ್ಯ ಕರ್ಮ.

ವೃಷಪರ್ವಾ ಚ ತಂ ವೇದ ಶಕ್ರೋ ರಾಜಾ ಚ ನಾಹುಷಃ ।
ಅಚಿಂತ್ಯಂ ಬ್ರಹ್ಮ ಕಲ್ಯಾಣಿ ನಾಹಂ ಗಾಯೀ ನ ವಂದಿಕಃ ॥೫೦॥

ಕಲ್ಯಾಣಿ, ಇದನ್ನು ವೃಷಪರ್ವನೂ, ಇಂದ್ರನೂ, ಯಯಾತಿರಾಜನೂ ತಿಳಿದಿದ್ದಾರೆ. ಬ್ರಹ್ಮತೇಜಸ್ಸು ಯಾರ ಚಿಂತನೆಗೂ ನಿಲುಕದ್ದು. ನಾನು ಇನ್ನೊಬ್ಬರನ್ನು ಗಾನಮಾಡುವವನಲ್ಲ. ಹೊಗಳುವವನೂ ಅಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಸಪ್ತಷಷ್ಟಿತಮೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಅರವತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಅರವತ್ತೆಂಟನೆಯ ಅಧ್ಯಾಯ

(ಶುಕ್ರದೇವಯಾನಿಯರ ಸಂವಾದ)

ಶುಕ್ರಃ

ಅಚಿಂತ್ಯಂ ಬ್ರಹ್ಮ ನಿರ್ದ್ವಂದ್ವಮೈಶ್ವರಂ ಹಿ ಬಲಂ ಮಮ ।
ದೈನ್ಯಂ ಗರ್ಹ್ಯಂ ಚ ಮೇ ಜೈಹ್ಮ್ಯಂ ನ ಮೇಽಸ್ತಿ ಯದಧರ್ಮತಃ ॥೧॥

ದೇವಯಾನಿ, ಈಶ್ವರನನ್ನು ಪ್ರತಿವಾದಿಸುವ ಅಸದೃಶವಾದ ವೇದವು ನನ್ನ ಅಚಿಂತ್ಯವಾದ ಬಲ. ಅಧರ್ಮದ ಚಿಹ್ನೆಗಳಾದ ದೈನ್ಯ, ನಿಂದೆ ಮತ್ತು ಕುಟಿಲತೆಗಳು ನನ್ನಲ್ಲಿ ಇಲ್ಲ.

ಯಃ ಪರೇಷಾಂ ನರೋ ನಿತ್ಯಮತಿವಾದಾಂಸ್ತಿತಿಕ್ಷತಿ ।
ದೇವಯಾನಿ ವಿಜಾನೀಹಿ ಸರ್ವಂ ತಸ್ಯ ಜಿತಂ ಭವೇತ್ ॥೨॥

ದೇವಯಾನಿ, ಯಾವನು ಇನ್ನೊಬ್ಬರ ನಿಂದೆಯ ಮಾತುಗಳನ್ನು ಸತತವಾಗಿ ಸಹಿಸುತ್ತಾನೋ ಆ ಮನುಷ್ಯನು ಎಲ್ಲವನ್ನೂ ಜಯಿಸುತ್ತಾನೆ.

ಯಃ ಸಮುತ್ಪತಿತಂ ಕ್ರೋಧಂ ನಿಗೃಹ್ಣಾತಿ ಹಯಂ ಯಥಾ ।
ಸ ಯಂತೇತ್ಯುಚ್ಯತೇ ಸದ್ಭಿರ್ನ ಹಯೇ ರಶ್ಮಿಲಂಬಿತೇ ॥೩॥

ಯಾವನು ಒಮ್ಮೆಲೇ ಉಂಟಾದ ಕ್ರೋಧವನ್ನು ಕುದುರೆಯನ್ನು ಹಿಡಿದಂತೆ ನಿಗ್ರಹ ಮಾಡುತ್ತಾನೆಯೋ ಅವನನ್ನು ಸಜ್ಜನರು ಸಾರಥಿ ಎಂದು ಕರೆಯುತ್ತಾರೆ. ರಥದ ಕುದುರೆಯನ್ನು ಹಗ್ಗದಲ್ಲಿ ಹಿಡಿದವನನ್ನು ಸಾರಥಿ ಎಂದು ಕರೆಯುವುದಿಲ್ಲ.

ಯಃ ಸಮುತ್ಪತಿತಂ ಕ್ರೋಧಮಕ್ರೋಧೇನ ವ್ಯಪಾಸ್ಯತಿ ।
ಯಥೋರಗಸ್ತ್ವಚಂ ಜೀರ್ಣಾಂ ಸ ವೈ ಪುರುಷ ಉಚ್ಯತೇ ॥೪॥

ಒಮ್ಮೆಲೇ ಉಂಟಾದ ಕ್ರೋಧವನ್ನು ಯಾರು ಸರ್ಪವು ಜೀರ್ಣವಾದ ಪೊರೆಯನ್ನು ದೂರಮಾಡಿದಂತೆ ಶಾಂತಿಯಿಂದ ದೂರಮಾಡುತ್ತಾನೋ ಅವನನ್ನು ಪುರುಷ ಎಂದು ಕರೆಯುತ್ತಾರೆ.

ಯೋ ವೈ ಮನ್ಯುಂ ಧಾರಯತಿ ಯೋಽತಿವಾದಾಂಸ್ತಿತಿಕ್ಷತಿ ।
ಯಶ್ಚ ತಪ್ತೋ ನ ತಪತಿ ಸ ವೈ ಸರ್ವಜಿತಃ ಖಲು ॥೫॥

ಯಾವನು ಕ್ರೋಧವನ್ನು ತಡೆಯುತ್ತಾನೆಯೋ, ಯಾವನು ನಿಂದೆಯ ಮಾತುಗಳನ್ನು ಸಹಿಸುತ್ತಾನೆಯೋ, ಯಾವನು ಇನ್ನೊಬ್ಬರಿಂದ ತಾಪಕ್ಕೆ ಒಳಗಾದರೂ ತಾಪಪಡುವುದಿಲ್ಲವೋ ಅವನು ಸರ್ವವನ್ನೂ ಜಯಿಸುತ್ತಾನೆ.

ಯೋ ಯಜೇತಾಶ್ವಮೇಧೇನ ಮಾಸಿಮಾಸಿ ಶತಂ ಸಮಾಃ ।
ತಸ್ಮಾದಕ್ರೋಧನಃ ಶ್ರೇಷ್ಠಃ ಕಾಮಕ್ರೋಧೌ ಹಿ ಗರ್ಹಿತೌ ॥೬॥

ಯಾವನು ಅಶ್ವಮೇಧಯಾಗವನ್ನು ನೂರು ವರ್ಷಗಳವರೆಗೆ ಪ್ರತಿ ಮಾಸದಲ್ಲಿಯೂ ಮಾಡುತ್ತಾನೆಯೋ ಅವನಿಗಿಂತ ಕ್ರೋಧಕ್ಕೆ ಒಳಗಾಗದವನು ಶ್ರೇಷ್ಠನಾದವನು. ಕಾಮಕ್ರೋಧಗಳು ನಿಂದ್ಯವಾದವು.

ಕ್ರುದ್ಧಸ್ಯ ನಿಷ್ಫಲಾನ್ಯೇವ ದಾನಯಜ್ಞತಪಾಂಸಿ ಚ ।
ತಸ್ಮಾದಕ್ರೋಧನೇ ಯಜ್ಞತಪೋ ದಾನಂ ಮಹತ್ಫಲಮ್ ॥೭॥

ಕೋಪಕ್ಕೆ ಒಳಗಾಗುವವನಿಗೆ ಅವನು ಮಾಡಿದ ದಾನ, ಯಜ್ಞಮತ್ತು ತಪಸ್ಸುಗಳು ನಿಷ್ಫಲವಾಗುತ್ತವೆ. ದಾನ, ಯಜ್ಞಮತ್ತು ತಪಸ್ಸುಗಳು ಕ್ರೋಧಕ್ಕೆ ಒಳಗಾಗದಿದ್ದವನಿಗೆ ಮಹಾಫಲವನ್ನು ಕೊಡುತ್ತದೆ.

ನ ಪೂತೋ ನ ತಪಸ್ವೀ ಚ ನ ಯಜ್ವಾ ನ ಚ ಧರ್ಮಕೃತ್ ।
ಕ್ರೋಧಸ್ಯ ಯೋ ವಶಂ ಗಚ್ಛೇತ್ ತಸ್ಯ ಲೋಕದ್ವಯಂ ನ ಚ ॥

ಯಾರು ಕ್ರೋಧಕ್ಕೆ ವಶನಾಗುತ್ತಾನೆಯೋ ಅವನು ಎಂದೂ ಪವಿತ್ರನಾಗುವುದಿಲ್ಲ. ತಪಸ್ವಿಯಾಗುವುದಿಲ್ಲ. ಯಾಗವನ್ನಾಗಲೀ, ಧರ್ಮವನ್ನಾಗಲೀ ಮಾಡುವುದಿಲ್ಲ. ಅವನಿಗೆ ಈ ಲೋಕವೂ ಇಲ್ಲ, ಪರಲೋಕವೂ ಇಲ್ಲ.

ಪುತ್ರಭೃತ್ಯಸುಹೃನ್ಮಿತ್ರಭಾರ್ಯಾ ಧರ್ಮಶ್ಚ ಸತ್ಯತಾ ।
ತಸ್ಯೈತಾನ್ಯಪಯಾಸ್ಯಂತಿ ಕ್ರೋಧಶೀಲಸ್ಯ ನಿಶ್ಚಿತಮ್ ॥೯॥

ಕ್ರೋಧಶೀಲನಾದ ಮನುಷ್ಯನನ್ನು ಮಕ್ಕಳು, ಭೃತ್ಯರು, ಸ್ನೇಹಿತರು, ಪತ್ನಿ, ಧರ್ಮ, ಸತ್ಯ ಎಲ್ಲವೂ ಬಿಟ್ಟುಹೋಗುತ್ತವೆ. ಇದು ನಿಶ್ಚಿತವಾದುದು.

ಯತ್ ಕುಮಾರಾಃ ಕುಮಾರ್ಯಶ್ಚ ವೈರಂ ಕುರ್ಯುಃ ಸ್ತ್ರಿಯೋಽಪಿ ವಾ ।
ನ ತತ್ ಪ್ರಾಜ್ಞೋಽನುಕುರ್ವೀತ ವಿದ್ವಾಂಸ್ತಸ್ಯ ಬಲಾಬಲಮ್ ॥೧೦॥

ಸಣ್ಣವಯಸ್ಸಿನ ಗಂಡು, ಹೆಣ್ಣುಮಕ್ಕಳು ಮತ್ತು ಸ್ತ್ರೀಯರು ಯಾವ ಕ್ರೋಧವನ್ನು ಮಾಡುತ್ತಾರೆಯೋ ಅದನ್ನು ಪ್ರಾಜ್ಞನಾದವನು ಅಕ್ರೋಧ ಮತ್ತು ಕ್ರೋಧಗಳ, ಬಲ ಮತ್ತು ಅಬಲಗಳನ್ನು ತಿಳಿದವನು ಎಂದೂ ಮಾಡಬಾರದು.

ದೇವಯಾನೀ

ವೇದಾಹಂ ತಾತ ಬಾಲಾಽಪಿ ಧರ್ಮಾಣಾಂ ಯದಿಹಾಂತರಮ್ ।
ಆಕ್ರೋಶೇ ಚಾತಿವಾದೇ ಚ ವೇದ ಚಾಪಿ ಬಲಾಬಲಮ್ ॥೧೧॥

ತಂದೆಯೇ, ನಾನು ಚಿಕ್ಕವಳಾದರೂ ಧರ್ಮಗಳ ಅಂತರವನ್ನು ತಿಳಿದಿದ್ದೇನೆ. ಸಿಟ್ಟಿನಿಂದ ಕಿರುಚುವುದರಲ್ಲಿಯೂ, ನಿಂದನೆಯನ್ನು ಮಾಡುವುದರಲ್ಲಿಯೂ ಇರುವ ದೌರ್ಬಲ್ಯವನ್ನೂ ಹಾಗೆ ಮಾಡದಿದ್ದರೆ ಇರುವ ಬಲವನ್ನೂ ತಿಳಿದಿದ್ದೇನೆ.

ಸ್ವವೃತ್ತಿಮನನುಷ್ಠಾಯ ಧರ್ಮಮುತ್ಸೃಜ್ಯ ತತ್ತ್ವತಃ ।
ಶಿಷ್ಯಸ್ಯಾಶಿಷ್ಯವೃತ್ತಿರ್ಹಿ ನ ಕ್ಷಂತವ್ಯಾ ಬುಭೂಷತಾ ॥೧೨॥

ಪ್ರೇಷ್ಯೇ ಶಿಷ್ಯಾರ್ಯವೃತ್ತಿಂ ಹಿ ಉತ್ಸೃಜ್ಯ ವಿಪಥಂ ಗತೇ ।
ತಸ್ಮಾತ್ ಸಂಕೀರ್ಣವೃತ್ತೇಷು ವಾಸೋ ಮಮ ನ ರೋಚತೇ ॥೧೩॥

ತನ್ನ ನಡತೆಯನ್ನು ಬಿಟ್ಟು ಶುದ್ಧವಾದ ಧರ್ಮವನ್ನು ತೊರೆದು ಸೇವಕನಾದವನು ಶಿಷ್ಯನ ಉದಾರವಾದ ಮಾರ್ಗವನ್ನು ಬಿಟ್ಟು ದುರ್ಮಾರ್ಗಗತನಾದರೆ ಶಿಷ್ಯನ ಆ ದುರ್ವರ್ತನೆಯನ್ನು ವಿವೇಕಿಯಾದವನು ಕ್ಷಮಿಸಬಾರದು. ಆದ್ದರಿಂದ ಸಂಶಯಾಸ್ಪದ ನಡತೆಯುಳ್ಳವರಲ್ಲಿ ನಾನು ವಾಸಮಾಡಲು ಬಯಸುವುದಿಲ್ಲ.

ದಹ್ಯಮಾನಾಃ ಸುತೀವ್ರೇಣ ನೀಚಾಃ ಪರಯಶೋಽಗ್ನಿನಾ ।
ಅಶಕ್ತಾಸ್ತತ್ಪದಂ ಗಂತುಂ ತತೋ ನಿಂದಾಂ ಪ್ರಕುರ್ವತೇ ॥೧೪॥

ನೀಚರು ಇನ್ನೊಬ್ಬರ ಕೀರ್ತಿಯನ್ನು ಕಂಡು ತೀವ್ರವಾದ ಅಗ್ನಿಯಿಂದ ಬೆಂದಂತೆ ಅದರಿಂದ ಬೆಂದು ಅವರ ಸ್ಥಾನವನ್ನು ಪಡೆಯಲು ಸಾಧ್ಯವಾಗದೇ ನಿಂದೆಯನ್ನು ಮಾಡುತ್ತಾರೆ.

ಭೂಯಾಂಸಂ ಯೇ ಹಿ ನಿಂದಂತಿ ವೃತ್ತೇನಾಭಿಜನೇನ ಚ ।
ನ ತೇಷು ನಿವಸೇತ್ ಪ್ರಾಜ್ಞಃ ಶ್ರೇಯೋಽರ್ಥೀ ಪಾಪಬುದ್ಧಿಷು ॥೧೫॥

ಯಾರು ನಡತೆಯಿಂದ ಮತ್ತು ಜನ್ಮದಿಂದ ತನಗಿಂತ ಶ್ರೇಷ್ಠರಾದವರನ್ನು ನಿಂದಿಸುತ್ತಾರೆಯೋ ಸುವ್ರತಿಯಾದ ಪ್ರಾಜ್ಞನಾದವನು ಅಂತಹ ಪಾಪಬುದ್ಧಿಯುಳ್ಳವರಲ್ಲಿ ವಾಸವನ್ನು ಮಾಡಬಾರದು.

ಯೇ ತ್ವೇನಮಭಿನಂದಂತಿ ವೃತ್ತೇನಾಭಿಜನೇನ ಚ ।
ತೇಷು ಸಾಧುಷು ವಸ್ತವ್ಯಂ ಸ ವಾಸಃ ಶ್ರೇಷ್ಠ ಉಚ್ಯತೇ ॥೧೬॥

ಯಾವನ ನಡತೆ ಮತ್ತು ಜನ್ಮಗಳಿಂದ ಯಾರು ಸಂತೋಷಪಡುತ್ತಾರೋ ಅಂತಹ ಸಜ್ಜನರಲ್ಲಿ ವಾಸವನ್ನು ಮಾಡಬೇಕು. ಆ ವಾಸವು ಶ್ರೇಷ್ಠವೆಂದು ಕರೆಯಲ್ಪಡುತ್ತದೆ.

ಸುಯಂತ್ರಿತಾ ವರಾ ನಿತ್ಯಂ ವಿಹೀನಾಶ್ಚ ಧನೈರ್ನರಾಃ ।
ದುರ್ವೃತ್ತಾಃ ಪಾಪಕರ್ಮಾಣಃ ಚಂಡಾಲಾ ಧನಿನೋಽಪಿ ಚ ॥೧೭॥

ತಮ್ಮನ್ನು ತಾವು ಪುಣ್ಯದಿಂದ ನಿಯಂತ್ರಿಸುವ ನರರು ಧನವಿಹೀನರಾದರೂ ಶ್ರೇಷ್ಠರಾದವರು. ಧನಿಕರು ದುರ್ನಡತೆಯುಳ್ಳವರಾಗಿ ಪಾಪಕರ್ಮಗಳನ್ನು ಮಾಡಿದರೆ ಅವರು ಚಂಡಾಲರೇ ಸರಿ.

ನ ಹಿ ಜಾತ್ಯಾ ಹಿ ಚಂಡಾಲಾಃ ಸ್ವಕರ್ಮವಿಹಿತೈರ್ವಿನಾ ।
ಧನಾಭಿಜನವಿದ್ಯಾಸು ಸಕ್ತಾಶ್ಚಂಡಾಲಧರ್ಮಿಣಃ ॥೧೮॥

ತಮಗೆ ವಿಹಿತವಾದ ಕರ್ಮಗಳಲ್ಲಿ ಧನ, ಅಭಿಜನ ಮತ್ತು ವಿದ್ಯೆಯನ್ನು ಉಪಯೋಗಿಸದೇ ಭೋಗಾದಿಗಳಿಗೋಸ್ಕರ ಧನ, ಅಭಿಜನ ಮತ್ತು ವಿದ್ಯೆಯಲ್ಲಿ ನಿರತರಾದವರು ಚಂಡಾಲಧರ್ಮಿಗಳು. ಕೇವಲ ಜಾತಿಯಿಂದ ಚಂಡಾಲನಾಗುವುದಿಲ್ಲ.

ಅಕಾರಣಾದ್ ಯೇ ದ್ವಿಷ್ಯಂತಿ ಪರಿವಾದಂ ವದಂತಿ ಚ ।
ನ ತತ್ರಾಸ್ಯ ನಿವಾಸೋಽಸ್ತಿ ಪಾಪ್ಮಭಿಃ ಪಾಪತಾಂ ವ್ರಜೇತ್ ॥೧೯॥

ನಿರ್ನಿಮಿತ್ತವಾಗಿ ಯಾರು ನಿಂದಿಸುತ್ತಾರೋ ಮತ್ತು ದ್ವೇಷ ಮಾಡುತ್ತಾರೋ ಅವರ ಜೊತೆಯಲ್ಲಿ ವಾಸವನ್ನು ಮಾಡಬಾರದು. ಪಾಪಿಗಳ ಜೊತೆಯಲ್ಲಿ ವಾಸಮಾಡುವುದರಿಂದ ಪಾಪವುಂಟಾಗುತ್ತದೆ.

ಸುಕೃತೇ ದುಷ್ಕೃತೇ ವಾಽಪಿ ಯತ್ರ ಸಜ್ಜತಿ ಯೋ ನರಃ ।
ಧ್ರುವಂ ರತಿರ್ಭವೇತ್ ತತ್ರ ತಸ್ಮಾತ್ ತೇಷಾಂ ನ ರೋಚಯೇತ್ ॥

ಒಳ್ಳೆಯ ಕಾರ್ಯದಲ್ಲಾಗಲೀ, ಅಥವಾ ಕೆಟ್ಟಕಾರ್ಯದಲ್ಲಾಗಲೀ, ಯಾವ ಮನುಷ್ಯನು ಮತ್ತೆ ಮತ್ತೆ ಆಸಕ್ತನಾಗುತ್ತಾನೆಯೋ, ಅವನಿಗೆ ಅದರಲ್ಲಿ ರತಿಯುಂಟಾಗುತ್ತದೆ. ಆದ್ದರಿಂದ ದುಷ್ಕರ್ಮಿಗಳ ಸಹವಾಸವನ್ನು ಎಂದೂ ಬಯಸಬಾರದು.

ವಾಚಾ ದುರುಕ್ತಂ ತಾತೇಹ ದುಹಿತ್ರಾ ವೃಷಪರ್ವಣಃ ।
ತತೋ ದುಃಖತರಂ ಮನ್ಯೇ ತ್ರಿಷು ಲೋಕೇಷ್ವಪಿ ಧ್ರುವಮ್ ॥೨೧॥

ತಂದೆಯೇ, ವೃಷಪರ್ವನ ಮಗಳು ನನ್ನನ್ನು ದುಷ್ಟಮಾತುಗಳಿಂದ ಚುಚ್ಚಿದ್ದಾಳೆ. ಅದಕ್ಕಿಂತ ದುಃಖಕರವಾದುದು ಮೂರುಲೋಕದಲ್ಲಿ ಯಾವುದೂ ಇಲ್ಲ.

ನಿಃಸಂಶಯೋ ವಿಶೇಷೇಣ ಪರುಷಂ ಮರ್ಮಕೃಂತನಮ್ ।
ಸುಹೃನ್ಮಿತ್ರಜನಾಸ್ತೇಷು ಸೌಹೃದಂ ಚ ನ ವಿದ್ಯತೇ ॥೨೨॥

ಸ್ನೇಹಿತರು ಮತ್ತು ಉಪಕಾರಿಗಳಾದ ಜನರ ಕ್ರೂರವಾದ ಮಾತುಗಳು ವಿಶೇಷವಾಗಿ ಮರ್ಮಭೇದವನ್ನು ಮಾಡುತ್ತವೆ ಎಂಬ ವಿಷಯದಲ್ಲಿ ಸಂಶಯವಿಲ್ಲ. ಅವರಿಗೆ ಸೌಹಾರ್ದವಿರುವುದಿಲ್ಲ.

ಯಃ ಸಪತ್ನೇ ಶ್ರಿಯಂ ದೀಪ್ತಾಂ ಹೀನಶ್ರೀಃ ಪರ್ಯುಪಾಸತೇ ।
ಅವಮಾನಮವಾಪ್ನೋತಿ ಶನೈರ್ನೀಚಸಮಾಗಮಾತ್ ॥೨೩॥

ಯಾವ ಧನಹೀನನಾದವನು ತನ್ನ ಶತ್ರುವಿನ ಸಂಪತ್ತನ್ನು ಆಶ್ರಯಿಸುತ್ತಾನೋ, ಅವನು ನೀಚಸಮಾಗಮದಿಂದ ನಿಧಾನವಾಗಿ ಅವಮಾನವನ್ನು ಹೊಂದುತ್ತಾನೆ.

ಅತಿವಾದಾ ಯೇ ವಕ್ತ್ರತೋ ನಿಃಸರಂತಿ
ಯೈರಾಹತಃ ಶೋಚತಿ ರಾತ್ರ್ಯಹಾನಿ ।
ಶನೈರ್ದುಃಖಂ ಶಸ್ತ್ರವಿಷಾಗ್ನಿಜಾತಂ
ರೋಹೇನ್ನ ಸಂರೋಹತಿ ವಾಗ್ಬ್ರಣಂ ತು ॥೨೪॥

ಶಸ್ತ್ರ ವಿಷ ಮತ್ತು ಅಗ್ನಿಗಳಿಂದ ಉಂಟಾದ ಗಾಯವು ಕ್ರಮೇಣ ವಾಸಿಯಾಗಿ ಅಂಗವು ಬೆಳೆಯುತ್ತದೆ. ಆದರೆ ಪರರ ಬಾಯಿಂದ ಬಂದ ನಿಂದೆಯ ಮಾತುಗಳಿಂದ ವಿದ್ದನಾಗಿ ಹಗಲೂ, ರಾತ್ರಿಯೂ ಯಾರು ದುಃಖಪಡುತ್ತಾನೋ, ಅವನಿಗೆ ಉಂಟಾದ ಮಾತಿನ ಗಾಯವು ವಾಸಿಯಾಗಿ ಮೊದಲಿನ ಪ್ರೀತಿಯ ಅಂಕುರವನ್ನು ಎಂದೂ ಹುಟ್ಟಿಸುವುದಿಲ್ಲ.

ಸಂರೋಹೇದಾಯುಧೈಶ್ಛಿನ್ನಂ ಸಂರೋಹೇದ್ ದಗ್ಧಮಗ್ನಿನಾ ।
ವಾಕ್‌ಕ್ಷತಂ ತು ನ ಸಂರೋಹೇದಾಶರೀರಂ ಶರೀರಿಣಾಮ್ ॥೨೫॥

ಆಯುಧದಿಂದ ಕತ್ತರಿಸಲ್ಪಟ್ಟ ಮರವು ಬೆಳೆಯುತ್ತದೆ. ಅಗ್ನಿಯಿಂದ ದಹಿಸಲ್ಪಟ್ಟ ವನವು ಪುನಃ ಬೆಳೆಯುತ್ತದೆ. ಆದರೆ ವಾಗ್ಬಾಣದಿಂದ ದಹಿಸಲ್ಪಟ್ಟ ಪ್ರೇಮಾಂಕುರವು ಎಂದೂ ಬೆಳೆಯುವುದಿಲ್ಲ. ಆ ದಾಹವು ಶರೀರವಿರುವರೆಗೂ ಉಳಿಯುತ್ತದೆ.

ಸಂರೋಹತಿ ಶನೈರ್ವಿದ್ಧಂ ವನಂ ಪರಶುನಾ ಹತಮ್ ।
ವಾಚಾ ದುರುಕ್ತಂ ಬೀಭತ್ಸಂ ನ ಸಂರೋಹತಿ ವಾಕ್‌ಕ್ಷತಮ್ ॥೨೬॥

ಬಾಣದಿಂದ ಕತ್ತರಿಸಲ್ಪಟ್ಟ ಅಥವಾ ಕೊಡಲಿಯಿಂದ ಕಡಿಯಲ್ಪಟ್ಟ ವನವು ನಿಧಾನವಾಗಿ ಬೆಳೆಯುತ್ತದೆ. ಆದರೆ ದುರ್ವಚನಗಳಿಂದ ಉಂಟಾದ ಹೇಯವಾದ ವ್ರಣವು ಎಂದೂ ಪ್ರೇಮಾಂಕುರವನ್ನು ಬೆಳೆಸುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಅಷ್ಟಷಷ್ಟಿತಮೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ಅರವತ್ತೊಂಭತ್ತನೆಯ ಅಧ್ಯಾಯ

(ಶುಕ್ರರ ಕೋಪವಚನ, ವೃಷಪರ್ವನ ಕ್ಷಮಾಯಾಚನೆ ಮತ್ತು ಶರ್ಮಿಷ್ಠೆಯ ದಾಸ್ಯಭಾವ)

ವೈಶಂಪಾಯನಃ

ತತಃ ಕಾವ್ಯೋ ಭೃಗುಶ್ರೇಷ್ಠಃ ಸಮನ್ಯುರುಪಗಮ್ಯ ಚ ।
ಪ್ರವಿಶ್ಯಾಂತಃಪುರಂ ಶುಕ್ರೋ ವಂದಿತೋ ವೃಷಪರ್ವಣಾ ॥೧॥

ಅನಂತರ ಕವಿಗಳ ಮಕ್ಕಳಾದ ಭೃಗುಶ್ರೇಷ್ಠರಾದ ಶುಕ್ರಾಚಾರ್ಯರು ಸಿಟ್ಟಿನಿಂದ ವೃಷಪರ್ವನ ಅಂತಃಪುರಕ್ಕೆ ಬಂದು ಅವನಿಂದ ನಮಸ್ಕರಿಸಲ್ಪಟ್ಟರು.

ವೃಷಪರ್ವಾಣಮಾಸೀನಮಿತ್ಯುವಾಚಾವಿಚಾರಯನ್ ।
ನಾಧರ್ಮಶ್ಚರಿತೋ ರಾಜನ್ ಸದ್ಯಃ ಫಲತಿ ಗೌರಿವ ॥೨॥

ಪುತ್ರೇಷು ಯಾ ನಪ್ತೃಷು ವಾ ನ ಚೇದಾತ್ಮನಿ ಪಶ್ಯತಿ ।
ಫಲತ್ಯೇವ ಧ್ರುವಂ ಪಾಪಂ ಗುರುಭುಕ್ತಮಿವೋದರೇ ॥೩॥

ಕುಳಿತಿದ್ದ ವೃಷಪರ್ವನನ್ನು ಕುರಿತು ಏನೂ ವಿಚಾರ ಮಾಡದೆ ಹೀಗೆ ಮಾತನಾಡಿದರು. ಎಲೈ ರಾಜನೇ, ಆಚರಿಸಿದ ಅಧರ್ಮವು ತಕ್ಷಣದಲ್ಲಿ ಫಲವನ್ನು ಕೊಡುವುದಿಲ್ಲ. ಆ ಫಲವು ಮಕ್ಕಳಲ್ಲಾಗಲೀ, ಮೊಮ್ಮಕ್ಕಳಲ್ಲಾಗಲೀ ಅಥವಾ ತನ್ನಲ್ಲೇ ಆಗಲಿ ಕಾಣಿಸಿಕೊಳ್ಳುತ್ತದೆ. ಆದರೆ, ದುರುಕ್ತಿಯು ತಕ್ಷಣದಲ್ಲಿ ಫಲವನ್ನು ಕೊಡುತ್ತದೆ. ಅತಿಯಾದ ಭೋಜನವು ಉದರದಲ್ಲಿ ತನ್ನ ಫಲವನ್ನು ತೋರಿಸಿದಂತೆ ದುರುಕ್ತಿಯು ನಿಶ್ಚಯವಾಗಿ ಪಾಪದ ಫಲವನ್ನು ಉಂಟುಮಾಡುತ್ತದೆ.

ಅಧೀಯಾನಂ ಹಿತಂ ರಾಜನ್ ಕ್ಷಾಂತಂ ದಾಂತಂ ಜಿತೇಂದ್ರಿಯಮ್।
ಯದಘಾತಯಥಾ ಕಚಂ ವಿಪ್ರಮಾಂಗಿರಸಂ ತಥಾ ।
ಅಪಾಪಶೀಲಂ ಧರ್ಮಜ್ಞಂ ಶುಶ್ರೂಷುಂ ಮದ್‌ಗೃಹಾಗತಮ್ ॥೪॥

ಎಲೈ ರಾಜನೇ, ನನ್ನ ಬಳಿ ಅಧ್ಯಯನವನ್ನು ಮಾಡುತ್ತಿದ್ದ ಕ್ಷಮಾಶೀಲನೂ, ಜಿತೇಂದ್ರಿಯನೂ, ಅಂಗಿರಸರ ಪುತ್ರನೂ ಆದ ಪ್ರಿಯನಾದ ಕಚನನ್ನು ನೀನು ಕೊಲ್ಲಿಸಿದೆ. ಅವನು ಅಪಾಪಶೀಲನೂ, ಧರ್ಮವನ್ನು ತಿಳಿದವನೂ ಮತ್ತು ಗುರು ಶುಶ್ರೂಷೆಯನ್ನೂ ಮಾಡುವವನೂ ಆಗಿ ನನ್ನ ಮನೆಗೆ ಬಂದಿದ್ದನು.

ಶರ್ಮಿಷ್ಠಯಾ ದೇವಯಾನೀ ಕ್ರೂರಮುಕ್ತಾ ಬಹು ಪ್ರಭೋ ।
ವಿಪ್ರಕೃತ್ಯ ಚ ಸಂರಂಭಾತ್ ಕೂಪೇ ಕ್ಷಿಪ್ತಾ ಮನಸ್ವಿನೀ ॥೫॥

ಎಲೈ ರಾಜನೇ, ಶರ್ಮಿಷ್ಠೆಯು ದೇವಯಾನಿಯನ್ನು ಕುರಿತು ಅನೇಕ ದುರ್ವಚನಗಳನ್ನು ಆಡಿದ್ದಾಳೆ. ಅವಳಿಗೆ ಅಪಕಾರವನ್ನು ಮಾಡಿ ಧೈರ್ಯಶಾಲಿನಿಯಾದ ಶರ್ಮಿಷ್ಠೆಯು ಅವಳನ್ನು ಕೂಪದೊಳಗೆ ಎಸೆದಿದ್ದಾಳೆ.

ಸಾ ನ ಕಲ್ಪ್ಯೇತ ವಾಸಾಯ ತಯಾ ವಾ ರಹಿತಃ ಕಥಮ್ ।
ವಸೇಯಮಿಹ ತಸ್ಮಾಚ್ಚ ತ್ಯಜೇಯಂ ವಿಷಯಂ ತವ ॥೬॥

ಅವಳು ನಿನ್ನ ಮನೆಯಲ್ಲಿ ವಾಸಿಸಲು ಇಷ್ಟಪಡುವುದಿಲ್ಲ. ಅವಳಿಲ್ಲದೆ ನಾನೂ ಸಹ ಇಲ್ಲಿ ವಾಸಮಾಡುವುದಿಲ್ಲ. ಆದ್ದರಿಂದ ನಿನ್ನ ರಾಜ್ಯವನ್ನು ಬಿಟ್ಟು ಹೋಗುತ್ತೇನೆ.

ವೃಷಪರ್ವನ್ ನಿಬೋಧೇದಂ ತ್ಯಕ್ಷ್ಯಾಮಿ ತ್ವಾಂ ಸಬಾಂಧವಮ್ ।
ಮಾ ಶೋಚ ವೃಷಪರ್ವಂಸ್ತ್ವಂ ಮಾ ಕ್ರುಧಸ್ತ್ವಂ ವಿಶಾಂಪತೇ ॥೭॥

ಎಲೈ ವೃಷಪರ್ವನೇ ನಿನ್ನನ್ನೂ ಮತ್ತು ನಿನ್ನ ಬಾಂಧವರನ್ನೂ ನಾನು ಬಿಟ್ಟು ಹೋಗುತ್ತೇನೆ. ಇದನ್ನು ತಿಳಿ. ಎಲೈ ರಾಜನೇ, ನೀನು ಶೋಕಪಡಬೇಡ ಅಥವಾ ಕೋಪಗೊಳ್ಳಲೂ ಬೇಡ.

ಸ್ಥಾತುಂ ತೇ ವಿಷಯೇ ರಾಜನ್ ನ ಶಕ್ಷ್ಯಾಮಿ ವಿನಾ ತಯಾ ।
ಅಸ್ಯಾ ಗತಿರ್ಗತಿರ್ಮಹ್ಯಂ ಪ್ರಿಯಮಸ್ಯಾಃ ಪ್ರಿಯಂ ಮಮ ॥೮॥

ದೇವಯಾನಿಯು ಇಲ್ಲದೇ ನಿನ್ನ ರಾಜ್ಯದಲ್ಲಿ ನಾನು ನಿಲ್ಲಲಾರೆ. ಅವಳಿಗೆ ಏನು ಗತಿಯೋ ಅದೇ ನನಗೂ ಗತಿ. ಅವಳಿಗೆ ಯಾವುದು ಪ್ರಿಯವೋ ಅದೇ ನನಗೂ ಪ್ರಿಯ.

ವೃಷಪರ್ವಾ

ಯದಿ ಬ್ರಹ್ಮನ್ ಘಾತಯಾಮಿ ಯದಿ ಚೋಪದಿಶಾಮ್ಯಹಮ್ ।
ಶರ್ಮಿಷ್ಠಯಾ ದೇವಯಾನೀಂ ತತೋ ಗಚ್ಛಾಮ್ಯಸದ್ಗತಿಮ್ ॥೯॥

ಬ್ರಾಹ್ಮಣರೇ, ಒಂದು ಪಕ್ಷ ನಾನು ಕಚನನ್ನು ಕೊಲ್ಲಿಸಿದ್ದರೆ ಅಥವಾ ಶರ್ಮಿಷ್ಠೆಗೆ ದೇವಯಾನಿಯನ್ನು ಬಾವಿಗೆ ತಳ್ಳುವಂತೆ ಉಪದೇಶಮಾಡಿದ್ದರೆ ನನಗೆ ದುರ್ಗತಿಯೇ ಆಗಲಿ.

ಶುಕ್ರಃ

ಅಹೋ ಮಾಮಭಿಜಾನಾಸಿ ದೈತ್ಯ ಮಿಥ್ಯಾಪ್ರಲಾಪಿನಮ್ ।
ತಥೇಮಮಾತ್ಮನೋ ದೋಷಂ ಮಯಿ ಕರ್ತುಂ ಚಿಕೀರ್ಷಸಿ ॥೧೦॥

ಎಲೈ ದೈತ್ಯನೇ, ಆಶ್ಚರ್ಯ! ನಾನು ಸುಳ್ಳು ಮಾತಾಡುವವನೆಂದು ಕಲ್ಪಿಸುತ್ತಿದ್ದೀಯೆ, ಹಾಗೆಯೇ ನಿನ್ನ ಈ ತಪ್ಪನ್ನು ನನ್ನ ಮೇಲೆ ಹೊರಿಸಲು ಬಯಸುತ್ತಿದ್ದೀಯೆ.

ವೃಷಪರ್ವಾ

ನಾಧರ್ಮಂ ನ ಮೃಷೋಕ್ತಂ ವಾ ತ್ವಯಿ ಜಾನಾಮಿ ಭಾರ್ಗವ ।
ತ್ವಯಿ ಸತ್ಯಂ ಚ ಧರ್ಮಂ ಚ ವಿಜಾನಾಮಿ ಪ್ರಸೀದ ಮೇ ॥೧೧॥

ಎಲೈ ಶುಕ್ರಾಚಾರ್ಯರೇ, ನಾನು ನಿಮ್ಮನ್ನು ಕುರಿತು ಅಧರ್ಮವನ್ನಾಗಲೀ, ಮಿಥ್ಯಾವಚನಗಳನ್ನಾಗಲೀ ಎಂದೂ ಆರೋಪಿಸಿಲ್ಲ ಎಂದು ನಿಮಗೆ ತಿಳಿದಿದೆ. ತಮ್ಮಲ್ಲಿ ಸತ್ಯವೂ, ಧರ್ಮವೂ ಪ್ರತಿಷ್ಠಿತವಾಗಿದೆ ಎಂದು ತಿಳಿದಿದ್ದೇನೆ. ನನಗೆ ಅನುಗ್ರಹವನ್ನು ಮಾಡಿ.

ಯದ್ಯಸ್ಮಾನಪಹಾಯ ತ್ವಮಿತೋ ಗಚ್ಛಸಿ ಭಾರ್ಗವ ।
ಸಮುದ್ರಂ ಸಂಪ್ರವೇಕ್ಷ್ಯಾಮಿ ನಾನ್ಯದಸ್ತಿ ಪರಾಯಣಮ್ ॥೧೨॥

ಎಲೈ ಶುಕ್ರಾಚಾರ್ಯರೇ, ನೀವು ನಮ್ಮನ್ನು ಬಿಟ್ಟು ಇಲ್ಲಿಂದ ಹೋಗುವುದಾದರೆ ನಾನು ಸಮುದ್ರವನ್ನು ಪ್ರವೇಶಿಸುತ್ತೇನೆ. ನನಗೆ ಬೇರೆ ಉಪಾಯವಿಲ್ಲ.

ಯದ್ಯೇವ ದೇವಾನ್ ಗಚ್ಛೇಸ್ತ್ವಂ ಮಾಂ ಚ ತ್ಯಕ್ತ್ವಾ ಗ್ರಹಾಧಿಪ ।
ಸರ್ವತ್ಯಾಗಂ ತತಃ ಕೃತ್ವಾ ಪ್ರವಿಶಾಮಿ ಹುತಾಶನಮ್ ॥೧೩॥

ಗ್ರಹಾಧಿಪರೇ, ಒಂದು ಪಕ್ಷ ನನ್ನನ್ನು ಬಿಟ್ಟು ನೀವು ದೇವತೆಗಳ ಪಕ್ಷಕ್ಕೆ ಹೋಗುವುದಾದರೆ ನಾನು ಸರ್ವತ್ಯಾಗವನ್ನು ಮಾಡಿ ಅಗ್ನಿಯನ್ನು ಪ್ರವೇಶಿಸುತ್ತೇನೆ.

ಶುಕ್ರಃ

ಸಮುದ್ರಂ ಪ್ರವಿಶ ತ್ವಂ ವಾ ಅಗ್ನಿಂ ಪ್ರಜ್ವಲಿತಂ ತಥಾ ।
ದುಹಿತುರ್ನಾಪ್ರಿಯಂ ಸೋಢುಂ ಶಕ್ತೋಽಹಂ ದಯಿತಾ ಹಿ ಮೇ॥

ಸಮುದ್ರವನ್ನು ಬೇಕಾದರೂ ಪ್ರವೇಶಿಸು, ಪ್ರಜ್ವಲಿತವಾದ ಅಗ್ನಿಯನ್ನು ಬೇಕಾದರೂ ಪ್ರವೇಶಿಸು. ನನ್ನ ಮಗಳಿಗೆ ಅಪ್ರಿಯವುಂಟಾದರೆ ನಾನು ಅದನ್ನು ಸಹಿಸಲಾರೆ. ಅವಳು ನನಗೆ ಪ್ರಿಯಳಾದವಳು.

ಪ್ರಸಾದ್ಯತಾಂ ದೇವಯಾನೀ ಜೀವಿತಂ ಹ್ಯತ್ರ ಮೇ ಸ್ಥಿತಮ್ ।
ಪ್ರಸನ್ನಾ ದೇವಯಾನೀ ಚೇತ್ ಪ್ರಿಯಂ ನಾನ್ಯತರಂ ಮಮ ।
ಯೋಗಕ್ಷೇಮರತಸ್ತೇಽಹಮಿಂದ್ರಸ್ಯೇವ ಬೃಹಸ್ಪತಿಃ ॥೧೫॥

ದೇವಯಾನಿಯನ್ನು ಒಲಿಸು. ನನ್ನ ಜೀವವು ಅವಳಲ್ಲಿದೆ. ದೇವಯಾನಿಯು ಸಂತೋಷಗೊಂಡರೆ ನನಗೆ ಅದಕ್ಕಿಂತ ಪ್ರಿಯವಾದುದು ಯಾವುದೂ ಇಲ್ಲ. ಇಂದ್ರನ ಯೋಗಕ್ಷೇಮವನ್ನು ಬೃಹಸ್ಪತಿಯು ನೋಡಿದಂತೆ ನಾನು ಇಲ್ಲೇ ಇದ್ದು ನಿನ್ನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತೇನೆ.

ವೃಷಪರ್ವಾ

ಯತ್ಕಿಂಚಿದಸುರೇಂದ್ರಾಣಾಂ ವಸು ವಿದ್ಯೇತ ಭಾರ್ಗವ ।
ಮಮ ಹಸ್ತಿಗವಾಶ್ವಂ ವಾ ತಸ್ಯ ತ್ವಂ ಮಮ ಚೇಶ್ವರಃ ॥೧೬॥

ಎಲೈ ಶುಕ್ರಾಚಾರ್ಯರೇ, ಅಸುರೇಂದ್ರರಿಗೆ ಯಾವ ಸಂಪತ್ತು, ಭೋಗಗಳು, ಅಶ್ವಗಳು ಮತ್ತು ಗಜಗಳು ಇವೆಯೋ ನೀವು ಅವೆಲ್ಲಕ್ಕೂ ಮತ್ತೂ ನನಗೂ ಒಡೆಯರಾದವರು.

ಶುಕ್ರಃ

ಯತ್ಕಿಂಚಿದಸ್ತಿ ದ್ರವಿಣಂ ದೈತ್ಯೇಂದ್ರಾಣಾಮಿಹಾಸುರ ।
ತಸ್ಯೇಶ್ವರೋಽಹಂ ಯದಿ ಚೇದ್ ದೇವಯಾನೀ ಪ್ರಸಾದ್ಯತಾಮ್॥೧೭॥

ದೈತ್ಯೇಂದ್ರರ ಬಳಿ ಇರುವ ಎಲ್ಲಾ ಸಂಪತ್ತಿಗೂ ನಾನು ಒಡೆಯನಾದರೆ ದೇವಯಾನಿಯನ್ನು ಸಂತೋಷಪಡಿಸು.

ವೈಶಂಪಾಯನಃ

ಶ್ರುತ್ವಾ ಶುಕ್ರಸ್ಯ ವಚನಂ ವೃಷಪರ್ವಾ ಸಬಾಂಧವಃ ।
ದೇವಯಾನೀಂ ಪ್ರಸೀದೇತಿ ಪಪಾತ ಭುವಿ ಪಾದಯೋಃ ॥೧೮॥

ಶುಕ್ರಾಚಾರ್ಯರ ಮಾತನ್ನು ಕೇಳಿ ವೃಷಪರ್ವನು ತನ್ನ ಬಾಂಧವರೊಡಗೂಡಿ ದೇವಯಾನಿಯ ಪಾದಗಳ ಮೇಲೆ ಬಿದ್ದು ಪ್ರಸನ್ನಳಾಗು ಎಂದು ಕೇಳಿಕೊಂಡನು.

ದೇವಯಾನೀ

ಯದಿ ತ್ವಮೀಶ್ವರಸ್ತಾತ ರಾಜ್ಞೋ ವಿತ್ತಸ್ಯ ಭಾರ್ಗವ ।
ನಾಭಿಜಾನಾಮಿ ತತ್ತೇಽಹಂ ರಾಜಾ ತು ವದತು ಸ್ವಯಮ್ ॥೧೯॥

ತಂದೆಯೇ, ನೀನು ಒಂದು ಪಕ್ಷ ರಾಜನ ಎಲ್ಲಾ ಸಂಪತ್ತಿಗೂ ಒಡೆಯನಾದರೆ ನಾನು ಆ ನಿನ್ನ ಮಾತನ್ನು ನಂಬುವುದಿಲ್ಲ. ರಾಜನು ತಾನೇ ಆ ಮಾತನ್ನು ಹೇಳಲಿ.

ವೃಷಪರ್ವಾ

ಸ್ತುತ್ಯೋ ವಂದ್ಯಶ್ಚ ಸತತಂ ಮಯಾ ತಾತಶ್ಚ ತೇ ಶುಭೇ ।
ಯತ್ಕಾಮಮಭಿಕಾಮಾಽಸಿ ದೇವಯಾನಿ ಶುಚಿಸ್ಮಿತೇ ।
ತತ್ ತೇಽಹಂ ಸಂಪ್ರದಾಸ್ಯಾಮಿ ಯದಿ ಚೇದಪಿ ದುರ್ಲಭಮ್ ॥೨೦॥

ಮಂಗಳಸ್ವರೂಪಳಾದವಳೇ, ನಿನ್ನ ತಂದೆಯು ನನಗೆ ಯಾವಾಗಲೂ ಸ್ತುತ್ಯನೂ, ವಂದ್ಯನೂ ಆಗಿದ್ದಾನೆ. ಶುಚಿಸ್ಮಿತೆಯಾದ ದೇವಯಾನಿಯೇ, ನಿನ್ನ ಮನಸ್ಸಿನಲ್ಲಿ ಏನು ಆಸೆ ಇದೆ ಎಂದು ಹೇಳು. ದುರ್ಲಭವಾದರೂ ನಾನು ನಿನಗೆ ಅದನ್ನು ಕೊಡುತ್ತೇನೆ.

ದೇವಯಾನೀ

ದಾಸೀಂ ಕನ್ಯಾಸಹಸ್ರೇಣ ಶರ್ಮಿಷ್ಠಾಮಭಿಕಾಮಯೇ ।
ಅನುಗಚ್ಛೇತ್ ತು ಸಾ ಮಹ್ಯಂ ಯತ್ರ ದಾಸ್ಯತಿ ಮೇ ಪಿತಾ ॥೨೧॥

ನನ್ನನ್ನು ನನ್ನ ತಂದೆ ಯಾರಿಗೆ ದಾನಮಾಡುತ್ತಾನೋ ಅಲ್ಲಿಗೆ ಶರ್ಮಿಷ್ಠೆಯು ಕನ್ಯಾಸಹಸ್ರದಿಂದ ಕೂಡಿ ದಾಸಿಯಾಗಿ ನನ್ನ ಹಿಂದೆ ಬರಬೇಕು. ಇದು ನನ್ನ ಆಸೆ.

ವೃಷಪರ್ವಾ

ಉತ್ತಿಷ್ಠ ಹಂಸಗತಿಕೇ ಶರ್ಮಿಷ್ಠಾಂ ಶೀಘ್ರಮಾನಯ ।
ಯಚ್ಚ ಕಾಮಯತೇ ಕರ್ತುಂ ದೇವಯಾನೀ ಕರೋತು ತತ್ ॥೨೨॥

ಹಂಸಗತಿಕೇ, ಎದ್ದು ಹೋಗಿ ಬೇಗ ಶರ್ಮಿಷ್ಠೆಯನ್ನು ಕರೆದುಕೊಂಡು ಬಾ, ದೇವಯಾನಿಯು ಅವಳು ಏನು ಮಾಡಬೇಕೆಂದು ಬಯಸುತ್ತಾಳೋ ಅವಳು ಅದನ್ನು ಮಾಡಲಿ.

ವೈಶಂಪಾಯನಃ

ತತೋ ಧಾತ್ರೀ ಗೃಹಂ ಗತ್ವಾ ಶರ್ಮಿಷ್ಠಾಂ ವಾಕ್ಯಮಬ್ರವೀತ್ ।
ಉತ್ತಿಷ್ಠ ಭದ್ರೇ ಶರ್ಮಿಷ್ಠೇ ಜ್ಞಾತೀನಾಂ ಸುಖಮಾವಹ ॥೨೩॥

ತ್ಯಜತಿ ಬ್ರಾಹ್ಮಣಃ ಶಿಷ್ಯಾನ್ ದೇವಯಾನ್ಯಾ ಪ್ರಚೋದಿತಃ ।
ಸಾ ಯಂ ಕಾಮಯತೇ ಕಾಮಂ ದೇವಯಾನೀ ಕುರುಷ್ವ ತತ್ ॥೨೪॥

ಅನಂತರ ಧಾತ್ರಿಯು ಶರ್ಮಿಷ್ಠೆಯ ಮನೆಗೆ ಹೋಗಿ ಅವಳನ್ನು ಕುರಿತು ಮಂಗಳಸ್ವರೂಪಳಾದ ಶರ್ಮಿಷ್ಠೆಯೇ, ಎದ್ದು ಬಾಂಧವರಿಗೆ ಸುಖವನ್ನು ಉಂಟುಮಾಡು. ದೇವಯಾನಿಯ ಪ್ರೇರಣೆಗೆ ಒಳಗಾದ ಶುಕ್ರಾಚಾರ್ಯರು ಶಿಷ್ಯರನ್ನು ಬಿಟ್ಟುಹೋಗುತ್ತಿದ್ದಾರೆ. ದೇವಯಾನಿಯು ಏನು ಬಯಸುತ್ತಾಳೋ ನೀನು ಅದನ್ನು ನೆರವೇರಿಸು ಎಂದು ಹೇಳಿದಳು.

ಶರ್ಮಿಷ್ಠಾ

ಯಂ ಸಾ ಕಾಮಯತೇ ಕಾಮಂ ಕರವಾಣ್ಯಹಮದ್ಯ ತಮ್ ।
ಮಾ ತ್ವೇವೋಪಗಮೇಚ್ಛುಕ್ರೋ ದೇವಯಾನ್ಯಾ ಪ್ರಚೋದಿತಃ ॥೨೫॥

ದೇವಯಾನಿಯು ಏನನ್ನು ಅಪೇಕ್ಷಿಸುತ್ತಾಳೆಯೋ ಅದನ್ನು ನಾನು ಈ ದಿನ ಮಾಡುವೆನು. ದೇವಯಾನಿಯಿಂದ ಪ್ರೇರಿತರಾದ ಶುಕ್ರಾಚಾರ್ಯರು ಎಲ್ಲಿಗೂ ಹೋಗದಿರಲಿ.

ವೈಶಂಪಾಯನಃ

ತತಃ ಕನ್ಯಾಸಹಸ್ರೇಣ ವೃತಾ ಶಿಬಿಕಯಾ ತದಾ ।
ಪಿತುರ್ನಿಯೋಗಾತ್ ತ್ವರಿತಾ ನಿಶ್ಚಕ್ರಾಮ ಪುರೋತ್ತಮಾತ್ ॥೨೬॥

ಅನಂತರ ಕನ್ಯಾಸಹಸ್ರದಿಂದ ಸುತ್ತುವರಿಯಲ್ಪಟ್ಟು ಶಿಬಿಕೆಯನ್ನೇರಿ ತಂದೆಯ ಅಪ್ಪಣೆಯಂತೆ ಶರ್ಮಿಷ್ಠೆಯು ಶ್ರೇಷ್ಠವಾದ ತಮ್ಮ ಪಟ್ಟಣದಿಂದ ಶೀಘ್ರವಾಗಿ ಹೊರಗೆ ಬಂದಳು.

ಶರ್ಮಿಷ್ಠಾ

ಅಹಂ ದಾಸೀಸಹಸ್ರೇಣ ದಾಸೀ ತೇ ಪರಿಚಾರಿಕಾ ।
ಅನು ತ್ವಾಂ ತತ್ರ ಯಾಸ್ಯಾಮಿ ಯತ್ರ ದಾಸ್ಯತಿ ತೇ ಪಿತಾ ॥೨೭॥

ನಾನು ಸಹಸ್ರದಾಸಿಯರೊಡಗೂಡಿ ನಿನಗೆ ದಾಸಿಯಾಗಿ ಪರಿಚಾರಿಕೆಯನ್ನು ಮಾಡುತ್ತೇನೆ. ನಿನ್ನ ತಂದೆಯು ನಿನ್ನನ್ನು ಯಾರಿಗೆ ಕೊಡುತ್ತಾನೋ ಅಲ್ಲಿಗೆ ನಾನೂ ಸಹ ನಿನ್ನನ್ನು ಹಿಂಬಾಲಿಸುತ್ತೇನೆ.

ದೇವಯಾನೀ

ಸ್ತುವತೋ ದುಹಿತಾ ಚಾಹಂ ವಂದಿನಃ ಪ್ರತಿಗೃಹ್ಣತಃ
ಸ್ತೂಯಮಾನಸ್ಯ ದುಹಿತಾ ಕಥಂ ದಾಸೀ ಭವಿಷ್ಯಸಿ ॥೨೮॥

ನಾನು ಸ್ತೋತ್ರಮಾಡುವವನ, ವಂದಿಯಾದವನ, ದಾನವನ್ನು ಸ್ವೀಕಾರಮಾಡುವವನ ಮಗಳು. ಸ್ತೋತ್ರಮಾಡಲ್ಪಡುವವನ ಮಗಳಾದ ನೀನು ನನಗೆ ಹೇಗೆ ದಾಸಿಯಾಗುತ್ತೀಯೆ?

ಶರ್ಮಿಷ್ಠಾ

ಯೇನ ಕೇನ ಚಿದಾರ್ತಾನಾಂ ಜ್ಞಾತೀನಾಂ ಯತ್ ಸುಖಾವಹಮ್।
ಸರ್ವಮಾದೃತ್ಯ ಕರ್ತವ್ಯಮೇಷ ಧರ್ಮಃ ಸನಾತನಃ ॥೨೯॥

ಏವಂ ಕೃತ್ವಾ ಕರಿಷ್ಯಾಮಿ ಯನ್ಮಾಂ ವಕ್ಷ್ಯಸಿ ಶೋಭನೇ ।
ಅತಸ್ತ್ವಾಮನುಯಾಸ್ಯಾಮಿ ಯತ್ರ ದಾಸ್ಯತಿ ತೇ ಪಿತಾ ॥೩೦॥

ಯಾವ ಪ್ರಕಾರದಿಂದಲಾಗಲೀ ಆರ್ತರಾದ ಬಂಧುಗಳಿಗೆ ಸುಖವನ್ನು ಉಂಟುಮಾಡಬೇಕು. ಇದು ಸನಾತನ ಧರ್ಮ. ಎಲೈ ಶೋಭನಳೇ, ಇದನ್ನು ತಿಳಿದು ನಾನು ನೀನು ಹೇಳಿದಂತೆ ಮಾಡುತ್ತೇನೆ. ಆದ್ದರಿಂದ ನಿನ್ನ ತಂದೆಯು ನಿನ್ನನ್ನು ಯಾರಿಗೆ ಕೊಡುವನೋ ಅಲ್ಲಿ ನಿನ್ನನ್ನು ಹಿಂಬಾಲಿಸುವೆನು.

ವೈಶಂಪಾಯನಃ

ಪ್ರತಿಶ್ರುತೇ ದಾಸಭಾವೇ ದುಹಿತ್ರಾ ವೃಷಪರ್ವಣಃ
ದೇವಯಾನೀ ನೃಪಶ್ರೇಷ್ಠ ಪಿತರಂ ತಮಥಾಬ್ರವೀತ್ ॥೩೧॥

ಜನಮೇಜಯನೇ, ಹೀಗೆ ವೃಷಪರ್ವನ ಮಗಳಾದ ಶರ್ಮಿಷ್ಠೆಯು ದಾಸ್ಯಭಾವವನ್ನು ಪ್ರತಿಜ್ಞೆಮಾಡುತ್ತಿರಲು ದೇವಯಾನಿಯು ತಂದೆಯನ್ನುಕುರಿತು ಹೀಗೆ ಹೇಳಿದಳು.

ದೇವಯಾನೀ

ಪ್ರವಿಶಾಮ ಪುರಂ ತಾತ ತುಷ್ಟಾಽಸ್ಮಿ ದ್ವಿಜಸತ್ತಮ ।
ಅಮೋಘಂ ತವ ವಿಜ್ಞಾನಮಸ್ತಿ ವಿದ್ಯಾಬಲಂ ಚ ತೇ ॥೩೨॥

ಬ್ರಾಹ್ಮಣಶ್ರೇಷ್ಠರಾದ ತಂದೆಯೇ, ನಾನು ಸಂತುಷ್ಟಳಾಗಿದ್ದೇನೆ. ಮತ್ತೆ ಪಟ್ಟಣವನ್ನು ಪ್ರವೇಶಿಸೋಣ. ನಿಮ್ಮ ವಿದ್ಯಾಬಲವು ಮತ್ತು ಜ್ಞಾನಬಲವು ಅಮೋಘವಾದದ್ದು.

ವೈಶಂಪಾಯನಃ

ಏವಮುಕ್ತೋ ದುಹಿತ್ರಾ ಸ ಭೃಗುಶ್ರೇಷ್ಠೋ ಮಹಾತಪಾಃ ।
ಪ್ರವಿವೇಶ ಪುರಂ ಹೃಷ್ಟಃ ಪೂಜಿತಃ ಸರ್ವದಾನವೈಃ ॥೩೩॥

ಹೀಗೆ ಮಗಳಿಂದ ಹೇಳಲ್ಪಟ್ಟ ಮಹಾತಪಸ್ವಿಗಳಾದ ಭೃಗುಶ್ರೇಷ್ಠರಾದ ಶುಕ್ರಾಚಾರ್ಯರು ಸಂತೋಷದಿಂದ ಪಟ್ಟಣವನ್ನು ಪ್ರವೇಶಿಸಿ ಎಲ್ಲ ದಾನವರಿಂದಲೂ ಪೂಜಿಸಲ್ಪಟ್ಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಏಕೋನಸಪ್ತತಿತಮೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಅರವತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ತನೆಯ ಅಧ್ಯಾಯ

(ಯಯಾತಿ ದೇವಯಾನಿಯರ ವಿವಾಹ, ಯಯಾತಿಯನ್ನು ಕುರಿತು ಶುಕ್ರಾಚಾರ್ಯರ ಆದೇಶ)

ವೈಶಂಪಾಯನಃ

ಅಥ ದೀರ್ಘೇಣ ಕಾಲೇನ ದೇವಯಾನೀ ನೃಪೋತ್ತಮ ।
ವನಂ ತದೇವ ನಿರ್ಯಾತಾ ಕ್ರೀಡಾರ್ಥಂ ವರವರ್ಣಿನೀ ॥೧॥

ಎಲೈ ರಾಜನೇ, ಅನಂತರ ಬಹಳ ದಿನಗಳು ಕಳೆದ ಮೇಲೆ ಸುಂದರಿಯಾದ ದೇವಯಾನಿಯು ಕ್ರೀಡೆಗೋಸ್ಕರವಾಗಿ ಅದೇ ವನಕ್ಕೆ ಹೊರಟಳು.

ತೇನ ದಾಸೀಸಹಸ್ರೇಣ ಸಾರ್ಧಂ ಶರ್ಮಿಷ್ಠಯಾ ತದಾ ।
ತಮೇವ ದೇಶಂ ಸಂಪ್ರಾಪ್ತಾ ಯಥಾಕಾಮಂ ಚಚಾರ ಸಾ ॥೨॥

ಆ ಸಹಸ್ರದಾಸಿಯರಿಂದಲೂ, ಮತ್ತು ಶರ್ಮಿಷ್ಠೆಯಿಂದಲೂ ಕೂಡಿದವಳಾಗಿ ಕಾಡಿನ ಅದೇ ಪ್ರದೇಶಕ್ಕೆ ಬಂದು ತನ್ನ ಮನಸ್ಸಿಗೆ ಬಂದಂತೆ ತಿರುಗಾಡಿದಳು.

ತಾಭಿಃ ಸಖೀಭಿಃ ಸಹಿತಾಃ ಸರ್ವಾಭಿರ್ಮುದಿತಾ ಭೃಶಮ್ ।
ಕ್ರೀಡಿತ್ವೋಪರತಾಃ ಸರ್ವಾಃ ಪಿಬಂತ್ಯೋ ಮಧು ಮಾಧವಮ್ ।
ಖಾದಂತ್ಯೋ ವಿವಿಧಾನ್ ಭಕ್ಷ್ಯಾನ್ ವಿದಂಶಂತ್ಯಃ ಫಲಾನಿ ಚ ॥೩॥

ಹರ್ಷಗೊಂಡಿದ್ದ ಆ ಎಲ್ಲ ಸಖಿಯರ ಜೊತೆಯಲ್ಲಿ ಆಟಗಳನ್ನಾಡಿ, ಆಟವನ್ನು ಮುಗಿಸಿ ಎಲ್ಲರೂ ವಸಂತಕಾಲದ ಮಧುವನ್ನು ಪಾನಮಾಡುತ್ತಾ ಅನೇಕ ವಿಧವಾದ ಭಕ್ಷ್ಯಗಳನ್ನು ತಿನ್ನುತ್ತಾ, ಫಲಗಳನ್ನು ಕಚ್ಚಿ ತಿನ್ನುತ್ತಾ ಸಂತೋಷಪಟ್ಟರು.

ಪುನಶ್ಚ ನಾಹುಷೋ ರಾಜಾ ಮೃಗಲಿಪ್ಸುರ್ಯದೃಚ್ಛಯಾ ।
ತಮೇವ ದೇಶಂ ಸಂಪ್ರಾಪ್ತೋ ಜಲಾರ್ಥೀ ಶ್ರಮಕರ್ಶಿತಃ ।
ದದರ್ಶ ದೇವಯಾನೀಂ ಚ ಶರ್ಮಿಷ್ಠಾಂ ತಾಶ್ಚ ಯೋಷಿತಾಃ ॥೪॥

ಪುನಃ ರಾಜನಾದ ಯಯಾತಿಯು ಯದೃಚ್ಛೆಯಿಂದ ಮೃಗಗಳನ್ನು ಹುಡುಕುತ್ತಾ ಶ್ರಮದಿಂದ ಕೂಡಿದವನಾಗಿ ನೀರನ್ನು ಬಯಸಿ ಅದೇ ದೇಶಕ್ಕೆ ಬಂದನು. ಅವನು ದೇವಯಾನಿಯನ್ನೂ, ಶರ್ಮಿಷ್ಠೆಯನ್ನೂ ಮತ್ತು ಉಳಿದ ಕನ್ಯೆಯರನ್ನೂ ನೋಡಿದನು.

ಪಿಬಂತೀರ್ಲಪಮಾನಾಶ್ಚ ಸರ್ವಾಭರಣಭೂಷಿತಾಃ ।
ಆಸನೇ ಪ್ರವರೇ ದಿವ್ಯೇ ಸರ್ವಾಭರಣಭೂಷಿತೇ ॥೫॥

ಉಪವಿಷ್ಟಾಂ ಸುಕೇಶಾಂತಾಂ ದೇವಯಾನೀಂ ಶುಚಿಸ್ಮಿತಾಮ್ ।
ರೂಪೇಣಾಪ್ರತಿಮಾಂ ತಾಸಾಂ ಸ್ತ್ರೀಣಾಂ ಮಧ್ಯೇ ವರಾಂಗನಾಮ್ ॥೬॥

ಆಸನಾಚ್ಚ ತತಃ ಕಿಂಚಿದ್ ವಿಹೀನಾಂ ಹೇಮಭೂಷಿತಾಮ್ ।
ಅಸುರೇಂದ್ರಸುತಾಂ ಚಾಪಿ ನಿಷಣ್ಣಾಂ ಚಾರುಹಾಸಿನೀಮ್ ।
ದದರ್ಶ ಪಾದೌ ವಿಪ್ರಾಯಾಃ ಸಂವಹಂತೀಮನಿಂದಿತಾಮ್ ॥೭॥

ಅವರೆಲ್ಲರೂ ಸರ್ವಾಭರಣಭೂಷಿತರಾಗಿ ಪಾನವನ್ನು ಮಾಡುತ್ತಾ ಮಾತನಾಡುತ್ತಿದ್ದರು. ದಿವ್ಯವಾದ ಆಸನದಲ್ಲಿ ಸರ್ವಾಭರಣಭೂಷಿತರಾಗಿ ಸುಂದರಿಯಾದ ದೇವಯಾನಿಯನ್ನೂ ಅದೇ ಸ್ತ್ರೀಯರ ಮಧ್ಯದಲ್ಲಿ ದೇವತಾಸ್ತ್ರೀಯಂತೆ ಅಸದೃಶವಾದ ರೂಪದಿಂದ ಕೂಡಿದ ದೇವಯಾನಿಯ ಆಸನದಿಂದ ಸ್ವಲ್ಪ ದೂರದಲ್ಲಿ ಹೇಮಭೂಷಿತಳಾಗಿ ನಗುತ್ತಾ ನೆಲದ ಮೇಲೆ ಕುಳಿತಿದ್ದ ವೃಷಪರ್ವನ ಮಗಳಾದ ಶರ್ಮಿಷ್ಠೆಯನ್ನೂ ನೋಡಿದನು. ಅನಿಂದಿತಳಾದ ಶರ್ಮಿಷ್ಠೆಯು ದೇವಯಾನಿಯ ಪಾದಗಳನ್ನು ಒತ್ತುತ್ತಿದ್ದಳು.

ಗಾಯಂತ್ಯೋಽಥ ಪ್ರನೃತ್ಯಂತ್ಯೋ ವಾದಯಂತ್ಯಶ್ಚ ಭಾರತ ।
ದೃಷ್ಟ್ವಾ ಯಯಾತಿಮತುಲಂ ಲಜ್ಜಯಾಽವನತಾಃ ಸ್ಥಿತಾಃ ॥೮॥

ಎಲೈ ಭಾರತನೇ ಹಾಡುತ್ತಾ, ವಾದ್ಯಗಳನ್ನು ನುಡಿಸುತ್ತಾ, ಕುಣಿಯುತ್ತಾ ಇದ್ದ ಆ ಕನ್ಯೆಯರು ಅಸದೃಶವಾದ ಯಯಾತಿಯನ್ನು ನೋಡಿ ಲಜ್ಜೆಯಿಂದ ತಲೆತಗ್ಗಿಸಿ ನಿಂತರು.

ಯಯಾತಿಃ

ಯುವಾಂ ಕನ್ಯಾಸಹಸ್ರೇಣ ದ್ವೇ ಕನ್ಯೇ ಪರಿವಾರಿತೇ ।
ಗೋತ್ರೇ ಚ ನಾಮಧೇಯೇ ಚ ದ್ವಯೋಃ ಪೃಚ್ಛಾಮಿ ವಾಮಹಮ್ ॥

ಒಂದು ಸಹಸ್ರ ಕನ್ಯೆಯರಿಂದ ನೀವಿಬ್ಬರೂ ಕನ್ಯೆಯರು ಸುತ್ತುವರಿಯಲ್ಪಟ್ಟಿದ್ದೀರಿ. ನಿಮ್ಮಿಬ್ಬರ ನಾಮವನ್ನೂ ಮತ್ತು ಗೋತ್ರವನ್ನೂ ನಾನು ಕೇಳಲು ಬಯಸುತ್ತೇನೆ.

ದೇವಯಾನೀ

ಆಖ್ಯಾಸ್ಯಾಮ್ಯಹಮಾದತ್ಸ್ವ ವಚನಂ ಮೇ ನರೋತ್ತಮ ।
ಶುಕ್ರೋ ನಾಮಾಸುರಗುರುಃ ಸುತಾಂ ಜಾನೀಹಿ ತಸ್ಯ ಮಾಮ್ ॥೧೦॥

ಇಯಂ ಚ ಮೇ ಸಖೀ ದಾಸೀ ಯತ್ರಾಹಂ ತತ್ರ ಗಾಮಿನೀ ।
ದುಹಿತಾ ದಾನವೇಂದ್ರಸ್ಯ ಶರ್ಮಿಷ್ಠಾ ವೃಷಪರ್ವಣಃ ॥೧೧॥

ಎಲೈ ರಾಜನೇ, ನಾನು ಉತ್ತರವನ್ನು ಕೊಡುತ್ತೇನೆ. ನನ್ನ ಮಾತನ್ನು ಸ್ವೀಕರಿಸು. ನನ್ನನ್ನು ಅಸುರಗುರುಗಳಾದ ಶುಕ್ರಾಚಾರ್ಯರ ಮಗಳೆಂದು ತಿಳಿ. ಇವಳು ನನ್ನ ಸಖಿ ಮತ್ತು ದಾಸಿ. ದಾನವೇಂದ್ರನಾದ ವೃಷಪರ್ವನ ಮಗಳಾದ ಶರ್ಮಿಷ್ಠೆ. ನಾನು ಎಲ್ಲಿ ಹೋಗುತ್ತೇನೆಯೋ ಅಲ್ಲಿಗೆ ಇವಳು ಬರುತ್ತಾಳೆ.

ಯಯಾತಿಃ

ಕಥಂ ನು ತೇ ಸಖೀ ದಾಸೀ ಕನ್ಯೇಯಂ ವರವರ್ಣಿನೀ ।
ನೈವ ದೇವೀ ನ ಗಂಧರ್ವೀ ನ ಯಕ್ಷೀ ನ ಚ ಕಿನ್ನರೀ ॥೧೨॥

ನೈವಂರೂಪಾ ಮಯಾ ನಾರೀ ದೃಷ್ಟಪೂರ್ವೀ ಮಹೀತಲೇ ।
ಶ್ರೀರಿವಾಯತಪದ್ಮಾಕ್ಷೀ ಸರ್ವಲಕ್ಷಣಶೋಭಿತಾ ॥೧೩॥

ಈ ಸುಂದರಿಯಾದ ನಿನ್ನ ಸಖಿಯಾದ ಕನ್ಯೆಯು ಹೇಗೆ ನಿನಗೆ ದಾಸಿಯಾಗುತ್ತಾಳೆ? ಇಂತಹ ರೂಪವುಳ್ಳ ಕನ್ಯೆಯನ್ನು ನಾನು ಭೂತಳದಲ್ಲಿ ದೇವತಾಸ್ತ್ರೀಯನ್ನಾಗಲೀ, ಗಂಧರ್ವಸ್ತ್ರೀಯನ್ನಾಗಲೀ, ಯಕ್ಷಿಯನ್ನಾಗಲೀ, ಕಿನ್ನರಿಯನ್ನಾಗಲೀ ಹಿಂದೆ ಎಂದೂ ನೋಡಲಿಲ್ಲ. ಲಕ್ಷ್ಮೀದೇವಿಯಂತೆ ವಿಶಾಲವಾದ ನೇತ್ರಗಳನ್ನುಳ್ಳ ಇವಳು ಸರ್ವಲಕ್ಷಣಗಳಿಂದ ಶೋಭಿಸುತ್ತಿದ್ದಾಳೆ.

ಅಸುರೇಂದ್ರಸುತಾ ಕನ್ಯಾ ಸರ್ವಾಲಂಕಾರಭೂಷಿತಾ ।
ದೈವೇನೋಪಹತಾ ಸುಭ್ರೂರುತಾಹೋ ತಪಸಾಽಪಿ ವಾ ।
ಅನ್ಯಥೈಷಾಽನವದ್ಯಾಂಗೀ ದಾಸೀ ತೇ ನ ಭವಿಷ್ಯತಿ ॥೧೪॥

ಸರ್ವಾಲಂಕಾರಭೂಷಿತಳಾದ ಈ ಅಸುರೇಂದ್ರನ ಮಗಳಾದ ಕನ್ಯೆಯು ದೈವಶಾಪಕ್ಕಾಗಲೀ ಅಥವಾ ಬೇರೆಯವರ ತಪಸ್ಸಿನ ಪ್ರಭಾವಕ್ಕಾಗಲೀ ಒಳಗಾಗಿದ್ದಾಳೆಯೇ ? ಇಲ್ಲದಿದ್ದರೆ ಇಂತಹ ನಿರ್ದುಷ್ಟವಾದ ಶರೀರವುಳ್ಳವಳು ನಿನ್ನ ದಾಸಿಯಾಗಲಾರಳು.

ದೇವಯಾನೀ

ಸರ್ವಮೇತನ್ನರವ್ಯಾಘ್ರ ವಿಧಾನಮನುವರ್ತತೇ ।
ವಿಧಾನವಿಹಿತಂ ಮತ್ವಾ ಮಾ ವಿಚಾರಯ ಸುವ್ರತ ॥೧೫॥

ರಾಜವದ್ ರೂಪವೇಷೌ ತೇ ಬ್ರಾಹ್ಮೀಂ ವಾಚಂ ಬಿಭರ್ಷಿ ಚ ।
ಕಿಂ ನಾಮ ತ್ವಂ ಕುತಶ್ಚಾಸಿ ಕಸ್ಯ ಪುತ್ರಶ್ಚ ಶಂಸ ಮೇ ॥೧೬॥

ಎಲೈ ರಾಜನೇ, ಇದೆಲ್ಲವೂ ವಿಧಿಯ ಬರಹವನ್ನು ಅನುಸರಿಸಿದೆ. ಎಲೈ ಸುವ್ರತನೇ, ಇದನ್ನು ವಿಧಿವಿಹಿತವೆಂದು ತಿಳಿದು ವಿಚಾರಮಾಡುವುದನ್ನು ಬಿಡು. ನಿನ್ನ ರೂಪವೇಷಗಳು ರಾಜನಂತಿವೆ. ವೇದಪರಿಶುದ್ಧವಾದ ಬ್ರಾಹ್ಮಣ ಭಾಷೆಯಿಂದ ಮಾತನಾಡುತ್ತಿದ್ದೀಯೆ. ನಿನ್ನ ಹೆಸರೇನು, ನೀನು ಎಲ್ಲಿಂದ ಬಂದೆ, ನೀನು ಯಾರ ಮಗ ಎಂದು ನನಗೆ ಹೇಳು.

ಯಯಾತಿಃ

ಬ್ರಹ್ಮಚರ್ಯೇಣ ಸರ್ವಾನ್ ವೈ ಸಾಂಗಾನ್ ವೇದಾನ್ ವಿದಾಮ್ಯಹಮ್ ।
ರಾಜಾಽಹಂ ರಾಜಪುತ್ರಶ್ಚ ಯಯಾತಿರಿತಿ ವಿಶ್ರುತಃ ॥೧೭॥

ನಾನು ಬ್ರಹ್ಮಚರ್ಯದಿಂದ ಸಾಂಗವಾದ ಎಲ್ಲಾ ವೇದಗಳನ್ನೂ ಅಧ್ಯಯನ ಮಾಡಿದ್ದೇನೆ. ನಾನು ನಹುಷನ ಮಗ, ಯಯಾತಿಯೆಂದು ನನ್ನ ಹೆಸರು ಪ್ರಸಿದ್ಧವಾಗಿದೆ. ನಾನು ರಾಜ ಮತ್ತು ರಾಜಪುತ್ರ .

ದೇವಯಾನೀ

ಕೇನಾಸ್ಯರ್ಥೇನ ನೃಪತೇ ಇಮಂ ದೇಶಮುಪಾಗತಃ ।
ಜಿಘೃಕ್ಷುರ್ವಾ ರಿಪುಂ ಕಂಚಿದಥವಾ ಮೃಗಲಿಪ್ಸಯಾ ॥೧೮॥

ಎಲೈ ರಾಜನೇ, ಯಾವ ಉದ್ದೇಶದಿಂದ ಈ ದೇಶಕ್ಕೆ ಬಂದಿದ್ದೀಯೆ? ಯಾರನ್ನಾದರೂ ಶತ್ರುವನ್ನು ಹಿಡಿಯುವುದಕ್ಕೋಸ್ಕರವೋ ಅಥವಾ ಬೇಟೆಯಾಡುವ ಉದ್ದೇಶದಿಂದಲೋ?

ಯಯಾತಿಃ

ಮೃಗಲಿಪ್ಸುರಹಂ ಭದ್ರೇ ಪಾನೀಯಾರ್ಥಮಿಹಾಗತಃ ।
ಬಹು ಚಾಪ್ಯನುಯುಕ್ತೋಽಸ್ಮಿ ತನ್ಮಾಽನುಜ್ಞಾತುಮರ್ಹಸಿ ॥೧೯॥

ಎಲೌ ಮಂಗಳಸ್ವರೂಪಳೇ, ಬೇಟೆಯಾಡಲು ಹೊರಟುಬಂದ ನಾನು ನೀರನ್ನು ಹುಡುಕುತ್ತಾ ಇಲ್ಲಿಗೆ ಬಂದೆ. ನನ್ನನ್ನು ಕುರಿತು ಬಹಳ ಪ್ರಶ್ನೆಗಳನ್ನು ಕೇಳಿದ್ದೀಯೆ. ನನಗೆ ಇಲ್ಲಿಂದ ಹೋಗಲು ಅಪ್ಪಣೆಯನ್ನು ಕೊಡು.

ದೇವಯಾನೀ

ಅಹಂ ದಾಸೀಸಹಸ್ರೇಣ ದಾಸ್ಯಾ ಶರ್ಮಿಷ್ಠಯಾ ಸಹ ।
ತ್ವದಧೀನಾಽಸ್ಮಿ ಭದ್ರಂ ತೇ ಸಾಧು ಭರ್ತಾ ಚ ಮೇ ಭವ ॥೨೦॥

ನಾನು ಈ ದಾಸೀಸಹಸ್ರದ ಜೊತೆಯಲ್ಲಿ ಮತ್ತು ದಾಸಿಯಾದ ಶರ್ಮಿಷ್ಠೆಯ ಜೊತೆಯಲ್ಲಿ ನಿನಗೆ ಅಧೀನಳಾಗಿದ್ದೇನೆ. ನಿನಗೆ ಮಂಗಳವಾಗಲಿ, ನನ್ನ ಪತಿಯಾಗು.

ವೈಶಂಪಾಯನಃ

ಅಸುರೇಂದ್ರಸುತಾಮೀಕ್ಷ್ಯ ತಸ್ಯಾಂ ಸಕ್ತೇನ ಚೇತಸಾ ।
ಶರ್ಮಿಷ್ಠಾ ಮಹಿಷೀ ಮಹ್ಯಮಿತಿ ಮತ್ವಾ ವಚೋಽಬ್ರವೀತ್ ॥೨೧॥

ರಾಜನು ಅಸುರೇಂದ್ರನಾದ ವೃಷಪರ್ವನ ಮಗಳನ್ನು ನೋಡಿದಾಗ ಅವಳಲ್ಲಿ ಆಸಕ್ತವಾಯಿತು. ಶರ್ಮಿಷ್ಠೆಯು ತನಗೆ ಅನುರೂಪಳಾದ ಮಹಿಷಿ ಎಂದು ಚಿಂತಿಸಿ ಮಾತನಾಡಿದನು.

ಯಯಾತಿಃ

ವಿದ್ಮೌಶನಸಿ ಭದ್ರಂ ತೇ ನ ತ್ವಮರ್ಹಸಿ ಭಾಮಿನಿ ।
ಅವೈವಾಹ್ಯಾ ಹಿ ರಾಜಾನೋ ದೇವಯಾನಿ ಪಿತುಸ್ತವ ॥೨೨॥

ಪರಭಾರ್ಯಾ ಸ್ವಸಾ ಶ್ರೇಷ್ಠಾ ಸಗೋತ್ರಾ ಪತಿತಾ ಸ್ನುಷಾ ।
ಅವರಾ ಭಿಕ್ಷುಕಾಽಸ್ವಸ್ಥಾ ಅಗಮ್ಯಾಃ ಕೀರ್ತಿತಾ ಬುಧೈಃ ॥೨೩॥

ಎಲೌ ಸುಂದರಿಯಾದ ಶುಕ್ರಾಚಾರ್ಯರ ಮಗಳೇ, ನಿನಗೆ ಮಂಗಳವಾಗಲಿ. ನೀನು ಹೀಗೆ ಮಾತನಾಡುವುದು ಸರಿಯಲ್ಲ ಎಂದು ತಿಳಿ. ನಿನ್ನ ತಂದೆಯು ನಿನ್ನನ್ನು

ಕ್ಷತ್ರಿಯರಿಗೆ ವಿವಾಹ ಮಾಡಿಕೊಡಲಾರರು. ಪರಭಾರ್ಯೆಯೂ, ತಂಗಿಯೂ ತನಗಿಂತ ಉತ್ತಮಳಾದವಳೂ, ತನ್ನ ಗೋತ್ರದವಳೂ, ಪತಿತಳಾದವಳೂ, ಸೊಸೆಯೂ, ನೀಚಕುಲದಲ್ಲಿ ಜನಿಸಿದ ವೇಶ್ಯೆಯೂ, ಆರೋಗ್ಯವಿಲ್ಲದವಳೂ ಅಗಮ್ಯರೆಂದು ಜ್ಞಾನಿಗಳು ಹೇಳುತ್ತಾರೆ. (ನೀನು ನನಗಿಂತ ಶ್ರೇಷ್ಠಳಾದವಳು ಎಂದು ಯಯಾತಿಯ ಅಭಿಪ್ರಾಯ)

ದೇವಯಾನೀ

ಸಂಸೃಷ್ಟಂ ಬ್ರಹ್ಮಣಾ ಕ್ಷತ್ರಂ ಕ್ಷತ್ರೇಣ ಬ್ರಹ್ಮ ಸಂಹಿತಮ್ ।
ಅನ್ಯತ್ವಮಸ್ತಿ ನ ತಯೋರೇಕಾಂತರಸಮಾಸ್ಥಿತೇ ।
ಋಷಿಶ್ಚಾಪ್ಯೃಷಿಪುತ್ರಶ್ಚ ನಾಹುಷಾಂಗ ವಹಸ್ವ ಮಾಮ್ ॥೨೪॥

ಕ್ಷತ್ರಿಯ ಕುಲವು ಬ್ರಾಹ್ಮಣ ಕುಲದೊಂದಿಗೆ ಸೇರಿಕೊಂಡಿದೆ. ಹಾಗೆಯೇ ಬ್ರಾಹ್ಮಣ ಕುಲವೂ ಕ್ಷತ್ರಿಯ ಕುಲದೊಂದಿಗೆ ಸೇರಿಕೊಂಡಿದೆ. ಅವೆರಡೂ ಬೇರೆಬೇರೆಯಲ್ಲ. ಮುಖಕ್ಕೂ ಮತ್ತು ಭುಜಗಳಿಗೂ ಕೇವಲ ಕಂಠದ ಅಂತರವಿದೆ. ಎಲೈ ಯಯಾತಿಯೇ, ಋಷಿಯೂ, ಋಷಿಪುತ್ರನೂ ಆದ ನೀನು ನನ್ನನ್ನು ವಿವಾಹ ಮಾಡಿಕೊ.

ಯಯಾತಿಃ

ಏಕತ್ಯೈವೋದ್ಭವಾ ವರ್ಣಾಶ್ಚತ್ವಾರೋऽಪಿ ವರಾಂಗನೇ ।
ಪೃಥಗ್ಧರ್ಮಾಃ ಪೃಥಕ್‌ಶೌಚಾಸ್ತೇಷಾಂ ತು ಬ್ರಾಹ್ಮಣೋ ಗುರುಃ ॥೨೫॥

ಎಲೌ ಸುಂದರಿಯೇ, ನಾಲ್ಕು ವರ್ಣಗಳೂ ಒಬ್ಬ ನಾರಾಯಣನಿಂದಲೇ ಉದ್ಭವಿಸಿವೆ. ಆದರೆ ಆ ವರ್ಣಗಳ ಧರ್ಮಗಳು, ಶೌಚಾಚಾರಗಳು ಭಿನ್ನ ಭಿನ್ನವಾಗಿವೆ. ಆ ವರ್ಣಗಳಲ್ಲಿ ಬ್ರಾಹ್ಮಣನು ಗುರುವಾದವನು.

ದೇವಯಾನೀ

ಪಾಣಿರ್ಮೇ ನಾಹುಷಾಯಂ ವೈ ನ ಪುಂಭಿಃ ಸೇವಿತಃ ಪುರಾ ।
ತ್ವಮೇವ ಚಾಗ್ರಹೀರಗ್ರೇ ವೃಣೋಮಿ ತ್ವಾಮಹಂ ತತಃ ॥೨೬॥

ಕಥಂ ನು ಮೇ ಮನಸ್ವಿನ್ಯಾಃ ಪಾಣಿಮನ್ಯಃ ಪುಮಾನ್ ಸ್ಪೃಶೇತ್ ।
ಗೃಹೀತಮೃಷಿಪುತ್ರೇಣ ಸ್ವಯಂ ಪೂರ್ವಂ ನೃಪ ತ್ವಯಾ ॥೨೭॥

ಎಲೈ ಋಷಿಪುತ್ರನಾದ ಯಯಾತಿಯೇ, ಈ ನನ್ನ ಪಾಣಿಯನ್ನು ಹಿಂದೆ ಯಾರೂ ಹಿಡಿದಿಲ್ಲ. ಮೊದಲು ನೀನೇ ಒಮ್ಮೆ ಹಿಡಿದಿದ್ದೆ. ಆದ್ದರಿಂದ ನಿನ್ನನ್ನು ವರಿಸುತ್ತಿದ್ದೇನೆ. ಎಲೈ ರಾಜನೇ, ಋಷಿಪುತ್ರನಾದ ನೀನು ಹಿಡಿದ ಧೈರ್ಯಶಾಲಿನಿಯಾದ ನನ್ನ ಪಾಣಿಯನ್ನು ಇನ್ನೊಬ್ಬ ಪುರುಷನು ಹೇಗೆ ಹಿಡಿಯುತ್ತಾನೆ ?

ಯಯಾತಿಃ

ಕ್ರುದ್ಧಾದಾಶೀವಿಷಾಚ್ಚಸ್ತ್ರಾಜ್ಜ್ವಲನಾತ್ ಸರ್ವತೋಮುಖಾತ್ ।
ದುರಾಧರ್ಷತರೋ ವಿಪ್ರಃ ಪುರುಷೇಣ ವಿಜಾನತಾ ॥೨೮॥

ಕ್ರುದ್ಧವಾದ ಸರ್ಪಕ್ಕಿಂತಲೂ, ಶಸ್ತ್ರಕ್ಕಿಂತಲೂ, ಸರ್ವತೋಮುಖವಾಗಿ ಉರಿಯುವ ಅಗ್ನಿಗಿಂತಲೂ ಬ್ರಾಹ್ಮಣನು ಅತ್ಯಂತ ದುರಾಧರ್ಷನೆಂದು ವಿವೇಕವುಳ್ಳ ಪುರುಷರು ತಿಳಿಯುತ್ತಾರೆ.

ದೇವಯಾನೀ

ಕಥಮಾಶೀವಿಷಾಚ್ಚಸ್ತ್ರಾಜ್ಜ್ವಲನಾತ್ ಸರ್ವತೋಮುಖಾತ್ ।
ದುರಾಧರ್ಷತರೋ ವಿಪ್ರ ಇತ್ಯಾತ್ಥ ಪುರುಷರ್ಷಭ ॥೨೯॥

ಎಲೈ ಪುರುಷಶ್ರೇಷ್ಠನೇ, ಬ್ರಾಹ್ಮಣನು ಸರ್ಪಕ್ಕಿಂತಲೂ, ಶಸ್ತ್ರಗಳಿಗಿಂತಲೂ, ಸರ್ವತೋಮುಖವಾಗಿ ಜ್ವಲಿಸುಹ ವಹ್ನಿಗಿಂತಲೂ ದುರಾಧರ್ಷತರನು ಎಂದು ಹೇಗೆ ಹೇಳುತ್ತೀಯೆ?

ಯಯಾತಿಃ

ಏಕಮಾಶೀವಿಷೋ ಹಂತಿ ಶಸ್ತ್ರಮೇಕಂ ನಿಹಂತಿ ಚ ।
ಸರಾಷ್ಟ್ರಂ ಸಪ್ರಜಂ ಹಂತಿ ವಿಪ್ರಃ ಕೋಪೇನ ಸಂಯುತಃ ॥೩೦॥

ಸರ್ಪವು ಒಬ್ಬನನ್ನು ಕೊಲ್ಲುತ್ತದೆ, ಶಸ್ತ್ರವೂ ಒಬ್ಬನನ್ನು ಕೊಲ್ಲುತ್ತದೆ, ಆದರೆ ಕೋಪಗೊಂಡ ಬ್ರಾಹ್ಮಣನು ಪ್ರಜೆಗಳಿಂದ ಸಹಿತವಾದ ಸಮಗ್ರವಾದ ರಾಷ್ಟ್ರವನ್ನು ಸಂಹರಿಸುತ್ತಾನೆ.

ಕ್ವಚಿದಾಶೀವಿಷೋ ಹನ್ಯಾಚ್ಛಸ್ತ್ರಮೇವಂ ನಿಕೃಂತತಿ ।
ಯದೃಚ್ಛಯಾऽಗ್ನಿರ್ದಹತಿ ಮನಸಾ ಹಂತಿ ವೈ ದ್ವಿಜಃ ॥೩೧॥

ಸರ್ಪವು ಹತ್ತಿರಬಂದಾಗ ಒಮ್ಮೆ ಕಡಿಯುತ್ತದೆ. ಶಸ್ತ್ರವೂ ಸಹ ಸಂಪರ್ಕವುಂಟಾದಾಗ ಕತ್ತರಿಸುತ್ತದೆ, ಅಕಸ್ಮತ್ತಾಗಿ ಮುಟ್ಟಿದ ಅಗ್ನಿಯು ಸುಡುತ್ತದೆ, ಆದರೆ ಬ್ರಾಹ್ಮಣನು ಸಂಪರ್ಕವಿಲ್ಲದೇ ಎಲ್ಲವನ್ನೂ ಮನಸ್ಸಿನಿಂದಲೇ ಕೊಲ್ಲುತ್ತಾನೆ.

ದುರಾಧರ್ಷತರೋ ವಿಪ್ರಸ್ತಸ್ಮಾದ್ ಭೀರು ಮತೋ ಮಮ ।
ಅತೋ ನದತ್ತಾಂ ಪಿತ್ರಾ ತ್ವಾಂ ಭದ್ರೇ ನ ವಿವಹಾಮ್ಯಹಮ್ ॥೩೨॥

ಆದ್ದರಿಂದ ಎಲೌ ಭೀರುವೇ ಬ್ರಾಹ್ಮಣನು ದುರಾಧರ್ಷತರನು ಎಂದು ನನ್ನ ಅಭಿಪ್ರಾಯ. ಆದ್ದರಿಂದ ಮಂಗಳಸ್ವರೂಪಳೇ, ನಿನ್ನ ತಂದೆಯು ದಾನ ಮಾಡದಿದ್ದ ನಿನ್ನನ್ನು ನಾನೆಂದೂ ವಿವಾಹವಾಗುವುದಿಲ್ಲ.

ದೇವಯಾನೀ

ದತ್ತಾಂ ವಹಸ್ವ ರಾಜೇಂದ್ರ ಪಿತ್ರಾ ರಾಜನ್ ವೃತೋ ಮಯಾ ।
ಅಯಾಚತೋ ಭಯಂ ನಾಸ್ತಿ ದತ್ತಾಂ ಚ ಪ್ರತಿಗೃಹ್ಣತಃ ॥೩೩॥

ಎಲೈ ರಾಜೇಂದ್ರನೇ ನನ್ನ ತಂದೆಯಿಂದ ಕೊಡಲ್ಪಟ್ಟ ನನ್ನನ್ನು ವಿವಾಹ ಮಾಡಿಕೊ. ರಾಜನೇ, ನಿನ್ನನ್ನು ನಾನು ವರಿಸಿದ್ದೇನೆ. ನೀನಾಗಿ ಯಾಚನೆಯನ್ನು ಮಾಡದೇ ದತ್ತಳಾದ ನನ್ನನ್ನು ಸ್ವೀಕಾರ ಮಾಡಿದರೆ ನಿನಗೆ ಯಾವ ಭಯವೂ ಇಲ್ಲ.

ತಿಷ್ಠ ರಾಜನ್ ಮುಹೂರ್ತಂ ತ್ವಂ ಪ್ರೇಷಯಿಷ್ಯಾಮ್ಯಹಂ ಪಿತುಃ ।
ಗಚ್ಛ ತ್ವಂ ಧಾತ್ರಿಕೇ ಶೀಘ್ರಂ ಬ್ರಹ್ಮಕಲ್ಪಮಿಹಾನಯ ।
ಸ್ವಯಂವರೇ ವೃತಂ ಶೀಘ್ರಂ ನಿವೇದಯ ಚ ನಾಹುಷಮ್ ॥೩೪॥

ರಾಜನೇ, ಸ್ವಲ್ಪಸಮಯ ಇಲ್ಲಿಯೇ ನಿಲ್ಲು. ನಾನು ತಂದೆಗೆ ಹೇಳಿಕಳುಹಿಸುತ್ತೇನೆ. ಎಲೌ ಧಾತ್ರಿಕೆಯೇ, ನೀನು ಶೀಘ್ರಳಾಗಿ ಹೋಗಿ ವೇದರಾಶಿಯಂತಿರುವ ನನ್ನ ತಂದೆಯನ್ನು ಇಲ್ಲಿಗೆ ಕರೆದು ತಾ, ನಹುಷನ ಮಗನಾದ ಯಯಾತಿಯನ್ನು ನಾನು ಸ್ವಯಂವರದಲ್ಲಿ ವರಿಸಿದ್ದೇನೆ ಎಂದು ಅವರಿಗೆ ತಿಳಿಸು.

ವೈಶಂಪಾಯನಃ

ತ್ವರಿತಂ ದೇವಯಾನ್ಯಾ ತು ಪ್ರೇಷಿತಂ ಪಿತುರಾತ್ಮನಃ ।
ಸಂಶ್ರುತ್ಯೈವ ವಚಸ್ತಸ್ಯ ದರ್ಶಯಾಮಾಸ ಭಾರ್ಗವಃ ॥೩೫॥

ದೇವಯಾನಿಯು ತನ್ನನ್ನು ಕರೆದುತರಲು ಧಾತ್ರಿಯನ್ನು ಕಳುಹಿಸಿದ್ದಾಳೆಂದು ಅವಳ ಮಾತನ್ನು ಕೇಳಿದ ತಕ್ಷಣ ಶುಕ್ರಾಚಾರ್ಯರು ಬಂದು ಪ್ರತ್ಯಕ್ಷರಾದರು.

ದೃಷ್ಟ್ವೈವ ಚಾಗತಂ ವಿಪ್ರಂ ಯಯಾತಿಃ ಪೃಥವೀಪತಿಃ ।
ವವಂದೇ ಬ್ರಾಹ್ಮಣಂ ಕಾವ್ಯಂ ಪ್ರಾಂಜಲಿಃ ಪ್ರಣತಃ ಸ್ಥಿತಃ ॥೩೬॥

ಬಂದ ಶುಕ್ರಾಚಾರ್ಯರನ್ನು ನೋಡಿದ ತಕ್ಷಣವೇ ರಾಜನಾದ ಯಯಾತಿಯು ನಮಸ್ಕಾರವನ್ನು ಮಾಡಿ ಕೈಗಳನ್ನು ಮುಗಿದು ಮತ್ತೆ ನಮಸ್ಕಾರವನ್ನು ಮಾಡಿ ನಿಂತುಕೊಂಡನು.

ದೇವಯಾನೀ

ರಾಜಾऽಯಂ ನಾಹುಷಸ್ತಾತ ದುರ್ಗೇ ಮೇ ಪಾಣಿಮಸ್ಪೃಶತ್ ।
ನಾನ್ಯಪೂರ್ವಗೃಹೀತಂ ಮೇ ತೇನಾಹಮಭಯಾ ಕೃತಾ ।
ನಮಸ್ತೇ ದೇಹಿ ಮಾಮಸ್ಮೈ ಲೋಕೇ ನಾನ್ಯಂ ಪತಿಂ ವೃಣೇ ॥೩೭॥

ಎಲೈ ತಂದೆಯೇ, ನಹುಷನ ಮಗನಾದ ಈ ಯಯಾತಿ ರಾಜನು ಹಿಂದೆ ಕಾಡಿನಲ್ಲಿ ಕಷ್ಟದಲ್ಲಿದ್ದಾಗ ನನ್ನ ಕೈಯನ್ನು ಹಿಡಿದನು. ಅದಕ್ಕೆ ಮೊದಲು ಯಾರೂ ಹಿಡಿಯದಿದ್ದ ನನ್ನ ಕೈಯನ್ನು ಹಿಡಿದು ನನಗೆ ಅಭಯವನ್ನು ನೀಡಿದನು. ನಿನಗೆ ನಮಸ್ಕಾರವನ್ನು ಮಾಡುತ್ತೇನೆ. ನನ್ನನ್ನು ಅವನಿಗೆ ಕೊಡು. ನಾನು ಬೇರೆ ಪತಿಯನ್ನು ಬಯಸುವುದಿಲ್ಲ.

ಶುಕ್ರಃ

ಅನ್ಯೋಃ ಧರ್ಮ್ಯಃ ಪ್ರಿಯಸ್ತ ನ್ಯೋ ವೃತಸ್ತ ನ್ವಾಹುಷಃ ಪತಿಃ ।
ಕಚಶಾಪಾತ್ ತ್ವ ಯಾ ಪೂರ್ವಂ ನಾನ್ಯದ್ ಭವಿತುಮರ್ಹತಿ ॥೩೮॥

ಬ್ರಾಹ್ಮಣರ ಧರ್ಮವೇ ಒಂದು, ನಿನಗೆ ಪ್ರಿಯವಾದುದೇ ಮತ್ತೊಂದು. ಕಚನ ಶಾಪದಿಂದ ನೀನು ಯಯಾತಿಯನ್ನು ಪತಿಯಾಗಿ ವರಿಸಿದ್ದೀಯೆ. ಇದು ಬೇರೆರೀತಿ ಆಗಲು ಸಾಧ್ಯವಿಲ್ಲ.

ವೃತೋ ರಾಜನ್ ವೃಣೇಷ್ವೇಮಾಂ ಮಹಿಷೀ ನಹುಷಾಸ್ತು ತೇ ।
ಸ್ವಯಂ ಗ್ರಹೇ ಮಹಾನ್ ದೋಷೋ ಬ್ರಾಹ್ಮಣ್ಯಾ ವರ್ಣಸಂಕರಾತ್ ।
ಗೃಹಣೇಮಾಂ ಮಯಾ ದತ್ತಾಂ ಮಹಿಷೀಂ ನಹುಷಾತ್ಮಜ ॥೩೯॥

ಎಲೈ ಯಯಾತಿಯೇ, ಇವಳು ನಿನ್ನನ್ನು ವರಿಸಿದ್ದಾಳೆ. ಆದ್ದರಿಂದ ಇವಳನ್ನು ರಾಣಿಯಾಗಿ ಸ್ವೀಕರಿಸು. ನೀನಾಗಿಯೇ ಬ್ರಾಹ್ಮಣಿಯಾದ ಅವಳನ್ನು ಸ್ವೀಕರಿಸಿದ್ದರೆ ವರ್ಣಸಂಕರದಿಂದ ಬಹಳ ದೋಷವುಂಟಾಗುತ್ತಿದ್ದಿತು. ಆದರೆ ನಾನು ಕೊಡುತ್ತಿದ್ದೇನೆ. ಆದ್ದರಿಂದ ನಹುಷಾತ್ಮಜನೇ ಇವಳನ್ನು ಸ್ವೀಕರಿಸು.

ಯಯಾತಿಃ

ಅಧರ್ಮೋ ನ ಸ್ಪೃಶೇದೇಷ ಮಹಾನ್ ಮಾಮಿಹ ಭಾರ್ಗವ ।
ವರ್ಣಸಂಕರಜೋ ಬ್ರಹ್ಮನ್ ಭಯಾದೇತದ್ ಬ್ರವೀಮ್ಯಹಮ್ ॥೪೦॥

ಎಲೈ ಭಾರ್ಗವರೇ, ದೊಡ್ಡ ಅಧರ್ಮವು ನನಗೆ ಉಂಟಾಗುವುದಿಲ್ಲವಷ್ಟೆ? ಎಲೈ ಬ್ರಾಹ್ಮಣರೇ, ವರ್ಣಸಂಕರದಿಂದ ಉಂಟಾಗಬಹುದಾದ ಅಧರ್ಮಕ್ಕೆ ಹದರಿ ನಾನು ಈ ಮಾತನ್ನು ಆಡುತ್ತಿದ್ದೇನೆ.

ಶುಕ್ರಃ

ಅಧರ್ಮಾತ್ ತ್ವಾಂ ಪ್ರಮೋಕ್ಷ್ಯಾಮಿ ವರಯ ತ್ವಂ ಯಥೇಪ್ಸಿತಮ್ ।
ತಸ್ಮಾತ್ ವಿವಾಹಾನ್ಮಾ ಭೈಷೀರಹಂ ಪಾಪಂ ನುದಾಮಿ ತೇ ॥೪೧॥

ನಾನು ನಿನ್ನನ್ನು ಅಧರ್ಮದಿಂದ ಬಿಡಿಸುತ್ತೇನೆ. ನೀನು ನಿಸ್ಸಂಕೋಚವಾಗಿ ಇವಳನ್ನು ವರಿಸು. ವಿವಾಹಕ್ಕೆ ಹೆದರಬೇಡ. ನಿನ್ನ ಪಾಪವನ್ನು ನಾನು ಪರಿಹರಿಸುತ್ತೇನೆ.

ವಹಸ್ವ ಭಾರ್ಯಾಂ ಧರ್ಮೇಣ ದೇವಯಾನೀಂ ಸುಮಧ್ಯಮಾಮ್ ।
ಅನಯಾ ಸಹ ಸಂಪ್ರೀತಿಮತುಲಾಂ ತ್ವಮವಾಪ್ನುಹಿ ॥೪೨॥

ಸುಂದರಿಯಾದ ದೇವಯಾನಿಯನ್ನು ಧಾರ್ಮಿಕವಾದ ವಿಧಿಯಿಂದ ಪತ್ನಿಯಾಗಿ ಸ್ವೀಕರಿಸು. ಅವಳ ಜೊತೆಯಲ್ಲಿ ಅಸದೃಶವಾದ ಸುಖಸಂತೋಷವನ್ನು ಹೊಂದು.

ಇಯಂ ಕುಮಾರೀ ಶರ್ಮಿಷ್ಠಾ ದುಹಿತಾ ವೃಷಪರ್ವಣಃ ।
ತಾಂ ಪೂಜಯೇಥಾ ರಾಜೇಂದ್ರ ಮಾ ಚೈನಾಂ ಶಯನೇ ಹ್ವಯ ॥೪೩॥

ವೃಷಪರ್ವನ ಮಗಳಾದ ಈ ಕುಮಾರಿಯ ಹೆಸರು ಶರ್ಮಿಷ್ಠೆ. ರಾಜೇಂದ್ರನೇ ಅವಳನ್ನು ಗೌರವಿಸು. ಆದರೆ ಎಂದೂ ಹಾಸಿಗೆಗೆ ಅವಳನ್ನು ಆಹ್ವಾನಿಸಬೇಡ.

ರಹಸ್ಯೇನಾಂ ಸಮಾಹೂಯ ನ ವದೇರ್ನ ಚ ಸಂಸ್ಪೃಶೇಃ ।
ವಹಸ್ವ ಭಾರ್ಯಾಂ ಭದ್ರಂ ತೇ ಯಥಾ ಕಾಮಮವಾಪ್ನುಹಿ ॥೪೪॥

ಏಕಾಂತದಲ್ಲಿ ಶರ್ಮಿಷ್ಠೆಯನ್ನು ಕರೆದು ಮಾತನಾಡಬೇಡ. ಅವಳನ್ನು ಸ್ಪರ್ಶಮಾಡಲೂಬೇಡ. ದೇವಯಾನಿಯನ್ನು ವಿವಾಹವಾಗು. ನಿನಗೆ ಮಂಗಳವಾಗಲಿ. ಬಯಸಿದ ಎಲ್ಲಾ ಸುಖಗಳನ್ನೂ ಹೊಂದುವವನಾಗು.

ವೈಶಂಪಾಯನಃ

ತಥೇತ್ಯುಕ್ತ್ವಾ ಯಯಾತಿಸ್ತು ತತ್ ಸರ್ವಮಕರೋತ್ ಪ್ರಭುಃ ।
ವಿವಾಹಂ ವಿಧಿವತ್ ಕೃತ್ವಾ ಪ್ರದಕ್ಷಿಣಮಥಾಕರೋತ್ ।
ಯಯಾತಿಃ ಸ್ವಪುರಂ ಯಾಯಾದನುಜ್ಞಾತೋ ಮಹಾತ್ಮನಾ ॥೪೫॥

ಯಯಾತಿಯು ಹಾಗೆಯೇ ಆಗಲಿ ಎಂದು ಹೇಳಿ ಅವೆಲ್ಲವನ್ನೂ ಹಾಗೆಯೇ ಮಾಡಿದನು. ವಿಧಿಪೂರ್ವಕವಾಗಿ ದೇವಯಾನಿಯನ್ನು ವಿವಾಹಮಾಡಿಕೊಂಡು, ಶುಕ್ರಾಚಾರ್ಯರಿಗೆ ಪ್ರದಕ್ಷಿಣೆನಮಸ್ಕಾರಗಳನ್ನು ಮಾಡಿ ಮಹಾತ್ಮರಾದ ಅವರಿಂದ ಅನುಮತಿಯನ್ನು ಪಡೆದು ತನ್ನ ಪಟ್ಟಣಕ್ಕೆ ಹಿಂದಿರುಗಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಸಪ್ತತಿತಮೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ತೊಂದನೆಯ ಅಧ್ಯಾಯ

(ದೇವಯಾನಿಗೆ ಪುತ್ರೋತ್ಪತ್ತಿ. ದೇವಯಾನಿಗೆ ತಿಳಿಯದಂತೆ ಶರ್ಮಿಷ್ಠೆಗೂ ಪುತ್ರೋತ್ಪತ್ತಿ.)

ವೈಶಂಪಾಯನಃ

ಯಯಾತಿಃ ಸ್ವಪುರಂ ಗತ್ವಾ ಪತಾಕಾಭಿರಲಂಕೃತಮ್ ।
ಪ್ರವಿಶ್ಯಾಂತಃಪುರಂ ರಾಜಾ ದೇವಯಾನೀಂ ನ್ಯವೇಶಯತ್ ॥೧॥

ರಾಜನಾದ ಯಯಾತಿಯು ಪತಾಕೆಗಳಿಂದ ಅಲಂಕೃತವಾಗಿದ್ದ ತನ್ನ ಪಟ್ಟಣಕ್ಕೆ ಹೋಗಿ ಅಂತಃಪುರವನ್ನು ಪ್ರವೇಶಿಸಿ ದೇವಯಾನಿಯನ್ನು ಅಲ್ಲಿ ಇರಿಸಿದನು.

ದೇವಯಾನ್ಯಾಶ್ಚಾನುಮತೇ ಸುತಾಂ ತಾಂ ವೃಷಪರ್ವಣಃ ।
ಅಶೋಕವನಿಕಾಭ್ಯಾಶೇ ಗೃಹಂ ಕೃತ್ವಾ ನ್ಯವೇಶಯತ್ ॥೨॥

ವೃತಾಂ ದಾಸೀಸಹಸ್ರೇಣ ಶರ್ಮಿಷ್ಠಾಮಸುರಾಯಣೀಮ್ ।
ವಾಸೋಭಿರನ್ನಪಾನೈಶ್ಚ ಸಂವಿಭಜ್ಯ ಸುಸತ್ಕೃತಾಮ್ ॥೩॥

ದೇವಯಾನಿಯ ಅಭಿಪ್ರಾಯದಂತೆ ವೃಷಪರ್ವನ ಮಗಳನ್ನು ಅಶೋಕವನದ ಸಮೀಪದಲ್ಲಿ ಒಂದು ಗೃಹವನ್ನು ನಿರ್ಮಿಸಿ ಅಲ್ಲಿ ಇರಿಸಿದನು. ಅಸುರನ ಮಗಳಾದ ಸಹಸ್ರ ದಾಸಿಯರಿಂದ ಯುತಳಾದ ಶರ್ಮಿಷ್ಠೆಯನ್ನು ವಸ್ತ್ರಗಳಿಂದಲೂ ಅನ್ನಪಾನಗಳಿಂದಲೂ ಸಮವಾಗಿ ಸತ್ಕರಿಸಿದನು.

ದೇವಯಾನ್ಯಾऽಪಿ ಸಹಿತೋ ಯಯಾತಿರ್ನಹುಷಾತ್ಮಜಃ ।
ಪ್ರೀತ್ಯಾ ಪರಮಯಾ ಯುಕ್ತೋ ಮುಮುದೇ ಶಾಶ್ವತೀಃ ಸಮಾಃ ॥೪॥

ನಹುಷನ ಮಗನಾದ ಯಯಾತಿಯು ದೇವಯಾನಿಯ ಜೊತೆಯಲ್ಲಿ ಪರಮ ಪ್ರೀತಿಯುಳ್ಳವನಾಗಿ ಅನೇಕ ವರ್ಷಗಳ ಕಾಲ ಸಂತೋಷವನ್ನು ಅನುಭವಿಸಿದನು.

ಅಶೋಕವನಿಕಾಮಧ್ಯೇ ದೇವಯಾನೀ ಸಮಾಗತಾ ।
ಶರ್ಮಿಷ್ಠಯಾ ಸಾ ಕ್ರೀಡಿತ್ವಾ ರಮಣೀಯೇ ಮನೋರಮೇ ॥೫॥

ತತ್ರೈವ ತಾಂ ತು ನಿರ್ದಿಶ್ಯ ರಾಜ್ಞಾ ಸಹ ಯಯೌ ಗೃಹಮ್ ।
ಏವಮೇವ ಸಹ ಪ್ರೀತ್ಯಾ ಮುಮುದೇ ಬಹುಕಾಲತಃ ॥೬॥

ವಿಜಹಾರ ಬಹೂನ್ ವರ್ಷಾನ್ ದೇವವನ್ಮುಮುದೇ ಭೃಶಮ್ ।
ಋತುಕಾಲೇ ತು ಸಂಪ್ರಾಪ್ತೇ ದೇವಯಾನೀ ಶುಚಿಸ್ಮಿತಾ ॥೭॥

ಲೇಭೇ ಗರ್ಭಂ ವರ್ಷಸಹಸ್ರೇ ತು ಕುಮಾರಂ ಚಾಪ್ಯಜಾಯತ ।
ಗತೇ ವರ್ಷಸಹಸ್ರೇ ತು ಶರ್ಮಿಷ್ಠಾ ವಾರ್ಷಪರ್ವಣೀ ॥೮॥

ದೇವಯಾನಿಯು ಅಶೋಕವನದ ಮಧ್ಯದಲ್ಲಿ ಇದ್ದ ಮನೋಹರವಾದ ಗೃಹದಲ್ಲಿ ಶರ್ಮಿಷ್ಠೆಯ ಜೊತೆಯಲ್ಲಿ ಆಟವಾಡಿ ಅವಳಿಗೆ ನೀನು ಇಲ್ಲಿಯೇ ಇರು ಎಂದು ಆದೇಶಿಸಿ ರಾಜನ ಜೊತೆಯಲ್ಲಿ ಅರಮನೆಗೆ ಹಿಂದಿರುಗುತ್ತಿದ್ದಳು. ಹೀಗೆಯೇ ರಾಜನ ಜೊತೆಯಲ್ಲಿ ಬಹುಕಾಲ ಸಂತೋಷದಿಂದ ಇದ್ದಳು. ರಾಜನೂ ಸಹ ಅವಳ ಜೊತೆಯಲ್ಲಿ ಬಹುಕಾಲವನ್ನು ಸಂತೋಷದಿಂದ ಕಳೆದನು.

ಋತು ಕಾಲವು ಪ್ರಾಪ್ತವಾದಾಗ ಶುಚಿಸ್ಮಿತೆಯಾದ ದೇವಯಾನಿಯು ಒಂದು ಸಹಸ್ರ ವರ್ಷ ಕಳೆದ ಮೇಲೆ ರಾಜನಿಂದ ಗರ್ಭವನ್ನು ಧರಿಸಿ ಕುಮಾರನನ್ನು ಪ್ರಸವಿಸಿದಳು.

ಸಾ ತು ಕಾಲೇ ಋತುಸ್ನಾತಾ ಭರ್ತಾರಂ ಸಮಚಿಂತಯತ್ ।
ಶುದ್ಧಾ ಸ್ನಾತಾ ತು ಶರ್ಮಿಷ್ಠಾ ಸರ್ವಾಲಂಕಾರಭೂಷಿತಾ ॥೯॥

ಅಶೋಕಶಾಖಾಮಾಲಂಬ್ಯ ಸುಪುಷ್ಪೈಃ ಸ್ತಬಕೈರ್ವೃತಾಮ್ ।
ಆದರ್ಶೇ ಮುಖಮುದ್ವೀಕ್ಷ್ಯ ಭರ್ತೃದರ್ಶನಲಾಲಸಾ ॥೧೦॥

ಶೋಕಮೋಹಸಮಾವಿಷ್ಟಾ ವಚನಂ ಚೇದಮಬ್ರವೀತ್ ।
ಅಶೋಕ ಶೋಕಾಪನುದ ಶೋಕೋಪಹತಚೇತನಾಮ್ ॥೧೧॥

ಇನ್ನೊಂದು ಸಹಸ್ರ ವರ್ಷವು ಕಳೆದ ಮೇಲೆ ವೃಷಪರ್ವನ ಮಗಳಾದ ಶರ್ಮಿಷ್ಠೆಯು ಋತುಕಾಲದಲ್ಲಿ ಸ್ನಾತಳಾಗಿ ಪತಿಯನ್ನು ಕುರಿತು ಚಿಂತಿಸಿದಳು. ಶುದ್ಧಳೂ, ಸ್ನಾತಳೂ, ಸರ್ವಾಲಂಕಾರಭೂಷಿತಳೂ ಆದ ಶರ್ಮಿಷ್ಠೆಯು ಚಿಗುರು ಮತ್ತು ಹೂವುಗಳಿಂದ ತುಂಬಿದ್ದ ಅಶೋಕವೃಕ್ಷದ ಶಾಖೆಯನ್ನು ಹಿಡಿದು ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡು ಪತಿಯ ಬಯಕೆ ಉಳ್ಳವಳಾಗಿ ಶೋಕದಿಂದಲೂ ಮತ್ತು ಮೋಹದಿಂದಲೂ ಕೂಡಿದವಳಾಗಿ ಈ ಮಾತುಗಳನ್ನು ಆಡಿದಳು.

ತ್ವನ್ನಾಮಾನಂ ಕುರು ಕ್ಷಿಪ್ರಂ ಪ್ರಿಯಸಂದರ್ಶನೇನ ಮಾಮ್ ।
ಏವಮುಕ್ತವತೀ ಸಾ ತು ಶರ್ಮಿಷ್ಠಾ ಪುನರಬ್ರವೀತ್ ॥೧೨॥

ಶೋಕದಿಂದ ಕೂಡಿದವರಿಗೆ ಶೋಕವನ್ನು ಪರಿಹಾರ ಮಾಡುವ ಎಲೈ ಅಶೋಕನೇ, ನನಗೆ ಬೇಗ ನನ್ನ ಪ್ರಿಯನನ್ನು ತೋರಿಸಿ ನನ್ನನ್ನೂ ನಿನ್ನ ಹೆಸರುಳ್ಳವಳಾಗಿಯೇ ಮಾಡು.

ಋತುಕಾಲಶ್ಚ ಸಂಪ್ರಾಪ್ತೋ ನಚ ಭರ್ತಾಸ್ತಿ ಕಶ್ಚನ ।
ಕಿಂ ಪ್ರಾಪ್ತಂ ಕಿಂ ನು ಕರ್ತವ್ಯಂ ಕಿಂ ವಾ ಕೃತ್ವಾ ಕೃತಂ ಭವೇತ್ ॥೧೩॥

ಹೀಗೆ ಹೇಳಿದ ಶರ್ಮಿಷ್ಠೆಯು ಪುನಃ ನನಗೆ ಋತುಕಾಲವು ಪ್ರಾಪ್ತವಾಗಿದೆ, ನನಗೆ ಯಾರೂ ಪತಿಯಿಲ್ಲ. ಈಗ ಏನಾಯಿತು, ನಾನು ಏನು ಮಾಡಬೇಕು, ಏನು ಮಾಡಿದರೆ ನನಗೆ ಒಳ್ಳೆಯದಾಗುತ್ತದೆ ಎಂದು ಗಟ್ಟಿಯಾಗಿ ಹೇಳಿದಳು.

ದೇವಯಾನೀ ಪ್ರಜಾತಾ ಸಾ ವೃಥಾಽಹಂ ಪ್ರಾಪ್ತಯೌವನಾ ।
ದೇವಯಾನೀ ಪುಣ್ಯತಮಾ ಯಸ್ಯಾ ಭರ್ತಾ ಹಿ ನಾಹುಷಃ ॥೧೪॥

ದೇವಯಾನಿಯು ಮಗನನ್ನು ಪಡೆದಿದ್ದಾಳೆ. ನನಗೆ ವ್ಯರ್ಥವಾಗಿ ಯೌವನ ಉಂಟಾಗಿದೆ. ಯಯಾತಿಯನ್ನು ಪತಿಯನ್ನಾಗಿ ಹೊಂದಿರುವ ದೇವಯಾನಿಯು ಬಹಳ ಪುಣ್ಯವನ್ನು ಮಾಡಿದವಳು.

ಯಥಾ ತಸ್ಯಾ ಭವೇದ್ ಭರ್ತಾ ಮಮಾಪ್ಯೇಷ ತಥಾ ಭವೇತ್ ।
ರಾಜ್ಞಾ ಪುತ್ರಫಲಂ ದೇಯಮ್ ಇತಿ ಮೇ ನಿಶ್ಚಿತಾ ಮತಿಃ ॥೧೫॥

ಯಯಾತಿಯು ಅವಳಿಗೆ ಹೇಗೆ ಪತಿಯಾಗಿದ್ದಾನೆಯೋ ಹಾಗೆಯೇ ನನಗೂ ಪತಿಯಾಗಬೇಕು. ರಾಜನು ನನಗೆ ಪುತ್ರಫಲವನ್ನು ಕೊಡಬೇಕೆಂದು ನನಗೆ ನಿಶ್ಚಯವಾಗಿ ತೋರುತ್ತಿದೆ.

ಅಪೀದಾನೀಂ ಸ ಧರ್ಮಾತ್ಮಾ ಇಯಾನ್ಮೇ ದರ್ಶನಂ ನೃಪಃ ।
ಕೇಶೇ ಬದ್ಧ್ವಾ ತು ರಾಜಾನಂ ಯಾಚೇಽಹಂ ಸದೃಶಂ ಪತಿಮ್ ॥೧೬॥

ಒಂದು ಪಕ್ಷ ಆ ಧರ್ಮಾತ್ಮನಾದ ರಾಜನು ಈಗ ನನ್ನ ದೃಷ್ಟಿಗೆ ಬಿದ್ದಿದ್ದೇ ಆದರೆ ಅವನನ್ನು ಜೋಡಿಸಿದ ಕೈಗಳನ್ನು ತಲೆಯ ಮೇಲಿರಿಸಿ (ಕೈ ಮುಗಿದು) ನನಗೆ ಸದೃಶವಾದ ಪತಿಯನ್ನು ಕೊಡು ಎಂದು ಬೇಡುತ್ತೇನೆ.

ಗೃಹೇ ಮುದಾ ದೇವಯಾನೀಪುತ್ರಮೀಕ್ಷ್ಯ ಪುನಃ ಪುನಃ ।
ಕ್ರೀಡನ್ನಂತಃಪುರೇ ತಸ್ಯಾಃ ಕಂಚಿತ್ ಕ್ಷಣಮವಾಪ ಸಃ ॥೧೭॥

ಅರಮನೆಯಲ್ಲಿ ದೇವಯಾನಿಯ ಮಗನನ್ನು ನೋಡಿ ಸಂತೋಷದಿಂದ ಅಂತಃಪುರದಲ್ಲಿ ಅವನೊಡನೆ ಆಟವಾಡಿ ಸ್ವಲ್ಪ ವಿರಾಮವನ್ನು ಯಯಾತಿಯು ಪಡೆದನು.

ಅಥ ನಿಷ್ಕ್ರಮ್ಯ ರಾಜಾ ಸ ತಸ್ಮಿನ್ ಕಾಲೇ ಯದೃಚ್ಛಯಾ ।
ಅಶೋಕವನಿಕಾಭ್ಯಾಶೇ ಶರ್ಮಿಷ್ಠಾಂ ಪ್ರೇಕ್ಷ್ಯ ತಿಷ್ಠತೀಮ್ ॥೧೮॥

ದೃಷ್ಟ್ವಾ ತಮೇಕಂ ರಹಸಿ ಶರ್ಮಿಷ್ಠಾ ಚಾರುಹಾಸಿನೀ ।
ಪ್ರತ್ಯುದ್ಗಮ್ಯಾಂಜಲಿಂ ಕೃತ್ವಾ ರಾಜಾನಂ ವಾಕ್ಯಮಬ್ರವೀತ್ ॥೧೯॥

ಆಗ ಅವನು ಯದೃಚ್ಛೆಯಿಂದ ಅರಮನೆಯಿಂದ ಹೊರಗೆ ಬಂದು ಅಶೋಕವನದ ಸಮೀಪದಲ್ಲಿ ಒಬ್ಬಳೇ ನಿಂತಿದ್ದ ಶರ್ಮಿಷ್ಠೆಯನ್ನು ನೋಡಿದನು. ಅವನು ಏಕಾಂತದಲ್ಲಿ ಒಬ್ಬನೇ ಇರುವುದನ್ನು ನೋಡಿ ಚಾರುಹಾಸಿನಿಯಾದ ಶರ್ಮಿಷ್ಠೆಯು ಅವನ ಸಮೀಪಕ್ಕೆ ಹೋಗಿ ಅವನಿಗೆ ಕೈಗಳನ್ನು ಮುಗಿದು ಮಾತನಾಡಿದಳು.

ಶರ್ಮಿಷ್ಠಾ

ಸೋಮಸ್ಯೇಂದ್ರಸ್ಯ ವಿಷ್ಣೋರ್ವಾ ಯಮಸ್ಯ ಧನದಸ್ಯ ಚ ।
ತವ ವಾ ನಾಹುಷ ಕುಲೇ ಕಃ ಸ್ತ್ರಿಯಂ ಸ್ಪ್ರಷ್ಟುಮರ್ಹತಿ ॥೨೦॥

ರೂಪಾಭಿಜನಶೀಲೈರ್ಹಿ ತ್ವಂ ರಾಜನ್ ವೇತ್ಥ ಮಾಂ ಸದಾ ।
ತ್ವಾಂ ಯಾಚೇ ಸಂಪ್ರಸಾದ್ಯಾಹಂ ಋತುಂ ದೇಹಿ ನರಾಧಿಪ ॥೨೧॥

ಸೋಮನ, ಇಂದ್ರನ, ವಿಷ್ಣುವಿನ, ಯಮನ, ಕುಬೇರನ ಅಥವಾ ನಿಮ್ಮ ಕುಲದ ಪತ್ನಿಯನ್ನಾಗಲೀ, ದಾಸಿಯನ್ನಾಗಲೀ ಬೇರೆ ಯಾವನು ಮುಟ್ಟಲು ಸಾಧ್ಯ. ಎಲೈ ರಾಜನೇ, ನೀನು ನನ್ನ ರೂಪವನ್ನೂ, ಜನ್ಮವನ್ನೂ ಮತ್ತು ಶೀಲವನ್ನೂ ಯಾವಾಗಲೂ ತಿಳಿದಿದ್ದೀಯೆ. ನಿನ್ನನ್ನು ಸಂತೋಷಪಡಿಸಿ ನಾನು ನನಗೆ ಪುತ್ರದಾನವನ್ನು ಮಾಡು ಎಂದು ರಾಜನಾದ ನಿನ್ನನ್ನು ಕೇಳುತ್ತಿದ್ದೇನೆ.

ಯಯಾತಿಃ

ವೇದ್ಮಿ ತ್ವಾಂ ಶೀಲಸಂಪನ್ನಾಂ ವೇದ್ಮಿ ಕನ್ಯಾಮನಿಂದಿತಾಮ್ ।
ರೂಪೇಣ ತೇ ನ ಪಶ್ಯಾಮಿ ಸೂಚ್ಯಗ್ರಮಪಿ ನಿಂದಿತಮ್ ॥೨೨॥

ನೀನು ಶೀಲಸಂಪನ್ನಳೆಂದೂ, ಅನಿಂದಿತಳಾದ ಕನ್ಯೆಯೆಂದೂ ನಾನು ತಿಳಿದಿದ್ದೇನೆ. ನಿನ್ನ ರೂಪದಲ್ಲಿ ಒಂದು ಸೂಜಿಯ ತುದಿಯನ್ನು ಊರಬಹುದಾದಷ್ಟು ದೋಷವೂ ಕಾಣುತ್ತಿಲ್ಲ.

ತದಾಪ್ರಭೃತಿ ದೃಷ್ಟಾ ತ್ವಾಂ ಸ್ಮರಾಮ್ಯನಿಶಮುತ್ತಮೇ ।
ಅಬ್ರವೀದುಶನಾ ಕಾವ್ಯೋ ದೇವಯಾನೀಂ ಯದಾ ವಹೇಃ ॥೨೩॥

ನೇಯಮಾಹ್ವಯಿತವ್ಯಾ ತೇ ಶಯನೇ ವಾऽನ್ಯಥಾऽಪಿ ವಾ ।
ದೇವಯಾನ್ಯಾಃ ಪ್ರಿಯಂ ಕೃತ್ವಾ ಶರ್ಮಿಷ್ಠಾಮಪಿ ಪೋಷಯ ॥೨೪॥

ನಿನ್ನನ್ನು ನೋಡಿದಾಗಿನಿಂದಲೂ ನಾನು ಯಾವಾಗಲೂ ನಿನ್ನನ್ನು ಸ್ಮರಿಸುತ್ತಿದ್ದೇನೆ. ಎಲೌ ಉತ್ತಮಳೇ, ದೇವಯಾನಿಯನ್ನು ಮದುವೆ ಮಾಡಿಕೊಂಡ ಮೇಲೆ ನೀನು ಇವಳನ್ನು ಯಾವಾಗಲೂ ಶಯನಕ್ಕಾಗಲೀ, ಬೇರೆಯ ಸಂದರ್ಭಗಳಲ್ಲಾಗಲೀ ಆಹ್ವಾನಿಸಬಾರದು. ದೇವಯಾನಿಗೆ ಎಲ್ಲಾ ಸಂತೋಷವನ್ನು ಕೊಡು. ಶರ್ಮಿಷ್ಠೆಯನ್ನು ಪೋಷಿಸಬೇಕು ಮಾತ್ರ ಎಂದು ಹೇಳಿದ್ದರು.

ಶರ್ಮಿಷ್ಠಾ

ನ ನರ್ಮಯುಕ್ತಮನೃತಂ ಹಿನಸ್ತಿ
ನ ಸ್ತ್ರೀಷು ರಾಜನ್ನ ವಿವಾಹಕಾಲೇ ।
ಪ್ರಾಣಾತ್ಯಯೇ ಸರ್ವಧನಾತಿಪಾತೇ
ಪಂಚಾನೃತಾನ್ಯಾಹುರಪಾತಕಾನಿ ॥೨೫॥

ಏನೋದಕ್ಕಾಗಿ ಮಾತನಾಡಿದ ಅನೃತವು ದೋಷವನ್ನು ಉಂಟು ಮಾಡುವುದಿಲ್ಲ. ಏನೋದದ ಪ್ರಸಂಗ, ಸ್ತ್ರೀಯರು, ವಿವಾಹಕಾಲ, ಪ್ರಾಣಾತ್ಯಯ ಸಂದರ್ಭ ಮತ್ತು ಸರ್ವಧನ ನಾಶ, ಈ ಐದು ಪ್ರಸಂಗಗಳಲ್ಲಿ ಹೇಳಿದ ಸುಳ್ಳುಗಳು ಎಂದೂ ಪಾಪವನ್ನುಂಟು ಮಾಡುವುದಿಲ್ಲ ಎಂದು ಹೇಳುತ್ತಾರೆ.

ಪೃಷ್ಟಸ್ತು ಸಾಕ್ಷ್ಯೇ ಪ್ರವದಂತಮನ್ಯಥಾ
ವದಂತಿ ಮಿಥ್ಯೋಪಚಿತಂ ನರೇಂದ್ರ ।
ಏಕಾರ್ಥತಾಯಾಂ ಚ ಸಮಾಹಿತಾಯಾಂ
ಮಿಥ್ಯಾ ವದಂತಂ ಹ್ಯನೃತಂ ಹಿನಸ್ತಿ ॥೨೬॥

ಸಾಕ್ಷಿಯಾಗಿ ನಿಂತು ಪ್ರಶ್ನೆಯನ್ನು ಕೇಳಿದಾಗ ಯಾರು ಸತ್ಯಕ್ಕೆ ವಿರುದ್ಧವಾಗಿ ಹೇಳುತ್ತಾರೋ ಅವರನ್ನು ಮಿಥ್ಯಾವಾದಿಗಳೆಂದು ಹೇಳುತ್ತಾರೆ. ಎಲೈ ರಾಜನೇ ಇದು ಇಂತಹವನ ವಸ್ತು ಎಂದು ನಿಶ್ಚಯವಾದ ಮೇಲೆ ಸುಳ್ಳು ಹೇಳುವವನನ್ನು ಅನೃತವು ಕೊಲ್ಲುತ್ತದೆ.

ಅನೃತಂ ನಾನೃತಂ ಸ್ತ್ರೀಷು ಪರಿಹಾಸವಿವಾಹಯೋಃ ।
ಆತ್ಮಪ್ರಾಣಾರ್ಥಘಾತೇಷು ತದೇವೋತ್ತಮತಾಂ ವ್ರಜೇತ್ ॥೨೭॥

ಸ್ತ್ರೀಯರಲ್ಲಿ, ಹಾಸ್ಯದ ಸಮಯದಲ್ಲಿ, ವಿವಾಹ ಸಂದರ್ಭದಲ್ಲಿ ತನ್ನ ಪ್ರಾಣ ಹೋಗುವಾಗ, ಸಂಪತ್ತು ನಶಿಸುವಾಗ ಈ ಐದು ಸ್ಥಳಗಳಲ್ಲಿ ಸುಳ್ಳು ಸುಳ್ಳಾಗುವುದಿಲ್ಲ. ಅದೇ ಉತ್ತಮವಾದ ಧರ್ಮವಾಗುತ್ತದೆ.

ಯಯಾತಿಃ

ರಾಜಾ ಪ್ರಮಾಣಂ ಭೂತಾನಾಂ ಸ ನಶ್ಯೇದನೃತಂ ವದನ್ ।
ಅರ್ಥಕೃಚ್ಛ್ರಮಪಿ ಪ್ರಾಪ್ಯ ನ ಮೃಷಾ ಕರ್ತುಮುತ್ಸಹೇ ॥೨೮॥

ರಾಜನು ಎಲ್ಲಾ ಪ್ರಜೆಗಳಿಗೂ ಆದರ್ಶಪ್ರಾಯನಾದವನು. ಅವನು ಸುಳ್ಳನ್ನು ಹೇಳಿದರೆ ನಾಶವನ್ನು ಹೊಂದುತ್ತಾನೆ. ಅರ್ಥಸಂಕಟ ಉಂಟಾದರೂ ನಾನು ಸುಳ್ಳನ್ನು ಹೇಳಲು ಬಯಸುವುದಿಲ್ಲ.

ಶರ್ಮಿಷ್ಠಾ

ಉಭೌ ಹಿ ಚ ಪತೀ ಲೋಕೇ ಪತಿಃ ಸಖ್ಯಾಃ ಪತಿಶ್ಚ ಯಃ ।
ಸಮಂ ವಿವಾಹಮಿತ್ಯಾಹುಃ ಸಖ್ಯಾ ಮೇಽಸಿ ಪತಿರ್ವೃತಃ ॥೨೯॥

ಲೋಕದಲ್ಲಿ ತನ್ನ ಪತಿಯೂ, ತನ್ನ ಸಖಿಯ ಪತಿಯೂ ಪತಿಗಳೆಂದು ಪರಿಗಣಿತರಾಗುತ್ತಾರೆ. ನನ್ನ ಸಖಿಯಾದ ದೇವಯಾನಿಯನ್ನು ವಿವಾಹ ಮಾಡಿಕೊಂಡಾಗ ನಿನ್ನನ್ನು ನಾನೂ ವರಿಸಿದ್ದೇನೆ. ನೀನು ಇಬ್ಬರಿಗೂ ಸಮಾನವಾದ ಪತಿ.

ತ್ರಯ ಏವಾಧನಾ ರಾಜನ್ ಭಾರ್ಯಾ ದಾಸಸ್ತಥಾ ಸುತಃ ।
ಯತ್ ತೇ ಸಮಧಿಗಚ್ಛಂತಿ ಯಸ್ಯೈತೇ ತಸ್ಯ ತದ್ಧನಮ್ ॥೩೦॥

ಎಲೈ ರಾಜನೇ ಪತ್ನಿ, ದಾಸ ಮತ್ತು ಸುತ, ಈ ಮೂವರೂ ಲೋಕದಲ್ಲಿ ಅಧನರೆನಿಸುತ್ತಾರೆ. ಅವರು ಯಾವ ಧನವನ್ನು ಸಂಪಾದನೆ ಮಾಡುತ್ತಾರೋ ಅದು ಅವರ ಸ್ವಾಮಿಗೆ ಸೇರುತ್ತದೆ.

ಸಹ ದತ್ತಾಸ್ಮಿ ಕಾವ್ಯೇನ ದೇವಯಾನ್ಯಾ ಮನೀಷಿಣಾ ।
ಪೂಜ್ಯಾ ಪೋಷಯಿತವ್ಯೇತಿ ನ ಮೃಷಾ ಕರ್ತುಮರ್ಹಸಿ ॥೩೧॥

ಮೇಧಾವಿಗಳಾದ ಶುಕ್ರಾಚಾರ್ಯರು ಅವರ ಮಗಳನ್ನು ನಿನಗೆ ಕೊಡುವಾಗ ಇವಳನ್ನು ಪೂಜಿಸಿ ಪೋಷಿಸಬೇಕೆಂದು ನನ್ನನ್ನೂ ನಿನಗೆ ದಾನ ಮಾಡಿದ್ದಾರೆ. ನೀನು ಅದನ್ನು ವ್ಯರ್ಥ ಮಾಡಬಾರದು.

ಸುವರ್ಣಮಣಿಮುಕ್ತಾನಿ ವಸ್ತ್ರಾಣ್ಯಭರಣಾನಿ ಚ ।
ಯಾಚಿತ್ಯಾ ಣಾಂ ದದಾಸಿ ತ್ವಂ ಗೋಭೂಮ್ಯಾದೀನಿ ಯಾನಿ ಚ ॥೩೨॥

ನೀನು ಬೇಡಿದವರಿಗೆ ಸುವರ್ಣ ಮಣಿಮುತ್ತುಗಳನ್ನು, ವಸ್ತ್ರಾಭರಣಗಳನ್ನೂ, ಗೋ, ಭೂಮ್ಯಾದಿಗಳನ್ನೂ ಯಾವಾಗಲೂ ಕೊಡುತ್ತೀಯೆ.

ಬಹಿಃಸ್ಥಂ ದಾನಮಿತ್ಯುಕ್ತಂ ನ ಶರೀರಾಶ್ರಿತಂ ನೃಪ ।
ಪುಷ್ಕಳಂ ಪುತ್ರದಾನಂ ಚ ಆತ್ಮದಾನಂ ಚ ಮಾರಿಷ ॥೩೩॥

ಎಲೈ ಶ್ರೇಷ್ಠ ಯಯಾತಿಯೆ! ಹೊರಗಿನ ಪದಾರ್ಥವನ್ನು ಕೊಟ್ಟರೆ ಅದೂ ದಾನವೆನಿಸುತ್ತದೆ. ಅದು ಶರೀರಾಶ್ರಿತವಾಗಿರುವುದಿಲ್ಲ. ಆದರೆ, ಎಲೈ ವೀರನೇ ಶರೀರ ದಾನವನ್ನು ಮಾಡಿ ಪುತ್ರದಾನವನ್ನು ಮಾಡಿದರೆ ಅದು ಎಲ್ಲಕ್ಕಿಂತಲೂ ದೊಡ್ಡದಾದ ಶ್ರೀಹರಿಯು ಒಲಿಯುವ ದಾನ.

ಶರೀರದಾನಾತ್ ತತ್ಸರ್ವಂ ದತ್ತಂ ಭವತಿ ಮಾರಿಷ ।
ಯಸ್ಯ ಯಸ್ಯ ಯಥಾ ಕಾಮಸ್ತಸ್ಯ ತಸ್ಯ ದದಾಮ್ಯಹಮ್ ।
ಇತ್ಯುಕ್ತ್ವಾ ನಗರೇ ರಾಜಂಸ್ತ್ರಿಕಾಲಂ ಘೋಷಿತಂ ತ್ವಯಾ ॥೩೪॥

ಎಲೈ ವೀರನೇ ಶರೀರ ದಾನವನ್ನು ಮಾಡಿದರೆ ಎಲ್ಲಾ ದಾನವನ್ನು ಮಾಡಿದಂತೆ ಆಗುತ್ತದೆ. ಎಲೈ ರಾಜನೇ ಯಾರು ಯಾರಿಗೆ ಏನೇನು ಕಾಮಗಳಿವೆಯೋ ನಾನು ಅವುಗಳನ್ನು ಕೊಡುತ್ತೇನೆ ಎಂದು ನೀನು ನಗರದಲ್ಲಿ ಪ್ರತಿದಿವಸ ಮೂರು ಬಾರಿ ಘೋಷಣೆಯನ್ನು ಮಾಡಿಸುತ್ತೀಯೆ.

ಅನೃತಂ ತ್ವಯೋಕ್ತಂ ರಾಜೇಂದ್ರ ವೃಥಾ ಘೋಷಿತಮೇವ ಚ ।
ತತ್ ಸತ್ಯಂ ಕುರು ರಾಜೇಂದ್ರ ಯಥಾ ವೈಶ್ರವಣಸ್ತಥಾ ॥೩೫॥

ನೀನು ನಾನು ಕೇಳಿದುದನ್ನು ಕೊಡದಿದ್ದರೆ, ಎಲೈ ರಾಜೇಂದ್ರನೇ, ನಿನ್ನ ಆ ಘೋಷಣೆಯು ಸುಳ್ಳಾಗಿ ವ್ಯರ್ಥವಾಗುತ್ತದೆ. ಎಲೈ ರಾಜೇಂದ್ರನೇ, ಕುಬೇರನಂತೆ ಆ ಘೋಷಣೆಯನ್ನು ಸತ್ಯವನ್ನಾಗಿ ಮಾಡು.

ಯಯಾತಿಃ

ದಾಸ್ಯಾಮಿ ಯಾಚತೇ ನಿತ್ಯಮಿತಿ ಮೇ ವ್ರತಮಾಹಿತಮ್ ।
ತ್ವಂ ಚ ಯಾಚಸಿ ಮಾಂ ಕಾಮಂ ಬ್ರೂಹಿ ಕಿಂ ಕರವಾಣಿ ತೇ
ಧನಂ ವಾ ಯದಿ ವಾ ಕಿಂಚಿದ್ ರಾಜ್ಯಂ ವಾಽಪಿ ಶುಚಿಸ್ಮಿತೇ ॥೩೬॥

ನಾನು ಬೇಡುವವರಿಗೆ ಯಾವಾಗಲೂ ಬೇಡಿದುದನ್ನು ಕೊಡುತ್ತೇನೆ ಎಂಬ ವ್ರತವನ್ನು ಧರಿಸಿದ್ದೇನೆ. ನೀನು ಸಹ ನಿನ್ನ ಆಸೆಯನ್ನು ಕೇಳುತ್ತಿದ್ದೀಯೆ. ನಾನು ಏನು ಕೊಡಲಿ ಎಂದು ಹೇಳು. ಎಲೌ ಶುಚಿಸ್ಮಿತೆಯೇ, ಧನವನ್ನು ಕೊಡಲೇ ಅಥವಾ ರಾಜ್ಯದ ಒಂದು ಭಾಗವನ್ನೇ ಕೊಡಲೇ.

ಶರ್ಮಿಷ್ಠಾ

ಅಧರ್ಮಾತ್ ತ್ರಾಹಿ ಮಾಂ ರಾಜನ್ ಧರ್ಮೇ ಚ ಪ್ರತಿಪಾದಯ ।
ನಾನ್ಯಂ ವೃಣೇ ಪುತ್ರಕಾಮಾ ಪುತ್ರಾತ್ ಪರತರಂ ನಚ ॥೩೮॥

ಎಲೈ ರಾಜನೇ, ನನ್ನನ್ನು ಅಧರ್ಮದ ದಾರಿಯಿಂದ ರಕ್ಷಣೆ ಮಾಡಿ ಧರ್ಮದ ಮಾರ್ಗದಲ್ಲಿ ನಡೆಸು. ಪುತ್ರಕಾಮಳಾದ ನಾನು ಬೇರೆ ಏನನ್ನೂ ಕೇಳುವುದಿಲ್ಲ. ಪುತ್ರರಿಗಿಂತ ಮಿಗಿಲಾದುದು ಯಾವುದೂ ಇಲ್ಲ.

ತ್ವತ್ತೋಽಪತ್ಯವತೀ ಲೋಕೇ ಚರೇಯಂ ಧರ್ಮಮುತ್ತಮಮ್ ।
ಪುತ್ರಾರ್ಥಂ ಭರ್ತೃಪೋಷಾರ್ಥಂ ಸ್ತ್ರಿಯಃ ಸೃಷ್ಟಾಃ ಸ್ವಯಂಭುವಾ ॥೫೯॥

ನಿನ್ನಿಂದ ಮಗನನ್ನು ಪಡೆದು ನಾನು ಲೋಕದಲ್ಲಿ ಶ್ರೇಷ್ಠವಾದ ಧರ್ಮವನ್ನು ಆಚರಿಸುತ್ತೇನೆ. ಬ್ರಹ್ಮದೇವರು ಮಕ್ಕಳನ್ನು ಪಡೆಯುವ ಸಲುವಾಗಿ ಮತ್ತು ಪತಿಯ ಪೋಷಣೆಯ ಸಲುವಾಗಿ ಸ್ತ್ರೀಯರನ್ನು ಸೃಷ್ಟಿಸಿದ್ದಾರೆ.

ಅಪತಿಶ್ಚಾಪಿ ಯಾ ಕನ್ಯಾ ಅನಪತ್ಯಾ ಚ ಯಾ ಭವೇತ್ ।
ತಸ್ಯಾ ಜನ್ಮ ವೃಥಾ ಲೋಕೇ ಗತಿಸ್ತಸ್ಯಾ ನ ವಿದ್ಯತೇ ॥೬೦॥

ಯಾವ ಕನ್ಯೆಗೆ ಪತಿಯೇ ಇಲ್ಲವೋ ಅಥವಾ ಮಕ್ಕಳೇ ಇಲ್ಲವೋ ಲೋಕದಲ್ಲಿ ಅವಳ ಜನ್ಮ ವ್ಯರ್ಥವಾದುದು. ಅವಳಿಗೆ ಸದ್ಗತಿಯಾಗುವುದಿಲ್ಲ.

ದೇವಯಾನ್ಯಾ ಭುಜಿಷ್ಯಾಽಸ್ಮಿ ವಶ್ಯಾ ಚ ತವ ಭಾರ್ಗವೀ ।
ಸಾ ಚಾಹಂ ಚ ತ್ವಯಾ ರಾಜನ್ ಭರಣೀಯೇ ಭಜಸ್ವ ಮಾಮ್ ॥೬೧॥

ನಾನು ದೇವಯಾನಿಯ ಸೇವಕಿಯಾಗಿದ್ದೇನೆ. ನಿನಗೆ ಅವಳು ಅಧೀನಳಾಗಿದ್ದಾಳೆ. ನೀನು ಅವಳನ್ನೂ ಮತ್ತು ನನ್ನನ್ನೂ ಪೋಷಿಸಬೇಕು. ಆದ್ದರಿಂದ ನನ್ನ ಸಮಾಗಮವನ್ನು ಮಾಡು.

ವೈಶಂಪಾಯನಃ

ಏವಮುಕ್ತಸ್ತು ರಾಜಾ ಸ ತಥ್ಯಮಿತ್ಯೇವ ಜಜ್ಞಿವಾನ್ ।
ಕಾವ್ಯಾಚ್ಚ ದೇವಯಾನ್ಯಾಶ್ಚ ಭೀತೋ ಧರ್ಮಭಯಾದಪಿ ॥೬೨॥

ಪೂಜಯಾಮಾಸ ಶರ್ಮಿಷ್ಠಾಂ ಧರ್ಮೇ ಚ ಪ್ರತ್ಯಪಾದಯತ್ ।
ಋತ್ವಿಕ್‌ಪುರೋಹಿತಾಚಾರ್ಯೈರ್ಮಂತ್ರಿಭಿಶ್ಚಾಪಿ ಸಂವೃತಃ ॥೬೩॥

ವಿವಾಹಂ ವಿಧಿವತ್ ಕೃತ್ವಾ ದತ್ತ್ವಾ ಬ್ರಾಹ್ಮಣದಕ್ಷಿಣಾಮ್ ।
ಪುಣ್ಯೇ ನಕ್ಷತ್ರಸಂಯೋಗೇ ಮುಹೂರ್ತೇ ವಿಪ್ರಪೂಜಿತೇ ॥೬೪॥

ಹೀಗೆ ಹೇಳಲ್ಪಟ್ಟ ರಾಜನು ಅವಳ ಮಾತನ್ನು ತಥ್ಯವಾದುದೆಂದೇ ತಿಳಿದನು. ಶುಕ್ರಾಚಾರ್ಯರಿಗೂ, ದೇವಯಾನಿಗೂ ಮತ್ತು ಧರ್ಮಚ್ಯುತಿಗೂ ಹೆದರಿ ಶರ್ಮಿಷ್ಠೆಯನ್ನು ಪೂಜಿಸಿ ಧರ್ಮದ ಮಾರ್ಗದಲ್ಲಿ ನಡೆಸಿದನು. ಋತ್ವಿಕ್‌ಗಳಿಂದಲೂ ಆಚಾರ್ಯ, ಪುರೋಹಿತ, ಮಂತ್ರಿಗಳಿಂದಲೂ ಕೂಡಿಕೊಂಡು ವಿಧಿವತ್ತಾಗಿ ಬ್ರಾಹ್ಮಣರಿಗೆ ದಕ್ಷಿಣೆಯನ್ನು ಕೊಟ್ಟು ಒಳ್ಳೆಯ ನಕ್ಷತ್ರದಲ್ಲಿ ಬ್ರಾಹ್ಮಣ ಪೂಜಿತವಾದ ಸುಮುಹೂರ್ತದಲ್ಲಿ ಶರ್ಮಿಷ್ಠೆಯನ್ನು ವಿಧಿವತ್ತಾಗಿ ವಿವಾಹ ಮಾಡಿಕೊಂಡನು.

ಸಮಾಗಮ್ಯ ಚ ಶರ್ಮಿಷ್ಠಾಂ ಯಥಾ ಕಾಮಮವಾಪ್ಯ ಚ ।
ಅನ್ಯೋನ್ಯಂ ಪೂಜಯಿತ್ವಾ ತು ಜಗ್ಮತುಸ್ತೌ ಯಥಾಗತಮ್ ॥೪೫॥

ಅನಂತರ ಶರ್ಮಿಷ್ಠೆಯ ಸಮಾಗಮವನ್ನು ಮಾಡಿ ತನ್ನ ಮನಸ್ಸಿನ ಅಭಿಲಾಷೆಯನ್ನು ಪೂರೈಸಿಕೊಂಡನು. ಇಬ್ಬರೂ ಪರಸ್ಪರವಾಗಿ ಪೂಜಿಸಿ ತಾವು ಬಂದಂತೆ ತಮ್ಮ ದಾರಿಗಳನ್ನು ಹಿಡಿದುಹೋದರು.

ತಸ್ಮಿನ್ ಸಮಾಗಮೇ ಸುಭ್ರೂಃ ಶರ್ಮಿಷ್ಠಾ ಚಾರುಹಾಸಿನೀ ।
ಲೇಭೇ ಗರ್ಭಂ ಪ್ರಥಮತಸ್ತಸ್ಮಾದ್ ರಾಜರ್ಷಿಸತ್ತಮಾತ್ ॥೪೬॥

ಸುಂದರಿಯೂ, ಚಾರುಹಾಸಿನಿಯೂ ಆದ ಶರ್ಮಿಷ್ಠೆಯು, ಆ ಸಮಾಗಮದಲ್ಲಿ ರಾಜರ್ಷಿಶ್ರೇಷ್ಠನಾದ ಯಯಾತಿಯಿಂದ ಮೊದಲನೆಯ ಗರ್ಭವನ್ನು ಧರಿಸಿದಳು.

ಪ್ರಜಜ್ಞೇ ಚ ತತಃ ಕಾಲೇ ಕ್ರಿಯಾಃ ಕೃತ್ವಾ ವಿಶೇಷತಃ ।
ಕುಮಾರಂ ದೇವಗರ್ಭಾಭಂ ರಾಜೀವನಿಭಲೋಚನಮ್ ॥೪೭॥

ಅನಂತರ ಕಾಲಕ್ರಮದಲ್ಲಿ ಅನೇಕ ಧರ್ಮಗಳನ್ನು ಆಚರಿಸಿ ರಾಜೀವ ನೇತ್ರನಾದ ದೇವಕುಮಾರನಂತೆ ಶೋಭಿಸುವ ಕುಮಾರನನ್ನು ಪ್ರಸವಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕಸಪ್ತತಿತಮೋऽಧ್ಯಾಯಃ ॥
॥ ಸಂಭವಪರ್ವಣಿ ಏಕೋನವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಪ್ಪತ್ತೊಂದನೆಯ ಅಧ್ಯಾಯವು ಸಮಾಪ್ತವಾಯಿತು.

★★★★★

ಎಪ್ಪತ್ತೆರಡನೆಯ ಅಧ್ಯಾಯ

(ಯಯಾತಿ ಶರ್ಮಿಷ್ಠೆಯರ ಪ್ರಣಯ ಪ್ರಸಂಗ. ದೇವಯಾನಿಯು ದೂರು, ಶುಕ್ರಾಚಾರ್ಯರ ಶಾಪ ಮತ್ತು ಪಾಕ್ಷಿಕ ಪರಿಹಾರ.)

ವೈಶಂಪಾಯನಃ

ತಸ್ಮಿನ್ ನಕ್ಷತ್ರಸಂಯೋಗೇ ಶುಕ್ಲೇ ಚಂದ್ರಸ್ತು ಯಾದೃಶಃ ।
ತಾದೃಶೋ ಮುಮುದೇ ರಾಜಾ ತಯಾ ಶರ್ಮಿಷ್ಠಯಾ ಸಹ ॥೧॥

ಶುಭನಕ್ಷತ್ರ ಸಂಯೋಗದಲ್ಲಿ ಶುಕ್ಲಪಕ್ಷದ ಚಂದ್ರನು ಹೇಗೆ ಶೋಭಿಸುತ್ತಾನೋ ಹಾಗೆ ರಾಜನು ಶರ್ಮಿಷ್ಠೆಯ ಜೊತೆಯಲ್ಲಿ ಸಂತೋಷವನ್ನು ಹೊಂದಿದನು.

ಯಯಾತಿಃ

ಪ್ರಜಾನಾಂ ಶ್ರೀರಿವಾಗ್ರ್ಯಾ ಮೇ ಶರ್ಮಿಷ್ಠಾ ಹ್ಯಭವದ್ ವಧೂಃ ।
ಪನ್ನಗೀವೋಗ್ರರೂಪೇಯಂ ದೇವಯಾನೀ ಮಮ ಹ್ಯಭೂತ್ ॥೨॥

ಪ್ರಜೆಗಳಿಗೆ ಶ್ರೇಷ್ಠಳಾದ ಲಕ್ಷ್ಮೀದೇವಿಯಂತೆ ಶರ್ಮಿಷ್ಠೆಯು ನನಗೆ ಪತ್ನಿಯಾದಳು. ದೇವಯಾನಿಯು ನನಗೆ ಉಗ್ರರೂಪದ ಸರ್ಪಿಣಿಯಂತೆ ಆಗಿದ್ದಾಳೆ.

ಪರ್ಜನ್ಯ ಇವ ಸಸ್ಯಾನಾಂ ದೇವಾನಾಮಮೃತಂ ಯಥಾ ।
ತದ್ವನ್ಮಮಾಪಿ ಸಂಭೂತಾ ಶರ್ಮಿಷ್ಠಾ ವಾರ್ಷಪರ್ವಣೀ ।
ಇತ್ಯೇವಂ ಮನಸಾ ಧ್ಯಾತ್ವಾ ದೇವಯಾನೀಮವರ್ಜಯತ್ ॥೩॥

ಸಸ್ಯಗಳಿಗೆ ಮಳೆಯಂತೆ, ದೇವತೆಗಳಿಗೆ ಅಮೃತದಂತೆ, ನನ್ನ ಪಾಲಿಗೆ ಶರ್ಮಿಷ್ಠೆಯು ಆನಂದದಾಯಕಳಾದಳು. ಹೀಗೆ ಮನಸ್ಸಿನಲ್ಲಿ ಯೋಚಿಸಿ ದೇವಯಾನಿಯನ್ನು ವರ್ಜಿಸಿದನು.

ವೈಶಂಪಾಯನಃ

ಶ್ರುತ್ವಾ ಕುಮಾರಂ ಜಾತಂ ತು ದೇವಯಾನೀ ಶುಚಿಸ್ಮಿತಾ ।
ಚಿಂತಾಂ ಬಹುವಿಧಾಂ ಚಕ್ರೇ ಶರ್ಮಿಷ್ಠಾಂ ಪ್ರತಿ ಭಾರತ ॥೪॥

ಅಭಿಗಮ್ಯ ತು ಶರ್ಮಿಷ್ಠಾಂ ದೇವಯಾನೀ ತಥಾಽಬ್ರವೀತ್ ।
ಕಿಮಿದಂ ವ್ರಜಿನಂ ಸುಭ್ರು ಕೃತಂ ತೇ ಕಾಮಲುಬ್ಧಯಾ ॥೫॥

ಶುಚಿಸ್ಮಿತೆಯಾದ ದೇವಯಾನಿಯು ಶರ್ಮಿಷ್ಠೆಗೆ ಕುಮಾರನು ಜನಿಸಿದುದನ್ನು ಕೇಳಿ ಶರ್ಮಿಷ್ಠೆಯ ವಿಷಯದಲ್ಲಿ ಅನೇಕ ವಿಧವಾದ ಚಿಂತೆಗೆ ಒಳಗಾದಳು. ದೇವಯಾನಿಯು ಶರ್ಮಿಷ್ಠೆಯನ್ನು ಸಮೀಪಿಸಿ, ಸುಂದರಿಯೇ, ಕಾಮಲೋಭದಿಂದ ಎಂತಹ ಪಾಪಕೃತ್ಯವನ್ನು ಮಾಡಿದೆ ಎಂದು ಹೇಳಿದಳು.

ಶರ್ಮಿಷ್ಠಾ

ಋಷಿರಭ್ಯಾಗತಃ ಕಶ್ಚಿದ್ ಧರ್ಮಾತ್ಮಾ ವೇದಪಾರಗಃ ।
ಸ ಮಯಾ ವರದಃ ಕಾಮಂ ಯಾಚಿತೋ ಧರ್ಮಸಂಹಿತಮ್ ॥೬॥

ಅಪತ್ಯಾರ್ಥಂ ಸ ತು ಮಯಾ ವೃತೋ ವೈ ಚಾರುಹಾಸಿನಿ ।
ನಾಹಮನ್ಯಾಯತಃ ಕಾಮಮಾಚರಾಮಿ ಶುಚಿಸ್ಮಿತೇ ।
ತಸ್ಮಾಲ್ಲಬ್ಧಂ ಮಯಾಪತ್ಯಮಿದಂ ಸತ್ಯಂ ಶುಚಿಸ್ಮಿತೇ ॥೭॥

ಧರ್ಮಾತ್ಮನೂ, ವೇದಪಾರಂಗತನೂ, ಆದ ಒಬ್ಬ ಋಷಿಯು ಬಂದಿದ್ದನು. ಕೇಳಿದ ವರವನ್ನು ಕೊಡುವ ಅವನನ್ನು ನಾನು ಧರ್ಮಸಮ್ಮತವಾದ ವರವನ್ನು ಕೇಳಿದೆ. ಚಾರುಹಾಸಿನಿಯೇ, ನಾನು ಸಂತಾನಾರ್ಥಿಯಾಗಿ ಅವನನ್ನು ವರಿಸಿದೆ. ಶುಚಿಸ್ಮಿತೆಯೇ, ನಾನು ಅನ್ಯಾಯದಿಂದ ಕಾಮವನ್ನು ಆಚರಿಸಲಿಲ್ಲ. ಈ ಮಗು ನಾನು ಅವನಿಂದ ಪಡೆದದ್ದು. ಇದು ಸತ್ಯವಾದ ಮಾತು.

ದೇವಯಾನೀ

ಶೋಭನಂ ಭೀರು ಸತ್ಯಂ ಚೇದ್ ಅಥ ವಿಜ್ಞಾಯತೇ ದ್ವಿಜಃ ।
ಗೋತ್ರನಾಮಾಭಿಜನತೋ ವೇತ್ತುಮಿಚ್ಛಾಮಿ ತಂ ದ್ವಿಜಮ್ ॥೮॥

ಭೀರುವೇ, ನಿನ್ನ ಮಾತು ಸತ್ಯವಾದರೆ ಒಳ್ಳೆಯದೇ ಆಯಿತು. ಆ ಬ್ರಾಹ್ಮಣನು ಯಾವ ಕುಲದವನು, ಯಾವ ಗೋತ್ರದವನು, ಏನು ಹೆಸರುಳ್ಳವನು ಎಂದು ತಿಳಿದೆಯಾ. ನಾನು ಅದನ್ನು ತಿಳಿಯಲು ಬಯಸುತ್ತೇನೆ.

ಶರ್ಮಿಷ್ಠಾ

ಓಜಸಾ ತಪಸಾ ಚೈವ ದೀಪ್ಯಮಾನಂ ರವಿಂ ಯಥಾ ।
ತಂ ದೃಷ್ಟ್ವಾ ಮಮ ಸಂಪ್ರಷ್ಟುಂ ಶಕ್ತಿರ್ನಾಸೀಚ್ಛುಚಿಸ್ಮಿತೇ ॥೯॥

ಶುಚಿಸ್ಮಿತೆಯೇ, ಕಾಂತಿಯಿಂದಲೂ, ತಪಸ್ಸಿನಿಂದಲೂ ಸೂರ್ಯನಂತೆ ಬೆಳಗುತ್ತಿದ್ದ ಅವನನ್ನು ನೋಡಿ ಅವನಿಗೆ ಈ ಪ್ರಶ್ನೆಯನ್ನು ಕೇಳಲು ನನಗೆ ಶಕ್ತಿಯೇ ಇರಲಿಲ್ಲ.

ದೇವಯಾನೀ

ಯದ್ಯೇತದೇವಂ ಶರ್ಮಿಷ್ಠೇ ನ ಮನ್ಯುರ್ವಿದ್ಯತೇ ಮಮ ।
ಅಪತ್ಯಂ ಯದಿ ತೇ ಲಬ್ಧಂ ಜ್ಯೇಷ್ಠಾಚ್ಛ್ರೇಷ್ಠಾಚ್ಚ ಭಾಮಿನಿ ॥೧೦॥

ಶರ್ಮಿಷ್ಠೆ, ಅದು ಹಾಗೆಯೇ ಆದರೆ ನನಗೆ ಕೋಪವಿಲ್ಲ. ಸುಂದರಿಯೇ ಜ್ಯೇಷ್ಠನೂ, ಶ್ರೇಷ್ಠನೂ ಆದ ಋಷಿಯಿಂದ ನೀನು ಮಗನನ್ನು ಪಡೆದಿದ್ದಾದರೆ ಒಳ್ಳೆಯದೇ.

ವೈಶಂಪಾಯನಃ

ಅನ್ಯೋನ್ಯಮೇವಂ ಸಂಭಾಷ್ಯ ಸಂಪ್ರಹಸ್ಯ ಚ ತೇ ಮಿಥಃ ।
ಜಗಾಮ ಭಾರ್ಗವೀ ವೇಶ್ಮ ತಥ್ಯಮಿತ್ಯೇ ವ ಜಜ್ಞುಷೀ ॥೧೧॥

ಪರಸ್ಪರವಾಗಿ ಹಾಸ್ಯ ಮಾಡಿ ನಕ್ಕು ದೇವಯಾನಿಯು ಶರ್ಮಿಷ್ಠೆಯ ಮಾತು ಸತ್ಯವೆಂದೇ ತಿಳಿದುಕೊಂಡು ತನ್ನ ಮನೆಗೆ ಹೋದಳು.

ಯಯಾತಿರ್ದೇವಯಾನ್ಯಾಂ ದ್ವೌ ಪುತ್ರಾವಜನಯನ್ನೃಪಃ ।
ಯದುಂ ಚ ತುರ್ವಶುಂ ಚೈವ ಇಂದ್ರವಿಷ್ಣೂ ಇವಾಪರೌ ॥೧೨॥

ಯಯಾತಿಯು ದೇವಯಾನಿಯಲ್ಲಿ ಇಂದ್ರ ವಿಷ್ಣುಗಳಂತಿರುವ 'ಯದು' ಮತ್ತು 'ತುರ್ವಶು' ಎಂಬ ಎರಡು ಮಕ್ಕಳನ್ನು ಪಡೆದನು.

ವೈಶಂಪಾಯನಃ

ಶ್ರುತ್ವಾ ಕುಮಾರಂ ಜಾತಂ ತು ದೇವಯಾನೀ ಶುಚಿಸ್ಮಿತಾ ।
ಚಿಂತಾಂ ಬಹುವಿಧಾಂ ಚಕ್ರೇ ಶರ್ಮಿಷ್ಠಾಂ ಪ್ರತಿ ಭಾರತ ॥೪॥

ಅಭಿಗಮ್ಯ ತು ಶರ್ಮಿಷ್ಠಾಂ ದೇವಯಾನೀ ತಥಾಽಬ್ರವೀತ್ ।
ಕಿಮಿದಂ ವ್ರಜಿನಂ ಸುಭ್ರು ಕೃತಂ ತೇ ಕಾಮಲುಬ್ಧಯಾ ॥೫॥

ಶುಚಿಸ್ಮಿತೆಯಾದ ದೇವಯಾನಿಯು ಶರ್ಮಿಷ್ಠೆಗೆ ಕುಮಾರನು ಜನಿಸಿದುದನ್ನು ಕೇಳಿ ಶರ್ಮಿಷ್ಠೆಯ ವಿಷಯದಲ್ಲಿ ಅನೇಕ ವಿಧವಾದ ಚಿಂತೆಗೆ ಒಳಗಾದಳು. ದೇವಯಾನಿಯು ಶರ್ಮಿಷ್ಠೆಯನ್ನು ಸಮೀಪಿಸಿ, ಸುಂದರಿಯೇ, ಕಾಮಲೋಭದಿಂದ ಎಂತಹ ಪಾಪಕೃತ್ಯವನ್ನು ಮಾಡಿದೆ ಎಂದು ಹೇಳಿದಳು.

ಶರ್ಮಿಷ್ಠಾ

ಋಷಿರಭ್ಯಾಗತಃ ಕಶ್ಚಿದ್ ಧರ್ಮಾತ್ಮಾ ವೇದಪಾರಗಃ ।
ಸ ಮಯಾ ವರದಃ ಕಾಮಂ ಯಾಚಿತೋ ಧರ್ಮಸಂಹಿತಮ್ ॥೬॥

ಅಪತ್ಯಾರ್ಥಂ ಸ ತು ಮಯಾ ವೃತೋ ವೈ ಚಾರುಹಾಸಿನಿ ।
ನಾಹಮನ್ಯಾಯತಃ ಕಾಮಮಾಚರಾಮಿ ಶುಚಿಸ್ಮಿತೇ ।
ತಸ್ಮಾಲ್ಲಬ್ಧಂ ಮಯಾಪತ್ಯಮಿದಂ ಸತ್ಯಂ ಶುಚಿಸ್ಮಿತೇ ॥೭॥

ಧರ್ಮಾತ್ಮನೂ, ವೇದಪಾರಂಗತನೂ, ಆದ ಒಬ್ಬ ಋಷಿಯು ಬಂದಿದ್ದನು. ಕೇಳಿದ ವರವನ್ನು ಕೊಡುವ ಅವನನ್ನು ನಾನು ಧರ್ಮಸಮ್ಮತವಾದ ವರವನ್ನು ಕೇಳಿದೆ. ಚಾರುಹಾಸಿನಿಯೇ, ನಾನು ಸಂತಾನಾರ್ಥಿಯಾಗಿ ಅವನನ್ನು ವರಿಸಿದೆ. ಶುಚಿಸ್ಮಿತೆಯೇ, ನಾನು ಅನ್ಯಾಯದಿಂದ ಕಾಮವನ್ನು ಆಚರಿಸಲಿಲ್ಲ. ಈ ಮಗು ನಾನು ಅವನಿಂದ ಪಡೆದದ್ದು. ಇದು ಸತ್ಯವಾದ ಮಾತು.

ದೇವಯಾನೀ

ಶೋಭನಂ ಭೀರು ಸತ್ಯಂ ಚೇದ್ ಅಥ ವಿಜ್ಞಾಯತೇ ದ್ವಿಜಃ ।
ಗೋತ್ರನಾಮಾಭಿಜನತೋ ವೇತ್ತುಮಿಚ್ಛಾಮಿ ತಂ ದ್ವಿಜಮ್ ॥೮॥

ಭೀರುವೇ, ನಿನ್ನ ಮಾತು ಸತ್ಯವಾದರೆ ಒಳ್ಳೆಯದೇ ಆಯಿತು. ಆ ಬ್ರಾಹ್ಮಣನು ಯಾವ ಕುಲದವನು, ಯಾವ ಗೋತ್ರದವನು, ಏನು ಹೆಸರುಳ್ಳವನು ಎಂದು ತಿಳಿದೆಯಾ. ನಾನು ಅದನ್ನು ತಿಳಿಯಲು ಬಯಸುತ್ತೇನೆ.

ಶರ್ಮಿಷ್ಠಾ

ಓಜಸಾ ತಪಸಾ ಚೈವ ದೀಪ್ಯಮಾನಂ ರವಿಂ ಯಥಾ ।
ತಂ ದೃಷ್ಟ್ವಾ ಮಮ ಸಂಪ್ರಷ್ಟುಂ ಶಕ್ತಿರ್ನಾಸೀಚ್ಛುಚಿಸ್ಮಿತೇ ॥೯॥

ಶುಚಿಸ್ಮಿತೆಯೇ, ಕಾಂತಿಯಿಂದಲೂ, ತಪಸ್ಸಿನಿಂದಲೂ ಸೂರ್ಯನಂತೆ ಬೆಳಗುತ್ತಿದ್ದ ಅವನನ್ನು ನೋಡಿ ಅವನಿಗೆ ಈ ಪ್ರಶ್ನೆಯನ್ನು ಕೇಳಲು ನನಗೆ ಶಕ್ತಿಯೇ ಇರಲಿಲ್ಲ.

ದೇವಯಾನೀ

ಯದ್ಯೇತದೇವಂ ಶರ್ಮಿಷ್ಠೇ ನ ಮನ್ಯುರ್ವಿದ್ಯತೇ ಮಮ ।
ಅಪತ್ಯಂ ಯದಿ ತೇ ಲಬ್ಧಂ ಜ್ಯೇಷ್ಠಾಚ್ಛ್ರೇಷ್ಠಾಚ್ಚ ಭಾಮಿನಿ ॥೧೦॥

ಶರ್ಮಿಷ್ಠೆ, ಅದು ಹಾಗೆಯೇ ಆದರೆ ನನಗೆ ಕೋಪವಿಲ್ಲ. ಸುಂದರಿಯೇ ಜ್ಯೇಷ್ಠನೂ, ಶ್ರೇಷ್ಠನೂ ಆದ ಋಷಿಯಿಂದ ನೀನು ಮಗನನ್ನು ಪಡೆದಿದ್ದಾದರೆ ಒಳ್ಳೆಯದೇ.

ವೈಶಂಪಾಯನಃ

ಅನ್ಯೋನ್ಯಮೇವಂ ಸಂಭಾಷ್ಯ ಸಂಪ್ರಹಸ್ಯ ಚ ತೇ ಮಿಥಃ ।
ಜಗಾಮ ಭಾರ್ಗವೀ ವೇಶ್ಮ ತಥ್ಯಮಿತ್ಯೇ ವ ಜಜ್ಞುಷೀ ॥೧೧॥

ಪರಸ್ಪರವಾಗಿ ಹಾಸ್ಯ ಮಾಡಿ ನಕ್ಕು ದೇವಯಾನಿಯು ಶರ್ಮಿಷ್ಠೆಯ ಮಾತು ಸತ್ಯವೆಂದೇ ತಿಳಿದುಕೊಂಡು ತನ್ನ ಮನೆಗೆ ಹೋದಳು.

ಯಯಾತಿರ್ದೇವಯಾನ್ಯಾಂ ದ್ವೌ ಪುತ್ರಾವಜನಯನ್ನೃಪಃ ।
ಯದುಂ ಚ ತುರ್ವಶುಂ ಚೈವ ಇಂದ್ರವಿಷ್ಣೂ ಇವಾಪರೌ ॥೧೨॥

ಯಯಾತಿಯು ದೇವಯಾನಿಯಲ್ಲಿ ಇಂದ್ರ ವಿಷ್ಣುಗಳಂತಿರುವ 'ಯದು' ಮತ್ತು 'ತುರ್ವಶು' ಎಂಬ ಎರಡು ಮಕ್ಕಳನ್ನು ಪಡೆದನು.

ತಸ್ಮಿನ್ ಕಾಲೇ ತು ರಾಜರ್ಷಿರ್ಯಯಾತಿಃ ಪೃಥಿವೀಪತಿಃ ।
ಮಾಧ್ವೀಕರಸಸಂಯುಕ್ತಾಂ ಮದಿರಾಂ ಮದವರ್ಧನೀಮ್ ॥೧೩॥

ಪಾಯಯಾಮಾಸ ಶುಕ್ರಸ್ಯ ತನಯಾಂ ರಕ್ತಪಿಂಜರಾಮ್ ।
ಪೀತ್ವಾಪೀತ್ವಾ ಚ ಮದಿರಾಂ ದೇವಯಾನೀ ಮುಮೋಹ ಸಾ ॥೧೪॥

ಆ ಕಾಲದಲ್ಲಿ ರಾಜರ್ಷಿಯಾದ ಯಯಾತಿಯು ಮದವನ್ನು ವರ್ಧಿಸುವ, ಕೆಂಪು ಮತ್ತು ಹಳದಿ ಬಣ್ಣದಿಂದ ಕೂಡಿದ ಗುಡದಿಂದ ಮಾಡಿದ ಮದಿರೆಯನ್ನು ದೇವಯಾನಿಗೆ ಕುಡಿಸಿದನು. ದೇವಯಾನಿಯು ಕುಡಿದು ಕುಡಿದು ಎಚ್ಚರವನ್ನು ಕಳೆದುಕೊಂಡಳು.

ರುದತೀ ಗಾಯಮಾನಾ ಚ ನೃತ್ಯಂತೀ ಚ ಮುಹುರ್ಮುಹುಃ ।
ಬಹು ಪ್ರಲಪತೀ ದೇವೀ ರಾಜಾನಮಿದಮಬ್ರವೀತ್ ॥೧೫॥

ಕೆಲವು ಸಲ ನಗುತ್ತಾ, ಕೆಲವು ಸಲ ಅಳುತ್ತಾ, ಮತ್ತೆ ಮತ್ತೆ ನೃತ್ಯವನ್ನು ಮಾಡುತ್ತಾ, ಬಹಳ ಮಾತನಾಡುತ್ತಾ, ದೇವಯಾನಿಯು ರಾಜನನ್ನು ಕುರಿತು ಹೀಗೆ ಹೇಳಿದಳು.

ರಾಜವದ್ ರೂಪವೇಷೌ ತೇ ಕಿಮರ್ಥಂ ತ್ವಮಿಹಾಗತಃ ।
ಕೇನ ಕಾರ್ಯೇಣ ಸಂಪ್ರಾಪ್ತೋ ನಿರ್ಜನಂ ಗಹನಂ ವನಮ್ ॥೧೬॥

ನಿನ್ನ ರೂಪವೇಷಗಳು ರಾಜನಂತಿವೆ. ನೀನು ಏತಕ್ಕೆ ಇಲ್ಲಿಗೆ ಬಂದಿದ್ದೀಯೇ? ಯಾವ ಉದ್ದೇಶದಿಂದ ನಿರ್ಜನವಾದ ಮತ್ತು ದಟ್ಟವಾದ ಈ ವನಕ್ಕೆ ಬಂದಿದ್ದೀಯೇ?

ದ್ವಿಜಶ್ರೇಷ್ಠ ನೃಪಶ್ರೇಷ್ಠೋ ಯಯಾತಿಶ್ಚೋಗ್ರದರ್ಶನಃ ।
ತಸ್ಮಾದಿತಃ ಪಲಾಯಸ್ವ ಹಿತಮಿಚ್ಛಸಿ ಚೇದ್ ದ್ವಿಜ ॥೧೭॥

ಇತ್ಯೇವಂ ಪ್ರಲಪಂತೀಂ ತಾಂ ದೇವಯಾನೀಂ ಸ ನಾಹುಷಃ ।
ಭರ್ತ್ಸಯಾಮಾಸ ವಚನೈರಪಾಪಾಂ ಪಾಪವರ್ಧನೀಮ್ ॥೧೮॥

ಎಲೈ ದ್ವಿಜಶ್ರೇಷ್ಠನೇ, ರಾಜಶ್ರೇಷ್ಠನಾದ ಯಯಾತಿಯು ಬಹಳ ಉಗ್ರ ಸ್ವಭಾವದವನು. ಆದ್ದರಿಂದ ಎಲೈ ದ್ವಿಜನೇ, ನೀನು ಹಿತವನ್ನು ಬಯುಸುವುದಾದರೆ, ಇಲ್ಲಿಂದ ಬೇಗ ಓಡಿಹೋಗು. ಹೀಗೆ ಮಾತನಾಡುತ್ತಿದ್ದ ಸ್ವತಃ ಪಾಪವಿಲ್ಲದ, ಮದಿರೆಯ ಬಲದಿಂದ ಪತಿಯ ಧಿಕ್ಕಾರ ಮಾಡಿ ಪಾಪವನ್ನು ಹೆಚ್ಚಿಸಿಕೊಳ್ಳುತ್ತಿದ್ದ ದೇವಯಾನಿಯನ್ನು ಯಯಾತಿಯು ಗದರಿಸಿ ನಿಂದಿಸಿದನು.

ತತೋ ವರ್ಷವರಾನ್ ಮೂಕಾನ್ ಪಂಗೂನ್ ವೃದ್ಧಾನ್ ಸಷಂಡಕಾನ್ ।
ರಕ್ಷಣೇ ದೇವಯಾನ್ಯಾಃ ಸ ಪೋಷಣೇ ಚ ಶಶಾಸ ಹ ॥೧೯॥

ಅನಂತರ ದೇವಯಾನಿಯ ರಕ್ಷಣೆ ಮತ್ತು ಪೋಷಣೆಗಾಗಿ ವೃದ್ಧರನ್ನೂ, ಮೂಕರನ್ನೂ, ಹೆಳವರನ್ನೂ ಮತ್ತು ನಪುಂಸಕರನ್ನೂ ನೇಮಿಸಿದನು.

ತತಸ್ತು ನಾಹುಷೋ ರಾಜಾ ಶರ್ಮಿಷ್ಠಾಂ ಪ್ರಾಪ್ಯ ಬುದ್ಧಿಮಾನ್ ।
ರೇಮೇ ಚ ಸುಚಿರಂ ಕಾಲಂ ತಯಾ ಶರ್ಮಿಷ್ಠಯಾ ಸಹ ॥೨೦॥

ಅನಂತರ ಬುದ್ಧಿವಂತನಾದ ಯಯಾತಿಯು ಶರ್ಮಿಷ್ಠೆಯನ್ನು ಹೊಂದಿ ಬಹಳ ಕಾಲ ಅವಳ ಜೊತೆಯಲ್ಲಿ ಸುಖವನ್ನು ಹೊಂದಿದನು.

ತಸ್ಮಾದೇವ ತು ರಾಜರ್ಷೇಃ ಶರ್ಮಿಷ್ಠಾ ವಾರ್ಷಪರ್ವಣೇ ।
ದ್ರುಹ್ಯುಂ ಚಾನುಂ ಚ ಪೂರುಂ ಚ ತ್ರೀನ್ ಕುಮಾರಾನಜೀಜನತ್ ॥

ವೃಷಪರ್ವನ ಮಗಳಾದ ಶರ್ಮಿಷ್ಠೆಯು, ಅದೇ ರಾಜರ್ಷಿಯಿಂದ 'ದ್ರುಹ್ಯ', 'ಅನು' ಮತ್ತೆ 'ಪೂರು' ಎಂಬ ಮೂರು ಗಂಡು ಮಕ್ಕಳನ್ನು ಪಡೆದಳು.

ತತಃ ಕಾಲೇ ತು ರಾಜೇಂದ್ರ ದೇವಯಾನೀ ವರಾಂಗನಾ ।
ಯಯಾತಿಸಹಿತಾ ದೇವೀ ಜಗಾಮ ಪ್ರಮದಾವನಮ್ ॥೨೨॥

ಎಲೈ ರಾಜೇಂದ್ರನೇ, ಅನಂತರ ಕೆಲವು ಕಾಲದ ಮೇಲೆ, ಸುಂದರಿಯಾದ ದೇವಯಾನಿಯು ಯಯಾತಿಯ ಜೊತೆಯಲ್ಲಿ ಪ್ರಮದಾವನಕ್ಕೆ ಹೋದಳು.

ಸಾ ದದರ್ಶ ವನೇ ತತ್ರ ಕುಮಾರಾನ್ ದೇವರೂಪಿಣಃ ।
ಕ್ರೀಡಮಾನಾನ್ ಸುವಿಸ್ರಬ್ಧಾನ್ ವಿಸ್ಮಿತಾ ಚೇದಮಬ್ರವೀತ್ ॥೨೩॥

ಅವಳು ಅಲ್ಲಿ ದೇವಕುಮಾರರಂತೆ ಇದ್ದು ನಿರ್ಭಯವಾಗಿ ಆಡುತ್ತಿದ್ದ ಮೂರು ಮಕ್ಕಳನ್ನು ನೋಡಿ ವಿಸ್ಮಿತಳಾಗಿ ಈ ಮಾತನ್ನು ಆಡಿದಳು.

ಕಸ್ಯೈತೇ ದಾರಕಾ ರಾಜನ್ ದೇವಪುತ್ರೋಪಮಾಃ ಶುಭಾಃ ।
ವರ್ಚಸಾ ರೂಪತಶ್ಚೈವ ಸದೃಶಾ ಮೇ ಮತಾಸ್ತವ ॥೨೪॥

ಎಲೈ ರಾಜನೇ, ದೇವಕುಮಾರರಂತೆ ಮಂಗಳಕರವಾಗಿರುವ ಈ ಮೂವರು ಯಾರ ಮಕ್ಕಳು, ರೂಪದಿಂದಲೂ ಮತ್ತು ವರ್ಚಸ್ಸಿನಿಂದಲೂ ನಿನ್ನನ್ನೇ ಹೋಲುತ್ತಾರೆ ಎಂದು ನನ್ನ ಅಭಿಪ್ರಾಯ.

ವೈಶಂಪಾಯನಃ

ಏವಂ ಪೃಷ್ಟಾ ತು ರಾಜಾನಂ ಕುಮಾರಾನ್ ಪರ್ಯಪೃಚ್ಛತ ।
ತಸ್ಮಿನ್ ಕಾಲೇ ತು ತಚ್ಛ್ರುತ್ವಾ ಧಾತ್ರೀ ತೇಷಾಂ ವಚೋಽಬ್ರವೀತ್ ।
ಕಿಂ ನ ಬ್ರೂತ ಕುಮಾರಾ ವಃ ಪಿತರಂ ವೈ ದ್ವಿಜರ್ಷಭಮ್ ॥೨೫॥

ಹೀಗೆ ರಾಜನನ್ನು ಕೇಳಿ ಅನಂತರ ಮಕ್ಕಳನ್ನು ಕೇಳಿದಳು. ಆಗ ಆ ಮಕ್ಕಳ ಧಾತ್ರಿಯು ಆ ಮಾತನ್ನು ಕೇಳಿ ಮಕ್ಕಳನ್ನು ಕುರಿತು ಮಕ್ಕಳೇ, ನಿಮ್ಮ ತಂದೆಯಾದ ದ್ವಿಜಶ್ರೇಷ್ಠನು ಯಾರು ಎಂದು ಏಕೆ ಹೇಳುತ್ತಿಲ್ಲ ಎಂದು ಕೇಳಿದಳು.

ದೇವಯಾನೀ

ಕಿನ್ನಾಮಧೇಯಗೋತ್ರೋ ವಃ ಪುತ್ರಕಾಃ ಬ್ರಾಹ್ಮಣಃ ಪಿತಾ ।
ವಿಬ್ರೂತ ತತ್ತ್ವತಃ ಕ್ಷಿಪ್ರಂ ಕಶ್ಚಾಸೌ ಕ್ವ ಚ ವರ್ತತೇ ।
ವಿಬ್ರೂತ ಮೇ ಯಥಾತಥ್ಯಂ ಶ್ರೋತುಮಿಚ್ಛಾಮಿ ತಂ ಹ್ಯಹಮ್ ॥೨೬॥

ಮಕ್ಕಳೇ, ನಿಮ್ಮ ತಂದೆಯಾದ ಬ್ರಾಹ್ಮಣನ ನಾಮ ಮತ್ತು ಗೋತ್ರಗಳೇನು? ಬೇಗ ಸರಿಯಾದ ಉತ್ತರವನ್ನು ಕೊಡಿ. ಅವನು ಯಾರು ಮತ್ತು ಎಲ್ಲಿರುತ್ತಾನೆ. ನೀವು ನನಗೆ ಸರಿಯಾಗಿ ಹೇಳಿ. ನಾನು ಅದನ್ನು ಕೇಳಲು ಇಷ್ಟಪಡುತ್ತೇನೆ.

ವೈಶಂಪಾಯನಃ

ಏವಮುಕ್ತಾಃ ಕುಮಾರಾಸ್ತೇ ದೇವಯಾನ್ಯಾ ಸುಮಧ್ಯಯಾ ।
ತೇಽದರ್ಶಯನ್ ಪ್ರದೇಶಿನ್ಯಾ ತಮೇವ ಪಿತರಂ ನೃಪಮ್ ॥೨೭॥

ಆ ಮಕ್ಕಳು ಸುಂದರಿಯಾದ ದೇವಯಾನಿಯಿಂದ ಹೀಗೆ ಹೇಳಲ್ಪಟ್ಟವರಾಗಿ ತಮ್ಮ ತೋರು ಬೆರಳಿನಿಂದ ರಾಜನನ್ನೇ ತಂದೆಯೆಂದು ತೋರಿಸಿದರು.

ಶರ್ಮಿಷ್ಠಾಂ ಮಾತರಂ ಚೈವ ತಸ್ಯಾ ಊಚುಶ್ಚ ದಾರಕಾಃ ।
ಋಷಿಶ್ಚ ಬ್ರಾಹ್ಮಣಶ್ಚೈವ ದ್ವಿಜಾತಿಶ್ಚೈವ ನಃ ಪಿತಾ ॥೨೮॥

ಶರ್ಮಿಷ್ಠಾ ನಾನೃತಂ ಬ್ರೂಯಾದ್ ದೇವಯಾನಿ ಕ್ಷಮಸ್ವ ವೈ ।
ಇತ್ಯುಕ್ತ್ವಾ ಸಹಿತಾ ದೇವೀಂ ರಾಜಾನಮುಪಚಕ್ರಮುಃ ॥೨೯॥

ಆ ಮಕ್ಕಳು ದೇವಯಾನಿಯನ್ನು ಕುರಿತು ತಮ್ಮ ತಾಯಿ ಶರ್ಮಿಷ್ಠೆ ಎಂದು ತಿಳಿಸಿದರು. ನಮ್ಮ ತಂದೆಯು, ಋಷಿಯೂ, ದ್ವಿಜನೂ ಮತ್ತು ಬ್ರಾಹ್ಮಣನೂ ಹೌದು. ಶರ್ಮಿಷ್ಠೆಯು ಅನೃತವನ್ನು ಹೇಳುವುದಿಲ್ಲ. ದೇವಯಾನಿ, ನಮ್ಮನ್ನು ಕ್ಷಮಿಸು ಎಂದು ಹೇಳಿ ಎಲ್ಲರೂ ಒಟ್ಟಿಗೆ ದೇವಿಯ ಸಮೀಪದಲ್ಲಿದ್ದ ರಾಜನ ಹತ್ತಿರ ಬರಲು ಹೊರಟರು.

ನಾಭ್ಯನಂದತ ತಾನ್ ರಾಜಾ ದೇವಯಾನ್ಯಾಸ್ತದಾऽಂತಿಕೇ ।
ರುದಂತಸ್ತೇऽಥ ಶರ್ಮಿಷ್ಠಾಮಭ್ಯಯುರ್ಬಾಲಕಾಸ್ತತಃ ॥೩೦॥

ಆಗ ದೇವಯಾನಿಯು ಹತ್ತಿರದಲ್ಲಿದ್ದುದರಿಂದ ರಾಜನು ತನ್ನ ಮಕ್ಕಳನ್ನು ಅಭಿನಂದಿಸಲಿಲ್ಲ. ಆಗ ಆ ಮಕ್ಕಳು ಅಳುತ್ತಾ ಶರ್ಮಿಷ್ಠೆಯ ಕಡೆಗೆ ಹೋದರು.

ಅವಿಬ್ರುವಂತಂ ಕಿಂಚಿಚ್ಚ ರಾಜಾನಂ ಚಾರುಲೋಚನಾ ।
ನಾತಿದೂರಾಚ್ಚ ರಾಜಾನಂ ಸಾ ಚಾತಿಷ್ಠದವಾಙ್ಮುಖೀ ॥೩೧॥

ಚಾರುನೇತ್ರೆಯಾದ ಶರ್ಮಿಷ್ಠೆಯು ಏನೂ ಮಾತನಾಡದಿರುವ ರಾಜನಿಗೆ ಅತಿದೂರವಲ್ಲದ ಸ್ಥಳದಲ್ಲಿ ಮುಖವನ್ನು ಕೆಳಗೆ ಹಾಕಿ ನಿಂತಳು.

ಶ್ರುತ್ವಾ ತು ತೇಷಾಂ ಬಾಲಾನಾಂ ಸವ್ರೀಡ ಇವ ಪಾರ್ಥಿವಃ ।
ಪ್ರತಿವಕ್ತುಮಶಕ್ತೋऽಭೂತ್ ತೂಷ್ಣೀಂಭೂತೋऽಭವನ್ನೃಪಃ ॥೩೨॥

ಆ ಮಕ್ಕಳ ಮಾತನ್ನು ಕೇಳಿ ನಾಚಿಕೆಗೊಂಡ ರಾಜನು ಪ್ರತಿಯಾಗಿ ಮಾತನಾಡಲು ಶಕ್ತವಾಗದೆ ಸುಮ್ಮನೆ ನಿಂತಿದ್ದನು.

ದೃಷ್ಟ್ವಾ ತು ತೇಷಾಂ ಬಾಲಾನಾಂ ಪ್ರಣಯಂ ಪಾರ್ಥಿವಂ ಪ್ರತಿ ।
ಬುಧ್ವಾ ತು ತತ್ತ್ವತೋ ದೇವೀ ಶರ್ಮಿಷ್ಠಾಮಿದಮಬ್ರವೀತ್ ॥೩೩॥

ಆ ಮಕ್ಕಳಿಗೆ ರಾಜನಲ್ಲಿದ್ದ ಪ್ರೀತಿಯನ್ನು ಗಮನಿಸಿ ಎಲ್ಲವನ್ನೂ ಸರಿಯಾಗಿ ತಿಳಿದುಕೊಂಡ ದೇವಯಾನಿಯು ಶರ್ಮಿಷ್ಠೆಯನ್ನು ಕುರಿತು ಹೀಗೆ ಹೇಳಿದಳು.

ಗೃಹೀತ್ವಾ ತು ಕರೇ ರೋಷಾಚ್ಛರ್ಮಿಷ್ಠಾಂ ಪುನರಬ್ರವೀತ್ ।
ಅನ್ಯೋ ಗಚ್ಛತಿ ಮಾಂ ಕಶ್ಚಿದ್ ಋಷಿರಿತ್ಯೇವಮಬ್ರವೀಃ ॥೩೪॥

ರೋಷದಿಂದ ಅವಳ ಕೈಯನ್ನು ಹಿಡಿದು, ಶರ್ಮಿಷ್ಠೆಯನ್ನು ಕುರಿತು ನನ್ನ ಬಳಿಗೆ ಬೇರೊಬ್ಬ ಋಷಿಯು ಬರುತ್ತಾನೆ ಎಂದು ಹೇಳಿದೆ.

ಯಯಾತಿಮೇವಂ ನೂನಂ ತ್ವಂ ಪ್ರೋತ್ಸಾಹಯಸಿ ಭಾಮಿನಿ ।
ಪೂರ್ವಮೇವ ಮಯಾ ಪ್ರೋಕ್ತಂ ತ್ವಯಾ ತು ವ್ರಜಿನಂ ಕೃತಮ್ ॥೩೫॥

ಸುಂದರಿಯೇ, ಅವನು ಯಯಾತಿಯೇ ಸರಿ. ನೀನು ಅವನನ್ನು ಪ್ರೋತ್ಸಾಹಿಸುತ್ತಿದ್ದೀಯೇ. ನಾನು ಮೊದಲೇ ನಿನಗೆ ಆದೇಶವನ್ನು ನೀಡಿದ್ದೇನೆ. ನೀನು ಪಾಪಕಾರ್ಯವನ್ನು ಮಾಡಿದ್ದೀಯೇ.

ಮಯ್ಯಧೀನಾ ಸತೀ ಕಸ್ಮಾದಕಾರ್ಷೀರ್ಮಮ ವಿಪ್ರಿಯಮ್ ।
ತಮೇವಾಸುರಧರ್ಮಂ ತ್ವಂ ಚರತೀ ನ ಬಿಭೇಷಿ ಮಾಮ್ ॥೩೬॥

ನನಗೆ ಅಧೀನಳಾಗಿ ಏತಕ್ಕೆ ನನಗೆ ಅಪ್ರಿಯವಾದ ಕಾರ್ಯವನ್ನು ಮಾಡಿದೆ. ಮೊದಲಿನ ಅಸುರ ಧರ್ಮವನ್ನೇ ಆಚರಿಸುತ್ತಾ ನೀನು ನನಗೆ ಹೆದರುತ್ತಲೇ ಇಲ್ಲ.

ಶರ್ಮಿಷ್ಠಾ

ಯದುಕ್ತಮೃಷಿರಿತ್ಯೇವ ತತ್ಸತ್ಯಂ ಚಾರುಹಾಸಿನಿ ।
ನ್ಯಾಯತೋ ಧರ್ಮತಶ್ಚೈವ ಚರಂತೀ ನ ಬಿಭೇಮಿ ತೇ ॥೩೭॥

ವೃತಸ್ತ್ವಯಾ ಯದಾ ರಾಜಾ ತದೈವಾಯಂ ಮಯಾ ವೃತಃ ।
ಮಮಾಪಿ ಚಾಭವದ್ ಭರ್ತಾ ಸಖೀಭರ್ತಾ ಹಿ ಶೋಭನೇ ॥೩೮॥

ಪೂಜ್ಯಾ ಚ ಮಮ ಮಾನ್ಯಾ ಚ ಜ್ಯೇಷ್ಠಾ ಸಾಧ್ವೀ ಚ ಬ್ರಾಹ್ಮಣೀ ।
ತತ್ತೋಽಪಿ ಮೇ ಪೂಜ್ಯತಮೋ ರಾಜರ್ಷಿಃ ಕಿಂ ನ ವೇತ್ಥ ತತ್ ॥೩೯॥

ಎಲೌ ಚಾರುಹಾಸಿನಿ, ಋಷಿ ಎಂದು ಹೇಳಿದುದು ಸತ್ಯ. ನ್ಯಾಯದಿಂದಲೂ, ಧರ್ಮದಿಂದಲೂ ನಡೆಯುತ್ತಿರುವ ನಾನು ನಿನಗೆ ಹೆದರುವುದಿಲ್ಲ. ನೀನು ಯಾವಾಗ ರಾಜನನ್ನು ವರಿಸಿದೆಯೋ, ಆಗಲೇ ನಾನು ಅವನನ್ನು ವರಿಸಿದೆ. ಮಂಗಳಸ್ವರೂಪಳೇ, ನನ್ನ ಸಖಿಯ ಪತಿಯಾದವನು ನನಗೂ ಸಹ ಪತಿಯಾದನು. ಜ್ಯೇಷ್ಠಳೂ, ಸಾಧ್ವಿಯೂ, ಬ್ರಾಹ್ಮಣಿಯೂ ಆದ ನೀನು ನನಗೆ ಪೂಜ್ಯಳು ಮತ್ತು ಮಾನ್ಯಳು. ಆದರೆ ರಾಜರ್ಷಿಯಾದ ಯಯಾತಿಯು ನಿನಗಿಂತಲೂ ನನಗೆ ಪೂಜ್ಯತಮನಾದವನು. ಏಕೆ ಈ ವಿಷಯ ನಿನಗೆ ತಿಳಿಯುವುದಿಲ್ಲ.

ತವ ಪಿತ್ರಾ ಮೇ ಗುರುಣಾ ಸಹ ದತ್ತೇ ಉಭೇ ಶುಭೇ ।
ತತೋ ಭರ್ತಾ ಚ ಪೂಜ್ಯಶ್ಚ ಪೋಷ್ಯಾಂ ಪೋಷಯತೀಹ ಮಾಮ್ ॥

ನನ್ನ ಗುರುಗಳಾದ ನಿನ್ನ ತಂದೆಯಿಂದ ನಾವಿಬ್ಬರೂ ಒಟ್ಟಿಗೆ ಕೊಡಲ್ಪಟ್ಟೆವು. ಆದ್ದರಿಂದ ನನಗೆ ಪತಿಯೂ ಮತ್ತು ಪೂಜ್ಯನೂ ಆದ ಯಯಾತಿಯು, ಪೋಷಿಸಬೇಕಾದ ನನ್ನನ್ನು ಪೋಷಿಸುತ್ತಾನೆ.

ವೈಶಂಪಾಯನಃ

ಏವಂ ಶ್ರುತ್ವಾ ತತೋ ವಾಕ್ಯಂ ದೇವಯಾನ್ಯಬ್ರವೀದಿದಮ್ ।
ರಾಜನ್ ನಾದ್ಯೇಹ ವತ್ಸ್ಯಾಮಿ ವಿಪ್ರಿಯಂ ಮೇ ಕೃತಂ ತ್ವಯಾ ।
ರಮಸ್ವೇಹ ಯಥಾಕಾಮಂ ದೇವ್ಯಾ ಶರ್ಮಿಷ್ಠಯಾ ಸಹ ॥೪೧॥

ಈ ಮಾತನ್ನು ಕೇಳಿ ದೇವಯಾನಿಯು ಹೀಗೆ ಹೇಳಿದಳು. ರಾಜನೇ, ನೀನು ನನಗೆ ಅಪ್ರಿಯವನ್ನುಂಟುಮಾಡಿದ್ದೀಯೇ. ನಾನು ಇಂದಿನಿಂದ ಇಲ್ಲಿ ಇರುವುದಿಲ್ಲ. ಶರ್ಮಿಷ್ಠೆಯ ಜೊತೆಯಲ್ಲಿ ಬೇಕಾದಂತೆ ಸುಖವಾಗಿರು ಎಂದು ಹೇಳಿದಳು.

ಪ್ರತಿಜಜ್ವಾಲ ಕ್ರೋಧೇನ ದೇವಯಾನೀ ತದಾ ಭೃಶಮ್ ।
ನಿರ್ದಹಂತೀವ ಶರ್ಮಿಷ್ಠಾಂ ಸವ್ರೀಡಾಂ ಸಮುದೈಕ್ಷತ ।
ಅಪವಿಧ್ಯ ತು ಸರ್ವಾಣಿ ಭೂಷಣಾನ್ಯಸಿತೇಕ್ಷಣಾ ॥೪೨॥

ಸಹಸೋತ್ಪತಿತಾ ಶ್ಯಾಮಾ ನೀಲಕುಂತಲಮೂರ್ಧಜಾ ।
ರುಷ್ಟಾ ಸಕಾಶಂ ಕಾವ್ಯಸ್ಯ ಪ್ರಸ್ಥಿತಾ ವ್ಯಥಿತಾನನಾ ॥೪೩॥

ಆಗ ದೇವಯಾನಿಯು ಬಹಳ ಸಿಟ್ಟಿನಿಂದ ಉರಿದು ನಾಚಿಕೆಯಿಂದ ಕೂಡಿದ ಶರ್ಮಿಷ್ಠೆಯನ್ನು ಸುಟ್ಟುಬಿಡುವಂತೆ ನೋಡಿದಳು. ಎಲ್ಲಾ ಆಭರಣಗಳನ್ನು ಎಸೆದು, ಕಪ್ಪು ಕಣ್ಣುಳ್ಳವಳೂ, ಶ್ಯಾಮವರ್ಣದವಳೂ ಮತ್ತು ಕಪ್ಪು ಗುಂಗುರು ಕೂದಲು ಉಳ್ಳವಳೂ ಆದ ಅವಳು ತಕ್ಷಣ ಎದ್ದು ರೋಷದಿಂದ ಕೂಡಿದವಳಾಗಿ ವ್ಯಥೆಯನ್ನು ಹೊತ್ತ ಮುಖದಿಂದ ಶುಕ್ರಾಚಾರ್ಯರ ಸಮೀಪಕ್ಕೆ ಹೊರಟಳು.

ಅನುವವ್ರಾಜ ಸಂಭ್ರಾಂತಃ ಪೃಷ್ಠತಃ ಸಾಂತ್ವಯನ್ ನೃಪಃ ।
ನ ನ್ಯವರ್ತತ ವೈ ತಸ್ಮಾತ್ ಕ್ರೋಧಸಂರಕ್ತಲೋಚನಾ ॥೪೪॥

ರಾಜನು ದಿಗ್ಭ್ರಮೆಯಿಂದ ಅವಳನ್ನು ಸಮಾಧಾನ ಮಾಡುತ್ತಾ ಅವಳ ಹಿಂದೆ ಹೊರಟನು. ಆದರೆ, ಸಿಟ್ಟಿನಿಂದ ಕೆಂಪಾದ ಕಣ್ಣುಳ್ಳ ದೇವಯಾನಿಯು ಹಿಂದಿರುಗಲಿಲ್ಲ.

ಅವಿಬ್ರುವಂತೀ ಕಿಂಚಿಚ್ಚ ರಾಜಾನಂ ಚಾರುಹಾಸಿನೀ ।
ಅಚಿರಾದಿವ ಸಂಪ್ರಾಪ್ತಾ ಕಾವ್ಯಸ್ಯೋಶನಸೋಽಂತಿಕಮ್ ॥೪೫॥

ಚಾರುಹಾಸಿನಿಯಾಗಿದ್ದ ಅವಳು ಹಿಂದಿನಿಂದ ಮಾತನಾಡಿಸುತ್ತಿದ್ದ ರಾಜನಿಗೆ ಏನೂ ಉತ್ತರವನ್ನು ಕೊಡದೆ, ಬಹಳ ಬೇಗ ಶುಕ್ರಾಚಾರ್ಯರ ಸಮೀಪಕ್ಕೆ ಬಂದಳು.

ಸಾ ತು ದೃಷ್ಟ್ವೈವ ಪಿತರಮಭಿವಾದ್ಯಾಗ್ರತಃ ಸ್ಥಿತಾ ।
ಅನಂತರಂ ಯಯಾತಿಸ್ತು ಪೂಜಯಾಮಾಸ ಭಾರ್ಗವಮ್ ॥೪೬॥

ಅವಳು ತಂದೆಯನ್ನು ನೋಡಿದ ತಕ್ಷಣ ನಮಸ್ಕರಿಸಿ ಮುಂದೆ ನಿಂತಳು. ಅನಂತರ ಬಂದ ಯಯಾತಿಯು ಶುಕ್ರಾಚಾರ್ಯರನ್ನು ಪೂಜಿಸಿದನು.

ದೇವಯಾನೀ

ಅಧರ್ಮೇಣ ಜಿತೋ ಧರ್ಮಃ ಪ್ರವೃತ್ತಮಧರೋತ್ತರಮ್ ।
ಶರ್ಮಿಷ್ಠಯಾ ನಿವೃತ್ತಾಽಸ್ಮಿ ದುಹಿತ್ರಾ ವೃಷಪರ್ವಣಃ ॥೪೭॥

ಅಧರ್ಮವು ಧರ್ಮವನ್ನು ಗೆದ್ದಿದೆ. ಎಲ್ಲವೂ ತಲೆಕೆಳಗಾಯಿತು. ವೃಷಪರ್ವನ ಮಗಳಾದ ಶರ್ಮಿಷ್ಠೆಯ ಕಾರಣದಿಂದ ನಾನು ಹಿಂದೆ ಬಂದಿದ್ದೇನೆ.

ತ್ರಯೋಽಸ್ಯಾಂ ಜನಿತಾಃ ಪುತ್ರಾ ರಾಜ್ಞಾ ತೇನ ಯಯಾತಿನಾ ।
ದುರ್ಭಗಾಯಾ ಮಮ ದ್ವೌ ತು ಪುತ್ರೌ ತಾತ ಬ್ರವೀಮಿ ತೇ ॥೪೮॥

ಆ ರಾಜನಿಂದ ಅವಳಿಗೆ ಮೂರು ಮಕ್ಕಳು ಜನಿಸಿವೆ. ತಂದೆಯೇ, ದುರದೃಷ್ಟಶಾಲಿನಿಯಾದ ನನಗೆ ಎರಡೇ ಮಕ್ಕಳು ಎಂದು ನಿನಗೆ ತಿಳಿಸುತ್ತಿದ್ದೇನೆ.

ಧರ್ಮಿಷ್ಠ ಇತಿ ವಿಖ್ಯಾತ ಏಷ ರಾಜಾ ಭೃಗೂದ್ವಹ ।
ಅತಿಕ್ರಾಂತಶ್ಚ ಮರ್ಯಾದಾಂ ಕಾವ್ಯೈತತ್ ಕಥಯಾಮಿ ತೇ ॥೪೯॥

ಎಲೈ ಭೃಗುವಂಶೋತ್ತಮನೇ ಧರ್ಮಿಷ್ಠನೆಂದು ಪ್ರಖ್ಯಾತನಾದ ಈ ರಾಜನು ಧರ್ಮದ ಎಲ್ಲೆಯನ್ನು ಅತಿಕ್ರಮಿಸಿದ್ದಾನೆ. ತಂದೆಯೇ, ನಾನು ಇದನ್ನು ನಿನಗೆ ತಿಳಿಸುತ್ತಿದ್ದೇನೆ.

ಶುಕ್ರಃ

ಧರ್ಮಜ್ಞಃ ಸನ್ ಮಹಾರಾಜ ಯೋ ಧರ್ಮಂ ನಾಕೃಥಾಃ ಸ್ವಯಮ್ ।
ತಸ್ಮಾಜ್ಜರಾ ತ್ವಾಂ ನಚಿರಾದ್ ಧರ್ಷಯಿಷ್ಯತಿ ದುರ್ಜಯಾ ॥೫೦॥

ಮಹಾರಾಜನೇ, ನೀನು ಧರ್ಮವನ್ನು ತಿಳಿದವನಾಗಿ ಸ್ವತಃ ಧರ್ಮವನ್ನು ಆಚರಿಸಲಿಲ್ಲ. ಆದ್ದರಿಂದ ಗೆಲ್ಲಲು ಸಾಧ್ಯವಿಲ್ಲದ ಮುಪ್ಪು ಸದ್ಯದಲ್ಲಿಯೇ ನಿನ್ನನ್ನು ನಿರ್ವೀರ್ಯನನ್ನಾಗಿ ಮಾಡುತ್ತದೆ.

ಯಯಾತಿಃ

ಋತುಂ ವೈ ಯಾಚಮಾನಾಯಾ ಭಗವನ್ ನಾನ್ಯಚೇತಸಾ ।
ದುಹಿತುರ್ದಾನವೇಂದ್ರಸ್ಯ ಧರ್ಮ್ಯಮೇತತ್ ಕೃತಂ ಮಯಾ ॥೫೧॥

ಪೂಜ್ಯರೇ, ಋತುಕಾಲದಲ್ಲಿ ಮಕ್ಕಳನ್ನು ಯಾಚಿಸುವ ಶರ್ಮಿಷ್ಠೆಯ ಜೊತೆಯಲ್ಲಿ ನಾನು ಸಮಾಗಮವನ್ನು ಮಾಡಿದೆ. ಬೇರೆ ಬುದ್ಧಿಯಿಂದ ಮಾಡಲಿಲ್ಲ. ನಾನು ಮಾಡಿದುದು ಧರ್ಮವೇ ಆಗಿದೆ.

ಋತುಂ ವೈ ಯಾಚಮಾನಾಯಾ ನ ದದಾತಿ ಪುಮಾನ್ ಋತುಮ್।
ಭ್ರೂಣಹೇತ್ಯುಚ್ಯತೇ ಬ್ರಹ್ಮನ್ ಸದಾ ವೈ ಬ್ರಹ್ಮವಾದಿಭಿಃ ॥೫೨॥

ಎಲೈ ಬ್ರಾಹ್ಮಣನೇ ಋತುಕಾಲದಲ್ಲಿ ಮಕ್ಕಳನ್ನು ಯಾಚಿಸುವ ವನಿತೆಗೆ ಯಾವ ಪುರುಷನು ಗರ್ಭಾಧಾನ ಮಾಡುವುದಿಲ್ಲವೋ ಅವನನ್ನು ಬ್ರಹ್ಮವಾದಿಗಳು ಭ್ರೂಣಹತ್ಯವನ್ನು ಮಾಡಿದವನೆಂದು ಕರೆಯುತ್ತಾರೆ.

ಅಭಿಕಾಮಾಂ ಸ್ತ್ರಿಯಂ ಚೈವ ಗಮ್ಯಾಂ ರಹಸಿ ಯಾಚಿತಃ ।
ಉಪೈತಿ ಯಃ ಸ್ವಧರ್ಮೇಷು ಕಿಲ್ಬಿಷೀ ನಚ ಸಃ ಪುಮಾನ್ ॥೫೩॥

ಕಾಮನೆಯುಳ್ಳ ಸ್ತ್ರೀಯನ್ನು ಸಮಾಗಮಕ್ಕೆ ಯೋಗ್ಯಳಾದವಳನ್ನು, ಏಕಾಂತದಲ್ಲಿ ಅವಳಿಂದ ಪ್ರಾರ್ಥಿಸಲ್ಪಟ್ಟರೂ ಯಾವನು ಸಮಾಗಮವನ್ನು ಮಾಡುವುದಿಲ್ಲವೋ, ಆ ವ್ಯಕ್ತಿಯು ತನ್ನ ಧರ್ಮದಲ್ಲಿ ದೋಷಯುಕ್ತನಾಗುತ್ತಾನೆ. ಸಮಾಗಮ ಮಾಡಿದವನು ದೋಷಿಯಾಗುವುದಿಲ್ಲ.

ಯದ್ಯದ್ ಯಾಚತಿ ಮಾಂ ಕಶ್ಚಿತ್ ತತ್ತದ್ ದೇಯಮಿತಿ ವ್ರತಮ್ ।
ತ್ವಯಾऽಪಿ ಸಾ ಚ ದತ್ತಾ ಮೇ ನಾನ್ಯಂ ನಾಥಮಿಹೇಚ್ಛತಿ ।
ಮತ್ಪ್ರೀತನ್ಮಮ ಧರ್ಮೇಣ ಕೃತಂ ಬ್ರಹ್ಮನ್ ಕ್ಷಮಸ್ವ ಮೇ ॥೫೪॥

ನನಗೆ ಯಾರು ಯಾರು ಏನನ್ನು ಕೇಳುತ್ತಾರೋ ಅದೆಲ್ಲವನ್ನೂ ಕೊಡುತ್ತೇನೆ ಎಂಬ ವ್ರತವಿದೆ. ನೀವು ಅವಳನ್ನು ನನಗೆ ದಾನ ಮಾಡಿದ್ದೀರಿ. ಅವಳು ಬೇರೆ ಪತಿಯನ್ನು ಬಯಸುವುದಿಲ್ಲ. ಇದನ್ನು ತಿಳಿದು ಧರ್ಮದಿಂದಲೇ ಅವಳ ಸಮಾಗಮವನ್ನು ಮಾಡಿದ್ದೇನೆ. ಪೂಜ್ಯರೇ, ನನ್ನನ್ನು ಕ್ಷಮಿಸಿ.

ಇತ್ಯೇತಾನಿ ಸಮೀಕ್ಷ್ಯಾಹಂ ಕಾರಣಾನಿ ಭೃಗೂದ್ವಹ ।
ಅಧರ್ಮಭಯಸಂವಿಗ್ನಃ ಶರ್ಮಿಷ್ಠಾಮುಪಜಗ್ಮಿವಾನ್ ॥೫೫॥

ಭೃಗುಶ್ರೇಷ್ಠರೇ, ಈ ಎಲ್ಲಾ ಕಾರಣಗಳನ್ನು ಚಿಂತಿಸಿ ಅಧರ್ಮದ ಭಯದಿಂದ ಸಂವಿಗ್ನನಾಗಿ ನಾನು ಶರ್ಮಿಷ್ಠೆಯ ಸಮಾಗಮವನ್ನು ಮಾಡಿದೆ.

ಶುಕ್ರಃ

ನನ್ವಹಂ ಪ್ರತ್ಯವೇಕ್ಷ್ಯಸ್ತೇ ಮಯ್ಯಧೀನೋऽಸಿ ಪಾರ್ಥಿವ ।
ಮಿಥ್ಯಾಚಾರಸ್ಯ ಧರ್ಮೇಷು ಜರಾ ಭವತಿ ನಾಹುಷ ॥೫೬॥

ರಾಜನೇ, ನನ್ನ ಅಧೀನನಾಗಿರುವ ನೀನು ನನ್ನ ಮಾತಿಗೆ ಬೆಲೆ ಕೊಡಬೇಕಷ್ಟೇ. ಎಲೈ ನಾಹುಷನೇ ಧರ್ಮದ ವಿಷಯದಲ್ಲಿ ಮಿಥ್ಯಾಚಾರವುಳ್ಳ ನಿನಗೆ ಮುಪ್ಪು ಬರುತ್ತದೆ.

ವೈಶಂಪಾಯನಃ

ಕ್ರುದ್ಧೇನೋಶನಸಾ ಶಪ್ತೋ ಯಯಾತಿರ್ನಾಹುಷಸ್ತದಾ ।
ಪೂರ್ವಂ ವಯಃ ಪರಿತ್ಯಜ್ಯ ಜರಾಂ ಸದ್ಯೋऽನ್ವಪದ್ಯತ ॥೫೭॥

ಸಿಟ್ಟಾದ ಶುಕ್ರಾಚಾರ್ಯರಿಂದ ಹೀಗೆ ಶಪ್ತನಾದ ಯಯಾತಿಯು ಆಗ ಪೂರ್ವ ವಯಸ್ಸನ್ನು ಪರಿತ್ಯಜಿಸಿ ತಕ್ಷಣದಲ್ಲಿಯೇ ಮುಪ್ಪನ್ನು ಹೊಂದಿದನು.

ಯಯಾತಿಃ

ಅತೃಪ್ತೋ ಯೌವನಸ್ಯಾಹಂ ದೇವಯಾನ್ಯಾಂ ಭೃಗೂದ್ವಹ ।
ಪ್ರಸಾದಂ ಕುರು ಮೇ ಬ್ರಹ್ಮನ್ ಜರೇಯಂ ಮಾ ವಿಶೇತ ಮಾಮ್ ॥

ಎಲೈ ಭೃಗುಶ್ರೇಷ್ಠನೇ, ನಾನು ದೇವಯಾನಿಯಲ್ಲಿ ಯೌವನದ ತೃಪ್ತಿಯನ್ನು ಪೂರ್ಣವಾಗಿ ಪಡೆದಿಲ್ಲ. ಬ್ರಾಹ್ಮಣರೇ, ನನಗೆ ಅನುಗ್ರಹವನ್ನು ಮಾಡಿ. ನನಗೆ ಮುಪ್ಪು ಬಾರದಿರಲಿ.

ಶುಕ್ರಃ

ನಾಹಂ ಮೃಷಾ ಬ್ರವೀಮ್ಯೇನಾಂ ಜರಾಂ ಪ್ರಾಪ್ತೋಽಸಿ ನಾಹುಷ ।
ಜರಾಂ ತ್ವೇತಾಂ ತ್ವಮನ್ಯಸ್ಮೈ ಸಂಕ್ರಾಮಯ ಯದೀಚ್ಛಸಿ ॥೫೯॥

ನನ್ನ ಮಾತು ಎಂದೂ ಸುಳ್ಳಾಗುವುದಿಲ್ಲ. ಯಯಾತಿಯೇ, ನೀನು ಮುಪ್ಪನ್ನು ಹೊಂದುತ್ತೀಯೆ. ಬೇಕಾದರೆ ನೀನು ನಿನ್ನ ಈ ಮುಪ್ಪನ್ನು ಬೇರೆಯವರಿಗೆ ವರ್ಗಾಯಿಸಬಹುದು.

ಯಯಾತಿಃ

ರಾಜ್ಯಭಾಕ್ ಸ ಭವೇದ್ ಬ್ರಹ್ಮನ್ ಪುಣ್ಯಭಾಕ್ ಕೀರ್ತಿಭಾಕ್ ತಥಾ।
ಯೋ ಮೇ ದದ್ಯಾದ್ ವಯಃ ಪುತ್ರಸ್ತದ್ ಭವಾನನುಮನ್ಯತಾಮ್ ॥

ಎಲೈ ಬ್ರಾಹ್ಮಣರೇ, ನನಗೆ ಯಾವ ಪುತ್ರನು ತನ್ನ ಆಯುಸ್ಸನ್ನು ಕೊಡುತ್ತಾನೆಯೋ ಅವನು ನನ್ನ ರಾಜ್ಯಕ್ಕೆ ಅಧಿಕಾರಿಯೂ ಪುಣ್ಯಭಾಜನನೂ ಮತ್ತು ಕೀರ್ತಿಭಾಜನನೂ ಆಗುತ್ತಾನೆ. ಇದಕ್ಕೆ ನೀವು ಅನುಮತಿಯನ್ನು ಕೊಡಿ.

ಶುಕ್ರಃ

ಸಂಕ್ರಾಮಯಿಷ್ಯಸಿ ಜರಾಂ ಯಥೇಷ್ಟಂ ನಹುಷಾತ್ಮಜ ।
ಮಾಮನುಧ್ಯಾಯ ಭಾವೇನ ನಚ ಪಾಪಮವಾಪ್ಸ್ಯಸಿ ॥೬೦॥

ನಹುಷಾತ್ಮಜನೇ, ನಿನಗೆ ಬೇಕಾದಂತೆ ಈ ನಿನ್ನ ಮುಪ್ಪನ್ನು ನನ್ನನ್ನು ಭಕ್ತಿಯಿಂದ ಸ್ಮರಿಸಿ ಇನ್ನೊಬ್ಬರಿಗೆ ವರ್ಗಾಯಿಸಬಹುದು. ಅದರಿಂದ ನಿನಗೆ ಪಾಪವುಂಟಾಗುವುದಿಲ್ಲ.

ವಯೋ ದಾಸ್ಯತಿ ತೇ ಪುತ್ರೋ ಯಃ ಸ ರಾಜಾ ಭವಿಷ್ಯತಿ ।
ಆಯುಷ್ಮಾನ್ ಕೀರ್ತಿಮಾಂಶ್ಚೈವ ಬಹ್ವಪತ್ಯಸ್ತಥೈವ ಚ ॥೬೨॥

ಯಾವ ಮಗನು ನಿನಗೆ ತನ್ನ ವಯಸ್ಸನ್ನು ಕೊಡುತ್ತಾನೆಯೋ ಅವನು ಆಯುಷ್ಮಂತನೂ, ಕೀರ್ತಿವಂತನೂ ಮತ್ತು ಬಹಳ ಮಕ್ಕಳುಳ್ಳವನೂ ಆಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ದ್ವಾಸಪ್ತತಿತಮೋऽಧ್ಯಾಯಃ ॥
॥ ಸಂಭವಪರ್ವಣಿ ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ಮೂರನೆಯ ಅಧ್ಯಾಯ

(ಶಾಪದಿಂದ ಯಯಾತಿಯ ವಿಹ್ವಲತೆ, ಉಳಿದ ಮಕ್ಕಳಿಂದ ನಿರಾಕರಣೆ, ಪೂರುವಿನ ಪಿತೃಭಕ್ತಿ, ಅವನಿಗೆ ಯಯಾತಿಯ ವರಪ್ರದಾನ.)

ವೈಶಂಪಾಯನಃ

ಜರಾಂ ಪ್ರಾಪ್ಯ ಯಯಾತಿಸ್ತು ಸ್ವಪುರಂ ಪ್ರಾಪ್ಯ ಚೈವ ಹ ।
ಪುತ್ರಂ ಜ್ಯೇಷ್ಠಂ ವರಿಷ್ಠಂ ಚ ಯದುಮಿತ್ಯಬ್ರವೀದ್ ವಚಃ ॥೧॥

ಜರೆಯನ್ನು ಹೊಂದಿದ ಯಯಾತಿಯು ತನ್ನ ಪಟ್ಟಣಕ್ಕೆ ಹಿಂದಿರುಗಿ ಗುಣವಂತನಾದ ತನ್ನ ಜ್ಯೇಷ್ಠಪುತ್ರನಾದ ಯದುವನ್ನು ಕುರಿತು ಹೀಗೆ ಹೇಳಿದನು.

ಜರಾವಲೀ ಚ ಮೇ ತಾತ ಪಲಿತಾನಿ ಚ ಪರ್ಯ್ಯಗುಃ ।
ಕಾವ್ಯಸ್ಯೋಶನಸಃ ಶಾಪಾನ್ನ ತೃಪ್ತೋऽಸ್ಮಿ ಚ ಯೌವನೇ ॥೨॥

ಮಗು, ನನಗೆ ಜರೆಯು, ವಲೀಗಳು (ಉಬ್ಬಿದ ನಾಡಿಗಳು) ಮತ್ತು ನೆರೆ ಕೂದಲು, ಶುಕ್ರಾಚಾರ್ಯರ ಶಾಪದಿಂದ ದೇಹವನ್ನೆಲ್ಲಾ ಆವರಿಸಿವೆ. ನನಗೆ ಯೌವನ ಸುಖದಲ್ಲಿ ಇನ್ನೂ ತೃಪ್ತಿ ಉಂಟಾಗಿಲ್ಲ.

ತ್ವಂ ಯದೋ ಪ್ರತಿಪದ್ಯಸ್ವ ಪಾಪ್ಮಾನಂ ಜರಯಾ ಸಹ ।
ಯೌವನೇನ ತ್ವದೀಯೇನ ಚರೇಯಂ ವಿಷಯಾನಹಮ್ ॥೩॥

ಪೂರ್ಣೇ ವರ್ಷಸಹಸ್ರೇ ತು ತ್ವದೀಯಂ ಯೌವನಂ ತ್ವಹಮ್ ।
ದತ್ತ್ವಾ ಸ್ವಂ ಪ್ರತಿಪತ್ಸ್ಯಮಿ ಪಾಪ್ಮಾನಂ ಜರಯಾ ಸಹ ॥೪॥

ಎಲೈ ಯದುವೇ ನನ್ನ ಪಾಪವನ್ನು ಮತ್ತು ಮುಪ್ಪನ್ನು ನೀನು ತೆಗೆದುಕೋ, ನಿನ್ನ ಯೌವನದಿಂದ ನಾನು ಸುಖವನ್ನು ಅನುಭವಿಸುತ್ತೇನೆ. ಒಂದು ಸಹಸ್ರವರ್ಷ ತುಂಬಿದ ಮೇಲೆ ನಿನ್ನ ಯೌವನವನ್ನು ನಿನಗೆ ಕೊಟ್ಟು ನಾನು ನನ್ನ ಪಾಪವನ್ನು ಮರಳಿ ಪಡೆಯುತ್ತೇನೆ.

ಯದುಃ

ಸಿತಶ್ಮಶ್ರುಶಿರೋ ದೀನೋ ಜರಯಾ ಶಿಥಿಲೀಕೃತಃ ।
ವಲೀಸಂತತಿಗಾತ್ರಶ್ಚ ದುರ್ದರ್ಶೋ ದುರ್ಬಲಃ ಕೃಶಃ ॥೫॥

ಅಶಕ್ತಃ ಕಾರ್ಯಕರಣೇ ಪರಿಭೂತಃ ಸಯೌವನೈಃ ।
ಸಹೋಪಜೀವಿಭಿಶ್ಚೈವ ತಾಂ ಜರಾಂ ನೈವ ಕಾಮಯೇ ॥೬॥

ಜರೆಯಿಂದ ನೆರೆತ ಮೀಸೆ, ಗಡ್ಡ, ತಲೆಯುಳ್ಳವನಾಗಿ, ದೇಹವೆಲ್ಲವೂ ಶಿಥಿಲವಾಗಿ, ಎಲ್ಲಾ ಕಡೆಗಳಲ್ಲಿಯೂ ವಲೀ (ಸುಕ್ಕು)ಗಳು ಕಾಣಿಸಿಕೊಂಡು ದುರ್ಬಲನೂ, ಕೃಶನೂ ಮತ್ತು ನೋಡುವುದಕ್ಕೆ ಅಸಹ್ಯನೂ ಆಗಿ, ತನ್ನ ಕೆಲಸವನ್ನು ತಾನು ಮಾಡಿಕೊಳ್ಳಲು ತನಗೆ ಶಕ್ತಿ ಇಲ್ಲದೆ ಯುವಕರಿಂದಲೂ, ಜೊತೆಯಲ್ಲಿ ವಾಸಿಸುವವರಿಂದಲೂ ಅವಮಾನಕ್ಕೆ ಒಳಗಾಗಿ ಜೀವಿಸುವಂತೆ ಮಾಡುವ ಆ ಮುಪ್ಪನ್ನು ನಾನು ಬಯಸುವುದಿಲ್ಲ.

ಯಯಾತಿಃ

ಯೋ ಮೇ ತ್ವಂ ಹೃದಯಾಜ್ಜಾತೋ ವಯಃ ಸ್ವಂ ನ ಪ್ರಯಚ್ಛಸಿ ।
ತಸ್ಮಾದರಾಜ್ಯಭಾಕ್ ತಾತ ಪ್ರಜಾ ವೈ ತೇ ಭವಿಷ್ಯತಿ ॥೭॥

ಮಗುವೇ, ನನ್ನ ಪ್ರೀತಿಯ ಮಗನಾದ ನೀನು ನಿನ್ನ ವಯಸ್ಸನ್ನು ನನಗೆ ಕೊಡುತ್ತಿಲ್ಲ. ಆದ್ದರಿಂದ ನಿನ್ನ ಪ್ರಜೆಗಳು ರಾಜ್ಯಭಾಗಿಗಳಾಗುವುದಿಲ್ಲ.

ವೈಶಂಪಾಯನಃ

ಪ್ರತ್ಯಾಖ್ಯಾತಶ್ಚ ರಾಜಾ ಸ ತುರ್ವಶುಂ ಪ್ರತ್ಯುವಾಚ ಹ ।
ತುರ್ವಶೋ ಪ್ರತಿಪದ್ಯಸ್ವ ಪಾಪ್ಮಾನಂ ಜರಯಾ ಸಹ ॥೮॥

ಯೌವನೇನ ಚರೇಯಂ ವೈ ವಿಷಯಾಂಸ್ತವ ಪುತ್ರಕ ।
ಪೂರ್ಣೇ ವರ್ಷಸಹಸ್ರೇ ತು ಪ್ರತಿದಾಸ್ಯಾಮಿ ಯೌವನಮ್ ।
ಸ್ವಂ ಚೈವ ಪ್ರತಿಪತ್ಸ್ಯಾಮಿ ಪಾಪ್ಮಾನಂ ಜರಯಾ ಸಹ ॥೯॥

ಯದುವಿನಿಂದ ನಿರಾಕೃತನಾದ ರಾಜನು ತುರ್ವಶುವನ್ನು ಸಮೀಪಿಸಿ ಮಾತನಾಡಿದನು. ತುರ್ವಶುವೇ, ನನ್ನ ಪಾಪವನ್ನು ಮತ್ತು ಜರೆಯನ್ನು ತೆಗೆದುಕೋ. ಮಗನೇ, ನಿನ್ನ ಯೌವನದಿಂದ ನಾನು ವಿಷಯಸುಖವನ್ನು ಅನುಭವಿಸುತ್ತೇನೆ. ಒಂದು ಸಹಸ್ರ ವರ್ಷಗಳು ತುಂಬಿದ ಮೇಲೆ ನಿನ್ನ ಯೌವನವನ್ನು ನಿನಗೆ ಕೊಟ್ಟು ನನ್ನ ಪಾಪವನ್ನು ಮತ್ತು ಜರೆಯನ್ನು ಮರಳಿ ಪಡೆಯುವೆನು.

ತುರ್ವಶುಃ

ನ ಕಾಮಯೇ ಜರಾಂ ತಾತ ಕಾಮಭೋಗವಿನಾಶಿನೀಮ್ ।
ಬಲರೂಪಾಂತಕರಿಣೀಂ ಬುದ್ಧಿಪ್ರಾಣವಿನಾಶಿನೀಮ್ ॥೧೦॥

ತಂದೆಯೇ, ಕಾಮಭೋಗಗಳನ್ನು ವಿನಾಶ ಮಾಡುವ, ಶಕ್ತಿ ಸೌಂದರ್ಯಗಳನ್ನು ನಾಶ ಮಾಡುವ, ಬುದ್ಧಿ ಪ್ರಾಣಗಳನ್ನು ವಿನಾಶ ಮಾಡುವ, ಜರೆಯನ್ನು ನಾನು ಬಯಸುವುದಿಲ್ಲ.

ಯಯಾತಿಃ

ಯೋ ಮೇ ತ್ವಂ ಹೃದಯಾಜ್ಜಾತೋ ವಯಃ ಸ್ವಂ ನ ಪ್ರಯಚ್ಛಸಿ ।
ತುರ್ವಶೋ ತ್ವಂ ಪ್ರಿಯಂ ಕಾಮಂ ನೈವ ಸಂಪತ್ಸ್ಯಸೇ ಕ್ವಚಿತ್ ॥೧೧॥

ಸ ಚೋಡುಪ್ಲವಸಂತಾರಸ್ತತ್ರ ನಿತ್ಯಂ ಭವಿಷ್ಯಸಿ ।
ಅರಾಜಾ ಭೋಜಶಬ್ದಂ ತು ತತ್ರಾವಾಪ್ಸ್ಯಸಿ ಸಾನ್ವಯಃ ॥೧೨॥

ತುರ್ವಶುವೇ, ನನ್ನ ಪ್ರೀತಿಯ ಪುತ್ರನಾದ ನೀನು ನಿನ್ನ ವಯಸ್ಸನ್ನು ನನಗೆ ಕೊಡುತ್ತಿಲ್ಲ. ಆದ್ದರಿಂದ ನಿನ್ನ ಪ್ರಿಯವಾದ ವಸ್ತು ವಿಷಯದ ಆಸೆಗಳು ಎಂದೂ ಪೂರೈಸದಿರಲಿ. ನಕ್ಷತ್ರದಂತೆ ಆ ಕಡೆಯಿಂದ ಈ ಕಡೆಗೆ ಸಂಚಾರ ಮಾಡುವ ನಾವೆಯನ್ನು ನೀನು ಯಾವಾಗಲೂ ನಡೆಸುವವನಾಗು. ನೀನು ಮತ್ತು ನಿನ್ನ ವಂಶದವರು ರಾಜರಾಗದೆ ಭೋಜ ಎಂಬ ಶಬ್ದವನ್ನು ಪಡೆಯುವರು.

ತಸ್ಮಾತ್ ಪ್ರಜಾ ಸಮುಚ್ಛೇದಂ ತುರ್ವಶೋ ತವ ಯಾಸ್ಯತಿ ।
ಸಂಕೀರ್ಣಾಚಾರಧರ್ಮೇಷು ಪ್ರತಿಲೋಮಚರೇಷು ಚ ॥೧೩॥

ಆದ್ದರಿಂದ ಎಲೈ ತುರ್ವಶುವೇ ನಿನ್ನ ಪ್ರಜೆಗಳು ನಾಶ ಹೊಂದುತ್ತಾರೆ. ಆಚಾರ ಧರ್ಮಗಳ ಸಂಕರವುಳ್ಳ, ಪ್ರತಿಲೋಮ ಧರ್ಮವನ್ನು ಆಚರಿಸುವಂತಹ, ಮಾಂಸಾಹಾರಿಗಳಾದ ಮ್ಲೇಚ್ಛದೇಶದಲ್ಲಿ ನೀನು ಜ್ಞಾನಶೂನ್ಯನಾಗಿ ರಾಜನಾಗುವಿ.

ಮ್ಲೇಚ್ಛೇಷು ಪಿಶಿತಾಶೇಷು ಮೂಢೋ ರಾಜಾ ಭವಿಷ್ಯಸಿ ।
ಗುರುದಾರಪ್ರಸಕ್ತೇಷು ತಿರ್ಯಗ್ಯೋನಿಗತೇಷು ಚ ।
ಛಿನ್ನಧರ್ಮಸ್ವರೂಪೇಷು ವ್ಯಾಧೇಷು ಜನಯಿಷ್ಯಸಿ ॥೧೪॥

ಗುರುಪತ್ನಿಯರಲ್ಲಿ ಆಸಕ್ತರಾದಂತಹ, ನೀಚಯೋನಿಗಳಲ್ಲಿ ಗತರಾದಂತಹ, ಧರ್ಮಸ್ವರೂಪವನ್ನು ಬಿಟ್ಟಂತಹ, ವ್ಯಾಧರಲ್ಲಿ ನೀನು ಜನಿಸುವಿ.

ವೈಶಂಪಾಯನಃ

ಏವಂ ಸ ತುರ್ವಶುಂ ಶಪ್ತ್ವಾ ಯಯಾತಿಃ ಸುತಮಾತ್ಮನಃ ।
ಶರ್ಮಿಷ್ಠಾಯಾಃ ಸುತಂ ದ್ರುಹ್ಯುಮಿದಂ ವಚನಮಬ್ರವೀತ್ ॥೧೫॥

ಯಯಾತಿಯು ತನ್ನ ಮಗನಾದ ತುರ್ವಶುವಿಗೆ ಹೀಗೆ ಶಾಪವನ್ನು ನೀಡಿ ಶರ್ಮಿಷ್ಠೆಯ ಮಗನಾದ ದ್ರುಹ್ಯುವನ್ನು ಕುರಿತು ಹೀಗೆ ಮಾತನಾಡಿದನು.

ದ್ರುಹ್ಯೋ ತ್ವಂ ಪ್ರತಿಪದ್ಯಸ್ವ ಪಾಪ್ಮಾನಂ ಜರಯಾ ಸಹ ।
ಯೌವನೇನ ಚರೇಯಂ ವೈ ವಿಷಯಾಂಸ್ತವ ಪುತ್ರಕ ॥೧೬॥

ಪೂರ್ಣೇ ವರ್ಷಸಹಸ್ರೇ ತು ಪ್ರತಿದಾಸ್ಯಾಮಿ ಯೌವನಮ್ ।
ಸ್ವಂ ಚೈವ ಪ್ರತಿಪತ್ಸ್ಯಾಮಿ ಪಾಪ್ಮಾನಂ ಜರಯಾ ಸಹ ॥೧೭॥

ಎಲೈ ದ್ರುಹ್ಯುವೇ, ನನ್ನ ಪಾಪವನ್ನು ಮತ್ತು ಜರೆಯನ್ನು ತೆಗೆದುಕೋ. ಮಗನೇ, ನಿನ್ನ ಯೌವನದಿಂದ ನಾನು ಸುಖವನ್ನು ಅನುಭವಿಸುತ್ತೇನೆ. ಒಂದು ಸಾವಿರ ವರ್ಷ ತುಂಬಿದ ಮೇಲೆ ನಿನ್ನ ಯೌವನವನ್ನು ನಿನಗೆ ಕೊಟ್ಟು ನನ್ನ ಪಾಪವನ್ನು ಮತ್ತು ಜರೆಯನ್ನು ಮರಳಿ ಪಡೆಯುವೆನು.

ದ್ರುಹ್ಯುಃ

ಜೀರ್ಣಃ ಶಿಶುವದಾದತ್ತೇಽಕಾಲೇಽನ್ನಮಶುಚಿರ್ಯಥಾ ।
ನ ಜುಹೋತಿ ಚ ಕಾಲೇಽಗ್ನೀನ್ ನ ಬುಧ್ಯತಿ ಚ ಕಾಲತಃ ।
ನಚ ಕೃತ್ಯಂ ಕರೋತ್ಯೇಷ ತಾಂ ಜರಾಂ ನೈವ ಕಾಮಯೇ ॥೧೮॥

ಮುಪ್ಪನ್ನು ಹೊಂದಿದವನು ಅಶುಚಿಯಾದವನಂತೆ ಅಕಾಲದಲ್ಲಿ ಶಿಶುವಿನಂತೆ ಆಹಾರವನ್ನು ಸ್ವೀಕರಿಸುತ್ತಾನೆ. ಅವನು ಅಗ್ನಿಯಲ್ಲಿ ಹೋಮವನ್ನು ಮಾಡುವುದಿಲ್ಲ, ಕಾಲವನ್ನು ತಿಳಿಯುವುದಿಲ್ಲ. ಮಾಡಬೇಕಾದ ಯಾವ ಕೆಲಸವನ್ನೂ ಮಾಡುವುದಿಲ್ಲ. ಅಂತಹ ಮುಪ್ಪನ್ನು ನಾನು ಬಯಸುವುದಿಲ್ಲ.

ಯಯಾತಿಃ

ಯೋ ಮೇ ತ್ವಂ ಹೃದಯಾಜ್ಜಾತೋ ವಯಃ ಸ್ವಂ ನ ಪ್ರಯಚ್ಛಸಿ ।
ಜರಾದೋಷಸ್ತ್ವಯೋಕ್ತೋಽಯಂ ತಸ್ಮಾನ್ನ ಪ್ರತಿಪದ್ಯಸೇ ॥೧೯॥

ನನ್ನ ಪ್ರೀತಿಯ ಪುತ್ರನಾದ ನೀನು ನಿನ್ನ ವಯಸ್ಸನ್ನು ನನಗೆ ಕೊಡುತ್ತಿಲ್ಲ, ಜೊತೆಗೆ ಮುಪ್ಪಿನ ದೋಷಗಳನ್ನು ಹೇಳುತ್ತಿದ್ದೀಯೆ. ಆದ್ದರಿಂದ ನೀನು ರಾಜ್ಯವನ್ನು ಹೊಂದುವುದಿಲ್ಲ.

ಪ್ರಜಾಶ್ಚ ಯೌವನಂ ಪ್ರಾಪ್ತಾ ವಿನಶಿಷ್ಯಂತ್ವತಸ್ತವ ।
ಅಗ್ನಿಪ್ರಸ್ಕಂದನಪರಸ್ತ್ವಂ ಚಾಪಿ ನ ಭವಿಷ್ಯಸಿ ॥೨೦॥

ನಿನ್ನ ಮಕ್ಕಳು ಯೌವನವನ್ನು ಹೊಂದಿ ಮೃತರಾಗುವರು. ನೀನು ಹೋಮ ಮೊದಲಾದ ಧರ್ಮಕಾರ್ಯಗಳಲ್ಲಿ ಆಸಕ್ತನಾಗಿರುವುದಿಲ್ಲ.

ಅನೋ ತ್ವಂ ಪ್ರತಿಪದ್ಯಸ್ವ ಪಾಪ್ಮಾನಂ ಜರಯಾ ಸಹ ।
ಏಕಂ ವರ್ಷಸಹಸ್ರಂ ವೈ ಚರೇಯಂ ತವ ರೂಪಧೃಕ್ ॥೨೧॥

ಪೂರ್ಣೇ ವರ್ಷಸಹಸ್ರೇ ತು ಪುನಸ್ತೇ ಯೌವನಂ ತ್ವಹಮ್ ।
ದತ್ತ್ವಾ ಚ ಪ್ರತಿಪತ್ಸ್ಯಾಮಿ ಪಾಪ್ಮಾನಂ ಜರಯಾ ಸಹ ॥೨೨॥

(ಅನಂತರ ಯಯಾತಿಯು ಅನುವನ್ನು ಕರೆದು ಹೇಳಿದನು)

ಎಲೈ ಅನುವೇ, ನನ್ನ ಪಾಪವನ್ನೂ ಮತ್ತು ಜರೆಯನ್ನೂ ತೆಗೆದುಕೋ. ಒಂದು ಸಹಸ್ರ ವರ್ಷಗಳ ಕಾಲ ನಿನ್ನ ರೂಪವನ್ನು ಧರಿಸಿ ಸುಖವನ್ನು ಅನುಭವಿಸುವೆನು. ಒಂದು ಸಹಸ್ರ ವರ್ಷಗಳು ತುಂಬಿದ ಮೇಲೆ ನಿನ್ನ ಯೌವನವನ್ನು ನಿನಗೆ ಕೊಟ್ಟು ನನ್ನ ಪಾಪ ಮತ್ತು ಜರೆಯನ್ನು ಮರಳಿ ಪಡೆಯುವೆನು.

ಅನುಃ

ನ ಹಸ್ತಿನಂ ನರೋ ನಾಶ್ವಂ ಜೀರ್ಣೋ ಭುಂಕ್ತೇ ನ ಪೀಠಕಮ್ ।
ವಾಗ್ ದುರ್ಭಗಾऽಸ್ಯ ಭವತಿ ತಾಂ ಜರಾಂ ನೈವ ಕಾಮಯೇ ॥೨೩॥

ಮುದುಕನಾದವನು ಗಜವನ್ನು ಏರುವುದಿಲ್ಲ, ಅಶ್ವವನ್ನು ಏರುವುದಿಲ್ಲ, ವಿಮಾನವನ್ನು ಏರುವುದಿಲ್ಲ, ಮಾತುಗಳು ಅಸ್ಪಷ್ಟವಾಗುತ್ತವೆ. ಅಂತಹ ಮುಪ್ಪನ್ನು ನಾನು ಬಯಸುವುದಿಲ್ಲ.

ಯೋ ಮೇ ತ್ವಂ ಹೃದಯಾಜ್ಜಾತೋ ವಯಃ ಸ್ವಂ ನ ಪ್ರಯಚ್ಛಸಿ ।
ಹಸ್ತ್ಯಶ್ವರಥಯುಗ್ಯಾನಾಮಧ್ವಾ ನ ಸ್ಯಾತ್ ಕದಾಚನ ॥೨೪॥

ಹಸ್ತಿನಾಂ ಪೀಠಕಾನಾಂ ವಾ ಗರ್ದಭಾನಾಂ ತಥೈವ ಚ ।
ಉಷ್ಟ್ರಾಣಾಂ ಚ ಗವಾಂ ಚೈವ ಶಿಬಿಕಾಯಾಸ್ತಥೈವ ಚ ॥೨೫॥

ನನ್ನ ಪ್ರೀತಿಪಾತ್ರನಾದ ಮಗನಾಗಿ ನಿನ್ನ ವಯಸ್ಸನ್ನು ಕೊಡದಿರುವುದರಿಂದ ಆನೆ, ಕುದುರೆ ಮತ್ತು ರಥಗಳು ಸಂಚರಿಸುವ ಮಾರ್ಗವು ನಿನಗೆ ದೊರೆಯದಿರಲಿ. ಆನೆಗಳು, ವಿಮಾನಗಳು, ಗರ್ದಭಗಳು, ಉಷ್ಟ್ರಗಳು, ಗೋವುಗಳು ಮತ್ತು ಪಲ್ಲಕ್ಕಿಗಳು ಹೋಗುವ ಮಾರ್ಗವು ನಿನಗೆ ದೊರೆಯದಿರಲಿ.

ಯದ್ವಾऽನ್ಯದ್ ವಾಹನಂ ಕಿಂಚಿದ್ ದೇವೋ ಹನ್ಯಾತ್ ಕ್ವಚಿತ್ಕ್ವಚಿತ್।
ಅರಾಜಾ ತವ ಜಾತಿಶ್ಚ ಭವಿಷ್ಯತಿ ನ ಸಂಶಯಃ ॥೨೬॥

ಅಥವಾ ಬೇರೆ ಯಾವುದಾದರೂ ವಾಹನವಿದ್ದರೂ ಅದನ್ನು ದೇವರು ನಾಶ ಮಾಡಲಿ. ನಿನ್ನ ವಂಶದವರು ರಾಜರಾಗುವುದು ಬೇಡ. ಈ ವಿಷಯದಲ್ಲಿ ಸಂಶಯವಿಲ್ಲ.

ವೈಶಂಪಾಯನಃ

ಪ್ರತ್ಯಾಖ್ಯಾತಶ್ಚತುರ್ಭಿಸ್ತು ಶಪ್ತ್ವಾ ತಾನ್ ಯದುಪೂರ್ವಕಾನ್ ।
ಪೂರೋಃ ಸಕಾಶಮಗಮದ್ ಧ್ಯಾತ್ವಾ ಪೂರುಮಲಂಘನಮ್ ॥೨೭॥

ಯದು ಮೊದಲಾದ ನಾಲ್ಕು ಮಕ್ಕಳಿಂದ ನಿರಾಕೃತನಾಗಿ ಅವರನ್ನು ಶಪಿಸಿ, ಕೊನೆಯ ಮಗನಾದ ಪೂರುವು ತನ್ನ ಮಾತನ್ನು ಮೀರುವುದಿಲ್ಲವೆಂದು ಯೋಚಿಸಿ ಯಯಾತಿಯು ಪೂರುವಿನ ಬಳಿಗೆ ಬಂದನು.

ಯಯಾತಿಃ

ಪೂರೋ ತ್ವಂ ಮೇ ಪ್ರಿಯಂ ಪುತ್ರಃ ತ್ವಂ ಗರೀಯಾನ್ ಭವಿಷ್ಯಸಿ ।
ಜರಾ ವಲೀ ಚ ಮೇ ತಾತ ಪಲಿತಾನಿ ಚ ಪರ್ಯ್ಯಗುಃ ॥೨೮॥

ಕಾವ್ಯಸ್ಯೋಶನಸಃ ಶಾಪಾನ್ನ ಚ ತೃಪ್ತೋಽಸ್ಮಿ ಯೌವನೇ ।
ಪೂರೋ ತ್ವಂ ಪ್ರತಿಪದ್ಯಸ್ವ ಪಾಪ್ಮಾನಂ ಜರಯಾ ಸಹ ॥೨೯॥

ಪೂರುವೇ, ನೀನು ನನ್ನ ಪ್ರಿಯನಾದ ಪುತ್ರ. ನೀನು ಇನ್ನೂ ಶ್ರೇಷ್ಠನಾಗುವಿ. ನನ್ನ ದೇಹವನ್ನು ಮುಪ್ಪು, ವಲೀ ಮತ್ತು ನೆರೆ ಕೂದಲುಗಳು ಆವರಿಸಿವೆ. ಇದಕ್ಕೆ ಶುಕ್ರಾಚಾರ್ಯರ ಶಾಪವು ಕಾರಣ. ಯೌವನಸುಖದಲ್ಲಿ ನನಗೆ ತೃಪ್ತಿಯಾಗಿಲ್ಲ. ಎಲೈ ಪೂರುವೇ, ನನ್ನ ಪಾಪವನ್ನು ಮತ್ತು ಜರೆಯನ್ನು ನೀನು ತೆಗೆದುಕೋ.

ಯಥಾಕಾಮಂ ಚರೇಯಂ ವೈ ವಿಷಯಾನ್ ವಯಸಾ ತವ ।
ಪೂರ್ಣೇ ವರ್ಷಸಹಸ್ರೇ ತು ಪ್ರತಿದಾಸ್ಯಾಮಿ ಯೌವನಮ್ ।
ಸ್ವಂ ಚೈವ ಪ್ರತಿಪತ್ಸ್ಯಾಮಿ ಪಾಪ್ಮಾನಂ ಜರಯಾ ಸಹ ॥೩೦॥

ನನ್ನ ಮನಸ್ಸಿಗೆ ತೃಪ್ತಿಯಾಗುವಂತೆ ನಿನ್ನ ವಯಸ್ಸಿನಿಂದ ನಾನು ವಿಷಯ ಸುಖವನ್ನು ಅನುಭವಿಸುತ್ತೇನೆ. ಒಂದು ಸಹಸ್ರ ವರ್ಷಗಳು ತುಂಬಿದ ಮೇಲೆ ನಿನ್ನ ಯೌವನವನ್ನು ನಿನಗೆ ಕೊಟ್ಟು ನನ್ನ ಪಾಪವನ್ನು ಮತ್ತು ಜರೆಯನ್ನು ಮರಳಿ ಪಡೆಯುವೆನು.

ವೈಶಂಪಾಯನಃ

ಏವಮುಕ್ತಃ ಪ್ರತ್ಯುವಾಚ ಪುತ್ರಃ ಪಿತರಮಂಜಸಾ ।
ಯಥಾತ್ಥ ಮಾಂ ಮಹಾರಾಜ ತತ್ ಕರಿಷ್ಯಾಮಿ ತೇ ವಚಃ ॥೩೧॥

ಹೀಗೆ ಹೇಳಲ್ಪಟ್ಟ ಪುತ್ರನಾದ ಪೂರುವು ತಂದೆಯನ್ನು ಕುರಿತು ಚೆನ್ನಾಗಿ ಮಾತನಾಡಿದನು. ಮಹಾರಾಜನೇ ನೀನು ಏನು ಹೇಳಿದೆಯೋ ಅದರಂತೆ ನಿನ್ನ ಮಾತನ್ನು ನಡೆಸುವೆನು.

ಗುರೋರ್ವೈ ವಚನಂ ಪುಣ್ಯಂ ಸ್ವರ್ಗ್ಯಮಾಯುಷ್ಕರಂ ನೃಣಾಮ್ ।
ಗುರುಪ್ರಸಾದಾತ್ ತ್ರೈಲೋಕ್ಯಮನ್ವಶಾಸಚ್ಛತಕ್ರತುಃ ॥೩೨॥

ಹಿರಿಯರ ಆದೇಶವು ಮನುಷ್ಯರಿಗೆ ಪುಣ್ಯಪ್ರದವಾದುದು, ಸ್ವರ್ಗಸಾಧಕವಾದುದು ಮತ್ತು ದೀರ್ಘಾಯುಷ್ಯವನ್ನು ಕೊಡುವಂತಹುದು. ಇಂದ್ರನು ಗುರುಹಿರಿಯರ ಅನುಗ್ರಹದಿಂದಲೇ ಮೂರು ಲೋಕಗಳನ್ನು ಆಳುತ್ತಾನೆ.

ಗುರೋರನುಮತಂ ಪ್ರಾಪ್ಯ ಸರ್ವಾನ್ ಕಾಮಾನವಾಪ್ನುಯಾತ್ ।
ಪ್ರತಿಪತ್ಸ್ಯೇ ತೇ ರಾಜನ್ ಪಾಪ್ಮಾನಂ ಜರಯಾ ಸಹ ॥೩೩॥

ಗುರುಹಿರಿಯರ ಅಭಿಪ್ರಾಯದಂತೆ ನಡೆದರೆ ಎಲ್ಲಾ ಕಾಮಗಳೂ ಸಿದ್ಧಿಸುತ್ತವೆ. ನಾನು ನಿನ್ನ ಮುಪ್ಪು ಮತ್ತು ಪಾಪವನ್ನು ತೆಗೆದುಕೊಳ್ಳುತ್ತೇನೆ.

ಯಾವದಿಚ್ಛಸಿ ವಾऽऽಜೀವಂ ತಾವತ್ ತಾಂ ಧಾರಯಾಮ್ಯಹಮ್ ।
ಗೃಹಾಣ ಯೌವನಂ ಮತ್ತಶ್ಚರ ಕಾಮಾನ್ ಯಥೇಪ್ಸಿತಾನ್ ॥೩೪॥

ಒಂದು ಸಾವಿರ ವರ್ಷ ಮಾತ್ರವಲ್ಲ, ನೀನು ಎಲ್ಲಿಯವರೆಗೆ ಇಷ್ಟಪಡುತ್ತೀಯೋ ಅಲ್ಲಿಯವರೆಗೆ ಅಥವಾ ನಾನು ಬದುಕಿರುವವರೆಗೂ ನಿನ್ನ ಮುಪ್ಪನ್ನು ಧರಿಸುತ್ತೇನೆ. ನನ್ನ ಯೌವನವನ್ನು ಸ್ವೀಕಾರ ಮಾಡು, ಬೇಕಾದ ಸುಖವನ್ನು ಅನುಭವಿಸು.

ಜರಯಾऽಹಂ ಪ್ರತಿಚ್ಛನ್ನೋ ವಸೇ ರೂಪಧರಸ್ತವ ।
ಯೌವನಂ ಭವತೇ ದತ್ತ್ವಾ ಚರಿಷ್ಯಾಮಿ ಯಥಾತ್ಥ ಮಾಮ್ ॥೩೫॥

ನಾನು ಮುಪ್ಪಿನಿಂದ ಆವೃತನಾಗಿ ನಿನ್ನ ರೂಪವನ್ನು ಧರಿಸಿ ವಾಸಿಸುವೆನು. ನನ್ನ ಯೌವನವನ್ನು ನಿನಗೆ ಕೊಟ್ಟು ನೀನು ಹೇಳಿದಂತೆ ನಡೆದುಕೊಳ್ಳುವೆನು.

ಯಯಾತಿಃ

ಪೂರೋ ಪ್ರೀತೋऽಸ್ಮಿ ತೇ ಪುತ್ರ ಪ್ರೀತಶ್ಚೇದಂ ದದಾಮಿ ತೇ ।
ಸರ್ವಕಾಮಸಮೃದ್ಧಾ ತೇ ಪ್ರಜಾ ರಾಜ್ಯೇ ಭವಿಷ್ಯತಿ ॥೩೬॥

ಎಲೈ ಪೂರುವೇ, ನಿನಗೆ ನಾನು ಪ್ರಸನ್ನನಾಗಿದ್ದೇನೆ. ಪುತ್ರನೇ, ಪ್ರೀತಿಯಿಂದ ಈ ವರವನ್ನು ಕೊಡುತ್ತಿದ್ದೇನೆ. ನಿನ್ನ ರಾಜ್ಯದಲ್ಲಿ ಪ್ರಜೆಗಳು ಸರ್ವಕಾಮ ಸಮೃದ್ಧರಾಗಿ ಬಾಳುವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ತ್ರಿಸಪ್ತತಿತಮೋऽಧ್ಯಾಯಃ ॥
॥ ಸಂಭವಪರ್ವಣಿ ಏಕವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ತಾಲ್ಕನೆಯ ಅಧ್ಯಾಯ

(ಯಯಾತಿಯ ವೈರಾಗ್ಯ, ಪೂರುವಿಗೆ ರಾಜ್ಯಾಭಿಷೇಕ ಮತ್ತು ಯಯಾತಿಯ ವನಪ್ರಾಪ್ತಿ.)

ವೈಶಂಪಾಯನಃ

ಪೌರವೇಣಾಥ ವಯಸಾ ಯಯಾತಿರ್ನಹುಷಾತ್ಮಜಃ ।
ರೂಪಯೌವನಸಂಪನ್ನಃ ಕುಮಾರಃ ಸಹಸಾऽಭವತ್ ॥೧॥

ನಹುಷನ ಮಗನಾದ ಯಯಾತಿಯು ಪೂರುವಿನ ವಯಸ್ಸನ್ನು ತೆಗೆದುಕೊಂಡು, ರೂಪ ಯೌವನ ಸಂಪನ್ನನಾಗಿ ತಕ್ಷಣ ಕುಮಾರನಾದನು.

ಪ್ರೀತಿಯುಕ್ತೋ ನೃಪಶ್ರೇಷ್ಠಶ್ಚಚಾರ ವಿಷಯಾನ್ ಪ್ರಿಯಾನ್ ।
ಯಥಾಕಾಮಂ ಯಥೋತ್ಸಾಹಂ ಯಥಾಕಾಲಂ ಯಥಾಸುಖಮ್ ॥೨॥

ಧರ್ಮಾವಿರುದ್ಧಂ ರಾಜೇಂದ್ರೋ ಯಥಾऽರ್ಹಂ ಸೋऽನ್ವಸೇವತ
ದೇವಾನತರ್ಪಯದ್ ಯಜ್ಞೈಃ ಶ್ರಾದ್ಧೈಃ ಸಂತರ್ಪಯನ್ ಪಿತೄ ನ್॥

ನೃಪಶ್ರೇಷ್ಠನಾದ ಯಯಾತಿಯು ಸಂತೋಷದಿಂದ ಪ್ರಿಯವಾದ ವಿಷಯಗಳನ್ನು ತನ್ನ ಆಸೆಗೆ, ತನ್ನ ಉತ್ಸಾಹಕ್ಕೆ, ಆಯಾ ಕಾಲಗಳಿಗೆ, ಆಯಾ ಸುಖಗಳಿಗೆ,

ಅನುಕೂಲವಾಗುವಂತೆ ಧರ್ಮಕ್ಕೆ ಅವಿರುದ್ಧವಾಗಿ, ಯಥಾಯೋಗ್ಯವಾಗಿ ಸೇವಿಸಿದನು. ಯಜ್ಞಗಳಿಂದ ದೇವತೆಗಳನ್ನು ಸಂತೋಷಪಡಿಸಿದನು, ಪಿತೃಗಳನ್ನು ಶ್ರಾದ್ಧಗಳಿಂದ ಸಂತೋಷಡಿಸಿದನು.

ದೀನಾಂಧಕೃಪಣಾನ್ ವಿಪ್ರಾನನಾಥಾಂಶ್ಚಾಭ್ಯಪೂಜಯತ್ ।
ಅತಿಥೀನನ್ನಪಾನೈಶ್ಚ ವಿಶಃ ಶೂದ್ರಾನಪಾಲಯತ್ ।
ಆನೃಶಂಸ್ಯೇನ ಸರ್ವಾಂಶ್ಚ ದಸ್ಯೂನ್ ನಿಗ್ರಹಣೇನ ಚ ॥೪॥

ದೀನರನ್ನೂ, ಕುರುಡರನ್ನೂ, ಸಂಕಷ್ಟಕ್ಕೆ ಒಳಗಾದವರನ್ನೂ, ಅನಾಥರನ್ನೂ ಮತ್ತು ಬ್ರಾಹ್ಮಣರನ್ನೂ ಪೂಜಿಸಿದನು. ಅತಿಥಿಗಳಿಗೆ ಅನ್ನಪಾನಗಳನ್ನು ನೀಡಿ ವೈಶ್ಯರನ್ನೂ ಮತ್ತು ಶೂದ್ರರನ್ನೂ ಪಾಲಿಸಿದನು. ಒಳ್ಳೆಯ ಮಾತುಗಳಿಂದ ಎಲ್ಲರನ್ನೂ ಸಂತೋಷಪಡಿಸಿದನು. ದಸ್ಯುಗಳನ್ನು ನಿಗ್ರಹಿಸಿದನು.

ಸ್ವಧರ್ಮೇಣ ಪ್ರಜಾಃ ಸರ್ವಾ ಯಥಾವದನುರಂಜಯನ್ ।
ಯಯಾತಿಃ ಪಾಲಯಾಮಾಸ ಸಾಕ್ಷಾದಿಂದ್ರ ಇವಾಪರಃ ॥೫॥

ಯಯಾತಿಯು ಸ್ವಧರ್ಮಕ್ಕೆ ಅನುಗುಣವಾಗಿ ಎಲ್ಲಾ ಪ್ರಜೆಗಳನ್ನು ಸಂತೋಷಪಡಿಸಿ ಇನ್ನೊಬ್ಬ ಇಂದ್ರನಂತೆ ಅವರನ್ನು ಪಾಲಿಸಿದನು.

ಸ ರಾಜಾ ಸಿಂಹವಿಕ್ರಾಂತೋ ಯುವಾ ವಿಷಯಗೋಚರಃ ।
ಅವಿರೋಧೇನ ಧರ್ಮಸ್ಯ ಚಚಾರ ಸುಖಮುತ್ತಮಮ್ ।
ಸ ಸಂಪ್ರಾಪ್ಯ ಸುಖಾನ್ ಕಾಮಾನ್ ತೃಪ್ತಃ ಖಿನ್ನಶ್ಚ ಪಾರ್ಥಿವಃ ॥೬॥

ಸಿಂಹಪರಾಕ್ರಮವುಳ್ಳ ಯುವಕನಾದ ಆ ರಾಜನು ವಿಷಯಗಳಲ್ಲಿ ಆಸಕ್ತನಾದರೂ, ಧರ್ಮಕ್ಕೆ ವಿರೋಧವಿಲ್ಲದಂತೆ ಶ್ರೇಷ್ಠವಾದ ವಿಷಯಸುಖಗಳನ್ನು ಅನುಭವಿಸಿದನು. ಅಭೀಷ್ಟವಾದ ಸುಖಗಳನ್ನು ಪಡೆದು ತೃಪ್ತನಾದರೂ ಆ ರಾಜನು ಖಿನ್ನನೂ ಆದನು.

ಕಾಲಂ ವರ್ಷಸಹಸ್ರಾಂತಂ ಸಸ್ಮಾರ ಮನುಜಾಧಿಪಃ ।
ಪರಿಸಂಖ್ಯಾಯ ಕಾಲಜ್ಞಃ ಕಲಾಃ ಕಾಷ್ಠಾಶ್ಚ ವೀರ್ಯವಾನ್ ।
ಪೂರ್ಣಂ ಮತ್ವಾ ತತಃ ಕಾಲಂ ಪೂರುಂ ಪುತ್ರಮುವಾಚ ಹ ॥೭॥

ಸಹಸ್ರವರ್ಷಗಳನ್ನು ಕಲಾಕಾಷ್ಠಗಳನ್ನೂ ಎಣಿಸಿ, ಪೂರ್ಣವಾಗಿದೆಯೆಂದು ತಿಳಿದು ರಾಜನು ಪೂರುವನ್ನು ಕರೆದು ಮಾತನಾಡಿದನು.

ಯಥಾಕಾಲಂ ಯಥೋತ್ಸಾಹಂ ಯಥಾಕಾಮಮರಿಂದಮ ।
ಸೇವಿತಾ ವಿಷಯಾಃ ಪುತ್ರ ಯೌವನೇನ ಮಯಾ ತವ ।
ತೇಜಸಾ ತವ ಸತ್ಪುತ್ರ ಪೂರ್ಣಂ ಯೌವನಮುತ್ತಮಮ್ ॥೮॥

ಎಲೈ ಪುತ್ರನೇ, ಕಾಲಕ್ಕೆ, ಉತ್ಸಾಹಕ್ಕೆ ಮತ್ತು ನನ್ನ ಆಸೆಗೆ ಅನುಗುಣವಾಗಿ, ನಿನ್ನ ಯೌವನದಿಂದ ನಾನು ಬೇಕಾದ ಸುಖವನ್ನು ಅನುಭವಿಸಿದ್ದೇನೆ. ಶತ್ರುತಾಪನನಾದ ಸತ್ಪುತ್ರನೇ, ನಿನ್ನ ತೇಜಸ್ಸಿನಿಂದ, ನಿನ್ನ ಉತ್ತಮವಾದ ಮತ್ತು ಪೂರ್ಣವಾದ ಯೌವನವನ್ನು ನಾನು ಅನುಭವಿಸಿದೆ.

ಪೂರೋ ಪ್ರೀತೋಽಸ್ಮಿ ಭದ್ರಂ ತೇ ಗೃಹಾಣೇದಂ ಸ್ವಯೌವನಮ್ ।
ರಾಜ್ಯಂ ಚ ಮೇ ಗೃಹಾಣೇದಂ ಯಾವದಿಚ್ಛಸಿ ಯೌವನಮ್ ।
ತಾವದ್ ದೀರ್ಘಾಯುಷೋ ಭುಂಕ್ಷ ತ್ವಂ ಹಿ ಮೇ ಪ್ರಿಯಕೃತ್‌ಸುತಃ ॥

ಎಲೈ ಪೂರುವೇ, ನಿನಗೆ ಮಂಗಳವಾಗಲಿ. ನಾನು ನಿನ್ನ ಮೇಲೆ ಸಂತೋಷಗೊಂಡಿದ್ದೇನೆ. ನಿನ್ನ ಯೌವನವನ್ನು ಹಿಂದಕ್ಕೆ ಪಡೆ. ನಿನ್ನ ರಾಜ್ಯವನ್ನೂ ಸ್ವೀಕರಿಸು. ಎಲ್ಲಿಯವರೆಗೆ ಬಯಸುತ್ತೀಯೋ, ಅಲ್ಲಿಯವರೆಗೆ ನಿನಗೆ ದೀರ್ಘಾಯುಷ್ಯದಿಂದ ಕೂಡಿದ ಯೌವನವಿರಲಿ. ಅದರಿಂದ ಸುಖವನ್ನು ಅನುಭವಿಸು. ನೀನು ನನಗೆ ಪ್ರಿಯವನ್ನುಂಟು ಮಾಡಿದ ಪುತ್ರ.

ವೈಶಂಪಾಯನಃ

ಪ್ರತಿಪೇದೇ ಜರಾಂ ರಾಜಾ ಯಯಾತಿರ್ನಹುಷಾತ್ಮಜಃ ।
ಯೌವನಂ ಪ್ರತಿಪೇದೇ ಚ ಪೂರುಃ ಸ್ವಂ ಪುನರಾತ್ಮವಾನ್ ॥೧೦॥

ನಹುಷನ ಪುತ್ರನಾದ ಯಯಾತಿಯು ತನ್ನ ಜರೆಯನ್ನು ಹಿಂದಕ್ಕೆ ಪಡೆದನು. ಧೈರ್ಯಶಾಲಿಯಾದ ಪೂರುವೂ ಕೂಡ ತನ್ನ ಯೌವನವನ್ನು ಹಿಂದೆ ಪಡೆದನು.

ಅಭಿಷೇಕ್ತುಕಾಮಂ ನೃಪತಿಂ ಪೂರುಂ ಪುತ್ರಂ ಕನೀಯಸಮ್ ।
ಬ್ರಾಹ್ಮಣಪ್ರಮುಖಾಃ ಪೌರಾ ಇದಂ ವಚನಮಬ್ರುವನ್ ॥೧೧॥

ತನ್ನ ಕಿರಿಯ ಮಗನಾದ ಪೂರುವಿಗೆ ಅಭಿಷೇಕವನ್ನು ಮಾಡಲು ಹೊರಟ ರಾಜನನ್ನು ಕುರಿತು ಬ್ರಾಹ್ಮಣರೇ ಮೊದಲಾದ ಪೌರರು ಹೀಗೆ ಮಾತನಾಡಿದರು.

ಕಥಂ ಶುಕ್ರಸ್ಯ ನಪ್ತಾರಂ ದೇವಯಾನ್ಯಾಃ ಸುತಂ ಪ್ರಭೋ ।
ಜ್ಯೇಷ್ಠಂ ಯದುಮತಿಕ್ರಮ್ಯ ಪೂರೋ ರಾಜ್ಯಂ ಪ್ರದಾಸ್ಯಸಿ ॥೧೨॥

ರಾಜನೇ, ಶುಕ್ರಾಚಾರ್ಯರ ಮೊಮ್ಮಗನೂ, ದೇವಯಾನಿಯ ಜ್ಯೇಷ್ಠಪುತ್ರನೂ ಆದ ಯದುವನ್ನು ಬಿಟ್ಟು, ಪೂರುವಿಗೆ ಹೇಗೆ ರಾಜ್ಯವನ್ನು ಕೊಡುತ್ತಿರುವೆ.

ಯದುರ್ಜ್ಯೇಷ್ಠಸ್ತವ ಸುತೋ ಜಾತಸ್ತಮನು ತುರ್ವಶುಃ ।
ಶರ್ಮಿಷ್ಠಾಯಾಃ ಸುತೋ ದ್ರುಹ್ಯುರನುಃ ಪೂರುಶ್ಚ ಪಾರ್ಥಿವ ॥೧೩॥

ನಿನ್ನ ಹಿರಿಯ ಮಗ ಯದು. ಅವನ ನಂತರ ಹುಟ್ಟಿದವನು ತುರ್ವಶು. ಎಲೈ ರಾಜನೇ ಶರ್ಮಿಷ್ಠೆಯ ಮಕ್ಕಳು ಕ್ರಮವಾಗಿ ದ್ರುಹ್ಯು, ಅನು ಮತ್ತು ಪೂರು.

ಕಥಂ ಜ್ಯೇಷ್ಠಾನತಿಕ್ರಮ್ಯ ಯವೀಯಾನ್ ರಾಜ್ಯಮರ್ಹತಿ ।
ಏತತ್ ಸಂಬೋಧಯಾಮಸ್ತ್ವಾಂ ಧರ್ಮಂ ತ್ವಮನುಪಾಲಯ ॥೧೪॥

ಹೇಗೆ ಎಲ್ಲಾ ಅಣ್ಣಂದಿರನ್ನೂ ಬಿಟ್ಟು ಕಿರಿಯನಾದವನು ರಾಜ್ಯಕ್ಕೆ ಅಧಿಕಾರಿಯಾಗುತ್ತಾನೆ? ನಾವು ನಿನಗೆ ಈ ವಿಷಯವನ್ನು ತಿಳಿಸುತ್ತಿದ್ದೇವೆ. ನೀನು ಧರ್ಮವನ್ನು ರಕ್ಷಿಸು.

ಯಯಾತಿಃ

ಬ್ರಾಹ್ಮಣಪ್ರಮುಖಾಃ ಪೌರಾಃ ಸರ್ವೇ ಶೃಣ್ವಂತು ಮೇ ವಚಃ ।
ಜ್ಯೇಷ್ಠಂ ಪ್ರತಿ ಯಥಾ ರಾಜ್ಯಂ ನ ದೇಯಂ ಮೇ ಕಥಂಚನ ॥೧೫॥

ಬ್ರಾಹ್ಮಣ ಪ್ರಮುಖರಾದ ಎಲ್ಲಾ ಪೌರರೂ ಜ್ಯೇಷ್ಠನಾದವನಿಗೆ ಏಕೆ ನಾನು ರಾಜ್ಯವನ್ನು ಕೊಡುತ್ತಿಲ್ಲ ಎಂಬ ವಿಷಯದಲ್ಲಿ ನನ್ನ ಮಾತನ್ನು ಕೇಳಿ.

ಮಮ ಜ್ಯೇಷ್ಠೇನ ಯದುನಾ ನಿಯೋಗೋ ನಾನುಪಾಲಿತಃ ।
ಪ್ರತಿಕೂಲಃ ಪಿತುರ್ಯಶ್ಚ ನ ಸ ಪುತ್ರಃ ಸತಾಂ ಮತಃ ॥೧೬॥

ನನ್ನ ಹಿರಿಯ ಮಗನಾದ ಯದುವು ನನ್ನ ಆದೇಶವನ್ನು ಪಾಲಿಸಲಿಲ್ಲ. ಯಾವ ಮಗನು ತಂದೆಗೆ ಪ್ರತಿಕೂಲನಾಗಿರುತ್ತಾನೆಯೋ ಅವನು ಮಗನೇ ಅಲ್ಲ ಎಂದು ಸಜ್ಜನರ ಅಭಿಪ್ರಾಯ.

ಮಾತಾಪಿತ್ರೋರ್ವಚನಕೃತ್ ಪಥ್ಯಸ್ಯ ವಿಹಿತಸ್ಯ ಚ ।
ಸ ಪುತ್ರಃ ಪುತ್ರವದ್ ಯಶ್ಚ ವರ್ತತೇ ಪಿತೃಮಾತೃಷು ॥೧೭೫॥

ತಂದೆತಾಯಿಗಳ ಮಾತನ್ನು ಪಾಲಿಸುವವನು ಮತ್ತು ವಿಹಿತವಾದ ಹಿತವಾದ ಕರ್ಮವನ್ನು ಆಚರಿಸುವವನು ನಿಜವಾದ ಮಗ, ಏಕೆಂದರೆ ಅವನು ತಂದೆತಾಯಿಗಳ ವಿಷಯದಲ್ಲಿ ಪುತ್ರನು ನಡೆಯಬೇಕಾದಂತೆ ನಡೆದುಕೊಳ್ಳುತ್ತಾನೆ.

(ತಂದೆ ತಾಯಂದಿರ ಮಾತನ್ನು ಕೇಳಬೇಕೆಂದು ತಿಳಿದು, ಜ್ವರದಲ್ಲಿರುವ ತಂದೆಯು ಹಾಲನ್ನು ಕೇಳಿದಾಗ ಕೊಡುವುದಿಲ್ಲ. ಹಾಗೆಯೇ ಮಾಂಸವನ್ನು ನೀಡು ಎಂದಾಗಲೂ ನೀಡಬಾರದು. ಒಟ್ಟಿನಲ್ಲಿ ಶಾಸ್ತ್ರವಿಹಿತವಾದ ಅವರಿಗೆ ಹಿತವಾದದ್ದನ್ನು ಮಾಡುವವನು ಎಂದರ್ಥ!)

ಪುತೀತಿ ನರಕಸ್ಯಾಖ್ಯಾ ದುಃಖಂ ಹಿ ನರಕಂ ವಿದುಃ ।
ಪುತಿತ್ರಾಣಾತ್ ತತಃ ಪುತ್ರಮಿಹೇಚ್ಛಂತಿ ಪರತ್ರ ಚ ॥೧೮೪॥

ಪುತಿ ಎಂದು ನರಕಕ್ಕೆ ಹೆಸರು. ದುಃಖವನ್ನು ನರಕವೆಂದು ಕರೆಯುತ್ತಾರೆ. ಯಾರು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ದುಃಖದಿಂದ ಪಾರುಮಾಡುತ್ತಾರೋ ಅಂತಹ ಮಗನನ್ನು ಜನರು ಅಪೇಕ್ಷಿಸುತ್ತಾರೆ.

ಆತ್ಮನಃ ಸದೃಶಃ ಪುತ್ರಃ ಪಿತೃದೇವರ್ಷಿಪೂಜನೇ ।
ಯೋ ಬಹೂನಾಂ ಗುಣಕರಃ ಸ ಪುತ್ರೋ ಜ್ಯೇಷ್ಠ ಉಚ್ಯತೇ ॥೧೮೫॥

ಪಿತೃದೇವತೆಗಳ ಮತ್ತು ಋಷಿಗಳ ಪೂಜೆಯ ವಿಷಯದಲ್ಲಿ ಮಗನು ತಂದೆಗೆ ಸದೃಶನಾದವನು. ಅನೇಕ ಮಕ್ಕಳಲ್ಲಿ ಯಾವನು ಬಹಳ ಗುಣಗಳಿಂದ ಕೂಡಿರುತ್ತಾನೆಯೋ ಅವನನ್ನೇ ಜ್ಯೇಷ್ಠ ಎಂದು ಕರೆಯುತ್ತಾರೆ.

ಮೂಕೋಽಂಧೋ ಬಧಿರಃ ಶ್ವಿತ್ರೀ ಸ್ವಧರ್ಮಂ ನಾನುತಿಷ್ಠತಿ ।
ಚೋರಃ ಕಿಲ್ಬಿಷಿಕಃ ಪುತ್ರೋ ಜ್ಯೇಷ್ಠೋ ನ ಜ್ಯೇಷ್ಠ ಉಚ್ಯತೇ ॥೨೦॥

ಮೂಕನಾದ, ಅಂಧನಾದ, ಬಧಿರನಾದ, ಕುಷ್ಟಿಯಾದ, ಸ್ವಧರ್ಮವನ್ನು ಅನುಸರಿಸದಿರುವಂತಹ, ಚೋರನಾದ, ಪಾಪಕರ್ಮಗಳನ್ನು ಎಸಗುವ ಮಗನು ಜ್ಯೇಷ್ಠನಾದರೂ ಜ್ಯೇಷ್ಠನಲ್ಲ.

ಜ್ಯೇಷ್ಠಾಂಶಹಾರೀ ಗುಣಕೃದಿಹ ಲೋಕೇ ಪರತ್ರ ಚ ।
ಶ್ರೇಯಾನ್ ಪುತ್ರೋ ಗುಣೋಪೇತಃ ಸ ಪುತ್ರೋ ನೇತರೋ ವೃಥಾ ॥೨೧॥

ವದಂತಿ ಧರ್ಮಂ ಧರ್ಮಜ್ಞಾಃ ಪಿತೃಣಾಂ ಪುತ್ರಕಾರಣಾನ್ ।
ಯದುನಾऽಹಮವಜ್ಞಾತಸ್ತಥಾ ತುರ್ವಶುನಾ ಪುನಃ ॥೨೨॥

ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ, ಗುಣವಂತನಾದವನೇ ಜ್ಯೇಷ್ಠಪುತ್ರನ ಅಂಶಕ್ಕೆ ಭಾಗಿಯಾಗುತ್ತಾನೆ. ಗುಣೋಪೇತನಾದ ಪುತ್ರನೇ ಶ್ರೇಷ್ಠನಾದವನು. ಉಳಿದ ಮಕ್ಕಳು ವ್ಯರ್ಥ. ಪಿತೃಗಳು ಪುತ್ರರನ್ನು ಪಡೆಯುವ ವಿಷಯದಲ್ಲಿ ಧರ್ಮಜ್ಞರಾದವರು ಹೀಗೆ ಧರ್ಮವನ್ನು ಹೇಳುತ್ತಾರೆ.

ದ್ರುಹ್ಯುನಾ ಚಾನುನಾ ಚೈವ ಮಯ್ಯವಜ್ಞಾ ಕೃತಾ ಭೃಶಮ್ ।
ಪೂರುಣಾ ಮೇ ಕೃತಂ ವಾಕ್ಯಂ ಮಾನಿತಶ್ಚ ವಿಶೇಷತಃ ॥೨೩॥

ಯದುವು ನನಗೆ ಅವಮಾನವನ್ನು ಮಾಡಿದನು. ಹಾಗೆಯೇ, ತುರ್ವಶು, ದ್ರುಹ್ಯು, ಅನು ಇವರೂ ಕೂಡಾ ಚೆನ್ನಾಗಿ ಅವಮಾನವನ್ನು ಮಾಡಿದರು. ಪೂರುವು ನನ್ನ ಮಾತಿಗೆ ಬೆಲೆಯನ್ನು ಕೊಟ್ಟು ನನಗೆ ವಿಶೇಷವಾಗಿ ಸನ್ಮಾನವನ್ನು ಮಾಡಿದ್ದಾನೆ.

ಕನೀಯಾನ್ ಮಮ ದಾಯಾದೋ ಧೃತಾ ಯೇನ ಜರಾ ಮಮ ।
ಪುತ್ರೋ ಯಸ್ತ್ವನುವರ್ತೇತ ಸ ರಾಜಾ ಪೃಥಿವೀಪತಿಃ ।
ಯೋ ವಾನುವರ್ತೀ ಪುತ್ರಾಣಾಂ ಸ ಪುತ್ರೋ ದಾಯಭಾಗ್ ಭವೇತ್ ॥

ನನ್ನ ಮುಪ್ಪನ್ನು ಧರಿಸಿದ ನನ್ನ ಕಿರಿಯ ಮಗನೇ ನನ್ನ ಉತ್ತರಾಧಿಕಾರಿ. ಯಾರು ತಂದೆಯನ್ನು ಅನುಸರಿಸುತ್ತಾನೋ ಅಂತಹವನೇ ಪೃಥಿವೀಪತಿಯಾದ ರಾಜನಾಗುತ್ತಾನೆ. ಅನೇಕ ಪುತ್ರರ ಮಧ್ಯೆ ಅವನೇ ತಂದೆಯ ರಾಜ್ಯಕ್ಕೆ ಉತ್ತರಾಧಿಕಾರಿಯಾಗುತ್ತಾನೆ.

ವೇದೋಕ್ತಂ ಸಂಭವಂ ಮಹ್ಯಮನೇನ ಹೃದಯೋದ್ಭವಮ್ ।
ತಸ್ಯ ಜಾತಮಿದಂ ಕೃತ್ಸ್ನಮಾತ್ಮಾ ಪುತ್ರ ಇತಿ ಶ್ರುತಿಃ ।
ಮಮ ಕಾಮಃ ಸ ಚ ಕೃತಃ ಪೂರುಣಾ ಪಿತೃರೂಪಿಣಾ ॥೨೫॥

ಈ ಪೂರುವಿನಿಂದ ಉಪಕೃತನಾಗಿ ನಾನು ವೇದೋಕ್ತವಾದ ಧರ್ಮಗಳನ್ನು ಆಚರಿಸಿದೆ ಮತ್ತು ಎಲ್ಲಾ ವಿಷಯಸುಖವನ್ನೂ ಅನುಭವಿಸಿದೆ. ಆತ್ಮನೇ ಮಗ ಎಂದು

ವೇದವು ಹೇಳುತ್ತದೆ. ಆದ್ದರಿಂದ ಪಿತೃರೂಪನಾದ ಪೂರುವಿನಿಂದ ನನ್ನ ಎಲ್ಲಾ ಕಾಮಗಳು ಪೂರ್ಣವಾಗಿವೆ.

ಶುಕ್ರೇಣ ಚ ವರೋ ದತ್ತಃ ಕಾವ್ಯೇನೋಶನಸಾ ಸ್ವಯಮ್ ।
ಭವತೋಽನುನಯಾಮ್ಯೇವಂ ಪೂರೂ ರಾಜ್ಯೇಽಭಿಷಿಚ್ಯತಾಮ್ ॥೨೬॥

ಶುಕ್ರಾಚಾರ್ಯರು ಯಾರು ನಿನ್ನ ಜರೆಯನ್ನು ಸ್ವೀಕರಿಸುತ್ತಾರೋ ಅವನೇ ನಿನಗೆ ಉತ್ತರಾಧಿಕಾರಿ ಎಂದು ವರವನ್ನು ಕೊಟ್ಟಿದ್ದಾರೆ. ಆದ್ದರಿಂದ ನಿಮ್ಮೆಲ್ಲರ ಸಮ್ಮತಿಯನ್ನು ಬೇಡುತ್ತಿದ್ದೇನೆ. ಪುರುವಿಗೆ ರಾಜ್ಯಾಭಿಷೇಕವಾಗಲಿ.

ಪೌರಾಃ

ಯಃ ಪುತ್ರೋ ಗುಣಸಂಪನ್ನೋ ಮಾತಾಪಿತ್ರೋರ್ಹಿತಃ ಸದಾ ।
ಸರ್ವಮರ್ಹತಿ ಕಲ್ಯಾಣಂ ಕನೀಯಾನಪಿ ಸ ಪ್ರಭೋ ॥೨೭॥

ವೇದೇ ಧರ್ಮೇ ಚಾರ್ಥಶಾಸ್ತ್ರೇ ಮುನಿಭಿಃ ಕಥಿತಂ ಪುರಾ ।
ಅರ್ಹಃ ಪೂರುರಿದಂ ರಾಜ್ಯಂ ಯಃ ಸುತಃ ಪ್ರಿಯಕೃತ್ ತವ ।
ವರದಾನಾಚ್ಚ ಶುಕ್ರಸ್ಯ ನ ಶಕ್ಯಂ ವಕ್ತುಮುತ್ತರಮ್ ॥೨೮॥

ಯಾವ ಮಗನು ಗುಣಸಂಪನ್ನನಾಗಿ, ಯಾವಾಗಲೂ ತಂದೆತಾಯಿಗಳಿಗೆ ಹಿತವನ್ನುಂಟು ಮಾಡುತ್ತಾನೆಯೋ ಅವನು ಚಿಕ್ಕವನಾದರೂ ಎಲ್ಲಾ ಮಂಗಳಕ್ಕೂ ಮತ್ತು ಭಾಗ್ಯಕ್ಕೂ ಅಧಿಕಾರಿಯಾಗುತ್ತಾನೆ. ಹೀಗೆ ಹಿಂದೆ ಋಷಿಗಳು ವೇದದಲ್ಲಿಯೂ, ಧರ್ಮಶಾಸ್ತ್ರದಲ್ಲಿಯೂ, ಅರ್ಥಶಾಸ್ತ್ರದಲ್ಲಿಯೂ ಹೇಳಿದ್ದಾರೆ. ನಿನಗೆ ಪ್ರಿಯವನ್ನುಂಟುಮಾಡಿದ ಪೂರುವು ಈ ರಾಜ್ಯಕ್ಕೆ ನಿಶ್ಚಯವಾಗಿ ಅಧಿಕಾರಿಯಾಗಿದ್ದಾನೆ. ಶುಕ್ರಾಚಾರ್ಯರ ವರವೂ ಇರುವುದರಿಂದ ನಿನ್ನ ಮಾತಿಗೆ ಬೇರೆ ಉತ್ತರವನ್ನು ಹೇಳಲು ಸಾಧ್ಯವಿಲ್ಲ.

ವೈಶಂಪಾಯನಃ

ಪೌರಜಾನಪದೈಸ್ತುಷ್ಟೈರಿತ್ಯುಕ್ತೋ ನಾಹುಷಸ್ತದಾ ।
ಅಭ್ಯಷಿಂಚತ್ ತದಾ ಪೂರುಂ ಯಯಾತಿರ್ದ್ವಿಜಪೂರ್ವಕಮ್ ॥

ಸಂತೋಷಗೊಂಡ ಪೌರಜಾನಪದರಿಂದ ಹೀಗೆ ಹೇಳಲ್ಪಟ್ಟ ಯಯಾತಿಯು ಆಗ ಬ್ರಾಹ್ಮಣರನ್ನು ಮುಂದೆ ಮಾಡಿಕೊಂಡು ಪೂರುವಿಗೆ ರಾಜ್ಯಾಭಿಷೇಕವನ್ನು ಮಾಡಿದನು.

ಯದುಂ ಚ ತುರ್ವಶುಂ ಚೋಭೌ ದ್ರುಹ್ಯುಂ ಚೈವ ಸಹಾನುಜಮ್।
ಅಂತೇಷು ಸ ವಿನಿಕ್ಷಿಪ್ಯ ನಾಹುಷಃ ಸ್ವಾತ್ಮಜಾನ್ ಸುತಾನ್ ॥೩೨॥

ಯಯಾತಿಯು ತನ್ನ ಇತರ ಮಕ್ಕಳಾದ ಯದು, ತುರ್ವಶು, ದ್ರುಹ್ಯು ಮತ್ತು ಅನು ಇವರನ್ನು ಅಂತಪಾಲರನ್ನಾಗಿ ನೇಮಿಸಿದನು.

ದತ್ತ್ವಾ ಚ ಪೂರವೇ ರಾಜ್ಯಂ ವನವಾಸಾಯ ದೀಕ್ಷಿತಃ ।
ಪುರಾತ್ ಸ ನಿರ್ಯಯೌ ತಸ್ಮಾದ್ ಬ್ರಾಹ್ಮಣೈಸ್ತಾಪಸೈಃ ಸಹ ॥೩೩॥

ಯಯಾತಿಯು ಪೂರುವಿಗೆ ರಾಜ್ಯವನ್ನು ಕೊಟ್ಟು, ವನವಾಸದ ದೀಕ್ಷೆಯನ್ನು ಹೊಂದಿ, ತಾಪಸರಾದ ಬ್ರಾಹ್ಮಣರಿಂದ ಕೂಡಿಕೊಂಡು ಆ ಪಟ್ಟಣದಿಂದ ಹೊರಗೆ ಹೊರಟನು.

ಯದೋರ್ಜಾತಾ ಯಾದವಾಶ್ಚ ತುರ್ವಶೋರ್ಯವನಾಃ ಸುತಾಃ ।
ದ್ರುಹ್ಯೋರಪಿ ಸುತಾ ಭೋಜಾ ಅನೋಸ್ತು ಮ್ಲೇಚ್ಛಜಾತಯಃ ॥೩೪॥

ಯದುವಿನ ವಂಶದಲ್ಲಿ ಯಾದವರೂ, ತುರ್ವಶುವಿನ ವಂಶದಲ್ಲಿ ಯವನರೂ, ದ್ರುಹ್ಯುವಿನ ವಂಶದಲ್ಲಿ ಭೋಜರೂ, ಅನುವಿನ ವಂಶದಲ್ಲಿ ಮ್ಲೇಚ್ಛರೂ ಉಂಟಾದರು.

ಪುರೋಸ್ತು ಪೌರವೋ ವಂಶೋ ಯತ್ರ ಜಾತೋಽಸಿ ಪಾರ್ಥಿವ ।
ಇದಂ ವರ್ಷಸಹಸ್ರಾಯ ರಾಜ್ಯಂ ಕಾರಯಿತಾ ಪ್ರಭೋ ॥೩೫॥

ಪೂರುವಿನ ವಂಶಕ್ಕೆ ಪೌರವ ವಂಶವೆಂದು ಹೆಸರು. ಎಲೈ ರಾಜನೇ, ನೀನು ಆ ವಂಶದಲ್ಲಿ ಜನಿಸಿದ್ದೀಯೆ. ಎಲೈ ರಾಜನೇ, ನೀನು ಈ ರಾಜ್ಯವನ್ನು ಒಂದು ಸಹಸ್ರ ವರ್ಷಗಳ ಕಾಲ ಆಳುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಚತುಃಸಪ್ತತಿತಮೋಽಧ್ಯಾಯಃ ॥
॥ ಸಂಭವಪರ್ವಣಿ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ತೈದನೆಯ ಅಧ್ಯಾಯ

(ತಪಸ್ಸನ್ನು ಆಚರಿಸಿ, ಯಯಾತಿಯ ಸ್ವರ್ಗಗಮನ, ಇಂದ್ರನಿಂದ ಪತನ ಮತ್ತು ಪುನಃ ಸ್ವರ್ಗ ಪ್ರಾಪ್ತಿ.)

ವೈಶಂಪಾಯನಃ

ಏವಂ ಸ ನಾಹುಷೋ ರಾಜಾ ಯಯಾತಿಃ ಪೂರುಮೀಪ್ಸಿತಮ್ ।
ರಾಜ್ಯೇಽಭಿಷಿಚ್ಯ ಮುದಿತೋ ವಾನಪ್ರಸ್ಥೋಽಭವನ್ಮುನಿಃ ॥೧॥

ಹೀಗೆ ನಹುಷನ ಪುತ್ರನಾದ ಆ ಯಯಾತಿರಾಜನು ತನಗೆ ಅಭಿಪ್ರೇತನಾದ ಪೂರುವಿಗೆ ರಾಜ್ಯಾಭಿಷೇಕ ಮಾಡಿ ಸಂತೋಷದಿಂದ ಕಾಡಿಗೆ ಹೋಗಿ ವಾನಪ್ರಸ್ಥಮುನಿಯಾದನು.

ಉಷಿತ್ವಾ ಚ ವನೇ ವಾಸಂ ಬ್ರಾಹ್ಮಣೈಸ್ತಾಪಸೈಃ ಸಹ ।
ಫಲಮೂಲಾಶನೋ ಭೂತ್ವಾ ತತಃ ಸ್ವರ್ಗಮಿತೋ ಗತಃ ॥೨॥

ತಪಸ್ವಿಗಳಾದ ಬ್ರಾಹ್ಮಣರ ಜೊತೆಯಲ್ಲಿ ಫಲಮೂಲಾಶನನಾಗಿ ವನವಾಸವನ್ನು ಮಾಡಿ ಅಲ್ಲಿಂದ ಸ್ವರ್ಗಕ್ಕೆ ಹೋದನು.

ಸ ಗತಃ ಸ್ವರ್ಗವಾಸಾರ್ಥಂ ನಿವಸನ್ ಸುರವೇಶ್ಮನಿ ।
ಕಾಲೇನ ನಾತಿಮಹತಾ ಪುನಃ ಶಕ್ರೇಣ ಪಾತಿತಃ ।
ಸಾಧುಭಿಃ ಸಂಗತಿಂ ಲಬ್ಧ್ವಾ ಪುನಃ ಸ್ವರ್ಗಮಿತಿ ಶ್ರುತಿಃ ॥೩॥

ಸ್ವರ್ಗವಾಸಕ್ಕಾಗಿ ಹೋದವನು ಇಂದ್ರನ ಮನೆಯಲ್ಲಿ ವಾಸಮಾಡುತ್ತಿದ್ದು, ಅಲ್ಪ ಕಾಲದಲ್ಲಿಯೇ ಪುನಃ ಇಂದ್ರನಿಂದ ಬೀಳಿಸಲ್ಪಟ್ಟನು. ಸಜ್ಜನರ ಸಂಗತಿಯನ್ನು ಪಡೆದು ಪುನಃ ಸ್ವರ್ಗವನ್ನು ಪಡೆದನೆಂದು ಕೇಳಿದ್ದೇವೆ.

ಜನಮೇಜಯಃ

ಸ್ವರ್ಗತಃ ಸ ಪುನರ್ಬ್ರಹ್ಮನ್ ನಿವಸನ್ ದೇವವೇಶ್ಮನಿ ।
ಕಾಲೇನ ನಾತಿಮಹತಾ ಶಕ್ರೇಣ ಚ್ಯಾವಿತಃ ಕಥಮ್ ॥೪॥

ಎಲೈ ಬ್ರಾಹ್ಮಣನೇ, ಸ್ವರ್ಗಕ್ಕೆ ಹೋಗಿ ದೇವೇಂದ್ರನ ಮನೆಯಲ್ಲಿ ವಾಸಮಾಡುವವನು ಅಲ್ಪಕಾಲದಲ್ಲಿಯೇ ಹೇಗೆ ಇಂದ್ರನಿಂದ ಬೀಳಿಸಲ್ಪಟ್ಟನು?

ನಿವಸನ್ ಪ್ರಚ್ಯುತಃ ಸ್ವರ್ಗಾದಪ್ರಾಪ್ತೋ ಮೇದಿನೀತಳಮ್ ।
ಸ್ಥಿತ ಆಸೀದಂತರಿಕ್ಷೇ ಸ ತದೇತಿ ಶ್ರುತಂ ಮಯಾ ।
ತತ ಏವ ಪುನಶ್ಚಾಪಿ ಗತಃ ಸ್ವರ್ಗಮಿತಿ ಶ್ರುತಮ್ ॥೫॥

ಸ್ವರ್ಗವಾಸದಿಂದ ಪ್ರಚ್ಯುತನಾಗಿ ಬಿದ್ದ ಅವನು ಭೂಮಿಯನ್ನು ಸೇರದೆ ಅಂತರಿಕ್ಷಲೋಕದಲ್ಲೇ ನಿಂತನು ಎಂದು ಮುನಿಗಳಿಂದ ಕೇಳಿದ್ದೇನೆ ಮತ್ತು ಅಲ್ಲಿಂದಲೇ ಪುನಃ ಸ್ವರ್ಗಕ್ಕೆ ಹೋದನು ಎಂದೂ ಕೇಳಿದ್ದೇನೆ.

ತದಾ ಸಾರ್ಧಂ ವಸುಮತಾ ಶ್ರೀಮತಾ ಚಾಷ್ಟಕೇನ ಚ ।
ಪ್ರತರ್ದನೇನ ಶಿಬಿನಾ ಸಮೇತ್ಯ ಕಿಲ ಸಂಸದಿ ।
ಕಾರಣೇನ ದಿವಂ ಕೇನ ಸಂಪ್ರಾಪ್ತೋ ದ್ವಿಜಸತ್ತಮ ॥೬॥

ಆಗ ವಸುಮಾನ್, ಅಷ್ಟಕ, ಪ್ರತರ್ದನ ಮತ್ತು ಶಿಬಿ ಇವರುಗಳ ಜೊತೆಯಲ್ಲಿ ಯಾವ ಕಾರಣದಿಂದ ಸ್ವರ್ಗಕ್ಕೆ ಹೋದನು ಎಂದು ತಿಳಿಸಿ.

ಸರ್ವಮೇತದಶೇಷೇಣ ಶ್ರೋತುಮಿಚ್ಛಾಮಿ ತತ್ತ್ವತಃ ।
ಕಥ್ಯಮಾನಂ ತ್ವಯಾ ವಿಪ್ರ ದೇವರ್ಷಿಗಣಸನ್ನಿಧೌ ॥೭॥

ಎಲೈ ಬ್ರಾಹ್ಮಣರೇ, ಈ ಎಲ್ಲಾ ವಿಷಯಗಳನ್ನೂ ಯಥಾರ್ಥವಾಗಿ ಈ ದೇವ ಸಮಾನರಾದ ಋಷಿಗಳ ಸಮೂಹದ ಸನ್ನಿಧಿಯಲ್ಲಿ ನಿಮ್ಮಿಂದ ಹೇಳಲ್ಪಡುವುದನ್ನು ನಾನು ಕೇಳಬೇಕೆಂದು ಬಯಸುತ್ತೇನೆ.

ದೇವರಾಜಸಮೋ ಹ್ಯಾಸೀದ್ ಯಯಾತಿಃ ಪೃಥಿವೀಪತಿಃ ।
ವರ್ಧನಃ ಕುರುವಂಶಸ್ಯ ವಿಭಾವಸುಸಮದ್ಯುತಿಃ ॥೮॥

ಪೃಥಿವೀಪತಿಯಾದ ಯಯಾತಿಯು ದೇವರಾಜ ಸಮನಾಗಿದ್ದು, ಪುರುವಂಶದ ಪ್ರವರ್ಧಕನೂ ಮತ್ತು ಅಗ್ನಿಗೆ ಸಮಾನವಾದ ಕಾಂತಿಯನ್ನು ಹೊಂದಿದವನೂ ಆಗಿದ್ದನು.

ತಸ್ಯ ವಿಸ್ತೀರ್ಣಯಶಸಃ ಸತ್ಯಕೀರ್ತೇರ್ಮಹಾತ್ಮನ ಃ ।
ಚರಿತಂ ಶ್ರೋತುಮಿಚ್ಛಾಮಿ ದಿವಿ ಚೇಹ ಚ ಸರ್ವಶಃ ॥೯॥

ಆ ವಿಸ್ತಾರವಾದ ಕೀರ್ತಿಯುಳ್ಳ, ಸತ್ಯವಾದ ಕೀರ್ತಿಯುಳ್ಳ ಮಹಾತ್ಮನ, ಈ ಲೋಕದಲ್ಲಿ ಮತ್ತು ದೇವಲೋಕದಲ್ಲಿ ನಡೆದ ಚರಿತೆ ಎಲ್ಲವನ್ನೂ ನಾನು ಕೇಳಲು ಬಯಸುತ್ತೇನೆ.

ವೈಶಂಪಾಯನಃ

ಹಂತ ತೇ ಕಥಯಿಷ್ಯಾಮಿ ಯಯಾತೇರುತ್ತರಾಂ ಕಥಾಮ್ ।
ದಿವಿ ಚೇಹ ಚ ಪೂರ್ಣಾರ್ಥಾಂ ಸರ್ವಪಾಪಪ್ರಣಾಶಿನೀಮ್ ॥೧೦॥

ಸಂತೋಷ, ನಿನಗೆ ಯಯಾತಿಯು ಉತ್ತರಚರಿತೆಯನ್ನು ಹೇಳುವೆನು. ಇಲ್ಲಿಯೂ ಮತ್ತು ಸ್ವರ್ಗಲೋಕದಲ್ಲಿಯೂ ಅರ್ಥಪೂರ್ಣವಾದ ಆ ಕಥೆಯು ಎಲ್ಲಾ ಪಾಪಗಳನ್ನು ಪರಿಹಾರ ಮಾಡುತ್ತದೆ.

ಯಯಾತಿರ್ನಾಹುಷೋ ರಾಜಾ ಪೂರುಂ ಪುತ್ರಂ ಕನೀಯಸಮ್ ।
ರಾಜ್ಯೇऽಭಿಷಿಚ್ಯ ಮುದಿತಃ ಪ್ರವವ್ರಾಜ ವನಂ ತದಾ ॥೧೧॥

ಯಯಾತಿರಾಜನು ಕಿರಿಯ ಮಗನಾದ ಪೂರುವಿಗೆ ಪಟ್ಟಾಭಿಷೇಕವನ್ನು ಮಾಡಿ ಸಂತೋಷದಿಂದ ಕಾಡಿಗೆ ಹೋದನು.

ಅಂತೇಷು ಸ ನಿಕ್ಷಿಪ್ಯ ಪುತ್ರಾನ್ ವೈ ಪೂರುಪೂರ್ವಜಾನ್ ।
ಫಲಮೂಲಾಶನೋ ಭೂತ್ವಾ ವನೇ ಸನ್ನ್ಯವಸಚ್ಚಿರಮ್ ॥೧೨॥

ಪೂರುವಿನ ಅಣ್ಣಂದಿರಾದ ಉಳಿದ ನಾಲ್ವರು ಮಕ್ಕಳನ್ನು ಅಂತಪಾಲರನ್ನಾಗಿ ಮಾಡಿ ಕಾಡಿನಲ್ಲಿ ಫಲಮೂಲ ಆಹಾರನಾಗಿ ಬಹುಕಾಲ ವಾಸಿಸಿದನು.

ಸಂಯತಾತ್ಮಾ ಜಿತಕ್ರೋಧಃ ತರ್ಪಯನ್ ಪಿತೃದೇವತಾಃ ।
ಅಗ್ನೀಂಶ್ಚ ವಿಧಿವಜ್ಜುಹ್ವನ್ ವಾನಪ್ರಸ್ಥವಿಧಾನತಃ ॥೧೩॥

ಮನೋನಿಗ್ರಹವುಳ್ಳವನಾಗಿ, ಕ್ರೋಧವನ್ನು ಜಯಿಸಿ, ಪಿತೃದೇವತೆಗಳನ್ನು ಆರಾಧಿಸಿ, ವಾನಪ್ರಸ್ಥವಿಧಾನದಿಂದ ಅಗ್ನಿಯಲ್ಲಿ ಹೋಮಗಳನ್ನು ಮಾಡಿದನು.

ಅತಿಥೀನ್ ಪೂಜಯಾಮಾಸ ವನ್ಯೇನ ಹವಿಷಾ ದ್ವಿಜಾನ್ ।
ಸಿಲೋಂಛವೃತ್ತಿಮಾಸ್ಥಾಯ ಶೇಷಾನ್ನಕೃತಭೋಜನಃ ॥೧೪॥

ಕಾಡಿನಲ್ಲಿ ದೊರೆಯುವ ಹವಿಸ್ಸಿನಿಂದ ಅತಿಥಿಗಳನ್ನೂ ಬ್ರಾಹ್ಮಣರನ್ನೂ ಪೂಜಿಸಿದನು. ಸಿಲೋಂಛ ವೃತ್ತಿಯನ್ನು ಆಶ್ರಯಿಸಿ ಅತಿಥಿಗಳ ಭೋಜನ ಶೇಷವನ್ನು ಸೇವಿಸುತ್ತಿದ್ದನು.

ಪೂರ್ಣಂ ವರ್ಷಸಹಸ್ರಂ ಚ ಏವಂವೃತ್ತಿರಭೂನ್ನೃಪಃ ।
ಅಬ್ಭಕ್ಷಃ ಶರದಸ್ತ್ರಿಂಶದ್ ಆಸೀನ್ನಿಯತವಾಙ್ಮನಃ ॥೧೫॥

ಈ ರೀತಿ ಒಂದು ಸಹಸ್ರ ವರ್ಷಗಳ ಕಾಲ ತಪಸ್ಸನ್ನು ಮಾಡಿ, ಅನಂತರ ಮೂವತ್ತು ವರ್ಷಗಳ ಕಾಲ ವಾಙ್ಮನೋಜಯವುಳ್ಳವನಾಗಿ ನೀರನ್ನು ಮಾತ್ರ ಸೇವಿಸಿದನು.

ತತಶ್ಚ ವಾಯುಭಕ್ಷೋಽಭೂತ್ ಸಂವತ್ಸರಮತಂದ್ರಿತಃ ।
ಪಂಚಾಗ್ನಿಮಧ್ಯೇ ಚ ತಪಸ್ತೇಪೇ ಸಂವತ್ಸರಂ ಮುನಿಃ ॥೧೬॥

ಅನಂತರ ಒಂದು ವರ್ಷದ ಕಾಲ ಜಾಗರೂಕತೆಯಿಂದ ಕೇವಲ ವಾಯುವನ್ನು ಸೇವಿಸಿದನು. ಅನಂತರ ಒಂದು ವರ್ಷ ಮುನಿಯಾದ ಅವನು ಪಂಚಾಗ್ನಿ ಮಧ್ಯದಲ್ಲಿ ತಪಸ್ಸನ್ನು ಮಾಡಿದನು:

ಏಕಪಾದಸ್ಥಿತಶ್ಚಾಸೀತ್ ಷಣ್ಮಾಸಾಂಶ್ಚ ತತಃ ಪರಮ್ ।
ಏವಮೇವ ತದಾಬ್ದಾನಾಂ ಪರ್ಯಾಯೇಣ ತಪನ್ ವನೇ ।
ಮಹಾಯೋಗೀ ಗತಃ ಸ್ವರ್ಗಂ ಜಗಾಮಾವೃತ್ಯ ರೋದಸೀ ॥೧೭॥

ಅನಂತರ ಆರು ತಿಂಗಳ ಕಾಲ ಒಂದೇ ಕಾಲಿನಲ್ಲಿ ನಿಂತು ತಪಸ್ಸನ್ನು ಮಾಡಿದನು. ಹೀಗೆ ಪರ್ಯಾಯವಾಗಿ ಬೇರೆ ಬೇರೆ ರೀತಿಯ ತಪಸ್ಸನ್ನು ಆಚರಿಸುತ್ತಾ ಮಹಾಯೋಗಿಯಾದ ಅವನು ದೇಹವನ್ನು ತ್ಯಜಿಸಿ ಭೂಮಿ ಮತ್ತು ಅಂತರಿಕ್ಷಗಳ ಪ್ರದಕ್ಷಿಣೆ ಮಾಡಿ ಸ್ವರ್ಗಕ್ಕೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಪಂಚಸಪ್ತತಿತಮೋಽಧ್ಯಾಯಃ ॥
॥ ಸಂಭವಪರ್ವಣಿ ತ್ರಯೋವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ತಾರನೆಯ ಅಧ್ಯಾಯ

(ಸ್ವರ್ಗದಲ್ಲಿ ಇಂದ್ರ ಯಯಾತಿಯ ಸಂವಾದ, ಪೂರುವಿಗೆ ರಾಜ್ಯವನ್ನು ಕೊಡುವಾಗ ಯಯಾತಿಯ ಉಪದೇಶದ ಕಥನ.)

ವೈಶಂಪಾಯನಃ

ಸ್ವರ್ಗತಃ ಸ ತು ರಾಜೇಂದ್ರೋ ನಿವಸನ್ ದೇವಸದ್ಮನಿ ।
ಪೂಜಿತಃ ತ್ರಿದಶೈಃ ಸಾಧ್ಯೈರ್ಮರುದ್ಭಿರ್ವಸುಭಿಸ್ತಥಾ ॥೧॥

ರಾಜೇಂದ್ರನಾದ ಯಯಾತಿಯು ಸ್ವರ್ಗವನ್ನು ಸೇರಿ ಇಂದ್ರನ ಮನೆಯಲ್ಲಿ ವಾಸಿಸುತ್ತಾ, ದೇವತೆಗಳಿಂದಲೂ, ಸಾಧ್ಯರಿಂದಲೂ, ಮರುತ್ತುಗಳಿಂದಲೂ ಮತ್ತು ವಸುಗಳಿಂದಲೂ, ಪೂಜಿಸಲ್ಪಟ್ಟನು.

ದೇವಲೋಕಾದ್ ಬ್ರಹ್ಮಲೋಕಂ ಸಂಚರನ್ ಪುಣ್ಯಕೃದ್ ವಶೀ ।
ಅವಸತ್ ಪೃಥಿವೀಪಾಲೋ ದೀರ್ಘಕಾಲಮಿತಿ ಶ್ರುತಿಃ ॥೨॥

ಪುಣ್ಯವನ್ನು ಮಾಡಿದವನೂ ಮತ್ತು ಜಿತವಾದ ಮನಸ್ಸುಳ್ಳವನೂ ಆದ ಆ ರಾಜನು ದೇವಲೋಕದಿಂದ ಬ್ರಹ್ಮಲೋಕಕ್ಕೆ ಹೋಗಿ ಅಲ್ಲಿ ದೀರ್ಘಕಾಲ ವಾಸಿಸಿದನು ಎಂದು ಕೇಳಿದ್ದೇವೆ.

ಸ ಕದಾಚಿನ್ನೃಪಶ್ರೇಷ್ಠೋ ಯಯಾತಿಃ ಶಕ್ರಮಾಗಮತ್ ।
ಕಥಾಂತೇ ತತ್ರ ಶಕ್ರೇಣ ಸ ಪೃಷ್ಟಃ ಪೃಥಿವೀಪತಿಃ ॥೩॥

ಆ ರಾಜಶ್ರೇಷ್ಠನಾದ ಯಯಾತಿಯು ಒಮ್ಮೆ ಇಂದ್ರನ ಸಮೀಪಕ್ಕೆ ಬಂದನು. ಬೇರೆ ವಿಷಯಗಳನ್ನು ಮಾತನಾಡಿದ ನಂತರ ಇಂದ್ರನು ರಾಜನನ್ನು ಕುರಿತು ಕೇಳಿದನು.

ಇಂದ್ರಃ

ಯದಾ ಸ ಪೂರುಸ್ತವ ರೂಪೇಣ ರಾಜನ್
ಜರಾಂ ಗೃಹೀತ್ವಾ ವಿಚಚಾರ ಭೂಮೌ ।
ತದಾ ರಾಜ್ಯಂ ಸಂಪ್ರದಾಯೈವ ತಸ್ಮೈ
ತ್ವಯಾ ಕಿಮುಕ್ತಃ ಕಥಯೇಹ ಸತ್ಯಮ್ ॥೪॥

ಎಲೈ ರಾಜನೇ, ಪೂರುವು ನಿನ್ನ ಜರೆಯನ್ನು ಸ್ವೀಕರಿಸಿ, ನಿನ್ನ ರೂಪದಿಂದ ಭೂಮಿಯಲ್ಲಿ ತಿರುಗಾಡಿದನಷ್ಟೇ. ಅವನಿಗೆ ನೀನು ಪುನಃ ರಾಜ್ಯವನ್ನು ಕೊಟ್ಟಾಗ, ನೀನು ಅವನಿಗೆ ಏನು ಹೇಳಿದೆ. ಸತ್ಯವನ್ನು ನುಡಿ.

ಯಯಾತಿಃ

ಗಂಗಾಯಮುನಯೋರ್ಮಧ್ಯೇ ಕೃತ್ಸ್ನೋಽಯಂ ವಿಷಯಸ್ತವ ।
ಮಧ್ಯೇ ಪೃಥಿವ್ಯಾಸ್ತ್ವಂ ರಾಜಾ ಭ್ರಾತರೋಽಂತಾಧಿಪಾಸ್ತವ ॥೫॥

ಗಂಗಾಯಮುನ ನದಿಗಳ ಮಧ್ಯೆ ಇರುವ ಸಮಗ್ರ ದೇಶವು ನಿನ್ನದು. ಈ ಮಧ್ಯ ಭೂಮಿಗೆ ನೀನು ಒಡೆಯ. ನಿನ್ನ ಅಣ್ಣಂದಿರು ನಿನ್ನ ರಾಜ್ಯದ ಅಂತಪಾಲರು.

ನಚ ಕುರ್ಯಾನ್ನರೋ ದೈನ್ಯಂ ಶಾಠ್ಯಂ ಕ್ರೋಧಂ ತಥೈವ ಚ ।
ಜ್ಯೈಷ್ಠ್ಯಂ ಚ ಮತ್ಸರಂ ವೈರಂ ಸರ್ವತ್ರೈವ ನ ಕಾರಯೇತ್ ॥೬॥

ಮನುಷ್ಯನು ಎಂದೂ ದೈನ್ಯವನ್ನಾಗಲೀ, ಶಾಠ್ಯವನ್ನಾಗಲೀ, ಕ್ರೋಧವನ್ನಾಗಲೀ ಮಾಡಬಾರದು. ಅಹಂಕಾರವನ್ನು, ಮಾತ್ಸರ್ಯವನ್ನು ಮತ್ತು ವೈರವನ್ನು ಯಾವಾಗಲೂ ವರ್ಜಿಸಬೇಕು.

ಮಾತರಂ ಪಿತರಂ ಚೈವ ವಿದ್ವಾಂಸಂ ಚ ತಪೋಧನಮ್ ।
ಕ್ಷಮಾವಂತಂ ಚ ದೇವೇಂದ್ರ ನಾವಮನ್ಯೇತ ಬುದ್ಧಿಮಾನ್ ॥೭॥

ಎಲೈ ದೇವೇಂದ್ರನೇ, ಬುದ್ಧಿವಂತನಾದವನು ತಂದೆಯನ್ನಾಗಲೀ, ತಾಯಿಯನ್ನಾಗಲೀ, ವಿದ್ವಾಂಸನನ್ನಾಗಲೀ, ತಪಸ್ವಿಯನ್ನಾಗಲೀ ಅಥವಾ ಕ್ಷಮಾಶೀಲನನ್ನಾಗಲೀ ಎಂದೂ ಅವಮಾನ ಮಾಡಬಾರದು.

ಶಕ್ತಸ್ತು ಬಾಧತೇ ನಿತ್ಯಮಶಕ್ತಃ ಕ್ರೋಶತೇ ನರಃ ।
ದುರ್ಜನಃ ಸುಜನಂ ದ್ವೇಷ್ಟಿ ದುರ್ಬಲೋ ಬಲವತ್ತರಮ್ ॥೮॥

ಸಮರ್ಥನಾದವನು ನಿತ್ಯವೂ ತೊಂದರೆ ಕೊಡುತ್ತಾನೆ. ಅಶಕ್ತನಾದವನು ಬಾಯಿಯಲ್ಲಿ ಕಿರುಚುತ್ತಾನೆ. ದುರ್ಜನನು ಸಜ್ಜನರನ್ನು ದ್ವೇಷ ಮಾಡುತ್ತಾನೆ. ದುರ್ಬಲನು ಬಲಿಷ್ಠನನ್ನು ದ್ವೇಷ ಮಾಡುತ್ತಾನೆ.

ರೂಪವಂತಮರೂಪೀ ಚ ಧನವಂತಂ ಚ ನಿರ್ಧನಃ ।
ಅಕರ್ಮೀ ಕರ್ಮಿಣಂ ದ್ವೇಷ್ಟಿ ಧರ್ಮಿಣಂ ಚ ನಧಾರ್ಮಿಕಃ ॥೯॥

ರೂಪಹೀನನಾದವನು ರೂಪವಂತನನ್ನೂ, ನಿರ್ಧನನಾದವನು ಧನಿಕನನ್ನೂ, ಕೆಲಸವನ್ನು ಮಾಡಲು ಬರದಿರುವವನು ಕೆಲಸ ಮಾಡುವವನನ್ನೂ, ಅಧಾರ್ಮಿಕನಾದವನು ಧಾರ್ಮಿಕನನ್ನೂ ದ್ವೇಷ ಮಾಡುತ್ತಾರೆ.

ನಿರ್ಗುಣೋ ಗುಣವಂತಂ ಚ ಶಕ್ರೈತತ್ ಕಲಿಲಕ್ಷಣಮ್ ।
ವಿಪರೀತಂ ಚ ದೇವೇಂದ್ರ ಏತೇಷಾಂ ಕೃತಲಕ್ಷಣಮ್ ॥೧೦॥

ನಿರ್ಗುಣನಾದವನು ಗುಣವಂತನನ್ನು ದ್ವೇಷಿಸುತ್ತಾನೆ. ಇಂದ್ರ, ಇದು ಕಲಿಯುಗದ ಲಕ್ಷಣ. ಇದಕ್ಕೆ ವಿಪರೀತವಾದದ್ದು ಕೃತಯುಗದ ಲಕ್ಷಣ.

ಬ್ರಾಹ್ಮಣೋ ವಾऽಥ ರಾಜಾ ವಾ ವೈಶ್ಯೋ ವಾ ಶೂದ್ರ ಏವ ವಾ।
ಪ್ರಶಸ್ತೇಷು ಪ್ರಶಸ್ತಾ ತೇ ಪ್ರಶಸ್ಯಂತೇ ಯಶಸ್ವಿನಃ ॥೧೧॥

ಬ್ರಾಹ್ಮಣನಾಗಲೀ ಅಥವಾ ಕ್ಷತ್ರಿಯನಾಗಲೀ, ವೈಶ್ಯನಾಗಲೀ ಅಥವಾ ಶೂದ್ರನಾಗಲೀ, ಯಾವನು ಪ್ರಶಸ್ತರಲ್ಲಿ ಪ್ರಶಸ್ತನಾಗಿರುತ್ತಾನೋ ಕೀರ್ತಿವಂತನಾದ ಅವನನ್ನು ಎಲ್ಲರೂ ಹೊಗಳುತ್ತಾರೆ.

ತಸ್ಮಾತ್ ಪ್ರಶಸ್ತೇ ದೇವೇಂದ್ರ ನರಃ ಸಕ್ತಮನಾ ಭವೇತ್ ।
ಅಲೋಕಜ್ಞಾ ಹ್ಯಪ್ರಶಸ್ತಾ ಭ್ರಾತರಸ್ತೇ ಹ್ಯಬುದ್ಧಯಃ ।
ಅಂತಾಧಿಪತಯಃ ಸರ್ವೇ ಹ್ಯಭವನ್ ಮಮ ಶಾಸನಾತ್ ॥೧೨॥

ಆದ್ದರಿಂದ ದೇವೇಂದ್ರನೇ, ಪ್ರಶಸ್ತರಾದ ಪುರುಷರಲ್ಲಿ ನಾವು ಆಸಕ್ತರಾಗಿರಬೇಕು. ಲೋಕದ ರೀತಿಯನ್ನು ತಿಳಿಯದ ಬುದ್ಧಿಶೂನ್ಯರಾದ ಅಪ್ರಶಸ್ತರಾದ ನಿನ್ನ ಎಲ್ಲಾ ಅಣ್ಣಂದಿರೂ ನನ್ನ ಶಾಸನದಿಂದ ಅಂತಪಾಲರಾದರು.

ಇಂದ್ರಃ

ತ್ವಂ ಹಿ ವೈ ಧರ್ಮವಿದೋ ರಾಜನ್ ಕತ್ಥಸೇ ಧರ್ಮಮುತ್ತಮಮ್ ।
ಕಥಯಸ್ವ ಪುನರ್ಮೇऽದ್ಯ ಲೋಕವೃತ್ತಾಂತಮುತ್ತಮಮ್ ॥೧೩॥

ಎಲೈ ರಾಜನೇ, ನೀನು ಧರ್ಮವನ್ನು ತಿಳಿದ ಪುರುಷನ ಧರ್ಮವನ್ನು ಹೇಳುತ್ತಿದ್ದೀಯೆ. ಈ ದಿನ ನನಗೆ ಶ್ರೇಷ್ಠವಾದ ಲೋಕನೀತಿಯನ್ನು ಹೇಳು.

ಯಯಾತಿಃ

ಅಕ್ರೋಧನಃ ಕ್ರೋಧನೇಭ್ಯೋ ವಿಶಿಷ್ಟ -
ಸ್ತಥಾ ತಿತಿಕ್ಷುರತಿತಿಕ್ಷೋರ್ವಿಶಿಷ್ಟಃ ।
ಅಮಾನುಷೇಭ್ಯೋ ಮಾನುಷಾಶ್ಚ ಪ್ರಧಾನಾ
ವಿದ್ವಾಂಸ್ತಥೈವಾವಿದುಷಃ ಪ್ರಧಾನಃ ॥೧೪॥

ಶಾಂತಸ್ವಭಾವದವನು ಕೋಪಗೊಳ್ಳುವವರಿಗಿಂತಲೂ ಶ್ರೇಷ್ಠನಾದವನು. ಸಹನೆಯಿರುವವನು ಸಹನೆಯಿಲ್ಲದವರಿಗಿಂತಲೂ ಶ್ರೇಷ್ಠನಾದವನು. ಮನುಷ್ಯಭಿನ್ನರಾದ ಪಶುಪಕ್ಷಿಗಳಿಗಿಂತ ಮನುಷ್ಯನು ಶ್ರೇಷ್ಠನಾದವನು. ಹಾಗೆಯೇ ಅಜ್ಞಾನಿಗಳಿಗಿಂತ ಜ್ಞಾನಿಯು ಶ್ರೇಷ್ಠನಾದವನು.

ಆಕ್ರುಶ್ಯಮಾನೋ ನಾಕ್ರೋಶೇನ್ಮನ್ಯುರೇವ ತಿತಿಕ್ಷತಃ ।
ಆಕ್ರೋಷ್ಟಾರಂ ನಿರ್ದಹತಿ ಸುಕೃತಂ ಚಾಸ್ಯ ವಿಂದತಿ ॥೧೫॥

ಇನ್ನೊಬ್ಬರು ಸಿಟ್ಟಿನಿಂದ ಕಿರುಚಿದರೂ ತಿರುಗಿ ಕಿರುಚಬಾರದು. ಅದನ್ನು ತಡೆದುಕೊಳ್ಳುವ ಮನುಷ್ಯನ ಮೇಲೆ ಇರುವ ಕೋಪವೇ ಆ ಕಿರುಚುವವನನ್ನು ಸುಟ್ಟು ಬಿಡುತ್ತದೆ ಮತ್ತು ಅವನ ಎಲ್ಲಾ ಪುಣ್ಯವನ್ನು ಸಹನಶೀಲನಿಗೆ ತಂದುಕೊಡುತ್ತದೆ.

ನಾರುಂತುದಃ ಸ್ಯಾನ್ನ ನೃಶಂಸವಾದೀ
ನ ಹೀನತಃ ಪರಮಭ್ಯಾದದೀತ ।
ಯಯಾऽಸ್ಯ ವಾಚಾ ಪರ ಉದ್ವಿಜೇತ
ನ ತಾಂ ವದೇದ್ ರುಶತೀಂ ಪಾಪಲೋಕ್ಯಾಮ್ ॥೧೬॥

ಮರ್ಮಭೇದಿಯಾದ ಮಾತುಗಳನ್ನು ಆಡಬಾರದು. ಮೋಸದ, ನಿಷ್ಠುರದ ಮಾತುಗಳನ್ನು ಆಡಬಾರದು. ಹೀನ ಪುರುಷನ ದೋಷಗಳನ್ನು ಎತ್ತಿ ಆಡಬಾರದು. ತನ್ನ ಮಾತಿನಿಂದ ಇನ್ನೊಬ್ಬರಿಗೆ ಉದ್ವೇಗ ಉಂಟಾಗುವ ನರಕದಾಯಕವಾದ ಕ್ರೂರವಾದ ಮಾತುಗಳನ್ನು ಆಡಬಾರದು.

ಅರುಂತುದಂ ಪರುಷಂ ರೂಕ್ಷವಾಚಂ
ವಾಕ್ಕಂಟಕೈರ್ವಿತುದಂತಂ ಮನುಷ್ಯಮ್ ।
ಕ್ಷಿಪ್ರಂ ಹ್ಯಲಕ್ಷ್ಮೀರ್ಭಜತೇ ಮನುಷ್ಯಂ
ಮುಖೇ ನಿಬದ್ಧಾಂ ನಿಕೃತಿಂ ವಹಂತಮ್ ॥೧೭॥

ಮರ್ಮಭೇದಿಯಾಗಿ, ಉಗ್ರವಾಗಿ ಮತ್ತು ತೀಕ್ಷ್ಣವಾಗಿ ಮಾತನಾಡಿ, ಮಾತು ಎಂಬ ಮುಳ್ಳುಗಳಿಂದ ಇನ್ನೊಬ್ಬರನ್ನು ಚುಚ್ಚುವ ಮನುಷ್ಯನಿಗೆ ಬೇಗ ಅಲಕ್ಷ್ಮಿಯೋಗ ಉಂಟಾಗುತ್ತದೆ. ಅವನು ತನ್ನ ಬಾಯಿಯಲ್ಲಿಯೇ ಮೋಸವನ್ನು ಹೊತ್ತಿರುತ್ತಾನೆ.

ಸದ್ಭಿಃ ಪುರಸ್ತಾದಭಿಪೂಜಿತಃ ಸ್ಯಾತ್
ಸದ್ಭಿಃ ಸದಾ ಪೃಷ್ಠತೋ ರಕ್ಷಿತಃ ಸ್ಯಾತ್ ।
ಸದಾऽಸತಾಮತಿವಾದಾಂಸ್ತಿತಿಕ್ಷೇತ್
ಸತಾಂ ವೃತ್ತಂ ಚಾದದೀತಾರ್ಯವೃತ್ತಃ ॥೧೮॥

ಮುಂದುಗಡೆ ಇರುವ ಸಜ್ಜನರಿಂದ ಶ್ಲಾಘನೀಯನಾಗಿರಬೇಕು. ಹಿಂದುಗಡೆಯಿರುವ ಸಜ್ಜನರಿಂದ ಯಾವಾಗಲೂ ರಕ್ಷಿತನಾಗಿರಬೇಕು. ಅಸಜ್ಜನರ ನಿಂದೆಗಳನ್ನು ಸಹಿಸಿಕೊಳ್ಳಬೇಕು. ಉದಾರವಾದ ನಡತೆಯುಳ್ಳವನಾಗಿ ಸಜ್ಜನರ ನಡತೆಯನ್ನು ಅನುಸರಿಸಬೇಕು.

ವಾಕ್ಸಾಯಕಾ ವದನಾನ್ನಿಸ್ಸರಂತಿ
ಯೈರಾಹತಃ ಶೋಚತಿ ರಾತ್ರ್ಯಹಾನಿ ।
ಪರಸ್ಯ ಚಾಮರ್ಮಸು ಯೇ ಪತಂತಿ ।
ತಾನ್ ಪಂಡಿತೋ ನಾವಸೃಜೇತ್ ಪರೇಷು ॥೧೯॥

ದುಷ್ಪರ ವದನದಿಂದ ವಾಗ್ಬಾಣಗಳು ಹೊರಗೆ ಬರುತ್ತವೆ. ಅವುಗಳಿಂದ ಹೊಡೆಯಲ್ಪಟ್ಟ ಮನುಷ್ಯನು ಹಗಲೂ ರಾತ್ರಿಯೂ ದುಃಖಪಡುತ್ತಾನೆ. ಇನ್ನೊಬ್ಬರನ್ನು ಕುರಿತು ಮರ್ಮಭೇದಿಯಲ್ಲದ ಸಾಧಾರಣ ದುಷ್ಟ ಮಾತುಗಳನ್ನು ಕೂಡ ವಿವೇಕಿಯಾದವನು ಆಡಬಾರದು, ಹೀಗಿರುವಾಗ ಮರ್ಮಭೇದಿಯಾದ ಮಾತುಗಳನ್ನು ಆಡುವ ಪ್ರಸಂಗವೆಲ್ಲಿ?

ನೈತಾದೃಶಂ ಸಂವನನಂ ತ್ರಿಷು ಲೋಕೇಷು ವಿದ್ಯತೇ ।
ದಯಾ ಮೈತ್ರೀ ಚ ಭೂತೇಷು ದಾನಂ ಚ ಮಧುರಾ ಚ ವಾಕ್ ॥೨೦॥

ಮೂರು ಲೋಕಗಳಲ್ಲಿಯೂ ದಯ, ಸರ್ವಭೂತ ಮೈತ್ರಿ, ದಾನ ಮತ್ತು ಮಧುರ ವಚನಗಳು ಇವುಗಳಿಗೆ ಸಮವಾದ ಕ್ರಿಯಾ ಸಂಪತ್ತು (ಅನುನಯವು) ಬೇರೆ ಯಾವುದೂ ಇರುವುದಿಲ್ಲ.

ತಸ್ಮಾತ್ ಸಾಂತ್ವಂ ಸದಾ ವಾಚ್ಯಂ ನ ವಾಚ್ಯಂ ಪರುಷಂ ಕ್ವಚಿತ್ ।
ಪೂಜ್ಯಾನ್ ಸಂಪೂಜಯೇನ್ನಿತ್ಯಂ ನ ಯಾಚೇಚ್ಚ ಕದಾಚನ ॥೨೧॥

ಆದ್ದರಿಂದ ಯಾವಾಗಲೂ ಶಾಂತವಾದ ಮಾತುಗಳನ್ನೇ ಆಡಬೇಕು. ಉಗ್ರವಾದ ಮಾತುಗಳನ್ನು ಆಡಬಾರದು. ಪೂಜ್ಯರನ್ನು ಯಾವಾಗಲೂ ಪೂಜಿಸಬೇಕು. ಯಾರನ್ನೂ ಯಾವಾಗಲೂ ಬೇಡಬಾರದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಷಟ್‌ಸಪ್ತತಿತಮೋऽಧ್ಯಾಯಃ ॥
॥ ಸಂಭವಪರ್ವಣಿ ಚತುರ್ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು

★★★★★

ಎಪ್ಪತ್ತೇಳನೆಯ ಅಧ್ಯಾಯ

(ಸಂವಾದದ ಮಧ್ಯದಲ್ಲಿ ಯಯಾತಿಯ ಅಹಂಕಾರವಚನ, ಸ್ವರ್ಗದಿಂದ ಸಜ್ಜನರ ಮಧ್ಯೆ ಪತನ, ಅಷ್ಟಕಪ್ರಶ್ನ.)

ಇಂದ್ರಃ

ಸರ್ವಾಣಿ ಕರ್ಮಾಣಿ ವಿಸೃಜ್ಯ ರಾಜನ್
ಗೃಹಾನ್ ಪರಿತ್ಯಜ್ಯ ವನಂ ಗತೋಽಸಿ ।
ತತ್ ತ್ವಾಂ ಪೃಚ್ಛಾಮಿ ನಹುಷಸ್ಯ ಪುತ್ರ
ಕೇನಾಸಿ ತುಲ್ಯಸ್ತಪಸಾ ಯಯಾತೇ ॥೧॥

ಎಲೈ ನಹುಷಪುತ್ರನಾದ ಯಯಾತಿರಾಜನೇ, ನೀನು ಎಲ್ಲಾ ಕರ್ಮಗಳನ್ನೂ ತ್ಯಾಗ ಮಾಡಿ ಗೃಹವನ್ನು ಬಿಟ್ಟು ಕಾಡಿಗೆ ಬಂದು ತಪಸ್ಸು ಮಾಡಿದೆ. ನಿನ್ನನ್ನು ಕುರಿತು ತಪಸ್ಸಿನಲ್ಲಿ ನಿನ್ನ ಸಮಾನರಾದವರು ಯಾರು ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಯಯಾತಿಃ

ನಾಹಂ ದೇವಮನುಷ್ಯೇಷು ನ ಗಂಧರ್ವಮಹರ್ಷಿಷು ।
ಆತ್ಮನಸ್ತಪಸಾ ತುಲ್ಯಂ ಕಂಚಿತ್ ಪಶ್ಯಾಮಿ ವಾಸವ ॥೨॥

ಎಲೈ ಇಂದ್ರನೇ, ದೇವತೆಗಳಲ್ಲಾಗಲೀ, ಗಂಧರ್ವರಲ್ಲಾಗಲೀ, ಮಹರ್ಷಿಗಳಲ್ಲಾಗಲೀ ಅಥವಾ ಮನುಷ್ಯರಲ್ಲಾಗಲೀ, ನನಗೆ ಸಮಾನವಾದ ತಪಸ್ಸನ್ನು ಮಾಡಿದವರು ಯಾರೂ ಇಲ್ಲವೆಂದು ಭಾವಿಸುತ್ತೇನೆ.

ಇಂದ್ರಃ

ಯದಾಽವಮಂಸ್ಥಾಃ ಸದೃಶಾಂಶ್ಚ್ರೇಯಸಶ್ಚ
ವರೀಯಸಶ್ಚಾಪ್ಯಮಿತ ಪ್ರಭಾವಾನ್ ।
ತಸ್ಮಾಲ್ಲೋಕಾ ಅಂತವಂತಸ್ತವೇಮೇ
ಕ್ಷೀಣೇ ಪುಣ್ಯೇ ಪತಿತೋಽಸ್ಯದ್ಯ ರಾಜನ್ ॥೩॥

ಯಾವ ಕಾರಣದಿಂದ ನೀನು ನಿನಗೆ ಸಮಾನರಾದವರನ್ನೂ, ಉತ್ತಮರಾದವರನ್ನು ಮತ್ತು ಅಮಿತ ಪ್ರಭಾವವನ್ನು ಹೊಂದಿ ಶ್ರೇಷ್ಠರಾದವರನ್ನೂ ಬಹಳ ಅವಮಾನ

ಮಾಡಿದೆಯೋ, ಆ ಕಾರಣದಿಂದ ನಿನ್ನ ಪುಣ್ಯವು ಮುಗಿದು ಸ್ವರ್ಗವಾಸವು ಅಂತ್ಯಗೊಂಡಿದೆ. ರಾಜನೇ, ನೀನು ಈಗ ಸ್ವರ್ಗದಿಂದ ಬೀಳುವಿ.

ಯಯಾತಿಃ

ಸುರರ್ಷಿಗಂಧರ್ವನರಾವಮಾನಾತ್
ಕ್ಷಯಂ ಗತಾ ಮೇ ಯದಿ ಶಕ್ರ ಲೋಕಾಃ ।
ಇಚ್ಛೇಯಂ ವೈ ಸುರಲೋಕಾದ್ ವಿಹೀನಃ
ಸತಾಂ ಸಕಾಶೇ ಪತಿತುಂ ದೇವರಾಜ ॥೪॥

ಎಲೈ ಇಂದ್ರನೇ, ದೇವತೆಗಳು, ಋಷಿಗಳು, ಗಂಧರ್ವರು ಮತ್ತು ಮನುಷ್ಯರನ್ನು ಅವಮಾನ ಮಾಡಿದುದರಿಂದ ನನ್ನ ಸ್ವರ್ಗವಾಸವು ಅಂತ್ಯವಾಗುವುದಾದರೆ, ನಾನು ಸುರಲೋಕದಿಂದ ಬೀಳುತ್ತಾ ಸಜ್ಜನರ ಮಧ್ಯದಲ್ಲಿ ಬೀಳಬೇಕೆಂದು ಬಯಸುತ್ತೇನೆ.

ಇಂದ್ರಃ

ಸತಾಂ ಸಕಾಶೇ ಪತಿತೋಽಸಿ ರಾಜನ್
ಚ್ಯುತಃ ಪ್ರತಿಷ್ಠಾಂ ಯತ್ರ ಲಬ್ಧಾಽಸಿ ಭೂಯಃ ।
ಏವಂ ವಿದಿತ್ವಾ ನಾಹುಷ ಮಾ ಸ್ಮ ಸರ್ವಾನ್
ನ ಚಾಽವಮಂಸ್ಥಾಃ ಸದೃಶಾನ್ ಶ್ರೇಯಸಶ್ಚ ॥೫॥

ಎಲೈ ರಾಜನೇ, ನೀನು ಸಜ್ಜನರ ಮಧ್ಯದಲ್ಲಿ ಬಿದ್ದು, ಪುನಃ ಅಲ್ಲಿ ಪ್ರತಿಷ್ಠೆಯನ್ನು ಪಡೆಯುವೆ. ಈ ವಿಷಯವನ್ನು ತಿಳಿದು ಇನ್ನೆಂದೂ ಸಮಾನರನ್ನಾಗಲೀ, ಉತ್ತಮರನ್ನಾಗಲೀ ಯಾರನ್ನೂ ಅವಮಾನಿಸಬೇಡ.

ವೈಶಂಪಾಯನಃ

ತತಃ ಪ್ರಹಾಯಾಮರರಾಜಜುಷ್ಟಾನ್
ಪುಣ್ಯಾಂಲ್ಲೋಕಾನ್ ಪತಮಾನಂ ಯಯಾತಿಮ್ ।
ಸಂಪ್ರೇಕ್ಷ್ಯ ರಾಜರ್ಷಿವರೋಽಷ್ಟಕಸ್ತಂ
ಉವಾಚ ಸದ್ಧರ್ಮವಿಧಾನಗೋಪ್ತಾ ॥೬॥

ಅನಂತರ ದೇವೇಂದ್ರನಿಂದ ಅಧ್ಯುಷಿತವಾದ ಪುಣ್ಯಲೋಕವನ್ನು ಬಿಟ್ಟು ಯಯಾತಿಯು ಕೆಳಗೆ ಬೀಳುತ್ತಿರುವುದನ್ನು ನೋಡಿ ಸದ್ಧರ್ಮವಿಧಾನವನ್ನು ರಕ್ಷಿಸುವ

ರಾಜರ್ಷಿಶ್ರೇಷ್ಠನಾದ ಅಷ್ಟಕನು ಅವನನ್ನು ಕುರಿತು ಮಾತನಾಡಿದನು. ಮುಂದೆ ಉದ್ಯೋಗ ಪರ್ವದಲ್ಲೇ ಹೇಳುವಂತೆ ಯಯಾತಿಯ ಮಗಳಾದ ಮಾಧವಿಯ ಮಗನು ಈ ಅಷ್ಟಕ).

ಅಷ್ಟಕಃ

ಕಸ್ತ್ವಂ ಯುವಾ ವಾಸವತುಲ್ಯರೂಪಃ
ಸ್ವತೇಜಸಾ ದೀಪ್ಯಮಾನೋ ಯಥಾऽಗ್ನಿಃ ।
ಪತಸ್ಯುದೀರ್ಣಾಂಬುಧರಪ್ರಕಾರಃ
ಖಾತ್ ಖೇಚರಾಣಾಂ ಪ್ರವರೋ ಯಥಾऽರ್ಕಃ ॥೭॥

ಇಂದ್ರನಿಗೆ ಸಮಾನವಾದ ರೂಪವನ್ನು ಹೊಂದಿ ತೇಜಸ್ಸಿನಿಂದ ಅಗ್ನಿಯಂತೆ ಬೆಳಗುತ್ತಿರುವ ನೀನು ಯಾರು? ಆಕಾಶದಿಂದ ಖೇಚರರಲ್ಲಿ ಶ್ರೇಷ್ಠನಾದ ಸೂರ್ಯನು ಬಿದ್ದಂತೆ, ದೊಡ್ಡ ಮೇಘಸಮೂಹವು ಬೀಳುತ್ತಿರುವಂತೆ ನೀನು ಬೀಳುತ್ತಿರುವಿ.

ದೃಷ್ಟ್ವಾ ಚ ತ್ವಾಂ ಸೂರ್ಯಪಥಾತ್ ಪತಂತಂ
ವೈಶ್ವಾನರಾರ್ಕದ್ಯುತಿಮಪ್ರಮೇಯಮ್ ।
ಕಿಂ ನು ಸ್ವಿದೇತತ್ ಪತತೀತಿ ಸರ್ವೇ
ವಿತರ್ಕಯಂತಃ ಪರಿಮೋಹಿತಾಃ ಸ್ಮಃ ॥೮॥

ಸೂರ್ಯಮಾರ್ಗದಿಂದ ಬೀಳುತ್ತಿರುವ ಸೂರ್ಯಾಗ್ನಿಸದೃಶವಾದ ಕಾಂತಿಯುಳ್ಳ ಅಪ್ರಮೇಯನಾದ ನಿನ್ನನ್ನು ನೋಡಿ ನಮಗೆಲ್ಲರಿಗೂ ಇದೇನು ಬೀಳುತ್ತಿದೆ ಎಂದು ಯೋಚಿಸುತ್ತಾ ದಿಗ್ಭ್ರಾಂತಿಯುಂಟಾಗಿದೆ.

ದೃಷ್ಟ್ವಾ ಚ ತ್ವಾಂ ವಿಷ್ಠಿತಂ ದೇವಮಾರ್ಗೇ
ಶಕ್ರಾರ್ಕವಿಷ್ಣುಪ್ರತಿಮಪ್ರಭಾವಮ್ ।
ಅಭ್ಯುದ್ಗತಾಸ್ತ್ವಾಂ ವಯಮದ್ಯ ಸರ್ವೇ
ತತ್ತ್ವಂ ಪಾತೇ ತವ ಜಿಜ್ಞಾಸಮಾನಾಃ ॥೯॥

ಇಂದ್ರ, ಸೂರ್ಯ ಮತ್ತು ವಿಷ್ಣುವಿಗೆ ಸದೃಶವಾದ ಪ್ರಭಾವವುಳ್ಳ ನೀನು ದೇವಮಾರ್ಗದಲ್ಲಿ ವಿಶೇಷವಾಗಿ ನಿಂತಿರುವುದನ್ನು ನೋಡಿ ನಾವೆಲ್ಲರೂ ನಿನ್ನ ಪಾತಕ್ಕೆ ಕಾರಣವನ್ನು ತಿಳಿಯುವ ಆಸೆಯಿಂದ ನಿನ್ನೆಡೆಗೆ ಎದ್ದು ಬರುತ್ತಿದ್ದೇವೆ.

ನ ಚಾಪಿ ತ್ವಾಂ ಧೃಷ್ಣುಮಪ್ರಷ್ಟುಮಗ್ರೇ
ನಚ ತ್ವಮಸ್ಮಾನ್ ಪೃಚ್ಛಸೇ ಯೇ ವಯಂ ಸ್ಮಃ ।
ತೇ ತ್ವಾಂ ಪೃಚ್ಛಾಮಃ ಕಮನೀಯರೂಪ
ಕಸ್ಯ ತ್ವಂ ವಾ ಕಿನ್ನಿಮಿತ್ತಂ ತ್ವಿಹಾಗಾಃ ॥೧೦॥

ಧೈರ್ಯಶಾಲಿಯಾದ ನಿನ್ನನ್ನು ಕುರಿತು ನೀನು ಯಾರು ಎಂದು ಕೇಳದಿರಲು ನಮಗೆ ಅಸಾಧ್ಯವಾಗಿದೆ. ನೀನಾದರೂ ನಾವು ಯಾರು ಎಂದೂ ಕೇಳುತ್ತಿಲ್ಲ. ಆದ್ದರಿಂದ ಸುಂದರ ರೂಪವುಳ್ಳವನೇ, ನಾವೇ ನಿನ್ನನ್ನು ಕೇಳುತ್ತಿದ್ದೇವೆ. ನೀನು ಯಾರಿಗೆ ಸೇರಿದವನು? ಯಾವ ಕಾರಣದಿಂದ ಈ ಕಡೆಗೆ ಬರುತ್ತಿರುವೆ?

ಭಯಂ ತು ತೇ ವ್ಯೇತು ವಿಷಾದಮೋಹೌ
ತ್ಯಜಾಶು ದೇವೇಂದ್ರಸಮಾನರೂಪ ।
ತ್ವಾಂ ವರ್ತಮಾನಂ ಹಿ ಸತಾಂ ಸಕಾಶೇ
ನಾಲಂ ಪ್ರಸೋಢುಂ ಬಲಹಾಽಪಿ ಶಕ್ರಃ ॥೧೧॥

ದೇವೇಂದ್ರನಿಗೆ ಸಮಾನವಾದ ರೂಪವುಳ್ಳವನೇ, ಭಯಪಡಬೇಡ. ನಿನ್ನ ವಿಷಾದಮೋಹಗಳನ್ನು ಬೇಗ ತ್ಯಜಿಸು. ನಮ್ಮ ಬಳಿಯೇ ಇರುವ ನಿನ್ನನ್ನು ಕೆಳಗೆ ಬೀಳುವಂತೆ ಮಾಡಲು ಬಲಸೂದನನಾದ ಇಂದ್ರನಿಗೂ ಸಾಧ್ಯವಿಲ್ಲ.

ಸಂತಃ ಪ್ರತಿಷ್ಠಾ ಹಿ ಸುಖಾಚ್ಚ್ಯುತಾನಾಂ
ಸತಾಂ ಸದೈವಾಮರರಾಜಕಲ್ಪ ।
ತೇ ಸಂಗತಾಃ ಸ್ಥಾವರಜಂಗಮೇಶಾಃ
ಪ್ರತಿಷ್ಠಿತಾಸ್ತೇ ಸದೃಶೇಷು ಸತ್ಸು ॥೧೨॥

ಸುಖವನ್ನು ಕಳೆದುಕೊಂಡ ಸಜ್ಜನರಿಗೆ ಯಾವಾಗಲೂ ಸಜ್ಜನರೇ ಆಧಾರರಾದವರು. ಯಾವ ಸ್ಥಾವರಜಂಗಮಪ್ರಭುಗಳು ಚೆನ್ನಾಗಿದ್ದಾರೆಯೋ ಅವರೆಲ್ಲರೂ ಸದೃಶರಾದ ಸಜ್ಜನರಲ್ಲಿ ಪ್ರತಿಷ್ಠಿತರಾಗಿದ್ದಾರೆ.

ಪ್ರಭುರಗ್ನಿಃ ಪ್ರತಪನೇ ಭೂಮಿರಾವಪನೇ ಪ್ರಭುಃ ।
ಪ್ರಭುಃ ಸೂರ್ಯಃ ಪ್ರಕಾಶತ್ವೇ ಸತಾಮಭ್ಯಾಗತಃ ಪ್ರಭುಃ ॥೧೩॥

ಸುಡುವ ವಿಷಯದಲ್ಲಿ ಅಗ್ನಿಯು ಪ್ರಭು. ಬೀಜವನ್ನು ಬಿತ್ತುವುದರಲ್ಲಿ ಭೂಮಿಯು ಪ್ರಭು. ಪ್ರಕಾಶವನ್ನು ಕೊಡುವುದರಲ್ಲಿ ಸೂರ್ಯನು ಪ್ರಭು. ಅಭ್ಯಾಗತನು ಸಜ್ಜನರಿಗೆ ಪ್ರಭು. (ನೀನು ನಮಗೆ ಅಭ್ಯಾಗತ. ಆದ್ದರಿಂದ ನಮಗೆ ಪ್ರಭು)

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಸಪ್ತಸಪ್ತತಿತಮೋಽಧ್ಯಾಯಃ ॥
॥ ಸಂಭವಪರ್ವಣಿ ಪಂಚವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ತೆಂಟನೆಯ ಅಧ್ಯಾಯ

(ಯಯಾತಿಯಿಂದ ತನ್ನ ಪರಿಚಯ ಕಥನ, ಅಷ್ಟಕನೊಂದಿಗೆ ಸಂವಾದ.)

ಯಯಾತಿಃ

ಅಹಂ ಯಯಾತಿರ್ನಹುಷಸ್ಯ ಪುತ್ರಃ
ಪೂರೋಃ ಪಿತಾ ಸರ್ವಭೂತಾವಮಾನಾತ್ ।
ಪ್ರಭ್ರಂಶಿತಃ ಸುರರ್ಷಿಸಿದ್ಧಲೋಕಾದ್
ಇತಶ್ಚ್ಯುತಃ ಪ್ರಪತಾಮ್ಯಲ್ಪಪುಣ್ಯಃ ॥೧॥

ನಾನು ನಹುಷನ ಪುತ್ರನಾದ ಯಯಾತಿ, ಪೂರುವಿನ ತಂದೆ. ಸರ್ವರನ್ನೂ ಅವಮಾನ ಮಾಡಿದ ಕಾರಣದಿಂದಾಗಿ ನನ್ನ ಪುಣ್ಯವನ್ನು ಕಳೆದುಕೊಂಡು ಸುರರ್ಷಿಸಿದ್ಧಲೋಕದಿಂದ ಭ್ರಷ್ಟನಾಗಿ ಇಲ್ಲಿ ಬೀಳುತ್ತಿದ್ದೇನೆ.

ಅಹಂ ಹಿ ಪೂರ್ವೋ ವಯಸಾಽಭಿವಂದ್ಯಃ
ತೇನಾಭಿವಾದಂ ಭವತಾಂ ನ ಪ್ರಯುಂಜೇ ।
ಯೋ ವಿದ್ಯಯಾ ತಪಸಾ ಜನ್ಮನಾ ವಾ
ವೃದ್ಧಃ ಸ ಪೂಜ್ಯೋ ಭವತಿ ದ್ವಿಜಾನಾಮ್ ॥೨॥

ನಾನು ನಿಮಗಿಂತ ವಯಸ್ಸಿನಲ್ಲಿ ದೊಡ್ಡವನು. ಆದ್ದರಿಂದ ನಿಮಗೆ ನಮಸ್ಕಾರದ ಮಾತುಗಳನ್ನು ಆಡುವುದಿಲ್ಲ. ಬ್ರಾಹ್ಮಣರಲ್ಲಿ ವಿದ್ಯೆಯಿಂದ, ತಪಸ್ಸಿನಿಂದ ಮತ್ತು ಜನ್ಮದಿಂದ ಯಾರು ಅಧಿಕರೋ ಅವರು ಪೂಜ್ಯರಾಗುತ್ತಾರೆ.

ಅಷ್ಟಕಃ

ಅವಿದ್ವಾಂಶ್ಚೇದ್ ವಯಸಾ ಯಃ ಸ ವೃದ್ಧಃ
ಇತೀಹ ರಾಜನ್ ನಾಭಿವಾದ್ಯಃ ಕಥಂಚಿತ್ ।
ಯೋ ವೈ ವಿದ್ವಾನ್ ವಯಸಾ ನ ಸ್ಮ ವೃದ್ಧಃ
ಸ ವೈ ಪೂಜ್ಯೋ ಭವತಿ ದ್ವಿಜಾನಾಮ್ ॥೩॥

ಎಲೈ ರಾಜನೇ, ಅವಿದ್ವಾಂಸನಾದವನು ಅವನು ವಯಸ್ಸಿನಿಂದ ದೊಡ್ಡವನು ಎಂಬ ಕಾರಣದಿಂದ ಎಂದೂ ನಮಸ್ಕಾರಕ್ಕೆ ಅರ್ಹನಾಗುವುದಿಲ್ಲ. ಬ್ರಾಹ್ಮಣರಲ್ಲಿ ಯಾರು ವಯಸ್ಸಿನಿಂದ ಅಧಿಕನಾಗಿಲ್ಲದಿದ್ದರೂ ವಿದ್ಯೆಯಿಂದ ಅಧಿಕನಾಗಿರುತ್ತಾನೆಯೋ ಅವನೇ ಪೂಜ್ಯನಾಗುತ್ತಾನೆ.

ಯಯಾತಿಃ

ಪ್ರತಿಕೂಲಂ ಕರ್ಮಣಾಂ ಪಾಪಮಾಹುಃ
ತದ್ವರ್ತನೇ ಪ್ರಾಪಣೇ ಪಾಪಲೋಕ್ಯಮ್ ।
ಸಂತೋಽಸತಾಂ ನಾತಿವರ್ತಂತಿ ಚೈತದ್
ಯದಾಽಽತ್ಮೈಷಾಮಪ್ಯನುಕೂಲವಾದೀ ॥೪॥

ನರಕಾದಿ ಪಾಪಲೋಕಕ್ಕೆ ಸಾಧನವಾದ ಕರ್ಮಗಳನ್ನು ಪಾಪವೆಂದು ಹೇಳುತ್ತಾರೆ. ಆ ಪಾಪಗಳು ಸದ್ಧರ್ಮದ ಅನುಷ್ಠಾನಕ್ಕೂ ಹಾಗೂ ಅನುಷ್ಠಾನ ಮಾಡಿದ ಸದ್ಧರ್ಮದ ಫಲವನ್ನು ಪಡೆಯುವುದಕ್ಕೂ ಪ್ರತಿಕೂಲವಾಗಿರುತ್ತವೆ. ಆದ್ದರಿಂದ ಸಜ್ಜನರು ಅಸಜ್ಜನರ ಮಾರ್ಗವನ್ನು ಎಂದೂ ಅನುಸರಿಸುವುದಿಲ್ಲ. ಅನುಕೂಲವಾಗಿ ಮಾತನಾಡುವವರು ಸಿಕ್ಕಿದಾಗಲೂ ಸಜ್ಜನರು ಪಾಪವನ್ನು ಮಾಡುವುದಿಲ್ಲ. ಅನುಕೂಲ ವಚನವನ್ನು ಆಡುವವರು ಸಿಗುವುದೂ ಸಹ ದುರ್ಲಭವೇ ಸರಿ.

ಅಷ್ಟಕಃ

ಅಭೂದ್ ಧನಂ ಮೇ ವಿಪುಲಂ ಮಹದ್ ವೈ
ವಿಚೇಷ್ಟಮಾನೋ ನಾಧಿಗಂತಾ ತದಸ್ಮಿ ।
ಏವಂ ಪ್ರಧಾರ್ಯಾತ್ಮಹಿತೇ ನಿವಿಷ್ಟೋ
ಯೋ ವರ್ತತೇ ನಾವಜಾನಾತಿ ಜೀವನ್ ॥೫॥

ನನಗೆ ಹಿಂದೆ ವಿಪುಲವಾದ ಧನವಿದ್ದಿತು. ವಿಷಯಗಳಲ್ಲಿ ಆಸಕ್ತನಾದ ನನಗೆ ನಾನು ಪರಲೋಕಕ್ಕೆ ಹೋದಾಗ ಅವು ನನ್ನ ಹಿಂದೆ ಬರಲಿಲ್ಲ. ಹೀಗೆ ನಿಶ್ಚಯಿಸಿ ತನ್ನ ನಿಜವಾದ ಹಿತದಲ್ಲಿ ತಾತ್ಪರ್ಯವುಳ್ಳ ಮನುಷ್ಯನು ಬದುಕಿರುವವರೆಗೆ ಯಾರಿಗೂ ಅಪಮಾನ ಮಾಡುವುದಿಲ್ಲ.

ಮಹಾಧನೋ ಯೋ ಯಜತೇ ಸ ಯಜ್ಞೈ-
ರ್ಯಃ ಸರ್ವವಿದ್ಯಾಸು ವಿನೀತಬುದ್ಧಿಃ ।
ವೇದಾನಧೀತ್ಯ ತಪಸಾ ಯೋಜ್ಯ ದೇಹಂ
ದಿವಮಿಯಾತ್ ಪುರುಷೋ ವೀತಮೋಹಃ ॥೬॥

ಮಹಾಧನವುಳ್ಳವನು ಯಜ್ಞಗಳಿಂದ ದೇವತೆಗಳನ್ನು ಆರಾಧಿಸುತ್ತಾನೆ. ಆದರೆ ಎಲ್ಲಾ ವಿದ್ಯೆಗಳಲ್ಲೂ ಪಳಗಿದ ಬುದ್ಧಿಯುಳ್ಳವನು ವೇದವನ್ನು ಅಧ್ಯಯನ ಮಾಡಿ ದೇಹದಿಂದ ತಪಸ್ಸು ಮಾಡಿ ಮೋಹವನ್ನು ತೊರೆದು ಸ್ವರ್ಗಕ್ಕೆ ಹೋಗುತ್ತಾನೆ.

ನ ಜಾತುಃ ಹೃಷ್ಯೇನ್ಮಹತಾ ಧನೇನ ।
ವೇದಾನಧೀಯೀತ ನಾಹಂಕೃತಃ ಸ್ಯಾತ್ ।
ನಾನಾಭಾವಾ ಬಹವೋ ಜೀವಲೋಕೇ
ದೈವಾಧೀನಾ ನಷ್ಟಚೇಷ್ಟಾಧಿಕಾರಾಃ ॥೭॥

ಬಹಳ ಧನದಿಂದ ಯಾವಾಗಲೂ ಸಂತೋಷಪಡಬಾರದು. ವೇದವನ್ನು ಅಧ್ಯಯನ ಮಾಡಬೇಕು. ಅಹಂಕಾರವನ್ನು ಮಾಡಬಾರದು. ಜೀವಲೋಕದಲ್ಲಿ ಅನೇಕರಿಗೆ 'ನಾನೇ ಈಶ್ವರ, ನಾನು ಅಮರ' ಎಂಬ ಅನೇಕ ಭಾವನೆಗಳು ಇರುತ್ತವೆ. ಆ ದುಷ್ಪರೆಲ್ಲರೂ ದೇವರ ಅಧೀನರಾಗಿ ತಮ್ಮ ಜೀವನಾದಿ ಚೇಷ್ಟೆಗಳನ್ನೂ, ರಾಜ್ಯದ ಅಧಿಕಾರವನ್ನು ಕಳೆದುಕೊಳ್ಳುತ್ತಾರೆ.

ತತ್ತತ್ ಪ್ರಾಪ್ಯ ನ ವಿಹನ್ಯೇತ ಧೀರೋ
ದಿಷ್ಟಂ ಬಲೀಯ ಇತಿ ಮತ್ವಾऽऽತ್ಮಬುದ್ಧ್ಯಾ ।
ಸುಖಂ ಹಿ ಜಂತುರ್ಯದಿ ವಾऽಪಿ ದುಃಖಂ
ದೈವಾಧೀನಂ ವಿಂದತಿ ನಾತ್ಮಶಕ್ಯಾ ॥೮॥

ಆಯಾ ಕಾಲದಲ್ಲಿ ಒದಗುವ ದುಃಖವನ್ನು ಹೊಂದಿದರೂ ಧೀರನಾದವನು ನಮ್ಮ ಬುದ್ಧಿಗಿಂತಲೂ ದೇವರ ಇಚ್ಛೆಯು ಪ್ರಬಲವಾದುದು ಎಂದು ತಿಳಿದು ಮನಸ್ಸಿನಲ್ಲಿ

ಅಳುಕಬಾರದು. ಯಾವುದೇ ಜಂತುವು ಸುಖವನ್ನಾಗಲೀ ಅಥವಾ ದುಃಖವನ್ನಾಗಲೀ ದೈವಕ್ಕೆ ಅಧೀನನಾಗಿ ಪಡೆಯುತ್ತಾನೆಯೇ ಹೊರತು ತನ್ನ ಸ್ವಂತ ಶಕ್ತಿಯಿಂದ ಪಡೆಯುವುದಿಲ್ಲ.

ತಸ್ಮಾದ್ ದಿಷ್ಟಂ ಬಲವನ್ಮನ್ಯಮಾನೋ
ನ ಸಂಜ್ವರೇನ್ನಾಪಿ ಹೃಷ್ಯೇತ್ ಕದಾಚಿತ್ ।
ದುಃಖೇ ನ ತಪ್ಯೇತ ಸುಖೇ ನ ಹೃಷ್ಯೇತ್
ಸಮೇನ ವರ್ತೇತ ಸದೈವ ಧೀರಃ ॥೯॥

ಆದ್ದರಿಂದ ದೈವೇಚ್ಛೆಯು ಪ್ರಬಲವಾದುದೆಂದು ತಿಳಿದವನು ದುಃಖ ಬಂದಾಗ ಪರಿತಪಿಸಬಾರದು, ಸುಖ ಬಂದಾಗ ಉಬ್ಬಲೂ ಬಾರದು. ಮನಸ್ಸಿಗೆ ಧೈರ್ಯವನ್ನು ತಂದುಕೊಂಡು ಯಾವಾಗಲೂ ಒಂದೇ ರೀತಿ ಇರಬೇಕು.

ಯಯಾತಿಃ

ಭಯೇ ನ ಮುಹ್ಯಾಮ್ಯಷ್ಟಕಾಹಂ ಕದಾಚಿತ್
ಸಂತಾಪೋ ಮೇ ಮಾನಸೋ ನಾಸ್ತಿ ಕಶ್ಚಿತ್ ।
ಧಾತಾ ಯಥಾ ಮಾಂ ವಿದಧಾತಿ ಲೋಕೇ
ಧ್ರುವಂ ತಥಾऽಹಂ ಲಭಿತೇತಿ ಮತ್ವಾ ॥೧೦॥

ಎಲೈ ಅಷ್ಟಕನೇ, ಭಯವುಂಟಾದಾಗ ನಾನು ಎಂದೂ ಮೋಹಕ್ಕೆ ಒಳಗಾಗುವುದಿಲ್ಲ. ನನ್ನ ಮನಸ್ಸಿಗೆ ಯಾವ ಸಂತಾಪವೂ ಇಲ್ಲ. ಏಕೆಂದರೆ, ದೇವರು ಹೇಗೆ ವಿಧಿ ಮಾಡುತ್ತಾನೆಯೋ ಅಂತಹ ಸುಖದುಃಖಗಳನ್ನು ನಾನು ಪಡೆಯುತ್ತೇನೆ ಎಂದು ತಿಳಿದಿದ್ದೇನೆ.

ಸಂಸ್ವೇದಜಾ ಅಂಡಜಾಶ್ಚೋದ್ಭಿದಶ್ಚ
ಸರೀಸೃಪಾಃ ಕೃಮಯೋऽಥಾಪ್ಸು ಮತ್ಸ್ಯಾಃ ।
ತಥಾಶ್ಮಾನಸ್ತೃಣಕಾಷ್ಠಂ ಚ ಸರ್ವೇ
ದಿಷ್ಟಕ್ಷಯೇ ಸ್ವಾಂ ಪ್ರಕೃತಿಂ ಭಜಂತಿ ॥೧೧॥

ಸ್ವೇದಜ, ಅಂಡಜ, ಉದ್ಭಿದ ಮತ್ತು ಜರಾಯುಜ ಪ್ರಾಣಿಗಳು, ಸರ್ಪಗಳು, ಕ್ರಿಮಿಗಳು, ನೀರಿನಲ್ಲಿರುವ ಮೀನುಗಳೂ, ಕಲ್ಲುಗಳು, ತೃಣಕಾಷ್ಠಗಳು ಎಲ್ಲವೂ ತಮ್ಮ ಅದೃಷ್ಟಕ್ಷಯವಾದಾಗ ತಮ್ಮ ನೈಜ ಸ್ಥಿತಿಯನ್ನು ಹೊಂದುತ್ತವೆ.

ಅನಿತ್ಯತಾಂ ಸುಖದುಃಖಸ್ಯ ಮತ್ವಾ
ಬುದ್ಧ್ಯಾ ಕಸ್ಮಾದಷ್ಟಕ ಸಂತಪೇಽಹಮ್ ।
ಕಿಂ ಕಾರ್ಯಂ ವೈ ಕಿಂ ಚ ಕೃತ್ವಾ ನ ತಪ್ಯೇ
ತಸ್ಮಾತ್ ಸಂತಾಪಂ ವರ್ಜಯಾಮ್ಯಪ್ರಮತ್ತಃ ॥೧೨॥

ಎಲೈ ಅಷ್ಟಕನೇ ಸುಖದುಃಖಗಳನ್ನು ಅನಿತ್ಯ ಎಂದು ಬುದ್ಧಿಯಿಂದ ತಿಳಿದ ನಾನು ಏತಕ್ಕೆ ಸಂತಾಪ ಪಡಲಿ. ಈಗ ಆಕಾಶದಲ್ಲಿ ನಿಂತಿರುವ ನಾನು ಏನನ್ನೂ ಮಾಡಲು ಸಾಧ್ಯವಿಲ್ಲ. ಮಾಡಿದ ಸಜ್ಜನ ಅವಮಾನಕ್ಕೆ ಪರಿಹಾರಕವಾದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಎಚ್ಚರಿಕೆಯಿಂದಿದ್ದು ಸಂತಾಪವನ್ನು ವರ್ಜಿಸುತ್ತೇನೆ.

ದುಃಖೇ ನ ಖಿದ್ಯೇನ್ನ ಸುಖೇನ ಹೃಷ್ಯೇತ್
ಸಮೇನ ವರ್ತೇತ ಸದೈವ ಧೀರಃ ।
ದಿಷ್ಟಂ ಬಲೀಯಃ ಸಮವೇಕ್ಷ್ಯ ಬುದ್ಧ್ಯಾ
ನ ಸಂಜ್ವರೇನ್ನಾಪಿ ಹೃಷ್ಯೇನ್ಮನುಷ್ಯಃ ॥೧೩॥

ದುಃಖದಲ್ಲಿ ಖೇದ ಪಡಬಾರದು, ಸುಖ ಬಂದಾಗ ಹಿಗ್ಗಬಾರದು. ಧೀರನಾದವನು ಯಾವಾಗಲೂ ಒಂದೇ ರೀತಿ ಇರಬೇಕು. ವಿಧಿಯು ಬಲಿಷ್ಠವೆಂದು ಬುದ್ಧಿಯಿಂದ ಯೋಚನೆ ಮಾಡಿ ಮನುಷ್ಯನು ಹರ್ಷತಾಪಗಳನ್ನು ತ್ಯಜಿಸಬೇಕು.

ದೃಷ್ಟೋ ಹಿ ಮೇ ಪರಮಶ್ಚಾಪಿ ಲೋಕಃ
ಪ್ರಾಪ್ತಾ ಭೋಗಾಃ ಸರ್ವಶೋ ನಾಸ್ತಿ ನಿಷ್ಠಾ ॥೧೪॥

ನಾನು ಶ್ರೇಷ್ಠವಾದ ಲೋಕಗಳನ್ನು ನೋಡಿದ್ದೇನೆ. ಎಲ್ಲಾ ಭೋಗಗಳನ್ನೂ ಅನುಭವಿಸಿದ್ದೇನೆ. ಆದರೆ ಎಲ್ಲಿಯೂ, ಯಾವುದೂ ಶಾಶ್ವತವಲ್ಲ.

ಅಷ್ಟಕಃ

ಯೇ ವೈ ಲೋಕಾಃ ಪಾರ್ಥಿವೇಂದ್ರ ಪ್ರಧಾನಾಃ
ತ್ವಯಾ ಭುಕ್ತಾ ಯಂ ಚ ಕಾಲಂ ಯಥಾವತ್
ತಂ ಮೇ ರಾಜನ್ ಬ್ರೂಹಿ ಸರ್ವಂ ಯಥಾವತ್
ಕ್ಷೇತ್ರಜ್ಞವದ್ ಭಾಷಸೇ ಸರ್ವಧರ್ಮಾನ್ ॥೧೫॥

ಎಲೈ ರಾಜನೇ, ನೀನು ಪ್ರಧಾನವಾಗಿ ಯಾವ ಯಾವ ಲೋಕಗಳಿಗೆ ಹೋಗಿದ್ದೆ, ಅಲ್ಲಿ ಎಷ್ಟು ಕಾಲವನ್ನು ಕಳೆದೆ, ಅವೆಲ್ಲವನ್ನೂ ನನಗೆ ಸರಿಯಾಗಿ ಹೇಳು. ಎಲೈ ರಾಜನೇ, ನೀನು ಕ್ಷೇತ್ರಜ್ಞನಾದ ಪರಮಾತ್ಮನಂತೆ ಎಲ್ಲಾ ಧರ್ಮಗಳ ವಿಷಯದಲ್ಲಿಯೂ ಮಾತನಾಡುತ್ತಿದ್ದೀಯೆ.

ಯಯಾತಿಃ

ರಾಜಾऽಹಮಾಸಮಿಹ ಸಾರ್ವಭೌಮ-
ಸ್ತತೋ ಲೋಕಾನ್ ಮಹತೋऽಜಯಂ ವೈ ।
ತತ್ರಾವಸಂ ವರ್ಷಸಹಸ್ರಮಾತ್ರಂ
ತತೋ ಲೋಕಂ ಪರಮಸ್ಯಾಭ್ಯುಪೇತಃ ॥೧೬॥

ನಾನು ಈ ಲೋಕದಲ್ಲಿ ಸಾರ್ವಭೌಮನಾದ ರಾಜನಾಗಿದ್ದೆ. ಧರ್ಮಾಚರಣೆ ಮಾಡಿ ಮಹತ್ತಾದ ಲೋಕಗಳನ್ನು ಜಯಿಸಿದೆ. ಮೊದಲು ಸೂರ್ಯಚಂದ್ರಾದಿ ಲೋಕಕ್ಕೆ ಹೋದೆ. ಅಲ್ಲಿ ಒಂದು ಸಹಸ್ರವರ್ಷಕಾಲ ಇದ್ದು ಅಲ್ಲಿಂದ ಧ್ರುವಲೋಕವನ್ನು ತಲುಪಿದೆ.

ತತೋ ಪುರೀಂ ಪುರುಹೂತಸ್ಯ ರಮ್ಯಾಂ
ಸಹಸ್ರದ್ವಾರಾಂ ಶತಯೋಜನಾಯತಾಮ್ ।
ಅಧ್ಯಾವಸಂ ವರ್ಷಸಹಸ್ರಮಾತ್ರಂ
ತತೋ ಲೋಕಂ ಪರಮಸ್ಯಾಭ್ಯುಪೇತಃ ॥೧೭॥

ಅನಂತರ ಅಲ್ಲಿಂದ ಶತಯೋಜನ ವಿಸ್ತಾರವಾದ ಸಹಸ್ರದ್ವಾರಗಳುಳ್ಳ ಮನೋಹರವಾದ ಇಂದ್ರನ ಪಟ್ಟಣಕ್ಕೆ ಹೋದೆ. ಅಲ್ಲಿ ಒಂದು ಸಹಸ್ರ ವರ್ಷವಿದ್ದು ಅಲ್ಲಿಂದ ಜನಲೋಕಾದಿಗಳಿಗೆ ಹೋದೆ.

ತತೋ ದಿವ್ಯಾಮಜರಂ ಪ್ರಾಪ್ಯ ಲೋಕಂ
ಪ್ರಜಾಪತೇರ್ಲೋಕಪತೇರ್ದುರಾಪಮ್ ।
ತತ್ರಾವಸಂ ವರ್ಷಸಹಸ್ರಮಾತ್ರಂ
ತತೋ ಲೋಕಂ ಪರಮಸ್ಯಾಭ್ಯುಪೇತಃ ॥೧೮॥

ಅಲ್ಲಿಂದ ದಿವ್ಯವಾದ ಅಜರವಾದ ಪಡೆಯಲು ದುಸ್ಸಾಧ್ಯವಾದ ಬ್ರಹ್ಮಲೋಕಕ್ಕೆ ಹೋದೆ. ಅಲ್ಲಿ ಒಂದು ಸಹಸ್ರವರ್ಷವಿದ್ದು ಅಲ್ಲಿಂದ ಮುಂದೆ ಅದಕ್ಕಿಂತ ಶ್ರೇಷ್ಠವಾದ ಅಮುಕ್ತಗಮ್ಯವಾದ ಸಾಂತಾನಿಕ ಲೋಕಗಳಿಗೆ ಹೋದೆ.

ದೇವಸ್ಯ ದೇವಸ್ಯ ನಿವೇಶನೇ ಚ
ವಿಜಿತ್ಯ ಲೋಕಾನವಸಂ ಯಥೇಷ್ಟಮ್ ।
ಸಂಪೂಜ್ಯಮಾನಸ್ತ್ರಿದಶೈಃ ಸಮೇತ್ಯೈಃ
ತುಲ್ಯಪ್ರಭಾವದ್ಯುತಿರೀಶ್ವರಾಣಾಮ್ ॥೧೯॥

ಸತ್ಕರ್ಮಗಳಿಂದ ಅನೇಕ ದೇವಲೋಕಗಳನ್ನು ಸಂಪಾದಿಸಿದ್ದರಿಂದ ಪ್ರತಿಯೊಬ್ಬ ದೇವನ ಗೃಹದಲ್ಲಿಯೂ ಎಲ್ಲಾ ದೇವತೆಗಳಿಂದಲೂ ಪೂಜಿಸಲ್ಪಟ್ಟು ದೇವತೆಗಳಿಗೆ ಸಮಾನವಾದ ಪ್ರಭಾವ ಮತ್ತು ಕಾಂತಿಗಳಿಂದ ಕೂಡಿದವನಾಗಿ ಬಹುಕಾಲ ವಾಸವನ್ನು ಮಾಡಿದೆ.

ತಥಾऽವಸಂ ನಂದನೇ ಕಾಮರೂಪೀ
ಸಂವತ್ಸರಾಣಾಮಯುತಂ ಶತಾನಾಮ್ ।
ಸಹಾಪ್ಸರೋಭಿರ್ವಿಹರನ್ ಪುಣ್ಯಗಂಧಾನ್
ಪಶ್ಯನ್ ನಗಾನ್ ಪುಷ್ಪಿತಾಗ್ರಾನ್ ಸುರೂಪಾನ್ ॥೨೦॥

ಅಲ್ಲಿ ನಂದನವನದಲ್ಲಿ ಬೇಕಾದ ರೂಪವನ್ನು ತೆಗೆದುಕೊಂಡು ಹತ್ತು ಲಕ್ಷವರ್ಷಗಳ ಕಾಲ ವಾಸಮಾಡಿದೆ. ಅಪ್ಸರೆಯರ ಜೊತೆಯಲ್ಲಿ ವಿಹಾರಮಾಡುತ್ತಾ, ಪುಣ್ಯಗಂಧವನ್ನು ಆಘ್ರಾಣಿಸುತ್ತಾ, ಪುಷ್ಪಿತವಾದ ವೃಕ್ಷಗಳುಳ್ಳ ಪರ್ವತವನ್ನು ನೋಡುತ್ತಾ ಬಹುಕಾಲ ವಿಹರಿಸಿದೆ.

ತತ್ರಸ್ಥಂ ಮಾಂ ದೇವಸುಖೇಷು ಸಕ್ತಂ
ಕಾಲೇऽತೀತೇ ಮಹತಿ ತತೋऽತಿಮಾತ್ರಮ್ ।
ದೂತೋ ದೇವಾನಾಮಬ್ರವೀದುಗ್ರರೂಪೋ
ಧ್ವಂಸೇತ್ಯುಚ್ಚೈಸ್ತ್ರಿಃ ಪ್ಲುತೇನ ಸ್ವರೇಣ ॥೨೧॥

ದೇವತೆಗಳಿಗೆ ಸಮಾನವಾದ ಭೋಗದಲ್ಲಿ ಆಸಕ್ತನಾದ ಅಲ್ಲಿದ್ದ ನನ್ನನ್ನು ಕುರಿತು ಬಹುಕಾಲ ಕಳೆದ ಮೇಲೆ ಉಗ್ರರೂಪಿಯಾದ ಒಬ್ಬ ದೇವದೂತನು ಸಮೀಪಿಸಿ ಕೆಳಗೆ ಬೀಳು ಎಂದು ಉಚ್ಚವಾದ ಸ್ವರದಲ್ಲಿ ಮೂರು ಬಾರಿ ಹೇಳಿದನು.

ಏತಾವನ್ಮೇ ವಿದಿತಂ ರಾಜಸಿಂಹ
ತತೋ ಭ್ರಷ್ಟೋಽಹಂ ನಂದನಾತ್ ಕ್ಷೀಣಪುಣ್ಯಃ ।
ವಾಚೋಽಶ್ರೌಷಂ ಚಾಂತರಿಕ್ಷೇ ಸುರಾಣಾ-
ಮನುಕ್ರೋಶಾಚ್ಚೋಚತಾಂ ಮಾನವೇಂದ್ರ ॥೨೨॥

ಎಲೈ ರಾಜಸಿಂಹನೇ, ಇಷ್ಟು ಮಾತ್ರ ನನಗೆ ಗೊತ್ತು. ಪುಣ್ಯವನ್ನು ಕಳೆದುಕೊಂಡು ನಂದನವನದಿಂದ ಕೆಳಗೆ ಬೀಳುತ್ತಿದ್ದ ನಾನು, ಅಂತರಿಕ್ಷದಲ್ಲಿ ನನ್ನ ಮೇಲಿನ ದಯೆಯಿಂದ ದೇವತೆಗಳು ಮಾತನಾಡುವುದನ್ನು ಕೇಳಿದೆ-

ಅಹೋ ಕಷ್ಟಂ ಕ್ಷೀಣಪುಣ್ಯೋ ಯಯಾತಿಃ
ಪತತ್ಯಸೌ ಪುಣ್ಯಕೃತ್ ಪುಣ್ಯಕೀರ್ತಿಃ ।
ತಾನಬ್ರುವಂ ಪತಮಾನಸ್ತಥಾಽಹಂ
ಸತಾಂ ಮಧ್ಯೇ ನಿಪತೇಯಂ ಕಥಂ ನು ॥೨೩॥

'ಅಯ್ಯೋ ಕಷ್ಟ, ಪುಣ್ಯವನ್ನು ಮಾಡಿದವನೂ, ಪುಣ್ಯಕೀರ್ತಿಯೂ ಆದ ಯಯಾತಿಯು ಪುಣ್ಯವನ್ನು ಕಳೆದುಕೊಂಡು ಕೆಳಗೆ ಬೀಳುತ್ತಿದ್ದಾನೆ' ಎಂಬ ಮಾತುಗಳು ಕೇಳಿದವು. ಆಗ ನಾನು ಅವರನ್ನು ಕುರಿತು ಕೇಳಿದೆ. ನಾನು ಸಜ್ಜನರ ಮಧ್ಯದಲ್ಲಿ ಯಾವ ಉಪಾಯದಿಂದ ಬೀಳುತ್ತೇನೆ ಹೇಳಿ ಎಂದು.

ತೈರಾಖ್ಯಾತಾ ಭವತಾಂ ಯಜ್ಞಭೂಮಿಃ
ಸಮೀಕ್ಷ್ಯನಾಂ ತ್ವರಿತಮುಪಾಗತೋಽಸ್ಮಿ ।
ಹವಿರ್ಗಂಧಂ ದೇಶಿಕಂ ಯಜ್ಞಭೂಮೇಃ
ಧೂಮಾವಾಪ್ತಂ ಪ್ರತಿಗೃಹ್ಣನ್ ಪ್ರತೀತಮ್ ॥೨೪॥

ಅವರು ಇಲ್ಲಿನಿಮ್ಮ ಯಜ್ಞಭೂಮಿಯನ್ನು ಸೂಚಿಸಿದರು. ಅದನ್ನು ನೋಡಿ ನಾನು ಶೀಘ್ರವಾಗಿ ಈ ಕಡೆಗೆ ಬಂದೆ. ಯಜ್ಞಭೂಮಿಯ ದೇಶದಿಂದ ಉಂಟಾದ ಹವಿಸ್ಸಿನ ಗಂಧವು ಮೇಲೆ ಬಂದುದನ್ನು ನೋಡಿ ಆಘ್ರಾಣಿಸಿ ಇಲ್ಲಿಗೆ ಬಂದಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಅಷ್ಟಸಪ್ತತಿತಮೋಽಧ್ಯಾಯಃ ॥

॥ ಸಂಭವಪರ್ವಣಿ ಷಡ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

ಎಪ್ಪತ್ತೊಂಭತ್ತನೆಯ ಅಧ್ಯಾಯ

(ಮೃತನಾದವನಿಗೆ ಸ್ವರ್ಗಾದಿಭೋಗಾನಂತರದಲ್ಲಿ ಶರೀರಾಂತರಪ್ರಾಪ್ತಿ ಮತ್ತು ಪುನರ್ಜನ್ಮ ಪ್ರಕಾರದ ಕಥನ)

ಅಷ್ಟಕಃ

ತಥಾ ವಸನ್ ನಂದನೇ ಕಾಮರೂಪೀ
ಸಂವತ್ಸರಾಣಾಮಯುತಂ ಶತಾನಾಮ್ ।
ಕಿಂ ಕಾರಣಂ ಕಾರ್ತಯುಗಪ್ರಧಾನ
ಹಿತ್ವಾ ತ್ವಂ ತದ್ ಯೇನ ಧರಾಂ ಪ್ರಪನ್ನಃ ॥೧॥

ಎಲೈ ಕೃತಯುಗವಾಸಿಗಳಲ್ಲಿ ಪ್ರಧಾನನಾದವನೇ, ನೀನು ಆ ರೀತಿಯಲ್ಲಿ ಕಾಮರೂಪವನ್ನು ಧರಿಸಿ ನಂದನವನದಲ್ಲಿ ವಿಹರಿಸುತ್ತಿದ್ದವನು ಅದನ್ನು ಬಿಟ್ಟು ಭೂಮಿಗೆ ಬರಲು ಏನು ಕಾರಣ?

ಯಯಾತಿಃ

ಸಂಬಂಧಿನೋ ಜ್ಞಾತಿಸುಹೃಜ್ಜನಾಶ್ಚ
ಕ್ಷೀಣೇ ವಿತ್ತೇ ಸಂತ್ಯಜತೀಹ ಮರ್ತ್ಯಮ್ ।
ತಥಾ ಚೈನಂ ಕ್ಷೀಣಪುಣ್ಯಂ ಮನುಷ್ಯಂ
ತ್ಯಜಂತಿ ಸದ್ಯಃ ಸೇಶ್ವರಾ ದೇವಸಂಘಾಃ ॥೨॥

ಈ ಲೋಕದಲ್ಲಿ ವಿತ್ತಹೀನನಾದ ಮನುಷ್ಯನನ್ನು ಬಾಂಧವರೂ, ದಾಯಾದರೂ ಮತ್ತು ಸುಹೃಜ್ಜನರೂ ಪರಿತ್ಯಜಿಸುತ್ತಾರೆ. ಅದರಂತೆ ಕ್ಷೀಣಪುಣ್ಯನಾದ ಮನುಷ್ಯನನ್ನು ಲೋಕಪಾಲಕರಿಂದ ಸಹಿತವಾದ ಎಲ್ಲಾ ದೇವತಾಗಣವೂ ಪರಿತ್ಯಜಿಸುತ್ತದೆ.

ಅಷ್ಟಕಃ

ಕಥಂ ತತ್ರ ಕ್ಷೀಣಪುಣ್ಯಾ ಭವಂತಿ
ಸಂಮುಹ್ಯತೇ ಮೇಽತ್ರ ಮನೋಽತಿಮಾತ್ರಮ್ ।
ಕೇ ವಾ ಶಿಷ್ಟಾಃ ಕಸ್ಯ ಧಾಮೋಪಯಾಂತಿ
ತನ್ಮೇ ಬ್ರೂಹಿ ಕ್ಷೇತ್ರವಿತ್ ತ್ವಂ ಮತೋ ಮೇ ॥೩॥

ಸ್ವರ್ಗಲೋಕದಲ್ಲಿ ಜನರು ಹೇಗೆ ಪುಣ್ಯಕ್ಷಯವನ್ನು ಹೊಂದಿ ಈ ಲೋಕವನ್ನು ಹೊಂದುತ್ತಾರೆ ? ಸ್ವರ್ಗಫಲವನ್ನು ಭೋಗಿಸಿ ಅಲ್ಲಿ ಉಳಿದವರು ಯಾರು ಯಾವ ಸ್ಥಾನಕ್ಕೆ ಹೋಗುತ್ತಾರೆ ? (ಯಾರು ಭೂಲೋಕಕ್ಕೆ, ಯಾರು ಅಂತರಿಕ್ಷಲೋಕಕ್ಕೆ, ಮತ್ತು ಯಾರು ನರಕಲೋಕಕ್ಕೆ ಹೋಗುತ್ತಾರೆ?) ನೀನು ನನ್ನ ಅಭಿಪ್ರಾಯದಲ್ಲಿ ಸರ್ವಜ್ಞನಾಗಿದ್ದೀಯೆ.

ಯಯಾತಿಃ

ಇಮಂ ಭೌಮಂ ನರಕಂ ತೇ ಪತಂತಿ
ಲಾಲಪ್ಯಮಾನಾ ನರದೇವ ಸರ್ವೇ ।
ತೇ ಕಂಕ ಗೋಮಾಯುಬಲಾಶನಾರ್ಥಂ
ಕ್ಷೀಣೇ ಪುಣ್ಯೇ ಬಹುಧಾ ಪ್ರವ್ರಜಂತಿ ॥೪॥

ಎಲೈ ನರದೇವನೇ, ಸ್ವರ್ಗಕ್ಕೆ ಹೋದವರೆಲ್ಲರೂ ಭೋಗದಿಂದ ಪುಣ್ಯಕ್ಷಯವನ್ನು ಹೊಂದುತ್ತಾರೆ. ಅವರು ಅಲ್ಲಿಂದ ಬೀಳುತ್ತಾ ಬಹಳವಾಗಿ ಪ್ರಲಾಪವನ್ನು ಮಾಡಿಕೊಂಡು ಬೀಳುತ್ತಾರೆ. ಅವರು ಅಂತರಿಕ್ಷದಲ್ಲಿ ನಿಲ್ಲುವುದಿಲ್ಲ ಅಥವಾ ಕೆಳಗಿನ ನರಕಲೋಕಕ್ಕೆ ಹೋಗುವುದಿಲ್ಲ. ಬಹುದುಃಖ ಮಿಶ್ರಿತವಾದ ಕಾರಣದಿಂದ ನರಕಪ್ರಾಯವಾದ ಈ ಭೂಲೋಕಕ್ಕೆ ಬರುತ್ತಾರೆ. ಇಲ್ಲಿ ಬಂದರೂ ಕೂಡ ಮತ್ತೂ ಹೆಂಡತಿ ಮಕ್ಕಳನ್ನು ಪೋಷಿಸುವ ಸಲುವಾಗಿ ಕಂಕ, ನರಿ, ಹದ್ದು ಮೊದಲಾದ ಪ್ರಾಣಿಪಕ್ಷಿಗಳಂತೆ ಅನ್ನದ ಸಲುವಾಗಿ ಹೆಂಡತಿ ಮಕ್ಕಳನ್ನು ತೊರೆದು ಸಂನ್ಯಾಸಿಗಳಂತೆ ದೇಶದೇಶಗಳಲ್ಲಿ ತಿರುಗುತ್ತಾರೆ.

ತಸ್ಮಾದೇತದ್ ವರ್ಜನೀಯಂ ನರೇಣ
ದೃಷ್ಟಂ ಲೋಕೇ ಗರ್ಹಣೀಯಂ ಚ ಕರ್ಮ ।
ಆಖ್ಯಾತಂ ತೇ ಪಾರ್ಥಿವ ಸರ್ವಮೇತದ್
ಭೂಯಶ್ಚೇದಾನೀಂ ವದ ಕಿಂ ತೇ ವದಾಮಿ ॥೫॥

ಎಲೈ ರಾಜನೇ, ಆದ್ದರಿಂದ ಮನುಷ್ಯನಾದವನು ಲೋಕದಲ್ಲಿ ನಿಂದಿತವಾದ ನಿಷಿದ್ಧವಾದ ಕರ್ಮವನ್ನು ಮಾಡಬಾರದು. ನೀನು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಹೇಳಿದ್ದೇನೆ. ಇನ್ನೇನು ಹೇಳಲಿ ಎಂದು ಹೇಳು.

ಅಷ್ಟಕಃ

ಯದಾ ಸಮಂತಾತ್ ಪತಿತಾನ್ ತುದಂತಿ
ವಯಾಂಸಿ ಗೃಧ್ರಾಃ ಪಿಶಿತಾಶನಾಶ್ಚ ।
ಕಥಂ ಭವಂತಿ ಕತಮಾ ಭವಂತಿ
ನ ಭೌಮಮಂತರ್ನರಕಂ ಶೃಣೋಮಿ ॥೬॥

ಜೀವರು ಸ್ವರ್ಗದಿಂದ ಕೆಳಗೆ ಬೀಳುವಾಗ ಹದ್ದು ಮೊದಲಾದ ಪಕ್ಷಿಗಳೂ ಮತ್ತು ಮಾಂಸಭಕ್ಷಕರಾದ ರಾಕ್ಷಸರೂ ಅವರಿಗೆ ವ್ಯಥೆಯನ್ನು ಉಂಟುಮಾಡುತ್ತಾರೆ. ಈ ಪಕ್ಷಿ ಮೊದಲಾದವುಗಳೆಲ್ಲವೂ ಅಂತರಿಕ್ಷದಲ್ಲಿ ಸ್ವಚ್ಛಂದವಾಗಿ ತಿರುಗಾಡುತ್ತಿವೆ. ನಾನು ಮಾತ್ರ ಕೆಳಗೆ ಬೀಳುತ್ತಿದ್ದೇನೆ ಎಂದು ಒಂದು ವ್ಯಥೆ. ಕೆಳಗೆ ಬೀಳುವ ತನ್ನನ್ನು ಪಕ್ಷಿಗಳು ಮತ್ತು ರಾಕ್ಷಸರು ಅಂತರಿಕ್ಷದಲ್ಲಿ ಗಾಯಗೊಳಿಸುವರೆಂಬುದು ಇನ್ನೊಂದು ವ್ಯಥೆ. ಸ್ವರ್ಗದಲ್ಲಿ ಸುಖವಾಗಿದ್ದೆ. ಈ ಮಧ್ಯಮಾರ್ಗದಲ್ಲಿ ಆ ಸುಖವಿಲ್ಲವೆಂಬುದು ಮೂರನೆಯ ವ್ಯಥೆ. (ಇದು ಪ್ರಲಾಪಮಾಡುತ್ತಾ ಬೀಳುತ್ತಾರೆ ಎಂದು ಹೇಳಿದುದರ ವಿವರಣೆ) ಹಾಗೆ ಕೆಳಗೆ ಬೀಳುವವರು ಅಲ್ಪಕಾಲದಲ್ಲಿಯೇ ಬೀಳುತ್ತಾರೆಯೋ ಅಥವಾ ಬಹಳ ಕಾಲದಲ್ಲಿ ಬೀಳುತ್ತಾರೆಯೋ ? (ಇದು ಎರಡನೆಯ ಪ್ರಶ್ನೆ). ಬಹುಕಾಲದಲ್ಲಿ ಬೀಳುವವರಿಗೂ ಸಹ ಎಲ್ಲರಿಗೂ ಆ ಕಾಲವು ಸಮವಾಗಿರುತ್ತದೆಯೆ ಅಥವಾ ವಿಷಮವಾಗಿರುತ್ತದೆಯೆ ? (ಇದು ಎರಡನೆಯ ಪ್ರಶ್ನೆಯದೇ ವಿವರಣೆ) (ಅಲ್ಪಕಾಲವಾಗಲೀ ಅಥವಾ ಬಹುಕಾಲವಾಗಲೀ ಅದು ಎಲ್ಲರಿಗೂ ಸಮಾನವೇ ಅಥವಾ ಬೇರೆಬೇರೆಯವರಿಗೆ ಬೇರೆಬೇರೆ ಕಾಲವೇ ಎಂದು ಪ್ರಶ್ನೆಯ ಅಭಿಪ್ರಾಯ). ಭೂಮಿಯ ಒಳಗೆ (ಎಂದರೆ ಕೆಳಗೆ ಬಿಲದಲ್ಲಿ) ಇರುವ ನರಕವನ್ನು ನಾನು ಕೇಳುತ್ತಿಲ್ಲ. ಭೂಮಿಯ ಮೇಲೆ ಇರುವ ಸಂಸಾರವೇ ನರಕವೆಂದು ಕೇಳುತ್ತಿದ್ದೇನೆ.

ಊರ್ಧ್ವಂ ದೇಹಾತ್ ಪ್ರಾಣಿನೋ ಜೃಂಭಮಾಣಾ
ವ್ಯಕ್ತಂ ಪೃಥಿವ್ಯಾಮಿಹ ಸಂಚರಂತಃ ।
ಇಮಂ ಭೌಮಂ ನರಕಂ ತೇ ಪತಂತಿ
ನಾವೇಕ್ಷಂತೇ ವರ್ಷಪೂಗಾನನೇಕಾನ್ ॥೭॥

ಬಹುಕಾಲದ ನಂತರವೇ ಭೂಮಿಗೆ ಬರುತ್ತಾರೆ. ಅಲ್ಪಕಾಲದಿಂದಲ್ಲ. ಭೂಮಿಯಲ್ಲಿ ಜನ್ಮವನ್ನು ಪಡೆದು ದೇಹವು ಬೆಳೆದ ಮೇಲೆ ಈ ಭೂಮಿಯಲ್ಲಿಯೇ

ಬಹಳವಾಗಿ ಸಂಚರಿಸುತ್ತಾರೆ. ಸಂಸಾರಾಸಕ್ತರಾಗಿರುವ ಕಾರಣದಿಂದ ಅವರಿಗೆ ಅನೇಕ ವರ್ಷಗಳು ಕಳೆದು ಹೋಗುವುದೂ ಸಹ ಗಮನಕ್ಕೆ ಬರುವುದಿಲ್ಲ.

ಷಷ್ಟಿಂ ಸಹಸ್ರಾಣಿ ಪತಂತಿ ವ್ಯೋಮ್ನಃ
ತಥಾऽಶೀತಿಂ ಪರಿವತ್ಸರಾಣಿ ।
ತಾನ್ ವೈ ತುದಂತಿ ಪತತಃ ಪ್ರಪಾತೇ
ಭೀಮಾ ಭೌಮಾ ರಾಕ್ಷಸಾಸ್ತೀಕ್ಷ್ಣದಂಷ್ಟ್ರಾಃ ॥೮॥

ಸ್ವರ್ಗದಿಂದ ಕೆಳಗೆ ಆಕಾಶಮಾರ್ಗದಲ್ಲಿ ಬೀಳುತ್ತಾ ಕೆಲವರು ಅರವತ್ತು ವರ್ಷಗಳವರೆಗೂ, ಇನ್ನು ಕೆಲವರು ಸಾವಿರವರ್ಷದವರೆಗೂ, ಇನ್ನು ಕೆಲವರು ಎಂಬತ್ತುವರ್ಷದವರೆಗೂ, ಇನ್ನು ಕೆಲವರು ಬೇರೆಬೇರೆ ಕಾಲಗಳವರೆಗೂ ಬೀಳುತ್ತಾರೆ. ಭೂಲೋಕದಲ್ಲಿ ಕೆಟ್ಟ ಪಾತವನ್ನು ಹೊಂದುವ ಅವರನ್ನು ಭೂಲೋಕದ ಪಕ್ಷಿಗಳು ಮತ್ತು ರಾಕ್ಷಸರು ಅಂತರಿಕ್ಷಲೋಕಕ್ಕೆ ಹೋಗಿ ವ್ಯಥೆಪಡಿಸುತ್ತಾರೆ.

ಯದೈನಸಾ ತೇ ಪತತಸ್ತುದಂತಿ
ಭೀಮಾ ಭೌಮಾ ರಾಕ್ಷಸಾಸ್ತೀಕ್ಷ್ಣದಂಷ್ಟ್ರಾಃ ।
ಕಥಂ ಭವಂತಿ ಕತಮಾ ಭವಂತಿ
ಕಥಂಭೂತಾ ಗರ್ಭಗತಾ ಭವಂತಿ ॥೯॥

ಯಾವಾಗ ಪಾಪದ ಫಲವಾಗಿ ಅವರು ತೀಕ್ಷ್ಣದಂತಗಳುಳ್ಳ ಭಯಂಕರವಾದ ಭೂಲೋಕಸಂಬಂಧಿಗಳಾದ ರಾಕ್ಷಸಾದಿಗಳಿಂದ ಘಾಸಿಗೊಳಿಸಲ್ಪಡುತ್ತಾರೆಯೋ ಆಗ ಅವರು ಭೂಲೋಕದಲ್ಲಿ ಯಾವ ರೂಪದಿಂದ ಜನಿಸುತ್ತಾರೆ? ರೇತಸ್ಸಿನ ರೂಪದಿಂದಲೋ ಅಥವಾ ಬೇರೆಯ ರೂಪದಿಂದಲೋ? ರೇತೋರೂಪದಿಂದ ಜನಿಸಿದರೂ ಯಾವಯಾವ ದ್ವಾರಗಳಿಂದ (ಮೂಲಕವಾಗಿ) ರೇತಸ್ಸನ್ನು ತಲುಪುತ್ತಾರೆ? ರೇತಸ್ಸನ್ನು ಪ್ರವೇಶಿಸಿದ ಮೇಲೆಯೂ ಯಾವಯಾವ ಪ್ರಕಾರಗಳಿಂದ ಗರ್ಭಗತರಾಗುತ್ತಾರೆ?

ಯಯಾತಿಃ

ಅಸೃಗ್ ರೇತಃ ಪುಷ್ಪರಸಾನುಪೃಕ್ತ-
ಮನ್ವೇತಿ ತಾವತ್ ಪುರುಷೇಣ ಸೃಷ್ಟಮ್ ।

ತಚ್ಚಿತಸ್ಯಾಂ ರಜ ಆಪಾದ್ಯತೇ ವೈ
ಸ ಗರ್ಭಭೂತಃ ಸಮುಪೈತಿ ತತ್ರ ॥೧೦॥

ಪುರುಷನು ಉತ್ಸರ್ಗಮಾಡಿದ ರೇತಸ್ಸಿನ ಕಣವು ಋತುಸ್ನಾನಾನಂತರದ ಅನುಕೂಲಕರವಾದ ಕಾಲದಲ್ಲಿ ಸ್ತ್ರೀರೇತೋಕಣವಾದ ರಕ್ತದೊಡನೆ ಸಂಬಂಧವನ್ನು ಹೊಂದಿದಾಗ ಜೀವನು ಪುರುಷರೇತಃಕಣದಿಂದ ಸ್ತ್ರೀರೇತಃಕಣವನ್ನು ಪ್ರವೇಶಿಸುತ್ತಾನೆ. ಅನಂತರ ಅವೆರಡು ರೇತಃಕಣಗಳೂ ಸೇರಿ ಗರ್ಭವಾಗುತ್ತದೆ. ಹೀಗೆ ಯೋನಿಯ ಆಕಾಶದಿಂದ ಒಳಗೆ ಪ್ರವೇಶಿಸಿದ ಜೀವನು ಜರಾಯುವಿನಿಂದ ಪರಿವೃತವಾದ ಗರ್ಭಾಕಾಶದ ಪ್ರಾಪ್ತಿಯನ್ನು ಪಡೆಯುತ್ತಾನೆ.

ವನಸ್ಪತೀಂಶ್ಚೌಷಧೀಶ್ಚಾವಿಶಂತಿ
ಅಪ್ಸೋ ವಾಯುಂ ಪೃಥಿವೀಂ ಚಾಂತರಿಕ್ಷಮ್ ।
ಚತುಷ್ಪದಂ ದ್ವಿಪದಂ ಚಾಪಿ ಸರ್ವ-
ಮೇವಂ ಭೂತಾ ಗರ್ಭಭೂತಾ ಭವಂತಿ ॥೧೧॥

ಗರ್ಭವಾಸವನ್ನು ಹೊಂದುವುದಕ್ಕೆ ಪುರುಷನ ರೇತಸ್ಸನ್ನು ಪ್ರವೇಶಿಸುವ ಜೀವನು ನಾನಾ ದ್ವಾರಗಳಿಂದ ಪ್ರವೇಶಿಸುತ್ತಾನೆ. ಫಲದ ಮೂಲಕ ಪುರುಷನ ರೇತಸ್ಸನ್ನು ಪ್ರವೇಶಿಸುವವರು ಮೊದಲು ವನಸ್ಪತಿಗಳನ್ನು ಪ್ರವೇಶಿಸುತ್ತಾರೆ. ಧಾನ್ಯದ್ವಾರಾ ಪ್ರವೇಶಿಸುವರು ಔಷಧಿಗಳನ್ನು ಪ್ರವೇಶಿಸುತ್ತಾರೆ. ಪಾನದ್ವಾರಾ ಪ್ರವೇಶಿಸುವವರು ನೀರನ್ನು ಪ್ರವೇಶಿಸುತ್ತಾರೆ. ಸೌರಭದ್ವಾರಾ ಪ್ರವೇಶಿಸುವವರು ವಾಯುವನ್ನು ಪ್ರವೇಶಿಸುತ್ತಾರೆ. ಪೃಥಿವಿಯ ಮೂಲಕ ಪ್ರವೇಶಿಸುವವರು (ಮಣ್ಣನ್ನು ತಿನ್ನುವುದರಿಂದ ಪ್ರವೇಶಿಸುವವರು) ಭೂಮಿಯನ್ನು ಪ್ರವೇಶಿಸುತ್ತಾರೆ. ಅಕಸ್ಮಾತ್ತಾಗಿ ಪ್ರವೇಶಿಸುವವರು ಆಕಾಶವನ್ನು ಪ್ರವೇಶಿಸುತ್ತಾರೆ. ಮಾಂಸಭಕ್ಷಣೆಯ ಮೂಲಕ ಪ್ರವೇಶಿಸುವವರು ಎರಡುಕಾಲಿನ ಅಥವಾ ನಾಲ್ಕುಕಾಲಿನ ಪ್ರಾಣಿಗಳನ್ನು ಪ್ರವೇಶಿಸುತ್ತಾರೆ (ಹೀಗೆ ನಾನಾ ದ್ವಾರಗಳಿಂದ ಪುರುಷನ ರೇತಸ್ಸನ್ನು ಪ್ರವೇಶಿಸುತ್ತಾರೆ)

ಅಷ್ಟಕಃ

ಅನ್ಯೋ ಹಿ ವೈ ನಿದಧಾತೀಹ ಗರ್ಭ-
ಮುತಾಹೋಸ್ವಿತ್ ಸ್ವೇನ ಕಾಮೇನ ಯಾತಿ ।
ಆಪಾದ್ಯಮಾನೋ ನರಯೋನಿಮೇತಾ -
ಮಾಚಕ್ಷ್ವ ಮೇ ಸಂಶಯಾತ್ ಪ್ರಬ್ರವೀಮಿ ॥೧೨॥

ಗರ್ಭವಾಸವನ್ನು ಹೊಂದುವವನು ತನ್ನ ಇಚ್ಛೆಯಿಂದಲೇ ಗರ್ಭವನ್ನು ಪ್ರವೇಶಿಸತ್ತಾನೆಯೋ ಅಥವಾ ಇನ್ನೊಬ್ಬನಿಂದ ಗರ್ಭದಲ್ಲಿ ಇಡಲ್ಪಡುತ್ತಾನೆಯೋ? ಈ ವಿಷಯದಲ್ಲಿ ನನಗೆ ಸಂಶಯವಿದೆ. ಆದ್ದರಿಂದ ಕೇಳುತ್ತಿದ್ದೇನೆ. ಇದಕ್ಕೆ ಉತ್ತರವನ್ನು ಹೇಳು.

ಶರೀರದೇಹಾದಿಸಮುಚ್ಛ್ರಯಂ ಚ
ಚಕ್ಷುಃಶ್ರೋತ್ರಂ ಲಭತೇ ಕೇನ ಸಂಜ್ಞಾಮ್ ।
ಏತತ್ ಸರ್ವಂ ತತ್ತ್ವಮಾಚಕ್ಷ್ವ ಪೃಷ್ಟಃ
ಕ್ಷೇತ್ರಜ್ಞಂ ತ್ವಾಂ ತಾತ ಮನ್ಯಾಮ ಸರ್ವೇ ॥೧೩॥

ಮೊದಲು ಶರೀರದ ಆಕಾರವನ್ನು ಪಡೆದ ಜೀವನು ಶರೀರದ ಕ್ರಮಿಕವಾದ ಸ್ಥೂಲತೆಯನ್ನು ಹೇಗೆ ಪಡೆಯುತ್ತಾನೆ? ಚಕ್ಷುಸ್ಸು, ಶ್ರೋತ್ರ ಮೊದಲಾದ ಜ್ಞಾನೇಂದ್ರಿಯಗಳನ್ನು ಹೇಗೆ ಪಡೆಯುತ್ತಾನೆ? ಜ್ಞಾನವನ್ನಾದರೂ ಹೇಗೆ ಪಡೆಯುತ್ತಾನೆ? ಪ್ರೀತಿಪಾತ್ರನೇ, ನಾನು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಹೇಳು. ನೀನು ಸರ್ವಜ್ಞನೆಂದು ನಾವೆಲ್ಲರೂ ಭಾವಿಸಿದ್ದೇವೆ.

ಯಯಾತಿಃ

ವಾಯುಃ ಸಮುತ್ಕರ್ಷತಿ ಗರ್ಭಯೋನಿಮ್
ಋತೌ ರೇತಃ ಪುಷ್ಪಕಾಲಾನುಪೃಕ್ತಮ್ ।
ಸ ತತ್ರ ತನ್ಮಾತ್ರಕೃತಾಧಿಕಾರಃ
ಕ್ರಮೇಣ ಸಂವರ್ಧಯತೀಹ ಗರ್ಭಮ್ ॥೧೪॥

ಋತುಸ್ನಾನಾನಂತರದ ಯೋಗ್ಯವಾದ ಕಾಲದಲ್ಲಿ (ಅಥವಾ ವಸಂತಾದಿ ತತ್ತ್ಸದ್ಯೋಗ್ಯ ಋತುಗಳಲ್ಲಿ) ಮುಖ್ಯಪ್ರಾಣನೇ ಆ ರೇತಃಕಣವನ್ನು ಸ್ತ್ರೀಕಣದೊಂದಿಗೆ ಸೇರಿಸಿ ಗರ್ಭಸ್ಥಾನಕ್ಕೆ ಕೊಂಡೊಯ್ಯುತ್ತಾನೆ. ಪ್ರಾಣಾಪಾನಾದಿ ಪಂಚರೂಪಗಳಿಂದ ಶಬ್ದಸ್ಪರ್ಶಾದಿ ಪಂಚತನ್ಮಾತ್ರಗಳಿಗೆ ಅಭಿಮಾನಿಯಾದ ಅವನೇ ಆ ಗರ್ಭವನ್ನು ಕಲಲ (ಸಣ್ಣಕಣ) ಬುದ್ಬುದ (ನೀರಿನ ಗುಳ್ಳೆಯಷ್ಟು ಪರಿಮಾಣ) ನಂತರ ಕರಚರಣಾದಿ ಅವಯವಗಳನ್ನು ಹೊಂದುವಂತೆ ಬೆಳೆಸುತ್ತಾನೆ.

ಸ ಜಾಯಮಾನೋ ನಿಗೃಹೀತಗಾತ್ರಃ
ಪ್ರಜ್ಞಾನನಿಷ್ಠಾಯತನೋ ಮನುಷ್ಯಃ ।
ಸ ಶ್ರೋತ್ರಾಭ್ಯಾಂ ವೇದಯತೀಹ ಶಬ್ದಂ
ಸ ವೈ ರೂಪಂ ಪಶ್ಯತಿ ಚಕ್ಷುಷಾ ಚ ॥೧೫॥

ಗರ್ಭವನ್ನು ಪ್ರವೇಶಿಸಿ ಜನಿಸಲಿರುವ ಜೀವನು ಎಲ್ಲಾ ಕಡೆಯಿಂದಲೂ ಕಟ್ಟಲ್ಪಟ್ಟ ದೇಹವುಳ್ಳವನಾಗಿ ಆ ಮುಖ್ಯಪ್ರಾಣನಿಂದಲೇ ಜ್ಞಾನೋತ್ಕರ್ಷವನ್ನು ಪಡೆಯುವವನಾಗುತ್ತಾನೆ. ಅವನು ಶ್ರೋತ್ರದಿಂದ ಶಬ್ದವನ್ನೂ ಚಕ್ಷುಸ್ಸಿನಿಂದ ರೂಪವನ್ನೂ ಗ್ರಹಿಸುತ್ತಾನೆ.

ಘ್ರಾಣೇನ ಗಂಧಂ ಜಿಹ್ವಯಾ ವೈ ರಸಂ ಚ
ತ್ವಚಾ ಸ್ಪರ್ಶಂ ಮನಸಾ ವೇದ ಭಾವಮ್ ।
ಇತ್ಯಷ್ಟಕೈತಾನ್ ವಿಹಿತಾಂಶ್ಚ ವಿದ್ಧಿ
ಸಹಾತ್ಮನಃ ಪ್ರಾಣಭೃತಃ ಶರೀರೇ ॥೧೬॥

ಅವನು ಘ್ರಾಣದಿಂದ ಗಂಧವನ್ನೂ, ಜಿಹ್ವೆಯಿಂದ ರಸವನ್ನೂ, ತ್ವಚೆಯಿಂದ ಸ್ಪರ್ಶವನ್ನೂ, ಮನಸ್ಸಿನಿಂದ ಉಳಿದ ಭಾವಗಳನ್ನೂ ತಿಳಿಯುತ್ತಾನೆ. ಎಲೈ ಅಷ್ಟಕನೇ, ತಾಯಿಯ ಉದರದಲ್ಲಿ ಕರಚರಣಾದಿ ಅವಯವಲಾಭವೂ, ಇಂದ್ರಿಯಗಳೂ, ಗೋಲಕಗಳೂ, ಇಂದ್ರಿಯಜನ್ಯಜ್ಞಾನವೂ ಎಲ್ಲವೂ ಮುಖ್ಯಪ್ರಾಣನ ಕೃಪೆಯಿಂದಲೇ ಉಂಟಾಗುತ್ತವೆ. ತನ್ನ ಇಚ್ಛೆಯಿಂದಾಗಲೀ ಅಥವಾ ತಾಯಿಯ ಇಚ್ಛೆಯಿಂದಾಗಲೀ ಉಂಟಾಗುವುದಿಲ್ಲ.

ಅಷ್ಟಕಃ

ಯಃ ಸಂಸ್ಥಿತಃ ಪುರುಷೋ ದಹ್ಯತೇ ವಾ
ನಿಖನ್ಯತೇ ವಾ ವಿನಿಕೃಷ್ಯತೇ ವಾ ।
ಅಭಾವಭೂತಃ ಸ ವಿನಾಶಮೇತ್ಯ
ಕೇನಾತ್ಮಾನಂ ಚೇತಯತೇ ಪರಸ್ತಾತ್ ॥೧೭॥

ಯಾವ ಮನುಷ್ಯನು ಮೃತನಾಗುತ್ತಾನೆಯೋ ಅವನು ದಹಿಸಲ್ಪಡುತ್ತಾನೆ ಅಥವಾ ಭೂಮಿಯಲ್ಲಿ ಹೂಳಲ್ಪಡುತ್ತಾನೆ ಅಥವಾ ಪಶುಪಕ್ಷಿಗಳಿಂದ ಭಕ್ಷಿಸಲ್ಪಡುತ್ತಾನೆ. ಇಲ್ಲಿ

ಅದರ್ಶನವನ್ನು ಹೊಂದಿದ ಅವನು ದೇಹಾಂತರದಲ್ಲಿ ಹೇಗೆ ಜ್ಞಾನವನ್ನು ಪಡೆಯುತ್ತಾನೆ?

ಯಯಾತಿಃ

ಹಿತ್ವಾ ಸೋಽಸೂನ್ ಸುಪ್ತವನ್ನಷ್ಟಸಂಜ್ಞಃ
ಪುರೋಧಾಯ ಸುಕೃತಂ ದುಷ್ಕೃತಂ ಚ ।
ಅನ್ಯಾಂ ಯೋನಿಂ ಪವಮಾನಾನುಸಾರೀ
ಹಿತ್ವಾ ದೇಹಂ ಭಜತೇ ರಾಜಸಿಂಹ ॥೧೮॥

ಎಲೈ ರಾಜಸಿಂಹನೇ, ಸುಪ್ತನಾದವನಂತೆ ಜ್ಞಾನವನ್ನು ಕಳೆದುಕೊಂಡು ಒಂದು ದೇಹದಲ್ಲಿ ಪ್ರಾಣಗಳನ್ನು ತ್ಯಜಿಸಿ, ಪುಣ್ಯಪಾಪಗಳನ್ನು ಮುಂದೆ ಮಾಡಿಕೊಂಡು, ಮುಖ್ಯಪ್ರಾಣನಿಂದಲೇ ಬೇರೆಯ ಯೋನಿಗೆ ಕರೆದುಕೊಂಡು ಹೋಗಲ್ಪಟ್ಟವನಾಗಿ ದೇಹವನ್ನು ಹೊಂದುತ್ತಾನೆ.

ಪುಣ್ಯಾಂ ಯೋನಿಂ ಪುಣ್ಯಕೃತೋ ಭಜಂತಿ
ಪಾಪಾಂ ಯೋನಿಂ ಪಾಪಕೃತೋ ವ್ರಜಂತಿ ।
ಕೀಟಾಃ ಪತಂಗಾಶ್ಚ ಭವಂತಿ ಪಾಪಾ
ನ ಮೇ ವಿವಕ್ಷಾಽಸ್ತಿ ಮಹಾನುಭಾವ ॥೧೯॥

ಪುಣ್ಯವನ್ನು ಮಾಡಿದವರು ಶ್ರೇಷ್ಠವಾದ ಯೋನಿಗಳನ್ನು ಹೊಂದುತ್ತಾರೆ. ಪಾಪವನ್ನು ಮಾಡಿದವರು ನೀಚವಾದ ಯೋನಿಗಳನ್ನು ಹೊಂದುತ್ತಾರೆ. ಅವರು ಕೀಟಗಳೂ ಪತಂಗಗಳೂ ಆಗುತ್ತಾರೆ. ಎಲೈ ಮಹಾನುಭಾವನೇ, ನನಗೆ ನರಕದ ಯಾತನೆಗಳನ್ನು ವರ್ಣಿಸುವ ಅಭಿಪ್ರಾಯವಿಲ್ಲ.

ಚತುಷ್ಪದಾ ದ್ವಿಪದಾಃ ಷಟ್‌ಪದಾಶ್ಚ
ತಥಾಭೂತಾ ಗರ್ಭಭೂತಾ ಭವಂತಿ ।
ಆಖ್ಯಾತಮೇತನ್ನಿಖಿಲೇನ ಸರ್ವಂ
ಭೂಯಸ್ತು ಕಿಂ ಪೃಚ್ಛಸಿ ರಾಜಸಿಂಹ ॥೨೦॥

ಗರ್ಭವನ್ನು ಪ್ರವೇಶಿಸಿದವರಲ್ಲಿ ಕೆಲವರು ಎರಡು ಕಾಲುಳ್ಳವರೂ, ನಾಲ್ಕು ಕಾಲುಳ್ಳವರೂ, ಆರು ಕಾಲುಳ್ಳವರೂ (ಅದಕ್ಕಿಂತಲೂ ಅಧಿಕವಾದ ಕಾಲುಳ್ಳವರೂ

ಮತ್ತು ಪಾದವೇ ಇಲ್ಲದವರೂ) ಆಗುತ್ತಾರೆ. ಎಲೈ ರಾಜಸಿಂಹನೇ, ನೀನು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಸಮಗ್ರವಾದ ಶಾಸ್ತ್ರದ ಆಧಾರದಿಂದ ಉತ್ತರವನ್ನು ಹೇಳಿದ್ದೇನೆ. ಇನ್ನು ಯಾವ ಪ್ರಶ್ನೆಯನ್ನು ಕೇಳುತ್ತೀಯೆ?

ಅಷ್ಟಕಃ

ಕಿಂಸ್ವಿತ್ ಕೃತ್ವಾ ಲಭತೇ ತಾತ ಲೋಕಾನ್
ಮರ್ತ್ಯಃ ಶ್ರೇಷ್ಠಾನ್ ತಪಸಾ ವಿದ್ಯಯಾ ಚ ।
ತನ್ಮೇ ಪೃಷ್ಟಃ ಶಂಸ ಸರ್ವಂ ಯಥಾವ-
ಚ್ಛುಭಾಂಲ್ಲೋಕಾನ್ ಯೇನ ಗಚ್ಛೇತ್ ಕ್ರಮೇಣ ॥೨೧॥

ಪ್ರೀತಿಪಾತ್ರನೇ, ಮನುಷ್ಯನು ಏನನ್ನು ಮಾಡಿ ಪುಣ್ಯಲೋಕಗಳನ್ನು ಸಂಪಾದಿಸುತ್ತಾನೆ? ತಪಸ್ಸಿನಿಂದಲೋ ಅಥವಾ ವಿದ್ಯೆಯಿಂದಲೋ? ನನ್ನ ಪ್ರಶ್ನೆಗೆ ಉತ್ತರವಾಗಿ ಯಾವ ಕ್ರಮದಿಂದ ಶುಭಲೋಕಗಳನ್ನು ಸಂಪಾದಿಸುತ್ತಾನೆ ಎಂಬುದನ್ನು ಯಥಾವಸ್ಥಿತವಾಗಿ ಹೇಳು.

ಯಯಾತಿಃ

ತಪಶ್ಚ ದಾನಂ ಚ ಶಮೋ ದಮಶ್ಚ
ಹ್ರೀರಾರ್ಜವಂ ಸರ್ವಭೂತಾನುಕಂಪಾ ।
ಸ್ವರ್ಗಸ್ಯ ಲೋಕಸ್ಯ ವದಂತಿ ಸಂತೋ
ದ್ವಾರಾಣಿ ಸಪ್ತೈವ ಮಹಾಂತಿ ಪುಂಸಾಮ್ ।
ನಶ್ಯಂತಿ ಮಾನೇನ ಸದಾಽಭಿಭೂತಾಃ
ಪುಂಸಃ ಸದೈವೇತಿ ವದಂತಿ ಸಂತಃ ॥೨೨॥

ತಪಸ್ಸು, ದಾನ, ಶಮ, ದಮ, ವಿನಯ, ಆರ್ಜವ ಮತ್ತು ಸರ್ವಭೂತದಯ ಈ ಏಳನ್ನು ಸ್ವರ್ಗದ ಮಹಾದ್ವಾರಗಳೆಂದು ಸಜ್ಜನರು ಹೇಳುತ್ತಾರೆ. ಅಹಂಕಾರಕ್ಕೆ ವಶನಾದ ಮನುಷ್ಯನಿಗೆ ಇವೆಲ್ಲವೂ ಸರ್ವದಾ ಮುಚ್ಚಿಹೋಗುತ್ತವೆ ಎಂದೂ ಸಜ್ಜನರು ಹೇಳುತ್ತಾರೆ.

ಅಧೀಯಾನಃ ಪಂಡಿತಂ ಮನ್ಯಮಾನೋ
ಯೋ ವಿದ್ಯಯಾ ಹಂತಿ ಯಶಃ ಪರೇಷಾಮ್ ।

ತಸ್ಯಾಂತವಂತಶ್ಚ ಭವಂತಿ ಲೋಕಾ
ನ ಚಾಸ್ಯ ತದ್ ಬ್ರಹ್ಮ ಫಲಂ ದದಾತಿ ॥೨೩॥

ವೇದಶಾಸ್ತ್ರಾಧ್ಯಯನವನ್ನು ಮಾಡಿ ಯಾವ ವ್ಯಕ್ತಿಯು ತನ್ನನ್ನು ತಾನೇ ಪಂಡಿತನೆಂದು ತಿಳಿದು ತನ್ನ ವಿದ್ಯೆಯ ಬಲದಿಂದ ಇನ್ನೊಬ್ಬರಿಗೆ ಮಾನಭಂಗವನ್ನು ಮಾಡುತ್ತಾನೆಯೋ ಅವನು ಪಡೆದ ಲೋಕಗಳು ಅವನಿಗೆ ನಾಶವನ್ನು ಹೊಂದುತ್ತವೆ. ಅವನು ಅಧ್ಯಯನಮಾಡಿದ ವೇದವು ಅವನಿಗೆ ಫಲವನ್ನು ಕೊಡುವುದಿಲ್ಲ.

ಚತ್ವಾರಿ ಕರ್ಮಾಣ್ಯಭಯಂಕರಾಣಿ
ಭಯಂ ಪ್ರಯಚ್ಛಂತ್ಯಯಥಾಕೃತಾನಿ ।
ಮಾನಾಗ್ನಿಹೋತ್ರಮುತ ಮಾನಮೌನಂ
ಮಾನೇನಾಧೀತಮುತ ಮಾನಯಜ್ಞಃ ॥೨೪॥

ನಾಲ್ಕು ಕರ್ಮಗಳು ಲೋಕದಲ್ಲಿ ಅಭಯಪ್ರದವಾದವುಗಳು. ಅವುಗಳನ್ನು ಸರಿಯಾಗಿ ಮಾಡದಿದ್ದರೆ ಮಾತ್ರ ಅವೇ ಭಯವನ್ನು ಕೊಡುತ್ತವೆ. ಅವು ಅಹಂಕಾರದಿಂದ ಮಾಡಿದ ಅಗ್ನಿಹೋತ್ರ, ಅಹಂಕಾರದಿಂದ ಮಾಡಿದ ಮೌನಮೊದಲಾದ ತಪಸ್ಸು, ಅಹಂಕಾರದಿಂದ ಮಾಡಿದ ಅಧ್ಯಯನ ಮತ್ತು ಅಹಂಕಾರದಿಂದ ಮಾಡಿದ ಯಜ್ಞ.

ನ ಮಾನ್ಯಮಾನೋ ಮುದಮಾದದೀತ
ನ ಸಂತಾಪಂ ಪ್ರಾಪ್ನುಯಾಚ್ಚಾವಮಾನಾತ್ ।
ತಂ ಸಾಧವಃ ಪೂಜಯಂತೀಹ ಲೋಕೇ
ನಾಸಾಧವಃ ಸಾಧುಬುದ್ಧಿಂ ಲಭಂತೇ ॥೨೫॥

ತನಗೆ ಮರ್ಯಾದೆಯನ್ನು ಮಾಡುವುದರಿಂದ ಸಂತೋಷವನ್ನು ಪಡಬಾರದು. ಅವಮಾನ ಮಾಡಿದಾಗ ಸಂತಾಪವನ್ನು ಮಾಡಬಾರದು. ಅಂತಹ ಮನುಷ್ಯನನ್ನು ಲೋಕದಲ್ಲಿ ಸಜ್ಜನರು ಗೌರವಿಸುತ್ತಾರೆ. ದುಷ್ಟರಿಗೆ ಎಂದೂ ಸದ್ಬುದ್ಧಿಯು ಬರುವುದಿಲ್ಲ.

ಇತಿ ದದ್ಯಾದಿತಿ ಯಜೇದ್ ಇತ್ಯಧೀಯೀತ ಮೇ ವ್ರತಮ್ ।
ಇತ್ಯಸ್ಮೀತಿ ಭಯಾನ್ಯಾಹುಸ್ತಾನಿ ವರ್ಜ್ಯಾನಿ ನಿತ್ಯಶಃ ॥೨೬॥

ಹೀಗೆ ದಾನ ಮಾಡಬೇಕು, ಹೀಗೆ ಯಾಗ ಮಾಡಬೇಕು, ಹೀಗೆ ಅಧ್ಯಯನ ಮಾಡಬೇಕು ಆದ್ದರಿಂದ ನಾನು ಹೀಗಿದ್ದೇನೆ ಎಂಬ ಅಹಂಕಾರದ ಮಾತುಗಳು

ಭಯಪ್ರದವಾದವು ಎಂದು ಹೇಳುತ್ತಾರೆ. ಆದ್ದರಿಂದ ವಿವೇಕಿಯಾದವನು ಅವುಗಳನ್ನು ಯಾವಾಗಲೂ ವರ್ಜಿಸಬೇಕು.

ಯೇ ಚಾಶ್ರಮಾನ್ ವೇದಯಂತೇ ಪುರಾಣಾಃ
ಮನೀಷಿಣೋ ಮನಸಾ ಸಂವಿಭಕ್ತಾನ್ ।
ತನ್ನಿಃಶ್ರೇಯಸ್ಯೈಜಸಂ ದೇಹಮೇತ್ಯ
ಪರಾಂ ಶಾಂತಿಂ ಪ್ರಾಪ್ನುಯುಃ ಪ್ರೇತ್ಯ ಚೇಹ ॥೨೭॥

ಯಾರು ಮರಣಕಾಲದಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಹೇಳಲ್ಪಟ್ಟ ಪ್ರಾಚೀನವಾದ ಆಶ್ರಮಧರ್ಮಗಳನ್ನು ವಿವೇಕಪೂರ್ವಕವಾಗಿ ಸ್ಮರಣೆ ಮಾಡುತ್ತಾರೋ ಅವರು ಮರಣಾನಂತರದಲ್ಲಿ ಶ್ರೇಷ್ಠವಾದ ತೇಜೋಮಯವಾದ ರೂಪವನ್ನು ಹೊಂದಿ ಹಿಂದೆ ಹೇಳಿದ ಸ್ವರ್ಗಾದಿ ಲೋಕಗಳಲ್ಲಿ ಶ್ರೇಷ್ಠವಾದ ಸುಖವನ್ನು ಪಡೆಯುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕೋನಾಶೀತಿತಮೋऽಧ್ಯಾಯಃ॥
॥ ಸಂಭವಪರ್ವಣಿ ಸಪ್ತವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಪ್ಪತ್ತೊಂಭತ್ತನೆಯ ಅಧ್ಯಾಯ ಮುಗಿಯಿತು

★★★★★

ಎಂಭತ್ತನೆಯ ಅಧ್ಯಾಯ

(ಅಷ್ಟಕಯಯಾತಿಸಂವಾದ, ಬ್ರಹ್ಮಚರ್ಯಾದಿ ಆಶ್ರಮಧರ್ಮಕಥನ.)

ಅಷ್ಟಕಃ

ಚರನ್ ಗೃಹಸ್ಥಃ ಕಥಮೇತಿ ದೇವಾನ್
ತಥಾ ಭಿಕ್ಷುಃ ಕಥಮಾಚಾರ್ಯಕರ್ಮಾ ।
ವಾನಪ್ರಸ್ಥಃ ಸತ್ಪಥೇ ಸನ್ನಿವಿಷ್ಟೋ
ಬಹೂನ್ಯಸ್ಮಿನ್ ಸಂಪ್ರತಿ ವೇದಯಂತಿ ॥೧॥

ಎಲೈ ಯಯಾತಿಯೇ, ಗೃಹಸ್ಥಧರ್ಮವನ್ನು ಆಚರಿಸುವವನು ಹೇಗೆ ದೇವತೆಗಳನ್ನು ಹೊಂದುತ್ತಾನೆ, ಹಾಗೆಯೇ ಸಂನ್ಯಾಸಿಯು ಮತ್ತು ಬ್ರಹ್ಮಚಾರಿಯು ಹೇಗೆ

ದೇವಲೋಕವನ್ನು ಹೊಂದುತ್ತಾರೆ. ಸನ್ಮಾರ್ಗದಲ್ಲಿರುವ ವಾನಪ್ರಸ್ಥನು ಹೇಗೆ ದೇವಲೋಕವನ್ನು ಹೊಂದುತ್ತಾನೆ. ಈ ನಾಲ್ಕು ಆಶ್ರಮಗಳಿಗೆ ಬಹಳ ಪುಣ್ಯಫಲಗಳನ್ನು ಹೇಳುತ್ತಾರಷ್ಟೇ.

ಯಯಾತಿಃ

ಆಹೂತಾಧ್ಯಾಯೀ ಗುರುಕರ್ಮಸ್ವಚೋದ್ಯಃ
ಪೂರ್ವೋತ್ಥಾಯೀ ಚರಮಂ ಚೋಪಶಾಯೀ ।
ಮೃದುರ್ದಾಂತೋ ಧೃತಿಮಾನಪ್ರಮತ್ತಃ
ಸ್ವಾಧ್ಯಾಯಶೀಲಃ ಸಿಧ್ಯತಿ ಬ್ರಹ್ಮಚಾರೀ ॥೨॥

ಗುರುಗಳು ಕರೆದಾಗ ಅಧ್ಯಯನಕ್ಕೆ ಬರುವುದು, ಹೇಳಿಸಿಕೊಳ್ಳದೇ ಗುರುಗಳ ಕೆಲಸವನ್ನು ಮಾಡುವುದು, ಗುರುಗಳಿಗಿಂತ ಮೊದಲು ಹಾಸಿಗೆಯಿಂದ ಏಳುವುದು, ಗುರುಗಳು ಮಲಗಿದ ನಂತರ ಮಲಗುವುದು, ಮೃದುವೂ, ಇಂದ್ರಿಯನಿಗ್ರಹವುಳ್ಳವನೂ, ಧೈರ್ಯವುಳ್ಳವನೂ, ಪ್ರಮಾದವುಳ್ಳವನೂ ಆಗಿರುವುದು ಮತ್ತು ಅಧ್ಯಯನಶೀಲನಾಗಿರುವುದು ಇವು ಬ್ರಹ್ಮಚಾರಿಯ ಮುಖ್ಯಧರ್ಮಗಳು. ಅಂತಹ ಬ್ರಹ್ಮಚಾರಿಯು ಸಿದ್ಧಿಯನ್ನು ಪಡೆಯುತ್ತಾನೆ.

ಧರ್ಮಾಗತಂ ಪ್ರಾಪ್ಯ ಧನಂ ಯಜೇತ
ದದ್ಯಾತ್ ಸದೈವಾಪ್ಯತಿಥೀನ್ ಭೋಜಯೇಚ್ಚ ।
ಅನಾದದಾನಶ್ಚ ಪರೈರದತ್ತಂ
ಸೈಷಾ ಗೃಹಸ್ಥೋಪನಿಷತ್ ಪುರಾಣೀ ॥೩॥

ಧರ್ಮದಿಂದ ಸಂಪಾದಿಸಿದ ಧನದಿಂದ ಯಾಗವನ್ನು ಮಾಡುವುದು, ದಾನವನ್ನು ಕೊಡುವುದು, ಯಾವಾಗಲೂ ಅತಿಥಿಗಳಿಗೆ ಭೋಜನವನ್ನು ಮಾಡಿಸುವುದು, ಇನ್ನೊಬ್ಬರು ಕೊಡದಿದ್ದುದನ್ನು ಸ್ವೀಕರಿಸದಿರುವುದು ಇವು ಪ್ರಾಚೀನ ಕಾಲದಿಂದಲೂ ರಹಸ್ಯವಾಗಿ ಬಂದಿರುವ ಗೃಹಸ್ಥಧರ್ಮಗಳು.

ಸ್ವವೀರ್ಯಜೀವೀ ವೃಜಿನಾನ್ನಿವೃತ್ತೋ
ದಾತಾ ಪರೇಷಾಂ ನ ಪರೋಪತಾಪೀ ।
ಮೃಗೈಃ ಸಚಾರೀ ವನಜಾನ್ನಭೋಜೀ
ತಾದೃಙ್ಮುನಿಃ ಸಿದ್ಧಿಮುಪೈತ್ಯರಣ್ಯೇ ॥೪॥

ತಾನೇ ಸಂಪಾದಿಸಿದ ಆಹಾರದಿಂದ ಜೀವಿಸುವುದು, ಪಾಪಕರ್ಮದಿಂದ ನಿವೃತ್ತನಾಗುವುದು, ಪರರಿಗೆ ದಾನಮಾಡುವುದು, ಪರರಿಗೆ ತಾಪವನ್ನು ಕೊಡದಿರುವುದು, ಮೃಗಗಳ ಜೊತೆಯಲ್ಲಿ ಸಂಚರಿಸುವುದು, ಕಾಡಿನಲ್ಲಿ ಸಿಕ್ಕಿದ ಆಹಾರವನ್ನು ಸೇವಿಸುವುದು, ಇವುಗಳನ್ನು ಮಾಡುವ ವಾನಪ್ರಸ್ಥನು ಅರಣ್ಯದಲ್ಲಿ ಸಿದ್ಧಿಯನ್ನು ಪಡೆಯುತ್ತಾನೆ.

ಅಶಿಲ್ಪಜೀವೀ ನ ಗೃಹಸ್ಥಶ್ಚ ನಿತ್ಯಂ
ಜಿತೇಂದ್ರಿಯಃ ಸರ್ವತೋ ವಿಪ್ರಮುಕ್ತಃ ।
ವನೌಕಸಾರೀ ಲಘುರಲ್ಪಚಾರಃ
ಚರನ್ ದೇಶಾನೇಕಚರಃ ಸ ಭಿಕ್ಷುಃ ॥೫॥

ವಿದ್ಯೆಯನ್ನು ಉಪಜೀವನಮಾಡದಿರುವುದು, ಒಂದೇ ಮನೆಯಲ್ಲಿ ಯಾವಾಗಲೂ ವಾಸಮಾಡದಿರುವುದು, ಜಿತೇಂದ್ರಿಯನಾಗಿರುವುದು, ಸರ್ವಥಾ ಅಸಂಗನಾಗಿರುವುದು, ಕಾಡಿನಲ್ಲಿ ವಾಸಿಸುವುದು, ಅಲ್ಪ ಪರಿಗ್ರಹವನ್ನು ಹೊಂದಿರುವುದು, ಅಲ್ಪಾಹಾರವನ್ನು ಸೇವಿಸುವುದು, ಒಬ್ಬನೇ ದೇಶಗಳನ್ನು ಸಂಚರಿಸುವುದು, ಇವು ಸನ್ಯಾಸಿಯ ಧರ್ಮಗಳು.

ರಾತ್ರ್ಯಾ ಯಯಾ ಚಾಭಿಜಾತಾಶ್ಚ ಲೋಕಾ
ಭವಂತಿ ಕಾಮಾ ವಿಜಿತಾಃ ಸುಖಾಶ್ಚ ।
ತಾಮೇವ ರಾತ್ರಿಂ ಪ್ರಯತೇತ ವಿದ್ವಾನ್
ಅರಣ್ಯಸಂಸ್ಥೋ ಭವಿತುಂ ಯತಾತ್ಮಾ ॥೬॥

ಯಾವರಾತ್ರಿಯಲ್ಲಿ ಲೋಕಗಳೂ, ಕಾಮವೂ ಮತ್ತು ಸುಖಗಳೂ ಜಿತವಾಗುತ್ತವೆಯೋ ಅದೇ ರಾತ್ರಿ ವಿವೇಕಿಯಾದವನು ವಿರಕ್ತನಾಗಿ ವನವಾಸವನ್ನು ಮಾಡಲು ಮನಸ್ಸಿನಲ್ಲಿ ನಿರ್ಧರಿಸಬೇಕು.

ದಶೈವ ಪೂರ್ವಾನಪರಾನ್ ದಶೈವ
ಜ್ಞಾತೀನ್ ಸಹಾತ್ಮಾನಮಥೈಕವಿಂಶಮ್ ।
ಅರಣ್ಯಶೀಲಃ ಸುಕೃತೇ ದಧಾತಿ
ವಿಮುಚ್ಯಾರಣ್ಯೇ ಸ್ವಶರೀರಧಾತೂನ್ ॥೭॥

ಅರಣ್ಯಶೀಲನಾದವನು ತನ್ನ ಹಿಂದಿನ ಹತ್ತು ಪೂರ್ವಜರನ್ನು, ತನ್ನ ಮುಂದಿನ ಹತ್ತು ಸಂತತಿಯನ್ನು ಮತ್ತು ತನ್ನನ್ನು ಸೇರಿ, ಇಪ್ಪತ್ತೊಂದು ಜನರನ್ನು ಅವನು ಅರಣ್ಯದಲ್ಲಿ ವಾಸಮಾಡಿ ಅಲ್ಲಿಯೇ ಶರೀರವನ್ನು ತ್ಯಾಗ ಮಾಡಿದ ಪಕ್ಷದಲ್ಲಿ ಪುಣ್ಯಭಾಗಿಗಳನ್ನಾಗಿ ಮಾಡುತ್ತಾನೆ.

ಅಷ್ಟಕಃ

ಕಥಂಸ್ವಿದ್ ವಸತೋಽರಣ್ಯಂ ಮೌನಾನಿ ಕತಿ ಚಾಪ್ಯುತ ।
ಭವಂತೀಹ ತದಾಚಕ್ಷ್ವ ಶ್ರೋತುಮಿಚ್ಛಾಮಹೇ ವಯಮ್ ॥೮॥

ಅರಣ್ಯವಾಸಮಾಡುವವನು ಹೇಗಿರಬೇಕು? ಅವನು ಮಾಡಬೇಕಾದ ಮೌನಗಳು ಯಾವುವು ಮತ್ತು ಎಷ್ಟು ವಿಧ? ಇದನ್ನು ಹೇಳಬೇಕು. ನಾವು ಕೇಳಲು ಬಯಸುತ್ತೇವೆ.

ಅರಣ್ಯೇ ವಸತೋ ಯಸ್ಯ ಗ್ರಾಮೋ ಭವತಿ ಪೃಷ್ಠತಃ ।
ಗ್ರಾಮೇ ಚಾವಸತೋಽರಣ್ಯಂ ಸ ಮುನಿಃ ಸ್ಯಾಜ್ಜನಾಧಿಪ ॥೯॥

ಅರಣ್ಯದಲ್ಲಿ ವಾಸಮಾಡುವ ಯಾವನಿಗೆ ಗ್ರಾಮವು ಹಿಂದೆ ಸರಿಯುತ್ತದೆಯೋ, ಗ್ರಾಮದಲ್ಲಿ ವಾಸಮಾಡುವ ಯಾವನಿಗೆ ಅರಣ್ಯವು ಹಿಂದೆ ಸರಿಯುತ್ತದೆಯೋ, ಎಲೈ ಜನಾಧಿಪನೇ, ಅವನೇ ಅರಣ್ಯವಾಸಿಯಾದ ಮುನಿ.

ಅಷ್ಟಕಃ

ಕಥಂಸ್ವಿದ್ ವಸತೋಽರಣ್ಯೇ ಗ್ರಾಮೋ ಭವತಿ ಪೃಷ್ಠತಃ ।
ಗ್ರಾಮೇ ಚಾವಸತೋಽರಣ್ಯಂ ಕಥಂ ಭವತಿ ಪೃಷ್ಠತಃ ॥೧೦॥

ಅರಣ್ಯದಲ್ಲಿ ವಾಸಮಾಡುವವನಿಗೆ ಗ್ರಾಮವು ಹೇಗೆ ಹಿಂದೆ ಸರಿಯುತ್ತದೆ, ಗ್ರಾಮದಲ್ಲಿ ವಾಸಮಾಡುವವನಿಗೆ ಅರಣ್ಯವು ಹೇಗೆ ಹಿಂದೆ ಸರಿಯುತ್ತದೆ?

ಯಯಾತಿಃ

ನ ಗ್ರಾಮ್ಯಾನುಪಯುಂಜೀತ ಯ ಆರಣ್ಯೋ ಮುನಿರ್ಭವೇತ್ ।
ತಥಾಽಸ್ಯ ವಸತೋಽರಣ್ಯೇ ಗ್ರಾಮೋ ಭವತಿ ಪೃಷ್ಠತಃ ॥೧೧॥

ಅರಣ್ಯದಲ್ಲಿ ವಾಸಿಸುವ ಮುನಿಯು ಗ್ರಾಮದ ಯಾವ ಪದಾರ್ಥಗಳನ್ನೂ ಉಪಯೋಗಿಸದಿದ್ದರೆ ಅವನಿಗೆ ಗ್ರಾಮವು ಹಿಂದೆ ಸರಿಯುತ್ತದೆ.

ಅನಗ್ನಿರನಿಕೇತಶ್ಚ ಅಗೋತ್ರಾವರಣೋ ಮುನಿಃ ।
ಕೌಪೀನಾಚ್ಛಾದನೀ ಚೀರೀ ಸರ್ವಸ್ವಾದುವಿವರ್ಜಿತಃ ॥೧೨॥

ಯಾವತ್ಪ್ರಾಣಾಭಿಸಂಧಾನಂ ತಾವದಿಚ್ಛೇಚ್ಚ ಭೋಜನಮ್ ।
ತಥಾऽಸ್ಯ ವಸತೋ ಗ್ರಾಮೇऽನರಣ್ಯಂ ಭವತಿ ಪೃಷ್ಠತಃ ॥೧೩॥

ಅಗ್ನಿಗಳನ್ನು ಉಪಸಂಹಾರ ಮಾಡಿ, ಅನಿಕೇತನಾಗಿ, ಗೋತ್ರೋಚ್ಚಾರ ಇಲ್ಲದೆ ಚೀರ ವಸ್ತ್ರವನ್ನುಟ್ಟು ಕೌಪೀನಾಚ್ಛಾದನೆಯನ್ನು ಹೊಂದಿ ಎಲ್ಲಾ ಮಧುರವಾದ ಪದಾರ್ಥಗಳನ್ನು ವರ್ಜಿಸಿ, ಬದುಕುವುದಕ್ಕೆ ಬೇಕಾಗುವಷ್ಟು ಆಹಾರವನ್ನು ಮಾತ್ರ ಯಾವನು ಸ್ವೀಕರಿಸುತ್ತಾನೋ, ಗ್ರಾಮದಲ್ಲಿ ವಾಸಿಸುವ ಅಂತಹವನಿಗೆ ಅರಣ್ಯವು ಹಿಂದೆ ಸರಿಯುತ್ತದೆ (ಅಂತಹ ಮುನಿಯು ಇದ್ದ ಗ್ರಾಮವೇ ಅರಣ್ಯವೆನಿಸುತ್ತದೆ).

ಯಸ್ತು ಕಾಮಾನ್ ಪರಿತ್ಯಜ್ಯ ತ್ಯಕ್ತ್ವಾ ಕರ್ಮ ಜಿತೇಂದ್ರಿಯಃ ।
ಆತಿಷ್ಠೇಚ್ಚ ಮುನಿರ್ಮೌನಂ ಸ ಲೋಕೇ ಸಿದ್ಧಿಮಾಪ್ನುಯಾತ್ ॥೧೪॥

ಯಾವನು ಕಾಮ್ಯಪದಾರ್ಥಗಳನ್ನು ತ್ಯಜಿಸಿ, ಜಿತೇಂದ್ರಿಯನಾಗಿ ಕಾಮ್ಯಕರ್ಮವನ್ನು ಬಿಟ್ಟು ಲೋಕದಲ್ಲಿ ಮೌನವನ್ನು ಆಚರಿಸುತ್ತಾನೆಯೋ ಅಂತಹವನು ಸಿದ್ಧಿಯನ್ನು ಪಡೆಯುತ್ತಾನೆ.

ಧೌತದಂತಂ ಕೃತ್ತನಖಂ ಸದಾ ಸ್ನಾತಮಲಂಕೃತಮ್ ।
ಅಸಿತಂ ಸಿತಕರ್ಮಸ್ಥಂ ಕಸ್ತಂ ನಾರ್ಚಿತುಮರ್ಹತಿ ॥೧೫॥

ದಂತಧಾವನೆಯನ್ನು ಮಾಡಿ ನಖಗಳನ್ನು ಕತ್ತರಿಸಿ, ಸ್ನಾನವನ್ನು ಮಾಡಿ ಸದಾ ಅಲಂಕೃತನಾಗಿದ್ದು, ಸಂಸಾರಕ್ಕೆ ಕಟ್ಟಿಹಾಕಿಕೊಳ್ಳದೇ ಪರಿಶುದ್ಧವಾದ ಕರ್ಮವನ್ನು ಮಾಡುವವನನ್ನು ಯಾವನು ತಾನೇ ಪೂಜಿಸುವುದಿಲ್ಲ?

ತಪಸಾ ಕರ್ಶಿತಃ ಕ್ಷಾಮಃ ಕ್ಷೀಣಮಾಂಸಾಸ್ಥಿಶೋಣಿತಃ ।
ಯದಾ ಭವತಿ ನಿರ್ದ್ವಂದ್ವೋ ಮುನಿರ್ಮೌನಂ ಸಮಾಸ್ಥಿತಃ ।
ಅಥ ಲೋಕಮಿಮಂ ಜಿತ್ವಾ ಲೋಕಂ ವಿಜಯತೇ ಪರಮ್ ॥೧೬॥

ತಪಸ್ಸಿನಿಂದ ದೇಹವನ್ನು ದಂಡಿಸಿ ಕೃಶನಾಗಿ, ಮಾಂಸಾಸ್ಥಿರಕ್ತಗಳನ್ನು ಕರಗಿಸಿ, ಮೌನವನ್ನು ಆಚರಿಸಿ, ಮುನಿಯು ಯಾವಾಗ ದ್ವಂದ್ವಾತೀತನಾಗುವನೋ, ಆಗ ಅವನು ಈ ಲೋಕವನ್ನೂ ಪರಲೋಕವನ್ನೂ ಜಯಿಸುತ್ತಾನೆ.

ಆಸ್ಯೇನ ತು ಯದಾऽಹಾರಂ ಗೋವನ್ನೃಗಯತೇ ಮುನಿಃ ।
ಅಥಾಸ್ಯ ಲೋಕಃ ಪೂರ್ವೋ ಯಃ ಸೋऽಮೃತತ್ವಾಯ ಕಲ್ಪತೇ ॥೧೭॥

ಮುನಿಯಾದವನು ಗೋವುಗಳಂತೆ ಆ ಸಮಯಕ್ಕೆ ಬೇಕಾಗುವಷ್ಟು ಆಹಾರವನ್ನು ಮಾತ್ರ ಸೇವಿಸುತ್ತಾನೋ (ಮರುದಿನಕ್ಕೆ ಸಂಚಯ ಮಾಡುವುದಿಲ್ಲವೋ) ಆಗ ಅವನಿಗೆ ಪೂರ್ವಲೋಕವು ಭಯರಹಿತವಾಗುತ್ತದೆ ಮತ್ತು ಅವನು ಮೋಕ್ಷವನ್ನು ಪಡೆಯುತ್ತಾನೆ.

ಸಾಮಾನ್ಯಧರ್ಮಃ ಸರ್ವೇಷಾಂ ಕ್ರೋಧೋ ಲೋಭೋ ದ್ರುಹಾऽಕ್ಷಮಾ।
ವಿಹಾಯ ಮತ್ಸರಂ ಸ್ತೈನ್ಯಂ ಗರ್ವಂ ಡಂಭಂ ಚ ಪೈಶುನಮ್ ।
ಕ್ರೋಧಂ ಲೋಭಂ ಮಮತ್ವಂ ಚ ಯಸ್ಯ ನಾಸ್ತಿ ಸ ಧರ್ಮವಿತ್ ॥೧೮॥

ಕ್ರೋಧ, ಲೋಭ, ದ್ರೋಹ, ಅಸಹನೆ, ಮಾತ್ಸರ್ಯ, ಕಳ್ಳತನ, ಅಹಂಕಾರ, ಡಂಭ, ಮತ್ತು ಚಾಡಿಹೇಳುವುದು ಇವುಗಳನ್ನು ಬಿಡುವುದು ಎಲ್ಲರಿಗೂ ಸಾಧಾರಣವಾದ ಧರ್ಮ. ಯಾರಿಗೆ ಕ್ರೋಧವೂ, ಲೋಭವೂ ಮತ್ತು ಅಹಂಕಾರವೂ ಇವೆಯೋ ಅವರು ಎಂದೂ ಧರ್ಮವನ್ನು ತಿಳಿದವರಲ್ಲ.

ಅಷ್ಟಕಃ

ನಿತ್ಯಾಧ್ಯಾಯೀ ಬ್ರಹ್ಮಚಾರೀ ಗೃಹಸ್ಥೋ ವನಗೋ ಮುನಿಃ ।
ನಾಧರ್ಮಮಶನಾತ್ ಪ್ರಾಪ್ಯೇತ್ ಕಥಂ ಬ್ರೂಹೀಹ ಪೃಚ್ಛತೇ ॥೧೯॥

ನಿತ್ಯಾಧ್ಯಾಯಿಯಾದ ಬ್ರಹ್ಮಚಾರಿಯು, ಗೃಹಸ್ಥನೂ, ವಾನಪ್ರಸ್ಥನೂ ಮತ್ತು ಭಿಕ್ಷುವೂ ಸಹಾ ಆಹಾರ ಸೇವನೆಯಿಂದ ಅಧರ್ಮವನ್ನು ಸಂಪಾದಿಸದಿರುವ ರೀತಿಯನ್ನು ನನಗೆ ತಿಳಿಸು.

ಯಯಾತಿಃ

ಅಷ್ಟೌ ಗ್ರಾಸಾ ಮುನೇಃ ಪ್ರೋಕ್ತಾಃ ಷೋಡಶಾರಣ್ಯವಾಸಿನಃ ।
ದ್ವಾತ್ರಿಂಶತ್ತು ಗೃಹಸ್ಥಸ್ಯ ಹ್ಯಮಿತಂ ಬ್ರಹ್ಮಚಾರಿಣಃ ।
ಇತ್ಯೇತತ್ ಕಾರಣಂ ಜ್ಞೇಯಮಷ್ಟಕೈತಚ್ಛುಭಾಶುಭಮ್ ॥೨೦॥

ಭಿಕ್ಷುವಿಗೆ ಎಂಟು ಗ್ರಾಸಗಳು ಎಂದು ಹೇಳಲ್ಪಡುತ್ತದೆ. ವಾನಪ್ರಸ್ಥನಿಗೆ ಹದಿನಾರು ಗ್ರಾಸಗಳು, ಗೃಹಸ್ಥನಿಗೆ ಮೂವತ್ತೆರಡು ತುತ್ತುಗಳು ಮತ್ತು ಬ್ರಹ್ಮಚಾರಿಗೆ

ಅಮಿತವಾದದ್ದು. ಹೀಗೆ ಆಹಾರವನ್ನು ಸೇವಿಸಿದರೆ, ಅವರಿಗೆ ಅಧರ್ಮವು ಉಂಟಾಗುವುದಿಲ್ಲ. ಎಲೈ ಅಷ್ಟಕನೇ, ನೀನು ಕೇಳಿದ ಶುಭಾಶುಭಗಳಿಗೆ ಇವು ಕಾರಣಗಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಅಶೀತಿತಮೋऽಧ್ಯಾಯಃ ॥
॥ ಸಂಭವಪರ್ವಣಿ ಅಷ್ಟಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಂಭತ್ತನೆಯ ಅಧ್ಯಾಯ ಮುಗಿಯಿತು

★★★★★

ಎಂಭತ್ತೊಂದನೆಯ ಅಧ್ಯಾಯ

(ಅಷ್ಟಕ ಮತ್ತು ಪ್ರತರ್ದನರ ಜೊತೆಯಲ್ಲಿ ಯಯಾತಿಯ ಸಂವಾದ, ಅವರು ಕೊಡಲಿಚ್ಛಿಸಿದ ಪುಣ್ಯಲೋಕಗಳ ನಿರಾಕರಣೆ.)

ಅಷ್ಟಕಃ

ಕತರಸ್ತೈತಯೋಃ ಪೂರ್ವಂ ದೇವನಾಮೇತಿ ಸಾತ್ಮ್ಯತಾಮ್ ।
ಉಭಯೋರ್ಧಾವತೋ ರಾಜನ್ ಸೂರ್ಯಾಚಂದ್ರಮಸೋರಿವ ॥೧॥

ಎಲೈ ರಾಜನೇ, ಸೂರ್ಯಚಂದ್ರರಂತೆ ಧರ್ಮಾಚರಣೆಯಲ್ಲಿ ಧಾವಿಸುವ ಗೃಹಸ್ಥರು ಮತ್ತು ಸಂನ್ಯಾಸಿಗಳಲ್ಲಿ ಯಾರು ಮೊದಲು ದೇವಲೋಕವನ್ನು ಪಡೆಯುತ್ತಾರೆ.

ಯಯಾತಿಃ

ಅನಿಕೇತೋ ಗೃಹಸ್ಥೇಷು ಕಾಮವೃತ್ತೇಷ್ವಸಂಗತಃ ।
ಗ್ರಾಮ ಏವ ವಸನ್ ಭಿಕ್ಷುಃ ತಯೋಃ ಪೂರ್ವತರಂ ಗತಃ ॥೨॥

ಮನೆಯಲ್ಲಿ ವಾಸಮಾಡದೆ ಗೃಹಸ್ಥರ ಕಾಮ್ಯಕರ್ಮಗಳಲ್ಲಿ ಆಸಕ್ತನಾಗದೇ ಗ್ರಾಮದಲ್ಲಿಯೇ ವಾಸಮಾಡಿದರೂ ಸಹ ಯತಿಯು ಮೊದಲು ದೇವಲೋಕವನ್ನು ಸೇರುತ್ತಾನೆ.

ಅಪ್ರಾಪ್ಯ ದೀರ್ಘಮಾಯುಸ್ತು ಯಃ ಪ್ರಾಪ್ತೋ ವಿಕೃತಿಂ ಚರೇತ್ ।
ತಪ್ಯೇತ ಯದಿ ತತ್ ಕೃತ್ವಾ ಚರೇತ್ ಸೋಽನ್ಯಸ್ತಪಸ್ತಥಾ ॥೩॥

ಯಾವನು ದೀರ್ಘಾಯುಷ್ಯವನ್ನು ಹೊಂದದೆ ಪಾಪವನ್ನು ಮಾಡಿ ಪಶ್ಚಾತ್ತಾಪ ಪಡುತ್ತಾನೋ ಅವನ ಇನ್ನೊಂದು ದೇಹದಲ್ಲಿ ಪ್ರಾಯಶ್ಚಿತ್ತ ರೂಪದ ಬೇರೆ ತಪಸ್ಸನ್ನು ಮಾಡಬೇಕು.

ಪಾಪಾನಾಂ ಕರ್ಮಣಾಂ ನಿತ್ಯಂ ಬಿಭೀಯಾದ್ ಯಸ್ತು ಮಾನವಃ ।
ಸುಖಮೇವಾಚರನ್ನಿತ್ಯಂ ಸೋಽತ್ಯಂತಂ ಸುಖಮಶ್ನುತೇ ॥೪॥

ಯಾವ ಮನುಷ್ಯನು ಯಾವಾಗಲೂ ಪಾಪಕರ್ಮಕ್ಕೆ ಹೆದರಿ ನಿತ್ಯವೂ ಶುಭವನ್ನೇ ಆಚರಿಸುತ್ತಾನೋ, ಅವನು ಬಹಳ ಸುಖವನ್ನು ಹೊಂದುತ್ತಾನೆ.

ಯದ್ವೈ ನೃಶಂಸಂ ತದಸತ್ಯಮಾಹು-
ರ್ಯತ್ ಸೇವತೇ ಧರ್ಮಮನರ್ಥಬುದ್ಧಿಃ ।
ಅಸ್ವೋಽಪ್ಯನೀಶಶ್ಚ ತಥೈವ ರಾಜನ್
ತದಾರ್ಜವಂ ಸ ಸಮಾಧಿಸ್ತದಾಢ್ಯಮ್ ॥೫॥

ನಿಷ್ಠುರವಾದ ವಚನಗಳನ್ನೇ ಅಸತ್ಯವೆಂದು ಕರೆಯುತ್ತಾರೆ. ಯಾವನು ಅಸತ್ಯದಲ್ಲಿ ಅನರ್ಥಬುದ್ಧಿಯುಳ್ಳವನಾಗಿ, ಸ್ವರ್ಗದ ಅಪೇಕ್ಷೆಯೂ ಇಲ್ಲದೆ ಧರ್ಮವನ್ನು ಸೇವಿಸುತ್ತಾನೋ ಹಾಗೆಯೇ ಧನವಿಲ್ಲದೆ ಯಾಗಾದಿಗಳನ್ನು ಮಾಡಲು ಶಕ್ತನಾಗದಿದ್ದರೂ ಧರ್ಮವನ್ನೇ ಆಚರಿಸುತ್ತಾನೋ ಅದನ್ನೇ ಆರ್ಜವ, ಸಮಾಧಿ ಮತ್ತು ಆಢ್ಯತೆ ಎಂದು ಕರೆಯುತ್ತಾರೆ.

ಅಷ್ಟಕಃ

ಕೇನಾಸಿ ದೂತಪ್ರಹಿತೋಽದ್ಯ ರಾಜನ್
ಯುವಾ ಸ್ರಗ್ವೀ ದರ್ಶನೀಯಃ ಸುವರ್ಚಾಃ ।
ಕುತ ಆಗತಃ ಕತರಸ್ಯಾಂ ದಿಶಿ ತ್ವಮ್
ಉತಾಹೋಸ್ವಿತ್ ಪಾರ್ಥಿವ ಸ್ಥಾನಮಸ್ತಿ ॥೬॥

ಎಲೈ ರಾಜನೇ, ಯುವಕನೂ, ಮಾಲೆಯನ್ನು ಧರಿಸಿದವನೂ ಸುಂದರನೂ ಆದ ಒಳ್ಳೆಯ ಕಾಂತಿಯುಳ್ಳ ನೀನು ಯಾರಿಂದ ಇಲ್ಲಿಗೆ ದೂತನಾಗಿ ಕಳುಹಿಸಲ್ಪಟ್ಟಿದ್ದೀಯೆ,

ನೀನು ಎಲ್ಲಿಂದ ಬರುತ್ತಿದ್ದೀಯೆ, ನಿನ್ನ ದಿಕ್ಕು ಯಾವುದು, ಅಥವಾ ಎಲ್ಲೆ ರಾಜನೇ, ನಿನಗೆ ಬೇರೇನಾದರೂ ಸ್ಥಾನವಿದೆಯೆ?

ಯಯಾತಿಃ

ಇಮಂ ಭೌಮಂ ನರಕಂ ಕ್ಷೀಣಪುಣ್ಯಃ
ಪ್ರವೇಷ್ಟುಮುರ್ವೀಂ ಗಗನಾದ್ ವಿಪ್ರಹೀಣಃ ।
ವಿದ್ಯಾ ಚೈವಮತಿಮಾನಾ ಚ ಬುದ್ಧಿಃ
ಮಮಾಭವತ್ ಕರ್ಮ ಲೋಕ್ಯಂ ಚ ಸರ್ವಮ್ ।
ಉಕ್ತ್ವಾಽಹಂ ವಃ ಪ್ರಪತಿಷ್ಯಾಮ್ಯನಂತರಂ
ತ್ವರಯಂತಿ ಮಾಂ ಬ್ರಾಹ್ಮಣಾ ಲೋಕಪಾಲಾಃ ॥೭॥

ಈ ಭೂಲೋಕರೂಪವಾದ ನರಕವನ್ನು ಪ್ರವೇಶಿಸಲು ಪುಣ್ಯವನ್ನು ಕಳೆದುಕೊಂಡ ನಾನು ಸ್ವರ್ಗದಿಂದ ಕೆಳಗೆ ಬೀಳುತ್ತಿದ್ದೇನೆ. ನನಗೆ ವಿದ್ಯೆ, ಅಸಾಧಾರಣವಾದ ಬುದ್ಧಿ, ಪಾಪಲೋಕಪ್ರಾಪ್ತಿಗೆ ಸಾಧನವಾದ ಕರ್ಮ, ಎಲ್ಲವೂ ಇದ್ದಿತು. ಇದನ್ನು ಹೇಳಿ ಅನಂತರ ನಾನು ಕೆಳಗೆ ಬೀಳುತ್ತೇನೆ. ಬ್ರಹ್ಮಜ್ಞಾನಿಗಳಾದ ಲೋಕಪಾಲಕರು ನನಗೆ ತ್ವರೆ ಮಾಡುತ್ತಿದ್ದಾರೆ.

ಸತಾಂ ಸಕಾಶೇ ತು ವೃತಃ ಪ್ರಪಾತಃ
ತೇ ಸಂಗತಾ ಗುಣವಂತಶ್ಚ ಸರ್ವೇ ।
ಶಕ್ರಾಚ್ಚ ಲಬ್ಧೋ ಹಿ ವರೋ ಮಯೈಷ
ಪತಿಷ್ಯತಾ ಭೂಮಿತಲೇ ನರೇಂದ್ರ ॥೮॥

ಸಜ್ಜನರ ಸನ್ನಿಧಿಯಲ್ಲಿ ಪ್ರಪಾತವನ್ನು ವರವಾಗಿ ಪಡೆದಿದ್ದೇನೆ. ಸಂಗತರಾದ ನೀವೆಲ್ಲರೂ ಗುಣವಂತರು. ಎಲ್ಲೆ ರಾಜನೇ, ಭೂಮಿಯಲ್ಲಿ ಬೀಳುವ ಸಮಯದಲ್ಲಿ ನಾನು ಇಂದ್ರನಿಂದ ಈ ವರವನ್ನು ಪಡೆದೆ.

ಅಷ್ಟಕಃ

ಪೃಚ್ಛಾಮಿ ತ್ವಾಂ ಪ್ರಪತಂತಂ ಪ್ರಪಾತಂ
ಯದಿ ಮೇ ಲೋಕಾ ಪಾರ್ಥಿವ ತತ್ರ ಸಂತಿ ।
ಯದ್ಯಂತರಿಕ್ಷೇ ಯದಿ ವಾ ದಿವಿ ಶ್ರಿತಾಃ
ಕ್ಷೇತ್ರಜ್ಞಂ ತ್ವಾಂ ತಸ್ಯ ಧರ್ಮಸ್ಯ ಮನ್ಯೇ ॥೯॥

ಕೆಳಗೆ ಬೀಳುತ್ತಿರುವ ನಿನ್ನನ್ನು ಕೇಳುತ್ತಿದ್ದೇನೆ. ನನಗೆ ಗಗನದಲ್ಲಾಗಲೀ, ಅಂತರಿಕ್ಷದಲ್ಲಾಗಲೀ, ಸ್ವರ್ಗಲೋಕದಲ್ಲಾಗಲೀ ಪುಣ್ಯಲೋಕಗಳು ಇದ್ದರೆ ನೀನು ಆ ಪುಣ್ಯಲೋಕಗಳ ಪ್ರಾಪ್ತಿಗೆ ಸಾಧನವಾದ ಧರ್ಮಕ್ಕೆ ಒಡೆಯನೆಂದು ಭಾವಿಸುತ್ತೇನೆ.

ಯಯಾತಿಃ

ಯಾವತ್ ಪೃಥಿವ್ಯಾಂ ವ್ರೀಹಿಯವಂ ಗವಾಶ್ವಂ
ಸಹಾರಣ್ಯೈಃ ಪಶುಭಿಃ ಪರ್ವತೈಶ್ಚ ।
ತಾವಂತೋ ಲೋಕಾಃ ದಿವಿ ಸಂಸ್ಥಿತಾಸ್ತೇ
ತಥಾ ವಿಜಾನೀಹಿ ನರೇಂದ್ರಸಿಂಹ ॥೧೦॥

ಎಲೈ ರಾಜಶ್ರೇಷ್ಠನೇ, ಭೂಮಿಯಲ್ಲಿ ಗೋಧಿ, ಭತ್ತಗಳ ಎಷ್ಟು ಕಾಳುಗಳು ಇವೆಯೋ, ಅರಣ್ಯ ಪಶುಗಳನ್ನು ಸೇರಿಸಿ ಮತ್ತು ಪರ್ವತಗಳನ್ನು ಸೇರಿಸಿ ಎಷ್ಟು ಗೋವುಗಳೂ, ಅಶ್ವಗಳೂ ಇವೆಯೋ ಅಷ್ಟು ಲೋಕಗಳು ಸ್ವರ್ಗಲೋಕದಲ್ಲಿ ನಿನಗಾಗಿ ಸಿದ್ಧವಾಗಿವೆ ಎಂದು ತಿಳಿ.

ಅಷ್ಟಕಃ

ತಾಂಸ್ತೇ ದದಾಮಿ ಮಾ ಪ್ರಪತ ಪ್ರಪಾತಂ
ಯೇ ಮೇ ಲೋಕಾ ದಿವಿ ರಾಜೇಂದ್ರ ಸಂತಿ ।
ಯದ್ಯಂತರಿಕ್ಷೇ ಯದಿ ವಾ ದಿವಿ ಶ್ರಿತಾಃ
ತಾನಾಕ್ರಮಸ್ವ ಕ್ಷಿಪ್ರಮಮಿತ್ರಸಾಹ ॥೧೧॥

ಎಲೈ ರಾಜೇಂದ್ರನೇ, ನನಗೆ ಸ್ವರ್ಗದಲ್ಲಿ ಯಾವ ಲೋಕಗಳು ಇವೆಯೋ, ಅವುಗಳನ್ನು ನಿನಗೆ ಕೊಡುತ್ತೇನೆ. ಕೆಳಗೆ ಬೀಳಬೇಡ. ಅಥವಾ ಅಂತರಿಕ್ಷದಲ್ಲಿ ಅಥವಾ ಸ್ವರ್ಗಲೋಕದಲ್ಲಿ ಎಲ್ಲಿ ನನ್ನ ಲೋಕಗಳು ಇದ್ದರೂ ನೀನು ಬೇಗ ಅಲ್ಲಿಗೆ ಹೋಗು.

ಯಯಾತಿಃ

ನಾಸ್ಮದ್ವಿಧಃ ಕ್ಷತ್ರಿಯವಂಶಜಾತಃ
ಪ್ರತಿಗ್ರಹೇ ವರ್ತತೇ ಕ್ಷತ್ರಮುಖ್ಯ ।
ಯಥಾ ಪ್ರದೇಯಂ ಸತತಂ ದ್ವಿಜೇಭ್ಯಃ
ತಥಾऽದದಂ ಪೂರ್ವಮಹಂ ದ್ವಿಜೇಭ್ಯಃ ॥೧೨॥

ಎಲೈ ಕ್ಷತ್ರಿಯಶ್ರೇಷ್ಠನೇ, ಕ್ಷತ್ರಿಯವಂಶದಲ್ಲಿ ಜನಿಸಿದ ನನ್ನಂತಹ ಯಾವನೂ ಪ್ರತಿಗ್ರಹವನ್ನು ಮಾಡುವುದಿಲ್ಲ. ಹೇಗೆ ದಾನ ಮಾಡಬೇಕೋ ಆ ರೀತಿಯಲ್ಲಿ ನಾನು ಹಿಂದೆ ಬ್ರಾಹ್ಮಣರಿಗೆ ಬೇಕಾದಷ್ಟು ದಾನವನ್ನು ಮಾಡಿದ್ದೇನೆ.

ನಾಬ್ರಾಹ್ಮಣಃ ಕೃಪಣಂ ಜಾತು ಜೀವೇದ್
ದದ್ಯಾನ್ನ ಯಾಚೇದಿತಿ ಕ್ಷತ್ರಧರ್ಮಃ ।
ಸೋಽಹಂ ಯಥಾ ಕೃತಪೂರ್ವಂ ಚರೇಯಂ
ವಿವಿತ್ಸಮಾನಃ ಕಿಮುತಾತ್ರ ಸಾಧು ॥೧೩॥

ಕ್ಷತ್ರಿಯನಾದವನು ಎಂದೂ ಕಾರ್ಪಣ್ಯದಿಂದ ಜೀವಿಸಬಾರದು. ಅವನು ದಾನವನ್ನು ಕೊಡಬೇಕು. ಯಾಚನೆಯನ್ನು ಮಾಡಬಾರದು. ಇದು ಕ್ಷತ್ರಿಯಧರ್ಮ. ನಾನು ಈಗ ಏನು ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಯೋಚಿಸುತ್ತಾ ಹಿಂದೆ ನಡೆದಂತೆಯೇ ನಡೆದುಕೊಳ್ಳುತ್ತೇನೆ.

ಪ್ರತರ್ದನಃ

ಪೃಚ್ಛಾಮಿ ತ್ವಾಂ ಕಾಶಿರಾಜೋಽಹಮಸ್ಮಿ
ಪ್ರತರ್ದನೋಽಹಂ ಯದಿ ಮೇ ಸಂತಿ ಲೋಕಾಃ ।
ಯದ್ಯಂತರಿಕ್ಷೇ ಯದಿ ವಾ ದಿವಿ ಶ್ರಿತಾಃ
ಕ್ಷೇತ್ರಜ್ಞಂ ತ್ವಾಂ ತಸ್ಯ ಧರ್ಮಸ್ಯ ಮನ್ಯೇ ॥೧೪॥

ಯಯಾತಿಯೇ, ನಾನು ಕಾಶಿರಾಜನಾದ ಪ್ರತರ್ದನ. ನಿನ್ನನ್ನು ಕೇಳುತ್ತಿದ್ದೇನೆ. ನನಗೆ ಅಂತರಿಕ್ಷದಲ್ಲಾಗಲೀ, ಸ್ವರ್ಗದಲ್ಲಾಗಲೀ, ಏನಾದರೂ ಲೋಕಗಳು ಇವೆಯೇ, ಇದ್ದರೆ, ಅವೆಲ್ಲಕ್ಕೂ ನೀನೇ ಒಡೆಯನೆಂದು ಭಾವಿಸುತ್ತೇನೆ.

ಯಯಾತಿಃ

ಸಂತ್ಯೇವ ಲೋಕಾ ಬಹವಸ್ತೇ ನರೇಂದ್ರ
ಏಕೈಕಶಃ ಸಪ್ತ ಸಪ್ತೈವ ತೇ ಚ ।
ಮಧುಚ್ಯುತಾ ಘೃತಪೃಕ್ತಾ ವಿಶೋಕಾಃ
ತೇ ತಾವಂತಸ್ತ್ವಾಂ ಪ್ರತಿಪಾಲಯಂತಿ ॥೧೫॥

ಎಲೈ ರಾಜನೇ, ನಿನಗೆ ಅಂತಹ ಅನೇಕ ಲೋಕಗಳಿವೆ. ಒಂದೊಂದೂ ಏಳು ಏಳರ ಗುಂಪಿನಲ್ಲಿವೆ. ಎಲ್ಲಾ ಲೋಕಗಳು ದುಃಖರಹಿತವಾದವುಗಳು. ಮಧುಘೃತಗಳಿಂದ ತುಂಬಿರುವಂತಹವು. ಆ ಲೋಕಗಳು ನಿನ್ನನ್ನು ನಿರೀಕ್ಷಿಸುತ್ತಿವೆ.

ಪ್ರತರ್ದನಃ

ತಾಂಸ್ತೇ ದದಾಮಿ ಮಾ ಪ್ರಪತ ಪ್ರಪಾತಂ
ಯೇ ಮೇ ಲೋಕಾಸ್ತವತೇ ವೈ ಭವಂತು ।
ಯದ್ಯಂತರಿಕ್ಷೇ ಯದಿ ವಾ ದಿವಿ ಸ್ಥಿತಾಃ
ತಾನಾಕ್ರಮಸ್ವ ಪ್ರದದಾಮ್ಯಹಂ ತೇ ॥೧೬॥

ಆ ಲೋಕಗಳನ್ನು ನಿನಗೆ ಕೊಡುತ್ತೇನೆ, ಕೆಳಗೆ ಬೀಳಬೇಡ. ನನಗೆ ಇರುವ ಲೋಕಗಳೆಲ್ಲವೂ ನಿನಗೇ ಆಗಲಿ. ಸ್ವರ್ಗದಲ್ಲಿರುವ ಅಥವಾ ಅಂತರಿಕ್ಷದಲ್ಲಿರುವ ನನ್ನ ಆ ಲೋಕಗಳನ್ನು ನೀನು ಆಕ್ರಮಿಸು. ನಾನು ಅವುಗಳನ್ನು ನಿನಗೆ ಕೊಡುತ್ತಿದ್ದೇನೆ.

ಯಯಾತಿಃ

ನ ತುಲ್ಯತೇಜಾಃ ಸುಕೃತಂ ಕಾಮಯೇತ
ಯೋಗಕ್ಷೇಮಂ ಪಾರ್ಥಿವ ಪಾರ್ಥಿವಃ ಸನ್ ।
ದೈವಾದೇಶಾದಾಪದಂ ಪ್ರಾಪ್ಯ ವಿದ್ವಾನ್
ಚರೇನ್ನೃಶಂಸಂ ನಹಿ ಜಾತು ರಾಜಾ ॥೧೭॥

ಎಲೈ ರಾಜನೇ, ಸಮಾನಪರಾಕ್ರಮವುಳ್ಳ ರಾಜನಾದವನು ಇನ್ನೊಬ್ಬನ ಪುಣ್ಯವನ್ನಾಗಲೀ, ಇನ್ನೊಬ್ಬನ ಯೋಗಕ್ಷೇಮವನ್ನಾಗಲೀ ಬಯಸಬಾರದು. ದೇವರ ಇಚ್ಛೆಯಂತೆ ಕಷ್ಟದಲ್ಲಿ ಸಿಲುಕಿದ್ದೇನೆಂದು ತಿಳಿದು ರಾಜನಾದವನು ಎಂದೂ ಕ್ರೂರಕರ್ಮವನ್ನು ಮಾಡಬಾರದು.

ಧರ್ಮ್ಯಂ ಮಾರ್ಗಂ ಚೇತಯಾಮೋ ಯಶಸ್ಯಂ
ಕುರ್ಯಾನ್ನೃಪೋ ಧರ್ಮಮವೇಕ್ಷಮಾಣಃ ।
ನ ಮದ್ವಿಧೋ ಧರ್ಮಬುದ್ಧಿಃ ಪ್ರಜಾನನ್
ಕುರ್ಯಾದೇವಂ ಕೃಪಣಂ ಮಾಂ ಯಥಾऽऽತ್ಥ ॥೧೮॥

ಎಲೈ ಕ್ಷತ್ರಿಯಶ್ರೇಷ್ಠನೇ, ಕ್ಷತ್ರಿಯವಂಶದಲ್ಲಿ ಜನಿಸಿದ ನನ್ನಂತಹ ಯಾವನೂ ಪ್ರತಿಗ್ರಹವನ್ನು ಮಾಡುವುದಿಲ್ಲ. ಹೇಗೆ ದಾನ ಮಾಡಬೇಕೋ ಆ ರೀತಿಯಲ್ಲಿ ನಾನು ಹಿಂದೆ ಬ್ರಾಹ್ಮಣರಿಗೆ ಬೇಕಾದಷ್ಟು ದಾನವನ್ನು ಮಾಡಿದ್ದೇನೆ.

ನಾಬ್ರಾಹ್ಮಣಃ ಕೃಪಣಂ ಜಾತು ಜೀವೇದ್
ದದ್ಯಾನ್ನ ಯಾಚೇದಿತಿ ಕ್ಷತ್ರಧರ್ಮಃ ।
ಸೋಽಹಂ ಯಥಾ ಕೃತಪೂರ್ವಂ ಚರೇಯಂ
ವಿವಿತ್ಸಮಾನಃ ಕಿಮುತಾತ್ರ ಸಾಧು ॥೧೩॥

ಕ್ಷತ್ರಿಯನಾದವನು ಎಂದೂ ಕಾರ್ಪಣ್ಯದಿಂದ ಜೀವಿಸಬಾರದು. ಅವನು ದಾನವನ್ನು ಕೊಡಬೇಕು. ಯಾಚನೆಯನ್ನು ಮಾಡಬಾರದು. ಇದು ಕ್ಷತ್ರಿಯಧರ್ಮ. ನಾನು ಈಗ ಏನು ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಯೋಚಿಸುತ್ತಾ ಹಿಂದೆ ನಡೆದಂತೆಯೇ ನಡೆದುಕೊಳ್ಳುತ್ತೇನೆ.

ಪ್ರತರ್ದನಃ

ಪೃಚ್ಛಾಮಿ ತ್ವಾಂ ಕಾಶಿರಾಜೋಽಹಮಸ್ಮಿ
ಪ್ರತರ್ದನೋಽಹಂ ಯದಿ ಮೇ ಸಂತಿ ಲೋಕಾಃ ।
ಯದ್ಯಂತರಿಕ್ಷೇ ಯದಿ ವಾ ದಿವಿ ಶ್ರಿತಾಃ
ಕ್ಷೇತ್ರಜ್ಞಂ ತ್ವಾಂ ತಸ್ಯ ಧರ್ಮಸ್ಯ ಮನ್ಯೇ ॥೧೪॥

ಯಯಾತಿಯೇ, ನಾನು ಕಾಶಿರಾಜನಾದ ಪ್ರತರ್ದನ. ನಿನ್ನನ್ನು ಕೇಳುತ್ತಿದ್ದೇನೆ. ನನಗೆ ಅಂತರಿಕ್ಷದಲ್ಲಾಗಲೀ, ಸ್ವರ್ಗದಲ್ಲಾಗಲೀ, ಏನಾದರೂ ಲೋಕಗಳು ಇವೆಯೇ, ಇದ್ದರೆ, ಅವೆಲ್ಲಕ್ಕೂ ನೀನೇ ಒಡೆಯನೆಂದು ಭಾವಿಸುತ್ತೇನೆ.

ಯಯಾತಿಃ

ಸಂತ್ಯೇವ ಲೋಕಾ ಬಹವಸ್ತೇ ನರೇಂದ್ರ
ಏಕೈಕಶಃ ಸಪ್ತ ಸಪ್ತೈವ ತೇ ಚ ।
ಮಧುಚ್ಯುತಾ ಘೃತಪೃಕ್ತಾ ವಿಶೋಕಾಃ
ತೇ ತಾವಂತಸ್ತ್ವಾಂ ಪ್ರತಿಪಾಲಯಂತಿ ॥೧೫॥

ಎಲೈ ರಾಜನೇ, ನಿನಗೆ ಅಂತಹ ಅನೇಕ ಲೋಕಗಳಿವೆ. ಒಂದೊಂದೂ ಏಳು ಏಳರ ಗುಂಪಿನಲ್ಲಿವೆ. ಎಲ್ಲಾ ಲೋಕಗಳು ದುಃಖರಹಿತವಾದವುಗಳು. ಮಧುಘೃತಗಳಿಂದ ತುಂಬಿರುವಂತಹವು. ಆ ಲೋಕಗಳು ನಿನ್ನನ್ನು ನಿರೀಕ್ಷಿಸುತ್ತಿವೆ.

ಪ್ರತರ್ದನಃ

ತಾಂಸ್ತೇ ದದಾಮಿ ಮಾ ಪ್ರಪತ ಪ್ರಪಾತಂ
ಯೇ ಮೇ ಲೋಕಾಸ್ತವತೇ ವೈ ಭವಂತು ।
ಯದ್ಯಂತರಿಕ್ಷೇ ಯದಿ ವಾ ದಿವಿ ಸ್ಥಿತಾಃ
ತಾನಾಕ್ರಮಸ್ವ ಪ್ರದದಾಮ್ಯಹಂ ತೇ ॥೧೬॥

ಆ ಲೋಕಗಳನ್ನು ನಿನಗೆ ಕೊಡುತ್ತೇನೆ, ಕೆಳಗೆ ಬೀಳಬೇಡ. ನನಗೆ ಇರುವ ಲೋಕಗಳೆಲ್ಲವೂ ನಿನಗೇ ಆಗಲಿ. ಸ್ವರ್ಗದಲ್ಲಿರುವ ಅಥವಾ ಅಂತರಿಕ್ಷದಲ್ಲಿರುವ ನನ್ನ ಆ ಲೋಕಗಳನ್ನು ನೀನು ಆಕ್ರಮಿಸು. ನಾನು ಅವುಗಳನ್ನು ನಿನಗೆ ಕೊಡುತ್ತಿದ್ದೇನೆ.

ಯಯಾತಿಃ

ನ ತುಲ್ಯತೇಜಾಃ ಸುಕೃತಂ ಕಾಮಯೇತ
ಯೋಗಕ್ಷೇಮಂ ಪಾರ್ಥಿವ ಪಾರ್ಥಿವಃ ಸನ್ ।
ದೈವಾದೇಶಾದಾಪದಂ ಪ್ರಾಪ್ಯ ವಿದ್ವಾನ್
ಚರೇನ್ನೃಶಂಸಂ ನಹಿ ಜಾತು ರಾಜಾ ॥೧೭॥

ಎಲೈ ರಾಜನೇ, ಸಮಾನಪರಾಕ್ರಮವುಳ್ಳ ರಾಜನಾದವನು ಇನ್ನೊಬ್ಬನ ಪುಣ್ಯವನ್ನಾಗಲೀ, ಇನ್ನೊಬ್ಬನ ಯೋಗಕ್ಷೇಮವನ್ನಾಗಲೀ ಬಯಸಬಾರದು. ದೇವರ ಇಚ್ಛೆಯಂತೆ ಕಷ್ಟದಲ್ಲಿ ಸಿಲುಕಿದ್ದೇನೆಂದು ತಿಳಿದು ರಾಜನಾದವನು ಎಂದೂ ಕ್ರೂರಕರ್ಮವನ್ನು ಮಾಡಬಾರದು.

ಧರ್ಮ್ಯಂ ಮಾರ್ಗಂ ಚೇತಯಾಮೋ ಯಶಸ್ಯಂ
ಕುರ್ಯಾನ್ನೃಪೋ ಧರ್ಮಮವೇಕ್ಷಮಾಣಃ ।
ನ ಮದ್ವಿಧೋ ಧರ್ಮಬುದ್ಧಿಃ ಪ್ರಜಾನನ್
ಕುರ್ಯಾದೇವಂ ಕೃಪಣಂ ಮಾಂ ಯಥಾऽऽತ್ಥ ॥೧೮॥

ಯಶಸ್ಕರವಾದ ಧರ್ಮಮಾರ್ಗ ಯಾವುದು ಎಂದು ವಿಚಾರ ಮಾಡುತ್ತಿದ್ದೇನೆ. ಧರ್ಮದ ದೃಷ್ಟಿಯುಳ್ಳ ನನ್ನಂತಹ ರಾಜನು ಧರ್ಮವನ್ನು ತಿಳಿದವನಾಗಿ ನೀನು ಹೇಳಿದಂತೆ ಕಾರ್ಪಣ್ಯದ ಕಾರ್ಯವನ್ನು ಮಾಡಬಾರದು.

ಕುರ್ಯಾದೇವಂ ನ ಕೃತಂ ಯದನ್ಯೈ-
ರ್ವಿವಿತ್ಸಮಾನಃ ಕಿಮುತಾತ್ರ ಸಾಧು ।
ಧರ್ಮಾಧರ್ಮೌ ಸುವಿನಿಶ್ಚಿತ್ಯ ಸಮ್ಯಕ್
ಕಾರ್ಯಾಕಾರ್ಯೇಷ್ವಪ್ರಮತ್ತಶ್ಚರೇದ್ ಯಃ ॥೧೯॥

ಏನು ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಯೋಚಿಸುತ್ತಿದ್ದೇನೆ. ಹಿಂದಿನ ಯಾವ ಕ್ಷತ್ರಿಯರೂ ಮಾಡದಿದ್ದ ಕಾರ್ಯವನ್ನು ನಾನು ಮಾಡುವುದಿಲ್ಲ. ಮನುಷ್ಯನು ಧರ್ಮಾಧರ್ಮಗಳನ್ನೂ, ಕಾರ್ಯಾಕಾರ್ಯಗಳನ್ನೂ ವಿಮರ್ಶೆ ಮಾಡಿ ಎಚ್ಚರಿಕೆಯಿಂದ ನಡೆಯಬೇಕು.

ಸ ವೈ ಧೀರಃ ಸತ್ಯಸಂಧಃ ಕೃತಾತ್ಮಾ
ರಾಜಾ ಭವೇಲ್ಲೋಕಪಾಲೋ ಮಹಿಮ್ನಾ ।
ಯದಾ ಭವೇತ್ ಸಂಶಯೋ ಧರ್ಮಕಾರ್ಯೇ
ಕಾಮಾರ್ಥೌ ವಾ ಯತ್ರ ವಿಂದಂತಿ ಸಮ್ಯಕ್ ।
ಕಾರ್ಯಂ ತತ್ರ ಪ್ರಥಮಂ ಧರ್ಮಕಾರ್ಯಂ
ಯನ್ನೋ ವಿರುದ್ಧ್ಯೇದರ್ಥಕಾಮೌ ಸ ಧರ್ಮಃ ॥೨೦॥

ಅಂತಹ ಧೀರನೂ, ಸತ್ಯಸಂಧನೂ, ಮನೋನಿಗ್ರಹವುಳ್ಳವನೂ ಆದವನೇ, ತನ್ನ ಸಾಮರ್ಥ್ಯದಿಂದ ಲೋಕಪತಿಯಾದ ರಾಜನಾಗುತ್ತಾನೆ. ಧರ್ಮ, ಅರ್ಥ ಮತ್ತು ಕಾಮ ಕಾರ್ಯಗಳಲ್ಲಿ ಯಾವುದನ್ನು ಮಾಡಬೇಕೆಂದು ಸಂಶಯವುಂಟಾದಾಗ ಮೊದಲು ಧರ್ಮವನ್ನೇ ಆಚರಿಸಬೇಕು. ಯಾವ ಕಾರ್ಯವು ಅರ್ಥ, ಕಾಮಗಳನ್ನು ಬಾಧಿಸು- ವುದಿಲ್ಲವೋ ಅದೇ ಧರ್ಮ.

ವೈಶಂಪಾಯನಃ

ಬ್ರುವಾಣಮೇವಂ ನೃಪತಿಂ ಯಯಾತಿಂ
ನೃಪೋತ್ತಮೋ ವಸುಮನಾಶ್ಚಾಬ್ರವೀತ್ ತಮ್ ॥೨೧॥

ಹೀಗೆ ಮಾತನಾಡುವ ಯಯಾತಿರಾಜನನ್ನು ಕುರಿತು, ರಾಜಶ್ರೇಷ್ಠನಾದ ವಸುಮನನು ಮಾತನಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಏಕಶೀತಿತಮೋऽಧ್ಯಾಯಃ ॥

॥ ಸಂಭವಪರ್ವಣಿ ಏಕೋನತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಂಭತ್ತೊಂದನೆಯ ಅಧ್ಯಾಯ ಮುಗಿಯಿತು

★★★★★

ಎಂಭತ್ತರಡನೆಯ ಅಧ್ಯಾಯ

(ವಸುಮನಾ ಮತ್ತು ಶಿಬಿಯೊಡನೆ ಯಯಾತಿಯ ಸಂವಾದ, ಅವರ ಪುಣ್ಯಲೋಕಗಳ ನಿರಾಕರಣೆ, ಪುನಃ ಅಷ್ಟಕನೊಡನೆ ಸಂವಾದ.)

ವಸುಮನಾಃ

ಪೃಚ್ಛಾಮಿ ತ್ವಾಂ ವಸುಮನೈಕ್ಷ್ವಾಕವೋऽಸ್ಮಿ
ಯದಿ ಸಂತಿ ಲೋಕಾ ದಿವಿ ಮೇ ನರೇಂದ್ರ ।
ಯದ್ಯಂತರಿಕ್ಷೇ ಪ್ರಥಿತಾ ಮಹಾತ್ಮನ್
ಕ್ಷೇತ್ರಜ್ಞಂ ತ್ವಾಂ ತಸ್ಯ ಧರ್ಮಸ್ಯ ಮನ್ಯೇ ॥೧॥

ಎಲೈ ರಾಜೇಂದ್ರನೇ, ನಾನು ಇಕ್ಷ್ವಾಕುವಂಶದ ವಸುಮನಸ್ ಎಂಬ ರಾಜ. ಎಲೈ ಮಹಾತ್ಮನೇ, ನನಗೇನಾದರೂ ಸ್ವರ್ಗಲೋಕದಲ್ಲಿ ಅಥವಾ ಅಂತರಿಕ್ಷಲೋಕದಲ್ಲಿ ಪ್ರಸಿದ್ಧವಾದ ಲೋಕಗಳು ಇವೆಯೇ ಎಂದು ನಿನ್ನನ್ನು ಕೇಳುತ್ತಿದ್ದೇನೆ. ಒಂದು ಪಕ್ಷ ಇದ್ದರೆ, ಆ ಲೋಕಗಳಿಗೆ ನೀನೇ ಒಡೆಯನೆಂದು ಭಾವಿಸುತ್ತೇನೆ.

ಯಯಾತಿಃ

ಯದಂತರಿಕ್ಷಂ ಪೃಥಿವೀಂ ದಿವಂ ಚ
ಯತ್ತೇಜಸಾ ತಪತೇ ಭಾನುಮಾಂಶ್ಚ ।
ಲೋಕಸ್ತಾವಂತೋ ದಿವಿ ಸಂಸ್ಥಿತಾ ವೈ
ತೇ ತಾವಂತಸ್ತ್ವಂ ಪ್ರತಿಪಾದಯಂತಿ ॥೨॥

ಅಂತರಿಕ್ಷಲೋಕವನ್ನು, ಪೃಥಿವೀಲೋಕವನ್ನು, ದೇವಲೋಕವನ್ನು ಸೂರ್ಯನು ತನ್ನ ಕಿರಣಗಳಿಂದ ಹೇಗೆ ಬೆಳಗುತ್ತಾನೋ, ಅಪ್ಪ ಲೋಕಗಳು ಸ್ವರ್ಗದಲ್ಲಿ ನಿನಗಿದ್ದು ನಿನ್ನನ್ನು ನಿರೀಕ್ಷಣೆ ಮಾಡುತ್ತಿವೆ.

ವಸುಮನಾಃ

ತಾಂಸ್ತೇ ದದಾಮಿ ಮಾ ಪ್ರಪತ ಪ್ರಪಾತಂ
ಯೇ ಮೇ ಲೋಕಾಸ್ತವ ತೇ ವೈ ಭವಂತು ।
ಕ್ರೀಣೇಷ್ವೈನಾಂಸ್ಯಣಕೇನಾಪಿ ಹಂತ
ಪ್ರತಿಗ್ರಹೋ ಯದಿ ರಾಜನ್ ನೈಷ ಇಷ್ಟಃ ॥೩॥

ಆ ಲೋಕಗಳನ್ನು ನಿನಗೆ ಕೊಡುತ್ತೇನೆ. ಕೆಳಗೆ ಬೀಳಬೇಡ. ನನಗಿರುವ ಲೋಕಗಳೆಲ್ಲವೂ ನಿನಗೇ ಆಗಲಿ. ಎಲೈ ರಾಜನೇ, ಪ್ರತಿಗ್ರಹವನ್ನು ಮಾಡುವುದು ನಿನಗೆ ಇಷ್ಟವಿಲ್ಲದಿದ್ದರೆ, ಆ ಲೋಕಗಳನ್ನು ಒಂದು ಹುಲ್ಲುಕಡ್ಡಿಯಿಂದಲಾದರೂ ಖರೀದಿ ಮಾಡು.

ಯಯಾತಿಃ

ನ ಮಿಥ್ಯಾಽಹಂ ವಿಕ್ರಯಂ ತೇ ವೃಣೋಮಿ
ಯಥಾ ಗೃಹೀತಂ ಶಿಶುಕೇ ಶಂಕಮಾನಃ ।
ಕುರ್ಯಾಂ ನ ಚೈವಾಕೃತಪೂರ್ವಮನ್ಯೈ-
ರ್ವಿತ್ತಸಮಾನಃ ಕಿಮುತಾತ್ರ ಸಾಧು ॥೪॥

ನಾನು ಮಿಥ್ಯಾವಿಕ್ರಯವನ್ನು ಬಯಸುವುದಿಲ್ಲ. ಅದು ಮಗುವಿಗೆ ಮಾಡಿದ ಮೋಸದಂತೆ ಆಗುತ್ತದೆ. ಏನು ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಯೋಚಿಸುತ್ತಿರುವ ನಾನು ಬೇರೆ ಯಾರೂ ಕ್ಷತ್ರಿಯರು ಮಾಡದಿದ್ದ ಕೆಲಸವನ್ನು ಮಾಡಲಾರೆ.

ವಸುಮನಾಃ

ತಾಂಸ್ತ್ವಂ ಲೋಕಾನ್ ಪ್ರತಿಪದ್ಯಸ್ವ ರಾಜನ್
ಮಯಾ ದತ್ತಾನ್ ಯದಿ ನೇಷ್ಟಃ ಕ್ರಯಸ್ತೇ ।
ನ ಚಾಪ್ಯಹಂ ತಾನ್ ಪ್ರತಿಪದ್ಯೇ ಚ ದತ್ತ್ವಾ
ಯತ್ರ ಗಂತಾ ತ್ವಮಪಹಾಯಾತ್ಮಲೋಕಮ್ ॥೫॥

ಎಲೈ ರಾಜನೇ, ನಿನಗೆ ಕ್ರಯವು ಇಷ್ಟವಾಗದಿದ್ದರೆ, ನೀನು ನನ್ನಿಂದ ದತ್ತವಾದ ಆ ಲೋಕಗಳನ್ನು ಪಡೆಯುವವನಾಗು. ನಿನ್ನ ಲೋಕವನ್ನು ಬಿಟ್ಟು ಆ ಲೋಕಗಳಿಗೆ ಹೋಗುವ ನಿನಗೆ ಒಮ್ಮೆ ದಾನ ಮಾಡಿದ ಮೇಲೆ, ನಾನು ಪುನಃ ಅವುಗಳನ್ನು ತೆಗೆದುಕೊಳ್ಳುವುದಿಲ್ಲ.

ಯಯಾತಿಃ

ಯದಾ ತ್ವಮಿಂದ್ರಪ್ರತಿಮಪ್ರಭಾವ -
ಸ್ತೇ ಚಾಪ್ಯನಂತಾ ನರದೇವ ಲೋಕಾಃ ।
ತಥಾऽನ್ಯಲೋಕೇ ನ ರಮೇऽನ್ಯದತ್ತೇ
ತಸ್ಮಾತ್ ಸದಾ ನಾಭಿನಂದಾಮಿ ದಾಯಮ್ ॥೬॥

ಎಲೈ ರಾಜನೇ ನೀನು ಇಂದ್ರನಿಗೆ ಸಮಾನವಾದ ಪ್ರಭಾವವುಳ್ಳವನಾಗಿದ್ದೀಯೆ. ನೀನು ಸಂಪಾದಿಸಿದ ಆ ಲೋಕಗಳು ಅನಂತವಾಗಿವೆ. ಆದರೂ, ಇನ್ನೊಬ್ಬರು ಸಂಪಾದಿಸಿಕೊಟ್ಟ ಬೇರೆ ಲೋಕದಲ್ಲಿ ನನಗೆ ಸಂತೋಷವಿಲ್ಲ. ಆದ್ದರಿಂದ ನಿನ್ನ ಭಾಗವನ್ನು ನಾನು ಬಯಸುವುದಿಲ್ಲ.

ಶಿಬಿಃ

ಅಹಂ ಶಿವಿರ್ಮಾ ಪ್ರಪತ ಪ್ರಪಾತಂ
ಪೃಚ್ಛಾಮಿ ತ್ವಾಂ ಮಮ ರಾಜೇಂದ್ರ ಲೋಕಾಃ ।
ಯದ್ಯಂತರಿಕ್ಷೇ ಯದಿ ವಾ ದಿವಿ ಶ್ರಿತಾಃ
ತಾನಾಕ್ರಮಸ್ಸಾಶು ಮಹೇಂದ್ರಕಲ್ಪ ॥೭॥

ಪೃಚ್ಛಾಮಿ ತ್ವಾಂ ಶಿವಿರೌಶೀನರೋऽಸ್ಮಿ
ಮಮ ಲೋಕಾ ಯೇ ಪಾರ್ಥಿವಸ್ತತ್ರ ಸಂತಿ ।
ಯದ್ಯಂತರಿಕ್ಷೇ ಯದಿ ವಾ ದಿವಿ ಶ್ರಿತಾಃ
ಕ್ಷೇತ್ರಜ್ಞಂ ತ್ವಾಂ ತಸ್ಯ ಧರ್ಮಸ್ಯ ಮನ್ಯೇ ॥೮॥

ರಾಜೇಂದ್ರನೇ, ನಾನು ಶಿಬಿ, ನೀನು ಕೆಳಗೆ ಬೀಳಬೇಡ. ಅಂತರಿಕ್ಷದಲ್ಲಿ ಅಥವಾ ಸ್ವರ್ಗದಲ್ಲಿ ನನಗೆ ಏನಾದರೂ ಲೋಕಗಳು ಆಶ್ರಿತವಾಗಿವೆಯೇ ಎಂದು ನಿನ್ನನ್ನು ಕೇಳುತ್ತಿದ್ದೇನೆ. ಇದ್ದ ಪಕ್ಷದಲ್ಲಿ ಮಹೇಂದ್ರಸದೃಶನಾದ ನೀನು ಅವುಗಳನ್ನು ಆಶ್ರಯಿಸು.

ನಾನು ಔಶೀನರನಾದ ಶಿಬಿ. ನಿನ್ನನ್ನು ಅದೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನನಗಿರುವ ಆ ಲೋಕಗಳಿಗೆಲ್ಲಾ ನೀನೇ ಒಡೆಯನೆಂದು ಭಾವಿಸುತ್ತೇನೆ.

ಯಯಾತಿಃ

ನೇಮಾನ್ ವಾಚಾ ಹೃದಯೇನ ವಾಪಿ
ಪರೀಪ್ಸಮಾನಸ್ತವ ಮನ್ಯೇ ನರೇಂದ್ರ ।
ತೇ ಚಾನಂತಾ ದಿವಿ ಲೋಕಾಃ ಶ್ರಿತಾಸ್ತೇ
ವಿದ್ಯುದ್ರೂಪಾಃ ಸ್ವನವಂತೋ ನರೇಂದ್ರ ॥೯॥

ಎಲೈ ನರೇಂದ್ರನೇ, ನಿನ್ನ ಮಾತುಗಳನ್ನು ಪರೀಕ್ಷಿಸುತ್ತಿರುವ ನಾನು ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಆ ಲೋಕಗಳನ್ನು ಸ್ವೀಕರಿಸುವುದಿಲ್ಲ. ನಿನಗಾದರೋ ಮಿಂಚಿನಿಂದ ಹೊಳೆಯುವ ಸುಘೋಷದಿಂದ ಕೂಡಿದ ಅಂತಹ ಲೋಕಗಳು ಸ್ವರ್ಗದಲ್ಲಿ ಅನಂತವಾಗಿವೆ.

ಶಿಬಿಃ

ತಾಂಸ್ತೇ ದದಾಮಿ ಮಾ ಪ್ರಪತ ಪ್ರಪಾತಂ
ಯೇ ಮೇ ಲೋಕಾ ದಿವಿ ರಾಜೇಂದ್ರ ಸಂತಿ ।
ಯದ್ಯಂತರಿಕ್ಷೇ ಯದಿ ವಾ ದಿವಿ ಶ್ರಿತಾಃ
ತಾನಾಕ್ರಮಸ್ವ ಪ್ರದದಾಮ್ಯಹಂ ತೇ ॥೧೦॥

ಅವುಗಳನ್ನು ನಿನಗೆ ಕೊಡುತ್ತೇನೆ, ಬೀಳಬೇಡ. ಅಂತರಿಕ್ಷದಲ್ಲಿ ಮತ್ತು ಸ್ವರ್ಗದಲ್ಲಿ ಇರುವ ನನ್ನ ಲೋಕಗಳನ್ನು ನೀನು ಆಕ್ರಮಿಸು. ನಾನು ನಿನಗೆ ಅದನ್ನು ಕೊಡುತ್ತಿದ್ದೇನೆ.

ಯಯಾತಿಃ

ಯಥಾ ತ್ವಮಿಂದ್ರಪ್ರತಿಮಪ್ರಭಾವಃ
ತೇ ಚಾಪ್ಯನಂತಾ ನರದೇವ ಲೋಕಾಃ ।
ತಥಾऽನ್ಯಲೋಕೇ ನ ರಮೇऽನ್ಯದತ್ತೇ
ತಸ್ಮಾಚ್ಛಿವೇ ನಾಭಿನಂದಾಮಿ ದಾಯಮ್ ॥೧೧॥

ಎಲೈ ರಾಜನೇ, ನೀನು ಇಂದ್ರನಿಗೆ ಸಮಾನವಾದ ಪ್ರಭಾವವುಳ್ಳವನಾಗಿರುವೆ. ಆ ಲೋಕಗಳು ಅನಂತವಾಗಿವೆ. ಆದರೂ, ಇನ್ನೊಬ್ಬರು ಸಂಪಾದಿಸಿಕೊಟ್ಟ ಬೇರೆ

ಲೋಕದಲ್ಲಿ ನನಗೆ ಸಂತೋಷವಿಲ್ಲ. ಆದ್ದರಿಂದ ಎಲೈ ಶಿಬಿಯೇ, ನಿನ್ನ ಭಾಗವನ್ನು ನಾನು ಅಂಗೀಕರಿಸುವುದಿಲ್ಲ.

ನ ಚೇದೇಕೈಕಶೋ ರಾಜಂಲ್ಲೋಕಾನ್ನಃ ಪ್ರತಿಗೃಹ್ಣಸಿ ।
ಸರ್ವೇ ಪ್ರದಾಯ ಭವತೇ ಗಂತಾರೋ ನರಕಂ ವಯಮ್ ॥೧೨॥

ಎಲೈ ರಾಜನೇ, ನಾವು ಒಬ್ಬೊಬ್ಬರು ಕೊಟ್ಟ ಲೋಕಗಳನ್ನು ನೀನು ತೆಗೆದುಕೊಳ್ಳದಿದ್ದರೆ, ಎಲ್ಲರೂ ಒಟ್ಟಿಗೆ ನಮ್ಮ ಲೋಕಗಳನ್ನು ಕೊಟ್ಟು ನಾವು ನರಕಕ್ಕೆ ಹೋಗುತ್ತೇವೆ.

ಯಯಾತಿಃ

ತದರ್ಹಾಯ ದದಧ್ವಂ ವೈ ಸತಃ ಸತ್ಯಾನೃಶಂಸ್ಯತಃ ।
ಅಹಂ ತು ನಾಭಿಗೃಹ್ಣಾಮಿ ಯತ್ ಕೃತಂ ನ ಮಯಾ ಪುರಾ ॥೧೩॥

ಸತ್ಯ ಮತ್ತು ಆನೃಶಂಸ್ಯವನ್ನು ಗಮನಿಸಿ, ಯೋಗ್ಯನಾದವನಿಗೆ ಅವುಗಳನ್ನು ಕೊಡಿ. ನಾನು ಹಿಂದೆ ಮಾಡದಿದ್ದುದರ ಫಲವಾದ ಆ ಲೋಕಗಳನ್ನು ನಾನು ಅಂಗೀಕರಿಸುವುದಿಲ್ಲ.

ಅಷ್ಟಕಃ

ಕಸ್ಯೈತೇ ಪ್ರತಿದೃಶ್ಯಂತೇ ರಥಾಃ ಯಯಾತಿಃ ಪಂಚ ಹಿರಣ್ಮಯಾಃ ।
ಉಚ್ಚೈಃ ಸಂತಃ ಪ್ರಕಾಶಂತೇ ಜ್ವಲಂತೋಽಗ್ನಿಶಿಖಾ ಇವ ॥೧೪॥

ಈ ಎತ್ತರವಾಗಿರುವ ಅಗ್ನಿಶಿಖೆಯಂತೆ ಹೊಳೆಯುವ ಹಿರಣ್ಮಯವಾದ ಐದು ರಥಗಳೂ ಕಾಣುತ್ತಿವೆಯಷ್ಟೇ. ಅವು ಯಾರಿಗೆ ಸೇರಿದವು?

ಯುಷ್ಮಾನೇತೇ ವಹಿಷ್ಯಂತಿ ರಥಾಃ ಪಂಚ ಹಿರಣ್ಮಯಾಃ ।
ಉಚ್ಚೈಃ ಸಂತಃ ಪ್ರಕಾಶಂತೇ ಜ್ವಲಂತೋಽಗ್ನಿಶಿಖಾ ಇವ ॥೧೫॥

ಈ ಹಿರಣ್ಮಯವಾದ ಐದು ರಥಗಳು ನಿಮ್ಮನ್ನೇ ಕರೆದುಕೊಂಡು ಹೋಗುತ್ತವೆ. ಆ ರಥಗಳು ಎತ್ತರವಾಗಿದ್ದು ಅಗ್ನಿಶಿಖೆಯಂತೆ ಪ್ರಕಾಶಿಸುತ್ತಿವೆ.

ವೈಶಂಪಾಯನಃ

ಅಶ್ವಮೇಧೇ ಮಹಾಯಜ್ಞೇ ಸ್ವಯಂಭುವಿಹಿತೇ ಪುರಾ ।
ಹಯಸ್ಯ ಯಾನಿ ಚಾಂಗಾನಿ ಹೂಯಂತ ಚ ಯಥಾಕ್ರಮಮ್ ॥೧೬॥

ಹೋತಾऽಧ್ವರ್ಯುಸ್ತಥೋದ್ಗಾತಾ ಬ್ರಹ್ಮಣಾ ಸಹ ಭಾರತ ।
ಅಗ್ನೌ ಪ್ರಾಸ್ಯಂತಿ ವಿಧಿವತ್ ಸಮಸ್ತಾಃ ಷೋಡಶರ್ತ್ವಿಜಃ ॥೧೭॥

ಧೂಮಗಂಧಂ ವಪಾಯಾಸ್ತು ಯೇ ಜಿಘ್ರಂತಿ ನರಾ ಭುವಿ ।
ವಿಮುಕ್ತಪಾಪಾಃ ಪೂತಾಸ್ತೇ ತತ್‌ಕ್ಷಣೇನಾಭವನ್ ನೃಪ ॥೧೮॥

ಮೊದಲು ಬ್ರಹ್ಮದೇವರು ಮಾಡಿದ ಅಶ್ವಮೇಧಯಾಗವನ್ನು ಈಗ ಅಷ್ಟಕ ರಾಜನು ಮಾಡುತ್ತಿರುವ ಸಂದರ್ಭದಲ್ಲಿ ಅಶ್ವದ ಬೇರೆ ಬೇರೆ ಅವಯವಗಳನ್ನು ಹೋತೃ, ಅಧ್ವರ್ಯು, ಉದ್ಗಾತೃ ಮತ್ತು ಬ್ರಹ್ಮ ಈ ನಾಲ್ಕು ಪ್ರಧಾನ ಋತ್ವಿಕ್ಕುಗಳು ಮತ್ತು ಎಲ್ಲಾ ಹದಿನಾರು ಋತ್ವಿಕ್ಕುಗಳು ಕ್ರಮಾನುಸಾರವಾಗಿ, ವಿಧಿಪೂರ್ವಕವಾಗಿ ಅಗ್ನಿಯಲ್ಲಿ ಹೋಮವನ್ನು ಮಾಡಿದರು. ಅಶ್ವದ ವಪೆಯ ಧೂಮಗಂಧವನ್ನು ಭೂಮಿಯಲ್ಲಿ ಯಾರು ಆಘ್ರಾಣಿಸುತ್ತಾರೋ, ಅಂತಹ ಮನುಷ್ಯರು ಆ ಕ್ಷಣದಲ್ಲಿಯೇ ಸಮಸ್ತ ಪಾಪಗಳಿಂದಲೂ ಮುಕ್ತರಾದರು. (ಈ ಶ್ಲೋಕಗಳಿಂದ ಅಷ್ಟಕನ ಅಶ್ವಮೇಧಯಾಗವು ಸಮಾಪ್ತಿಯನ್ನು ಹೊಂದಿತು ಎಂದು ತಿಳಿಸುತ್ತಿದ್ದಾರೆ)

ಏತಸ್ಮಿನ್ನಂತರೇ ಚೈವ ಮಾಧವೀ ತು ತಪೋಧನಾ ।
ಮೃಗಚರ್ಮಪರೀತಾಂಗೀ ಪರಿಣಾಮೇ ಮೃಗವ್ರತಾ ॥೧೯॥

ಮೃಗೈಃ ಸಹ ಚರಂತೀ ಸಾ ಮೃಗಾಹಾರವಿಚೇಷ್ಟಿತಾ ।
ಯಜ್ಞವಾಟಂ ಮೃಗಗಣೈಃ ಪ್ರವಿಶ್ಯ ಭೃಶವಿಸ್ಮಿತಾ ॥೨೦॥

ಈ ಮಧ್ಯದಲ್ಲಿ ತಪಸ್ವಿನಿಯಾದ ವಾರ್ಧಕ್ಯದಲ್ಲಿ ಮೃಗವ್ರತವನ್ನು ಧರಿಸಿದ್ದ ಮಾಧವಿಯು ಮೃಗಚರ್ಮವನ್ನು ಧರಿಸಿ ಮೃಗಾಹಾರ ಮತ್ತು ಚೇಷ್ಟೆಯುಳ್ಳವಳಾಗಿ ಮೃಗಗಳ ಜೊತೆಯಲ್ಲಿ ಯಜ್ಞಶಾಲೆಯನ್ನು ಪ್ರವೇಶಿಸಿ ಬಹಳ ವಿಸ್ಮಿತಳಾದಳು.

ಆಘ್ರಾಯಂತೀ ಧೂಮಗಂಧಂ ಮೃಗೈರೇವ ಚಚಾರ ಸಾ ।
ಯಜ್ಞವಾಟಮಟಂತೀ ಸಾ ಪುತ್ರಾಂಸ್ತಾನಪರಾಜಿತಾನ್ ।
ಪಶ್ಯಂತೀ ಯಜ್ಞಮಾಹಾತ್ಮ್ಯಂ ಮುದಂ ಲೇಭೇ ಚ ಮಾಧವೀ ॥೨೧॥

ಧೂಮಗಂಧವನ್ನು ಆಘ್ರಾಣಿಸುತ್ತಾ ಮೃಗಗಳ ಜೊತೆಯಲ್ಲಿ ಯಜ್ಞಶಾಲೆಯಲ್ಲಿ ತಿರುಗಾಡುತ್ತಿದ್ದ ಅವಳು ಅಪರಾಜಿತರಾದ ತನ್ನ ಪುತ್ರರನ್ನು ನೋಡಿ ಯಜ್ಞಮಹಾತ್ಮೆಯನ್ನು ತಿಳಿದು ಸಂತೋಷವನ್ನು ಹೊಂದಿದಳು.

ಅಸಂಸ್ಪೃಶ್ಯಂತಂ ವಸುಧಾಂ ಯಯಾತಿಂ ನಾಹುಷಂ ತದಾ ।
ದಿವಃ ಸಂಪ್ರಾಪ್ತಮಾಜ್ಞಾಯ ವವಂದೇ ಪಿತರಂ ತದಾ ।
ತತೋ ವಸುಮನಾಽಪೃಚ್ಛನ್ಮಾತರಂ ವೈ ತಪಸ್ವಿನೀಮ್ ॥೨೨॥

ಭೂಮಿಯನ್ನು ಸ್ಪರ್ಶಿಸದೇ ಆಕಾಶದಲ್ಲಿಯೇ ಇದ್ದ ತನ್ನ ತಂದೆಯನ್ನು ಕಂಡು ನಮಸ್ಕರಿಸಿದಳು. ಆಗ ವಸುಮನನು ತಪಸ್ವಿನಿಯಾದ ತನ್ನ ತಾಯಿಯನ್ನು ಕುರಿತು ಪ್ರಶ್ನೆ ಮಾಡಿದನು.

ವಸುಮನಾಃ

ಭವತ್ಯಾ ಯತ್ ಕೃತಮಿದಂ ವಂದನಂ ವರವರ್ಣಿನಿ ।
ಕೋಽಯಂ ದೇವೋಪಮೋ ರಾಜಾ ಯದಿ ಜಾನಾಸಿ ಮೇ ವದ ॥

ಎಲೌ ಶ್ರೇಷ್ಠಳಾದವಳೇ, ನೀನು ನಮಸ್ಕಾರ ಮಾಡಿದ ದೇವ ಸದೃಶನಾದ ರಾಜನು ಯಾರು ಎಂದು ತಿಳಿದಿದ್ದರೆ ನನಗೆ ತಿಳಿಸು.

ಮಾಧವೀ

ಶೃಣುಧ್ವಂ ಸಹಿತಾಃ ಪುತ್ರಾ ನಾಹುಷೋಽಯಂ ಪಿತಾ ಮಮ ।
ಯಯಾತಿರ್ಮಮ ಪುತ್ರಾಣಾಂ ಮಾತಾಮಹ ಇತಿ ಶ್ರುತಃ ॥೨೪॥

ಪೂರುಂ ಮೇ ಭ್ರಾತರಂ ರಾಜ್ಯೇ ಸಮಾವೇಶ್ಯ ದಿವಂ ಗತಃ ।
ಕೇನ ವಾ ಕಾರಣೇನೈವ ಇಹ ಪ್ರಾಪ್ತೋ ಮಹಾಯಶಾಃ ॥೨೫॥

ಎಲ್ಲಾ ಮಕ್ಕಳೂ ಒಟ್ಟಿಗೇ ಕೇಳಿ ಇವನು ನನ್ನ ತಂದೆ. ನಹುಷನ ಮಗನಾದ ಯಯಾತಿ. ನನ್ನ ಪುತ್ರರಾದ ನಿಮಗೆ ಮಾತಾಮಹನಾದವನು. ನನ್ನ ಸೋದರನಾದ ಪೂರುವನ್ನು ರಾಜ್ಯದಲ್ಲಿ ಕೂಡಿಸಿ ಸ್ವರ್ಗಸ್ಥನಾದನು. ಮಹಾಕೀರ್ತಿಯುಳ್ಳ ಅವನು ಯಾವ ಕಾರಣದಿಂದ ಇಲ್ಲಿಗೆ ಬಂದಿದ್ದಾನೋ ತಿಳಿಯದು.

ವೈಶಂಪಾಯನಃ

ತಸ್ಯಾಸ್ತದ್ವಚನಂ ಶ್ರುತ್ವಾ ಮಾ ಮಾ ಭ್ರಷ್ಟೇತಿ ಚಾಬ್ರವೀತ್ ।
ಸಾ ಪುತ್ರಸ್ಯ ವಚಃ ಶ್ರುತ್ವಾ ಸನ್ನಮಾವಿಷ್ಟಚೇತನಾ ।
ಮಾಧವೀ ಪಿತರಂ ಪ್ರಾಹ ದೌಹಿತ್ರಪರಿವಾರಿತಮ್ ॥೨೬॥

ಅವಳ ಮಾತನ್ನು ಕೇಳಿ ವಸುಮನನು ಬೀಳಬೇಡ, ಬೀಳಬೇಡ ಎಂದು ಹೇಳಿದನು. ಅವಳು ಮಗನ ವಿಷಾದಯುಕ್ತವಾದ ಮಾತನ್ನು ಕೇಳಿ ವಿಷಾದದಿಂದ ಕೂಡಿದ ಮನಸ್ಸುಳ್ಳವಳಾಗಿ ದೌಹಿತ್ರಪರಿವಾರಿತನಾದ ತಂದೆಯನ್ನು ಕುರಿತು ಹೇಳಿದಳು.

ತಪಸಾ ನಿರ್ಜಿತಾಂಲ್ಲೋಕಾನ್ ಪ್ರತಿಗೃಹ್ಣೀಷ್ವ ಮಾಮಕಾನ್ ।
ಪುತ್ರಾಣಾಮಪಿ ಪೌತ್ರಾಣಾಂ ಧರ್ಮಾದಧಿಗತಂ ಧನಮ್ ॥೨೭॥

ಸ್ವಾರ್ಥಮೇವ ವದಂತೀಹ ಋಷಯೋ ಧರ್ಮಪಾಲಕಾಃ ।
ತಸ್ಮಾದ್ ದಾನೇನ ತಪಸಾ ಅಸ್ಮಾಕಂ ದಿವಮಾವ್ರಜ ॥೨೮॥

ನಾನು ತಪಸ್ಸಿನಿಂದ ಜಯಿಸಿದ ನನ್ನ ಲೋಕಗಳನ್ನು ನೀನು ಸ್ವೀಕರಿಸು. ಮಕ್ಕಳು ಮತ್ತು ಮೊಮ್ಮಕ್ಕಳು ಧರ್ಮದಿಂದ ಗಳಿಸಿದ ಧನವನ್ನು ತನ್ನ ಧನವೆಂದೇ ಧರ್ಮಪಾಲರಾದ ಋಷಿಗಳು ಹೇಳುತ್ತಾರೆ. ಆದ್ದರಿಂದ ನಮ್ಮ ದಾನ ಮತ್ತು ತಪಸ್ಸುಗಳಿಂದ ನೀನು ಸ್ವರ್ಗಕ್ಕೆ ಹೋಗು.

ಯಯಾತಿಃ

ಯದಿ ಧರ್ಮಫಲಂ ಹ್ಯೇತಚ್ಛೋಭನಂ ಭವಿತಾ ತಥಾ ।
ದುಹಿತ್ರಾ ಚೈವ ದೌಹಿತ್ರೈಸ್ತಾರಿತೋಽಹಂ ಮಹಾತ್ಮಭಿಃ ॥೨೯॥

ಇದು ಧರ್ಮದ ಫಲವಾದರೇ ಒಳ್ಳೆಯದೇ ಆಯಿತು. ನಾನು ಮಹಾತ್ಮರಾದ ಮಗಳು ಮತ್ತು ಮೊಮ್ಮಕ್ಕಳಿಂದ ದುಃಖದಿಂದ ದಾಟಿಸಲ್ಪಟ್ಟಿದ್ದೇನೆ.

ತಸ್ಮಾತ್ ಪವಿತ್ರಂ ದೌಹಿತ್ರಮದ್ಯಪ್ರಭೃತಿ ಪೈತೃಕೇ ।
ಭವಿಷ್ಯತಿ ನ ಸಂದೇಹಃ ಪಿತೄಣಾಂ ಪ್ರೀತಿವರ್ಧನಮ್ ॥೩೦॥

ಆದ್ದರಿಂದ ಈ ದಿನದಿಂದ ಪ್ರಾರಂಭಿಸಿ ಪಿತೃಕರ್ಮವನ್ನು ಮಾಡುವಾಗ ದೌಹಿತ್ರನು ಪವಿತ್ರನಾಗುವನು ಎಂಬ ವಿಷಯದಲ್ಲಿ ಸಂಶಯವಿಲ್ಲ. ಅವನು ಪಿತೃಗಳ ಸಂತೋಷಕ್ಕೆ ಕಾರಣನಾಗುತ್ತಾನೆ.

ತ್ರೀಣಿ ಶ್ರಾದ್ಧೇ ಪವಿತ್ರಾಣಿ ದೌಹಿತ್ರಃ ಕುತಪಸ್ತಿಲಾಃ ।
ತ್ರೀಣಿ ಚಾತ್ರ ಪ್ರಶಂಸಂತಿ ಶೌಚಮಕ್ರೋಧಮತ್ವರಾಮ್ ॥೩೧॥

ದೌಹಿತ್ರ, ಕುತಪಕಾಲ ಮತ್ತು ತಿಲ, ಈ ಮೂರು ವಸ್ತುಗಳು ಶ್ರಾದ್ಧದಲ್ಲಿ ಪವಿತ್ರವಾದವು. ಶೌಚ, ಅಕ್ರೋಧ ಮತ್ತು ಅತ್ವರೆ ಈ ಮೂರನ್ನು ಶ್ರಾದ್ಧದಲ್ಲಿ ಪ್ರಶಂಸಿಸುತ್ತಾರೆ.

ಭೋಕ್ತಾರಃ ಪರಿವೇಷ್ಟಾರಃ ಶ್ರಾಪಿತಾರಃ ಪವಿತ್ರಕಾಃ ।
ದಿವಸಸ್ಯಾಷ್ಟಮೇ ಭಾಗೇ ಮಂದೀಭವತಿ ಭಾಸ್ಕರೇ ॥೩೨॥

ಸ ಕಾಲಃ ಕುತಪೋ ನಾಮ ಪಿತೃಣಾಂ ದತ್ತಮಕ್ಷಯಮ್ ।
ತಿಲಾಃ ಪಿಶಾಚಾದ್ ರಕ್ಷಂತಿ ದರ್ಭಾ ರಕ್ಷಂತಿ ರಾಕ್ಷಸಾತ್ ॥೩೩॥

ಶ್ರಾದ್ಧಭೋಕ್ತೃಗಳು, ಬಡಿಸುವವರು ಮತ್ತು ಅಡಿಗೆ ಮಾಡುವವರು ಎಲ್ಲರೂ ಪವಿತ್ರರಾಗಿರಬೇಕು. ದಿವಸದ ಕೊನೆಯ ಎಂಟನೇ ಒಂದು ಭಾಗವು ಸೂರ್ಯನು ಮಂದನಾಗುತ್ತಿರುವ ಸಮಯದಲ್ಲಿ ದೊರೆಯುತ್ತದೆ. ಅದಕ್ಕೆ ಕುತಪಕಾಲವೆಂದು ಹೆಸರು. ಆ ಸಮಯದಲ್ಲಿ ಪಿತೃಗಳಿಗೆ ಕೊಟ್ಟದ್ದು ಅಕ್ಷಯವಾಗುತ್ತದೆ. ತಿಲವು ಪಿಶಾಚಗಳಿಂದ ರಕ್ಷಣೆ ಮಾಡುತ್ತದೆ. ದರ್ಭೆಯು ರಾಕ್ಷಸರಿಂದ ನಮ್ಮನ್ನು ರಕ್ಷಿಸುತ್ತದೆ.

ರಕ್ಷಂತಿ ಶ್ರೋತ್ರಿಯಾಃ ಪಂಕ್ತಿಂ ಯತಿಭಿರ್ಭುಕ್ತಮಕ್ಷಯಮ್ ।
ಲಬ್ಧ್ವಾ ಪಾತ್ರಂ ತು ವಿದ್ವಾಂಸಂ ಶ್ರೋತ್ರಿಯಂ ಸುವ್ರತಂ ಶುಚಿಮ್ ।
ಸ ಕಾಲೇ ಕಾಲತೋ ದತ್ತಂ ನಾನ್ಯಥಾ ಕಾಲ ಇಷ್ಯತೇ ॥೩೪॥

ಶೋತ್ರಿಯರು ಪಂಕ್ತಿಯನ್ನು ರಕ್ಷಿಸುತ್ತಾರೆ. ಯತಿಗಳು ಭೋಜನಮಾಡಿದರೆ ಅಕ್ಷಯಫಲವು ದೊರೆಯುತ್ತದೆ. ಯಾವಾಗ ಶೋತ್ರಿಯನಾದ, ಒಳ್ಳೆಯ ವ್ರತವನ್ನು ಧರಿಸಿದ, ಪರಿಶುದ್ಧನಾದ ವಿದ್ವಾಂಸನೆಂಬ ಪಾತ್ರವು ದೊರೆಯುತ್ತದೆಯೋ, ಅದೇ ಮುಖ್ಯವಾದ ಕಾಲವೆಂದು ತಿಳಿಯಬೇಕು. ಬೇರೆ ರೀತಿಯಲ್ಲಿ ಕಾಲವನ್ನು ಎಣಿಸಬಾರದು.

ವೈಶಂಪಾಯನಃ

ಏವಮುಕ್ತ್ವಾ ಯಯಾತಿಸ್ತು ಪುನಃ ಪ್ರೋವಾಚ ಬುದ್ಧಿಮಾನ್ ।
ಸರ್ವೇ ಹ್ಯವಭೃಥಸ್ನಾತಾಸ್ತ್ವರಧ್ವಂ ಕಾರ್ಯಗೌರವಾತ್ ॥೩೫॥

ಹೀಗೆ ಹೇಳಿ ಮೇಧಾವಿಯಾದ ಆ ಯಯಾತಿಯು ಪುನಃ ಮಾತನಾಡಿದನು. ಎಲ್ಲರೂ ಅವಭೃಥ ಸ್ನಾನವನ್ನು ಮಾಡಿ, ಮುಂದಿನ ಕಾರ್ಯಕ್ಕಾಗಿ ತ್ವರೆ ಮಾಡಿರಿ.

ಅಷ್ಟಕಃ

ಆತಿಷ್ಠಸ್ವ ರಥಂ ರಾಜನ್ ವಿಕ್ರಮಸ್ವ ವಿಹಾಯಸಮ್ ।
ವಯಮಪ್ಯತ್ರ ಯಾಸ್ಯಾಮೋ ಯದಾ ಕಾಲೋ ಭವಿಷ್ಯತಿ ॥೩೬॥

ರಾಜನೇ, ರಥವನ್ನೇರಿ ನೀನು ಆಕಾಶಮಾರ್ಗದಲ್ಲಿ ಪ್ರಯಾಣ ಮಾಡು. ನಾವೂ ಸಹ, ಕಾಲ ಒದಗಿದಾಗ ಅಲ್ಲಿಗೆ ಬರುತ್ತೇವೆ.

ಯಯಾತಿಃ

ಸರ್ವೈರಿದಾನೀಂ ಗಂತವ್ಯಂ ಸಹ ಸ್ವರ್ಗಮಿತೋ ವಯಮ್ ।
ಏಷ ನೋ ವಿರಜಾಃ ಪಂಥಾ ದೃಶ್ಯತೇ ದೇವಸದ್ಮನಃ ॥೩೭॥

ನಾವೆಲ್ಲರೂ ಒಟ್ಟಿಗೆ ಈಗಲೇ ಇಲ್ಲಿಂದ ಸ್ವರ್ಗಕ್ಕೆ ಹೋಗಬೇಕು. ದೇವಮಂದಿರದ ನಿರ್ಮಲವಾದ ಮಾರ್ಗವು ಎದುರಿಗೆ ತೋರುತ್ತಿದೆ.

ವೈಶಂಪಾಯನಃ

ಅಷ್ಟಕಶ್ಚ ಶಿವಿಶ್ಚೈವ ಕಾಶಿರಾಜಃ ಪ್ರತರ್ದನಃ ।
ಐಕ್ಷ್ವಾಕವೋ ವಸುಮನಾಶ್ಚತ್ವಾರೋ ಭೂಮಿಪಾಶ್ಚ ಹ ।
ಸರ್ವೇ ಹ್ಯವಭೃಥಸ್ನಾತಾಃ ಸ್ವರ್ಗತಾಃ ಸಾಧವಃ ಸಹ ॥೩೮॥

ಅಷ್ಟಕನು, ಶಿಬಿಯು, ಕಾಶೀರಾಜನಾದ ಪ್ರತರ್ದನನು, ಇಕ್ಷ್ವಾಕುರಾಜನಾದ ವಸುಮನನು ಎಲ್ಲರೂ ಅವಭೃತಸ್ನಾತರಾಗಿ, ಸಜ್ಜನರಾದ ಅವರು ಯಯಾತಿಯ ಜೊತೆಯಲ್ಲಿ ಒಟ್ಟಿಗೆ ಸ್ವರ್ಗಕ್ಕೆ ಹೋದರು.

ತೇಽಧಿರುಹ್ಯ ರಥಾನ್ ಸರ್ವೇ ಪ್ರಯಾತಾ ನೃಪಸತ್ತಮಾಃ ।
ಆಕ್ರಾಮಂತೋ ದಿವಂ ಭಾಂತಿ ಧರ್ಮೇಣಾವೃತ್ಯ ರೋದಸೀ ॥೩೯॥

ಆ ಎಲ್ಲಾ ರಾಜಶ್ರೇಷ್ಠರೂ ರಥವನ್ನು ಏರಿ ಭೂಮಿ ಮತ್ತು ಅಂತರಿಕ್ಷವನ್ನು ಪ್ರದಕ್ಷಿಣೆ ಮಾಡಿ ಸ್ವರ್ಗಮಾರ್ಗದಲ್ಲಿ ಹೋಗುತ್ತಾ ಪ್ರಕಾಶಿಸಿದರು.

ಅಷ್ಟಕಃ

ಅಹಂ ಮನ್ಯೇ ಸ್ವರ್ಗತಾನಾಂ ವರಿಷ್ಠಃ
ಸಖಾ ಚೇಂದ್ರಃ ಸರ್ವಥಾ ವೈ ಮಹಾತ್ಮಾ ।
ಕಸ್ಮಾದೇಷ ಶಿವಿರೌಶೀನರೋಽಯ-
ಮೇಕೋಽತಿಗಃ ಸರ್ವಮಸ್ಮಾನ್ ವ್ಯಪೋಹ್ಯ ॥೪೦॥

ಸ್ವರ್ಗಕ್ಕೆ ಹೋದವರಿಗೆ ಮಹಾತ್ಮನಾದ ಮತ್ತು ಶ್ರೇಷ್ಠನಾದ ಇಂದ್ರನು ಎಲ್ಲರಿಗೂ ಸ್ನೇಹಿತನಾಗುತ್ತಾನೆ ಎಂದು ನಾನು ತಿಳಿದಿದ್ದೇನೆ. ಆದರೆ, ಈ ಔಶೀನರನಾದ ಶಿಬಿ ಮಾತ್ರ ನಮ್ಮೆಲ್ಲರನ್ನೂ ಹಿಂದೆ ಬಿಟ್ಟು ಏಕೆ ಒಬ್ಬನೇ ಮುಂದೆ ಹೋಗುತ್ತಿದ್ದಾನೆ?

ಯಯಾತಿಃ

ಅದದದ್ ಯಾಚಮಾನಾಯ ಯಾವದ್ವಿತ್ತಮವಿಂದತ ।
ಉಶೀನರಸ್ಯ ಪುತ್ರೋಽಯಂ ತಸ್ಮಾಚ್ಛ್ರೇಷ್ಠೋ ಹಿ ನಃ ಶಿವಿಃ ॥೪೧॥

ಉಶೀನರನ ಮಗನಾದ ಶಿಬಿಯು ರಾಜನಾಗಿದ್ದಾಗ ತನಗೆ ಎಷ್ಟು ವಿತ್ತವು ದೊರಕಿತೋ ಅವೆಲ್ಲವನ್ನೂ ಬೇಡುವವರಿಗೆ ದಾನ ಮಾಡಿದ್ದಾನೆ. ಆದ್ದರಿಂದ ಅವನು ನಮಗಿಂತಲೂ ಶ್ರೇಷ್ಠನಾಗಿದ್ದಾನೆ.

ದಾನಂ ತಪಃ ಸತ್ಯಮಥಾಽಪಿ ಧರ್ಮೋ
ಹ್ರೀಃ ಶ್ರೀಃ ಕ್ಷಮಾ ಸೌಮ್ಯಭಾವಸ್ತಿತಿಕ್ಷಾ ।
ರಾಜನ್ನೇತಾನ್ಯಪ್ರಮತ್ತಸ್ಯ ರಾಜ್ಞಃ
ಶಿವೇಃ ಸ್ಥಿತಾನ್ಯಾನೃಶಂಸ್ಯಂ ಚ ಬುದ್ಧ್ಯಾ ॥೪೨॥

ಏವಂವೃತ್ತೋ ಹ್ರೀನಿಷೇಧಶ್ಚ ಯಸ್ಮಾತ್
ತಸ್ಮಾಚ್ಛಿವಿರತ್ಯಗಾದ್ ವೈ ರಥೇನ ॥೪೩॥

ದಾನ, ತಪಸ್ಸು, ಸತ್ಯ , ಧರ್ಮ, ಲಜ್ಜೆ, ಸಂಪತ್ತು , ಕ್ಷಮೆ, ಸೌಮ್ಯತೆ, ತಿತಿಕ್ಷೆ, ಈ ಎಲ್ಲಾ ಗುಣಗಳೂ ಅಪ್ರಮತ್ತನಾದ ಶಿಬಿರಾಜನಲ್ಲಿ ನೆಲೆಸಿವೆ. ರಾಜನೇ, ಅವನ ಮನಸ್ಸಿನಲ್ಲಿ ಎಂದೂ ಕ್ರೌರ್ಯವಿಲ್ಲ. ಶಿಬಿಯು ಈ ಎಲ್ಲಾ ಗುಣಗಳಿಂದ ಕೂಡಿ ಲಜ್ಜೆಯ ಸ್ವಭಾವದವನಾದುದರಿಂದ ನಮ್ಮೆಲ್ಲರನ್ನೂ ಮೀರಿ ರಥದಲ್ಲಿ ಮುಂದೆ ಹೋಗುತ್ತಿದ್ದಾನೆ.

ವೈಶಂಪಾಯನಃ

ಅಥಾಷ್ಟಕಃ ಪುನರೇವಾನ್ವಪೃಚ್ಛ-
ನ್ಮಾತಾಮಹಂ ಕೌತುಕಾದಿಂದ್ರಕಲ್ಪಮ್ ॥೪೪॥

ಆಗ ಅಷ್ಟಕನು ಕುತೂಹಲದಿಂದ ಇಂದ್ರಕಲ್ಪನಾದ ತನ್ನ ಮಾತಾಮಹನನ್ನು ಪುನಃ ಕೇಳಿದನು.

ಪೃಚ್ಛಾಮಿ ತ್ವಾಂ ನೃಪತೇ ಬ್ರೂಹಿ ಸತ್ಯಂ
ಪಿತಾಸಿ ಕಸ್ಯಾಸಿ ಸುತಶ್ಚ ಕಸ್ಯ ।
ಕೃತಂ ತ್ವಯಾ ಯಚ್ಚ ನ ಯಸ್ಯ ಕರ್ತಾ
ಲೋಕೇ ತ್ವದನ್ಯಃ ಕ್ಷತ್ರಿಯೋ ಬ್ರಾಹ್ಮಣೋ ವಾ ॥೪೫॥

ಎಲೈ ರಾಜನೇ, ಸತ್ಯವನ್ನು ಹೇಳು, ನಾನು ನಿನ್ನನ್ನು ಕೇಳುತ್ತಿದ್ದೇನೆ. ನಿನ್ನ ತಂದೆ ಯಾರು? ನಿನ್ನ ಮಗನು ಯಾರು? ಇನ್ನೊಬ್ಬ ಕ್ಷತ್ರಿಯನಾಗಲೀ ಅಥವಾ ಬ್ರಾಹ್ಮಣನಾಗಲೀ ಮಾಡದಿದ್ದ ಯಾವ ಕಾರ್ಯವನ್ನು ನೀನು ಮಾಡಿದ್ದೀಯೆ.

ಯಯಾತಿಃ

ಯಯಾತಿರಸ್ಮಿ ನಹುಷಸ್ಯ ಪುತ್ರಃ
ಪೂರೋಃ ಪಿತಾ ಸಾರ್ವಭೌಮಸ್ತ್ವಹಾಸಮ್ ।
ಗುಹ್ಯಮರ್ಥಂ ಬ್ರಾಹ್ಮಣೇಭ್ಯೋ ಬ್ರವೀಮಿ
ಮಾತಾಮಹೋऽಹಂ ಭವತಾಂ ಪ್ರಕಾಶಮ್ ॥೪೬॥

ನಾನು ನಹುಷನ ಮಗನಾದ ಯಯಾತಿ. ಪೂರುವು ನನ್ನ ಪುತ್ರ. ನಾನು ಇಲ್ಲಿ ಸಾರ್ವಭೌಮನಾಗಿದ್ದೆ. ನಿಮ್ಮ ಮಾತಾಮಹನಾದ ನಾನು ರಹಸ್ಯವಾದ ವಿಷಯವನ್ನು ಬ್ರಾಹ್ಮಣರಿಗೆ ಗಟ್ಟಿಯಾಗಿ ಹೇಳುತ್ತಿದ್ದೇನೆ.

ಸರ್ವಾಮಿಮಾಂ ಪೃಥಿವೀಂ ನಿರ್ಜಿಗಾಯ
ಪ್ರಸ್ಥೇ ಬದ್ಧ್ವಾ ಹ್ಯದದಂ ಬ್ರಾಹ್ಮಣೇಭ್ಯಃ ।
ಮೇಧ್ಯಾನಶ್ವಾನೇಕಶತಾನ್ ಸುರೂಪಾನ್
ತದಾ ದೇವಾಃ ಶತಯಜ್ವೇತ್ಯವೋಚನ್ ॥೪೭॥

ನಾನು ಈ ಸಮಗ್ರವಾದ ಭೂಮಿಯನ್ನು ಗೆದ್ದೆ. ಬ್ರಾಹ್ಮಣರಿಗೆ ಕೊಳಗಗಳಲ್ಲಿ ತುಂಬಿ ಸುವರ್ಣಾದಿಗಳನ್ನು ದಾನ ಮಾಡಿದೆ. ಒಳ್ಳೆಯ ನೂರು ಅಶ್ವಗಳನ್ನು ಕಟ್ಟಿ ಅಶ್ವಮೇಧ ಯಾಗವನ್ನು ಮಾಡಿದೆ. ಆಗ ದೇವತೆಗಳು ನನ್ನನ್ನು 'ಶತಯಜ್ವ' ಎಂದು ಕರೆದರು.

ಅದಾಮಿಮಾಂ ಪೃಥಿವೀಂ ಬ್ರಾಹ್ಮಣೇಭ್ಯಃ
ಪೂರ್ಣಾಮಿಮಾಮಖಿಲೈರ್ವಾಹನೈಶ್ಚ ।
ಗೋಭಿಃ ಸುವರ್ಣೈಶ್ಚ ಧನೈಶ್ಚ ಮುಖ್ಯೈಃ
ತತ್ರಾಪಿ ನಾಗಾಯುತಮರ್ಬುದಾನಿ ॥೪೮॥

ಸಮಗ್ರವಾದ ಭೂಮಿಯನ್ನು ನಾನು ಬ್ರಾಹ್ಮಣರಿಗೆ ದಾನ ಮಾಡಿದೆ. ಎಲ್ಲಾ ವಾಹನಗಳಿಂದಲೂ, ಸುವರ್ಣದಿಂದಲೂ, ಮುಖ್ಯವಾದ ಧನದಿಂದಲೂ, ಗೋವುಗಳಿಂದಲೂ ಕೂಡಿದ ಭೂಮಿಯನ್ನು ದಾನ ಮಾಡಿದೆ. ಒಂದು ಅರ್ಬುದ ಗಜಗಳನ್ನು ದಾನಮಾಡಿದೆ.

ಸತ್ಯೇನ ವೈ ದ್ಯೌಶ್ಚ ವಸುಂಧರಾ ಚ
ತಥೈವಾಗ್ನಿರ್ಜ್ವಲತೇ ಮಾನುಷೇಷು ।
ನ ಮೇ ವೃಥಾ ವ್ಯಾಹೃತಮೇಕವಾಕ್ಯಂ
ಸತ್ಯಂ ಹಿ ಸಂತಃ ಪ್ರತಿಪೂಜಯಂತಿ ॥೪೯॥

ಭೂಮಿಯು, ಆಕಾಶವೂ ಸತ್ಯದಿಂದ ನಿಂತಿವೆ. ಮನುಷ್ಯ ಲೋಕದಲ್ಲಿ ಅಗ್ನಿಯು ಸತ್ಯದಿಂದ ಜ್ವಲಿಸುತ್ತಾನೆ. ನನ್ನ ಜೀವನದಲ್ಲಿ ವ್ಯರ್ಥವಾದ ಒಂದು ಮಾತನ್ನೂ ಆಡಿಲ್ಲ. ಸಜ್ಜನರು ಸತ್ಯವನ್ನು ಪೂಜಿಸುತ್ತಾರೆ.

ಸರ್ವೇ ಚ ದೇವಾ ಮುನಯಶ್ಚ ಸರ್ವೇ
ಸತ್ಯೇನ ಪೂಜ್ಯಾ ಇತಿಮೇ ಮನೋಗತಮ್ ॥೫೦॥

ಎಲ್ಲಾ ದೇವತೆಗಳು ಮತ್ತು ಋಷಿಗಳು, ಅವರ ಸತ್ಯದ ಸಲುವಾಗಿ ಪೂಜನೀಯರು ಎಂದು ನನ್ನ ಅಭಿಪ್ರಾಯ.

ಅಷ್ಟಕಃ

ಯೋ ನಃ ಸ್ವರ್ಗಜಿತಃ ಸರ್ವಾನ್ ಯಥಾವೃತ್ತಂ ನಿವೇದಯತ್ ।
ಅನಸೂಯುರ್ದ್ವಿಜಾಗ್ರ್ಯೇಭ್ಯಃ ಶ್ರುತ್ವಾ ಚೇಯಾತ್ ಸಲೋಕತಾಮ್ ॥

ಸ್ವರ್ಗವನ್ನು ಜಯಿಸಿದ ನಮ್ಮೆಲ್ಲರಿಗೂ ಯಥಾರ್ಥವಾಗಿ ವಿಷಯಗಳನ್ನು ತಿಳಿಸಿದ ಈ ಆಖ್ಯಾನವನ್ನು ಯಾವನು ಅಸೂಯೆಯಿಲ್ಲದೆ ಬ್ರಾಹ್ಮಣಶ್ರೇಷ್ಠರಿಗೆ ತಿಳಿಸುತ್ತಾನೆಯೋ ಅವನು ನಮ್ಮ ಸಲೋಕತೆಯನ್ನು ಹೊಂದುತ್ತಾನೆ.

ವೈಶಂಪಾಯನಃ

ಏವಂ ರಾಜಾ ಸ ಮಹಾತ್ಮಾ ಹ್ಯತೀವ
ಸ್ವೈರ್ದೌಹಿತ್ರೈಸ್ತಾರಿತೋಽಮಿತ್ರಸಾಹಃ ।
ತ್ಯಕ್ತ್ವಾ ಮಹೀಂ ಪರಮೋದಾರಕರ್ಮಾ
ಸ್ವರ್ಗಂ ಗತಃ ಕರ್ಮಭಿರ್ನಪ್ರಜೇತಃ ॥೫೨॥

ಹೀಗೆ ಶತ್ರುಗಳನ್ನು ಸಹಿಸಿದ ಆ ಮಹಾತ್ಮನಾದ ರಾಜನು, ತನ್ನ ದೌಹಿತ್ರರಿಂದ ಆಪತ್ತನ್ನು ದಾಟಿ ಪರಮೋದಾರಕರ್ಮನಾದ ಅವನು ಭೂಮಿಯನ್ನು ಬಿಟ್ಟು ತಾನು ಮಾಡಿದ ಸತ್ಕರ್ಮಗಳಿಂದ ದೌಹಿತ್ರರ ಜೊತೆಯಲ್ಲಿ ಸ್ವರ್ಗಕ್ಕೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ದ್ವ್ಯಶೀತಿತಮೋಽಧ್ಯಾಯಃ ॥
॥ ಸಂಭವಪರ್ವಣಿ ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಂಭತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ಎಂಭತ್ಮೂರನೆಯ ಅಧ್ಯಾಯ

(ಸಿಂಹಾವಲೋಕನ ನ್ಯಾಯದಿಂದ ಪುನಃ ಪೂರುವಂಶ ಕಥನ.)

ಜನಮೇಜಯಃ

ಪುತ್ರಂ ಯಯಾತೇಃ ಪ್ರಬ್ರೂಹಿ ಪೂರುಂ ಧರ್ಮಭೃತಾಂ ವರಮ್ ।
ಆನುಪೂರ್ವ್ಯೇಣ ಯೇ ಚಾನ್ಯೇ ಪೂರುವಂಶವಿವರ್ಧನಾಃ ॥೧॥

ಯಯಾತಿಯ ಮಗನಾದ ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಪೂರುವಿನ ವಂಶವಿವರ್ಧನರಾದ ರಾಜರುಗಳನ್ನು ಕ್ರಮವಾಗಿ ಹೇಳು.

ವಿಸ್ತರೇಣ ಪುನರ್ಬ್ರೂಹಿ ದೌಷ್ಷಂತೇರ್ಜನಮೇಜಯಾತ್ ।
ಸಂಬಭೂವ ಯಥಾ ರಾಜಾ ಭರತೋ ದ್ವಿಜಸತ್ತಮಃ ॥೨॥

ಎಲೈ ಬ್ರಾಹ್ಮಣಶ್ರೇಷ್ಠನೇ, ದುಷ್ಷಂತನ ಮಗನಾದ ಜನಮೇಜಯನ ನಂತರ ಭರತನು ಹೇಗೆ ರಾಜನಾದನು ಎಂಬ ಕಥೆಯನ್ನು ವಿಸ್ತಾರವಾಗಿ ಹೇಳು. (ಈ ಜನಮೇಜಯನು, ಪರೀಕ್ಷಿತನ ಪುತ್ರನಲ್ಲದ ಇನ್ನೊಬ್ಬ ಜನಮೇಜಯ)

ವೈಶಂಪಾಯನಃ

ಪೂರುರ್ನೃಪತಿಶಾರ್ದೂಲೋ ಯಥೈವಾಸ್ಯ ಪಿತಾ ನೃಪ ।
ಧರ್ಮನಿತ್ಯಃ ಸ್ಥಿತೋ ರಾಜ್ಯೇ ಶಕ್ರತುಲ್ಯಪರಾಕ್ರಮಃ ॥೩॥

ಎಲೈ ರಾಜನೇ, ನೃಪತಿಶಾರ್ದೂಲನಾದ ಪೂರುವು ಅವನ ತಂದೆಯಂತೆಯೇ ಶಕ್ರನಿಗೆ ಸಮಾನವುಳ್ಳ ಪರಾಕ್ರಮವುಳ್ಳವನಾಗಿ, ಧರ್ಮನಿತ್ಯನಾಗಿ, ರಾಜ್ಯವನ್ನಾಳಿದನು.

ಪ್ರವೀರಃ ಶತರುಜ್ಯೌ ಚ ತ್ರಯಃ ಪುತ್ರಾ ಮಹಾಬಲಾಃ ।
ಪೂರೋಃ ಪೌಷ್ಯಾಮಜಾಯಂತ ಪ್ರವೀರಸ್ತತ್ರ ವಂಶಭಾಕ್ ॥೪॥

ಪೂರುವಿಗೆ ಪೌಷ್ಯೆಯಲ್ಲಿ ಮಹಾಬಲರಾದ ಪ್ರವೀರ, ಶತ ಮತ್ತು ರುಜ್ಯ ಎಂಬ ಮೂರು ಮಕ್ಕಳು. ಅವರಲ್ಲಿ ಪ್ರವೀರನು ವಂಶಕರ್ತ.

ನಮಸ್ಯುರಭವತ್ ತಸ್ಮಾದ್ ಧುರಃ ಶೈಬ್ಯಾಸುತಸ್ತತಃ ।
ಪೃಥಿವ್ಯಾಂ ಸಾಗರಾಂತಾಯಾಂ ರಾಜಾ ರಾಜೀವಲೋಚನಃ ॥೫॥

ಆ ಪ್ರವೀರನಿಗೆ ಶೈಬ್ಯೆಯಲ್ಲಿ ನಮಸ್ಯು ಜನಿಸಿದನು. ರಾಜೀವಲೋಚನನಾದ ಅವನು ಸಾಗರಾಂತವಾದ ಪೃಥಿವಿಗೆ ರಾಜನಾಗಿದ್ದನು.

ಸುಭ್ರುಶ್ಚೋಭಯದೋ ವೀರಃ ಸೌವೀರತನಯಾಸ್ತ್ರಯಃ ।
ನಮಸ್ಯೋರಭವನ್ ಪುತ್ರಾಃ ಶೂರಾಃ ಸರ್ವೇ ಮಹಾರಥಾಃ ॥೬॥

ನಮಸ್ಯುವಿಗೆ ಸೌವೀರೆಯಲ್ಲಿ, ಸುಭ್ರು, ಉಭಯದ ಮತ್ತು ವೀರ ಎಂಬ ಶೂರರೂ, ಮಹಾರಥರೂ ಆದ ಮೂರು ಪುತ್ರರು ಜನಿಸಿದರು.

ಸುನ್ವಂತಂ ವಸುನಾಭಂ ಚ ಗರ್ಗರಮ್ಯೌ ಯಶಸ್ವಿನೌ ।
ಶೂರಾನುಭಯದೋ ರಾಜಾ ಜನಯಾಮಾಸ ವೀರ್ಯವಾನ್ ॥೭॥

ವೀರ್ಯಶಾಲಿಯಾದ ಉಭಯದನು, ಸುನ್ವಂತ, ವಸುನಾಭ, ಗರ್ಗ ಮತ್ತು ರಮ್ಯ ಎಂಬ ನಾಲ್ಕು ಮಕ್ಕಳನ್ನು ಪಡೆದನು.

ಯವೀಯಾನ್ ಸುನ್ವತಃ ಪುತ್ರೋ ರಥಂತರ್ಯಾಮಜಾಯತ ।
ಶೂರಶ್ಚ ದೃಢಧನ್ವಾ ಚ ವಪುಷ್ಮಾಂಶ್ಚ ನೃಪೋತ್ತಮಃ ॥೮॥

'ಯವೀಯಾನ್' ಎಂಬ ಸುನ್ವಂತನ ಪುತ್ರನು ರಥಂತರೆಯಲ್ಲಿ ಜನಿಸಿದನು. ಅವನು ಶೂರನೂ, ದೃಢಧನ್ವನೂ, ಒಳ್ಳೆಯ ದೇಹವನ್ನು ಹೊಂದಿದ್ದ ರಾಜನೂ ಆಗಿದ್ದನು.

ರುದ್ರಾಶ್ವಂ ಪೃಷದಶ್ವಂ ಚ ರಥದಶ್ವಂ ಗಯಂ ಮನುಮ್ ।
ಯವೀಯಾನ್ ಜನಯಾಮಾಸ ಗಂಧರ್ವಾನ್ ಭೀಮವಿಕ್ರಮಾನ್ ॥

ಯವೀಯಾನ್ ರಾಜನು ಭೀಮ ಪರಾಕ್ರಮಿಗಳಾದ 'ರುದ್ರಾಶ್ವ', 'ಪೃಷದಶ್ವ', 'ರಥದಶ್ವ', 'ಗಯ' ಮತ್ತು 'ಮನು' ಎಂಬ ಐದು ಗಂಧರ್ವರನ್ನು ಮಕ್ಕಳನ್ನಾಗಿ ಪಡೆದನು.

ರುದ್ರಾಶ್ವಸ್ಯ ಮಹಾಬಾಹೋರ್ದಶಾಪ್ಸರಸಿ ಸೂನವಃ ।
ಋತೇಯುರಥ ಕಕ್ಷೇಯುಃ ಕೃಪಣೇಯುಶ್ಚ ವೀರ್ಯವಾನ್ ॥೧೦॥

ಸ್ಥಂಡಿಲೇಯುರ್ಜಲೇಯುಶ್ಚ ಸ್ಥಲೇಯುಶ್ಚ ಮಹಾಬಲಃ ।
ತೇಜೋಯುರ್ಬಲವಾನ್ ವೀರಃ ರಥೇಯುಶ್ಚೇಂದ್ರವಿಕ್ರಮಃ ॥೧೧॥

ಧರ್ಮೇಯುಃ ಸಂತತೇಯುಶ್ಚ ದಶಮೋ ದೇವವಿಕ್ರಮಃ ।
ಅನಾಘೃಷ್ಯಾಃ ಸುತಾಸ್ತೇ ತು ರಾಜಸೂಯಾಶ್ವಮೇಧಿನಃ ॥೧೨॥

ಮಹಾಬಾಹುವಾದ ರುದ್ರಾಶ್ವನಿಗೆ ಅಪ್ಸರೆಯಲ್ಲಿ ಹತ್ತು ಮಕ್ಕಳು. ಅವರಿಗೆ ಋತೇಯು, ಕಕ್ಷೇಯು, ಕೃಪಣೇಯು, ಸ್ಥಂಡಿಲೇಯು, ಜಲೇಯು, ಸ್ಥಲೇಯು, ತೇಜೋಯು, ರಥೇಯು, ಧರ್ಮೇಯು, ಸಂತತೇಯು ಎಂದು ಹೆಸರು. ಅವರೆಲ್ಲರೂ ಅನಾಘೃಷ್ಯಾ ಎಂಬ ಅಪ್ಸರೆಯ ಮಕ್ಕಳು. ಎಲ್ಲರೂ ರಾಜಸೂಯ, ಅಶ್ವಮೇಧಗಳನ್ನು ಆಚರಿಸಿದವರು.

ಅಂತಿನಾರಸ್ತತೋ ರಾಜನ್ ವಿದ್ವಾಂಶ್ಚರ್ತೇಯುತೋಽಭವತ್ ।
ತ್ರಸ್ನುಂ ಮೋದ್ಯಂ ಪ್ರತಿರಥಂ ದ್ರುಮಂ ಚಾಪ್ರತಿಮಂ ಯುಧಿ ॥೧೩॥

ಏತಾನ್ ವೈ ಸುಷುವೇ ಸಾಧ್ವೀ ಹ್ಯಂತಿನಾರಾದ್ ಯಶಸ್ವಿನೀ ।
ತೇಷಾಂ ತ್ರಸ್ನುರ್ಮಹಾವೀರ್ಯಃ ಪೌರವಂ ವಂಶಮುದ್ವಹನ್ ॥೧೪॥

ಋತೇಯುವಿನಿಂದ ಅಂತಿನಾರನು ಜನಿಸಿದನು. ಅಂತಿನಾರನ ಪತ್ನಿಯಾದ ಯಶಸ್ವಿನಿಯು, ತ್ರಸ್ನು, ಮೋಧ್ಯ, ಪ್ರತಿರಥ, ದ್ರುಮ ಎಂಬ ಮಕ್ಕಳನ್ನು ಪಡೆದಳು. ಅವರಲ್ಲಿ ಮಹಾವೀರ್ಯನಾದ ತ್ರಸ್ನುವು ಪೌರವ ವಂಶಧಾರಕನು.

ಆಜಹಾರ ಯಶೋ ದೀಪ್ತಂ ಜಿಗಾಯೈನಾಂ ವಸುಂಧರಾಮ್ ।
ಇಲಿಲಂ ಸುಷುವೇ ತ್ರಸ್ನೋರ್ಯಮುನಾ ಚ ಯಶಸ್ವಿನೀ ॥೧೫॥

ಅವನು ದೀಪ್ತವಾದ ಯಶಸ್ಸನ್ನು ಸಂಪಾದಿಸಿ, ಸಮಗ್ರವಾದ ಭೂಮಿಯನ್ನು ಗೆದ್ದನು. ತ್ರಸ್ನುವಿನ ಪತ್ನಿಯಾದ ಯಮುನೆಯು ಇಲಿಲನನ್ನು ಪ್ರಸವಿಸಿದಳು.

ಸೋಽಪಿ ಕೃತ್ಸ್ನಾಮಿಮಾಂ ಭೂಮಿಂ ವಿಜಿಗ್ಯೇ ಜಯತಾಂ ವರಃ ।
ರಥಂತರ್ಯಾಮೃಷೀನ್ ಪಂಚ ಪಂಚಭೂತೋಪಮಾಂಸ್ತತಃ ॥೧೬॥

ಇಲಿಲೋ ಜನಯಾಮಾಸ ದುಷ್ಮಂತಪ್ರಮುಖಾಂಸ್ತಥಾ ।
ದುಷ್ಮಂತಮನಘಂ ಶೂರಂ ಪ್ರಶೂರಂ ಚಾಪಿ ಪಂಚಮಮ್ ॥೧೭॥

ಅವನೂ ಸಹ, ಜಯಶೀಲರಲ್ಲಿ ಶ್ರೇಷ್ಠನಾದವನಾಗಿ, ಸಮಗ್ರವಾದ ಭೂಮಿಯನ್ನು ಗೆದ್ದನು. ರಥಂತರೆಯಲ್ಲಿ ಇಲಿಲನು ಪಂಚಭೂತಗಳಂತೆ ಇರುವ ದುಷ್ಮಂತ ಮೊದಲಾದ ಐದು ಮಕ್ಕಳನ್ನು ಪಡೆದನು. ದುಷ್ಮಂತ, ಅನಘ, ಶೂರ, ಪ್ರಶೂರ, ಇವರಲ್ಲಿ ದುಷ್ಮಂತನು ಪ್ರಮುಖನಾದವನು.

ತೇಷಾಂ ಜ್ಯೇಷ್ಠೋ ಮಹಾರಾಜ ದುಷ್ಮಂತೋ ದುರ್ಜಯೋ ಯುಧಿ ।
ದುಷ್ಮಂತಾಲ್ಲಕ್ಷ್ಮಣಾಯಾಂ ತು ಜಜ್ಞೇ ವೈ ಜನಮೇಜಯಃ ॥೧೮॥

ಶಕುಂತಲಾಯಾಂ ಭರತೋ ದೌಷ್ಮಂತಿರಭವತ್ ಸುತಃ ।
ತಸ್ಮಾದ್ ಭರತವಂಶಸ್ಯ ವಿಪ್ರತಸ್ಥೇ ಮಹದ್ಯಶಃ ॥೧೯॥

ಎಲೈ ಮಹಾರಾಜನೇ, ಅವರಲ್ಲಿ ಜ್ಯೇಷ್ಠನಾದ ದುಷ್ಷಂತನು ಯುದ್ಧದಲ್ಲಿ ದುರ್ಜಯನಾಗಿದ್ದನು. ದುಷ್ಷಂತನಿಂದ ಲಕ್ಷ್ಣೆಯಲ್ಲಿ ಜನಮೇಜಯನು ಜನಿಸಿದನು. ಶಕುಂತಲೆಯಲ್ಲಿ ದುಷ್ಷಂತನಿಗೆ ಭರತನು ಜನಿಸಿದನು. ಭರತನಿಂದ ಭರತವಂಶದ ಕೀರ್ತಿಯು ವಿಸ್ತಾರವಾಗಿ ಹರಡಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ತ್ರ್ಯಶೀತಿತಮೋऽಧ್ಯಾಯಃ ॥
॥ ಸಂಭವಪರ್ವಣಿ ಏಕತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಂಭತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ಎಂಭತ್ನಾಲ್ಕನೆಯ ಅಧ್ಯಾಯ

(ದುಷ್ಷಂತನ ಸಾಮ್ರಾಜ್ಯದ ಸಂಕ್ಷೇಪವಾದ ವರ್ಣನೆ.)

ಜನಮೇಜಯಃ

ಭಗವನ್ ವಿಸ್ತರೇಣೇಹ ಭರತಸ್ಯ ಮಹಾತ್ಮನಃ ।
ಜನ್ಮ ಕರ್ಮ ಚ ಶುಶ್ರೂಷೋಸ್ತನ್ಮೇ ಶಂಸಿತುಮರ್ಹಸಿ ॥೧॥

ಪೂಜ್ಯರೇ, ಭರತವಂಶದಲ್ಲಿ ಹುಟ್ಟಿದ ಮಹಾತ್ಮನಾದ ದುಷ್ಷಂತನ ಜನ್ಮ ಕರ್ಮಗಳನ್ನು ವಿಸ್ತಾರವಾಗಿ ಕೇಳಬಯಸುವ ನನಗೆ ಅದನ್ನು ತಿಳಿಸಬೇಕು.

ವೈಶಂಪಾಯನಃ

ಪೌರವಾಣಾಂ ವಂಶಕರೋ ದುಷ್ಷಂತೋ ನಾಮ ವೀರ್ಯವಾನ್ ।
ಪೃಥಿವ್ಯಾಶ್ಚತುರಂತಾಯಾ ಗೋಪ್ತಾ ಭರತಸತ್ತಮ ॥೨॥

ಎಲೈ ಭರತಸತ್ತಮನೇ ಪೌರವ ವಂಶಧರನಾದ ದುಷ್ಷಂತನೆಂಬ ಪರಾಕ್ರಮಶಾಲಿಯು ನಾಲ್ಕು ತುದಿಗಳವರೆಗೂ ಇದ್ದ ಭೂಮಿಗೆ ರಕ್ಷಕನಾಗಿದ್ದನು.

ಚತುರ್ಭಾಗಂ ಭುವಃ ಕೃತ್ಸ್ನಂ ಯೋ ಭುಂಕ್ತೇ ಮನುಜೇಶ್ವರಃ ।
ಸಮುದ್ರವಸನಾಂಶ್ಚಾಪಿ ದೇಶಾನ್ ಸ ಸಮಿತಿಂಜಯಃ ॥೩॥

ಯುದ್ಧದಲ್ಲಿ ಜಯಶೀಲನಾದ ಆ ರಾಜನು ಸಮಗ್ರವಾದ ಚತುರ್ಭಾಗವುಳ್ಳ ಭೂಮಿಯನ್ನೂ, ಸಮುದ್ರದ ಸಮೀಪದಲ್ಲಿರುವ ದೇಶಗಳನ್ನೂ ಆಳಿದನು.

ಮ್ಲೇಚ್ಛಾನಾಟವಿಕಾಂಶ್ಚಾಪಿ ಯೋ ಭುಂಕ್ತೇ ರಿಪುಮರ್ದನಃ ।
ರತ್ನಾಕರಾನ್ ಸಮುದ್ರಾಂಶ್ಚ ಚಾತುರ್ವರ್ಣ್ಯಜನಾವೃತಾನ್ ॥೪॥

ಶತ್ರುಮರ್ದನನಾದ ಅವನು ಮ್ಲೇಚ್ಛದೇಶವನ್ನೂ, ಅಡವಿಗಳ ದೇಶಗಳನ್ನೂ, ಚಾತುರ್ವರ್ಣ್ಯ ಜನರಿಂದ ಕೂಡಿದ ರತ್ನಾಕರಗಳಾದ ಸಮುದ್ರ ತೀರಗಳನ್ನೂ ಆಳಿದನು.

ನ ವರ್ಣಸಂಕರಕರೋ ನಾಕೃಷ್ಟಕರಕೃಜ್ಜನಃ ।
ನ ಪಾಪಕೃತ್ ಕಶ್ಚಿದಾಸೀತ್ ತಸ್ಮಿನ್ ರಾಜನಿ ಶಾಸತಿ ॥೫॥

ಅವನು ರಾಜ್ಯವಾಳುತ್ತಿರುವಾಗ ವರ್ಣಸಂಕರವನ್ನು ಮಾಡುವವರು ಯಾರೂ ಇರಲಿಲ್ಲ. ವ್ಯವಸಾಯವನ್ನು ಮಾಡಿ ಧಾನ್ಯ ಪಡೆಯದಿದ್ದವರು ಕರವನ್ನು ಕೊಡಬೇಕಾದ ಪ್ರಸಂಗವಿರಲಿಲ್ಲ. ಯಾರೂ ಪಾಪವನ್ನು ಮಾಡುತ್ತಿರಲಿಲ್ಲ.

ಧರ್ಮ್ಯಾಂ ವೃತ್ತಿಂ ಸೇವಮಾನಾಃ ಕಾಮಾರ್ಥೌ ಚ ಪ್ರಪೇದಿರೇ ।
ತದಾ ನರಾ ನರವ್ಯಾಘ್ರ ತಸ್ಮಿನ್ ಜನಪದೇಶ್ವರೇ ॥೬॥

ಎಲೈ ರಾಜನೇ, ದುಷ್ಷಂತನು ರಾಜನಾಗಿರುವಾಗ ಪ್ರಜೆಗಳು ಧರ್ಮದ ವೃತ್ತಿಯನ್ನೇ ಅವಲಂಬಿಸಿದ್ದರೂ, ಅರ್ಥ, ಕಾಮಗಳನ್ನು ಪಡೆಯುತ್ತಿದ್ದರು.

ನಾಸೀಚ್ಚೋರಭಯಂ ತಾತ ನ ಕ್ಷುಧಾಭಯಮಣ್ವಪಿ ।
ನಾಸೀದ್ ವ್ಯಾಧಿಭಯಂ ಚಾಪಿ ತಸ್ಮಿನ್ ಜನಪದೇಶ್ವರೇ ॥೭॥

ಪ್ರಿಯನೇ, ಆ ರಾಜನು ಆಳುತ್ತಿರುವಾಗ ಚೋರಭಯವಿರಲಿಲ್ಲ. ಹಸಿವೆಯ ಭಯವು ಸ್ವಲ್ಪವೂ ಇರಲಿಲ್ಲ. ವ್ಯಾಧಿಯ ಭಯವೂ ಇರಲಿಲ್ಲ.

ಸ್ವೈರ್ಧರ್ಮ್ಯೈ ರೇಮಿರೇ ವರ್ಣಾ ದೈವೇ ಕರ್ಮಣಿ ನಿಷ್ಠಿತಾಃ ।
ತಮಾಶ್ರಿತ್ಯ ಮಹೀಪಾಲಮಾಸಂಶ್ಚೈವಾಕುತೋಭಯಾಃ ॥೮॥

ನಾಲ್ಕು ವರ್ಣದವರೂ ತಮ್ಮ ತಮ್ಮ ಧರ್ಮಗಳಿಗೆ ಅನುಸಾರವಾಗಿ ದೇವಕಾರ್ಯಗಳಲ್ಲಿ ನಿರತರಾಗಿದ್ದರು. ಆ ರಾಜನನ್ನು ಆಶ್ರಯಿಸಿ ಎಲ್ಲರೂ ನಿರ್ಭಯರಾಗಿದ್ದರು.

ಕಾಲವರ್ಷೀ ಚ ಪರ್ಜನ್ಯಃ ಸಸ್ಯಾನಿ ಫಲವಂತಿ ಚ ।
ಸರ್ವಸಸ್ಯಸಮೃದ್ಧಾ ಚ ಮಹೀ ಪಶುಮತೀ ತಥಾ ॥೯॥

ಪರ್ಜನ್ಯನು ಕಾಲಕ್ಕೆ ಸರಿಯಾಗಿ ಮಳೆಯನ್ನು ಕೊಡುತ್ತಿದ್ದನು, ಸಸ್ಯಗಳು ಫಲವನ್ನು ಕೊಡುತ್ತಿದ್ದವು, ಭೂಮಿಯು ಸಸ್ಯಸಮೃದ್ಧಿಯಿಂದಲೂ, ಪಶುಸಮೃದ್ಧಿಯಿಂದಲೂ ಕೂಡಿದ್ದಿತು.

ಸ ಚಾದ್ಭುತಮಹಾವೀರ್ಯೋ ವಜ್ರಸಂಹನನೋ ಯುವಾ ।
ಉದ್ಯಮ್ಯ ಮಂದರಂ ದೋರ್ಭ್ಯಾಂ ಹರೇತ್ ಸವನಕಾನನಮ್ ॥೧೦॥

ಯುವಕನೂ, ವಜ್ರಶರೀರನೂ, ಅದ್ಭುತ ಶಕ್ತಿಯುಳ್ಳವನೂ ಆದ ಅವನು ಬೇಕಾದರೆ ವನಕಾನನಗಳಿಂದ ಕೂಡಿದ ಮಂದರ ಪರ್ವತವನ್ನೂ ಕಿತ್ತು ತರಬಲ್ಲವನಾಗಿದ್ದನು.

ಧನುಷ್ಯಸ್ತ್ರೇ ಗದಾಯುದ್ಧೇ ಸರ್ವಪ್ರಹರಣೇಷು ಚ ।
ನಾಗಪೃಷ್ಠೇऽಶ್ವಪೃಷ್ಠೇ ಚ ಬಭೂವ ಪರಿನಿಷ್ಠಿತಃ ॥೧೧॥

ಧನುರ್ಯುದ್ಧದಲ್ಲಿ, ಅಸ್ತ್ರಯುದ್ಧದಲ್ಲಿ, ಗದಾಯುದ್ಧದಲ್ಲಿ, ಗಜಯುದ್ಧದಲ್ಲಿಮತ್ತು ಅಶ್ವಯುದ್ಧದಲ್ಲಿ ಅವನು ಪರಿಣತನಾಗಿದ್ದನು.

ಬಲೇ ವಿಷ್ಣುಸಮಶ್ಚಾಸೀತ್ ತೇಜಸಾ ಭಾಸ್ಕರೋಪಮಃ ।
ಅಕ್ಷೋಭ್ಯತ್ವೇऽರ್ಣವಸಮಃ ಸಹಿಷ್ಣುತ್ವೇ ಧರಾಸಮಃ ॥೧೨॥

ಅವನು ಬಲದಲ್ಲಿ ವಿಷ್ಣುವಿಗೆ ಸದೃಶನಾಗಿದ್ದನು, ತೇಜಸ್ಸಿನಲ್ಲಿ ಸೂರ್ಯನಿಗೆ ಸದೃಶನಾಗಿದ್ದನು, ಸಮುದ್ರದಂತೆ ಅಕ್ಷೋಭ್ಯನಾಗಿದ್ದನು, ಸಹನೆಯಲ್ಲಿ ಭೂಮಿಗೆ ಸಮನಾಗಿದ್ದನು.

ಸಮಂತಾತ್ ಸ ಮಹೀಪಾಲಃ ಪ್ರಸನ್ನಪುರರಾಷ್ಟ್ರವಾನ್ ।
ಭೂಯೋ ಧರ್ಮಪರೈರ್ಭಾವೈರ್ವಿಹಿತಂ ಜನಮಾವಸತ್ ॥೧೩॥

ಆ ರಾಜನು, ಪ್ರಸನ್ನರಾದ ಜನರಿಂದ ತುಂಬಿದ ಪುರ ಮತ್ತು ರಾಷ್ಟ್ರವುಳ್ಳವನಾಗಿದ್ದನು. ಎಲ್ಲಾ ಕಡೆಯಲ್ಲಿಯೂ ಮತ್ತೆ ಮತ್ತೆ ಧರ್ಮಪರವಾದ ಅಭಿಪ್ರಾಯವನ್ನು ಹೊಂದಿದ್ದ ಜನರಿಂದ ತುಂಬಿದ ದೇಶವನ್ನು ಆಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಚತುರಶೀತಿತಮೋऽಧ್ಯಾಯಃ ॥

॥ ಸಂಭವಪರ್ವಣಿ ದ್ವಾತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಂಭತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಎಂಭತ್ತೈದನೆಯ ಅಧ್ಯಾಯ

(ದುಷ್ಷಂತನ ಬೇಟೆ, ಅರಣ್ಯ ಪ್ರವೇಶ ಮತ್ತು ಮೃಗಗಳ ವಧೆ.)

ವೈಶಂಪಾಯನಃ

ಸ ಕದಾಚಿನ್ಮಹಾಬಾಹುಃ ಪ್ರಭೂತಬಲವಾಹನಃ ।
ವನಂ ಜಗಾಮ ಗಹನಂ ಹಯನಾಗಶತೈರ್ವೃತಃ ॥೧॥

ಆ ಮಹಾಬಾಹುವಾದ ದುಷ್ಷಂತನು ಒಮ್ಮೆ ಬಹಳ ಸೈನ್ಯ ಮತ್ತು ವಾಹನಗಳನ್ನು ತೆಗೆದುಕೊಂಡು ನೂರಾರು ಕುದುರೆಗಳು ಮತ್ತು ಆನೆಗಳಿಂದ ಸಹಿತನಾಗಿ ದಟ್ಟವಾದ ಕಾಡಿಗೆ ಬಂದನು.

ಖಡ್ಗಚಾಪಧರೈರ್ವೀರೈರ್ಗದಾಮುಸಲಪಾಣಿಭಿಃ ।
ಪ್ರಾಸತೋಮರಹಸ್ತೈಶ್ಚ ಯಯೌ ಯೋಧಗಣೈರ್ವೃತಃ ॥೨॥

ಖಡ್ಗ ಮತ್ತು ಚಾಪಗಳನ್ನು ಧರಿಸಿದ ವೀರರಿಂದಲೂ, ಗದೆ ಮತ್ತು ಮುಸಲಗಳನ್ನು ಹಿಡಿದ ವೀರರಿಂದಲೂ, ಕೈಯಲ್ಲಿ ಪ್ರಾಸ ಮತ್ತು ತೋಮರಗಳನ್ನು ಹಿಡಿದ ಯೋಧರ ಗಣದಿಂದಲೂ ಸಹಿತನಾಗಿ ಕಾಡಿಗೆ ಹೊರಟನು.

ಸಿಂಹನಾದೈಶ್ಚ ಯೋಧಾನಾಂ ಶಂಖದುಂದುಭಿನಿಸ್ವನೈಃ ।
ರಥನೇಮಿನಿನಾದೈಶ್ಚ ಸ ನಾಗವರಬೃಂಹಿತೈಃ ॥೩॥

ಹ್ರೇಷಿತಸ್ವನಮಿಶ್ರೈಶ್ಚ ಕ್ಷ್ವೇಡಿತಾಸ್ಫೋಟನಿಸ್ವನೈಃ ।
ಆಸೀತ್ ಕಿಲಕಿಲಾಶಬ್ದಃ ತಸ್ಮಿನ್ ಗಚ್ಛತಿ ಪಾರ್ಥಿವೇ ॥೪॥

ಯೋಧರ ಸಿಂಹನಾದಗಳಿಂದಲೂ, ಶಂಖ ದುಂದುಭಿ ನಾದದಿಂದಲೂ, ರಥಚಕ್ರದ ಘೋಷದಿಂದಲೂ, ಗಜಗಳ ಬೃಂಹಿತಗಳಿಂದಲೂ, ಕುದುರೆಗಳ ಕೆನೆಯುವ ಶಬ್ದಗಳಿಂದಲೂ, ಯೋಧರ ಚಪ್ಪಾಳೆ ಮುಂತಾದ ಶಬ್ದಗಳಿಂದಲೂ ರಾಜನು ಹೋಗುತ್ತಿರುವಾಗ ದೊಡ್ಡ ಶಬ್ದದ ಕೋಲಾಹಲವುಂಟಾಯಿತು.

ಪ್ರಾಸಾದವರಶೃಂಗಸ್ಥಾ ಪರಯಾ ನೃಪಶೋಭಯಾ ।
ದದೃಶುಸ್ತಂ ಸ್ತ್ರಿಯಸ್ತತ್ರ ನೃಪಮಾತ್ಮಯಶಸ್ಕರಮ್ ॥೫॥

ಮನೆಯ ಉಪ್ಪರಿಗೆಗಳನ್ನು ಏರಿದ ಸ್ತ್ರೀಯರು ತಮಗೆ ಕೀರ್ತಿಯನ್ನು ತಂದುಕೊಟ್ಟಂತಹ, ರಾಜಶೋಭೆಯಿಂದ ಬೆಳಗುತ್ತಿದ್ದಂತಹ ರಾಜನನ್ನು ನೋಡಿದರು.

ಶಕ್ರೋಪಮಮಮಿತ್ರಘ್ನಂ ಪರವಾರಣವಾರಣಮ್ ।
ಪಶ್ಯಂತಃ ಸ್ತ್ರೀಗಣಾಸ್ತತ್ರ ಶಕ್ತಿಪಾಣಿಂ ಸ್ಮ ಮೇನಿರೇ ॥೬॥

ಶಕ್ರನಂತೆ ಶತ್ರುಸಂಹಾರಕನಾದ, ಶತ್ರುಗಳ ಆನೆಗಳನ್ನು ಸಂಹರಿಸುವ ಶಕ್ತಿಯುಳ್ಳ ಅವನನ್ನು ನೋಡಿದ ಸ್ತ್ರೀಯರ ಸಮೂಹವು, ಅವನನ್ನು ಕೈಯಲ್ಲಿ ಶಕ್ತ್ಯಾಯುಧವನ್ನು ಹಿಡಿದ ಷಣ್ಮುಖನೆಂದು ತಿಳಿದರು.

ಅಯಂ ಸ ಪುರುಷವ್ಯಾಘ್ರೋ ರಣೇऽದ್ಭುತಪರಾಕ್ರಮಃ ।
ಯಸ್ಯ ಬಾಹುಬಲಂ ಪ್ರಾಪ್ಯ ನ ಭವಂತ್ಯಸುಹೃದ್ಗಣಾಃ ॥೭॥

ಇವನೇ ರಣದಲ್ಲಿ ಅದ್ಭುತ ಪರಾಕ್ರಮವುಳ್ಳ ಆ ಪುರುಷ ಶ್ರೇಷ್ಠನಾದವನು. ಇವನ ಬಾಹುಬಲಕ್ಕೆ ಒಳಗಾದ ಶತ್ರುಸಮೂಹವು ಬದುಕಿ ಉಳಿಯುವುದಿಲ್ಲ.

ಇತಿ ವಾಚೋ ಬ್ರುವಂತ್ಯಸ್ತಾಃ ಸ್ತ್ರಿಯಃ ಪ್ರೇಮ್ಣಾ ನರಾಧಿಪಮ್ ।
ತುಷ್ಟುವುಃ ಪುಷ್ಪವೃಷ್ಟೀಶ್ಚ ಸಸೃಜುಸ್ತಸ್ಯ ಮೂರ್ಧನಿ ॥೮॥

ಆ ಸ್ತ್ರೀಯರು ಪ್ರೀತಿಯಿಂದ ಇಂತಹ ಮಾತುಗಳನ್ನು ಆಡುತ್ತಾ ರಾಜನನ್ನು ಸ್ತೋತ್ರಮಾಡಿ ಅವನ ತಲೆಯ ಮೇಲೆ ಪುಷ್ಪವೃಷ್ಟಿಯನ್ನು ಕರೆದರು.

ಸ ತತ್ರ ತತ್ರ ವಿಪ್ರೇಂದ್ರೈಃ ಸ್ತೂಯಮಾನಃ ಸಮಂತತಃ ।
ನಿರ್ಯಯೌ ಪರಯಾ ಪ್ರೀತ್ಯಾ ವನಂ ಮೃಗಜಿಘಾಂಸಯಾ ॥೯॥

ಅವನು ಅಲ್ಲಲ್ಲಿ ಎಲ್ಲಾ ಕಡೆಗಳಲ್ಲಿಯೂ ಬ್ರಾಹ್ಮಣಶ್ರೇಷ್ಠರಿಂದ ಸ್ತೋತ್ರಮಾಡಲ್ಪಟ್ಟವನಾಗಿ ಮೃಗಗಳನ್ನು ಕೊಲ್ಲುವ ಉದ್ದೇಶದಿಂದ ಬಹಳ ಸಂತೋಷದಿಂದ ಕಾಡಿಗೆ ಹೊರಟನು.

ಅದೂರಮನುಜಗ್ಮುಸ್ತಂ ಪೌರಜಾನಪದಾಸ್ತದಾ ।
ನ್ಯವರ್ತಂತ ತತಃ ಪಶ್ಚಾದನುಜ್ಞಾತಾ ನೃಪೇಣ ಹ ॥೧೦॥

ಸೌವರ್ಣಪ್ರತಿಮೇನಾಥ ರಥೇನ ವಸುಧಾಧಿಪಃ ।
ಮಹೀಮಾಪೂರಯಾಮಾಸ ಘೋಷೇಣೇಂದ್ರೋ ಯಥಾ ದಿವಮ್ ॥

ಸ್ವಲ್ಪದೂರ ಅವನನ್ನು ಹಿಂಬಾಲಿಸಿದ ಪೌರಜಾನಪದರು ಅವನ ಅನುಮತಿಯನ್ನು ಪಡೆದು ಹಿಂದಿರುಗಿದರು. ಅನಂತರ ವೇಗವಾಗಿ ಹೊರಟ ಆ ರಾಜನು ಇಂದ್ರನು ತನ್ನ ರಥದ ಘೋಷದಿಂದ ದೇವಲೋಕವನ್ನು ತುಂಬಿದಂತೆ ತನ್ನ ಚಿನ್ನದ ರಥದ ಘೋಷದಿಂದ ಭೂಮಿಯನ್ನು ತುಂಬಿದನು.

ಸ ಗಚ್ಛನ್ ದದೃಶೇ ಶ್ರೀಮಾನ್ ನಂದನಪ್ರತಿಮಂ ವನಮ್ ।
ಬಿಲ್ವಾರ್ಕಖದಿರಾಕೀರ್ಣಂ ಕಪಿತ್ಥವಟಸಂಕುಲಮ್ ॥೧೨॥

ಅವನು ಮುಂದೆ ಹೋಗುತ್ತಾ ನಂದನದಂತಿದ್ದ ಒಂದು ವನವನ್ನು ನೋಡಿದನು. ಆ ವನವು ಬಿಲ್ವ, ಅರ್ಕ, ಖದಿರ, ಕಪಿತ್ಥ ಮತ್ತು ವಟವೃಕ್ಷಗಳಿಂದ ನಿಬಿಡವಾಗಿದ್ದಿತು.

ವಿಷಮಂ ಪರ್ವತಸ್ರಸ್ತೈರಶ್ಮಭಿಶ್ಚ ಸಮಾವೃತಮ್ ।
ನಿರ್ಜರಂ ನಿರ್ಮನುಷ್ಯಂ ಚ ಬಹುಯೋಜನಮಾಯತಮ್ ।
ಮೃಗಸಂಘೈರ್ವೃತಂ ಘೋರೈರನ್ಯೈಶ್ಚಾಪಿ ವನೇಚರೈಃ ॥೧೩॥

ಪರ್ವತದಿಂದ ಉರುಳಿದ ಬಂಡೆಗಳಿಂದ ಮಾರ್ಗವು ವಿಷಮವಾಗಿದ್ದಿತು. ಆ ವನವು ಬಹುವಿಸ್ತಾರವಾಗಿದ್ದು, ನಿತ್ಯವೂ ಹಸಿರಾಗಿದ್ದು ಮನುಷ್ಯರಹಿತವಾಗಿದ್ದಿತು. ಘೋರವಾದ ಮೃಗಸಂಘಗಳು ಮತ್ತು ಉಳಿದ ಕಾಡುಪ್ರಾಣಿಗಳು ಅಲ್ಲಿದ್ದವು.

ತದ್ ವನಂ ಮನುಜವ್ಯಾಘ್ರಃ ಸಾಮಾತ್ಯಬಲವಾಹನಃ ।
ಲೋಳಯಾಮಾಸ ದುಷ್ಪಂತಃ ಸೂದಯನ್ ವಿವಿಧಾನ್ ಮೃಗಾನ್ ॥

ಮಂತ್ರಿ ಮತ್ತು ಸೈನ್ಯದಿಂದ ಕೂಡಿದ ರಾಜನಾದ ದುಷ್ಪಂತನು ಅನೇಕ ವಿಧವಾದ ಪ್ರಾಣಿಗಳನ್ನು ಕೊಲ್ಲುತ್ತಾ ಆ ವನವನ್ನು ಕಲಕಾಡಿದನು.

ಬಾಣಗೋಚರಸಂಪ್ರಾಪ್ತಾಂಸ್ತತ್ರ ವ್ಯಾಘ್ರಗಣಾನ್ ಬಹೂನ್ ।
ಪಾತಯಾಮಾಸ ದುಷ್ಪಂತೋ ನಿರ್ಬಿಭೇದ ಚ ಸಾಯಕೈಃ ।
ದೂರಸ್ಥಾನ್ ಸಾಯಕೈಃ ಕಾಂಶ್ಚಿದಭಿನತ್ ಸ ನರಾಧಿಪಃ ॥೧೫॥

ಬಾಣದ ವ್ಯಾಪ್ತಿಗೆ ಸಿಲುಕಿದ ವ್ಯಾಘ್ರಸಮೂಹವನ್ನು ಅವನು ಕೆಳಗೆ ಉರುಳಿಸಿದನು. ದೂರದಲ್ಲಿದ್ದ ಮೃಗಗಳನ್ನು ಬಾಣಗಳಿಂದ ಕತ್ತರಿಸಿದನು. ಇನ್ನೂ ಕೆಲವು ಮೃಗಗಳನ್ನು ಆ ರಾಜನು ಬಾಣದಿಂದ ಭೇದಿಸಿದನು.

ಅಭ್ಯಾಶಮಾಗತಾಂಶ್ಚಾನ್ಯಾನ್ ಖಡ್ಗೇನ ನಿರಕೃಂತತ ।
ಕಾಂಶ್ಚಿದೇತಾನ್ ಸ ನಿರ್ಜಘ್ನೇ ಶಕ್ತ್ಯಾ ಶಕ್ತಿಮತಾಂ ವರಃ ॥೧೬॥

ಸಮೀಪಕ್ಕೆ ಬಂದ ಕೆಲವು ಮೃಗಗಳನ್ನು ಖಡ್ಗದಿಂದ ಕತ್ತರಿಸಿದನು. ಶಕ್ತಿಯುಳ್ಳವರಲ್ಲಿ ಶ್ರೇಷ್ಠನಾದ ಅವನು ಇನ್ನೂ ಕೆಲವು ಪ್ರಾಣಿಗಳನ್ನು ಶಕ್ತ್ಯಾಯುಧಪ್ರಯೋಗದಿಂದ ಕೊಂದನು.

ಗದಾಮಂಡಲತತ್ತ್ವಜ್ಞಶ್ಚಚಾರಾಮಿತವಿಕ್ರಮಃ ।
ತೋಮರೈರಸಿಭಿಶ್ಚಾಪಿ ಗದಾಮುಸಲಕರ್ಷಣೈಃ ॥೧೭॥

ಚಚಾರ ನಿಘ್ನನ್ ವನ್ಯಾನ್ ವೈ ಸ್ವೈರಚಾರಾನ್ ವನದ್ವಿಪಾನ್ ।
ರಾಜ್ಞಾ ಚಾದ್ಭುತವೀರ್ಯೇಣ ಯೌಧೈಶ್ಚ ಸಮರಪ್ರಿಯೈಃ ॥೧೮॥

ಗದಾಯುದ್ಧ ನಿಪುಣನಾದ ಅವನು ಅಮಿತವಿಕ್ರಮನಾಗಿ ಗದಾಯುದ್ಧದ ಮಂಡಲಗಳಲ್ಲಿ ಚಲಿಸಿದನು. ಕಾಡುಮೃಗಗಳನ್ನೂ ಮತ್ತು ಮನಸ್ಸಿಗೆ ಬಂದಂತೆ ತಿರುಗುವ ಕಾಡಾನೆಗಳನ್ನೂ ತೋಮರ, ಖಡ್ಗ, ಗದಾ, ಮುಸಲ ಮತ್ತು ಕರ್ಷಣಗಳಿಂದ ಕೊಲ್ಲುತ್ತಾ ಕಾಡಿನಲ್ಲಿ ತಿರುಗಾಡಿದನು.

ಲೋಡ್ಯಮಾನಂ ಮಹಾರಣ್ಯಂ ತತ್ಯಜುಶ್ಚ ಮಹಾಮೃಗಾಃ ।
ತತ್ರ ವಿದ್ರುತಯೂಥಾನಿ ಹತಯೂಥಪತೀನಿ ಚ ॥೧೯॥

ಮಹಾಪರಾಕ್ರಮಿಯಾದ ರಾಜನಿಂದಲೂ, ಮತ್ತು ಯುದ್ಧಪ್ರಿಯರಾದ ಯೋಧರಿಂದಲೂ, ಆ ಮಹಾರಣ್ಯವು ಕಲಕಲ್ಪಡುತ್ತಿರಲು ಆ ಮಹಾರಣ್ಯದಲ್ಲಿದ್ದ ಮೃಗಗಳು ಕಾಡನ್ನು ಬಿಟ್ಟು ಓಡಿದವು.

ಮೃಗಯೂಥಾನ್ಯಥೌತ್ಸುಕ್ಯಾತ್ ಶಬ್ದಂ ಚಕ್ರುರನೇಕಶಃ ।
ಶುಷ್ಕಾಂ ಚಾಪಿ ನದೀಂ ಗತ್ವಾ ಜಲನೈರಾಶ್ಯದುಃಖಿತಾಃ ॥೨೦॥

ಹಾಗೆ ಓಡಿದ ಮೃಗಗುಂಪುಗಳು ತಮ್ಮ ತಮ್ಮ ನಾಯಕನನ್ನು ಕಳೆದುಕೊಂಡು ಎಲ್ಲಾ ಕಡೆಯಲ್ಲಿಯೂ ಓಡುತ್ತಾ ದಿಗ್ಭ್ರಮೆಯಿಂದ ಅನೇಕ ವಿಧವಾದ ಶಬ್ದಗಳನ್ನು ಮಾಡಿದವು.

ವ್ಯಾಯಾಮಕ್ಲಾಂತಹೃದಯಾಃ ಪತಂತಿ ಸ್ಮ ವಿಚೇತನಾಃ ।
ಕ್ಷುತ್ತೃಷಾಪರೀತಾಶ್ಚ ಶ್ರಾಂತಾಶ್ಚ ಪತಿತಾ ಭುವಿ ॥೨೧॥

ಬಾಯಾರಿಕೆಯಿಂದ ನದಿಯ ಬಳಿಗೆ ಹೋಗಿ, ಶುಷ್ಕವಾದ ನದಿಯನ್ನು ಕಂಡು ನಿರಾಶೆಯಿಂದ ದುಃಖಿತವಾಗಿ ಓಡುವುದರಿಂದ ದಣಿದಿದ್ದ ಪ್ರಾಣಿಗಳು ವಿಚೇತನಗಳಾಗಿ ಬೀಳುತ್ತಿದ್ದವು. ಹಸಿವು, ನೀರಡಿಕೆಗಳಿಂದ ದಣಿದು ಪ್ರಾಣಿಗಳು ಬೇರೆ ಭೂಮಿಯಲ್ಲಿಯೂ ಬೀಳುತ್ತಿದ್ದವು.

ಕೇಚಿತ್ ತತ್ರ ನರವ್ಯಾಘ್ರೈರಭಕ್ಷ್ಯಂತ ಬಭುಕ್ಷಿತೈಃ ।
ಕೇಚಿದಗ್ನಿಮಥೋತ್ಪಾದ್ಯ ಸಂಸಾಧ್ಯ ಚ ವನೇಚರಾಃ ॥೨೨॥

ಅಂತಹ ಪ್ರಾಣಿಗಳನ್ನು ಹಸಿದ ಯೋಧರು ತಿನ್ನುತ್ತಿದ್ದರು. ಇನ್ನೂ ಕೆಲವರು ವನಚರರು ಅಲ್ಲಿಯೇ ಅಗ್ನಿಯನ್ನು ಉತ್ಪತ್ತಿಮಾಡಿ ಮಾಂಸವನ್ನು ವಿಧಿವತ್ತಾಗಿ ಬೇಯಿಸಿ ತಿನ್ನುತ್ತಿದ್ದರು.

ಭಕ್ಷಯಂತಿ ಸ್ಮ ಮಾಂಸಾನಿ ಪ್ರಕುಟ್ಯ ವಿಧಿವತ್ ತದಾ ।
ತತ್ರ ಕೇಚಿದ್ ಗಜಾ ಮತ್ತಾ ಬಲಿನಃ ಶಸ್ತ್ರವಿಕ್ಷತಾಃ ।
ಸಂಕೋಚ್ಯಾಗ್ರಕರಾನ್ ಭೀತಾಃ ಪ್ರಾದ್ರವಂತಿ ಸ್ಮ ವೇಗಿತಾಃ ॥೨೩॥

ಶಕೃನ್ಮೂತ್ರಂ ಸೃಜಂತಶ್ಚ ಕ್ಷರಂತಃ ಶೋಣಿತಂ ಬಹು ।
ವನ್ಯಾ ಗಜವರಾಸ್ತತ್ರ ಮಮೃದುರ್ಮನುಜಾನ್ ಬಹೂನ್ ॥೨೪॥

ಅಲ್ಲಿ ಕೆಲವು ಬಲಿಷ್ಠವಾದ ಮದಿಸಿದ ಆನೆಗಳು ಶಸ್ತ್ರಗಳಿಂದ ಗಾಯಗೊಂಡು, ತಮ್ಮ ಸೊಂಡಿಲುಗಳನ್ನು ಮುದುರಿ ಭಯದಿಂದ ವೇಗವಾಗಿ ಓಡುತ್ತಿದ್ದವು. ಮಲಮೂತ್ರಗಳನ್ನು ಸುರಿಸುತ್ತಾ ಮತ್ತು ಬಹಳ ರಕ್ತವನ್ನು ಸುರಿಸುತ್ತಾ ಓಡಿದ ಕಾಡಾನೆಗಳು ಅಲ್ಲಿ ಅನೇಕ ಮನುಷ್ಯರನ್ನು ತುಳಿದು ಹಾಕಿದವು.

ತದ್ವನಂ ಬಲಮೇಘೇನ ಶರಧಾರೇಣ ಸಂವೃತಮ್ ।
ವ್ಯರೋಚತ ಮೃಗಾಕೀರ್ಣಂ ರಾಜ್ಞಾ ಹತಮೃಗಾಧಿಪಮ್ ॥೨೫॥

ಆ ಕಾಡು ಸೈನ್ಯ ಎಂಬ ಮೇಘದಿಂದ ಬಾಣಗಳೆಂಬ ವೃಷ್ಟಿಯಿಂದ ಆಚ್ಛಾದಿತವಾಗಿ ರಾಜನಿಂದ ಹತವಾದ ಮೃಗಪತಿಗಳಿಂದ ಕೂಡಿದ ಮೃಗಗಳಿಂದ ಎಲ್ಲಾ ಕಡೆಯೂ ತುಂಬಿ ಶೋಭಿಸಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಪಂಚಾಶೀತಿತಮೋऽಧ್ಯಾಯಃ ॥
॥ ಸಂಭವಪರ್ವಣಿ ತ್ರಯಸ್ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಂಭತ್ತೈದನೆಯ ಅಧ್ಯಾಯ ಮುಗಿಯಿತು

★★★★★

ಎಂಭತ್ತಾರನೆಯ ಅಧ್ಯಾಯ

(ಬೇಟೆಯಾಡುವ ಪ್ರಸಂಗದಿಂದ ದುಷ್ಷಂತನ ಕಣ್ವಾಶ್ರಮ ಪ್ರಾಪ್ತಿ ಮತ್ತು ಆ ಆಶ್ರಮದ ವರ್ಣನೆ.)

ವೈಶಂಪಾಯನಃ

ತತೋ ಮೃಗಸಹಸ್ರಾಣಿ ಹತ್ವಾ ಸಬಲವಾಹನಃ ।
ತತ್ರ ಮೇಘಘನಪ್ರಖ್ಯಂ ಸಿದ್ಧಚಾರಣಸೇವಿತಮ್ ॥೧॥

ವನಮಾಲೋಕಯಾಮಾಸ ನಗರಾದ್ ಯೋಜನದ್ವಯೇ ।
ಮೃಗಾನನುಚರನ್ ವನ್ಯಾಂಶ್ಚಮೇಣ ಪರಿಪೀಡಿತಃ ॥೨॥

ಅನಂತರ ಸೈನ್ಯ ಮತ್ತು ವಾಹನಗಳಿಂದ ಸುತ್ತುವರಿಯಲ್ಪಟ್ಟ ದುಷ್ಷಂತನು ಸಹಸ್ರಾರು ಮೃಗಗಳನ್ನು ಕೊಂದು ದಟ್ಟವಾದ ಮೋಡದಂತಿರುವ, ಸಿದ್ಧ, ಚಾರಣರಿಂದ ಸೇವಿತವಾದ ನಗರದಿಂದ ಎರಡು ಯೋಜನ ದೂರದಲ್ಲಿರುವ ವನವನ್ನು ನೋಡಿದನು.

ಮೃಗಾನನುಚರನ್ ರಾಜಾ ವೇಗೇನಾಶ್ವಾನಚೋದಯತ್ ।
ರಾಜಾ ಮೃಗಪ್ರಸಂಗೇನ ವನಮನ್ಯದ್ ವಿವೇಶ ಹ ॥೩॥

ಏಕ ಏವೋತ್ತಮಬಲಃ ಕ್ಷುತ್ತಿಪಾಸಾಶ್ರಮಾನ್ವಿತಃ ।
ವನಸ್ಯಾಂತಂ ಸಮಾಸಾದ್ಯ ಸೋಽಪಶ್ಯದಿರಿಣಂ ತತಃ ॥೪॥

ವನ್ಯಮೃಗಗಳನ್ನು ಹಿಂಬಾಲಿಸಿದ ಅವನು ಶ್ರಮದಿಂದ ಪೀಡಿತನಾಗಿ ಮೃಗವನ್ನು ಹಿಂಬಾಲಿಸುತ್ತಾ, ವೇಗವಾಗಿ ಅಶ್ವಗಳನ್ನು ಓಡಿಸಿದನು. ಹೀಗೆ ರಾಜನು ಮೃಗದ ಆಸೆಯಿಂದ ಇನ್ನೊಂದು ಕಾಡನ್ನು ಸೇರಿದನು. ಹಸಿವು, ನೀರಡಿಕೆ ಮತ್ತು ಶ್ರಮದಿಂದ ಉತ್ತಮ ಬಲವುಳ್ಳ ಅವನು ಒಬ್ಬನೇ ಆ ಕಾಡಿನ ತುದಿಯವರೆಗೂ ಬಂದು ಅಲ್ಲಿಂದ ಮುಂದೆ ಒಂದು ಮರುಭೂಮಿಯನ್ನು ನೋಡಿದನು.

ತದಪ್ಯತೀತ್ಯ ನೃಪತಿರುತ್ತಮಾಶ್ರಮಸಂಯುತಮ್ ।
ಮನಃಪ್ರಹ್ಲಾದಜನನಂ ದೃಷ್ಟಿಕಾಂತಮತೀವ ಚ ॥೫॥

ಶೀತಮಾರುತಸಂಯುಕ್ತಂ ಜಗಾಮಾನ್ಯನ್ಮಹದ್ವನಮ್ ।
ಪುಷ್ಪಿತೈಃ ಪಾದಪೈಃ ಕೀರ್ಣಮತೀವ ಸುಖಶಾದ್ವಲಮ್ ॥೬॥

ಮರುಭೂಮಿಯನ್ನು ದಾಟಿ ಆ ರಾಜನು ಉತ್ತಮಾಶ್ರಮಯುಕ್ತವಾದ ಮನಸ್ಸಿಗೆ ಸಂತೋಷವನ್ನುಂಟು ಮಾಡುವ, ಕಣ್ಣುಗಳಿಗೆ ಮನೋಹರವಾದ, ಶೀತಮಾರುತದಿಂದ ಕೂಡಿದ್ದ ಇನ್ನೊಂದು ದೊಡ್ಡ ಕಾಡನ್ನು ಸೇರಿದನು. ಎಲ್ಲಾ ವೃಕ್ಷಗಳಲ್ಲಿಯೂ ತುಂಬಿದ ಪುಷ್ಪಗಳುಳ್ಳ ಆ ಕಾಡು ಸುಖಶೀತವಾಗಿದ್ದು, ಮೃದುವಾಗಿದ್ದಿತು.

ವಿಪುಲಂ ಮಧುರಾರಾವೈರ್ನಾದಿತಂ ವಿಹಗೈಸ್ತಥಾ ।
ಪುಂಸ್ಕೋಕಿಲನಿನಾದೈಶ್ಚ ಝಿಲ್ಲೀಕಗಣನಾದಿತಮ್ ॥೭॥

ಆ ವನವು ಮಧುರವಾಗಿ ಕೂಗುವ ಪಕ್ಷಿಗಳಿಂದಲೂ, ಪುಂಸ್ಕೋಕಿಲನಿನಾದಗಳಿಂದಲೂ, ಝಿಲ್ಲೀಕಗಣಗಳ (ಚಿಮ್ಮಂಡೆ ಹುಳುಗಳ) ನಾದದಿಂದಲೂ ಹೇರಳವಾಗಿ ತುಂಬಿದ್ದಿತು.

ಪ್ರವೃದ್ಧವಿಟಪೈರ್ವೃಕ್ಷೈಃ ಸುಖಚ್ಛಾಯೈಃ ಸಮಾವೃತಮ್ ।
ಷಟ್‌ಪದಾಘೂರ್ಣಿತತಳಂ ಲಕ್ಷ್ಮ್ಯಾ ಪರಮಯಾ ಯುತಮ್ ॥೮॥

ನಾಪುಷ್ಪಃ ಪಾದಪಃ ಕಶ್ಚಿನ್ನಾಫಲೋ ನಾಪಿ ಕಂಟಕೀ ।
ಷಟ್‌ಪದೈರ್ನಾಪ್ಯಪಾಕೀರ್ಣಸ್ತಸ್ಮಿನ್ ವೈ ಕಾನನೇऽಭವತ್ ॥೯॥

ಒಳ್ಳೆಯ ನೆರಳನ್ನು ಕೊಡುವ ಎತ್ತರಕ್ಕೆ ಬೆಳೆದ ಬಹಳ ಕೊಂಬೆಗಳುಳ್ಳ ವೃಕ್ಷಗಳಿಂದ ಕೂಡಿದ್ದಿತು. ಕೆಳಭಾಗದಲ್ಲಿ ದುಂಬಿಗಳು ಝೇಂಕರಿಸುತ್ತಿದ್ದವು. ಒಳ್ಳೆಯ ಕಾಂತಿಯಿಂದ ಕೂಡಿದ್ದಿತು. ಆ ವನದಲ್ಲಿ ಪುಷ್ಪವಿಲ್ಲದ ಅಥವಾ ಫಲವಿಲ್ಲದ ಮರವಿರಲಿಲ್ಲ. ಮುಳ್ಳಿನ ಮರಗಳೂ ಇರಲಿಲ್ಲ ಅಥವಾ ದುಂಬಿಗಳು ಇಲ್ಲದ ಮರಗಳೂ ಇರಲಿಲ್ಲ.

ವಿಹಗೈರ್ನಾದಿತಂ ಪುಷ್ಪೈರಲಂಕೃತಮತೀವ ಚ ।
ಸರ್ವರ್ತುಕುಸುಮೈರ್ವೃಕ್ಷೈಃ ಸುಖಚ್ಛಾಯೈಃ ಸಮಾವೃತಮ್ ॥೧೦॥

ಆ ಕಾಡು ಪಕ್ಷಿಗಳ ನಾದದಿಂದ ಕೂಡಿದ್ದಿತು. ಪುಷ್ಪಗಳಿಂದ ಬಹಳ ಅಲಂಕೃತವಾಗಿದ್ದಿತು. ಎಲ್ಲಾ ಋತುಗಳಲ್ಲೂ ಹೂಗಳನ್ನು ಕೊಡುವ ಸುಖದಾಯಕವಾದ ನೆರಳುಳ್ಳ ಮರಗಳಿಂದ ತುಂಬಿದ್ದಿತು.

ಮನೋರಮಂ ಮಹೇಷ್ವಾಸೋ ವಿವೇಶ ವನಮುತ್ತಮಮ್ ।
ಮಾರುತಾಕಲಿತಾಸ್ತತ್ರ ದ್ರುಮಾಃ ಕುಸುಮಶಾಖಿನಃ ।
ಪುಷ್ಪವೃಷ್ಟಿಂ ವಿಚಿತ್ರಾಂ ತು ವ್ಯಸೃಜಂಸ್ತೇ ಪುನಃಪುನಃ ॥೧೧॥

ದುಷ್ಷಂತನು ದೊಡ್ಡ ಧನುಸ್ಸನ್ನು ಹಿಡಿದು ಆ ಮನೋಹರವಾದ ಕಾಡನ್ನು ಪ್ರವೇಶಿಸಿದನು. ವಾಯುವಿನಿಂದ ಅಲುಗಾಡಿಸಲ್ಪಟ್ಟ ಪುಷ್ಪಶಾಖೆಗಳುಳ್ಳ ಮರಗಳು ಅವನ ತಲೆಯ ಮೇಲೆ ಮತ್ತೆ ಮತ್ತೆ ವಿಚಿತ್ರವಾದ ಪುಷ್ಪವೃಷ್ಟಿಯನ್ನು ಕರೆದವು.

ದಿವಿಸ್ಪೃಶೋಽಥ ಸಂಘುಷ್ಟಾಃ ಪಕ್ಷಿಭಿರ್ಮಧುರಸ್ವನೈಃ ।
ವಿರೇಜುಃ ಪಾದಪಾಸ್ತತ್ರ ವಿಚಿತ್ರಕುಸುಮಾಂಬರಾಃ ।
ತೇಷಾಂ ತತ್ರ ಪ್ರವಾಲೇಷು ಪುಷ್ಪಭಾರಾವನಾಮಿಷು ॥೧೨॥

ಆಕಾಶವನ್ನು ಮುಟ್ಟುವಷ್ಟು ಎತ್ತರವಾಗಿದ್ದ ಅಲ್ಲಿಯ ವೃಕ್ಷಗಳು ಪಕ್ಷಿಗಳ ಮಧುರಸ್ವರಗಳಿಂದಲೂ, ವಿಚಿತ್ರಪುಷ್ಪಗಳ ವಸ್ತ್ರಗಳಿಂದಲೂ ಅಲಂಕೃತವಾಗಿ ಶೋಭಿಸಿದವು.

ರುವಂತಿ ರಾವಾನ್ ಮಧುರಾನ್ ಷಟ್‌ಪದಾ ಮಧುಲಿಪ್ಸವಃ ।
ತತ್ರ ಪ್ರದೇಶಾಂಶ್ಚ ಬಹೂನ್ ಕುಸುಮೋತ್ಕರಮಂಡಿತಾತ್ ॥೧೩॥

ಆ ಮರಗಳ ಪುಷ್ಪಭಾರದಿಂದ ಬಗ್ಗಿದ ಎಳೆಯ ಕೊಂಬೆಗಳಲ್ಲಿ ಮಧುವನ್ನು ಪಡೆಯಲು ಬಂದ ದುಂಬಿಗಳು ಮಧುರವಾದ ಸ್ವರವನ್ನು ಮಾಡುತ್ತಿದ್ದವು.

ಲತಾಗೃಹಪರಿಕ್ಷಿಪ್ತಾನ್ ಮನಸಃ ಪ್ರೀತಿವರ್ಧನಾನ್ ।
ಸಂಪಶ್ಯನ್ ಸುಮಹಾತೇಜಾ ಬಭೂವ ಮುದಿತಸ್ತದಾ ॥೧೪॥

ಮಹಾತೇಜಸ್ವಿಯಾದ ರಾಜನು ಅಲ್ಲಿ ಪುಷ್ಪವೃಷ್ಟಿಯಿಂದ ಅಲಂಕೃತವಾದ ಅನೇಕ ಪ್ರದೇಶಗಳನ್ನೂ, ಮನಸ್ಸಿಗೆ ಸಂತೋಷವನ್ನುಂಟು ಮಾಡುವ ಲತಾಗೃಹಗಳನ್ನೂ ಸುತ್ತಲೂ ನೋಡಿ ಬಹಳ ಸಂತೋಷಗೊಂಡನು.

ಪರಸ್ಪರಾಶ್ಲಿಷ್ಟಶಾಖೈಃ ಪಾದಪೈಃ ಕುಸುಮಾನ್ವಿತೈಃ ।
ಅಶೋಭತ ವನಂ ತತ್ ತು ಮಹೇಂದ್ರಧ್ವಜಸನ್ನಿಭೈಃ ॥೧೫॥

ಪರಸ್ಪರವಾಗಿ ಆಲಿಂಗಿಸಿದಂತಿರುವ ಪುಷ್ಪಗಳಿಂದ ತುಂಬಿದ ಶಾಖೆಗಳಿಂದ ಕೂಡಿದ ಇಂದ್ರಧ್ವಜವನ್ನು ಹೋಲುವ ವೃಕ್ಷಗಳಿಂದ ಕೂಡಿದ ಆ ವನವು ಶೋಭಿಸಿತು.

ಸಿದ್ಧಚಾರಣಸಂಘೈಶ್ಚ ಗಂಧರ್ವಾಪ್ಸರಸಾಂ ಗಣೈಃ ।
ಸೇವಿತಂ ವನಮತ್ಯರ್ಥಂ ಮತ್ತವಾನರಕಿನ್ನರೈಃ ॥೧೬॥

ಸಿದ್ಧಚಾರಣಸಮೂಹದಿಂದಲೂ, ಗಂಧರ್ವಾಪ್ಸರಗಣದಿಂದಲೂ, ಮತ್ತಕಪಿ ಮತ್ತು ಕಿನ್ನರರಿಂದಲೂ ಆ ವನವು ಸೇವಿತವಾಗಿದ್ದಿತು.

ಸುಖಃ ಶೀತಃ ಸುಗಂಧೀ ಚ ಪುಷ್ಪರೇಣುವಹೋऽನಿಲಃ ।
ಪರಿಕ್ರಾಮನ್ ವನೇ ವೃಕ್ಷಾನುಪೈತೀವ ರಿರಂಸಯಾ ॥೧೭॥

ಸುಗಂಧವುಳ್ಳ ಪುಷ್ಪರೇಣುಗಳನ್ನು ಹೊತ್ತ ಸುಖಶೀತಮಾರುತನು ಅಲ್ಲಿ ಸಂಚರಿಸುತ್ತಾ ರಮಿಸುವ ಇಚ್ಛೆಯಿಂದ ವೃಕ್ಷಗಳ ಸಮೀಪಕ್ಕೆ ಹೋಗುವಂತೆ ತೋರುತ್ತಿತ್ತು.

ಏವಂಗುಣಸಮಾಯುಕ್ತಂ ದದರ್ಶ ಸ ವನಂ ನೃಪಃ ।
ನದೀಕಚ್ಛೋದ್ಭವಂ ಕಾಂತಮುಚ್ಛ್ರಿತಧ್ವಜಸನ್ನಿಭಮ್ ॥೧೮॥

ನದಿಯ ತೀರದಲ್ಲಿ ಇದ್ದಂತಹ ಎತ್ತಿದ ಧ್ವಜದಂತೆ ಎತ್ತರವಾಗಿದ್ದ, ಮನೋಹರವಾಗಿದ್ದ, ಮೇಲೆ ಹೇಳಿದ ಗುಣಗಳಿಂದ ಕೂಡಿದ್ದ ಆ ವನವನ್ನು ರಾಜನು ನೋಡಿದನು.

ಪ್ರೇಕ್ಷಮಾಣೋ ವನಂ ತತ್ ತು ಸುಪ್ರಹೃಷ್ಟವಿಹಂಗಮಮ್ ।
ಆಶ್ರಮಪ್ರವರಂ ರಮ್ಯಂ ದದರ್ಶ ಚ ಮನೋರಮಮ್ ॥೧೯॥

ಸಂತೋಷಗೊಂಡ ಪಕ್ಷಿಗಳಿಂದ ತುಂಬಿದ್ದ ಆ ವನವನ್ನು ನೋಡುತ್ತಿದ್ದಂತೆಯೇ ರಾಜನು ಅಲ್ಲಿ ಸುಂದರವಾದ ಮತ್ತು ಮನೋಹರವಾದ, ಶ್ರೇಷ್ಠವಾದ ಆಶ್ರಮವೊಂದನ್ನು ನೋಡಿದನು.

ನಾನಾವೃಕ್ಷಸಮಾಕೀರ್ಣಂ ಸಂಪ್ರಜ್ವಲಿತಪಾವಕಮ್ ।
ತಂ ತದಾऽಪ್ರತಿಮಂ ಶ್ರೀಮಾನಾಶ್ರಮಂ ಪ್ರತ್ಯಪೂಜಯತ್ ।
ಯತಿಭಿರ್ವಾಲಖಿಲ್ಯೈಶ್ಚ ವೃತಂ ಮುನಿಗಣಾನ್ವಿತಮ್ ॥೨೦॥

ಅನೇಕ ವೃಕ್ಷಗಳಿಂದ ತುಂಬಿದ್ದ, ಅನೇಕ ಸ್ಥಳಗಳಲ್ಲಿ ಅಗ್ನಿಜ್ವಾಲೆಯಿದ್ದ, ಆ ಅಸದೃಶವಾದ ಆಶ್ರಮವನ್ನು ನೋಡಿ ರಾಜನು ಪೂಜ್ಯಭಾವವನ್ನು ಹೊಂದಿದನು. ಆ ಆಶ್ರಮವು ಯತಿಗಳಿಂದಲೂ, ವಾಲಖಿಲ್ಯರಿಂದಲೂ ಮತ್ತು ಮುನಿಗಣಗಳಿಂದಲೂ ತುಂಬಿದ್ದಿತು.

ಅಗ್ನ್ಯಗಾರೈಶ್ಚ ಬಹುಭಿಃ ಪುಷ್ಪಸಂಸ್ತರಸಂಸ್ಕೃತಮ್ ।
ಮಹಾಕಚ್ಛೈರ್ಬೃಹದ್ಭಿಶ್ಚ ವಿಭ್ರಾಜಿತಮತೀವ ಚ ।
ಮಾಲಿನೀಮಭಿತೋ ರಾಜನ್ ನದೀಂ ಪುಣ್ಯಾಂ ಸುಖೋದಕಾಮ್ ॥

ಪವಿತ್ರವಾದ ಮತ್ತು ಸುಖೋದಕದಿಂದ ಕೂಡಿದ್ದ ಮಾಲಿನೀ ನದಿಯಿಂದ ಸುತ್ತುವರಿಯಲ್ಪಟ್ಟ ಆ ಆಶ್ರಮವು ಅನೇಕ ಅಗ್ನಿಶಾಲೆಗಳಿಂದ ಕೂಡಿದ್ದಿತು. ಪುಷ್ಪಮಂಡಲಗಳಿಂದ ಎಲ್ಲಾ ಕಡೆಯಲ್ಲಿಯೂ ತುಂಬಿದ್ದಿತು. ನದಿಯ ತೀರದಲ್ಲಿ ಬೆಳೆದ ಎತ್ತರವಾದ ಮರಗಳಿಂದ ಶೋಭಿಸುತ್ತಿತ್ತು .

ನೈಕಪಕ್ಷಿಗಣಾಕೀರ್ಣಾಂ ತಪೋವನಮನೋರಮಾಮ್ ।
ತತ್ರ ವ್ಯಾಲಮೃಗಾನ್ ಸೌಮ್ಯಾನ್ ಪಶ್ಯನ್ ಪ್ರೀತಿಮವಾಪ ಸಃ ॥೨೨॥

ಆ ನದಿಯ ಮನೋಹರವಾದ ತಪೋವನದಿಂದಲೂ ಅನೇಕ ವಿಧವಾದ ಪಕ್ಷಿಗಳ ಸಮೂಹದಿಂದಲೂ ತುಂಬಿದ್ದಿತು. ಅಲ್ಲಿ ದುಷ್ಟ ಗಜಗಳೂ ಶಾಂತವಾಗಿರುವುದನ್ನು ಕಂಡು ರಾಜನು ಸಂತೋಷಪಟ್ಟನು.

ತಂ ಚಾಪ್ರತಿರಥಃ ಶ್ರೀಮಾನಾಶ್ರಮಂ ಪ್ರತ್ಯಪದ್ಯತ ।
ದೇವಲೋಕಪ್ರತೀಕಾಶಂ ಸರ್ವತಃ ಸುಮನೋಹರಮ್ ॥೨೩॥

ಸಮಾನವಾದ ಪ್ರತಿರಥನಿಲ್ಲದೇ ಅಸದೃಶನಾದ ಆ ರಾಜನು ಎಲ್ಲಾ ಕಡೆಯಲ್ಲಿಯೂ ಮನೋಹರವಾಗಿ ದೇವಲೋಕದಂತಿರುವ ಆ ಆಶ್ರಮವನ್ನು ಸಮೀಪಿಸಿದನು.

ನದೀಂ ಚಾಶ್ರಮಸಂಶ್ಲಿಷ್ಟಾಂ ಪುಣ್ಯತೋಯಾಂ ದದರ್ಶ ಸಃ ।
ಸರ್ವಪ್ರಾಣಭೃತಾಂ ತತ್ರ ಜನನೀಮಿವ ಧಿಷ್ಠಿತಾಮ್ ॥೨೪॥

ಆಶ್ರಮದ ಪಕ್ಕದಲ್ಲಿಯೇ ಪುಣ್ಯವಾದ ನೀರಿನಿಂದ ಹರಿಯುತ್ತಿದ್ದ ಅಲ್ಲಿದ್ದ ಎಲ್ಲಾ ಪ್ರಾಣಿಗಳಿಗೂ ತಾಯಿಯಂತಿದ್ದ ಮಾಲಿನೀನದಿಯನ್ನು ನೋಡಿದನು.

ಸಚಕ್ರವಾಕಪುಲಿನಾಂ ಪುಷ್ಪಫೇನಪ್ರವಾಹಿನೀಮ್ ।
ಸಕಿನ್ನರಗಣಾವಾಸಾಂ ವಾನರರ್ಕ್ಷನಿಷೇವಿತಾಮ್ ॥೨೫॥

ಆ ಮಾಲಿನೀನದಿಯ ತೀರದ ಮರಳುಗಳು ಚಕ್ರವಾಕ ಪಕ್ಷಿಗಳಿಂದ ಕೂಡಿದ್ದವು. ಹರಿಯುವ ನದಿಯ ನೊರೆಯು ಪುಷ್ಪಗಳಂತೆ ಕಾಣುತ್ತಿದ್ದಿತು. ಆ ನದಿಯು ಕಿನ್ನರಗಣದಿಂದಲೂ, ವಾನರ ಮತ್ತು ಋಕ್ಷಗಳಿಂದಲೂ ಸೇವಿಸಲ್ಪಡುತ್ತಿತ್ತು.

ಪುಣ್ಯಸ್ವಾಧ್ಯಾಯಸಂಘುಷ್ಟಾಂ ಪುಲಿನೈರುಪಶೋಭಿತಾಮ್ ।
ಮತ್ತವಾರಣಶಾರ್ದೂಲಭುಜಗೇಂದ್ರನಿಷೇವಿತಾಮ್ ॥೨೬॥

ಆ ನದಿಯ ಬಳಿ ಪವಿತ್ರವಾದ ಸ್ವಾಧ್ಯಾಯದ ಶಬ್ದವು ಕೇಳಿಬರುತ್ತಿದ್ದಿತು. ತೀರದ ಮರಳು ಸುಂದರವಾಗಿದ್ದಿತು. ಆ ನದಿಯು ಮದಿಸಿದ ಗಜಗಳಿಂದಲೂ, ಶಾರ್ದೂಲಗಳಿಂದಲೂ ಮತ್ತು ಸರ್ಪಗಳಿಂದಲೂ ನಿಷೇವಿತವಾಗಿದ್ದಿತು.

ತಸ್ಯಾಸ್ತೀರೇ ಭಗವತಃ ಕಾಶ್ಯಪಸ್ಯ ಮಹಾತ್ಮನಃ ।
ಆಶ್ರಮಪ್ರವರಂ ರಮ್ಯಂ ಮಹರ್ಷಿಗಣಸೇವಿತಮ್ ॥೨೭॥

ಆ ನದಿಯ ತೀರದಲ್ಲಿ ಪೂಜ್ಯರೂ, ಮಹಾತ್ಮರೂ ಆದ ಕಾಶ್ಯಪರ, ರಮ್ಯವಾದ, ಮಹರ್ಷಿಗಣಸೇವಿತವಾದ ಆಶ್ರಮವಿದ್ದಿತು.

ನದೀಮಾಶ್ರಮಸಂಬದ್ಧಾಂ ದೃಷ್ಟ್ವಾ ऽऽಶ್ರಮಪದಂ ತಥಾ ।
ಚಕಾರಾಭಿಪ್ರವೇಶಾಯ ಮತಿಂ ಸ ನೃಪತಿಸ್ತದಾ ॥೨೮॥

ಆ ಆಶ್ರಮವನ್ನು ಹೊಂದಿಕೊಂಡು ಹರಿಯುತ್ತಿದ್ದ ನದಿಯನ್ನು ಮತ್ತು ಆಶ್ರಮವನ್ನು ನೋಡಿ, ಆ ರಾಜನು ಆಶ್ರಮವನ್ನು ಪ್ರವೇಶಿಸಲು ನಿರ್ಧರಿಸಿದನು.

ಅಲಂಕೃತಂ ದ್ವೀಪವತ್ಯಾ ಮಾಲಿನ್ಯಾ ರಮ್ಯತೀರಯಾ ।
ನರನಾರಾಯಣಸ್ಥಾನಂ ಗಂಗಯೇವೋಪಶೋಭಿತಮ್ ।
ಮತ್ತಬರ್ಹಿಣಸಂಘುಷ್ಟಂ ಪ್ರವಿವೇಶ ತದಾಶ್ರಮಮ್ ॥೨೯॥

ಗಂಗೆಯಿಂದ ನರನಾರಾಯಣಾಶ್ರಮವು ಶೋಭಿಸಿದಂತೆ, ಸುಂದರವಾದ ತೀರವುಳ್ಳ ದ್ವೀಪವತಿಯಾದ ಮಾಲಿನೀನದಿಯಿಂದ ಅಲಂಕೃತವಾದ, ನವಿಲುಗಳ ಘೋಷದಿಂದ ತುಂಬಿದ ಆ ಆಶ್ರಮವನ್ನು ರಾಜನು ಪ್ರವೇಶಿಸಿದನು.

ತತ್ರ ಚೈತ್ರರಥಪ್ರಖ್ಯಂ ಸಮುಪೇತ್ಯ ನರರ್ಷಭಃ ।
ಅತೀವ ಗುಣಸಂಪನ್ನಮನಿರ್ದೇಶ್ಯಂ ಚ ವರ್ಚಸಾ ।
ಮಹರ್ಷಿಂ ಕಾಶ್ಯಪಂ ದ್ರಷ್ಟುಮಥ ಕಣ್ವಂ ತಪೋಧನಮ್ ॥೩೦॥

ಧ್ವಜಿನೀಮಶ್ವಸಂಬಾಧಾಂ ಪದಾತಿಗಜಸಂಕುಲಾಮ್ ।
ಅವಸ್ಥಾಪ್ಯ ವನದ್ವಾರಿ ಸೇನಾಮಿದಮುವಾಚ ಸಃ ॥೩೧॥

ರಾಜನು ಚೈತ್ರರಥದಂತೆ ಎತ್ತರವಾಗಿದ್ದ ಆಶ್ರಮವನ್ನು ತಲುಪಿ, ಬಹಳ ಗುಣಸಂಪನ್ನನೂ, ತಿಳಿಯಲು ಅಸಾಧ್ಯವಾದ ವರ್ಚಸ್ಸುಳ್ಳವನೂ ಆದ ಮಹರ್ಷಿ ಕಾಶ್ಯಪರನ್ನು ಹಾಗೆಯೇ ತಪೋಧನರಾದ ಕಣ್ವರನ್ನು ನೋಡಲು, ತನ್ನ ಕುದುರೆಗಳಿಂದ ಕೂಡಿದ್ದ ಸೈನ್ಯವನ್ನು, ಪದಾತಿಗಳನ್ನು ಮತ್ತು ಗಜಗಳನ್ನು ಕಾಡನ್ನು ಪ್ರವೇಶಿಸುವ ಸ್ಥಾನದಲ್ಲಿಯೇ ಇಟ್ಟು ಸೈನ್ಯವನ್ನು ಕುರಿತು ಹೀಗೆ ಹೇಳಿದನು. ಕಾಶ್ಯಪ ಗೋತ್ರ, ಕಣ್ವನಾಮ ಎಂದು ತೋರುತ್ತದೆ.

ಮುನಿಂ ವಿರಜಸಂ ದ್ರಷ್ಟುಂ ಗಮಿಷ್ಯಾಮಿ ತಪೋಧನಮ್ ।
ಕಾಶ್ಯಪಂ ಸ್ಥೀಯತಾಮತ್ರ ಯಾವದಾಗಮನಂ ಮಮ ॥೩೨॥

ಪರಿಶುದ್ಧರೂ, ತಪೋಧನರೂ ಆದ ಕಾಶ್ಯಪರನ್ನು ನೋಡಲು ಹೋಗುತ್ತಿದ್ದೇನೆ. ನಾನು ಹಿಂದಿರುಗುವವರೆಗೂ ನೀವು ಇಲ್ಲಿಯೇ ನಿಲ್ಲಿ.

ತದ್ವನಂ ನಂದನಪ್ರಖ್ಯಮಾಸಾದ್ಯ ಮನುಜೇಶ್ವರಃ ।
ಕ್ಷುತ್ತಿಪಾಸೇ ಜಹೌ ರಾಜಾ ಮುದಂ ಚಾವಾಪ ಪುಷ್ಕಲಾಮ್ ॥೩೩॥

ನಂದನವನಕ್ಕೆ ಸದೃಶವಾದ ಆ ಆಶ್ರಮ ಸ್ಥಾನವನ್ನು ತಲುಪಿದ ರಾಜನಿಗೆ ಹಸಿವು, ಬಾಯಾರಿಕೆಗಳು ಮಾಯವಾದವು. ಅವನು ಮನಸ್ಸಿನಲ್ಲಿ ಬಹಳ ಸಂತೋಷವನ್ನು ಹೊಂದಿದನು.

ಸಾಮಾತ್ಯೋ ರಾಜಲಿಂಗಾನಿ ಸೋಪನೀಯ ನರಾಧಿಪಃ ।
ಪುರೋಹಿತಸಹಾಯಶ್ಚ ಜಗಾಮಾಶ್ರಮಮುತ್ತಮಮ್ ॥೩೪॥

ಅವನು ಮತ್ತು ಅವನ ಅಮಾತ್ಯರು ರಾಜಚಿಹ್ನೆಗಳನ್ನು ತೊರೆದ ಮೇಲೆ, ರಾಜನು ಪುರೋಹಿತನನ್ನು ಮುಂದೆ ಮಾಡಿಕೊಂಡು ಆಶ್ರಮವನ್ನು ಪ್ರವೇಶಿಸಿದನು.

ದಿದೃಕ್ಷುಸ್ತತ್ರ ತಮೃಷಿಂ ತಪೋರಾಶಿಮಥಾವ್ಯಯಮ್ ।
ಬ್ರಹ್ಮಲೋಕಪ್ರತೀಕಾಶಮಾಶ್ರಮಂ ಸೋಽಭಿವೀಕ್ಷ್ಯ ಹ ॥೩೫॥

ಷಟ್‌ಪದೋದ್ಗೀತಸಂಘುಷ್ಟಂ ನಾನಾದ್ವಿಜಗಣಾಯುತಮ್ ।
ವಿಸ್ಮಯೋತ್ಫುಲ್ಲನಯನೋ ರಾಜಾ ಪ್ರೀತೋ ಬಭೂವ ಹ ॥೩೬॥

ಅಲ್ಲಿ ತಪೋರಾಶಿಯೂ, ಶಾಶ್ವತನೂ ಆದ ಕಾಶ್ಯಪರನ್ನು ನೋಡಲು ಬಯಸಿದವನಾಗಿ, ದುಂಬಿಗಳ ಝೇಂಕಾರದಿಂದ ಕೂಡಿದ ನಾನಾ ಪಕ್ಷಿಗಳ ಗಣದಿಂದ ಯುತವಾದ ಬ್ರಹ್ಮಲೋಕದಂತಿರುವ ಆ ಆಶ್ರಮವನ್ನು ನೋಡಿ ಅರಳಿದ ಕಣ್ಣುಳ್ಳವನಾಗಿ ರಾಜನು ಸಂತೋಷಗೊಂಡನು.

ಋಚೋ ಬಹ್ವೃಚಮುಖ್ಯೈಶ್ಚ ಪ್ರೇಯ್ಯಮಾಣಾಃ ಪದಕ್ರಮೈಃ ।
ಶುಶ್ರಾವ ಮನುಜವ್ಯಾಘ್ರೋ ವಿತತೇಷ್ವಿಹ ಕರ್ಮಸು ॥೩೭॥

ಆ ರಾಜನು ವೈದಿಕ ಕರ್ಮಗಳು ಅಲ್ಲಿ ಬೆಳೆಯುತ್ತಿರುವಾಗ ಋಗ್ವೇದಿಗಳು ಪದಕ್ರಮಪುರಸ್ಸರವಾಗಿ ಹೇಳುತ್ತಿದ್ದ ಋಗ್ವೇದದ ಮಂತ್ರಗಳನ್ನು ಕೇಳಿದನು.

ಯಜ್ಞವಿದ್ಯಾಂಗವಿದ್ಭಿಶ್ಚ ಯಜುರ್ವಿದ್ಭಿಶ್ಚ ಶೋಭಿತಮ್ ।
ಮಧುರೈಃ ಸಾಮಗೀತೈಶ್ಚ ತಚ್ಚಿರೋಭಿಶ್ಚ ಶೋಭಿತಮ್ ॥೩೮॥

ಆ ಆಶ್ರಮವು ಯಜ್ಞವಿದ್ಯೆಯನ್ನು ಮತ್ತು ಯಜ್ಞಗಳ ಅಂಗವಿದ್ಯೆಯನ್ನು ತಿಳಿದ ಯಜುರ್ವೇದಗಳಿಂದ ಶೋಭಿತವಾಗಿದ್ದಿತು. ಆ ಆಶ್ರಮವು ಮಧುರವಾದ ಸಾಮಗಾನದಿಂದಲೂ, ಸಾಮವೇದದ ಉಪನಿಷತ್ತು- ಗಳಿಂದಲೂ ಶೋಭಿತವಾಗಿದ್ದಿತು.

ಭಾರುಂಡಸಾಮಗೀತಾಭಿಸ್ತಚ್ಚಿರೋಭಿರಥೋದ್ಗತೈಃ ।
ಯತಾತ್ಮಭಿಃ ಸುನಿಯತೈಃ ಶುಶುಭೇ ಸ ತದಾಶ್ರಮಃ ॥೩೯॥

ಭಾರುಂಡ ಎಂಬ ಸಾಮಗಾನದ ಪ್ರಭೇದದಿಂದಲೂ ಹಾಗೆಯೇ ಹೊರಹೊಮ್ಮಿದ ಸಾಮವೇದದ ಉಪನಿಷತ್ತುಗಳಿಂದಲೂ, ನಿಯಮವನ್ನು ಧರಿಸಿದ ಮಹಾತ್ಮರಿಂದಲೂ ಕೂಡಿದ ಆ ಆಶ್ರಮವು ಶೋಭಿಸುತ್ತಿತ್ತು.

ಅಥರ್ವದೇವಪ್ರವರಾಃ ಪೂಗಯಜ್ಞಿಯಸಾಮಗಾಃ ।
ಸಂಹಿತಾಮೀರಯಂತಿ ಸ್ಮ ಪದಕ್ರಮಯುತಾಂ ತು ತೇ ॥೪೦॥

ಅಥರ್ವವೇದದಲ್ಲಿ ನಿಷ್ಣಾತರಾದವರು ಮತ್ತು ಸಾಮೂಹಿಕ ಯಜ್ಞದ ಸಾಮಗಾನದಲ್ಲಿ ಪರಿಣಿತರಾದವರು ತಮ್ಮ ತಮ್ಮ ಸಂಹಿತೆಗಳನ್ನು ಪದಕ್ರಮಪುರಸ್ಸರವಾಗಿ ಅಲ್ಲಿ ಹೇಳುತ್ತಿದ್ದರು.

ಶಬ್ದಸಂಸ್ಕಾರಸಂಯುಕ್ತೈರ್ಬ್ರುವದ್ಭಿಶ್ಚಾಪರೈರ್ದ್ವಿಜೈಃ ।
ಯಜ್ಞಸಂಸ್ಕಾರವಿದ್ಭಿಶ್ಚ ಕ್ರಮಶಿಕ್ಷಾವಿಶಾರದೈಃ ॥೪೧॥

ಅಲ್ಲಿ ಕೆಲವು ಬ್ರಾಹ್ಮಣರು ಶಬ್ದಗಳ ಪ್ರಕೃತಿಪ್ರತ್ಯಯ ಸಂಸ್ಕಾರವನ್ನು ಹೇಳುತ್ತಿದ್ದರು. ಇನ್ನೂ ಕೆಲವರು ಯಜ್ಞದ ಸಂಸ್ಕಾರಗಳನ್ನು ಹೇಳುತ್ತಿದ್ದರು. ಇನ್ನೂ ಕೆಲವರು ಕ್ರಮಾದಿವಿಕಾರಗಳನ್ನೂ, ಶಿಕ್ಷಾದಿ ಅಂಗಗಳನ್ನೂ ತಿಳಿದವರಾಗಿದ್ದರು.

ದ್ರವ್ಯಕರ್ಮಗುಣಜ್ಞೈಶ್ಚ ಕಾರ್ಯಕಾರಣವೇದಿಭಿಃ ।
ನ್ಯಾಯತತ್ತ್ವಾರ್ಥವಿಜ್ಞಾನಸಂಪನ್ನೈರ್ವೇದಪಾರಗೈಃ ॥೪೨॥

ಅಲ್ಲಿ ಕೆಲವರು ದ್ರವ್ಯಕರ್ಮಗುಣಗಳನ್ನೂ, ಕಾರ್ಯಕಾರಣಭಾವವನ್ನೂ ತಿಳಿದು, ನ್ಯಾಯತತ್ತ್ವಾರ್ಥವನ್ನು ಚೆನ್ನಾಗಿ ತಿಳಿದವರಾಗಿ ವೇದಪಾರಂಗತ- ರಾಗಿದ್ದರು.

ನಾನಾವಾಕ್ಯಸಮಾಹಾರತತ್ತ್ವಜ್ಞಾನವಿಶಾರದೈಃ ।
ವೈಶೇಷಿಕಾರ್ಥವಿದ್ಭಿಶ್ಚ ಮೋಕ್ಷಧರ್ಮವಿಶಾರದೈಃ ॥೪೩॥

ಅನೇಕ ವಾಕ್ಯಗಳನ್ನು ಕೂಡಿಸಿ ಅದರ ಅರ್ಥವನ್ನು ಹೇಳುವ ವಿಶಾರದರೂ, ವೈಶೇಷಿಕಾದಿ ಮತಗಳ ಗುಣದೋಷಗಳನ್ನು ತಿಳಿದವರೂ, ಮೋಕ್ಷಧರ್ಮ ವಿಶಾರದರೂ ಅಲ್ಲಿದ್ದರು.

ಸ್ಥಾಪನಾಕ್ಷೇಪಸಿದ್ಧಾಂತಪರಮಾರ್ಥಜ್ಞತಾಂ ಗತೈಃ ।
ಶಬ್ದಚ್ಛಂದೋನಿರುಕ್ತಜ್ಞೈಃ ಕಾಲಜ್ಞಾನವಿಶಾರದೈಃ ॥೪೪॥

ಕೆಲವರು ತಮ್ಮ ಪಕ್ಷವನ್ನು ಸ್ಥಾಪನೆ ಮಾಡಿ ಪ್ರತಿಪಕ್ಷವನ್ನು ನಿರಾಕರಣೆ ಮಾಡುವುದರಲ್ಲಿ ಪರಮ ನಿಪುಣರಾಗಿದ್ದರು. ಶಬ್ದಶಾಸ್ತ್ರವಾದ ವ್ಯಾಕರಣವನ್ನೂ,

ಛಂದಶಾಸ್ತ್ರವನ್ನೂ, ನಿರುಕ್ತ ಶಾಸ್ತ್ರವನ್ನೂ, ಜ್ಯೋತಿಷ್ಯ ಶಾಸ್ತ್ರವನ್ನೂ ಅಧ್ಯಯನ ಮಾಡಿ ವಿಶಾರದರಾದವರು ಅಲ್ಲಿದ್ದರು.

ಜಲ್ಪವಾದವಿತಂಡಜ್ಞೈರ್ವ್ಯಾಸಗ್ರಂಥಸಮಾಶ್ರಿತೈಃ ।
ನಾನಾಶಾಸ್ತ್ರೇಷು ಮುಖ್ಯೈಶ್ಚ ಶುಶ್ರಾವ ಸ್ವನಮೀರಿತಮ್ ॥೪೫॥

ವೇದವ್ಯಾಸರ ಗ್ರಂಥಗಳನ್ನು ಆಧರಿಸಿದ ವಾದ, ಜಲ್ಪ ಮತ್ತು ವಿತಂಡಗಳಲ್ಲಿ ನಿಪುಣರಾದವರು ಅಲ್ಲಿದ್ದರು. ಅನೇಕ ಶಾಸ್ತ್ರಗಳಲ್ಲಿ ಪರಿಣತರಾದವರಲ್ಲಿ ಮುಖ್ಯರಾದವರ ಶಬ್ದಗಳನ್ನು ರಾಜನು ಕೇಳಿದನು.

ಲೋಕಾಯತಿಕಮುಖ್ಯೈಶ್ಚ ಸಮಂತಾದಭಿನಾದಿತಮ್ ।
ತತ್ರ ತತ್ರ ಚ ವಿಪ್ರೇಂದ್ರಾನ್ ನಿಯತಾನ್ ಸಂಶಿತವ್ರತಾನ್ ।
ಜಪಹೋಮರತಾನ್ ಸಿದ್ಧಾನ್ ದದರ್ಶ ಪರವೀರಹಾ ॥೪೬॥

ಅಲ್ಲಿ ಶ್ರೇಷ್ಠರಾದ ಯತಿಗಳೂ ಕೂಡ ವಿಚಾರದಲ್ಲಿ ಭಾಗವಹಿಸುತ್ತಿದ್ದರು. ಆ ಶತ್ರುಸಂಹಾರಕನಾದ ರಾಜನು ಅಲ್ಲಲ್ಲಿ ಜಪಹೋಮರತರಾದ ಸಿದ್ಧರನ್ನೂ, ನಿಯಮ ಮತ್ತು ವ್ರತಧಾರಿಗಳಾದ ಬ್ರಾಹ್ಮಣರನ್ನೂ ನೋಡಿದನು.

ಆಸನಾನಿ ಪವಿತ್ರಾಣಿ ಪುಷ್ಪವಂತಿ ಮಹೀಪತಿಃ ।
ಪ್ರಯತ್ನೋಪಹಿತಾನಿ ಸ್ಮ ದೃಷ್ಟ್ವಾ ವಿಸ್ಮಯಮಾಗಮತ್ ॥೪೭॥

ಪುಷ್ಪಗಳಿಂದ ಪ್ರಯತ್ನಪೂರ್ವಕವಾಗಿ ಅಲಂಕರಿಸಲ್ಪಟ್ಟ ಪವಿತ್ರವಾದ ಆಸನಗಳನ್ನು ನೋಡಿ ರಾಜನು ವಿಸ್ಮಯಗೊಂಡನು.

ದೇವತಾಯತನಾನಾಂ ಚ ಪ್ರೇಕ್ಷ್ಯ ಪೂಜಾಂ ಕೃತಾಂ ದ್ವಿಜೈಃ ।
ಬ್ರಹ್ಮಲೋಕಸ್ಥಮಾತ್ಮಾನಂ ಮೇನೇ ಸ ನೃಪಸತ್ತಮಃ ॥೪೮॥

ತಂ ಕಾಶ್ಯಪತಪೋಗುಪ್ತಮಾಶ್ರಮಪ್ರವರಂ ಶುಭಮ್ ।
ನಾತೃಪ್ಯತ್ ಪ್ರೇಕ್ಷಮಾಣೋ ವೈ ತಪೋವನಗುಣೈರ್ಯುತಮ್ ॥೪೯॥

ದೇವಾಲಯಗಳಲ್ಲಿ ಬ್ರಾಹ್ಮಣರು ಪೂಜೆಯನ್ನು ಮಾಡಿರುವುದನ್ನು ಕಂಡು ರಾಜನು ತಾನು ಬ್ರಹ್ಮಲೋಕದಲ್ಲಿಯೇ ಇದ್ದೇನೆ ಎಂದು ಭಾವಿಸಿದನು. ರಾಜನು ತಪೋವನದ

ಗುಣಗಳಿಂದ ಕೂಡಿದ ಕಾಶ್ಯಪರ ತಪಸ್ಸಿನಿಂದ ರಕ್ಷಿತವಾದ ಪವಿತ್ರವಾದ ಆ ಶ್ರೇಷ್ಠವಾದ ಆಶ್ರಮವನ್ನು ನೋಡಿ ತೃಪ್ತಿಯನ್ನೇ ಪಡೆಯಲಿಲ್ಲ.

ಸ ಕಾಶ್ಯಪಸ್ಯಾಯತನಂ ಮಹಾವ್ರತೈ -
ರ್ವೃತಂ ಸಮಂತಾದೃಷಿಭಿಸ್ತಪೋಧನೈಃ ।
ವಿವೇಶ ಸಾಮಾತ್ಯಪುರೋಹಿತೋಽರಿಹಾ
ವಿವಿಕ್ತಮತ್ಯರ್ಥಮನೋಹರಂ ಶಿವಮ್ ॥೫೦॥

ಅವನು ಏಕಾಂತ ದೇಶದಲ್ಲಿ ಅತ್ಯಂತ ಮನೋಹರವೂ ಮತ್ತು ಮಂಗಳವೂ ಆಗಿದ್ದ, ಎಲ್ಲಾ ಕಡೆಗಳಿಂದಲೂ ತಪೋಧನರಾದ ಮಹಾವ್ರತಗಳನ್ನು ಧರಿಸಿದ್ದ, ಋಷಿಗಳಿಂದ ಆವೃತವಾದ ಕಶ್ಯಪರ ಸ್ಥಾನವನ್ನು (ಪರ್ಣಶಾಲೆಯನ್ನು) ಅಮಾತ್ಯ ಮತ್ತು ಪುರೋಹಿತರ ಜೊತೆಯಲ್ಲಿ ಪ್ರವೇಶಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಷಡಶೀತಿತಮೋಽಧ್ಯಾಯಃ ॥

॥ ಸಂಭವಪರ್ವಣಿ ಚತುಸ್ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಂಭತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಎಂಭತ್ತೇಳನೆಯ ಅಧ್ಯಾಯ

(ಆಶ್ರಮದಲ್ಲಿ ದುಷ್ಷಂತ ಶಕುಂತಲೆಯರ ಸಮಾಗಮ, ಪರಸ್ಪರ ಸಂಭಾಷಣೆ.)

ವೈಶಂಪಾಯನಃ

ತತೋ ಗತ್ವಾ ಮಹಾಬಾಹುರೇಕೋಽಮಾತ್ಯಾನ್ ವಿಸೃಜ್ಯ ಸಃ ।
ನಾಪಶ್ಯದಾಶ್ರಮೇ ತಸ್ಮಿಂಸ್ತಮೃಷಿಂ ಸಂಶಿತವ್ರತಮ್ ॥೧॥

ಅನಂತರ ಆ ಮಹಾಬಾಹುವಾದ ದುಷ್ಷಂತನು ಅಮಾತ್ಯರನ್ನು ಹಿಂದೆ ನಿಲ್ಲಿಸಿ ಒಬ್ಬನೇ ಆಶ್ರಮವನ್ನು ಪ್ರವೇಶಿಸಿ ನೋಡಿದಾಗ ವ್ರತಧಾರಿಗಳಾದ ಕಾಶ್ಯಪರು ಅಲ್ಲಿ ಕಾಣಲಿಲ್ಲ.

ಸೋಽಪಶ್ಯಮಾನಸ್ತಮೃಷಿಂ ಶೂನ್ಯಂ ದೃಷ್ಟ್ವಾ ತಮಾಶ್ರಮಮ್ ।
ಉವಾಚ ಕೋಽತ್ರ ಇತ್ಯುಚ್ಚೈರ್ವನಂ ಸನ್ನಾದಯನ್ನಿವ ॥೨॥

ಅವನು ಆಶ್ರಮದಲ್ಲಿ ಆ ಋಷಿಗಳನ್ನು ಕಾಣದೆ, ಆಶ್ರಮದ ಆ ಪ್ರದೇಶವು ನಿರ್ಜನವಾಗಿರುವುದನ್ನು ಗಮನಿಸಿ ಇಲ್ಲಿ ಯಾರಿದ್ದಾರೆ ಎಂದು ಗಟ್ಟಿಯಾಗಿ ಕಾಡೆಲ್ಲವೂ ಪ್ರತಿಧ್ವನಿಸುವಂತೆ ಕೇಳಿದನು.

ಶ್ರುತ್ವಾಽಥ ತಸ್ಯ ತಂ ಶಬ್ದಂ ಕನ್ಯಾ ಶ್ರೀರಿವ ರೂಪಿಣೀ ।
ನಿಶ್ಚಕ್ರಾಮಾಶ್ರಮಾತ್ ತಸ್ಮಾದ್ ಯಥಾ ವಿದ್ಯುದ್ ಘನಾಂತರಾತ್ ॥೩॥

ಅವನ ಆ ಶಬ್ದವನ್ನು ಕೇಳಿ ಲಕ್ಷ್ಮಿಯಂತೆ ಸೌಂದರ್ಯವತಿಯಾದ ಕನ್ಯೆಯು ಮೋಡದ ಮಧ್ಯದಿಂದ ಮಿಂಚು ಬಂದಂತೆ ಆ ಆಶ್ರಮದಿಂದ (ಪರ್ಣಶಾಲೆಯಿಂದ) ಹೊರಗೆ ಬಂದಳು.

ಸಾ ತಂ ದೃಷ್ಟ್ವೈವ ರಾಜಾನಂ ದುಷ್ಪಂತಮಸಿತೇಕ್ಷಣಾ ।
ಸುವ್ರತಾಽಭ್ಯಾಗತಂ ತಂ ತು ಪೂಜ್ಯಂ ಪ್ರಾಪ್ತಮಥೇಶ್ವರಮ್ ॥೪॥

ನೀಲಾಪಾಂಗವುಳ್ಳವಳೂ, ಒಳ್ಳೆಯ ವ್ರತವನ್ನು ಧರಿಸಿದವಳೂ ಆದ ಅವಳು ಅಭ್ಯಾಗತನಾದ ರಾಜನನ್ನು ನೋಡಿ ಅವನು ಪೂಜ್ಯನಾಗಿ ಆಶ್ರಮಕ್ಕೆ ಬಂದ ಪ್ರಭುವೆಂದು ಎಣಿಸಿದಳು.

ರೂಪಯೌವನಸಂಪನ್ನಾ ಶೀಲಾಚಾರವತೀ ಶುಭಾ ।
ಸಾ ತಮಾಯತಪದ್ಮಾಕ್ಷಂ ವ್ಯೂಢೋರಸ್ಕಂ ಸುಸಂಹಿತಮ್ ॥೫॥

ಸಿಂಹಸ್ಕಂಧಂ ದೀರ್ಘಬಾಹುಂ ಸರ್ವಲಕ್ಷಣಪೂಜಿತಮ್ ।
ವಿಸ್ಪಷ್ಟಂ ಮಧುರಾಂ ವಾಚಂ ಸಾಽಬ್ರವೀಜ್ಜನಮೇಜಯ ॥೬॥

ಎಲೈ ಜನಮೇಜಯನೇ, ರೂಪಯೌವನಸಂಪನ್ನಳೂ, ಶೀಲ ಮತ್ತು ಆಚಾರವಂತಳೂ, ಮಂಗಳಸ್ವರೂಪಳೂ ಆದ ಅವಳು ಕಮಲದಳದಂತೆ ವಿಸ್ತಾರದ ಕಣ್ಣುಳ್ಳ, ವಿಸ್ತಾರವಾದ ಉರಸ್ಸುಳ್ಳ, ದೃಢವಾದ ದೇಹವನ್ನೂ ಸಿಂಹಸ್ಕಂಧವನ್ನೂ, ದೀರ್ಘಬಾಹುಗಳನ್ನೂ ಮತ್ತು ಒಳ್ಳೆಯ ಸರ್ವಲಕ್ಷಣಗಳನ್ನೂ ಹೊಂದಿದ್ದ ಅವನನ್ನು ಕುರಿತು ಮಧುರವಾದ ಮಾತುಗಳನ್ನು ಆಡಿದಳು.

ಸ್ವಾಗತಂ ತ ಇತಿ ಕ್ಷಿಪ್ರಮುಕ್ತ್ವಾ ತಂ ಪ್ರತ್ಯಪೂಜಯತ್ ।
ಆಸನೇನಾರ್ಚಯಿತ್ವಾಽಥ ಪಾದ್ಯಾರ್ಘ್ಯಾಚಮನೈಸ್ತಥಾ ॥೭॥

ನಿನಗೆ ಸ್ವಾಗತ ಎಂದು ಬೇಗ ಹೇಳಿ ಅವನನ್ನು ಆಸನ, ಅರ್ಘ್ಯ, ಪಾದ್ಯ, ಆಚಮನಗಳಿಂದ ಪೂಜಿಸಿದಳು.

ಪಪ್ರಚ್ಛಾನಾಮಯಂ ರಾಜನ್ ಕುಶಲಂ ಚ ನರಾಧಿಪಮ್ ।
ಯಥಾವದರ್ಚಯಿತ್ವಾ ಸಾ ಲಜ್ಜಯಾऽವನತಾನನಾ ॥೮॥

ಉವಾಚ ಸ್ಮಯಮಾನೇವ ಕಿಂ ಕಾರ್ಯಂ ಕ್ರಿಯತಾಂ ಮಯಾ ।
ಆಶ್ರಮಸ್ಯಾಭಿಗಮನೇ ಕಿಂ ತ್ವಂ ಕಾರ್ಯಂ ಚಿಕೀರ್ಷಸಿ ॥೯॥

ಎಲೈ ರಾಜನೇ, ಅವಳು ರಾಜನ ಯೋಗಕ್ಷೇಮವನ್ನು ವಿಚಾರಿಸಿ, ಯಥಾಯೋಗ್ಯವಾಗಿ ಪೂಜಿಸಿ ಲಜ್ಜೆಯಿಂದ ತಲೆಯನ್ನು ತಗ್ಗಿಸಿ, ಆಶ್ರಮಕ್ಕೆ ಬಂದ ನಿನಗೆ ನಾನು ಏನನ್ನು ಮಾಡಲಿ ? ನೀನು ಯಾವ ಉದ್ದೇಶದಿಂದ ಇಲ್ಲಿ ಬಂದಿರುವೆ ಎಂದು ಕೇಳಿದಳು.

ಕಸ್ತ್ವಮದ್ಯೇಹ ಸಂಪ್ರಾಪ್ತೋ ಮಹರ್ಷೇರಾಶ್ರಮಂ ಶುಭಮ್ ।
ತಾಮಬ್ರವೀತ್ ತತೋ ರಾಜಾ ಕನ್ಯಾಂ ಮಧುರಭಾಷಿಣೀಮ್ ॥೧೦॥

ದೃಷ್ಟ್ವಾ ಸರ್ವಾನವದ್ಯಾಂಗೀಂ ಯಥಾವತ್ ಪ್ರತಿಪೂಜಿತಃ ।
ರಾಜರ್ಷೇರಸ್ಮಿ ಪುತ್ರೋऽಹಮಿಲಿಲಸ್ಯ ಮಹಾತ್ಮನಃ ।
ದುಷ್ಪಂತ ಇತಿ ಮೇ ನಾಮ ಸತ್ಯಂ ಪುಷ್ಕರಲೋಚನೇ ॥೧೧॥

ಈ ಮಹರ್ಷಿಯ ಶುಭವಾದ ಆಶ್ರಮಕ್ಕೆ ಬಂದ ನೀನು ಯಾರು ಎಂದು ಕೇಳಿದಳು. ಆಗ ಮಧುರವಾಗಿ ಮಾತನಾಡಿದ ನಿರ್ದುಷ್ಟವಾದ ಅವಯವಗಳಿಂದ ಕೂಡಿದ ಅವಳಿಂದ ಯಥಾಯೋಗ್ಯವಾಗಿ ಪೂಜಿಸಲ್ಪಟ್ಟ ರಾಜನು ಅವಳನ್ನು ನೋಡಿ ಹೀಗೆ ಮಾತನಾಡಿದನು. ಎಲೌ ಪದ್ಮನೇತ್ರೆಯೇ, ನಾನು ಮಹಾತ್ಮನಾದ ರಾಜರ್ಷಿಯಾದ ಇಲಿಲನ ಪುತ್ರ . ನನ್ನ ಹೆಸರು ದುಷ್ಪಂತ. ಇದು ಸತ್ಯ .

ಶಕುಂತಲಾ

ಸ್ವಾಗತಂ ತೇ ಮಹಾರಾಜ ಫಲಮೂಲೋದಕಂ ಚ ನಃ ।
ಪ್ರತಿಗೃಹ್ಯೋಪಭುಂಕ್ಷ್ವ ತ್ವಂ ಕಿಂ ಚ ತೇ ಕರವಾಣ್ಯಹಮ್ ॥೧೨॥

ಮಹಾರಾಜನೇ, ನಿನಗೆ ಸ್ವಾಗತ, ನಮ್ಮಲ್ಲಿರುವ ಫಲ, ಮೂಲ ಮತ್ತು ಉದಕಗಳನ್ನು ತೆಗೆದುಕೊಂಡು ಸೇವಿಸು. ನಾನು ನಿನಗೆ ಬೇರೆ ಏನು ಮಾಡಲಿ.

ದುಷ್ಷಂತಃ

ಆಗತೋಽಹಂ ಮಹಾಭಾಗೇ ಋಷಿಂ ಕಣ್ವಮುಪಾಸಿತಮ್ ।
ಕ್ವ ಗತೋ ಭಗವಾನ್ ಭದ್ರೇ ತನ್ಮಮಾಚಕ್ಷ್ವ ಶೋಭನೇ ॥೧೩॥

ಮಹಾನುಭಾವಳೇ ಮತ್ತು ಶೋಭನಳಾದವಳೇ, ನಾನು ಮಹರ್ಷಿಗಳಾದ ಕಣ್ವರನ್ನು ನೋಡಲು ಆಶ್ರಮಕ್ಕೆ ಬಂದೆ. ಪೂಜ್ಯರು ಎಲ್ಲಿ ಹೋಗಿದ್ದಾರೆ ಎಂದು ನನಗೆ ಹೇಳು.

ಶಕುಂತಲಾ

ಗತಃ ಪಿತಾ ಮೇ ಭಗವಾನ್ ಫಲಾನ್ಯಾಹರ್ತುಮಾಶ್ರಮಾತ್ ।
ಮುಹೂರ್ತಂ ತ್ವಂ ಪ್ರತೀಕ್ಷಸ್ವ ದ್ರಕ್ಷ್ಯಸೇ ತಮಿಹಾಗತಮ್ ॥೧೪॥

ನನ್ನ ತಂದೆಯಾದ ಪೂಜ್ಯರು ಹಣ್ಣುಗಳನ್ನು ತರಲು ಆಶ್ರಮದಿಂದ ಹೊರಗೆ ಹೋಗಿದ್ದಾರೆ. ಒಂದು ಮುಹೂರ್ತ ನಿರೀಕ್ಷಿಸು. ಇಲ್ಲಿಗೆ ಬಂದ ಅವರನ್ನು ನೀನು ನೋಡುವಿ.

ವೈಶಂಪಾಯನಃ

ಅಪಶ್ಯಮಾನಸ್ತಮೃಷಿಂ ತಥಾ ಚೋಕ್ತಸ್ತಯಾ ನೃಪಃ ।
ತಾಂ ಚ ದೃಷ್ಟ್ವಾ ವರಾರೋಹಾಂ ಶ್ರೀಮತೀಂ ಚಾರುಹಾಸಿನೀಮ್ ॥

ವಿಭ್ರಾಜಮಾನಾಂ ವಪುಷಾ ತಪಸಾ ಚ ದಮೇನ ಚ ।
ರೂಪಯೌವನಸಂಪನ್ನಾಮಿತ್ಯುವಾಚ ಮಹೀಪತಿಃ ॥೧೬॥

ರಾಜನು ಆಶ್ರಮದಲ್ಲಿ ಋಷಿಗಳನ್ನು ಕಾಣದೆ ಅವಳಿಂದ ಹಾಗೆ ಹೇಳಲ್ಪಟ್ಟವನಾಗಿ ಸುಂದರಿಯೂ, ಕಾಂತಿಮತಿಯೂ, ಚಾರುಹಾಸಿನಿಯೂ, ರೂಪಯೌವನಸಂಪನ್ನಳೂ, ತಪಸ್ಸು ಮತ್ತು ಇಂದ್ರಿಯನಿಗ್ರಹದಿಂದ ಬೆಳಗುತ್ತಿರುವ ದೇಹವು ಇರುವವಳೂ ಆದ ಅವಳನ್ನು ಕುರಿತು ಹೀಗೆ ಮಾತನಾಡಿದನು.

ಕಾಽಸಿ ಕಸ್ಯಾಸಿ ಸುಶ್ರೋಣಿ ಕಿಮರ್ಥಂ ಚಾಗತಾ ವನಮ್ ।
ಏವಂರೂಪಗುಣೋಪೇತಾ ಕುತಸ್ತ್ವಮಸಿ ಶೋಭನೇ ॥೧೭॥

ಎಲೌ ಸುಂದರಿಯೇ, ನೀನು ಯಾರು ? ಯಾರ ಮಗಳು ? ಈ ವನಕ್ಕೆ ಏಕೆ ಬಂದಿದ್ದೀಯೆ ? ನಿನಗೆ ಇಂತಹ ರೂಪಗುಣಗಳು ಎಲ್ಲಿಂದ ಬಂದವು ?

ದರ್ಶನಾದೇವ ಹಿ ಶುಭೇ ತ್ವಯಾ ಮೇಪಹೃತಂ ಮನಃ ।
ಸ್ಥಿತೋಽಸ್ಮ್ಯಮಿತಸೌಭಾಗ್ಯೇ ವಿವಕ್ಷುಶ್ಚಾಸ್ಮಿ ಕಿಂಚನ ॥೧೮॥

ಎಲೌ ಶುಭಳಾದವಳೇ, ದರ್ಶನಮಾತ್ರದಿಂದ ನೀನು ನನ್ನ ಮನಸ್ಸನ್ನು ಅಪಹರಿಸಿರುವೆ. ನಾನು ಬಹಳ ಸಂಪತ್ತಿಗೆ ಒಡೆಯನಾಗಿದ್ದೇನೆ. ನಿನ್ನ ಹತ್ತಿರ ಒಂದು ವಿಷಯವನ್ನು ಮಾತನಾಡಬೇಕಾಗಿದೆ.

ಶೃಣು ಮೇ ನಾಗನಾಸೋರು ವಚನಂ ಮತ್ತಕಾಶಿನಿ ।
ರಾಜರ್ಷೇರನ್ವಯೇ ಜಾತಃ ಪೂರೋರಸ್ಮಿ ವಿಶೇಷತಃ ॥೧೯॥

ಒಳ್ಳೆಯ ನಾಸಿಕವುಳ್ಳ ಸುಂದರಿಯೇ, ನನ್ನ ಮಾತನ್ನು ಕೇಳು. ನಾನು ರಾಜರ್ಷಿಗಳ ವಂಶದಲ್ಲಿ ವಿಶೇಷವಾಗಿ ಬಂದ ಪೂರುವಿನ ವಂಶದವನಾಗಿದ್ದೇನೆ.

ವೃಣೇ ತ್ವಾಮದ್ಯ ಸುಶ್ರೋಣಿ ದುಷ್ಟಂತೋ ವರವರ್ಣಿನಿ ।
ಮನೋಽನ್ಯತ್ರ ಕ್ಷತ್ರಿಯಾಯಾಂ ನ ಮೇ ಜಾತು ಪ್ರವರ್ತತೇ ॥೨೦॥

ಋಷಿಪುತ್ರೀಷು ಚಾನ್ಯಾಸು ನಾವರ್ಣಾಸು ಪರಾಸು ವಾ ।
ತಸ್ಮಾತ್ ಪ್ರಬ್ರೂಹಿ ಚಾತ್ಮಾನಂ ವಿದ್ಧಿ ಮಾಂ ಕಲಭಾಷಿಣಿ ॥೨೧॥

ಸುಂದರಿಯೇ, ನನ್ನ ಹೆಸರು ದುಷ್ಟಂತ, ನಾನು ಈ ದಿನ ನಿನ್ನನ್ನು ವರಿಸುತ್ತೇನೆ. ಕ್ಷತ್ರಿಯ ಸ್ತ್ರೀಯನ್ನು ಬಿಟ್ಟು ಬೇರೆ ಕಡೆಗೆ ನನ್ನ ಮನಸ್ಸು ಎಂದೂ ಹೋಗುವುದಿಲ್ಲ. ಋಷಿಪುತ್ರಿಯರಲ್ಲಾಗಲೀ, ವರ್ಣಬಾಹಿರ ಸ್ತ್ರೀಯರಲ್ಲಾಗಲೀ ನನ್ನ ಮನಸ್ಸು ಎಂದೂ ಹೋಗುವುದಿಲ್ಲ. ಆದ್ದರಿಂದ ಕಲಭಾಷಿಣಿಯಾದ ಸುಂದರಿಯೇ, ನೀನು ಯಾರು ಎಂದು ಹೇಳಿ ನನ್ನ ಅಭಿಪ್ರಾಯವನ್ನು ಮನಸ್ಸಿಗೆ ತಂದುಕೋ.

ತಸ್ಯ ಮೇ ತ್ವಯಾ ಭಾವೋಽಸ್ತಿ ಕ್ಷತ್ರಿಯಾ ಹ್ಯಸಿ ಕಾ ವದ ।
ನ ಹಿ ಮೇ ಭೀರು ವಿಪ್ರಾಯಾಂ ಮನಃ ಪ್ರಸಹತೇ ಗತಿಮ್ ॥೨೨॥

ಅಂತಹ ನನಗೆ ನಿನ್ನಲ್ಲಿ ಪ್ರೀತಿಯುಂಟಾಗಿದೆ. ನೀನೇನಾದರೂ ಕ್ಷತ್ರಿಯಳೇ, ಅದನ್ನು ತಿಳಿಸು. ಭೀರುವೆ, ವಿಪ್ರಕನ್ಯೆಯಲ್ಲಿ ನನ್ನ ಮನಸ್ಸು ಎಂದೂ ಹೋಗುವುದಿಲ್ಲ.

ಭಜೇ ತ್ವಾಮಾಯತಾಪಾಂಗೇ ಭಕ್ತಂ ಭಜಿತುಮರ್ಹಸಿ ।
ಭುಂಕ್ಷ್ವ ರಾಜ್ಯಂ ವಿಶಾಲಾಕ್ಷಿ ಬುದ್ಧಿಂ ಮಾ ತ್ವನ್ಯಥಾ ಕೃಥಾಃ ॥೨೩॥

ವಿಶಾಲ ನೇತ್ರೆಯೇ, ನಾನು ನಿನ್ನಲ್ಲಿ ಅನುರಾಗವುಳ್ಳವನಾಗಿದ್ದೇನೆ. ನೀನು ನನ್ನನ್ನು ಸ್ವೀಕರಿಸಬೇಕು. ವಿಶಾಲಾಕ್ಷಿಯೇ, ನೀನು ನನ್ನ ರಾಜ್ಯದ ಭೋಗವನ್ನು ಅನುಭವಿಸು. ಬೇರೆ ರೀತಿಯಲ್ಲಿ ಚಿಂತಿಸಬೇಡ.

ವೈಶಂಪಾಯನಃ

ಏವಮುಕ್ತಾ ತದಾ ಕನ್ಯಾ ಏಕಾಕೀ ಸಾ ತಮಾಶ್ರಮೇ ।
ಉವಾಚ ವಸತೀ ವಾಕ್ಯಮಿದಂ ಸುಮಧುರಾಕ್ಷರಮ್ ॥೨೪॥

ಹೀಗೆ ಹೇಳಲ್ಪಟ್ಟ ಆ ಕನ್ಯೆಯು ಏಕಾಕಿಯಾಗಿ ಆಶ್ರಮದಲ್ಲಿ ವಾಸಮಾಡುತ್ತಿದ್ದವಳಾಗಿ ಮಧುರಾಕ್ಷರಗಳಿಂದ ಕೂಡಿದ ಈ ಮಾತುಗಳನ್ನು ಆಡಿದಳು.

ಶಕುಂತಲಾ

ಕಣ್ವಸ್ಯಾಹಂ ಭಗವತೋ ದುಷ್ಯಂತ ದುಹಿತಾ ಮತಾ ।
ತಪಸ್ವಿನೋ ಧೃತಿಮತೋ ಧರ್ಮಜ್ಞಸ್ಯ ಯಶಸ್ವಿನಃ ॥೨೫॥

ಎಲೈ ದುಷ್ಯಂತನೇ, ನಾನು ತಪಸ್ವಿಗಳೂ, ಧೈರ್ಯಶಾಲಿಗಳೂ, ಧರ್ಮಜ್ಞರೂ, ಕೀರ್ತಿವಂತರೂ, ಪೂಜ್ಯರೂ ಆದ ಕಣ್ವರ ಮಗಳು ಎಂದು ಪ್ರಸಿದ್ಧ.

ಅಸ್ವತಂತ್ರಾಽಸ್ಮಿ ರಾಜೇಂದ್ರ ಕಾಶ್ಯಪೋ ಮೇ ಗುರುಃ ಪಿತಾ ।
ತಮೇವ ಪ್ರಾರ್ಥಯ ಸ್ವಾರ್ಥಂ ನಾಯುಕ್ತಂ ಕರ್ತುಮರ್ಹಸಿ ॥೨೬॥

ರಾಜೇಂದ್ರನೇ, ನಾನು ಪರತಂತ್ರಳು. ಕಾಶ್ಯಪರು ನನ್ನ ತಂದೆ ಮತ್ತು ಗುರು. ನಿನ್ನ ಸ್ವಾರ್ಥವನ್ನು ಅವರಲ್ಲಿಯೇ ಪ್ರಾರ್ಥಿಸು. ಅಯುಕ್ತವಾದ ಏನನ್ನೂ ಆಚರಿಸಬೇಡ.

ದುಷ್ಯಂತಃ

ಊರ್ಧ್ವರೇತಾ ಮಹಾಭಾಗೋ ಭಗವಾಂಲ್ಲೋಕಪೂಜಿತಃ ।
ಚಲೇದ್ಧಿ ಚಿತ್ತಂ ಧರ್ಮಾತ್ ತು ನ ಚಲೇತ್ ಸಂಶಿತವ್ರತಃ ॥೨೭॥

ಕಥಂ ತ್ವಂ ತಸ್ಯ ದುಹಿತಾ ಸಂಭೂತಾ ವರವರ್ಣಿನೀ ।
ಸಂಶಯೋ ಮೇ ಮಹಾನತ್ರ ಸತ್ಯಂ ವಕ್ತುಮಿಹಾರ್ಹಸಿ ॥೨೮॥

ಎಲೌ ಸುಂದರಿಯೇ, ಮಹಾನುಭಾವರಾದ ಲೋಕಪೂಜ್ಯರಾದ ಕಶ್ಯಪರು ಊರ್ಧ್ವರೇತಸ್ಕರು ಎಂದು ಪ್ರಸಿದ್ಧವಾಗಿದೆ. ಮನಸ್ಸು ಒಂದು ಪುಣ್ಯದಿಂದ ಇನ್ನೊಂದು ಪುಣ್ಯದ ಕಡೆಗೆ ಚಲಿಸಬಹುದು, ಆದರೆ ಕಾಶ್ಯಪರ ವ್ರತವು ಎಂದೂ ಚಲಿಸುವುದಿಲ್ಲ. ನೀನು ಹೇಗೆ ಅವರ ಮಗಳಾಗಿ ಜನಿಸಿದೆ ? ಈ ವಿಷಯದಲ್ಲಿ ನನಗೆ ಬಹಳ ಸಂಶಯವಿದೆ. ಸತ್ಯವನ್ನು ಹೇಳು.

ಶಕುಂತಲಾ

ಯಥಾऽಯಮಾಗಮೋ ಮಹ್ಯಂ ಯಥಾ ಚೇದಮಭೂತ್ ಪುರಾ ।
ಶೃಣು ರಾಜನ್ ಯಥಾ ತತ್ ತ್ವಂ ಯಥಾऽಸ್ಮಿ ದುಹಿತಾ ಮುನೇಃ ॥

ನಾನು ಇಲ್ಲಿಗೆ ಹೇಗೆ ಬಂದೆ. ಈ ಘಟನೆಯು ಹಿಂದೆ ಹೇಗೆ ನಡೆಯಿತು, ನಾನು ಹೇಗೆ ಋಷಿಗಳಿಗೆ ಮಗಳಾಗಿದ್ದೇನೆ, ಎಲ್ಲವನ್ನೂ ನಿನಗೆ ಯಥಾರ್ಥವಾಗಿ ಹೇಳುತ್ತೇನೆ. ರಾಜನೇ ಅದನ್ನು ಕೇಳು.

ಅನ್ಯಥಾ ಸಂತಮಾತ್ಮಾನಮನ್ಯಥಾ ಸತ್ಸು ಭಾಷತೇ ।
ಸ ಪಾಪೇನಾವೃತೋ ಮೂರ್ಖಸ್ತೇನ ಆತ್ಮಾಪಹಾರಕಃ ॥೩೦॥

ಯಾವನು ತಾನು ಬೇರೆ ರೀತಿಯಾಗಿದ್ದು ಸಜ್ಜನರಲ್ಲಿ ಬೇರೆ ರೀತಿಯಾಗಿ ಹೇಳುತ್ತಾನೆಯೋ, ಆ ಮೂರ್ಖನು ಪಾಪವನ್ನು ಸಂಪಾದಿಸಿ ಆತ್ಮಘಾತುಕ ಎನಿಸುತ್ತಾನೆ.

ಋಷಿಃ ಕಶ್ಚಿದಿಹಾಗಮ್ಯ ಮಮ ಜನ್ಮಾಭ್ಯಚೋದಯತ್ ।
ಊರ್ಧ್ವರೇತಾ ಯಥಾಸಿ ತ್ವಂ ಕುತಸ್ಯೇಯಂ ಶಕುಂತಲಾ ।
ಪುತ್ರೀ ತ್ವತ್ತಃ ಕಥಂ ಜಾತಾ ತತ್ತ್ವಂ ಮೇ ಬ್ರೂಹಿ ಕಾಶ್ಯಪ ॥೩೧॥

ಇಲ್ಲಿಗೆ ಒಬ್ಬ ಋಷಿಗಳು ಬಂದು ನನ್ನ ಜನ್ಮದ ಕಥೆಯನ್ನು ಹೇಳಿದರು. ಅವರು ಕಾಶ್ಯಪರನ್ನು ಕುರಿತು ಕಾಶ್ಯಪರೇ, ನೀವು ಊರ್ಧ್ವರೇತಸ್ಕರಾಗಿದ್ದೀರಿ, ನಿಮಗೆ ಹೇಗೆ ಶಕುಂತಲೆ ಮಗಳಾದಳು ? ಇದರ ತತ್ವವನ್ನು ಹೇಳಿ ಎಂದು ಕೇಳಿದರು.

ಕಣ್ವಃ

ತಪ್ಯಮಾನಸ್ತಪೋ ಘೋರಂ ವಿಶ್ವಾಮಿತ್ರಃ ಸಖಾ ಮಮ ।
ಕಂಪಯಾಮಾಸ ದೇವೇಂದ್ರ ಪುರಾ ಶಕ್ರಂ ಮಹಾತಪಾಃ ॥೩೨॥

ನನ್ನ ಸ್ನೇಹಿತರಾದ ವಿಶ್ವಾಮಿತ್ರರು ಹಿಂದೆ ಘೋರವಾದ ತಪಸ್ಸನ್ನು ಮಾಡುತ್ತಾ ತಮ್ಮ ತಪಸ್ಸಿನಿಂದ ದೇವೇಂದ್ರನಾದ ಶಕ್ರನನ್ನು ಅಲುಗಾಡಿಸಿದರು.

ತಪಸಾ ದೀಪ್ತವೀರ್ಯೋಽಯಂ ಸ್ಥಾನಾನ್ಮಾಂ ಚ್ಯಾವಯೇದಿತಿ ।
ಭೀತಃ ಪುರಂದರಸ್ತಸ್ಮಾನ್ಮೇನಕಾಮಿದಮಬ್ರವೀತ್ ॥೩೩॥

ತಪಸ್ಸಿನ ಮಹಾಶಕ್ತಿಯುಳ್ಳ ಇವರು ನನ್ನನ್ನು ಸ್ಥಾನಭ್ರಷ್ಟನನ್ನಾಗಿ ಮಾಡಬಹುದೆಂಬ ಹೆದರಿಕೆಯಿಂದ ಇಂದ್ರನು ಮೇನಕೆಯನ್ನು ಕರೆದು ಹೀಗೆ ಹೇಳಿದನು.

ಗುಣೈರ್ದಿವ್ಯೈರಪ್ಸರಸಾಂ ಮೇನಕೇ ತ್ವಂ ವಿಶಿಷ್ಯಸೇ ।
ಶ್ರೇಯೋ ಮೇ ಕುರು ಕಲ್ಯಾಣಿ ಯತ್ ತ್ವಾಂ ವಕ್ಷ್ಯಾಮಿ ತಚ್ಛೃಣು ॥

ಮೇನಕೆಯೇ, ನೀನು ಅಪ್ಸರೆಯರ ದಿವ್ಯ ಗುಣಗಳಿಂದ ಉಳಿದವರಿಗಿಂತ ಶ್ರೇಷ್ಠಳಾಗಿದ್ದೀಯೆ. ಕಲ್ಯಾಣಿಯೇ, ನನಗೆ ಶ್ರೇಯಸ್ಸನ್ನು ಮಾಡಬೇಕು. ನಾನು ಹೇಳುವುದನ್ನು ಕೇಳು.

ಅಸಾವಾದಿತ್ಯಸಂಕಾಶೋ ವಿಶ್ವಾಮಿತ್ರೋ ಮಹಾತಪಾಃ ।
ತಪ್ಯಮಾನಸ್ತಪೋ ಘೋರಂ ಬ್ರಹ್ಮಚರ್ಯಂ ಚ ಸಂಶ್ರಿತಃ ॥೩೫॥

ಈ ತಪಸ್ವಿಗಳಾದ, ಸೂರ್ಯನಂತೆ ತೇಜಸ್ಸುಳ್ಳ ವಿಶ್ವಾಮಿತ್ರರು ಬ್ರಹ್ಮಚರ್ಯವನ್ನು ಆಶ್ರಯಿಸಿ ಘೋರವಾದ ತಪಸ್ಸನ್ನು ಮಾಡುತ್ತಿದ್ದಾರೆ.

ಮೇನಕೇ ತವ ಭಾರೋಽಯಂ ವಿಶ್ವಾಮಿತ್ರಃ ಸುಮಧ್ಯಮೇ ।
ಸಂಶಿತಾತ್ಮಾ ಸುದುರ್ಧರ್ಷಶ್ಚಾಗ್ರೇ ತಪಸಿ ವರ್ತತೇ ॥೩೬॥

ಸ ಮಾಂ ನ ಚ್ಯಾವಯೇತ್ ಸ್ಥಾನಾತ್ ತಂ ಗತ್ವಾ ವಿಪ್ರಲೋಭಯ ।
ಚರ ತಸ್ಯ ತಪೋವಿಘ್ನಂ ಕುರು ಮೇ ಪ್ರಿಯಮುತ್ತಮಮ್ ॥೩೭॥

ಮೇನಕೆ, ಇದು ನಿನ್ನ ಜವಾಬ್ದಾರಿ. ಎಲೌ ಸುಂದರಿಯೇ, ಉಗ್ರವಾದ ತಪಸ್ಸಿನಲ್ಲಿ ನಿರತರಾದ ಶ್ರೇಷ್ಠವಾದ ಮನಸ್ಸುಳ್ಳ ದುರ್ಧರ್ಷರಾದ ವಿಶ್ವಾಮಿತ್ರರು ನನ್ನನ್ನು ನನ್ನ

ಸ್ಥಾನದಿಂದ ಕೆಳಗೆ ಇಳಿಸದಂತೆ ನೀನು ಹೋಗಿ ಅವರನ್ನು ಮರುಳುಗೊಳಿಸಬೇಕು. ಅವರ ತಪಸ್ಸಿಗೆ ವಿಘ್ನವನ್ನುಂಟು ಮಾಡಿ ನನಗೆ ಶ್ರೇಷ್ಠವಾದ ಪ್ರಿಯವನ್ನು ಆಚರಿಸಬೇಕು.

ರೂಪಯೌವನಮಾಧುರ್ಯಚೇಷ್ಟಿತಸ್ಮಿತಭಾಷಿತೈಃ ।
ಲೋಭಯಿತ್ವಾ ವರಾರೋಹೇ ತಪಸಃ ಸನ್ನಿವರ್ತಯ ॥೩೮॥

ಎಲೌ ಸುಂದರಿಯೇ, ನಿನ್ನ ರೂಪ, ಯೌವನ, ಮಾಧುರ್ಯ, ಚೇಷ್ಟೆ, ಮುಗುಳ್ನಗೆ ಮತ್ತು ಮಾತುಗಳಿಂದ ಅವರನ್ನು ವಂಚಿಸಿ ತಪಸ್ಸಿನಿಂದ ನಿವೃತ್ತರಾಗುವಂತೆ ಮಾಡು.

ಮೇನಕಾ

ಮಹಾತೇಜಾ ಸ ಭಗವಾನ್ ಸದೈವ ಚ ಮಹಾತಪಾಃ ।
ಕೋಪನಶ್ಚ ತಥಾ ಹ್ಯೇನಂ ಜಾನಾತಿ ಭಗವಾನಪಿ ॥೩೯॥

ಪೂಜ್ಯರು, ಮಹಾತೇಜಸ್ವಿಗಳು ಮತ್ತು ಮಹಾತಪಸ್ವಿಗಳು, ಕೋಪಸ್ವಭಾವದವರೂ ಕೂಡ. ಇದನ್ನು ನೀವೂ ತಿಳಿದಿದ್ದೀರಿ.

ತೇಜಸಸ್ತಪಸಶ್ಚೈವ ಕೋಪಸ್ಯ ಚ ಮಹಾತ್ಮನಃ ।
ತ್ವಮಪ್ಯುದ್ವಿಜಸೇ ಯಸ್ಯ ನೋದ್ವಿಜೇಯಮಹಂ ಕಥಂ ॥೪೦॥

ಮಹಾತ್ಮರಾದ ಅವರ ತೇಜಸ್ಸು, ತಪಸ್ಸು ಮತ್ತು ಕೋಪಗಳಿಂದ ನೀವೂ ಭಯಪಡುತ್ತೀರಿ. ಇನ್ನು ನಾನು ಭಯಪಡದಿರಲು ಹೇಗೆ ಸಾಧ್ಯ ?

ವಿಗೃಹ್ಯ ಚ ವಸಿಷ್ಠಂ ಚ ತಸ್ಯ ಪುತ್ರಾನ್‌ಶಶಾಪ ಹ ।
ಕ್ಷತ್ರೇ ಜಾತಶ್ಚ ಯಃ ಪೂರ್ವಮಭವದ್ ಬ್ರಾಹ್ಮಣೋ ಬಲಾತ್ ॥೪೧॥

ವಸಿಷ್ಠರ ಜೊತೆಯಲ್ಲಿ ವಿರೋಧವನ್ನು ಮಾಡಿ ಅವರ ಮಕ್ಕಳನ್ನು ಸಂಹರಿಸಿದರು. ಕ್ಷತ್ರಿಯಕುಲದಲ್ಲಿ ಜನಿಸಿ ತಮ್ಮ ಸಾಮರ್ಥ್ಯದಿಂದ ಅವರು ಬ್ರಾಹ್ಮಣರಾದರು.

ಶೌಚಾರ್ಥಂ ಯೋ ನದೀಂ ಚಕ್ರೇ ದುರ್ಗಮಾಂ ಪಾಪಕರ್ಮಭಿಃ ।
ಯತ್ತತ್ ಪುಣ್ಯತಮಾಂ ಲೋಕೇ ಕೌಶಿಕೀತಿ ವಿದುರ್ಬುಧಾಃ ॥೪೨॥

ಅವರು ಸ್ನಾನಾದಿಗಳ ಸಲುವಾಗಿ ಪಾಪಿಷ್ಠರಿಗೆ ಅಗಮ್ಯವಾದ ನದಿಯನ್ನೇ ಸೃಷ್ಟಿಮಾಡಿದರು. ಆ ಪುಣ್ಯತಮವಾದ ನದಿಯನ್ನು ಈಗಲೂ ಜ್ಞಾನಿಗಳಾದವರು ಲೋಕದಲ್ಲಿ ಕೌಶಿಕೀ ಎಂದು ಕರೆಯುತ್ತಾರೆ.

ಬಭಾರ ಯತ್ಪಾಸ್ಯ ಪುರಾ ಕಾಲೇ ದುರ್ಗೇ ಮಹಾತ್ಮನಃ ।
ದಾರಾನ್ ಮತಂಗೋ ಧರ್ಮಾತ್ಮಾ ರಾಜರ್ಷಿರ್ವ್ಯಾಧತಾಂ ಗತಃ ॥೪೩॥

ದುರ್ಭಿಕ್ಷದ ಕಷ್ಟಕಾಲದಲ್ಲಿ ವಿಶ್ವಾಮಿತ್ರರ ಪತ್ನಿಯನ್ನು ಧರ್ಮಾತ್ಮನೂ ರಾಜರ್ಷಿಯೂ ಆಗಿ ವ್ಯಾಧತ್ವವನ್ನು ಹೊಂದಿದ ಮತಂಗರು ಕುರುಕ್ಷೇತ್ರದಲ್ಲಿ ಪೋಷಿಸಿದರು.

ಅತೀತಕಾಲೇ ದುರ್ಭಿಕ್ಷೇ ಪ್ರತ್ಯೇತ್ಯ ಪುನರಾಶ್ರಮಮ್ ।
ದುರ್ಗಪಾರೇತಿ ನದ್ಯಾ ವೈ ನಾಮ ಚಕ್ರೇ ತದಾ ಪ್ರಭುಃ ॥೪೪॥

ದುರ್ಭಿಕ್ಷದ ಕಾಲವು ಕಳೆದ ಮೇಲೆ ವಿಶ್ವಾಮಿತ್ರರು ಪುನಃ ಆಶ್ರಮಕ್ಕೆ ಬಂದು ಆ ನದಿಗೆ ದುರ್ಗಪಾರಾ ಎಂದು ನಾಮಕರಣ ಮಾಡಿದರು.

ಮತಂಗಂ ಯಾಜಯಾಂಚಕ್ರೇ ತತ್ರ ಪ್ರೀತಮನಾಃ ಸ್ವಯಮ್ ।
ತ್ವಂ ಚ ಸೋಮಂ ಭಯಾದ್ ಯಸ್ಯ ಗತಃ ಪಾತುಂ ಸುರೇಶ್ವರ ॥೪೫॥

ಅಲ್ಲಿ ಮತಂಗರ ಮೇಲಿನ ಪ್ರೀತಿಯಿಂದ ತಾವೇ ಮತಂಗರಿಂದ ಯಾಗವನ್ನು ಮಾಡಿಸುವರು. ಎಲೈ ದೇವೇಂದ್ರನೇ, ನೀನು ಸಹಾ ವಿಶ್ವಾಮಿತ್ರರ ಭಯದಿಂದ ಆ ಯಾಗದಲ್ಲಿ ಸೋಮಪಾನವನ್ನು ಮಾಡಲು ಹೋಗಿದ್ದೆ.

ಅತಿನಕ್ಷತ್ರವಂಶಾನಿ ಕ್ರುದ್ಧೋ ನಕ್ಷತ್ರಸಂಪದಾ ।
ಪ್ರತಿಶ್ರವಣಪೂರ್ವಾಣಿ ನಕ್ಷತ್ರಾಣಿ ಸಸರ್ಜ ಯಃ ॥೪೬॥

ಅಶ್ವಿನ್ಯಾದಿ ನಕ್ಷತ್ರಸಮೂಹದಲ್ಲಿ ಇಂತಹ ನಕ್ಷತ್ರದಲ್ಲಿ ಹುಟ್ಟುವವರು ಬ್ರಾಹ್ಮಣರು, ಇಂತಹ ನಕ್ಷತ್ರದಲ್ಲಿ ಹುಟ್ಟುವವರು ಕ್ಷತ್ರಿಯರು ಮೊದಲಾದ ವ್ಯವಸ್ಥೆಯಿದೆ. ವಿಶ್ವಾಮಿತ್ರರು ಅದನ್ನು ಒಪ್ಪದೆ ಶ್ರವಣಾದಿಯಾದ ಪ್ರತಿ ನಕ್ಷತ್ರಗಳನ್ನೇ ಸೃಷ್ಟಿಸಿದರು.

ಗುರುಶಾಪಹತಸ್ಯಾಪಿ ತ್ರಿಶಂಕೋಃ ಶರಣಂ ದದೌ ।
ಬ್ರಹ್ಮರ್ಷಿಶಾಪಂ ರಾಜರ್ಷಿಃ ಕಥಂ ಮೋಕ್ಷ್ಯತಿ ಕೌಶಿಕಃ ॥೪೭॥

ಅವಮತ್ಯ ತದಾ ದೇವೈರ್ಯಜ್ಞಾಂಗಂ ತದ್ ವಿನಾಶಿತಮ್ ।
ಅನ್ಯಾನಿ ಚ ಮಹಾತೇಜಾ ಯಜ್ಞಾಂಗಾನ್ಯಸೃಜತ್ ಪ್ರಭುಃ ॥೪೮॥

ಗುರುಗಳಿಂದ ಶಾಪಗ್ರಸ್ತನಾದ ತ್ರಿಶಂಕುವಿಗೆ ಆಶ್ರಯವನ್ನು ಕೊಟ್ಟರು. ಇಲ್ಲದಿದ್ದರೆ, ರಾಜರ್ಷಿಯಾದ ಕೌಶಿಕನಾದ ತ್ರಿಶಂಕುವು ಬ್ರಹ್ಮರ್ಷಿಗಳ ಶಾಪವನ್ನು ಹೇಗೆ ದಾಟುತ್ತಾನೆ. ಆಗ ದೇವತೆಗಳು ವಿಶ್ವಾಮಿತ್ರರ ಯಜ್ಞದ ಸಲಕರಣೆಗಳನ್ನೆಲ್ಲಾ ನಾಶಮಾಡಿದರು. ಸಮರ್ಥರೂ, ಮಹಾತೇಜಸ್ವಿಗಳೂ ಆದ ವಿಶ್ವಾಮಿತ್ರರು ಯಜ್ಞಕ್ಕಾಗಿ ಬೇರೆ ಅಂಗಗಳನ್ನೇ ಸೃಷ್ಟಿಮಾಡಿದರು.

ನಿನಾಯ ಚ ತದಾ ಸ್ವರ್ಗಂ ತ್ರಿಶಂಕುಂ ಸ ಮಹಾತಪಾಃ ।
ಏತಾನ್ಯನ್ಯಾನಿ ಕರ್ಮಾಣಿ ಭೃಶಂ ದೇವ ಬಿಭೇಮ್ಯಹಮ್ ॥೪೯॥

ಹಾಗೆ ಮಾಡಿ ತಪಸ್ವಿಗಳಾದ ಅವರು ತ್ರಿಶಂಕುವನ್ನು ಸ್ವರ್ಗಕ್ಕೆ ಕಳುಹಿಸಿದರು. ಅವರು ಮಾಡಿದ ಇಂತಹ ಕರ್ಮಗಳು ಅನೇಕ ಇವೆ. ದೇವನೇ, ನಾನು ತುಂಬಾ ಹೆದರುತ್ತೇನೆ.

ಯಥಾ ಮಾಂ ನ ದಹೇತ್ ಕ್ರುದ್ಧಃ ತಥಾ ಪಶ್ಯ ಸುರೇಶ್ವರ ।
ತೇಜಸಾ ನಿರ್ದಹೇಲ್ಲೋಕಾಂಶ್ಚಾಲಯೇದ್ ಧರಣೀಂ ತಥಾ ॥೫೦॥

ಸಂಕ್ಷೇಪೇಚ್ಚ ಮಹಾಮೇರುಂ ಮಹೀಮಾವರ್ತಯೇತ್ ತಥಾ ।
ತಾದೃಶಂ ತಪಸಾ ಯುಕ್ತಂ ಪ್ರದೀಪ್ತಮಿವ ಪಾವಕಮ್ ॥೫೧॥

ಕಥಮಸ್ಮದ್ವಿಧಾ ಬಾಲಾ ಜಿತೇಂದ್ರಿಯಮಭಿಸ್ಪೃಶೇತ್ ।
ಹುತಾಶನಮುಖಂ ದೀಪ್ತಂ ಸೂರ್ಯಚಂದ್ರಾಕ್ಷಿತಾರಕಮ್ ।
ಕಾಲಜಿಹ್ವಂ ಸುರಶ್ರೇಷ್ಠ ಕಥಮಸ್ಮದ್ವಿಧಾ ಸ್ಪೃಶೇತ್ ॥೫೨॥

ದೇವೇಂದ್ರನೇ, ಅವರು ನನ್ನನ್ನು ಸುಡದಿರುವಂತೆ ನೀನು ವ್ಯವಸ್ಥೆಯನ್ನು ಮಾಡು. ಅವರು ತಮ್ಮ ಸಾಮರ್ಥ್ಯದಿಂದ ಮೂರು ಲೋಕಗಳನ್ನೂ ಸುಡಬಹುದು. ಭೂಮಿಯನ್ನೇ ಅಲ್ಲಾಡಿಸಿಯಾರು. ಮಹಾಮೇರುವನ್ನೇ ಚಿಕ್ಕದಾಗಿ ಮಾಡಿಯಾರು. ಭೂಮಿಯನ್ನೇ ತಿರುಗಿಸಿಯಾರು. ಅಂತಹ ತಪಸ್ಸಿನಿಂದ ಯುಕ್ತರಾಗಿ ಉರಿಯುತ್ತಿರುವ ಅಗ್ನಿಯಂತಿರುವ ಜಿತೇಂದ್ರಿಯರಾದ ಋಷಿಗಳನ್ನು ನನ್ನಂತಹ ಬಾಲೆಯು ಹೇಗೆ ಮುಟ್ಟಲು ಸಾಧ್ಯ ? ಅಗ್ನಿಮುಖವಾಗಿರುವ ಸೂರ್ಯಚಂದ್ರರನ್ನು ಕಣ್ಣುಗಳಾಗಿ ಹೊಂದಿದಂತಿರುವ, ಯಮನನ್ನು ಜಿಹ್ವೆಯಂತೆ ಹೊಂದಿರುವ ಆ ದೀಪ್ತರಾದವರನ್ನು ಎಲೈ ಸುರಶ್ರೇಷ್ಠನೇ, ನಮ್ಮಂತಹವರು ಹೇಗೆ ಮುಟ್ಟಲು ಸಾಧ್ಯ ?

ಯಮಶ್ಚ ಸೋಮಶ್ಚ ಮಹರ್ಷಯಶ್ಚ
ವಿಶ್ವೇ ದೇವಾ ವಾಲಖಿಲ್ಯಾಶ್ಚ ಸರ್ವೇ ।
ಯಸ್ಯೋದ್ವಿಜಂತೇ ಮುನಯಃ ಸದೈವ
ಕಸ್ಮಾದ್ ರಾಜನ್ ಮಾದೃಶೀ ನೋದ್ವಿಜೇತ ॥ ೫೩॥

ಎಲೈ ರಾಜನೇ, ಯಾರಿಗೆ ಯಮನೂ, ಚಂದ್ರನೂ, ಮಹರ್ಷಿಗಳೂ, ವಿಶ್ವೇದೇವತೆಗಳೂ, ವಾಲಖಿಲ್ಯರೂ, ಎಲ್ಲಾ ಋಷಿಗಳೂ ಯಾವಾಗಲೂ ಹೆದರುತ್ತಾರೋ, ಅಂತಹವರಿಗೆ ನಾನು ಹೇಗೆ ಹೆದರದಿರಲು ಸಾಧ್ಯ ?

ತ್ವಯ್ಯೇವಮುಕ್ತಾ ತು ಕಥಂ ಸುರೇಶ
ಋಷೇರ್ನ ಗಚ್ಛೇಯಮಹಂ ಸಮೀಪಮ್ ।
ರಕ್ಷಾಂ ತು ಮೇ ಚಿಂತಯ ದೇವರಾಜ
ಯಥಾ ತ್ವದರ್ಥೇ ಸುಖಿನೀ ಚರೇಯಮ್ ॥ ೫೪॥

ಆದರೆ, ಸುರೇಶನೇ, ನೀನು ಹೀಗೆ ಹೇಳಿದ ಮೇಲೆ ನಾನು ಋಷಿಯ ಬಳಿ ಹೋಗದಿರಲು ಹೇಗೆ ಸಾಧ್ಯ ? ದೇವರಾಜನೇ, ನನಗೆ ಹೇಗೆ ರಕ್ಷಣೆಯನ್ನು ಕೊಡಬೇಕೆಂದು ಯೋಚಿಸು. ನಿನ್ನ ಕಾರ್ಯವನ್ನು ಸಾಧಿಸಿ ನಾನು ಸುಖವಾಗಿರಬೇಕು.

ಭವೇಚ್ಚ ಮೇ ಮನ್ಮಥಸ್ತತ್ರ ಕಾರ್ಯೇ
ಸಹಾಯಭೂತಸ್ತವ ಚ ಪ್ರಸಾದಾತ್ ।
ವನಂ ಚ ವಾಯುಃ ಸುರಭಿಃ ಪ್ರವಾಪಯೇತ್
ತಸ್ಮಿನ್ ಕಾಲೇ ತಮೃಷಿಂ ಲೋಭಯಂತ್ಯಾಃ ॥೫೫॥

ಈ ಕಾರ್ಯದಲ್ಲಿ ನನಗೆ ಅಲ್ಲಿ ಮನ್ಮಥನು ನಿನ್ನ ಅನುಗ್ರಹದಿಂದ ಸಹಾಯಕನಾಗಿರಬೇಕು. ವಾಯುವೂ ಆ ವನದಲ್ಲಿ ನಾನು ಆ ಋಷಿಗಳನ್ನು ವಂಚಿಸುವಾಗ ಸುಗಂಧಯುಕ್ತವಾಗಿ ಬೀಸಬೇಕು.

ಕಾಮಂ ತು ಮೇ ಮಾರುತಸ್ತತ್ರ ವಾಸಃ
ಪ್ರಕ್ರೀಡಿತಾಯಾ ವಿವೃಣೋತು ದೇವ ।
ತಥೇತ್ಯುಕ್ತ್ವಾ ವಿಹಿತೇ ಚೈವ ತಸ್ಮಿನ್
ತತೋ ಯಯೌ ಸಾऽऽಶ್ರಮಂ ಕೌಶಿಕಸ್ಯ ॥೫೬॥

ಎಲೈ ದೇವನೇ, ನಾನು ಅಲ್ಲಿ ಆಡುತ್ತಿರುವಾಗ ಮಾರುತನು ನನ್ನ ವಸ್ತ್ರವನ್ನು ತೆಗೆಯಬೇಕು. ಹಾಗೆಯೇ ಆಗಲೆಂದು ಹೇಳಿ ಇಂದ್ರನು ವ್ಯವಸ್ಥೆ ಮಾಡಿದ ಮೇಲೆ ಮೇನಕೆಯು ಅಲ್ಲಿಂದ ವಿಶ್ವಾಮಿತ್ರರ ಆಶ್ರಮಕ್ಕೆ ಹೊರಟಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ

ಸಪ್ತಾಶೀತಿತಮೋऽಧ್ಯಾಯಃ ॥

॥ ಸಂಭವಪರ್ವಣಿ ಪಂಚತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಂಭತ್ತೇಳನೆಯ ಅಧ್ಯಾಯ ಮುಗಿಯಿತು

★★★★★

ಎಂಭತ್ತೆಂಟನೆಯ ಅಧ್ಯಾಯ

(ವಿಶ್ವಾಮಿತ್ರರಿಂದ ಮೇನಕೆಯಲ್ಲಿ ಶಕುಂತಲೆಯ ಜನ್ಮಕಥನ)

ಕಣ್ವಃ

ಏವಮುಕ್ತಸ್ತಯಾ ಶಕ್ರಃ ಸಂದಿದೇಶ ಸದಾಗತಿಮ್ ।
ಪ್ರಾತಿಷ್ಠತ ತತಃ ಕಾಲೇ ಮೇನಕಾ ವಾಯುನಾ ಸಹ ॥೧॥

ಹೀಗೆ ಹೇಳಲ್ಪಟ್ಟ ಇಂದ್ರನು ವಾಯುವಿಗೆ ಆದೇಶವನ್ನು ನೀಡಿದನು. ಅನಂತರ ಯೋಗ್ಯವಾದ ಕಾಲದಲ್ಲಿ ಮೇನಕೆಯು ವಾಯುವಿನ ಜೊತೆಯಲ್ಲಿ ಹೊರಟಳು.

ತಥಾऽಪಶ್ಯದ್ ವರಾರೋಹಾ ತಪಸೋಗ್ರೇಣ ಕರ್ಶಿತಮ್ ।
ವಿಶ್ವಾಮಿತ್ರಂ ತಪಸ್ಯಂತಂ ದುರ್ಧರ್ಷಂ ಸಂಶಿತವ್ರತಮ್ ॥೨॥

ಅವಳು ಆಶ್ರಮಕ್ಕೆ ಹೋಗಿ ಒಳ್ಳೆಯ ವ್ರತಧಾರಿಯೂ, ದುರ್ಧರ್ಷನೂ, ತಪಸ್ಸಿನಿಂದ ಕೃಶನೂ ಆದ, ತಪಸ್ಸನ್ನು ಮಾಡುತ್ತಿರುವ ವಿಶ್ವಾಮಿತ್ರನನ್ನು ನೋಡಿದಳು.

ತತೋऽಭಿವಾದ್ಯ ಸಾ ತಸ್ಮೈ ಪ್ರಾಕ್ರೀಡದ್ ಋಷಿಸನ್ನಿಧೌ ।
ಅಪೋವಾಹ ಚ ವಾಸೋऽಸ್ಯಾ ಮಾರುತಃ ಶಶಿಸನ್ನಿಭಮ್ ॥೩॥

ಅವಳು ವಿಶ್ವಾಮಿತ್ರರಿಗೆ ನಮಸ್ಕರಿಸಿ ಅವರ ಸನ್ನಿಧಿಯಲ್ಲಿ ಆಡುತ್ತಿದ್ದಳು. ಆಗ ಮಾರುತನು ಚಂದ್ರನಂತಿದ್ದ ಅವಳ ಸೂಕ್ಷ್ಮವಸ್ತ್ರವನ್ನು ಹಾರಿಸಿದನು.

ಸಾऽಗಚ್ಛತ್ ತ್ವರಿತಾ ಭೂಮಿಂ ವಾಸಸ್ತದವಲಂಬತೀ ।
ಕುತ್ಸಯುಂತೀವ ಸವ್ರೀಳಂ ಮಾರುತಂ ದೇವವರ್ಣಿನೀ ॥೪॥

ಸುಂದರಿಯಾದ ಅವಳು ನಾಚಿಕೆಯಿಂದ ಮಾರುತನನ್ನು ಹೀಯಾಳಿಸುವಂತೆ ವಸ್ತ್ರದ ತುದಿಯನ್ನು ಹಿಡಿದು ಒಮ್ಮೆಲೇ ನೆಲದ ಮೇಲೆ ಬಿದ್ದಳು.

ಗೃಧ್ರ್ಯಾಂ ವಾಸಸಿ ಸಂಭ್ರಾಂತಾಂ ಮೇನಕಾಂ ಮುನಿಸತ್ತಮಃ ।
ಅನಿರ್ದೇಶ್ಯವಯೋರೂಪಾಮಪಶ್ಯದ್ ವಿವೃತಾಂ ತದಾ ॥೫॥

ದಿಗ್ಭ್ರಮೆಯಿಂದ ವಸ್ತ್ರವನ್ನು ಹಿಡಿಯಲು ಉದ್ಯುಕ್ತಳಾದ ಹೇಳಲು ಬರದ ವಯಸ್ಸನ್ನು ಮತ್ತು ಉತ್ತಮ ರೂಪವನ್ನು ಹೊಂದಿದ್ದ ಅವಳು ವಿವಸ್ತ್ರಳಾಗಿರುವುದನ್ನು ಆಗ ಋಷಿಶ್ರೇಷ್ಠರಾದ ವಿಶ್ವಾಮಿತ್ರರು ನೋಡಿದರು.

ತಸ್ಯಾ ರೂಪಗುಣಂ ದೃಷ್ಟ್ವಾ ಕಾಮಾರ್ತಃ ಸಮಪದ್ಯತ ।
ಚಕಾರ ಭಾವಂ ಸಂಸರ್ಗೇ ತಯಾ ಕಾಮವಶಂ ಗತಃ ॥೬॥

ಅವಳ ರೂಪವನ್ನೂ, ಗುಣವನ್ನೂ ನೋಡಿದ ಋಷಿಗಳು ಕಾಮಾರ್ತರಾದರು. ಕಾಮವಶರಾಗಿ ಅವರು ಅವಳ ಸಮಾಗಮದ ಅಭಿಲಾಷೆಯನ್ನು ಹೊಂದಿದರು.

ನ್ಯಮಂತ್ರಯತ್ ಚಾಪ್ಯೇನಾಂ ಸಾಪ್ಯೈಚ್ಛತ್ ತಮನಿಂದಿತಾ ।
ತೌ ತತ್ರ ಸುಚಿರಂ ಕಾಲಂ ವಿಜಹ್ರಾತೇ ಮಹಾವನೇ ॥೭॥

ಅವಳನ್ನು ಆಮಂತ್ರಿಸಿ ಕರೆದರು. ಅನಿಂದಿತಳಾದ ಅವಳೂ ಅವರನ್ನು ಬಯಸಿದಳು. ಅವರಿಬ್ಬರೂ ಆ ಕಾಡಿನಲ್ಲಿ ಬಹುಕಾಲದವರೆಗೆ ವಿಹರಿಸಿದರು.

ರಮಮಾಣೌ ಯಥಾಕಾಮಂ ಯಥೈಕದಿವಸಂ ತಥಾ ।
ಏವಂ ವರ್ಷಸಹಸ್ರಾಣಾಮತೀತಂ ನಾಭ್ಯಚಿಂತಯತ್ ॥೮॥

ತಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ವಿಹರಿಸುತ್ತಾ ಒಂದು ದಿನದಂತೆ ಬಹುಕಾಲವನ್ನು ಕಳೆದರು. ಹೀಗೆ ಸಹಸ್ರವರ್ಷಗಳು ಉರುಳಿದರೂ ವಿಶ್ವಾಮಿತ್ರರು ಗಮನಿಸಲಿಲ್ಲ.

ಕಾಮಕ್ರೋಧಾವಜಿತವಾನ್ ಮುನಿರ್ನಿತ್ಯಂ ಕ್ಷಮಾನ್ವಿತಃ ।
ಚಿರಾರ್ಜಿತಸ್ಯ ತಪಸಃ ಕ್ಷಯಂ ಸಂಪ್ರಾಪ್ತವಾನೃಷಿಃ ॥೯॥

ಯಾವಾಗಲೂ ಕ್ಷಮೆಯಿಂದ ಕೂಡಿದ ವಿಶ್ವಾಮಿತ್ರಋಷಿಗಳು ಕಾಮಕ್ರೋಧಗಳನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ಅವರಿಗೆ ಬಹಳ ಕಾಲದಿಂದ ಬೆಳೆಸಿದ ತಪಸ್ಸಿನ ಕ್ಷಯವು ಉಂಟಾಯಿತು.

ತಪಸಃ ಸಂಕ್ಷಯಾದೇವ ಮುನಿರ್ಮೋಹಂ ಸಮಾವಿಶತ್ ।
ಮೋಹಾಭಿಭೂತಃ ಕ್ರೋಧಾತ್ಮಾ ಯಯೌ ತಾಂ ಕೌಶಿಕೀಂ ಮುನಿಃ ॥

ತಪಸ್ಸಿನ ನಾಶದಿಂದಲೇ, ವಿಶ್ವಾಮಿತ್ರರಿಗೆ ಮೋಹವುಂಟಾಯಿತು. ಮೋಹಾಭಿಭೂತರಾದ ಅವರು ಸಿಟ್ಟಿನಿಂದ ಕೌಶಿಕೀನದಿಗೆ ಹೋದರು.

ಪಾದೈರ್ಜಲರವಂ ಕೃತ್ವಾ ಅಂತರ್ದ್ವೀಪೇ ಕುಟೀಂ ಗತಃ ।
ಮೇನಕಾ ಗಂತುಕಾಮಾ ವೈ ಶುಶ್ರಾವ ಜಲನಿಸ್ವನಮ್ ॥೧೧॥

ಪಾದಗಳಿಂದ ತಾಡನವನ್ನು ಮಾಡಿ ಜಲದ ನಾದನವನ್ನು ಮಾಡಿ ದ್ವೀಪದ ಮಧ್ಯೆ ಇದ್ದ ಪರ್ಣಕುಟಿಗೆ ಬಂದರು. ವಿಶ್ವಾಮಿತ್ರರನ್ನು ಬಿಟ್ಟು ಹೊರಡುವ ಇಚ್ಛೆಯುಳ್ಳ ಮೇನಕೆಯು ಆ ಜಲನಿಸ್ವನವನ್ನು ಕೇಳಿಸಿಕೊಂಡಳು.

ತಪಸಾ ದೀಪ್ತವೀರ್ಯೋ೯ಸಾವಕಾಶಾದೇತಿ ಯಾತಿ ಚ ।
ಅದ್ಯ ಸಂಜ್ಞಾಂ ವಿಜಾನಾಮಿ ಯಯಾ೯ಸ್ಯ ತಪಸಃಕ್ಷಯಮ್ ॥೧೨॥

ಉಗ್ರವಾದ ತಪಸ್ಸಿನ ಸಾಮರ್ಥ್ಯದಿಂದ ಇವರು ನಿತ್ಯವೂ ಆಕಾಶಮಾರ್ಗದಿಂದ ಬಂದು ಹೋಗುತ್ತಾರೆ. ಇವರ ತಪಸ್ಸು ಕ್ಷಯವಾಗಿದೆಯೇ ಇಲ್ಲವೇ ಎಂದು ಈ ದಿನ ಅವರ ಸಂಕೇತದಿಂದ ತಿಳಿಯುತ್ತೇನೆ ಎಂದು ಯೋಚಿಸಿದಳು.

ಹಂತ ನಿರ್ಯಾತಮಿತ್ಯುಕ್ತ್ವಾ ಋತುಸ್ನಾತಾ ತು ಮೇನಕಾ ।
ಕಾಮರಾಗಾಭಿಭೂತಸ್ಯ ಮುನೇಃ ಪಾರ್ಶ್ವಂ ಜಗಾಮ ಸಾ ॥೧೩॥

ಜಲರವವನ್ನು ಕೇಳಿ ಅವರ ತಪಸ್ಸಿನ ಕ್ಷಯವು ಉಂಟಾಗಿದೆ ಎಂದು ತಿಳಿದು ಋತುಸ್ನಾತಳಾದ ಮೇನಕೆಯು ಕಾಮವಶರಾದ ಋಷಿಗಳ ಪಾರ್ಶ್ವಕ್ಕೆ ಹೋದಳು.

ಜನಯಾಮಾಸ ಸ ಮುನಿರ್ಮೇನಕಾಯಾಂ ಶಕುಂತಲಾಮ್ ।
ಪ್ರಸ್ಥೇ ಹಿಮವತೋ ರಮ್ಯೇ ಮಾಲಿನೀಮಭಿತೋ ನದೀಮ್ ॥೧೪॥

ಆಗ ವಿಶ್ವಾಮಿತ್ರರು ಹಿಮಾಲಯದ ಉನ್ನತ ಪ್ರದೇಶದಲ್ಲಿ ಮಾಲಿನೀ ನದಿಯ ಸಮೀಪದಲ್ಲಿ ಮೇನಕೆಯಲ್ಲಿ ಶಕುಂತಲೆಯನ್ನು ಉತ್ಪಾದಿಸಿದರು.

ದೇವಗರ್ಭೋಪಮಾಂ ಬಾಲಾಂ ಸರ್ವಾಭರಣ ಭೂಷಿತಾಂ ।
ಶಯಾನಾಂ ಶಯನೇ ರಮ್ಯೇ ಮೇನಕಾ ವಾಕ್ಯಮಬ್ರವೀತ್ ॥೧೫॥

ದೇವಗರ್ಭದಂತಿದ್ದು ಸರ್ವಾಭರಣಭೂಷಿತಳಾಗಿ ಒಳ್ಳೆಯ ಹಾಸಿಗೆಯಲ್ಲಿ ಮಲಗಿದ್ದ ಆ ಹೆಣ್ಣು ಶಿಶುವನ್ನು ಕುರಿತು ಮೇನಕೆಯು ಮಾತನಾಡಿದಳು.

ಮಹರ್ಷೇರುಗ್ರತಪಸಸ್ತೇಜಸ್ತ್ವಮವಿನಾಶಿನೀ ।
ತಸ್ಮಾತ್ ಸ್ವರ್ಗಂ ಗಮಿಷ್ಯಾಮಿ ದೇವಕಾರ್ಯಾರ್ಥಮಾಗತಾ ॥೧೬॥

ಮಹರ್ಷಿಗಳಾದ, ಉಗ್ರತಪಸ್ವಿಗಳಾದ ವಿಶ್ವಾಮಿತ್ರರ ತೇಜಸ್ಸಿನಿಂದ ನೀನು ಜನಿಸಿದ್ದೀಯೇ. ಆದ್ದರಿಂದ ನಿನಗೆ ವಿನಾಶವಾಗಲೀ ವಿಪತ್ತಾಗಲೀ ಬರುವುದಿಲ್ಲ. ಆದ್ದರಿಂದ ದೇವಕಾರ್ಯದ ಸಲುವಾಗಿ ಬಂದ ನಾನು ಸ್ವರ್ಗಕ್ಕೆ ಹೋಗುವೆನು.

ಕಣ್ವಃ

ಜಾತಮುತ್ಸೃಜ್ಯ ತಂ ಗರ್ಭಂ ಮೇನಕಾ ಮಾಲಿನೀಮನು ।
ಶಕ್ರಸಂಸದಮಾಗಚ್ಛತ್ ಕೃತ್ವಾ ಕಾರ್ಯಂ ಶಚೀಪತೇಃ ॥೧೭॥

ಮೇನಕೆಯು ಆಗ ತಾನೇ ಹುಟ್ಟಿದ ಆ ಮಗುವನ್ನು ಮಾಲಿನೀ ನದಿಯ ದಡದಲ್ಲಿ ಬಿಟ್ಟು ಇಂದ್ರನ ಕಾರ್ಯವನ್ನು ಎಸಗಿದವಳಾಗಿ ಇಂದ್ರನ ಸಭೆಗೆ ಹೊರಟುಹೋದಳು.

ತಂ ವನೇ ಗಹನೇ ಗರ್ಭಂ ಸಿಂಹವ್ಯಾಘ್ರನಿಷೇವಿತೇ ।
ದೃಷ್ಟ್ವಾ ಶಯಾನಂ ಶಕುನಾಃ ಸಮಂತಾತ್ ಪರ್ಯವಾರಯನ್ ॥೧೮॥

ದಟ್ಟವಾದ ಮತ್ತು ಸಿಂಹ ವ್ಯಾಘ್ರಗಳಿಂದ ತುಂಬಿದ ಕಾಡಿನಲ್ಲಿ ಮಲಗಿರುವ ಆ ಶಿಶುವನ್ನು ನೋಡಿ ಪಕ್ಷಿಗಳು ಅವಳನ್ನು ಸುತ್ತುವರಿದವು.

ನೈನಂ ಹಿಂಸ್ಯುರ್ವನೇ ಬಾಲಾಂ ಕ್ರವ್ಯಾದಾ ಮಾಂಸಗರ್ಧಿನಃ ।
ಇತಿ ಕೃತ್ವಾ ಸ್ಮ ರಕ್ಷಂತಿ ಶಕುಂತಾ ಮೇನಕಾತ್ಮಜಾಮ್ ॥೧೯॥

ಈ ಹೆಣ್ಣು ಶಿಶುವನ್ನು ಕಾಡಿನಲ್ಲಿರುವ ಮಾಂಸದ ಆಸೆಯನ್ನು ಹೊಂದಿರುವ, ಮಾಂಸಾಹಾರಿ ಪ್ರಾಣಿಗಳು ಹಿಂಸೆ ಮಾಡದಿರಲಿ ಎಂದು ನಿಶ್ಚಯಿಸಿ ಆ ಪಕ್ಷಿಗಳು ಮೇನಕೆಯ ಮಗಳನ್ನು ರಕ್ಷಿಸಿದವು.

ಉಪಸ್ಪೃಷ್ಟಂ ಗತಶ್ಚಾಹಂ ತಾಮಪಶ್ಯಮನಿಂದಿತಾಮ್ ।
ನಿರ್ಜನೇ ವಿಪಿನೇ ರಮ್ಯೇ ಶಕುಂತೈಃ ಪರಿವಾರಿತಾಮ್ ॥೨೦॥

ಸ್ನಾನ ಮಾಡಲು ಅಲ್ಲಿಗೆ ಹೋದ ನಾನು, ನಿರ್ದುಷ್ಟವಾದ ಹೆಣ್ಣುಮಗುವು, ನಿರ್ಜನವಾದ, ಸುಂದರವಾದ ಅರಣ್ಯದಲ್ಲಿ ಪಕ್ಷಿಗಳಿಂದ ಪರಿವೃತವಾಗಿರುವುದನ್ನು ನೋಡಿದೆನು.

ಮಾಂ ದೃಷ್ಟ್ವೈವಾನ್ವಪದ್ಯಂತ ಪಾದಯೋಃ ಪತಿತಾ ದ್ವಿಜಾಃ ।
ಅಬ್ರುವನ್ ಶಕುನಾಃ ಸರ್ವೇ ಕಲಂ ಮಧುರಭಾಷಿಣಃ ॥೨೧॥

ನನ್ನನ್ನು ನೋಡಿದ ಕೂಡಲೇ ಆ ಪಕ್ಷಿಗಳು ನನ್ನ ಪಾದಕ್ಕೆರಗಿ ಮಧುರ ಭಾಷೆಯಿಂದ ಮಧುರವಾಗಿ ಮಾತನಾಡಿದವು.

ವಿಶ್ವಾಮಿತ್ರಸುತಾಂ ಬ್ರಹ್ಮನ್ ನ್ಯಾಸಭೂತಾಂ ಭರಸ್ವ ವೈ ।
ಕಾಮಕ್ರೋಧಾವಜಿತವಾನ್ ಸಖಾ ತೇ ಕೌಶಿಕೀಂ ಗತಃ ॥೨೨॥

ಪೂಜ್ಯರೇ, ನಮ್ಮಲ್ಲಿ ನ್ಯಾಸವಾಗಿದ್ದ ವಿಶ್ವಾಮಿತ್ರರ ಈ ಮಗಳನ್ನು ಪೋಷಿಸಿ. ನಿಮ್ಮ ಸ್ನೇಹಿತರಾದ ವಿಶ್ವಾಮಿತ್ರರು ಕಾಮಕ್ರೋಧಗಳನ್ನು ಜಯಿಸಲಾರದೆ ಇಲ್ಲಿಂದ ಕೌಶಿಕೀ ನದಿಗೆ ಹೋದರು.

ತಸ್ಮಾತ್ ಪೋಷಯ ತತ್ಪುತ್ರೀಂ ದಯಾವಾನಿತಿ ತೇಽಬ್ರುವನ್ ।
ಸರ್ವಭೂತರುತಜ್ಞೋಽಹಂ ದಯಾವಾನ್ ಸರ್ವಜಂತುಷು ॥೨೩॥

ಆದ್ದರಿಂದ ದಯಾವಂತರಾದ ನೀವು ಈ ಮಗುವನ್ನು ಪೋಷಿಸಬೇಕು ಎಂದು ಹೇಳಿದವು. ಎಲ್ಲಾ ಪ್ರಾಣಿಗಳಲ್ಲೂ ದಯೆಯುಳ್ಳ ನನಗೆ ಎಲ್ಲಾ ಪ್ರಾಣಿಗಳ ಭಾಷೆಯು ಅರ್ಥವಾಗುತ್ತಿತ್ತು.

ನಿರ್ಜನೇಽಪಿ ಮಹಾರಣ್ಯೇ ಶಕುಂತೈಃ ಪರಿವಾರಿತಾಮ್ ।
ಆನಯಿತ್ವಾ ತತಶ್ಚೈನಾಂ ದುಹಿತೃತ್ವೇ ನ್ಯಯೋಜಯಮ್ ॥೨೪॥

ನಿರ್ಜನವಾದ ಮಹಾರಣ್ಯದಲ್ಲಿಯೂ ಪಕ್ಷಿಗಳಿಂದ ರಕ್ಷಿತಳಾದ ಅವಳನ್ನು ಕರೆತಂದು ಅವಳನ್ನು ನನ್ನ ಮಗಳೆಂದು ಭಾವಿಸಿದೆನು.

ಶರೀರಕೃತ್ ಪ್ರಾಣದಾತಾ ಯಸ್ಯ ಚಾನ್ನಾನಿ ಭುಂಜತೇ ।
ಕ್ರಮೇಣೈತೇ ತ್ರಯೋಽಪ್ಯುಕ್ತಾಃ ಪಿತರೋ ಧರ್ಮಸಾಧನೇ ॥೨೫॥

ಶರೀರವನ್ನು ಸೃಷ್ಟಿಸಿದವನು, ಪ್ರಾಣವನ್ನು ಕೊಡುವವನು, ಅನ್ನವನ್ನು ನೀಡುವವನು, ಈ ಮೂವರೂ ಕ್ರಮವಾಗಿ ಧರ್ಮಸಾಧನೆಯ ವಿಷಯದಲ್ಲಿ ಪಿತೃಗಳೆನಿಸುತ್ತಾರೆ.

ನಿರ್ಜನೇ ಚ ವನೇ ಯಸ್ಮಾಚ್ಛಕುಂತೈಃ ಪರಿವಾರಿತಾ ।
ಶಕುಂತಲೇತಿ ನಾಮಾಸ್ಯಾಃ ಕೃತಂ ಚಾಪಿ ತತೋ ಮಯಾ ॥೨೬॥

ನಿರ್ಜನವಾದ ಅರಣ್ಯದಲ್ಲಿ ಶಕುಂತಗಳಿಂದ ರಕ್ಷಿಸಲ್ಪಟ್ಟ ಕಾರಣದಿಂದ ನಾನು ಅವಳಿಗೆ ಶಕುಂತಲಾ ಎಂದೇ ನಾಮಕರಣ ಮಾಡಿದೆ.

ಏವಂ ದುಹಿತರಂ ವಿದ್ಧಿ ಮಮ ಸೌಮ್ಯ ಶಕುಂತಲಾಮ್ ।
ಶಕುಂತಲಾ ಚ ಪಿತರಂ ಮನ್ಯತೇ ಮಾಮನಿಂದಿತಾ ॥೨೭॥

ಎಲೈ ಸೌಮ್ಯನೇ, ಶಕುಂತಲೆಯು ಹೀಗೆ ನನ್ನ ಮಗಳೆಂದು ತಿಳಿ. ನಿರ್ದುಷ್ಟಳಾದ ಶಕುಂತಲೆಯೂ ಸಹ ನನ್ನನ್ನು ತಂದೆಯೆಂದೇ ತಿಳಿದಿದ್ದಾಳೆ.

ಶಕುಂತಲಾ

ಏತದಾಚಷ್ಟ ಭಗವಾನ್‌ಮಮ ಜನ್ಮ ಮಹತಪಾಃ ।
ಸುತಾಂ ಕಣ್ವಸ್ಯ ಮಾಮೇವಂ ವಿದ್ಧಿ ತ್ವಂ ಮನುಜಾಧಿಪ ॥೨೮॥

ಕಣ್ವಂ ಹಿ ಪಿತರಂ ಮನ್ಯೇ ಪಿತರಂ ಸ್ವಮಜಾನತೀ ।
ಇತಿ ತೇ ಕಥಿತಂ ರಾಜನ್ ಯಥಾವೃತ್ತಂ ಯಥಾಶ್ರುತಮ್ ॥೨೯॥

ಇಲ್ಲಿಗೆ ಬಂದಿದ್ದ ಪೂಜ್ಯರಾದ, ಮಹಾ ತಪಸ್ವಿಗಳಾದ ಋಷಿಗಳಿಗೆ ಪೂಜ್ಯರಾದ ಕಣ್ವರು ಹೀಗೆ ನನ್ನ ಜನ್ಮವನ್ನು ತಿಳಿಸಿದರು. ಎಲೈ ರಾಜನೇ, ನಾನು ಈ ರೀತಿ ಕಣ್ವರ

ಮಗಳೆಂದು ತಿಳಿ. ನನ್ನ ಸ್ವಂತ ತಂದೆ ಯಾರೆಂದು ತಿಳಿಯದೆ ನಾನು ಕಣ್ವರನ್ನೇ ತಂದೆಯೆಂದು ಭಾವಿಸಿದ್ದೇನೆ. ಎಲೈ ರಾಜನೇ, ಹಿಂದೆ ನಡೆದ ಘಟನೆಯನ್ನು ನಾನು ಕೇಳಿದಂತೆ ನಿನಗೆ ತಿಳಿಸಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಅಷ್ಟಾಶೀತಿತಮೋऽಧ್ಯಾಯಃ ॥

॥ ಸಂಭವಪರ್ವಣಿ ಷಟ್‌ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಂಭತ್ತೆಂಟನೆಯ ಅಧ್ಯಾಯ ಮುಗಿಯಿತು

★★★★★

ಎಂಬತ್ತೊಂಭತ್ತನೆಯ ಅಧ್ಯಾಯ

(ದುಷ್ಷಂತ ಶಕುಂತಲೆಯರ ವಿವಾಹ, ಶಕುಂತಲೆಯ ಷರತ್ತು, ಕಣ್ವರಿಂದ ವಿವಾಹದ ಅನುಮೋದನೆ.)

ದುಷ್ಷಂತಃ

ಸುವ್ಯಕ್ತಂ ರಾಜಪುತ್ರೀ ತ್ವಂ ಯಥಾ ಕಲ್ಯಾಣಿ ಭಾಷಸೇ ।
ಭಾರ್ಯಾ ಮೇ ಭವ ಸುಶ್ರೋಣಿ ಬ್ರೂಹಿ ಕಿಂ ಕರವಾಣಿ ತೇ ॥೧॥

ಕಲ್ಯಾಣಿಯೇ, ನೀನು ಮಾತನಾಡಿದಂತೆ ನೀನು ನಿಶ್ಚಯವಾಗಿ ರಾಜಪುತ್ರಿಯೇ ಸರಿ. ಸುಂದರಿಯೇ, ನನ್ನ ಪತ್ನಿಯಾಗು. ನಿನಗೆ ಏನು ಮಾಡಲಿ ಹೇಳು.

ಸುವರ್ಣಮಾಲಾಂ ವಾಸಾಂಸಿ ಕುಂಡಲೇ ಪರಿಪಾದುಕೇ ।
ನಾನಾಪಟ್ಟಣಜೈಃ ಶುಭ್ರೈರ್ಮಣಿರತ್ನೈಶ್ಚ ಶೋಭನೈಃ ॥೨॥

ಆಹರಾಮಿ ತವಾದ್ಯಾಹಂ ನಿಷ್ಕಾದೀನ್ಯಮಿತಾನಿ ಚ ।
ಸರ್ವಂ ರಾಜ್ಯಂ ತವಾದ್ಯ ತ್ವಂ ಭಾರ್ಯಾ ಮೇ ಭವ ಶೋಭನೇ ॥೩॥

ಚಿನ್ನದ ಸರಗಳನ್ನೂ, ವಸ್ತ್ರಗಳನ್ನೂ, ಕರ್ಣಕುಂಡಲಗಳನ್ನೂ, ಪಾದುಕೆಗಳನ್ನೂ, ಅನೇಕ ಪಟ್ಟಣಗಳಲ್ಲಿ ದೊರೆಯುವ ಶುಭ್ರವಾದ ಮಣಿರತ್ನಗಳನ್ನೂ ಮತ್ತು ಅಮಿತ ನಿಷ್ಕಾದಿಗಳನ್ನೂ ನಿನ್ನ ಸಲುವಾಗಿ ತರುತ್ತೇನೆ. ನನ್ನ ಎಲ್ಲಾ ರಾಜ್ಯವು ಇಂದಿನಿಂದ ನಿನ್ನದೇ. ಶುಭಳಾದವಳೇ, ನನ್ನ ಭಾರ್ಯೆಯಾಗು.

ಗಾಂಧರ್ವೇಣ ಚ ಮಾಂ ಭೀರು ವಿವಾಹೇನೈಹಿ ಸುಂದರಿ ।
ವಿವಾಹಾನಾಂ ಹಿ ರಂಭೋರು ಗಾಂಧರ್ವಃ ಶ್ರೇಷ್ಠ ಉಚ್ಯತೇ ॥೪॥

ಸುಂದರಿಯೇ, ಗಾಂಧರ್ವ ವಿವಾಹದಿಂದ ನನ್ನನ್ನು ಸಮೀಪಿಸು. ರಂಭೋರುವೇ, ಎಲ್ಲಾ ವಿವಾಹಗಳಲ್ಲಿ ಗಾಂಧರ್ವ ವಿವಾಹವು ಶ್ರೇಷ್ಠವೆನಿಸುತ್ತದೆ.

ಶಕುಂತಲಾ

ಫಲಾಹಾರೋ ಗತೋ ರಾಜನ್ ಪಿತಾ ಮಮ ಮಹಾತಪಾಃ ।
ಮುಹೂರ್ತಂ ಸಂಪ್ರತೀಕ್ಷಸ್ವ ಸ ಮಾಂ ತುಭ್ಯಂ ಪ್ರದಾಸ್ಯತಿ ॥೫॥

ಎಲೈ ರಾಜನೇ, ಮಹಾತಪಸ್ವಿಯಾದ ನನ್ನ ತಂದೆಯು ಹಣ್ಣುಗಳನ್ನು ತರಲು ಹೋಗಿದ್ದಾನೆ. ಒಂದು ಮುಹೂರ್ತ ನಿರೀಕ್ಷಿಸು. ಅವನೇ ನಿನಗೆ ನನ್ನನ್ನು ಕೊಡುವನು.

ಪಿತಾ ಹಿ ಮೇ ಪ್ರಭುರ್ನಿತ್ಯಂ ದೈವತಂ ಪರಮಂ ಮಮ ।
ಯಸ್ಯ ಮಾಂ ದಾಸ್ಯತಿ ಪಿತಾ ಸ ಮೇ ಭರ್ತಾ ಭವಿಷ್ಯತಿ ॥೬॥

ತಂದೆಯೇ ನನ್ನ ಒಡೆಯ. ಅವನೇ ನನ್ನ ಪರಮ ದೇವತೆ. ತಂದೆಯು ನನ್ನನ್ನು ಯಾರಿಗೆ ಕೊಡುವನೋ ಅವನು ನನ್ನ ಪತಿಯಾಗುವನು.

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ।
ಪುತ್ರಸ್ತು ಸ್ಥಾವಿರೇ ಭಾವೇ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ॥೭॥

ಬಾಲ್ಯದಲ್ಲಿ ತಂದೆಯು ರಕ್ಷಿಸುತ್ತಾನೆ. ಯೌವನದಲ್ಲಿ ಪತಿಯು ರಕ್ಷಿಸುತ್ತಾನೆ. ವೃದ್ಧಾಪ್ಯದಲ್ಲಿ ಪುತ್ರನು ರಕ್ಷಿಸುತ್ತಾನೆ. ಸ್ತ್ರೀಯು ಸ್ವಾತಂತ್ರ್ಯವನ್ನು ವಹಿಸಬಾರದು.

ಅವಮನ್ಯಮಾನಾ ರಾಜೇಂದ್ರ ಪಿತರಂ ಮೇ ಮನಸ್ವಿನಮ್ ।
ಅಧರ್ಮೇಣ ಹಿ ಧರ್ಮಿಷ್ಠ ಕಥಂ ವರಮುಪಾಸ್ಮಹೇ ॥೮॥

ಎಲೈ ಧರ್ಮಿಷ್ಠನಾದ ರಾಜನೇ, ಧೈರ್ಯಶಾಲಿಯಾದ ನನ್ನ ತಂದೆಯನ್ನು ಅವಮಾನ ಮಾಡಿ ಅಧರ್ಮದಿಂದ ನಿನ್ನನ್ನು ಹೇಗೆ ವರಿಸಲಿ?

ದುಷ್ಷಂತಃ

ಮಾ ಮೈವಂ ವದ ಸುಶ್ರೋಣಿ ತಪೋರಾಶಿಂ ದಯಾತ್ಮಕಮ್ ॥೯॥

ಸುಂದರಿಯೇ, ತಪೋರಾಶಿಯೂ, ದಯಾಪೂರ್ಣನೂ ಆದ ತಂದೆಯ ವಿಷಯದಲ್ಲಿ ಹೀಗೆ ಮಾತನಾಡಬೇಡ.

ಶಕುಂತಲಾ

ಮನ್ಯುಪ್ರಹರಣಾ ವಿಪ್ರಾ ನ ವಿಪ್ರಾಃ ಶಸ್ತ್ರಪಾಣಯಃ ।
ಮನ್ಯುನಾ ಘ್ನಂತಿ ತೇ ಶತ್ರೂನ್ ವಜ್ರೇಣೇಂದ್ರ ಇವಾಸುರಾನ್ ॥

ಅಗ್ನಿರ್ದಹತಿ ತೇಜೋಭಿಃ ಸೂರ್ಯೋ ದಹತಿ ರಶ್ಮಿಭಿಃ ।
ರಾಜಾ ದಹತಿ ದಂಡೇನ ಬ್ರಾಹ್ಮಣೋ ಮನ್ಯುನಾ ದಹೇತ್ ॥೧೧॥

ಬ್ರಾಹ್ಮಣರು ಕೋಪವನ್ನೇ ಆಯುಧವಾಗಿವುಳ್ಳವರು. ಅವರು ಕೈಯಲ್ಲಿ ಶಸ್ತ್ರವನ್ನು ಹಿಡಿದಿರುವುದಿಲ್ಲ. ಇಂದ್ರನು ಅಸುರರನ್ನು ವಜ್ರಾಯುಧದಿಂದ ಸಂಹರಿಸಿದಂತೆ ಅವರು ಕೋಪದಿಂದಲೇ ಶತ್ರುಗಳನ್ನು ಸಂಹರಿಸುತ್ತಾರೆ. ಅಗ್ನಿಯು ತನ್ನ ತೇಜಸ್ಸಿನಿಂದ ಸುಡುತ್ತಾನೆ, ಸೂರ್ಯನು ಕಿರಣಗಳಿಂದ ಸುಡುತ್ತಾನೆ, ರಾಜನು ಶಿಕ್ಷೆಯಿಂದ ಸುಡುತ್ತಾನೆ, ಬ್ರಾಹ್ಮಣನು ಸಿಟ್ಟಿನಿಂದಲೇ ಸುಡುತ್ತಾನೆ.

ದುಷ್ಮಂತಃ

ಜಾನಾಮಿ ಭದ್ರೇ ಮಹರ್ಷಿಂ ತಸ್ಯ ಮನ್ಯುರ್ನ ವಿದ್ಯತೇ ।
ಇಚ್ಛಾಮಿ ತ್ವಾಂ ವರಾರೋಹೇ ಭಜ ಮಾಂ ತ್ವಮನಿಂದಿತೇ ॥೧೨॥

ಭದ್ರೇ, ನಾನು ಮಹರ್ಷಿಗಳನ್ನು ತಿಳಿದಿದ್ದೇನೆ. ಅವರಿಗೆ ಕೋಪವಿಲ್ಲ. ಸುಂದರಿಯೇ, ನಾನು ನಿನ್ನನ್ನು ಬಯಸುತ್ತಿದ್ದೇನೆ. ಅನಿಂದಿತಳಾದವಳೇ, ನನ್ನಲ್ಲಿ ಅನುರಾಗವನ್ನು ತೋರಿಸು.

ತ್ವದರ್ಥಂ ಮಾಂ ಸ್ಥಿತಂ ವಿದ್ಧಿ ತ್ವದ್ಗತಂ ಹಿ ಮನೋ ಮಮ ।
ಆತ್ಮನೋ ಬಂಧುರಾತ್ಮೈವ ಗತಿರಾತ್ಮೈವ ಚಾತ್ಮನಃ ।
ಆತ್ಮನೋ ಮಿತ್ರಮಾತ್ಮೈವ ಶತ್ರುರಾತ್ಮೈವ ಚಾತ್ಮನಃ ॥೧೩॥

ನಿನ್ನ ಸಲುವಾಗಿ ನಾನು ಇಲ್ಲಿ ನಿಂತಿದ್ದೇನೆ. ನನ್ನ ಮನಸ್ಸು ನಿನ್ನಲ್ಲಿ ಲಗ್ನವಾಗಿದೆ. ತನಗೆ ತಾನೇ ಬಂಧು, ತನಗೆ ತಾನೇ ಗತಿ, ತನಗೆ ತಾನೇ ಮಿತ್ರ , ಮತ್ತು ತನಗೆ ತಾನೇ ಶತ್ರು .

ಆತ್ಮನ್ಯೇವಾತ್ಮನೋ ದಾನಂ ಕರ್ತುಮರ್ಹಸಿ ಧರ್ಮತಃ ।
ಅಷ್ಟಾವೇವ ಸಮಾಸೇನ ವಿವಾಹಾ ಧರ್ಮತಃ ಸ್ಮೃತಾಃ ॥೧೪॥

ಬ್ರಾಹ್ಮೋ ದೈವಸ್ತಥೈವಾರ್ಷಃ ಪ್ರಾಜಾಪತ್ಯಸ್ತಥಾऽऽಸುರಃ ।
ಗಾಂಧರ್ವೋ ರಾಕ್ಷಸಶ್ಚೈವ ಪೈಶಾಚಶ್ಚಾಷ್ಟಮೋऽಧಮಃ ॥೧೫॥

ನೀನಾಗಿಯೇ ಧರ್ಮದಿಂದ ನಿನ್ನನ್ನು ದಾನವನ್ನು ಮಾಡು. ಒಟ್ಟು ಎಂಟು ವಿವಾಹಗಳು ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟಿವೆ. ಬ್ರಾಹ್ಮಣ, ದೈವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ, ರಾಕ್ಷಸ, ಪೈಶಾಚ ಇವು ಆ ಎಂಟು ವಿವಾಹ ಪ್ರಕಾರಗಳು. ಪೈಶಾಚವು ಎಲ್ಲಕ್ಕಿಂತಲೂ ನಿಕೃಷ್ಟವಾದುದು.

ತೇಷಾಂ ಧರ್ಮ್ಯಂ ಯಥಾಪೂರ್ವಂ ಮನುಃ
ಸ್ವಾಯಂಭುವೋऽಬ್ರವೀತ್ ।
ಪ್ರಶಸ್ತಾಂಶ್ಚತುರಃ ಪೂರ್ವಾನ್ ಬ್ರಾಹ್ಮಣಸ್ಯಾವಧಾರಯ ॥೧೬॥

ಅವುಗಳಲ್ಲಿ ಹಿಂದಿನವು ಮುಂದಿನವುಗಳಿಗಿಂತ ಹೆಚ್ಚು ಧಾರ್ಮಿಕವಾದುದು ಎಂದು ಸ್ವಾಯಂಭುವ ಮನುವು ಹೇಳಿದ್ದಾನೆ. ಮೊದಲನೆಯ ನಾಲ್ಕು ವಿವಾಹಗಳು ಬ್ರಾಹ್ಮಣರಿಗೆ ಪ್ರಶಸ್ತವಾದುದೆಂದು ತಿಳಿ.

ಷಡಾನುಪೂರ್ವ್ಯಾತ್ ಕ್ಷತ್ರಸ್ಯ ವಿದ್ಧಿ ಧರ್ಮಾನನಿಂದಿತೇ ।
ರಾಜ್ಞಾಂ ತು ರಾಕ್ಷಸೋऽಯುಕ್ತೋ ವಿಟ್‌ಶೂದ್ರೇಷ್ವಾಸುರಃ ಸ್ಮೃತಃ॥೧೭॥

ಅನಿಂದಿತೆಯೇ, ಕ್ಷತ್ರಿಯನಿಗೆ ಮೊದಲನೆಯ ಆರು ವಿವಾಹಗಳು ಧಾರ್ಮಿಕವೆಂದು ತಿಳಿ. ರಾಜರಿಗೆ ರಾಕ್ಷಸವಿವಾಹವು ಅಯುಕ್ತವಾದುದು. ವೈಶ್ಯರಿಗೆ ಮತ್ತು ಶೂದ್ರರಿಗೆ ಆಸುರ ವಿವಾಹವು ಹೇಳಲ್ಪಟ್ಟಿದೆ.

ಪಂಚಾನಾಂ ಚ ತ್ರಯೋ ಧರ್ಮ್ಯಾ ದ್ವಾವಧರ್ಮೌ ಮತಾವಿಹ ।
ಪೈಶಾಚ ಆಸುರಶ್ಚೈವ ನ ಕರ್ತವ್ಯೌ ಕಥಂಚನ ॥೧೮॥

ಪ್ರಾಜಾಪತ್ಯಾದಿ ಐದು ವಿವಾಹಗಳಲ್ಲಿ ಮೂರು ಧಾರ್ಮಿಕವಾದವು, ಎರಡು ಅಧಾರ್ಮಿಕವಾದವು ಎಂದು ಹೇಳಲ್ಪಡುತ್ತವೆ. ಪೈಶಾಚ ಮತ್ತು ಆಸುರ ವಿವಾಹಗಳನ್ನು ಮಾಡಲೇಬಾರದು.

ಅನ್ಯೇನ ವಿಧಿನಾ ಕಾರ್ಯೋ ಧರ್ಮಶ್ಚೈವ ಸನಾತನಃ ।
ಗಾಂಧರ್ವರಾಕ್ಷಸೌ ಕ್ಷತ್ರೇ ಧರ್ಮ್ಯೌ ತೌ ಮಾ ವಿಶಂಕಥಾಃ ॥೧೯॥

ಬೇರೆ ಯಾವುದಾದರೂ ವಿಧಿಯಿಂದ ಮಾಡುವುದು ಸನಾತನವಾದ ಧರ್ಮ. ಗಾಂಧರ್ವ, ರಾಕ್ಷಸ ವಿವಾಹಗಳು ಕ್ಷತ್ರಿಯರಿಗೆ ಧಾರ್ಮಿಕವೇ ಆಗಿವೆ. ಆದ್ದರಿಂದ ಸಂಶಯಪಡಬೇಡ.

ಪೃಥಗ್ ವಾ ಯದಿ ವಾ ಮಿಶ್ರೌ ಕರ್ತವ್ಯೌ ನಾತ್ರ ಸಂಶಯಃ ।
ಸಾ ತ್ವಂ ಮಮ ಸಕಾಮಸ್ಯ ಸಕಾಮಾ ಭವ ಶೋಭನೇ ।
ಗಾಂಧರ್ವೇಣ ವಿವಾಹೇನ ಭಾರ್ಯಾ ಮೇ ಭವ ಭಾಮಿನಿ ॥೨೦॥

ಕೆಲವು ವಿವಾಹಗಳನ್ನು ಬೇರೆ ಬೇರೆಯಾಗಿಯೂ, ಕೆಲವು ವಿವಾಹಗಳನ್ನು ಬೇರೆ ಬೇರೆ ಪ್ರಕಾರಗಳನ್ನು ಬೆರೆಸಿಯೂ ಮಾಡಬಹುದು. ಇದರಲ್ಲಿ ಸಂಶಯವಿಲ್ಲ. ಶೋಭನೆಯೇ, ಕಾಮುವುಳ್ಳ ನನಗೆ ನೀನು ಕಾಮುವುಳ್ಳವಳಾಗಿ ಗಾಂಧರ್ವವಿವಾಹಪ್ರಕಾರದಿಂದ ನನ್ನ ಭಾರ್ಯೆಯಾಗು.

ಶಕುಂತಲಾ

ಯದಿ ಧರ್ಮಪಥಸ್ತ್ವೇಷ ಯದಿ ಚಾತ್ಮಾ ಪ್ರಭುರ್ಮಮ ।
ಪ್ರದಾನೇ ಪೌರವಶ್ರೇಷ್ಠ ಶೃಣು ಮೇ ಸಮಯಂ ಪ್ರಭೋ ॥೨೧॥

ಎಲೈ ಪೌರವಶ್ರೇಷ್ಠನೇ, ಇದು ಧರ್ಮದ ಮಾರ್ಗವೇ ಆದರೆ ಮತ್ತು ನಾನೇ ದಾನ ಮಾಡಲು ಸಮರ್ಥಳಾಗುವುದಾದರೆ, ದಾನದ ವಿಷಯದಲ್ಲಿ ನನ್ನ ಷರತ್ತನ್ನು ಹೇಳುತ್ತೇನೆ ಕೇಳು.

ಸತ್ಯಂ ಮೇ ಪ್ರತಿಜಾನೀಷ್ವ ಯತ್ ತ್ವಾಂ ಯಾಚಾಮ್ಯಹಂ ರಹಃ ।
ಮಮ ಜಾಯೇತ ಯಃ ಪುತ್ರಃ ಸ ರಾಜಾ ತ್ವದನಂತರಮ್ ॥೨೨॥

ನಾನು ಏಕಾಂತದಲ್ಲಿ ನಿನ್ನನ್ನು ಏನು ಕೇಳುತ್ತೇನೆಯೋ, ಅದನ್ನು ಸತ್ಯವಾಗಿ ಮಾಡುತ್ತೇನೆಂದು ಪ್ರತಿಜ್ಞೆ ಮಾಡು. ನನಗೆ ಯಾವ ಪುತ್ರನು ಹುಟ್ಟುವನೋ, ಅವನು ನಿನ್ನ ತರುವಾಯ ರಾಜನಾಗಬೇಕು.

ಯುವರಾಜಶ್ಚ ಕರ್ತವ್ಯಃ ಸತ್ಯಮೇತದ್ ಬ್ರವೀಹಿ ಮೇ ।
ಯದ್ಯೇತದೇವಂ ದುಷ್ಪಂತ ಅಸ್ತು ಮೇ ಸಂಗಮಸ್ತ್ವಯಾ ॥೨೩॥

ಅವನನ್ನು ಮೊದಲೇ ಯುವರಾಜನನ್ನಾಗಿ ಮಾಡಬೇಕು. ಈ ವಿಷಯವನ್ನು ನಾನು ಸತ್ಯವಾಗಿ ನುಡಿಯುತ್ತಿದ್ದೇನೆ. ದುಷ್ಪಂತನೇ, ನೀನು ಇದಕ್ಕೆ ಒಪ್ಪುವುದಾದರೆ, ನನ್ನ ಸಂಗಮವನ್ನು ಮಾಡಬಹುದು.

ವೈಶಂಪಾಯನಃ

ತಸ್ಯಾಸ್ತು ಸರ್ವಂ ಸಂಶ್ರುತ್ಯ ಯಥೋಕ್ತಂ ಸ ವಿಶಾಂಪತಿಃ ।
ದುಷ್ಪಂತಃ ಪುನರೇವಾಹ ಯದ್ಯದಿಚ್ಛಸಿ ತದ್ ವದ ॥೨೪॥

ರಾಜನಾದ ದುಷ್ಪಂತನು ಅವಳು ಕೇಳಿದುದೆಲ್ಲವನ್ನೂ ನಡೆಸಿಕೊಡುತ್ತೇನೆಂದು ಪ್ರತಿಜ್ಞೆ ಮಾಡಿ ಪುನಃ ನಿನ್ನ ಮನಸ್ಸಿನಲ್ಲೇನಾದರೂ ಇದ್ದರೆ ಅದನ್ನು ಹೇಳು ಎಂದು ಹೇಳಿದನು.

ಶಕುಂತಲಾ

ಖ್ಯಾತೋ ಲೋಕಪ್ರವಾದೋಽಯಂ ವಿವಾಹ ಇತಿ ಶಾಸ್ತ್ರತಃ ।
ವೈವಾಹಿಕೀಂ ಕ್ರಿಯಾಂ ಸಂತಃ ಪ್ರಶಂಸಂತಿ ಪ್ರಜಾಹಿತಾಮ್ ॥೨೫॥

ಶಾಸ್ತ್ರೀಯವಾದ ವಿವಾಹವು ಶುದ್ಧವಾದುದು ಎಂದು ಲೋಕಪ್ರವಾದವಿದೆ. ಸಜ್ಜನರು ಶುದ್ಧವಾದ ವೈವಾಹಿಕ ಕ್ರಿಯೆಯು ಮುಂದೆ ಹುಟ್ಟುವ ಪ್ರಜೆಗೆ ಹಿತವನ್ನು ಮಾಡುವುದೆಂದು ಪ್ರಶಂಸಿಸುತ್ತಾರೆ.

ಲೋಕಾಪವಾದಶಾಂತ್ಯರ್ಥಂ ವಿವಾಹಂ ವಿಧಿನಾ ಕುರು ।
ಸಂತ್ಯತ್ರ ಯಜ್ಞಪಾತ್ರಾಣಿ ದರ್ಭಾಃ ಸುಮನಸೋಽಕ್ಷತಾಃ ॥೨೬॥

ರಾಜನೇ, ಲೋಕಾಪವಾದಪರಿಹಾರಕ್ಕಾಗಿ ವಿಧಿಪೂರ್ವಕವಾಗಿ ವಿವಾಹವನ್ನು ಮಾಡಿಕೋ. ಇಲ್ಲಿ ಯಜ್ಞಪಾತ್ರೆಗಳು, ದರ್ಭೆಗಳು, ಹೂವುಗಳು ಮತ್ತು ಅಕ್ಷತೆಯೂ ಇವೆ.

ಯಥಾ ಯುಕ್ತೋ ವಿವಾಹಃ ಸ್ಯಾತ್ ತಥಾ ಯುಕ್ತಾ ಪ್ರಜಾ ಭವೇತ್ ।
ತಸ್ಮಾದಾಜ್ಯಂ ಹವಿರ್ಲಾಜಾಃ ಸಿಕತಾ ಬ್ರಾಹ್ಮಣಾಸ್ತಥಾ ॥೨೭॥

ವೈವಾಹಿಕಾನಿ ಚಾನ್ಯಾನಿ ಸರ್ವಮಸ್ತೀಹ ಪಾರ್ಥಿವ ।
ದುರುಕ್ತಮಪಿ ರಾಜೇಂದ್ರ ಕ್ಷಂತವ್ಯಂ ಧರ್ಮಕಾರಣಾತ್ ॥೨೮॥

ವಿವಾಹವು ಎಷ್ಟು ಶ್ರೇಷ್ಠವಾಗಿರುತ್ತದೆಯೋ, ಮುಂದೆ ಹುಟ್ಟುವ ಪ್ರಜೆಗಳು ಅಷ್ಟೇ ಶ್ರೇಷ್ಠರಾಗಿರುತ್ತಾರೆ. ಆದ್ದರಿಂದ ಎಲೈ ರಾಜನೇ, ಇಲ್ಲಿ ಆಜ್ಯ, ಹವಿಸ್ಸು, ಲಾಜ, ಮರಳು, ಬ್ರಾಹ್ಮಣರು, ಮತ್ತು ವಿವಾಹಕ್ಕೆ ಬೇಕಾದ ಉಳಿದ ಎಲ್ಲಾ ಸಾಮಗ್ರಿಗಳೂ ಇವೆ. ರಾಜೇಂದ್ರನೇ, ನನ್ನ ಮಾತು ಒರಟಾಗಿದ್ದರೂ ಧರ್ಮದ ನಿಮಿತ್ತದಿಂದ ಆಡಿದುದರಿಂದ ಕ್ಷಮಿಸು.

ವೈಶಂಪಾಯನಃ

ಏವಮಸ್ತ್ವಿತಿ ತಾಂ ರಾಜಾ ಪ್ರತ್ಯುವಾಚಾವಿಚಾರಯನ್ ।
ಪುರೋಹಿತಂ ಸಮಾಹೂಯ ವಚನಂ ಯುಕ್ತಮಬ್ರವೀತ್ ॥೨೯॥

ರಾಜನು ಏನೂ ವಿಚಾರ ಮಾಡದೇ ಅವಳು ಹೇಳಿದುದಕ್ಕೆಲ್ಲಾ ಹಾಗೆಯೇ ಆಗಲಿ ಎಂದು ಒಪ್ಪಿ, ತನ್ನ ಪುರೋಹಿತನನ್ನು ಕರೆದು, ಯೋಗ್ಯವಾದ ಈ ಮಾತುಗಳನ್ನು ಆಡಿದನು.

ದುಷ್ಷಂತಃ

ರಾಜಪುತ್ರ್ಯಾ ಯದುಕ್ತಂ ವೈ ನ ವೃಥಾ ಕರ್ತುಮುತ್ಸಹೇ ।
ಕ್ರಿಯಾಹೀನೋ ಹಿ ನ ಭವೇನ್ಮಮ ಪುತ್ರೋ ಮಹಾದ್ಯುತಿಃ ।
ತಥಾ ಕುರುಷ್ವ ಶಾಸ್ತ್ರೋಕ್ತಂ ವಿವಾಹಂ ಮಾ ಚಿರಂ ಕೃಥಾಃ ॥೩೦॥

ರಾಜಪುತ್ರಿಯು ಹೇಳಿದ ಯಾವ ಮಾತನ್ನೂ ನಾನು ವ್ಯರ್ಥಮಾಡಲು ಬಯಸುವುದಿಲ್ಲ. ನನಗೆ ಹುಟ್ಟಲಿರುವ ಮಹಾತೇಜಸ್ವಿಯಾದ ಮಗನು ಕ್ರಿಯಾಹೀನನಾಗಬಾರದು. ಆದ್ದರಿಂದ ಶಾಸ್ತ್ರೋಕ್ತವಿಧಾನದಿಂದ ವಿವಾಹವನ್ನು ಜರುಗಿಸು. ತಡ ಮಾಡಬೇಡ.

ವೈಶಂಪಾಯನಃ

ಏವಮುಕ್ತೋ ನೃಪತೀನಾ ದ್ವಿಜಃ ಪರಮಯಂತ್ರಿತಃ ।
ಶೋಭನಂ ರಾಜರಾಜೇತಿ ವಿಧಿನಾ ಕೃತವಾನ್ ದ್ವಿಜಃ ॥೩೧॥

ರಾಜನಿಂದ ಹೀಗೆ ಹೇಳಲ್ಪಟ್ಟ ಪುರೋಹಿತನು, ರಾಜನೇ, ಒಳ್ಳೆಯದು ಹಾಗೆಯೇ ಆಗಲಿ ಎಂದು ಪರಮವಿನಯದಿಂದ ಹೇಳಿ ಎಲ್ಲವನ್ನೂ ವಿಧಿವತ್ತಾಗಿ ಮಾಡಿದನು.

ಶಾಸನಾದ್ ವಿಪ್ರಮುಖ್ಯಸ್ಯ ಕೃತಕೌತುಕ ಮಂಗಲಃ ।
ಜಗ್ರಾಹ ವಿಧಿವತ್ ಪಾಣಿಮುವಾಸ ಚ ತಯಾ ಸಹ ॥೩೨॥

ವಿಪ್ರನ ಆದೇಶದಂತೆ ಮಂಗಲ ಕಾರ್ಯವನ್ನು ಮಾಡಿಕೊಂಡು ರಾಜನು ಶಕುಂತಲೆಯ ಪಾಣಿಗ್ರಹಣ ಮಾಡಿ ಅವಳೊಡನೆ ವಾಸ ಮಾಡಿದನು.

ವಿಶ್ವಾಸ್ಯ ಚೈನಾಂ ಪ್ರಾತಿಷ್ಠದಬ್ರವೀಚ್ಚ ಪುನಃ ಪುನಃ ॥೩೩॥

ಅವಳಿಗೆ ಸಮಾಧಾನ ಮಾಡಿ ಪುನಃ ಪುನಃ ಅವಳಿಗೆ ಹೀಗೆ ಹೇಳಿ ರಾಜನು ಅಲ್ಲಿಂದ ಹೊರಟನು.

ಪ್ರೇಷಯಿಷ್ಯೇ ತವಾರ್ಥಾಯ ವಾಹಿನೀಂ ಚತುರಂಗಿಣೀಮ್ ।
ತ್ರೈವಿದ್ಯವೃದ್ಧೈಃ ಸಹಿತಾ ನಾಗರಾ ಮಾಮಕೈಃ ಸಹ ।
ಶಿಬಿಕಾಸಹಸ್ರೈಃ ಸಹಿತಾ ವನಮಾಯಾಂತಿ ಬಾಂಧವಾಃ ॥೩೪॥

ನಿನ್ನ ಸಲುವಾಗಿ ನಾನು ಚತುರಂಗಸೈನ್ಯವನ್ನು ಕಳುಹಿಸುತ್ತೇನೆ. ಉಳಿದ ವೃದ್ಧರಾದ ಬ್ರಾಹ್ಮಣರ ಮತ್ತು ನನ್ನ ನಾಗರಿಕರ ಜೊತೆಯಲ್ಲಿ ನನ್ನ ಬಂಧುಗಳು ಒಂದು ಸಹಸ್ರ ಪಲ್ಲಕ್ಕಿಗಳನ್ನು ತೆಗೆದುಕೊಂಡು ಕಾಡಿಗೆ ಬರುತ್ತಾರೆ.

ಮೂಕಾಶ್ಚೈವ ಕಿರಾತಾಶ್ಚ ಕುಬ್ಜಾ ವಾಮನಕೈಃ ಸಹ ।
ಸಹಿತಾ ಕಂಚುಕಿವರೈರ್ವಾಹಿನೀ ಸೂತಮಾಗಧೈಃ ॥೩೫॥

ಶಂಖದುಂದುಭಿನಿರ್ಘೋಷೈರ್ವನಂ ಚ ಸಮುಪೇಷ್ಯತಿ ।
ತಥಾ ತ್ವಾಮಾನಯಿಷ್ಯಾಮಿ ನಗರಂ ಸ್ವಂ ಶುಚಿಸ್ಮಿತೇ ॥೩೬॥

ಆ ಸೈನ್ಯದ ಜೊತೆಯಲ್ಲಿ ಮೂಕರು, ಕಿರಾತರು, ಕುಬ್ಜರು, ವಾಮನರು, ಕಂಚುಕ ಶ್ರೇಷ್ಠರು, ಸೂತಮಾಗಧರು, ಶಂಖದುಂದುಭಿ ನಿರ್ಘೋಷದೊಂದಿಗೆ ಕಾಡಿಗೆ ಬರುತ್ತಾರೆ. ಎಲೌ ಶುಚಿಸ್ಮಿತೆಯೇ ಹಾಗೆ ನಾನು ನಿನ್ನನ್ನು (ವೈಭವದಿಂದ) ನನ್ನ ನಗರಕ್ಕೆ ಕರೆಸಿಕೊಳ್ಳುತ್ತೇನೆ.

ಅನ್ಯಥಾ ತ್ವಾಂ ನ ನೇಷ್ಯಾಮಿ ಸ್ವನಿವೇಶಮಸತ್ಕೃತಾಮ್ ।
ಸರ್ವಮಂಗಲಸತ್ಕಾರೈಃ ಸುಭ್ರು ಸತ್ಯಂ ಕರೋಮಿ ತೇ ॥೩೭॥

ನಿನಗೆ ಗೌರವವಿಲ್ಲದಂತೆ ಎಂದೂ ನಿನ್ನನ್ನು ಕರೆಸಿಕೊಳ್ಳುವುದಿಲ್ಲ. ಸುಂದರಿಯೇ, ಎಲ್ಲಾ ಮಂಗಳ ಸತ್ಕಾರದ ಜೊತೆಯಲ್ಲಿ ನಿನ್ನನ್ನು ಕರೆಸಿಕೊಳ್ಳುತ್ತೇನೆ. ಈ ವಿಷಯವನ್ನು ಸತ್ಯವಾಗಿ ಹೇಳುತ್ತಿದ್ದೇನೆ.

ವೈಶಂಪಾಯನಃ

ಏವಮುಕ್ತ್ವಾ ಸ ರಾಜರ್ಷಿಃ ತಾಮನಿಂದಿತಗಾಮಿನೀಮ್ ।
ಸಂಪರಿಷ್ವಜ್ಯ ಬಾಹುಭ್ಯಾಂ ಸ್ಮಿತಪೂರ್ವಮುದೈಕ್ಷತ ॥೩೮॥

ಆ ರಾಜರ್ಷಿಯು ಅನಿಂದಿತಗಾಮಿನಿಯಾದ ಅವಳನ್ನು ಬಾಹುಗಳಿಂದ ಆಲಿಂಗಿಸಿ ಸ್ಮಿತಪೂರ್ವಕವಾಗಿ ಅವಳನ್ನು ನೋಡಿದನು.

ಪ್ರದಕ್ಷಿಣೀಕೃತಾಂ ದೇವೀಂ ಪುನಸ್ತಾಂ ಪರಿಷಸ್ವಜೇ ।
ಶಂಕುತಲಾ ಹ್ಯಶ್ರುಮುಖೀ ಪಪಾತ ನೃಪಪಾದಯೋಃ ॥೩೯॥

ತನಗೆ ಪ್ರದಕ್ಷಿಣೆ ಮಾಡಿದ ಶಕುಂತಲೆಯನ್ನು ಪುನಃ ಆಲಿಂಗಿಸಿದನು. ಶಕುಂತಲೆಯು ಕಣ್ಣುಗಳಲ್ಲಿ ನೀರು ತುಂಬಿಕೊಂಡು ರಾಜನ ಪಾದಗಳ ಮೇಲೆ ಬಿದ್ದಳು.

ತಾಂ ದೇವೀಂ ಪುನರುತ್ಥಾಪ್ಯ ಮಾ ಶುಚೇತಿ ಪುನಃ ಪುನಃ ।
ಶಪೇಯಂ ಸುಕೃತೇನೈವ ಪ್ರಾಪಯಿಷ್ಯೇ ನೃಪಾತ್ಮಜೇ ॥೪೦॥

ಇತಿ ತಸ್ಯಾಃ ಪ್ರತಿಶ್ರುತ್ಯ ಸ ನೃಪೋ ಜನಮೇಜಯ ।
ಮನಸಾ ಚಿಂತಯನ್ ಪ್ರಾಯಾತ್ ಕಾಶ್ಯಪಂ ಪ್ರತಿ ಪಾರ್ಥಿವಃ ॥೪೧॥

ಆ ದೇವಿಯನ್ನು ಪುನಃ ಎತ್ತಿ ಶೋಕ ಪಡಬೇಡ ಎಂದು ಮತ್ತೆ ಮತ್ತೆ ಹೇಳಿ, ರಾಜಕುಮಾರಿಯೇ, ನನ್ನ ಪುಣ್ಯದ ಮೇಲೆ ಆಣೆ ಮಾಡಿ ಹೇಳುತ್ತೇನೆ. ನಿನ್ನನ್ನು ಕರೆಸಿಕೊಳ್ಳುತ್ತೇನೆ ಎಂದು ವಾಗ್ದಾನ ಮಾಡಿ ರಾಜನು ಕಾಶ್ಯಪರನ್ನು ಮನಸ್ಸಿನಲ್ಲಿ ಚಿಂತಿಸುತ್ತಾ ಪ್ರಯಾಣ ಮಾಡಿದನು.

ಭಗವಾಂಸ್ತಪಸಾ ಯುಕ್ತಃ ಶ್ರುತ್ವಾ ಕಿಂ ನು ಕರಿಷ್ಯತಿ ।
ತಂ ನ ಪ್ರಸಾದ್ಯಾಗತೋಽಹಂ ಪ್ರಸೀದೇತಿ ದ್ವಿಜೋತ್ತಮಮ್ ॥೪೨॥

ತಪಸ್ವಿಗಳಾದ ಕಾಶ್ಯಪರು ಆಶ್ರಮಕ್ಕೆ ಬಂದ ಮೇಲೆ ಹೇಗೆ ಅಭಿಪ್ರಾಯ ಪಡುತ್ತಾರೋ ತಿಳಿಯದು. ಅನುಗ್ರಹ ಮಾಡಿ ಎಂದು ದ್ವಿಜಶ್ರೇಷ್ಠರಾದ ಅವರನ್ನು ಕೇಳದೆ ನಾನು ಹಿಂದಿರುಗುತ್ತಿದ್ದೇನೆ.

ಏವಂ ಸಂಚಿಂತಯನ್ನೇವ ಪ್ರವಿವೇಶ ಸ್ವಕಂ ಪುರಮ್ ।
ತತೋ ಮುಹೂರ್ತೇ ಯಾತೇ ತು ಕಣ್ವೋऽಪ್ಯಾಶ್ರಮಮಾಗತಃ ॥೪೩॥

ಹೀಗೆ ಯೋಚಿಸುತ್ತಲೇ ರಾಜನು ತನ್ನ ಪಟ್ಟಣವನ್ನು ತಲುಪಿದನು. ರಾಜನು ಹೊರಟ ಮೇಲೆ ಒಂದು ಮುಹೂರ್ತದ ನಂತರ ಕಣ್ವರು ಆಶ್ರಮಕ್ಕೆ ಹಿಂದಿರುಗಿದರು.

ಶಕುಂತಲಾ ಚ ಪಿತರಂ ಹ್ರಿಯಾ ನೋಪಜಗಾಮ ತಮ್ ।
ಶಂಕಿತೈವ ಚ ವಿಪ್ರರ್ಷಿಮುಪಚಕ್ರಾಮ ಸಾ ಶನೈಃ ॥೪೪॥

ನಾಚಿಕೆಯಿಂದ ಕೂಡಿದ ಶಕುಂತಲೆಯು ತಂದೆಯ ಬಳಿಗೆ ಬೇಗ ಹೋಗಲಿಲ್ಲ. ಶಂಕಿತಳಂತೆ ಮೆಲ್ಲನೆ ಅವರ ಸಮೀಪಕ್ಕೆ ಹೋದಳು.

ಸಾ ತಸ್ಯ ಭಾರಂ ಜಗ್ರಾಹ ಆಸನಂ ಚಾಪ್ಯಕಲ್ಪಯತ್ ।
ಪ್ರಾಕ್ಷಾಲಯಚ್ಚ ಸಾ ಪಾದೌ ಕಣ್ವಸ್ಯ ಸುಮಹಾತ್ಮನಃ ॥೪೫॥

ಅವಳು ಅವರು ಹೊತ್ತಿದ್ದ ಭಾರವನ್ನು ತೆಗೆದುಕೊಂಡು ಅವರಿಗೆ ಆಸನವನ್ನು ಅಣಿಮಾಡಿ ಮಹಾತ್ಮರಾದ ಕಣ್ವರ ಪಾದಗಳನ್ನು ತೊಳೆದಳು.

ನ ಚೈನಂ ಲಜ್ಜಯಾऽಶಕ್ನೋದ್ ಅಕ್ಷಿಭ್ಯಾಮಭಿವೀಕ್ಷಿತುಮ್ ।
ಶಕುಂತಲಾ ಚ ಸವ್ರೀಡಾ ತಮೃಷಿಂ ನಾಭ್ಯಭಾಷತ ॥೪೬॥

ಅವಳು ನಾಚಿಕೆಯಿಂದ ಅವರನ್ನು ಕಣ್ಣಿಗೆ ಕಣ್ಣನ್ನು ಕೊಟ್ಟು ನೋಡಲು ಸಾಧ್ಯವಾಗಲಿಲ್ಲ. ವ್ರೀಡಿತಳಾದ ಶಕುಂತಲೆಯು ಋಷಿಗಳ ಜೊತೆಯಲ್ಲಿ ಮಾತನಾಡಲಿಲ್ಲ.

ತಸ್ಮಾತ್ ಸ್ವಧರ್ಮಾತ್ ಸ್ಖಲಿತಾ ಭೀತಾ ಸಾ ಭರತರ್ಷಭ ।
ಅಭವದ್ ದೋಷದರ್ಶಿತ್ವಾದ್ ಬ್ರಹ್ಮಚಾರಿಣ್ಯಧಃ ಸ್ಥಿತಾ ॥೪೭॥

ಎಲೈ ಭರತ ಶ್ರೇಷ್ಠನೇ, ತನ್ನ ಧರ್ಮದಿಂದ ತಾನು ಚ್ಯುತಳಾಗಿದ್ದೇನೆಂಬ ಭಯದಿಂದ ದೋಷವನ್ನು ಶಂಕಿಸಿದ ಬ್ರಹ್ಮಚಾರಿಣಿಯಾದ ಅವಳು ದೂರದಲ್ಲಿಯೇ ಕೆಳಗೆ ನಿಂತಳು.

ಸ ತದಾ ವ್ರೀಳಿತಾಂ ದೃಷ್ಟ್ವಾ ಋಷಿಸ್ತಾಂ ಪ್ರತ್ಯಭಾಷತ ।
ಸವ್ರೀಳೇವ ಚ ದೀರ್ಘಾಯುಃ ಪುರೇವ ಭವಿತಾ ನ ಚ ।
ವೃತ್ತಂ ಕಥಯ ರಂಭೋರು ಮಾ ತ್ರಾಸಂ ಚ ಪ್ರಕಲ್ಪಯ ॥೪೮॥

ನಾಚಿಕೊಳ್ಳುತ್ತಿರುವ ಶಕುಂತಲೆಯನ್ನು ನೋಡಿ ಋಷಿಗಳೇ ಮಾತನಾಡಿದರು. ದೀರ್ಘಾಯುಷ್ಮವಂತಳೇ, ಹಿಂದೆಂದೂ ಇಲ್ಲದ ನಾಚಿಕೆಯಿಂದ ಕೂಡಿರುವೆ. ಸುಂದರಿಯೇ, ಏನು ನಡೆಯಿತೆಂದು ಹೇಳು. ಹೆದರಬೇಡ.

ವೈಶಂಪಾಯನಃ

ತತಃ ಪ್ರಕ್ಷಾಲ್ಯ ಪಾದೌ ಸಾ ವಿಶ್ರಾಂತಂ ಪುನರಬ್ರವೀತ್ ।
ವಿಧಾಯ ಕಾಮಂ ತಸ್ಯರ್ಷೇಃ ಕಂದಾನಿ ಚ ಫಲಾನಿ ಚ ॥೪೯॥

ತತಃ ಸಂವಾಹ್ಯ ಪಾದೌ ಸಾ ವಿಶ್ರಾಂತಂ ವೇದಿಮಧ್ಯಮಾ ।
ಶಕುಂತಲಾ ಪೌರವಾಣಾಂ ದುಷ್ಷಂತಂ ಶುಶ್ರೂಷೀ ಪತಿಮ್ ॥೫೦॥

ಪೌರವಾಣಾಂ ನೃಪವರಂ ದುಷ್ಷಂತಂ ಮನಸಾऽಗಮತ್ ।
ತತಃ ಕೃಚ್ಛ್ರಾದತಿಶುಭಾ ಸವ್ರೀಡಾ ಶ್ರೀಮತೀ ತದಾ ।
ಸಗದ್ಗದಮುವಾಚೇದಂ ಕಾಶ್ಯಪಂ ಸಾ ಶುಚಿಸ್ಮಿತಾ ॥೫೧॥

ಅನಂತರ ಅವಳು ಪಾದಗಳನ್ನು ತೊಳೆದು ವಿಶ್ರಾಂತಿಯನ್ನು ತೆಗೆದುಕೊಂಡ ಕಣ್ವರನ್ನು ಕುರಿತು ಮಾತನಾಡಿದಳು. ಅವರಿಗೆ ಬೇಕಾದ ಉಪಚಾರಗಳನ್ನು ಮಾಡಿ, ಕಂದಫಲಗಳನ್ನು ತಂದಿಟ್ಟು, ಅವರ ಪಾದಗಳನ್ನು ಒತ್ತುತ್ತಾ, ವೇದಿಮಧ್ಯಳಾದ ಅವಳು ಪೌರವನಾದ ದುಷ್ಷಂತನ ಅಪ್ಪಣೆಯನ್ನು ಕೇಳುವಂತೆ ತನ್ನ ಪತಿಯಾದ ದುಷ್ಷಂತನನ್ನು ಮನಸಾ ಸ್ಮರಿಸಿದಳು.

ಅನಂತರ ಅತ್ಯಂತ ಪವಿತ್ರಳೂ, ಕಾಂತಿಯುಕ್ತಳೂ ಆದ ಅವಳು ನಾಚಿಕೆಯಿಂದ ಮತ್ತು ಬಹಳ ಕಷ್ಟದಿಂದ, ನಡುಗುವ ಸ್ವರದಿಂದ ಶುಚಿಸ್ಮಿತೆಯಾಗಿ ಕಾಶ್ಯಪರನ್ನು ಕುರಿತು ಹೇಳಿದಳು.

ಶಕುಂತಲಾ

ರಾಜಾ ತಾತಾಜಗಾಮೇಹ ದುಷ್ಷಂತ ಇಲಿಲಾತ್ಮಜಃ ।
ಮಯಾ ಪತಿರ್ವೃತೋ ಯೋಽಸೌ ದೈವಯೋಗಾದಿಹಾಗತಃ ॥೫೨॥

ತಸ್ಯ ತಾತ ಪ್ರಸೀದಸ್ವ ಭರ್ತಾ ಮೇ ಸುಮಹಾಯಶಾಃ ।
ಅತಃ ಸರ್ವಂ ತು ಯದ್ ವೃತ್ತಂ ದಿವ್ಯಜ್ಞಾನೇನ ಪಶ್ಯಸಿ ।
ಅಭಯಂ ಕ್ಷತ್ರಿಯಕುಲೇ ಪ್ರಸಾದಂ ಕರ್ತುಮರ್ಹಸಿ ॥೫೩॥

ತಂದೆಯೇ, ಇಲಿಲನ ಪುತ್ರನಾದ ದುಷ್ಷಂತನೆಂಬ ರಾಜನು ದೈವಯೋಗದಿಂದ ಇಲ್ಲಿಗೆ ಬಂದಿದ್ದನು. ನಾನು ಅವನನ್ನು ಪತಿಯನ್ನಾಗಿ ವರಿಸಿದೆ. ನನ್ನ ಪತಿಯು ಮಹಾಕೀರ್ತಿವಂತನಾದವನು. ಅವನ ಮೇಲೆ ನಿನ್ನ ಅನುಗ್ರಹವಿರಲಿ. ಮುಂದೆ ಏನು ನಡೆಯಿತೆಂದು ದಿವ್ಯಜ್ಞಾನದಿಂದ ನೀನೇ ತಿಳಿದುಕೋ. ನೀನು ಕ್ಷತ್ರಿಯಕುಲಕ್ಕೆ ಅಭಯವನ್ನು ಕೊಟ್ಟು ಅನುಗ್ರಹವನ್ನು ಮಾಡಬೇಕು.

ವೈಶಂಪಾಯನಃ

ಚಕ್ಷುಷಾ ಸ ತು ದಿವ್ಯೇನ ಸರ್ವಂ ವಿಜ್ಞಾಯ ಕಾಶ್ಯಪಃ ।
ತತೋ ಧರ್ಮಿಷ್ಠತಾಂ ಮತ್ವಾ ಧರ್ಮೇ ಚಾಸ್ಖಲಿತಂ ಮನಃ ।
ಉವಾಚ ಭಗವಾನ್ ಪ್ರೀತಃ ತದ್ ವೃತ್ತಂ ಸ ಮಹಾತಪಾಃ ॥೫೪॥

ಕಾಶ್ಯಪರು ತಮ್ಮ ದಿವ್ಯದೃಷ್ಟಿಯಿಂದ ಎಲ್ಲವನ್ನೂ ತಿಳಿದು ಆ ವಿವಾಹವು ಧಾರ್ಮಿಕವೆಂದೇ ತಿಳಿದು ಧರ್ಮದ ವಿಷಯದಲ್ಲಿ ಎಂದೂ ತಮ್ಮ ಮನಸ್ಸು ಅನ್ಯಥಾ ಭಾವಿಸಿಲ್ಲ ಎಂದು ಗಮನಿಸಿ ಸಂತೋಷದಿಂದ ಅವಳನ್ನು ಕುರಿತು ಹೇಳಿದರು.

ತ್ವಯಾಽದ್ಯ ರಾಜಾನ್ವಯಯಾ ಮಾಮನಾದೃತ್ಯ ಯತ್ ಕೃತಮ್ ।
ಪುಂಸಾ ಸಹ ಸಮಾಯೋಗೋ ನ ಸ ಧರ್ಮಾಪಘಾತಕಃ ।
ನ ಭಯಂ ವಿದ್ಯತೇ ಭದ್ರೇ ಮಾ ಶುಚಃ ಸುಕೃತಂ ಕೃತಮ್ ॥೫೫॥

ರಾಜಕುಲದಲ್ಲಿ ಜನಿಸಿದ ನಿನ್ನಿಂದ ಈ ದಿನ ನನ್ನ ಅಪ್ಪಣೆಯಿಲ್ಲದೆ ಮಾಡಿದ ಪುರುಷಸಮಾಗಮವನ್ನು ನಾನು ಧಾರ್ಮಿಕವೆಂದೇ ತಿಳಿಯುತ್ತೇನೆ. ಮಂಗಳಳೇ, ಭಯ ಪಡಬೇಡ. ಶೋಕವನ್ನೂ ಪಡಬೇಡ. ಒಳ್ಳೆಯ ಕೆಲಸವನ್ನೇ ಮಾಡಿದ್ದೀಯೆ.

ಕ್ಷತ್ರಿಯಸ್ಯ ತು ಗಾಂಧರ್ವೋ ವಿವಾಹಃ ಶ್ರೇಷ್ಠ ಉಚ್ಯತೇ ।
ಸಕಾಮಾಯಾಃ ಸಕಾಮೇನ ನಿರ್ಮಂತ್ರೋ ರಹಸಿ ಸ್ಮೃತಃ ।
ಕಿಂ ಪುನರ್ವಿಧಿವತ್ ಕೃತ್ವಾ ಸುಪ್ರಜಾಸ್ತ್ವಮವಾಪ್ಸ್ಯಸಿ ॥೫೬॥

ಸಕಾಮರಾದ ಕ್ಷತ್ರಿಯರ ಜೊತೆಯಲ್ಲಿ ರಹಸ್ಯದಲ್ಲಿ ಮಂತ್ರವಿಲ್ಲದೆ ನಡೆದ ವಿವಾಹವು ಶ್ರೇಷ್ಠವೆನಿಸುತ್ತದೆ. ಹೀಗಿರುವಾಗ ವಿಧಿವತ್ತಾಗಿ ಮಾಡಿದ ವಿವಾಹದಲ್ಲಿ ಏಕೆ ಸಂಶಯ ? ನಿನಗೆ ಒಳ್ಳೆಯ ಮಗನು ಜನಿಸುತ್ತಾನೆ.

ಧರ್ಮಾತ್ಮಾ ಚ ಮಹಾತ್ಮಾ ಚ ದುಷ್ಮಂತಃ ಪುರುಷೋತ್ತಮಃ ।
ಅಭ್ಯಾಗಚ್ಛತ್ ಪತಿರ್ಯಸ್ತ್ವಾಂ ಭಜಮಾನಾಂ ಶಕುಂತಲೇ ।
ಮಹಾತ್ಮಾ ಜನಿತಾ ಲೋಕೇ ಪುತ್ರಸ್ತವ ಮಹಾಯಶಾಃ ॥೫೭॥

ಪುರುಷೋತ್ತಮನಾದ ದುಷ್ಮಂತನು ಧರ್ಮಾತ್ಮನೂ, ಮಹಾತ್ಮನೂ ಆದವನು. ಶಕುಂತಲೆಯೇ, ಅವನು ಅನುರಕ್ತಳಾದ ನಿನ್ನ ಸಂಗವನ್ನು ಮಾಡಿದ್ದಾನೆ. ನಿನಗೆ ಮಹಾತ್ಮನೂ ಮತ್ತು ಕೀರ್ತಿವಂತನೂ ಆದ ಪುತ್ರನು ಜನಿಸುತ್ತಾನೆ.

ಸ ಚ ಸರ್ವಾಂ ಸಮುದ್ರಾಂತಾಂ ಕೃತ್ಸ್ನಾಂ ಭೋಕ್ಷ್ಯತಿ ಮೇದಿನೀಮ್ ।
ಪರಂ ಜಾಭಿಪ್ರಯಾತಸ್ಯ ಚಕ್ರಂ ತಸ್ಯ ಮಹಾತ್ಮನಃ ॥೫೮॥

ಭವಿಷ್ಯತ್ಯಪ್ರತಿಹತಂ ವಿತತಂ ಚಕ್ರವರ್ತಿನಃ ।
ಪ್ರಸನ್ನ ಏವ ತಸ್ಯಾಹಂ ತ್ವತ್ಕೃತೇ ವರವರ್ಣಿನಿ ॥೫೯॥

ಅವನು ಸಮುದ್ರಾಂತವಾದ, ಸಮಗ್ರವಾದ ಭೂಮಿಯನ್ನು ಆಳುತ್ತಾನೆ. ಶತ್ರುವಿನ ಮೇಲೆ ದಂಡೆತ್ತಿ ಹೋಗುವ ಆ ಮಹಾತ್ಮನ ಆಜ್ಞಾಚಕ್ರವು ವಿಸ್ತಾರವಾಗಿದ್ದು ಎಂದೂ ಪ್ರತಿಹತವಾಗುವುದಿಲ್ಲ. ಸುಂದರಿಯೇ, ನಿನ್ನ ಸಲುವಾಗಿ ನಾನು ಅವನಿಗೆ ಪ್ರಸನ್ನನಾಗಿಯೇ ಇದ್ದೇನೆ.

ಋತವೋ ಬಹವಸ್ತೇ ವೈ ಗತಾ ವ್ಯರ್ಥಾಃ ಶುಚಿಸ್ಮಿತೇ ।
ಸಾರ್ಥಕಂ ಸಾಂಪ್ರತಂ ಹ್ಯೇತನ್ನ ಚ ಪಾಪೋಽಸ್ತಿ ತೇಽನಘೇ ।
ಗೃಹಾಣ ಚ ವರಂ ಮತ್ತಸ್ತ್ವತ್ಕೃತೇ ಯದಭೀಪ್ಸಿತಮ್ ॥೬೦॥

ಶುಚಿಸ್ಮಿತೆಯೇ, ನಿನ್ನ ಅನೇಕ ಋತುಕಾಲಗಳು ವ್ಯರ್ಥವಾಗಿ ಹೋದವು. ಈ ಬಾರಿಯ ಋತುವು ವ್ಯರ್ಥವಾಗಲಿಲ್ಲ. ಶುದ್ದಳೇ, ನಿನಗೆ ಯಾವ ಪಾಪವೂ ಇಲ್ಲ. ನನ್ನಿಂದ ಅವನ ಸಲುವಾಗಿ ಅಭೀಷ್ಟವಾದ ವರವನ್ನು ಪಡೆ.

ಶಕುಂತಲಾ

ಮಯಾ ಪತಿರ್ವೃತೋ ಯೋಽಸೌ ದುಷ್ಪಂತಃ ಪುರುಷೋತ್ತಮಃ ।
ಮಮ ಚೈವ ಪತಿರ್ದಷ್ಟೋ ವಿಧಾತ್ರಾಽಪಿ ನ ಸಂಶಯಃ
ತಸ್ಮೈ ಸಸಚಿವಾಯ ತ್ವಂ ಪ್ರಸಾದಂ ಕರ್ತುಮರ್ಹಸಿ ॥೬೧॥

ನಾನು ಪತಿಯಾಗಿ ವರಿಸಿದ ಪುರುಷಶ್ರೇಷ್ಠನಾದ ದುಷ್ಪಂತನು ವಿಧಿ ಬರಹದಿಂದಲೂ ನನ್ನ ಪತಿಯಾಗಿದ್ದಾನೆ ಎಂಬುದರಲ್ಲಿ ಸಂಶಯವಿಲ್ಲ. ಅವನ ಮೇಲೂ ಮತ್ತು ಅವನ ಸಚಿವರ ಮೇಲೂ ನಿಮ್ಮ ಅನುಗ್ರಹವಿರಬೇಕು.

ವೈಶಂಪಾಯನಃ

ಇತ್ಯೇವಮುಕ್ತ್ವಾ ಮನಸಾ ಪ್ರಣಿಧಾಯ ಮನಸ್ವಿನೀ ।
ತಸ್ಯ ಧರ್ಮಿಷ್ಠತಾಂ ವವ್ರೇ ರಾಜ್ಯೇ ಚಾಸ್ಥಲನಂ ತಥಾ ॥೬೨॥

ಹೀಗೆ ಹೇಳಿ ಶಕುಂತಲೆಯು ಮನಸ್ಸಿನಲ್ಲಿ ದುಷ್ಪಂತನನ್ನು ಯೋಚಿಸಿ, ಅವನ ಧರ್ಮಿಷ್ಠತೆಯನ್ನೂ ಮತ್ತು ರಾಜ್ಯದ ಸ್ಥಿರತೆಯನ್ನೂ ವರವಾಗಿ ಬೇಡಿದಳು.

ಶಕುಂತಲಾಂ ಪೌರವಾಣಾಂ ದುಷ್ಪಂತಸ್ಯ ಹಿತೈಷಿಣೀಮ್ ।
ಏವಮಸ್ತ್ವಿತಿ ತಾಂ ಪ್ರಾಹ ಕಣ್ವೋ ಧರ್ಮಭೃತಾಂ ವರಃ ।
ಪಸ್ಪರ್ಶ ಚೈವ ಪಾಣಿಭ್ಯಾಂ ಸುತಾಂ ಶ್ರೀರಿವ ರೂಪಿಣೀಮ್ ॥೬೩॥

ಪೌರವರ ವಂಶದಲ್ಲಿ ಜನಿಸಿದ ದುಷ್ಪಂತನಿಗೆ ಹಿತವನ್ನು ಬಯಸುವ ಶಕುಂತಲೆಗೆ ಹಾಗೆಯೇ ಆಗಲಿ ಎಂದು ಹೇಳಿ ಧರ್ಮಿಷ್ಠರಲ್ಲಿ ಶ್ರೇಷ್ಠರಾದ ಕಣ್ವರು ಲಕ್ಷ್ಮಿಯಂತೆ ಸುಂದರಳಾಗಿದ್ದ ತಮ್ಮ ಮಗಳನ್ನು ತಮ್ಮ ಕೈಗಳಿಂದ ಮುಟ್ಟಿದರು.

ಕಣ್ವಃ

ಅದ್ಯಪ್ರಭೃತಿ ದೇವೀ ತ್ವಂ ದುಷ್ಪಂತಸ್ಯ ಮಹಾತ್ಮನಃ ।
ಪತಿವ್ರತಾನಾಂ ಯಾ ವೃತ್ತಿಸ್ತಾಂ ವೃತ್ತಿಮನುಪಾಲಯ ॥೬೪॥

ಮಗಳೇ, ನೀನು ಇಂದಿನಿಂದ ಮಹಾತ್ಮನಾದ ದುಷ್ಷಂತನ ರಾಣಿ. ನೀನು ಇಂದಿನಿಂದ ಪತಿವ್ರತೆಯ ಧರ್ಮಗಳನ್ನು ಅನುಸರಿಸಬೇಕು.

ವೈಶಂಪಾಯನಃ

ಇತ್ಯೇವಮುಕ್ತ್ವಾ ಧರ್ಮಾತ್ಮಾ ತಾಂ ವಿಶುದ್ಧ್ಯರ್ಥಮಸ್ಪೃಶತ್ ।
ಸ್ಪೃಷ್ಟಮಾತ್ರೇ ಶರೀರೇ ತು ಪರಂ ಹರ್ಷಮವಾಪ ಸಾ ॥೬೫॥

ಹೀಗೆ ಹೇಳಿ ಧರ್ಮಾತ್ಮರಾದ ಕಣ್ವರು ಅವಳ ವಿಶುದ್ಧ್ಯರ್ಥವಾಗಿ ಮತ್ತೊಮ್ಮೆ ಅವಳನ್ನು ಸ್ಪರ್ಶಿಸಿದರು. ತಂದೆಯು ಸ್ಪರ್ಶಮಾಡಿದ ತಕ್ಷಣ ಶಕುಂತಲೆಯು ಪರಮ ಹರ್ಷವನ್ನು ಪಡೆದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಏಕೋನ ನವತಿತಮೋऽಧ್ಯಾಯಃ ॥

॥ ಸಂಭವಪರ್ವಣಿ ಸಪ್ತತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಂಬತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ತೊಂಭತ್ತನೆಯ ಅಧ್ಯಾಯ

(ಶಕುಂತಲೆಯ ಗರ್ಭವೃದ್ಧಿ, ಮೂರು ವರ್ಷಗಳ ನಂತರ ಪುತ್ರೋತ್ಪತ್ತಿ, ಶಿಶುವಿನ ನಾಮಕರಣ ಮತ್ತು ಬಾಲಲೀಲೆಗಳು.)

ವೈಶಂಪಾಯನಃ

ಪ್ರತಿಜ್ಞಾಯ ತು ದುಷ್ಷಂತೇ ಪ್ರತಿಯಾತೇ ಶಕುಂತಲಾಮ್ ।
ಗರ್ಭಶ್ಚ ವವೃಧೇ ತಸ್ಯಾ ರಾಜ್ಞಃ ಪತ್ನ್ಯಾ ಮಹಾತ್ಮನಃ ॥೧॥

ಶಕುಂತಲೆಗೆ ವಚನವನ್ನು ಕೊಟ್ಟು ದುಷ್ಷಂತನು ಪ್ರಯಾಣ ಮಾಡಿದ ಮೇಲೆ, ಮಹಾತ್ಮನಾದ ಆ ರಾಜನ ಪತ್ನಿಯಾದ ಶಕುಂತಲೆಯ ಗರ್ಭವು ವೃದ್ಧಿಯನ್ನು ಹೊಂದಿತು.

ಶಕುಂತಲಾ ಚಿಂತಯಂತೀ ರಾಜಾನಂ ಕಾರ್ಯಗೌರವಾತ್ ।
ರಾಜಪ್ರೇಷಣಿಕಾ ವಿಪ್ರಾಃ ಚತುರಂಗಬಲೈಃ ಸಹ ॥೨॥

ಅದ್ಯ ಶ್ವೋ ವಾ ಪರಶ್ವೋ ವಾ ಸಮಾಯಾಂತೀತಿ ನಿಶ್ಚಿತಾ ।
ದಿವಸಾನ್ ಪಕ್ಷಾನೃತೂನ್ ಮಾಸಾನಯನಾನಿ ಚ ಸರ್ವಶಃ ।
ಗಣ್ಯಮಾನೇಷು ವರ್ಷೇಷು ವ್ಯತೀಯುಸ್ತ್ರೀಣಿ ಭಾರತ ॥೩॥

ಶಕುಂತಲೆಯು ಕಾರ್ಯಗೌರವದಿಂದ ರಾಜನು ಬರಲಿಲ್ಲವೆಂದು ಚಿಂತಿಸಿದಳು. ರಾಜನು ಕಳುಹಿಸಿದ ಬ್ರಾಹ್ಮಣರು ಮತ್ತು ಚತುರಂಗ ಸೈನ್ಯವು ಇಂದೋ, ನಾಳೆಯೋ ಅಥವಾ ಮರುದಿನವೋ ಬರುವುದೆಂದು ತಿಳಿದು ದಿವಸಗಳನ್ನು, ಪಕ್ಷಗಳನ್ನು, ಋತುಗಳನ್ನು, ಮಾಸಗಳನ್ನು, ಮತ್ತು ಅಯನಗಳನ್ನು ಎಲ್ಲವನ್ನೂ ಕಳೆದಳು. ಎಲೈ ಭಾರತನೇ, ಹೀಗೆ ವರ್ಷಗಳು ಉರುಳಿ ಮೂರು ವರ್ಷಗಳು ಸಂದವು.

ತ್ರಿಷು ವರ್ಷೇಷು ಪೂರ್ಣೇಷು ಋಷೇರ್ವಚನಗೌರವಾನ್ ।
ಋಷಿಪತ್ನ್ಯಃ ಸುಬಹವೋ ಹೇತುಮದ್ವಾಕ್ಯಮಬ್ರುವನ್ ॥೪॥

ಶೃಣು ಭದ್ರೇ ಲೋಕವೃತ್ತಂ ಶ್ರುತ್ವಾ ಯದ್ ರೋಚತೇ ತವ ।
ತತ್ ಕುರುಷ್ವ ಹಿತಂ ದೇವಿ ನಾವಮಾನ್ಯಂ ಗುರೋರ್ವಚಃ ॥೫॥

ಮೂರು ವರ್ಷಗಳು ಪೂರ್ಣವಾದಾಗ ಅನೇಕ ಋಷಿಪತ್ನಿಯರು ಋಷಿಮಾತಿನ ಮೇಲಿನ ಗೌರವದಿಂದಾಗಿ ಯುಕ್ತಿಯುಕ್ತವಾದ ಮಾತುಗಳನ್ನು ಹೇಳಿದರು. ಮಂಗಳಸ್ವರೂಪಳೇ, ನಮ್ಮ ಮಾತನ್ನು ಕೇಳು. ಲೋಕವೃತ್ತವನ್ನು ತಿಳಿದು ನಿನಗೆ ಹೇಗೆ ಇಷ್ಟವೋ ಹಾಗೆ ಮಾಡು. ಗುರುಗಳ ಮಾತು ಹಿತವಾದುದು. ಅದನ್ನು ಎಂದೂ ಮೀರಬಾರದು.

ದೇವಾನಾಂ ದೈವತಂ ವಿಷ್ಣುರ್ವಿಪ್ರಾಣಾಮಗ್ನಿದೈವತಮ್ ।
ನಾರೀಣಾಂ ದೈವತಂ ಭರ್ತಾ ಲೋಕಾನಾಂ ಬ್ರಾಹ್ಮಣಂ ವಿದುಃ ॥೬॥

ಸೂತಿಕಾಲೇ ಪ್ರಸೂಯೇತಿ ಭಗವಾಂಸ್ತೇ ಪಿತಾऽಬ್ರವೀತ್ ।
ಕರಿಷ್ಯಾಮೀತಿ ಕರ್ತವ್ಯಂ ತಥಾ ತೇ ಸುಕೃತಂ ಭವೇತ್ ॥೭॥

ದೇವತೆಗಳಿಗೆ ವಿಷ್ಣುವೇ ದೇವತೆ. ಬ್ರಾಹ್ಮಣರಿಗೆ ಅಗ್ನಿಯು ದೇವತೆ, ನಾರಿಯರಿಗೆ ಪತಿಯು ದೇವತೆ, ಜನರಿಗೆ ಬ್ರಾಹ್ಮಣರು ದೇವತೆ ಎಂದು ತಿಳಿದವರು ಹೇಳುತ್ತಾರೆ.

ಸೂತಿಕಾಲವು ಪ್ರಾಪ್ತವಾದಾಗ ಪ್ರಸವವನ್ನು ಮಾಡು ಎಂದು ಪೂಜ್ಯರಾದ ನಿನ್ನ ತಂದೆಯು ಹೇಳಿದ್ದರು. ನೀನು ಹಾಗೆಯೇ ಮಾಡುತ್ತೇನೆ ಎಂದು ಹೇಳಿದ್ದೆ. ಹಾಗೆ ಮಾಡಿದರೆ ಒಳ್ಳೆಯದಾಗುತ್ತದೆ.

ವೈಶಂಪಾಯನಃ

ಪತ್ನೀನಾಂ ವಚನಂ ಶ್ರುತ್ವಾ ಸಾಧು ಸಾಧ್ವಿತ್ಯಚಿಂತಯತ್ ।
ಗರ್ಭಂ ಸುಷಾವ ವಾಮೋರೂಃ ಕುಮಾರಮಮಿತೌಜಸಮ್ ॥೮॥

ಋಷಿಪತ್ನಿಯರ ವಚನವನ್ನು ಕೇಳಿ ಸರಿಯಾದುದು ಎಂದು ತಿಳಿದು ಸುಂದರಿಯಾದ ಶಕುಂತಲೆಯು ಅಮಿತಪರಾಕ್ರಮಿಯಾದ ಕುಮಾರನನ್ನು ಪ್ರಸವಿಸಿದಳು.

ತ್ರಿಷು ವರ್ಷೇಷು ಪೂರ್ಣೇಷು ಪ್ರಾಜಾಯತ ಶಕುಂತಲಾ ।
ರೂಪೌದಾರ್ಯಗುಣೋಪೇತಂ ದೌಷ್ಮಂತಿಂ ಜನಮೇಜಯ ॥೯॥

ಎಲೈ ಜನಮೇಜಯನೇ, ಮೂರು ವರ್ಷಗಳ ಕಾಲ ಗರ್ಭವನ್ನು ಧರಿಸಿದ ನಂತರ ಶಕುಂತಲೆಯು ರೂಪ, ಔದಾರ್ಯ ಮತ್ತು ಗುಣಗಳಿಂದ ಕೂಡಿದ ದುಷ್ಮಂತನ ಮಗನನ್ನು ಹಡೆದಳು.

ತಸ್ಮಿಂಸ್ತದಾऽಂತರಿಕ್ಷಾತ್ ತು ಪುಷ್ಪವೃಷ್ಟಿಃ ಪಪಾತ ಹ ।
ದೇವದುಂದುಭಯೋ ನೇದುರ್ನನೃತುಶ್ಚಾಪ್ಸರೋಗಣಾಃ ।
ಗಾಯಂತೋ ಮಧುರಂ ತತ್ರ ದೇವೈಃ ಶಕ್ರೋऽಭ್ಯುವಾಚ ಹ ॥೧೦॥

ಆಗ ಆಕಾಶದಿಂದ ಪುಷ್ಪವೃಷ್ಟಿಯು ಉಂಟಾಯಿತು. ದೇವದುಂದುಭಿಗಳು ಮೊಳಗಿದವು. ಅಪ್ಸರೆಯರ ಗಣಗಳು ಮಧುರವಾಗಿ ಗಾನ ಮಾಡುತ್ತಾ ನರ್ತನವನ್ನು ಮಾಡಿದವು. ಆಗ ದೇವತೆಗಳಿಂದ ಕೂಡಿದ ಶಕ್ರನು ಹೀಗೆ ಮಾತನಾಡಿದನು.

ಶಕುಂತಲೇ ತವ ಸುತಶ್ಚಕ್ರವರ್ತೀ ಭವಿಷ್ಯತಿ ।
ಬಲಂ ತೇಜಶ್ಚ ರೂಪಂ ಚ ನ ಸಮಂ ಭುವಿ ಕೇನಚಿತ್ ।
ಆಹರ್ತಾ ವಾಜಿಮೇಧಸ್ಯ ಶತಸಂಖ್ಯಸ್ಯ ಪೌರವಃ ॥೧೧॥

ಅನೇಕೈರಿಹಸಾಹಸ್ರೈಃ ರಾಜಸೂಯಾದಿಭಿರ್ಮಖೈಃ ।
ಸ್ವಾರ್ಥಂ ಬ್ರಾಹ್ಮಣಸಾತ್ ಕೃತ್ವಾ ದಕ್ಷಿಣಾಮಮಿತಾಂ ದದತ್ ॥೧೨॥

ಶಕುಂತಲೆ, ನಿನ್ನ ಮಗನು ಚಕ್ರವರ್ತಿಯಾಗುವನು. ಅವನ ಬಲಕ್ಕೆ, ತೇಜಸ್ಸಿಗೆ ಮತ್ತು ರೂಪಕ್ಕೆ ಸಮವಾದುದು ಭೂಮಿಯಲ್ಲಿ ಯಾವುದೂ ಇರುವುದಿಲ್ಲ. ಪೌರವನಾದ ಇವನು ನೂರು ಅಶ್ವಮೇಧಯಾಗವನ್ನು ಮಾಡುವನು. ಸಹಸ್ರಾರು ರಾಜಸೂಯಾದಿ ಯಾಗಗಳಿಂದ ತನ್ನ ಸಂಪತ್ತೆಲ್ಲವನ್ನು ಬ್ರಾಹ್ಮಣರಿಗೆ ಕೊಟ್ಟು ಅಮಿತವಾದ ದಕ್ಷಿಣೆಯನ್ನು ಕೊಡುತ್ತಾನೆ.

ವೈಶಂಪಾಯನಃ

ದೇವತಾನಾಂ ವಚಃ ಶ್ರುತ್ವಾ ಕಣ್ವಾಶ್ರಮನಿವಾಸಿನಃ ।
ಸಭಾಜಯಂತ ಕಣ್ವಸ್ಯ ಸುತಾಂ ಸರ್ವೇ ಮಹರ್ಷಯಃ ॥೧೩॥

ಶಕುಂತಲಾ ಚ ತಚ್ಛ್ರುತ್ವಾ ಪರಂ ಹರ್ಷಮವಾಪ ಸಾ ।
ದ್ವಿಜಾನಾಹೂಯ ಮುನಿಭಿಃ ಸತ್ಕೃತ್ಯ ಚ ಮಹಾಯಶಾಃ ॥೧೪॥

ದೇವತೆಗಳ ಮಾತನ್ನು ಕೇಳಿ ಕಣ್ವಾಶ್ರಮ ನಿವಾಸಿಗಳಾದ ಎಲ್ಲಾ ಮಹರ್ಷಿಗಳೂ ಕಣ್ವರ ಮಗಳಾದ ಶಕುಂತಲೆಯನ್ನು ಅಭಿನಂದಿಸಿದರು. ಆ ಮಾತುಗಳನ್ನು ಕೇಳಿ ಶಕುಂತಲೆಯು ಬಹಳ ಹರ್ಷಗೊಂಡಳು.

ಜಾತಕರ್ಮಾದಿಸಂಸ್ಕಾರಂ ಕಣ್ವಃ ಪುಣ್ಯವತಾಂ ವರಃ ।
ತಯಾಸ್ಯ ಕಾರಯಾಮಾಸ ವರ್ಧಮಾನಸ್ಯ ಚಾಸಕೃತ್ ।
ಯಥಾವಿಧಿ ಯಥಾನ್ಯಾಯಂ ಕ್ರಿಯಾಃ ಸರ್ವಾಸ್ತ್ವಕಾರಯತ್ ॥೧೫॥

ಮಹಾಕೀರ್ತಿವಂತರೂ, ಪುಣ್ಯವಂತರಲ್ಲಿ ಶ್ರೇಷ್ಠರೂ ಆದ ಕಣ್ವರು ಬ್ರಾಹ್ಮಣರನ್ನು ಕರೆಸಿ ಅವರನ್ನು ಸತ್ಕರಿಸಿ ಋಷಿಗಳಿಂದ ಶಿಶುವಿಗೆ ಶಕುಂತಲೆಯ ಮೂಲಕ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಿಸಿದರು. ಬೆಳೆಯುತ್ತಿರುವ ಆ ಶಿಶುವಿಗೆ ಶಾಸ್ತ್ರೋಕ್ತವಾಗಿ ಮತ್ತು ಕಾಲಕ್ಕೆ ಸರಿಯಾಗಿ ಅನೇಕ ಬಾರಿ ಬ್ರಾಹ್ಮಣರಿಂದ ಎಲ್ಲಾ ಸಂಸ್ಕಾರಗಳನ್ನು ಮಾಡಿಸಿದರು.

ದಂತೈಃ ಶುಭ್ರೈಃ ಶಿಖರಿಭಿಃ ಸಿಂಹಸಂಹನನೋ ಯುವಾ ।
ಚಕ್ರಾಂಕಿತಕರಃ ಶ್ರೀಮಾನ್ ಸ್ವಯಂ ವಿಷ್ಣುರಿವಾಪರಃ ॥೧೬॥

ಚತುಷ್ಪಿಷ್ಟುಶ್ಚ ಕಿಷ್ಕುಶ್ಚ ಮಹಾಮೂರ್ಧಾ ಮಹಾಬಲಃ ।
ಕುಮಾರೋ ದೇವಗರ್ಭಾಭಃ ಸ ತತ್ರಾಶು ವ್ಯವರ್ಧತ ॥೧೭॥

ಬಾಲಕನು ಬೆಳೆಯುತ್ತಾ ಯುವಕನಂತೆ ಸಿಂಹದ ಕಾಂತಿಯನ್ನು ಪಡೆದನು. ಮೊನಚಾದ, ಶುಭ್ರವಾದ ದಂತಗಳನ್ನುಳ್ಳವನಾಗಿ, ಕೈಗಳಲ್ಲಿ ಚಕ್ರದ ಚಿಹ್ನೆಯನ್ನು ಧರಿಸಿ, ಕಾಂತಿಯುಕ್ತನಾಗಿ ಇನ್ನೊಬ್ಬ ವಿಷ್ಣುವಿನಂತೆ ಶೋಭಿಸಿದನು. ಮಹಾಬಲನಾದ ಅವನ ಶಿರಸ್ಸು ನಾಲ್ಕು ಹಸ್ತ ಎತ್ತರವೂ, ಒಂದು ಹಸ್ತ ಅಗಲವೂ ಇದ್ದಿತು. ದೇವತೆಗಳ ಮಗನಂತಿದ್ದ ಆ ಕುಮಾರನು ಬಹಳ ಬೇಗ ಬೆಳೆದನು.

ಋಷೇರ್ಭಯಾತ್ ತು ದುಷ್ಪಂತಃ ಸ್ಮರನ್ನಪಿ ನಚಾಸ್ಮರತ್ ।
ಗತೇ ಕಾಲೇ ತು ಮಹತಿ ನ ಸಸ್ಮಾರ ತಪೋಧನಾಮ್ ॥೧೮॥

ಋಷಿಗಳ ಭಯದಿಂದ ದುಷ್ಪಂತನು ಶಕುಂತಲೆಯನ್ನು ಸ್ಮರಣೆ ಮಾಡಿದರೂ, ಸ್ಮರಣೆ ಮಾಡದಂತೆ ಇದ್ದನು. ಬಹಳ ಕಾಲವು ಕಳೆದಂತೆ, ತಪೋಧನಳಾದ ಶಕುಂತಲೆಯನ್ನು ಮರೆತುಬಿಟ್ಟನು.

ಷಡ್ವರ್ಷೇಷು ತತೋ ಬಾಲಃ ಕಣ್ವಾಶ್ರಮಪದಂ ಪ್ರತಿ ।
ವ್ಯಾಘ್ರಾನ್ ಸಿಂಹಾನ್ ವರಾಹಾಂಶ್ಚ ವೃಕಾಂಶ್ಚ ಮಹಿಷಾಂಸ್ತಥಾ ।
ಋಕ್ಷಾಂಶ್ಚಾಪಿ ದ್ವಿಜಾನನ್ಯಾನ್ ಪದ್ಭ್ಯಾಮಾಶ್ರಮಪೀಡಕಾನ್ ॥೧೯॥

ಬಲಾದ್ ಭುಜಾಭ್ಯಾಂ ಸಂಗೃಹ್ಯ ಬಲವಾನ್ ಸನ್ನಿಯಮ್ಯ ಚ ।
ಬದ್ಧ್ವಾ ವೃಕ್ಷೇಷು ದೌಷ್ಪಂತಿರಾಶ್ರಮಸ್ಯ ಸಮೀಪತಃ ॥೨೦॥

ಆರೋಹದ್ ದಮಯಂಶ್ಚೈವ ಕ್ರೀಡನ್ ಸ್ಮ ಪರಿಧಾವತಿ ।
ವನಂ ಚ ಲೋಡಯಾಮಾಸ ಸಿಂಹವ್ಯಾಘ್ರಗಣೈರ್ವೃತಮ್ ॥೨೧॥

ಆರು ವರ್ಷಗಳು ತುಂಬಿದಾಗ, ಆ ಬಾಲಕನು ಕಣ್ವಾಶ್ರಮದ ಬಳಿ ಸಂಚರಿಸುವ ವ್ಯಾಘ್ರಗಳು, ಸಿಂಹಗಳು, ವರಾಹಗಳು, ತೋಳಗಳು, ಮಹಿಷಗಳು, ಕರಡಿಗಳು ಮುಂತಾದ ಪ್ರಾಣಿಗಳನ್ನೂ, ತಮ್ಮ ಪಾದಗಳಿಂದ ಆಶ್ರಮವನ್ನು ಪೀಡಿಸುವ ಪಕ್ಷಿಗಳನ್ನೂ, ತನ್ನ ಭುಜಗಳಲ್ಲಿ ಹಿಡಿದು ಅವುಗಳನ್ನು ನಿಯಂತ್ರಿಸಿ, ಅವುಗಳ ಮೇಲೆ ಸವಾರಿಯನ್ನು ಮಾಡಿ ಆಶ್ರಮದ ಸಮೀಪದಲ್ಲಿದ್ದ ಮರಗಳಿಗೆ ಕಟ್ಟುತ್ತಿದ್ದನು.

ಆರೋಹದ್ ದಮಯಂಶ್ಚೈವ ಕ್ರೀಡನ್ ಸ್ಮ ಪರಿಧಾವತಿ ।
ವನಂ ಚ ಲೋಡಯಾಮಾಸ ಸಿಂಹವ್ಯಾಘ್ರಗಣೈರ್ವೃತಮ್ ॥೨೨॥

ಅವುಗಳನ್ನು ನಿಯಂತ್ರಿಸಿ, ಅವುಗಳ ಮೇಲೇರಿ ಆಟವಾಡುತ್ತಾ, ವನದಲ್ಲಿ ಸಂಚರಿಸುತ್ತಾ, ಸಿಂಹವ್ಯಾಘ್ರಗಳಿಂದ ಕೂಡಿದ್ದ ಆಶ್ರಮದ ಸಮೀಪದ ವನವನ್ನು ಕಲಕಾಡಿದನು.

ತತೋ ರಾಕ್ಷಸಸಂಘಾಂಶ್ಚ ಪಿಶಾಚಾಂಶ್ಚ ರಿಪೂನ್ ರಣೇ ।
ಮುಷ್ಟಿಯುದ್ಧೇನ ನಿರ್ಜಿತ್ಯ ಋಷೀನಾರಾಧಯತ್ ತದಾ ॥೨೩॥

ಅನಂತರ ರಾಕ್ಷಸರನ್ನೂ, ಪಿಶಾಚಗಳನ್ನೂ ಮತ್ತು ಶತ್ರುಗಳನ್ನೂ ಯುದ್ಧದಲ್ಲಿ ಮುಷ್ಟಿಯುದ್ಧದಿಂದ ಗೆದ್ದು ಋಷಿಗಳನ್ನು ಸಂತೋಷಗೊಳಿಸಿದನು.

ಕಶ್ಚಿದ್ ದಿತಿಸುತಸ್ತಂ ತು ಹಂತುಕಾಮೋ ಮಹಾಬಲಃ ।
ವಧ್ಯಮಾನಾಂಸ್ತು ದೈತೇಯಾನಮರ್ಷೀ ತಂ ಸಮಭ್ಯಯಾತ್ ॥೨೪॥

ದೈತ್ಯರು ವಧೆಗೆ ಒಳಗಾಗುವುದನ್ನು ನೋಡಿ ಕೋಪಗೊಂಡ ಮಹಾಬಲಿಷ್ಠನಾದ ಒಬ್ಬ ದೈತ್ಯನು ಅವನ ಸಮೀಪಕ್ಕೆ ಬಂದನು.

ತಮಾಗತಂ ಪ್ರಹಸ್ಯೈವ ಬಾಹುಭ್ಯಾಂ ಪರಿಗೃಹ್ಯ ಚ ।
ದೃಢಂ ಚಾಬಧ್ಯ ಬಾಹುಭ್ಯಾಂ ಪೀಡಯಾಮಾಸ ತಂ ತದಾ ॥೨೫॥

ಸಮೀಪಕ್ಕೆ ಬಂದಂತಹ ದೈತ್ಯನನ್ನು ನೋಡಿ ನಕ್ಕು, ತನ್ನ ಬಾಹುಗಳಿಂದ ಅವನನ್ನು ಹಿಡಿದು ದೃಢವಾಗಿ ಬಂಧಿಸಿ ಅವನನ್ನು ಪೀಡಿಸಿದನು.

ಮರ್ದಿತೋ ನ ಶಶಾಕಾಸ್ಯ ಮೋಕ್ಷಿತುಂ ಬಲವತ್ತಯಾ ।
ಪ್ರಾಕ್ರೋಶದ್ ಭೈರವಂ ತತ್ರ ದ್ವಾರೇಭ್ಯೋ ನಿಃಸೃತಂ ತ್ವಸೃಕ್ ॥೨೬॥

ಹೀಗೆ ಮರ್ದನಕ್ಕೆ ಒಳಗಾದ ಆ ದೈತ್ಯನು ಬಲಿಷ್ಠನಾದ ದೌಷ್ಟಂತಿಯಿಂದ ಬಿಡಿಸಿಕೊಳ್ಳಲು ಸಾಧ್ಯವಾಗದೆ ಭೈರವನಾದದಿಂದ ಕಿರುಚಿದನು. ಅವನ ಎಲ್ಲಾ ದ್ವಾರಗಳಿಂದಲೂ ರಕ್ತವು ಹರಿದು ಬಂದಿತು.

ತೇನ ಶಬ್ದೇನ ವಿತ್ರಸ್ತಾ ಮೃಗಾಃ ಸಿಂಹಾದಯೋ ಗಣಾಃ ।
ಸುಸ್ರುವುಶ್ಚ ಶಕೃನ್ಮೂತ್ರಮ್ ಆಶ್ರಮಸ್ಥಾಶ್ಚ ಸುಸ್ರುವುಃ ॥೨೭॥

ಆ ಶಬ್ದಕ್ಕೆ ಹೆದರಿದ ಮೃಗಗಳು ಮತ್ತು ಸಿಂಹಾದಿಗಳು ಮಲಮೂತ್ರಗಳನ್ನು ವಿಸರ್ಜಿಸಿದವು. ಆಶ್ರಮದ ಪ್ರಾಣಿಗಳು ಸಹ ಹಾಗೆಯೇ ಮಾಡಿದವು.

ನಿರಸುರ್ಜಾನುನಾ ಭೂಮೌ ಪಪಾತ ಭುವಿ ಪೀಡಿತಃ ।
ತಂ ದೃಷ್ಟ್ವಾ ವಿಸ್ಮಯಂ ಜಗ್ಮುಃ ಕುಮಾರಸ್ಯ ವಿಚೇಷ್ಟಿತಮ್ ॥೨೮॥

ದೌಷ್ಪಂತಿಯಿಂದ ಪೀಡಿಸಲ್ಪಟ್ಟ ಅವನು ಮಂಡಿಗಳ ಮೇಲೆ ಕುಸಿದು ಭೂಮಿಯಲ್ಲಿ ಪ್ರಾಣಬಿಟ್ಟನು. ಕುಮಾರನ ಇಂತಹ ಚೇಷ್ಟೆಯನ್ನು ನೋಡಿ ಆಶ್ರಮವಾಸಿಗಳೆಲ್ಲರೂ ವಿಸ್ಮಿತರಾದರು.

ನಿತ್ಯಕಾಲಂ ವಧ್ಯಮಾನಾ ದೈತೇಯಾ ರಾಕ್ಷಸೈಃ ಸಹ ।
ಕುಮಾರಸ್ಯ ಭಯಾದೇವ ನೈವ ಜಗ್ಮುಸ್ತದಾಶ್ರಮಮ್ ॥೨೯॥

ಯಾವಾಗಲೂ ವಧೆಗೆ ಒಳಗಾಗುತ್ತಿದ್ದ ದೈತ್ಯರು ಮತ್ತು ರಾಕ್ಷಸರನ್ನು ನೋಡಿ ಉಳಿದ ದೈತ್ಯರು ಮತ್ತು ರಾಕ್ಷಸರು ಕುಮಾರನ ಭಯದಿಂದ ಆಶ್ರಮದ ಸಮೀಪಕ್ಕೆ ಬರುತ್ತಿರಲಿಲ್ಲ.

ತತೋಽಸ್ಯ ನಾಮ ಚಕ್ರುಸ್ತೇ ಕಣ್ವಾಶ್ರಮನಿವಾಸಿನಃ ।
ಕಣ್ವೇನ ಸಹಿತಾಃ ಸರ್ವೇ ದೃಷ್ಟ್ವಾ ಕರ್ಮಾತಿಮಾನುಷಮ್ ॥೩೦॥

ಅಸ್ತ್ವಯಂ ಸರ್ವದಮನಃ ಸರ್ವಂ ಹಿ ದಮಯತ್ಯಸೌ ।
ಸ ಸರ್ವದಮನೋ ನಾಮ ಕುಮಾರಃ ಸಮಪದ್ಯತ ।
ವಿಕ್ರಮೇಣೌಜಸಾ ಚೈವ ಬಲೇನ ಚ ಸಮನ್ವಿತಃ ॥೩೧॥

ಆಗ ಕಣ್ವಾಶ್ರಮ ನಿವಾಸಿಗಳು ಕಣ್ವರ ಜೊತೆಯಲ್ಲಿ ಇವನ ಅತಿಮಾನುಷವಾದ ಕರ್ಮಗಳನ್ನು ನೋಡಿ, ಇವನು ಎಲ್ಲರನ್ನೂ ನಿಗ್ರಹ ಮಾಡುವುದರಿಂದ ಇವನು 'ಸರ್ವದಮನ' ಎಂದು ಕರೆಯಲ್ಪಡಲಿ ಎಂದು ಹೇಳಿದರು. ಹಾಗೆ ದೌಷ್ಪಂತಿಯು ವಿಕ್ರಮದಿಂದಲೂ, ಬಲದಿಂದಲೂ ಮತ್ತು ಪ್ರತಾಪದಿಂದಲೂ ಕೂಡಿದವನಾಗಿ ಸರ್ವದಮನನಾದನು.

ಅಪ್ರೇಷಯತಿ ದುಷ್ಪಂತೇ ಮಹಿಷ್ಯಾನಯನಸ್ಯ ಚ ।
ಪಾಂಡುಭಾವಪರೀತಾಂಗೀಂ ಚಿಂತಯಾಽಭಿಪರಿಪ್ಲುತಾಮ್ ।
ಲಂಬಾಲಕಾಂ ಕೃಶಾಂ ದೀನಾಂ ತಥಾ ಮಲಿನವಾಸಸಮ್ ॥೩೨॥

ಶಕುಂತಲಾಂ ಚ ಸಂಪ್ರೇಕ್ಷ್ಯ ಪ್ರದಧ್ಯೌ ಸ ಮುನಿಸ್ತದಾ ।
ಶಾಸ್ತ್ರೇ ಸರ್ವವೇದಾಶ್ಚ ದ್ವಾದಶಾಬ್ದಸ್ಯ ಚಾಭವನ್ ॥೩೩॥

ದುಷ್ಷಂತನು ಶಕುಂತಲೆಯನ್ನು ಕರೆಸಿಕೊಳ್ಳಲು ಯಾರನ್ನೂ ಕಳುಹಿಸದಿರಲು ಶಕುಂತಲೆಯು ಪಾಂಡುಭಾವವನ್ನು ಪಡೆದವಳಾಗಿ ಚಿಂತೆಯಿಂದ ಕೂಡಿದವಳಾಗಿ, ಮಲಿನ ವಸ್ತ್ರವನ್ನು ಧರಿಸಿ ದುಃಖಿಸಿದಳು. ಅಂತಹ ಶಕುಂತಲೆಯನ್ನು ನೋಡಿ ಕಣ್ವರು ಏನು ಮಾಡಬೇಕೆಂದು ಯೋಚಿಸಿದರು. ಈ ವೇಳೆಗೆ ದ್ವಾದಶ ವರ್ಷಗಳು ತುಂಬಿದ ಸರ್ವದಮನನು ಎಲ್ಲಾ ವೇದಗಳನ್ನೂ ಮತ್ತು ಶಾಸ್ತ್ರಗಳನ್ನೂ ಅಧ್ಯಯನ ಮಾಡಿದನು.

ವೈಶಂಪಾಯನಃ

ತಂ ಕುಮಾರಮೃಷಿರ್ದೃಷ್ಟ್ವಾ ಕರ್ಮ ಚಾಸ್ಯಾತಿಮಾನುಷಮ್ ।
ಸಮಯೋ ಯೌವರಾಜ್ಯಾಯ ಇತ್ಯನುಧ್ಯಾಯ ಸ ದ್ವಿಜಃ ।
ಶಕುಂತಲಾಂ ಸಮಾಹೂಯ ಕಣ್ವೋ ವಚನಮಬ್ರವೀತ್ ॥೩೪॥

ಕಣ್ವರು ಆ ಕುಮಾರನನ್ನು ಅವನ ಅಮಾನುಷ ಕರ್ಮಗಳನ್ನೂ ನೋಡಿ ಯುವರಾಜ್ಯಕ್ಕೆ ಸರಿಯಾದ ಕಾಲವೆಂದು ಚಿಂತಿಸಿ ಶಕುಂತಲೆಯನ್ನು ಕರೆದು ಮಾತನಾಡಿದರು.

ಪಿತೃಭ್ರಾತೃಸುತಾನಾಂ ಚ ದಂಪತೀನಾಂ ವಿಶೇಷತಃ ।
ದರ್ಶನಂ ದ್ವಾದಶಾದಬ್ದಾದಂತಃ ಕಾರ್ಯಮಿತಿ ದ್ವಿಜಃ ।
ತನ್ಮಾನವೇನ ಸ್ಮೃತಿನಾ ಧ್ಯಾತ್ವಾ ಪ್ರೋಕ್ತಮಿತಿ ಪ್ರಭುಃ ॥೩೫॥

ತಂದೆ, ಅಣ್ಣತಮ್ಮಂದಿರು, ಮಕ್ಕಳು ಮತ್ತು ದಂಪತಿಗಳು ಬೇರೆಯಾಗಿದ್ದರೆ ಹನ್ನೆರಡು ವರ್ಷಗಳ ಒಳಗೆ ಅವರ ದರ್ಶನವನ್ನು ಮಾಡಬೇಕೆಂಬ ಮನುಸ್ಮೃತಿಯ ಆದೇಶವನ್ನು ಚಿಂತಿಸಿ ಮಾತನಾಡಿದರು.

ಕಣ್ವಃ

ಶೃಣು ಭದ್ರೇ ಮಮ ಸುತೇ ಮಮ ವಾಕ್ಯಂ ಶುಚಿಸ್ಮಿತೇ ।
ಪತಿವ್ರತಾನಾಂ ನಾರೀಣಾಂ ವಿಶಿಷ್ಟಮಿತಿ ಚೋಚ್ಯತೇ ॥೩೬॥

ಮಂಗಳೆಯಾದ, ಶುಚಿಸ್ಮಿತೆಯಾದ ಮಗಳೇ, ನನ್ನ ಮಾತನ್ನು ಕೇಳು. ಪತಿವ್ರತೆಯಾದ ನಾರಿಯರಿಗೆ ಇದು ವಿಶಿಷ್ಟವಾದುದು ಎಂದು ಹೇಳುತ್ತಿದ್ದೇನೆ.

ಪತಿಶುಶ್ರೂಷಣಂ ಪೂರ್ವಂ ಮನೋವಾಕ್ಕಾಯಚೇಷ್ಟಿತೈಃ ।
ಅನುಜ್ಞಾತಾ ಮಯಾ ಪೂಜ್ಯಂ ಪೂಜಯೈತದ್ ವ್ರತಂ ಶುಭಮ್ ॥೩೭॥

ಮನೋವಾಕ್ಕಾಯವ್ಯಾಪಾರಗಳಿಂದ ಪತಿಯ ಶುಶ್ರೂಷೆಯನ್ನು ಮಾಡಬೇಕಾದುದು ಪತಿವ್ರತೆಯರ ಮೊದಲನೆಯ ಕಾರ್ಯ. ನನ್ನಿಂದ ಅನುಜ್ಞಾತಳಾಗಿ ಈ ಶುಭವಾದ ವ್ರತವನ್ನು ಧರಿಸಿ ಪೂಜ್ಯನಾದ ದುಷ್ಷಂತನನ್ನು ಪೂಜಿಸು. ಇದು ಶ್ರೇಷ್ಠವಾದ ವ್ರತ.

ಏತೇನೈವ ಚ ವೃತ್ತೇನ ಪುಣ್ಯಾನ್ ಲೋಕಾನವಾಪ್ಸ್ಯಸಿ ।
ತಸ್ಯಾಂತೇ ಮಾನುಷೇ ಲೋಕೇ ವಿಶಿಷ್ಟಾಂ ಲಪ್ಸ್ಯಸೇ ಶ್ರಿಯಮ್ ॥೩೮॥

ಇಂತಹ ನಡತೆಯಿಂದಲೇ ನೀನು ಪುಣ್ಯಲೋಕಗಳನ್ನು ಹೊಂದುತ್ತೀಯೆ ಅಲ್ಲದೆ ಮನುಷ್ಯಲೋಕದಲ್ಲಿಯೂ ವಿಶಿಷ್ಟವಾದ ಸಂಪತ್ತನ್ನು ಪಡೆಯುತ್ತೀಯೆ.

ತಸ್ಮಾದ್ ಭದ್ರೇ ಪ್ರಯಾತವ್ಯಂ ಸಮೀಪಂ ಪೌರವಸ್ಯ ಹ ।
ಸ್ವಯಂ ನಾಯಾತಿ ಮತ್ವಾ ತೇ ಗತಃ ಕಾಲಃ ಶುಚಿಸ್ಮಿತೇ ॥೩೯॥

ಆದ್ದರಿಂದ ಭದ್ರೆಯೇ, ಪೌರವನಾದ ದುಷ್ಷಂತನ ಸಮೀಪಕ್ಕೆ ನೀನು ಹೋಗಬೇಕು. ಶುಚಿಸ್ಮಿತೆಯೇ, ಬಹಳ ಕಾಲವು ಕಳೆಯಿತೆಂದು ತಿಳಿದು ರಾಜನು ತಾನಾಗಿಯೇ ಬರುತ್ತಿಲ್ಲ.

ಗತ್ವಾऽऽರಾಧಯ ರಾಜಾನಂ ದುಷ್ಷಂತಂ ಹಿತಕಾಮ್ಯಯಾ ।
ದೌಷ್ಷಂತಿಂ ಯೌವರಾಜ್ಯಸ್ಥಂ ದೃಷ್ಟ್ವಾ ಪ್ರೀತಿಮವಾಪ್ಸ್ಯಸಿ ॥೪೦॥

ಆದ್ದರಿಂದ ನೀನೇ ಹೋಗಿ ದುಷ್ಷಂತನ ಹಿತವನ್ನು ಬಯಸಿ ಅವನನ್ನು ಆರಾಧಿಸು. ಯೌವರಾಜಸ್ಥನಾದ ಸರ್ವದಮನನನ್ನು ನೋಡಿ ನೀನು ಸಂತೋಷವನ್ನು ಹೊಂದುವಿ.

ದೇವತಾನಾಂ ಗುರೂಣಾಂ ಚ ಕ್ಷತ್ರಿಯಾಣಾಂ ಚ ಭಾಮಿನಿ ।
ಭರ್ತೃಣಾಂ ಚ ವಿಶೇಷೇಣ ಹಿತಂ ಸಂಗಮನಂ ಸತಾಮ್ ॥೪೧॥

ಸುಂದರಿಯೇ, ದೇವತೆಗಳಿಗೂ, ಗುರುಗಳಿಗೂ, ಕ್ಷತ್ರಿಯರಿಗೂ, ಪತಿಗಳಿಗೂ, ಸಜ್ಜನರ ಸಂಗವು ಹಿತವಾದುದು.

ತಸ್ಮಾತ್ ಪುತ್ರಿ ಕುಮಾರೇಣ ಗಂತವ್ಯಂ ಮತ್ಪ್ರಿಯೇಪ್ಸಯಾ ।
ಪ್ರತಿವಾಕ್ಯಂ ನ ದದ್ಯಾಸ್ತ್ವಂ ಶಪಿತಾ ಮಮ ಪಾದಯೋಃ ॥೪೨॥

ಮಗಳೇ, ಆದ್ದರಿಂದ ನನಗೆ ಪ್ರಿಯವನ್ನುಂಟು ಮಾಡುವುದಕ್ಕೋಸ್ಕರ ಸರ್ವದಮನನ ಜೊತೆಯಲ್ಲಿ ನೀನು ಹೊರಡಬೇಕು. ನನ್ನ ಪಾದಗಳ ಮೇಲೆ ಆಣೆ ಮಾಡಿ ಹೇಳುತ್ತಿದ್ದೇನೆ. ಪ್ರತ್ಯುತ್ತರವನ್ನು ಕೊಡಬಾರದು.

ವೈಶಂಪಾಯನಃ

ಏವಮುಕ್ತ್ವಾ ಸುತಾಂ ತತ್ರ ಪೌತ್ರಂ ಕಣ್ವೋಽಭ್ಯಭಾಷತ ।
ಪರಿಷ್ವಜ್ಯ ಚ ಬಾಹುಭ್ಯಾಂ ಮೂರ್ಧ್ನ್ಯುಪಾಘ್ರಾಯ ಪೌರವಮ್ ॥

ಮಗಳನ್ನು ಕುರಿತು ಹೀಗೆ ಹೇಳಿ, ಮಗಳನ್ನು ಬಾಹುಗಳಿಂದ ಆಲಿಂಗಿಸಿ ಮೊಮ್ಮಗನನ್ನು ಶಿರಸ್ಸಿನಲ್ಲಿ ಆಘ್ರಾಣಿಸಿ ಅವನಿಗೆ ಹೀಗೆ ಹೇಳಿದರು.

ಸೋಮವಂಶೋದ್ಭವೋ ರಾಜಾ ದುಷ್ಷಂತೋ ನಾಮ ವಿಶ್ರುತಃ ।
ತಸ್ಯಾಗ್ರಮಹಿಷೀ ಚೈಷಾ ತವ ಮಾತಾ ಶುಚಿಸ್ಮಿತಾ ॥೪೪॥

ಗಂತುಕಾಮಾ ಭರ್ತೃಪಾರ್ಶ್ವಂ ತ್ವಯಾ ಸಹ ಸುಮಧ್ಯಮಾ ।
ಗತ್ವಾಽಭೀವಾದ್ಯ ರಾಜಾನಂ ಯೌವರಾಜ್ಯಮವಾಪ್ಸ್ಯಸಿ ॥೪೫॥

ಶುಚಿಸ್ಮಿತೆಯಾದ ನಿನ್ನ ತಾಯಿಯು, ಸೋಮವಂಶದಲ್ಲಿ ಜನಿಸಿದ ಪ್ರಖ್ಯಾತನಾದ ದುಷ್ಷಂತರಾಜನ ಅಗ್ರಮಹಿಷಿ. ಸುಂದರಿಯಾದ ಅವಳು ನಿನ್ನ ಜೊತೆಯಲ್ಲಿ ಪತಿಯ ಸಮೀಪಕ್ಕೆ ಹೋಗಲು ಬಯಸಿದ್ದಾಳೆ. ನೀನೂ ಸಹ ಅವಳ ಜೊತೆಯಲ್ಲಿ ಹೋಗಿ, ರಾಜನಿಗೆ ನಮಸ್ಕರಿಸಿ, ಯೌವರಾಜ್ಯವನ್ನು ಹೊಂದುವಿ.

ಸ ಪಿತಾ ತವ ರಾಜೇಂದ್ರಃ ತಸ್ಯ ತ್ವಂ ವಶಗೋ ಭವ ।
ಪಿತೃಪೈತಾಮಹಂ ರಾಜ್ಯಮನುತಿಷ್ಠಸ್ವ ಭಾವತಃ ।
ತಸ್ಮಿನ್ ಕಾಲೇ ಸ್ವರಾಜ್ಯಸ್ಥೋ ಮಾಮನುಸ್ಮರ ಪುತ್ರಕ ॥೪೬॥

ಮಗುವೇ, ಆ ರಾಜೇಂದ್ರನು ನಿನ್ನ ತಂದೆ. ನೀನು ಅವನಿಗೆ ವಶನಾಗಿರು. ಪಿತೃಪಿತಾಮಹರಿಂದ ಬಂದ ರಾಜ್ಯವನ್ನು ಪ್ರೀತಿಯಿಂದ ಆಳು. ನೀನು ನಿನ್ನ ರಾಜ್ಯದಲ್ಲಿರುವ ಕಾಲದಲ್ಲಿ ನನ್ನನ್ನೂ ಸ್ಮರಿಸು.

ವೈಶಂಪಾಯನಃ

ಅಭಿವಾದ್ಯ ಮುನೇ ಪಾದೌ ಪೌರವೋ ವಾಕ್ಯಮಬ್ರವೀತ್ ।
ತ್ವಂ ಪಿತಾ ಮಮ ವಿಪ್ರರ್ಷೇ ತ್ವಂ ಮಾತಾ ತ್ವಂ ಗತಿಶ್ಚ ಮೇ ॥೪೭॥

ನ ಚಾನ್ಯಂ ಪಿತರಂ ಮನ್ಯೇ ತ್ವಾಮೃತೇ ತು ಮಹಾತಪಃ ।
ತವ ಶುಶ್ರೂಷಣಂ ನಿತ್ಯಮಿಹ ಲೋಕೇ ಪರತ್ರ ಚ ॥೪೮॥

ಋಷಿಯ ಪಾದಗಳಿಗೆ ನಮಸ್ಕರಿಸಿ ಪೌರವನಾದ ಸರ್ವದಮನನು ಮಾತನಾಡಿದನು. ವಿಪ್ರರ್ಷಿಯೇ, ನೀನೇ ನನ್ನ ತಂದೆ, ನನ್ನ ತಾಯಿ ಮತ್ತು ನನಗೆ ಗತಿ. ಮಹಾತಪಸ್ವಿಯೇ, ನಿನ್ನನ್ನು ಬಿಟ್ಟು ನಾನು ಬೇರೆ ಯಾರನ್ನೂ ತಂದೆಯೆಂದು ತಿಳಿದಿಲ್ಲ. ನಿತ್ಯವೂ ನಿನ್ನ ಸೇವೆ ನನಗೆ ಈ ಲೋಕದಲ್ಲೂ, ಪರಲೋಕದಲ್ಲೂ ಸುಖವನ್ನು ಉಂಟುಮಾಡುತ್ತದೆ.

ಶಕುಂತಲಾ ಭರ್ತೃಕಾಮಾ ಸ್ವಯಂ ಯಾತು ಯಥೇಷ್ಟತಃ ।
ಅಹಂ ಶುಶ್ರೂಷಣಪರಃ ಪಾದಮೂಲೇ ವಸಾಮ್ಯಹಮ್ ॥೪೯॥

ಪತಿಯನ್ನು ಸೇರುವ ಆಸೆಯುಳ್ಳ ಶಕುಂತಲೆಯು ತನ್ನ ಇಚ್ಛೆಯಂತೆ ತಾನೇ ನಗರಕ್ಕೆ ಹೋಗಲಿ. ನಾನು ನಿಮ್ಮ ಸೇವೆಯನ್ನು ಮಾಡಿಕೊಂಡು ನಿಮ್ಮ ಪಾದಮೂಲದಲ್ಲಿಯೇ ವಾಸಿಸುತ್ತೇನೆ.

ಕ್ರೀಡಾಂ ವ್ಯಾಲಮೃಗೈಃ ಸಾರ್ಧಂ ಕರಿಷ್ಯೇ ನ ಪುರಾ ಯಥಾ ।
ತ್ವಚ್ಛಾಸನಪರೋ ನಿತ್ಯಂ ಸ್ವಾಧ್ಯಾಯಂ ಸುಕರೋಮ್ಯಹಮ್ ॥೫೦॥

ಇನ್ನು ಮುಂದೆ ಮೊದಲಿನಂತೆ ದುಷ್ಟಗಜಗಳ ಮತ್ತು ವ್ಯಾಘ್ರಗಳ ಜೊತೆಯಲ್ಲಿ ಆಟವಾಡುವುದಿಲ್ಲ. ನೀವು ಹೇಳಿದಂತೆ ಕೇಳಿಕೊಂಡು ನಿತ್ಯವೂ ಚೆನ್ನಾಗಿ ಅಧ್ಯಯನವನ್ನು ಮಾಡುತ್ತೇನೆ.

ವೈಶಂಪಾಯನಃ

ಏವಮುಕ್ತ್ವಾ ತು ಸಂಶ್ಲಿಷ್ಯ ಪಾದೌ ಕಣ್ವಸ್ಯ ತಿಷ್ಠತಿ ।
ತಸ್ಯ ತದ್ವಚನಂ ಶ್ರುತ್ವಾ ಪ್ರರುರೋದ ಶಕುಂತಲಾ ॥೫೧॥

ಮಗನು ಹೀಗೆ ಮಾತನಾಡಿ ಕಣ್ವರ ಪಾದಗಳನ್ನು ಹಿಡಿದು ನಿಂತಿರಲು, ಅವನ ಆ ಮಾತುಗಳನ್ನು ಕೇಳಿದ ಶಕುಂತಲೆಯು ಗಟ್ಟಿಯಾಗಿ ಅತ್ತಳು.

ಸ್ನೇಹಾತ್ ಪಿತುಶ್ಚ ಪುತ್ರಸ್ಯ ಹರ್ಷಶೋಕಸಮನ್ವಿತಾ ।
ನಿಶಾಮ್ಯ ರೋದನಂ ಮಾತುರ್ದೌಷ್ಮಂತಿರ್ವಾಕ್ಯಮಬ್ರವೀತ್ ॥೫೨॥

ತಂದೆಗೂ ಮತ್ತು ಮಗನಿಗೂ ಇರುವ ಸ್ನೇಹವನ್ನು ನೋಡಿ ಹರ್ಷದಿಂದಲೂ ಮತ್ತು ಶೋಕದಿಂದಲೂ ಕೂಡಿದವಳಾದಳು. ತಾಯಿಯು ಅಳುವುದನ್ನು ನೋಡಿ ಸರ್ವದಮನನು ಮಾತನಾಡಿದನು.

ಶ್ರುತ್ವಾ ಭಗವತೋ ವಾಕ್ಯಂ ಕಿಂ ರೋದಿಷಿ ಶಕುಂತಲೇ ।
ಗಂತವ್ಯಂ ಕಾಲ್ಯ ಉತ್ಥಾಯ ಭರ್ತೃಪ್ರೀತಿಸ್ತವಾಸ್ತಿ ಚೇತ್ ॥೫೩॥

ಶಕುಂತಲೆ, ಪೂಜ್ಯರ ಮಾತನ್ನು ಕೇಳಿದ ಮೇಲೆ ಏಕೆ ಅಳುತ್ತಿರುವೆ, ನಿನಗೆ ಪತಿಯ ಮೇಲೆ ಪ್ರೀತಿ ಇದ್ದರೆ ನಾಳೆ ಬೆಳಗ್ಗೆ ಎದ್ದು ಪತಿಯ ಪಟ್ಟಣಕ್ಕೆ ಹೋಗಬೇಕು.

ಶಕುಂತಲಾ

ಏಕಸ್ತು ಕುರುತೇ ಪಾಪಂ ಫಲಂ ಭುಂಕ್ತೇ ಮಹಾಜನಃ ।
ಭೋಕ್ತಾರಸ್ತತ್ರ ಮುಚ್ಯಂತೇ ಕರ್ತಾ ದೋಷೇಣ ಲಿಪ್ಯತೇ ॥೫೪॥

ಒಬ್ಬ ಮನುಷ್ಯನು ಕೆಟ್ಟ ಕೆಲಸವನ್ನು ಮಾಡುತ್ತಾನೆ. ಅದರ ಫಲವನ್ನು ಅನೇಕರು ಅನುಭವಿಸುತ್ತಾರೆ. ಫಲವನ್ನು ಅನುಭವಿಸುವವರು ದೋಷ ರಹಿತರಾಗುತ್ತಾರೆ, ಆದರೆ ಆ ಪಾಪಕಾರ್ಯ ಮಾಡಿದವನು ದೋಷಲಿಪ್ತನಾಗುತ್ತಾನೆ.

ಮಯಾ ನಿವಾರಿತೋ ನಿತ್ಯಂ ನ ಕರೋಷಿ ವಚೋ ಮಮ ।
ನಸ್ಯೋತಾನ್ ಕುಂಜರಾನ್ ನಿತ್ಯಂ ಬಾಹುಭ್ಯಾಂ ಸಂಪ್ರಮಥ್ಯ ವೈ ॥

ವನಂ ಚ ಲೋಡಯನ್ ನಿತ್ಯಂ ಸಿಂಹವ್ಯಾಘ್ರನಿಷೇವಿತಮ್ ।
ಏವಂವಿಧಾನಿ ಚಾನ್ಯಾನಿ ಕೃತ್ವಾ ವೈ ಪುರುನಂದನ ।
ರುಷಿತೋ ಭಗವಾಂಸ್ತಾತ ತಸ್ಮಾದಾವಾಂ ವಿವಾಸಿತೌ ॥೫೬॥

ನಾನು ಎಷ್ಟು ನಿವಾರಿಸಿದರೂ ನೀನು ನನ್ನ ಮಾತುಗಳನ್ನು ಕೇಳುವುದಿಲ್ಲ. ಆನೆಗಳಿಗೆ ಮೂಗುದಾರವನ್ನು ಹಾಕಿ ಅವುಗಳನ್ನು ನಿಯಂತ್ರಿಸಿ ಸಿಂಹವ್ಯಾಘ್ರಗಳಿರುವ ಕಾನನವನ್ನು ಯಾವಾಗಲೂ ಕಲಕಾಡುತ್ತೀಯೆ. ಪುರುನಂದನನೇ, ಇಂತಹ ಇನ್ನೂ ಅನೇಕ ಕರ್ಮಗಳನ್ನು ಮಾಡಿದುದರಿಂದ ಕೋಪಗೊಂಡ ಮಹರ್ಷಿಯು ನಮ್ಮಿಬ್ಬರನ್ನೂ ಆಶ್ರಮದಿಂದ ಹೊರಗೆ ಕಳುಹಿಸುತ್ತಿದ್ದಾನೆ.

ಅಹಂ ನ ಗಚ್ಛೇ ದುಷ್ಪಂತಂ ನಾಸ್ಮಿ ಪುತ್ರ ಹಿತೈಷಿಣೇ ।
ಪಾದಮೂಲೇ ವಸಿಷ್ಯಾಮಿ ಮಹರ್ಷೇರ್ಭಾವಿತಾತ್ಮನಃ ॥೫೭॥

ಮಗನೇ, ನಾನು ದುಷ್ಪಂತನ ನಗರಕ್ಕೆ ಹೋಗುವುದಿಲ್ಲ. ನಾನು ಅವನ ಹಿತೈಷಿಣಿಯೂ ಅಲ್ಲ. ಪರಿಶುದ್ಧವಾದ ಮನಸ್ಸುಳ್ಳ ಮಹರ್ಷಿಗಳಾದ ಕಣ್ವರ ಪಾದಮೂಲದಲ್ಲಿಯೇ ವಾಸಿಸುವೆನು.

ವೈಶಂಪಾಯನಃ

ಏವಮುಕ್ತ್ವಾ ತು ರುದತೀ ಪಪಾತ ಮುನಿಪಾದಯೋಃ ।
ಏವಂ ವಿಲಪತೀಂ ಕಣ್ವಶ್ಚಾನುನೀಯ ಚ ಹೇತುಭಿಃ ।
ಪುನಃ ಪ್ರೋವಾಚ ಭಗವಾನಾನೃಶಂಸ್ಯಾದ್ಧಿತಂ ವಚಃ ॥೫೮॥

ಹೀಗೆ ಹೇಳಿ ಅಳುತ್ತಾ ಶಕುಂತಲೆಯು ಮುನಿಯ ಪಾದಗಳ ಮೇಲೆ ಬಿದ್ದಳು. ಹೀಗೆ ಅಳುತ್ತಿದ್ದ ಶಕುಂತಲೆಯನ್ನು ಕಣ್ವರು ಯುಕ್ತಿಯುಕ್ತವಾದ ಮಾತುಗಳಿಂದ ಸಮಾಧಾನಪಡಿಸಿ ಅವಳ ಮೇಲಿನ ದಯೆಯಿಂದ ಪುನಃ ಹಿತವಾದ ನುಡಿಗಳನ್ನು ಆಡಿದರು.

ಕಣ್ವಃ

ಶಕುಂತಲೇ ಶೃಣುಷ್ವೇದಂ ಹಿತಂ ತಥ್ಯಂ ಚ ಭಾಮಿನಿ ।
ಪತಿವ್ರತಾಭಾವಗುಣಾನ್ ಹಿತ್ವಾ ಸಾಧ್ಯಂ ನ ಕಿಂಚನ ॥೫೯॥

ಸುಂದರಿಯಾದ ಶಕುಂತಲೆಯೇ, ಇದನ್ನು ಕೇಳು. ಇದು ಹಿತವೂ ತಥ್ಯವೂ ಆದುದು. ಪತಿವ್ರತೆಯ ಧರ್ಮವನ್ನು ಬಿಟ್ಟು ಏನನ್ನೂ ಸಾಧಿಸಲು ಸಾಧ್ಯವಿಲ್ಲ.

ಪತಿವ್ರತಾನಾಂ ದೇವಾ ವೈ ತುಷ್ಟಾಃ ಸರ್ವವರಪ್ರದಾಃ ।
ಪ್ರಸಾದಂ ಚ ಕರಿಷ್ಯಂತಿ ಹ್ಯಾಪದೋ ಮೋಚಯಂತಿ ಚ ॥೬೦॥

ಪತಿವ್ರತೆಯರಿಗೆ ತುಷ್ಟರಾದ ದೇವತೆಗಳು ಎಲ್ಲಾ ವರಗಳನ್ನು ನೀಡುತ್ತಾರೆ. ಅನುಗ್ರಹವನ್ನೂ ಮಾಡುವರು ಮತ್ತು ಆಪತ್ತುಗಳಿಂದಲೂ ಬಿಡಿಸುತ್ತಾರೆ.

ಪತಿಪ್ರಸಾದಾತ್ ಪುಣ್ಯಗತಿಂ ಪ್ರಾಪ್ನುವಂತಿ ನ ಚಾಶುಭಮ್ ।
ತಸ್ಮಾದ್ ಗತ್ವಾ ತು ರಾಜಾನಮಾರಾಧಯ ಶುಚಿಸ್ಮಿತೇ ॥೬೧॥

ಪತಿಯ ಪ್ರಸಾದದಿಂದ ಪುಣ್ಯಲೋಕವೇ ಉಂಟಾಗುತ್ತದೆ. ಎಂದೂ ಅಶುಭವು ಉಂಟಾಗುವುದಿಲ್ಲ. ಆದ್ದರಿಂದ ಶುಚಿಸ್ಮಿತೆಯೇ, ನೀನು ಹೋಗಿ ರಾಜನನ್ನು ಆರಾಧಿಸು.

ವೈಶಂಪಾಯನಃ

ಶಕುಂತಲಾಂ ತಥೋಕ್ತ್ವಾ ವೈ ಶಾಕುಂತಲಮಥಾಬ್ರವೀತ್ ।
ದೌಹಿತ್ರೋ ಮಮ ಪೌತ್ರಸ್ತ್ವಮಿಲಿಲಸ್ಯ ಮಹಾತ್ಮನಃ ॥೬೨॥

ಶಕುಂತಲೆಗೆ ಹೀಗೆ ಹೇಳಿ ಕಣ್ವರು ತಮ್ಮ ದೌಹಿತ್ರನೂ, ಮಹಾತ್ಮನಾದ ಇಲಿಲನ ಪೌತ್ರನೂ ಆದ ಪೌರವನನ್ನು ಕುರಿತು ಮಾತನಾಡಿದರು.

ಶೃಣುಷ್ವ ವಚನಂ ಸತ್ಯಂ ಪ್ರಬ್ರವೀಮಿ ತವಾನಘ ।
ಮನಸಾ ಭರ್ತ್ಯಕಾಮಾ ವೈ ವಾಗ್ಬಿರುಕ್ತ್ವಾ ಪೃಥಗ್ವಿಧಮ್ ॥೬೩॥

ಗಂತುಂ ನೇಚ್ಛತಿ ಕಲ್ಯಾಣೀ ತಸ್ಮಾತ್ ತಾತ ವಹಸ್ವ ವೈ ।
ಶಕ್ತಸ್ತ್ವಂ ಸಹ ಗಂತುಂ ಚ ಮುನಿಭಿಃ ಸಹ ಪೌರವ ॥೬೪॥

ಎಲೈ ನಿರ್ದೋಷನಾದವನೇ, ನಾನು ಹೇಳುವ ಸತ್ಯವಾದ ವಚನಗಳನ್ನು ಕೇಳು. ಶಕುಂತಲೆಯು ಮನಸ್ಸಿನಲ್ಲಿ ಪತಿಯ ಸಮೀಪಕ್ಕೆ ಹೋಗಲು ಬಯಸುತ್ತಾಳೆ. ಮಾತಿನಲ್ಲಿ ಮಾತ್ರ ಬೇರೆ ನುಡಿಯುತ್ತಿದ್ದಾಳೆ. ಕಲ್ಯಾಣಿಯಾದ ಅವಳು ಒಬ್ಬಳೇ ಹೋಗಲು ಇಷ್ಟಪಡುವುದಿಲ್ಲ. ಆದ್ದರಿಂದ ಮಗುವೇ, ಅವಳನ್ನು ಕರೆದುಕೊಂಡು ಹೋಗು. ಪೌರವನೇ, ಋಷಿಗಳ ಜೊತೆಯಲ್ಲಿ ನೀನು ಅವಳನ್ನು ಕರೆದುಕೊಂಡು ಹೋಗಲು ಸಮರ್ಥನಾಗಿರುವೆ.

ವೈಶಂಪಾಯನಃ

ಇತ್ಯುಕ್ತ್ವಾ ಸರ್ವದಮನಂ ಕಣ್ವಃ ಶಿಷ್ಯಾನಥಾಬ್ರವೀತ್ ।
ಶಕುಂತಲಾಮಿಮಾಂ ಶೀಘ್ರಂ ಸಪುತ್ರಾಮಾಶ್ರಮಾದಿತಃ ॥೬೫॥

ಭರ್ತುಃ ಪ್ರಾಪಯತಾಗಾರಂ ಸರ್ವಲಕ್ಷಣಪೂಜಿತಮ್ ।
ನಾರೀಣಾಂ ಚಿರವಾಸೋ ಹಿ ಬಾಂಧವೇಷು ನ ರೋಚತೇ ।
ಕೀರ್ತಿಚಾರಿತ್ರಪುಣ್ಯಘ್ನಂ ತಸ್ಮಾನ್ನಯತ ಮಾಚಿರಮ್ ॥೬೬॥

ಸರ್ವದಮನನನ್ನು ಕುರಿತು ಹೀಗೆ ಹೇಳಿ ಕಣ್ವರು ಶಿಷ್ಯರನ್ನು ಕುರಿತು ಹೇಳಿದರು. ಈ ಶಕುಂತಲೆಯನ್ನು ಅವಳ ಮಗನ ಜೊತೆಯಲ್ಲಿ ಈ ಆಶ್ರಮದಿಂದ ಕರೆದುಕೊಂಡು ಹೋಗಿ ಸರ್ವಲಕ್ಷಣ ಸಂಪನ್ನವಾದ ಪತಿಯ ಮನೆಗೆ ಸೇರಿಸಿ. ನಾರಿಯರಿಗೆ ಬಂಧುಗಳ ಮನೆಯಲ್ಲಿ ಬಹುಕಾಲವಿರುವುದು ಎಂದೂ ಶೋಭಿಸುವುದಿಲ್ಲ. ಅದು ಕೀರ್ತಿಯನ್ನೂ, ಚಾರಿತ್ರ್ಯವನ್ನೂ ಮತ್ತು ಪುಣ್ಯವನ್ನೂ ನಾಶಮಾಡುತ್ತದೆ. ಆದ್ದರಿಂದ ಶೀಘ್ರವಾಗಿ ಕರೆದುಕೊಂಡು ಹೋಗಿ.

ವೈಶಂಪಾಯನಃ

ಧರ್ಮಾಭಿಪೂಜನಂ ಪುತ್ರಂ ಕಾಶ್ಯಪೇನ ನಿಶಾಮ್ಯ ತು ।
ಕಾಶ್ಯಪಾತ್ ಪ್ರಾಪ್ಯ ಚಾನುಜ್ಞಾಂ ಮುಮುದೇ ಚ ಶಕುಂತಲಾ ॥೬೭॥

ತನ್ನ ಪುತ್ರನು ಧರ್ಮವನ್ನು ಪೂಜಿಸುವನೆಂದು ಕಾಶ್ಯಪರ ಮುಖದಿಂದ ಕೇಳಿ ಸಂತೋಷಗೊಂಡ ಶಕುಂತಲೆಯು, ಕಾಶ್ಯಪರಿಂದ ಹೊರಡಲು ಅನುಮತಿಯನ್ನು ಪಡೆದಳು.

ಕಣ್ವಸ್ಯ ವಚನಂ ಶ್ರುತ್ವಾ ಪ್ರತಿಗಚ್ಛೇತಿ ಚಾಸಕೃತ್ ।
ತಥೇತ್ಯುಕ್ತ್ವಾ ತು ಕಣ್ವಂ ಚ ಮಾತರಂ ಪೌರವೋಽಬ್ರವೀತ್ ॥೬೮॥

ಬೇಗ ಹೊರಡು ಎಂಬ ಕಣ್ವರ ಮಾತನ್ನು ಅನೇಕ ಬಾರಿ ಕೇಳಿದ ಪೌರವನು ಕಣ್ವರನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿ ತಾಯಿಯನ್ನು ಕುರಿತು ಮಾತನಾಡಿದನು.

ಕಿಂ ಚಿರಾಯಸಿ ಭದ್ರೇ ತ್ವಂ ಗಮಿಷ್ಯಾವೋ ನೃಪಾಲಯಮ್ ।
ಏವಮುಕ್ತ್ವಾ ತು ತಾಂ ದೇವೀಂ ದುಷ್ಷಂತಸ್ಯ ಮಹಾತ್ಮನಃ ।
ಅಭಿವಾದ್ಯ ಮುನೇಃ ಪಾದೌ ಗಂತುಮೈಚ್ಛತ್ ಸ ಪೌರವಃ ॥೬೯॥

ಮಂಗಳ ಸ್ವರೂಪಳೇ, ಏಕೆ ತಡಮಾಡುತ್ತಿದ್ದೀಯೆ? ನಾವಿಬ್ಬರೂ ಮಹಾತ್ಮನಾದ ದುಷ್ಷಂತರಾಜನ ಮನೆಗೆ ಹೋಗೋಣ. ಹೀಗೆ ತಾಯಿಯನ್ನು ಕುರಿತು ಹೇಳಿ ಕಣ್ವರ ಪಾದಗಳಿಗೆ ನಮಸ್ಕರಿಸಿ ಪೌರವನು ಹೊರಡಲು ಬಯಸಿದನು.

ಶಕುಂತಲಾ ಚ ಪಿತರಮಭಿವಾದ್ಯ ಕೃತಾಂಜಲಿಃ ।
ಪ್ರದಕ್ಷಿಣೀಕೃತ್ಯ ತದಾ ಪಿತರಂ ವಾಕ್ಯಮಬ್ರವೀತ್ ॥೭೦॥

ಶಕುಂತಲೆಯು ಕೈಗಳನ್ನು ಮುಗಿದು ತಂದೆಗೆ ಪ್ರದಕ್ಷಿಣೆ ಬಂದು ನಮಸ್ಕರಿಸಿ ತಂದೆಯನ್ನು ಕುರಿತು ಮಾತನಾಡಿದಳು.

ಅಜ್ಞಾನಾನ್ಮೇ ಪಿತಾ ಚೇತಿ ಯದುಕ್ತಂ ವಾಪಿ ಚಾನೃತಮ್ ।
ಅಕಾರ್ಯಂ ವಾಪ್ಯನಿಷ್ಟಂ ವಾ ಕ್ಷಂತುಮರ್ಹಸಿ ಕಾಶ್ಯಪ ॥೭೧॥

ನನ್ನ ತಂದೆಯೆಂದು ತಿಳಿದು ಅಜ್ಞಾನದಿಂದ ನಾನು ಏನಾದರೂ ಸುಳ್ಳನ್ನು ಮಾತನಾಡಿದ್ದರೆ, ಮಾಡಬಾರದ ಕೆಲಸವನ್ನು ಮಾಡಿದ್ದರೆ, ಅಥವಾ ಅನಿಷ್ಟವನ್ನು ಮಾಡಿದ್ದರೆ, ಕ್ಷಮಿಸಬೇಕು.

ಏವಮುಕ್ತೋ ನತಶಿರಾ ಮುನಿರ್ನೋವಾಚ ಕಿಂಚನ ।
ಮನುಷ್ಯಭಾವಾತ್ ಕಣ್ವೋಽಪಿ ಮುನಿರಶ್ರೂಣ್ಯವರ್ತಯತ್ ॥ ೭೨॥

ಹೀಗೆ ಹೇಳಲ್ಪಟ್ಟ ಕಾಶ್ಯಪರು ತಲೆಯನ್ನು ತಗ್ಗಿಸಿ ನಿಂತು ಏನೂ ಮಾತನಾಡಲಿಲ್ಲ. ಮನುಷ್ಯಭಾವವನ್ನು ಹೊಂದಿದ ಅವರು ಕಣ್ಣುಗಳಿಂದ ನೀರನ್ನು ಸುರಿಸಿದರು.

ಅಬ್ಭಕ್ಷಾನ್ ವಾಯುಭಕ್ಷಾಂಶ್ಚ ಶೀರ್ಣಪರ್ಣಾಶನಾನ್ ಮುನೀನ್ ।
ಫಲಮೂನಾಶಿನೋ ದಾಂತಾನ್ ವಲ್ಕಲಾಜಿನವಾಸಸಃ ।
ಸಮಾಹೂಯ ಮುನೀನ್ ಕಣ್ವಃ ಕಾರುಣ್ಯಾದ್ ವಾಕ್ಯಮಬ್ರವೀತ್ ॥

ಅನಂತರ, ಅಬ್ಭಕ್ಷರೂ, ವಾಯುಭಕ್ಷರೂ, ಶೀರ್ಣಪರ್ಣಾಶನರೂ, ಫಲಮೂಲಾಶನರೂ, ಇಂದ್ರಿಯನಿಗ್ರಹವುಳ್ಳವರೂ, ನಾರುಮಡಿಗಳನ್ನು ಮತ್ತು ಚರ್ಮಗಳನ್ನು ಧರಿಸಿದವರೂ ಆದ ಋಷಿಗಳನ್ನು ಕರೆದು ಕರುಣೆಯಿಂದ ಕಣ್ವರು ಹೀಗೆ ಮಾತನಾಡಿದರು.

ಮಯಾ ತು ಲಾಲಿತಾ ನಿತ್ಯಂ ಮಮ ಪುತ್ರೀ ಯಶಸ್ವಿನೀ ।
ವನೇ ಜಾತಾ ವಿವೃದ್ಧಾ ಚ ನ ಚ ಜಾನಾತಿ ಕಿಂಚನ ॥೭೪॥

ಕಾಡಿನಲ್ಲಿ ಹುಟ್ಟಿ ಬೆಳೆದ ಈ ನನ್ನ ಕೀರ್ತಿವಂತಳಾದ ಮಗಳು ನನ್ನಿಂದ ಯಾವಾಗಲೂ ಲಾಲಿಸಲ್ಪಟ್ಟಿದ್ದಾಳೆ. ಅವಳು ಏನನ್ನೂ ತಿಳಿಯದವಳು.

ಅಶ್ರಮೇಣ ಪಥಾ ಸರ್ವೈರ್ನೀಯತಾಂ ಕ್ಷತ್ರಿಯಾಲಯಮ್ ।
ದ್ವಿತೀಯಯೋಜನೇ ವಿಪ್ರಾಃ ಪ್ರತಿಷ್ಠಾನಂ ಪ್ರತಿಷ್ಠಿತಮ್ ॥೭೫॥

ಅವಳನ್ನು ಶ್ರಮವಿಲ್ಲದ ದಾರಿಯಿಂದ ರಾಜಮಂದಿರಕ್ಕೆ ಕರೆದುಕೊಂಡು ಹೋಗಬೇಕು. ಬ್ರಾಹ್ಮಣರೇ, ಇಲ್ಲಿಗೆ ಎರಡು ಯೋಜನ ದೂರದಲ್ಲಿ ಪ್ರತಿಷ್ಠಾನ ನಗರವಿದೆ.

ಪ್ರತಿಷ್ಠಾನೇ ಪುರೇ ರಾಜಾ ಶಾಕುಂತಲಪಿತಾಮಹಃ ।
ಅಧ್ಯುವಾಸ ಚಿರಂ ಕಾಲಮುರ್ವಶ್ಯಾ ಸಹಿತಃ ಪುರಾ ॥೭೬॥

ಪ್ರತಿಷ್ಠಾನ ನಗರದಲ್ಲಿ ಹಿಂದೆ ಸರ್ವದಮನನ ಪಿತಾಮಹನು, ಉರ್ವಶಿಯ ಜೊತೆಯಲ್ಲಿ ಬಹುಕಾಲ ವಾಸವಾಗಿದ್ದನು.

ಅನೂಪಜಾಂಗಲಯುತಂ ಧನಧಾನ್ಯಸಮಾಕುಲಮ್ ।
ಪ್ರತಿಷ್ಠಿತಂ ಪುರವರಂ ಗಂಗಾಯಮುನಸಂಗಮೇ ॥೭೭॥

ಪೂರುವಿನ ಅಣ್ಣನಾದ ಅನುವಿನಿಂದ ವಾಸಿಸಲ್ಪಟ್ಟ ಜಾಂಗಲದೇಶದ ಸಮೀಪದಲ್ಲಿ, ಗಂಗಾಯಮುನೆಯರ ಸಂಗಮದಲ್ಲಿ ಪ್ರತಿಷ್ಠಿತವಾದ ಪ್ರತಿಷ್ಠಾನ ಪಟ್ಟಣವು ಧನಧಾನ್ಯಗಳಿಂದ ಸಮೃದ್ಧವಾಗಿದೆ.

ತತ್ರ ಸಂಗಮಮಾಸಾದ್ಯ ಸ್ನಾತ್ವಾ ಹುತಹುತಾಶನಾಃ ।
ಶಾಕಮೂಲಫಲಾಹಾರಾ ನಿವರ್ತಧ್ವಂ ತಪೋಧನಾಃ ।
ಅನ್ಯಥಾ ತು ಭವೇದ್ ವಿಪ್ರಾ ಅಧ್ವನೋ ಗಮನೇ ಶ್ರಮಃ ॥೭೮॥

ಅಲ್ಲಿ ಗಂಗಾಯಮುನೆಯ ಸಂಗಮವನ್ನು ತಲುಪಿ, ಸ್ನಾನವನ್ನು ಮಾಡಿ, ಅಗ್ನಿಕಾರ್ಯವನ್ನು ಮಾಡಿ ತಪೋಧನರಾದ ನೀವು ಶಾಕಮೂಲಫಲಗಳನ್ನು ಸೇವಿಸಿ ಹಿಂದಿರುಗಿ ಬನ್ನಿ. ಬ್ರಾಹ್ಮಣರೇ, ಬೇರೆ ಮಾರ್ಗದಿಂದ ಹೋದರೆ ಶ್ರಮವುಂಟಾಗುತ್ತದೆ.

ವೈಶಂಪಾಯನಃ

ತಥೇತ್ಯುಕ್ತ್ವಾ ಚ ತೇ ಶಿಷ್ಯಾಃ ಪ್ರಾತಿಷ್ಠನ್ನಮಿತೌಜಸಃ ।
ಶಕುಂತಲಾಂ ಪುರಸ್ಕೃತ್ಯ ದುಷ್ಪಂತನಗರಂ ಪ್ರತಿ ॥೭೯॥

ಹಾಗೆಯೇ ಆಗಲಿ ಎಂದು ಹೇಳಿ ಕಣ್ವರ ಅಮಿತ ಸಾಮರ್ಥ್ಯವುಳ್ಳ ಆ ಶಿಷ್ಯರೆಲ್ಲರೂ ಶಕುಂತಲೆಯನ್ನು ಮುಂದೆ ಮಾಡಿಕೊಂಡು ದುಷ್ಪಂತನ ನಗರವನ್ನು ಕುರಿತು ಹೊರಟರು.

ಗೃಹೀತ್ವಾ ಚಾಮರಪ್ರಖ್ಯಂ ಪುತ್ರಂ ಕಮಲಲೋಚನಮ್ ।
ಆಜಗ್ಮುಶ್ಚ ಪುರಂ ಶುಭ್ರಂ ದುಷ್ಪಂತಾಧ್ಯುಷಿತಂ ವನಾತ್ ॥೮೦॥

ದೇವತೆಯಂತೆ ಕಂಗೊಳಿಸುವ, ಕಮಲಲೋಚನನಾದ ಮಗನನ್ನು ಕರೆದುಕೊಂಡು ಕಾಡಿನಿಂದ ಹೊರಟು ದುಷ್ಪಂತನಿಂದ ವಾಸಿಸಲ್ಪಟ್ಟ ಶುಭ್ರವಾದ ಪಟ್ಟಣಕ್ಕೆ ಬಂದರು.

ಶಕುಂತಲಾಂ ಸಮಾದಾಯ ಮುನಯೋ ಧರ್ಮವತ್ಸಲಾಃ ।
ತೇ ವನಾನಿ ನದೀಃ ಶೈಲಾನ್ ಗಿರಿಪ್ರಸ್ರವಣಾನಿ ಚ ॥೮೧॥

ಕಂದರಾಣಿ ನಿತಂಬಾಂಶ್ಚ ರಾಷ್ಟ್ರಾಣಿ ನಗರಾಣಿ ಚ ।
ಆಶ್ರಮಾಣಿ ಚ ಪುಣ್ಯಾನಿ ಗತ್ವಾ ಚೈವ ಗತಶ್ರಮಾಃ ।
ಶನೈರ್ಮಧ್ಯಾಹ್ನವೇಲಾಯಾಂ ಪ್ರತಿಷ್ಠಾನಂ ಸಮಾಗತಾಃ ॥೮೨॥

ಧರ್ಮವತ್ಸಲರಾದ ಮುನಿಗಳು, ಶಕುಂತಲೆಯನ್ನು ಕರೆದುಕೊಂಡು ವನಗಳನ್ನೂ, ನದಿಗಳನ್ನೂ, ಪರ್ವತಗಳನ್ನೂ, ಬೆಟ್ಟದ ಝರಿಗಳನ್ನೂ, ಗುಹೆಗಳನ್ನೂ, ತಪ್ಪಲು ಪ್ರದೇಶಗಳನ್ನೂ, ರಾಷ್ಟ್ರಗಳನ್ನೂ, ಆ ಪುಣ್ಯವಾದ ಆಶ್ರಮಗಳನ್ನೂ ಶ್ರಮವಿಲ್ಲದೆ ದಾಟಿ ನಿಧಾನವಾಗಿ ಮಧ್ಯಾಹ್ನದ ವೇಳೆಗೆ ಪ್ರತಿಷ್ಠಾನ ನಗರವನ್ನು ತಲುಪಿದರು.

ತಾಂ ಪುರೀಂ ಪುರುಹೂತೇನ ಹ್ಯೈಲಸ್ಯಾರ್ಥೇ ವಿನಿರ್ಮಿತಾಮ್ ।
ಪರಿಖಾವಪ್ರಪುರಗೈರುಪತಲ್ಪಶತೈರಪಿ ।
ಶತಘ್ನೀಭಿಶ್ಚಕ್ರಯಂತ್ರೈಃ ಗುಪ್ತಾಮನ್ಯೈರ್ದುರಾಸದಾಮ್ ॥೮೩॥

ಪುರೂರವನ ಸಲುವಾಗಿ ಇಂದ್ರನಿಂದ ನಿರ್ಮಿತವಾದ ಆ ಪಟ್ಟಣವನ್ನು ಅವರು ನೋಡಿದರು. ಅಲ್ಲಿ ಪರಿಖೆಗಳು (ಕಂದಕಗಳು), ಕೋಟೆಯ ಗೋಡೆಗಳು, ವಿಶ್ರಮಿಸುವ ನೂರಾರು ಸ್ಥಳಗಳು ಇದ್ದವು. ಆ ಪಟ್ಟಣವು ಶತಘ್ನಿಗಳಿಂದಲೂ, ಚಕ್ರಯಂತ್ರಗಳಿಂದಲೂ ರಕ್ಷಿತವಾಗಿ ಬೇರೆ ಯಾರೂ ಪ್ರವೇಶ ಮಾಡಲು ಸಾಧ್ಯವಾಗದಂತೆ ಇದ್ದಿತು.

ಹರ್ಮ್ಯಪ್ರಾಸಾದಸಂಬಾಧಾಂ ನಾನಾಪಣ್ಯವಿಭೂಷಿತಾಮ್ ।
ಮಂಟಪೈಃ ಸಸಭೈ ರಮ್ಯೈಃ ಪ್ರಪಾಭಿಶ್ಚ ಸಮಾವೃತಾಮ್ ॥೮೪॥

ಆ ಪಟ್ಟಣದಲ್ಲಿ ಅನೇಕ ಎತ್ತರದ ಮನೆಗಳೂ, ವಿಶಾಲವಾದ ಮನೆಗಳೂ ಇದ್ದವು. ಅನೇಕ ವಿಕ್ರೇಯವಾದ ವಸ್ತುಗಳಿಂದ ತುಂಬಿದ್ದಿತು. ಅಲ್ಲಿ ಅನೇಕ ಮಂಟಪಗಳೂ, ಸಭೆಗಳೂ, ರಮ್ಯವಾದ ಅರವಟ್ಟಿಗೆಗಳೂ ಇದ್ದವು.

ರಾಜಮಾರ್ಗೇಣ ಮಹತಾ ಸುವಿಭಕ್ತೇನ ಶೋಭಿತಾಮ್ ।
ಕೈಲಾಸಶಿಖರಾಕಾರೈರ್ಗೋಪುರೈಃ ಸಮಲಂಕೃತಾಮ್ ॥೮೫॥

ಚೆನ್ನಾಗಿ ವಿಭಕ್ತವಾದ ದೊಡ್ಡ ರಾಜಮಾರ್ಗಗಳಿಂದ ಆ ಪಟ್ಟಣವು ಶೋಭಿಸುತ್ತಿತ್ತು. ಕೈಲಾಸಶಿಖರದ ಆಕಾರವಿರುವ ಗೋಪುರಗಳಿಂದ ಅಲಂಕೃತವಾಗಿದ್ದಿತು.

ದ್ವಾರತೋರಣನಿರ್ವ್ಯೂಹೈರ್ಮಂಗಲೈರುಪಶೋಭಿತಾಮ್ ।
ಉದ್ಯಾನಾಮ್ರವಣೋಪೇತಾಂ ಮಹತೀಂ ಸಾಲಮೇಖಲಾಮ್ ॥೮೬॥

ದ್ವಾರತೋರಣಗಳಿಂದ ಸುಗಂಧಧೂಪವು ಹೊರಗೆ ಬರುತ್ತಿತ್ತು. ಮನೆಯ ಬಾಗಿಲುಗಳಲ್ಲಿ ಅನೇಕ ಮಂಗಳ ಪದಾರ್ಥಗಳನ್ನು ಇಟ್ಟು ಶೋಭೆಯನ್ನು ತರಲಾಗಿದ್ದಿತು. ಅಲ್ಲಿ ಉದ್ಯಾನಗಳು, ಆಮ್ರವನಗಳು, ದೊಡ್ಡದಾದ ಸಾಲವೃಕ್ಷಗಳ ಪಟ್ಟಿಯೂ ಇದ್ದಿತು.

ಸರ್ವತಃ ಪುಷ್ಕರಿಣ್ಯೈಶ್ಚ ಉದ್ಯಾನೈರುಪಶೋಭಿತಾಮ್ ।
ವರ್ಣಾಶ್ರಮೈಃ ಸ್ವಧರ್ಮಸ್ಥೈರ್ನಿತ್ಯೋತ್ಸವಸಮಾಹಿತೈಃ ॥೮೭॥

ಎಲ್ಲಾ ಕಡೆಯಲ್ಲಿಯೂ, ಪುಷ್ಕರಿಣಿಯಲ್ಲಿರುವ ಕಮಲಗಳಿಂದಲೂ ಮತ್ತು ಉದ್ಯಾನವನಗಳಿಂದಲೂ ಹೆಚ್ಚು ಶೋಭಿತವಾಗಿದ್ದಿತು. ಅಲ್ಲಿ ತಮ್ಮ ತಮ್ಮ ವರ್ಣಾಶ್ರಮ ಧರ್ಮಗಳನ್ನು ಆಚರಿಸುವ, ಯಾವಾಗಲೂ ಸಂತೋಷ ಮತ್ತು ಸಮಾಧಾನದಿಂದ ಕೂಡಿದ ಜನರಿದ್ದರು.

ಧನಧಾನ್ಯಸಮೃದ್ಧೈಶ್ಚ ಸಂತುಷ್ಟೈ ರತ್ನಪೂಜಿತೈಃ ।
ಕ್ರತುಯುಕ್ತೈಶ್ಚ ವಿದ್ವದ್ಭಿರಗ್ನಿಹೋತ್ರಪರೈಃ ಸದಾ ॥೮೮॥

ಧನಧಾನ್ಯಸಮೃದ್ಧಿಯಿಂದ ಸಂತುಷ್ಟರಾದವರು, ಯಜ್ಞನಿಪುಣರಾದ, ರತ್ನಗಳಿಂದ ಪೂಜಿತರಾದ ವಿದ್ವಾಂಸರು, ಯಾವಾಗಲೂ ಅಗ್ನಿಹೋತ್ರಪರರಾದ ಬ್ರಾಹ್ಮಣರು ಅಲ್ಲಿದ್ದರು.

ಅಕಾರ್ಯವರ್ಜಿತೈಶ್ಚೈವ ದಾನಶೀಲೈರ್ದಯಾಪರೈಃ ।
ಅಧರ್ಮಭೀರುಭಿಃ ಪೂರ್ಣಾಮಿಂದ್ರಸ್ಯೇವಾಮರಾವತೀಮ್ ॥೮೯॥

ಅಲ್ಲಿಯ ಜನರು ಅಕಾರ್ಯಗಳನ್ನು ಸಂಪೂರ್ಣವಾಗಿ ವರ್ಜಿಸಿದ್ದರು. ದಾನಶೀಲರೂ, ದಯಾಪರರೂ, ಅಧರ್ಮಭೀರುಗಳೂ ಆಗಿದ್ದರು. ಇಂದ್ರನ ಅಮರಾವತಿಯಂತೆ ಅಂತಹ ಜನರಿಂದ ಆ ನಗರವು ಪೂರ್ಣವಾಗಿದ್ದಿತು.

ತಸ್ಮಿನ್ ನಗರಮಧ್ಯೇ ತು ರಾಜವೇಶ್ಮ ಪ್ರತಿಷ್ಠಿತಮ್ ।
ಇಂದ್ರಸದ್ಮಪ್ರತೀಕಾಶಂ ಸಂಪೂರ್ಣಂ ವಿತ್ತಸಂಚಯೈಃ ॥೯೦॥

ಅಂತಹ ನಗರದ ಮಧ್ಯದಲ್ಲಿ ಇಂದ್ರನ ಅರಮನೆಯಂತಿರುವ ವಿತ್ತಸಂಚಯಗಳಿಂದ ಪರಿಪೂರ್ಣವಾದ ರಾಜನ ಅರಮನೆಯಿದ್ದಿತು.

ತಸ್ಯ ಮಧ್ಯೇ ಸಭಾ ದಿವ್ಯಾ ನಾನಾರತ್ನವಿಭೂಷಿತಾ ।
ತಸ್ಯಾಂ ಸಭಾಯಾಂ ರಾಜರ್ಷಿಃ ಸರ್ವಾಲಂಕಾರಭೂಷಿತಃ ।
ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈರ್ಮಂತ್ರಿಭಿಶ್ಚಾಪಿ ಸಂವೃತಃ ॥೯೧॥

ಅರಮನೆಯ ಮಧ್ಯದಲ್ಲಿ ನಾನಾರತ್ನವಿಭೂಷಿತವಾದ ದಿವ್ಯವಾದ ಸಭೆಯಿದ್ದಿತು. ಆ ಸಭೆಯಲ್ಲಿ ರಾಜರ್ಷಿಯಾದ ದುಷ್ಷಂತನು ಸರ್ವಾಲಂಕಾರಭೂಷಿತನಾಗಿ ಬ್ರಾಹ್ಮಣರಿಂದಲೂ, ಕ್ಷತ್ರಿಯರಿಂದಲೂ, ವೈಶ್ಯರಿಂದಲೂ ಮತ್ತು ಮಂತ್ರಿಗಳಿಂದಲೂ ಸುತ್ತುವರಿಯಲ್ಪಟ್ಟಿದ್ದನು.

ಕಾರ್ಯಾರ್ಥಿಭಿಃ ಸಮಭ್ಯೇತ್ಯ ಕೃತ್ವಾ ಕಾರ್ಯಂ ಗತೇಷು ಸಃ ।
ಸಂಸ್ತೂಯಮಾನೋ ರಾಜೇಂದ್ರಃ ಸೂತಮಾಗಧವಂದಿಭಿಃ ।
ಸುಖಾಸೀನೋಽಭವದ್ ರಾಜಾ ತಸ್ಮಿನ್ ಕಾಲೇ ಮಹರ್ಷಯಃ ॥೯೨॥

ಕಾರ್ಯಾರ್ಥಿಗಳು ಬಂದು ತಮ್ಮ ಕಾರ್ಯವನ್ನು ಮುಗಿಸಿಕೊಂಡು ಹೋದಮೇಲೆ, ಸೂತಮಾಗಧವಂದಿಗಳಿಂದ ವಂದಿಸಲ್ಪಡುವ ರಾಜೇಂದ್ರನು ತನ್ನ ಸಿಂಹಾಸನದಲ್ಲಿ ಸುಖವಾಗಿ ಕುಳಿತಿದ್ದನು.

ಶಕುಂತಾನಾಂ ಸ್ವನಂ ಶ್ರುತ್ವಾ ನಿಮಿತ್ತಜ್ಞಾ ಮಹರ್ಷಯಃ ।
ಶಕುಂತಲಾಮಿದಂ ಪ್ರೀತಾ ಹರ್ಷಯಂತೋಽಬ್ರುವನ್ ವಚಃ ॥೯೪॥

ಆ ಕಾಲದಲ್ಲಿ ಮಹರ್ಷಿಗಳು ಪಕ್ಷಿಗಳ ಸ್ವರವನ್ನು ಕೇಳಿ ಶಕುನ ಶಾಸ್ತ್ರವನ್ನು ತಿಳಿದ ಅವರು ಶಕುಂತಲೆಯ ಮೇಲಿನ ಪ್ರೀತಿಯಿಂದ ಅವಳನ್ನು ಸಂತೋಷಪಡಿಸುವ ಸಲುವಾಗಿ ಈ ಮಾತುಗಳನ್ನು ಆಡಿದರು.

ಶಕುಂತಲೇ ನಿಮಿತ್ತಾನಿ ಶೋಭನಾನಿ ಭವಂತಿ ನಃ ।
ಕಾರ್ಯಸಿದ್ಧಿಂ ವದಂತ್ಯದ್ಯ ಧ್ರುವಂ ರಾಜ್ಞೀ ಭವಿಷ್ಯಸಿ ।
ಅಸ್ಮಿನ್ನೇವ ದಿನೇ ಪುತ್ರೋ ಯುವರಾಜೋ ಭವಿಷ್ಯತಿ ॥೯೫॥

ಶಕುಂತಲೇ, ಶುಭಸೂಚನೆಗಳು ಕಂಡುಬರುತ್ತಿವೆ. ಈ ದಿನ ಇವು ಸ್ಪಷ್ಟವಾಗಿ ಕಾರ್ಯಸಿದ್ಧಿಯನ್ನು ಸೂಚಿಸುತ್ತಿವೆ. ನೀನು ನಿಶ್ಚಯವಾಗಿ ರಾಣಿಯಾಗುವಿ. ನಿನ್ನ ಮಗನು ಇಂದೇ ಯುವರಾಜನಾಗುವನು.

ವೈಶಂಪಾಯನಃ

ಉಕ್ತ್ವೈವಂ ರಾಜಭವನಂ ತೂರ್ಯಘೋಷನಿನಾದಿತಮ್ ।
ಶಕುಂತಲಾಂ ಪುರಸ್ಕೃತ್ಯ ವಿವಿಶುಸ್ತೇ ಮಹರ್ಷಯಃ ॥೯೬॥

ಹೀಗೆ ಹೇಳಿ ಮಹರ್ಷಿಗಳು ಶಕುಂತಲೆಯನ್ನು ಮುಂದೆ ಮಾಡಿಕೊಂಡು, ತೂರ್ಯಘೋಷದಿಂದ ಪ್ರತಿಧ್ವನಿಸುತ್ತಿದ್ದ ರಾಜಮಂದಿರವನ್ನು ಪ್ರವೇಶಿಸಿದರು.

ಪ್ರವಿಶಂತಂ ನೃಪಸುತಂ ಪ್ರಶಶಂಸುಶ್ಚ ಪ್ರೇಕ್ಷಕಾಃ ।
ವರ್ಧಮಾನಪುರದ್ವಾರಂ ಪ್ರವಿಶನ್ನೇವ ಪೌರವಃ ॥೯೭॥

ಇಂದ್ರಲೋಕಸ್ಥಮಾತ್ಮಾನಂ ಮೇನೇ ಹರ್ಷಸಮನ್ವಿತಃ ।
ತತೋ ವೈ ನಾಗರಾಃ ಸರ್ವೇ ಸಮಾಹೂಯ ಪರಸ್ಪರಮ್ ।
ದ್ರಷ್ಟುಕಾಮಾ ನೃಪಸುತಂ ಸಮಪದ್ಯಂತ ಭಾರತ ॥೯೮॥

ಪ್ರೇಕ್ಷಕರು ಪ್ರವೇಶಿಸುತ್ತಿದ್ದ ರಾಜಕುಮಾರನನ್ನು ಪ್ರಶಂಸೆ ಮಾಡಿದರು. ಮಹಾದ್ವಾರವನ್ನು ಪ್ರವೇಶ ಮಾಡುತ್ತಲೇ ಪೌರವನು ತಾನು ಇಂದ್ರಲೋಕದಲ್ಲಿರುವವನಂತೆ ತಿಳಿದು ಸಂತೋಷಗೊಂಡನು. ಎಲೈ ಭಾರತನೇ, ಆಗ ನಗರವಾಸಿಗಳೆಲ್ಲರೂ ಒಬ್ಬರನ್ನೊಬ್ಬರು ಕರೆದು ರಾಜಕುಮಾರನನ್ನು ನೋಡುವ ದೃಷ್ಟಿಯಿಂದ ಒಟ್ಟಿಗೆ ಸೇರಿದರು.

ನಾಗರಾಃ

ದೇವತೇವ ಜನಸ್ಯಾಗ್ರೇ ಭ್ರಾಜತೇ ಶ್ರೀರಿವಾಪರಾ ।
ಜಯಂತೇನೇವ ಪೌಲೋಮೀ ಇಂದ್ರಲೋಕಾದಿಹಾತಾ ॥೯೯॥

ಜನರ ಎದುರಿಗೆ ಇವಳು ಇನ್ನೊಬ್ಬ ಲಕ್ಷ್ಮೀದೇವಿಯಂತೆ ಶೋಭಿಸುತ್ತಿದ್ದಾಳೆ. ಜಯಂತನ ಜೊತೆಯಲ್ಲಿ ಶಚಿಯು ಇಂದ್ರಲೋಕದಿಂದ ಇಲ್ಲಿಗೆ ಬಂದಂತೆ ಕಾಣುತ್ತಿದೆ.

ವೈಶಂಪಾಯನಃ

ಇತಿ ಬ್ರುವಂತಸ್ತೇ ಸರ್ವೇ ಮಹರ್ಷೀನಿದಮಬ್ರುವನ್ ।
ಅದ್ಯ ನಃ ಸಫಲಂ ಜನ್ಮ ಕೃತಾರ್ಥಾಶ್ಚ ಕೃತಾ ವಯಮ್ ॥೧೦೦॥

ಯೇ ಸ್ವನೇತ್ರೈಃ ಪ್ರಪಶ್ಯಾಮೋ ಮಹರ್ಷೀನ್ ಸೂರ್ಯವರ್ಚಸಃ ।
ಅಭಿವಾದಯಾಮ ಸಹಿತಾ ಮಹರ್ಷೀನ್ ದೇವವರ್ಚಸಃ ॥೧೦೧॥

ಹೀಗೆ ಮಾತನಾಡುತ್ತಾ ಅವರು ಮಹರ್ಷಿಗಳನ್ನು ಕುರಿತು ಹೀಗೆ ಹೇಳಿದರು. ಈ ದಿನ ನಮ್ಮ ಜನ್ಮವು ಸಫಲವಾಯಿತು. ನಾವು ಕೃತಾರ್ಥರಾಗಿದ್ದೇವೆ. ಏಕೆಂದರೆ ಸೂರ್ಯನ ಕಾಂತಿಯಿರುವ ಮಹರ್ಷಿಗಳನ್ನು ನಮ್ಮ ಕಣ್ಣುಗಳಿಂದ ನೋಡುತ್ತಿದ್ದೇವೆ. ನಾವೆಲ್ಲರೂ ಒಟ್ಟಿಗೆ ದೇವತೆಗಳ ಕಾಂತಿಯುಳ್ಳ ಮಹರ್ಷಿಗಳಾದ ನಿಮಗೆ ನಮಸ್ಕಾರವನ್ನು ಮಾಡುತ್ತೇವೆ.

ವೈಶಂಪಾಯನಃ

ಇತ್ಯುಕ್ತ್ವಾ ಸಹಿತಾಃ ಕೇಚಿದನ್ವಗಚ್ಛಂತ ಪೌರವಮ್ ।
ಹೈಮವತ್ಯಾಃ ಸುತಮಿವ ಕುಮಾರಂ ಪುಷ್ಕರೇಕ್ಷಣಮ್ ॥೧೦೨॥

ಹೀಗೆ ಹೇಳುತ್ತಾ ಕೆಲವರು ಪಾರ್ವತಿಯ ಮಗನಾದ, ಕಮಲನಯನನಾದ ಷಣ್ಮುಖನಂತಿರುವ ಪೌರವನನ್ನು ಹಿಂಬಾಲಿಸಿದರು.

ಯೇ ಕೇಚಿದಬ್ರುವನ್ ಮೂಢಾಃ ಶಾಕುಂತಲದಿದೃಕ್ಷವಃ ।
ಕೃಷ್ಣಾಜಿನೇನ ಸಂಛನ್ನಾನ್ ದ್ರಷ್ಟುಂ ನೇಚ್ಛಂತಿ ತಾಪಸಾನ್ ॥೧೦೩॥

ಇನ್ನು ಕೆಲವರು ಮೂಢರು ಸರ್ವದಮನನನ್ನು ಮಾತ್ರ ನೋಡುವ ಆಸೆಯುಳ್ಳವರಾಗಿ ಕೃಷ್ಣಾಜಿನದಿಂದ ಆವೃತರಾದ ತಾಪಸರನ್ನು ನೋಡುವ ಇಚ್ಛೆಯಿಲ್ಲದೆ ಹೀಗೆ ಮಾತನಾಡಿದರು.

ಪಿಶಾಚಾ ಇವ ದೃಶ್ಯಂತೇ ನಾಗರಾಣಾಂ ವಿರೂಪಿಣಃ ।
ವಿನಾ ಸಂಧ್ಯಾಂ ಪಿಶಾಚಾಸ್ತೇ ಪ್ರವಿಶಂತಿ ಪುರೋತ್ತಮಮ್ ॥೧೦೪॥

ವಿರೂಪವುಳ್ಳ ಇವರು ನಗರವಾಸಿಗಳಿಗೆ ಪಿಶಾಚಿಗಳಂತೆ ತೋರುತ್ತಿದ್ದಾರೆ. ಸಂಧ್ಯಾಕಾಲಕ್ಕಿಂತ ಮುಂಚೆಯೇ ನಮ್ಮ ಶ್ರೇಷ್ಠವಾದ ಪಟ್ಟಣವನ್ನು ಈ ಪಿಶಾಚಿಗಳು ಪ್ರವೇಶಿಸುತ್ತಿದ್ದಾರೆ.

ಕ್ಷುತ್ಪಿಪಾಸಾರ್ದಿತಾನ್ ಕ್ಷಾಂತಾನ್ ವಲ್ಕಲಾಜಿನವಾಸಸಃ ।
ತ್ವಗಸ್ಥಿಭೂತಾನ್ ನಿರ್ಮಾಂಸಾನ್ ಧಮನೀಸಂತತಾನಪಿ ॥೧೦೫॥

ಪಿಂಗಲಾಕ್ಷಾನ್ ಪಿಂಗಜಟಾನ್ ದೀರ್ಘದಂತಾನ್ ನಿರೂದರಾನ್ ।
ವಿಶೀರ್ಷಕಾನೂರ್ಧ್ವಹಸ್ತಾನ್ ದೃಷ್ಟ್ವಾ ಹಾಸ್ಯಂತಿ ನಾಗರಾಃ ॥೧೦೬॥

ಇನ್ನೂ ಕೆಲವು ನಗರವಾಸಿಗಳು ಕ್ಷುತ್ಪಿಪಾಸೆಯಿಂದ ಬಳಲಿದವರೂ, ಕ್ಷಮಾಶೀಲರೂ, ವಲ್ಕಲಾಜಿನಧಾರಿಗಳೂ, ಮಾಂಸವಿಲ್ಲದೆ ಚರ್ಮ ಮತ್ತು ಮೂಳೆಗಳನ್ನು ಮಾತ್ರ ಹೊಂದಿದವರೂ, ಉಬ್ಬಿ ಎದ್ದು ತೋರುವ ನರಗಳುಳ್ಳವರೂ, ಕೆಂಪುಕಣ್ಣುಳ್ಳವರೂ, ಕೆಂಪು ಜಟೆಯುಳ್ಳವರೂ, ದೀರ್ಘದಂತರೂ, ಉದರವೇ ಇಲ್ಲದಂತೆ ಇರುವವರೂ, ತಲೆಯೇ ಕಾಣದಂತೆ ಇರುವವರೂ, ಕೈಗಳನ್ನು ಮೇಲಕ್ಕೆ ಎತ್ತಿದವರೂ ಆದ ಇಂತಹವರನ್ನು ನೋಡಿ ಹಾಸ್ಯ ಮಾಡಿದರು.

ಏವಂ ಕಥಯತಾಂ ತೇಷಾಂ ಗಿರಂ ಶ್ರುತ್ವಾ ಮಹರ್ಷಯಃ ।
ಅನ್ಯೋನ್ಯಂ ತೇ ಸಮಾಹೂಯ ಇದಂ ವಚನಮಬ್ರುವನ್ ॥೧೦೭॥

ಹೀಗೆ ಹಾಸ್ಯ ಮಾಡುವ ಅವರ ಮಾತುಗಳನ್ನು ಕೇಳಿದ ಮಹರ್ಷಿಗಳು ಅನ್ಯೋನ್ಯವಾಗಿ ಸಮಾಲೋಚಿಸಿ ಈ ಮಾತನ್ನು ಆಡಿದರು.

ಉಕ್ತಂ ಭಗವತಾ ಪೂರ್ವಂ ನ ಕೃತಂ ಸತ್ಯವಾದಿನಾ ।
ನಗರಂ ನ ಪ್ರವೇಷ್ಟವ್ಯಂ ಭವದ್ಭಿರಿತಿ ಶಾಸನಮ್ ॥೧೦೮॥

ಪೂಜ್ಯರೂ, ಸತ್ಯವಾದಿಗಳಾದ ಕಣ್ವರು ನೀವು ನಗರವನ್ನು ಪ್ರವೇಶಿಸಬಾರದು ಎಂಬ ಶಾಸನವನ್ನು ಮೊದಲೇ ನಮಗೆ ತಿಳಿಸಿದ್ದರು. ಅದನ್ನು ನಾವು ಮಾಡಲಿಲ್ಲ.

ಕಿಂಕಾರಣಂ ಪ್ರವೇಕ್ಷ್ಯಾಮೋ ನಗರಂ ದುರ್ಜನೈರ್ವೃತಮ್ ।
ತ್ಯಕ್ತಸಂಗಸ್ಯ ಚ ಮುನೇರ್ನಗರೇ ಕಿಂ ಪ್ರಯೋಜನಮ್ ॥೧೦೯॥

ದುರ್ಜನರಿಂದ ಆವೃತವಾದ ಈ ಪಟ್ಟಣವನ್ನು ಪ್ರವೇಶಿಸುವುದಕ್ಕೆ ನಮಗೇನು ಕಾರಣ? ಸರ್ವಸಂಗಪರಿತ್ಯಾಗ ಮಾಡಿದವರಿಗೆ ಈ ಪಟ್ಟಣದಲ್ಲಿ ಏನು ಪ್ರಯೋಜನವಿದೆ ?

ತಸ್ಮಾದ್ ಗಮಿಷ್ಯಾಮ ವಯಂ ಗಂಗಾಯಮುನಸಂಗಮಮ್ ।
ಏವಮುಕ್ತ್ವಾ ಮುನಿಗಣಾಃ ಪ್ರತಿಜಗ್ಮುರ್ಯಥಾಗತಮ್ ॥೧೧೦॥

ಆದ್ದರಿಂದ ನಾವೆಲ್ಲರೂ ಗಂಗಾಯಮುನಸಂಗಮಕ್ಕೆ ಹಿಂದಿರುಗೋಣ. ಹೀಗೆ ಹೇಳಿ ಆ ಮುನಿಗಳೆಲ್ಲರೂ ಬಂದ ದಾರಿಯಲ್ಲಿಯೇ ಹಿಂದಿರುಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ನವತಿತಮೋऽಧ್ಯಾಯಃ ॥

॥ ಸಂಭವಪರ್ವಣಿ ಅಷ್ಟತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ತೊಂಭತ್ತೊಂದನೆಯ ಅಧ್ಯಾಯ

(ದುಷ್ಷಂತ ಶಕುಂತಲೆಯರ ಸಂವಾದ. ಶಕುಂತಲೆಯಿಂದ ಪತ್ನಿ ಮತ್ತು ಪುತ್ರರ ಮಹತ್ವದ ವರ್ಣನೆ.)

ವೈಶಂಪಾಯನಃ

ಗತಾನ್ ಮುನಿಗಣಾನ್ ದೃಷ್ಟ್ವಾ ಪುತ್ರಂ ಸಂಗೃಹ್ಯ ಪಾಣಿನಾ ।
ಮಾತಾಪಿತೃಭ್ಯಾಂ ವಿರಹಾದ್ ಯಥಾ ಶೋಚಂತಿ ದಾರಕಾಃ ॥೧॥

ತಥಾ ಶೋಕಪರೀತಾಂಗೀ ಧೃತಿಮಾಲಂಬ್ಯ ದುಃಖಿತಾ ।
ಪುತ್ರೇಣೈವ ಸಹಾಯೇನ ಸಾ ಜಗಾಮ ಶನೈಃ ಶನೈಃ ॥೨॥

ಋಷಿಗಳ ಸಮೂಹವು ಹೊರಟುಹೋದುದನ್ನು ನೋಡಿ ಶಕುಂತಲೆಯು ಮಗನ ಕೈಯನ್ನು ಹಿಡಿದುಕೊಂಡು ತಂದೆತಾಯಿಗಳನ್ನು ಕಳೆದುಕೊಂಡ ಮಕ್ಕಳಂತೆ ಶೋಕತಪ್ತಳಾಗಿ ದುಃಖಿಯಾಗಿದ್ದರೂ ಧೈರ್ಯವನ್ನು ತೆಗೆದುಕೊಂಡು ಮಗನ ಸಹಾಯದಿಂದ ಮೆಲ್ಲಮೆಲ್ಲನೆ ನಡೆದಳು.

ಅದೃಷ್ಟಪೂರ್ವಾನ್ ಪಶ್ಯನ್ ವೈ ರಾಜಮಾರ್ಗೇಣ ಪೌರವಃ ।
ಹರ್ಮ್ಯಪ್ರಾಸಾದಚೈತ್ಯಾಂಶ್ಚ ಸಭಾ ದಿವ್ಯಾ ವಿಚಿತ್ರಿತಾಃ ।
ಕೌತೂಹಲಸಮಾವಿಷ್ಟೋ ದೃಷ್ಟ್ವಾ ವಿಸ್ಮಯಮಾಗತಃ ॥೩॥

ರಾಜಮಾರ್ಗದಲ್ಲಿ ಹೋಗುತ್ತಿದ್ದ ಪೌರವನು ಹಿಂದೆ ಎಲ್ಲೂ ನೋಡಿರದಂತಹ ದಿವ್ಯವಾದ ಸಭೆಗಳು, ಉಪ್ಪರಿಗೆಯ ಮನೆಗಳು ಮತ್ತು ವಿಚಿತ್ರವಾದ ಗೋಪುರಗಳನ್ನು ನೋಡಿ ಕುತೂಹಲದಿಂದ ಕೂಡಿದವನಾಗಿ ವಿಸ್ಮಯಪಟ್ಟನು.

ಸರ್ವೇ ಬ್ರುವಂತಿ ತಾಂ ದೃಷ್ಟ್ವಾ ಪದ್ಮಹೀನಾಮಿವ ಶ್ರಿಯಮ್ ।
ಗತೇನ ಹಂಸೀಸದೃಶೀಂ ಕೋಕಿಲೇನ ಸ್ವರೋಪಮಾಮ್ ॥೪॥

ಮುಖೇನ ಚಂದ್ರಸದೃಶೀಂ ಶ್ರಿಯಾ ಪದ್ಮಾಲಯಾಸಮಾಮ್।
ಸ್ಮಿತೇನ ಕುಂದಸದೃಶೀಂ ಪದ್ಮಗರ್ಭಸಮತ್ವಚಮ್ ॥೫॥

ಪದ್ಮಪತ್ರವಿಶಾಲಾಕ್ಷೀಂ ತಪ್ತಜಾಂಬೂನದಪ್ರಭಾಮ್ ।
ಕರಾಂತಮಿತಮಧ್ಯಾಂ ತಾಂ ಸುಕೇಶೀಂ ಸಂಹತಸ್ತನೀಮ್ ॥೬॥

ಜಘನಂ ಸುವಿಶಾಲಂ ವೈ ಊರೂ ಕರಿಕರೋಪಮೌ ।
ರಕ್ತತುಂಗನಖೌ ಪಾದೌ ಧರಣ್ಯಾಂ ಸುಪ್ರತಿಷ್ಠಿತೌ ॥೭॥

ಏವಂ ರೂಪಸಮಾಯುಕ್ತಾ ಸ್ವರ್ಗಲೋಕಾದಿಹಾಗತಾ ।
ಇತಿ ಸ್ಮ ಸರ್ವೇऽಮನ್ಯಂತ ದುಷ್ಪಂತನಗರೇ ಜನಾಃ ॥೮॥

ನಗರದ ಜನರೆಲ್ಲರೂ ಅವರನ್ನು ನೋಡಿ ಪದ್ಮಹೀನಳಾದ ಲಕ್ಷ್ಮಿಯೆಂದೂ, ನಡಿಗೆಯಲ್ಲಿ ಹಂಸ ಸಮಾನಳೆಂದೂ, ಸ್ವರದಲ್ಲಿ ಕೋಕಿಲೆಯ ಸಮಾನಳೆಂದೂ, ಮುಖದಲ್ಲಿ ಚಂದ್ರ ಸಮಾನಳೆಂದೂ, ಕಾಂತಿಯಲ್ಲಿ ಲಕ್ಷ್ಮಿ ಸಮಾನಳೆಂದೂ, ಮಂದಹಾಸದಲ್ಲಿ ಕುಂದಪುಷ್ಪ ಸಮಾನಳೆಂದೂ, ತ್ವಚೆಯಲ್ಲಿ ಪದ್ಮಗರ್ಭಕ್ಕೆ ಸಮಾನಳೆಂದೂ, ಪದ್ಮಪತ್ರದಂತೆ ವಿಶಾಲವಾದ ಕಣ್ಣುಳ್ಳವಳೆಂದೂ, ಪುಟವಿಟ್ಟ ಚಿನ್ನದ

ಕಾಂತಿಯುಳ್ಳವಳೆಂದೂ, ಕೃಶವಾದ ಮಧ್ಯವುಳ್ಳವಳೆಂದೂ, ಒಳ್ಳೆಯ ಕೇಶವುಳ್ಳವಳೆಂದೂ, ಕೂಡಿದ ಸ್ತನವುಳ್ಳವಳೆಂದೂ, ವಿಶಾಲವಾದ ಜಘನವುಳ್ಳವಳೆಂದೂ, ಆನೆಯ ಸೊಂಡಿಲಿನಂತಿರುವ ತೊಡೆಗಳುಳ್ಳವಳೆಂದೂ, ಕೆಂಪಾದ ಮತ್ತು ಎತ್ತರವಾದ ನಖಗಳುಳ್ಳವಳೆಂದೂ, ಭೂಮಿಯನ್ನು ಚೆನ್ನಾಗಿ ಮೆಟ್ಟುವ ಪಾದವುಳ್ಳವಳೆಂದೂ, ಇಂತಹ ಅಸಾಧಾರಣ ಸೌಂದರ್ಯವುಳ್ಳವಳಾಗಿ ಸ್ವರ್ಗಲೋಕದಿಂದ ದುಷ್ಷಂತನ ನಗರಕ್ಕೆ ಬಂದಿರುವಳೆಂದೂ ತಿಳಿದರು.

ಪುನಃ ಪುನರವೋಚಂಸ್ತೇ ಶಾಕುಂತಲಗುಣಾನಪಿ ।
ಸಿಂಹೇಕ್ಷಣಃ ಸಿಂಹದಂಷ್ಟ್ರಃ ಸಿಂಹಸ್ಕಂಧೋ ಮಹಾಭುಜಃ ।
ಸಿಂಹಧೀರಃ ಸಿಂಹಬಲಃ ಸಿಂಹವಿಕ್ರಾಂತಗಾಮ್ಯಯಮ್ ॥೯॥

ಸಿಂಹಾನೂಕಃ ಸಿಂಹಗತಿಃ ಸಿಂಹಸ್ಕಂಧೋ ಮಹಾಭುಜಃ ।
ಪೃಥ್ವಂಸಃ ಪೃಥುವಕ್ಷಾಶ್ಚ ಛತ್ರಾಕಾರಶಿರಾ ಮಹಾನ್ ॥೧೦॥

ಪಾಣಿಪಾದತಳೇ ರಕ್ತೋ ರಕ್ತಾಸ್ಯೋ ದುಂದುಭಿಸ್ವನಃ ।
ರಾಜಲಕ್ಷಣಸಂಪನ್ನೋ ರಾಜಶ್ರೀಶ್ಚಾಸ್ಯ ದೃಶ್ಯತೇ ॥೧೧॥

ಶಕುಂತಲೆಯ ಮಗನ ಗುಣವನ್ನು ನೋಡಿ ಮತ್ತೆ ಮತ್ತೆ ಮಾತನಾಡಿದರು. ಇವನು ಸಿಂಹದ ಕಣ್ಣುಳ್ಳವನು, ಸಿಂಹದಂತೆ ದಂಷ್ಟ್ರವುಳ್ಳವನು, ಸಿಂಹದಂತೆ ಮಹಾಭುಜವುಳ್ಳವನು, ಸಿಂಹದ ಧೈರ್ಯವನ್ನು ಹೊಂದಿದವನು, ಸಿಂಹದ ಬಲವನ್ನು ಹೊಂದಿದವನು, ಸಿಂಹದ ವಿಕ್ರಾಂತ ಗತಿಯನ್ನು ಹೊಂದಿರುವವನು, ಸಿಂಹದ ಶೀಲವನ್ನು ಹೊಂದಿರುವವನು, ವಿಸ್ತಾರವಾದ ಹೆಗಲನ್ನು ಮತ್ತು ವಕ್ಷಸ್ಥಲವನ್ನು ಉಳ್ಳವನು, ಛತ್ರಾಕಾರದ ಶಿರಸ್ಸನ್ನು ಉಳ್ಳವನು, ಪಾಣಿ ಮತ್ತು ಪಾದತಳಗಳು ಕೆಂಪಾಗಿರುವವನು, ಕೆಂಪಾದ ವದನ ಉಳ್ಳವನು, ದುಂದುಭಿಯ ಸ್ವರವುಳ್ಳವನು, ಎಲ್ಲಾ ರಾಜಲಕ್ಷಣಗಳಿಂದ ಯುಕ್ತನಾಗಿರುವವನು. ಇವನಲ್ಲಿ ರಾಜಲಕ್ಷ್ಮಿಯು ಕಾಣುತ್ತಿದ್ದಾಳೆ ಎಂದು ಮಾತನಾಡಿದರು.

ಆಕಾರೇಣ ಚ ರೂಪೇಣ ಶರೀರೇಣಾಪಿ ತೇಜಸಾ ।
ದುಷ್ಷಂತೇನ ಸಮೋ ಹ್ಯೇಷ ಕಸ್ಯ ಪುತ್ರೋ ಭವಿಷ್ಯತಿ ॥೧೨॥

ಆಕಾರದಿಂದಲೂ, ರೂಪದಿಂದಲೂ, ಶರೀರದಿಂದಲೂ, ಕಾಂತಿಯಿಂದಲೂ, ದುಷ್ಷಂತನಿಗೆ ಸಮಾನವಾಗಿರುವವನು ಯಾರ ಪುತ್ರನಿರಬಹುದು.

ಏವಂ ಬ್ರುವಂತಸ್ತೇ ಸರ್ವೇ ಪ್ರಶಶಂಸುಃ ಸಹಸ್ರಶಃ ।
ಯುಕ್ತಿವಾದಾನವೋಚಂತ ಸರ್ವಾಃ ಪ್ರಾಣಭೃತಃಸ್ತ್ರಿಯಃ ॥೧೩॥

ಬಾಂಧವಾ ಇವ ಸಸ್ನೇಹಾ ಅನುಜಗ್ಮುಃ ಶಕುಂತಲಾಮ್ ।
ವೇಶ್ಮದ್ವಾರಂ ಸಮಾಸಾದ್ಯ ವಿಹ್ವಲಂತೀ ನೃಪಾತ್ಮಜಾ ॥೧೪॥

ಹೀಗೆ ಹೇಳುತ್ತಾ ಪೌರರು ಸಹಸ್ರ ಸಂಖ್ಯೆಯಲ್ಲಿ ಅವನನ್ನು ಪ್ರಶಂಸಿಸಿದರು. ನಾಗರೀಕ ಸ್ತ್ರೀಯರೆಲ್ಲರೂ ತರ್ಕಬದ್ಧವಾದ ಮಾತುಗಳನ್ನಾಡುತ್ತಾ ಬಾಂಧವರಂತೆ ಸ್ನೇಹದಿಂದ ಶಕುಂತಲೆಯನ್ನು ಹಿಂಬಾಲಿಸಿದರು. ರಾಜದ್ವಾರವನ್ನು ಸಮೀಪಿಸಿದ ಶಕುಂತಲೆಯು ವಿಹ್ವಲಳಾದಳು.

ಚಿಂತಯಾಮಾಸ ಸಹಸಾ ಕಾರ್ಯಗೌರವಕಾರಣಾತ್ ।
ಲಜ್ಜಯಾ ಚ ಪರೀತಾಂಗೀ ರಾಜನ್ ರಾಜಸಮಕ್ಷತಃ ॥೧೫॥

ಅಘೃಣಾ ಕಿಂ ನು ವಕ್ಷ್ಯಾಮಿ ದುಷ್ಷಂತಂ ಮಮ ಕಾರಣಾತ್ ।
ಏವಮುಕ್ತ್ವಾ ತು ಕೃಪಣಾ ಚಿಂತಯಂತೀ ಶಕುಂತಲಾ ॥೧೬॥

ಅಭಿಸೃತ್ಯ ಚ ರಾಜಾನಂ ವೇದಿತಾ ಸಾ ಪ್ರವೇಶಿತಾ ।
ಸಹ ತೇನ ಕುಮಾರೇಣ ತರುಣಾದಿತ್ಯವರ್ಚಸಾ ॥೧೭॥

ತಕ್ಷಣ ಕಾರ್ಯಗೌರವವನ್ನು ಗಮನಿಸಿ ಲಜ್ಜೆಯಿಂದ ಕೂಡಿದವಳಾಗಿ ರಾಜನ ಎದುರಿಗೆ ಹೋಗಿ ದಯೆಯನ್ನು ಹೊಂದದ ನಾನು ನನ್ನ ಸಲುವಾಗಿ ಏನು ಮಾತನಾಡಲಿ ಎಂದು ಚಿಂತಿಸಿದಳು.

ಶಕುಂತಲೆಯು ಹೀಗೆ ಮನಸ್ಸಿನಲ್ಲಿಯೇ ಹೇಳಿಕೊಂಡು ಕೃಪಣಳಾಗಿ ರಾಜದ್ವಾರವನ್ನು ತಲುಪಿ, ದ್ವಾರಪಾಲಕರಿಂದ ರಾಜನಿಗೆ ನಿವೇದಿಸಲ್ಪಟ್ಟು ಬಾಲಸೂರ್ಯನ ಪ್ರಭೆಯಿರುವ ಕುಮಾರನ ಜೊತೆಯಲ್ಲಿ ಒಳಗೆ ಪ್ರವೇಶವನ್ನು ಪಡೆದಳು.

ಸಿಂಹಾಸನಸ್ಥಂ ರಾಜಾನಂ ಮಹೇಂದ್ರಸದೃಶದ್ಯುತಿಮ್ ।
ಶಕುಂತಲಾ ನತಶಿರಾಃ ಪರಂ ಹರ್ಷಮವಾಪ್ಯ ಚ ॥೧೮॥

ಇಂದ್ರನಿಗೆ ಸದೃಶವಾದ ಕಾಂತಿಯುಳ್ಳ ರಾಜನು ಸಿಂಹಾಸನದಲ್ಲಿ ಕುಳಿತಿರುವುದನ್ನು ನೋಡಿ ಶಕುಂತಲೆಯು ತಲೆಯನ್ನು ತಗ್ಗಿಸಿ ಸಂತೋಷಪಟ್ಟಳು.

ಕಾಂತಿಯುಳ್ಳವಳೆಂದೂ, ಕೃಶವಾದ ಮಧ್ಯವುಳ್ಳವಳೆಂದೂ, ಒಳ್ಳೆಯ ಕೇಶವುಳ್ಳವಳೆಂದೂ, ಕೂಡಿದ ಸ್ತನವುಳ್ಳವಳೆಂದೂ, ವಿಶಾಲವಾದ ಜಘನವುಳ್ಳವಳೆಂದೂ, ಆನೆಯ ಸೊಂಡಿಲಿನಂತಿರುವ ತೊಡೆಗಳುಳ್ಳವಳೆಂದೂ, ಕೆಂಪಾದ ಮತ್ತು ಎತ್ತರವಾದ ನಖಗಳುಳ್ಳವಳೆಂದೂ, ಭೂಮಿಯನ್ನು ಚೆನ್ನಾಗಿ ಮೆಟ್ಟುವ ಪಾದವುಳ್ಳವಳೆಂದೂ, ಇಂತಹ ಅಸಾಧಾರಣ ಸೌಂದರ್ಯವುಳ್ಳವಳಾಗಿ ಸ್ವರ್ಗಲೋಕದಿಂದ ದುಷ್ಷಂತನ ನಗರಕ್ಕೆ ಬಂದಿರುವಳೆಂದೂ ತಿಳಿದರು.

ಪುನಃ ಪುನರವೋಚಂಸ್ತೇ ಶಾಕುಂತಲಗುಣಾನಪಿ ।
ಸಿಂಹೇಕ್ಷಣಃ ಸಿಂಹದಂಷ್ಟ್ರಃ ಸಿಂಹಸ್ಕಂಧೋ ಮಹಾಭುಜಃ ।
ಸಿಂಹಧೀರಃ ಸಿಂಹಬಲಃ ಸಿಂಹವಿಕ್ರಾಂತಗಾಮ್ಯಯಮ್ ॥೯॥

ಸಿಂಹಾನೂಕಃ ಸಿಂಹಗತಿಃ ಸಿಂಹಸ್ಕಂಧೋ ಮಹಾಭುಜಃ ।
ಪೃಥ್ವಂಸಃ ಪೃಥುವಕ್ಷಾಶ್ಚ ಛತ್ರಾಕಾರಶಿರಾ ಮಹಾನ್ ॥೧೦॥

ಪಾಣಿಪಾದತಳೇ ರಕ್ತೋ ರಕ್ತಾಸ್ಯೋ ದುಂದುಭಿಸ್ವನಃ ।
ರಾಜಲಕ್ಷಣಸಂಪನ್ನೋ ರಾಜಶ್ರೀಶ್ಚಾಸ್ಯ ದೃಶ್ಯತೇ ॥೧೧॥

ಶಕುಂತಲೆಯ ಮಗನ ಗುಣವನ್ನು ನೋಡಿ ಮತ್ತೆ ಮತ್ತೆ ಮಾತನಾಡಿದರು. ಇವನು ಸಿಂಹದ ಕಣ್ಣುಳ್ಳವನು, ಸಿಂಹದಂತೆ ದಂಷ್ಟ್ರವುಳ್ಳವನು, ಸಿಂಹದಂತೆ ಮಹಾಭುಜವುಳ್ಳವನು, ಸಿಂಹದ ಧೈರ್ಯವನ್ನು ಹೊಂದಿದವನು, ಸಿಂಹದ ಬಲವನ್ನು ಹೊಂದಿದವನು, ಸಿಂಹದ ವಿಕ್ರಾಂತ ಗತಿಯನ್ನು ಹೊಂದಿರುವವನು, ಸಿಂಹದ ಶೀಲವನ್ನು ಹೊಂದಿರುವವನು, ವಿಸ್ತಾರವಾದ ಹೆಗಲನ್ನು ಮತ್ತು ವಕ್ಷಸ್ಥಲವನ್ನು ಉಳ್ಳವನು, ಛತ್ರಾಕಾರದ ಶಿರಸ್ಸನ್ನು ಉಳ್ಳವನು, ಪಾಣಿ ಮತ್ತು ಪಾದತಳಗಳು ಕೆಂಪಾಗಿರುವವನು, ಕೆಂಪಾದ ವದನ ಉಳ್ಳವನು, ದುಂದುಭಿಯ ಸ್ವರವುಳ್ಳವನು, ಎಲ್ಲಾ ರಾಜಲಕ್ಷಣಗಳಿಂದ ಯುಕ್ತನಾಗಿರುವವನು. ಇವನಲ್ಲಿ ರಾಜಲಕ್ಷ್ಮಿಯು ಕಾಣುತ್ತಿದ್ದಾಳೆ ಎಂದು ಮಾತನಾಡಿದರು.

ಆಕಾರೇಣ ಚ ರೂಪೇಣ ಶರೀರೇಣಾಪಿ ತೇಜಸಾ ।
ದುಷ್ಷಂತೇನ ಸಮೋ ಹ್ಯೇಷ ಕಸ್ಯ ಪುತ್ರೋ ಭವಿಷ್ಯತಿ ॥೧೨॥

ಆಕಾರದಿಂದಲೂ, ರೂಪದಿಂದಲೂ, ಶರೀರದಿಂದಲೂ, ಕಾಂತಿಯಿಂದಲೂ, ದುಷ್ಷಂತನಿಗೆ ಸಮಾನವಾಗಿರುವವನು ಯಾರ ಪುತ್ರನಿರಬಹುದು.

ಏವಂ ಬ್ರುವಂತಸ್ತೇ ಸರ್ವೇ ಪ್ರಶಶಂಸುಃ ಸಹಸ್ರಶಃ ।
ಯುಕ್ತಿವಾದಾನವೋಚಂತ ಸರ್ವಾಃ ಪ್ರಾಣಭೃತಃಸ್ತ್ರಿಯಃ ॥೧೩॥

ಬಾಂಧವಾ ಇವ ಸಸ್ನೇಹಾ ಅನುಜಗ್ಮುಃ ಶಕುಂತಲಾಮ್ ।
ವೇಶ್ಮದ್ವಾರಂ ಸಮಾಸಾದ್ಯ ವಿಹ್ವಲಂತೀ ನೃಪಾತ್ಮಜಾ ॥೧೪॥

ಹೀಗೆ ಹೇಳುತ್ತಾ ಪೌರರು ಸಹಸ್ರ ಸಂಖ್ಯೆಯಲ್ಲಿ ಅವನನ್ನು ಪ್ರಶಂಸಿಸಿದರು. ನಾಗರೀಕ ಸ್ತ್ರೀಯರೆಲ್ಲರೂ ತರ್ಕಬದ್ಧವಾದ ಮಾತುಗಳನ್ನಾಡುತ್ತಾ ಬಾಂಧವರಂತೆ ಸ್ನೇಹದಿಂದ ಶಕುಂತಲೆಯನ್ನು ಹಿಂಬಾಲಿಸಿದರು. ರಾಜದ್ವಾರವನ್ನು ಸಮೀಪಿಸಿದ ಶಕುಂತಲೆಯು ವಿಹ್ವಲಳಾದಳು.

ಚಿಂತಯಾಮಾಸ ಸಹಸಾ ಕಾರ್ಯಗೌರವಕಾರಣಾತ್ ।
ಲಜ್ಜಯಾ ಚ ಪರೀತಾಂಗೀ ರಾಜನ್ ರಾಜಸಮಕ್ಷತಃ ॥೧೫॥

ಅಘೃಣಾ ಕಿಂ ನು ವಕ್ಷ್ಯಾಮಿ ದುಷ್ಷಂತಂ ಮಮ ಕಾರಣಾತ್ ।
ಏವಮುಕ್ತ್ವಾ ತು ಕೃಪಣಾ ಚಿಂತಯಂತೀ ಶಕುಂತಲಾ ॥೧೬॥

ಅಭಿಸೃತ್ಯ ಚ ರಾಜಾನಂ ವೇದಿತಾ ಸಾ ಪ್ರವೇಶಿತಾ ।
ಸಹ ತೇನ ಕುಮಾರೇಣ ತರುಣಾದಿತ್ಯವರ್ಚಸಾ ॥೧೭॥

ತಕ್ಷಣ ಕಾರ್ಯಗೌರವವನ್ನು ಗಮನಿಸಿ ಲಜ್ಜೆಯಿಂದ ಕೂಡಿದವಳಾಗಿ ರಾಜನ ಎದುರಿಗೆ ಹೋಗಿ ದಯೆಯನ್ನು ಹೊಂದದ ನಾನು ನನ್ನ ಸಲುವಾಗಿ ಏನು ಮಾತನಾಡಲಿ ಎಂದು ಚಿಂತಿಸಿದಳು.

ಶಕುಂತಲೆಯು ಹೀಗೆ ಮನಸ್ಸಿನಲ್ಲಿಯೇ ಹೇಳಿಕೊಂಡು ಕೃಪಣಳಾಗಿ ರಾಜದ್ವಾರವನ್ನು ತಲುಪಿ, ದ್ವಾರಪಾಲಕರಿಂದ ರಾಜನಿಗೆ ನಿವೇದಿಸಲ್ಪಟ್ಟು ಬಾಲಸೂರ್ಯನ ಪ್ರಭೆಯಿರುವ ಕುಮಾರನ ಜೊತೆಯಲ್ಲಿ ಒಳಗೆ ಪ್ರವೇಶವನ್ನು ಪಡೆದಳು.

ಸಿಂಹಾಸನಸ್ಥಂ ರಾಜಾನಂ ಮಹೇಂದ್ರಸದೃಶದ್ಯುತಿಮ್ ।
ಶಕುಂತಲಾ ನತಶಿರಾಃ ಪರಂ ಹರ್ಷಮವಾಪ್ಯ ಚ ॥೧೮॥

ಇಂದ್ರನಿಗೆ ಸದೃಶವಾದ ಕಾಂತಿಯುಳ್ಳ ರಾಜನು ಸಿಂಹಾಸನದಲ್ಲಿ ಕುಳಿತಿರುವುದನ್ನು ನೋಡಿ ಶಕುಂತಲೆಯು ತಲೆಯನ್ನು ತಗ್ಗಿಸಿ ಸಂತೋಷಪಟ್ಟಳು.

ಪೂಜಯಿತ್ವಾ ಯಥಾನ್ಯಾಯಂ ಅಬ್ರವೀತ್ ತಂ ಶಕುಂತಲಾ ।
ಅಭಿವಾದಯ ರಾಜಾನಂ ಪಿತರಂ ತೇ ದೃಢವ್ರತಮ್ ॥೧೯॥

ಶಕುಂತಲೆಯು ರಾಜನನ್ನು ಯಥೋಚಿತವಾಗಿ ಪೂಜಿಸಿ ಮಗನನ್ನು ಕುರಿತು ದೃಢವ್ರತನಾದ ನಿನ್ನ ತಂದೆಯಾದ ರಾಜನನ್ನು ನಮಸ್ಕರಿಸು ಎಂದು ಹೇಳಿದಳು.

ಏವಮುಕ್ತ್ವಾ ತು ಪುತ್ರಂ ಸಾ ಲಜ್ಜಾನತಮುಖೀ ಸ್ಥಿತಾ ।
ಸ್ತಂಭಮಾಲಿಂಗ್ಯ ರಾಜಾನಂ ಪ್ರಸೀದಸ್ವೇತಿ ಚಾಬ್ರವೀತ್ ॥೨೦॥

ಮಗನನ್ನು ಕುರಿತು ಹೀಗೆ ಹೇಳಿ, ಲಜ್ಜೆಯಿಂದ ಮುಖವನ್ನು ತಗ್ಗಿಸಿ ಒಂದು ಸ್ತಂಭವನ್ನು ಅವಲಂಬಿಸಿ ನಿಂತು, ರಾಜನನ್ನು ಕುರಿತು ನೀನು ಇವನಿಗೆ ಪ್ರಸನ್ನನಾಗಬೇಕೆಂದು ಕೇಳಿದಳು.

ಶಾಕುಂತಲೋಽಪಿ ರಾಜಾನಮಭಿವಾದ್ಯ ಕೃತಾಂಜಲಿಃ ।
ಹರ್ಷೇಣೋತ್ಫುಲ್ಲನಯನೋಂ ರಾಜಾನ ಚಾನ್ವವೈಕ್ಷತ ॥೨೧॥

ಶಕುಂತಲೆಯ ಮಗನೂ ಸಹ ಕೈಗಳನ್ನು ಮುಗಿದು ರಾಜನಿಗೆ ನಮಸ್ಕರಿಸಿ ಸಂತೋಷದಿಂದ ಅರಳಿದ ಕಣ್ಣುಳ್ಳವನಾಗಿ ರಾಜನನ್ನು ನೋಡಿದನು.

ದುಷ್ಷಂತೋ ಧರ್ಮಬುದ್ಧ್ಯಾ ತು ಚಿಂತಯನ್ನೇವ ಸೋಽಬ್ರವೀತ್।
ಕಿಮಾಗಮನಕಾರ್ಯಂ ತೇ ಬ್ರೂಹಿ ತ್ವಂ ವರವರ್ಣಿನಿ ।
ಕರಿಷ್ಯಾಮಿ ನ ಸಂದೇಹಃ ಸಪುತ್ರಾಯಾ ವಿಶೇಷತಃ ॥೨೨॥

ದುಷ್ಷಂತನು ಧರ್ಮಬುದ್ಧಿಯಿಂದ ಚಿಂತಿಸುತ್ತಲೇ ಹೀಗೆ ಕೇಳಿದನು. ಸುಂದರಿಯೇ, ನಿನ್ನ ಆಗಮನದ ಉದ್ದೇಶವೇನೆಂದು ಹೇಳು. ಪುತ್ರನಿಂದ ಕೂಡಿರುವ ನಿನಗೆ ನಿಶ್ಚಯವಾಗಿ ನಾನು ನಡೆಸಿಕೊಡುತ್ತೇನೆ.

ಶಕುಂತಲಾ

ಪ್ರಸೀದಸ್ವ ಮಹಾರಾಜ ವಕ್ಷ್ಯಾಮಿ ಪುರುಷೋತ್ತಮ ।
ಏಷ ಪುತ್ರೋ ಹಿ ತೇ ರಾಜನ್ ಮಯ್ಯುತ್ಪನ್ನಃ ಪರಂತಪ ॥೨೩॥

ತಸ್ಮಾತ್ ಪುತ್ರಸ್ತ್ವಯಾ ರಾಜನ್ ಯೌವರಾಜ್ಯೇಽಭಿಷಿಚ್ಯತಾಮ್ ।
ಯಥೋಕ್ತಮಾಶ್ರಮೇ ತಸ್ಮಿನ್ ವರ್ತಸ್ವ ಪುರುಷೋತ್ತಮ ॥೨೪॥

ಮಹಾರಾಜನೇ, ಪುರುಷೋತ್ತಮನೇ, ಪ್ರಸನ್ನನಾಗು. ಉದ್ದೇಶವನ್ನು ಹೇಳುವೆನು. ಇವನು ನನ್ನಲ್ಲಿ ಹುಟ್ಟಿದ ನಿನ್ನ ಪುತ್ರನು. ಎಲೈ ಪರಂತಪನಾದ ರಾಜನೇ, ನಿನ್ನ ಮಗನಿಗೆ ಯೌವರಾಜ್ಯದಲ್ಲಿ ಅಭಿಷೇಕವನ್ನು ಮಾಡು. ವಿವಾಹದ ಸಮಯದಲ್ಲಿ ಆಡಿದ ಮಾತಿನಂತೆ ನಡೆದುಕೋ.

ಮಯಾ ಸಮಾಗಮೇ ಪೂರ್ವಂ ಯಥಾ ತತ್ಸಮಯೇ ತ್ವಯಾ ।
ತಥಾ ತ್ವಂ ಸಮಯೇ ತಸ್ಮಿನ್ ವರ್ತಸ್ವ ಪುರುಷೋತ್ತಮ ।
ತಂ ಸ್ಮರಸ್ವ ಮಹಾಭಾಗ ಕಣ್ವಾಶ್ರಮಪದಂ ಪ್ರತಿ ॥೨೫॥

ವಿವಾಹದ ಸಮಯದಲ್ಲಿ ನೀನು ನನ್ನ ಸಮಾಗಮವನ್ನು ಮಾಡುವುದಕ್ಕಿಂತ ಮುಂಚೆ ಏನು ಮಾತನ್ನು ಕೊಟ್ಟಿರುವೆಯೋ ಅದರಂತೆ ನಡೆದುಕೋ. ಎಲೈ ಪುರುಷೋತ್ತಮನಾದ ಮಹಾನುಭಾವನೇ, ಕಣ್ವಾಶ್ರಮದ ಬಳಿ ನಡೆದ ಘಟನೆಗಳನ್ನು ಸ್ಮರಿಸು.

ವೈಶಂಪಾಯನಃ

ತಸ್ಯೋಪಭೋಗಸಕ್ತಸ್ಯ ಸ್ತ್ರೀಷು ಚಾನ್ಯಾಸು ಭಾರತ ।
ಶಕುಂತಲಾ ಸಪುತ್ರಾ ಚ ಮನಸ್ಯಂತರಧೀಯತ ॥೨೬॥

ಬೇರೆ ಪತ್ನಿಯರಲ್ಲಿ ಭೋಗಾಸಕ್ತನಾಗಿದ್ದ ಅವನಿಗೆ ಎಲೈ ಭರತ ಶ್ರೇಷ್ಠನೇ, ಶಕುಂತಲೆಯೂ, ಅವಳ ಪುತ್ರನೂ ಮನಸ್ಸಿನಿಂದ ಮಾಯವಾಗಿದ್ದರು.

ಸೋಽಥ ಶ್ರುತ್ವಾ ತು ತದ್ವಾಕ್ಯಂ ತಸ್ಯಾ ರಾಜಾ ಸ್ಮರನ್ನಪಿ ।
ಅಬ್ರವೀನ್ನ ಸ್ಮರಾಮೀತಿ ತ್ವಯಾ ಭದ್ರೇ ಸಮಾಗಮಮ್ ॥೨೭॥

ಅವಳ ಆ ಮಾತನ್ನು ಕೇಳಿ ರಾಜನು ಎಲ್ಲವನ್ನೂ ಸ್ಮರಿಸಿಕೊಂಡರೂ, ಭದ್ರೆಯೇ, ನಿನ್ನ ಸಮಾಗಮವನ್ನು ಮಾಡಿದ ನೆನಪು ನನಗೆ ಇಲ್ಲ ಎಂದು ಹೇಳಿದನು.

ಮೈಥುನಂ ಚ ವೃಥಾ ನಾಹಂ ಗಚ್ಛೇಯಮಿತಿ ಮೇ ಮತಿಃ ।
ನಾಭಿಜಾನಾಮಿ ಕಲ್ಯಾಣಿ ತ್ವಯಾ ಸಹ ಸಮಾಗಮಮ್ ॥೨೮॥

ನಾನು ವ್ಯರ್ಥವಾದ ಮೈಥುನವನ್ನು (ಪತ್ನಿಯಲ್ಲದವಳ ಜೊತೆ ಮೈಥುನವನ್ನು) ಎಂದೂ ಮಾಡುವುದಿಲ್ಲ ಎಂದು ನನ್ನ ಅಭಿಪ್ರಾಯ. ಕಲ್ಯಾಣಿಯೇ, ನನಗೆ ನಿನ್ನ ಸಮಾಗಮದ ನೆನಪೇ ಇಲ್ಲ.

ಧರ್ಮಾರ್ಥಕಾಮಸಂಬಂಧಂ ನ ಸ್ಮರಾಮಿ ತ್ವಯಾ ಸಹ ।
ಗಚ್ಛ ವಾ ತಿಷ್ಠ ವಾ ಕಾಮಂ ಯಥೇಚ್ಛಸಿ ತಥಾ ಕುರು ॥೨೯॥

ನಿನ್ನ ಜೊತೆಯಲ್ಲಿ ಧರ್ಮ ಅರ್ಥ ಅಥವಾ ಕಾಮದ ಯಾವ ಸಂಬಂಧವೂ ನನ್ನ ಸ್ಮರಣೆಗೆ ಬರುತ್ತಿಲ್ಲ. ನೀನು ಹೊರಟುಹೋಗು ಅಥವಾ ಇಲ್ಲೇ ಇರು. ನಿನಗೆ ಬೇಕಾದಂತೆ ಮಾಡು.

ಸೈವಮುಕ್ತಾ ವರಾರೋಹಾ ವ್ರೀಡಿತೈವ ಮನಸ್ವಿನೀ ।
ವಿಸಂಜ್ಞೈವ ಚ ದುಃಖೇನ ತಸ್ಥೌ ವಿಗತಚೇತನಾ ॥೩೦॥

ಆ ಸುಂದರಿಯು ಹೀಗೆ ಹೇಳಲ್ಪಟ್ಟವಳಾಗಿ ಅವಮಾನವಾದರೂ ಧೈರ್ಯವನ್ನು ತಂದುಕೊಂಡು ಜ್ಞಾನವನ್ನು ಕಳೆದುಕೊಂಡವಳಂತೆ ಪ್ರಜ್ಞಾಶೂನ್ಯಳಾಗಿ ನಿಂತುಕೊಂಡಳು.

ಸಂರಂಭಾಮರ್ಷತಾಮ್ರಾಕ್ಷೀ ಸ್ಫುರಮಾಣೋಷ್ಠಸಂಪುಟಾ ।
ನಿರ್ದಹಂತೀವ ನೇತ್ರಾಭ್ಯಾಂ ತಿರ್ಯಗ್ ರಾಜಾನಮೈಕ್ಷತ ॥೩೧॥

ಶೋಕ ಮತ್ತು ಕೋಪಗಳಿಂದ ಕೆಂಪಾದ ಕಣ್ಣುಳ್ಳವಳಾಗಿ ಅದುರುತ್ತಿರುವ ತುಟಿಗಳನ್ನು ಹೊಂದಿ ಸುಟ್ಟುಬಿಡುವಂತೆ ರಾಜನನ್ನು ಓರೆನೋಟದಿಂದ ನೋಡಿದಳು.

ಆಕಾರಂ ಗೂಹಮಾನಾ ಚ ಮನ್ಯುನಾ ಚ ಸಮೀರಿತಮ್ ।
ತಪಸಾ ಸಂಭೃತಂ ತೇಜೋ ಧಾರಯಾಮಾಸ ವೈ ತದಾ ॥೩೨॥

ಕೋಪದಿಂದ ಉಂಟಾದ ತನ್ನ ಆಕಾರವನ್ನು ಮರೆಮಾಚಿ ಆಗ ಅವಳು ತಪಸ್ಸಿನಿಂದ ಉಂಟಾದ ತೇಜಸ್ಸನ್ನು ತಡೆ ಹಿಡಿದಳು.

ಸಾ ಮುಹೂರ್ತಮಿವ ಧ್ಯಾತ್ವಾ ದುಃಖಾಮರ್ಷಸಮನ್ವಿತಾ ।
ಭರ್ತಾರಮಪಿ ಸಂಪ್ರೇಕ್ಷ್ಯ ಯಥಾನ್ಯಾಯಂ ವಚೋಽಬ್ರವೀತ್ ॥೩೩॥

ಒಂದು ಮುಹೂರ್ತಕಾಲ ಚಿಂತಿಸಿ, ಶೋಕಾಮರ್ಷಗಳಿಗೆ ಒಳಗಾದ ಅವಳು ಪತಿಯನ್ನು ನೋಡಿ ನ್ಯಾಯಯುಕ್ತವಾದ ಈ ಮಾತುಗಳನ್ನು ಆಡಿದಳು.

ಜಾನನ್ನಪಿ ಮಹಾರಾಜ ಕಸ್ಮಾದೇವಂ ಪ್ರಭಾಷಸೇ ।
ನ ಜಾನಾಮೀತಿ ಮೇ ಸಂಗಂ ಯಥಾಽನ್ಯಃ ಪ್ರಾಕೃತಸ್ತಥಾ ॥೩೪॥

ಮಹಾರಾಜನೇ, ಎಲ್ಲವನ್ನೂ ತಿಳಿದಿದ್ದರೂ ನಿನ್ನ ಸಂಗದ ಸ್ಮರಣೆಯೇ ಇಲ್ಲ ಎಂದು ಬೇರೆ ಸಾಮಾನ್ಯ ಮನುಷ್ಯನಂತೆ ಏಕೆ ಮಾತನಾಡುತ್ತಿದ್ದೀಯೆ.

ಯಸ್ಯ ತೇ ಹೃದಯಂ ವೇತ್ತಿ ಸತ್ಯಸ್ಯೈವಾನೃತಸ್ಯ ಚ ।
ಕಲ್ಯಾಣಂ ಸಾಕ್ಷಿಣಂ ಚೈವ ಆತ್ಮಾನಮವಮನ್ಯಸೇ ॥೩೫॥

ನಿನ್ನ ಹೃದಯವು ಸತ್ಯವು ಯಾವುದು, ಅನೃತವು ಯಾವುದು ಎಂದು ತಿಳಿದಿದೆ. ನಿನ್ನ ಪರಿಶುದ್ಧವಾದ ಸಾಕ್ಷಿಗೆ ನೀನು ಅವಮಾನವನ್ನು ಮಾಡುತ್ತಿರುವೆ.

ಯೋಽನ್ಯಥಾ ಸಂತಮಾತ್ಮಾನಮನ್ಯಥಾ ಪ್ರತಿಪದ್ಯತೇ ।
ಕಿಂ ತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ॥೩೬॥

ಯಾವನು ಬೇರೆ ರೀತಿ ಇರುವ ತನ್ನನ್ನು ಬೇರೆ ರೀತಿಯಾಗಿ ತಿಳಿಯುತ್ತಾನೆಯೋ, ಅವನು ಮಾಡದಿದ್ದ ಪಾಪವಿಲ್ಲ. ಅವನು ಚೋರ ಮತ್ತು ಆತ್ಮಘಾತುಕ.

ಏಕೋಽಹಮಸ್ಮೀತಿ ಚ ಮನ್ಯಸೇ ತ್ವಂ ।
ನ ಹೃಚ್ಛಯಂ ವೇತ್ಸಿ ಮುನಿಂ ಪುರಾಣಮ್ ।
ಯೋ ವೇದಿತಾ ಕರ್ಮಣಃ ಪಾಪಕಸ್ಯ
ತಸ್ಯಾಂತಿಕೇ ತ್ವಂ ವ್ರಜಿನಂ ಕರೋಷಿ ॥೩೭॥

ನೀನು ನಾನೊಬ್ಬನೇ ಇದ್ದೇನೆ ಎಂದು ತಿಳಿದಿದ್ದೀಯೆ. ಆದರೆ ಹೃದಯಗುಹೆಯಲ್ಲಿರುವ ನಾರಾಯಣನನ್ನು ತಿಳಿದಿಲ್ಲ. ನಿನ್ನ ಪಾಪಕರ್ಮವನ್ನು ತಿಳಿದಿರುವ ಅವನೆದುರಿಗೆ ನೀನು ಸುಳ್ಳನ್ನು ಹೇಳಿ ಪಾಪಕಾರ್ಯವನ್ನು ಮಾಡುತ್ತಿದ್ದೀಯೆ.

ಧರ್ಮ ಏವ ಹಿ ಸಾಧೂನಾಂ ಸರ್ವೇಷಾಂ ಹಿತಕಾರಣಮ್ ।
ನಿತ್ಯಂ ಮಿಥ್ಯಾವಿಹೀನಾನಾಂ ನಚ ದುಃಖಾವಹೋ ಭವೇತ್ ॥೩೮॥

ಎಲ್ಲರ ಹಿತಕ್ಕೆ ಕಾರಣವಾದುದು ಧರ್ಮವೆಂದೂ ಅನೃತದಿಂದ ದೂರವಾದ ಎಲ್ಲಾ ಸಾಧುಗಳ ಸರ್ವಕಾಲೀನ ಅಭಿಪ್ರಾಯ. ಇನ್ನೊಬ್ಬರಿಗೆ ದುಃಖವನ್ನುಂಟು ಮಾಡಬಾರದು.

ಮನ್ಯತೇ ಪಾಪಕಂ ಕೃತ್ವಾ ನ ಕಶ್ಚಿದ್ ವೇತ್ತಿ ಮಾಮಿತಿ ।
ದೇವಾಶ್ಚೈನಂ ವಿದಂತ್ಯೇವ ಭೂತಾಶ್ಚೈವ ತಥಾಽಪರೇ ॥೩೯॥

ಪಾಪ ಕೆಲಸವನ್ನು ಮಾಡಿ ಮನುಷ್ಯನು ಯಾರೂ ನನ್ನನ್ನು ನೋಡಲಿಲ್ಲ ಎಂದು ತಿಳಿಯುತ್ತಾನೆ. ಆದರೆ ದೇವತೆಗಳೂ, ಪಂಚಭೂತಗಳೂ, ಮತ್ತು ಇನ್ನೂ ಕೆಲವರೂ ಅವನ ಪಾಪಕರ್ಮವನ್ನು ತಿಳಿದಿರುತ್ತಾರೆ.

ಆದಿತ್ಯಚಂದ್ರಾವನಿಲೋಽನಲಶ್ಚ
ದ್ಯೌರ್ಭೂಮಿರಾಪೋ ಹೃದಯಂ ಮನಶ್ಚ ।
ಅಹಶ್ಚ ರಾತ್ರಿಶ್ಚ ಉಭೇ ಚ ಸಂಧ್ಯೇ
ಧರ್ಮಶ್ಚ ಜಾನಾತಿ ನರಸ್ಯ ವೃತ್ತಮ್ ॥೪೦॥

ಸೂರ್ಯ, ಚಂದ್ರ, ವಾಯು, ಅಗ್ನಿ, ಆಕಾಶ, ಭೂಮಿ, ಜಲ, ಹೃದಯ, ಮನಸ್ಸು, ಅಹರ್ದೇವತೆ, ರಾತ್ರಿದೇವತೆ, ಸಂಧ್ಯಾ ದೇವತೆಗಳು ಮತ್ತು ಯಮ ಇವರೆಲ್ಲರೂ ಮನುಷ್ಯನ ಎಲ್ಲಾ ವೃತ್ತಗಳನ್ನು ತಿಳಿದಿರುತ್ತಾರೆ.

ಯಮೋ ವೈವಸ್ವತಸ್ತಸ್ಯ ನಿರ್ಯಾತಯತಿ ದುಷ್ಕೃತಮ್ ।
ಹೃದಿ ಸ್ಥಿತಃ ಕರ್ಮಸಾಕ್ಷೀ ಕ್ಷೇತ್ರಜ್ಞೋ ಯಸ್ಯ ತುಷ್ಯತಿ ॥೪೧॥

ವಿವಸ್ವಂತನ ಮಗನಾದ ಯಮನು ಯಾವ ಪುರುಷನು ಪಾಪಕರ್ಮವನ್ನು ಮಾಡಿ ಪಶ್ಚಾತ್ತಾಪ ಮತ್ತು ಪ್ರಾಯಶ್ಚಿತ್ತಗಳಿಂದ ಕರ್ಮಸಾಕ್ಷಿಯಾಗಿ ಕ್ಷೇತ್ರಜ್ಞನಾಗಿ ಹೃದಯದಲ್ಲಿಯೇ ಇರುವ ನಾರಾಯಣನನ್ನು ಸಂತೋಷಪಡಿಸುತ್ತಾನೆಯೋ ಅವನನ್ನು ಪಾಪದ ಫಲದಿಂದ ದೂರಮಾಡುತ್ತಾನೆ.

ನ ತುಷ್ಯತಿ ಚ ಯಸ್ಯೈವ ಪುರುಷಸ್ಯ ದುರಾತ್ಮನಃ ।
ತಂ ಯಮಃ ಪಾಪಕರ್ಮಾಣಂ ನಿರ್ಯಾತಯತಿ ದುಷ್ಕೃತಮ್ ॥೪೨॥

ಯಾವ ದುಷ್ಟನಿಗೆ ಅಂತರ್ಯಾಮಿಯಾದ ನಾರಾಯಣನು ಪ್ರಸನ್ನಗೊಳ್ಳುವುದಿಲ್ಲವೋ ಅಂತಹವನಿಗೆ ಯಮನು ಅವನ ಪಾಪಕರ್ಮಕ್ಕೆ ಅನುಗುಣವಾದ ಯಾತನೆಗಳನ್ನು ಕೊಡುತ್ತಾನೆ.

ಯೋಽವಮತ್ಯಾತ್ಮನಾऽऽತ್ಮಾನಮನ್ಯಥಾ ಪ್ರತಿಪದ್ಯತೇ ।
ನ ತಸ್ಯ ದೇವಾಃ ಶ್ರೇಯಾಂಸೋ ಯಸ್ಯಾತ್ಮಾऽಪಿ ನ ಕಾರಣಮ್ ॥೪೩॥

ಯಾವನು ತನಗೆ ತಾನೇ ಅವಮಾನ ಮಾಡಿಕೊಂಡು ಬೇರೆ ರೀತಿಯಲ್ಲಿ ತಿಳಿಯುತ್ತಾನೆಯೋ, ಪರಮಾತ್ಮನೂ ಶ್ರೇಯಸ್ಸನ್ನು ಉಂಟು ಮಾಡದಿದ್ದ ಅವನಿಗೆ ದೇವತೆಗಳೂ ಶ್ರೇಯಸ್ಸನ್ನು ಉಂಟು ಮಾಡುವುದಿಲ್ಲ.

ಸ್ವಯಂ ಪ್ರಾಪ್ತೇತಿ ಮಾಮೇವಂ ಮಾವಮಂಸ್ಥಾಃ ಪತಿವ್ರತಾಮ್ ।
ಅರ್ಚಾರ್ಹಾಂ ನಾರ್ಚಯಸಿ ಮಾಂ ಸ್ವಯಂ ಭಾರ್ಯಾಮುಪಸ್ಥಿತಾಮ್ ॥

ಪತಿವ್ರತೆಯಾದ ನಾನು ನಾನಾಗಿಯೇ ಬಂದಿದ್ದೇನೆ ಎಂಬ ಕಾರಣದಿಂದ ನನಗೆ ಅವಮಾನವನ್ನು ಮಾಡಬೇಡ. ತಾನಾಗಿ ಬಂದ ಅರ್ಚನೀಯಳಾದ ಭಾರ್ಯೆಯನ್ನು ನೀನು ಗೌರವಿಸುತ್ತಿಲ್ಲ.

ಕಿಮರ್ಥಂ ಮಾಂ ಪ್ರಾಕೃತವದುಪಪ್ರೇಕ್ಷಸಿ ಸಂಸದಿ ।
ನ ಖಿಲ್ವಿದಮಹಂ ಶೂನ್ಯಂ ಕರೋಮಿ ನ ಶೃಣೋಷಿ ಮೇ ॥೪೫॥

ರಾಜನೇ, ಈ ಸಭೆಯಲ್ಲಿ ನನ್ನನ್ನು ಏಕೆ ಪ್ರಾಕೃತನಂತೆ ನೋಡುತ್ತಿದ್ದೀಯೆ. ನೀನು ನನ್ನ ಮಾತನ್ನು ಕೇಳದಿದ್ದರೆ ನಾನು ಈ ಪಟ್ಟಣವನ್ನು ಸುಟ್ಟುಬಿಟ್ಟೇನು.

ಯದಿ ಮೇ ಯಾಚಮಾನಾಯಾ ವಚನಂ ನ ಕರಿಷ್ಯಸಿ ।
ದುಷ್ಪಂತ ಶತಧಾ ತ್ವದ್ಯ ಮೂರ್ಧಾ ತೇ ವಿಫಲಿಷ್ಯತಿ ॥೪೬॥

ದುಷ್ಪಂತನೇ, ಬೇಡುತ್ತಿರುವ ನನ್ನ ಮಾತನ್ನು ನೀನು ನಡೆಸಿಕೊಡದಿದ್ದರೆ ಈ ದಿನ ನಿನ್ನ ತಲೆಯು ನೂರು ಹೋಳಾಗುತ್ತದೆ.

ಭಾರ್ಯಾಂ ಪತಿಃ ಸಂಪ್ರವಿಶ್ಯ ಯತ್ತಸ್ಯಾಂ ಜಾಯತೇ ತತಃ ।
ಜಾಯಾಯಾ ಇತಿ ಜಾಯಾತ್ವಂ ಯಸ್ತಸ್ಯಾಂ ಜಾಯತೇ ಪುನಃ ॥೪೭॥

ಪತಿಯು ಭಾರ್ಯೆಯನ್ನು ಪ್ರವೇಶಿಸಿ ಅವಳಲ್ಲಿ ತಾನೇ ಜನಿಸುತ್ತಾನೆ. ತಾನೇ ಜನಿಸುವ ಕಾರಣದಿಂದ ಅವಳಿಗೆ ಜಾಯಾ ಎಂದು ಹೆಸರು.

ಯದಪೋಹತ್ಯಘಂ ಪಿತ್ರೋಸ್ತದಪತ್ಯಂ ಪ್ರಜಾಯತೇ ।
ತತ್ ತಾರಯತಿ ಸಂತತ್ಯಾ ಪೂರ್ವಪ್ರೇತಾನ್ ಪಿತಾಮಹಾನ್ ॥೪೮॥

ಹುಟ್ಟಿದ ಮಗುವು ತಂದೆತಾಯಿಗಳನ್ನು ಪಾಪದಿಂದ ಬಿಡಿಸುವ ಕಾರಣದಿಂದ ಮಗುವಿಗೆ ಅಪತ್ಯ ಎಂದು ಹೆಸರು. ಅದು ಸಂತತಿಯನ್ನು ಉಂಟು ಮಾಡಿ ಹಿಂದೆ ಮೃತರಾದ ಪಿತಾಮಹರನ್ನೆಲ್ಲಾ ಉದ್ಧಾರ ಮಾಡುತ್ತದೆ.

ಪುನ್ನಾಮ್ನೋ ನರಕಾದ್ ಯಸ್ಮಾತ್ ಪಿತರಂ ತ್ರಾಯತೇ ಸುತಃ ।
ತಸ್ಮಾತ್ ಪುತ್ರ ಇತಿ ಪ್ರೋಕ್ತಃ ಪೂರ್ವಮೇವ ಸ್ವಯಂಭುವಾ ॥೪೯॥

ಪುತ್ ಎಂಬ ನರಕದಿಂದ ತಂದೆಯನ್ನು ಪಾರು ಮಾಡುವ ಕಾರಣದಿಂದ ಮಗನಿಗೆ ಪುತ್ರ ಎನ್ನುತ್ತಾರೆ ಎಂದು ಬ್ರಹ್ಮದೇವರು ಮೊದಲೇ ಹೇಳಿದ್ದಾರೆ.

ಪುತ್ರೇಣ ಲೋಕಾನ್ ಜಯತಿ ಪೌತ್ರೇಣಾನಂತ್ಯಮಶ್ನುತೇ ।
ಅಥ ಪೌತ್ರಸ್ಯ ಪುತ್ರೇಣ ಮೋದಂತೇ ಪ್ರಪಿತಾಮಹಾಃ ॥೫೦॥

ಪುತ್ರನಿಂದ ಪರಲೋಕವನ್ನು ಗೆಲ್ಲುತ್ತಾನೆ. ಪೌತ್ರನಿಂದ ಆ ಲೋಕಗಳಿಗೆ ಆನಂತ್ಯವುಂಟಾಗುತ್ತದೆ. ಪೌತ್ರನ ಪುತ್ರನಿಂದ ಪ್ರಪಿತಾಮಹರು ಸಂತೋಷಪಡುತ್ತಾರೆ.

ಸಾ ಭಾರ್ಯಾ ಯಾ ಗೃಹೇ ದಕ್ಷಾ ಸಾ ಭಾರ್ಯಾ ಯಾ ಪ್ರಜಾವತೀ ।
ಸಾ ಭಾರ್ಯಾ ಯಾಽತಿಥಿಪ್ರಿಯಾ ಸಾ ಭಾರ್ಯಾ ಯಾ ಪತಿಪ್ರಿಯಾ ॥

ಯಾವ ವನಿತೆಯು ಗೃಹಕಾರ್ಯದಲ್ಲಿ ದಕ್ಷಳೋ ಅವಳೇ ಭಾರ್ಯೆ. ಯಾವಳು ಪ್ರಜೆಗಳನ್ನು ಕೊಡುತ್ತಾಳೋ ಅವಳೇ ಭಾರ್ಯೆ. ಯಾವಳು ಅತಿಥಿಪ್ರಿಯಳಾಗಿರುತ್ತಾಳೆಯೋ ಅವಳೇ ಭಾರ್ಯೆ. ಯಾವಳು ಪತಿಪ್ರಿಯಳಾಗಿರುತ್ತಾಳೆಯೋ ಅವಳೇ ಭಾರ್ಯೆ.

ಅರ್ಧಂ ಭಾರ್ಯಾ ಮನುಷ್ಯಸ್ಯ ಭಾರ್ಯಾ ಶ್ರೇಷ್ಠತಮಃ ಸಖಾ ।
ಭಾರ್ಯಾ ಮೂಲಂ ತ್ರಿವರ್ಗಸ್ಯ ಯಃ ಸಭಾರ್ಯಃ ಸ ಬಂಧುಮಾನ್॥

ಮನುಷ್ಯನಿಗೆ ಭಾರ್ಯೆಯು ಅರ್ಧಭಾಗವೆನಿಸುತ್ತಾಳೆ. ಭಾರ್ಯೆಯಷ್ಟು ಶ್ರೇಷ್ಠಳಾದ ಸ್ನೇಹಿತರಿಲ್ಲ. ಧರ್ಮಾರ್ಥಕಾಮಗಳನ್ನು ಪಡೆಯಲು ಭಾರ್ಯೆಯೇ ಮೂಲ. ಯಾವನು ಭಾರ್ಯೆ ಉಳ್ಳವನೋ ಅವನೇ ಬಂಧುಗಳನ್ನು ಉಳ್ಳವನು.

ಭಾರ್ಯಾವಂತಃ ಕ್ರಿಯಾವಂತಃ ಸಭಾರ್ಯಾ ಗೃಹಮೇಧಿನಃ ।
ಭಾರ್ಯಾವಂತಃ ಪ್ರಮೋದಂತೇ ಭಾರ್ಯಾವಂತಃ ಶ್ರಿಯಾ ವೃತಾಃ ॥

ಸಭಾರ್ಯಾಃ ಪ್ರವಿವಿಕ್ತೇಷು ಭವಂತ್ಯೇತೇ ಪ್ರಿಯಂವದಾಃ ।
ಪಿತರೋ ಧರ್ಮಕಾರ್ಯೇಷು ಭವಂತ್ಯಾರ್ತಸ್ಯ ಮಾತರಃ ॥೫೪॥

ಭಾರ್ಯೆಯನ್ನು ಹೊಂದಿದವರು ಕ್ರಿಯಾಶೀಲರಾಗಿರುತ್ತಾರೆ. ಭಾರ್ಯೆಯನ್ನು ಹೊಂದಿದವರು ಮನೆಗಳಲ್ಲಿ ವಾಸಮಾಡುತ್ತಾರೆ (ಗೃಹಸೌಖ್ಯವನ್ನು ಹೊಂದುತ್ತಾರೆ). ಭಾರ್ಯೆಯನ್ನುಳ್ಳವರು ಸಂತೋಷವನ್ನು ಪಡುತ್ತಾರೆ. ಭಾರ್ಯೆಯನ್ನುಳ್ಳವರು ಸಂಪತ್ತನ್ನು ಪಡೆಯುತ್ತಾರೆ. ಭಾರ್ಯೆಯನ್ನುಳ್ಳವರು ಏಕಾಂತದಲ್ಲಿ ಪ್ರಿಯವಾದ ಮಾತುಗಳನ್ನು ಆಡುತ್ತಾರೆ. ಅಂತಹವರು ಧರ್ಮಕಾರ್ಯಗಳಲ್ಲಿ ತಂದೆಯಂತೆ ಇರುತ್ತಾರೆ. ದುಃಖದ ಸಮಯದಲ್ಲಿ ತಾಯಿಯಂತೆ ಇರುತ್ತಾರೆ.

ಕಾಂತಾರೇಷ್ವಪಿ ವಿಶ್ರಾಮೋ ಜನಸ್ಯಾಧ್ವನಿಕಸ್ಯ ವೈ ।
ಯಃ ಸದಾರಃ ಸ ವಿಶ್ವಾಸ್ಯಸ್ತಸ್ಮಾದ್ ದಾರಾಃ ಪರಾ ಗತಿಃ ॥೫೫॥

ಕಾಡಿನಲ್ಲಿ ಸಂಚರಿಸುವ ವ್ಯಕ್ತಿಗೆ ಮರದ ನೆರಳು ವಿಶ್ರಾಮವಾಗುತ್ತದೆ. ಹಾಗೆಯೇ, ಭಾರ್ಯೆಯನ್ನು ಹೊಂದಿದವರನ್ನು ಜನರು ನಂಬುತ್ತಾರೆ. ಆದ್ದರಿಂದ ಭಾರ್ಯೆಯೇ ಶ್ರೇಷ್ಠವಾದ ಗತಿ.

ಸಂಸರಂತಮಭಿಪ್ರೇತಂ ವಿಷಮೇಷ್ವಭಿಪಾತಿತಮ್ ।
ಭಾರ್ಯೈವಾನ್ವೇತಿ ಭರ್ತಾರಂ ಸತತಂ ಯಾ ಪತಿವ್ರತಾ ॥೫೬॥

ಉದ್ದಿಷ್ಟವಾದ ವಿಷಯವನ್ನು ಪಡೆಯಲು ಪ್ರಯತ್ನಪಟ್ಟು ಕಷ್ಟದಲ್ಲಿ ಸಿಲುಕಿದ ಪತಿಯನ್ನು ಪತಿವ್ರತೆಯಾದ ಭಾರ್ಯೆಯೇ ಸತತವೂ ಹಿಂಬಾಲಿಸುತ್ತಾಳೆ.

ಪ್ರಥಮಂ ಸಂಸ್ಥಿತಾ ಭಾರ್ಯಾ ಪತಿಂ ಪ್ರೇತ್ಯ ಪ್ರತೀಕ್ಷತೇ ।
ಪೂರ್ವಪ್ರೇತಂ ತು ಭರ್ತಾರಂ ಪಶ್ಚಾತ್ ಸಾऽಪ್ಯನುಗಚ್ಛತಿ ॥೫೭॥

ಭಾರ್ಯೆಯು ಪತಿಗಿಂತ ಮೊದಲು ಮೃತಳಾದರೆ ಪರಲೋಕದಲ್ಲಿ ಪತಿಯ ನಿರೀಕ್ಷೆಯನ್ನು ಮಾಡುತ್ತಾಳೆ. ಪತಿಯೇ ಮೊದಲು ಮೃತನಾದರೆ ಅವಳು ಅವನ ಹಿಂದೆ ಹೋಗುತ್ತಾಳೆ.

ಏತಸ್ಮಾತ್ ಕಾರಣಾದ್ ರಾಜನ್ ಪಾಣಿಗ್ರಹಣಮಿಷ್ಯತೇ ।
ಯದಾಪ್ನೋತಿ ಪತಿರ್ಭಾರ್ಯಾಮಸ್ಮಿನ್ ಲೋಕೇ ಪರತ್ರ ಚ ॥೫೮॥

ಎಲೈ ರಾಜನೇ, ಈ ಕಾರಣಕ್ಕಾಗಿ ಪಾಣಿಗ್ರಹಣವನ್ನು ಬಯಸುತ್ತಾರೆ. ಏಕೆಂದರೆ ಪುರುಷನು ಆ ಕ್ರಿಯೆಯಿಂದ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸಹಾಯಕಳಾದ ಭಾರ್ಯೆಯನ್ನು ಪಡೆಯುತ್ತಾನೆ.

ಪೋಷಣಾರ್ಥಂ ಶರೀರಸ್ಯ ಪಾಥೇಯಂ ಸ್ವರ್ಗತಸ್ಯ ವೈ ।
ಆತ್ಮಾऽऽತ್ಮನಾ ಚ ಜನಿತಃ ಪುತ್ರ ಇತ್ಯುಚ್ಯತೇ ಬುಧೈಃ ॥೫೯॥

ಸ್ವರ್ಗಕ್ಕೆ ಹೋದವನು ತನ್ನ ಶರೀರದ ಪೋಷಣೆಗಾಗಿ ತೆಗೆದುಕೊಂಡು ಹೋಗುವ ಪಾಥೇಯವೆಂದರೆ ತನ್ನಿಂದ ತಾನೇ ಜನಿಸಿದ ಪುತ್ರನೆಂಬುವನು ಎಂದು ಜ್ಞಾನಿಗಳು ಹೇಳುತ್ತಾರೆ.

ತಸ್ಮಾದ್ ಭಾರ್ಯಾಂ ಪತಿಃ ಪಶ್ಯೇನ್ಮಾತೃವತ್ ಪುತ್ರಮಾತರಮ್ ।
ಅಂತರಾತ್ಮೈವ ಸರ್ವಸ್ಯ ಪುತ್ರನಾಮ್ನೋಚ್ಯತೇ ಬುಧೈಃ ॥೬೦॥

ಆದ್ದರಿಂದ ಪತಿಯು ತನ್ನ ಮಗನ ತಾಯಿಯನ್ನು ತನ್ನ ತಾಯಿಯಂತೆಯೇ ನೋಡಬೇಕು. ಪುತ್ರನು ತಂದೆಯ ಅಂತರಾತ್ಮನೆಂದು ಜ್ಞಾನಿಗಳು ಹೇಳುತ್ತಾರೆ.

ಗತೀ ರೂಪಂ ಚ ಚೇಷ್ಟಾ ಚ ಆವರ್ತಾ ರೋಮರಾಜಯಃ ।
ಪಿತೃಣಾಂ ಯಾನಿ ದೃಶ್ಯಂತೇ ಪುತ್ರಾಣಾಂ ತಾನಿ ಸಂತಿ ವೈ ।
ತೇಷಾಂ ಶೀಲಗುಣಾಚಾರಾಸ್ತತ್ಸಂಪರ್ಕಾಚ್ಚುಭಾಶುಭಾಃ ॥೬೧॥

ನಡಿಗೆ, ರೂಪ, ದೇಹದ ಕ್ರಿಯೆಗಳು, ಸುಳಿಗಳು ಮತ್ತು ರೋಮಸಮೂಹಗಳು ಪಿತೃಗಳಲ್ಲಿ ಏನು ಕಾಣುತ್ತವೆಯೋ ಅವೇ ಪುತ್ರರಿಗೂ ಇರುತ್ತವೆ. ತಂದೆಗಳ ಗುಣವೂ, ಶೀಲವೂ, ಆಚಾರವೂ ಮತ್ತು ಅವರ ಸಂಪರ್ಕದಿಂದ ಶುಭಾಶುಭಗಳು ತಂದೆಗೆ ಉಂಟಾದಂತೆ ಮಕ್ಕಳಿಗೆ ಆಗುತ್ತವೆ.

ಭಾರ್ಯಾಯಾಂ ಜನಿತಂ ಪುತ್ರಮಾದರ್ಶೇ ಸ್ವಮಿವಾನನಮ್ ।
ಜನಿತಾऽऽಹ್ಲಾದತೇ ಪ್ರೇಕ್ಷ್ಯ ಸ್ವರ್ಗಂ ಪ್ರಾಪ್ಯೇವ ಪುಣ್ಯಕೃತ್ ॥೬೨॥

ಕನ್ನಡಿಯಲ್ಲಿ ನೋಡಿದ ಪ್ರತಿಬಿಂಬದಂತೆ ಭಾರ್ಯೆಯಲ್ಲಿ ಪಡೆದ ಮಗನನ್ನು ನೋಡಿ ಪುಣ್ಯವನ್ನು ಮಾಡಿದ ಜನರು ಸ್ವರ್ಗವನ್ನು ಪಡೆದು ಆನಂದಿಸುವಂತೆ ಎಲ್ಲರೂ ಆನಂದಿಸುತ್ತಾರೆ.

ಪತಿವ್ರತಾರೂಪಧರಾಃ ಪರಬೀಜಸ್ಯ ಸಂಗ್ರಹಾತ್ ।
ಕುಲಂ ವಿನಾಶ್ಯ ಭರ್ತೃಣಾಂ ನರಕಂ ಯಾಂತಿ ದಾರುಣಮ್ ॥೬೩॥

ಕೆಲವು ಸ್ತ್ರೀಯರು ಪತಿವ್ರತೆಯರ ಸೋಗು ಧರಿಸಿ ಪರಪುರುಷರ ಸಮಾಗಮವನ್ನು ಮಾಡಿ ಪತಿಯ ಕುಲವನ್ನು ನಾಶಮಾಡಿ ದಾರುಣವಾದ ನರಕಕ್ಕೆ ಹೋಗುತ್ತಾರೆ.

ಪರೇಣ ಜನಿತಾಃ ಪುತ್ರಾಃ ಸ್ವಭಾರ್ಯಾಯಾಂ ಯಥೇಷ್ಟತಃ ।
ಮಮ ಪುತ್ರಾ ಇತಿ ಮತಾಸ್ತೇ ಪುತ್ರಾ ಅಪಿ ಶತ್ರವಃ ।
ದ್ವಿಷಂತಿ ಪ್ರತಿಕುರ್ವಂತಿ ನ ತೇ ವಚನಕಾರಿಣಃ ॥೬೪॥

ನ ದ್ವೇಷ್ಟಿ ಪಿತರಂ ಪುತ್ರೋ ಯಸ್ಮಾದಾತ್ಮಾ ಸುತೋ ಭವೇತ್ ।
ದಹ್ಯಮಾನಾ ಮನೋದುಃಖೈರ್ವ್ಯಾಧಿಭಿಶ್ಚಾತುರಾ ಜನಾಃ ।
ಸ್ವೇಷು ದಾರೇಷು ತುಷ್ಯಂತಿ ಘರ್ಮಾರ್ತಾಃ ಸಲಿಲೇಷ್ವಿವ ॥೬೫॥

ಬೇರೆಯವರಿಂದ ತನ್ನ ಹೆಂಡತಿಯ ಇಚ್ಛೆಯಂತೆ ತನ್ನ ಹೆಂಡತಿಯಲ್ಲಿ ಜನಿಸಿದ ಪುತ್ರರು ತನ್ನ ಪುತ್ರರೆಂದು ತಿಳಿದರೂ ಅವರು ಶತ್ರುಗಳೇ ಆಗುತ್ತಾರೆ. ಅವರು ತಂದೆಯನ್ನು ದ್ವೇಷಿಸುತ್ತಾರೆ. ತಂದೆಗೆ ಪ್ರತೀಕಾರವನ್ನು ಮಾಡುತ್ತಾರೆ. ತಂದೆಯ ಮಾತನ್ನು ನಡೆಸಿಕೊಡುವುದಿಲ್ಲ. ಆದರೆ ನಿಜವಾದ ಪುತ್ರನಾದವನು ತಂದೆಗೇ ಪುತ್ರನಾಗಿ ಜನಿಸಿರುವ ಕಾರಣದಿಂದ ತಂದೆಯನ್ನು ದ್ವೇಷಿಸುವುದಿಲ್ಲ. ರೋಗಗಳಿಂದಲೂ ಮತ್ತು ಮಾನಸ ದುಃಖಗಳಿಂದಲೂ ಬಳಲಿದ ಜನರು ಬೇಸಿಗೆಯ ತಾಪಕ್ಕೆ ಒಳಗಾದವರು ನೀರನ್ನು ಪಡೆದವರಂತೆ ತಮ್ಮ ಪತ್ನಿಯರನ್ನು ಹೊಂದಿ ಸಂತೋಷಪಡುತ್ತಾರೆ.

ವಿಪ್ರವಾಸಕೃಶಾ ದೀನಾ ನರಾ ಮಲಿನವಾಸಸಃ ।
ತೇऽಪಿ ಸ್ವದಾರಾಂಸ್ತುಷ್ಯಂತಿ ದರಿದ್ರಾ ಧನಲಾಭವತ್ ॥೬೬॥

ಸುಸಂರಬ್ಧೋऽಪಿ ನಾರೀಣಾಂ ನ ಬ್ರೂಯಾದಪ್ರಿಯಂ ಬುಧಃ ।
ರತಿಂ ಪ್ರೀತಿಂ ಚ ಧರ್ಮ್ಯಂ ಚ ತಾಸ್ವಾಯತ್ತಮವೇಕ್ಷ್ಯ ಚ ॥೬೭॥

ದೂರಪ್ರವಾಸಕ್ಕೆ ಹೋಗಿ, ದೈನ್ಯವನ್ನೂ ಕೃಶತೆಯನ್ನೂ ಅನುಭವಿಸಿ ಮಲಿನ ವಸ್ತ್ರಗಳನ್ನು ಧರಿಸಿದ ಜನರು ತಮ್ಮ ಪತ್ನಿಯರೊಂದಿಗೆ ಸೇರಿ ಧನಲಾಭವಾದ ದರಿದ್ರರಂತೆ ಸಂತೋಷಪಡುತ್ತಾರೆ. ವಿವೇಕಿಯಾದವನು ತನ್ನ ರತಿ, ಪ್ರೀತಿ ಮತ್ತು ಧರ್ಮಕಾರ್ಯಗಳು ಎಲ್ಲವೂ ಪತ್ನಿಯನ್ನು ಅವಲಂಬಿಸಿವೆ ಎಂದು ತಿಳಿದು ಕೋಪ ಬಂದಾಗಲೂ ನಾರಿಯರನ್ನು ಕುರಿತು ಅಪ್ರಿಯವಾದ ಮಾತನ್ನು ಆಡಬಾರದು.

ಆತ್ಮನೋऽರ್ಧಮಿತಿ ಶ್ರುತಂ ಸಾ ರಕ್ಷತಿ ಧನಂ ಪ್ರಜಾಃ ।
ಶರೀರಂ ಲೋಕಯಾತ್ರಾಂ ವೈ ಧರ್ಮಂ ಸ್ವರ್ಗಮೃಷೀನ್ ಪಿತೄನ್ ।
ಆತ್ಮನೋ ಜನ್ಮನಃ ಕ್ಷೇತ್ರಂ ಪುಣ್ಯಾ ರಾಮಾಃ ಸನಾತನಾಃ ॥೬೮॥

ಪತ್ನಿಯನ್ನು ಪತಿಯ ಅರ್ಧವೆಂದು ವೇದವು ಹೇಳುತ್ತದೆ. ಅವಳು ಪತಿಯ ಧನವನ್ನೂ ಮತ್ತು ಪ್ರಜೆಗಳನ್ನೂ, ಪತಿಯ ಶರೀರವನ್ನೂ, ಲೋಕಯಾತ್ರೆಯನ್ನೂ, ಪಿತೃಗಳನ್ನೂ, ಋಷಿಗಳನ್ನೂ ಮತ್ತು ಸ್ವರ್ಗವನ್ನೂ ರಕ್ಷಿಸುತ್ತಾಳೆ. ಪವಿತ್ರರಾದ ಸ್ತ್ರೀಯರು ತನ್ನ ಜನ್ಮದ ಕ್ಷೇತ್ರವೆಂದು ತಿಳಿಯಬೇಕು.

ಋಷೀಣಾಮಪಿ ಕಾ ಶಕ್ತಿಃ ಸ್ರಷ್ಟುಂ ರಾಮಾಮೃತೇ ಪ್ರಜಾಃ ।
ದೇವಾನಾಮಪಿ ಕಾ ಶಕ್ತಿಃ ಕರ್ತುಂ ಸಂಭವಮಾತ್ಮನಃ ॥೬೯॥

ಋಷಿಗಳಿಗಾದರೂ ವನಿತೆಯಿಲ್ಲದೆ ಪ್ರಜೆಗಳನ್ನು ಸೃಷ್ಟಿ ಮಾಡುವುದಕ್ಕೆ ಎಲ್ಲಿಯ ಶಕ್ತಿ? ದೇವತೆಗಳಿಗೂ ಸಹ ವನಿತೆಯರಿಲ್ಲದೆ ತಮ್ಮ ಸಂತಾನವನ್ನು ಪಡೆಯುವುದಕ್ಕೆ ಶಕ್ತಿಯಿಲ್ಲ.

ಪಂಡಿತಸ್ಯಾಪಿ ಲೋಕೇಷು ಸ್ತ್ರೀಷು ದೃಷ್ಟಿಃ ಪ್ರತಿಷ್ಠಿತಾ ।
ಋಷಿಭ್ಯೋ ಹ್ಯೃಷಯಃ ಕೇಚಿಚ್ಚಂಡಾಲೀಷ್ವಪಿ ಜಜ್ಞಿರೇ ॥೭೦॥

ಪಂಡಿತನಾದರೂ ಕೂಡ ಪ್ರಪಂಚದಲ್ಲಿ ಅವನ ದೃಷ್ಟಿಯು ಸ್ತ್ರೀಯರಲ್ಲಿ ನೆಟ್ಟಿರುತ್ತದೆ. ಎಷ್ಟೋ ಋಷಿಗಳು ಚಂಡಾಲಸ್ತ್ರೀಯರಲ್ಲಿಯೂ ಋಷಿಗಳಿಂದ ಜನಿಸಿದ್ದಾರೆ.

ಪರಿರಭ್ಯ ಯದಾ ಸೂನುರ್ಧರಣೀರೇಣುಕುಂಠಿತಃ ।
ಪಿತುರಾಲಿಂಗತೇऽಂಗಾನಿ ಕಿಂ ತತೋऽಭ್ಯಧಿಕಂ ಸುಖಂ ॥೭೧॥

ಭೂಮಿಯ ಮಣ್ಣನ್ನು ದೇಹದಲ್ಲಿ ಧರಿಸಿದ ಮಗನು ಯಾವಾಗ ತಂದೆಯ ದೇಹವನ್ನು ಆಲಿಂಗಿಸುತ್ತಾನೆಯೋ ಅದಕ್ಕಿಂತ ಹೆಚ್ಚಿನ ಸುಖವು ಯಾವುದಿದೆ?

ಸ ತ್ವಂ ಸೂನುಮಭಿಪ್ರಾಪ್ತಂ ಸಾಭಿಲಾಷಂ ಮನಸ್ವಿನಮ್ ।
ಪ್ರೇಕ್ಷಮಾಣಂ ಕಟಾಕ್ಷೇಣ ಕಿಮರ್ಥಮವಮನ್ಯಸೇ ॥೭೨॥

ನೀನು ಆಸೆಯಿಂದ ಬಂದಿರುವ ಕಟಾಕ್ಷದಿಂದ ನಿನ್ನನ್ನು ನೋಡುತ್ತಿರುವ ಧೈರ್ಯಶಾಲಿಯಾದ ನಿನ್ನ ಮಗನನ್ನು ಏಕೆ ಅವಮಾನ ಮಾಡುತ್ತಿರುವೆ.

ಅಂಡಾನಿ ಬಿಭ್ರತಿ ಸ್ವಾನಿ ನ ತ್ಯಜಂತಿ ಪಿಪೀಲಿಕಾಃ ।
ಕಿಂ ಪುನಸ್ತ್ವಂ ನ ಮನ್ಯೇಥಾಃ ಸರ್ವಜ್ಞಂ ಪುತ್ರಮೀದೃಶಮ್ ॥೭೩॥

ಇರುವೆಗಳೂ ಕೂಡ ತಮ್ಮ ಮೊಟ್ಟೆಗಳನ್ನು ಎತ್ತಿಕೊಂಡು ಹೋಗುತ್ತವೆ ಎಂದೂ ಬಿಡುವುದಿಲ್ಲ. ಹೀಗಿರುವಾಗ ಇಂತಹ ಸರ್ವಜ್ಞನಾದ ಮಗನನ್ನು ನೀನು ಏಕೆ ಮಾನ್ಯ ಮಾಡುತ್ತಿಲ್ಲ.

ನ ಭರೇಥಾಃ ಕಥಂ ನು ತ್ವಂ ಮಜ್ಜಾತಂ ಸ್ವಂ ಸ್ವಯಮಾತ್ಮಜಮ್ ।
ಮಮಾಂಡಾನೀತಿ ವರ್ಧಂತೇ ಕೋಕಿಲಾಂಡಾನಿ ವಾಯಸಾಃ ॥೭೪॥

ರಾಜನೇ, ನನ್ನಲ್ಲಿ ಹುಟ್ಟಿದ ನಿನ್ನ ಮಗನಾದ ಇವನನ್ನು ನೀನು ಹೇಗೆ ಪೋಷಿಸದಿರಲು ಸಾಧ್ಯ. ತಮ್ಮ ಮೊಟ್ಟೆಗಳೆಂದು ತಿಳಿದು ಕಾಗೆಗಳು ಕೋಗಿಲೆಯ ಮೊಟ್ಟೆಯನ್ನೂ ಪೋಷಿಸುತ್ತವೆ.

ಕಿಂ ಪುನಸ್ತ್ವಂ ನ ಮನ್ಯೇಥಾಃ ಸರ್ವಜ್ಞಂ ಪುತ್ರಮೀದೃಶಮ್ ।
ಮಲಯಾಚ್ಚಂದನಂ ಜಾತಮತಿಶೀತಂ ವದಂತ್ಯುತ ।
ಶಿಶುಮಾಲಿಂಗಮಾನಸ್ಯ ಚಂದನಾದಧಿಕಂ ಸುಖಮ್ ॥೭೫॥

ಹೀಗಿರುವಾಗ ಸರ್ವಜ್ಞನಾದ ನಿನ್ನ ಇಂತಹ ಮಗನನ್ನು ನೀನು ಏಕೆ ಮಾನ್ಯ ಮಾಡುತ್ತಿಲ್ಲ. ಮಲಯಪರ್ವತದಲ್ಲಿ ಉಂಟಾದ ಚಂದನವು ಅತಿ ಶೀತವೆಂದು ಹೇಳುತ್ತಾರೆ. ಮಗನನ್ನು ಆಲಿಂಗಿಸಿದ ತಂದೆಗೆ ಚಂದನಕ್ಕಿಂತ ಶೀತವಾದ ಸುಖದ ಅನುಭವವಾಗುತ್ತದೆ.

ನ ವಾಸಸಾಂ ನ ರಾಮಾಣಾಂ ನಾಪಾಂ ಸ್ಪರ್ಶಸ್ತಥಾ ಸುಖಮ್ ।
ಶಿಶುಮಾಲಿಂಗಮಾನಸ್ಯ ಸ್ಪರ್ಶಃ ಸೂನೋರ್ಯಥಾ ಸುಖಮ್ ।
ಪುತ್ರಸ್ಪರ್ಶಾತ್ ಪ್ರಿಯತರಃ ಸ್ಪರ್ಶೋ ಲೋಕೇ ನ ವಿದ್ಯತೇ ॥೭೬॥

ಮಗನನ್ನು ಆಲಿಂಗಿಸಿದ ತಂದೆಗೆ ಮಗನ ಸ್ಪರ್ಶದಿಂದ ಎಂತಹ ಸುಖ ಉಂಟಾಗುತ್ತದೆಯೋ ಅಂತಹ ಸುಖವು ವಸ್ತ್ರಗಳ ಸ್ಪರ್ಶದಿಂದ, ವನಿತೆಯರ ಸ್ಪರ್ಶದಿಂದ ಅಥವಾ ಜಲದ ಸ್ಪರ್ಶದಿಂದ ಉಂಟಾಗುವುದಿಲ್ಲ. ಲೋಕದಲ್ಲಿ ಯಾವ ಸ್ಪರ್ಶವೂ ಮಗನ ಸ್ಪರ್ಶಕ್ಕಿಂತ ಪ್ರಿಯವಾದುದಲ್ಲ.

ಸ್ಪೃಶತು ತ್ವಾಂ ಸಮಾಲಿಂಗ್ಯ ಪುತ್ರೋಽಯಂ ಪ್ರಿಯದರ್ಶನಃ ॥೭೭॥

ಮನೋಹರನಾದ ನಿನ್ನ ಪುತ್ರನು ನಿನ್ನನ್ನು ಆಲಿಂಗಿಸಿ ನಿನ್ನ ಸ್ಪರ್ಶವನ್ನು ಮಾಡಲಿ.

ಬ್ರಾಹ್ಮಣೋ ದ್ವಿಪದಾಂ ಶ್ರೇಷ್ಠೋ ಗೌರ್ವರಿಷ್ಠಾ ಚತುಷ್ಪದಾಮ್
ಗುರುರ್ಗರೀಯಸಾಂ ಶ್ರೇಷ್ಠಃ ಪುತ್ರಃ ಸ್ಪರ್ಶವತಾಂ ವರಃ ॥೭೮॥

ಎರಡು ಕಾಲಿನ ಪ್ರಾಣಿಗಳಲ್ಲಿ ಬ್ರಾಹ್ಮಣನು ಶ್ರೇಷ್ಠನಾದವನು. ನಾಲ್ಕು ಕಾಲಿನ ಪ್ರಾಣಿಗಳಲ್ಲಿ ಗೋವು ಶ್ರೇಷ್ಠವಾದುದು. ದೊಡ್ಡವರು ಎನಿಸಿದವರಲ್ಲಿ ಗುರುವು ಶ್ರೇಷ್ಠನಾದವನು. ಸ್ಪರ್ಶವನ್ನು ಹೊಂದಿದವರಲ್ಲಿ ಪುತ್ರನು ಶ್ರೇಷ್ಠನಾದವನು.

ತ್ರಿಷು ವರ್ಷೇಷು ಪೂರ್ಣೇಷು ಪ್ರಜಾತೋಽಯಮರಿಂದಮಃ ।
ಅಹಂ ಮಹರ್ಷೇರ್ನಿಯೋಗಾತ್ ತು ತವಾಹ್ವಾನಂ ಪ್ರತೀಕ್ಷತೀ ॥೭೯॥

ನಾನು ಮಹರ್ಷಿಗಳ ಆದೇಶದಂತೆ ನಿನ್ನ ಆಹ್ವಾನವನ್ನು ನಿರೀಕ್ಷಿಸುತ್ತಾ ಗರ್ಭಕ್ಕೆ ಮೂರು ವರ್ಷಗಳು ತುಂಬಿದ ಮೇಲೆ ಈ ಅರಿಂದಮನನ್ನು ಪ್ರಸವಿಸಿದ್ದೇನೆ.

ಕುಮಾರೋ ರಾಜಶಾರ್ದೂಲ ತವ ಶೋಕಪ್ರಣಾಶನಃ ।
ಆಹರ್ತಾ ವಾಜಿಮೇಧಸ್ಯ ಶತಸಂಖ್ಯಸ್ಯ ಪೌರವಃ ॥೮೦॥

ರಾಜಸೂಯಾದಿಯಜ್ಞಾನಾಮನ್ಯೇಷಾಂ ದಕ್ಷಿಣಾವತಾಮ್ ।
ಇತಿ ಗೌರಂತರಿಕ್ಷೇ ಮಾಂ ಸೂತಕೇಽಭ್ಯವದತ್ ಪುರಾ ॥೮೧॥

ರಾಜ ಶಾರ್ದೂಲನೇ, ಈ ಕುಮಾರನು ನಿನ್ನ ಶೋಕವನ್ನು ನಾಶಮಾಡುತ್ತಾನೆ. ಪೌರವನಾದ ಇವನು ನೂರು ಅಶ್ವಮೇಧ ಯಾಗಗಳನ್ನು ಬಹಳ ದಕ್ಷಿಣೆಯುಳ್ಳ ರಾಜಸೂಯಾದಿ ಬೇರೆ ಯಾಗಗಳನ್ನೂ ಮಾಡುತ್ತಾನೆ. ಇವನು ಹುಟ್ಟಿದಾಗ ಹಿಂದೆ ಹೀಗೆ ಅಂತರಿಕ್ಷದಲ್ಲಿ ಅಶರೀರವಾಣಿಯಾಯಿತು.

ತತಃ ಸ್ವಮಂಕಮಾರೋಪ್ಯ ಸ್ನೇಹಾದ್ ಗ್ರಾಮಾಂತರಂ ಗತಾಃ ।
ಮೂರ್ಧ್ನಿ ಪುತ್ರಾನುಪಾಘ್ರಾಯ ಪ್ರತಿನಂದಂತಿ ಮಾನವಾಃ ॥೮೨॥

ಆದ್ದರಿಂದ ಸ್ನೇಹದಿಂದ ಮಗನನ್ನು ತೊಡೆಯ ಮೇಲೆ ಕೂಡಿಸಿಕೊಂಡು ಗ್ರಾಮಾಂತರಕ್ಕೆ ಹೋದ ಮನುಷ್ಯರು ಹಿಂದಿರುಗಿ ಬಂದು ಮಗನನ್ನು ಎತ್ತಿಕೊಂಡು ಶಿರಸ್ಸಿನಲ್ಲಿ ಆಘ್ರಾಣಿಸಿ ಆನಂದ ಪಡುತ್ತಾರೆ.

ವೇದೇಷ್ವಪಿ ಪಠಂತೀಮಂ ಮಂತ್ರವಾದಂ ದ್ವಿಜಾತಯಃ ।
ಜಾತಕರ್ಮಣಿ ಪುತ್ರಾಣಾಂ ತವಾಪಿ ವಿದಿತಂ ಧ್ರುವಮ್ ।
ಅಂಗಾದಂಗಾತ್ ಸಂಭವಸಿ ಹೃದಯಾದಧಿಜಾಯಸೇ ॥೮೩॥

ಆತ್ಮಾ ವೈ ಪುತ್ರನಾಮಾಸಿ ಸ ಜೀವ ಶರದಃ ಶತಮ್ ।
ಉಪಜಿಘ್ರಂತಿ ಪಿತರೋ ಮಂತ್ರೇಣಾನೇನ ಮೂರ್ಧನಿ ॥೮೪॥

ಪುತ್ರನ ಜಾತಕರ್ಮದ ಸಂದರ್ಭದಲ್ಲಿ ಬ್ರಾಹ್ಮಣರು ವೇದಗಳಲ್ಲಿ ಈ ಮಂತ್ರಗಳನ್ನು ಪಠಿಸುತ್ತಾರೆ. ಇದು ನಿನಗೂ ತಿಳಿದಿರಬೇಕು. ನನ್ನ ಪ್ರತಿಯೊಂದು ಅಂಗದಿಂದಲೂ ನೀನು ಹುಟ್ಟಿದ್ದೀಯೆ. ನನ್ನ ಹೃದಯದಿಂದ ಜನಿಸಿದ್ದೀಯೆ. ನಾನೇ ನೀನಾಗಿ ಪುತ್ರನಾಮಕನಾಗಿದ್ದೀಯೆ. ನೀನು ನೂರು ವರ್ಷಕಾಲ ಬಾಳು. ಈ ಮಂತ್ರವನ್ನು ಹೇಳಿ ತಂದೆಯು ಶಿಶುವಿನ ಶಿರಸ್ಸನ್ನು ಆಘ್ರಾಣಿಸುತ್ತಾನೆ.

ಪೋಷಣಂ ತ್ವದಧೀನಂ ಮೇ ಸಂತಾನಮಪಿ ಚಾಕ್ಷಯಮ್ ।
ತಸ್ಮಾತ್ ತ್ವಂ ಜೀವ ಮೇ ವತ್ಸ ಸುಸುಖೀ ಶರದಾಂ ಶತಮ್ ॥೮೫॥

ಮಗುವೇ, ನನ್ನ ಪೋಷಣೆಯು ನಿನ್ನ ಅಧೀನವಾಗಿದೆ. ನನ್ನ ಸಂತಾನವು ಅಕ್ಷಯವಾಗುವುದು ನಿನ್ನಿಂದ. ಆದ್ದರಿಂದ ನೂರು ವರ್ಷಗಳ ಕಾಲ ಸುಖವಾಗಿ ಬಾಳು.

ಏಕೋ ಭೂತೋ ದ್ವಿಧಾ ಭೂತ ಇತಿ ವಾದಃ ಪ್ರದೃಶ್ಯತೇ ।
ತ್ವದಂಗೇಭ್ಯಃ ಪ್ರಸೂತೋಽಯಂ ಪುರುಷಾತ್ ಪುರುಷೋಽಪರಃ ।
ಸರಸೀವಾಮಲೇಽತ್ಮಾನಂ ದ್ವಿತೀಯಂ ಪಶ್ಯ ತೇ ಸುತಮ್ ॥೮೬॥

ಒಬ್ಬನಾಗಿದ್ದವನು ಇಬ್ಬರಾದರು ಎಂಬ ಮಾತು ಲೋಕದಲ್ಲಿ ಕೇಳಿಬರುತ್ತದೆ. ನಿನ್ನ ಅಂಗಗಳಿಂದಲೇ ಉದ್ಭವಿಸಿದ ಇವನು ಒಬ್ಬ ಪುರುಷನಿಂದ ಅವನ ಪ್ರತಿಬಿಂಬವು ಉದ್ಭವಿಸಿದಂತೆ. ಸ್ವಚ್ಛವಾದ ನೀರಿರುವ ಸರೋವರದಲ್ಲಿ ಕಾಣುವ ಪ್ರತಿಬಿಂಬದಂತೆ, ನಿನ್ನ ಪ್ರತಿಬಿಂಬದಂತಿರುವ ಈ ಮಗನನ್ನು ನೋಡು.

ಯಥೈವಾಹವನೀಯೋಽಗ್ನಿರ್ಗಾರ್ಹಪತ್ಯಾತ್ ಪ್ರಣೀಯತೇ ।
ಏವಂ ತ್ವತ್ತಃ ಪ್ರಸೂತೋಽಯಂ ತ್ವಮೇಕಃ ಸನ್ ದ್ವಿಧಾಕೃತಃ ॥೮೭॥

ಹೇಗೆ ಯಾಗದಲ್ಲಿ ಆಹವನೀಯಾಗ್ನಿಯು ಗಾರ್ಹಪತ್ಯದ ಕಡೆಗೆ ಒಯ್ಯಲ್ಪಡುತ್ತದೆಯೋ ಹಾಗೆಯೇ ಇವನು ನಿನ್ನಿಂದ ನನ್ನ ಬಳಿಗೆ ಬಂದು ಹೊರಗೆ ಬಂದವನು. ನೀನು ಒಬ್ಬನೇ ಇದ್ದವನು ಎರಡು ರೂಪವುಳ್ಳವನಾಗಿದ್ದೀಯೆ.

ಮೃಗಾಪಕೃಷ್ಟೇನ ಹಿ ವೈ ಮೃಗಯಾಂ ಪರಿಧಾವತಾ ।
ಅಹಮಾಸಾದಿತಾ ರಾಜನ್ ಕುಮಾರೀ ಪಿತುರಾಶ್ರಮೇ ॥೮೮॥

ರಾಜನೇ, ಮೃಗಗಳನ್ನು ಬೇಟೆಯಾಡುತ್ತಾ ಒಂದು ಮೃಗವನ್ನು ಹಿಂಬಾಲಿಸಿ ನೀನು ತಂದೆಯ ಆಶ್ರಮದಲ್ಲಿದ್ದ ಕುಮಾರಿಯಾದ ನನ್ನ ಬಳಿಗೆ ಬಂದೆ.

ಉರ್ವಶೀ ಪೂರ್ವಚಿತ್ತಿಶ್ಚ ಸಹಜನ್ಯಾ ಚ ಮೇನಕಾ ।
ವಿಶ್ವಾಚೀ ಚ ಘೃತಾಚೀ ಚ ಷಡೇವಾಪ್ಸರಸಾಂ ವರಾಃ ॥೮೯॥

ಉರ್ವಶೀ, ಪೂರ್ವಚಿತ್ತಿ, ಸಹಜನ್ಯಾ, ಮೇನಕಾ, ವಿಶ್ವಾಚಿ, ಘೃತಾಚೀ, ಈ ಆರು ಜನರು ಅಪ್ಸರೆಯರಲ್ಲಿ ಶ್ರೇಷ್ಠರು.

ತಾಸಾಂ ವೈ ಮೇನಕಾ ನಾಮ ಬ್ರಹ್ಮಯೋನಿರ್ವರಾಪ್ಸರಾಃ ।
ದಿವಃ ಸಂಪ್ರಾಪ್ಯ ಜಗತೀಂ ವಿಶ್ವಾಮಿತ್ರಾದಜೀಜನತ್ ॥೯೦॥

ಅವರಲ್ಲಿ ಬ್ರಹ್ಮದೇವರಿಂದ ಜನಿಸಿದ ಶ್ರೇಷ್ಠ ಅಪ್ಸರೆಯಾದ ಮೇನಕೆಯು ಸ್ವರ್ಗದಿಂದ ಭೂಮಿಗೆ ಬಂದು ವಿಶ್ವಾಮಿತ್ರರಿಂದ ನನ್ನನ್ನು ಪಡೆದಳು.

ಶ್ರೀಮಾನೃಷಿರ್ಧರ್ಮವರೋ ವೈಶ್ವಾನರ ಇವಾಪರಃ ।
ಬ್ರಹ್ಮಯೋನಿಃ ಕುಶೋ ನಾಮ ವಿಶ್ವಾಮಿತ್ರಪಿತಾಮಹಃ ॥೯೧॥

ಕಾಂತಿಯುಕ್ತರಾದ ಧರ್ಮಿಷ್ಠರಾದ ವಿಶ್ವಾಮಿತ್ರರು ಇನ್ನೊಬ್ಬ ಅಗ್ನಿಯಿದ್ದಂತೆ. ವಿಶ್ವಾಮಿತ್ರರ ಪಿತಾಮಹನಾದ ಕುಶನು ಬ್ರಹ್ಮದೇವರಿಂದ ಜನಿಸಿದನು.

ಕುಶಸ್ಯ ಪುತ್ರೋ ಬಲವಾನ್ ಕುಶನಾಭಸ್ತು ಧಾರ್ಮಿಕಃ ।
ಗಾಧಿಸ್ತಸ್ಯ ಸುತೋ ರಾಜನ್ ವಿಶ್ವಾಮಿತ್ರಸ್ತು ಗಾಧಿಜಃ ।
ಏವಂವಿಧೋ ಮಮ ಪಿತಾ ಮಾತಾ ಮೇ ಮೇನಕಾಽಪ್ಸರಾಃ ॥೯೨॥

ಧಾರ್ಮಿಕನಾದ ಮತ್ತು ಬಲಿಷ್ಠನಾದ ಕುಶನಾಭನು ಕುಶನ ಪುತ್ರ. ಕುಶನಾಭನ ಪುತ್ರ ಗಾಧಿ ಮತ್ತು ಗಾಧಿಯ ಪುತ್ರರು ವಿಶ್ವಾಮಿತ್ರರು. ನನ್ನ ತಂದೆ ಇಂತಹ ಪರಂಪರೆಯವನು ಮತ್ತು ನನ್ನ ತಾಯಿ ಅಪ್ಸರೆಯಾದ ಮೇನಕೆ.

ಸಾ ಮಾಂ ಹಿಮವತಃ ಪೃಷ್ಠೇ ಸುಷುವೇ ಮೇನಕಾಽಪ್ಸರಾಃ ।
ಪರಿತ್ಯಜ್ಯ ಚ ಮಾಂ ಯಾತಾ ಪರಾತ್ಮಜಮಿವಾಸತೀ ॥೯೩॥

ಅಪ್ಸರೆಯಾದ ಮೇನಕೆಯು ನನ್ನನ್ನು ಹಿಮಾಲಯದ ತಪ್ಪಲಲ್ಲಿ ಪ್ರಸವಿಸಿ ನಾನು ಇನ್ನೊಬ್ಬರ ಮಗಳೋ ಎನ್ನುವಂತೆ ನನ್ನನ್ನು ಪರಿತ್ಯಜಿಸಿ ಅಸತಿಯ ಮಾರ್ಗವನ್ನು ಹಿಡಿದು ಹೊರಟುಹೋದಳು.

ಪಕ್ಷಿಣಃ ಪುಣ್ಯವಂತಸ್ತೇ ಸಹಿತಾ ಧರ್ಮತತ್ಪರಾಃ ।
ಪಕ್ಷೈಸ್ತೈರಭಿಗುಪ್ತಾ ಚ ತಸ್ಮಾದಸ್ಮಿ ಶಕುಂತಲಾ ॥೯೪॥

ಧರ್ಮತತ್ಪರರಾದ ಪಕ್ಷಿಗಳು ಎಲ್ಲವೂ ಪುಣ್ಯಶಾಲಿಗಳು. ಅವು ತಮ್ಮ ರೆಕ್ಕೆಗಳಿಂದ ನನ್ನನ್ನು ರಕ್ಷಿಸಿದವು. ಆದ್ದರಿಂದ ನನಗೆ ಶಕುಂತಲಾ ಎಂದು ಹೆಸರು.

ತತೋಽಹಮೃಷಿಣಾ ದೃಷ್ಟಾ ಕಾಶ್ಯಪೇನ ಮಹಾತ್ಮನಾ ।
ಜಲಾರ್ಥಮಗ್ನಿಹೋತ್ರಸ್ಯ ಗತಂ ದೃಷ್ಟ್ವಾ ತು ಪಕ್ಷಿಣಃ ॥೯೫॥

ನ್ಯಾಸಭೂತಾಮಿವ ಮುನೇಃ ಪ್ರದದುರ್ಮಾಂ ದಯಾವತಃ ।
ಸ ಮಾಂ ಮುನಿರುಪಾದಾಯ ಸ್ವಮಾಶ್ರಮಮಪಾಗಮತ್ ॥೯೬॥

ಅನಂತರ ಅಗ್ನಿಹೋತ್ರಕ್ಕಾಗಿ ನೀರನ್ನು ತರಲು ಬಂದಿದ್ದ ಮಹಾತ್ಮರಾದ ಕಾಶ್ಯಪ ಋಷಿಗಳು ನನ್ನನ್ನು ನೋಡಿದರು. ಅವರನ್ನು ನೋಡಿದ ಪಕ್ಷಿಗಳು ಅವರಲ್ಲಿ ನ್ಯಾಸವಿದ್ದಂತೆ ಇದ್ದ ನನ್ನನ್ನು ದಯಾಶೀಲರಾದ ಋಷಿಗಳಿಗೆ ಕೊಟ್ಟವು. ಆ ಋಷಿಗಳು ನನ್ನನ್ನು ಆಶ್ರಮಕ್ಕೆ ಕರೆದುಕೊಂಡು ಬಂದವು.

ಸಾ ವೈ ಸಂಭಾವಿತಾ ರಾಜನ್ ಅನುಕ್ರೋಶಾನ್ಮಹರ್ಷಿಣಾ ।
ತೇನೈವ ಸ್ವಸುತೇವಾಹಂ ರಾಜನ್ ವೈ ವರವರ್ಣಿನೀ ॥೯೭॥

ರಾಜನೇ, ಆ ದಯಾಶೀಲರಾದ ಮಹರ್ಷಿಗಳು ನನ್ನನ್ನು ಸಮ್ಮಾನಿಸಿದ್ದಾರೆ. ವಿಶ್ವಾಮಿತ್ರರ ಮಗಳಾದ, ಸುಂದರಿಯಾದ ನನ್ನನ್ನು ಅವರು ತಮ್ಮ ಮಗಳಂತೆಯೇ ಬೆಳೆಸಿದ್ದಾರೆ.

ವಿಶ್ವಾಮಿತ್ರಸುತಾ ಚಾಹಂ ವರ್ಧಿತಾ ಮುನಿನಾ ನೃಪ ।
ಯೌವನೇ ವರ್ತಮಾನಾಂ ಚ ದೃಷ್ಟವಾನಸಿ ಮಾಂ ನೃಪ ।
ಆಶ್ರಮೇ ಪರ್ಣಶಾಲಾಯಾಂ ಕುಮಾರೀಂ ವಿಜನೇ ವನೇ ॥೯೮॥

ರಾಜನೇ, ನಾನು ಮುನಿಗಳಿಂದ ಸಾಕಲ್ಪಟ್ಟ ವಿಶ್ವಾಮಿತ್ರರ ಮಗಳು. ರಾಜನೇ, ನಾನು ಯೌವನದಲ್ಲಿ ಇನ್ನೂ ಕುಮಾರಿಯಾಗಿರುವಾಗ ಕಾಡಿನಲ್ಲಿ ಆಶ್ರಮದಲ್ಲಿದ್ದ ನಿರ್ಜನವಾದ ಪರ್ಣಶಾಲೆಯ ಬಳಿ ನೀನು ನನ್ನನ್ನು ನೋಡಿದೆ.

ಧಾತ್ರಾ ಪ್ರಚೋದಿತಃ ಶೂನ್ಯೇ ಪಿತ್ರಾ ವಿರಹಿತಾಂ ಮಿಥಃ ।
ವಾಗ್ಭಿಸ್ತ್ವಂ ಸೂನೃತಾಭಿರ್ಮಾಮಪತ್ಯಾರ್ಥಮಚೂಚುದಃ ॥೯೯॥

ವಿಧಿಯಿಂದ ಪ್ರೇರಿತನಾದ ನೀನು ಏಕಾಂತದಲ್ಲಿ ಸಾಕುತಂದೆಯು ದೂರದಲ್ಲಿರುವ ನನ್ನನ್ನು ಮಧುರವಾದ ಮಾತುಗಳಿಂದ ಸಂಭೋಧಿಸಿ ಪುತ್ರನನ್ನು ಪಡೆಯುವ ಸಲುವಾಗಿ ಒತ್ತಾಯ ಮಾಡಿದೆ.

ಅವೋಚಸ್ತಾ ಶ್ರಮೇ ವಾಚೋ ಧರ್ಮಕಾಮಾರ್ಥಮಿಶ್ರಿತಾಃ।
ಗಾಂಧರ್ವೇಣ ವಿವಾಹೇನ ವಿಧಿನಾ ಪಾಣಿಮಗ್ರಹೀಃ ॥೧೦೦॥

ಸಾಽಹಂ ಕುಲಂ ಚ ಶೀಲಂ ಚ ಸತ್ಯವಾದಿತ್ವಮಾತ್ಮನಃ ।
ಸ್ವಧರ್ಮ ಚ ಪುರಸ್ಕೃತ್ಯ ತ್ವಾಮದ್ಯ ಶರಣಂ ಗತಾ ॥೧೦೧॥

ನೀನು ಆಶ್ರಮದಲ್ಲಿ ಧರ್ಮ, ಅರ್ಥ ಮತ್ತು ಕಾಮಗಳಿಂದ ಮಿಶ್ರಿತವಾದ ಮಾತುಗಳನ್ನು ಆಡಿ ಗಾಂಧರ್ವ ವಿವಾಹವಿಧಿಯಿಂದ ನನ್ನ ಪಾಣಿಗ್ರಹಣವನ್ನು ಮಾಡಿದೆ. ನಾನು ನನ್ನ ಕುಲವನ್ನೂ, ಶೀಲವನ್ನೂ, ಸತ್ಯವಾದಿತ್ವವನ್ನೂ ಮತ್ತು ಸ್ವಧರ್ಮವನ್ನೂ ಮುಂದೆ ಮಾಡಿಕೊಂಡು ನಿನಗೆ ಶರಣಾಗತಳಾಗಿದ್ದೇನೆ.

ತಸ್ಮಾನ್ನಾರ್ಹಸಿ ಸಂಶ್ರುತ್ಯ ತಥೇತಿ ವಿತಥಂ ವಚಃ ।
ಸ್ವಧರ್ಮಂ ಪೃಷ್ಠತಃ ಕೃತ್ವಾ ಪರಿತ್ಯಕ್ತುಮುಪಸ್ಥಿತಾಮ್ ।
ಮನ್ನಾಥೋ ಲೋಕನಾಥಶ್ಚ ನಾರ್ಹಸೇ ತ್ವಮನಾಗಸೀಮ್ ॥೧೦೨॥

ಆದ್ದರಿಂದ ಹಾಗೆ ಮಾತನ್ನು ಕೊಟ್ಟು ಈಗ ಅದನ್ನು ವ್ಯರ್ಥಮಾಡಿ ನಿನ್ನ ಧರ್ಮವನ್ನು ಬಿಟ್ಟು ತಾನಾಗಿಯೇ ಬಂದ ನನ್ನನ್ನು ಪರಿತ್ಯಾಗ ಮಾಡುವುದು ಸರಿಯಲ್ಲ. ನನಗೂ ಮತ್ತು ಲೋಕಕ್ಕೂ ಒಡೆಯನಾದ ನೀನು ನಿರಪರಾಧಿಯಾದ ನನ್ನನ್ನು ಪರಿತ್ಯಾಗ ಮಾಡಬಾರದು.

ಕಿಂ ನು ಕರ್ಮಾಶುಭಂ ಪೂರ್ವಂ ಕೃತವತ್ಯಸ್ಮಿ ಜಾತಿಷು ।
ಯದಹಂ ಬಾಂಧವೈಸ್ತ್ಯಕ್ತಾ ಬಾಲ್ಯೇ ಸಂಪ್ರತಿ ಯತ್ ತ್ವಯಾ ॥೧೦೩॥

ನಾನು ಹಿಂದಿನ ಜನ್ಮಗಳಲ್ಲಿ ಎಂತಹ ಪಾಪಕರ್ಮಗಳನ್ನು ಮಾಡಿದ್ದೇನೆ. ಏಕೆಂದರೆ ಬಾಲ್ಯದಲ್ಲಿ ಬಂಧುಗಳಿಂದ ತ್ಯಕ್ತಳಾದ ನನ್ನನ್ನು ಈಗ ನೀನೂ ತ್ಯಾಗ ಮಾಡುತ್ತಿದ್ದೀಯೆ.

ಪರಿತ್ಯಕ್ತಾ ತ್ವಯಾಽಹಂ ಚೇದ್ ಗಮಿಷ್ಯಾಮಿ ಸ್ವಮಾಶ್ರಮಮ್ ।
ಇಮಂ ಬಾಲಂ ತು ಸಂತ್ಯಕ್ತುಂ ನಾರ್ಹಸ್ಯಾತ್ಮಾನಮಾತ್ಮನಾ ॥೧೦೪॥

ನೀನು ನನ್ನನ್ನು ಪರಿತ್ಯಾಗ ಮಾಡಿದರೆ ನಾನು ನನ್ನ ಆಶ್ರಮಕ್ಕೆ ಹಿಂದಿರುಗುತ್ತೇನೆ. ಆದರೆ, ಈ ಬಾಲಕನನ್ನು ಮಾತ್ರ ಪರಿತ್ಯಾಗ ಮಾಡಲು ನಿನಗೆ ಸರ್ವಥಾ ಸಾಧ್ಯವಿಲ್ಲ.

ದುಷ್ಪಂತಃ

ನ ಪುತ್ರಮಭಿಜಾನಾಮಿ ತ್ವಯಿ ಜಾತಂ ಶಕುಂತಲೇ ।
ಅಸತ್ಯವಚನಾ ನಾರ್ಯಃ ಕಸ್ತೇ ಶ್ರದ್ಧಾಸ್ಯತೇ ವಚಃ ॥೧೦೫॥

ಶಕುಂತಲೇ, ನಿನ್ನಲ್ಲಿ ಹುಟ್ಟಿದ ಯಾವ ಮಗನ ನೆನಪೂ ನನಗಿಲ್ಲ. ಸ್ತ್ರೀಯರೆಲ್ಲರೂ ಸುಳ್ಳು ಹೇಳುವವರು. ನಿನ್ನ ಮಾತನ್ನು ನಂಬುವವರು ಯಾರು?

ಅಶ್ರದ್ಧೇಯಮಿದಂ ವಾಕ್ಯಂ ಕಥಯಂತೀ ನ ಲಜ್ಜಸೇ ।
ವಿಶೇಷತೋ ಮತ್ಸಕಾಶೇ ದುಷ್ಪತಾಪಸಿ ಗಮ್ಯತಾಮ್ ॥೧೦೬॥

ದುಷ್ಪತಾಪಸಿಯೇ, ನಂಬಲಾರದ ಮಾತುಗಳನ್ನು ಲಜ್ಜೆಯಿಲ್ಲದೇ ಆಡುತ್ತಿದ್ದೀಯೆ, ಅದರಲ್ಲೂ ವಿಶೇಷವಾಗಿ ನನ್ನ ಎದುರಿಗೆ ಮಾತನಾಡುತ್ತಿದ್ದೀಯೆ. ನೀನು ಹೊರಟು ಹೋಗು.

ಕ್ವ ಮಹರ್ಷಿಃ ಸದೈವೋಗ್ರಃ ಕ್ವಾಪ್ಸರಾಃ ಸಾ ಚ ಮೇನಕಾ ।
ಕ್ವ ಚ ತ್ವಮೇವಂಕೃಪಣಾ ತಾಪಸೀವೇಷಧಾರಿಣೀ ॥೧೦೭॥

ಯಾವಾಗಲೂ ಉಗ್ರರಾದ ಆ ವಿಶ್ವಾಮಿತ್ರ ಮಹರ್ಷಿಗಳೆಲ್ಲಿ ಅಪ್ಸರೆಯಾದ ಮೇನಕೆ ಎಲ್ಲಿ ತಾಪಸಿಯ ವೇಷವನ್ನು ಧರಿಸಿ ದೈನ್ಯದ ಮಾತುಗಳನ್ನು ಆಡುತ್ತಿರುವ ನೀನೆಲ್ಲಿ.

ಅತಿಕಾಯಶ್ಚ ಪುತ್ರಸ್ತೇ ಬಾಲೋಽತಿಬಲವಾನಯಮ್ ।
ಕಥಮಲ್ಪೇನ ಕಾಲೇನ ಸಾಲಸ್ಕಂಧ ಇವೋದ್ಗತಃ ॥೧೦೮॥

ನಿನ್ನ ಈ ಪುತ್ರನು ಬಹಳ ದೊಡ್ಡದಾದ ಶರೀರವನ್ನು ಹೊಂದಿದ್ದಾನೆ. ಬಾಲನಾದರೂ ಬಹಳ ಬಲಿಷ್ಠನಾಗಿದ್ದಾನೆ. ಅಲ್ಪವಾದ ಕಾಲದಲ್ಲಿ ಹೇಗೆ ಸಾಲವೃಕ್ಷದಂತೆ ಬೆಳೆಯಲು ಸಾಧ್ಯ?

ಸುನಿಕೃಷ್ಟಾ ಚ ಯೋನಿಸ್ತೇ ಪುಂಶ್ಚಲೀ ಪ್ರತಿಭಾಸಿ ಮೇ ।
ಯದೃಚ್ಛಯಾ ಕಾಮರಾಗಾಜ್ಜಾತಾ ಮೇನಕಯಾ ಹ್ಯಸಿ ॥೧೦೯॥

ನಿನ್ನ ಯೋನಿಯು ಬಹಳ ನೀಚವಾಗಿದೆ. ನೀನು ನನಗೆ ವೇಶ್ಯೆಯಂತೆ ಕಾಣುತ್ತಿದ್ದೀಯೆ. ನೀನು ಇದ್ದಕ್ಕಿದ್ದಂತೆಯೇ ಕಾಮತಪ್ತಳಾದ ಮೇನಕೆಯಿಂದ ಹುಟ್ಟಿದವಳು.

ಸರ್ವಮೇವ ಪರೋಕ್ಷಂ ಮೇ ಯತ್ತ್ವಂ ವದಸಿ ತಾಪಸಿ ।
ಸರ್ವಾ ವಾಮಾಃ ಸ್ತ್ರಿಯೋ ಲೋಕೇ ಸರ್ವಾಃ ಕಾಮಪರಾಯಣಾಃ ॥

ತಾಪಸಿಯೇ, ನೀನು ಹೇಳುವ ಎಲ್ಲಾ ವಿಷಯಗಳೂ ನನಗೆ ಪರೋಕ್ಷವಾದವು. ನಾನು ಯಾವುದನ್ನೂ ತಿಳಿದಿಲ್ಲ. ಲೋಕದಲ್ಲಿರುವ ಸ್ತ್ರೀಯರೆಲ್ಲರೂ ಪತಿಗೆ ವಿರುದ್ಧವಾಗಿ ನಡೆದುಕೊಳ್ಳವವರು ಮತ್ತು ಕಾಮಪರಾಯಣರು.

ಸರ್ವಾಃ ಸ್ತ್ರಿಯಃ ಪರವಶಾಃ ಸರ್ವಾಃ ಕ್ರೋಧಸಮಾಕುಲಾಃ ।
ಅಸತ್ಯೋಕ್ತಾಃ ಸ್ತ್ರಿಯಃ ಸರ್ವಾ ಕೋ ಹ್ಯೇತದ್ ವಕ್ತುಮರ್ಹತಿ ॥೧೧೧॥

ಎಲ್ಲಾ ಸ್ತ್ರೀಯರೂ ಇನ್ನೊಬ್ಬನಿಗೆ ವಶರಾಗಿರುತ್ತಾರೆ. ಎಲ್ಲಾ ಸ್ತ್ರೀಯರೂ ಕ್ರೋಧದಿಂದ ಕೂಡಿರುತ್ತಾರೆ. ಎಲ್ಲರೂ ಅಸತ್ಯವನ್ನು ನುಡಿಯುತ್ತಾರೆ. ನೀನು ಆಡಿದ ಮಾತುಗಳನ್ನು ಬೇರೆ ಯಾರು ಆಡಲು ಸಾಧ್ಯ ?

ಮೇನಕಾ ನಿರನುಕ್ರೋಶಾ ಬಂಧಕೀ ಜನನೀ ತವ ।
ಯಯಾ ಹಿಮವತಃ ಪೃಷ್ಠೇ ನಿರ್ಮಾಲ್ಯೇವ ಪ್ರವಾಸಿತಾ ॥೧೧೨॥

ನಿನ್ನ ತಾಯಿಯಾದ ಮೇನಕೆಯು ನಿರ್ದಯಳಾದ ವೇಶ್ಯೆಯಂತೆ ಕಾಣುತ್ತಾಳೆ. ಅವಳು ನಿನ್ನನ್ನು ಹಿಮಾಲಯದ ತಪ್ಪಲಿನಲ್ಲಿ ಮುಡಿದ ಹೂವಿನಂತೆ ಎಸೆದಳು.

ಸ ಚಾಪಿ ನಿರನುಕ್ರೋಶಃ ಕ್ಷತ್ರಯೋನಿಃ ಪಿತಾ ತವ ।
ವಿಶ್ವಾಮಿತ್ರೋಽಥ ಬ್ರಹ್ಮತ್ವೇ ಲುಬ್ಧಃ ಕಾಮಪರಾಯಣಃ ॥೧೧೩॥

ಕ್ಷತ್ರಿಯಯೋನಿಯಲ್ಲಿ ಜನಿಸಿದ ನಿನ್ನ ತಂದೆಯೂ ಕೂಡ ನಿರ್ದಯನಾದವನು. ಕಾಮಪರಾಯಣನಾದ ಅವನು ಬ್ರಾಹ್ಮಣ್ಯದ ಮಹಾ ಲೋಭವನ್ನು ಹೊಂದಿದ್ದವನು.

ಮೇನಕಾऽಪ್ಸರಸಾಂ ಶ್ರೇಷ್ಠಾ ಮಹರ್ಷೀಣಾಂ ಚ ತೇ ಪಿತಾ ।
ತಯೋರಪತ್ಯಂ ಕಸ್ಮಾತ್ ತ್ವಂ ಪುಂಶ್ಚಲ್ಯೇವಾಭಿಧಾಸ್ಯಸಿ ॥೧೧೪॥

ಅಪ್ಸರೆಯರಲ್ಲಿ ಮೇನಕೆಯು ಶ್ರೇಷ್ಠ. ಮಹರ್ಷಿಗಳಲ್ಲಿ ವಿಶ್ವಾಮಿತ್ರರು ಶ್ರೇಷ್ಠ. ಅವರ ಮಗಳಾದ ನೀನು ಏಕೆ ವೇಶ್ಯೆಯಂತೆ ಮಾತನಾಡುತ್ತಿದ್ದೀಯೆ.

ಜಾತಿಶ್ಚಾಪಿ ನಿಕೃಷ್ಟಾ ತೇ ಕುಲೀನೇತಿ ವಿಕತ್ಥಸೇ ।
ಜನಯಿತ್ವಾ ತ್ವಮುತ್ಸೃಷ್ಟಾ ಕೋಕಿಲೇವ ಪರೈರ್ಭೃತಾ ॥೧೧೫॥

ನಿನ್ನ ಜನನವೂ ನೀಚವಾದುದು. ನಾನು ಕುಲೀನಳು ಎಂದು ಜಂಭದ ಮಾತುಗಳನ್ನು ಆಡುತ್ತಿದ್ದೀಯೆ. ಹುಟ್ಟಿದ ತಕ್ಷಣ ನೀನು ಪರಿತ್ಯಕ್ತಳಾಗಿ ಕೋಗಿಲೆಯಂತೆ ಇನ್ನೊಬ್ಬರಿಂದ ಸಾಕಲ್ಪಟ್ಟಿದ್ದೀಯೆ.

ಅರಿಷ್ಟ ಇವ ದುರ್ಬುದ್ಧಿಃ ಕಣ್ವೋ ವರ್ಧಯಿತಾ ಪಿತಾ ।
ಅಶ್ರದ್ಧೇಯಮಿದಂ ವಾಕ್ಯಂ ಯತ್ತ್ವಂ ಜಲ್ಪಸಿ ತಾಪಸಿ ।
ಬ್ರುವಂತೀ ರಾಜಸಾನ್ನಿಧ್ಯೇ ಗಮ್ಯತಾಂ ಯತ್ರ ವೇಚ್ಛಸಿ ॥೧೧೬॥

ದುರ್ಬುದ್ಧಿಯಾದ ನಿನ್ನ ತಂದೆಯಾದ ಕಣ್ವರು ಕಾಗೆಯಂತೆ ನಿನ್ನನ್ನು ಸಾಕಿದರು. ತಾಪಸಿಯೇ, ನೀನು ಹೇಳುವ ಯಾವ ಮಾತುಗಳೂ ನಂಬಲು ಸಾಧ್ಯವಿಲ್ಲದವು. ರಾಜನ ಸನ್ನಿಧಿಯಲ್ಲಿ ಹೀಗೆ ಮಾತನಾಡುತ್ತಿರುವವಳು ಎಲ್ಲಿಗೆ ಬೇಕಾದರೂ ಹೋಗು.

ಸುವರ್ಣಮಣಿಮುಕ್ತಾನಿ ವಸ್ತ್ರಾಣ್ಯಾಭರಣಾನಿ ಚ ।
ಯದ್ಯದಿಚ್ಛಸಿ ಭೋಗಾರ್ಥಂ ಗೃಹ್ಯತಾಂ ತಾಪಸಿ ತ್ವಯಾ ।
ನಾಹಂ ತ್ವಾಂ ದ್ರಷ್ಟುಮಿಚ್ಛಾಮಿ ಯಥೇಷ್ಟಂ ಗಮ್ಯತಾಮಿತಃ ॥೧೧೭॥

ಸುವರ್ಣವನ್ನೂ, ಮಣಿಮುತ್ತುಗಳನ್ನೂ, ವಸ್ತ್ರಾಭರಣಗಳನ್ನೂ, ನಿನಗೆ ಇಷ್ಟವಾದ ಬೇರೆ ಭೋಗ ಸಾಮಗ್ರಿಗಳನ್ನೂ ತೆಗೆದುಕೋ. ತಾಪಸಿಯೇ, ನಾನು ನಿನ್ನನ್ನು ನೋಡಲು ಬಯಸುವುದಿಲ್ಲ. ನಿನ್ನ ಮನಸ್ಸಿಗೆ ಬಂದಂತೆ ನೀನು ಇಲ್ಲಿಂದ ಹೊರಟು ಹೋಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕನವತಿತಮೋऽಧ್ಯಾಯಃ ॥

॥ ಸಂಭವಪರ್ವಣಿ ಏಕೋನಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ತೊಂಭತ್ತೊಂದನೆಯ ಅಧ್ಯಾಯ ಮುಗಿಯಿತು

★★★★★

ತೊಂಭತ್ತೆರಡನೆಯ ಅಧ್ಯಾಯ

(ಶಕುಂತಲೆಯ ವಾದ, ದುಷ್ಷಂತನ ನಿರಾಕರಣೆ, ಶಕುಂತಲೆಯ ಆಶ್ರಮಕ್ಕೆ ಹಿಂದಿರುಗುವ ಪ್ರಯತ್ನ.)

ಶಂಕುತಲಾ

ರಾಜನ್ ಸರ್ಷಪಮಾತ್ರಾಣಿ ಪರಚ್ಛಿದ್ರಾಣಿ ಪಶ್ಯಸಿ ।
ಆತ್ಮನೋ ಮೇರುಮಾತ್ರಾಣಿ ಪಶ್ಯನ್ನಪಿ ನ ಪಶ್ಯಸಿ ॥೧॥

ರಾಜನೇ, ಸಾಸಿವೆಯಷ್ಟು ಸಣ್ಣಗಿರುವ ಇನ್ನೊಬ್ಬರ ದೋಷಗಳು ನಿನಗೆ ಕಾಣಿಸುತ್ತಿವೆ. ಆದರೆ ಮೇರು ಪರ್ವತದಷ್ಟು ದೊಡ್ಡದಾದ ನಿನ್ನ ದೋಷವು ನಿನಗೆ ಕಾಣಿಸುತ್ತಿಲ್ಲ.

ಮೇನಕಾ ತ್ರಿದಶಾಂಶ್ಚಾನು ತ್ರಿದಶಾಶ್ಚಾನು ಮೇನಕಾಮ್ ।
ಮಮೈವೋದ್ರಿಚ್ಯತೇ ಜನ್ಮ ದುಷ್ಷಂತ ತವ ಜನ್ಮತಃ ॥೨॥

ಮೇನಕೆಯು ದೇವತೆಗಳ ಹಿಂದಿದ್ದಾಳೆ. ದೇವತೆಗಳು ಮೇನಕೆಯ ಹಿಂದಿದ್ದಾರೆ. ದುಷ್ಷಂತನೇ, ನಿನ್ನ ಜನ್ಮಕ್ಕಿಂತ ನನ್ನ ಜನ್ಮವೇ ಶ್ರೇಷ್ಠವಾದುದು.

ಕ್ಷಿತೌ ಚರಸಿ ರಾಜಂಸ್ತ್ವಮಂತರಿಕ್ಷೇ ಚರಾಮ್ಯಹಮ್ ।
ಆವಯೋರಂತರಂ ಪಶ್ಯ ಮೇರುಸರ್ಷಪಯೋರಿವ ॥೩॥

ರಾಜನೇ, ನೀನು ಭೂಮಿಯಲ್ಲಿ ಸಂಚರಿಸುತ್ತೀಯೆ. ನಾನು ಅಂತರಿಕ್ಷದಲ್ಲಿ ಸಂಚರಿಸುತ್ತೇನೆ. ನಮ್ಮಿಬ್ಬರ ನಡುವೆ ಇರುವ ವ್ಯತ್ಯಾಸ ಮೇರು ಸರ್ಷಪಗಳ ಅಂತರದಂತೆ. ಈ ಅಂತರವನ್ನು ನೋಡು.

ಮಹೇಂದ್ರಸ್ಯ ಕುಬೇರಸ್ಯ ಯಮಸ್ಯ ವರುಣಸ್ಯ ಚ ।
ಭವನಾನ್ಯನುಸಂಯಾಮಿ ಪ್ರಭಾವಂ ಪಶ್ಯ ಮೇ ನೃಪ ॥೪॥

ರಾಜನೇ, ನಾನು ಮಹೇಂದ್ರನ, ಕುಬೇರನ, ಯಮನ ಮತ್ತು ವರುಣನ ಮನೆಗಳಿಗೆ ಹೋಗುತ್ತೇನೆ. ನನ್ನ ಪ್ರಭಾವವನ್ನು ನೋಡು.

ಪುರಾ ನರವರಃ ಪುತ್ರ ಉರ್ವಶ್ಯಾಂ ಜನಿತಸ್ತದಾ ।
ಆಯುರ್ನಾಮ ಮಹಾತೇಜಾ ತವ ಪೂರ್ವಪಿತಾಮಹಃ ॥೫॥

ಹಿಂದೆ ಮಹಾತೇಜಸ್ವಿಯಾದ ಆಯು ಎಂಬ ನಿನ್ನ ಪೂರ್ವ ಪಿತಾಮಹನು ಉರ್ವಶಿಯಲ್ಲಿ ಜನಿಸಿದ್ದಾನೆ.

ಮಹರ್ಷಯಶ್ಚ ಬಹವಃ ಕ್ಷತ್ರಿಯಾಶ್ಚ ಪರಂತಪ ।
ಅಪ್ಸರಸ್ಸು ವ್ಯಜಾಯಂತ ಮಾತೃದೋಷೋ ನ ವಿದ್ಯತೇ ॥೬॥

ಶತ್ರುತಾಪಕನೇ, ಅನೇಕ ಮಹರ್ಷಿಗಳು ಮತ್ತು ಕ್ಷತ್ರಿಯರು ಅಪ್ಸರೆಯರಲ್ಲಿ ಜನಿಸಿದ್ದಾರೆ. ನನಗೆ ಮಾತೃದೋಷವಿಲ್ಲ.

ಸತ್ಯಶ್ಚಾಪಿ ಪ್ರವಾದೋಽಯಂ ಸಂಪ್ರವಕ್ಷ್ಯಾಮಿ ತೇಽನಘ ।
ನಿದರ್ಶನಾರ್ಥಂ ನ ದ್ವೇಷಾಚ್ಛ್ರುತ್ವಾ ತಂ ಕ್ಷಂತುಮರ್ಹಸಿ ॥೭॥

ಉದಾಹರಣೆಗಾಗಿ ಲೋಕದ ಒಂದು ಸತ್ಯವಾದ ಮಾತನ್ನು ಹೇಳುತ್ತೇನೆ. ಅನಘನೇ, ದ್ವೇಷದಿಂದ ಹೇಳುತ್ತಿಲ್ಲ. ಅದನ್ನು ಕೇಳಿ ನೀನು ಕ್ಷಮಿಸಬೇಕು.

ವಿರೂಪೋ ಯಾವದಾದರ್ಶೇ ನಾತ್ಮನೋ ವೀಕ್ಷತೇ ಮುಖಮ್ ।
ಮನ್ಯತೇ ತಾವದಾತ್ಮಾನಮನ್ಯೇಭ್ಯೋ ರೂಪವತ್ತರಮ್ ॥೮॥

ಯದಾ ತು ಮುಖಮಾದರ್ಶೇ ವಿರೂಪಂ ಸೋಽಭಿವೀಕ್ಷತೇ ।
ತದಾ ವಿರೂಪಂ ಜಾನೀಯಾದಾತ್ಮಾನಂ ನೇತರಂ ಜನಮ್ ॥೯॥

ಕುರೂಪಿಯಾದವನು ಎಲ್ಲಿಯವರೆಗೆ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಳ್ಳವುದಿಲ್ಲವೋ ಅಲ್ಲಿಯವರೆಗೆ ತಾನು ಇತರರಿಗಿಂತ ಸುಂದರನೆಂದು ತಿಳಿಯುತ್ತಾನೆ. ಆದರೆ ಯಾವಾಗ ಕನ್ನಡಿಯಲ್ಲಿ ತನ್ನ ಕುರೂಪವಾದ ಮುಖವನ್ನು ನೋಡುತ್ತಾನೋ ಆಗ ತನ್ನನ್ನು ಕುರೂಪಿಯೆಂದು ತಿಳಿಯುತ್ತಾನೆ. ಇತರರನ್ನಲ್ಲ.

ಅತೀವ ರೂಪಸಂಪನ್ನೋ ನ ಕಿಂ ಚಿದವಮನ್ಯತೇ ।
ಅತೀವ ಜಲ್ಪನ್ ದುರ್ವಾಚೋ ಭವತೀಹ ವಿಪೋದಕಃ ॥೧೦॥

ಬಹಳ ಸುಂದರನಾದವನು ಇನ್ನೊಬ್ಬರನ್ನು ಅವಮಾನಿಸುವುದಿಲ್ಲ. ಬಹಳ ಮಾತನಾಡುವವನು ದುರ್ವಾಕ್ಯಗಳಿಂದ ಇನ್ನೊಬ್ಬರನ್ನು ನಿಂದಿಸುವವನಾಗುತ್ತಾನೆ.

ಸಾಧುಲೋಕಪ್ರವಾದೋಽಯಂ ತವ ವಕ್ಷ್ಯಾಮಿ ಚಾನಘ ।
ನಿದರ್ಶನಾರ್ಥಂ ನ ದ್ವೇಷಾತ್ ತಚ್ಛ್ರುತ್ವಾ ಕ್ಷಂತುಮರ್ಹಸಿ ॥೧೧॥

ಅನಘನೇ, ಸಜ್ಜನರ ನಡುವಿನ ಒಂದು ಮಾತನ್ನು ಉದಾಹರಣೆಗಾಗಿ ನಿನಗೆ ಹೇಳುತ್ತೇನೆ. ದ್ವೇಷದಿಂದಲ್ಲ. ಅದನ್ನು ಕೇಳಿ ನನ್ನನ್ನು ಕ್ಷಮಿಸಬೇಕು.

ಪಾಂಸುಪಾತೇನ ತುಷ್ಯಂತಿ ಕುಂಜರಾ ಮದಶಾಲಿನಃ ।
ತಥಾ ಪರಿವದನ್ನನ್ಯಾನ್ ತುಷ್ಯೋ ಭವತಿ ದುರ್ಜನಃ ॥೧೨॥

ಮದವೇರಿದ ಆನೆಗಳು ಮೈಮೇಲೆ ಮಣ್ಣನ್ನು ಸುರಿದುಕೊಂಡು ಸಂತೋಷಪಡುತ್ತವೆ. ಹಾಗೆಯೇ ದುರ್ಜನನು ಇನ್ನೊಬ್ಬರನ್ನು ನಿಂದಿಸಿ ಸಂತೋಷಪಡುತ್ತಾನೆ.

ಸತ್ಯಧರ್ಮಚ್ಯುತಾತ್ ಪುಂಸಃ ಕ್ರುದ್ಧಾದಾಶೀವಿಷಾದಿವ ।
ನಾಸ್ತಿಕೋಽಪ್ಯುದ್ವಿಜತ್ಯೇವ ಜನಃ ಕಿಂ ಪುನರಾಸ್ತಿಕಃ ॥೧೩॥

ಸತ್ಯ ಮತ್ತು ಧರ್ಮಗಳನ್ನು ಬಿಟ್ಟ ನಾಸ್ತಿಕ ಪುರುಷನನ್ನು ನೋಡಿದರೆ, ಸಿಟ್ಟುಗೊಂಡ ಸರ್ಪವನ್ನು ನೋಡಿದಂತೆ ನಾಸ್ತಿಕನೂ ಭಯಪಡುತ್ತಾನೆ. ಆಸ್ತಿಕನು ಭಯಪಡುವುದರಲ್ಲಿ ಏನು ಆಶ್ಚರ್ಯ?

ಸ್ವಯಮುತ್ಪಾದ್ಯ ಪುತ್ರಂ ವೈ ಸದೃಶಂ ಯೋಽವಮನ್ಯತೇ ।
ತಸ್ಯ ದೇವಾಃ ಶ್ರಿಯಂ ಘ್ನಂತಿ ತತ್ಕೈನಂ ಕಲಿರಾವಿಶೇತ್ ॥೧೪॥

ಯಾವನು ತಾನೇ ಪಡೆದ, ತನಗೆ ಸದೃಶನಾದ ಮಗನನ್ನು ಅವಮಾನ ಮಾಡುವನೋ, ಅಂತಹವನ ಸಂಪತ್ತನ್ನು ದೇವತೆಗಳು ನಾಶಮಾಡುತ್ತಾರೆ. ಕಲಿಯು ಅವನನ್ನು ಆವರಿಸುತ್ತಾನೆ.

ಅಭವ್ಯೇ ಹ್ಯನೃತೇಽಶುದ್ಧೇ ನಾಸ್ತಿಕೇ ಪಾಪಕರ್ಮಣಿ ।
ದುರಾಚಾರೇ ಕಲಿಸ್ತಿಷ್ಠೇನ್ನ ಕಲಿರ್ಧರ್ಮಚಾರಿಷು ॥೧೫॥

ಅಮಂಗಳನಾದವನಲ್ಲಿ, ಸುಳ್ಳನ್ನು ಹೇಳುವವನಲ್ಲಿ, ಅಶುದ್ಧನಾದವನಲ್ಲಿ, ನಾಸ್ತಿಕನಾದವನಲ್ಲಿ, ಪಾಪಕರ್ಮದಲ್ಲಿ ನಿರತನಾದವನಲ್ಲಿ ಮತ್ತು ದುರಾಚಾರನಲ್ಲಿ ಕಲಿಯು ನೆಲೆಸುತ್ತಾನೆ. ಧರ್ಮಚಾರಿಗಳಲ್ಲಿ ಕಲಿಯು ಇರುವುದಿಲ್ಲ.

ನೀಚೋ ಹಿ ಜಲ್ಪತಾಂ ಪುಂಸಾಂ ಶ್ರುತ್ವಾ ವಾಚಃ ಶುಭಾಶುಭಾಃ ।
ಅಶುಭಂ ವಾಕ್ಯಮಾದತ್ತೇ ಪುರೀಷಮಿವ ಸೂಕರಃ ॥೧೬॥

ನೀಚನಾದ ಮನುಷ್ಯನು ಮಾತನಾಡುವ ಪುರುಷರ ಶುಭ ಅಶುಭ ಮಾತುಗಳನ್ನು ಕೇಳಿ ಹಂದಿಯು ಅಮೇಧ್ಯವನ್ನು ಸ್ವೀಕರಿಸುವಂತೆ ಅಶುಭ ಮಾತುಗಳನ್ನೇ ಸ್ವೀಕರಿಸುತ್ತಾನೆ.

ಪ್ರಾಜ್ಞಸ್ತು ಜಲ್ಪತಾಂ ಪುಂಸಾಂ ಶ್ರುತ್ವಾ ವಾಚಃ ಶುಭಾಶುಭಾಃ ।
ಗುಣವದ್ವಾಕ್ಯಮಾದತ್ತೇ ಹಂಸಃ ಕ್ಷೀರಮಿವಾಂಭಸಿ ॥೧೭॥

ವಿವೇಕಿಯಾದವನು ಮಾತನಾಡುವ ಮನುಷ್ಯರ ಶುಭ ಅಶುಭ ಮಾತುಗಳನ್ನು ಕೇಳಿ ಹಂಸವು ನೀರಲ್ಲಿರುವ ಕ್ಷೀರವನ್ನು ಮಾತ್ರ ಸ್ವೀಕರಿಸುವಂತೆ ಗುಣವುಳ್ಳ ವಾಕ್ಯವನ್ನು ಮಾತ್ರ ಸ್ವೀಕರಿಸುತ್ತಾನೆ.

ಆತ್ಮನೋ ದುಷ್ಟಭಾವತ್ವಂ ಜ್ಞಾನೀ ನೀಚೋऽಪ್ರಸನ್ನಧೀಃ ।
ಪರೇಷಾಮಪಿ ಜಾನಾತಿ ಸ್ವಕರ್ಮಸದೃಶಾನ್ ಗುಣಾನ್ ॥೧೮॥

ತನ್ನ ದುಷ್ಟಭಾವವನ್ನು ತಿಳಿದ ನೀಚನು ಮನಸ್ಸಂತೋಷ ಇಲ್ಲದವನಾಗಿ ಇನ್ನೊಬ್ಬರಲ್ಲಿಯೂ ತನ್ನ ಗುಣಗಳಿಗೆ ಸದೃಶವಾದ ಗುಣಗಳನ್ನೇ ತಿಳಿಯುತ್ತಾನೆ.

ದಹ್ಯಮಾನಾಃ ಸುತೀವ್ರೇಣ ನೀಚಾಃ ಪರಯಶೋऽಗ್ನಿನಾ ।
ಅಶಕ್ತಾಸ್ತತ್ಪದಂ ಗಂತುಮತೋ ನಿಂದಾಂ ಪ್ರಕುರ್ವತೇ ॥೧೯॥

ನೀಚರು ಇನ್ನೊಬ್ಬರ ಯಶಸ್ಸೆಂಬ ಅಗ್ನಿಯನ್ನು ಸಹಿಸಲಾರದೆ ಅದರಿಂದ ತೀವ್ರವಾಗಿ ಬೆಂದವರಾಗಿ ಅವರ ಸ್ಥಾನವನ್ನು ಪಡೆಯಲು ಸಾಧ್ಯವಾಗದೆ ಅವರ ನಿಂದೆಯನ್ನು ಮಾಡುತ್ತಾರೆ.

ಅನ್ಯಾನ್ ಪರಿವದನ್ ಸಾಧುರ್ಯಥಾ ಹಿ ಪರಿತಪ್ಯತೇ ।
ತಥಾ ಪರಿವದನ್ನನ್ಯಂ ಹೃಷ್ಟೋ ಭವತಿ ದುರ್ಜನಃ ॥೨೦॥

ಸಜ್ಜನನಾದವನು ಪರರನ್ನು ನಿಂದಿಸಿ ಪರಿತಾಪವನ್ನು ಹೊಂದುವಂತೆ ದುರ್ಜನನು ಪರರನ್ನು ನಿಂದಿಸಿ ಸಂತೋಷಪಡುತ್ತಾನೆ.

ಅಪವಾದರತಾ ಮೂರ್ಖಾ ಭವಂತೀಹ ವಿಶೇಷತಃ ।
ನಾಪವಾದರತಾಃ ಸಂತೋ ಭವಂತಿ ಸ್ಮ ವಿಶೇಷತಃ ॥೨೧॥

ಮೂರ್ಖರು ಈ ಲೋಕದಲ್ಲಿ ವಿಶೇಷವಾಗಿ ಇನ್ನೊಬ್ಬರ ಮೇಲೆ ಅಪವಾದಗಳನ್ನು ಹೊರಿಸುತ್ತಿರುತ್ತಾರೆ. ಸಜ್ಜನರು ಹಾಗೆ ಮಾಡುವುದಿಲ್ಲ.

ಅಭಿವಾದ್ಯ ಚ ವೃದ್ಧಾನ್ ಹಿ ಸಾಧುರ್ಗಚ್ಛತಿ ನಿರ್ವೃತಿಮ್ ।
ಏವಂ ಸಜ್ಜನಮಾಕ್ರುಶ್ಯ ಹೃಷ್ಟೋ ಭವತಿ ದುರ್ಜನಃ ॥೨೨॥

ದೊಡ್ಡವರಿಗೆ ನಮಸ್ಕಾರವನ್ನು ಮಾಡಿ ಸಜ್ಜನನು ಸಂತೋಷವನ್ನು ಹೊಂದುತ್ತಾನೆ. ಹಾಗೆ, ಸಜ್ಜನರ ಮೇಲೆ ಆಕ್ರೋಶವನ್ನು ಮಾಡಿ ದುರ್ಜನನು ಸಂತೋಷವನ್ನು ಹೊಂದುತ್ತಾನೆ.

ಸುಖಂ ಜೀವಂತ್ಯದೋಷಜ್ಞಾ ಮೂರ್ಖಾ ದೋಷಾನುದರ್ಶಿನಃ ।
ಯೇ ತು ವಾಚ್ಯಾಃ ಪರೈಃ ಸಂತಃ ಪರಾನಾಹುಸ್ತಥಾವಿಧಾನ್ ॥೨೩॥

ಇನ್ನೊಬ್ಬರ ದೋಷವನ್ನು ತಿಳಿಯದವರು ಸುಖದಿಂದ ಜೀವಿಸುತ್ತಾರೆ. ಮೂರ್ಖರು ಯಾವಾಗಲೂ ಇನ್ನೊಬ್ಬರಲ್ಲಿ ದೋಷವನ್ನೇ ತಿಳಿಯುತ್ತಾರೆ. ಯಾರು ಇನ್ನೊಬ್ಬರಿಂದ ಬಯ್ಯಲ್ಪಡಬೇಕೋ ಅವರು ಸಜ್ಜನರಾದ ಇನ್ನೊಬ್ಬರನ್ನು ಬಯ್ಯುತ್ತಾರೆ.

ಅತೋ ಹಾಸ್ಯತರಂ ಲೋಕೇ ಕಿಂಚಿದನ್ಯನ್ನ ವಿದ್ಯತೇ ।
ಯತ್ರ ದುರ್ಜನ ಇತ್ಯಾಹ ಸಜ್ಜನಂ ದುರ್ಜನಃ ಸ್ವಯಮ್ ।
ದಾರುಣಾಲ್ಲೋಕಸಂಕ್ಲೇಶಾದ್ ದುಃಖಮಾಪ್ನೋತ್ಯಸಂಶಯಮ್ ॥೨೪॥

ಎಲ್ಲಿ ಸ್ವಯಂ ದುರ್ಜನನಾದವನು ಸಜ್ಜನನನ್ನು ದುರ್ಜನ ಎಂದು ಹೇಳುತ್ತಾನೋ ಅದಕ್ಕಿಂತ ಹಾಸ್ಯಕರವಾದುದು ಲೋಕದಲ್ಲಿ ಯಾವುದೂ ಇಲ್ಲ. ಜನರಿಗೆ ದಾರುಣವಾದ ಕ್ಲೇಶವನ್ನು ಕೊಡುವುದರಿಂದ ನಿಸ್ಸಂಶಯವಾಗಿ ದುಃಖವನ್ನು ಹೊಂದುತ್ತಾನೆ.

ಕುಲವಂಶಪ್ರತಿಷ್ಠಾಂ ಹಿ ಪಿತರಃ ಪುತ್ರಮಬ್ರುವನ್ ।
ಉತ್ತಮಂ ಸರ್ವಧರ್ಮಾಣಾಂ ತಸ್ಮಾತ್ ಪುತ್ರಂ ನತು ತ್ಯಜೇತ್ ॥

ಪಿತೃಗಳು ಪುತ್ರನನ್ನು ಕುಲದ ಪ್ರತಿಷ್ಠೆ (ನೆಲೆ) ಎಂದು ಕರೆದರು. ಆದ್ದರಿಂದ ಸರ್ವಧರ್ಮಗಳಿಂದ ಉತ್ತಮನಾದ ಪುತ್ರನನ್ನು ಎಂದೂ ಪರಿತ್ಯಾಗ ಮಾಡಬಾರದು.

ಸ್ವಪತ್ನೀಪ್ರಭವಾಂಲ್ಲಬ್ಧಾನ್ ಕ್ರೀತಾನ್ ಸರ್ವವಿವರ್ಜಿತಾನ್ ।
ಕೃತಾನನ್ಯಾಸು ಚೋತ್ಪನ್ನಾತ್ ಪುತ್ರಾನ್ ವೈ ಮನುರಬ್ರವೀತ್ ।
ತತ್ರ ಷಡ್ ಬಂಧುದಾಯಾದಾಃ ಷಡದಾಯಾದಬಾಂಧವಾಃ ॥೨೬॥

ಸದ್ಧರ್ಮಚಾರಿಗಳಾದ ಬಂಧುದಾಯಾದರು ಆರು ಮಕ್ಕಳು. ಬಂಧುದಾಯಾದರಲ್ಲದವರು ಆರು ಮಕ್ಕಳು. ಇದನ್ನು ವಿವರವಾಗಿ ಹೇಳುತ್ತೇನೆ ಕೇಳು. ಸ್ವಯಂ ಜಾತಃ ಎಂದರೆ ತನಗೆ ತನ್ನ ಧರ್ಮಪತ್ನಿಯಲ್ಲಿ ಹುಟ್ಟಿದ ಮಗ. ಕ್ಷೇತ್ರಿಕ ಎಂದರೆ ತನ್ನ ಧರ್ಮಪತ್ನಿಯಲ್ಲಿ ಪತಿಯ ಅನುಮತಿಯಂತೆ ಶ್ರೇಷ್ಠರಾದ ದೇವತೆಗಳಿಂದ ಅಥವಾ ಋಷಿಗಳಿಂದ ಹುಟ್ಟಿದ ಪುತ್ರ. ಪರಿಕ್ರೀತ ಎಂದರೆ ತಂದೆ, ತಾಯಿ, ಅಣ್ಣ ತಮ್ಮಂದಿರನ್ನು ಕಳೆದುಕೊಂಡು ಅವನ ದೂರದ ಬಂಧುಗಳಿಂದ ಕ್ರಯಕ್ಕೆ ತೆಗೆದುಕೊಂಡ ಪುತ್ರ. ದತ್ತ ಎಂದರೆ ವಿಧಿಪೂರ್ವಕವಾಗಿ ತನ್ನ ಪುತ್ರನೆಂದು ಸ್ವೀಕರಿಸಿದ ಪುತ್ರ. ಕ್ರೀತ ಎಂದರೆ ಶುನಶ್ಶೇಪಾದಿಗಳಂತೆ ತಾನೇ ಕೇಳಿ, ಹಣವನ್ನು ಕೊಟ್ಟು ಕ್ರಯಮಾಡಿ ತೆಗೆದುಕೊಂಡ ಪುತ್ರ. ಸ್ವಯಂ ಉಪಯಾತ ಎಂದರೆ ಯಾವ ಬಾಲಕನು ತನ್ನ ಎಲ್ಲಾ ರಕ್ಷಕರನ್ನೂ ಕಳೆದುಕೊಂಡು ಅನಾಥನಾಗಿ ಇನ್ನೊಬ್ಬನ ಬಳಿಗೆ ಹೋಗಿ ನೀನು ಮಗನಂತೆ ನನ್ನನ್ನು ರಕ್ಷಿಸು ಎಂದು ಕೇಳಿಕೊಂಡಾಗ ಸ್ವೀಕರಿಸಿದ ಪುತ್ರ. ಇವರೆಲ್ಲರೂ ಬಂಧುದಾಯಾದ-ಪುತ್ರರೆಂದು ಕರೆಸಿಕೊಳ್ಳುತ್ತಾರೆ. ಬಂಧುದಾಯಾದರೆಂದರೆ ತಂದೆಯ ಆಸ್ತಿಯಲ್ಲಿ ಪಾಲುದಾರರು ಮತ್ತು ಬಂಧುತ್ವಯೋಗ್ಯರು ಎಂದು ಅರ್ಥ. ಪೌನರ್ಭವೇಯ ಎಂದರೆ ಪತಿಯಿದ್ದಾಗ ಪತಿಯಿಂದ ಗರ್ಭಿಣಿಯಾಗಿ ಪತಿಯನ್ನು ಕಳೆದುಕೊಂಡ ಮೇಲೆ ವಿಧವೆಯಲ್ಲಿ ಹುಟ್ಟಿದ ಮಗ. ಕಾನೀನ ಎಂದರೆ ವಿವಾಹವಾಗುವುದಕ್ಕಿಂತ ಮುಂಚೆ ಹುಟ್ಟಿದ ಪುತ್ರ. ಪತಿ ಇರುವಾಗಲೇ ವ್ಯಭಿಚಾರಿಣಿಯಾದ ಅವನ ಪತ್ನಿಯಲ್ಲಿ ಇನ್ನೊಬ್ಬನಿಂದ ಹುಟ್ಟಿದ ಪುತ್ರ ಕುಂಡ. ಇವನನ್ನು 'ಸ್ವೈರಿಣೀಜಾತ' ಎಂದು ಕರೆಯುತ್ತಾರೆ. ಗರ್ಹಿತ ಎಂದರೆ ತನಗೆ ತನ್ನ ಧರ್ಮಪತ್ನಿಯಲ್ಲಿ ಹುಟ್ಟಿದವನಾದರೂ, ದುಷ್ಕರ್ಮದಿಂದ ಜಾತಿಭ್ರಷ್ಟನಾದವನು. 'ಸಹೋಢಾಜಾತರೇತ' ಎಂದರೆ ಒಂದು ವಿವಾಹ ಮಂಟಪದಲ್ಲಿ ನೂರಾರು ವಿವಾಹಗಳಾಗುವಾಗ ಮಂಟಪದಾಹ ನಿಮಿತ್ತದಿಂದ ಎಲ್ಲವೂ ಅಸ್ತವ್ಯಸ್ತವಾಗಿ, ಅರ್ಧವಿವಾಹ ಕ್ರಿಯೆ ನಡೆದು, ತನ್ನ ಸಂಕಲ್ಪಿಸಿದ ಪತ್ನಿಯನ್ನು ಬಿಟ್ಟು, ಭ್ರಾಂತಿಯಿಂದ ಇನ್ನೊಬ್ಬಳನ್ನು ಮದುವೆ ಮಾಡಿಕೊಂಡು ಅವಳಲ್ಲಿ ಹುಟ್ಟಿದ ಪುತ್ರ. 'ಹೀನಯೋನಿಧೃತ' ಎಂದರೆ ಬ್ರಾಹ್ಮಣನಾದವನಿಗೆ ಶೂದ್ರಾದಿ ಯೋನಿಯಲ್ಲಿ ಜನಿಸಿದ ಪುತ್ರ. ಈ ಆರು ಪುತ್ರರು ಅಬಂಧುದಾಯಾದರು ಎಂದು ಕರೆಸಿಕೊಳ್ಳುತ್ತಾರೆ

ಎಂದರೆ ಇವರೆಲ್ಲರೂ ತಂದೆಯ ಆಸ್ತಿಗೆ ಪಾಲುದಾರರು ಆದರೆ ಬಂಧುತ್ವಕ್ಕೆ ಯೋಗ್ಯರಲ್ಲ ಎಂದು ಅರ್ಥ. ಮೇಲಿನ ಶ್ಲೋಕಗಳಲ್ಲಿ ಕ್ರಮವನ್ನು ಪರಿಗಣಿಸದೆ, ಎರಡು ರೀತಿಯ ಪುತ್ರರನ್ನು ಮಿಶ್ರಣ ಮಾಡಿ ನಿರೂಪಿಸಿದ್ದಾರೆ.

ಧರ್ಮಾಕೃತಿವಹಾ ನ್ಯಾಸಾಂ ಮನಸಃ ಪ್ರೀತಿವರ್ಧನಾಃ ।
ತ್ರಾಯಂತಿ ಜನಕಾಜ್ಜಾತಾಃ ಪುತ್ರಾ ಧರ್ಮಪ್ಲವಾಃ ಪಿತ್ರ್ಯಾನ್ ॥೨೭॥

ಧರ್ಮಾಕಾರವನ್ನು ಹೊಂದಿದ ಮನಸ್ಸಿಗೆ ಪ್ರೀತಿಯನ್ನುಂಟು ಮಾಡುವ ತಂದೆಯಿಂದ ಹುಟ್ಟಿದ ಮಕ್ಕಳು, ಧರ್ಮದ ಹಡಗುಗಳಾಗಿದ್ದು, ಪಿತೃಗಳನ್ನು ರಕ್ಷಿಸುತ್ತಾರೆ.

ತಸ್ಮಾತ್ ನೃಪತಿಶಾರ್ದೂಲ ನ ಪುತ್ರಂ ತ್ಯಕ್ತುಮರ್ಹಸಿ ।
ಸ ತ್ವಂ ಪುತ್ರಂ ಚ ಸತ್ಯಂ ಚ ಪಾಲಯಸ್ವ ಮಹೀಪತೇ ॥೨೮॥

ಆದ್ದರಿಂದ ರಾಜಶಾರ್ದೂಲನೇ ಮಗನನ್ನು ಪರಿತ್ಯಾಗ ಮಾಡಬೇಡ. ಮಹೀಪತಿಯೇ, ಪುತ್ರನನ್ನು ಮತ್ತು ಸತ್ಯವನ್ನು ಪರಿಪಾಲಿಸು.

ಉಭಯಂ ಪಾಲಯನ್ ನಿತ್ಯಂ ನಾನೃತಂ ಕರ್ತುಮರ್ಹಸಿ ।
ಆತ್ಮಾನಂ ಸತ್ಯಧರ್ಮೌ ಚ ಪಾಲಯೇಥಾ ಮಹೀಪತೇ ॥೨೯॥

ಎಲೈ ಮಹೀಪತಿಯೇ, ಯಾವಾಗಲೂ ಇವೆರಡನ್ನೂ ಪಾಲಿಸುವ ನೀನು ಸುಳ್ಳನ್ನು ಆಡಬಾರದು ಮತ್ತು ಮಾಡಬಾರದು. ನಿನ್ನನ್ನು ಮತ್ತು ಸತ್ಯ ಧರ್ಮಗಳನ್ನು ನೀನು ರಕ್ಷಿಸಬೇಕು.

ನರೇಂದ್ರಸಿಂಹ ಕಪಟಂ ನಹಿ ವಕ್ತುಮಿಹಾರ್ಹಸಿ ।
ವರಂ ಕೂಪಶತಾದ್ ವಾಪೀ ವರಂ ವಾಪೀಶತಾತ್ ಕ್ರತುಃ ॥೩೦॥

ವರಃ ಕ್ರತುಶತಾತ್ ಪುತ್ರಃ ಸತ್ಯಂ ಪುತ್ರಶತಾದ್ ವರಮ್ ।
ಅಶ್ವಮೇಧಸಹಸ್ರಂ ಚ ಸತ್ಯಂ ಚ ತುಲಯಾ ಧೃತಮ್ ।
ಅಶ್ವಮೇಧಸಹಸ್ರಾದ್ಧಿ ಸತ್ಯಮೇವ ವಿಶಿಷ್ಯತೇ ॥೩೧॥

ಎಲೈ ನರೇಂದ್ರಸಿಂಹನೇ, ನೀನು ವಂಚನೆಯ ಮಾತುಗಳನ್ನು ಆಡಬಾರದು. ನೂರು ಕೂಪಗಳಿಗಿಂದ ವಾಪಿಯು ಶ್ರೇಷ್ಠವಾದುದು. ನೂರು ವಾಪಿಗಳಿಗಿಂತ ಕ್ರತುವು

ಶ್ರೇಷ್ಠವಾದುದು. ನೂರು ಕ್ರತುಗಳಿಗಿಂತ ಪುತ್ರನು ಶ್ರೇಷ್ಠನಾದವನು. ನೂರು ಪುತ್ರರರಿಗಿಂತ ಸತ್ಯವು ಶ್ರೇಷ್ಠವಾದುದು. ಹಿಂದೆ ಸಹಸ್ರ ಅಶ್ವಮೇಧಗಳನ್ನು ಮತ್ತು ಸತ್ಯ ವಚನವನ್ನು ತಕ್ಕಡಿಯಲ್ಲಿ ತೂಗಿದರು. ಸಹಸ್ರ ಅಶ್ವಮೇಧಗಳಿಗಿಂತ ಸತ್ಯದ ಭಾರವೇ ಹೆಚ್ಚಾಯಿತು.

ಸರ್ವವೇದಾಧಿಗಮನಂ ಸರ್ವತೀರ್ಥಾವಗಾಹನಮ್ ।
ಸತ್ಯಂ ಚ ವದತೋ ರಾಜನ್ ಸಮಂ ವಾ ಸ್ಯಾನ್ನ ವಾ ಸಮಮ್ ।
ನಾಸ್ತಿ ಸತ್ಯಾತ್ ಪರೋ ಧರ್ಮೋ ನ ಸತ್ಯಾದ್ ವಿದ್ಯತೇ ಪರಮ್ ॥

ಸರ್ವವೇದಗಳನ್ನು ಅಧ್ಯಯನ ಮಾಡುವುದು, ಸರ್ವತೀರ್ಥಗಳಲ್ಲಿ ಸ್ನಾನ ಮಾಡುವುದು ಸತ್ಯವನ್ನು ಹೇಳುವುದಕ್ಕೆ ಸಮವಾಗಬಹುದು ಅಥವಾ ಆಗದೆಯೇ ಇರಬಹುದು. ರಾಜನೇ, ಸತ್ಯಕ್ಕಿಂತ ಶ್ರೇಷ್ಠವಾದ ಧರ್ಮವಿಲ್ಲ. ಸತ್ಯಕ್ಕಿಂತ ಶ್ರೇಷ್ಠವಾದುದು ಯಾವುದೂ ಇಲ್ಲ.

ನಹಿ ತೀವ್ರತರಂ ಪಾಪಮನೃತಾದಿಹ ವಿದ್ಯತೇ ।
ರಾಜನ್ ಸತ್ಯಂ ಪರಂ ಬ್ರಹ್ಮ ಸತ್ಯಂ ಚ ಸಮಯಃ ಪರಃ ॥೩೩॥

ಅನೃತಕ್ಕಿಂತ ಘೋರವಾದ ಪಾಪವಿಲ್ಲ. ರಾಜನೇ, ಪರಬ್ರಹ್ಮನೇ ಸತ್ಯ. ನಾವು ಮಾಡಿಕೊಂಡ ಸಮಯವೇ (ಷರತ್ತು) ಸತ್ಯ.

ಮಾ ತ್ಯಾಕ್ಷೀಃ ಸಮಯಂ ರಾಜನ್ ಸತ್ಯಂ ಸಂಗತಮಸ್ತು ತೇ ।
ಯಃ ಪಾಪಂ ನ ವಿಜಾನಾತಿ ಕರ್ಮ ಕೃತ್ವಾ ನರಾಧಿಪ ।
ನಹಿ ತಾದೃಕ್ ಪರಂ ಪಾಪಮನೃತಾದಿಹ ವಿದ್ಯತೇ ॥೩೪॥

ರಾಜನೇ, ಅಂತಹ ಸಮಯವನ್ನು ತ್ಯಜಿಸಬೇಡ. ಸತ್ಯವು ಯಾವಾಗಲೂ ನಿನ್ನ ಜೊತೆಯಲ್ಲಿ ಇರಲಿ. ಎಲೈ ನರಾಧಿಪನೇ, ಯಾರು ಪಾಪಕರ್ಮವನ್ನು ಮಾಡಿ ಅದನ್ನು ಮರೆಯುತ್ತಾನೆಯೋ ಅದು ಅನೃತವೆನಿಸುತ್ತದೆ. ಅದಕ್ಕಿಂತ ಘೋರವಾದ ಪಾಪವು ಯಾವುದೂ ಇಲ್ಲ.

ಯಸ್ಯ ತೇ ಹೃದಯಂ ವೇದ ಸತ್ಯಸ್ಯೈವಾನೃತಸ್ಯ ಚ ।
ಕಲ್ಯಾಣಂ ಸಾಕ್ಷಿಣಂ ತಸ್ಮಾತ್ ಕರ್ತುಮರ್ಹಸಿ ಧರ್ಮತಃ ॥೩೫॥

ನಿನ್ನ ಹೃದಯವು ಸತ್ಯಕ್ಕೂ ಅನೃತಕ್ಕೂ ಸಾಕ್ಷಿಯಾಗಿದೆ. ಪರಿಶುದ್ಧವಾದ ಸಾಕ್ಷಿಯ ಆದೇಶದಂತೆ ನೀನು ಧರ್ಮವನ್ನು ಆಚರಿಸಬೇಕು.

ಯೋ ನ ಕಾಮಾನ್ನ ಚ ಕ್ರೋಧಾನ್ನ ದ್ರೋಹಾದತಿವರ್ತತೇ ।
ಅಮಿತ್ರಂ ವಾಪಿ ಮಿತ್ರಂ ವಾ ಸ ವಾ ಉತ್ತಮಪೂರುಷಃ ।
ಅನೃತೇ ಚೇತ್ ಪ್ರಸಂಗಸ್ತೇ ಶ್ರದ್ದಧಾಸಿ ನ ಚೇತ್ ಸ್ವಯಮ್ ॥೩೬॥

ಯಾವನು ಕಾಮದಿಂದಲಾಗಲೀ, ಕ್ರೋಧದಿಂದಾಗಲೀ ದ್ರೋಹದಿಂದಾಗಲೀ ಶತ್ರುವನ್ನು ಅಥವಾ ಮಿತ್ರರನ್ನು ಮೀರಿ ನಡೆಯುವುದಿಲ್ಲವೋ ಅವನೇ ಉತ್ತಮ ಪುರುಷನೆನಿಸುತ್ತಾನೆ.

ಆತ್ಮಾನಮವಗಚ್ಛಾಶು ತಾದೃಶೇನಾಸ್ತಿ ಸಂಗತಮ್ ।
ಪುತ್ರತ್ವೇ ಶಂಕಮಾನಸ್ಯ ಬುದ್ಧಿರ್ಜ್ಞಾಪಕದೀಪಿಕಾ ॥೩೭॥

ನಿನಗೆ ಅನೃತದಲ್ಲೇ ಸ್ನೇಹವಿದ್ದು ನನ್ನ ಮಾತನ್ನು ನೀನಾಗಿಯೇ ನಂಬದಿದ್ದರೆ, ಸ್ವಾಮಿಯಾದ ನಾರಾಯಣನನ್ನು ಸ್ಮರಣೆ ಮಾಡು. ಸ್ವಾಮಿಯಾದ ನಾರಾಯಣನನ್ನು ಸ್ಮರಣೆ ಮಾಡಿದವರ ಬಳಿ ಅನೃತವು ಇರುವುದಿಲ್ಲ. ಮಗನು ಹೌದೋ ಅಲ್ಲವೋ ಎಂದು ಶಂಕೆ ಪಡುತ್ತಿರುವ ನಿನಗೆ, ನಿನ್ನ ಬುದ್ಧಿಯನ್ನು ಚುರುಕುಗೊಳಿಸಲು ಜ್ಞಾಪಕವನ್ನು ಹೇಳುತ್ತೇನೆ.

ಗತಿಃ ಸ್ವರಃ ಸ್ಮೃತಿಃ ಸತ್ವಂ ಶೀಲವಿಜ್ಞಾನವಿಕ್ರಮಾಃ ।
ಧೃಷ್ಣುಃ ಪ್ರಕೃತಿಭಾವೌ ಚ ಆವರ್ತಾ ರೋಮಜಾತಯಃ ॥೩೮॥

ಸಮಾ ಯಸ್ಯ ಯತಃ ಸ್ಯುಸ್ತೇ ತಸ್ಯ ಪುತ್ರೋ ನ ಸಂಶಯಃ ।
ಸಾದೃಶ್ಯೇನೋದ್ಗತಂ ಬಿಂಬಂ ತವ ದೇಹಾದ್ ವಿಶಾಂಪತೇ ॥೩೯॥

ನಡಿಗೆ, ಸ್ವರ, ಸ್ಮೃತಿ, ಸತ್ವ(ಬಲ), ಶೀಲ, ವಿಜ್ಞಾನ, ವಿಕ್ರಮ, ಧೈರ್ಯ, ಪ್ರಕೃತಿ ಭಾವ, ಸುಳಿಗಳು ಮತ್ತು ರೋಮ ಸಮೂಹಗಳು ಯಾರಿಗೆ ಯಾವನಂತೆ ಇರುತ್ತವೆಯೋ, ಅವನನ್ನು ಅವನ ಪುತ್ರನೆಂದು ತಿಳಿಯಬೇಕು. ರಾಜನೇ, ಇವನು ನಿನ್ನ ದೇಹದಿಂದ ಹೊರಬಂದ, ನಿನ್ನದೇ ಒಂದು ಬಿಂಬವೆಂದು ತಿಳಿ.

ತ್ರಾತೇತಿ ಭಾಷಮಾಣಂ ವೈ ಮಾ ಸ್ಮ ರಾಜನ್ ವೃಥಾ ಕೃಥಾಃ ।
ಋತೇऽಪಿಗರ್ದಭೀಕ್ಷೀರಾತ್ ಪಯಃ ಪಾಸ್ಯತಿ ಮೇ ಸುತಃ ॥೪೦॥

ಋತೇಪಿ ತ್ವಾಂ ತು ದುಷ್ಷಂತ ಶೈಲರಾಜಾವತಂಸಿಕಾಮ್ ।
ಚತುರಂತಾಮಿಮಾಮುರ್ವೀಂ ಪುತ್ರೋ ಮೇ ಪಾಲಯಿಷ್ಯತಿ ॥೪೧॥

ನನ್ನನ್ನು ರಕ್ಷಿಸು ಎಂದು ಮಾತನಾಡುವ ಮಗನನ್ನು ನೀನು ದೂರ ಮಾಡಬೇಡ. ರಾಜನೇ, ಗರ್ಭಭಿಯ ಕ್ಷೀರವಿಲ್ಲದಿದ್ದರೂ ನನ್ನ ಮಗನು ಹಾಲನ್ನು ಕುಡಿಯುತ್ತಾನೆ. ನಿನ್ನ ಅನುಗ್ರಹವಿಲ್ಲದಿದ್ದರೂ, ಶೈಲರಾಜಗಳಿಂದ ಕೂಡಿದ ಸಮುದ್ರಾಂತವಾದ ಭೂಮಿಯನ್ನು ನನ್ನ ಮಗನು ಆಳುತ್ತಾನೆ.

ಶಕುಂತಲೇ ತವ ಸುತಶ್ಚಕ್ರವರ್ತೀ ಭವಿಷ್ಯತಿ ।
ಏವಮುಕ್ತೋ ಮಹೇಂದ್ರೇಣ ಭವಿಷ್ಯತಿ ನ ಚಾನ್ಯಥಾ ॥೪೨॥

ಶಕುಂತಲೇ, ನಿನ್ನ ಮಗನು ಚಕ್ರವರ್ತಿಯಾಗುವನು ಎಂದು ಹೇಳಿದ ಮಹೇಂದ್ರನ ಮಾತು ಎಂದೂ ವ್ಯತ್ಯಾಸವಾಗುವುದಿಲ್ಲ.

ಸಾಕ್ಷಿತ್ವೇ ಬಹವೋಽಪ್ಯುಕ್ತಾ ದೇವದೂತಾದಯೋ ಮತಾಃ ।
ನ ಬ್ರುವಂತಿ ಯಥಾ ಸತ್ಯಮುತಾಹೋ ತ್ವನೃತಂ ಕಿಲ ।
ಅಸಾಕ್ಷಿಣೋ ಮಂದಭಾಗ್ಯಾ ಗಮಿಷ್ಯಾಮಿ ಯಥಾಗತಮ್ ॥೪೩॥

ದೇವದೂತ ಮೊದಲಾದ ಅನೇಕರು ಎಲ್ಲಾ ಕರ್ಮಗಳಿಗೂ ಸಾಕ್ಷಿಗಳು ಎಂದು ಹೇಳುತ್ತಾರೆ. ಆದರೆ, ನಾನು ಹೇಳುತ್ತಿರುವುದು ಸತ್ಯವೋ ಅಥವಾ ಅನೃತವೋ ಎಂದು ಯಾರೂ ಹೇಳುತ್ತಿಲ್ಲ. ಸಾಕ್ಷಿಯಿಲ್ಲದ ಮಂದಭಾಗ್ಯಳಾದ ನಾನು ಬಂದ ದಾರಿಯಲ್ಲಿಯೇ ಹಿಂದೆ ಹೋಗುವೆನು.

ವೈಶಂಪಾಯನಃ

ಏತಾವದುಕ್ತ್ವಾ ವಚನಂ ಪ್ರಾತಿಷ್ಠತ ಶಕುಂತಲಾ ।
ತಸ್ಯಾಃ ಕ್ರೋಧಸಮುತ್ಥೋಽಗ್ನಿಃ ಸಧೂಮೋ ಮೂರ್ಧ್ನ್ಯದೃಶ್ಯತ ॥೪೪॥

ಇಷ್ಟು ಮಾತುಗಳನ್ನು ಹೇಳಿ ಶಕುಂತಲೆಯು ಹೊರಟಳು. ಅವಳ ಶಿರಸ್ಸಿನಿಂದ ಧೂಮಸಹಿತವಾದ ಕ್ರೋಧಾಗ್ನಿಯು ಎದ್ದಿತು.

ತಂ ನಿಯಮ್ಯಾತ್ಮನೋಽಂಗೇಷು ತತಃ ಕ್ರೋಧಾಗ್ನಿಮಾತ್ಮಜಮ್ ।
ಪ್ರಸ್ಥಿತೈವಾನವದ್ಯಾಂಗೀ ಸಹ ಪುತ್ರೇಣ ವೈ ವನಮ್ ॥೪೫॥

ತನ್ನ ಶರೀರದಲ್ಲಿ ಹುಟ್ಟಿದ ಕ್ರೋಧಾಗ್ನಿಯನ್ನು ತನ್ನ ಶರೀರದಲ್ಲೇ ನಿಯಂತ್ರಿಸಿ ನಿರ್ದುಷ್ಟಳಾದ ಶಕುಂತಲೆಯು ಪುತ್ರನ ಜೊತೆಯಲ್ಲಿ ಪುನಃ ಕಾಡಿಗೆ ಹೊರಟೇ ಬಿಟ್ಟಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ದ್ವಿನವತಿತಮೋऽಧ್ಯಾಯಃ ॥

॥ ಸಂಭವಪರ್ವಣಿ ಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ತೊಂಭತ್ತೆರಡನೆಯ ಅಧ್ಯಾಯ ಮುಗಿಯಿತು

★★★★★

ತೊಂಭತ್ಮೂರನೆಯ ಅಧ್ಯಾಯ

(ಅಶರೀರವಾಣಿ. ದುಷ್ಷಂತನಿಂದ ಪತ್ನೀಪುತ್ರರ ಸ್ವೀಕಾರ, ಭರತನ ರಾಜ್ಯಾಭಿಷೇಕ ಮತ್ತು ಅವನ ಚರಿತೆ.)

ವೈಶಂಪಾಯನಃ

ಅಥಾಂತರಿಕ್ಷೇ ದುಷ್ಷಂತಂ ವಾಗುವಾಚಾಶರೀರಿಣೀ ।
ಋತ್ವಿಕ್ಪುರೋಹಿತಾಚಾರ್ಯೈರ್ಮಂತ್ರಿಭಿಶ್ಚಾಭಿಸಂವೃತಮ್ ॥೧॥

ಅನಂತರ ಋತ್ವಿಜರು, ಪುರೋಹಿತರು, ಆಚಾರ್ಯರು ಮತ್ತು ಮಂತ್ರಿಗಳಿಂದ ಕೂಡಿದ್ದ ದುಷ್ಷಂತನನ್ನು ಕುರಿತು ಅಂತರಿಕ್ಷದಲ್ಲಿ ಅಶರೀರವಾಣಿಯು ಹೇಳಿತು.

ಮಾತಾ ಭಸ್ತ್ರಾಪಿತುಃ ಪುತ್ರೋ ಯಸ್ಯಾಜ್ಜಾತಃ ಸ ಏವ ಸಃ ।
ಭರಸ್ವ ಪುತ್ರಂ ದುಷ್ಷಂತ ಸತ್ಯಮಾಹ ಶಕುಂತಲಾ ॥೨॥

ತಾಯಿಯು ತಿದಿ. ಪುತ್ರನು ತಂದೆಗೆ ಸೇರಿದವನು. ಯಾವನಿಂದ ಹುಟ್ಟುವನೋ, ಅಂತಹ ತಂದೆಯೇ ಪುತ್ರರೂಪವನ್ನು ತಾಳುತ್ತಾನೆ. ದುಷ್ಷಂತನೇ, ನಿನ್ನ ಮಗನನ್ನು ಸ್ವೀಕರಿಸಿ ಪೋಷಿಸು. ಶಕುಂತಲೆಯು ಸತ್ಯವನ್ನು ಹೇಳುತ್ತಿದ್ದಾಳೆ.

ಸರ್ವೇಭ್ಯೋ ಹ್ಯಂಗಮಂಗೇಭ್ಯಃ ಸಾಕ್ಷಾದುತ್ಪದ್ಯತೇ ಸುತಃ ।
ಆತ್ಮಾ ವೈ ಪುತ್ರನಾಮಾಸಿ ತದ್ವೈ ತವ ಪೌರವ ॥೩॥

ತಂದೆಯ ಒಂದೊಂದು ಅಂಗದಿಂದಲೂ ತನ್ನ ಅಂಗವನ್ನು ಪಡೆದು ಪುತ್ರನು ಜನಿಸುತ್ತಾನೆ. ಆದ್ದರಿಂದ ಪುತ್ರನನ್ನು ಆತ್ಮನೇ (ತಾನೇ) ಎಂದು ಕರೆಯುತ್ತಾರೆ. ಹಾಗೆಯೇ ಎಲ್ಲೆ ಪೌರವನೇ ಇವನು ನಿನ್ನ ಪುತ್ರ.

ಆಹಿತಂ ಹ್ಯಾತ್ಮನಾऽऽತ್ಮಾನಂ ಪರಿರಕ್ಷ ಸ್ವಮಾತ್ಮಜಮ್ ।
ಅನನ್ಯಾಂ ಸ್ವಾಂ ಪ್ರತೀಕ್ಷಸ್ವ ಮಾವಮಂಸ್ಥಾಃ ಶಕುಂತಲಾಮ್ ॥೪॥

ನೀನೇ ಆಧಾನ ಮಾಡಿದ ನಿನ್ನ ಮಗನನ್ನು ರಕ್ಷಿಸು. ಅನನ್ಯಗತಿಯಾದ ನಿನ್ನವಳೇ ಆದ ಶಕುಂತಲೆಯನ್ನು ಅಂಗೀಕರಿಸು. ಅವಳಿಗೆ ಅವಮಾನವನ್ನು ಮಾಡಬೇಡ.

ಸ್ತ್ರಿಯಃ ಪವಿತ್ರಮತುಲಮೇತದ್ದುಷ್ಷಂತ ಧರ್ಮತಃ ।
ಮಾಸಿ ಮಾಸಿ ರಜೋ ಹ್ಯಾಸಾಂ ದುಷ್ಕೃತಾನ್ಯಪಕರ್ಷತಿ ।
ತತಃ ಸರ್ವಾಣಿ ಭೂತಾನಿ ವ್ಯಾಜಹ್ರುಸ್ತಂ ಸಮಂತತಃ ॥೫॥

ದುಷ್ಷಂತನೇ, ಸ್ತ್ರೀಯರು ಧಾರ್ಮಿಕವಾಗಿ ಪೂರ್ಣರಾಗಿ ಪವಿತ್ರರಾಗಿರುತ್ತಾರೆ. ಪ್ರತಿತಿಂಗಳೂ ಉಂಟಾಗುವ ರಜಸ್ಸು ಅವರ ಪಾಪವನ್ನು ಪರಿಹಾರ ಮಾಡುತ್ತದೆ. ಅನಂತರದಲ್ಲಿ (ಅಶರೀರವಾಣಿಯು ಮುಗಿದ ಮೇಲೆ) ಎಲ್ಲಾ ಕಡೆಗಳಿಂದಲೂ, ಎಲ್ಲಾ ದೇವತೆಗಳೂ ಹೇಳಿದರು.

ದೇವಾಃ

ಆಹಿತಃ ಸ್ವತನೋರೇಷ ಮಾವಮಂಸ್ಥಾಃ ಶಕುಂತಲಾಮ್ ।
ರೇತೋಧಾಃ ಪುತ್ರಂ ನಯತಿ ನರದೇವ ಯಮಕ್ಷಯಮ್ ॥೬॥

ನೀನು ನಿನ್ನ ದೇಹದಿಂದಲೇ ಶಕುಂತಲೆಯ ದೇಹದಲ್ಲಿ ಇವನನ್ನು ಆಧಾನ ಮಾಡಿದ್ದೀಯೆ. ಶಕುಂತಲೆಗೆ ಅವಮಾನ ಮಾಡಬೇಡ. ರಾಜನೇ, ಮಗನು ರೇತಸ್ಸನ್ನು ಆಧಾನ ಮಾಡಿದ ತನ್ನ ತಂದೆಗೆ ಅಕ್ಷಯ ಲೋಕಗಳನ್ನು ಸಂಪಾದಿಸಿಕೊಡುತ್ತಾನೆ.

ತ್ವಂ ಚಾಸ್ಯ ಧಾತಾ ಗರ್ಭಸ್ಯ ಸತ್ಯಮಾಹ ಶಕುಂತಲಾ ।
ಪತಿರ್ಜಾಯಾಂ ಪ್ರವಿಶತಿ ಸ ತಸ್ಯಾಂ ಜಾಯತೇ ಪುನಃ ॥೭॥

ಅನ್ಯೋನ್ಯಪ್ರಕೃತಿರ್ಹ್ಯೇಷ ಮಾವಮಂಸ್ಥಾಃ ಶಕುಂತಲಾಮ್ ।
ಜಾಯಾ ಜನಯತೇ ಪುತ್ರಮಾತ್ಮನೋऽಂಗಾದ್ ದ್ವಿಧಾ ಕೃತಮ್ ॥೮॥

ಈ ಗರ್ಭಾಧಾನವನ್ನು ಮಾಡಿದವನು ನೀನು. ಶಕುಂತಲೆಯು ಸತ್ಯವನ್ನು ಹೇಳುತ್ತಿದ್ದಾಳೆ. ಪತಿಯು ಜಾಯೆಯನ್ನು ಪ್ರವೇಶಿಸಿ ತಾನೇ ಅವಳಲ್ಲಿ ಪುನಃ ಜನಿಸುತ್ತಾನೆ. ಇದು ಪತಿ ಪತ್ನಿಯರ ಸ್ವಭಾವ. ಶಕುಂತಲೆಯನ್ನು ಅವಮಾನಿಸಬೇಡ. ಪತ್ನಿಯಾದವಳು ತನ್ನ ಶರೀರದಿಂದ ವೀರ್ಯಾಧಾನ ಮಾಡಿದವನ ಅಂಗಗಳನ್ನೇ ಎರಡನೆಯ ರೀತಿ ಪ್ರಸವಿಸುತ್ತಾಳೆ.

ತಸ್ಮಾದ್ ಭರಸ್ವ ದುಷ್ಪಂತ ಪುತ್ರಂ ಶಾಕುಂತಲಂ ನೃಪ ।
ಅಭೂತಿರೇಷಾ ನ ತ್ಯಜೇತ್ ಜೀವಂ ಜೀವಂತಮಾತ್ಮಜಮ್ ॥೯॥

ಶಾಕುಂತಲಂ ಮಹಾತ್ಮಾನಂ ದುಷ್ಪಂತ ಭರ ಪೌರವ ।
ಭರ್ತವ್ಯೋಽಯಂ ತ್ವಯಾ ಯಸ್ಮಾದಸ್ಮಾಕಂ ವಚನಾದಪಿ ॥೧೦॥

ಆದ್ದರಿಂದ ದುಷ್ಪಂತರಾಜನೇ, ಶಕುಂತಲೆಯ ಮಗನನ್ನು ಭರಿಸು. ಮಗನನ್ನು ಬಿಡುವುದು ಅಮಂಗಳವಾದುದು. ತನ್ನ ಜೀವದಂತಿರುವ ಬದುಕಿರುವ ಮಗನನ್ನು ಎಂದೂ ಪರಿತ್ಯಾಗ ಮಾಡಬಾರದು. ಆದ್ದರಿಂದ ಪೌರವನಾದ ದುಷ್ಪಂತನೇ, ಮಹಾತ್ಮನಾದ ಶಾಕುಂತಲನನ್ನು (ಸರ್ವದಮನ) ಪೋಷಿಸು. ನಮ್ಮ ಮಾತಿನಿಂದಲೂ ಕೂಡ ನೀನು ಅವನನ್ನು ಪೋಷಿಸಬೇಕು.

ತಸ್ಮಾದ್ ಭವತ್ವಯಂ ನಾಮ್ನಾ ಭರತೋ ನಾಮ ತೇ ಸುತಃ ।
ಭರತಾದ್ ಭಾರತೀ ಕೀರ್ತಿರ್ಯೇನೇದಂ ಭಾರತಂ ಕುಲಮ್ ॥೧೧॥

ಆದ್ದರಿಂದ ಈ ನಿನ್ನ ಮಗನಿಗೆ ಭರತನೆಂದೇ ಹೆಸರಾಗಲಿ. ಭಾರತವಂಶದ ಕೀರ್ತಿಯು ಇವನಿಂದ ವಿಸ್ತಾರಗೊಳ್ಳುತ್ತದೆ.

ಅಪರೇ ಯೇ ಚ ಪೂರ್ವೇ ಚ ಭಾರತಾ ಇತಿ ತೇ ಸ್ಮೃತಾಃ ।
ಏವಮುಕ್ತ್ವಾ ತತೋ ದೇವಾ ಋಷಯಶ್ಚ ತಪೋಧನಾಃ ।
ಪತಿವ್ರತೇತಿ ಸಂಹೃಷ್ಟಾಃ ಪುಷ್ಪವರ್ಷಂ ವವರ್ಷಿರೇ ॥೧೨॥

ಇವನ ಹಿಂದಿನವರು ಮತ್ತು ಮುಂದಿನವರೆಲ್ಲರೂ ಇಂದಿನಿಂದ ಭಾರತರೆಂದು ಕರೆಸಿಕೊಳ್ಳುತ್ತಾರೆ. ಹೀಗೆ ಹೇಳಿ ದೇವತೆಗಳು ಮತ್ತು ತಪೋಧನರಾದ ಋಷಿಗಳು ಶಕುಂತಲೆಯನ್ನು ಪತಿವ್ರತೆ ಎಂದು ಕರೆದು ಅವಳ ಮೇಲೆ ಪುಷ್ಪವೃಷ್ಟಿಯನ್ನು ಮಾಡಿದರು.

ತಚ್ಛ್ರುತ್ವಾ ಪೌರವೋ ವಾಕ್ಯಂ ವ್ಯಾಹೃತಂ ವೈ ದಿವೌಕಸಾಮ್ ।
ಸಿಂಹಾಸನಾತ್ ಸಮುತ್ಥಾಯ ಪ್ರಣಮ್ಯ ಚ ದಿವೌಕಸಃ ।
ಪುರೋಹಿತಮಮಾತ್ಯಾಂಶ್ಚ ಸಂಪ್ರಹೃಷ್ಟೋಽಬ್ರವೀದಿದಮ್ ॥೧೩॥

ದೇವತೆಗಳ ಆ ಮಾತನ್ನು ಕೇಳಿ ಪೌರವನು ಸಿಂಹಾಸನದಿಂದ ಎದ್ದು ದೇವತೆಗಳಿಗೂ ಮತ್ತು ಪುರೋಹಿತರಿಗೂ ಮತ್ತು ಅಮಾತ್ಯರಿಗೂ ನಮಸ್ಕರಿಸಿ ಸಂತೋಷದಿಂದ ಹೀಗೆ ಮಾತನಾಡಿದನು.

ಶೃಣ್ವಂತ್ವೇತದ್ ಭವಂತೋಽದ್ಯ ದೇವದೂತಸ್ಯ ಭಾಷಿತಮ್ ।
ಶೃಣ್ವಂತು ದೇವತಾನಾಂ ಚ ಮಹರ್ಷೀಣಾಂ ಚ ಭಾಷಿತಮ್ ॥೧೪॥

ನೀವೆಲ್ಲರೂ ದೇವದೂತನ ಅಶರೀರವಾಣಿಯನ್ನೂ ಮತ್ತು ದೇವತೆಗಳ ಮತ್ತು ಋಷಿಗಳ ಮಾತನ್ನೂ ಕೇಳಿ ಸ್ವೀಕರಿಸಬೇಕು.

ಅಹಮಪ್ಯೇವಮೇವೈನಂ ಜಾನಾಮಿ ಸುತಮಾತ್ಮಜಮ್ ।
ಯದಸ್ಯ ವಚನಾದೇವ ಗೃಹ್ಣೀಯಾಮಿಮಮಾತ್ಮಜಮ್ ।
ಭವೇದ್ಧಿ ಶಂಕಾ ಲೋಕಸ್ಯ ನೈವಂ ಶುದ್ಧೋ ಭವೇದಯಮ್ ॥೧೫॥

ನಾನೂ ಈ ವಿಷಯವನ್ನು ಹೀಗೆಯೇ ತಿಳಿದು ಸರ್ವದಮನನನ್ನು ನನ್ನ ಮಗನೆಂದೇ ತಿಳಿದಿದ್ದೇನೆ. ಆದರೆ ಕೇವಲ ಇವಳ ಮಾತಿನಿಂದ ನಾನು ಇವನನ್ನು ಮಗನೆಂದು ಸ್ವೀಕರಿಸಿದರೆ ಪ್ರಜೆಗಳಿಗೆ ಸಂಶಯವುಂಟಾಗುತ್ತದೆ. ಹಾಗೆ ಮಾಡಿದರೆ ಸರ್ವದಮನನು ಶುದ್ಧನಾಗುವುದಿಲ್ಲ.

ವೈಶಂಪಾಯನಃ

ತಂ ವಿಶೋಧ್ಯ ಮಹಾರಾಜಾ ದೈವತೈಃ ಸಮಹರ್ಷಿಭಿಃ ।
ಹೃಷ್ಟಃ ಪ್ರಮುದಿತಶ್ಚಾಪಿ ಪ್ರತಿಜಗ್ರಾಹ ತಂ ಸುತಮ್ ॥೧೬॥

ಮಹಾರಾಜನಾದ ದುಷ್ಮಂತನು ಸರ್ವದಮನನನ್ನು ದೇವತೆಗಳ ಮಾತಿನಿಂದಲೂ ಮತ್ತು ಮಹರ್ಷಿಗಳ ಮಾತಿನಿಂದಲೂ ಪವಿತ್ರನನ್ನಾಗಿ ಮಾಡಿ ಸಂತೋಷದಿಂದ ಆ ಪುತ್ರನನ್ನು ಸ್ವೀಕರಿಸಿದನು.

ಮೂರ್ಧ್ನಿ ಚೈನಂ ಸಮಾಘ್ರಾಯ ಸಸ್ನೇಹಂ ಪರಿಷಸ್ವಜೇ ।
ಸಭಾಜ್ಯಮಾನೋ ವಿಪ್ರೈಶ್ಚ ಸ್ತೂಯಮಾನಶ್ಚ ಬಂದಿಭಿಃ ॥೧೭॥

ಮುದಂ ಸ ಪರಮಾಂ ಲೇಭೇ ಪುತ್ರಸ್ಪರ್ಶನಜಾಂ ನೃಪಃ ।
ತಾಂ ಚೈವ ಭಾರ್ಯಾಂ ಧರ್ಮಜ್ಞಃ ಪೂಜಯಾಮಾಸ ಧರ್ಮತಃ॥೧೮॥

ಅವನನ್ನು ಪ್ರೀತಿಯಿಂದ ಆಲಿಂಗಿಸಿ ಶಿರಸ್ಸಿನಲ್ಲಿ ಆಘ್ರಾಣಿಸಿದನು. ಬ್ರಾಹ್ಮಣರಿಂದಲೂ ಮತ್ತು ವಂದಿಗಳಿಂದಲೂ ಸ್ತೋತ್ರವನ್ನು ಮಾಡಲ್ಪಟ್ಟು ಮತ್ತು ಅರ್ಚಿಸಲ್ಪಟ್ಟು ಆ ರಾಜನು ಪುತ್ರಸ್ಪರ್ಶದ ಪರಮಸುಖವನ್ನು ಪಡೆದನು. ಧರ್ಮವನ್ನು ತಿಳಿದ ಆ ರಾಜನು ಆ ಪತ್ನಿಯನ್ನೂ ಧರ್ಮಮಾರ್ಗದಿಂದಲೇ ಪೂಜಿಸಿದನು.

ಅಬ್ರವೀಚ್ಚೈವ ತಾಂ ರಾಜಾ ಸಾಂತ್ವಪೂರ್ವಮಿದಂ ವಚಃ ।
ಲೋಕಸ್ಯಾಯಂ ಪರೋಕ್ಷಸ್ತು ಸಂಬಂಧೋ ನೌ ಪುರಾಭವತ್ ॥೧೯॥

ಕೃತೋ ಲೋಕಸಮಕ್ಷೋಽದ್ಯ ಸಂಬಂಧೋ ವೈ ಪುರಾ ಕೃತಃ ।
ತಸ್ಮಾದೇತನ್ಮಯಾ ತ್ವದ್ಯ ತನ್ನಿಮಿತ್ತಂ ಪ್ರಭಾಷಿತಮ್ ॥೨೦॥

ರಾಜನು ಅವಳನ್ನು ಕುರಿತು ಸಮಾಧಾನಕರವಾದ ಮೃದುಮಾತುಗಳಿಂದ ಹೀಗೆ ಹೇಳಿದನು. ನಮ್ಮಿಬ್ಬರಿಗೆ ಹಿಂದೆ ಉಂಟಾದ ಈ ಸಂಬಂಧವು ಯಾರಿಗೂ ತಿಳಿಯದೇ ಪರೋಕ್ಷವಾಗಿತ್ತು . ಹಿಂದೆ ಮಾಡಿದ ಆ ಸಂಬಂಧವನ್ನು ಈಗ ಎಲ್ಲಾ ಜನರ ಎದುರಿಗೆ ಪ್ರತ್ಯಕ್ಷವಾಗಿ ನವೀಕರಿಸಿದ್ದೇನೆ.

ಶಂಕೇತ ವಾಽಥ ಲೋಕೋಽಯಂ ಸ್ತ್ರೀಭಾವಾನ್ಮಯಿ ಸಂಗತಾಮ್।
ತಸ್ಮಾದೇತನ್ಮಯಾ ದೇವಿ ತಚ್ಛುದ್ಧ್ಯರ್ಥಂ ವಿಚಾರಿತಮ್ ॥೨೧॥

ಆದ್ದರಿಂದ ಈ ದಿನ ನಾನು ಆ ಕಾರಣದಿಂದ ಒರಟಾಗಿ ಮಾತನಾಡಿದೆ. ಇಲ್ಲದಿದ್ದರೆ ಲೋಕದ ಜನರು ಸ್ತ್ರೀಭಾವದಿಂದ ನನಗೆ ಗಂಟುಬಿದ್ದವಳು ಎಂದು ಶಂಕಿಸಿಯಾರು. ದೇವಿಯೇ, ನಿನ್ನನ್ನು ಶುದ್ಧಿಮಾಡುವುದಕ್ಕಾಗಿ ನಾನು ಹೀಗೆ ವಿಚಾರ ಮಾಡಿದೆ.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚೈವ ಪೃಥಗ್ವಿಧಾಃ ।
ತ್ವಾಂ ದೇವಿ ಪೂಜಯಿಷ್ಯಂತಿ ನಿರ್ವಿಶಂಕಂ ಪತಿವ್ರತಾಮ್ ॥೨೨॥

ದೇವಿಯೇ, ನಿಸ್ಸಂಶಯವಾಗಿ ಪತಿವ್ರತೆಯಾದ ನಿನ್ನನ್ನು ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಮತ್ತು ಬೇರೆ ಜನರು ಪೂಜಿಸುತ್ತಾರೆ. ನಿನ್ನ ಈ ಮಗನನ್ನು ಯುವರಾಜನಾಗಿ ಸ್ವೀಕರಿಸಿದ್ದೇನೆ. ನೀನು ನನ್ನ ಅಗ್ರಮಹಿಷಿ.

ಪುತ್ರಶ್ಚಾಯಂ ವೃತೋ ರಾಜ್ಯೇ ತ್ವಮಗ್ರಮಹಿಷೀ ಮಮ ।
ಯಚ್ಚ ಕೋಪಿತಯಾऽತ್ಯರ್ಥಂ ತ್ವಯೋಕ್ತೋऽಸ್ಮ್ಯಪ್ರಿಯಂ ಪ್ರಿಯೇ ।
ಪ್ರಣಯಿನ್ಯಾ ವಿಶಾಲಾಕ್ಷಿ ತತ್ ಕ್ಷಂತವ್ಯಂ ಮಯಾ ಶುಭೇ ॥೨೩॥

ವಿಶಾಲಾಕ್ಷಿಯಾದ ಪ್ರಿಯೆಯೇ, ನಾನು ನಿನ್ನನ್ನು ಕೋಪಗೊಳಿಸಿದಾಗ ಪ್ರೀತಿಯುಳ್ಳ ನೀನು ಆಡಿದ ಅಪ್ರಿಯವಾದ ಮಾತುಗಳನ್ನು ನಾನು ಕ್ಷಮಿಸಲೇಬೇಕು.

ಅನೃತಂ ವಾಪ್ಯನಿಷ್ಟಂ ವಾ ದುರುಕ್ತಂ ವಾಪಿ ದುಷ್ಕೃತಮ್ ।
ತ್ವಯಾಪ್ಯೇವಂ ವಿಶಾಲಾಕ್ಷಿ ಕ್ಷಂತವ್ಯಂ ಮಮ ದುರ್ವಚಃ ।
ಕ್ಷಮ್ಯಾಃ ಪತಿಕೃತೇಃ ನಾರ್ಯಃ ಪಾತಿವ್ರತ್ಯಂ ವ್ರಜಂತಿ ತಾಃ ॥೨೪॥

ಹಾಗೆಯೇ, ವಿಶಾಲಾಕ್ಷಿಯೇ ನಾನು ಹೇಳಿದ ಅನೃತವಾಗಲೀ, ಅನಿಷ್ಟ ವಚನಗಳಾಗಲೀ, ದುರ್ವಚನಗಳಾಗಲೀ ಅಥವಾ ಪಾಪವಚನಗಳಾಗಲೀ ಏನಿದ್ದರೂ ನೀನೂ ಅವನ್ನು ಕ್ಷಮಿಸಬೇಕು. ಪತಿಯ ಸಲುವಾಗಿ ಕ್ಷಮಿಸುವ ನಾರಿಯರು ಪಾತಿವ್ರತ್ಯವನ್ನು ಮೆರೆಸುತ್ತಾರೆ.

ವೈಶಂಪಾಯನಃ

ತಾಮೇವಮುಕ್ತ್ವಾ ರಾಜರ್ಷಿಸ್ತಾಮನಿಂದಿತಗಾಮಿನೀಮ್ ।
ಅಂತಃಪುರಂ ಪ್ರವೇಶ್ಯೈವ ದುಷ್ಪಂತೋ ಮಹಿಷೀಂ ಪ್ರಿಯಾಮ್ ॥೨೫॥

ವಾಸೋಭಿರನ್ನಪಾನೈಶ್ಚ ಪೂಜಯಿತ್ವಾ ತು ಭಾರತ ।
ಸ ಮಾತರಮುಪಸ್ಥಾಯ ರಥಂತರ್ಯಾಮುವಾಚ ಹ ॥೨೬॥

ಅನಿಂದಿತಗಾಮಿನಿಯಾದ ಅವಳಿಗೆ ಹೀಗೆ ಹೇಳಿ ದುಷ್ಪಂತನು ಅವಳನ್ನು ಅಂತಃಪುರಕ್ಕೆ ಕರೆದುಕೊಂಡು ಹೋಗಿ, ತನ್ನ ಪ್ರಿಯಳಾದ ಮಹಿಷಿಯನ್ನು ಅನ್ನಪಾನಗಳಿಂದಲೂ, ವಸ್ತ್ರಾಲಂಕಾರಗಳಿಂದಲೂ ಸತ್ಕರಿಸಿದನು. ಅನಂತರ ತನ್ನ ತಾಯಿಯಾದ ರಥಂತರ್ಯೆಯನ್ನು ಸಮೀಪಿಸಿ ಮಾತನಾಡಿದನು.

ಮಮ ಪುತ್ರೋ ವನೇ ಜಾತಸ್ತವ ಶೋಕಪ್ರಣಾಶನಃ ।
ಋಣಾದದ್ಯ ವಿಮುಕ್ತೋಽಹಮಸ್ಮಿ ಪೌತ್ರೇಣ ತೇ ಶುಭೇ ॥೨೭॥

ನಿನ್ನ ಶೋಕವನ್ನು ನಾಶಮಾಡುವ ನನ್ನ ಈ ಪುತ್ರನು ಕಾಡಿನಲ್ಲಿ ಜನಿಸಿದನು. ಶುಭಳಾದವಳೇ, ನಾನು ಈ ದಿನ ನಿನ್ನ ಪೌತ್ರನ ಕಾರಣದಿಂದ ಪಿತೃಋಣದಿಂದ ಮುಕ್ತನಾಗಿದ್ದೇನೆ.

ವಿಶ್ವಾಮಿತ್ರಸುತಾ ಚೇಯಂ ಕಣ್ವೇನ ಚ ವಿವರ್ಧಿತಾ ।
ಸ್ನುಷಾ ತವ ಮಹಾಭಾಗೇ ಪ್ರಸೀದಸ್ವ ಶಕುಂತಲಾಮ್ ॥೨೮॥

ಇವಳು ವಿಶ್ವಾಮಿತ್ರರ ಮಗಳು. ಕಣ್ವರು ಬೆಳೆಸಿದ್ದಾರೆ. ಮಹಾನುಭಾವಳೇ, ಇವಳು ನಿನ್ನ ಸೊಸೆ. ಈ ಶಕುಂತಲೆಯನ್ನು ಅನುಗ್ರಹಿಸು.

ಪುತ್ರಸ್ಯ ವಚನಂ ಶ್ರುತ್ವಾ ಪೌತ್ರಂ ಸಾ ಪರಿಷಸ್ವಜೇ ।
ಪಾದಯೋಃ ಪತಿತಾಂ ತತ್ರ ರಥಂತರ್ಯಾ ಶಕುಂತಲಾಮ್ ॥೨೯॥

ಪರಿಷ್ವಜ್ಯ ಚ ಬಾಹುಭ್ಯಾಂ ಹರ್ಷಾದಶ್ರೂಣ್ಯವರ್ತಯತ್ ।
ಉವಾಚ ವಚನಂ ಸತ್ಯಂ ಲಕ್ಷಯನ್ ಲಕ್ಷಣಾನಿ ಚ ॥೩೦॥

ಮಗನ ಮಾತನ್ನು ಕೇಳಿ ರಥಂತರ್ಯೆಯು ಪೌತ್ರನನ್ನು ಆಲಿಂಗಿಸಿದಳು. ಪಾದಗಳಲ್ಲಿ ಬಿದ್ದ ಶಕುಂತಲೆಯನ್ನು ಎತ್ತಿ ಬಾಹುಗಳಿಂದ ಆಲಿಂಗಿಸಿ ಆನಂದಾಶ್ರುಗಳನ್ನು ಸುರಿಸಿದಳು. ಅವರಿಬ್ಬರ ಲಕ್ಷಣಗಳನ್ನು ಗಮನಿಸಿ ಸತ್ಯವಾದ ವಚನವನ್ನು ಹೇಳಿದಳು.

ತವ ಪುತ್ರೋ ವಿಶಾಲಾಕ್ಷಿ ಚಕ್ರವರ್ತೀ ಭವಿಷ್ಯತಿ ।
ಭರ್ತಾ ತೇ ಚ ಮಹಾಭಾಗೋ ತ್ರೈಲೋಕ್ಯವಿಜಯೀ ಭವೇತ್ ॥೩೧॥

ವಿಶಾಲಾಕ್ಷಿಯೇ, ನಿನ್ನ ಮಗನು ಚಕ್ರವರ್ತಿಯಾಗುವನು. ಮಹಾನುಭಾವಳೇ, ನಿನ್ನ ಪತಿಯು ಮೂರುಲೋಕಗಳನ್ನೂ ಗೆಲ್ಲುವನು.

ದಿವ್ಯಾನ್ ಭೋಗಾನನುಪ್ರಾಪ್ತಾ ಭವೇಸ್ತ್ವಂ ವರವರ್ಣಿನಿ ।
ಏವಮುಕ್ತ್ವಾ ರಥಂತರ್ಯಾ ಪರಂ ಹರ್ಷಮವಾಪ ಸಾ ॥೩೨॥

ಸುಂದರಿಯೇ, ನೀನು ದಿವ್ಯವಾದ ಸುಖಗಳನ್ನು ಅನುಭವಿಸುವವಳಾಗು. ರಥಂತರ್ಯೆಯು ಹೀಗೆ ಹೇಳಿ ಸಂತೋಷವನ್ನು ಹೊಂದಿದಳು.

ಶಕುಂತಲಾಂ ತದಾ ರಾಜಾ ಶಾಸ್ತ್ರೋಕ್ತೇನೈವ ಕರ್ಮಣಾ ।
ತತೋಽಗ್ರಮಹಿಷೀಂ ಕೃತ್ವಾ ಸರ್ವಾಭರಣಭೂಷಿತಾಮ್ ॥೩೩॥

ಬ್ರಾಹ್ಮಣೇಭ್ಯೋ ಧನಂ ದತ್ತ್ವಾ ಸೈನಿಕಾನಾಂ ಚ ಭೂಮಿಪಃ ।
ದೌಷ್ಷಂತಿಂ ಚ ತತೋ ರಾಜಾ ಪುತ್ರಂ ಶಾಕುಂತಲಂ ತದಾ ।
ಭರತಂ ನಾಮತಃ ಕೃತ್ವಾ ಯೌವರಾಜ್ಯೇಽಭ್ಯಷೇಚಯತ್ ॥೩೪॥

ಆಗ ರಾಜನು ಶಕುಂತಲೆಯನ್ನು ಸರ್ವಾಭರಣಗಳಿಂದ ಅಲಂಕರಿಸಿ ಶಾಸ್ತ್ರೋಕ್ತವಿಧಾನದಿಂದ ಪಟ್ಟಮಹಿಷಿಯನ್ನಾಗಿ ಮಾಡಿಕೊಂಡನು. ಆ ರಾಜನು ಬ್ರಾಹ್ಮಣರಿಗೂ ಮತ್ತು ಸೈನಿಕರಿಗೂ ಬಹುಧನವನ್ನು ಕೊಟ್ಟು ಶಕುಂತಲೆಯ ಮತ್ತು ತನ್ನ ಮಗನಾದ ಸರ್ವದಮನನಿಗೆ 'ಭರತ' ಎಂದು ನಾಮಕರಣ ಮಾಡಿ ಯೌವರಾಜ್ಯದಲ್ಲಿ ಅಭಿಷೇಕ ಮಾಡಿದನು.

ಭರತೇ ಭಾರಮಾವೇಶ್ಯ ಕೃತಕೃತ್ಯೋಽಭವನ್ನೃಪಃ ।
ತತೋ ವರ್ಷಶತಂ ಪೂರ್ಣಂ ರಾಜ್ಯಂ ಕೃತ್ವಾ ನರಾಧಿಪಃ ।
ದತ್ತ್ವಾ ದಾನಾನಿ ದುಷ್ಷಂತಃ ಸ್ವರ್ಗಲೋಕಮುಪೇಯಿವಾನ್ ॥೩೫॥

ಭರತನಿಗೆ ರಾಜ್ಯಭಾರವನ್ನು ವಹಿಸಿ ರಾಜನು ಕೃತಕೃತ್ಯನಾದನು. ಅನಂತರ ನೂರು ವರ್ಷಗಳ ಕಾಲ ರಾಜ್ಯವನ್ನು ಆಳಿ ದುಷ್ಷಂತರಾಜನು ಅನೇಕ ದಾನಗಳನ್ನು ಕೊಟ್ಟು ಸ್ವರ್ಗವನ್ನು ಸೇರಿದನು.

ವೈಶಂಪಾಯನಃ

ದುಷ್ಷಂತಾದ್ ಭರತೋ ರಾಜ್ಯಂ ಯಥಾನ್ಯಾಯಮವಾಪ ಸಃ ।
ತಸ್ಯ ತತ್ಪ್ರಥಿತಂ ಚಕ್ರಂ ಪ್ರಾವರ್ತತ ಮಹಾತ್ಮನಃ ॥೩೬॥

ಭಾಸ್ವರಂ ದಿವ್ಯಮಜಿತಂ ಲೋಕಸನ್ನಾದನಂ ಮಹತ್ ।
ಸ ವಿಜಿತ್ಯ ಮಹೀಪಾಲಾಂಶ್ಚಕಾರ ವಶವರ್ತಿನಃ ॥೩೭॥

ಭರತನು ದುಷ್ಷಂತನಿಂದ ನ್ಯಾಯಪ್ರಾಪ್ತವಾದ ರಾಜ್ಯವನ್ನು ಪಡೆದನು. ನಾರಾಯಣನ ಪ್ರಕಾಶಿಸುವ ಅಜಿತವಾದ ಲೋಕವನ್ನೆಲ್ಲಾ ಘೋಷದಿಂದ ತುಂಬುವ ಶ್ರೇಷ್ಠವಾದ ದಿವ್ಯಸುದರ್ಶನಚಕ್ರವು ಅವನ ಸೈನ್ಯದಲ್ಲಿ ಪ್ರತಿಷ್ಠಿತವಾಗಿದ್ದಿತು. ಅದರಿಂದ ಅವನು ಎಲ್ಲಾ ರಾಜರನ್ನೂ ಗೆದ್ದು ವಶಪಡಿಸಿಕೊಂಡನು.

ಸ ಚಚಾರ ಸತಾಂ ಧರ್ಮಂ ಪ್ರಾಪ್ಯ ಚಾನುತ್ತಮಂ ಯಶಃ ।
ಸ ರಾಜಾ ಚಕ್ರವರ್ತ್ಯಾಸೀತ್ ಸಾರ್ವಭೌಮಃ ಪ್ರತಾಪವಾನ್ ॥೩೮॥

ಅವನು ಸಜ್ಜನರ ಧರ್ಮವನ್ನು ಅನುಸರಿಸಿ ಶ್ರೇಷ್ಠವಾದ ಕೀರ್ತಿಯನ್ನು ಪಡೆದನು. ಅವನು ಪ್ರತಾಪಶಾಲಿಯಾದ ಚಕ್ರವರ್ತಿ ಸಾರ್ವಭೌಮನಾದನು.

ಈಜೇ ಚ ಬಹುಭಿರ್ಯಜ್ಞೈರ್ಯಥಾ ಶಕ್ರೋ ಮರುತ್ಪತಿಃ ।
ಯಾಜಯಾಮಾಸ ತಂ ಕಣ್ವೋ ದಕ್ಷವದ್ ಭೂರಿದಕ್ಷಿಣಮ್ ॥೩೯॥

ಮರುತ್ಪತಿಯಾದ ಇಂದ್ರನಂತೆ ಅನೇಕ ಯಜ್ಞಗಳಿಂದ ಭಗವಂತನನ್ನು ಆರಾಧಿಸಿದನು. ದಕ್ಷಪ್ರಜಾಪತಿಯಂತೆ ಭೂರಿದಕ್ಷಿಣೆಯನ್ನು ಕೊಡುವ ಅವನಿಗೆ ಕಣ್ವರು ಪುರೋಹಿತರಾಗಿ ಯಾಗಗಳನ್ನು ಮಾಡಿಸಿದರು.

ಶ್ರೀಮಾನ್ ಗೋವಿತತಂ ನಾಮ ವಾಜಿಮೇಧಮವಾಪ ಸಃ ।
ಯಸ್ಮಿನ್ ಸಹಸ್ರಂ ಪದ್ಮಾನಾಂ ಕಣ್ವಾಯ ಭರತೋ ದದೌ ॥೪೦॥

ಸಂಪದ್ಯುಕ್ತನಾದ ಭರತನು ಭೂಮಿಯಲ್ಲಿ ಪ್ರಸಿದ್ಧವಾದ ಅಶ್ವಮೇಧ ಎಂಬ ಯಾಗವನ್ನು ಮಾಡಿದನು. ಆ ಕಾಲದಲ್ಲಿ ಕಣ್ವರಿಗೆ ಭರತನು ಸಹಸ್ರಪದ್ಮಗಳಷ್ಟು ಸುವರ್ಣದಾನವನ್ನು ಮಾಡಿದನು.

ನೂರುಲಕ್ಷಕ್ಕೆ ಒಂದು ಕೋಟಿ. ಒಂದು ಲಕ್ಷ ಕೋಟಿಗೆ ಒಂದು ಶಂಖ. ಒಂದು ಲಕ್ಷ ಶಂಖಗಳಿಗೆ ಒಂದು ಮಹಾಶಂಖ. ಒಂದು ಲಕ್ಷ ಮಹಾಶಂಖಗಳಿಗೆ ಒಂದು ವೃಂದ. ಒಂದು ಲಕ್ಷ ವೃಂದಗಳಿಗೆ ಒಂದು ಮಹಾವೃಂದ. ಒಂದು ಲಕ್ಷ ಮಹಾವೃಂದಗಳಿಗೆ ಒಂದು ಪದ್ಮ. ಹೀಗೆ ಸಹಸ್ರಪದ್ಮ ಸುವರ್ಣನಾಣ್ಯಗಳ ದಾನವನ್ನು ಕಣ್ವರಿಗೆ ಕೊಟ್ಟನು.

ಸೋಽಶ್ವಮೇಧಶತೈರೀಜೇ ಯಮುನಾಮನು ತೀರಗಃ ।
ತ್ರಿಶತೈಶ್ಚ ಚ ಸರಸ್ವತ್ಯಾಂ ಗಂಗಾಯಾಮಯಜಚ್ಛತೈಃ ॥೪೧॥

ಅವನು ಯಮುನಾ ತೀರದಲ್ಲಿ ನೂರು ಅಶ್ವಮೇಧ ಯಾಗಗಳನ್ನು ಮಾಡಿದನು. ಅವನು ಸರಸ್ವತೀ ಎನಿಸುವ ಗಂಗಾನದಿಯ ತೀರದಲ್ಲಿ ಒಟ್ಟಿಗೆ ಮುನ್ನೂರು ಅಶ್ವಗಳನ್ನು ಕಟ್ಟಿ ಅಶ್ವಮೇಧಯಾಗವನ್ನು ಮಾಡಿದನು.

ದೌಷ್ಮಂತಿರ್ಭರತೋ ವಿದ್ವಾನ್ ಯಜ್ಞೈಃ ಶಾಕುಂತಲೋ ನೃಪಃ ।
ತಸ್ಮಾದ್ ಭರತವಂಶಸ್ಯ ವಿಪ್ರತಸ್ಥೇ ಮಹದ್ಯಶಃ ॥೪೨॥

ದುಷ್ಮಂತ ಮತ್ತು ಶಕುಂತಲೆಯರ ಮಗನಾದ ಭರತನು ಜ್ಞಾನಿಯಾಗಿ ಮಾಡಿದ ಅನೇಕ ಯಜ್ಞಗಳಿಂದ ಭರತವಂಶದ ಶ್ರೇಷ್ಠವಾದ ಕೀರ್ತಿಯು ಇನ್ನೂ ವಿಸ್ತಾರವಾಯಿತು.

ಭರತಸ್ಯ ವರಸ್ತ್ರೀಷು ಪುತ್ರಾಃ ಸಂಜಜ್ಞಿರೇ ಪೃಥಕ್ ।
ನಾಭ್ಯನಂದತ್ ತದಾ ರಾಜಾ ನಾನುರೂಪಾ ಮಮೇತಿ ತಾನ್ ॥೪೩॥

ಭರತನಿಗೆ ತನ್ನ ಮೂರು ಶ್ರೇಷ್ಠರಾದ ಪತ್ನಿಯರಲ್ಲಿ ಮೂರು ಮಕ್ಕಳು ಜನಿಸಿದರು. ಆ ಮಕ್ಕಳನ್ನು ನೋಡಿ ತನಗೆ ಸದೃಶವಾಗಿಲ್ಲ ಎಂದು ತಿಳಿದು ಭರತನು ಸಂತೋಷಪಡಲಿಲ್ಲ (ರಾಣಿಯರು ಆ ಮಕ್ಕಳನ್ನು ಕೊಂದರು ಎಂದು ಪುರಾಣಾಂತರಗಳಲ್ಲಿ ಉಲ್ಲೇಖವಿದೆ).

ತತೋ ಮಹದ್ಭಿಃ ಕ್ರತುಭಿರೀಜಾನೋ ಭರತಸ್ತದಾ ।
ಲೇಭೇ ಪುತ್ರಂ ಭರದ್ವಾಜಾದ್ ಭುಮನ್ಯುಂ ನಾಮ ಭಾರತ ॥೪೪॥

ಧರ್ಮೇ ಪ್ರಣಿಹಿತಾತ್ಮಾನಂ ಮತ್ವಾ ತಂ ಪುರುಷೋತ್ತಮಮ್ ।
ತತಃ ಪುತ್ರಿಣಮಾತ್ಮಾನಂ ಮತ್ವಾ ಸ ಕುರುಪುಂಗವ ।
ಭುಮನ್ಯುಂ ಭರತಃ ಪ್ರೀತೋ ಯೌವರಾಜ್ಯೇಭ್ಯಷೇಚಯತ್ ॥೪೫॥

ಅನಂತರ ಭರತನು ದೊಡ್ಡ ಯಾಗಗಳನ್ನು ಮಾಡಿ ಭರದ್ವಾಜರ ಅನುಗ್ರಹದಿಂದ ಭುಮನ್ಯು ಎಂಬ ಮಗನನ್ನು ಪಡೆದನು. ಎಲೈ ಕುರುಪುಂಗವನೇ, ಆ ಪುರುಷಶ್ರೇಷ್ಠನಾದ ಭುಮನ್ಯುವಿಗೆ ಧರ್ಮದಲ್ಲೇ ಮನಸ್ಸಿದೆ ಎಂದು ತಿಳಿದು ತಾನು ಶ್ರೇಷ್ಠನಾದ ಪುತ್ರನನ್ನು ಪಡೆದಿದ್ದೇನೆ ಎಂದು ತಿಳಿದು ಬಹಳ ಸಂತೋಷದಿಂದ ಭುಮನ್ಯುವಿಗೆ ಯುವರಾಜ್ಯದಲ್ಲಿ ಅಭಿಷೇಕವನ್ನು ಮಾಡಿದನು.

ತತಸ್ತಸ್ಯ ಮಹೀಂದ್ರಸ್ಯ ವಿತಥಂ ಪುತ್ರತೋಽಭವತ್ ।
ತತಃ ಸ ವಿತಥೋ ನಾಮ ಭುಮನ್ಯೋರಭವತ್ ತದಾ ॥೪೬॥

ಅನಂತರ ಆ ರಾಜನ ಕುಲವು ಮಕ್ಕಳಿಂದ ಶೂನ್ಯವಾಯಿತು (ವಿತಥವಾಯಿತು). ಆಗ ಭುಮನ್ಯುವು ವಿತಥ ಎಂಬ ಮಗನನ್ನು ಪಡೆದನು.

ಸುಹೋತ್ರಶ್ರುತಹೋತಾರೌ ಸುಹವಿಃ ಸುಯಜುಸ್ತಥಾ ।
ಪುಷ್ಕರಿಣ್ಯಾಮುಚಥ್ಯಾಯಾಂ ಭುಮನ್ಯೋರಭವನ್ ಸುತಾಃ ।
ಚತ್ವಾರೋ ಭಾರತೇ ವಂಶೇ ಸುಹೋತ್ರಸ್ತಸ್ಯ ವಂಶಭಾಕ್ ॥೪೭॥

ಭುಮನ್ಯುವಿಗೆ ತನ್ನ ಪತ್ನಿಯಾದ ಉಚಥ್ಯೆಯಲ್ಲಿ ಸುಹೋತ್ರ, ಶ್ರುತಹೋತ, ಸುಹವಿ, ಸುಯಜು ಎಂಬ ನಾಲ್ಕು ಮಕ್ಕಳು ಜನಿಸಿದರು. ಅವರಲ್ಲಿ ಸುಹೋತ್ರನು ಭರತವಂಶದ ಪ್ರವರ್ತಕನಾದನು.

ತೇಷಾಂ ಜ್ಯೇಷ್ಠಃ ಸುಹೋತ್ರಸ್ತು ರಾಜ್ಯಂ ಪ್ರಾಪ್ಯ ಮಹೀಕ್ಷಿತಾಮ್ ।
ರಾಜಸೂಯಾಶ್ವಮೇಧಾದ್ಯೈರೀಜೇ ಚ ವಿವಿಧೈರ್ಮಖೈಃ ॥೪೮॥

ಅವರಲ್ಲಿ ಜ್ಯೇಷ್ಠನಾದ ಸುಹೋತ್ರನು ಪೂರ್ವರಾಜರ ರಾಜ್ಯವನ್ನು ಪಡೆದು ರಾಜಸೂಯ, ಅಶ್ವಮೇಧ ಮೊದಲಾದ ಅನೇಕ ಯಾಗಗಳಿಂದ ಭಗವಂತನನ್ನು ಆರಾಧಿಸಿದನು.

ಸುಹೋತ್ರಃ ಪೃಥಿವೀಂ ಚೇಮಾಂ ಬುಭುಜೇ ಸಾಗಾರಾಂಬರಾಮ್ ।
ಸುಹೊತ್ರೇ ತು ಮಹೀಪಾಲೇ ಮಹೀಂ ಧರ್ಮೇಣ ಶಾಸತಿ ॥೪೯॥

ಚೈತ್ಯಯೂಪಾಂಕಿತಾ ಭೂಮಿರ್ಬಭೂವಾಥ ಸಮಂತತಃ ।
ಪೂರ್ಣಾ ಹಸ್ತಿಗವಾಂ ಚೈವ ನಾನಾರತ್ನಸಮಾಕುಲಾ ॥೫೦॥

ಸುಹೋತ್ರನು ಭೂಮಿಯನ್ನು ಆಳುತ್ತಿದ್ದಾಗ ಭೂಮಿಯು ಎಲ್ಲಾ ಕಡೆಗಳಲ್ಲಿಯೂ ದೇವಾಲಯಗಳು ಮತ್ತು ಯಾಗ ಯೂಪಗಳಿಂದ ಅಲಂಕೃತವಾಗಿದ್ದಿತು. ಭೂಮಿಯು ಗೋವುಗಳಿಂದಲೂ ಮತ್ತು ಅಶ್ವಗಳಿಂದಲೂ ಮತ್ತು ನಾನಾ ರತ್ನಗಳಿಂದಲೂ ಪೂರ್ಣವಾಗಿದ್ದಿತು.

ಸಾ ಮಮಜ್ಜೇವ ಪೃಥಿವೀ ಭೂರಿಭಾರಾವಪೀಡಿತಾ ।
ಹಸ್ತ್ಯಶ್ವರಥಸಂಪೂರ್ಣಾ ಮನುಷ್ಯಕಲಿಲಾ ಭೃಶಮ್ ॥೫೧॥

ಅಶ್ವ, ಗಜ, ರಥಗಳ ಭಾರದಿಂದಲೂ, ಮನುಷ್ಯರ ಭಾರದಿಂದಲೂ ಪೀಡಿತವಾದ ಭೂಮಿಯು ಕುಸಿದಂತೆ ಇದ್ದಿತು.

ಸಮೃದ್ಧಸಸ್ಯಸಂಪೂರ್ಣಾ ಸಹದೇವಾ ವ್ಯರೋಚತ ।
ಐಕ್ಷ್ವಾಕ್ಯಾಂ ಜನಯಾಮಾಸ ಸುಹೋತ್ರಸ್ತ್ರೀನ್ ಸುತಾನ್ ನೃಪ ॥೫೨॥

ಅಜಮೀಢಂ ಸದಾಮೀಢಂ ಪುರುಮೀಢಂ ಚ ಭಾರತ ।
ಅಜಮೀಢೋ ವರಸ್ತೇಷಾಂ ತಸ್ಮಿನ್ ವಂಶಃ ಪ್ರತಿಷ್ಠಿತಃ ॥೫೩॥

ಭೂಮಿಯು ಸಸ್ಯಸಮೃದ್ಧಿಯನ್ನು ಉಳ್ಳದ್ದಾಗಿ ಶೋಭಿಸಿತು. ಅವನು ತನ್ನ ಪತ್ನಿಯಾದ ಐಕ್ಷ್ವಾಕಿಯಲ್ಲಿ ಅಜಮೀಢ, ಸದಾಮೀಢ, ಪುರುಮೀಢ ಎಂಬ ಮೂರು ಮಕ್ಕಳನ್ನು ಪಡೆದನು. ಅವರಲ್ಲಿ ಅಜಮೀಢನು ಶ್ರೇಷ್ಠನಾದವನು ಮತ್ತು ವಂಶಧರನಾದವನು.

ಷಟ್ ಪುತ್ರಾನ್ ಸೋಽಪ್ಯಜನಯತ್ ತಿಸೃಷು ಸ್ತ್ರೀಷು ಭಾರತ ।
ಋಕ್ಷಂ ಧೂಮಿನ್ಯಥೋ ನೀಲೀ ದುಷ್ಷಂತಪರಮೇಷ್ಠಿನೌ ॥೫೪॥

ಕೇಶಿನ್ಯಜನಯಜ್ಜಹ್ನುಮುಭೌ ಚ ಜನ ರೂಷಣಮ್ ।
ವಿದುಃ ಸಂವರಣಂ ಶೂರಮೃಕ್ಷಾದ್ ರಾಥಂತರೀಸುತಮ್ ॥೫೫॥

ಅಜಮೀಢನು ತನ್ನ ಮೂವರು ಪತ್ನಿಯರಲ್ಲಿ ಆರು ಮಕ್ಕಳನ್ನು ಪಡೆದನು. ಧೂಮಿನಿಯ ಮಗ ಋಕ್ಷ, ನೀಲಿಯ ಮಗ ದುಷ್ಷಂತ ಮತ್ತು ಪರಮೇಷ್ಠಿ. ಎಲೈ ಜನಮೇಯನೇ ಜಹ್ನು, ಮತ್ತು ರೂಷಣ ಎಂಬ ಇಬ್ಬರು ಕೇಶಿನಿಯ ಮಕ್ಕಳು. ಋಕ್ಷನಿಗೆ ರಾಥಂತರಿಯಲ್ಲಿ ಶೂರನಾದ ಸಂವರಣ ಎಂಬ ಪುತ್ರನು ಜನಿಸಿದನು.

ತಥೇಮೇ ಸರ್ವಪಾಂಚಾಲಾ ದುಷ್ಷಂತಪರಮೇಷ್ಠಿನೋಃ ।
ಅನ್ವಯಾಃ ಕೌಶಿಕಾಃ ಸರ್ವೇ ಜಹ್ನೋರಪಿ ಮಹಾತ್ಮನಃ ॥೫೬॥

ಈಗಿರುವ ಎಲ್ಲಾ ಪಾಂಚಾಲರು ದುಷ್ಷಂತ ಪರಮೇಷ್ಠಿಗಳ ವಂಶಕ್ಕೆ ಸೇರಿದವರು. ಕೌಶಿಕರೆಲ್ಲರೂ ಮಹಾತ್ಮನಾದ ಜಹ್ನುವಿನ ವಂಶಕ್ಕೆ ಸೇರಿದವರು.

ಜಹ್ನೂರೂಷಣಯೋರ್ಜ್ಯೇಷ್ಠಮೃಕ್ಷಮಾಹುರ್ಜನಾಧಿಪಮ್ ।
ಋಕ್ಷಾತ್ ಸಂವರಣೋ ಜಜ್ಞೇ ರಾಜನ್ ವಂಶಕರಸ್ತವ ॥೫೭॥

ಜಹ್ನುರೂಷಣರಿಗಿಂತ ಹಿರಿಯನಾದ ಋಕ್ಷನು ರಾಜನಾದನು. ಎಲೈ ರಾಜನೇ, ಋಕ್ಷನಿಂದ ನಿನ್ನ ವಂಶಕರನಾದ ಸಂವರಣನು ಜನಿಸಿದನು.

ಋಕ್ಷೇ ಸಂವರಣೇ ರಾಜ್ಯಂ ಪ್ರಶಾಸತಿ ಮಹಾತ್ಮನಿ ।
ಸಂಕ್ಷಯಃ ಸುಮಹಾನಾಸೀತ್ ಪ್ರಜಾನಾಮಿತಿ ಶುಶ್ರುಮಃ ॥೫೮॥

ಋಕ್ಷನ ಮಗನಾದ ಮಹಾತ್ಮನಾದ ಸಂವರಣನು ರಾಜ್ಯವನ್ನು ಆಳುತ್ತಿರಲು, ದೊಡ್ಡಪ್ರಮಾಣದಲ್ಲಿ ಪ್ರಜೆಗಳ ಸಂಕ್ಷಯ ಉಂಟಾಯಿತೆಂದು ಕೇಳಿದ್ದೇವೆ.

ವ್ಯಶೀರ್ಯತ ತತೋ ರಾಷ್ಟ್ರಂ ದುರ್ಭಿಕ್ಷೇಣಾರ್ದಿತಂ ತದಾ ।
ಕ್ಷುನ್ಮೃತ್ಯುಭ್ಯಾಮನಾವೃಷ್ಟ್ಯಾ ವ್ಯಾಧಿಭಿಶ್ಚ ಮಹಾಬಲೈಃ ॥೫೯॥

ಆಗ ದುರ್ಭಿಕ್ಷದಿಂದ ಪೀಡಿತವಾದ ರಾಜ್ಯವು ಒಡೆದುಹೋಯಿತು. ಜನರು ಹಸಿವೆಯಿಂದಲೂ, ಮೃತ್ಯುವಿನಿಂದಲೂ, ಅನಾವೃಷ್ಟಿಯಿಂದಲೂ, ಬಲಿಷ್ಠವಾದ ವ್ಯಾಧಿಗಳಿಂದಲೂ ಪೀಡಿತರಾದರು.

ಅಭ್ಯಯುರ್ಭರತಾಶ್ಚೈವ ಸಪತ್ನಾನಾಂ ಬಲಾನಿ ಚ ।
ಚಾಲಯಂತೋ ಧೃತಿಂ ಭೀಮಾಂ ಜನಯಂತೋ
ಭೃಶಂ ಭಯಮ್ ॥೬೦॥

ಆಗ ಭರತರು ತಮ್ಮ ದೊಡ್ಡದಾದ ಸೈನ್ಯವನ್ನು ತೆಗೆದುಕೊಂಡು ಶತ್ರುಗಳ ಧೈರ್ಯವನ್ನು ಕೆಡಿಸುತ್ತಾ ಅವರಿಗೆ ಭಯವನ್ನು ಉಂಟುಮಾಡುತ್ತಾ ಶತ್ರುಗಳ ಮೇಲೆ ದಂಡೆತ್ತಿ ಹೋದರು.

ಅಭ್ಯಯುಸ್ತಂ ಚ ಪಾಂಚಾಲಾ ವಿವೃಣ್ವಂತೋ ಬಲೈರ್ಮಹೀಮ್ ।
ಅಕ್ಷೌಹಿಣೀಭಿರ್ದಶಭಿಸ್ತದಾ ತಂ ತರಸಾऽಜಯನ್ ॥೬೧॥

ಪಾಂಚಾಲರು ಅವನಿಗೆ ಎದುರಾಗಿ ತಮ್ಮ ಸೈನ್ಯವನ್ನು ತೆಗೆದುಕೊಂಡು ಬಂದರು. ಅವರು ತಮ್ಮ ಹತ್ತು ಅಕ್ಷೌಹಿಣೀ ಸೈನ್ಯದಿಂದ ಸಂವರಣನನ್ನು ಶೀಘ್ರವಾಗಿ ಗೆದ್ದರು.

ತತಃ ಸದಾರಃ ಸಾಮಾತ್ಯಃ ಸಪುತ್ರಃ ಸಸುಹೃಜ್ಜನಃ ।
ರಾಜಾ ಸಂವರಣಸ್ತಸ್ಮಾತ್ ಪಲಾಯನಪರೋऽಭವತ್ ॥೬೨॥

ಆಗ ಸಂವರಣರಾಜನು, ಪತ್ನಿ, ಪುತ್ರರು, ಅಮಾತ್ಯರು ಹಾಗೂ ಸುಹೃಜ್ಜನರ ಜೊತೆಯಲ್ಲಿ ಆ ಸ್ಥಳದಿಂದ ಪಲಾಯನ ಮಾಡಿದನು.

ತಾಂ ಪ್ರತೀಚೀಂ ದಿಶಂ ಭೀತಾಃ ಪ್ರಯಾತಾಃ ಭರತಾಃ ಕಿಲ ।
ಸಿಂಧೋರ್ನದಸ್ಯ ಮಹತೋ ಗುಹಾಯಾಂ ಪ್ರಾವಿಶಂಸ್ತದಾ ॥೬೩॥

ಹೆದರಿದ ಎಲ್ಲಾ ಭರತರು ಪಶ್ಚಿಮ ದಿಕ್ಕಿಗೆ ಹೋಗಿ ಸಿಂಧೂನದದ ಸಮೀಪದಲ್ಲಿದ್ದ ಒಂದು ದೊಡ್ಡ ಗುಹೆಯನ್ನು ಪ್ರವೇಶಿಸಿದರು.

ಶಿವೇ ವಿಷಯಪರ್ಯಂತೇ ಪರ್ವತಸ್ಯ ಸಮೀಪತಃ ।
ತತ್ರಾವಸನ್ ಪ್ರತಿಚ್ಛನ್ನಾ ಭರತಾಶ್ಚ ಭಯಾಚ್ಚಿರಮ್ ॥೬೪॥

ದೇಶದ ಅಂಚಿನಲ್ಲಿ ಪರ್ವತದ ಸಮೀಪದಲ್ಲಿ ಇದ್ದ ಆ ಸುರಕ್ಷಿತವಾದ ಗುಹೆಯಲ್ಲಿ ವೇಷವನ್ನು ಮರೆಸಿಕೊಂಡು ಭಯಗ್ರಸ್ತರಾಗಿ ಭರತರು ಬಹುಕಾಲ ವಾಸ ಮಾಡಿದರು.

ತೇಷಾಂ ನಿವಸತಾಂ ತತ್ರ ಸಹಸ್ರಂ ಪರಿವತ್ಸರಾನ್ ।
ಆಗಚ್ಛದ್ ಭಗವಾಂಸ್ತತ್ರ ವಸಿಷ್ಠೋ ಭರತಾನ್ ಪ್ರತಿ ॥೬೫॥

ಅವರು ಅಲ್ಲಿ ಸಾವಿರ ವರ್ಷಗಳನ್ನು ಕಳೆಯುತ್ತಿರಲು ಪೂಜ್ಯರಾದ ವಸಿಷ್ಠರು ಅಲ್ಲಿಗೆ ಬಂದರು.

ತಮಾಗತಂ ಪ್ರಯತ್ನೇನ ಅಭ್ಯುತ್ಥಾಯಾಭಿವಾದ್ಯ ಚ ।
ಅರ್ಘ್ಯಮಸ್ಯಾನಯನ್ ಪ್ರೀತ್ಯಾ ಅಜಮೀಢಪುರೋಗಮಾಃ ॥೬೬॥

ಆಗತರಾಗಿ ವಸಿಷ್ಠರು ಬಂದ ಕೂಡಲೇ ಅಜಮೀಢ ಮೊದಲಾದವರು ಎದ್ದು ನಮಸ್ಕರಿಸಿ ಅರ್ಘ್ಯಪಾದ್ಯಾದಿಗಳಿಂದ ಅವರನ್ನು ಪೂಜಿಸಿದರು.

ನಿವೇದ್ಯ ಸರ್ವಂ ಭರತಾಃ ಸತೃತ್ಯೈನಮುಪಾಸತ ।
ತತಃ ಸಂವರಣಃ ಶ್ರೇಷ್ಠಂ ವರಂ ವವ್ರೇ ಸ್ವಯಂ ತದಾ ॥೬೭॥

ಭರತರು ಅವರನ್ನು ಸತ್ಕರಿಸಿ, ಅವರಿಗೆ ತಮ್ಮ ಸಂಕಟವನ್ನು ನಿವೇದಿಸಿ ಅವರಿಗೆ ಉಪಚರಿಸಿದನು. ಆಗ ಸಂವರಣರಾಜನು ತಾನೇ ಇಷ್ಟವಾದ ವರವನ್ನು ಕೇಳಿದನು.

ಪುರೋಹಿತೋ ಭವಾನ್ ನೋಽಸ್ತು ರಾಜ್ಯಾಯ ಪ್ರಯತಾಮಹೇ।
ಏವಮಸ್ತ್ವಿತಿ ತಂ ವಿಪ್ರೋ ಭಾರತಂ ಪ್ರತ್ಯುವಾಚ ಹ ॥೬೮॥

ಪೂಜ್ಯರೇ, ತಾವು ನಮಗೆ ಪುರೋಹಿತರಾಗಬೇಕು. ನಾವು ರಾಜ್ಯವನ್ನು ಪಡೆಯಲು ಪ್ರಯತ್ನಿಸುತ್ತೇವೆ. ಹೀಗೆ ಹೇಳಿದಾಗ ವಸಿಷ್ಠರು ಹಾಗೆಯೇ ಆಗಲಿ ಎಂದು ಆ ಭಾರತನಿಗೆ ಉತ್ತರವನ್ನು ಕೊಟ್ಟರು.

ತಮಭ್ಯಷಿಂಚತ್ ಸಾಮ್ರಾಜ್ಯೇ ಸರ್ವಕ್ಷತ್ರಸ್ಯ ಪೌರವಮ್ ।
ವಿಷಾಣಭೂತಂ ಸರ್ವಸ್ಯ ಪೃಥಿವ್ಯಾಮಿತಿ ನಃ ಶ್ರುತಮ್ ॥೬೯॥

★ ವಿಷಾಣಭೂತಂ= ಗೋವಿನ ಚೂಪಾದ ಕೊಂಬಿನಂತೆ ಶತ್ರುಭಯಂಕರ.

ಎಲ್ಲ ಶತ್ರುಗಳಿಗೂ ಕಂಟಕಪ್ರಾಯನಾದ ಆ ಪೌರವನಾದ ಸಂವರಣನನ್ನು ಸರ್ವಕ್ಷತ್ರಿಯಸಾಮ್ರಾಜ್ಯದಲ್ಲಿ ಎಲ್ಲ ಪೃಥಿವಿಗೂ ಅಧಿಪತಿಯಾಗಿ ಅಭಿಷೇಕಮಾಡಿದರೆಂದು ನಾವು ಕೇಳಿದ್ದೇವೆ.

ಸ ಪುತ್ರೈರ್ಭಾರತೈರ್ಜುಷ್ಟಮಧ್ಯತಿಷ್ಠತ್ ಪುರಾತನಮ್ ।
ಪುನಶ್ಚಕ್ರೇ ಬಲಿಭೃತಃ ಪೃಥಿವ್ಯಾಂ ಸರ್ವಪಾರ್ಥಿವಾನ್ ॥೭೦॥

ಅವನು ತನ್ನ ಮಕ್ಕಳಿಂದ ಒಡಗೂಡಿ ಹಿಂದಿನ ಭಾರತದ ರಾಜರು ವಾಸಿಸಿದ ಪಟ್ಟಣದಲ್ಲಿಯೇ ವಾಸಿಸಿ, ಭೂಮಿಯಲ್ಲಿದ್ದ ಎಲ್ಲ ರಾಜರನ್ನು ಗೆದ್ದು ಪುನಃ ಅವರು ಕಪ್ಪವನ್ನು ಕೊಡುವಂತೆ ಮಾಡಿದನು.

ಅಜಮೀಢೋ ಮಹಾಯಜ್ಞೈರ್ಬಹುಭಿರ್ಭೂರಿದಕ್ಷಿಣೈಃ ।
ಭಾರತಃ ಪೃಥಿವೀಂ ಪ್ರಾಪ್ಯ ಪುನರೀಜೇ ಮಹಾಬಲಃ ॥೭೧॥

ಮಹಾಬಲನಾದ ಅಜಮೀಢನು ಪುನಃ ರಾಜ್ಯವನ್ನು ಪಡೆದವನಾಗಿ ಭೂರಿದಕ್ಷಿಣೆಗಳಿಂದ ಕೂಡಿದ ಅನೇಕ ಮಹಾಯಜ್ಞಗಳಿಂದ ಭಗವಂತನನ್ನು ಆರಾಧಿಸಿದನು.

ತತಃ ಸಂವರಣಾತ್ ಸೌರೀ ತಪತೀ ಸುಷುವೇ ಕುರುಮ್ ।
ರಾಜತ್ವೇ ತಂ ಪ್ರಜಾಃ ಸರ್ವಾ ಧರ್ಮಜ್ಞ ಇತಿ ವವ್ರಿರೇ ॥೭೨॥

ಅನಂತರ ಸೂರ್ಯನ ಮಗಳಾದ ತಪತಿಯು ಸಂವರಣನಿಂದ 'ಕುರು' ಎಂಬ ಮಗನನ್ನು ಪಡೆದಳು. ಅವನು ರಾಜನಾಗಿದ್ದಾಗ ಧರ್ಮಿಷ್ಠನೆಂದು ಮತ್ತು ಧರ್ಮಜ್ಞನೆಂದು ಎಲ್ಲಾ ಪ್ರಜೆಗಳೂ ಅವನನ್ನು ರಾಜನನ್ನಾಗಿ ವರಿಸಿದರು.

ಮಹಿಮ್ನಾ ತಸ್ಯ ಕುರವೋ ಲೇಭಿರೇ ಪ್ರತ್ಯಯಂ ಭೃಶಮ್ ।
ತಸ್ಯ ನಾಮ್ನಾ ಚ ವಿಖ್ಯಾತಮಭೂತ್ತತ್ ಕುರುಜಾಂಗಲಮ್ ।
ಕುರುಕ್ಷೇತ್ರಂ ಚ ತಪಸಾ ಪುಣ್ಯಂ ಚಕ್ರೇ ಮಹಾತಪಾಃ ॥೭೩॥

ಕುರುವಿನ ಮಹಿಮೆಯಿಂದ ಎಲ್ಲ ಕುರುಗಳೂ ಮಹಾಕೀರ್ತಿಯನ್ನು ಹೊಂದಿದರು. 'ಕುರುಜಾಂಗಲ' ಪ್ರದೇಶವು ಅವನ ಹೆಸರಿನಿಂದಲೇ ಪ್ರಖ್ಯಾತವಾಯಿತು. ಮಹಾತಪಸ್ವಿಯಾದ ಅವನು ತನ್ನ ತಪಸ್ಸಿನಿಂದ ಪವಿತ್ರವಾದ ಕುರುಕ್ಷೇತ್ರವನ್ನು ಕಟ್ಟಿದನು.

ಅಶ್ವವಂತಮಭೀಷ್ಟಂತಂ ದಾಂತಂ ಚಿತ್ರರಥಂ ಮುನಿಮ್ ।
ಜನಮೇಜಯಂ ಸ ವಿಖ್ಯಾತಂ ಪುತ್ರಾಂಶ್ಚಾನ್ಯಾನುಶುಶ್ರುಮಃ ।
ಪಂಚೈತಾನ್ ಮಹಿಷೀ ಪುತ್ರಾನ್ ವ್ಯಾಜಾಯತ ಮನಸ್ವಿನೀ ॥

ಕುರುವಿನ ಪತ್ನಿಯಾದ ಮನಸ್ವಿನಿಯು 'ಅಶ್ವವಾನ್', 'ಅಭೀಷ್ಟಂತ', 'ದಾಂತ', 'ಚಿತ್ರರಥ' ಮತ್ತು ಋಷಿಯಾದ 'ಜಯಮೇಜಯ' ಎಂಬ ಮಕ್ಕಳನ್ನು ಪಡೆದಳು.

ಅಭೀಷ್ಟತಃ ಪರೀಕ್ಷಿಚ್ಚ ಶಬಲಾಶ್ವಶ್ಚ ವೀರ್ಯವಾನ್ ।
ಅಧಿರಾಜೋ ವಿರಾಜಶ್ಚ ಬಲವಾಂಶ್ಚ ಮಹಾಬಲಃ ॥೭೫॥

ಚಿತ್ರಶ್ರವಾ ಧರ್ಮಕರೋ ದಿತ್ಸಾಷ್ಟಿಶ್ಚಾಷ್ಟಮಃ ಸ್ಮೃತಃ ।
ಶಬಲಾಶ್ವಾದಯಃ ಸಪ್ತ ತಥೈವಾನ್ಯೇ ಮಹಾಬಲಾಃ ॥೭೬॥

ಅಭೀಷ್ಟಂತನಿಗೆ 'ಪರೀಕ್ಷಿತ' ಪರಾಕ್ರಮಶಾಲಿಯಾದ 'ಶಬಲಾಶ್ವ', 'ಅಧಿರಾಜ', 'ವಿರಾಜ', ಮಹಾಬಲಿಷ್ಠನಾದ 'ಬಲವಾನ್', 'ಚಿತ್ರಶ್ರವಾ' 'ಧರ್ಮಕರ' ಮತ್ತು 'ದಿತ್ಸಾಷ್ಟಿ' ಎಂಬ ಎಂಟು ಮಕ್ಕಳಾದರು. ಬೇರೆ ಪತ್ನಿಯಲ್ಲಿ ಮಹಾಬಲಿಷ್ಠರಾದ 'ಶಬಲಾಶ್ವ' ಮೊದಲಾದ ಏಳು ಮಕ್ಕಳಾದರು.

ನ ತೇಷಾಮನ್ವಯಃ ಖ್ಯಾತಃ ಸರ್ವೇಷಾಂ ನಾಮತೋ ಗುಣೈಃ ।
ಜನಮೇಜಯಾದಯಃ ಸಪ್ತ ತಥೈವಾನ್ಯೇ ಮಹಾರಥಾಃ ॥೭೭॥

ಅವರೆಲ್ಲರ ವಂಶಗಳು ನಾಮದಿಂದಲೂ ಮತ್ತು ಗುಣಗಳಿಂದಲೂ ಪ್ರಖ್ಯಾತವಾಗಿಲ್ಲ. ಹಾಗೆಯೇ, ಜನಮೇಜಯ ಮೊದಲಾದ ಇನ್ನೂ ಏಳು ಮಂದಿಯೂ ಮಹಾರಥರು.

ಪರೀಕ್ಷಿತೋಽಭವನ್ ಪುತ್ರಾಃ ಸರ್ವೇ ಧರ್ಮಾರ್ಥಕೋವಿದಾಃ ।
ಕಕ್ಷಸೇನೋಗ್ರಸೇನೌ ತು ಚಿತ್ರಸೇನಸ್ತಥಾ ಶಿಶುಃ ।
ಇಂದ್ರಸೇನಃ ಸುಷೇಣಶ್ಚ ಭೀಮಸೇನಶ್ಚ ನಾಮತಃ ॥೭೮॥

ಪರೀಕ್ಷಿತನಿಗೆ ಧರ್ಮಾರ್ಥಕೋವಿದರಾದ ಕಕ್ಷಸೇನ, ಉಗ್ರಸೇನ, ಚಿತ್ರಸೇನ, ಶಿಶು, ಇಂದ್ರಸೇನ, ಸುಷೇಣ ಮತ್ತು ಭೀಮಸೇನ ಎಂಬ ಮಕ್ಕಳಾದರು.

ಜನಮೇಜಯಸ್ಯ ತನಯಾಸ್ತಥಾ ಚಾಷ್ಟೌ ಮಹಾಬಲಾಃ ।
ಧೃತರಾಷ್ಟ್ರಶ್ಚ ಧರ್ಮಾತ್ಮಾ ತಥೋಭೌ ಪಾಂಡುಬಾಹ್ಲಿಕೌ ।
ನಿಷಧಶ್ಚ ಮಹಾತೇಜಾಸ್ತಥಾ ಜಾಂಬೂನದೋ ಬಲೀ ॥೭೯॥

ಕುಂಡೋದರಃ ಪದಾತಿಶ್ಚ ವಸತಿಶ್ಚಾಷ್ಟಮಃ ಸ್ಮೃತಃ ।
ಸರ್ವೇ ಧರ್ಮಾರ್ಥಕುಶಲಾಃ ಸರ್ವಭೂತಹಿತೇ ರತಾಃ ॥೮೦॥

ಜನಮೇಜಯನಿಗೆ ಮಹಾಬಲಿಷ್ಠರಾದ ಎಂಟು ಮಕ್ಕಳು ಜನಿಸಿದರು. ಧರ್ಮಾತ್ಮನಾದ 'ಧೃತರಾಷ್ಟ್ರ', 'ಪಾಂಡು', 'ಬಾಹ್ಲಿಕ', ತೇಜಸ್ವಿಯಾದ 'ನಿಷಧ', ಬಲಿಷ್ಠನಾದ 'ಜಾಂಬೂನದ', 'ಕುಂಡೋದರ', 'ಪದಾತಿ' ಮತ್ತು 'ವಸತಿ' ಎಂದು ಅವರ ಹೆಸರು. ಎಲ್ಲರೂ ಸರ್ವ ಧರ್ಮಾರ್ಥಕುಶಲರೂ, ಸರ್ವಭೂತಹಿತರತರೂ ಆಗಿದ್ದರು.

(ಸಿಂಹಾವಲೋಕನ ನ್ಯಾಯದಿಂದ ಕುರುಪುತ್ರನಾದ ಜಯಮೇಜಯನ ವಂಶವನ್ನು ಇಲ್ಲಿ ಪುನಃ ಹೇಳುತ್ತಿದ್ದಾರೆ.)

ಧೃತರಾಷ್ಟ್ರೋಽಥ ರಾಜಾಽಭೂತ್ ತಸ್ಯ ಪುತ್ರೋಽಥ ಶುಂಡಿಕಃ ।
ಹಸ್ತೀ ವಿಕರ್ಣನಃ ಕ್ರಥಃ ಕುಂಡಲಶ್ಚಾಪಿ ಪಂಚಮಃ ॥೮೧॥

ಧೃತರಾಷ್ಟ್ರನು ರಾಜನಾದನು. ಅವನಿಗೆ 'ಶುಂಡಿಕ', 'ಹಸ್ತೀ', 'ವಿಕರ್ಣನ', 'ಕ್ರಥ' ಮತ್ತು 'ಕುಂಡಲ' ಎಂಬ ಐದು ಮಕ್ಕಳು.

ಪರ್ಯಶ್ರವಸಮಿಂದ್ರಾಭಂ ಶರಭಂ ವಾಜಿನಂ ಯುಧಿ ।
ಅತಿನಾರಶ್ಚ ನಹುಷಃ ತಥಾ ಶುಕಪುರಂಜಯೌ ॥೮೨॥
ನಶಸಮೂಹಾನ್ ಅತಿಕ್ರಮ್ಯಃ ವರ್ತತೇ ಇತಿ ಅತಿನಾರಃ ।

ಈ ಧೃತರಾಷ್ಟ್ರನಿಗೆ 'ಅತಿನಾರ'ನೆಂದೂ ಹೆಸರು. ಅವನಿಗೆ ಇಂದ್ರನಂತಿರುವ 'ಪರ್ಯಶ್ರವಸ', 'ಶರಭ', 'ವಾಜಿ', 'ನಹುಷ' 'ಶುಕ', 'ಪುರಂಜಯ' ಎಂಬ ಬೇರೆ ಮಕ್ಕಳಿದ್ದರು.

ತತೋ ಧರ್ಮಭೃತಾಂ ಶ್ರೇಷ್ಠಃ ಪರ್ಯಶ್ರವಸ ಉಚ್ಯತೇ ।
ಋಷಿಂ ಪುಣ್ಯಕೃತಾಂ ಶ್ರೇಷ್ಠಂ ತಮೇವ ಪರಮಂ ವಿದುಃ ॥೮೩॥

ಪರ್ಯಶ್ರವಸನನ್ನು ಧರ್ಮಿಷ್ಠರಲ್ಲಿ ಶ್ರೇಷ್ಠನೆಂದು ಕರೆಯುತ್ತಾರೆ. ಅವನನ್ನು ಪುಣ್ಯಶೀಲರಾದ ಋಷಿಗಳಲ್ಲಿ ಶ್ರೇಷ್ಠನಾದವನೆಂದು ತಿಳಿಯುತ್ತಾರೆ.

ಭೀಮಸೇನಾನ್ಮಹೇಷ್ವಾಸಾತ್ ಪ್ರತೀಪಃ ಸಮಪದ್ಯತ ।
ಪ್ರತೀಪಸ್ಯ ತ್ರಯಃ ಪುತ್ರಾ ಜಜ್ಞಿರೇ ಭರತರ್ಷಭ ॥೮೪॥

ದೇವಾಪಿಃ ಶಂತನುಶ್ಚೈವ ಬಾಹ್ಲೀಕಶ್ಚ ಮಹಾಯಶಾಃ ।
ದೇವಾಪಿಸ್ತು ಪ್ರವವ್ರಾಜ ತೇಷಾಂ ಧರ್ಮಪರಾಯಣಃ ॥೮೫॥

ಶಂತನುಶ್ಚ ಮಹೀಂ ಲೇಭೇ ಬಾಹ್ಲೀಕಶ್ಚ ಮಹಾಬಲಃ ।
ಭರತಸ್ಯಾನ್ವಯೇ ರಾಜನ್ ಸತ್ತ್ವವಂತೋ ಮಹಾರಥಾಃ ।
ಬಭೂವುರ್ಬ್ರಹ್ಮಕಲ್ಪಾಶ್ಚ ಬಹವೋ ರಾಜಸತ್ತಮಾಃ ॥೮೬॥

ಪರೀಕ್ಷಿತನ ಮಗನಾದ ಧನುರ್ಧಾರಿಯಾದ ಭೀಮಸೇನನಿಗೆ 'ಪ್ರತೀಪ' ಎಂಬ ಮಗನು ಜನಿಸಿದನು. ಭರತಶ್ರೇಷ್ಠನೇ, ಪ್ರತೀಪನಿಗೆ 'ದೇವಾಪಿ', 'ಶಂತನು' ಮತ್ತು ಮಹಾಕೀರ್ತಿವಂತನಾದ 'ಬಾಹ್ಲೀಕ' ಎಂಬ ಮೂರು ಮಕ್ಕಳು. ಅವರಲ್ಲಿ ಧರ್ಮಪರಾಯಣನಾದ ದೇವಾಪಿಯು ಅರಮನೆಯನ್ನು ಬಿಟ್ಟು ಹೊರಟು ಹೋದನು. ಶಂತನುವು ಮತ್ತು ಮಹಾಬಲಿಷ್ಠನಾದ ಬಾಹ್ಲೀಕನು ರಾಜ್ಯವನ್ನು ಪಡೆದರು. ಎಲೈ ರಾಜನೇ, ಭರತವಂಶದಲ್ಲಿ ಸತ್ಯವಂತರೂ, ಬ್ರಹ್ಮಕಲ್ಪರೂ ಆದ ಮಹಾರಥರಾದ ಅನೇಕ ರಾಜಶ್ರೇಷ್ಠರು ಉಂಟಾದರು.

ಏವಂವಿಧಾಽಶ್ಚಾಪ್ಯಪರೇ ದೇವಕಲ್ಪಾ ಮಹಾರಥಾಃ ।
ಅನ್ವವಾಯೇ ಮಹಾರಾಜ ಐಲವಂಶವಿವರ್ಧನಾಃ ॥೮೭॥

ಎಲೈ ಮಹಾರಾಜನೇ, ಇಂತಹ ದೇವಕಲ್ಪರಾದ ಬೇರೆ ಮಹಾರಥರು ಪುರೂರವನ ವಂಶವಿವರ್ಧಕರಾದವರು ಅವನ ವಂಶದಲ್ಲಿ ಬಂದರು.

ಗಂಗಾದ್ವಾರಂ ಸಮಾಸಾದ್ಯ ದೀಕ್ಷಿತೋ ಜನಮೇಜಯ ।
ಅಶ್ವಮೇಧಸಹಸ್ರಾಣಿ ವಾಜಪೇಯಶತಾನಿ ಚ ।
ಪುನರೀಜೇ ಮಹಾಯಜ್ಞೈಃ ಸಮಾಪ್ತವರದಕ್ಷಿಣೈಃ ॥೮೮॥

ಎಲೈ ಜನಮೇಜಯನೇ, ಭರತನು ಗಂಗಾದ್ವಾರಕ್ಕೆ ಹೋಗಿ, ದೀಕ್ಷಿತನಾಗಿ ಸಹಸ್ರ ಅಶ್ವಮೇಧಯಾಗಗಳನ್ನು ನೂರು ವಾಜಪೇಯ ಯಾಗಗಳನ್ನು ಮಾಡಿದನು. ಪುನಃ ಶ್ರೇಷ್ಠವಾದ ದಕ್ಷಿಣೆಗಳನ್ನು ಕೊಟ್ಟು, ಅನೇಕ ಮಹಾಯಜ್ಞಗಳಿಂದ ಭಗವಂತನನ್ನು ಆರಾಧಿಸಿದನು.

(ಈ ಶ್ಲೋಕಗಳಿಂದ ಪ್ರಾರಂಭಿಸಿ ಪುನಃ ಸಿಂಹಾವಲೋಕನ ನ್ಯಾಯದಿಂದ ಭರತನ ಚರಿತ್ರೆಯನ್ನೇ ಹೇಳುತ್ತಿದ್ದಾರೆ.)

ಅಗ್ನಿಷ್ಟೋಮಾತಿರಾತ್ರಾಣಾಂ ಮುಖ್ಯಾನಾಂ ಸೋಽಯಜತ್ ಪುನಃ ।
ವಾಜಪೇಯೈಃಪ್ತಿಸತ್ರಾಣಾಂ ಸಹಸ್ರೈಶ್ಚ ಸುಸಂಭೃತೈಃ ॥೮೯॥

ಇಷ್ಟ್ವಾ ಶಾಕುಂತಲೋ ರಾಜಾ ತರ್ಪಯಿತ್ವಾ ದ್ವಿಜಾನ್ ಧನೈಃ ।
ಪುನಃ ಸಹಸ್ರಂ ಪದ್ಮಾನಾಂ ಕಣ್ವಾಯ ಭರತೋ ದದೌ ॥೯೦॥

ಅವನು ಪುನಃ ಅಗ್ನಿಷ್ಟೋಮ ಮತ್ತು ಅತಿರಾತ್ರ ಯಾಗಗಳನ್ನು ಮಾಡಿದನು. ವಾಜಪೇಯಗಳನ್ನು, ಇಷ್ಟಿಗಳನ್ನು ಮತ್ತು ಸತ್ರ ಯಾಗಗಳನ್ನು ಒಳ್ಳೆಯ ಸಾಮಗ್ರಿಗಳಿಂದ ಸಹಸ್ರ ಸಂಖ್ಯೆಯಲ್ಲಿ ಮಾಡಿದನು. ಶಾಂಕುತಲನಾದ ಭರತನು ಹೀಗೆ ಯಾಗಗಳನ್ನು ಮಾಡಿ, ಬ್ರಾಹ್ಮಣರನ್ನು ಧನದಿಂದ ಸಂತೋಷ ಪಡಿಸಿ ಪುನಃ ಸಹಸ್ರಪದ್ಮ ಸುವರ್ಣನಾಣ್ಯಗಳನ್ನು ಕಣ್ವರಿಗೆ ಕೊಟ್ಟನು.

ಜಾಂಬೂನದಸ್ಯ ಶುದ್ಧಸ್ಯ ಕನಕಸ್ಯ ಮಹಾಯಶಾಃ ।
ಯಸ್ಯ ಯೂಪಾಃ ಶತವ್ಯಾಮಾಃ ಪರಿಣಾಹೇಽಥ ಕಾಂಚನಾಃ ॥೯೧॥

ಸಹಸ್ರವ್ಯಾಮಮುದ್ವಿದ್ಧಾಃ ಸೇಂದ್ರೈರ್ದೇವೈಃ ಸಮುಚ್ಛ್ರಿತಾಃ ।
ಸ್ವಲಂಕೃತಾ ಭ್ರಾಜಮಾನಾಃ ಸರ್ವರತ್ನೈರ್ಮನೋರಮೈಃ ॥೯೨॥

ಅವನ ಯಾಗದ ಯೂಪಸ್ತಂಭಗಳು ನೂರು ಮಾರು ಎಳತೆಯುಳ್ಳವಾಗಿ ಜಂಬೂನದಿಯ ಸಂಬಂಧದಿಂದ ಶುದ್ಧಕಾಂಚನಮಯವಾಗಿದ್ದವು. ಸಹಸ್ರ ಮಾರುಗಳಷ್ಟು ಎತ್ತರವಿದ್ದ ಆ ಯೂಪಗಳನ್ನು ಎಲ್ಲ ಮನೋರಮವಾದ ರತ್ನಗಳಿಂದ ಅಲಂಕೃತವಾಗಿ ಶೋಭಿಸುವ ಇಂದ್ರಾದಿ ದೇವತೆಗಳು ಎತ್ತಿದರು.

ಹಿರಣ್ಯಂ ದ್ವಿರದಾನಶ್ವಾನ್ ಮಹಿಷೋಷ್ಟ್ರಗಜಾವಿಕಮ್ ।
ದಾಸೀದಾಸಂ ಧನಂ ಧಾನ್ಯಂ ಸವತ್ಸಾಂ ಗಾಂ ಪಯಸ್ವಿನೀಮ್ ।
ಭೂಮಿಂ ಯೂಪಸಹಸ್ರಾಂಕಾಂ ದದೌ ಕಣ್ವಾಯ ದಕ್ಷಿಣಾಮ್ ॥೯೩॥

ಭರತನು ಹಿರಣ್ಯವನ್ನೂ ಗಜಗಳು, ಅಶ್ವಗಳು, ಮಹಿಷಗಳು, ಉಷ್ಟ್ರಗಳು, ಆಡುಗಳು ಮತ್ತು ಕುರಿಗಳು, ದಾಸಿಯರು, ದಾಸರು, ಧನ-ಧಾನ್ಯಗಳು ಹಾಲನ್ನು ಕೊಡುವ ವತ್ಸಸಹಿತವಾದ ಗೋವುಗಳು, ಸಹಸ್ರ ಯೂಪಗಳಿಂದ ಸಹಿತವಾದ ಭೂಮಿ, ಇವೆಲ್ಲವನ್ನೂ ಕಣ್ವರಿಗೆ ದಕ್ಷಿಣೆಯಾಗಿ ಕೊಟ್ಟನು.

ಬಹೂನಾಂ ಬ್ರಹ್ಮಕಲ್ಪಾನಾಂ ದಕ್ಷಿಣಾಮಮಿತಾಂ ದದೌ ।
ಗ್ರಾಮಾನ್ ಗೃಹಾಣಿ ಕ್ಷೇತ್ರಾಣಿ ಕೋಟಿಶಃ ಶತಶಸ್ತಥಾ ॥೯೪॥

ಬ್ರಹ್ಮಕಲ್ಪರಾದ ಅನೇಕ ಬ್ರಾಹ್ಮಣರಿಗೆ ಅಮಿತವಾದ ದಕ್ಷಿಣೆಯನ್ನೂ, ಗ್ರಾಮಗಳನ್ನೂ, ಗೃಹಗಳನ್ನೂ, ಕ್ಷೇತ್ರಗಳನ್ನೂ, ನೂರರ ಸಂಖ್ಯೆಯಲ್ಲಿ, ಕೋಟಿಯ ಸಂಖ್ಯೆಯಲ್ಲಿ ಕೊಟ್ಟನು.

ಭರತಾದ್ ಭಾರತೀ ಕೀರ್ತಿರ್ಯೇನೇದಂ ಭಾರತಂ ಕುಲಮ್ ।
ಭರತಸ್ಯಾನ್ವಯೇ ಜಾತಾ ದೇವಕಲ್ಪಾ ಮಹಾರಥಾಃ ।
ಬಹವೋ ಬ್ರಹ್ಮಕಲ್ಪಾಶ್ಚ ಬಹವೋ ರಾಜಸತ್ತಮಾಃ ॥೯೫॥

ಭರತನಿಂದ ಈ ಭಾರತ ವಂಶವು, ಅದರ ಕೀರ್ತಿಯು ಹರಡಿತು. ಭರತನ ವಂಶದಲ್ಲಿ ದೇವಕಲ್ಪರಾದ, ಬ್ರಹ್ಮಕಲ್ಪರಾದ, ಅನೇಕ ರಾಜಶ್ರೇಷ್ಠರು ಜನಿಸಿದರು.

ತೇಷಾಮಪರಿಮೇಯಾನಿ ನಾಮಧೇಯಾನಿ ಸರ್ವಶಃ ।
ತೇಷಾಂ ಕುಲೇ ಯಥಾ ಮುಖ್ಯಾನ್ ಕೀರ್ತಯಿಷ್ಯಾಮಿ ಭಾರತ ।
ಮಹಾಭಾಗಾನ್ ದೇವಕಲ್ಪಾನ್ ಸತ್ಯಾರ್ಜವಪರಾಯಣಾನ್ ॥೯೬॥

ಅವರಿಗೆ ಅನೇಕಾನೇಕ ಹೆಸರುಗಳಿವೆ. ನಾನು ಆ ಕುಲದಲ್ಲಿ ಜನಿಸಿದ ದೇವಕಲ್ಪರಾದ, ಸತ್ಯಾರ್ಜವಪರಾಯಣರಾದ ಮಹಾನುಭಾವರಾದ ಮುಖ್ಯರಾದವರ ವಿಷಯವನ್ನಷ್ಟೇ ಹೇಳುತ್ತೇನೆ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ತ್ರಿನವತಿತಮೋऽಧ್ಯಾಯಃ ॥

॥ ಸಂಭವಪರ್ವಣಿ ಏಕಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ತೊಂಭತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ

ಅಧ್ಯಾಯ-೧೧

ತದ್ವಂಶಜಃ ಕುರುರ್ನಾಮ ಪ್ರತೀಪೋऽಭೂತ್ ತದನ್ವಯೇ ।
ಪ್ರತೀಪಸ್ಯಾಭವನ್ ಪುತ್ರಾಸ್ತ್ರಯಸ್ತ್ರೇತಾಗ್ನಿವರ್ಚಸಃ ॥೫॥

ಭರತನ ವಂಶದಲ್ಲಿ ಜನಿಸಿದವ ಕುರು. ಅವನ ವಂಶದಲ್ಲಿ ಪ್ರತೀಪ ಜನಿಸಿದ. ಅವನಿಗೆ ಮೂರು ಅಗ್ನಿಗಳಂತೆ ವರ್ಚಸ್ಸುಳ್ಳ ಮೂರು ಮಂದಿ ಮಕ್ಕಳು ಹುಟ್ಟಿದರು.

ದೇವಾಪಿರಥ ಬಾಹ್ಲೀಕೋ ಗುಣಜ್ಯೇಷ್ಠಶ್ಚ ಶಂತನುಃ ।
ತ್ವಗ್ದೋಷಯುಕ್ತೋ ದೇವಾಪಿರ್ಜಗಾಮ ತಪಸೇ ವನಮ್ ॥೬॥

ದೇವಾಪಿ, ಬಾಹ್ಲೀಕ ಗುಣದಲ್ಲಿ ಶ್ರೇಷ್ಠನಾದ ಶಂತನು ಇವರೇ ಆ ಮೂರು ಮಕ್ಕಳು. ಇವರಲ್ಲಿ ದೇವಾಪಿ ಚರ್ಮರೋಗ ಯುಕ್ತನಾದ್ದರಿಂದ ತಪಸ್ಸಿಗಾಗಿ ಕಾಡಿಗೆ ಹೋದ.

ವಿಷ್ಣೋಃ ಪ್ರಸಾದಾತ್ ಸಕೃತೇ ಯುಗೇ ರಾಜಾ ಭವಿಷ್ಯತಿ ।
ಪುತ್ರಿಕಾಪುತ್ರತಾಂ ಯಾತೋ ಬಾಹ್ಲೀಕೋ ರಾಜಸತ್ತಮಃ ॥೭॥

ದೇವಾಪಿ ವಿಷ್ಣುವಿನ ಅನುಗ್ರಹದಿಂದ ಮುಂದೆ ಕೃತಯುಗದಲ್ಲಿ ರಾಜನಾಗಲಿದ್ದಾನೆ. ಬಾಹ್ಲೀಕ ರಾಜಶ್ರೇಷ್ಠನಾದರೂ ಪುತ್ರಿಕಾಪುತ್ರನೆನಿಸಿದ.

ಹಿರಣ್ಯಕಶಿಪೋಃ ಪುತ್ರಃ ಪ್ರಹ್ಲಾದೋ ಭಗವತ್ಪ್ರಿಯಃ ।
ವಾಯುನಾ ಚ ಸಮಾವಿಷ್ಟೋ ಮಹಾಬಲಸಮನ್ವಿತಃ ॥೯॥

ಬಾಹ್ಲೀಕ ಹಿಂದೆ ಹಿರಣ್ಯಕಶಿಪುವಿನ ಪುತ್ರನಾದ ಪ್ರಹ್ಲಾದ. ಭಗವಂತನಿಗೆ ಪ್ರಿಯ. ವಾಯುವಿನ ಆವೇಶಯುಕ್ತನಾಗಿದ್ದು ಮಹಾಬಲದಿಂದ ಕೂಡಿದವ.

ಯೇನೈವ ಜಾಯಮಾನೇನ ತರಸಾ ಭೂರ್ವಿದಾರಿತಾ ।
ಭೂಭಾರಕ್ಷಪಣೇ ವಿಷ್ಣೋರಂಗತಾಮಾಪ್ತುಮೇವ ಸಃ ॥೯॥

ಪ್ರತೀಪಪುತ್ರತಾಮಾಪ್ಯ ಬಾಹ್ಲೀಕೇಷ್ವಭವತ್ ಪತಿಃ ।
ರುದ್ರೇಷು ಪತ್ರತಾಪಾಖ್ಯಃ ಸೋಮದತ್ತೋಽಸ್ಯ ಚಾತ್ಮಜಃ ॥೧೦॥

ಬಾಹ್ಲೀಕ ಹುಟ್ಟುತ್ತಿದ್ದಂತೆಯೆ ಭೂಮಿ ಬಲವಾಗಿ ಬಿರಿಯುವಂತೆ ಮಾಡಿದ್ದ. ಭೂಭಾರ ಕಳೆಯುವುದರಲ್ಲಿ ಶ್ರೀಕೃಷ್ಣನಿಗೆ ಸಹಾಯಕನೆನಿಸಿಕೊಳ್ಳುವುದಕ್ಕಾಗಿಯೆ ಅವನು ಪ್ರತೀಪನ ಮಗನಾಗಿ ಹುಟ್ಟಿ ಬಾಹ್ಲೀಕ ದೇಶದಲ್ಲಿ ರಾಜನಾದ. ರುದ್ರರಲ್ಲಿ ಒಬ್ಬನಾದ ಪತ್ರತಾಪನೆಂಬುವನು ಇವನಿಗೆ ಸೋಮದತ್ತನೆಂಬ ಮಗನಾಗಿ ಜನಿಸಿದ.

ಅಜೈಕಪಾದಹಿರ್ಬುಧ್ನ್ಯವಿರೂಪಾಕ್ಷ ಇತಿ ತ್ರಯಃ ।
ರುದ್ರಾಣಾಂ ಸೋಮದತ್ತಸ್ಯ ಬಭೂವುಃ ಪ್ರಥಿತಾಃ ಸುತಾಃ ॥೧೧॥

ವಿಷ್ಣೋರೇವಾಂಗತಾಮಾಪ್ತುಂ ಭೂರಿರ್ಭೂರಿಶ್ರವಾಃ ಶಲಃ ।
ಶಿವಾದಿ ಸರ್ವರುದ್ರಾಣಾಮಾವೇಶಾದ್ ವರತಸ್ತಥಾ ॥೧೨॥

ಭೂರಿಶ್ರವಾ ಅತಿಬಲಸ್ತತ್ರಾಸೀತ್ ಪರಮಾಸ್ತ್ರವಿತ್ ।
ತದರ್ಥಂ ಹಿ ತಪಶ್ಚೀರ್ಣಂ ಸೋಮದತ್ತೇನ ಶಂಭವೇ ॥೧೩॥

ರುದ್ರರಲ್ಲಿ ಅಜೈಕಪಾತ್ ಅಹಿರ್ಬುಧ್ನಿ ವಿರೂಪಾಕ್ಷ ಎಂಬ ಮೂವರು ಶ್ರೀಕೃಷ್ಣನಿಗೆ ಸಹಾಯ ಮಾಡಲು ಭೂರಿ ಭೂರಿಶ್ರವ ಶಲ ಎಂದು ಮೂವರು ಪ್ರಖ್ಯಾತರಾದ ಮಕ್ಕಳಾಗಿ ಸೋಮದತ್ತನಿಂದ ಜನಿಸಿದರು. ಅವರಲ್ಲಿ ಭೂರಿಶ್ರವನು, ಶಿವ ಮುಂತಾದ ಎಲ್ಲ ರುದ್ರರ ಆವೇಶದಿಂದಲೂ ವರದಿಂದಲೂ ಅತ್ಯಂತ ಬಲಿಷ್ಠನಾಗಿದ್ದ. ಮಹಾ ಅಸ್ತ್ರಜ್ಞನಾಗಿದ್ದ. ಅದಕ್ಕಾಗಿ ಸೋಮದತ್ತ ಶಿವನ ಕುರಿತು ತಪಸ್ಸು ಮಾಡಿದ್ದ.

ದತ್ತೋ ವರಶ್ಚ ತೇನಾಸ್ಯ ತ್ವತ್ತ್ರೀಪಾಭಿಭೂತಿಕೃತ್ ।
ಬಲವೀರ್ಯಗುಣೋಪೇತೋ ನಾಮ್ನಾ ಭೂರಿಶ್ರವಾಃ ಸುತಃ ॥೧೪॥

ಭವಿಷ್ಯತಿ ಮಯಾವಿಷ್ಟೋ ಯಜ್ಞಶೀಲ ಇತಿ ಸ್ಮ ಹ ।
ತೇನ ಭೂರಿಶ್ರವಾ ಜಾತಃ ಸೋಮದತ್ತಸುತೋ ಬಲೀ ॥೧೫॥

'ನನ್ನಿಂದ ಆವಿಷ್ಟನಾಗಿದ್ದು ನಿನ್ನ ವಿರೋಧಿಗಳನ್ನು ಅಣಗಿಸಬಲ್ಲವ, ಬಲವೀರ್ಯ ಗುಣಗಳಿಂದ ಕೂಡಿದವ, ಯಜ್ಞಗಳನ್ನು ಮಾಡುವ ಸ್ವಭಾವದವ. ಇಂಥ ಭೂರಿಶ್ರವನೆಂಬ ಹೆಸರಿನ ಪುತ್ರ ನಿನಗೆ ಜನಿಸುವನು' ಎಂದು ಶಿವ ಸೋಮದತ್ತನಿಗೆ ವರ ನೀಡಿದ್ದ. ಅದರಿಂದ ಭೂರಿಶ್ರವ ಸೋಮದತ್ತನಿಗೆ ಮಗನಾಗಿ ಜನಿಸಿದ.

ಪೂರ್ವೋದಧೇಸ್ತೀರಗತೇಽಬ್ಜಸಂಭವೇ
ಗಂಗಾಯುತಃ ಪರ್ವಣಿ ಘೂರ್ಣತೋಽಬ್ಧಿಃ ।
ಅವಾಕ್ಷಿಪತ್ ತಸ್ಯ ತನೌ ನಿಜೋದ
ಬಿಂದುಂ ಶಶಾಪೈನಮಥಾಬ್ಜಯೋನಿಃ ॥೧೬॥

ಒಮ್ಮೆ ಒಂದು ಹುಣ್ಣಿಮೆ ದಿನ ಚತುರ್ಮುಖ ಬ್ರಹ್ಮ ಪೂರ್ವ ಸಮುದ್ರತೀರದಲ್ಲಿದ್ದಾಗ ಗಂಗಾಸಹಿತವಾದ ಉಕ್ಕೇರಿದ್ದ. ಅದರಿಂದ ಆತ ಬ್ರಹ್ಮನ ಮೈಯಲ್ಲಿ ತನ್ನ ನೀರಹನಿಯನ್ನು ಎರಚಿದ. ಆಗ ಬ್ರಹ್ಮ ಅವನನ್ನು ಶಾಂತನಾಗೆಂದು ಶಪಿಸಿದ.

ಮಹಾಭಿಷಜ್ ನಾಮ ನರೇಶ್ವರಸ್ತ್ವಂ ಭೂತ್ವಾ ಪುನಃ ಶಂತನುನಾಮಧೇಯಃ।
ಜನಿಷ್ಯಸೇ ವಿಷ್ಣುಪದೀ ತಥೈಷಾ ತತ್ರಾಪಿ ಭಾರ್ಯಾ ಭವತೋ ಭವಿಷ್ಯತಿ॥

ನೀನು ಮೊದಲಿಗೆ ಭೂಮಿಯಲ್ಲಿ ಮಹಾಭಿಷಕ್ ಎಂಬ ರಾಜನಾಗಿ ಹುಟ್ಟಿ ಪುನಃ ಶಂತನು ಎಂಬ ಹೆಸರಿನವನಾಗಿಯೂ ಜನಿಸುವಿ. ಗಂಗೆ ದೇವತಾ ಶರೀರದಲ್ಲಿ ಶಂತನು ಜನ್ಮದಲ್ಲಿ ನಿನಗೆ ಪತ್ನಿಯಾಗುವಳು.

ಶಾಂತೋ ಭವೇತ್ಯೇವ ಮಯೋದಿತಸ್ತ್ವಂ
ತನುತ್ವಮಾಪ್ತೋಽಥ ತತಶ್ಚ ಶಂತನುಃ ।
ಇತೀರಿತಃ ಸೋಽಪಿ ನೃಪೋ ಬಭೂವ
ಮಹಾಭಿಷಜ್ ನಾಮ ಹರೇಃ ಪದಾಶ್ರಯಃ ॥೧೮॥

'ಶಾಂತನಾಗೆಂದು ನಾನು ಶಪಿಸಿದ್ದರಿಂದ ನೀನು ಶರೀರದಲ್ಲಿ ಶಾಂತನಾದೆ. ಕುಗ್ಗಿದೆ. ಅದರಿಂದ ಶಾಂತತನು. ಶಂತನುವಾಗಿಯೂ ಹುಟ್ಟುವಿ' ಹೀಗೆ ಶಾಪ ಹೊಂದಿದ ವರುಣ ಮಹಾಭಿಷಕ್ ರಾಜನಾಗಿ ಅವತರಿಸಿದ, ಹರಿಪಾದವನ್ನು ಆಶ್ರಯಿಸಿದ.

ಸ ತತ್ರ ಭುಕ್ತ್ವಾ ಚಿರಕಾಲಮುರ್ವೀಂ
ತನುಂ ವಿಹಾಯಾಪ ಸದೋ ವಿಧಾತುಃ ।
ತತ್ರಾಪಿ ತಿಷ್ಠನ್ ಸುರವೃಂದಸನ್ನಿಧೌ
ದದರ್ಶ ಗಂಗಾಂ ಶ್ಲಥಿತಾಂಬರಾಂ ಸ್ವಕಾಮ್ ॥೧೯॥

ಮಹಾಭಿಷಕ್ ಆ ಜನ್ಮದಲ್ಲಿ ಭೂಮಿಯನ್ನು ಬಹುಕಾಲ ಆಳಿ ಶರೀರ ತ್ಯಾಗ ಮಾಡಿ ಬ್ರಹ್ಮನ ಆಸ್ಥಾನವನ್ನು ಸೇರಿದ. ಅಲ್ಲಿರುವಾಗ ಆತನೊಮ್ಮೆ ದೇವತೆಗಳ ಗುಂಪಿನ ಬಳಿ ಇದ್ದು ತನ್ನ ಪತ್ನಿಯಾದ ಗಂಗೆಯನ್ನು ಅವಳು ಉಟ್ಟ ಬಟ್ಟೆ ಗಾಳಿಗೆ ಸರಿದಿದ್ದಾಗ ನೋಡಿದ.

ಅವಾಙ್ಮುಖೇಷು ದ್ಯುಸದಸ್ಸುರಾಗಾ-
ನ್ನಿರೀಕ್ಷಮಾಣಂ ಪುನರಾತ್ಮ ಸಂಭವಃ ।
ಉವಾಚ ಭೂಮೌ ನೃಪತಿರ್ಭವಾಶು
ಶಪ್ತೋ ಯಥಾ ತ್ವಂ ಹಿ ಪುರಾ ಮಯೈವ ॥೨೦॥

ದೇವತೆಗಳೆಲ್ಲರೂ ನಗ್ನಸ್ತ್ರೀಯನ್ನು ನೋಡಕೂಡದೆಂದು ಮುಖವನ್ನು ತಗ್ಗಿಸಿ ಕುಳಿತಿದ್ದಾಗ ಮಹಾಭಿಷಕ್ ತನ್ನ ಪತ್ನಿ ಎಂದು ಅನುರಾಗದಿಂದ ಪುನಃ ಪುನಃ ನೋಡಿದ. ಆಗ ಬ್ರಹ್ಮ ಶಪಿಸಿದ- 'ಹಿಂದೆ ನಾನು ನಿನಗೆ ಶಾಪ ಕೊಟ್ಟಂತೆಯೆ ಭೂಮಿಯಲ್ಲಿ ರಾಜನಾಗಿ ಬೇಗನೆ ಜನಿಸು'.

ಇತೀರಿತಸ್ತತ್ ಕ್ಷಣತಃ ಪ್ರತೀಪಾತ್
ಬಭೂವ ನಾಮ್ನಾ ನೃಪತಿಃ ಸ ಶಂತನುಃ ।
ಅವಾಪ್ಯ ಗಂಗಾಂ ದಯಿತಾಂ ಸ್ವಕೀಯಾಂ
ತಯಾ ಮುಮೋದಾಬ್ದ ಗಣಾನ್ ಬಹೂಂಶ್ಚ ॥೨೧॥

ಹೀಗೆ ಶಪ್ತನಾದ ಮಹಾಭಿಷಕ್ ತಕ್ಷಣವೆ ಪ್ರತೀಪನಿಂದ ಶಂತನು ನಾಮಕನಾಗಿ ಜನಿಸಿದ. ತನ್ನ ಪ್ರೀತಿಯ ಮಡದಿಯಾದ ಗಂಗೆಯನ್ನೇ ಹೊಂದಿ ಅವಳೊಡನೆ ಬಹುವರ್ಷಗಳ ಕಾಲ ಸುಖಪಟ್ಟ.

ತೊಂಭತ್ತಾಲ್ಕನೆಯ ಅಧ್ಯಾಯ

(ಭರತವಂಶದಲ್ಲಿ ಮಹಾಭಿಷಜನ ಜನನ. ಅವನಿಗೆ, ಗಂಗೆಗೆ ಬ್ರಹ್ಮಶಾಪ, ಗಂಗೆ ಮತ್ತು ಅಷ್ಟವಸುಗಳ ಸಂವಾದ.)

ವೈಶಂಪಾಯನಃ

ಇಕ್ಷ್ವಾಕೂಣಾಮನ್ಯತಮೋ ರಾಜಾऽऽಸೀತ್ ಪೃಥಿವೀಪತಿಃ ।
ಮಹಾಭಿಷಗಿತಿ ಖ್ಯಾತಃ ಸತ್ಯವಾಕ್ ಸತ್ಯವಿಕ್ರಮಃ ॥೧॥

ಇಕ್ಷ್ವಾಕುವಂಶದಲ್ಲಿ ಸತ್ಯಪರಾಕ್ರಮನೂ, ಸತ್ಯನುಡಿಯುಳ್ಳವನೂ ಆದ ಪ್ರಸಿದ್ಧನಾದ 'ಮಹಾಭಿಷಕ್' ಎಂಬ ರಾಜನು ಬಂದನು.

ಸೋऽಶ್ವಮೇಧಸಹಸ್ರೇಣ ಶತಸಂಖ್ಯೇನ ಭಾರತ ।
ತೋಷಯಾಮಾಸ ದೇವೇಂದ್ರಂ ಸ್ವರ್ಗಂ ಲೇಭೇ ಚ ಸ ಪ್ರಭುಃ ॥೨॥

ಎಲೈ ಭಾರತನೇ ಅವನು ನೂರು ಸಾವಿರ ಅಶ್ವಮೇಧಯಾಗವನ್ನು ಮಾಡಿ, ದೇವೇಂದ್ರನನ್ನು ಸಂತೋಷಪಡಿಸಿ, ಸ್ವರ್ಗವನ್ನು ಪಡೆದನು.

ತತಃ ಕದಾಚಿದ್ ಬ್ರಹ್ಮಾಣಮುಪಾಸಾಂಚಕ್ರಿರೇ ಸುರಾಃ ।
ತಥಾ ರಾಜರ್ಷಯಃ ಸರ್ವೇ ಸ ಚ ರಾಜಾ ಮಹಾಭಿಷಕ್ ॥೩॥

ಅನಂತರ ಒಮ್ಮೆ ಬ್ರಹ್ಮದೇವರ ಬಳಿಯಲ್ಲಿ ದೇವತೆಗಳೂ, ಎಲ್ಲಾ ರಾಜರ್ಷಿಗಳೂ ಬ್ರಹ್ಮದೇವರನ್ನು ಒಲೈಸುತ್ತಿದ್ದರು. ಮಹಾಭಿಷಕ್ ರಾಜನೂ ಕೂಡ ಅಲ್ಲಿಗೆ ಬಂದಿದ್ದನು.

ಅಥ ಗಂಗಾ ಸರಿಚ್ಛ್ರೇಷ್ಠಾ ಸಮುಪಾಯಾತ್ ಪಿತಾಮಹಮ್ ।
ತಸ್ಯಾ ವಾಸಃ ಸಮುದ್ಧೂತಂ ಮಾರುತೇನ ಶಶಿಪ್ರಭಮ್ ॥೪॥

ಅನಂತರ ಶ್ರೇಷ್ಠನದಿಯಾದ ಗಂಗೆಯು ಬ್ರಹ್ಮದೇವರ ಸಭೆಗೆ ಬಂದಳು. ಅವಳ ಶುಭ್ರವಾದ ವಸ್ತ್ರವು ಗಾಳಿಯಿಂದ ಮೇಲಕ್ಕೆದ್ದಿತು.

ತತೋಽಭವನ್ ಸುರಗಣಾಃ ಸಹಸಾಽವಾಙ್ಮುಖಾಸ್ತದಾ ।
ಮಹಾಭಿಷಕ್ ತು ರಾಜರ್ಷಿರಶಂಕೋ ದೃಷ್ಟವಾನ್ ನದೀಮ್ ॥೫॥

ಆಗ ಎಲ್ಲಾ ದೇವತೆಗಳು ಒಮ್ಮೆಲೇ, ಮುಖವನ್ನು ಕೆಳಗೆ ಮಾಡಿದರು. ರಾಜರ್ಷಿಯಾದ ಮಹಾಭಿಷಕ್ ಆದರೂ ಸಂಕೋಚವಿಲ್ಲದೇ ತನ್ನ ಪತ್ನಿಯಾದ ನದಿಯನ್ನು ನೋಡಿದನು.

ಸೋಽಪಧ್ಯಾತೋ ಭಗವತಾ ಬ್ರಹ್ಮಣಾ ಸ ಮಹಾಭಿಷಕ್ ।
ಉಕ್ತಶ್ಚ ಜಾತೋ ಮರ್ತ್ಯೇಷು ಪುನರ್ಲೋಕಾನವಾಪ್ಸ್ಯಸಿ ॥೬॥

ಬ್ರಹ್ಮದೇವರಿಗೆ ಅಪಚಾರವನ್ನು ಮಾಡಿದ ಅವನು ಪೂಜ್ಯರಾದ ಬ್ರಹ್ಮದೇವರಿಂದ ಮನುಷ್ಯಯೋನಿಯಲ್ಲಿ ಅವತಾರವನ್ನು ಮಾಡಿ, ಪುನಃ ನಿನ್ನ ಲೋಕವನ್ನು ಹೊಂದುವಿ ಎಂದು ಶಾಪವನ್ನು ಪಡೆದನು.

ಮನುಷ್ಯೇಷು ಚಿರಂ ಸ್ಥಿತ್ವಾ ಲೋಕಾನ್ ಪ್ರಾಪ್ಸ್ಯಸಿ ಶಾಶ್ವತಾನ್ ।
ಯಯಾ ಹೃತಮನಾಶ್ಚಾಸಿ ಗಂಗಯಾ ತ್ವಂ ಸುದುರ್ಮತೇ ॥೭॥

ಸಾ ತು ತೇ ಮಾನುಷೇ ಲೋಕೇ ವಿಪ್ರಿಯಾಣ್ಯಾಚರಿಷ್ಯತಿ ।
ಯದಾ ತೇ ಭವಿತಾ ಮನ್ಯುಸ್ತದಾ ಶಾಪಾದ್ ವಿಮೋಕ್ಷ್ಯಸೇ ॥೮॥

ಮನುಷ್ಯಲೋಕದಲ್ಲಿ ಬಹುಕಾಲವಿದ್ದು ಅನಂತರ ನಿನ್ನ ಶಾಶ್ವತವಾದ ಲೋಕವನ್ನು ಪಡೆಯುತ್ತೀಯೆ. ಎಲೈ ದುರ್ಮತಿಯೇ, ಯಾವ ಗಂಗೆಯು ನಿನ್ನ ಮನಸ್ಸನ್ನು ಅಪಹರಿಸಿದಳೋ, ಅವಳೂ ಸಹ ಭೂಮಿಯಲ್ಲಿ ಹುಟ್ಟಿ, ನಿನಗೆ ಅಪ್ರಿಯವಾದ ಕೆಲಸಗಳನ್ನು ಮಾಡುವಳು. ನಿನಗೆ ಅವಳ ಮೇಲೆ ಕೋಪವು ಬಂದಾಗ, ಶಾಪದಿಂದ ಮೋಕ್ಷವನ್ನು ಪಡೆಯುವಿ (ಎಂದು ಶಾಪವನ್ನು ಕೊಟ್ಟನು)

ಸ ಚಿಂತಯಿತ್ವಾ ನೃಪತಿರ್ನೃಪಾನ್ ಸರ್ವಾಂಸ್ತಪೋಧನಾನ್ ।
ಪ್ರತೀಪಂ ರೋಚಯಾಮಾಸ ಪಿತರಂ ಭೂರಿವರ್ಚಸಮ್ ॥೯॥

ಹೀಗೆ ಶಾಪವನ್ನು ಪಡೆದ ಮಹಾಭಿಷಕ್ ರಾಜನು ತಪೋಧನರಾದ ಎಲ್ಲ ರಾಜರನ್ನೂ ವಿಮರ್ಶಿಸಿ, ಮಹಾವರ್ಚಸ್ವಿಯಾದ ಪ್ರತೀಪನು ತನ್ನ ತಂದೆಯಾಗಬೇಕೆಂದು ಬಯಸಿದನು.

ಸಾ ಮಹಾಭಿಷಜಂ ದೃಷ್ಟ್ವಾ ನದೀ ಧೈರ್ಯಾಚ್ಚ್ಯುತಂ ನೃಪಮ್ ।
ತಮೇವ ಮನಸಾ ಧ್ಯಾಯಂತ್ಯುಪಾವೃತ್ತಾ ಸರಿದ್ವರಾ ॥೧೦॥

ಆ ಸರಿಶ್ರೇಷ್ಠಳಾದ ಗಂಗೆಯಾದರೋ, ಬ್ರಹ್ಮದೇವರ ಸಭೆಯಲ್ಲಿ ಮಹಾಭಿಷಜನು ಮನಸ್ಸಿನ ಸ್ಥೈರ್ಯವನ್ನು ಕಳೆದುಕೊಂಡದ್ದನ್ನು ಗಮನಿಸಿ, ಅವನನ್ನೇ ಮನಸ್ಸಿನಲ್ಲಿ ಚಿಂತಿಸುತ್ತಾ ಹಿಂದಿರುಗಿದಳು.

ಸಾ ಚ ವಿಧ್ವಸ್ತಸಂಕಾಶಾನ್ ಕಶ್ಮಲಾಭಿಹತಾನ್ ಭುವಿ ।
ದದರ್ಶ ಪಥಿ ಗಚ್ಛಂತೀ ವಸೂನ್ ದೇವಾನ್ ದಿವೌಕಸಃ ॥೧೧॥

ಅವಳು ದಾರಿಯಲ್ಲಿ ನಡೆಯುತ್ತಾ ತೇಜೋಹೀನರಾದ, ಮಲಿನತೆಯಿಂದ ಕೂಡಿದ್ದ ದೇವಲೋಕದ ನಿವಾಸಿಗಳಾದ ಅಷ್ಟವಸುಗಳನ್ನು ಭೂಮಿಯಲ್ಲಿ ನೋಡಿದಳು.

ತಥಾರೂಪಾಂಶ್ಚ ತಾನ್ ದೃಷ್ಟ್ವಾ ಪಪ್ರಚ್ಛ ಸರಿತಾಂ ವರಾ ।
ಕಿಮಿದಂ ನಷ್ಟರೂಪಾಃ ಸ್ಥ ಕಚ್ಚಿತ್ ಕ್ಷೇಮಂ ದಿವೌಕಸಾಮ್ ।
ಕಿಮರ್ಥಂ ಮನುಜಾ ಭೂಮೌ ನಿಪತಿಷ್ಯಂತಿ ದುಃಖಿತಾಃ ॥೧೨॥

ಅಂತಹ ಸ್ಥಿತಿಯಲ್ಲಿದ್ದ ಅವರನ್ನು ನೋಡಿ, ಗಂಗೆಯು ಪ್ರಶ್ನಿಸಿದಳು. ಇದೇನು ನಿಮ್ಮ ರೂಪವನ್ನು ಕಳೆದುಕೊಂಡಿದ್ದೀರಿ ದೇವತೆಗಳಿಗೆ ಕ್ಷೇಮವಷ್ಟೇ ನೀವು ಏಕೆ ದುಃಖಿತರಾಗಿ ದೀನರಾಗಿ ಭೂಮಿಗೆ ಬೀಳುತ್ತಿರುವಿರಿ ?

ವೈಶಂಪಾಯನಃ

ತಾಮೂಚುರ್ವಸವೋ ದೀನಾಃ ಶಪ್ತಾ ವೈ ಸ್ಮೋ ಮಹಾನದಿ ।
ಅಸ್ವಯಂಕೃತಯಾ ಬುದ್ಧ್ಯಾ ವಸಿಷ್ಠೇನ ಮಹಾತ್ಮನಾ ॥೧೩॥

ಆಗ ದೀನರಾದ ವಸುಗಳು ಮಹಾನದಿಯೇ ನಾವು ಮಹಾತ್ಮರಾದ ವಸಿಷ್ಠರಿಂದ ಅವರಿಗೆ ವಶವಾಗದ ಬುದ್ಧಿಯಿಂದ ಶಪ್ತರಾಗಿದ್ದೇವೆ. (ವಸುಗಳಿಗೆ ಶಾಪವನ್ನು ಕೊಟ್ಟವರು ವಸಿಷ್ಠರಲ್ಲಿದ್ದ ಬ್ರಹ್ಮದೇವರು. ಆದ್ದರಿಂದಲೇ ಅವರ ಬುದ್ಧಿಯು ವಸಿಷ್ಠರಿಗೆ ಅಧೀನವಾಗಿರಲಿಲ್ಲ.)

ವಯಂ ಹಿ ಸಹಸಾ ಸರ್ವೇ ಪ್ರಚ್ಛನ್ನಂ ನಾವಬುಧ್ನುಮಃ ।
ಸಂಧ್ಯಾಂ ವಸಿಷ್ಠಮಾಸೀನಂ ತಮಭ್ಯನುಸೃತಾಃ ಪುರಾ ॥೧೪॥

ನಾವೆಲ್ಲರೂ ತಮ್ಮ ರೂಪವನ್ನು ಮರೆಸಿಕೊಂಡು ಸಂಧ್ಯೆಯನ್ನು ಆಚರಿಸುತ್ತಿದ್ದ ವಸಿಷ್ಠರೆಂದು ತಿಳಿಯದೇ ಹಿಂದೆ ಒಮ್ಮೆ ಅವರ ಬಳಿಗೆ ಹೋಗಿ, ಅವಮಾನ ಮಾಡಿದೆವು.

ತೇನ ಕೋಪಾದ್ ವಯಂ ಶಪ್ತಾ ಯೋನೌ ಸಂಭವತೇತಿ ಹ ।
ನ ತಚ್ಛಕ್ಯಮಕರ್ತುಂ ಚ ಯದುಕ್ತಂ ಬ್ರಹ್ಮವಾದಿನಾ ॥೧೫॥

ಅವರು ಕೋಪದಿಂದ 'ಮನುಷ್ಯಯೋನಿಯಲ್ಲಿ ಸಂಭವಿಸಿ' ಎಂದು ಶಾಪವನ್ನು ಕೊಟ್ಟರು. ಆ ಬ್ರಹ್ಮಜ್ಞಾನಿಗಳು ಆಡಿದ ಮಾತನ್ನು ಪರಿಹರಿಸಲು ಸಾಧ್ಯವಿಲ್ಲ.

ತ್ವಮಸ್ಮಾನ್ ಮಾನುಷೀ ಭೂತ್ವಾ ಸೂಷ್ವ ಪುತ್ರಾನ್ ವಸೂನ್ ಭುವಿ।
ನ ಮಾನುಷೀಣಾಂ ಜಠರಂ ಪ್ರವಿಶಾಮ ಕಥಂಚನ ॥೧೬॥

ನೀನು ಮನುಷ್ಯಲೋಕದಲ್ಲಿ ಬಂದು ನಮ್ಮೆಲ್ಲರನ್ನು ಮಕ್ಕಳನ್ನಾಗಿ ಪಡೆ. ನಾವು ಮನುಷ್ಯಸ್ತ್ರೀಯರ ಜಠರದಲ್ಲಿ ಪ್ರವೇಶಿಸಲಾರೆವು.

ತಾನುವಾಚ ವಸೂನ್ ಗಂಗಾ ತಥಾಽಸ್ತು ಸಮಯಾದಿತಿ ।
ಮರ್ತ್ಯೇಷು ಪುರುಷಶ್ರೇಷ್ಠಃ ಕೋ ವಾ ಭರ್ತಾ ಭವಿಷ್ಯತಿ ॥೧೭॥

ಗಂಗೆಯು ವಸುಗಳನ್ನು ಕುರಿತು ಒಂದು ಷರತ್ತಿನ ಮೇಲೆ ಹಾಗೆಯೇ ಆಗಲಿ ಎಂದು ಹೇಳಿ ಮನುಷ್ಯರಲ್ಲಿ ಯಾವ ಶ್ರೇಷ್ಠಪುರುಷನು ನನ್ನ ಪತಿಯಾಗುವನು ಎಂದು ಕೇಳಿದಳು.

ವಸವಃ

ಪ್ರತೀಪಸ್ಯ ಸುತೋ ವಿದ್ವಾನ್ ಶಂತನುರ್ನಾಮ ಧಾರ್ಮಿಕಃ ।
ತ್ವತ್ಕೃತೇ ಮಾನುಷೇ ಜಾತಃ ಸ ನಃ ಕರ್ತಾ ಭವಿಷ್ಯತಿ ॥೧೮॥

ಪ್ರತೀಪನ ಪುತ್ರನಾದ ಧಾರ್ಮಿಕನೂ, ಜ್ಞಾನಿಯೂ ಆದ ಶಂತನು ನಿನ್ನ ಸಲುವಾಗಿ ಮನುಷ್ಯಲೋಕದಲ್ಲಿ ಅವತರಿಸಿದ್ದಾನೆ. ಅವನು ನಮಗೆ ತಂದೆಯಾಗುವನು.

ಗಂಗಾ

ಮಮಾಪ್ಯೇವಂ ಮನೋ ಜಾತಂ ಯಥಾ ಮಾಂ ವದಥಾನಘಾಃ ।
ಪ್ರಿಯಂ ತಸ್ಯ ಕರಿಷ್ಯಾಮಿ ವಚನಂ ಚ ದಿವೌಕಸಾಮ್ ॥೧೯॥

ಎಲೈ ಅನಘರೇ, ನೀವು ಹೇಳುತ್ತಿರುವಂತೆ ನನಗೂ ಮನಸ್ಸಾಗಿದೆ. ನಾನು ಅವನಿಗೆ ಹಿತವನ್ನು ಮಾಡಿ, ದೇವತೆಗಳ ಕಾರ್ಯವನ್ನು ಸಾಧಿಸುತ್ತೇನೆ.

ವಸವಃ

ಜಾತಾನ್ ಕುಮಾರಾನ್ ಸ್ವಾನಪ್ಸು ಪ್ರಕ್ಷೇಪ್ತುಂ ವೈ ತ್ವಮರ್ಹಸಿ ।
ಯಥಾ ನ ಚಿರಕಾಲಂ ನೋ ನಿಷ್ಕೃತಿಃ ಸ್ಯಾತ್ ತ್ರಿಲೋಕಗೇ ॥೨೦॥

ತ್ರಿಪಥಗಾಮಿನಿಯೇ ನಾವು ಹುಟ್ಟಿದ ಕೂಡಲೇ ನಿಮ್ಮ ಮಕ್ಕಳಾಗುವ ನಮ್ಮನ್ನು ಗಂಗೆಯ ನೀರಿನಲ್ಲಿ ನೀನು ಹಾಕಬೇಕು. ನಾವು ಚಿರಕಾಲ ಮನುಷ್ಯಲೋಕದಲ್ಲಿರಲು ಬಯಸುವುದಿಲ್ಲ.

ಗಂಗಾ

ಏವಮೇವ ಕರಿಷ್ಯಾಮಿ ಪುತ್ರಸ್ತಸ್ಯ ವಿಧೀಯತಾಮ್ ।
ನಾಸ್ಯ ಮೋಘಂ ಭವೇತ್ ಕರ್ಮ ಪುತ್ರಹೇತೋಃ ಕೃತಂ ಮಯಾ ॥

ಹಾಗೆಯೇ ಮಾಡುವೆನು. ಆದರೆ ಅವನಿಗೆ ಒಬ್ಬ ಮಗನನ್ನು ಒದಗಿಸಿ. ಮಗನನ್ನು ಪಡೆಯುವ ಸಲುವಾಗಿ, ನನ್ನ ಸಂಬಂಧವನ್ನು ಮಾಡಿದ ಅವನ ಕ್ರಿಯೆಯು ವ್ಯರ್ಥವಾಗಬಾರದು.

ವಸವಃ

ತುರ್ಯಾಂಶಂ ವೈ ಪ್ರದಾಸ್ಯಾಮೋ ವೀರ್ಯಸ್ಯೈಕೈಕಶೋ ವಯಮ್ ।
ತೇನ ವೀರ್ಯೇಣ ಪುತ್ರಸ್ತೇ ಭವಿತಾ ತಸ್ಯ ಚೇಪ್ಸಿತಃ ॥೨೨॥

ನ ಸಂಪತ್ಸ್ಯತಿ ಮರ್ತ್ಯೇಷು ಪುನಸ್ತಸ್ಯ ಚ ಸಂತತಿಃ ।
ಅಪುತ್ರಸ್ತು ನರವ್ಯಾಘ್ರೋ ಭವಿಷ್ಯತಿ ಸುತಸ್ತವ ॥೨೩॥

ನಾವು ನಮ್ಮಲ್ಲಿ ಪ್ರತಿಯೊಬ್ಬರ ಸಾಮರ್ಥ್ಯದ ನಾಲ್ಕನೆಯ ಒಂದು ಭಾಗವನ್ನು ಅವನಿಗೆ ಕೊಡುವೆವು. ಆ ಸಾಮರ್ಥ್ಯದಿಂದ ನಿನಗೆ ಇಷ್ಟವಾದ ಮಗನು ಉಂಟಾಗಲಿ. ಭೂಲೋಕದಲ್ಲಿ ಅವನ ಸಂತತಿಯು ಮುಂದುವರೆಯುವುದಿಲ್ಲ. ನಿನ್ನ ಮಗನು ಪುತ್ರಹೀನನಾಗಿ ನರಶಾರ್ದೂಲನಾಗುವನು.

ವೈಶಂಪಾಯನಃ

ಏವಂ ಚ ಸಮಯಂ ಕೃತ್ವಾ ಗಂಗಯಾ ವಸವಶ್ಚ ತೇ ।
ಜಗ್ಮುಃ ಪ್ರಹೃಷ್ಟಮನಸೋ ಯಥಾಸಂಕಲ್ಪಮಂಜಸಾ ॥೨೪॥

ಹೀಗೆ ವಸುಗಳು ಗಂಗೆಯ ಜೊತೆಯಲ್ಲಿ ತಾವು ಸಂಕಲ್ಪಿಸಿದಂತೆ ಒಳ್ಳೆಯ ನಿಬಂಧನೆಯನ್ನು ಮಾಡಿಕೊಂಡು ಸಂತೋಷಗೊಂಡ ಮನಸ್ಸಿನಿಂದ ಹೊರಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಚತುರ್ನವತಿತಮೋऽಧ್ಯಾಯಃ ॥

॥ ಸಂಭವಪರ್ವಣಿ ದ್ವಿಚತ್ವಾರಿಂಶೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ತೊಂಭತ್ನಾಲ್ಕನೆಯ ಅಧ್ಯಾಯ ಮುಗಿಯಿತು

★★★★★

ತೊಂಭತ್ತೈದನೆಯ ಅಧ್ಯಾಯ

(ಪ್ರತೀಪ-ಗಂಗೆಯರ ಪ್ರಸಂಗ, ಶಂತನುವಿನ ಜನ್ಮ. ಅವನಿಗೆ ರಾಜ್ಯಾಭಿಷೇಕ, ಮತ್ತು ಗಂಗೆಯ ಜೊತೆಯಲ್ಲಿ ಸಂವಾದ.)

ವೈಶಂಪಾಯನಃ

ಪ್ರತೀಪಸ್ತು ತತೋ ರಾಜಾ ಸರ್ವಭೂತಹಿತೇ ರತಃ ।
ನಿಷಸಾದ ಮಹಾಬಾಹುರ್ಗಂಗಾತೀರೇ ಜಿತೇಂದ್ರಿಯಃ ॥೧॥

ಒಮ್ಮೆ ಜಿತೇಂದ್ರಿಯನಾದ, ಸರ್ವಭೂತಹಿತರತನಾದ, ಮಹಾಬಾಹುವಾದ ಪ್ರತೀಪರಾಜನು ಗಂಗೆಯ ದಡದಲ್ಲಿ ಕುಳಿತಿದ್ದನು.

ತಸ್ಯ ರೂಪಗುಣೋಪೇತಾ ಲೋಭನೀಯತಮಾಕೃತಿಃ ।
ಉತ್ತೀರ್ಯ ಗಂಗಾ ಸಲಿಲಾದುದ್ದೇಶಂ ಸ್ತ್ರೀ ಸಮಭ್ಯಗಾತ್ ॥೨॥

ಸುಂದರವಾದ ಮತ್ತು ಲೋಭನೀಯವಾದ ಆಕೃತಿಯುಳ್ಳ ಗಂಗೆಯು ಒಳ್ಳೆಯ ರೂಪದಿಂದಲೂ ಗುಣದಿಂದಲೂ ಕೂಡಿದವಳಾಗಿ, ಸ್ತ್ರೀರೂಪವನ್ನು ಧರಿಸಿ, ನೀರನ್ನು ದಾಟಿ ದಡಕ್ಕೆ ನಡೆದುಕೊಂಡು ಬಂದಳು.

ಅಧೀಯಾನಸ್ಯ ರಾಜರ್ಷೇಸ್ತಸ್ಯ ಸಾ ದೇವವರ್ಣಿನೀ ।
ದಕ್ಷಿಣಂ ಸಾಲಸಂಕಾಶಮೂರುಂ ಭೇಜೇ ಶುಭಾನನಾ ॥೩॥

ದೇವಸುಂದರಿಯಾದ ಶುಭಾನನೆಯಾದ ಅವಳು ಏನನ್ನೋ ಚಿಂತಿಸುತ್ತಿದ್ದ ರಾಜರ್ಷಿಯ ಸಾಲವೃಕ್ಷದ ಬುಡದಂತೆ ವಿಸ್ತಾರವಾಗಿದ್ದ ಬಲತೊಡೆಯ ಮೇಲೆ ಕುಳಿತುಕೊಂಡಳು.

ಪ್ರತೀಪಸ್ತು ಮಹೀಪಾಲಸ್ತಾಮುವಾಚ ಮನಸ್ವಿನೀಮ್ ।
ವಾಕ್ಯಂ ವಾಕ್ಯವಿದಾಂ ಶ್ರೇಷ್ಠೋ ಧರ್ಮನಿಶ್ಚಯತತ್ತ್ವವಿತ್ ।
ಕರವಾಣಿ ಕಿಂ ತೇ ಕಲ್ಯಾಣಿ ಯದರ್ಥಂ ತ್ವಮಿಹಾಭ್ಯಗಾಃ ॥೪॥

ಮಾತನಾಡುವರಲ್ಲಿ ಶ್ರೇಷ್ಠನಾದ ಮತ್ತು ಸರಿಯಾದ ಧರ್ಮಜ್ಞಾನವನ್ನು ಹೊಂದಿದ್ದ ಆ ಪ್ರತೀಪರಾಜನು ಆ ಧೈರ್ಯಶಾಲಿನಿಯನ್ನು ಕುರಿತು ಕಲ್ಯಾಣಿ, ನಿನಗೆ ಏನು ಉಪಕಾರ ಮಾಡಲಿ ? ಏತಕ್ಕಾಗಿ ನೀನು ಇಲ್ಲಿಗೆ ಬಂದೆ ಎಂದು ಕೇಳಿದನು.

ಗಂಗಾ

ಕಾಮಯೇ ತ್ವಾಂ ನರವ್ಯಾಘ್ರ ಸ ಕೌರವ್ಯ ಭಜಸ್ವ ಮಾಮ್ ।
ತ್ಯಾಗಃ ಕಾಮಯಮಾನಾನಾಂ ಸ್ತ್ರೀಣಾಂ ಸದ್ಭಿರ್ವಿಗರ್ಹಿತಃ ॥೫॥

ಕುರುಕುಲದಲ್ಲಿ ಜನಿಸಿದ ಕುರುಶ್ರೇಷ್ಠನೇ, ನಾನು ನಿನ್ನ ಮೇಲಿನ ಕಾಮದಿಂದ ನಿನ್ನ ಬಳಿಗೆ ಬಂದಿದ್ದೇನೆ. ರಾಜರು ಕಾಮದಿಂದ ಬಂದ ಸ್ತ್ರೀಯರನ್ನು ತಿರಸ್ಕರಿಸುವುದನ್ನು ಸಜ್ಜನರು ನಿಂದಿಸುತ್ತಾರೆ.

ಪ್ರತೀಪಃ

ನಾಹಂ ಕಾಮಾತ್ ಸ್ತ್ರಿಯಂ ಭದ್ರೇ ಗಚ್ಛೇಯಂ ವರವರ್ಣಿನಿ ।
ನ ಚಾಸವರ್ಣಾಂ ಕಲ್ಯಾಣಿ ಧರ್ಮ್ಯಂ ತದ್ ವಿದ್ಧಿ ಮೇ ವ್ರತಮ್ ॥

ಸುಂದರಿಯೇ, ಮತ್ತು ಮಂಗಳಸ್ವರೂಪಳೇ, ನಾನು ಕಾಮದಿಂದ ಯಾವ ವನಿತೆಯ ಸಂಗವನ್ನೂ ಮಾಡುವುದಿಲ್ಲ. ಕಲ್ಯಾಣಿಯೇ, ಕ್ಷತ್ರಿಯಳಲ್ಲದವಳ ಜೊತೆಯಲ್ಲಿಯೂ ಸಂಗವನ್ನು ಮಾಡುವುದಿಲ್ಲ. ಇದು ಧರ್ಮಬದ್ಧವಾದ ವ್ರತವೆಂದು ತಿಳಿ.

ಗಂಗಾ

ನಾಶ್ರೇಯಸ್ಯಸ್ಮಿ ನಾಗಮ್ಯಾ ನ ವಕ್ತವ್ಯಾ ಕಥಂಚನ ।
ಮಾಂ ವೈ ಭಜಸ್ವ ನೃಪತೇ ದೇಹಿ ಕಾಮಂ ವರಸ್ತ್ರಿಯಃ ॥೭॥

ರಾಜನೇ, ನಾನು ನೀಚಳಲ್ಲ, ಸಂಗಕ್ಕೆ ಅಯೋಗ್ಯಳೂ ಅಲ್ಲ, ನಿಂದನೀಯಳೂ ಅಲ್ಲ. ವರವನಿತೆಯಾಗಿ ಕಾಮವನ್ನು ಕೇಳುತ್ತಿರುವ ನನ್ನನ್ನು ಸ್ವೀಕರಿಸು.

ಪ್ರತೀಪಃ

ಸಮಯಾತೀತಮೇತದ್ ವೈ ಯನ್ಮಾಂ ಚೋದಯಸಿ ಪ್ರಿಯಮ್ ।
ಅನ್ಯಥಾ ಪ್ರತಿಪನ್ನಂ ಮಾಂ ಕ್ಷಿಣುಯಾದ್ ಧರ್ಮವಿಪ್ಲವಃ ॥೮॥

ಪ್ರಾಪ್ಯ ದಕ್ಷಿಣಮೂರುಂ ಮೇ ಸಮಾಶ್ಲಿಷ್ಟಾ ವರಾಂಗನೇ ।
ಅಪತ್ಯಾನಾಂ ಸ್ನುಷಾಣಾಂ ಚ ಆಸನಂ ವಿದ್ಧಿ ತಚ್ಶುಭೇ ॥೯॥

ನೀನು ನನಗೆ ಏನು ಒತ್ತಾಯ ಮಾಡುತ್ತಿದ್ದೀಯೊ ಅಂತಹ ನಿನಗೆ ಪ್ರಿಯವಾದ ವಿಷಯವು ಶಾಸ್ತ್ರಮರ್ಯಾದೆಯನ್ನು ಮೀರಿದೆ. ನಾನು ಬೇರೆ ರೀತಿ ಭಾವಿಸಿದರೆ, ಧರ್ಮನಾಶವುಂಟಾಗಿ, ಅದು ನನ್ನನ್ನು ನಾಶಮಾಡುತ್ತದೆ. ವರಾಂಗಿನಿಯೇ, ನೀನು ನನ್ನ ಬಲ ತೊಡೆಯನ್ನು ಏರಿ ನನ್ನನ್ನು ಆಲಂಗಿಸಿದೆ. ಶುಭಳಾದವಳೇ, ಆ ಸ್ಥಾನವು ಮಕ್ಕಳು ಮತ್ತು ಸೊಸೆಯರಿಗೆ ಸೇರಿದ್ದೆಂದು ತಿಳಿ.

ಸವ್ಯೋರುರ್ಭಾಮಿನೀಭಾಗಸ್ತ್ವಯಾ ಸಮ್ಯಗ್ ವಿವರ್ಜಿತಃ ।
ತಸ್ಮಾದಹಂ ನಾಚರಾಮಿ ತ್ವಯಿ ಕಾಮಂ ತು ಕಾಮತಃ ॥೧೦॥

ಎಡತೊಡೆಯು ಪತ್ನಿಯ ಭಾಗ. ನೀನು ಅದನ್ನು ತ್ಯಜಿಸಿದ್ದಿಯೆ. ಆದ್ದರಿಂದ ಮನಸ್ಸಿಗೆ ಬಂದಂತೆ ನಾನು ನಿನ್ನ ಜೊತೆಯಲ್ಲಿ ಕಾಮವನ್ನು ಆಚರಿಸುವುದಿಲ್ಲ.

ಸ್ನುಷಾ ಮೇ ಭವ ಕಲ್ಯಾಣಿ ಪುತ್ರಾರ್ಥಂ ತ್ವಾಂ ವೃಣೋಮ್ಯಹಮ್ ।
ಸ್ನುಷಾಪಾರ್ಶ್ವಂ ಹಿ ವಾಮೋರು ತ್ವಮಾಗಮ್ಯ ಸಮಾಶ್ರಿತಾ ॥೧೧॥

ಕಲ್ಯಾಣಿಯೇ, ನೀನು ನನ್ನ ಸೊಸೆಯಾಗು, ನನ್ನ ಮಗನ ಸಲುವಾಗಿ, ನಿನ್ನನ್ನು ಸ್ವೀಕರಿಸುತ್ತೇನೆ. ವಾಮೋರುವೇ, ನೀನು ಬಂದು ಸೊಸೆಯ ಸ್ಥಾನವನ್ನು ಆಶ್ರಯಿಸಿದೆಯಷ್ಟೆ?

ಗಂಗಾ

ಏವಮಪ್ಯಸ್ತು ಧರ್ಮಜ್ಞ ಸಂಯೋಗಃ ಸ್ಯಾತ್ ಸುತೇನ ತೇ ।
ತ್ವದ್ಭಕ್ತ್ಯೈವ ಗಮಿಷ್ಯಾಮಿ ಪ್ರಖ್ಯಾತಂ ಭಾರತಂ ಕುಲಮ್ ॥೧೨॥

ಧರ್ಮಜ್ಞನೇ, ಹಾಗೆಯೇ ಆಗಲಿ. ನಿನ್ನ ಮಗನ ಜೊತೆಯಲ್ಲಿಯೇ ಸಂಯೋಗವನ್ನು ಹೊಂದುತ್ತೇನೆ. ನಿನ್ನ ಮೇಲಿನ ಪ್ರೀತಿ-ಗೌರವಗಳಿಂದಲೇ ನಾನು ಪ್ರಖ್ಯಾತವಾದ ಭಾರತಕುಲವನ್ನು ಪ್ರವೇಶಿಸುವೆನು.

ಪೃಥಿವ್ಯಾಂ ಪಾರ್ಥಿವಾ ಯೇ ಚ ತೇಷಾಂ ಯೂಯಂ ವರಾ ಗುಣೈಃ।
ಗುಣಾ ನ ಹಿ ಮಯಾ ಶಕ್ಯಾ ವಕ್ತುಂ ವರ್ಷಶತೈರಪಿ ॥೧೩॥

ಭೂಮಿಯಲ್ಲಿ ಎಷ್ಟು ಜನ ರಾಜರಿದ್ದಾರೋ ಅವರೆಲ್ಲರಿಗಿಂತ ಗುಣಗಳಿಂದ ಶ್ರೇಷ್ಠರಾದವರು ನೀವು. ನಿಮ್ಮ ಗುಣಗಳನ್ನು ನಾನು ನೂರುವರ್ಷಗಳಲ್ಲಿಯೂ ನುಡಿಯಲು ಸಾಧ್ಯವಿಲ್ಲ.

ಯೋಽಯಂ ಪ್ರಣೇತಾ ವಂಶಸ್ಯ ತವ ಪುತ್ರೋ ನೃಪೋತ್ತಮ ।
ಸ ಹಿ ಮೇಽಭಿಜನಂ ಜಾತಿಮಾಚಾರಂ ಚಾಪಿ ತದ್ ವಿಭೋ ॥೧೪॥

ನ ಮೀಮಾಂಸೇತ ತೇ ಪುತ್ರಃ ಸರ್ವಮೇವ ನೃಪೋತ್ತಮ ।
ಏವಂ ವಸಂತೀ ರಾಜೇಂದ್ರ ವರ್ಧಯಿಷ್ಯಾಮಿ ತೇ ಪ್ರಿಯಮ್ ।
ಪುತ್ರೈಃ ಪುಣ್ಯೈಃ ಸುಖೈಶ್ಚಾಪಿ ಸ್ವರ್ಗಂ ಜೇಷ್ಯತಿ ತೇ ಸುತಃ ॥೧೫॥

ಎಲೈ ನೃಪೋತ್ತಮನೇ, ನಿನ್ನ ವಂಶಧರನಾದ ಯಾವ ಪುತ್ರನು ನನ್ನನ್ನು ವಿವಾಹವಾಗುತ್ತಾನೋ ಅವನು ನನ್ನ ಸ್ವರೂಪವನ್ನಾಗಲೀ, ನನ್ನ ಕುಲವನ್ನಾಗಲೀ, ನನ್ನ ಆಚಾರವನ್ನಾಗಲೀ ಯಾವುದನ್ನೂ ಎಂದೂ ವಿಚಾರ ಮಾಡಬಾರದು. ಎಲೈ ರಾಜೇಂದ್ರನೇ, ಹೀಗೆ ವಾಸ ಮಾಡುತ್ತಾ ನಾನು ನಿನಗೆ ಪ್ರಿಯವನ್ನು ಉಂಟುಮಾಡುವೆನು. ನಿನ್ನ ಮಗನು ಪವಿತ್ರನಾದ ಪುತ್ರನನ್ನು ಮತ್ತು ಸುಖವನ್ನು ಪಡೆದು ಸ್ವರ್ಗಲೋಕವನ್ನು ಜಯಿಸುವನು.

ವೈಶಂಪಾಯನಃ

ತಥೇತ್ಯುಕ್ತ್ವಾ ತು ಸಾ ರಾಜ್ಞಾ ತತ್ರೈವಾಂತರಧೀಯತ ।
ಅದೃಶ್ಯಾ ರಾಜಸಿಂಹಸ್ಯ ಪಶ್ಯತಃ ಸಾಽಭವತ್ ತದಾ ॥೧೬॥

ಪುತ್ರಜನ್ಮ ಪ್ರತೀಕ್ಷನ್ ವೈ ಸ ರಾಜಾ ತದಧಾರಯತ್ ।
ಏತಸ್ಮಿನ್ನೇವ ಕಾಲೇ ತು ಪ್ರತೀಪಃ ಕ್ಷತ್ರಿಯರ್ಷಭಃ ॥೧೭॥

ರಾಜನು ಹಾಗೆಯೇ ಆಗಲಿ ಎಂದು ಹೇಳಿದಾಗ ಅವಳು ಅಲ್ಲಿಯೇ ಅಂತರ್ಧಾನವನ್ನು ಹೊಂದಿ, ಆ ರಾಜಶ್ರೇಷ್ಠನ ಕಣ್ಣೆದುರಿಗೆ ಅದೃಶ್ಯಳಾದಳು. ಮಗನ ಜನನವನ್ನು ನಿರೀಕ್ಷಿಸುತ್ತಾ ಪ್ರತೀಪನು ಎಲ್ಲ ವಿಷಯಗಳನ್ನು ಮನಸ್ಸಿನಲ್ಲಿಯೇ ಧರಿಸಿದನು.

ತಪಸ್ತೇಪೇ ಸುತಸ್ಯಾರ್ಥೇ ಸಭಾರ್ಯಃ ಕುರುನಂದನ ।
ಪ್ರತೀಪಸ್ಯ ತು ಭಾರ್ಯಾಯಾಂ ಗರ್ಭಃ ಶ್ರೀಮಾನಜಾಯತ ॥೧೮॥

ಈ ಕಾಲದಲ್ಲಿ ಕ್ಷತ್ರಿಯಶ್ರೇಷ್ಠನಾದ ಪ್ರತೀಪನು ಮಗನನ್ನು ಪಡೆಯುವ ಸಲುವಾಗಿ, ಪತ್ನಿಯ ಜೊತೆಯಲ್ಲಿ ತಪಸ್ಸನ್ನು ಮಾಡಿದನು. ಎಲೈ ಕುರುನಂದನನೇ, ಪ್ರತೀಪನ ಭಾರ್ಯೆಯು ಕಾಂತಿಯುಕ್ತವಾದ ಗರ್ಭವನ್ನು ಧರಿಸಿದಳು.

ಶ್ರಿಯಾ ಪರಮಯಾ ಯುಕ್ತಃ ಶುಕ್ಲಪಕ್ಷೇ ಯಥಾ ಶಶೀ ।
ತತಸ್ತು ದಶಮೇ ಮಾಸಿ ಪ್ರಾಜಾಯತ ರವಿಪ್ರಭಮ್ ॥೧೯॥

ಕುಮಾರಂ ದೇವಗರ್ಭಾಭಂ ಪ್ರತೀಪಮಹಿಷೀ ತದಾ ।
ತಯೋಃ ಸಂಭವತ್ ಪುತ್ರೋ ವೃದ್ಧಯೋಃ ಸ ಮಹಾಭಿಷಕ್ ॥೨೦॥

ಒಳ್ಳೆಯ ಕಾಂತಿಯಿಂದ ಕೂಡಿದ ಆ ಗರ್ಭವು ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಯನ್ನು ಹೊಂದಿತು. ಅನಂತರ ಹತ್ತನೆಯ ತಿಂಗಳಲ್ಲಿ ಪ್ರತೀಪನ ರಾಣಿಯು ಸೂರ್ಯನ ಕಾಂತಿಯುಳ್ಳ ದೇವಕುಮಾರನಂತಿರುವ ಮಗನನ್ನು ಪಡೆದಳು. ಅವರಿಬ್ಬರೂ ವೃದ್ಧರಾದ ಮೇಲೆ ಆ ಮಗುವನ್ನು ಪಡೆದಿದ್ದರು. ಮಹಾಭಿಷಕರಾಜನೇ ಅವರಿಗೆ ಪುತ್ರನಾಗಿ ಜನಿಸಿದ್ದನು.

ಶಾಂತಸ್ಯ ಜಜ್ಞೇ ಸಂತಾನಂ ತಸ್ಮಾದಾಸೀತ್ ಸ ಶಂತನುಃ ।
ತಸ್ಯ ಜಾತಸ್ಯ ಕೃತ್ಯಾನಿ ಪ್ರತೀಪೋऽಕಾರಯತ್ ಪ್ರಭುಃ ।
ಜಾತಕರ್ಮಾದಿ ವಿಪ್ರೈಸ್ತು ವೇದೋಕ್ತೈಃ ಕರ್ಮಭಿಸ್ತದಾ ॥೨೧॥

ಸಂತತಿಯ ಆಸೆಯಿಂದ ನಿವೃತ್ತನಾಗಿದ್ದ ಅವನಿಗೆ ಸಂತಾನವು ಉಂಟಾದದ್ದರಿಂದ ಮಗುವಿಗೆ 'ಶಂತನು' ಎಂದು ನಾಮಕರಣ ಮಾಡಿದರು. ಹುಟ್ಟಿದ ಮಗುವಿಗೆ

ಪ್ರತೀಪನು ಬ್ರಾಹ್ಮಣರಿಂದ ಜಾತಕರ್ಮ ಮೊದಲಾದ ಎಲ್ಲಾ ವೇದೋಕ್ತ ಸಂಸ್ಕಾರಗಳನ್ನೂ ಮಾಡಿಸಿದನು.

ನಾಮಕರ್ಮ ಚ ವಿಪ್ರಾಸ್ತು ಚಕ್ರುಃ ಪರಮಸಂಸ್ಕೃತಮ್ ।
ಶಂತನೋರವನೀಪಾಲ ವೇದೋಕ್ತೈಃ ಕರ್ಮಭಿಸ್ತದಾ ॥೨೨॥

ರಾಜನೇ, ಅನಂತರ ಬ್ರಾಹ್ಮಣರು ವೇದೋಕ್ತವಿಧಾನದಿಂದ ಶಂತನುವಿಗೆ ನಾಮಕರಣಾದಿ ಸಂಸ್ಕಾರಗಳನ್ನು ಮಾಡಿ, ಅವನನ್ನು ಪರಮಸಂಸ್ಕೃತನನ್ನಾಗಿ ಮಾಡಿದರು.

ತತಃ ಸಂವರ್ಧಿತೋ ರಾಜಾ ಶಂತನುರ್ಲೋಕಧಾರ್ಮಿಕಃ ।
ಸ ತು ಲೇಭೇ ಪರಾಂ ನಿಷ್ಠಾಂ ಧರ್ಮೇ ಧರ್ಮಭೃತಾಂ ವರಃ ।
ಧನುರ್ವೇದೇ ಚ ವೇದೇ ಚ ಗತಿಂ ಸ ಪರಮಾಂ ಗತಃ ॥೨೩॥

ಅನಂತರ ಲೋಕಧರ್ಮವನ್ನು ತಿಳಿದ ಶಂತನುವು ಬೆಳೆಸಲ್ಪಟ್ಟನು. ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಅವನು ಧರ್ಮದಲ್ಲಿ ಮಹಾನಿಷ್ಠೆಯನ್ನು ಪಡೆದನು. ಧನುರ್ವೇದದಲ್ಲಿಯೂ, ವೇದದಲ್ಲಿಯೂ ಶ್ರೇಷ್ಠವಾದ ಜ್ಞಾನವನ್ನು ಪಡೆದನು.

ಯೌವನಂ ಚಾಪಿ ಸಂಪ್ರಾಪ್ತಃ ಕುಮಾರೋ ವದತಾಂ ವರಃ ।
ಸಂಸ್ಮರಂಶ್ಚಾಕ್ಷಯಾನ್ ಲೋಕಾನ್ ವಿಜಿಂತಾಸ್ತಾನ್ ಸ್ವಕರ್ಮಣಾ ॥೨೪॥

ಮಾತನಾಡುವರಲ್ಲಿ ಶ್ರೇಷ್ಠನಾದ ಶಂತನುವು ಯೌವನವನ್ನು ಹೊಂದಿದನು. ತನ್ನ ಧಾರ್ಮಿಕ ಕರ್ಮಗಳಿಂದ ವಿಜಿತವಾದ ಅಕ್ಷಯಲೋಕಗಳ ಕಲ್ಪನೆಯು ಅವನಿಗಿದ್ದಿತು.

ಬಭೂವ ಧರ್ಮಕೃದ್ ರಾಜಾ ಶಂತನುರ್ಭರತರ್ಷಭ ।
ಪ್ರತೀಪಃ ಶಂತನುಂ ಪುತ್ರಂ ಯೌವನಸ್ಥಮಬೋಧಯತ್ ॥೨೫॥

ಭರತರ್ಷಭನೇ, ಶಂತನುರಾಜನು ಬಹಳ ಧರ್ಮವನ್ನು ಆಚರಿಸಿದನು. ಶಂತನುವು ಯೌವನಸ್ಥನಾದ ಮೇಲೆ ಒಮ್ಮೆ ಪ್ರತೀಪನು ಅವನಿಗೆ ಹೀಗೆ ಉಪದೇಶಿಸಿದನು.

ಪುರಾ ಸ್ತ್ರೀ ಮಾಂ ಸಮಭ್ಯಾಗಾಚ್ಛಂತನೋ ಭೂತಯೇ ತವ ।
ತ್ವಾಮಾವ್ರಜೇದ್ ಯದಿ ರಹಃ ಸಾ ಪುತ್ರ ವರವರ್ಣಿನೀ ॥೨೬॥

ಕಾಮಯಾನಾಭಿರೂಪಾಢ್ಯಾ ದಿವ್ಯಸ್ತ್ರೀ ಪುತ್ರಕಾಮ್ಯಯಾ ।
ನ ಪ್ರಷ್ಟವ್ಯಾ ತ್ವಯಾ ಸಾ ವೈ ಕ್ವಾಸಿ ಕಸ್ಯ ಸುತಾ ತ್ವಿತಿ ॥೨೭॥

ಶಂತನು ಹಿಂದೆ ಒಮ್ಮೆ ಒಬ್ಬ ಸುಂದರ ವನಿತೆಯು ನಿನ್ನ ಶ್ರೇಯಸ್ಸಿಗಾಗಿ ನನ್ನ ಬಳಿಗೆ ಬಂದಳು. ಪುತ್ರನೇ, ಒಂದು ವೇಳೆ ನೀನು ಏಕಾಂತದಲ್ಲಿರುವಾಗ ದಿವ್ಯರೂಪವನ್ನು ಧರಿಸಿದ ಆ ಸುಂದರ ವನಿತೆಯು ಬಂದು ಪುತ್ರನ ಆಸೆಯಿಂದ ನಿನ್ನನ್ನು ಕಾಮಿಸಿದರೆ, ನೀನು ಅವಳನ್ನು ನೀನು ಯಾರು? ಮತ್ತು ಯಾರ ಮಗಳು? ಎಂದು ಕೇಳಬಾರದು.

ಯಚ್ಚ ಕುರ್ಯಾನ್ನ ತತ್ ಕಾರ್ಯಂ ಪ್ರತಿಷೇಧ್ಯಂ ತ್ವಯಾऽನಘ ।
ಮನ್ನಿಯೋಗಾದ್ ಭಜಂತೀಂ ತಾಂ ಭಜೇಥಾ ಇತ್ಯುವಾಚ ತಮ್ ॥

ಎಲೈ ಅನಘನೇ, ಅವಳು ಏನು ಮಾಡಿದರೂ ನನ್ನ ಅಪ್ಪಣೆಯಂತೆ ಎಂದೂ ಬೇಡವೆಂದು ಹೇಳಬಾರದು. ನಿನ್ನಲ್ಲಿ ಅನುರಕ್ತಳಾದ ಅವಳನ್ನು ಸ್ವೀಕರಿಸು ಎಂದು ಹೇಳಿದನು.

ಏವಂ ಸಂದಿಶ್ಯ ತನಯಂ ಪ್ರತೀಪಃ ಶಂತನುಂ ತದಾ ।
ಸ್ವೇ ಚ ರಾಜ್ಯೇಭಿಷಿಚ್ಯೈನಂ ವನಂ ರಾಜಾ ಜಗಾಮ ಹ ॥೨೯॥

ಹೀಗೆ ಪ್ರತೀಪನು ತನ್ನ ಮಗನಾದ ಶಂತನುವಿಗೆ ಆದೇಶವನ್ನು ನೀಡಿ, ಅಭಿಷೇಕವನ್ನು ಮಾಡಿ, ತನ್ನ ರಾಜ್ಯದಲ್ಲಿ ಅವನನ್ನು ಸ್ಥಾಪಿಸಿ ರಾಜನನ್ನಾಗಿ ಮಾಡಿ ಕಾಡಿಗೆ ಹೊರಟು ಹೋದನು.

ಸ ರಾಜಾ ಶಂತನುರ್ಧೀಮಾನ್ ಪಾರ್ಥಿವಾನಾಂ ಧುರಂಧರಃ ।
ಬಭೂವ ಸರ್ವಲೋಕಸ್ಯ ಸತ್ಯವಾಗಿತಿ ಸತ್ತಮಃ ॥೩೦॥

ಆ ರಾಜನಾದ ಶಂತನುವು ಮೇಧಾವಿಯೂ, ಸಜ್ಜನನೂ, ಎಲ್ಲರಾಜರಿಗೆ ಮುಖಂಡನೂ ಆಗಿ ಸತ್ಯವಚನವುಳ್ಳವನೆಂದು, ಎಲ್ಲ ಜನರಿಂದಲೂ ಪ್ರಶಂಸಿಸಲ್ಪಟ್ಟನು.

ಪೀನಸ್ಕಂಧೋ ಮಹಾಬಾಹುರ್ಮತ್ತವಾರಣವಿಕ್ರಮಃ ।
ಅನ್ವಿತಃ ಪರಿಪೂರ್ಣೈಶ್ಚ ಸರ್ವೈರ್ನೃಪತಿಲಕ್ಷಣೈಃ ॥೩೧॥

ಅವನು ಉನ್ನತ ಸ್ಕಂಧವುಳ್ಳವನು, ಮಹಾಬಾಹುವು, ಮದಗಜದ ನಡಿಗೆಯುಳ್ಳವನೂ ಆಗಿ, ಎಲ್ಲ ರಾಜಚಿಹ್ನೆಗಳಿಂದ ಪರಿಪೂರ್ಣವಾಗಿ ಕೂಡಿದ್ದನು.

ಅಮಾತ್ಯಸಂಪದೋಪೇತಃ ಕ್ಷತ್ರಧರ್ಮವಿಶೇಷವಿತ್ ।
ವಶೇ ಚಕ್ರೇ ಮಹೀಮೇಕೋ ವಿಜಿತ್ಯ ವಸುಧಾಧಿಪಾನ್ ॥೩೨॥

ಕ್ಷತ್ರಿಯ ಧರ್ಮವನ್ನು ಚೆನ್ನಾಗಿ ತಿಳಿದ ಅವನು ಅಮಾತ್ಯರಬಲದಿಂದ ಕೂಡಿದವನಾಗಿ, ಒಬ್ಬನೇ ಎಲ್ಲ ರಾಜರನ್ನು ಗೆದ್ದು ಭೂಮಿಯನ್ನು ತನ್ನ ವಶಪಡಿಸಿಕೊಂಡನು.

ವೇದಾನಾಗಮಯತ್ ಕೃತ್ಸ್ನಾನ್ ರಾಜಧರ್ಮಾಂಶ್ಚ ಕೃತ್ಸ್ನಶಃ ।
ಈಜೇ ಚ ಬಹುಭಿಃ ಸತ್ರೈಃ ಕ್ರತುಭಿರ್ಭೂರಿದಕ್ಷಿಣೈಃ ॥೩೩॥

ಅವನು ಎಲ್ಲಾ ವೇದಗಳನ್ನೂ, ಮತ್ತು ರಾಜಧರ್ಮಗಳನ್ನೂ ಸಮಗ್ರವಾಗಿ ಅಧ್ಯಯನ ಮಾಡಿದನು. ಬಹಳ ದಕ್ಷಿಣೆಯನ್ನು ನೀಡಿ, ಅನೇಕ ಕ್ರತು ಮತ್ತು ಸತ್ರಗಳನ್ನು ನಡೆಸಿ ಭಗವಂತನನ್ನು ಆರಾಧಿಸಿದನು.

ತರ್ಪಯಾಮಾಸ ವಿಪ್ರಾಂಶ್ಚ ವೇದಾಧ್ಯಯನಕೋವಿದಾನ್ ।
ರತ್ನೈರುಚ್ಚಾವಚೈರ್ಗೋಭಿರ್ಗ್ರಾಮ್ಯೈರಶ್ವೈರ್ಧನೈರಪಿ ॥೩೪॥

ವೇದಾಧ್ಯಯನ ಸಂಪನ್ನರಾದ ವಿಪ್ರರಿಗೆ ಶ್ರೇಷ್ಠವಾದ ರತ್ನಗಳನ್ನು, ಗೋವುಗಳನ್ನು, ಗ್ರಾಮಗಳನ್ನು, ಅಶ್ವಗಳನ್ನು ಮತ್ತು ಧನವನ್ನು ದಾನ ಮಾಡಿ ಅವರನ್ನು ಸಂತೋಷಪಡಿಸಿದನು.

ವಯೋರೂಪೇಣ ಸಂಪನ್ನಃ ಪೌರುಷೇಣ ಬಲೇನ ಚ ।
ಐಶ್ವರ್ಯೇಣ ಪ್ರಭಾವೇಣ ವಿಕ್ರಮೇಣಾತುಲೇನ ಚ ॥೩೫॥

ವರ್ತಮಾನಂ ಚ ಸತ್ಯೇನ ಸರ್ವಧರ್ಮವಿಶಾರದಮ್ ।
ತಂ ಮಹೀಪಂ ಮಹೀಪಾಲಾ ರಾಜರಾಜಮಕುರ್ವತ ॥೩೬॥

ವಯಸ್ಸಿನಿಂದಲೂ, ರೂಪದಿಂದಲೂ, ಪೌರುಷದಿಂದಲೂ, ಬಲದಿಂದಲೂ, ಐಶ್ವರ್ಯದಿಂದಲೂ, ಪ್ರಭಾವದಿಂದಲೂ, ಅಸದೃಶವಾದ ವಿಕ್ರಮದಿಂದಲೂ, ಸತ್ಯದಿಂದಲೂ ಕೂಡಿದ ಸರ್ವಧರ್ಮವಿಶಾರದನಾದ ಆ ರಾಜನನ್ನು ಉಳಿದ ರಾಜರು ರಾಜರಾಜನನ್ನಾಗಿ ಮಾಡಿದರು.

ವೀತಶೋಕಭಯಾಬಾಧಾಃ ಸುಖಿಸ್ವಪ್ನಪ್ರಬೋಧನಾಃ ।
ಶ್ರಿಯಾ ಭರತಶಾರ್ದೂಲ ಸಮಪದ್ಯಂತ ಭೂಮಿಪಾಃ ॥೩೭॥

ಭರತಶಾರ್ದೂಲನೇ, ಆಗ ರಾಜರು ಶೋಕ, ಭಯ ಮತ್ತು ಪೀಡೆಗಳಿಂದ ಮುಕ್ತರಾಗಿ, ಸುಖವಾಗಿ ಮಲಗಿ, ಸುಖವಾಗಿ ಏಳುವವರಾಗಿ ಸಂಪತ್ತಿನಿಂದ ಕೂಡಿದವರಾದರು.

ಶಂತನುಪ್ರಮುಖೈರ್ಗುಪ್ತಂ ರಾಷ್ಟ್ರಾಧಿಪತಿಭಿರ್ಜಗತ್ ।
ನಿಯಮೈಃ ಸರ್ವವರ್ಣಾನಾಂ ಬ್ರಹ್ಮೋತ್ತರಮವರ್ಧತ ॥೩೮॥

ಶಂತನು ಮೊದಲಾದ ರಾಷ್ಟ್ರಾಧಿಪತಿಗಳಿಂದಲೂ ಸುರಕ್ಷಿತವಾದ ಜಗತ್ತಿನಲ್ಲಿ ಎಲ್ಲ ವರ್ಣಗಳೂ ನಿಯಮದಿಂದ ಕೂಡಿದ್ದು, ಬ್ರಾಹ್ಮಣರು ಶ್ರೇಷ್ಠರಾಗಿದ್ದರು.

ಬ್ರಾಹ್ಮಣಾಭಿಮುಖಂ ಕ್ಷತ್ರಂ ಕ್ಷತ್ರಂ ಚಾಭಿಮುಖಾ ವಿಶಃ ।
ಬ್ರಹ್ಮಕ್ಷತ್ರಾನುಲೋಮಾಶ್ಚ ಶೂದ್ರಾಃ ಪರ್ಯಚರನ್ ವಿಶಃ ॥೩೯॥

ಕ್ಷತ್ರಿಯರು ಬ್ರಾಹ್ಮಣರಿಗೆ ವಶವಾಗಿದ್ದರು. ವೈಶ್ಯರು, ಕ್ಷತ್ರಿಯರಿಗೆ ವಶವಾಗಿದ್ದರು. ಬ್ರಹ್ಮ-ಕ್ಷತ್ರರ ಆದೇಶವನ್ನು ಧರಿಸಿದ ಶೂದ್ರರು ವೈಶ್ಯರನ್ನು ಪರಿಚರಿಸುತ್ತಿದ್ದರು.

ಏವಂ ಪಶುವರಾಹಾಣಾಂ ತಥೈವ ಮೃಗಪಕ್ಷಿಣಾಮ್ ।
ಶಂತನಾವಥ ರಾಜ್ಯಸ್ಥೇ ನಾವರ್ತತ ವೃಥಾ ವಧಃ ॥೪೦॥

ಹೀಗೆ ಶಂತನುವು ರಾಜನಾಗಿದ್ದಾಗ ವರಾಹ ಮೊದಲಾದ ಪಶುಗಳಿಗಾಗಲೀ, ಮೃಗ-ಪಕ್ಷಿಗಳಿಗಾಗಲೀ ವ್ಯರ್ಥವಾದ ವಧೆಯು ಉಂಟಾಗುತ್ತಿರಲಿಲ್ಲ.

ಅಸುಖಾನಾಮನಾಥಾನಾಂ ತಿರ್ಯಗ್ಯೋನಿಷು ವರ್ತತಾಮ್ ।
ಸ ಏವ ರಾಜಾ ಸರ್ವೇಷಾಂ ಭೂತಾನಾಮಭವತ್ ಪಿತಾ ॥೪೧॥

ತಿರ್ಯಗ್ ಯೋನಿಯಲ್ಲಿ ಇದ್ದು, ದುಃಖದಿಂದ ಕೂಡಿದ ಅನಾಥ ಪ್ರಾಣಿಗಳಿಗೂ ಸಹ ಅವನೇ ತಂದೆಯಾಗಿದ್ದನು.

ಸ ಹಸ್ತಿನಾಮ್ನಿ ಧರ್ಮಾತ್ಮಾ ವಿಹರನ್ ಕುರುನಂದನಃ ।
ತೇಜಸಾ ಸೂರ್ಯಕಲ್ಪೋಽಸೌ ವಾಯುನಾ ಚ ಸಮೋ ಬಲೇ ॥೪೨॥

ಅಂತಕಪ್ರತಿಮಃ ಕೋಪೇ ಕ್ಷಮಯಾ ಪೃಥಿವೀಸಮಃ ।
ಬಭೂವ ರಾಜಾ ಸುಮತಿಃ ಪ್ರಜಾನಾಂ ಸತ್ಯವಿಕ್ರಮಃ ॥೪೩॥

ಕುರುನಂದನನಾದ ಅವನು 'ಹಸ್ತಿ' ಎಂಬ ಪಟ್ಟಣದಲ್ಲಿ ಧರ್ಮಾತ್ಮನಾಗಿ ವಿಹರಿಸಿದನು. ಅವನು ತೇಜಸ್ಸಿನಲ್ಲಿ ಸೂರ್ಯನಂತೆಯೂ, ಬಲದಲ್ಲಿ ವಾಯುವಿನಂತೆಯೂ, ಕೋಪದಲ್ಲಿ ಯಮನಂತೆಯೂ, ಸಹನೆಯಲ್ಲಿ ಭೂಮಿಯಂತೆಯೂ ಇದ್ದನು. ಸತ್ಯವಿಕ್ರಮನು, ಸದ್‌ಬುದ್ಧಿಯುಳ್ಳ ಅವನು ಪ್ರಜೆಗಳನ್ನು ರಂಜಿಸಿದನು.

ಸ ವನೇಷು ಚ ರಮ್ಯೇಷು ಶೈಲಪ್ರಸ್ರವಣೇಷು ಚ ।
ಚಚಾರ ಮೃಗಯಾಶೀಲಃ ಶಂತನುರ್ವನಗೋಚರಃ ॥೪೪॥

ಅವನು ಬೇಟೆಯಾಡುವ ಸ್ವಭಾವವನ್ನು ಹೊಂದಿ, ಕಾಡಿನಲ್ಲಿದ್ದು ಮನೋಹರವಾದ ಬೆಟ್ಟದ ಝರಿಗಳ ಪ್ರದೇಶದಲ್ಲಿ ಸಂಚರಿಸಿದನು.

ಸ ಮೃಗಾನ್ ಮಹಿಷಾಂಶ್ಚೈವ ವಿನಿಘ್ನನ್ ರಾಜಸತ್ತಮಃ ।
ನದೀಮನ್ವಚರದ್ ರಾಜಾ ಶಂತನುಃ ಪರಯಾ ಮುದಾ ।
ಗಂಗಾಂ ತ್ರಿಪಥಗಾಂ ಪುಣ್ಯಾಂ ಸಿದ್ಧಚಾರಣಸೇವಿತಾಮ್ ॥೪೫॥

ಆ ರಾಜಶ್ರೇಷ್ಠನು ಮೃಗಗಳನ್ನು, ಮಹಿಷಗಳನ್ನು ಕೊಲ್ಲುತ್ತಾ ಸಂತೋಷದಿಂದ ಸಿದ್ಧಚಾರಣ ಸೇವಿತೆಯಾದ, ತ್ರಿಪಥಗಾಮಿನಿಯಾದ ಪವಿತ್ರವಾದ ಗಂಗೆಯ ಬಳಿ ಸಂಚರಿಸಿದನು.

ಸ ಕದಾಚಿನ್ಮಹಾರಾಜ ದದರ್ಶ ಪರಮಾಂ ಸ್ತ್ರಿಯಮ್ ।
ಜಾಜ್ವಲ್ಯಮಾನಾಂ ವಪುಷಾ ಸಾಕ್ಷಾಚ್ಛ್ರಿಯಮಿವಾಪರಾಮ್ ।
ಸರ್ವಾನವದ್ಯಾಂ ಯುವತಿಂ ಸರ್ವಾಭರಣಭೂಷಿತಾಮ್ ॥೪೬॥

ಸೂಕ್ಷ್ಮಾಂಬರಧರಾಂ ಸಾಕ್ಷಾತ್ ಪದ್ಮೋದರಸಮಪ್ರಭಾಮ್ ।
ಸ್ನಾತಮಾತ್ರಾಮಧೋವಕ್ತ್ರಾಂ ಗಂಗಾತೀರರುಹೇ ವನೇ ॥೪೭॥

ಪ್ರಕೀರ್ಣಕೇಶೀಂ ಪಾಣಿಭ್ಯಾಂ ಸಂಸ್ಪೃಶಂತೀಂ ಶಿರೋರುಹಾನ್ ।
ರೂಪೇಣಾತೀತ್ಯ ತಿಷ್ಠಂತೀಂ ಸರ್ವರಾಜನ್ಯಯೋಷಿತಃ ॥೪೮॥

ಎಲೈ ಮಹಾರಾಜನೇ, ಅವನು ಒಮ್ಮೆ ಅಲ್ಲಿ ಶ್ರೇಷ್ಠಳಾದ ಸ್ತ್ರೀಯನ್ನು ನೋಡಿದನು. ಅವಳು ಲಕ್ಷ್ಮೀದೇವಿಯ ಇನ್ನೊಂದು ರೂಪವೋ ಎಂಬಂತೆ ದೇಹದಿಂದ ಕಂಗೊಳಿಸುತ್ತಿದ್ದಳು. ಸರ್ವಥಾ ದೋಷರಹಿತವಾದ ಶರೀರವುಳ್ಳ ಆ ಯುವತಿಯು,

ಸರ್ವಾಭರಣಭೂಷಿತಳೂ, ಸೂಕ್ಷ್ಮಾಂಬರವನ್ನು ಧರಿಸಿದವಳೂ, ಪದ್ಮದ ಒಳಭಾಗದ ಕಾಂತಿಯುಳ್ಳವಳೂ ಆಗಿದ್ದಳು. ಆಗ ತಾನೇ ಸ್ನಾನವನ್ನು ಮಾಡಿ, ಗಂಗೆಯ ದಡದಲ್ಲಿದ್ದ ವನದಲ್ಲಿ ಮುಖವನ್ನು ಕೆಳಗೆ ಮಾಡಿ ತನ್ನ ಕೈ ಬೆರಳುಗಳಿಂದ ಕೆದರಿದ ಕೂದಲುಗಳನ್ನು ನೇವರಿಸಿಕೊಂಡು ತನ್ನ ಸೌಂದರ್ಯದಿಂದ ಎಲ್ಲ ರಾಜಸ್ತ್ರೀಯರನ್ನೂ ಮೀರಿದವಳಾಗಿದ್ದಳು.

ತಾಂ ದೃಷ್ಟ್ವಾ ಹೃಷ್ಟರೋಮಾऽಭೂದ್ ದರ್ಶನಾದೇವ ಶಂತನುಃ ।
ಪಿಬನ್ನಿವ ಚ ನೇತ್ರಾಭ್ಯಾಂ ನಾತೃಪ್ಯತ ನರಾಧಿಪಃ ॥೪೯॥

ಅವಳನ್ನು ನೋಡಿದಾಗ ನೋಡಿದ ಮಾತ್ರದಿಂದಲೇ ಶಂತನುವಿಗೆ ರೋಮಾಂಚನವಾಯಿತು. ಆ ರಾಜನು ಅವಳ ಸೌಂದರ್ಯವನ್ನು ಕಣ್ಣಿನಿಂದ ಕುಡಿಯುವಂತೆ ತೋರಿ ತೃಪ್ತಿಯನ್ನು ಹೊಂದಲಿಲ್ಲ.

ಸಾ ತು ದೃಷ್ಟ್ವೈವ ರಾಜಾನಂ ವಿಚರಂತಂ ಮಹಾದ್ಯುತಿಮ್ ।
ಸ್ನೇಹಾದಾಗತಸೌಹಾರ್ದಾ ನಾತೃಪ್ಯತ ವಿಲಾಸಿನೀ ॥೫೦॥

ಪಿಬಂತೀವ ಚ ನೇತ್ರಾಭ್ಯಾಂ ನಾತೃಪ್ಯದ್ ದರ್ಶನೇನ ಚ ।
ಗಂಗಾಕಾಂಕ್ಷೀ ಚ ರಾಜಾ ಸ ಪ್ರೇಕ್ಷಮಾಣೋ ವಿಲಾಸಿನೀಮ್ ॥೫೧॥

ಆ ವಿಲಾಸಿನಿಯಾದರೂ ಅಲ್ಲಿಯೇ ಸಂಚರಿಸುತ್ತಿರುವ ಮಹಾಕಾಂತಿಯುಳ್ಳ ರಾಜನನ್ನು ನೋಡಿ ಸ್ನೇಹದಿಂದುಂಟಾದ ವಿಶ್ವಾಸವುಳ್ಳವಳಾಗಿ ಕಣ್ಣಿನಿಂದ ರಾಜನನ್ನು ಕುಡಿಯುವಂತೆ ನೋಡುತ್ತಾ ತೃಪ್ತಿಯನ್ನು ಪಡೆಯಲಿಲ್ಲ.

ಹಾವಭಾವವಿಲಾಸೈಶ್ಚ ಲೋಚನಾಂಚಲವಿಕ್ರಿಯೈಃ ।
ಶ್ರೋಣೀಭಾರೇಣ ಮಧ್ಯೇನ ಸ್ತನಾಭ್ಯಾಮುರಸಾ ದೃಶಾ ॥೫೨॥

ಹಾವ= ಆಲಂಬನವೆಂಬ ಅವಯವ ವಿಲಾಸ. ಭಾವ= ಚಂದ್ರೋದಯ ಮೊದಲಾದ ಕಾಮೋದ್ದೀಪಕ ಪ್ರಸಂಗ.

ಗಂಗೆಯನ್ನು ಬಯಸುತ್ತಿದ್ದ ಆ ರಾಜನು ಹಾವಭಾವವಿಲಾಸಗಳಿಂದಲೂ ಕಣ್ಣಿನ ನೋಟ ಮತ್ತು ವಸ್ತ್ರಗಳ ಚಲನೆಯಿಂದಲೂ ಶ್ರೋಣಿಭಾರದಿಂದಲೂ ಸ್ತನಗಳ ಭಾರದಿಂದಲೂ ವಿಲಾಸವನ್ನು ತೋರಿಸುತ್ತಿದ್ದ ಅವಳನ್ನು ನೋಡಿ ಹೃತಚಿತ್ತನಾದನು.

ವಿಲಾಸಚೇಷ್ಟಿತೈಸ್ತಸ್ಯಾ ಹೃತಚೇತಾಶ್ಚ ಯೋಷಿತಃ ।
ತಾಮುವಾಚ ತತೋ ರಾಜಾ ಕಾಮಿನೀಂ ತು ಮನೋರಮಾಮ್ ॥

ದೇವತಾ ಕಿನ್ನರೀ ವಾ ತ್ವಂ ಗಂಧರ್ವೀ ವಾ ಸುಮಧ್ಯಮೇ ।
ಯಕ್ಷೀ ವಾ ಮಾನುಷೀ ವಾಽಪಿ ಜಾನೀಯಾಂ ಕಾಂ ಶುಚಿಸ್ಮಿತೇ ॥೫೪॥

ಯಾಽಸಿ ಕಾಽಸಿ ಸುರಶ್ರೇಷ್ಠೇ ತ್ವಂ ಮಹಿಷೀ ಮೇ ಭವಾನಘೇ ।
ತ್ವದ್ಗತಾ ಹಿ ಮಮ ಪ್ರಾಣಾ ವಸು ಯನ್ಮೇಽಸ್ತಿ ಕಿಂಚನ ॥೫೫॥

ಅನಂತರ ರಾಜನು ಆ ಸುಂದರಿಯಾದ ಕಾಮಿನಿಯನ್ನು ಕುರಿತು ಮಾತನಾಡಿದನು. ಶುಚಿಸ್ಮಿತೆಯೇ, ನೀನು ದೇವತೆಯೇ ಅಥವಾ ಕಿನ್ನರಿಯೇ ಅಥವಾ ಗಂಧರ್ವಳೇ ಅಥವಾ ಯಕ್ಷಿಯೇ ಅಥವಾ ಮಾನುಷಿಯೇ ? ಸುಂದರಿಯೇ, ನಿನ್ನನ್ನು ಯಾರೆಂದು ತಿಳಿಯಲಿ ದೇವತೆಯಂತೆ ಇರುವವಳೇ, ನೀನು ಯಾರು ಬೇಕಾದರೂ ಆಗಿರು, ಆದರೆ ಅನಘಳೇ, ನನ್ನ ಪಟ್ಟದರಾಣಿಯಾಗು. ನನ್ನಲ್ಲಿರುವ ಐಶ್ವರ್ಯವೆಲ್ಲಾ ನಿನ್ನ ಅಧೀನ. ನನ್ನ ಪ್ರಾಣವು ನಿನ್ನಲ್ಲಿಯೇ ಇದೆ.

ವೈಶಂಪಾಯನಃ

ಶ್ರುತ್ವಾ ತು ರಾಜ್ಞಃ ಸಾ ಬಾಲಾ ಸಸ್ಮಿತಂ ಮೃದು ವಲ್ಗು ಚ ।
ಯಶಸ್ವಿನೀ ಚ ಸಾಽಗಚ್ಛತ್ಕಂತನೋರ್ಭೂತಯೇ ತದಾ ॥೫೬॥

ರಾಜನ ಮಾತುಗಳನ್ನು ಕೇಳಿದ ಆ ಬಾಲೆಯು ಮೃದುವಾದ, ಸುಂದರವಾದ ಮುಗುಳ್ನಗೆಯನ್ನು ನಕ್ಕು, ಯಶಸ್ವಿನಿಯಾದ ಅವಳು ಶಂತನುವಿನ ಶ್ರೇಯಸ್ಸಿಗಾಗಿ ಅವನ ಬಳಿ ನಡೆದಳು.

ಸಾ ಚ ದೃಷ್ಟ್ವಾ ನೃಪಶ್ರೇಷ್ಠಂ ಚರಂತಂ ತೀರಮಾಶ್ರಿತಮ್ ।
ಸ್ಮೃತ್ವಾ ವಸೂನಾಂ ಸಮಯಮಭ್ಯಗಚ್ಛದನಿಂದಿತಾ ॥೫೭॥

ಅನಿಂದಿತಳಾದ ಅವಳು ತನ್ನ ತೀರದಲ್ಲಿ ಸಂಚರಿಸುತ್ತಿರುವ ನೃಪಶ್ರೇಷ್ಠನನ್ನು ನೋಡಿ, ವಸುಗಳ ನಿಬಂಧನೆಯನ್ನು ನೆನೆಸಿಕೊಂಡು ಅವನ ಸಮೀಪಕ್ಕೆ ಹೋದಳು.

ಪ್ರಜಾರ್ಥಿನೀ ರಾಜಪುತ್ರಂ ಶಂತನುಂ ಪೃಥಿವೀಪತಿಮ್ ।
ಪ್ರತೀಪವಚನಂ ಚೈವ ಸಂಸ್ಮೃತ್ವಾಽಭಿಯಯೌ ನೃಪಮ್ ॥೫೮॥

ಪ್ರಜಾರ್ಥಿನಿಯಾದ ಅವಳು ಪ್ರತೀಪನ ಮಾತುಗಳನ್ನು ಸ್ಮರಿಸಿಕೊಂಡು, ಕಾಲಪುತ್ರನು, ಪೃಥಿವೀಪತಿಯಾದ ರಾಜಪುತ್ರನಾದ ಶಂತನುವಿನ ಬಳಿಗೆ ಹೋದಳು.

ಕಾಲೋಽಯಮಿತಿ ಮತ್ವಾ ಸಾ ವಸೂನಾಂ ಶಾಪಚೋದಿತಾ ।
ಪ್ರತ್ಯುವಾಚ ಮಹೀಪಾಲಂ ಹ್ಲಾದಯಂತೀ ಮನೋ ಗಿರಾ ॥೫೯॥

ಇದು ಸರಿಯಾದ ಕಾಲವೆಂದು ತಿಳಿದ ಅವಳು ವಸುಗಳ ಶಾಪದಿಂದ ಪ್ರೇರಿತಳಾಗಿ ರಾಜನ ಮನಸ್ಸನ್ನು ತನ್ನ ಮಾತುಗಳಿಂದ ಸಂತೋಷ ಪಡಿಸುತ್ತಾ ರಾಜನನ್ನು ಕುರಿತು ಹೀಗೆ ಉತ್ತರವನ್ನು ಕೊಟ್ಟಳು.

ಭವಿಷ್ಯಾಮಿ ಮಹೀಪಾಲ ಮಹಿಷೀ ತೇ ವಶಾನುಗಾ ।
ನತು ತ್ವಂ ವಾ ದ್ವಿತೀಯೋ ವಾ ಜ್ಞಾತುಮಿಚ್ಛೇತ್ ಕಥಂಚನ ॥೬೦॥

ಯತ್ ತು ಕುರ್ಯಾಮಹಂ ರಾಜನ್ ಶುಭಂ ವಾ ಯದಿ ಶಾಶುಭಮ್ ।
ನಾಹಂ ವಾರಯಿತವ್ಯಾಸ್ಮಿ ನ ವಕ್ತವ್ಯಾ ತಥಾಽಪ್ರಿಯಮ್ ॥೬೧॥

ಎಲೈ ರಾಜನೇ, ನಾನು ನಿನ್ನ ವಶವರ್ತಿನಿಯಾದ ರಾಣಿಯಾಗುವೆನು. ನೀನಾಗಲೀ ಅಥವಾ ಇನ್ನೊಬ್ಬರಾಗಲೀ ನನ್ನನ್ನು ಯಾರು ಎಂದು ತಿಳಿಯಲು ಎಂದೂ ಬಯಸಬಾರದು. ನಾನು ಒಳ್ಳೆಯದನ್ನು ಮಾಡಲಿ, ಅಥವಾ ಕೆಟ್ಟದ್ದನ್ನು ಮಾಡಲಿ ಪ್ರತಿಷೇಧ ಮಾಡಬಾರದು. ನನ್ನನ್ನು ಕುರಿತು ಎಂದೂ ಅಪ್ರಿಯವಾದ ಮಾತುಗಳನ್ನು ಆಡಬಾರದು.

ಏವಂ ತು ವರ್ತಮಾನೇ ತು ಶ್ವಯಿ ವತ್ಸ್ಯಾಮಿ ಪಾರ್ಥಿವ ।
ಪಾರಿತಾ ದಿಪ್ರಿಯಂ ಚೋಕ್ತಾ ಶ್ಯಚೇಯಂ ತ್ವಾಂ ನರಾಧಿವ ॥೬೨॥

ನೀನು ಹೀಗಿದ್ದರೆ ಮಾತ್ರ ನಾನು ನಿನ್ನಲ್ಲಿ ಬಾಸಿಸುವೆನು. ರಾಜನೇ, ನನ್ನನ್ನು ಪ್ರತಿಷೇಧ ಮಾಡಿದರೆ ಅಥವಾ ನನಗೆ ಅಪ್ರಿಯವನ್ನು ಮಾತನಾಡಿದರೆ, ನಾನು ನಿನ್ನನ್ನು ಬಿಟ್ಟು ಹೋಗುತ್ತೇನೆ.

ಏಷ ಮೇ ಸಮಯೋ ರಾಜನ್ ಭಜ ಮಾಂ ತ್ವಂ ಯಥೇಪ್ಸಿತಮ್ ।
ಅನುನೀತಾಽಸ್ಮಿ ತೇ ಪಿತ್ರಾ ಭರ್ತಾ ಮೇ ತ್ವಂ ಭವ ಪ್ರಭೋ ॥೬೩॥

ರಾಜನೇ ಇದು ನನ್ನ ನಿಬಂಧನೆ. ಇದನ್ನು ಒಪ್ಪಿ, ನಿನ್ನ ಮನಸ್ಸಿಗೆ ಒಪ್ಪುವಂತೆ ನನ್ನನ್ನು ಸ್ವೀಕರಿಸು. ನಿನ್ನ ತಂದೆಯು ನನಗೆ ಈ ತರದ ಮಾತುಗಳನ್ನು ಆಡಿದ್ದಾನೆ. ಪ್ರಭುವೇ ನನ್ನ ಪತಿಯಾಗು.

ವೈಶಂಪಾಯನಃ

ತಥೇತಿ ರಾಜ್ಞಾ ಸಾ ತೂಕ್ತಾ ತತ್ರೈವ ವರವರ್ಣಿನೀ ।
ಪ್ರಹರ್ಷಮತುಲಂ ಲೇಭೇ ಶ್ರುತ್ವಾ ವಾಕ್ಯಮನಿಂದಿತಾ ॥೬೪॥

ಹಾಗೆಯೇ ಆಗಲಿ ಎಂಬ ರಾಜನ ಮಾತುಗಳನ್ನು ಕೇಳಿದ ಅನಿಂದಿತಳಾದ ಆ ಸುಂದರಿಯು ಅಲ್ಲಿಯೇ ಅಸದೃಶವಾದ ಸಂತೋಷವನ್ನು ಹೊಂದಿದಳು.

ಪ್ರತಿಜ್ಞಾಯ ತು ತತ್ ತಸ್ಯಾಸ್ತಥೇತಿ ಮನುಜಾಧಿಪಃ ।
ರಥಮಾರೋಪ್ಯ ತಾಂ ದೇವೀಂ ಜಗಾಮ ಸ ತಯಾ ಸಹ ॥೬೮॥

ಆ ರಾಜನಾದರೂ ಅವಳು ಹೇಳಿದುದಕ್ಕೆಲ್ಲಾ 'ಹಾಗೆಯೇ ಆಗಲಿ' ಎಂದು ಒಪ್ಪಿ ಅವಳನ್ನು ರಥವನ್ನು ಏರಿಸಿ, ಅವಳ ಜೊತೆಯಲ್ಲಿ ಹೊರಟನು.

ಸಾ ಚ ಶಂತನುಮಭ್ಯಾಗಾತ್ ಸಾಕ್ಷಾಲ್ಲಕ್ಷ್ಮೀರಿವಾಪರಾ ।
ಆಸಾದ್ಯ ಶಂತನುಸ್ತಾಂ ಚ ಬುಭುಜೇ ಕಾಮವಾನ್ ಸುಖೀ ॥೬೫॥

ಅವಳು ಸಾಕ್ಷಾತ್ ಲಕ್ಷ್ಮಿಯ ಇನ್ನೊಂದು ರೂಪದಂತೆ ಶಂತನುವನ್ನು ಸಮೀಪಿಸಿದಳು. ಶಂತನುವಾದರೂ ಅವಳನ್ನು ಪಡೆದು ದಿವ್ಯಕಾಮಗಳನ್ನು ಅನುಭವಿಸಿದನು.

ನ ಪ್ರಷ್ಟವ್ಯೇತಿ ಮನ್ವಾನೋ ನ ಸ ತಾಂ ಕಿಂಚಿದೂಚಿವಾನ್ ।
ಸ ತಸ್ಯಾಃ ಶೀಲವೃತ್ತೇನ ರೂಪೇಣ ಪರಮೇಣ ಚ ॥೬೬॥

ಸಮ್ಯಕ್ಚೈವೋಪಚಾರೇಣ ಸುಖಮಾರಾಧಿತೋಽಭವತ್ ।
ಸ ರಾಜಾ ಪರಮಪ್ರೀತಃ ಪರಮಸ್ತ್ರೀಪ್ರಲಾಲಿತಃ ॥೬೭॥

ಅವಳನ್ನು ಏನೂ ಕೇಳಬಾರದೆಂದು ತಿಳಿದ ಅವನು ಅವಳಿಗೂ ಏನೂ ಹೇಳಲಿಲ್ಲ. ಅವಳ ಶೀಲವೃತ್ತದಿಂದಲೂ, ಉತ್ತಮವಾದ ರೂಪದಿಂದಲೂ, ಒಳ್ಳೆಯ ಉಪಚಾರದಿಂದಲೂ ಪೂಜಿತನಾಗಿ ಒಳ್ಳೆಯ ಸುಖವನ್ನು ಕಂಡನು. ತ್ರಿಪಥಗೆಯಾದ

ಆ ಗಂಗಾನದಿಯು ದಿವ್ಯರೂಪದಿಂದಲೇ ಇದ್ದಳು. ಅಂತಹ ಪರಮಸ್ತ್ರೀಯಿಂದ ಲಾಲಿತನಾದ ರಾಜನು ಬಹಳ ಸಂತೋಷವನ್ನು ಪಡೆದನು.

ದಿವ್ಯರೂಪಾ ಹಿ ಸಾ ದೇವೀ ಗಂಗಾ ತ್ರಿಪಥಗಾ ನದೀ ।
ಮಾನುಷಂ ವಿಗ್ರಹಂ ಶ್ರೀಮತ್ ಕೃತ್ವಾ ವೈ ವರವರ್ಣಿನೀ ॥೬೮॥

ಭಾಗ್ಯೋಪನತಕಾಮಸ್ಯ ಭಾರ್ಯೇವೋಪಸ್ಥಿತಾऽಭವತ್ ।
ಶಂತನೋ ರಾಜಸಿಂಹಸ್ಯ ದೇವರಾಜಸಮದ್ಯುತೇಃ ॥೬೯॥

ಆ ದಿವ್ಯರೂಪದ ಸುಂದರಿಯು ಮನುಷ್ಯದೇಹವನ್ನು ಪಡೆದು ಅದೃಷ್ಟದಿಂದ ಪೂರ್ಣವಾದ ಕಾಮವುಳ್ಳ ದೇವರಾಜ ಸಮದ್ಯುತಿಯಾದ ರಾಜಸಿಂಹನಾದ ಶಂತನುವಿಗೆ ಭಾರ್ಯೆಯಂತೆಯೇ ಇದ್ದಳು.

ಸಂಭೋಗಸ್ನೇಹಚಾತುರ್ಯೈರ್ಹಾವಭಾವಸಮನ್ವಿತೈಃ ।
ರಾಜಾನಂ ರಮಯಾಮಾಸ ಯಥಾ ರಜ್ಯೇತ ಸ ಪ್ರಭುಃ ।
ಸ ರಾಜಾ ರತಿಸಕ್ತೋऽಭೂದುತ್ತಮಸ್ತ್ರೀ ಗುಣೈರ್ಹೃತಃ ॥೭೪॥

ಸಂಭೋಗಚಾತುರ್ಯದಿಂದಲೂ, ಹಾವಭಾವಸಮನ್ವಿತವಾದ ಸ್ನೇಹಚಾತುರ್ಯದಿಂದಲೂ, ಪ್ರಭುವಾದ ರಾಜನು ಸಂತೋಷಗೊಳ್ಳುವಂತೆ ಅವಳು ಅವನನ್ನು ರಮಿಸಿದಳು. ಉತ್ತಮಸ್ತ್ರೀಯ ಗುಣಗಳಿಂದ ಅಪಹೃತನಾದ ಮನವುಳ್ಳ ರಾಜನೂ ಸಹ ರತಿಸಕ್ತನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಪಂಚನತಿತಮೋऽಧ್ಯಾಯಃ ॥

॥ ಸಂಭವಪರ್ವಣಿ ತ್ರಿಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ತೊಂಭತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ -ಅಧ್ಯಾಯ-೧೧

ತತಸ್ತು ಸಾ ಶಂತನುತೋಽಷ್ಟಪುತ್ರಾನ್
ಅವಾಪ್ಯ ಸಪ್ತ ನ್ಯಹನತ್ ತಥಾಷ್ಟಮಮ್ ।
ಗಂತುಂ ತತೋ ಮತಿಮಾಧಾಯ ಹಂತು-
ಮಿವೋದ್ಯೋಗಂ ಸಾ ಹಿ ಮೃಷಾ ಚಕಾರ ॥೩೭॥

ಬಳಿಕ ಗಂಗೆ ಶಂತನುವಿನಿಂದ ಎಂಟು ಮಕ್ಕಳನ್ನು ಹಡೆದು ಏಳನ್ನು ಕೊಂದಳು. ಶಂತನುವನ್ನು ಬಿಟ್ಟು ಹೋಗುವ ನಿರ್ಧಾರ ಮಾಡಿ ಎಂಟನೇ ಮಗುವನ್ನೂ ಹಾಗೇ ಕೊಲ್ಲಲು ಯತ್ನಮಾಡುವಂತೆ ಸುಮ್ಮನೆ ತೋರಿಕೊಂಡಳು.

ಅವಸ್ಥಿತಿರ್ನಾತಿಸುಖಾಯ ಮಾನುಷೇ
ಯತಃ ಸುರಾಣಾಮತ ಏವ ಗಂತುಮ್ ।
ಐಚ್ಛನ್ನ ತಸ್ಯಾ ಹಿ ಬಭೂವ ಮಾನುಷೋ
ದೇಹೋ ನರೋತ್ಥೋ ಹಿ ತದಾಸ ಶಂತನೋಃ ॥೩೮॥

ದೇವತೆಗಳಿಗೆ ಮನುಷ್ಯರ ಬಳಿ ಇರುವುದು ಹೆಚ್ಚು ಸುಖ ನೀಡುವುದಿಲ್ಲ. ಅದರಿಂದಲೇ ಗಂಗೆ ಹೊರಟುಹೋಗಲು ಬಯಸಿದಳು. ಏಕೆಂದರೆ ಅವಳಿಗೆ ಆಗ ಮನುಷ್ಯ ಶರೀರವಿರಲಿಲ್ಲ. ದೇವತಾ ಶರೀರವೇ ಇತ್ತು. ಶಂತನುವಿಗೆ ಆಗ ದೇವತಾ ಶರೀರವಿರಲಿಲ್ಲ. ಮನುಷ್ಯನಿಂದ ಜನಿಸಿದ ಶರೀರವೇ ಇತ್ತು.

ತಾಂ ಪುತ್ರ ನಿಧನೋದ್ಯುಕ್ತಾಂ ನ್ಯವಾರಯತ ಶಂತನುಃ ।
ಕಾಸಿ ತ್ವಂ ಹೇತುನಾ ಕೇನ ಹಂಸಿ ಪುತ್ರಾನ್ ನೃಶಂಸವತ್ ॥೩೯॥

ಗಂಗೆ ಮಗನನ್ನು ಕೊಲ್ಲಲು ಉದ್ಯುಕ್ತಳಾದಾಗ ಶಂತನು ತಡೆದ. 'ಯಾರು ನೀನು? ಏಕೆ ಮಕ್ಕಳನ್ನು ರಾಕ್ಷಸಿಯಂತೆ ಕೊಲ್ಲುವೆ' ಎಂದು ಕೇಳಿದ.

ರೂಪಂ ಸುರವರಸ್ತ್ರೀಣಾಂ ತವ ತೇನ ನ ಪಾಪಕಮ್ ।
ಭವೇತ್ ಕರ್ಮ ತ್ವದೀಯಂ ತನ್ಮಹತ್ ಕಾರಣಮತ್ರ ಹಿ ॥೪೦॥

'ನಿನ್ನ ಈ ರೂಪ ಉತ್ತಮ ದೇವತಾ ಸ್ತ್ರೀರೂಪ. ಅದರಿಂದ ಪಾಪಕರ್ಮ ನಿನ್ನಿಂದ ಕಡೆಯಲು ಶಕ್ಯವಿಲ್ಲ. ಈ ನಿನ್ನ ರಾಕ್ಷಸೀಕೃತ್ಯದಲ್ಲಿ ಏನೋ ಮಹತ್ತಾದ ಕಾರಣವಿರಬೇಕು.

ತತ್ ಕಾರಣಂ ವದ ಶುಭೇ ಯದಿ ಮಚ್ಛ್ರೋತ್ರಮರ್ಹತಿ ।
ಇತೀರಿತಾವದತ್ ಸರ್ವಂ ಪ್ರಯಯೌ ಚ ಸುರಾಪಗಾ ॥೪೧॥

'ಮಂಗಳ ಸ್ವರೂಪಳೆ, ನನ್ನ ಕಿವಿ ಕೇಳಬಹುದಾಗಿದ್ದರೆ ಹೇಳು, ಆ ಕಾರಣವನ್ನು'. ಹೀಗೆ ಶಂತನು ಹೇಳಿದಾಗ ಗಂಗೆ ಎಲ್ಲವನ್ನೂ ಹೇಳಿ ಹೊರಟುಹೋದಳು.

ನ ಧರ್ಮೋ ದೇವತಾನಾಂ ಹಿ ಜ್ಞಾತವಾಸಶ್ಚಿರಂ ನೃಷು ।
ಕಾರಣಾದೇವ ಹಿ ಸುರಾ ನೃಷು ವಾಸಂ ಪ್ರಕುರ್ವತೇ ॥೪೨॥

ಕಾರಣಾಪಗಮೇ ಯಾಂತಿ ಧರ್ಮೋಽಪ್ಯೇಷಾಂ ತಥಾವಿಧಃ ।
ಅದೃಶ್ಯತ್ವಮಸಂಸ್ಪರ್ಶೋ ಹ್ಯಸಂಭಾಷಣಮೇವ ಚ ॥೪೩॥

ಸುರೈರಪಿ ನೃಜಾತೈಸ್ತು ಗುಹ್ಯಧರ್ಮೋ ದಿವೌಕಸಾಮ್ ।
ಅತಃ ಸಾ ವರುಣಂ ದೇವಂ ಪೂರ್ವಭರ್ತಾರಮಪ್ಯಮುಮ್ ॥೪೪॥

ನೃಜಾತಂ ಶಂತನುಂ ತ್ಯಕ್ತ್ವಾ ಪ್ರಯಯೌ ವರುಣಾಲಯಮ್ ।
ಸುತಮಷ್ಟಮಮಾದಾಯ ಭರ್ತುರೇವಾಪ್ಯನುಜ್ಞಯಾ ।
ವಧೋದ್ಯೋಗಾನ್ನಿವೃತ್ತಾ ಸಾ ದದೌ ಪುತ್ರಂ ಬೃಹಸ್ಪತೌ ॥೪೫॥

ಮನುಷ್ಯರಲ್ಲಿ ಬಹುಕಾಲ ಜ್ಞಾತವಾಗಿ ವಾಸಮಾಡುವುದು ದೇವತೆಗಳಿಗೆ ಧರ್ಮವಲ್ಲ. ವಿಶೇಷ ಕಾರಣವಿದ್ದಾಗಲೇ ದೇವತೆಗಳು ಮನುಷ್ಯರ ನಡುವೆ ವಾಸಮಾಡುತ್ತಾರೆ. ಆ ಕಾರಣವಿಲ್ಲದಾದಾಗ ಹೊರಟುಹೋಗುತ್ತಾರೆ. ಅವರ ಧರ್ಮವೇ ಹಾಗೆ. ಮನುಷ್ಯರಾಗಿ ಹುಟ್ಟಿದ ದೇವತೆಗಳಿಗೂ ಕಣ್ಣಿಗೆ ಕಾಣಲು ಸಿಗದಿರುವುದು. ಮುಟ್ಟಲು ಸಿಗದಿರುವುದು ಮತ್ತು ಮಾತುಕತೆಗೆ ನಿಲ್ಲದಿರುವುದು, ದೇವತೆಗಳ ರಹಸ್ಯಧರ್ಮ. ಶಂತನು ವರುಣ, ಒಬ್ಬ ದೇವ. ಗಂಗೆಗೆ ಮೊದಲು ಪತಿಯಾಗಿದ್ದವ. ಆದರೆ ಮನುಷ್ಯನಾಗಿ ಹುಟ್ಟಿದ್ದಾನೆ. ಆದರಿಂದ ಆಪನನ್ನು ತೊರೆದು ಗಂಗೆ ಪರಲೋಕಕ್ಕೆ ಹೋದಳು. ಹೋಗುವಾಗ ಎಂಟನೆ ಮಗನ ವಧೆಯ ಯತ್ನ ಕೈಬಿಟ್ಟು ಪತಿಯ ಅನುಮತಿಯಿಂದ ಆಪನನ್ನು ಕರೆದುಕೊಂಡು ಹೋಗಿ ಬೃಹಸ್ಪತಿಯ ಬಳಿ ಬಿಟ್ಟಳು.

★ ★ ★ ★

ತೊಂಭತ್ತಾರನೆಯ ಅಧ್ಯಾಯ

(ಗಂಗೆಯಿಂದ ಸಪ್ತಶಿಶುಗಳ ಹನನ, ಅಷ್ಟಮಶಿಶುವನ್ನು ಉಳಿಸಿ, ಶಂತನುವಿಗೆ ರಹಸ್ಯವನ್ನು ತಿಳಿಸಿ, ಸ್ವರ್ಗಲೋಕ ಗಮನ.)

ವೈಶಂಪಾಯನಃ

ಅಹೋರಾತ್ರಾನೃತೂನ್ ಮಾಸಾನ್ ನ ಬುಬೋಧ ಗತಾನ್ ಬಹೂನ್ ।
ರಮಮಾಣಃ ಪ್ರಿಯಾಂ ಲಬ್ಧ್ವಾ ಯಥಾಕಾಮಂ ನರಾಧಿಪಃ ॥೧॥

ಆ ರಾಜನು ಪ್ರಿಯೆಯನ್ನು ಪಡೆದು, ತನ್ನ ಮನಸ್ಸಿಗೆ ತೃಪ್ತಿಯಾಗುವಂತೆ ವಿಹರಿಸುತ್ತಾ ,. ಕಳೆದುಹೋದ ದಿನಗಳನ್ನಾಗಲೀ, ಋತುಗಳನ್ನಾಗಲೀ, ಮಾಸಗಳನ್ನಾಗಲೀ, ಗಮನಿಸಲೇ ಇಲ್ಲ.

ಸ್ವರ್ಗಸ್ಥಾನ್ ಮಾನುಷಾಂಶ್ಚೈವ ಭೋಗಾನ್ ಭುಂಕ್ತೇ ಸ್ಮ ವೈ ನೃಪಃ ।
ಆಸಾದ್ಯ ಶಂತನುಃ ಶ್ರೀಮಾನ್ ಮುಮುದೇ ಯೋಷಿತಾಂ ವರಾಮ್॥

ಶ್ರೇಷ್ಠವಾದ ವನಿತೆಯನ್ನು ಹೊಂದಿ, ಕಾಂತಿಯುಕ್ತನಾದ ಶಂತನುವು ಸ್ವರ್ಗಲೋಕದ ಭೋಗಗಳನ್ನೂ ಮನುಷ್ಯಲೋಕದ ಭೋಗಗಳನ್ನೂ ಭೋಗಿಸಿದನು.

ಋತುಕಾಲೇ ತು ಸಾ ದೇವೀ ದಿವ್ಯಂ ಗರ್ಭಮಧಾರಯತ್ ।
ಅಷ್ಟಾವಜನಯತ್ ಪುತ್ರಾಂಸ್ತಸ್ಯ ಸಾ ವರವರ್ಣಿನೀ ॥೩॥

ಆ ದೇವಿಯು ಋತುಕಾಲದಲ್ಲಿ ದಿವ್ಯವಾದ ಗರ್ಭವನ್ನು ಧರಿಸಿ, ಅವನಿಂದ ಎಂಟು ಮಕ್ಕಳನ್ನು ಪಡೆದಳು.

ಜಾತಂ ಜಾತಂ ಚ ಸಾ ಪುತ್ರಂ ಸಾ ಸ್ವಪ್ನೇ ಕ್ಷಿಪತಿ ಸ್ಮ ಹ ।
ಸೂತಕೇ ಕಂಠಮಾಕ್ರಮ್ಯ ತಾನ್ ನಿನಾಯ ಯಮಕ್ಷಯಮ್ ॥೪॥

ಮಕ್ಕಳು ಹುಟ್ಟಿದಂತೆ, ಹುಟ್ಟಿದಂತೆ ಅವಳು ಅವುಗಳ ಕತ್ತನ್ನು ಹಿಸುಕಿ, ತನ್ನ ನೀರಿನಲ್ಲಿ ಎಸೆದು, ಯಮಲೋಕಕ್ಕೆ ಕಳುಹಿಸುತ್ತಿದ್ದಳು.

ಪ್ರೀಣಾಮಿ ತ್ವಾಮಿಹೇತ್ಯುಕ್ತ್ವಾ ಸರ್ವಾನ್ ಸ್ರೋತಸ್ಯವಾಕ್ಷಿಪತ್ ।
ತಸ್ಯ ತತ್ ತ್ವಪ್ರಿಯಂ ರಾಜ್ಞಃ ಶಂತನೋರ ಭವತ್ ತದಾ ॥೫॥

ನಿನ್ನನ್ನು ಸಂತೋಷಪಡಿಸುತ್ತೇನೆ ಎಂದು ಹೇಳಿ, ಎಲ್ಲರನ್ನೂ ಪ್ರವಾಹದಲ್ಲಿ ಹಾಕುತ್ತಿದ್ದಳು. ಅವಳ ಆ ಕ್ರಿಯೆಯು ಶಂತನುವಿಗೆ ತುಂಬಾ ಅಪ್ರಿಯವಾಗಿದ್ದಿತು.

ನೋವಾಚ ಕಿಂಚಿದ್ ವಚನಂ ಪಿತುರ್ವಚನಯಂತ್ರಿತಃ ।
ಅಮೀಮಾಂಸ್ಯ ಕರ್ಮಯೋನಿರಾಗಮಶ್ಚೇತಿ ಶಂತನುಃ ।
ಸ್ಮರನ್ ಪಿತೃವಚಶ್ಚೈವ ನಾಪೃಚ್ಛತ್ ಪುತ್ರಕಿಲ್ಬಿಷಮ್ ॥೬॥

ತಂದೆಯ ವಚನಕ್ಕೆ ಬದ್ಧನಾಗಿ ಅವನು ಇವಳ ಕರ್ಮದ ಕಾರಣವನ್ನು ಮತ್ತು ಆಗಮನವನ್ನು ವಿಚಾರವನ್ನು ಮಾಡಬಾರದೆಂದು ತಿಳಿದು, ಶಿಶುಹನನ ವಿಷಯದಲ್ಲಿ ಏನೂ ಮಾತನಾಡಲಿಲ್ಲ.

ಜಾತಾಂಜಾತಾಂಶ್ಚ ವೈ ಹಂತಿ ಸಾ ಸ್ತ್ರೀ ಸಪ್ತ ವರಾನ್ ಸುತಾನ್ ।
ಶಂತನುರ್ಧರ್ಮಸಂಗಾಚ್ಚ ನಾಪೃಚ್ಛತ್ ತಾಂ ಕಥಂಚನ ॥೭॥

ತಂದೆಯ ಮಾತನ್ನು ಸ್ಮರಿಸಿ, ಅವಳು ಮಕ್ಕಳಿಗೆ ಮಾಡುವ ದ್ರೋಹದ ವಿಷಯದಲ್ಲಿ ಅವಳನ್ನು ಪ್ರಶ್ನೆ ಮಾಡಲಿಲ್ಲ. ಅವಳು ಹೀಗೆ ಹುಟ್ಟಿದ ತಕ್ಷಣ ಏಳು ಮಕ್ಕಳನ್ನು ಕೊಂದಳು.

ಅಷ್ಟಮಂ ತು ಜಿಘ್ರಾಂಸಂತ್ಯಾಂ ಚುಕ್ಷುಭೇ ಶಂತನೋರ್ಧೃತಿಃ ।
ಉವಾಚ ರಾಜಾ ದುಃಖಾರ್ತಃ ಪರೀಪ್ಸನ್ ಪುತ್ರಮಾತ್ಮನಃ ॥೮॥

ಧರ್ಮಬದ್ಧನಾದ ಶಂತನುವು ಏನಾದರೂ ಅವಳನ್ನು ಕೇಳಲೇ ಇಲ್ಲ. ಆದರೆ ಎಂಟನೆಯ ಗರ್ಭವನ್ನು ಕೊಲ್ಲಲು ಹೊರಟಾಗ ಶಂತನುವಿನ ಧೈರ್ಯ ಕ್ಷೋಭೆಗೊಂಡಿತು. ದುಃಖಾರ್ತನಾದ ಆ ಕೌರವನಂದನನಾದ ರಾಜನು ತನ್ನಮಗನನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಮಗುವನ್ನು ಕೊಲ್ಲಲು ಹೊರಟಿದ್ದ ಅವಳನ್ನು ತಡೆದು ಮಾತನಾಡಿದನು.

ಪುತ್ರಹಂತ್ರೀಂ ತದಾ ದೃಷ್ಟ್ವಾ ತಾಂ ಸ ಕೌರವನಂದನಃ ।
ಅಬ್ರವೀದ್ ಭರತಶ್ರೇಷ್ಠೋ ವಾಕ್ಯಂ ಪರಮದುಃಖಿತಃ ॥೯॥

ಮಾ ವಧೀಃ ಕಾಽಸಿ ಕಸ್ಯಾಸಿ ಕಿಂ ತ್ವಂ ಹಂಸಿ ಸುತಾನಿತಿ ।
ಪುತ್ರಘ್ನಿ ಸುಮಹತ್ಪಾಪಂ ಮಾ ಕಾರ್ಷೀಃ ಕರ್ಮ ನಿಂದಿತಮ್ ॥೧೦॥

ಭರತಶ್ರೇಷ್ಠನಾದ ಅವನು ಪರಮದುಃಖಿತನಾಗಿ ಹೀಗೆ ಮಾತನಾಡಿದನು. ಕೊಲ್ಲಬೇಡ ನೀನು ಯಾರು? ಯಾರಿಗೆ ಸೇರಿದವಳು? ಏತಕ್ಕೆ ಮಕ್ಕಳನ್ನು ಕೊಲ್ಲುತ್ತಿಯೆ? ಮಕ್ಕಳನ್ನು ಕೊಲ್ಲುವವಳೇ, ಅಂತಹ ನಿಂದಿತವಾದ ಮಹಾಪಾಪಕಾರ್ಯವನ್ನು ಮಾಡಬೇಡ.

ಗಂಗಾ

ಪುತ್ರಕಾಮ ನ ತೇ ಪುತ್ರಂ ಹನ್ಮಿ ಪುತ್ರವತಾಂ ವರ ।
ಜೀರ್ಣಸ್ತು ಮಮ ವಾಸೋಽಯಂ ಯಥಾ ಸ ಸಮಯಃ ಕೃತಃ ॥೧೧॥

ಮಕ್ಕಳನ್ನು ಪಡೆದವರಲ್ಲಿ ಶ್ರೇಷ್ಠನಾದ ಎಲೈ ಪುತ್ರಕಾಮನೇ, ನಾನು ನಿನ್ನ ಮಗನನ್ನು ಕೊಲ್ಲುವುದಿಲ್ಲ. ನಾನು ಮೊದಲು ನಿಬಂಧನೆ ಮಾಡಿದಂತೆ ನಿನ್ನ ಗೃಹದಲ್ಲಿ ನನ್ನ ವಾಸದ ಸಮಯವು ಮುಗಿದಿದೆ.

ಅಹಂ ಗಂಗಾ ಜಹ್ನುಸುತಾ ಮಹರ್ಷಿಗಣಸೇವಿತಾ ।
ದೇವಕಾರ್ಯಾರ್ಥಸಿದ್ಧ್ಯರ್ಥಮುಷಿತಾಽಹಂ ತ್ವಯಾ ಸಹ ॥೧೨॥

ನಾನು ಜಹ್ನುಸುತೆಯಾದ ಗಂಗೆ, ಮಹರ್ಷಿಗಳ ಸಮೂಹದಿಂದ ಸೇವಿತಳಾದವಳು. ದೇವಕಾರ್ಯವನ್ನು ಸಾಧಿಸುವುದಕ್ಕಾಗಿ ನಿನ್ನ ಬಳಿ ವಾಸಿಸಿದೆ.

ಅಷ್ಟೌ ಹಿ ವಸವೋ ದೇವಾ ಮಹಾಭಾಗಾ ಮಹೌಜಸಃ ।
ಆಪವಸ್ಯಾಭಿಶಾಪೇನ ಮಾನುಷೇಷೂಪಪಾದಿತಾಃ ॥೧೩॥

ಯಮುನೆಯಲ್ಲಿ ಹುಟ್ಟಿದ್ದರಿಂದ ಹಸಿಷ್ಠರು 'ಆಪವ' ಅಧ್ಯಃ ಸಂಘೂಶ ಹಿರಣ್ಯಗರ್ಭಃ' ಎಂಬ ಹೂತಿನಿಂದ ಬ್ರಹ್ಮದೇವರೂ 'ಆಪವ'.

ಎಲೈ ಮಹಾನುಭಾವನೇ, ಮಹಾಸಾಮರ್ಥ್ಯವುಳ್ಳ ದೇವತೆಗಳಾದ ಅಷ್ಟವಸುಗಳು ಬ್ರಹ್ಮದೇವರ ಮಕ್ತು ಹಸಿಷ್ಠರ ಶಾಪದಿಂದ ಮಾನುಷಯೋನಿಯಲ್ಲಿ ಜನಿಸಿದರು.

ಶೇಷಾಂ ಜನಯಿಶಾ ನಾನ್ಯತ್ತ್ವಾಸ್ಯತೇ ಭುವಿ ವಿಷ್ಯತೇ ।
ಜನಿತ್ರೀ ಮಮ್ಮಿಶಾ ಭಾತ್ರೀ ನೈವಾಸ್ತಿ ಮನುಜಾಧಿಪ ॥೧೪॥

ಭೂಮಿಯಲ್ಲಿ ನಿನ್ನನ್ನು ಬಿಟ್ಟು, ಅವರಿಗೆ ತಂದೆಯಾಗುವ ಯೋಗ್ಯತೆ ಯಾರಿಗೂ ಇರಲಿಲ್ಲ. ಮನುಜಾಧಿಪನೇ, ನನ್ನಂತಹ ತಾಯಿಯೂ ಮತ್ತು ಸಾಕುವವಳೂ ಯಾರೂ ಇರಲಿಲ್ಲ.

ತಸ್ಮಾದ್ ಏಜನನೇ ಯುಕ್ತಾ ತ್ವತ್ಸಂಯೋಗಮರೋಚಯಮ್ ।
ಜನಯಿತ್ವಾ ವಸೂನಷ್ಟೌ ಜಿತಾ ಲೋಕಾಶ್ಚ ಪುಷ್ಕಲಾಃ ॥೧೫॥

ಆದ್ದರಿಂದ ಮಕ್ಕಳನ್ನು ಪಡೆಯುವವುದರಲ್ಲಿ ನಿಯುಕ್ತಳಾಗಿ ನಿನ್ನ ಸಹವಾಸವನ್ನು ಇಷ್ಟಪಟ್ಟು ಮಾಡಿದೆ. ಎಂಟು ವಸುಗಳನ್ನು ಮಕ್ಕಳಾಗಿ ಪಡೆದು, ನೀನು ಪುಷ್ಕಲವಾದ ಲೋಕವನ್ನು ಸಂಪಾದಿಸಿದ್ದಿಯೆ.

ದೇವಾನಾಂ ಸಮಯಶ್ಚೈಷ ವಸೂನಾಂ ಸಂಶ್ರುತೋ ಮಯಾ ।
ಜಾತಂ ಜಾತಂ ಮೋಕ್ಷಯಿಷ್ಯೇ ನಿಯೋಗಾನ್ನಾನುಪೇಕ್ಷಿತಿ ॥೧೬॥

ಇದು ದೇವತೆಗಳ ನಿಬಂಧನೆ. ಹುಟ್ಟಿದ ಹುಟ್ಟಿದ ಮಕ್ಕಳನ್ನು ನಾನು ಮನುಷ್ಯಯೋನಿಯಿಂದ ಬಿಡಿಸುತ್ತೇನೆ ಎಂದು ದೇವತೆಗಳಿಗೆ ವಚನ ಕೊಟ್ಟಿದ್ದೆ. ದೇವತೆಗಳ ನಿಯೋಗದಂತೆ ಹೀಗೆ ಮಾಡಿದ್ದೇನೆ.

ಶಪ್ತಾಃ ಶಾಪಾದ್ ವಿಮುಕ್ತಾಸ್ತೇ ತ್ವತ್ಕೃತೇಽಯಂ ನ ಮುಚ್ಯತೇ ।
ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಪುತ್ರಂ ಪಾಹಿ ಮಹಾವ್ರತಮ್ ॥೧೭॥

ಶಪ್ತರಾದ ಏಳು ವಸುಗಳು ಶಾಪದಿಂದ ಮುಕ್ತರಾಗಿದ್ದಾರೆ. ನಿನ್ನ ಸಲುವಾಗಿ ಈ ಎಂಟನೆಯವನನ್ನು ಉಳಿಸುತ್ತೇನೆ. ನಿನಗೆ ಮಂಗಳವಾಗಲಿ. ನಾನು ಹೋಗಿ ಬರುತ್ತೇನೆ. ಮಹಾವ್ರತನಾದ ನಿನ್ನ ಮಗನನ್ನು ರಕ್ಷಿಸು.

ಅಯಂ ತವ ಸುತಸ್ತೇಷಾಂ ವೀರ್ಯೇಣ ಕುಲನಂದನಃ ।
ಸಂಭೂತೋಽತಿ ಜನಾನನ್ಯಾನ್ ಭವಿಷ್ಯತಿ ನ ಸಂಶಯಃ ॥೧೮॥

ಈ ನಿನ್ನ ಮಗನು ಅವರೆಲ್ಲರ ಸಾಮರ್ಥ್ಯದ ಒಂದು ಭಾಗವನ್ನು ತೆಗೆದುಕೊಂಡು ಜನಿಸಿದ್ದಾನೆ. ಇವನು ಬೇರೆ ಜನರನ್ನು ಮೀರಿರುತ್ತಾನೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಏಷ ಪರ್ಯಾಯವಾಸಸ್ಥೋ ದೇವಸ್ತ ತ್ವದೃಶೋऽಷ್ಟಮಃ ।
ಮತ್ಪ್ರಸಾದಾಚ್ಚ ಜಾನೀಹಿ ಗಂಗಾದತ್ತಮಿಮಂ ಸುತಮ್ ॥೧೯॥

ಇವನು ನನ್ನ ಅನುಗ್ರಹದಿಂದ ದೇವಲೋಕದಲ್ಲಿ (ಬೃಹಸ್ಪತಿಯ ಜೊತೆಯಲ್ಲಿಯೂ) ಮತ್ತು ಮನುಷ್ಯಲೋಕದಲ್ಲಿ ಪರುಶುರಾಮರ ಸಮೀಪದಲ್ಲಿಯೂ ವಾಸಿಸುವನು. ಈ ಎಂಟನೆಯ ಮಗು ನಿನಗೆ ಸದೃಶನಾದ ದೇವತೆ. ಇವನನ್ನು ಗಂಗಾದತ್ತನೆಂದು ತಿಳಿ.

ತಸ್ಮಾದ್ ದೇವವ್ರತಶ್ಚೈವ ಗಂಗಾದತ್ತಶ್ಚ ವೀರ್ಯವಾನ್ ।
ದ್ವಿನಾಮಾ ಶಂತನೋಃ ಪುತ್ರಃ ಶಂತನೋರಧಿಕೋ ಗುಣೈಃ ।
ತೇಷಾಂ ಲೋಕಾನವಾಪ್ನೋತಿ ವಸೂನಾಂ ವಸುಧಾಧಿಪ ॥೨೦॥

ಎಲೈ ರಾಜನೇ, ಆದ್ದರಿಂದ ಶಂತನುವಿನ ವೀರ್ಯವಂತನಾದ ಮಗನಿಗೆ 'ದೇವವ್ರತ' ಮತು 'ಗಂಗಾದತ್ತ' ಎಂದು ಎರಡು ಹೆಸರುಗಳು. ಅವನು ತನ್ನ ಗುಣಗಳಿಂದ ಶಂತನುವನ್ನು ಮೀರಿಸಿ ಕೊನೆಯಲ್ಲಿ ವಸುಗಳ ಲೋಕವನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಷಣ್ಣವತಿತಮೋऽಧ್ಯಾಯಃ ॥

॥ ಸಂಭವಪರ್ವಣಿ ಚತುಶ್ಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ತೊಂಭತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ -ಅಧ್ಯಾಯ-೧೧

ಅಥಾಷ್ಟಮೋ ವಸುರಾಸೀದ್ ದ್ಯುನಾಮಾ
ವರಾಂಗಿನಾಮ್ನ್ಯಸ್ಯ ಬಭೂವ ಭಾರ್ಯಾ ।
ಬಭೂವ ತಸ್ಯಾಶ್ಚ ಸಖೀ ನೃಪಸ್ಯ
ಸುವಿಂದನಾಮ್ನೋ ದಯಿತಾ ಸನಾಮ್ನೀ ॥೨೨॥

ಅಷ್ಟಮ ವಸುವಿಗೆ ದ್ಯು ಎಂಬ ಹೆಸರೂ ಇದ್ದಿತು. ಅವನಿಗೆ ವರಾಂಗಿ ಎಂಬ ಪತ್ನಿ ಇದ್ದಳು. ಅವಳಿಗೆ ತನ್ನ ಹೆಸರಿನವಳೆ ಆದ ಗೆಳತಿ ಇದ್ದಳು. ಅವಳು ಸುವಿಂದ ಎಂಬ ಹೆಸರಿನ ರಾಜನ ಹೆಂಡತಿ.

ತಸ್ಯಾ ಜರಾಮೃತಿವಿಧ್ವಂಸಹೇತೋ-
ರ್ವಸಿಷ್ಠಧೇನುಂ ಸ್ವಮೃತಂ ಕ್ಷರಂತೀಮ್ ।
ಜರಾಪಹಾಂ ನಂದಿನಿನಾಮಧೇಯಾಂ
ಬದ್ಧುಂ ಪತಿಂ ಚೋದಯಾಮಾಸ ದೇವೀ ॥೨೩॥

ದೇವಿ ವರಾಂಗಿ ತನ್ನ ಗೆಳತಿಯಾದ ವರಾಂಗಿಗೆ ಜರೆ ಮರಣವಿಲ್ಲದಂತೆ ಮಾಡುವ ಉದ್ದೇಶದಿಂದ ಉತ್ತಮ ಅಮೃತವನ್ನು ನೀಡುವ, ಜರೆಯನ್ನು ಕಳೆವ, ನಂದಿನಿ ಎಂಬ ಹೆಸರಿನ ವಸಿಷ್ಠಧೇನುವನ್ನು ಕಟ್ಟಿ ತರಲು ಪತ್ನಿಯನ್ನು ಪ್ರೇರಿಸಿದಳು.

ತಯಾ ದ್ಯುನಾಮಾ ಸ ವಸುಃ ಪ್ರಚೋದಿತೋ
ಭ್ರಾತೃಸ್ನೇಹಾತ್ ಸಪ್ತಭಿರನ್ವಿತೋಽಪರೈಃ ।
ಬಬಂಧ ತಾಂ ಗಾಮಥ ತಾನ್ ಶಶಾಪ
ವಸಿಷ್ಠ ಸಂಸ್ಥಃ ಕಮಲೋದ್ಭವಃ ಪ್ರಭುಃ ॥೨೪॥

ವರಾಂಗಿಯಿಂದ ಪ್ರೇರಿತನಾದ ದ್ಯುಮನಾಮಕನಾದ ವಸು ಸೋದರ ಸ್ನೇಹದಿಂದ ಬಂದ ಬೇರೆ ಏಳು ಮಂದಿ ವಸುಗಳೊಂದಿಗೆ ಹೋಗಿ ಆ ನಂದಿನಿ ಹಸುವನ್ನು ಕಟ್ಟಿದ. ಆಗ ವಸಿಷ್ಠನಲ್ಲಿದ್ದ ಶಕ್ತಿಶಾಲಿಯಾದ ಬ್ರಹ್ಮ ಶಪಿಸಿದ.

ಏಷ ಪರ್ಯಾಯವಾಸಸ್ಥೋ ದೇವಸ್ತ ತ್ವದೃಶೋಽಷ್ಟಮಃ ।
ಮತ್ಪ್ರಸಾದಾಚ್ಚ ಜಾನೀಹಿ ಗಂಗಾದತ್ತಮಿಮಂ ಸುತಮ್ ॥೧೯॥

ಇವನು ನನ್ನ ಅನುಗ್ರಹದಿಂದ ದೇವಲೋಕದಲ್ಲಿ (ಬೃಹಸ್ಪತಿಯ ಜೊತೆಯಲ್ಲಿಯೂ) ಮತ್ತು ಮನುಷ್ಯಲೋಕದಲ್ಲಿ ಪರುಶುರಾಮರ ಸಮೀಪದಲ್ಲಿಯೂ ವಾಸಿಸುವನು. ಈ ಎಂಟನೆಯ ಮಗು ನಿನಗೆ ಸದೃಶನಾದ ದೇವತೆ. ಇವನನ್ನು ಗಂಗಾದತ್ತನೆಂದು ತಿಳಿ.

ತಸ್ಮಾದ್ ದೇವವ್ರತಶ್ಚೈವ ಗಂಗಾದತ್ತಶ್ಚ ವೀರ್ಯವಾನ್ ।
ದ್ವಿನಾಮಾ ಶಂತನೋಃ ಪುತ್ರಃ ಶಂತನೋರಧಿಕೋ ಗುಣೈಃ ।
ತೇಷಾಂ ಲೋಕಾನವಾಪ್ನೋತಿ ವಸೂನಾಂ ವಸುಧಾಧಿಪ ॥೨೦॥

ಎಲೈ ರಾಜನೇ, ಆದ್ದರಿಂದ ಶಂತನುವಿನ ವೀರ್ಯವಂತನಾದ ಮಗನಿಗೆ 'ದೇವವ್ರತ' ಮತು 'ಗಂಗಾದತ್ತ' ಎಂದು ಎರಡು ಹೆಸರುಗಳು. ಅವನು ತನ್ನ ಗುಣಗಳಿಂದ ಶಂತನುವನ್ನು ಮೀರಿಸಿ ಕೊನೆಯಲ್ಲಿ ವಸುಗಳ ಲೋಕವನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಷಣ್ಣವತಿತಮೋಽಧ್ಯಾಯಃ ॥

॥ ಸಂಭವಪರ್ವಣಿ ಚತುಶ್ಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ತೊಂಭತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ -ಅಧ್ಯಾಯ-೧೧

ಅಥಾಷ್ಟಮೋ ವಸುರಾಸೀದ್ ದ್ಯುನಾಮಾ
ವರಾಂಗಿನಾಮ್ನ್ಯಸ್ಯ ಬಭೂವ ಭಾರ್ಯಾ ।
ಬಭೂವ ತಸ್ಯಾಶ್ಚ ಸಖೀ ನೃಪಸ್ಯ
ಸುವಿಂದನಾಮ್ನೋ ದಯಿತಾ ಸನಾಮ್ನೀ ॥೨೨॥

ಅಷ್ಟಮ ವಸುವಿಗೆ ದ್ಯು ಎಂಬ ಹೆಸರೂ ಇದ್ದಿತು. ಅವನಿಗೆ ವರಾಂಗಿ ಎಂಬ ಪತ್ನಿ ಇದ್ದಳು. ಅವಳಿಗೆ ತನ್ನ ಹೆಸರಿನವಳೆ ಆದ ಗೆಳತಿ ಇದ್ದಳು. ಅವಳು ಸುವಿಂದ ಎಂಬ ಹೆಸರಿನ ರಾಜನ ಹೆಂಡತಿ.

ತಸ್ಯಾ ಜರಾಮೃತಿವಿಧ್ವಂಸಹೇತೋ-
ರ್ವಸಿಷ್ಠಧೇನುಂ ಸ್ವಮೃತಂ ಕ್ಷರಂತೀಮ್ ।
ಜರಾಪಹಾಂ ನಂದಿನಿನಾಮಧೇಯಾಂ
ಬದ್ಧುಂ ಪತಿಂ ಚೋದಯಾಮಾಸ ದೇವೀ ॥೨೩॥

ದೇವಿ ವರಾಂಗಿ ತನ್ನ ಗೆಳತಿಯಾದ ವರಾಂಗಿಗೆ ಜರೆ ಮರಣವಿಲ್ಲದಂತೆ ಮಾಡುವ ಉದ್ದೇಶದಿಂದ ಉತ್ತಮ ಅಮೃತವನ್ನು ನೀಡುವ, ಜರೆಯನ್ನು ಕಳೆವ, ನಂದಿನಿ ಎಂಬ ಹೆಸರಿನ ವಸಿಷ್ಠಧೇನುವನ್ನು ಕಟ್ಟಿತರಲು ಪತ್ನಿಯನ್ನು ಪ್ರೇರಿಸಿದಳು.

ತಯಾ ದ್ಯುನಾಮಾ ಸ ವಸುಃ ಪ್ರಚೋದಿತೋ
ಭ್ರಾತೃಸ್ನೇಹಾತ್ ಸಪ್ತಭಿರನ್ವಿತೋಽಪರೈಃ ।
ಬಬಂಧ ತಾಂ ಗಾಮಥ ತಾನ್ ಶಶಾಪ
ವಸಿಷ್ಠ ಸಂಸ್ಥಃ ಕಮಲೋದ್ಭವಃ ಪ್ರಭುಃ ॥೨೪॥

ವರಾಂಗಿಯಿಂದ ಪ್ರೇರಿತನಾದ ದ್ಯುಮನಾಮಕನಾದ ವಸು ಸೋದರ ಸ್ನೇಹದಿಂದ ಬಂದ ಬೇರೆ ಏಳು ಮಂದಿ ವಸುಗಳೊಂದಿಗೆ ಹೋಗಿ ಆ ನಂದಿನಿ ಹಸುವನ್ನು ಕಟ್ಟಿದ. ಆಗ ವಸಿಷ್ಠನಲ್ಲಿದ್ದ ಶಕ್ತಿಶಾಲಿಯಾದ ಬ್ರಹ್ಮ ಶಪಿಸಿದ.

ಅಧರ್ಮವೃತ್ತಾಃ ಪ್ರತಿಯಾತ ಮಾನುಷೀಂ
ಯೋನಿಂ ದ್ರುತಂ ಯತ್ಕೃತೇ ಸರ್ವ ಏವ ।
ಧರ್ಮಾಚ್ಯುತಾಃ ಸ ತಥಾಷ್ಟಾಯುರಾಪ್ನುತಾ
ಮನ್ಯೇ ಪುನಃ ಕ್ಷಿಪ್ರಮತೋ ವಿಮೋಕ್ಷ್ಯಥ ॥೨೫॥

'ಅಧರ್ಮದಲ್ಲಿ ಪ್ರವೃತ್ತರಾದ ನೀವು ಬೇಗನೆ ಮನುಷ್ಯ ಜನ್ಮ ಹೊಂದಿರಿ. ಯಾರಿಗಾಗಿ ನೀವೆಲ್ಲರೂ ಧರ್ಮಚ್ಯುತರಾದಿರೋ ಅವನು ಎಂಟೂ ಮಂದಿಗಳ ಆಯುಷ್ಯ ಹೊಂದಿರಲಿ. ಉಳಿದವರು ಬೇಗನೆ ಮುಕ್ತರಾಗಿರಿ.

ಪ್ರಚೋದಯಾಮಾಸ ಚ ಯಾ ಕುಮಾರ್ಗೇ
ಪತಿಂ ಹಿ ಸಾಂಬೇತಿ ನರೇಷು ಜಾತಾ ।
ಅಭರ್ತೃಕಾ ಪುಂಸ್ತ್ವಸಮಾಶ್ರಯೇಣ
ಪತ್ಯುರ್ಮೃತೌ ಕಾರಣತ್ವಂ ವ್ರಜೇತ ॥೨೬॥

'ಪತಿಯನ್ನು ದುರ್ಮಾರ್ಗದಲ್ಲಿ ಪ್ರೇರಿಸಿದ ವರಾಂಗಿ ಅಂಬೆ ಎಂಬ ಹೆಸರಿನಿಂದ ಮನುಷ್ಯ ಜನ್ಮ ಹೊಂದಲಿ. ಪತಿರಹಿತಳಾಗಿ ಪುರುಷತ್ವವನ್ನು ಸಂಪಾದಿಸಿ ಪತಿಯ ಮರಣಕ್ಕೂ ಕಾರಣಳಾಗಲಿ'.

ಭವತ್ವಸೌ ಬ್ರಹ್ಮಚರ್ಯೈಕನಿಷ್ಠೋ ಮಹಾನ್ ವಿರೋಧಶ್ಚ ತಯೋರ್ಭವೇತ।
ಸ ಗರ್ಭವಾಸಾಷ್ಟಕದುಃಖಮೇವ ಸಮಾಪ್ನುತಾಂ ಶರತಲ್ಪೇ ಶಯಾನಃ ॥೨೭॥

'ದ್ಯು ಕೇವಲ ಬ್ರಹ್ಮಚರ್ಯದಲ್ಲಿರಲಿ. ಪತಿಪತ್ನಿಯರಿಬ್ಬರೊಳಗೆ ಮಹಾ ವಿರೋಧ ಉಂಟಾಗಲಿ. ಆತ ಶರಮಂಚದಲಿ ಮಲಗಿ ಎಂಟು ಗರ್ಭವಾಸಗಳ ದುಃಖ ಹೊಂದಲಿ'.

ಮೃತ್ಯೂಪಕ್ರೋತ್ಥಾಮಪಿ ವೇದನಾಂ ಸಃ
ಪ್ರಾಪ್ನೋತು ಶಸ್ತ್ರೈರ್ಬಹುಧಾ ನಿಕೃತ್ತಃ ।
ಇತೀರಿತಾಸ್ತೇ ಕಮಲೋದ್ಭವಂ ತಂ
ಜ್ಞಾತ್ವಾ ಸಮುತ್ಸೃಜ್ಯ ಚ ಗಾಂ ಪ್ರಣೇಮುಃ ॥೨೮॥

'ಎಂಟು ಮರಣಗಳಿಂದಾಗಬಹುದಾದ ವೇದನೆಯನ್ನು ಆತ ಶಸ್ತ್ರಗಳಿಂದ ನಾನಾ ಬಗೆಯಲ್ಲಿ ಛಿನ್ನಭಿನ್ನನಾಗುತ್ತ ಅನುಭವಿಸಲಿ'. ಹೀಗೆ ಶಪ್ತರಾದ ವಸುಗಳು ಶಾಪಕೊಟ್ಟವನು ಬ್ರಹ್ಮನೆ ಎಂದು ತಿಳಿದು ಗೋವನ್ನು ಬಿಟ್ಟುಕೊಟ್ಟುತಲೆಬಾಗಿದರು.

ನ ಮಾನುಷೀಂ ಗರ್ಭಮವಾಪ್ನುಮೋ ವಯಂ
ಭವತ್ವಯಂ ಸರ್ವವಿತ್ ಕೀರ್ತಿಮಾಂಶ್ಚ।
ಮಹಾಸ್ತ್ರವೇತ್ತಾ ಭವದಂಶಯುಕ್ತ
ಸ್ತಥಾ ಬಲಂ ನೋಽಖಿಲಾನಾಮುಪೈತು ॥೨೯॥

'ನಾನು ಮನುಷ್ಯಸ್ತ್ರೀಯ ಗರ್ಭವನ್ನು ಪ್ರವೇಶಿಸಿದಂತಾಗಲಿ. ಈ ದ್ಯುನಾಮಕ ವಸು ನಿನ್ನ ಅಂಶಯುಕ್ತನಾಗಿದ್ದು ಸರ್ವಜ್ಞನಾಗಲಿ. ಕೀರ್ತಿಶಾಲಿಯಾಗಲಿ. ಮಹಾ ಅಸ್ತ್ರಜ್ಞನೆನಿಸಿ ನಮ್ಮೆಲ್ಲರ ಬಲವನ್ನು ಹೊಂದಿರಲಿ'.

ಇತೀರಿತೇಽಸ್ತ್ವಿತ್ಯುದಿತಾಃ ಸ್ವಯಂಭುವಾ
ವಸಿಷ್ಠಸಂಸ್ಥೇನ ಸುರಾಪಗಾಂ ಯಯುಃ।
ಊಚುಸ್ತಥೈನಾಮುದರೇ ವಯಂ ತೇ
ಜಾಯೇಮಹಿ ಕ್ಷಿಪ್ರಮಸ್ಮಾನ್ ಹನ ತ್ವಮ್ ॥೩೦॥

ಹೀಗೆ ವಸುಗಳು ಹೇಳಿದಾಗ ವಸಿಷ್ಠನಲ್ಲಿದ್ದ ಬ್ರಹ್ಮ 'ತಥಾಸ್ತು' ಎಂದ. ಬಳಿಕ ವಸುಗಳು ಗಂಗೆಯ ಬಳಿಗೆ ಹೋದರು. 'ನಾವು ನಿನ್ನ ಗರ್ಭದಲ್ಲಿ ಜನಿಸುವೆವು. ಆಗ ನೀನು ಬೇಗನೆ ನಮ್ಮನ್ನು ಕೊಲ್ಲಬೇಕು' ಎಂದರು.

ಇತೀರಿತಾ ಸಾ ವರಮಾಶು ವವ್ರೇ
ತೇಭ್ಯೋಽಪ್ಯಪಾಪತ್ವಮಥ ಪ್ರಿಯತ್ವಮ್।
ತೇಷಾಂ ಸದೈವಾತ್ಮನ ಏಕಮೇಷಾಂ
ದೀರ್ಘಾಯುಷಂ ತಾನ್ ಸುಷುವೇಽಥ ಶಂತನೋಃ ॥೩೧॥

ವಸುಗಳು ಹೀಗೆ ಹೇಳಿದಾಗ ಗಂಗೆ ಬೇಗನೆ ವರ ಬೇಡಿದಳು. 'ನನಗೆ ಮಕ್ಕಳನ್ನು ಕೊಂದ ಪಾಪ ಬರಬಾರದು. ಕೊಂದರೂ ನಾನು ಅವರಿಗೆ ಪ್ರಿಯಳಾಗಿರಬೇಕು. ಅವರಲ್ಲಿ ಒಬ್ಬ ಮಗ ದೀರ್ಘಾಯುಷಿಯಾಗಿ ಬದುಕಿರಬೇಕು' ಎಂದು. ಬಳಿಕ ಗಂಗೆ ಶಂತನುವಿನಿಂದ ಮಕ್ಕಳನ್ನು ಹಡೆದಳು.

ಅವಿಘ್ನತಸ್ತಾನ್ ವಿನಿಹಂತುಮೇವ
ಪುರಾ ಪ್ರತೀಪಸ್ಯ ಹಿ ದಕ್ಷಿಣೋರುಮ್।
ಸಮಾಶ್ರಿತಾ ಕಾಮಿನೀವತ್ ತ್ವಕಾಮಾ
ತತ್ಸುತ್ರಭಾರ್ಯಾ ಭವಿತುಂ ವಿಡಂಬಾತ್ ॥೩೨॥

ಮಕ್ಕಳನ್ನು ಹಡೆದು ಕೊಲ್ಲುವ ಉದ್ದೇಶದಿಂದ ಮೊದಲಿಗೆ ಶಂತನುವನ್ನು ನಿರ್ವಿಘ್ನವಾಗಿ ಮದುವೆಯಾಗುವುದಕ್ಕಾಗಿ ಗಂಗೆ ಪ್ರತೀಪರಾಜನ ಬಲತೊಡೆಯ ಮೇಲೆ, ತಾನು ಅವನನ್ನು ಕಾಮಿಸದಿದ್ದರೂ ಸಾಧಾರಣ ಮಾನವಸ್ತ್ರೀಯನ್ನು ಅನುಕರಿಸುತ್ತ ಕಾಮಿಸಿದವಳಂತೆ, ಕುಳಿತಳು. ಬಲತೊಡೆಯಲ್ಲಿ ಕುಳಿತುದು ಅವನ ಮಗನ ಪತ್ನಿಯಾಗುವುದಕ್ಕಾಗಿ.

ತೇನೈವ ಚೋಕ್ತಾ ಭವ ಮೇ ಸುತಸ್ಯ
ಭಾರ್ಯಾ ಯತೋ ದಕ್ಷಿಣೋರುಸ್ಥಿತಾಸಿ ।
ಭಾಗೋ ಹಿ ದಕ್ಷೋ ದುಹಿತುಃ ಸ್ನುಷಾಯಾ
ಭಾರ್ಯಾ ಭಾಗೋ ವಾಮ ಇತಿ ಪ್ರಸಿದ್ಧಃ ॥೩೩॥

'ಗಂಗೆ, ನೀನು ಬಲತೊಡೆಯಲ್ಲಿ ಕುಳಿತುದರಿಂದ ನನ್ನ ಮಗನಿಗೆ ಪತ್ನಿಯಾಗು' ಎಂದು ಪ್ರತೀಪನೇ ಹೇಳಿದ. ಏಕೆಂದರೆ ಬಲಭಾಗ ಮಗಳ ಇಲ್ಲವೆ ಸೊಸೆಯ ಸ್ಥಾನ. ಎಡಭಾಗ ಪತ್ನೀಸ್ಥಾನ ಎಂದು ಪ್ರಸಿದ್ಧ.

ಉವಾಚ ಸಾ ತಂ ನ ತು ಮಾಂ ಸುತಸ್ತೇ
ಕಾಸೀತಿ ಪೃಚ್ಛೇನ್ನ ತು ಮಾಂ ನಿವಾರಯೇತ್ ।
ಅಯೋಗ್ಯಕರ್ತ್ರೀಮಪಿ ಕಾರಣಂ ಚ
ಮತ್ಕರ್ಮಣೋ ನೈವ ಪೃಚ್ಛೇತ್ ಕದಾಚಿತ್ ॥೩೪॥

'ನಿನ್ನ ಮಗ ನನ್ನನ್ನು ನೀನಾರೆಂದು ಕೇಳಕೂಡದು. ನಾನು ಅಯುಕ್ತವಾದುದನ್ನು ಏನು ಮಾಡುತ್ತಿದ್ದರೂ ಆತ ತಡೆಯಬಾರದು. ನಾನು ಹಾಗೆ ಮಾಡುವುದಕ್ಕೆ ಕಾರಣವನ್ನೂ ಎಂದೂ ಕೇಳಬಾರದು.

ಯದಾ ತ್ರಯಾಣಾಮಪಿ ಚೈಕಮೇಷ ಕರೋತಿ ಗಚ್ಛೇಯಮಹಂ ವಿಸೃಜ್ಯ ।
ತದಾ ತ್ವದೀಯಂ ಸುತಮಿತ್ಯುದೀರಿತೇ ತಥೇತಿ ರಾಜಾಪ್ಯವದತ್ ಪ್ರತೀಪಃ ॥

'ಈ ಮೂರರೊಳಗೆ ಒಂದನ್ನು ಮಾಡಿದರೂ ನಾನು ನಿನ್ನ ಮಗನನ್ನು ತೊರೆದು ಹೋಗುವೆನು'. ಗಂಗೆ ಹೀಗೆ ಹೇಳಿದಾಗ ಪ್ರತೀಪರಾಜ 'ಹಾಗೇ ಆಗಲಿ' ಎಂದ.

ತಥೈವ ಪುತ್ರಾಯ ಚ ತೇನ ತದ್ವಚೋ
ವಧೂಕ್ತಮುಕ್ತಂ ವಚನಾದ್ ದ್ಯುನದ್ಯಾಃ ।

ಕನೀಯಸೇ ಸಾ ಹ್ಯವದತ್ ಸುತಸ್ತೇ
ನಾನ್ಯಃ ಪತಿಃ ಶಂತನುರೇವ ಮೇ ವೃತಃ ॥೩೬॥

ಗಂಗೆಯ ಮಾತಿನಂತೆ ಅವಳು ಹೇಳಿದ ಮಾತನ್ನು ಹಾಗೆಯೇ ರಾಜ ತನ್ನ ಮಗನಿಗೆ ಹೇಳಿದ. ಏಕೆಂದರೆ ಅವಳು ಹೇಳಿದ್ದಳು, 'ನಿನ್ನ ಮಗನಾದ ಶಂತನುವೆ ನಾನು ವರಿಸುವ ಪತಿ, ಇನ್ನಾರೂ ಅಲ್ಲ'.

★★★★★

ತೊಂಭತ್ತೇಳನೆಯ ಅಧ್ಯಾಯ

(ವಸುಗಳಿಗೆ ವಸಿಷ್ಠರಿಂದ ಶಾಪ ಬಂದ ಪ್ರಕಾರ)

ಶಂತನುಃ

ಆಪವೋ ನಾಮ ಕೋನ್ವೇಷ ಕಿಮ್ಯಪೇಸ್ತಸ್ಯ ದೂಷಿತಮ್ ।
ಶಶಾಪ ಯಸ್ಮಾತ್ ಕಲ್ಯಾಣಿ ಸ ವಸೂಂಶ್ಚಾರುದರ್ಶನೇ ।
ಯಸ್ಯಾಭಿಶಾಪಾತ್ ತೇ ಸರ್ವೇ ಮಾನುಷೀಂ ಯೋನಿಮಾಗತಾಃ ॥

ಎಲೌ ಚಾರುನೇತ್ರೆಯಾದ ಕಲ್ಯಾಣಿಯೇ, 'ಆಪವ' ಎಂದರೆ ಯಾರು? ಆ ಋಷಿಗಳಿಗೆ ಈ ವಸುಗಳು ಮಾಡಿದ ಅಪರಾಧವೇನು? ಯಾವ ಶಾಪದ ನಿಮಿತ್ತದಿಂದ ಅವರೆಲ್ಲರೂ ಮನುಷ್ಯಯೋನಿಯಲ್ಲಿ ಜನಿಸಿದರೋ, ಅಂತಹ ಶಾಪಕ್ಕೆ ಕಾರಣವಾದ ಅಪರಾಧವೇನು ?

ಅನೇನ ಚ ವಿಶೇಷೇಣ ಗಂಗಾದತ್ತೇನ ಕಿಂ ಕೃತಮ್ ।
ಕಸ್ಯ ಚೈವ ಕೃತೇನಾಯಂ ಮಾನುಷೇಷು ವಸಿಷ್ಯತಿ ॥೨॥

ಈಶಾನಾಃ ಸರ್ವಲೋಕಾನಾಂ ವಸವಃ ಕೇನ ಹೇತುನಾ ।
ಮಾನುಷೇಷೂದಪದ್ಯಂತ ತತ್ ಸಮಾಚಕ್ಷ್ವ ಜಾಹ್ನವಿ ॥೩॥

ಈ ಎಂಟನೆಯ ಮಗನಾದ ಗಂಗಾದತ್ತನು ಯಾವ ನಿಮಿತ್ತದಿಂದ ಮನುಷ್ಯ ಲೋಕದಲ್ಲಿ ವಾಸಮಾಡುತ್ತಾನೆಯೋ, ಅಂತಹ ವಿಶೇಷವಾದ ಕಾರ್ಯವು ಇವನಿಂದ ಏನು ಮಾಡಲ್ಪಟ್ಟಿತ್ತು? ಎಲೌ ಜಾಹ್ನವಿಯೇ, ಎಲ್ಲ ಲೋಕಕ್ಕೂ ಒಡೆಯರಾದ ವಸುಗಳು ಯಾವ ಕಾರಣದಿಂದ ಮನುಷ್ಯಯೋನಿಯಲ್ಲಿ ಜನಿಸಿದರೆಂದು ನನಗೆ ಹೇಳು.

ವೈಶಂಪಾಯನಃ

ಏವಮುಕ್ತಾ ವರಾರೋಹಾ ರಾಜಾನಮಿದಮಬ್ರವೀತ್ ।
ಭರ್ತಾರಂ ಜಾಹ್ನವೀ ದೇವೀ ಶಂತನುಂ ಭರತರ್ಷಭ ॥೪॥

ಭರತರ್ಷಭನೇ ಹೀಗೆ ಹೇಳಲ್ಪಟ್ಟ ಸುಂದರಿಯಾದ ಗಂಗಾದೇವಿ ತನ್ನ ಪತಿಯಾದ ಶಂತನುರಾಜನನ್ನು ಕುರಿತು ಇದನ್ನು ಮಾತನಾಡಿದಳು.

ಲೇಭೇ ಯಂ ಯಮುನಾ ಪುತ್ರಂ ವರುಣಾದ್ ರಾಜಸತ್ತಮ ।
ವಸಿಷ್ಠನಾಮಾ ಸ ಮುನಿಃ ಖ್ಯಾತ ಆಪವ ಇತ್ಯುತ ॥೫॥

ಎಲೈ ರಾಜಶ್ರೇಷ್ಠನೇ, ಯಮುನೆಯು ವರುಣನಿಂದ ಯಾವ ಮಗನನ್ನು ಪಡೆದಳೋ, ಅವನು ಲೋಕದಲ್ಲಿ 'ವಸಿಷ್ಠ' ಎಂಬ ಹೆಸರಿನಿಂದಲೂ ಮತ್ತು ಆಪವ' ಎಂಬ ಹೆಸರಿನಿಂದಲೂ ಖ್ಯಾತನಾದನು.

ತಸ್ಯಾಶ್ರಮಪದಂ ಪುಣ್ಯಂ ಮೃಗಪಕ್ಷಿಗಣಾನ್ವಿತಮ್ ।
ಮೇರೋಃ ಪಾರ್ಶ್ವೇ ನಗೇಂದ್ರಸ್ಯ ಸರ್ವರ್ತುಕವನಾನ್ವಿತಮ್ ॥೬॥

ಮೃಗಪಕ್ಷಿಗಳ ಸಮೂಹದಿಂದ ಆವೃತವಾದ ಎಲ್ಲ ಋತುಗಳಿಗೂ ಒಪ್ಪುವ ವನಗಳಿಂದ ಕೂಡಿದ ಆ ಋಷಿಗಳ ಪವಿತ್ರವಾದ ಆಶ್ರಮವು ಮೇರು ಪರ್ವತದ ಪಾರ್ಶ್ವದಲ್ಲಿದೆ.

ಸ ವಾರುಣಿಸ್ತಪಸ್ತೇಪೇ ತಸ್ಮಿನ್ ಭರತಸತ್ತಮ ।
ವನೇ ಪುಣ್ಯಕೃತಾಂ ಶ್ರೇಷ್ಠಃ ಸ್ವಾದುಮೂಲಫಲೋದಕೇ ॥೭॥

ಎಲೈ ಭರತ ಶ್ರೇಷ್ಠನೇ, ವರುಣನ ಮಗನಾದ ಪುಣ್ಯವನ್ನು ಆಚರಿಸುವವರಲ್ಲಿ ಶ್ರೇಷ್ಠನಾದ ಆ ಋಷಿಯು ರುಚಿಕರವಾದ ಕಂದಮೂಲ ಮತ್ತು ಉದಕವಿರುವ ಆ ವನದಲ್ಲಿ ತಪಸ್ಸನ್ನು ಮಾಡಿದನು.

ದಕ್ಷಸ್ಯ ದುಹಿತಾ ಯಾ ತು ಸುರಭೀತ್ಯಭಿವಿಶ್ರುತಾ ।
ಗಾಂ ಪ್ರಜಾತಾ ತು ಸಾ ದೇವೀ ಕಾಶ್ಯಪಾದ್ ಭರತರ್ಷಭ ॥೮॥

ಭರತರ್ಷಭನೇ, ದಕ್ಷನ ಸುರಭಿಯೆಂದು ಖ್ಯಾತಳಾದ ಮಗಳು ಕಾಶ್ಯಪರಿಂದ ಗೋವನ್ನು ಪಡೆದಳು.

ಅನುಗ್ರಹಾರ್ಥಂ ಜಗತಃ ಸರ್ವಕಾಮದುಹಾಂ ವರಾಮ್ ।
ಲೇಭೇ ತಾಂ ಗಾಂ ತು ಧರ್ಮಾತ್ಮಾ ಹೋಮಧೇನುಂ ಸ ವಾರುಣಿಃ॥

ಎಲೈ ಭರತಶ್ರೇಷ್ಠನೇ, ಜಗತ್ತಿನ ಅನುಗ್ರಹಕ್ಕೋಸ್ಕರ ಎಲ್ಲ ಅಭೀಷ್ಟಗಳನ್ನು ಕೊಡುವವರಲ್ಲಿ ಶ್ರೇಷ್ಠವಾದ ಆ ಹೋಮಧೇನುವನ್ನು ಧರ್ಮಾತ್ಮರಾದ ವಸಿಷ್ಠರು ಪಡೆದರು.

ಸಾ ತಸ್ಮಿಂಸ್ತಪಸಾऽರಣ್ಯೇ ವಸಂತೀ ಮುನಿಸೇವಿತೇ ।
ಚಚಾರ ರಮ್ಯೇ ಧರ್ಮ್ಯೇ ಚ ಗೌರಪೇತಭಯಾ ತದಾ ॥೧೦॥

ಆ ಗೋವು ಮುನಿಗಳಿಂದ ಸೇವಿತವಾದ, ಆ ಮನೋಹರವಾದ ಧರ್ಮಕ್ಕೆ ಅನುಕೂಲವಾದ ವನದಲ್ಲಿ ನಿರ್ಭಯವಾಗಿ ತಿರುಗಾಡುತ್ತಾ, ವಾಸಮಾಡುತ್ತಿತ್ತು.

ತತಸ್ತದ್ವನಮಾಜಗ್ಮುಃ ಕದಾಚಿದ್ ಭರತರ್ಷಭ ।
ಧರಾದ್ಯಾಃ ವಸವಃ ಸರ್ವೇ ದೇವಾ ದೇವರ್ಷಿಸೇವಿತಮ್ ॥೧೧॥

ಎಲೈ ಭರತಶ್ರೇಷ್ಠನೇ, ಒಮ್ಮೆ 'ಧರ' ಮೊದಲಾದ ಎಂಟುವಸುಗಳು ದೇವರ್ಷಿಗಳಿಂದ ಸೇವಿತವಾದ ಆ ವನಕ್ಕೆ ಬಂದರು.

ಸಭಾರ್ಯಾಸ್ತದ್ವನಂ ಸರ್ವಂ ವಿಚರಂತಸ್ತತಸ್ತತಃ ।
ರೇಮಿರೇ ರಮಣೀಯೇಷು ಪರ್ವತೇಷು ವನೇಷು ಚ ॥೧೨॥

ಅವರು ತಮ್ಮ ಪತ್ನಿಯರೊಡಗೂಡಿ ಅಲ್ಲಿಂದಿಲ್ಲಿಗೆ ಸಂಚರಿಸುತ್ತಾ ರಮಣೀವಾದ ಪರ್ವತಗಳಲ್ಲಿಯೂ ಮತ್ತು ವನಗಳಲ್ಲಿಯೂ ವಿಹಾರವನ್ನು ಮಾಡಿದರು.

ಏಕಸ್ಯ ಭಾರ್ಯಾ ರಾಜೇಂದ್ರ ವಸೋರ್ವಾಸವವಿಕ್ರಮ ।
ತಾಂ ಚ ದೋಗ್ಧ್ರೀಂ ವನೇ ತಸ್ಮಿನ್ ಗಾಂ ದದರ್ಶ ಸುಶೋಭನಾಮ್ ॥

ರಾಜೇಂದ್ರನೇ, ಇಂದ್ರತುಲ್ಯಪರಾಕ್ರಮನೇ, ಅವರಲ್ಲಿ ಒಬ್ಬ ವಸುವಿನ ಪತ್ನಿಯು ಆ ವನದಲ್ಲಿ ಇದ್ದ ಸುಂದರವಾದ ಒಳ್ಳೆಯ ಆ ಗೋವನ್ನು ನೋಡಿದಳು.

ಯಾ ಸಾ ವಸಿಷ್ಠಸ್ಯ ಮುನೇಃ ಸರ್ವಕಾಮಧುಗುತ್ತಮಾ ।
ಅಥ ಸಾ ವಿಸ್ಮಿತಾ ದೇವೀ ರೂಪದ್ರವಿಣಸಂಪದಾ ॥೧೪॥

ದರ್ಶಯಾಮಾಸ ಸಾ ಪತ್ಯುಃ ತಾಂ ಗಾಂ ಗೋವೃಷವಿಕ್ರಮ ।
ಸ್ವಾಧೀನಾಂ ಚ ಸುದೋಗ್ಧ್ರೀಂ ಚ ಸುವಾಲಧಿಮುಖೋದರಾಮ್ ॥೧೫॥

ಆ ವಸಿಷ್ಠರ ಗೋವು ಕೇಳಿದ ಎಲ್ಲಾ ಕಾಮಗಳನ್ನೂ ಕೊಡುತ್ತಿತ್ತು. ಆ ಗೋವಿನ ರೂಪಸಂಪತ್ತಿನಿಂದ ವಿಸ್ಮಯಗೊಂಡ ವಸುಪತ್ನಿಯು ಒಳ್ಳೆಯ ಬಾಲ, ಸುಳಿ, ಮುಖ ಮತ್ತು ಉದರಗಳಿಂದ ಕೂಡಿ, ಸ್ವತಂತ್ರವಾಗಿ ವನದಲ್ಲಿ ಸಂಚರಿಸುತ್ತಿದ್ದ ಆ ಗೋವನ್ನು ತನ್ನ ಪತಿಗೆ ತೋರಿಸಿದಳು.

ಉಪಪನ್ನಾಂ ಗುಣೈಃ ಸರ್ವೈಃ ಶೀಲೇನಾನುತ್ತಮೇನ ಚ ।
ಏವಂಗುಣಸಮಾಯುಕ್ತಾಂ ವಸವೇ ವಸುನಂದಿನೀ ॥೧೬॥

ಎಲ್ಲಾ ಒಳ್ಳೆಯ ಲಕ್ಷಣಗಳಿಂದಲೂ, ಉತ್ತಮವಾದ ಶೀಲದಿಂದಲೂ, ಎಲ್ಲಾ ಒಳ್ಳೆಯ ಗುಣಗಳಿಂದಲೂ ಕೂಡಿದ್ದ ಆ ಕಲ್ಯಾಣಿಯನ್ನು ವಸುವಿನ ಪತ್ನಿಯು ವಸುವಿಗೆ ತೋರಿಸಿದಳು.

ದರ್ಶಯಾಮಾಸ ಕಲ್ಯಾಣೀಂ ಪುರಾ ಪೌರವನಂದನ ।
ದ್ಯೌಸ್ತದಾ ತಾಂ ತು ದೃಷ್ಟ್ವೈವ ಗಾಂ ಗಜೇಂದ್ರೇಂದ್ರವಿಕ್ರಮ ॥೧೭॥

ಉವಾಚ ರಾಜಂಸ್ತಾಂ ದೇವೀಂ ತಸ್ಯಾ ರೂಪಗುಣಾನ್ ವದನ್ ।
ಏಷಾ ಗೌರುತ್ತಮಾ ದೇವಿ ವಾರುಣೇರಸಿತೇಕ್ಷಣಾ ॥೧೮॥

ಎಲೈ ಗಜೇಂದ್ರವಿಕ್ರಮವುಳ್ಳವನೇ, ದ್ಯುನಾಮಕ ವಸುವು ಆ ಗೋವನ್ನು ನೋಡಿದ ತಕ್ಷಣವೇ ತನ್ನ ಪತ್ನಿಗೆ ಅದರ ರೂಪಗುಣಗಳನ್ನು ಹೇಳಿದನು.

ಋಷೇಸ್ತಸ್ಯ ವರಾರೋಹೇ ಯಸ್ಯೇದಂ ವನಮುತ್ತಮಮ್ ।
ಅಸ್ಯಾಃ ಕ್ಷೀರಂ ಪಿಬೇನ್ಮರ್ತ್ಯಃ ಸ್ವಾದು ಯೋ ವೈ ಸುಮಧ್ಯಮೇ ।
ದಶವರ್ಷಸಹಸ್ರಾಣಿ ಸ ಜೀವೇತ್ ಸ್ಥಿರಯೌವನಃ ॥೧೯॥

ಕಪ್ಪಾದ ಕಣ್ಣುಳ್ಳವಳೇ, ಇದು ವರುಣನ ಮಕ್ಕಳಾದ ವಸಿಷ್ಠಋಷಿಗಳ ಶ್ರೇಷ್ಠವಾದ ಗೋವು. ಸುಂದರಿ ಈ ಶ್ರೇಷ್ಠವಾದ ವನವು ಅವರಿಗೆ ಸೇರಿದುದು. ಸುಮಧ್ಯಮೇ, ಯಾವ ಮನುಷ್ಯನು ಈ ಗೋವಿನ ರುಚಿಯಾದ ಕ್ಷೀರವನ್ನು ಪಾನ ಮಾಡುವನೋ, ಅವನು ಹತ್ತುಸಾವಿರ ವರ್ಷಗಳ ಕಾಲ ನಿತ್ಯಯೌವನದಿಂದ ಕೂಡಿರುತ್ತಾನೆ.

ವೈಶಂಪಾಯನಃ

ಏತಚ್ಛ್ರುತ್ವಾ ತು ಸಾ ದೇವೀ ನೃಪೋತ್ತಮ ಸುಮಧ್ಯಮಾ ।
ತಮುವಾಚಾನವದ್ಯಾಂಗೀ ಭರ್ತಾರಂ ದೀಪ್ತತೇಜಸಮ್ ॥೨೦॥

ಎಲೈ ನೃಪೋತ್ತಮನೇ, ಇದನ್ನು ಕೇಳಿ, ಸುಮಧ್ಯಮೆಯೂ ನಿರ್ದುಷ್ಟ ಅವಯವಗಳುಳ್ಳವಳೂ ಆದ ಆ ದೇವಿಯು ಮಹಾಪರಾಕ್ರಮಶಾಲಿಯಾದ ತನ್ನ ಪತಿಯನ್ನು ಕುರಿತು ಹೇಳಿದಳು.

ಋಷಿಪತ್ನಿ

ಅಸ್ತಿ ಮೇ ಮಾನುಷೇ ಲೋಕೇ ನರದೇವಾತ್ಮಜಾ ಸಖೀ ।
ನಾಮ್ನಾ ಜಿತವತೀ ನಾಮ ರೂಪಯೌವನಶಾಲಿನೀ ॥೨೧॥

ನನಗೆ ಭೂಲೋಕದಲ್ಲಿ 'ಜಿತವತಿ' ಎಂಬ ಹೆಸರಿನ ರೂಪಯೌವನ ಶಾಲಿನಿಯೂ ಆದ ರಾಜಕುಮಾರಿ ಗೆಳತಿ ಇದ್ದಾಳೆ.

ಉಶೀನರಸ್ಯ ರಾಜರ್ಷೇಃ ಸತ್ಯಸಂಧಸ್ಯ ಧೀಮತಃ ।
ದುಹಿತಾ ವಿಶ್ರುತಾ ಲೋಕೇ ಮಾನುಷೇ ರೂಪಸಂಪದಾ ॥೨೨॥

ಅವಳು ಮೇಧಾವಿಯೂ, ಸತ್ಯಸಂಧನೂ ಆದ ಉಶೀನರ ರಾಜರ್ಷಿಯ ಮಗಳು. ತನ್ನ ರೂಪಸಂಪತ್ತಿನಿಂದ ಮನುಷ್ಯಲೋಕದಲ್ಲಿ ತುಂಬಾ ಪ್ರಸಿದ್ಧಿಯಾಗಿದ್ದಾಳೆ.

ತಸ್ಯಾ ಹೇತೋರ್ಮಹಾಭಾಗ ಸವತ್ಸಾಂ ಗಾಂ ಮಮೇಪ್ಸಿತಾಮ್ ।
ಆನಯಸ್ವ ಸುರಶ್ರೇಷ್ಠ ತ್ವರಿತಂ ಪುಣ್ಯವರ್ಧಿನೀಮ್ ॥೨೩॥

ಮಹಾನುಭಾವನೇ ಮತ್ತು ದೇವೋತ್ತಮನೇ, ಅವಳ ಸಲುವಾಗಿ ನನಗೆ ಇಷ್ಟವಾದ ಪುಣ್ಯವರ್ಧಿನಿಯಾದ ಈ ಗೋವನ್ನು ಕರುವಿನ ಜೊತೆಯಲ್ಲಿ ಬೇಗ ಕರೆದುಕೊಂಡು ಬಾ.

ಯಾವದಸ್ಯಾಃ ಪಯಃ ಪೀತ್ವಾ ಸಾ ಸಖೀ ಮಮ ಮಾನದಾ ।
ಮಾನುಷೇಷು ಭವತ್ವೇಕಾ ಜರಾರೋಗವಿವರ್ಜಿತಾ ॥೨೪॥

ಆ ನನ್ನ ಮಾನದೆಯಾದ ಸಖಿಯು ಇದರ ಹಾಲನ್ನು ಕುಡಿದು ಮನುಷ್ಯಲೋಕದಲ್ಲಿ ಜರಾರೋಗ ವರ್ಜಿತಳಾಗಲಿ.

ಏತನ್ಮಮ ಮಹಾಭಾಗ ಕರ್ತುಮರ್ಹಸಿ ಕರ್ಮ ವೈ ।
ಪ್ರಿಯಾತ್ ಪ್ರಿಯತರಂ ಹ್ಯಸ್ಮಾನ್ನಾಸ್ತಿ ಮೇऽನ್ಯತ್ ಕಥಂಚನ ॥೨೫॥

ಎಲೈ ಮಹಾಭಾಗನೇ, ನನ್ನ ಸಲುವಾಗಿ ನೀನು ಈ ಕಾರ್ಯವನ್ನು ಮಾಡಬೇಕು. ನನಗೆ ಇದಕ್ಕಿಂತ ಪ್ರಿಯವಾದದ್ದು ಬೇರೆ ಯಾವುದೂ ಇಲ್ಲ.

ಏತಚ್ಛ್ರುತ್ವಾ ವಚಸ್ತಸ್ಯಾ ದೇವ್ಯಾಃ ಪ್ರಿಯಚಿಕೀರ್ಷಯಾ ।
ಧರಾದ್ಯೈರ್ಭ್ರಾತೃಭಿಃ ಸಾರ್ಧಂ ದ್ಯೌಸ್ತದಾ ತಾಂ ಜಹಾರ ಗಾಮ್ ॥೨೬॥

ಈ ಮಾತುಗಳನ್ನು ಕೇಳಿದ ದ್ಯುನಾಮಕವಸುವು ತನ್ನ ಪತ್ನಿಗೆ ಪ್ರಿಯವನ್ನುಂಟುಮಾಡಲು ಧರಾದಿಗಳಿಂದ ಸಹಿತನಾಗಿ ಆ ಗೋವನ್ನು ಅಪಹರಿಸಿದನು.

ತಯಾ ಕಮಲಪತ್ರಾಕ್ಷ್ಯಾ ನಿಯುಕ್ತೋ ದ್ಯೌಸ್ತದಾ ನೃಪ ।
ಋಷೇಸ್ತಸ್ಯ ತಪಸ್ತೀವ್ರಂ ನ ಶಶಾಕ ಪರೀಕ್ಷಿತುಮ್ ॥೨೭॥

ಹೃತಾ ಗೌಃ ಸಾ ತದಾ ತೇನ ಪ್ರಯಾತಾ ನತು ಶಕ್ತಿತಃ ।
ಅಥಾಶ್ರಮಪದಂ ಪ್ರಾಪ್ತಃ ಫಲಾನ್ಯಾದಾಯ ವಾರುಣಿಃ ॥೨೮॥

ಕಮಲನಯನೆಯಾದ ತನ್ನ ಪತ್ನಿಯ ಆದೇಶಕ್ಕೆ ಒಳಗಾದ ದ್ಯುನಾಮಕವಸುವು ಆಗ ಋಷಿಗಳ ತೀವ್ರವಾದ ತಪಸ್ಸನ್ನು ಗಣನೆಗೆ ತಂದುಕೊಳ್ಳಲು ಸಮರ್ಥನಾಗಲಿಲ್ಲ. ಅಪಹರಿಸಲ್ಪಟ್ಟ ಗೋವು ತಾನು ಸ್ವತಃ ಹೋಗದೆ, ಮುಳ್ಳಿನ ಕೋಲಿನ ಏಟುಗಳಿಂದ ಬಲಾತ್ಕರಿಸಲ್ಪಟ್ಟು ಹೋಯಿತು.

ನಾಪಶ್ಯದ್ ಗಾಂ ಸವತ್ಸಾಂ ತಾಂ ಸ ಹಿ ತಸ್ಮಿನ್ ವನೋತ್ತಮೇ ।
ಸ ತಸ್ಮಿನ್ ಮೃಗಯಾಮಾಸ ವನೇ ತಾಮೃಷಿಸತ್ತಮಃ ॥೨೯॥

ಸ್ವಲ್ಪ ಸಮಯದ ಮೇಲೆ ವಸಿಷ್ಠರು ಹಣ್ಣುಗಳನ್ನು ತೆಗೆದುಕೊಂಡು ಆಶ್ರಮಕ್ಕೆ ಬಂದರು. ಅವರಿಗೆ ಆ ವನದಲ್ಲಿ ತಮ್ಮ ಗೋವು ಮತ್ತು ಕರು ಎರಡೂ ಕಾಣಲಿಲ್ಲ.

ನಾಭ್ಯಪಶ್ಯಂಶ್ಚ ಮೃಗಯನ್ ತಾಂ ಗಾಂ ಋಷಿರುದಾರಧೀಃ ॥೩೦॥

ಆ ಋಷಿಶ್ರೇಷ್ಠರು ಆ ವನದಲ್ಲೆಲ್ಲಾ ಗೋವನ್ನು ಹುಡುಕಿದರು. ಎಷ್ಟು ಹುಡುಕಿದರೂ ಉದಾರಬುದ್ಧಿಯುಳ್ಳ ಆ ಋಷಿಗಳಿಗೆ ಗೋವು ಸಿಗಲಿಲ್ಲ.

ಜ್ಞಾತ್ವಾ ತಥಾऽಪನೀತಾಂ ತಾಂ ವಸುಭಿರ್ದಿವ್ಯಚಕ್ಷುಷಾ ।
ಸ ತು ಕೋಪವಶಂ ಪ್ರಾಪ್ತಃ ಶಶಾಪ ಚ ವಸೂಂಸ್ತದಾ ॥೩೧॥

ತಮ್ಮ ದಿವ್ಯದೃಷ್ಟಿಯಿಂದ ಆ ಗೋವನ್ನು ವಸುಗಳು ಅಪಹರಿಸುವುದನ್ನು ತಿಳಿದು ಕೋಪವಶರಾಗಿ, ಅವರು ವಸುಗಳಿಗೆ ಶಾಪವನ್ನು ಕೊಟ್ಟರು.

ಯಸ್ಮಾನ್ನೋ ವಸವೋ ಜಹ್ರುರ್ಗಾಂ ವೈ ದೋಗ್ಧ್ರೀಂ ಸುವಾಲಧಿಮ್ ।
ತಸ್ಮಾತ್ ಸರ್ವೇ ಜನಿಷ್ಯಂತಿ ವಸವೋ ಮಾನುಷೇಷ್ವಿತಿ ।
ಏವಂ ಶಶಾಪ ಭಗವಾನ್ ವಸೂಂಸ್ತಾನ್ ಮುನಿಸತ್ತಮಃ ॥೩೨॥

ಒಳ್ಳೆಯ ಲಕ್ಷಣಗಳಿಂದ ಕೂಡಿದ್ದ ನನ್ನ ಧೇನುವನ್ನು ವಸುಗಳು ಅಪಹರಿಸಿದ ಕಾರಣ, ಆ ಎಲ್ಲ ವಸುಗಳೂ ಮನುಷ್ಯಲೋಕದಲ್ಲಿ ಜನಿಸಲಿ ಎಂಬುದಾಗಿ. ಹೀಗೆ ಪೂಜ್ಯರಾದ ಆ ಋಷಿಶ್ರೇಷ್ಠರು ವಸುಗಳಿಗೆ ಶಾಪವನ್ನು ಕೊಟ್ಟರು.

ವಶಂ ಕ್ರೋಧಸ್ಯ ಸಂಪ್ರಾಪ್ತ ಆಪವೋ ಭರತರ್ಷಭ ।
ಶಪ್ತ್ವಾ ಚ ತಾನ್ ಮಹಾಭಾಗಸ್ತಪಸ್ಯೇವ ಮನೋ ದಧೇ ॥೩೩॥

ಎಲೈ ಭರತರ್ಷಭನೇ, ಕ್ರೋಧಕ್ಕೆ ವಶರಾದ ವಸಿಷ್ಠರು ಆ ವಸುಗಳಿಗೆ ಹೀಗೆ ಶಾಪವನ್ನು ಕೊಟ್ಟು, ಮಹಾನುಭಾವರಾದ ಅವರು ಪುನಃ ತಪಸ್ಸಿಗೆ ಹೊರಟರು.

ಏವಂ ಸ ಶಪ್ತವಾನ್ ರಾಜನ್ ವಸೂನಷ್ಟೌ ತಪೋಧನಃ ।
ಮಹಾಪ್ರಭಾವೋ ಬ್ರಹ್ಮರ್ಷಿರ್ದೇವಾನ್ ರೋಷಸಮನ್ವಿತಃ ॥೩೪॥

ತಪೋಧನರೂ, ಮಹಾಪ್ರಭಾವಶಾಲಿಗಳೂ, ಬ್ರಹ್ಮರ್ಷಿಗಳೂ ಆದ ವಸಿಷ್ಠರು ರೋಷಸಮನ್ವಿತರಾಗಿ ಹೀಗೆ ಎಂಟು ವಸುಗಳಿಗೂ ಶಾಪವನ್ನು ಕೊಟ್ಟರು.

ಏವಂ ಶಪ್ತಾಸ್ತತಸ್ತೇನ ಮುನಿನಾ ಯಾಮುನೇನ ವೈ ।
ಅಷ್ಟೌ ಸಮಸ್ತಾ ವಸವೋ ನಿಜದೋಷೇಣ ಭಾರತ ॥೩೫॥

ಅಥಾಶ್ರಮಪದಂ ಪ್ರಾಪ್ಯ ಪುನಸ್ತಸ್ಯ ಮಹಾತ್ಮನಃ ।
ಶಪ್ತಾಃ ಸ್ಮ ಇತಿ ಜಾನಂತಃ ಪುನಸ್ತಮಭಿಚಕ್ರಮುಃ ॥೩೬॥

ಎಲೈ ಭಾರತನೇ, ಯಮುನೆಯ ಮಕ್ಕಳಾದ ವಸಿಷ್ಠರಿಂದ ತಮ್ಮ ಅಪರಾಧದಿಂದ ಹೀಗೆ ಶಪ್ತರಾಗಿದ್ದೇವೆ ಎಂದು ತಿಳಿದು, ಪುನಃ ಅವರ ಆಶ್ರಮಕ್ಕೆ ಬಂದು, ಅವರ ಸಮೀಪಕ್ಕೆ ಹೋದರು.

ಪ್ರಸಾದಯಂತಸ್ತಮೃಷಿಂ ವಸವಃ ಪಾರ್ಥಿವರ್ಷಭ ।
ನ ಲೇಭಿರೇ ಚ ತೇ ತಸ್ಮಾತ್ ಪ್ರಸಾದಮೃಷಿಸತ್ತಮಾತ್ ॥೩೭॥

ಎಲೈ ರಾಜಶ್ರೇಷ್ಠನೇ, ಅವರು ಆ ಋಷಿಗಳನ್ನು ಅನುಗ್ರಹೋನ್ಮುಖರನ್ನಾಗಿ ಮಾಡಲು ಎಷ್ಟು ಪ್ರಯತ್ನ ಪಟ್ಟರೂ ಅವರು ಆ ಋಷಿಗಳಿಂದ ಅನುಗ್ರಹವನ್ನು ಪಡೆಯಲಿಲ್ಲ.

ಆಪವಃ ಪುರುಷವ್ಯಾಘ್ರ ಸರ್ವಧರ್ಮವಿಶಾರದಃ ।
ಉವಾಚ ಚ ಸ ಧರ್ಮಾತ್ಮಾ ಮುನಿಃ ಶಪ್ತಧರಾದಿಕಾನ್ ।
ಅನುಸಂವತ್ಸರಾಚ್ಛಾಪಾನ್ಮೋಕ್ಷ್ಯಧ್ವಮಿತಿ ಭಾರತ ॥೩೮॥

ಎಲೈ ಪುರುಷವ್ಯಾಘ್ರನೇ, ಸರ್ವಧರ್ಮ ವಿಶಾರದರೂ, ಧರ್ಮಾತ್ಮರೂ, ಆದ ವಸಿಷ್ಠಋಷಿಗಳು ತಮ್ಮಿಂದ ಶಪ್ತರಾದ ಧರ ಮೊದಲಾದವರನ್ನು ಕುರಿತು 'ಒಂದು ವರ್ಷಕ್ಕೆ ಒಬ್ಬರಂತೆ ನೀವು ಶಾಪದಿಂದ ಬಿಡುಗಡೆಯನ್ನು ಹೊಂದಿ' ಎಂದು ಹೇಳಿದರು.

ಅಯಂ ತು ಯತ್ಕೃತೇ ಶಪ್ತಾ ಮಯಾ ಯೂಯಂ ಸ ವತ್ಸ್ಯತಿ ।
ದ್ಯೌಸ್ತು ವೈ ಮಾನುಷೇ ಲೋಕೇ ದೀರ್ಘಕಾಲಂ ಸ್ವಕರ್ಮಣಾ ॥೩೯॥

ಯಾರ ಸಲುವಾಗಿ ನೀವೆಲ್ಲರೂ ನನ್ನ ಶಾಪಕ್ಕೆ ಒಳಾಗಾಗಿದ್ದಿರೋ, ಅಂತಹ ದ್ಯುನಾಮಕ ವಸುವು ಮಾತ್ರ ತಾನು ಮಾಡಿದ ಕರ್ಮದ ಫಲವಾಗಿ ಮನುಷ್ಯಲೋಕದಲ್ಲಿ ದೀರ್ಘಕಾಲ ಜೀವಿಸಲಿ.

ನಾನೃತಂ ತಚ್ಚಿಕೀರ್ಷಾಮಿ ಯುಷ್ಮಾನ್ ಕ್ರುದ್ಧೋ ಯದಬ್ರುವಮ್।
ಪ್ರಜಾ ಹ್ಯನೃತವಾಕ್ಯೇನ ಹಿಂಸನ್ ಮೈನಸ್ತಥಾಪ್ನುಯಾತ್ ॥೪೦॥

ನಾನು ನಿಮ್ಮನ್ನು ಕುರಿತು ಏನನ್ನು ಹೇಳಿದ್ದೇನೋ, ಅದನ್ನು ವ್ಯತ್ಯಾಸ ಮಾಡಿ ಅನೃತವನ್ನಾಗಿ ಮಾಡುವುದಿಲ್ಲ. ಪ್ರಜೆಗಳನ್ನು ಹಿಂಸಿಸುವನಿಗೆ ಏನು ಪಾಪ ಬರುವುದೋ, ಅನೃತವಾಕ್ಯವನ್ನು ಆಡುವ ನನಗೂ ಅದೇ ಪಾಪವು ಬರುತ್ತದೆ.

ನ ಪ್ರಜಾಸ್ಯತಿ ಜಾಪ್ಯೇಷ ಮಾನುಷೇಷು ಮಹಾಮನಾಃ ।
ಭವಿಷ್ಯತಿ ಚ ಧರ್ಮಾತ್ಮಾ ಸರ್ವಶಾಸ್ತ್ರಾರ್ಥವಿದ್ ಬಲೀ ।
ಪಿತುಶ್ಚಾಯಂ ಪ್ರಿಯಂ ಕುರ್ವನ್ ಸ್ತ್ರೀಭೋಗಾನ್ ವರ್ಜಯಿಷ್ಯತಿ ॥

ಮನುಷ್ಯಯೋನಿಯಲ್ಲಿ ಹುಟ್ಟುವ ಈ ಧೈರ್ಯಶಾಲಿಯು ಮಕ್ಕಳನ್ನು ಪಡೆಯುವುದಿಲ್ಲ. ಬಲಿಷ್ಠನೂ, ಧರ್ಮಾತ್ಮನೂ, ಸರ್ವಶಾಸ್ತ್ರವಿಶಾರದನೂ ಆಗುವನು. ಇವನು ಸ್ತ್ರೀಭೋಗವನ್ನು ವರ್ಜಿಸಿ, ತಂದೆಗೆ ಪ್ರಿಯವನ್ನು ಉಂಟುಮಾಡುತ್ತಾನೆ.

ಏವಮುಕ್ತ್ವಾ ವಸೂನ್ ಸರ್ವಾನ್ ಜಗಾಮ ಭಗವಾನೃಷಿಃ ।
ತತೋ ಮಾಮುಪಜಗ್ಮುಸ್ತೇ ಸಮಸ್ತಾ ವಸವೋ ನೃಪ ॥೪೨॥

ಪೂಜ್ಯರಾದ ಋಷಿಗಳು ವಸುಗಳನ್ನು ಕುರಿತು ಹೀಗೆ ಹೇಳಿ ಹೊರಟು ಹೋದರು. ಎಲೈ ರಾಜನೇ, ಅನಂತರ ಈ ವಸುಗಳೆಲ್ಲರೂ ನನ್ನ ಸಮೀಪಕ್ಕೆ ಬಂದರು.

ಅಯಾಚಂತ ಚ ಮಾಂ ರಾಜನ್ ವರಂ ತೇಭ್ಯೋ ದದಾಮ್ಯಹಮ್।
ಜಾತಂ ಜಾತಂ ಕ್ಷಿಪೇತ್ಯೂಚುಃ ಸ್ವಯಂ ಗಂಗೇ ತ್ವದಂಭಸಿ ॥೪೩॥

ಎಲೈ ರಾಜನೇ, ಅವರು ನನ್ನ ಬಳಿಗೆ ಬಂದು, ಗಂಗೆಯೇ ನಾವು ಹುಟ್ಟಿದಂತೆ, ಹುಟ್ಟಿದಂತೆ ಬೇಗ ನಿನ್ನ ನೀರಿನಲ್ಲಿ ಹಾಕಿ ಕೊಂದುಬಿಡು ಎಂದು ಯಾಚಿಸಿದರು. ನಾನು ಅವರಿಗೆ ಆ ವರವನ್ನು ನೀಡಿದೆ.

ಏವಂ ತೇಷಾಂ ವರಂ ಸಮ್ಯಕ್ ಶಪ್ತಾನಾಂ ರಾಜಸತ್ತಮ ।
ಮೋಕ್ಷಾರ್ಥಂ ಮಾನುಷಾಲ್ಲೋಕಾದ್ ಯಥಾವತ್ ಕೃತವತ್ಯಹಮ್ ॥

ರಾಜಶ್ರೇಷ್ಠನೇ, ಅವರಿಗೆ ಕೊಟ್ಟವರಕ್ಕನುಗುಣವಾಗಿ ಮನುಷ್ಯಯೋನಿಯಿಂದ ಅವರನ್ನು ಬಿಡಿಸಲು ಶಪ್ತರಾದ ಅವರಿಗೆ ನಾನು ಹೀಗೆ ಸರಿಯಾದ ಉಪಕಾರವನ್ನೇ ಮಾಡಿದ್ದೇನೆ.

ಅಯಂ ಶಾಪಾದೃಷೇಸ್ತಸ್ಯ ಏಕ ಏವ ನೃಪೋತ್ತಮ ।
ದ್ಯೌ ರಾಜನ್ ಮಾನುಷೇ ಲೋಕೇ ಚಿರಂ ವತ್ಸ್ಯಸಿ ಭಾರತ ॥೪೫॥

ಎಲೈ ನೃಪಶ್ರೇಷ್ಠನೇ, ಭಾರತನೇ, ಈ ದ್ಯುನಾಮವಸು ಮಾತ್ರ ಆ ಋಷಿಯ ಶಾಪದಿಂದ ಮನುಷ್ಯಲೋಕದಲ್ಲಿ ಬಹುಕಾಲ ವಾಸಿಸುತ್ತಾನೆ.

ಅಯಂ ದೇವವ್ರತಶ್ಚೈವ ಗಂಗಾದತ್ತಶ್ಚ ಮೇ ಸುತಃ ।
ದ್ಯುನಾಮಾ ಶಂತನೋಃ ಪುತ್ರಃ ಶಂತನೋರಧಿಕೋ ಗುಣೈಃ ॥೪೬॥

ನನ್ನ ಮತ್ತು ಶಂತನುವಿನ ಮಗನಾದ ಇವನಿಗೆ ದೇವವ್ರತ ಮತ್ತು ಗಂಗಾದತ್ತ ಎಂದು ಎರಡು ಹೆಸರು. ಇವನು ತನ್ನ ಗುಣಗಳಿಂದ ಶಂತನುವನ್ನು ಮೀರಿಸುತ್ತಾನೆ.

ಅಯಂ ಕುಮಾರಃ ಪುತ್ರಸ್ತೇ ವಿವೃದ್ಧಃ ಪುನರೇಷ್ಯತಿ ।
ಅಯಂ ಚ ತೇ ಗಮಿಷ್ಯಾಮಿ ಆಹ್ವಾನೋಪಗತಾ ನೃಪ ॥೪೭॥

ಎಲೈ ರಾಜನೇ, ಈ ನಿನ್ನ ಕುಮಾರನು ಬೆಳೆದು ಹಿಂದಿರುಗಿ ಬರುವನು. ನಾನು ಈಗ ಹೋಗುವೆನು. ನೀನು ಕರೆದಾಗ ಬರುತ್ತೇನೆ.

ವೈಶಂಪಾಯನಃ

ಏತದಾಖ್ಯಾಯ ಸಾ ದೇವೀ ತತ್ರೈವಾಂತರಧೀಯತ ।
ಆದಾಯ ಚ ಕುಮಾರಂ ತಂ ಜಗಾಮ ಚ ಯಥೇಪ್ಸಿತಮ್ ॥೪೮॥

ಹೀಗೆ ಮಾತನಾಡಿ, ಆ ಗಂಗಾದೇವಿಯು ಕುಮಾರನನ್ನು ಕರೆದುಕೊಂಡು, ಅಲ್ಲಿಯೇ ಅದೃಶ್ಯಳಾಗಿ ತನಗೆ ಇಷ್ಟವಾದ ಪ್ರದೇಶಕ್ಕೆ ಹೋದಳು.

ತಸ್ಮಾದ್ ದೇವವ್ರತಶ್ಚೈವ ಗಂಗಾದತ್ತಶ್ಚ ಸೋಽಭವತ್ ।
ಶಂತನುಶ್ಚಾಪಿ ಶೋಕಾರ್ತೋ ಜಗಾಮ ಸ್ವಪುರಂ ತತಃ ॥೪೯॥

ಆದ್ದರಿಂದ ಅವನು ದೇವವ್ರತನೂ, ಗಂಗಾದತ್ತನೂ ಆದನು. ಶಂತನುವು ಶೋಕಾರ್ಥನಾಗಿ ತನ್ನ ಪಟ್ಟಣಕ್ಕೆ ಹಿಂತಿರುಗಿದನು.

ತಸ್ಯ ಕೀರ್ತಿಂ ಚ ವೃತ್ತಿಂ ಚ ಮಹತೋ ನೃಪ ಸದ್ಗುಣಾನ್ ।
ಶಂತನೋಃ ಕೀರ್ತಯಿಷ್ಯಾಮಿ ಸರ್ವಾನೇವ ಗುಣಾನಹಮ್ ॥೫೦॥

ಎಲೈ ರಾಜನೇ, ಆ ಮಹಾತ್ಮನಾದ ಶಂತನುವಿನ ಕೀರ್ತಿಯನ್ನೂ, ವೃತ್ತಿಯನ್ನೂ, ರಾಜಗುಣಗಳನ್ನೂ, ಉಳಿದ ಗುಣಗಳೆಲ್ಲವನ್ನೂ ನಾನು ನಿನಗೆ ನಿರೂಪಿಸುವೆನು.

ಮಹಾಭಾಗ್ಯಸ್ಯ ನೃಪತೇರ್ಭಾರತಸ್ಯ ಯಶಸ್ವಿನಃ ।
ತಸ್ಯೇತಿಹಾಸಃ ಖ್ಯಾತೋಽಯಂ ಮಹಾಭಾರತ ಇತ್ಯುತ ॥೫೧॥

ಭರತವಂಶದಲ್ಲಿ ಜನಿಸಿದ ಕೀರ್ತಿಶಾಲಿಯಾದ ಮಹಾಭಾಗ್ಯವಂತನಾದ ಆ ರಾಜನ ಇತಿಹಾಸವೇ ಈ ಮಹಾಭಾರತವೆಂದು ಪ್ರಖ್ಯಾತವಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಸಪ್ತನವತಿತಮೋಽಧ್ಯಾಯಃ ॥

॥ ಸಂಭವಪರ್ವಣಿ ಪಂಚಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ತೊಂಭತ್ತೇಳನೆಯ ಅಧ್ಯಾಯ ಮುಗಿಯಿತು

★★★★★

ಮಹಾಭಾರತ ತಾತ್ಪರ್ಯ ನಿರ್ಣಯ- ಅಧ್ಯಾಯ-೧೧

ದೇವವ್ರತೋಽಸಾವನುಶಾಸನಾಯ ಮಾತ್ರಾ
ದತ್ತೋ ದೇವಗುರೌ ಶತಾರ್ಧಮ್ ।
ಸಂವತ್ಸರಾಣಾಮಖಿಲಾಂಶ್ಚ ವೇದಾನ್
ಸಮಭ್ಯಸತ್ ತದ್ವಶಗಾಂತರಾತ್ಮಾ ॥೪೬॥

ಈ ಗಂಗಾಪುತ್ರ ದೇವವ್ರತನೆನಿಸಿದ. ವಿದ್ಯಾಭ್ಯಾಸಕ್ಕಾಗಿ ಮಾತೆ ಅವನನ್ನು ದೇವಗುರು ಬೃಹಸ್ಪತಿಯ ಬಳಿ ಬಿಟ್ಟಳು. ಅವನು ಐವತ್ತು ವರ್ಷಕಾಲ ಗುರುವಿಗೆ ವಿಧೇಯವಾದ ಅಂತಃಕರಣದಿಂದ ಸಕಲ ವೇದಗಳನ್ನೂ ಅಭ್ಯಾಸ ಮಾಡಿದ.

ತತಶ್ಚ ಮಾತ್ರಾ ಜಗತಾಂ ಗರೀಯಸ್ಯನಂತಪಾರೇಽಖಿಲಸದ್ಗುಣಾರ್ಣವೇ ।
ರಾಮೇ ಭೃಗೂಣಾಮಧಿಪೇ ಪ್ರದತ್ತಃ ಶುಶ್ರಾವ ತತ್ವಂ ಚ ಶತಾರ್ಧವರ್ಷಮ್

ಬಳಿಕ ಜಗತ್ತುಗಳಿಗೆ ಶ್ರೇಷ್ಠನೂ ಅಪರಿಮಿತ ಸಕಲ ಸದ್ಗುಣ ಸಾಗರನೂ ಆದ ಭೃಗುಕುಲ ಸ್ವಾಮಿಯಾದ ಪರಶುರಾಮನಲ್ಲಿ ದೇವವ್ರತನನ್ನು ಗಂಗೆ ಕೊಟ್ಟಳು. ಅಲ್ಲಿ ಆತ ಐವತ್ತು ವರ್ಷ ತತ್ವಶ್ರವಣ ಮಾಡಿದ.

ಸ ಪಂಚವಿಂಶತ್ ಪುನರಬ್ದಕಾನಾ-
ಮಸ್ತ್ರೇ ಚಾಭ್ಯಸ್ಯ ಪತೇರ್ಭೃಗೂಣಾಮ್ ।
ಮಾತ್ರಾ ಸಮಾನೀಯ ತಟೇ ನಿಜೇ ತು
ಸಂಸ್ಥಾಪಿತಃ ಪ್ರಾರ್ಪಯಿತುಂ ಸ್ವಪಿತ್ರೇ ॥೪೮॥

ದೇವವ್ರತ ಪುನಃ ಇಪ್ಪತ್ತೈದು ವರ್ಷಕಾಲ ಭೃಗುಕುಲದೊಡೆಯನಾದ ರಾಮನಿಂದ ಅಸ್ತ್ರಗಳನ್ನೂ ಅಭ್ಯಾಸ ಮಾಡಿದ. ಬಳಿಕ ಮಾತೆ ಅವನನ್ನು ತನ್ನ ತೀರದಲ್ಲಿ ತಂದು ನಿಲ್ಲಿಸಿದಳು. ಇದು ಅವನನ್ನು ತನ್ನ ತಂದೆಗೆ ತಂದೊಪ್ಪಿಸುವುದಕ್ಕಾಗಿ.

ಸ ತತ್ರ ಬಧ್ವಾ ಶರಪಂಜರೇಣ
ಗಂಗಾಂ ವಿಜಹ್ರೇಽಸ್ಯ ಪಿತಾ ತದೈವ ।
ವ್ರಜನ್ ಮೃಗಾರ್ಥೀ ತೃಷಿತೋ ವಿಲೋಕಯನ್
ಗಂಗಾಮತೋಯಾಮಭವತ್ ಸುವಿಸ್ಮಿತಃ ॥೪೯॥

ಅಲ್ಲಿ ದೇವವ್ರತ ಬಾಣಗಳ ಪಂಜರದಿಂದ ಗಂಗಾ ಪ್ರವಾಹವನ್ನು ಬಂಧಿಸಿ ನೀರಾಟವಾಡಿದ. ಆಗಲೆ ಅವನ ತಂದೆ ಶಂತನು ಮೃಗ ಬೇಟೆಗಾಗಿ ಸಂಚರಿಸುತ್ತ ಬಾಯಾರಿ, ಗಂಗೆ ಬಹಳ ಬತ್ತಿದ್ದನ್ನು ಕಂಡು ಅಚ್ಚರಿಗೊಂಡ.

ಸ ಮಾರ್ಗಯಾಮಾಸ ತತೋಽಸ್ಯ ಹೇತುಜ್ಞಪ್ತ್ಯೈ
ತದಾ ಸ್ವಂ ಚ ದದರ್ಶ ಸೂನುಮ್ ।
ಕ್ರೀಡಂತಮಸ್ತ್ರೇಣ ಬಭೂವ ಸೋಽಪಿ
ಕ್ಷಣಾದದೃಶ್ಯಃ ಪಿತೃದರ್ಶನಾದನು ॥೫೦॥

ಇದಕ್ಕೆ ಕಾರಣ ತಿಳಿಯಲು ಶಂತನು ಅನ್ವೇಷಣ ಮಾಡಿದ. ಆಗ ಅಸ್ತ್ರದಿಂದ ಆಟವಾಡುತ್ತಿದ್ದ ತನ್ನ ಮಗನನ್ನು ಕಂಡ. ತಂದೆ ಕಂಡೊಡನೆ ಮಗ ಕ್ಷಣದಲ್ಲಿ ಅದೃಶ್ಯನಾದ.

ಮೀಮಾಂಸಮಾನಂ ತಮವಾಪ ಗಂಗಾ
ಸುತಂ ಸಮಾದಾಯ ಪತಿಂ ಜಗಾದ ಚ ।
ಅಯಂ ಸುತಸ್ತೇ ಪರಮಾಸ್ತ್ರವೇತ್ತಾ
ಸಮರ್ಪಿತೋ ವೀರ್ಯಬಲೋಪಪನ್ನಃ ॥೫೧॥

ವಿಚಾರ ಮಾಡುತ್ತಿರುವ ಶಂತನುವನ್ನು ಸಮೀಪಿಸಿ ಗಂಗೆ ಮಗನನ್ನು ಕರೆದು ತಂದು ಹೇಳಿದಳು. 'ಇವನು ನಿನ್ನ ಮಗ, ಒಳ್ಳೆಯ ಅಸ್ತ್ರಜ್ಞ, ವೀರ್ಯ ಬಲಗಳುಳ್ಳವ. ಇವನನ್ನು ನಿನಗೆ ಒಪ್ಪಿಸುತ್ತಿದ್ದೇನೆ'.

ಅಸ್ಯಾಗ್ರಜಾಃ ಸ್ವಾಂ ಸ್ಥಿತಿಮೇವ ಯಾತಾ
ಹರೇಃ ಪದಾಂಭೋಜಸುಪಾವಿತೇ ಜಲೇ ।
ತನೂರ್ಮದೀಯೇ ಪ್ರಣಿಧಾಯ ತತ್ ತ್ವಂ
ತಾನ್ ಮಾ ಶುಚೋಽನೇನ ಚ ಮೋದಮಾನಃ ॥೫೨॥

'ಇವನ ಅಣ್ಣಂದಿರು ಶ್ರೀಹರಿಯ ಪಾದಕಮಲದಿಂದ ಚೆನ್ನಾಗಿ ಪಾವನಗೊಂಡ ನನ್ನ ನೀರಲ್ಲಿ ಶರೀರಗಳನ್ನು ಬಿಟ್ಟು ತಮ್ಮ ಮೂಲರೂಪಗಳನ್ನೆ ಹೊಂದಿದ್ದಾರೆ. ಅದರಿಂದ ನೀನು ಈತನ ಜೊತೆಗೇ ಸಂತೋಷದಿಂದಿರು. ಆ ಮಕ್ಕಳ ಬಗ್ಗೆ ಶೋಕಿಸಬೇಡ'.

ಇತಿ ಪ್ರದಾಯಾಮುಮದೃಶ್ಯತಾಮಗಾತ್
ಗಂಗಾ ತಮಾದಾಯ ಯಯೌ ಸ್ವಕಂ ಗೃಹಮ್ ।
ರಾಜಾಭಿಷಿಚ್ಯಾಥ ಚ ಯೌವರಾಜ್ಯೇ
ಮುಮೋದ ತತ್ಸದ್ಗುಣತರ್ಪಿತೋ ಭೃಶಮ್ ॥೫೩॥

ಹೀಗೆ ಮಗನನ್ನು ಕೊಟ್ಟು ಗಂಗೆ ಅದೃಶ್ಯಳಾದಳು. ರಾಜ ಅವನನ್ನು ಕರೆದುಕೊಂಡು ತನ್ನ ಅರಮನೆಗೆ ಹೋದ. ಬಳಿಕ ಅವನನ್ನು ಯೌವರಾಜ್ಯ ಪದವಿಯಲ್ಲಿ ಪಟ್ಟಾಭಿಷೇಕ ಮಾಡಿ ಅವನ ಸದ್ಗುಣಗಳಿಂದ ತೃಪ್ತಿ ಹೊಂದಿ ಬಹಳ ಸಂತೋಷಪಟ್ಟ.

ಪುನಃ ಸ ಪಿತ್ರಾನುಮತೋ ಬೃಹಸ್ಪತೇರವಾಪ
ವೇದಾನ್ ಪುರುಷಾಯುಷೋಽರ್ಧತಃ ।
ರಾಮಾತ್ ತಥಾಸ್ತ್ರಾಣಿ ಪುನಸ್ತ್ವವಾಪ ತಾವದ್ಬಿರಬ್ದೈಸ್ತ್ರಿಶತೈಶ್ಚ ತತ್ವಮ್ ॥

ದೇವವ್ರತ ತಂದೆಯ ಅನುಮತಿ ಪಡೆದು ಪುನಃ ಬೃಹಸ್ಪತಿಯಿಂದ ಪುರುಷಾಯುಷ್ಯದ ಅರ್ಧದಷ್ಟು ಅಂದರೆ ಐವತ್ತು ವರ್ಷಗಳ ಕಾಲ ವೇದಗಳನ್ನು ಕಲಿತ. ಹಾಗೇ ಅಷ್ಟೇ ವರ್ಷ ಕಾಲ ಪರಶುರಾಮನಿಂದ ಪುನಃ ಅಸ್ತ್ರಗಳನ್ನು ಉಪದೇಶ ಪಡೆದ. ಮತ್ತು ಮುನ್ನೂರು ವರ್ಷ ಕಾಲ ತತ್ವವನ್ನೂ ಉಪದೇಶ ಪಡೆದ.

ಸ ಸರ್ವವಿತ್ತ್ವಂ ಸಮವಾಪ್ಯ ರಾಮಾತ್
ಸಮಸ್ತವಿದ್ಯಾಧಿಪತೇರ್ಗುಣಾರ್ಣವಾತ್ ।
ಪಿತುಃ ಸಮೀಪಂ ಸಮವಾಪ್ಯ ತಂ ಚ
ಶುಶ್ರೂಷಮಾಣಃ ಪ್ರಮಮೋದ ವೀರಃ ॥೫೫॥

ವೀರನಾದ ದೇವವ್ರತ ಸಕಲ ವಿದ್ಯಾಧಿಪತಿಯಾದ ಗುಣಸಮುದ್ರನಾದ ಪರಶುರಾಮನಿಂದ ಸರ್ವಜ್ಞತ್ವವನ್ನು ಹೊಂದಿ ತಂದೆಯ ಬಳಿಗೆ ಬಂದು ಅವನನ್ನು ಸೇವಿಸುತ್ತ ಸಂತೋಷಪಟ್ಟ.

★ ★ ★ ★

ತೊಂಭತ್ತೆಂಟನೆಯ ಅಧ್ಯಾಯ

(ಶಂತನುವಿನ ರಾಜ್ಯಭಾರ ಕ್ರಮ, ಗಂಗೆಯಿಂದ ದೇವವ್ರತನ ಸಮರ್ಪಣೆ, ದೇವವ್ರತನಿಗೆ ಯುವರಾಜ್ಯದಲ್ಲಿ ಅಭಿಷೇಕ.)

ವೈಶಂಪಾಯನಃ

ಏವಂ ಸ ಶಂತನುರ್ಧೀಮಾನ್ ದೇವರಾಜರ್ಷಿಸತ್ಕೃತಃ ।
ಧರ್ಮಾತ್ಮಾ ಸರ್ವಲೋಕೇಷು ಸತ್ಯವಾಗಿತಿ ವಿಶ್ರುತಃ ॥೧॥

ಹೀಗೆ ಮೇಧಾವಿಯಾದ ದೇವಋಷಿ ಮತ್ತು ರಾಜಋಷಿಗಳಿಂದ ಸತ್ಕೃತನಾದ ಧರ್ಮಾತ್ಮನಾದ ಶಂತನುವು ಸರ್ವಲೋಕದಲ್ಲಿ ಸತ್ಯ ವಚನನೆಂದು ಪ್ರಸಿದ್ಧನಾದನು.

ಶಂತನೋಃ ಕೀರ್ತಯಿಷ್ಯಾಮಿ ಸರ್ವಾನೇವ ಗುಣಾನಹಮ್ ।
ದಮೋ ದಾನಂ ಕ್ಷಮಾ ಬುದ್ಧಿಃ ಹ್ರೀರ್ಧೃತಿಸ್ತೇಜ ಉತ್ತಮಮ್ ।
ನಿತ್ಯಾನ್ಯಾಸನ್ ಮಹಾಸತ್ವೇ ಶಂತನೌ ಭರತರ್ಷಭ । ॥೨॥

ಶಂತನುವಿನ ಎಲ್ಲಾ ಗುಣಗಳನ್ನೂ ನಿನಗೆ ಹೇಳುತ್ತೇನೆ. ಭರತಶ್ರೇಷ್ಠನೇ, ಮಹಾಸತ್ವವುಳ್ಳ ಶಂತನುವಿನಲ್ಲಿ ದಮ, ದಾನ, ಕ್ಷಮೆ, ಬುದ್ಧಿ, ಲಜ್ಜೆ, ಧೈರ್ಯ, ಉತ್ತಮವಾದ ತೇಜಸ್ಸು ಈ ಗುಣಗಳು ನಿತ್ಯವಾಗಿದ್ದವು.

ಅಮಾತ್ಯಗುಣಸಂಪನ್ನಃ ಕ್ಷತ್ರಧರ್ಮವಿಶೇಷವಿತ್ ।
ಆಸೀದ್ ಭರತವಂಶಸ್ಯ ಗೋಪ್ತಾ ಸಾಧುಜನಸ್ಯ ಚ ॥೩॥

ಕಂಬುಗ್ರೀವಃ ಪೃಥುವ್ಯಂಸೋ ಮತ್ತವಾರಣವಿಕ್ರಮಃ ।
ಧರ್ಮ ಏವ ಪರಃ ಕಾಮಾದರ್ಥಾಚ್ಚೇತಿ ವ್ಯವಸ್ಥಿತಃ ।
ಅನ್ವಿತಃ ಪರಿಪೂರ್ಣಾರ್ಥೈಃ ಸರ್ವೈರ್ನೃಪತಿಲಕ್ಷಣೈಃ ॥೪॥

ಅಮಾತ್ಯಗುಣಸಂಪನ್ನನೂ ಮತ್ತು ಕ್ಷತ್ರಿಯಧರ್ಮವನ್ನು ವಿಶೇಷವಾಗಿ ತಿಳಿದವನೂ ಆದ ಅವನು ಭರತವಂಶಕ್ಕೂ ಮತ್ತು ಸಜ್ಜನರಿಗೂ ರಕ್ಷಕನಾಗಿದ್ದನು. ಕಂಬುಗ್ರೀವನೂ, ವಿಸ್ತಾರವಾದ ಭುಜವುಳ್ಳವನೂ, ಮದಗಜದ ವಿಕ್ರಮವುಳ್ಳವನೂ ಆದ ಅವನು ಕಾಮ ಮತ್ತು ಅರ್ಥಗಳಿಗಿಂತ ಧರ್ಮವೇ ಶ್ರೇಷ್ಠವೆಂದು ತಿಳಿದವನಾಗಿದ್ದನು. ಅವನು ಪರಿಪೂರ್ಣವಾದ ಎಲ್ಲ ರಾಜಚಿನ್ಹೆಗಳಿಂದಲೂ ಕೂಡಿದವನಾಗಿದ್ದನು.

ತಸ್ಯ ಕೀರ್ತಿಮಥೋ ವೃತ್ತಮವೇಕ್ಷ್ಯ ಸತತಂ ನೃಪಾಃ ।
ಯಜ್ಞದಾನತಪಃಶೀಲಾಃ ಸಮಪದ್ಯಂತ ವೈ ಪ್ರಜಾಃ ॥೫॥

ಅವನ ಕೀರ್ತಿಯನ್ನೂ ಮತ್ತು ನಡತೆಯನ್ನೂ ಗಮನಿಸಿದ ಇತರ ರಾಜರು ಮತ್ತು ಪ್ರಜೆಗಳು ಯಜ್ಞ, ದಾನ, ತಪಶ್ಶೀಲರಾದರು.

ಏವಮಾಸೀನ್ಮಹಾಸತ್ವಃ ಶಂತನುರ್ಭರತರ್ಷಭ ।
ನ ಚಾಸ್ಯ ಸದೃಶಃ ಕಶ್ಚಿತ್ ಕ್ಷತ್ರಿಯೋ ಧರ್ಮತೋಽಭವತ್ ॥೬॥

ಎಲೈ ಭರತಶ್ರೇಷ್ಠನೇ, ಮಹಾಸತ್ವಶಾಲಿಯಾದ ಶಂತನುವು ಹೀಗಿದ್ದನು. ಧರ್ಮಾಚರಣೆಯ ದೃಷ್ಟಿಯಿಂದ ಆಗ ಅವನಿಗೆ ಸಮಾನನಾದ ಕ್ಷತ್ರಿಯನು ಇನ್ನೊಬ್ಬನಿರಲಿಲ್ಲ.

ವರ್ತಮಾನಂ ಚ ಸದ್ಧರ್ಮೇ ಸರ್ವಶಾಸ್ತ್ರವಿದಾಂವರಮ್ ।
ತಂ ಮಹೀಪಾ ಮಹೇಷ್ವಾಸಂ ರಾಜರಾಜಮಕುರ್ವತ ॥೭॥

ಸರ್ವಶಾಸ್ತ್ರಜ್ಞರಲ್ಲಿ ಶ್ರೇಷ್ಠನಾಗಿ, ಸದ್ಧರ್ಮನಿರತನಾಗಿದ್ದು, ಮಹಾಧನುರ್ಧಾರಿಯಾದ ಅವನನ್ನು ಉಳಿದ ರಾಜರು ರಾಜರಾಜನನ್ನಾಗಿ ಮಾಡಿದರು.

ತೇನ ಕೀರ್ತಿಮತಾ ಶಿಷ್ಟಾಃ ಶಕ್ರಪ್ರತಿಮತೇಜಸಾ ।
ಯಜ್ಞದಾನತಪಃ ಶೀಲಾಃ ಸಮಪದ್ಯಂತ ಪಾರ್ಥಿವಾಃ ॥೮॥

ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಕೀರ್ತಿವಂತನಾದ ಅವನ ಶಾಸನಕ್ಕೆ ಒಳಗಾದ ರಾಜರು ಯಜ್ಞ, ದಾನ, ತಪಶ್ಶೀಲರಾದರು.

ಶಂತನುಪ್ರಮುಖೈರ್ಗುಪ್ತಂ ರಾಷ್ಟ್ರಾಧಿಪತಿಭಿರ್ಜಗತ್ ।
ನಿಯಮಾತ್ ಸರ್ವವರ್ಣಾನಾಂ ಬ್ರಹ್ಮೋತ್ತರಮವರ್ಧತ ॥೯॥

ಶಂತನು ಮೊದಲಾದ ರಾಷ್ಟ್ರಪತಿಗಳಿಂದ ರಕ್ಷಿಸಲ್ಪಟ್ಟ ಜಗತ್ತಿನಲ್ಲಿ ಎಲ್ಲ ವರ್ಣಗಳೂ ತಮ್ಮ ತಮ್ಮ ನಿಯಮಗಳನ್ನು ಪಾಲಿಸುತ್ತಿದ್ದು ಬ್ರಾಹ್ಮಣ ವರ್ಣವು ಶ್ರೇಷ್ಠವಾಗಿದ್ದಿತು.

ಬ್ರಹ್ಮ ಪರ್ಯಚರತ್ ಕ್ಷತ್ರಂ ವಿಶಃ ಕ್ಷತ್ರಮನುವ್ರತಾಃ ।
ಬ್ರಹ್ಮಕ್ಷತ್ರಾನುಲೋಮಾಶ್ಚ ಶೂದ್ರಾಃ ಪರ್ಯಚರನ್ ವಿಶಃ ॥೧೦॥

ಕ್ಷತ್ರಿಯರು ಬ್ರಾಹ್ಮಣರನ್ನು ಪರಿಚರಿಸುತ್ತಿದ್ದರು, ವೈಶ್ಯರು ಕ್ಷತ್ರಿಯರನ್ನು ಅನುಸರಿಸುತ್ತಿದ್ದರು. ಬ್ರಾಹ್ಮಣರಿಗೆ ಮತ್ತು ಕ್ಷತ್ರಿಯರಿಗೆ ವಿಧೇಯರಾಗಿ ಶೂದ್ರರು ವೈಶ್ಯರನ್ನು ಪರಿಚರಿಸುತ್ತಿದ್ದರು.

ಸ ಹಸ್ತಿನಪುರೇ ರಮ್ಯೇ ಕುರೂಣಾಂ ಪುಟಭೇದನೇ ।
ವಸನ್ ಸಾಗರಪರ್ಯಂತಾಮನ್ವಶಾಸದ್ ವಸುಂಧರಾಮ್ ॥೧೧॥

ಅವನು ಕುರುಗಳ ಪಟ್ಟಣವಾದ ಮನೋಹರವಾದ ಹಸ್ತಿನಪುರದಲ್ಲಿ ವಾಸಮಾಡುತ್ತಾ ಸಾಗರಪರ್ಯಂತವಾದ ಭೂಮಿಯನ್ನು ಆಳಿದನು.

ಸ ದೇವರಾಜಸದೃಶೋ ಧರ್ಮಜ್ಞಃ ಸತ್ಯವಾಗೃಜುಃ ।
ದಾನಧರ್ಮತಪೋಯೋಗಾತ್ ಶ್ರಿಯಾ ಪರಮಯಾ ಯುತಃ ॥೧೨॥

ದೇವರಾಜಸದೃಶನಾಗಿ ಧರ್ಮಜ್ಞನೂ, ಸತ್ಯವಚನನೂ, ಆರ್ಜವ ಉಳ್ಳವನೂ ಆದ ಅವನು ದಾನ, ಧರ್ಮ, ತಪಸ್ಸುಗಳ ಮಹಿಮೆಯಿಂದ ಬಹಳ ಶ್ರೀಯುಕ್ತನಾದನು.

ಅರಾಗದ್ವೇಷಸಂಯುಕ್ತಃ ಸೋಮವತ್ ಪ್ರಿಯದರ್ಶನಃ ।
ತೇಜಸಾ ಸೂರ್ಯಸಂಕಾಶೋ ವಾಯುವೇಗಸಮೋ ಬಲೇ ।
ಅಂತಕಪ್ರತಿಮಃ ಕೋಪೇ ಕ್ಷಮಯಾ ಪೃಥಿವೀಸಮಃ ॥೧೩॥

ರಾಗದ್ವೇಷಗಳಿಂದ ಮುಕ್ತನಾದ ಅವನು ನೋಡುವವರಿಗೆ ಪ್ರಿಯನಾದ ಚಂದ್ರನಂತೆಯೂ, ತೇಜಸ್ಸಿನಲ್ಲಿ ಸೂರ್ಯನಂತೆಯೂ, ವೇಗದಲ್ಲಿ ಮತ್ತು ಬಲದಲ್ಲಿ ವಾಯುವಿನಂತೆಯೂ, ಕೋಪದಲ್ಲಿ ಯಮನಂತೆಯೂ, ಸಹನೆಯಲ್ಲಿ ಭೂಮಿಯಂತೆಯೂ ಇದ್ದನು.

ವಧಃ ಪಶುವರಾಹಾಣಾಂ ತಥೈವ ಮೃಗಪಕ್ಷಿಣಾಮ್ ।
ಶಂತನೌ ಪೃಥಿವೀಪಾಲೇ ನಾವರ್ತತ ವೃಥಾ ತದಾ ॥೧೪॥

ಧರ್ಮಬ್ರಹ್ಮೋತ್ತರೇ ರಾಜ್ಯೇ ಶಂತನುರ್ವಿನಯಾಶ್ರಯಃ ।
ಸಮಂ ಶಶಾಸ ಭೂತಾನಿ ಲೋಭರಾಗವಿವರ್ಜಿತಃ ॥೧೫॥

ಶಂತನುವು ರಾಜನಾಗಿದ್ದಾಗ ಭೂಮಿಯಲ್ಲಿ ಪಶುವರಾಹಗಳ ಅಥವಾ ಮೃಗ-ಪಕ್ಷಿಗಳ ವ್ಯರ್ಥವಾದ ವಧೆಯು ಇರಲಿಲ್ಲ. ಧರ್ಮ ಮತ್ತು ಬ್ರಾಹ್ಮಣರೇ ಶ್ರೇಷ್ಠವಾಗಿದ್ದ ಅವನ ರಾಜ್ಯದಲ್ಲಿ ವಿನಯಶೀಲನಾದ ಶಂತನುವು ಲೋಭರಾಗಗಳನ್ನು ತ್ಯಜಿಸಿ ಎಲ್ಲ ಪ್ರಜೆಗಳನ್ನೂ ಸಮಾನ ದೃಷ್ಟಿಯಿಂದ ಆಳಿದನು.

ಚಕೋರನೇತ್ರಸ್ತಾಮ್ರಾಸ್ಯಃ ಸಿಂಹಸ್ಕಂಧಗತಿರ್ಯುವಾ ।
ಗುಣೈರನುಪಮೈರ್ಯುಕ್ತಃ ಸಮಸ್ತೈರಭಿಗಾಮಿಕೈಃ ।
ಗಂಭೀರಃ ಸತ್ವಸಂಪನ್ನಃ ಪೂರ್ಣಚಂದ್ರನಿಭಾನನಃ ॥೧೬॥

ದೇವರ್ಷಿಪಿತೃಯಜ್ಞಾರ್ಥಂ ಬಭೂವುಃ ಪಶವೋ ನೃಣಾಮ್ ।
ನ ಹ್ಯಧರ್ಮೇಣ ಕೇಷಾಂ ಚಿತ್ ಪ್ರಾಣಿನಾಮಭವದ್ ವಧಃ ॥೧೭॥

ಅವನು ಚಕೋರನೇತ್ರನೂ, ತಾಮ್ರಾಸ್ಯನೂ, ಸಿಂಹಸ್ಕಂಧಗತಿಯುಳ್ಳವನೂ, ಯುವಕನೂ, ಎದುರಿಗೆ ಬಂದವರನ್ನು ವಶಪಡಿಸಿಕೊಳ್ಳುವಂತಹ ಅಸದೃಶವಾಗಿದ್ದ ಗುಣಗಳಿಂದ ಕೂಡಿದವನೂ, ಗಂಭೀರನೂ, ಸತ್ವಶಾಲಿಯೂ ಮತ್ತು ಪೂರ್ಣಚಂದ್ರನಂತಹ ಮುಖವುಳ್ಳವನೂ ಆಗಿದ್ದನು.

ಪಶುಗಳನ್ನು ದೇವತೆಗಳಿಗಾಗಿ, ಅಥವಾ ಋಷಿಗಳಿಗಾಗಿ, ಅಥವಾ ಪಿತೃಗಳಿಗಾಗಿ, ಅಥವಾ ಯಜ್ಞಕ್ಕಾಗಿ ಉಪಯೋಗಿಸಲಾಗುತ್ತಿತ್ತು. ಅಧರ್ಮದಿಂದ ಯಾವ ಪ್ರಾಣಿಯ ವಧೆಯು ನಡೆಯುತ್ತಿರಲಿಲ್ಲ.

ಅಸುಖಾನಾಮನಾಥಾನಾಂ ತಿರ್ಯಗ್ಯೋನಿಷು ವರ್ತತಾಮ್ ।
ಸ ಏವ ರಾಜಾ ಭೂತಾನಾಂ ಸರ್ವೇಷಾಮಭವತ್ ಪಿತಾ ॥೧೮॥

ದುಃಖಿತರಾದ ಅನಾಥರಿಗೂ, ನೀಚಯೋನಿಯಲ್ಲಿರುವ ಪ್ರಾಣಿಗಳಿಗೂ ಮತ್ತು ಎಲ್ಲರಿಗೂ ಅವನೇ ತಂದೆಯಂತೆ ಇದ್ದು ರಾಜನಾಗಿದ್ದನು.

ವೀತಶೋಕಭಯಾಬಾಧಾಃ ಸುಖಿಸ್ವಪ್ನಪ್ರಬೋಧನಾಃ ।
ಶ್ರಿತಾ ಭಾರತಭರ್ತಾರಂ ಸಮಪದ್ಯಂತ ಭೂಮಿಪಾಃ ॥೧೯॥

ಭಾರತರಾಜನಾದ ಶಂತನುವನ್ನು ಆಶ್ರಯಿಸಿದ್ದ ರಾಜರು ಶೋಕ, ಭಯ, ಪೀಡೆಗಳಿಂದ ಮುಕ್ತರಾಗಿ ಸುಖವಾದ ನಿದ್ರೆ ಮತ್ತು ಎಚ್ಚರವುಳ್ಳವರಾದರು.

ತಸ್ಮಿನ್ ನರವರಶ್ರೇಷ್ಠೇ ರಾಜರಾಜೇಶ್ವರೇ ಸತಿ ।
ನೃಣಾಂ ವಾಗಭವತ್ ಸತ್ಯಂ ದಾನಾರ್ಥಮಭವದ್ ಧನಮ್ ।
ಯಜ್ಞಾರ್ಥಂ ಪಶವಶ್ಚಾಸನ್ ಸಂತಾನಾರ್ಥಂ ಚ ಮೈಥುನಮ್ ॥೨೦॥

ಆ ನರಶ್ರೇಷ್ಠನಾದ ಶಂತನುವು ರಾಜರಾಜೇಶ್ವರನಾಗಿರುತ್ತಿರಲು ಮನುಷ್ಯರು ಸತ್ಯವಚನರಾಗಿದ್ದರು, ಧನವು ದಾನಕ್ಕೋಸ್ಕರವೇ ಇರುತ್ತಿತ್ತು, ಪಶುಗಳು ಯಜ್ಞಕ್ಕಾಗಿಯೇ ಇರುತ್ತಿದ್ದವು, ಮೈಥುನವು ಸಂತಾನಕ್ಕಾಗಿಯೇ ಇರುತ್ತಿತ್ತು.

ಸ ಸಮಾಃ ಷೋಡಶಾಷ್ಟೌ ಚ ಚತಸ್ರೋಽಷ್ಟೌ ತಥಾಽಪರಾಃ ।
ರತಿಮಪ್ರಾಪ್ನುವನ್ ಕಾಂಚಿತ್ ಬಭೂವ ವನಗೋಚರಃ ।
ತಪಸಾ ಕರ್ಶಿತೋಗ್ರೇಣ ಜಪಧ್ಯಾನಪರಃ ಸದಾ ॥೨೧॥

ಅವನು ಕಾಡಿನಲ್ಲಿದ್ದು ಎಲ್ಲ ಸುಖಗಳನ್ನೂ ಬಿಟ್ಟು ಉಗ್ರವಾದ ತಪಸ್ಸಿನಿಂದ ದೇಹವನ್ನು ದಂಡಿಸಿ ಹದಿನಾರು ವರ್ಷ, ಎಂಟು ವರ್ಷ, ನಾಲ್ಕು ವರ್ಷ ಮತ್ತು ಬೇರೆ ಬೇರೆ ರೀತಿಯಲ್ಲಿ ಜಪ ಧ್ಯಾನಪರನಾದನು. (ಮೊದಲು ಹದಿನಾರು ವರ್ಷದ ತಪಸ್ಸಿನ ಸಂಕಲ್ಪ, ಅದರಲ್ಲಿ ಫಲ ದೊರೆಯದಿದ್ದರೆ, ಪುನಃ ಎಂಟು ವರ್ಷ

ಹೆಚ್ಚಿಸುವುದು, ಅದರಲ್ಲೂ ಫಲ ದೊರೆಯದಿದ್ದರೆ ಇನ್ನೂ ನಾಲ್ಕು ವರ್ಷ ಹೆಚ್ಚಿಸುವುದು, ಇತ್ಯಾದಿ ಕ್ರಮದಿಂದ ತಪಸ್ಸನ್ನು ಮಾಡಿದನು.)

ತಥಾರೂಪಸ್ತಥಾಚಾರಃ ತಥಾವೃತ್ತಸ್ತಥಾಶ್ರುತಃ ।
ಗಾಂಗೇಯಸ್ತಸ್ಯ ಪುತ್ರೋಭೂದ್ ಆದಾವೇವಾಷ್ಟಮೋ ವಸುಃ ॥೨೨॥

ತಂದೆಯ ರೂಪವನ್ನೇ, ತಂದೆಯ ಆಚಾರವನ್ನೇ, ತಂದೆಯ ನಡತೆಯನ್ನೇ ಮತ್ತು ತಂದೆಯ ವಿದ್ಯೆಯನ್ನೇ ಹೊಂದಿದ್ದ ಅಷ್ಟಮವಸುವು, ಮೊದಲೆ ಅವನಿಗೆ ಗಂಗೆಯಲ್ಲಿ ದೇವವ್ರತನೆನಿಸಿ ಜನಿಸಿದ್ದನು.

ಸರ್ವಶಾಸ್ತ್ರೇಷು ನಿಷ್ಣಾತಃ ಪಾರ್ಥಿವೇಷ್ವಿತಪುರೇ ಚ ।
ಮಹಾಬಲೋ ಮಹಾವೀರ್ಯೋ ಮಹೋತ್ಸಾಹೋ ಮಹಾಯಶಾಃ॥೨೫॥

ಸ ಕದಾಚಿನ್ಮೃಗಾನ್ ನಿಘ್ನನ್ ಗಂಗಾಮನುಸಸಾರ ಹ ।
ಭಾಗೀರಥೀಮಲ್ಪಜಲಾಂ ದದರ್ಶ ಸರಿತಾಂ ವರಾಮ್ ॥೨೪॥

ಶಂತನುವು ರಾಜ್ಯಕ್ಕೆ ಸಂಬಂಧಿಸಿದ ಮತ್ತು ಇತರ ಸರ್ವಶಾಸ್ತ್ರಗಳಲ್ಲಿ ನಿಷ್ಣಾತನಾಗಿದ್ದು ಅಧಿಕವಾದ ಬಲ, ವೀರ್ಯ, ಉತ್ಸಾಹ ಮತ್ತು ಕೀರ್ತಿಯಿಂದ ಕೂಡಿದವನಾಗಿದ್ದು, ಒಮ್ಮೆ ಮೃಗಗಳನ್ನು ಬೇಟೆಯಾಡುತ್ತಾ, ಭಾಗೀರಥಿಯ ತೀರದಲ್ಲಿ ಸಂಚರಿಸುತ್ತಾ ಶ್ರೇಷ್ಠನದಿಯಾದ ಭಾಗೀರಥಿಯಲ್ಲಿ ಸ್ವಲ್ಪವೇ ನೀರಿರುವುದನ್ನು ನೋಡಿದನು.

ತಾಂ ದೃಷ್ಟ್ವಾ ಚಿಂತಯಾಮಾಸ ಶಂತನುರ್ಭರತರ್ಷಭಃ ।
ಸ್ಯಂದತೇ ಕಿನ್ನ್ವಯಂ ನಾದ್ಯ ಸರಿಚ್ಛ್ರೇಷ್ಠಾ ಯಥಾ ಪುರಾ ॥೨೫॥

ಭರತರ್ಷಭನಾದ ಶಂತನುವು ಗಂಗೆಯನ್ನು ನೋಡಿ, ಇದೇನು ಈ ದಿನ ಸರಿಚ್ಛ್ರೇಷ್ಠಳಾದ ಗಂಗೆಯು ಮೊದಲಿನಂತೆ ಹರಿಯುತ್ತಿಲ್ಲ ಎಂದು ಚಿಂತಿಸಿದನು.

ತತೋ ನಿಮಿತ್ತಮನ್ವಿಚ್ಛನ್ ದದರ್ಶ ಸುಮಹಾಮನಾಃ ।
ಕುಮಾರಂ ರೂಪಸಂಪನ್ನಂ ಬೃಹಂತಂ ಪ್ರಿಯದರ್ಶನಮ್ ॥೨೬॥

ಧೈರ್ಯಶಾಲಿಯಾದ ಅವನು, ಅದಕ್ಕೆ ಕಾರಣವನ್ನು ಹುಡುಕುತ್ತಾ ರೂಪಸಂಪನ್ನನಾದ ಎತ್ತರವಾಗಿ ಬೆಳೆದಿದ್ದ ಪ್ರಿಯದರ್ಶನನಾದ ಒಬ್ಬ ಕುಮಾರನನ್ನು ನೋಡಿದನು.

ದಿವ್ಯಮಸ್ತ್ರಂ ವಿಕುರ್ವಾಣಂ ಯಥಾ ದೇವಂ ಪುರಂದರಮ್ ।
ಕೃತ್ಸ್ನಾಂ ಗಂಗಾಂ ಸಮಾವೃತ್ಯ ಶರೈಸ್ತೀಕ್ಷ್ಣೈರವಸ್ಥಿತಮ್ ॥೨೭॥

ಇಂದ್ರನಂತೆ ದಿವ್ಯವಾದ ಅಸ್ತ್ರಗಳನ್ನು ಪ್ರಯೋಗಿಸುತ್ತಾ, ಸಮಗ್ರವಾದ ಗಂಗೆಯನ್ನು ತೀಕ್ಷ್ಣವಾದ ಬಾಣಗಳಿಂದ ಆಚ್ಛಾದನೆ ಮಾಡಿ ನಿಂತಿದ್ದಂತಹ ಕುಮಾರನನ್ನು ನೋಡಿದನು.

ತಾಂ ಶರೈರಾವೃತಾಂ ದೃಷ್ಟ್ವಾ ನದೀಂ ಗಂಗಾಂ ಸಮಂತತಃ ।
ವಿಸ್ಮಿತಃ ಪ್ರೇಕ್ಷತೇ ರಾಜಾ ಕರ್ಮ ತಸ್ಯಾತಿಮಾನುಷಮ್ ॥೨೮॥

ಎಲ್ಲ ಕಡೆಗಳಲ್ಲಿಯೂ ಬಾಣಗಳಿಂದ ಆವೃತವಾದ ದೇವಗಂಗೆಯನ್ನು ನೋಡಿ ವಿಸ್ಮಿತನಾದ ರಾಜನು ಆ ಕುಮಾರನ ಅತಿಮಾನುಷ ಕರ್ಮಗಳನ್ನು ನೋಡಿದನು.

ಜಾತಮಾತ್ರಂ ಪುರಾ ದೃಷ್ಟಂ ತಂ ಪುತ್ರಂ ಶಂತನುಸ್ತದಾ ।
ನ ಜ್ಞಾತವಾನ್ ಮಹಾಭಾಗಮಯಂ ಪುತ್ರೋ ಮಮೇತಿ ವೈ ॥೨೯॥

ಹುಟ್ಟಿದ ತಕ್ಷಣ ಮಾತ್ರ ಅವನನ್ನು ನೋಡಿದ್ದ ಶಂತನುವು ಈ ಮಹಾ ಭಾಗ್ಯಶಾಲಿಯು ತನ್ನ ಮಗನೆಂದು ತಿಳಿಯಲಿಲ್ಲ.

ಸ ತು ತಂ ಪಿತರಂ ದೃಷ್ಟ್ವಾ ಮೋಹಯಾಮಾಸ ಮಾಯಯಾ ।
ಪ್ರಮೋಹ್ಯ ಚ ತತಃ ಕ್ಷಿಪ್ರಂ ತತ್ರೈವಾಂತರಧೀಯತ ॥೩೦॥

ಕುಮಾರನಾದರೊ, ತಂದೆಯನ್ನು ನೋಡಿ ಅವನಿಗೆ ಮೋಹವನ್ನು ಉಂಟುಮಾಡಿ ಅಲ್ಲಿಯೇ ತಕ್ಷಣ ಅಂತರ್ಧಾನವನ್ನು ಹೊಂದಿದನು.

ತದದ್ಭುತಂ ತದಾ ದೃಷ್ಟ್ವಾ ತತ್ರ ರಾಜಾ ಸ ಶಂತನುಃ ।
ಶಂಕಮಾನಃ ಸುತಂ ಗಂಗಾಮಬ್ರವೀದ್ ದರ್ಶಯೇತಿ ತಾಮ್ ॥೩೧॥

ಆ ಅದ್ಭುತವನ್ನು ನೋಡಿದ ರಾಜ ಶಂತನುವು ಅವನು ತನ್ನ ಮಗನೆಂಬ ಸಂಶಯಕ್ಕೆ ಒಳಗಾಗಿ ಗಂಗೆಯನ್ನು ಕುರಿತು ಮಗನನ್ನು ತೋರಿಸು ಎಂದು ಹೇಳಿದನು.

ದರ್ಶಯಾಮಾಸ ತಂ ಗಂಗಾ ಬಿಭ್ರತೀ ರೂಪಮುತ್ತಮಮ್ ।
ಗೃಹೀತ್ವಾ ದಕ್ಷಿಣೇ ಪಾಣೌ ತಂ ಕುಮಾರಮಲಂಕೃತಮ್ ॥೩೨॥

ಗಂಗೆಯು ಉತ್ತಮರೂಪವನ್ನು ಧರಿಸಿ ಅಲಂಕೃತನಾದ ಕುಮಾರನನ್ನು ಬಲಗೈಯಲ್ಲಿ ಹಿಡಿದುಕೊಂಡು ರಾಜನಿಗೆ ತೋರಿಸಿದಳು.

ಅಲಂಕೃತಾಮಾಭರಣೈರರಜೋವಸ್ತ್ರವಾಸಿನೀಮ್ ।
ದೃಷ್ಟಪೂರ್ವಾಂ ಸತೀಂ ಗಂಗಾಮಭ್ಯಜಾನಾತ್ ಸ ಶಂತನುಃ ॥೩೩॥

ಶಂತನುವು ಆಭರಣಗಳಿಂದ ಅಲಂಕೃತಳಾಗಿದ್ದ, ಶುಭ್ರವಸ್ತ್ರವನ್ನು ಧರಿಸಿದ್ದ ಹಿಂದೆ ನೋಡಿದ್ದಂತಹ ತನ್ನ ಪತ್ನಿಯಾದ ಗಂಗೆಯನ್ನು ಗುರುತಿಸಿದನು.

ಯಂ ಪುತ್ರಮಷ್ಟಮಂ ರಾಜಂಸ್ತ್ವಂ ಪುರಾ ಮಯ್ಯವಿಂದಥಾಃ ।
ಸ ತೇऽಯಂ ಪುರುಷವ್ಯಾಘ್ರ ವಜ್ರಸಂಹನನೋ ಯುವಾ ॥೩೪॥

ಗಂಗೆ ಮಾತನಾಡಿದಳು - ರಾಜನೇ, ಪುರುಷವ್ಯಾಘ್ರನೇ, ನೀನು ಯಾವ ಅಷ್ಟಮಪುತ್ರನನ್ನು ನನ್ನಲ್ಲಿ ಹಿಂದೆ ಪಡೆದೆಯೋ ಅವನೇ ವಜ್ರಶರೀರನಾದ, ಯುವಕನಾದ ಈ ನಿನ್ನ ಮಗ.

ವೇದಾನಧಿಜಗ್ಏ ಪೂರ್ವಂ ವಸಿಷ್ಠಾಚ್ಚರಿತವ್ರತಃ ।
ಅಖಿಲಾನ್ ಸೋಪನಿಷದಾನ್ ಸಾಂಗೋಪಾಂಗಾನ್ ಯಥಾವಿಧಿ ॥

ಚರಿತವ್ರತನಾದ ಇವನು ಮೊದಲು ವಸಿಷ್ಠರಿಂದ ಎಲ್ಲಾ ವೇದಗಳನ್ನೂ, ಸಾಂಗೋಪಾಂಗವಾದ ಉಪನಿಷತ್ತುಗಳನ್ನೂ ವಿಧಿವತ್ತಾಗಿ ಅಧ್ಯಯನ ಮಾಡಿದನು.

ಕೃತಾಸ್ತ್ರಃ ಪರಮೇಷ್ವಾಸೋ ದೇವರಾಜಸಮೋ ಯುಧಿ ।
ಸುರಾಣಾಂ ಸಮ್ಮತೋ ನಿತ್ಯಮಸುರಾಣಾಂ ಚ ಭಾರತ ॥೩೬॥

ಅಸ್ತ್ರವಿದ್ಯೆಯನ್ನು ಕಲಿತು ಧನುರ್ಧಾರಿಯಾಗಿ ಯುದ್ದದಲ್ಲಿ ಇಂದ್ರನಿಗೆ ಸಮನಾಗಿದ್ದಾನೆ. ಎಲೈ ಭಾರತನೇ, ಇವನು ಸುರರಿಗೂ ಮತ್ತು ಅಸುರರಿಗೂ ಸಮ್ಮತನಾದವನು.

ಉಶನಾ ವೇದ ಯಚ್ಚಾಸ್ತ್ರಮಯಂ ತದ್ ವೇದ ಕೃತ್ಸ್ನಶಃ ।
ಮಹೇಷ್ವಾಸಮಿಮಂ ರಾಜನ್ ರಾಜಧರ್ಮಾರ್ಥಕೋವಿದಮ್ ।
ಮಯಾ ದತ್ತಮಿಮಂ ಪುತ್ರಂ ವೀರಂ ವೀರ ಗೃಹಂ ನಯ ॥೩೭॥

ಶುಕ್ರಾಚಾರ್ಯರಿಗೆ ಯಾವ ಶಾಸ್ತ್ರವು ತಿಳಿದಿದೆಯೊ, ಅದನ್ನು ಇವನು ಸಮಗ್ರವಾಗಿ ತಿಳಿದಿದ್ದಾನೆ. ಧನುರ್ವಿದ್ಯಾಪಾರಂಗತನಾದ ರಾಜಧರ್ಮದಲ್ಲಿಯೂ, ಅರ್ಥಶಾಸ್ತ್ರದಲ್ಲಿಯೂ ಕೋವಿದನಾದ, ನನ್ನಿಂದ ಕೊಡಲ್ಪಟ್ಟ ನಿನ್ನ ಈ ಮಗನನ್ನು ಮನೆಗೆ ಕರೆದುಕೊಂಡು ಹೋಗು.

ವೈಶಂಪಾಯನಃ

ಇತ್ಯುಕ್ತ್ವಾ ಸಾ ಮಹಾಭಾಗಾ ತತ್ರೈವಾಂತರಧೀಯತ ।
ಗಂಗಯಾ ಸಮನುಜ್ಞಾತಃ ಪುತ್ರಮಾದಾಯ ಶಂತನುಃ ॥೩೮॥

ಭ್ರಾಜಮಾನಂ ಯಥಾऽದಿತ್ಯಂ ಪ್ರಯಯೌ ಸ್ವಪುರಂ ಪ್ರತಿ । ಪೌರವೇಷು
ತತಃ ಪುತ್ರಂ ಯೌವರಾಜ್ಯೇऽಭ್ಯಷೇಚಯತ್ ॥೩೯॥

ಹೀಗೆ ಹೇಳಿ ಆ ಮಹಾನುಭಾವಳು ಅಲ್ಲಿಯೇ ಅದೃಶ್ಯಳಾದಳು. ಗಂಗೆಯ ಅಪ್ಪಣೆಯನ್ನು ಪಡೆದು ಸೂರ್ಯನಂತೆ ಪ್ರಕಾಶಿಸುವ ತನ್ನ ಮಗನನ್ನು ಕರೆದುಕೊಂಡು ಶಂತನುವು ತನ್ನ ಪಟ್ಟಣಕ್ಕೆ ಹಿಂದಿರುಗಿದನು. ಅನಂತರ ತನ್ನ ಮಗನನ್ನು ಪೌರವರಾಜ್ಯದ ಯುವರಾಜನಾಗಿ ಪಟ್ಟಾಭಿಷೇಕ ಮಾಡಿದನು.

ಪೌರವಃ ಸ್ವಪುರಂ ಗತ್ವಾ ಪುರಂದರಪುರೋಪಮಾಮ್ ।
ಸರ್ವಕಾಮಸಮೃದ್ಧಾರ್ಥಂ ಮೇನೇ ಚಾತ್ಮಾನಮಾತ್ಮನಾ ॥೪೦॥

ಪೌರವನಾದ ಶಂತನುವು ಸರ್ವಕಾಮಸಮೃದ್ಧವಾದ ಇಂದ್ರನ ಪಟ್ಟಣದಂತಿರುವ ತನ್ನ ಪಟ್ಟಣಕ್ಕೆ ಹೋಗಿ ತನ್ನನ್ನು ಕೃತಾರ್ಥನೆಂದು ತಿಳಿದನು.

ಪೌರವಾನ್ ಶಂತನೋಃ ಪುತ್ರಃ ಪಿತರಂ ಚ ಮಹಾಯಶಾಃ ।
ರಾಷ್ಟ್ರಂ ಚ ರಂಜಯಾಮಾಸ ವೃತ್ತೇನ ಭರತರ್ಷಭ ॥೪೧॥

ಎಲೈ ಭರತರ್ಷಭನೇ, ಮಹಾಕೀರ್ತಿವಂತನಾದ ಶಂತನುವಿನ ಪುತ್ರನಾದ ಭೀಷ್ಮನು ತಂದೆಯನ್ನೂ, ಎಲ್ಲಾ ಪೌರವರನ್ನೂ ಮತ್ತು ರಾಷ್ಟ್ರವನ್ನೂ ತನ್ನ ಶೀಲವೃತ್ತಗಳಿಂದ ಸಂತೋಷಪಡಿಸಿದನು.

ತಥಾವೃತ್ತಸಮಾಚಾರಸ್ತಥಾಧರ್ಮಸ್ತಥಾಶ್ರುತಃ ।
ಪುತ್ರೋ ದೇವವ್ರತೋ ನಾಮ ಶಂತನೋರಧಿಕೋ ಗುಣೈಃ ॥೪೨॥

ತಂದೆಯದೇ ನಡತೆ, ತಂದೆಯದೇ ಆಚಾರ, ತಂದೆಯದೇ ಧರ್ಮ, ತಂದೆಯದೇ ವಿದ್ಯೆಯನ್ನು ಹೊಂದಿದ್ದ ದೇವವ್ರತನು ತನ್ನ ಗುಣಗಳಿಂದ ತಂದೆಯಾದ ಶಂತನುವನ್ನು ಮೀರಿಸಿದನು.

ಸರ್ವಾಸ್ತ್ರೇಷ್ವಪ್ಯಭಿರತಃ ಪಾರ್ಥಿವೇಷ್ವಿತರೇಷು ಚ ।
ಗುಣೈರ್ವಿಶಿಷ್ಟೋ ಬಹುಭಿಃ ಪುತ್ರೋ ದೇವವ್ರತೋಽಭವತ್ ॥೪೩॥

ಶಂತನುವಿನ ಪುತ್ರನಾದ ದೇವವ್ರತನು ಸರ್ವಾಸ್ತ್ರಗಳಲ್ಲೂ ನಿರತನಾಗಿ ತನ್ನ ಅನೇಕ ಗುಣಗಳಿಂದ ರಾಜರಿಗಿಂತಲೂ ಮತ್ತು ಇತರರಿಗಿಂತಲೂ ವಿಶಿಷ್ಟನಾದವನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ನವತಿತಮೋಽಧ್ಯಾಯಃ ॥

॥ ಸಂಭವಪರ್ವಣಿ ಷಟ್‌ಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ತೊಂಭತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ತೊಂಭತ್ತೊಂಭತ್ತನೆಯ ಅಧ್ಯಾಯ

(ಶಂತನು ದಾಶಕನ್ಯಾಪ್ರಸಂಗ, ಭೀಷ್ಮರ ಪಾತ್ರ, 'ಭೀಷ್ಮ' ಎಂಬ ನಾಮಕರಣ.)

ವೈಶಂಪಾಯನಃ

ಸ ತಥಾ ಸಹ ಪುತ್ರೇಣ ರಮಮಾಣೋ ಮಹೀಪತಿಃ ।
ವರ್ತಯಾಮಾಸ ವರ್ಷಾಣಿ ಚತ್ವಾರ್ಯತುಲವಿಕ್ರಮಃ ॥೧॥

ಆ ಅತುಲವಿಕ್ರಮನಾದ ರಾಜನು ಮಗನ ಜೊತೆಯಲ್ಲಿ ಸಂತೋಷದಿಂದ ಇರುತ್ತಾ ನಾಲ್ಕುವರ್ಷಗಳ ಕಾಲವನ್ನು ಕಳೆದನು.

ಸ ಕದಾಚಿದ್ ವನಂ ಯಾತೋ ಯಮುನಾಮಭಿತೋ ನದೀಮ್ ।
ಮಹೀಪತಿರನಿರ್ದೇಶ್ಯಮಜಿಘ್ರದ್ ಗಂಧಮುತ್ತಮಮ್ ॥೨॥

ಒಂದು ಸಲ ಕಾಡಿಗೆ ಹೋದ ರಾಜನು ಯಮುನೆಯ ತೀರದಲ್ಲಿ ವರ್ಣಿಸಲು ಅಸಾಧ್ಯವಾದಂತಹ ಶ್ರೇಷ್ಠವಾದ ಗಂಧವನ್ನು ಆಘ್ರಾಣಿಸಿದನು.

ತಸ್ಯ ಪ್ರಭವಮನ್ವಿಚ್ಛನ್ ವಿಚಚಾರ ವನಂ ನೃಪಃ ।
ಸ ದದರ್ಶ ತದಾ ಕನ್ಯಾಂ ದಾಶಾನಾಂ ದೇವರೂಪಿಣೀಮ್ ॥೩॥

ಆ ರಾಜನು ಅದರ ಮೂಲವನ್ನು ಹುಡುಕುತ್ತಾ ಕಾಡಿನಲ್ಲಿ ತಿರುಗಾಡಿದಾಗ, ದೇವತೆಗಳ ರೂಪದಂತೆ ರೂಪವಿರುವ ದಾಶಕನ್ಯೆಯನ್ನು ನೋಡಿದನು.

ತಾಮಪೃಚ್ಛತ್ ತತೋ ರಾಜಾ ಕನ್ಯಾಂ ಕಮಲಲೋಚನಾಮ್ ।
ಕಸ್ಯ ತ್ವಮಸಿ ಕಾ ಚಾಸಿ ಕಿಂಚ ತೇऽತ್ರ ಚಿಕೀರ್ಷಿತಮ್ ॥೪॥

ಆಗ ರಾಜನು ಕಮಲಲೋಚನೆಯಾದ ಅವಳನ್ನು ನೀನು ಯಾರು? ಯಾರ ಮಗಳು? ಮತ್ತು ನೀನು ಇಲ್ಲಿ ಏನು ಮಡುತ್ತಿದ್ದೀಯೇ? ಎಂದು ಕೇಳಿದನು.

ಸಾऽಬ್ರವೀದ್ ದಾಶಕನ್ಯಾऽಸ್ಮಿ ಧರ್ಮಾರ್ಥಂ ವಾಹಯೇ ಪ್ಲವಮ್।
ಪಿತುರ್ನಿಯೋಗಾದ್ ಭದ್ರಂ ತೇ ದಾಶರಾಜ್ಞೋ ಮಹಾತ್ಮನಃ ।
ಜ್ಞಾತ್ವಾ ಚ ಪಿತರಂ ತಸ್ಯಾ ವರಯಾಮಾಸ ತಾಂ ತದಾ ॥೫॥

ಅವಳು ನಾನು ದಾಶಕನ್ಯೆ, ಮಹಾತ್ಮನಾದ ದಾಶರಾಜರಾದ ನನ್ನ ತಂದೆಯ ಅಪ್ಪಣೆಯಂತೆ ನಾನು ಧರ್ಮಕ್ಕೆ ನಾವೆಯನ್ನು ನಡೆಸುತ್ತೇನೆ. ನಿನಗೆ ಮಂಗಳವಾಗಲಿ ಎಂದು ಹೇಳಿದಳು. ರಾಜನು ಅವಳ ತಂದೆಯನ್ನು ಕಂಡು, ಅವನನ್ನು ಕನ್ಯಾರ್ಥಿಯಾಗಿ ಪ್ರಾರ್ಥಿಸಿದನು.

ರೂಪಮಾಧುರ್ಯಗಂಧೈಶ್ಚ ಸಂಯುಕ್ತಾಂ ದೇವರೂಪಿಣೀಮ್ ।
ಸಮೀಕ್ಷ್ಯ ರಾಜಾ ದಾಶೇಯೀಂ ಕಾಮಯಾಮಾಸ ಶಂತನುಃ ।
ಪರ್ಯಪೃಚ್ಛತ್ ತತಸ್ತಸ್ಯಾ ಪಿತರಂ ಚಾತ್ಮಕಾರಣಾತ್ ॥೬॥

ರೂಪಮಾಧುರ್ಯ ಮತ್ತು ಗಂಧಗಳಿಂದ ಕೂಡಿದ್ದ ದೇವರೂಪಿಣಿಯಾದ ದಾಶಕನ್ಯೆಯನ್ನು ನೋಡಿ, ರಾಜನಾದ ಶಂತನುವು ಕಾಮಿಸಿದನು ಮತ್ತು ತನಗೆ ಅವಳನ್ನು ಕೊಡಬೇಕೆಂದು ಅವನಲ್ಲಿ ಯಾಚಿಸಿದನು.

ಸಂಭ್ರಮಾತ್ ಪ್ರತ್ಯುವಾಚೇದಂ ದಾಶರಾಜೋ ಮಹೀಪತಿಮ್ ।
ಯಾಚಮಾನಾಯ ವೈ ದೇಯಾ ವರಾಯ ವರವರ್ಣಿನೀ ॥೭॥

ಹೃದಿ ಕಾಮಸ್ತು ಮೇ ಕಶ್ಚಿತ್ ತಂ ನಿಬೋಧ ಜನೇಶ್ವರ ।
ಯದೀಮಾಂ ಧರ್ಮಪತ್ನೀಂ ತ್ವಂ ಮತ್ತಃ ಪ್ರಾರ್ಥಯಸೇ ನೃಪ ॥೮॥

ಆ ಮಾತನ್ನು ಕೇಳಿದ ದಾಶರಾಜನು ಸಂಭ್ರಮದಿಂದ ರಾಜನನ್ನು ಕುರಿತು, ಸುಂದರಿಯಾದ ಇವಳನ್ನು ಯಾಚನೆ ಮಾಡುವ ಶ್ರೇಷ್ಠನಾದ ವರನಿಗೇ ಕೊಡಬೇಕು. ಆದರೆ ರಾಜನೇ, ನೀನು ಇವಳನ್ನು ಧರ್ಮಪತ್ನಿಯಾಗಿ ಬಯಸುವುದಾದರೆ ನನ್ನ ಮನಸ್ಸಿನಲ್ಲಿ ಒಂದು ಆಸೆಯಿದೆ. ಅದನ್ನು ತಿಳಿ.

ಸತ್ಯವಾಗಸಿ ಸತ್ಯೇನ ಸಮಯಂ ಕುರು ಪಾರ್ಥಿವ ।
ತತೋ ದಾಸ್ಯಾಮಿ ರಾಜೇಂದ್ರ ತವ ಕನ್ಯಾಮಿಮಾಂ ನೃಪ ।
ನಹಿ ಮೇ ತ್ವತ್ಸಮಃ ಕಶ್ಚಿದ್ ವರೋ ಜಾತು ಭವಿಷ್ಯತಿ ॥೯॥

ನೀನು ಸತ್ಯವಚನನಾಗಿದ್ದೀಯೆ. ನನ್ನ ಮಾತನ್ನು ಸತ್ಯವನ್ನು ಮಾಡುತ್ತೇನೆಂದು ಮಾತು ಕೊಡು. ಏಲೈ ರಾಜೇಂದ್ರನೇ, ಅನಂತರ ನಾನು ನಿನಗೆ ಈ ಕನ್ಯೆಯನ್ನು ಕೊಡುವೆನು. ನನಗೆ ನಿನ್ನಂತಹ ಅಳಿಯನು ಎಂದೂ ದೊರೆಯಲಾರ.

ಶಂತನುಃ

ಶ್ರುತ್ವಾ ತವ ವರಂ ದಾಶ ವ್ಯವಸಾಯೋ ಭವಿಷ್ಯತಿ ।
ದಾತವ್ಯಂ ಚೇತ್ ಪ್ರದಾಸ್ಯಾಮಿ ನ ತ್ವದೇಯಂ ಕಥಂಚನ ॥೧೦॥

ದಾಶನೇ, ನಿನ್ನ ವರವನ್ನು ಕೇಳಿ, ಅನಂತರ ನಿರ್ಧರಿಸುವೆನು. ಕೊಡಬಹುದಾದರೆ ಕೊಡುವೆನು. ಕೊಡಬಾರದಿದ್ದುದನ್ನು ಎಂದೂ ಕೊಡುವುದಿಲ್ಲ.

ದಾಶಃ

ಯೋಽಸ್ಯಾಂ ಜಾತಸ್ತವ ಸುತಃ ಸ ರಾಜಾ ತ್ವದನಂತರಮ್ ।
ತ್ವದೂರ್ಧ್ವಮಭಿಷೇಕ್ತವ್ಯೋ ನಾನ್ಯಃ ಕಶ್ಚನ ಭಾರತ ॥೧೧॥

ಭಾರತನೇ, ನಿನ್ನಿಂದ ಇವಳಲ್ಲಿ ಜಾತನಾದ ಮಗನು ನಿನ್ನ ಅನಂತರ ರಾಜನಾಗಬೇಕು. ನಿನ್ನ ಅನಂತರ ರಾಜನಾಗುವಂತೆ ಅವನಿಗೆ ಅಭಿಷೇಕವನ್ನು ಮಾಡಬೇಕು. ಬೇರೆಯವರಿಗೆ ಅಭಿಷೇಕ ಮಾಡಬಾರದು.

ವೈಶಂಪಾಯನಃ

ನಾಕಾಮಯತ ತಂ ದಾತುಂ ವರಂ ದಾಶಾಯ ಶಂತನುಃ ।
ಶರೀರಜಮಸಹ್ಯಂ ತಂ ದೀಪ್ಯಮಾನಮಧಾರಯತ್ ॥೧೨॥

ಶಂತನುವು ದಾಶನಿಗೆ ಆ ವರವನ್ನು ಕೊಡಲು ಬಯಸಲಿಲ್ಲ. ಉರಿಯುತ್ತಿದ್ದ ತನ್ನ ಕಾಮವನ್ನು ಹಾಗೆಯೇ ಸಹಿಸಿದನು.

ಸ ಚಿಂತಯನ್ನೇವ ತದಾ ದಾಶಕನ್ಯಾಂ ಮಹೀಪತಿಃ ।
ಪ್ರತ್ಯಯಾದ್ಧಸ್ತಿನಪುರಂ ಶೋಕೋಪಹತಚೇತನಃ ॥೧೩॥

ಆ ರಾಜನು ದಾಶಕನ್ಯೆಯನ್ನು ಚಿಂತಿಸುತ್ತಲೇ ಶೋಕತಪ್ತನಾಗಿ ಹಸ್ತಿನಪುರಕ್ಕೆ ಹಿಂದಿರುಗಿದನು.

ತತಃ ಕದಾಚ್ಛೋಚಂತಂ ಶಂತನುಂ ಧ್ಯಾನಮಾಸ್ಥಿತಮ್ ।
ಪುತ್ರೋ ದೇವವ್ರತೋ ಹ್ಯೇತ್ಯ ಪಿತರಂ ವಾಕ್ಯಮಬ್ರವೀತ್ ॥೧೪॥

ಅನಂತರ ಮೌನವಾಗಿ ಶೋಕಪಡುತ್ತಿರುವ ತಂದೆಯಾದ ಶಂತನುವನ್ನು ಸಮೀಪಿಸಿ, ಮಗನಾದ ದೇವವ್ರತನು ಮಾತನಾಡಿದನು.

ಸರ್ವತ್ರ ಭವತಾಂ ಕ್ಷೇಮಂ ವಿಧೇಯಾಃ ಸರ್ವಶತ್ರವಃ ।
ಅಕಸ್ಮಾದ್ ರಾಜಶಾರ್ದೂಲ ಶೋಚಂಸ್ತು ಪರಿದೃಶ್ಯಸೇ ॥೧೫॥

ಇಲ್ಲಿ ಎಲ್ಲಾ ಕಡೆಯಲ್ಲಿಯೂ ಕ್ಷೇಮವಿದೆ, ಎಲ್ಲ ಶತ್ರುಗಳೂ ವಿಧೇಯರಾಗಿದ್ದಾರೆ. ರಾಜಶಾರ್ದೂಲನೇ, ನೀನು ಇದ್ದಕ್ಕಿದ್ದಂತೆಯೇ ಶೋಕತಪ್ತನಾಗಿ ತೋರುತ್ತಿರುವೆ?

ತತ್ ಕಿಮರ್ಥಮಿಹಾಭೀಕ್ಷ್ಣಂ ಪರಿಶೋಚಸಿ ದುಃಖಿತಃ ।
ಕಸ್ಮಾನ್ನ ಭುಂಕ್ಷೇ ರಾಜಂಸ್ತ್ವಂ ನ ಕಿಂಚಿದಪಿ ಭಾಷಸೇ ॥೧೬॥

ಆದ್ದರಿಂದ ಯಾವ ಕಾರಣಕ್ಕಾಗಿ ಯಾವಾಗಲೂ ದುಃಖದಿಂದ ಶೋಕಪಡುತ್ತಿರುವೆ. ರಾಜನೇ, ನೀನು ಊಟವನ್ನೂ ಮಾಡುತ್ತಿಲ್ಲ ಮತ್ತು ಏನನ್ನೂ ಮಾತನಾಡುತ್ತಿಲ್ಲ.

ನ ಚಾಶ್ವ್ಯೇನ ಚ ನಿರ್ಯಾಸಿ ವಿವರ್ಣೋ ಹರಿಣಃ ಕೃಶಃ ।
ವ್ಯಾಧಿಮಿಚ್ಛಾಮಿ ತೇ ಜ್ಞಾತುಂ ಪ್ರತಿಕುರ್ಯಾಂ ಹಿ ತತ್ರ ವೈ ॥೧೭॥

ನೀನು ಅಶ್ವಗಳನ್ನು ಹೂಡಿದ ರಥದಲ್ಲಿ ಹೋಗುತ್ತಿಲ್ಲ. ನೀನು ವರ್ಣವನ್ನು ಕಳೆದುಕೊಂಡು ಹರಿಣನೂ, ಕೃಶನೂ ಆಗಿದ್ದೀಯೆ. ನಿನ್ನ ವ್ಯಾಧಿ ಏನೆಂದು ತಿಳಿಯಲು ಬಯಸುತ್ತೇನೆ. ಅದಕ್ಕೆ ಯೋಗ್ಯವಾದ ಚಿಕಿತ್ಸೆಯನ್ನೂ ಮಾಡುತ್ತೇನೆ.

ವೈಶಂಪಾಯನಃ

ಸ ತಂ ಕಾಮಮವಾಚ್ಯಂ ವೈ ದಾಶಕನ್ಯಾಂ ಪ್ರತೀದೃಶಮ್ ।
ವಿವೃತಂ ನಾಶಕತ್ ತಸ್ಮೈ ಪಿತಾ ಪುತ್ರಾಯ ಶಂಸಿತುಮ್ ॥೧೮॥

ತಂದೆಯಾದ ಶಂತನುವು ತನಗೆ ದಾಶಕನ್ಯೆಯಲ್ಲಿರುವ ಇಂತಹ ಅವಾಚ್ಯವಾದ ಕಾಮವನ್ನು ಮಗನಿಗೆ ಸ್ಪಷ್ಟವಾಗಿ ಹೇಳಲು ಶಕ್ತನಾಗಲಿಲ್ಲ.

ವಿವಮುಕ್ತಸ್ತು ಪುತ್ರೇಣ ಶಂತನುಃ ಪ್ರತ್ಯಭಾಷತ ।
ಅಸಂಶಯಂ ಮಹಾಪ್ರಾಜ್ಞ ಯಥೈವಾತ್ಥ ತಥೈವ ತತ್ ॥೧೯॥

ಮಗನಿಂದ ಹೀಗೆ ಹೇಳಲ್ಪಟ್ಟವನಾಗಿ, ಶಂತನುವು ಮಹಾಪ್ರಾಜ್ಞನೇ, ನೀನು ನನಗೆ ಹೇಳಿದುದೆಲ್ಲವೂ ನಿಸ್ಸಂಶಯವಾಗಿ ಸರಿಯೆಂದು ಹೇಳಿದನು.

ಅಪತ್ಯಂ ನಸ್ತ್ವಮೇವೈಕಃ ಕುಲೇ ಮಹತಿ ಭಾರತ ।
ಅನುವೃತ್ತ್ಯಾ ಸ್ಮರನ್ ನ್ಯಾಯಾಂಮತಃ ಶೋಚಾಮಿ ಪುತ್ರಕ ॥೨೦॥

ಎಲೈ ಭಾರತನೇ, ನಮ್ಮ ಮಹಾಕುಲದಲ್ಲಿ ನೀನೊಬ್ಬನೇ ನನಗೆ ಮಗ.ಮನುಷ್ಯರ ಕುಲದ ಸಾದೃಶ್ಯವನ್ನು ಗಮನಿಸಿ ನಾನು ಶೋಕಪಡುತ್ತಿದ್ದೇನೆ.

ಕಥಂಚಿತ್ ತ್ವಯಿ ಗಾಂಗೇಯ ವಿಪನ್ನೇ ನಾಸ್ತಿ ನಃ ಕುಲೇ ।
ಅಸಂಶಯಂ ತ್ವಮೇವೈಕೋ ಮಮ ಪುತ್ರಶತಾದ್ ವರಃ ॥೨೧॥

ಎಲೈ ಗಾಂಗೇಯನೇ, ನೀನು ಹೇಗಾದರೂ ನಿಧನವನ್ನು ಹೊಂದಿದರೆ, ನಮ್ಮ ಕುಲದಲ್ಲಿ ಇನ್ನೊಬ್ಬರಿಲ್ಲ. ನಿಶ್ಚಯವಾಗಿಯೂ ನನಗೆ ಹುಟ್ಟಬಹುದಾದ ನೂರು ಮಕ್ಕಳಿಗಿಂತಲೂ ನೀನು ಶ್ರೇಷ್ಠನಾದವನು.

ನ ಚಾಪ್ಯಹಂ ವೃಥಾ ಭೂಯೋ ದಾರಾನ್ ಕರ್ತುಮಿಹೋತ್ಸಹೇ ।
ಸಂತಾನಸ್ಯಾವಿನಾಶಂ ತು ಕಾಮಯೇ ಭದ್ರಮಸ್ತು ತೇ ॥೨೨॥

ನಾನು ಪುನಃ ವ್ಯರ್ಥವಾಗಿ ವಿವಾಹ ಮಾಡಿಕೊಳ್ಳಲು ಬಯಸುವುದಿಲ್ಲ. ನನ್ನ ಸಂತಾನಕ್ಕೆ ಚ್ಯುತಿಯಾಗಬಾರದೆಂದಷ್ಟೇ ಆಶಿಸುತ್ತೇನೆ. ನಿನಗೆ ಮಂಗಳವಾಗಲಿ.

ಅಪುತ್ರತೈಕಪುತ್ರತ್ವಂ ಸಮಮಾಹುರ್ಮನೀಷಿಣಃ ।
ಚಕ್ಷುರೇಕಂ ಚ ಪುತ್ರಶ್ಚ ಅಸ್ತಿ ನಾಸ್ತಿ ಯಥಾ ತಥಾ ।
ಚಕ್ಷುರ್ನಾಶೇ ತನೋರ್ನಾಶಃ ಪುತ್ರನಾಶೇ ಕುಲಕ್ಷಯಃ ॥೨೩॥

ಅಪುತ್ರತಾ ಮತ್ತು ಏಕಪುತ್ರತಾ ಸಮಾನವಾದುದೆಂದು ನ್ಯಾಯಗಳು ಹೇಳುತ್ತಾರೆ. ಒಂದು ಕಣ್ಣು ಮತ್ತು ಏಕಪುತ್ರ ಇದ್ದಂತೆಯೂ ಸರಿ, ಇಲ್ಲದಿದ್ದಂತೆಯೂ ಸರಿ. ಕಣ್ಣು ಹೋದರೆ ದೇಹವೂ ಹೋಗುತ್ತದೆ. ಪುತ್ರನಾಶವಾದರೆ ಕುಲವೇ ನಾಶಹೊಂದುತ್ತದೆ.

ಅಗ್ನಿಹೋತ್ರಂ ತ್ರಯೋ ವೇದಾ ಯಜ್ಞಾಶ್ಚ ಸಹದಕ್ಷಿಣಾಃ ।
ಸರ್ವಾಣ್ಯೇತಾನ್ಯಪತ್ಯಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥೨೪॥

ಅಗ್ನಿಹೋತ್ರ, ಮೂರು ವೇದಗಳು, ದಕ್ಷಿಣಾಸಹಿತವಾದ ಯಜ್ಞಗಳು ಇವೆಲ್ಲವೂ ಪುತ್ರನ ಮಹತ್ವದ ಹದಿನಾರರಲ್ಲಿ ಒಂದು ಅಂಶವನ್ನು ಪಡೆಯಲಾರವು.

ಏವಮೇವ ಮನುಷ್ಯೇಷು ಸ್ಯಾಚ್ಚ ಸರ್ವಂ ಪ್ರಜಾಸ್ವಪಿ ।
ಯದಪತ್ಯಂ ಮಹಾಪ್ರಾಜ್ಞ ತತ್ರ ಮೇ ನಾಸ್ತಿ ಸಂಶಯಃ ।
ಅಪತ್ಯಾದನೃಣೋ ಲೋಕೇ ಪಿತೃಣಾಂ ನಾಸ್ತಿ ಸಂಶಯಃ ॥೨೫॥

ಮಹಾಪ್ರಾಜ್ಞನೇ, ಮನುಷ್ಯರ ತುಲನೆಯಲ್ಲಿ ಮನುಷ್ಯರ ಪ್ರಜೆಗಳಲ್ಲಿಯೂ ಇದೇ ರೀತಿಯಾಗುತ್ತದೆ. ಈ ವಿಷಯದಲ್ಲಿ ಸಂಶಯವಿಲ್ಲ. ನಿನ್ನಂತಹ ಮಗನನ್ನು ಪಡೆದು, ನಾನು ಪಿತೃಋಣದಿಂದ ಮುಕ್ತನಾಗಿದ್ದೇನೆ. ಈ ವಿಷಯದಲ್ಲಿ ಸಂಶಯವಿಲ್ಲ.

ಏಷಾ ತ್ರಯೀ ಪುರಾಣಾನಾಮುತ್ತಮಾನಾಂ ಚ ಶಾಶ್ವತೀ ।
ಅಪತ್ಯಂ ಕರ್ಮ ವಿದ್ಯಾ ಚ ತ್ರೀಣಿ ಜ್ಯೋತೀಂಷಿ ಭಾರತ ॥೨೬॥

ಈ ಮೂರು ವಸ್ತುಗಳು ಪ್ರಾಚೀನಕಾಲದಿಂದ ಎಲ್ಲರೂ ಶ್ರೇಷ್ಠವೆಂದು ಗಣನೆ ಮಾಡಲ್ಪಟ್ಟವು. ಭಾರತನೇ, ಅಪತ್ಯ, ಕರ್ಮ ಮತ್ತು ವಿದ್ಯೆ - ಈ ಮೂರು ವಂಶಜ್ಯೋತಿಗಳು.

ಯದಿದಂ ಕಾರಣಂ ತಾತ ಸರ್ವಮಾಖ್ಯಾತಮಂಜಸಾ ।
ತ್ವಂ ಚ ಶೂರಃ ಸದಾऽಮರ್ಷೀ ಶಸ್ತ್ರಿತ್ಯಶ್ಚ ಭಾರತ ॥೨೭॥

ಮಗು, ನನ್ನ ಶೋಕಕ್ಕೆ ಕಾರಣವೆಲ್ಲವನ್ನು ಸರಿಯಾಗಿ ಹೇಳಿದ್ದೇನೆ. ನೀನು ಶೂರ, ಯಾವಾಗಲೂ ಕ್ರೋಧವುಳ್ಳವನು ಮತ್ತು ಯಾವಾಗಲೂ ಶಸ್ತ್ರಗಳ ಸಂಪರ್ಕವಿರುವವನು.

ನಾನ್ಯತ್ರ ಶಸ್ತ್ರಾತ್ ತೇ ಪುತ್ರ ನಿಧನಂ ವಿದ್ಯತೇಽನಘ ।
ಸೋಽಸ್ಮಿ ಸಂಶಯಮಾಪನ್ನಸ್ತ್ವಯಿ ಶಾಂತೇ ಕಥಂ ಭವೇತ್ ।
ಏತನ್ಮೇ ಕಾರಣಂ ತಾತ ದುಃಖಮೂಲಮಶೇಷತಃ ॥೨೮॥

ಪುತ್ರನೇ ಶಸ್ತ್ರವನ್ನು ಬಿಟ್ಟು ನೀನು ಮರಣಹೊಂದುವ ಬೇರೆ ಸಾಧ್ಯತೆಯಿಲ್ಲ. ಆದ್ದರಿಂದ ನೀನು ಒಂದು ಪಕ್ಷ ಶಾಂತನಾದರೆ, ನಮ್ಮ ಕುಲದ ಗತಿಯೇನು ಎಂಬ ಸಂಶಯದಲ್ಲಿ ತೊಳಲಾಡುತ್ತಿದ್ದೇನೆ. ಇದು ನನ್ನ ದುಃಖಕ್ಕೆ ಸಮಗ್ರವಾದ ಮೂಲ ಕಾರಣ.

ವೈಶಂಪಾಯನಃ

ಸ ತಸ್ಯ ಪಿತುರಾಜ್ಞಾಯ ಮತಂ ಸಮನುಚಿಂತ್ಯ ಚ ।
ದೇವವ್ರತೋ ಮಹಾಬುದ್ಧಿಃ ಪ್ರಯಾಣಮನುಚಿಂತಯನ್ ॥೨೯॥

ಮಹಾಮೇಧಾವಿಯಾದ ಭೀಷ್ಮನು ತಂದೆಯ ಅಭಿಪ್ರಾಯವನ್ನು ತಿಳಿದು, ಆಲೋಚಿಸಿ ಪ್ರಯಾಣ ಮಾಡಲು ನಿರ್ಧರಿಸಿದನು.

ಅಪತ್ಯಫಲಸಂಯುಕ್ತಮೇತಚ್ಛ್ರುತ್ವಾ ಪಿತುರ್ವಚಃ ।
ಸೂತಂ ಭೂಯೋಽಭಿ ಸಂತಪ್ತಮಾಹ್ವಯಾಮಾಸ ವೈ ಪಿತುಃ ॥೩೦॥

ಪುತ್ರಫಲಯುಕ್ತವಾದ ಮಾತುಗಳನ್ನು ತಂದೆಯ ಬಾಯಿಯಿಂದ ಕೇಳಿ, ತಂದೆಗಿಂತಲೂ ಹೆಚ್ಚು ದುಃಖಕ್ಕೆ ಒಳಗಾಗಿದ್ದ, ತಂದೆಯ ಸಾರಥಿಯನ್ನು ಕರೆಸಿದನು.

ಸೂತಸ್ತು ಕುರುಮುಖ್ಯಸ್ಯ ಉಪಯಾತಸ್ತದಾಜ್ಞಯಾ ।
ತಮುವಾಚ ಮಹಾಪ್ರಾಜ್ಞೋ ಭೀಷ್ಮೋ ವೈ ಸಾರಥಿಂ ಪಿತುಃ ॥೩೧॥

ಕುರುರಾಜನ ಸಾರಥಿಯು ಭೀಷ್ಮನ ಅಪ್ಪಣೆಯಂತೆ ಬರುತ್ತಿರಲು, ಮಹಾಪ್ರಾಜ್ಞನಾದ ಭೀಷ್ಮನು ತಂದೆಯ ಸಾರಥಿಯನ್ನು ಕುರಿತು ಮಾತನಾಡಿದನು.

ತ್ವಂ ಸಾರಥೇ ಪಿತುರ್ಮಹ್ಯಂ ಸಖಾಽಸಿ ರಥಧೂರ್ಗತಃ ।
ಅಭಿಜಾನಾಸಿ ಯದಿ ವೈ ಯಸ್ಯಾಂ ಭಾವೋ ನೃಪಸ್ಯ ತು ।
ಏತದಾಚಕ್ಷ್ವ ಮೇ ಪೃಷ್ಟಃ ಕರಿಷ್ಯೇ ನ ತದನ್ಯಥಾ ॥೩೨॥

ಏಲೈ ಸಾರಥಿಯೇ, ರಥದ ಜವಾಬ್ದಾರಿಯನ್ನು ಹೊತ್ತ ನೀನು, ನನ್ನ ತಂದೆಗೆ ಒಳ್ಳೆಯ ಸ್ನೇಹಿತನಾಗಿದ್ದೀಯೆ. ರಾಜನಿಗೆ ಯಾವುದಾದರೂ ಕನ್ಯೆಯಲ್ಲಿ ಮನಸ್ಸಿದೆಯೆಂದು ನಿನಗೆ ತಿಳಿದಿದೆಯೇ ? ನೀನು ಇದಕ್ಕೆ ಉತ್ತರವನ್ನು ಹೇಳು. ನಾನು ಅದನ್ನು ಹಾಗೆಯೇ ನೆರವೇರಿಸುತ್ತೇನೆ.

ಸೂತಃ

ದಾಶಕನ್ಯಾಂ ಕುರುಶ್ರೇಷ್ಠ ತತ್ರ ಭಾವಃ ಪಿತುರ್ಗತಃ ।
ವೃತಃ ಸ ನರದೇವೇನ ತದಾ ವಚನಮಬ್ರವೀತ್ ॥೩೩॥

ಯೋಽಸ್ಯಾಂ ಪುಮಾನ್ ಭವೇಜ್ಜಾತಃ ಸ ರಾಜಾ ತ್ವದನಂತರಮ್ ।
ನಾಕಾಮಯತ ತಂ ದಾತುಂ ಪಿತಾ ತವ ವರಂ ತದಾ ॥೩೪॥

ಕುರುಶ್ರೇಷ್ಠನೇ, ನಿನ್ನ ತಂದೆಯ ಮನಸ್ಸು ದಾಶಕನ್ಯೆಯಲ್ಲಿ ಲಗ್ನವಾಗಿದೆ. ನಿನ್ನ ತಂದೆಯಿಂದ ಯಾಚಿಸಲ್ಪಟ್ಟ ದಾಶರಾಜನು - ''ಇವಳಲ್ಲಿ ಉತ್ಪನ್ನನಾದ ನಿನ್ನ ಮಗನು ನಿನ್ನ ಅನಂತರ ರಾಜನಾಗಬೇಕು'' ಎಂದು ಹೇಳಿದನು. ನಿನ್ನ ತಂದೆಯು ಅವನಿಗೆ ಆ ವರವನ್ನು ಕೊಡಲು ಬಯಸಲಿಲ್ಲ.

ಸದಾಽಪಿ ನಿಶ್ಚಯಸ್ತಸ್ಯ ನಚ ದದ್ಯಾಮತೋಽನ್ಯಥಾ ।
ಏತತ್ ತೇ ಕಥಿತಂ ವೀರ ಕುರುಷ್ವ ಯದನಂತರಮ್ ॥೩೫॥

ಅವನಿಗೆ ಯಾವಾಗಲೂ ಇಂತಹ ವರವನ್ನು ಕೊಡುವುದಿಲ್ಲವೆಂಬ ನಿರ್ಧಾರವಿದೆ. ದಾಶರಾಜನಿಗೆ ಇಂತಹ ವರವನ್ನು ಕೊಡದಿದ್ದರೆ, ತನ್ನ ಕನ್ಯೆಯನ್ನು ಕೊಡುವುದಿಲ್ಲ ಎಂಬ ನಿಶ್ಚಯವೂ ಇದೆ. ವೀರನೇ, ನಾನು ನಿನಗೆ ತಿಳಿಸಿದ್ದೇನೆ. ಮುಂದಿನ ಕಾರ್ಯವನ್ನು ಮಾಡು.

ವೈಶಂಪಾಯನಃ

ತತಃ ಸ ಪಿತುರಾಜ್ಞಾಯ ಮತಂ ಸಮ್ಯಗವೇಕ್ಷ್ಯ ಚ ।
ಜ್ಞಾತ್ವಾ ವಿಮನಸಂ ಪುತ್ರಃ ಪ್ರಯಯೌ ಯಮುನಾಂ ಪ್ರತಿ ।
ಕ್ಷತ್ರಿಯೈಃ ಸಹ ಧರ್ಮಾತ್ಮಾ ಪುರಾಣೈರ್ಬ್ರಹ್ಮಚಾರಿಭಿಃ ॥೩೬॥

ಅನಂತರ ದೇವವ್ರತನು ತಂದೆಯ ಅಭಿಪ್ರಾಯವನ್ನು ಕೇಳಿ, ಚೆನ್ನಾಗಿ ಆಲೋಚಿಸಿ, ಅವನು ಉತ್ಸಾಹರಹಿತನಾಗಿರುವುದನ್ನು ಕಂಡು ಕ್ಷತ್ರಿಯರಿಂದಲೂ, ವೃದ್ಧರಿಂದಲೂ, ಬ್ರಹ್ಮಚಾರಿಗಳಿಂದಲೂ ಕೂಡಿಕೊಂಡು ಧರ್ಮಾತ್ಮನಾದ ಅವನು ಯಮುನೆಯ ಬಳಿಗೆ ಹೋದನು.

ಉಚ್ಚೈಃಶ್ರವಸಮಾಗಮ್ಯ ಕನ್ಯಾಂ ವವ್ರೇ ಯಶಸ್ವಿನೀಮ್ ।
ತಂ ದಾಶಃ ಪ್ರತಿಜಗ್ರಾಹ ವಿಧಿವತ್ ಪ್ರತಿಪೂಜ್ಯ ಚ ।
ಅಬ್ರವೀಚ್ಚೈನಮಾಗಮ್ಯ ರಾಜಸಂಸದಿ ಭಾರತ ॥೩೭॥

ಉಚ್ಚೈಶ್ರವನೆನಿಸಿದ ದಾಶರಾಜನನ್ನು ಕಂಡು, ದೇವವ್ರತನು ತಂದೆಯ ಸಲುವಾಗಿ ಅವನ ಕನ್ಯೆಯನ್ನು ಯಾಚಿಸಿದನು. ದಾಶನು ವಿಧಿವತ್ತಾಗಿ ಪೂಜಿಸಿ ಅವನ ಮಾತನ್ನು ಸ್ವೀಕರಿಸಿದನು. ಭಾರತನೇ, ಅನಂತರ ರಾಜಸಭೆಗೆ ಬಂದು ಮಾತನಾಡಿದನು.

ರಾಜ್ಯಶುಲ್ಕಾ ಪ್ರದಾತವ್ಯಾ ಕನ್ಯೇಯಂ ಯಾಚತಾಂ ವರ ।
ಅಪತ್ಯಂ ಯದ್ ಭವೇತ್ ತಸ್ಯಾಃ ಸ ರಾಜಾऽಸ್ತು ಪಿತುಃ ಪರಮ್ ॥

ಯಾಚಿಸುವವರಲ್ಲಿ ಶ್ರೇಷ್ಠನಾದವನೇ, ಈ ಕನ್ಯೆಯನ್ನು ನಾನು ರಾಜ್ಯಶುಲ್ಕದಿಂದ ಕೊಡಲು ಬಯಸುತ್ತೇನೆ. ಇವಳಲ್ಲಿ ಹುಟ್ಟುವ ಮಗನು ನಿನ್ನ ತಂದೆಯ ಅನಂತರ ರಾಜನಾಗಬೇಕು.

ತ್ವಮೇವಾತ್ರ ಮಹಾಬಾಹೋ ಶಂತನೋರ್ವಂಶವರ್ಧನಃ ।
ಪುತ್ರಃ ಪುಣ್ಯವತಾಂ ಶ್ರೇಷ್ಠಃ ಕಿಂ ನು ವಕ್ಷ್ಯಾಮಿ ತೇ ವಚಃ ॥೩೯॥

ಮಹಾಬಾಹುವೇ, ಪುಣ್ಯವಂತರಲ್ಲಿ ಶ್ರೇಷ್ಠನಾದವನೇ, ನೀನೇ ಶಂತನುವಿನ ವಂಶವರ್ಧನನಾದ ಪುತ್ರ . ಇದಕ್ಕಿಂತ ಹೆಚ್ಚು ಏನು ಹೇಳಲಿ.

ಕುಮಾರಿಕಾಯಾಃ ಶುಲ್ಕಾರ್ಥಂ ಕಿಂಚಿದ್ ವಕ್ಷ್ಯಾಮಿ ಭಾರತ ।
ಕೋ ಹಿ ಸಂಬಂಧಕಂ ಶ್ಲಾಘ್ಯಮೀಪ್ಸಿತಂ ಮಾನ್ಯಮೀದೃಶಮ್ ।
ಅತಿಕ್ರಾಂತಂ ನ ತಪ್ಯೇತ ಸಾಕ್ಷಾದಪಿ ಶತಕ್ರತುಃ ॥೪೦॥

ಭಾರತನೇ, ಕನ್ಯಾಶುಲ್ಕದ ವಿಷಯದಲ್ಲಿ ಒಂದು ಮಾತನ್ನು ಹೇಳುವೆನು - ಯಾರು ತಾನೇ ಆಗಲಿ, ಶ್ಲಾಘ್ಯವಾದ, ಮಾನ್ಯವಾದ, ಅಭೀಷ್ಟವಾದ ಇಂತಹ

ಸಂಬಂಧವನ್ನು ಕಳೆದುಕೊಂಡರೆ, ಅನಂತರ ಪಶ್ಚಾತ್ತಾಪವನ್ನು ಪಡದಿರಲು ಸಾಧ್ಯ? ಇಂದ್ರನಾದರೂ ಪಶ್ಚಾತ್ತಾಪ ಪಡಬೇಕಾಗುತ್ತದೆ.

ಅಪತ್ಯಂ ಹೀದಮಾರ್ಯಸ್ಯ ಯೋ ಯುಷ್ಮಾಕಂ ಸಮೋ ಗುಣೈಃ ।
ಯಸ್ಯ ಶುಕ್ಲಾತ್ ಸತ್ಯವತೀ ಪ್ರಾದುರ್ಭೂತಾ ಯಶಸ್ವಿನೀ ॥೪೧॥

ಇವಳು ಆರ್ಯನಾದ ಉಪರಿಚರವಸುವಿನ ಮಗಳು. ಅವನು ಗುಣಗಳಿಂದ ನಿಮಗೆ ಸಮಾನವಾಗಿದ್ದಾನೆ. ಅವನ ವೀರ್ಯದಿಂದ ಹುಟ್ಟಿದವಳು ಈ ಕೀರ್ತಿಶಾಲಿಯಾದ ಸತ್ಯವತಿ.

ಮಯಾ ತವ ಪಿತಾ ಪೂರ್ವಂ ಬಹುಶಃ ಪರಿಕೀರ್ತಿತಃ ।
ಅರ್ಹತೀಯಂ ಸತ್ಯವತೀ ಪಿತರಂ ತೇ ಧ್ರುವಂ ತಥಾ ॥೪೨॥

ನಾನು ಅವಳ ಎದುರಿಗೆ ಹಿಂದೆ ಅನೇಕ ಬಾರಿ, ನಿನ್ನ ತಂದೆಯ ವಿಷಯವನ್ನು ಪ್ರಸ್ತಾಪಿಸಿದ್ದೇನೆ. ನಿಶ್ಚಯವಾಗಿ ಇವಳು ನಿನ್ನ ತಂದೆಯ ಪಾಣಿಗ್ರಹಣಕ್ಕೆ ಯೋಗ್ಯಳಾದವಳು.

ಅಸಿತಶ್ಚಾಪಿ ರಾಜರ್ಷಿಃ ಪ್ರತ್ಯಾಖ್ಯಾತಃ ಪುರಾ ಮಯಾ ।
ಸ ಚಾಪ್ಯಾಸೀತ್ ಸತ್ಯವತ್ಯಾ ಭೃಶಮರ್ಥೀ ಮಹಾಯಶಾಃ ॥೪೩॥

ಹಿಂದೆ ಮಹಾಕೀರ್ತಿವಂತನಾದ ಅಸಿತರಾಜನು, ಸತ್ಯವತಿಯಲ್ಲಿ ಬಹಳ ಆಸಕ್ತನಾಗಿದ್ದನು. ಆದರೆ ನಾನು ಅವನನ್ನು ನಿರಾಕರಿಸಿದೆ.

ಕನ್ಯಾಪಿತೃತ್ವಾದ್ ವಕ್ಷ್ಯಾಮಿ ಕಿಂಚಿತ್ ತು ಭರತರ್ಷಭ ।
ಬಲವತ್ಸಪತ್ನತಾಮತ್ರ ದೋಷಂ ಪಶ್ಯಾಮಿ ಕೇವಲಮ್ ।
ಭೂಯಾಂಸಂ ತ್ವಯಿ ಪಶ್ಯಾಮಿ ತದ್ದೋಷಮಪರಾಜಿತ ॥೪೪॥

ಭರತರ್ಷಭನೇ, ಕನ್ಯೆಯ ತಂದೆಯಾದುದರಿಂದ ಈ ವಿಷಯವನ್ನು ಹೇಳುತ್ತಿದ್ದೇನೆ. ಈ ವಿಷಯದಲ್ಲಿ ಶತ್ರುಪ್ರಾಬಲ್ಯವನ್ನು ನಾನು ದೋಷವೆಂದು ಪರಿಗಣಿಸುತ್ತೇನೆ. ನಿನ್ನ ನಿಮಿತ್ತದಿಂದ ನಾನು ಆ ದೋಷವನ್ನು ಅಧಿಕವಾಗಿ ಪರಿಗಣಿಸುತ್ತೇನೆ.

ಯಸ್ಯ ಹಿ ತ್ವಂ ಸಪತ್ನಃ ಸ್ಯಾ ಗಂಧರ್ವಸ್ಯಾಸುರಸ್ಯ ವಾ ।
ನ ಚ ಜಾತು ಸುಖಂ ವಿಂದೇತ್ ತ್ವಯಿ ಕ್ರುದ್ಧೇ ಪರಂತಪ ॥೪೫॥

ನೀನು ಯಾರಿಗೆ ಶತ್ರುವಾಗುವೆಯೋ, ಅವರು ಗಂಧರ್ವರೇ ಆಗಲೀ, ಅಸುರರೇ ಆಗಲಿ, ಪರಂತಪನೇ, ನೀನು ಕ್ರುದ್ಧನಾದಾಗ ಅವರು ಎಂದೂ ಸುಖದಿಂದಿರಲು ಸಾಧ್ಯವಿಲ್ಲ.

ಏತಾವಾನತ್ರ ದೋಷೋಽಸ್ತಿ ನಾನ್ಯಃ ಕಶ್ಚನ ವಿದ್ಯತೇ ।
ಏತಜ್ಜಾನೀಹಿ ಭದ್ರಂ ತೇ ದಾನಾದಾನೇ ತ್ವಯಿ ಸ್ಥಿತೇ ॥೪೬॥

ಈ ವಿಷಯದಲ್ಲಿ ಇಷ್ಟು ಮಾತ್ರ ದೋಷವಿದೆ. ಬೇರೆ ಯಾವ ದೋಷವೂ ಇಲ್ಲ. ನೀನು ಇದನ್ನು ತಿಳಿ. ನಿನಗೆ ಮಂಗಳವಾಗಲಿ. ಕೊಡುವುದು ಅಥವಾ ಬಿಡುವುದು ನಿನ್ನನ್ನು ಅವಲಂಬಿಸಿದೆ.

ವೈಶಂಪಾಯನಃ

ಏವಮುಕ್ತೋಽಥ ಗಾಂಗೇಯಸ್ತದ್ಯುಕ್ತಂ ಪ್ರತ್ಯಭಾಷತ ।
ಶೃಣ್ವತಾಂ ಭೂಮಿಪಾಲಾನಾಂ ಪಿತುರರ್ಥಾಯ ಧರ್ಮವಿತ್ ॥

ಹೀಗೆ ಹೇಳಲ್ಪಟ್ಟ ಗಾಂಗೇಯನು ಧರ್ಮವನ್ನು ತಿಳಿದವನಾಗಿ, ಎಲ್ಲ ರಾಜರುಗಳು ಕೇಳುತ್ತಿರುವಂತೆ ತಂದೆಯ ಸಲುವಾಗಿ, ಹೀಗೆ ಅದಕ್ಕೆ ಯೋಗ್ಯವಾದ ರೀತಿಯಲ್ಲಿ ಮಾತನಾಡಿದನು.

ದೇವವ್ರತಃ

ಇದಂ ವಚನಮಾದತ್ಸ್ವ ನಾಸ್ತಿ ವಕ್ತಾಽಸ್ಯ ಮತ್ಸಮಃ ।
ಅನ್ಯೋ ಜಾತೋ ನ ಜನಿತಾ ನಚ ಕಶ್ಚನ ಸಂಪ್ರತಿ ॥೪೮॥

ಏವಮೇತತ್ ಕರಿಷ್ಯಾಮಿ ಯಥಾ ತ್ವಮಿಹ ಭಾಷಸೇ ।
ಯೋಽಸ್ಯಾಂ ಜನಿಷ್ಯತೇ ಪುತ್ರಃ ಸ ನೋ ರಾಜಾ ಭವಿಷ್ಯತಿ ॥೪೯॥

ದಾಶನೇ, ಈ ನನ್ನ ಮಾತನ್ನು ತೆಗೆದುಕೋ. ಇಂತಹ ಮಾತನ್ನು ಆಡುವವರು ಯಾರೂ ಇಲ್ಲ. ಹಿಂದೆ ಹುಟ್ಟಲಿಲ್ಲ, ಮುಂದೆ ಹುಟ್ಟುವುದಿಲ್ಲ. ಈ ದಿನ ಬೇರೆ ಯಾರೂ ಇಲ್ಲ. ಈ ಹೇಗೆ ಹೇಳುತ್ತಿದ್ದೇಯೋ, ಹಾಗೆಯೇ ಮಾಡುವೆನು. ಇವಳಲ್ಲಿ ಹುಟ್ಟುವ ಮಗನು ನಮಗೆ ರಾಜನಾಗುವನು.

ವೈಶಂಪಾಯನಃ

ಇತ್ಯುಕ್ತಃ ಪುನರೇವಾಥ ತಂ ದಾಶಃ ಪ್ರತ್ಯಭಾಷತ ।
ಚಿಕೀರ್ಷುರ್ದುಷ್ಕರಂ ಕರ್ಮ ರಾಜ್ಯಾರ್ಥೇ ಭರತರ್ಷಭ ॥೫೦॥

ಹೀಗೆ ಹೇಳಲ್ಪಟ್ಟ ದಾಶನು, ಪುನಃ ದೇವವ್ರತನನ್ನು ಕುರಿತು ಮಾತನಾಡಿದನು.

ತ್ವಯ್ಯೇವಾತ್ರ ಮಹಾಬಾಹೋ ಶಂತನುರ್ನಾಮ ನಾಥವಾನ್ ।
ಈಶ್ವರಃ ಕಾರಣಂ ಚ ತ್ವಂ ಪ್ರಭುರ್ದಾನಾಯ ಚಾನಘ ॥೫೧॥

ಭರತರ್ಷಭನೇ, ರಾಜ್ಯದ ಸಲುವಾಗಿ ಇಂತಹ ದುಷ್ಕರವಾದ ಕಾರ್ಯವನ್ನು ಮಾಡಲು ಹೊರಟಿರುವ ನಿನ್ನಂತಹ ಮಗನಿಂದ ಶಂತನು ಸನಾಥನಾಗಿದ್ದಾನೆ. ಮಹಾಬಾಹುವೇ, ಅನಘನೇ, ದಾನದ ವಿಷಯದಲ್ಲಿ ನೀನೇ ಪ್ರಭು, ಮತ್ತು ನೀನೇ ಕಾರಣ.

ಇದಂ ತು ವಚನಂ ಮಹ್ಯಂ ಕಾರ್ಯಂ ವೈ ಶೃಣು ಭಾರತ ।
ಕುಮಾರಿಕಾಯಾಃ ಶುಲ್ಕೇನ ವಕ್ಷ್ಯಾಮ್ಯಹಮರಿಂದಮ ॥೫೨॥

ಭಾರತನೇ, ಕನ್ಯಾಶುಲ್ಕದ ವಿಷಯದಲ್ಲಿ ಅರಿಂದಮನಾದ ನಿನ್ನನ್ನು ಕುರಿತು, ನಾನು ಹೇಳುವ ಈ ಮಾತನ್ನು ಮತ್ತು ಕಾರ್ಯವನ್ನು ಕೇಳು.

ಯತ್ ತ್ವಯಾ ಸತ್ಯಮರ್ಥಂ ಹಿ ಸತ್ಯಶೀಲ ಮಹಾಬಲ ।
ರಾಜ್ಞಾಂ ಮಧ್ಯೇ ಪ್ರತಿಜ್ಞಾತಮನುರೂಪಂ ತವೈವ ತತ್ ॥೫೩॥

ಮಹಾಬಲನೇ ಮತ್ತು ಸತ್ಯಶೀಲನೇ, ರಾಜರ ಮಧ್ಯದಲ್ಲಿ ಸತ್ಯವಚನವನ್ನು ನುಡಿದು, ನೀನು ಏನು ಪ್ರತಿಜ್ಞೆಯನ್ನು ಮಾಡಿದ್ದೇಯೋ, ಅದು ನಿನಗೇ ಅನುರೂಪವಾದದು.

ತತ್ ತಥೈವ ಮಹಾಬಾಹೋ ಸಂಶಯೋ ನಾತ್ರ ವಿದ್ಯತೇ ।
ನಾಸ್ತಿ ತಸ್ಯಾನ್ಯಥಾಭಾವಸ್ತ್ವತ್ತೋ ರಿಪುನಿಬರ್ಹಣ ॥೫೪॥

ಮಹಾಬಾಹುವೇ, ಅದು ಹಾಗೆಯೇ ನಡೆಯುತ್ತದೆ. ಈ ವಿಷಯದಲ್ಲಿ ನನಗೆ ಸಂಶಯವಿಲ್ಲ. ರಿಪುಸೂದನನೇ ನೀನು ಅದನ್ನು ಎಂದೂ ವ್ಯತ್ಯಾಸ ಮಾಡುವುದಿಲ್ಲ.

ವಿದ್ಯತೇ ಪರುಷವ್ಯಾಘ್ರ ತ್ವಯಿ ಸತ್ಯಂ ಮಹಾವ್ರತ ।
ಅಪತ್ಯಂ ಯದ್ ಭವೇತ್ ತುಭ್ಯಂ ತತ್ರ ನಃ ಸಂಶಯೋ ಮಹಾನ್ ॥

ಪುರುಷವ್ಯಾಘ್ರನೇ, ನಿನ್ನಲ್ಲಿ ಸತ್ಯವಿದೆ. ಆದರೆ ನಿನಗೆ ಹುಟ್ಟುವ ಮಗನಲ್ಲಿ ನನಗೆ ದೊಡ್ಡ ಸಂಶಯವಿದೆ.

ವೈಶಂಪಾಯನಃ

ತಸ್ಯ ತನ್ಮತಮಾಜ್ಞಾಯ ಸರ್ವಶಸ್ತ್ರಭೃತಾಂ ವರಃ ।
ಪ್ರತಿಜ್ಞಾಂ ಪ್ರತ್ಯಜಾನಾತ್ ಸ ಪಿತುಃ ಪ್ರಿಯಚಿಕೀರ್ಷಯಾ ॥೫೬॥

ದಾಶನ ಆ ಅಭಿಪ್ರಾಯವನ್ನು ತಿಳಿದು, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ದೇವವ್ರತನು ತಂದೆಗೆ ಹಿತವನ್ನು ಮಾಡುವುದಕ್ಕೆ ಬಯಸಿ, ಪ್ರತಿಜ್ಞೆಯನ್ನು ಮಾಡಿದನು.

ಉಚ್ಚೈಃಶ್ರವಃ ಸಮಾದತ್ಸ್ವ ಪ್ರತಿಜ್ಞಾಂ ಜನಸಂಸದಿ ।
ಋಷಯೋ ವಾऽಥ ವಾ ದೇವಾ ಭೂತಾನ್ಯಂತರ್ಹಿತಾನಿ ಚ ॥೫೭॥

ಎಲೈ ಉಚ್ಚಶ್ರವನೇ, ಜನಸಂಪತ್ತಿನಲ್ಲಿ ನಾನು ಮಾಡುವ ಪ್ರತಿಜ್ಞೆಯನ್ನು ಸ್ವೀಕರಿಸು, ಋಷಿಗಳು ಮತ್ತು ದೇವತೆಗಳು ಮತ್ತು ಅಂತರ್ಧಾನ ಹೊಂದಿದ ಭೂತಗಳೂ ಸಹ ಸ್ವೀಕರಿಸಲಿ.

ಯಾನಿ ಯಾನೀಹ ಶೃಣ್ವಂತು ನಾಸ್ಯ ವಕ್ತಾऽಸ್ತಿ ಮತ್ಸಮಃ ।
ಇದಂ ವಚನಮಾದಸ್ತ್ವ ಸತ್ಯೇನ ಮಮ ಜಲ್ಪತಃ ॥೫೮॥

ಶೃಣ್ವತಾಂ ಭೂಮಿಪಾಲಾನಾಂ ಯದ್ ಬ್ರವೀಮಿ ಪಿತುಃ ಕೃತೇ ।
ರಾಜ್ಯಂ ತಾವತ್ ಪೂರ್ವಮೇವ ಮಯಾ ತ್ಯಕ್ತಂ ಮಹಾಬಲ ।
ಅಪತ್ಯಹೇತೋರಪಿ ಚ ಕರೋಮ್ಯೇಷ ವಿನಿಶ್ಚಯಮ್ ॥೫೯॥

ಇಲ್ಲಿ ಬೇರೆ ಯಾರು ಯಾರಿದ್ದರೋ, ಅವರೆಲ್ಲರೂ ಕೇಳಲಿ. ಇಂತಹ ಮಾತನ್ನು ಆಡುವ ನನಗೆ ಸಮಾನನಾದ ಇನ್ನೊಬ್ಬನಿಲ್ಲ. ಮಾತನಾಡುವ ನನ್ನ ಈ ಸತ್ಯವಚನವನ್ನು ಸ್ವೀಕರಿಸಿ. ಭೂಪಾಲರು ಕೇಳುತ್ತಿರುವಂತೆ ತಂದೆಯ ಸಲುವಾಗಿ ಈ ಮಾತನ್ನು ಆಡುತ್ತಿದ್ದೇನೆ. ಮಹಾಬಲನಾದ ದಾಶನೇ, ರಾಜ್ಯವನ್ನು ನಾನು ಮೊದಲೇ ತ್ಯಜಿಸಿದ್ದೇನೆ. ಮಗನಿಗೆ ಸಂಬಂಧಿಸಿದಂತೆ ಈ ಪ್ರತಿಜ್ಞೆಯನ್ನು ಮಾಡುತ್ತೇನೆ.

ಅದ್ಯಪ್ರಭೃತಿ ಮೇ ದಾಶ ಬ್ರಹ್ಮಚರ್ಯಂ ಭವಿಷ್ಯತಿ ।
ಅಪುತ್ರಸ್ಯಾಪಿ ಮೇ ಲೋಕಾ ಭವಿತಾರೋ ಯಥೇಪ್ಸಿತಾಃ ॥೬೦॥

ದಾಶನೇ ''ಇಂದಿನಿಂದ ಆರಂಭಿಸಿ ನಾನು ಬ್ರಹ್ಮಚಾರಿಯಾಗಿಯೇ ಇರುವೆನು''. ನನಗೆ ಮಕ್ಕಳಿಲ್ಲದಿದ್ದರೂ ಅಭೀಷ್ಟವಾದ ಲೋಕವು ದೊರಕುತ್ತದೆ.

ನಹಿ ಜನ್ಮಪ್ರಭೃತ್ಯುಕ್ತಂ ಮಮ ಕಿಂಚಿದಿಹಾನೃತಮ್ ।
ಯಾವತ್ ಪ್ರಾಣಾ ಧ್ರಿಯಂತೇ ವೈ ಮಮ ದೇಹಂ ಸಮಾಶ್ರಿತಾಃ ।
ತಾವನ್ನ ಜನಯಿಷ್ಯಾಮಿ ಪಿತ್ರೇ ಕನ್ಯಾಂ ಪ್ರಯಚ್ಛ ಮೇ ॥೬೧॥

ನಾನು ಹುಟ್ಟಿದಾಗಿನಿಂದ ಯಾವ ಸುಳ್ಳು ಮಾತನ್ನೂ ಆಡಿಲ್ಲ. ಎಲ್ಲಿಯವರೆಗೆ ನನ್ನ ದೇಹದಲ್ಲಿ ಪ್ರಾಣವು ಇರುವುದೋ, ಅಲ್ಲಿಯವರೆಗೆ ನಾನು ಮಗನನ್ನು ಪಡೆಯುವುದಿಲ್ಲ. ತನ್ನ ತಂದೆಗೆ ಮಗಳನ್ನು ಕೊಡು.

ಪರಿತ್ಯಜಾಮ್ಯಹಂ ರಾಜ್ಯಂ ಮೈಥುನಂ ಚಾಪಿ ಸರ್ವಶಃ ।
ಊರ್ಧ್ವರೇತಾ ಭವಿಷ್ಯಾಮಿ ದಾಶ ಸತ್ಯಂ ಬ್ರವೀಮಿ ತೇ ॥೬೨॥

ದಾಶನೇ, ನಾನು ರಾಜ್ಯವನ್ನೂ ಮತ್ತು ಮೈಥುನವನ್ನೂ ಸರ್ವರೀತಿಯಲ್ಲಿಯೂ ತ್ಯಜಿಸುತ್ತೇನೆ. ಊರ್ಧ್ವರೇತಸ್ಕನಾಗಿರುತ್ತೇನೆ. ಇದನ್ನು ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಸಂಪ್ರಹೃಷ್ಟತನೂರುಹಃ ।
ದದಾನೀತ್ಯೇವ ತಂ ದಾಶಃ ಕುಮಾರಂ ಪ್ರತ್ಯಭಾಷತ ॥೬೩॥

ಅವನ ಆ ಮಾತುಗಳನ್ನು ಕೇಳಿದ ದಾಶನು ರೋಮಾಂಚನವುಳ್ಳವನಾಗಿ ಕುಮಾರನನ್ನು ಕುರಿತು, ನಾನು ಕನ್ಯೆಯನ್ನು ಕೊಡುತ್ತೇನೆಂದೇ ಉತ್ತರವನ್ನು ಕೊಟ್ಟನು.

ತತೋಽಂತರಿಕ್ಷೇಽಪ್ಸರಸೋ ದೇವಾಃ ಸರ್ಷಿಗಣಾಸ್ತದಾ ।
ತದ್ ದೃಷ್ಟ್ವಾ ದುಷ್ಕರಂ ಕರ್ಮ ಪ್ರಶಸಂಸುಶ್ಚ ಪಾರ್ಥಿವಾಃ ।
ಪ್ರತ್ಯವರ್ಷಂತ ಕುಸುಮೈರ್ಭೀಷ್ಮೋಽಯಮಿತಿ ಚಾಬ್ರುವನ್ ॥೬೪॥

ಆಗ ಅಂತರಿಕ್ಷದಲ್ಲಿ ಅಪ್ಸರೆಯರು, ದೇವತೆಗಳು, ಋಷಿಗಣಗಳು ಅವನ ಆ ದುಷ್ಕರಕರ್ಮವನ್ನು ಪ್ರಶಂಸಿದರು. ನೆರೆದಿದ್ದ ರಾಜರೂ ಪ್ರಶಂಸಿಸಿದರು. ದೇವತೆಗಳು ಪುಷ್ಪವೃಷ್ಟಿಯನ್ನು ಮಾಡಿ ಅವನನ್ನು ''ಭೀಷ್ಮ'' ಎಂದು ಕರೆದರು.

ತತೋಽಸ್ಯ ಪಿತುರರ್ಥಾಯ ತಾಮುವಾಚ ಯಶಸ್ವಿನೀಮ್ ।
ಅಧಿರೋಹ ರಥಂ ಮಾತರ್ಗಚ್ಛಾವಃ ಸ್ವಗೃಹಂ ಪ್ರತಿ ॥೬೫॥

ಅನಂತರ ಭೀಷ್ಮನು ತನ್ನ ತಂದೆಯ ಸಲುವಾಗಿ ಆ ಯಶಸ್ವಿನಿಯನ್ನು ಕುರಿತು, 'ಅಮ್ಮಾ, ಮನೆಗೆ ಹೋಗೋಣ, ರಥವನ್ನು ಏರು' ಎಂದು ಹೇಳಿದನು.

ಏವಮುಕ್ತ್ವಾ ತು ಭೀಷ್ಮಸ್ತಾಂ ರಥಮಾರೋಪ್ಯ ಭಾಮಿನೀಮ್ ।
ಆಗಮ್ಯ ಹಸ್ತಿನಪುರಂ ಶಂತನೋಸ್ತನ್ನ್ಯವೇದಯತ್ ॥೬೬॥

ಭೀಷ್ಮನು ಹೀಗೆ ಹೇಳಿ ಆ ಸುಂದರಿಯನ್ನು ರಥದಲ್ಲಿ ಕೂಡಿಸಿಕೊಂಡು ಹಸ್ತಿನಪುರಕ್ಕೆ ಬಂದು, ತನ್ನ ತಂದೆಗೆ ಅವಳನ್ನು ನಿವೇದಿಸಿದನು.

ತಸ್ಯ ತದ್ ದುಷ್ಕರಂ ಕರ್ಮ ಪ್ರಶಶಂಸುರ್ನರಾಧಿಪಾಃ ।
ಸಮೇತಾಶ್ಚ ಪೃಥಕ್ ಚೈನಂ ಭೀಷ್ಮೋಽಯಮಿತಿ ಚಾಽಬ್ರುವನ್ ॥೬೭॥

ಅವನ ದುಷ್ಕರವಾದ ಕರ್ಮವನ್ನು ನೋಡಿ, ಸಮೇತರಾದ ರಾಜರು ಒಟ್ಟಾಗಿಯೂ ಮತ್ತು ಬೇರೆಬೇರೆಯಾಗಿಯೂ ಇವನು ''ಭೀಷ್ಮ'' (ಮಹಾಸಾಹಸಿಕ) ಎಂದು ಹೇಳಿದರು.

ತಚ್ಛ್ರುತ್ವಾ ದುಷ್ಕರಂ ಕರ್ಮ ಕೃತಂ ಭೀಷ್ಮೇಣ ಶಂತನುಃ ।
ಬಭೂವ ದುಃಖಿತೋ ರಾಜಾ ಚಿರರಾತ್ರಾಯ ಭಾರತ ।
ಸ ತೇನ ಕರ್ಮಣಾ ಸೂನೋಃ ಪ್ರೀತಸ್ತಸ್ಮೈ ವರಂ ದದೌ ॥೬೮॥

ಭೀಷ್ಮರ ಆ ದುಷ್ಕರಕರ್ಮವನ್ನು ಕೇಳಿದ ಶಂತನುರಾಜನು ಬಹುಕಾಲ ದುಃಖಭರಿತನಾದನು. ಎಲೈ ಭಾರತನೇ, ಮಗನ ಆ ಕರ್ಮದಿಂದ ಪ್ರಸನ್ನನಾದ ಅವನು ಮಗನಿಗೆ ವರವನ್ನು ಕೊಟ್ಟನು.

ನಾಕಾಮಮರಣಂ ತಾತ ಭವಿಷ್ಯತಿ ತವೇತಿ ಹ ।
ನ ತೇ ಪ್ರಭವಿತಾ ಮೃತ್ಯುಃ ಯಾವದಿಚ್ಛಸಿ ಜೀವಿತಮ್ ।
ಸ್ವೇನ ಕಾಮೇನ ಮರ್ತ್ಯೋಽಸಿ ನಾಕಾಮಸ್ತ್ವಂ ಕಥಂಚನ ॥೬೯॥

ಮಗು ನಿನಗೆ ಎಂದೂ ಅಕಾಲಮರಣವುಂಟಾಗುವುದಿಲ್ಲ. ನೀನು ಎಲ್ಲಿಯವರೆಗೆ ಬದುಕುವುದಕ್ಕೆ ಬಯಸುತ್ತೀಯೋ, ಅಲ್ಲಿಯವರೆಗೆ ಮೃತ್ಯುವು ನಿನ್ನನ್ನು ಏನೂ ಮಾಡಲಾರದು. ನಿನ್ನ ಇಚ್ಛೆ ಬಂದಾಗ ನೀನು ಮರಣವನ್ನು ಹೊಂದಬಹುದು. ಇಚ್ಛೆಯಿಲ್ಲದೇ ಎಂದೂ ಮೃತನಾಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಏಕೋನಶತತಮೋऽಧ್ಯಾಯಃ॥

॥ ಸಂಭವಪರ್ವಣಿ ಸಪ್ತಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ತೊಂಭತ್ತೊಂಭತ್ತನೆಯ ಅಧ್ಯಾಯ ಮುಗಿಯಿತು

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೧

ತತಃ ಕದಾಚಿನ್ ಮೃಗಯಾಂ ಗತಃ ಸ
ದದರ್ಶ ಕನ್ಯಾಂ ಪ್ರವರಾಂ ತು ಶಂತನುಃ ।
ಯಾ ಪೂರ್ವಸರ್ಗೇ ಪಿತೃಪುತ್ರಿಕಾ ಸತೀ
ಚಚಾರ ವಿಷ್ಣೋಸ್ತಪ ಉತ್ತಮಂ ಚಿರಮ್ ॥೭೩॥

ದೇವವ್ರತನಿಗೆ ಯುವರಾಜ ಪದವಿಯಲ್ಲಿ ಪಟ್ಟಾಭಿಷೇಕವಾದ ಬಳಿಕ ಒಮ್ಮೆ ಬೇಟೆಗೆ ಹೋಗಿದ್ದ ಶಂತನು ಶ್ರೇಷ್ಠ ಕನ್ಯೆಯೊಬ್ಬಳನ್ನು ಕಂಡ. ಅವಳು ಪೂರ್ವಜನ್ಮದಲ್ಲಿ ಪಿತೃಗಳ ಪುತ್ರಿ . ವಿಷ್ಣುವನ್ನು ಕುರಿತು ಬಹುಕಾಲ ಉತ್ತಮ ತಪಸ್ಸು ಮಾಡಿದ್ದಳು.

ಯಸ್ಯೈ ವರಂ ವಿಷ್ಣುರದಾತ್ ಪುರಾಹಂ
ಸುತಸ್ತವ ಸ್ಯಾಮಿತಿ ಯಾ ವಸೋಃ ಸುತಾ ।
ಜಾತಾ ಪುನರ್ದಾಶಗೃಹೇ ವಿವರ್ಧಿತಾ
ವ್ಯಾಸಾತ್ಮನಾ ವಿಷ್ಣುರಭೂಚ್ಚ ಯಸ್ಯಾಮ್ ॥೭೪॥

ಅಚ್ಚೋದೆಗೆ ವಿಷ್ಣು 'ನಾನು ನಿನ್ನ ಮಗನಾಗುವೆನು' ಎಂದು ವರನೀಡಿದ್ದ. ಅವಳೇ ವಸುಚಕ್ರವರ್ತಿಯ ಮಗಳಾಗಿ ಹುಟ್ಟಿ ಅಂಬಿಗರ ಮನೆಯಲ್ಲಿ ಬೆಳೆಸಲ್ಪಟ್ಟಿದ್ದಳು. ಅವಳಲ್ಲಿ ವಿಷ್ಣು ವ್ಯಾಸ ರೂಪದಿಂದ ಅವತರಿಸಿದ್ದ.

ತದ್ದರ್ಶನಾನ್ನೃಪತಿರ್ಜಾತಹೃಚ್ಛಯೋ
ವವ್ರೇ ಪ್ರದಾನಾಯ ಚ ದಾಶರಾಜಮ್ ।
ಋತೇ ಸ ತಸ್ಯಾಸ್ತನಯಸ್ಯ ರಾಜ್ಯಂ
ನೈಚ್ಛದ್ದಾತುಂ ತಾಮಥಾಯಾದ್ ಗೃಹಂ ಸ್ವಮ್ ॥೭೫॥

ಅವಳ ದರ್ಶನದಿಂದ ಅನುರಾಗಯುಕ್ತನಾದ ರಾಜ ಅಂಬಿಗರ ದೊರೆಯ ಬಳಿ ಅವಳನ್ನು ತನಗೆ ಕೊಡಲು ಕೇಳಿಕೊಂಡ. ಅವಳ ಮಗನಿಗೆ ರಾಜ್ಯ ಸಿಗದಿದ್ದಲ್ಲಿ ಅವಳನ್ನು ಕೊಡಲು ಆತ ಒಪ್ಪಲಿಲ್ಲ. ಆಗ ರಾಜ ತನ್ನ ಮನೆಗೆ ಬಂದ.

ತಚ್ಚಿಂತಯಾ ಗ್ಲಾನಮುಖಂ ಜನಿತ್ರಂ
ದೃಷ್ಟ್ವೈವ ದೇವವ್ರತ ಆಶ್ವಪೃಚ್ಛತ್ ।
ತತ್ಕಾರಣಂ ಸಾರಥಿಮಸ್ಯ ತಸ್ಮಾತ್
ಶ್ರುತ್ವಾಖಿಲಂ ದಾಶಗೃಹಂ ಜಗಾಮ ॥೭೬॥

ಅವಳ ಚಿಂತೆಯಲ್ಲಿ ತಂದೆಯ ಮುಖಬಾಡಿದ್ದನ್ನು ಕಂಡೊಡನೆ ಅದಕ್ಕೆ ಕಾರಣವೇನೆಂದು ಬೇಗನೆ ರಾಜನ ಸಾರಥಿಯನ್ನು ಕೇಳಿದ ದೇವವ್ರತ. ಅವನಿಂದ ಎಲ್ಲವನ್ನೂ ಕೇಳಿ ತಿಳಿದು ಅಬಿಂಗನ ಮನೆಗೆ ಹೋದ.

ಸ ತಸ್ಯ ವಿಶ್ವಾಸಕೃತೇ ಪ್ರತಿಜ್ಞಾಂ ಚಕಾರ ನಾಹಂ ಕರವಾಣಿ ರಾಜ್ಯಮ್ ।
ತಥೈವ ಮೇ ಸಂತತಿತೋ ಭಯಂ ತೇ ವ್ಯೇತೂರ್ಧ್ವರೇತಾಃ ಸತತಂ ಭವಾಮಿ

ದೇವವ್ರತ ಅಂಬಿಗನಿಗೆ ವಿಶ್ವಾಸ ಉಂಟಾಗುವುದಕ್ಕಾಗಿ 'ನಾನು ರಾಜ್ಯಭಾರ ಮಾಡುವುದಿಲ್ಲ, ನನ್ನ ಸಂತತಿಯಿಂದಲೂ ನಿನಗೆ ಭಯ ದೂರವಾಗಲಿ, ನಾನು ಸದಾ ಊರ್ಧ್ವರೇತನಾಗಿರುತ್ತೇನೆ' ಎಂದು ಪ್ರತಿಜ್ಞೆಗೈದ.

ಭೀಮವ್ರತತ್ವಾದ್ಧಿ ತದಾಸ್ಯ ನಾಮ
ಕೃತ್ವಾ ದೇವಾ ಭೀಷ್ಮ ಇತಿ ಹ್ಯಚೀಕ್ಲೃಪನ್ ।
ಪ್ರಸೂನವೃಷ್ಟಿಂ ಸ ಚ ದಾಶದತ್ತಾಂ
ಕಾಳೀಂ ಸಮಾದಾಯ ಪಿತುಃ ಸಮರ್ಪಯತ್ ॥೭೮॥

ದೇವವ್ರತ ಭಯಂಕರವಾದ ವ್ರತವನ್ನು ಕೈಗೊಂಡುದರಿಂದ ದೇವತೆಗಳು ಆಗ ಅವನಿಗೆ 'ಭೀಷ್ಮ' ಎಂದು ಹೆಸರಿಟ್ಟು ಹೂಮಳೆಗರೆದರು. ಭೀಷ್ಮ ಅಂಬಿಗನಿತ್ತ ಕಾಳಿಯನ್ನು ಕರೆದುತಂದು ತಂದೆಗೆ ನೀಡಿದ.

ಜ್ಞಾತ್ವಾ ತು ತಾಂ ರಾಜಪುತ್ರೀಂ ಗುಣಾಢ್ಯಾಂ
ಸತ್ಯಸ್ಯ ವಿಷ್ಣೋರ್ಮಾತರಂ ನಾಮತಸ್ತತ್ ।
ಲೋಕೇ ಪ್ರಸಿದ್ಧಾಂ ಸತ್ಯವತೀತ್ಯುದಾರಾಂ
ವಿವಾಹಯಾಮಾಸ ಪಿತುಃ ಸ ಭೀಷ್ಮಃ ॥೭೯॥

ಕಾಳಿ ಒಬ್ಬಳು ರಾಜಕುಮಾರಿ, ಗುಣಾಢ್ಯಳು, ಸತ್ಯಸ್ವರೂಪರಾದ ವ್ಯಾಸರಿಗೆ ಜನ್ಮವಿತ್ತು ಸತ್ಯವತಿ ಎಂಬ ಹೆಸರಿನಿಂದ ಲೋಕದಲ್ಲಿ ಪ್ರಸಿದ್ಧಳಾದಳು. ಉತ್ತಮ ಸ್ತ್ರೀ ಎಂದು ತಿಳಿದೇ ಭೀಷ್ಮ ಅವಳನ್ನು ತಂದೆಗೆ ವಿವಾಹ ಮಾಡಿಸಿದ.

ಪ್ರಾಯಃ ಸತಾಂ ನ ಮನಃ ಪಾಪಮಾರ್ಗೇ
ಗಚ್ಛೇದಿತಿ ಹ್ಯಾತ್ಮಮನಶ್ಚ ಸಕ್ತಮ್ ।
ಜ್ಞಾತ್ವಾಪಿ ತಾಂ ದಾಶಾಗೃಹೇ ವಿವರ್ಧಿತಾಂ
ಜಗ್ರಾಹ ಸದ್ಧರ್ಮರತಶ್ಚ ಶಂತನುಃ ॥೮೦॥

ಸಜ್ಜನರ ಮನಸ್ಸು ಪ್ರಾಯಃ ಪಾಪಮಾರ್ಗದಲ್ಲಿ ಹೋಗುವುದಿಲ್ಲ, ತನ್ನ ಮನಸ್ಸು ಸತ್ಯವತಿಯಲ್ಲಿ ಆಸಕ್ತವಾಗಿದೆ ಎಂಬ ಕಾರಣದಿಂದಲೂ, ಸತ್ಯವತಿ ಅಂಬಿಗರ ಹೆಣ್ಣೆಂದು ಪ್ರಸಿದ್ಧಳಾದರೂ ಅಂಬಿಗರ ಮನೆಯಲ್ಲಿ ರಾಜಕುಮಾರಿಗೆ ಯೋಗ್ಯವಾದ ರೀತಿಯಿಂದಲೆ ಬೆಳೆದವಳೆಂದು ತಿಳಿದೂ, ಶುದ್ಧಧರ್ಮನಿರತನಾದ ಶಂತನು ಸತ್ಯವತಿಯನ್ನು ಸ್ವೀಕರಿಸಿದ.

ಸ್ವಚ್ಛಂದಮೃತ್ಯುತ್ವವರಂ ಪ್ರದಾಯ
ತಥಾಪ್ಯಜೇಯತ್ವಮಧೃಷ್ಯತಾಂ ಚ ।
ಯುದ್ಧೇಷು ಭೀಷ್ಮಸ್ಯ ನೃಪೋತ್ತಮಃ ಸ
ರೇಮೇ ತಯೈವಾಬ್ದಗಣಾನ್ ಬಹೂಂಶ್ಚ ॥೮೧॥

ನೃಪೋತ್ತಮನಾದ ಶಂತನು ಭೀಷ್ಮನಿಗೆ ಸ್ವಚ್ಛಂದ ಮೃತ್ಯುತ್ವವರವನ್ನೂ ಯುದ್ಧಗಳಲ್ಲಿ ಅಜೇಯತ್ವವನ್ನೂ ಅದೃಷ್ಟತ್ವವನ್ನೂ ನೀಡಿ ಸತ್ಯವತಿಯೊಂದಿಗೆ ಬಹುವರ್ಷಗಳ ಕಾಲ ವಿವರಿಸಿದ.

ಲೇಭೇ ಸ ಚಿತ್ರಾಂಗದಮತ್ರ ಪುತ್ರಂ ತಥಾ
ದ್ವಿತೀಯಂ ಚ ವಿಚಿತ್ರ ವೀರ್ಯಮ್ ।

ತಯೋಶ್ಚ ಬಾಲ್ಯೇ ವ್ಯಧುನೋಚ್ಛರೀರಂ
ಜೀರ್ಣೇನ ದೇಹೇನ ಹಿ ಕಿಂ ಮಮೇತಿ ॥೮೨॥

ಶಂತನು ಸತ್ಯವತಿಯಲ್ಲಿ ಚಿತ್ರಾಂಗದನೆಂಬ ಒಬ್ಬ ಮಗನನ್ನೂ ವಿಚಿತ್ರ ವೀರ್ಯನೆಂಬ ಇನ್ನೊಬ್ಬ ಮಗನನ್ನೂ ಪಡೆದ. ಅವರು ಇನ್ನೂ ಸಣ್ಣವರಾಗಿದ್ದಾಗಲೆ ತಾನು ಶರೀರ ತ್ಯಾಗ ಮಾಡಿದ. ಜೀರ್ಣವಾದ ಶರೀರದಿಂದ ನನಗೆ ಏನು ಪ್ರಯೋಜನ ಎಂದು.

ಸ್ವೇಚ್ಛಯಾ ವರುಣತ್ವಂ ಸ ಪ್ರಾಪ ನಾನಿಚ್ಛಯಾ ತನುಃ ।
ತಸ್ಮಿನ್ ಕಾಲೇ ತ್ಯಜ್ಯತೇ ಹಿ ಬಲವದ್ಬಿರ್ವಧಂ ವಿನಾ ॥೮೩॥

ಸ್ವೇಚ್ಛೆಯಿಂದಲೆ ಶಂತನು ವರುಣತ್ವವನ್ನು ಪಡೆದ. ಇಚ್ಛೆಯಿಲ್ಲದೆ ಅಲ್ಲ. ಯೋಗಬಲವುಳ್ಳವರು ಮರಣೇಚ್ಛಾಕಾಲದಲ್ಲಿ ಶತ್ರುಗಳಿಂದ ವಧೆ ಇಲ್ಲದೆಯೆ ಸ್ವೇಚ್ಛೆಯಿಂದ ಶರೀರ ತ್ಯಾಗ ಮಾಡುತ್ತಾರೆ.

ಅತಿಸಕ್ತಾಸ್ತಪೋಹೀನಾಃ ಕಥಂಚಿನ್ಮೃತಿಮಾಪ್ನುಯುಃ ।
ಅನಿಚ್ಛಯಾಪಿ ಹಿ ಯಥಾ ಮೃತಶ್ಚಿತ್ರಾಂಗದಾನುಜಃ ॥೮೪॥

ಅತಿಯಾದ ವಿಷಯಾಸಕ್ತಿ ಹೊಂದಿ ತಪೋಹೀನರಾದವರು ಇಚ್ಛೆಯಿಲ್ಲದಿದ್ದರೂ ಹೇಗೆ ಹೇಗೋ ಮರಣ ಹೊಂದುತ್ತಾರೆ. ಚಿತ್ರಾಂಗದನ ತಮ್ಮ ಹೇಗೆ ಮರಣ ಹೊಂದಿದನೋ ಹಾಗೆ.

ಅಥೌರ್ಧ್ವದೈಹಿಕಂ ಕೃತ್ವಾ ಪಿತುರ್ಭೀಷ್ಮೋಽಭ್ಯಷೇಚಯತ್ ।
ರಾಜ್ಯೇ ಚಿತ್ರಾಂಗದಂ ವೀರಂ ಯೌವರಾಜ್ಯೇಽಸ್ಯ ಚಾನುಜಮ್ ॥೮೫॥

ಬಳಿಕ ಭೀಷ್ಮ ತಂದೆಗೆ ಉತ್ತರಕ್ರಿಯೆ ಮಾಡಿ ರಾಜ್ಯದಲ್ಲಿ ವೀರನಾದ ಚಿತ್ರಾಂಗದನಿಗೆ ಪಟ್ಟಾಭಿಷೇಕ ಮಾಡಿದ. ಯುವರಾಜ ಪದವಿಯಲ್ಲಿ ಅವನ ತಮ್ಮನಿಗೆ ಪಟ್ಟಾಭಿಷೇಕ ಮಾಡಿದ.

ಚಿತ್ರಾಂಗದೇನ ನಿಹತೋ ನಾಮ ಸ್ವಂ ತ್ವಪರಿತ್ಯಜನ್ ।
ಚಿತ್ರಾಂಗದೋಽಕೃತೋದ್ವಾಹೋ ಗಂಧರ್ವೇಣ ಮಹಾರಣೇ ॥೮೬॥

ಚಿತ್ರಾಂಗದ ಮದುವೆಯಾಗುವುದಕ್ಕೆ ಮೊದಲೆ ಸತ್ತ. ತನ್ನ ಹೆಸರನ್ನು ಬಿಟ್ಟು ಕೊಡಲು ಒಪ್ಪದೆ ಮಹಾಯುದ್ಧದಲ್ಲಿ ಚಿತ್ರಾಂಗದನೆಂಬ ಗಂಧರ್ವನಿಂದ ಕೊಲ್ಲಲ್ಪಟ್ಟ.

ನೂರನೆಯ ಅಧ್ಯಾಯ

(ಶಂತನು-ಸತ್ಯವತಿಯರ ವಿವಾಹ, ಚಿತ್ರಾಂಗದನ ಉತ್ಪತ್ತಿ ಮತ್ತು ಮರಣ. ವಿಚಿತ್ರವೀರ್ಯ ರಾಜ್ಯಾಭಿಷೇಕ.)

ವೈಶಂಪಾಯನಃ

ಚೇದಿರಾಜಸುತಾಂ ಜ್ಞಾತ್ವಾ ದಾಶರಾಜೇನ ವರ್ಧಿತಾಮ್ ।
ವಿವಾಹಂ ಕಾರಯಾಮಾಸ ಶಾಸ್ತ್ರಮೃಷ್ಟೇನ ಕರ್ಮಣಾ ॥೧॥

ಸತ್ಯವತಿಯನ್ನು ಚೇದಿರಾಜನ ಮಗಳೆಂದೂ, ದಾಶರಾಜನಿಂದ ಸಾಕಲ್ಪಟ್ಟವಳೆಂದೂ ತಿಳಿದು ಭೀಷ್ಮರು ಶಾಸ್ತ್ರಶುದ್ಧವಾದ ರೀತಿಯಲ್ಲಿ ಅವರ ವಿವಾಹವನ್ನು ನಡೆಸಿದನು.

ತದಾ ವಿವಾಹೇ ನಿರ್ವೃತ್ತೇ ಸ ರಾಜಾ ಶಂತನುಸ್ತತಃ ।
ತಾಂ ಕನ್ಯಾಂ ರೂಪಸಂಪನ್ನಾಂ ಸ್ವಗೃಹೇ ಸನ್ನ್ಯವೇಶಯತ್ ॥೨॥

ವಿವಾಹವು ಮುಗಿಯುತ್ತಿರಲು ರಾಜನಾದ ಶಂತನುವು ರೂಪಸಂಪನ್ನಳಾದ ಆ ಕನ್ಯೆಯನ್ನು ತನ್ನ ಮನೆಗೆ ಕರೆದುಕೊಂಡು ಬಂದು ಇರಿಸಿದನು.

ತತಃ ಶಾಂತನವೋ ಧೀಮಾನ್ ಸತ್ಯವತ್ಯಾಮಜಾಯತ ।
ಪುತ್ರಶ್ಚಿತ್ರಾಂಗದೋ ನಾಮ ಬಲವೀರ್ಯಸಮನ್ವಿತಃ ॥೩॥

ಅನಂತರ ಶಂತನುವಿಗೆ ಮೇಧಾವಿಯೂ, ಬಲವೀರ್ಯಸಂಪನ್ನನೂ ಆದ 'ಚಿತ್ರಾಂಗದ' ಎಂಬ ಮಗನು ಸತ್ಯವತಿಯಲ್ಲಿ ಜನಿಸಿದನು.

ಅಥಾಽಪರಂ ಮಹೇಷ್ವಾಸಂ ಸತ್ಯವತ್ಯಾಂ ಪುನಃ ಸುತಮ್ ।
ವಿಚಿತ್ರವೀರ್ಯಂ ಧರ್ಮಾತ್ಮಾ ಜನಯಾಮಾಸ ವೀರ್ಯವಾನ್ ॥೪॥

ಅನಂತರ ವೀರ್ಯವಂತನಾದ ಶಂತನುವು ಸತ್ಯವತಿಯಲ್ಲಿ ಧರ್ಮಾತ್ಮನೂ, ಧನುರ್ವಿದ್ಯೆಯನ್ನು ಬಲ್ಲವನೂ ಆದ ವಿಚಿತ್ರವೀರ್ಯನೆಂಬ ಇನ್ನೊಬ್ಬ ಮಗನನ್ನು ಪಡೆದನು.

ಅಪ್ರಾಪ್ತವತಿ ತಸ್ಮಿಂಶ್ಚ ಯೌವನಂ ಭರತರ್ಷಭ ।
ಸ ರಾಜಾ ಶಂತನುರ್ಧೀಮಾನ್ ಕಾಲಧರ್ಮಮುಪೇಯಿವಾನ್ ॥೫॥

ಮಕ್ಕಳು ಇನ್ನು ಯೌವನಕ್ಕೆ ಬರುವುದಕ್ಕಿಂತ ಮುಂಚೆಯೇ ಮೇಧಾವಿಯಾದ ಶಂತನುವು ಕಾಲವಶನಾದನು.

ಸ್ವರ್ಯಾತೇ ಶಂತನೌ ಭೀಷ್ಮಶ್ಚಿತ್ರಾಂಗದಮರಿಂದಮಮ್ ।
ಸ್ಥಾಪಯಾಮಾಸ ವೈ ರಾಜ್ಯೇ ಸತ್ಯವತ್ಯಾ ಮತೇ ಸ್ಥಿತಾಃ ॥೬॥

ಶಂತನುವು ಸ್ವರ್ಗಸ್ಥನಾಗುತ್ತಿರಲು ಭೀಷ್ಮರು ಸತ್ಯವತಿಯ ಅಭಿಪ್ರಾಯದಂತೆ ಅರಿಂದಮನಾದ ಚಿತ್ರಾಂಗದನನ್ನು ರಾಜ್ಯದಲ್ಲಿ ಸ್ಥಾಪಿಸಿದನು.

ಸ ತು ಚಿತ್ರಾಂಗದೋ ಧೀಮಾನ್ ಸರ್ವಾಂಶ್ಚಿಕ್ಷೇಪ ಪಾರ್ಥಿವಾನ್ ।
ಮಾನುಷಂ ನಹಿ ಮೇನೇ ಸ ಕಂಚಿತ್ ಸದೃಶಮಾತ್ಮನಃ ॥೭॥

ಮೇಧಾವಿಯಾದ ಆ ಚಿತ್ರಾಂಗದನಾದರೂ ಎಲ್ಲಾ ರಾಜರನ್ನೂ ಸೋಲಿಸಿ, ಮನುಷ್ಯರಲ್ಲಿ ತನಗೆ ಸಮಾನರಾದವರು ಯಾರೂ ಇಲ್ಲವೆಂದು ಭಾವಿಸಿದನು.

ತಂ ಕ್ಷಿಪಂತಂ ಸುರಾಂಶ್ಚೈವ ಮನುಷ್ಯಾನುಸುರಾಂಸ್ತಥಾ ।
ಗಂಧರ್ವರಾಜೋ ಬಲವಾಂಸ್ತುಲ್ಯನಾಮಾಽಭ್ಯಯಾತ್ ತದಾ ॥

ದೇವತೆಗಳನ್ನೂ, ಮನುಷ್ಯರನ್ನೂ, ಅಸುರರನ್ನೂ ತಿರಸ್ಕರಿಸುತ್ತಿದ್ದ ಅವನನ್ನು ಕುರಿತು ಚಿತ್ರಾಂಗದನೆಂಬ ಅದೇ ಹೆಸರಿನ ಬಲಿಷ್ಠನಾದ ಗಂಧರ್ವರಾಜನು ಯುದ್ಧಕ್ಕೆ ಬಂದನು.

ಗಂಧರ್ವಃ

ತ್ವಂ ವೈ ಸದೃಶನಾಮಾಽಸಿ ಯುದ್ಧಂ ದೇಹಿ ನೃಪಾತ್ಮಜ ।
ನಾಮ ಚಾನ್ಯತ್ ಪ್ರಗೃಹ್ಣೀಷ್ವ ಯದಿ ಯುದ್ಧಂ ನ ದಾಸ್ಯಸಿ ॥೯॥

ತ್ವಯಾಽಹಂ ಯುದ್ಧಮಿಚ್ಛಾಮಿ ತ್ವತ್ಸಕಾಶಾತ್ ತು ನಾಮತಃ ।
ಆಗತೋಽಸ್ಮಿ ವೃಥಾಭಾಷ್ಯೋ ನ ಗಚ್ಛೇನ್ನಾಮತೋಽನ್ಯಥಾ ॥೧೦॥

ರಾಜಕುಮಾರನೇ, ನೀನು ನನ್ನ ಹೆಸರನ್ನೇ ಹೊಂದಿದ್ದೀಯೆ, ಯುದ್ಧವನ್ನು ಕೊಡು. ಇಲ್ಲದಿದ್ದರೆ ಬೇರೆ ಹೆಸರನ್ನು ಸ್ವೀಕರಿಸು. ಒಂದೇ ನಾಮದ ನಿಮಿತ್ತದಿಂದ ನಾನು ನಿನ್ನ

ಜೊತೆ ಯುದ್ಧವನ್ನು ಮಾಡಲು ಬಯಸಿ ಇಲ್ಲಿಗೆ ಬಂದಿದ್ದೇನೆ. ನನ್ನ ಹೆಸರಿನವನು ವ್ಯರ್ಥವಾಗಿ ಸಂಭಾಷಣೀಯನಾಗಬಾರದು.

ವೈಶಂಪಾಯನಃ

ಇತ್ಯುಕ್ತ್ವಾ ಗರ್ಜಮಾನೌ ತೌ ಹಿರಣ್ವತ್ತೀರಸಂಗತೌ ।
ತೇನಾಸ್ಯ ಯುದ್ಧಂ ಸುಮಹತ್ ಕುರುಕ್ಷೇತ್ರೇ ಬಭೂವ ಹ ॥೧೧॥

ಹೀಗೆ ಮಾತನಾಡಿ ಪರಸ್ಪರವಾಗಿ ಗರ್ಜಿಸುತ್ತಾ ಕುರುಕ್ಷೇತ್ರದಲ್ಲಿ ಹಿರಣ್ವತೀ ನದಿಯ ತೀರದಲ್ಲಿ ಅವರಿಬ್ಬರೂ ದೊಡ್ಡ ಯುದ್ಧವನ್ನು ಮಾಡಿದರು.

ನದ್ಯಾಃ ಕೂಲೇ ಹಿರಣ್ವತ್ಯಾಃ ಸಮಾತ್ತಿಸ್ರೋಽಭವದ್ ರಣಮ್ ।
ತಯೋರ್ಬಲವತೋಸ್ತತ್ರ ಗಂಧರ್ವಕುರುಮುಖ್ಯಯೋಃ ॥೧೧॥

ಬಲಿಷ್ಠರಾದ ಆ ಕುರುರಾಜನಿಗೂ ಮತ್ತು ಗಂಧರ್ವನಿಗೆ ಹಿರಣ್ವತಿ ನದಿಯ ತೀರದಲ್ಲಿ ಮೂರುವರ್ಷಗಳ ಕಾಲ ಯುದ್ಧವು ನಡೆಯಿತು.

ತಸ್ಮಿನ್ ವಿಮರ್ದೇ ತುಮುಲೇ ನಾನಾಶಸ್ತ್ರಸಮಾಕುಲೇ ।
ಮಾಯಾವಿಕೋಽವಧೀದ್ ವೀರಂ ಗಂಧರ್ವಃ ಕುರುಸತ್ತಮಮ್ ॥೧೨॥

ನಾನಾ ಶಸ್ತ್ರಗಳಿಂದ ನಿಬಿಡವಾದ ಆ ತೀವ್ರ ಸಂಘರ್ಷದಲ್ಲಿ ಅಧಿಕ ಸಾಮರ್ಥ್ಯವನ್ನು ಹೊಂದಿದ್ದ ಗಂಧರ್ವನು ವೀರನಾದ ಕುರುಶ್ರೇಷ್ಠನನ್ನು ಕೊಂದನು.

ಚಿತ್ರಾಂಗದಂ ಕುರುಶ್ರೇಷ್ಠಂ ವಿಚಿತ್ರಶರಕಾರ್ಮುಕಮ್ ।
ಚಿತ್ರಾಂಗದೋ ವಿನಿರ್ಜಿತ್ಯ ದಿವಮಾಚಕ್ರಮೇ ಪುನಃ ॥೧೩॥

ವಿಚಿತ್ರಶರಕಾರ್ಮುಕಗಳನ್ನು ಹೊಂದಿದ್ದ ಕುರುಶ್ರೇಷ್ಠನಾದ ಚಿತ್ರಾಂಗದನನ್ನು ಸೋಲಿಸಿ ಮತ್ತು ಸಂಹರಿಸಿ ಗಂಧರ್ವರಾಜನಾದ ಚಿತ್ರಾಂಗದನು ಅಂತರಿಕ್ಷದಲ್ಲಿ ಹೊರಟು ಹೋದನು.

ತಸ್ಮಿಂಸ್ತು ನೃಪಶಾರ್ದೂಲೇ ನಿಹತೇ ಭೂರಿವರ್ಚಸಿ ।
ಭೀಷ್ಮಃ ಶಾಂತನವೋ ಧೀಮಾನ್ ಪ್ರೇತಕಾರ್ಯಾಣ್ಯಕಾರಯತ್ ॥೧೪॥

ಮಹಾಪರಾಕ್ರಮಿಯಾದ ನೃಪಶಾರ್ದೂಲನಾದ ಚಿತ್ರಾಂಗದನು ಮರಣಹೊಂದುತ್ತಿರಲು, ಮೇಧಾವಿಯಾದ ಭೀಷ್ಮನು ಅವನಿಗೆ ಪ್ರೇತಕಾರ್ಯಗಳನ್ನು ಮಾಡಿಸಿದನು.

ವಿಚಿತ್ರವೀರ್ಯಂ ಚ ತದಾ ಬಾಲಮಪ್ರಾಪ್ತಯೌವನಮ್ ।
ಕುರುರಾಜ್ಯೇ ಮಹಾಬಾಹುರಭ್ಯಷಿಂಚದನಂತರಮ್ ॥೧೫॥

ಬಾಲನೂ, ಅಪ್ರಾಪ್ತಯೌವನನೂ ಆದ ವಿಚಿತ್ರವೀರ್ಯನನ್ನು ಆಗ ಭೀಷ್ಮನು ಕುರುರಾಜ್ಯದಲ್ಲಿ ಅಭಿಷೇಕವನ್ನು ಮಾಡಿದನು.

ವಿಚಿತ್ರವೀರ್ಯಸ್ತು ತದಾ ಭೀಷ್ಮಸ್ಯ ವಚನೇ ಸ್ಥಿತಃ ।
ಅನ್ವಶಾಸನ್ಮಹಾರಾಜ ಪಿತೃಪೈತಾಮಹಂ ಪದಮ್ ॥೧೬॥

ಎಲೈ ಮಹಾರಾಜನೇ, ಆಗ ವಿಚಿತ್ರವೀರ್ಯನು ಭೀಷ್ಮನ ವಚನಗಳನ್ನು ಪಾಲಿಸುತ್ತಾ ಪಿತೃಪಿತಾಮಹರಿಂದ ಬಂದ ರಾಜ್ಯವನ್ನು ಆಳಿದನು.

ಸ ಧರ್ಮಶಾಸ್ತ್ರಕುಶಲೋ ಭೀಷ್ಮಂ ಶಾಂತನವಂ ನೃಪಮ್ ।
ಪೂಜಯಾಮಾಸ ಪೂಜಾರ್ಹಂ ಸ ಚೈನಂ ಪ್ರತ್ಯಪಾಲಯತ್ ॥೧೭॥

ಧರ್ಮಶಾಸ್ತ್ರಕುಶಲನಾದ ಅವನು ಶಂತನುವಿನ ಮಗನಾದ ಮತ್ತು ಪೂಜಾರ್ಹನಾದ ಭೀಷ್ಮನನ್ನು ಪೂಜಿಸಿದನು. ಭೀಷ್ಮನೂ ಸಹ ಅವನ ರಕ್ಷಣೆಯನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ಅಷ್ಟಾಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ- ಅಧ್ಯಾಯ-೧೧

ವಿಚಿತ್ರವೀರ್ಯಂ ರಾಜಾನಾಂ ಕೃತ್ವಾ ಭೀಷ್ಮೋऽನ್ವಪಾಲಯತ್ ।
ಅಥ ಕಾಶಿಸುತಾಸ್ತಿಸ್ರಸ್ತದರ್ಥಂ ಭೀಷ್ಮ ಆಹರತ್ ।
ಅಂಬಾಮಪ್ಯಂಬಿಕಾನಾಮ್ನೀಂ ತಥೈವಾಂಬಾಲಿಕಾಂ ಪರಮ್ ॥೮೭॥

ಪಾಣಿಗ್ರಹಣಕಾಲೇ ತು ಬ್ರಹ್ಮದತ್ತಸ್ಯ ವೀರ್ಯವಾನ್ ।
ವಿಜಿತ್ಯ ತಂ ಸಾಲ್ವರಾಜಂ ಸಮೇತಾನ್ ಕ್ಷತ್ರಿಯಾನಪಿ ॥೮೮॥

ಬಳಿಕ ಭೀಷ್ಮ ವಿಚಿತ್ರವೀರ್ಯನನ್ನು ರಾಜನನ್ನಾಗಿ ಮಾಡಿ ರಾಜ್ಯವನ್ನು ನೋಡಿಕೊಂಡ. ಸಾಲ್ವ ಬ್ರಹ್ಮದತ್ತನ ವಿವಾಹಕಾಲದಲ್ಲಿ ಆ ಸಾಲ್ವರಾಜನನ್ನೂ ಅಲ್ಲಿ ಸೇರಿದ ಕ್ಷತ್ರಿಯರನ್ನೂ ಗೆದ್ದು ವಿಚಿತ್ರ ವೀರ್ಯನಿಗಾಗಿ ಅಂಬಾ ಅಂಬಾಲಿಕಾ ಮತ್ತು ಅಂಬಿಕಾ ಎಂಬ ಮೂವರು ಕಾಶಿರಾಜನ ಹೆಣ್ಣುಮಕ್ಕಳನ್ನು ತಂದ, ವೀರ್ಯಶಾಲಿ ಭೀಷ್ಮ.

ಅಂಬಿಕಾಂಬಾಲಿಕೇ ತತ್ರ ಸಂವಾದಂ ಚಕ್ರತುಃ ಶುಭೇ ।
ಅಂಬಾ ಸಾ ಭೀಷ್ಮಭಾರ್ಯೈವ ಪೂರ್ವದೇಹೇ ತು ನೈಚ್ಛತ ॥೮೯॥

ಅವರಲ್ಲಿ ಪುಣ್ಯವತಿಯರಾದ ಅಂಬಿಕೆ ಮತ್ತು ಅಂಬಾಲಿಕೆಯರು ಒಪ್ಪಿದರು. ಅಂಬೆ ಪೂರ್ವಜನ್ಮದಲ್ಲಿ ಭೀಷ್ಮನ ಭಾರ್ಯೆ. ಅದರಿಂದ ಅವಳು ಮಾತ್ರ ಒಪ್ಪಲಿಲ್ಲ.

ಶಾಪಾದ್ಧಿರಣ್ಯಗರ್ಭಸ್ಯ ಸಾಲ್ವಕಾಮಾಹಮಿತ್ಯಪಿ ।
ಉವಾಚ ತಾಂ ಸ ತತ್ಯಾಜ ಸಾಗಮತ್ ಸಾಲ್ವಮೇವ ಚ ॥೯೦॥

ಬ್ರಹ್ಮನ ಶಾಪದಿಂದ ಅಂಬೆ ತಾನು ಸಾಲ್ವನನ್ನು ಬಯಸಿದವಳೆಂದು ಹೇಳಿಕೊಂಡಳು. ಭೀಷ್ಮ ಅವಳನ್ನು ಬಿಟ್ಟ. ಅವಳು ಸಾಲ್ವನ ಬಳಿಗೆ ಹೋದಳು.

ತೇನಾಪಿ ಸಂಪರಿತ್ಯಕ್ತಾ ಪರಾಮೃಷ್ಟೇತಿ ಸಾ ಪುನಃ ।
ಭೀಷ್ಮಮಾಪ ಸ ನಾಗೃಹ್ಣಾತ್ ಪ್ರಯಯೌ ಸಾಪಿ ಭಾರ್ಗವಮ್ ॥೯೧॥

ಪರಪುರುಷರಿಂದ ಸ್ಪೃಷ್ಟಳಾದಳೆಂದು ಅಂಬೆ ಸಾಲ್ವನಿಂದಲೂ ಪರಿತ್ಯಕ್ತಳಾದಳು. ಅವಳು ಪುನಃ ಭೀಷ್ಮನ ಬಳಿಗೆ ಬಂದಳು. ಅವನು ಸ್ವೀಕರಿಸಲಿಲ್ಲ. ಅವಳು ಪರಶುರಾಮನ ಬಳಿಗೆ ಹೋದಳು.

ಭ್ರಾತುರ್ವಿವಾಹಯಾಮಾಸ ಸೋಽಂಬಿಕಾಂಬಾಲಿಕೇ ತತಃ ।
ಭೀಷ್ಮಾಯ ತು ಯಶೋ ದಾತುಂ ಯುಯುಧೇ ತೇನ ಭಾರ್ಗವಃ ॥

ಬಳಿಕ ಭೀಷ್ಮ ಅಂಬಿಕೆ ಅಂಬಾಲಿಕೆಯರನ್ನು ತಮ್ಮನಾದ ವಿಚಿತ್ರ ವೀರ್ಯನಿಗೆ ಮದುವೆ ಮಾಡಿಸಿದ. ಭೀಷ್ಮನಿಗೆ ಯಶಸ್ಸನ್ನು ನೀಡುವುದಕ್ಕಾಗಿ ಪರಶುರಾಮ ಅವನೊಡನೆ ಯುದ್ಧಮಾಡಿದ.

ಅನಂತ ಶಕ್ತಿರಪಿ ಸ ನ ಭೀಷ್ಮಂ ನಿಜಘಾನ ಹ ।
ನ ಚಾಂಬಾಂ ಗ್ರಾಹಯಾಮಾಸ ಭೀಷ್ಮಕಾರುಣ್ಯಯಂತ್ರಿತಃ ॥೯೩॥

ಅನಂತಶಕ್ತಿ ಉಳ್ಳವನಾದರೂ ಪರಶುರಾಮ ಭೀಷ್ಮನನ್ನು ಕೊಲ್ಲಲಿಲ್ಲ. ಅಂಬೆಯನ್ನು ಸ್ವೀಕರಿಸುವಂತೆಯೂ ಮಾಡಲಿಲ್ಲ. ಏಕೆಂದರೆ ಅವನು ಭೀಷ್ಮನ ಮೇಲಿನ ಕರುಣೆಯಿಂದ ಬದ್ಧನಾಗಿದ್ದ.

ಅನಂತಶಕ್ತಿಃ ಸಕಲಾಂತರಾತ್ಮಾ ಯಃ
ಸರ್ವವಿತ್ ಸರ್ವವಶೀ ಚ ಸರ್ವಜಿತ್ ।
ನ ಯತ್ಸಮೋಽನ್ಯೋಽಸ್ತಿ ಕಥಂ ಚ
ಕುತ್ರಚಿತ್ ಕಥಂ ಹ್ಯಶಕ್ತಿಃ ಪರಮಸ್ಯ ತಸ್ಯ ॥೯೪॥

ಪರಶುರಾಮ ಅಪರಿಮಿತಶಕ್ತಿ ಉಳ್ಳವ, ಸರ್ವಾಂತರ್ಯಾಮಿ, ಸರ್ವಜ್ಞ, ಸರ್ವಸ್ವಾಮಿ, ಸರ್ವಜಯಿ. ಅವನಿಗೆ ಸಮಾನನಾದವನಿನ್ನೊಬ್ಬ ಎಲ್ಲಿಯೂ ಯಾವ ರೀತಿಯಿಂದಲೂ ಸಿಗಲಾರ. ಅಂಥ ಸರ್ವೋತ್ತಮನಿಗೆ ಅಶಕ್ತಿ ಎಂದರೆ ಹೇಗೆ?

ಭೀಷ್ಮಂ ಸ್ವಭಕ್ತಂ ಯಶಸಾಭಿಪೂರಯನ್
ವಿಮೋಹಯನ್ನಾಸುರಾಂಶ್ಚೈವ ರಾಮಃ ।
ಜಿತ್ವೈವ ಭೀಷ್ಮಂ ನ ಜಘಾನ ದೇವೋ
ವಾಚಂ ಚ ಸತ್ಯಾಮಕರೋತ್ ಸ ತಸ್ಯ ॥೯೫॥

ತನ್ನ ಭಕ್ತನಾದ ಭೀಷ್ಮನನ್ನು ಯಶಸ್ಸಿನಿಂದ ತುಂಬಿಸುವುದಕ್ಕಾಗಿ ಮತ್ತು ಅಸುರರನ್ನು ಮೋಹಗೊಳಿಸುವುದಕ್ಕಾಗಿ ಭೀಷ್ಮನನ್ನು ವಸ್ತುತಃ ಗೆದ್ದೇ ಕೊಲ್ಲಲಿಲ್ಲ. ಅವನ ಪ್ರತಿಜ್ಞೆಯನ್ನೆ ಸತ್ಯವಾಗಿಸಿದ.

ವಿದ್ಧವನ್ಮುಗ್ಧವಚ್ಚೈವ ಕೇಶವೋ ವೇದನಾರ್ತವತ್ ।
ದರ್ಶಯನ್ನಪಿ ಮೋಹಾಯ ನೈವ ವಿಷ್ಣುಸ್ತಥಾ ಭವೇತ್ ॥೯೬॥

'ಕೇಶವ ಶಸ್ತ್ರದಿಂದ ಹೊಡೆಸಿಕೊಂಡವನಂತೆ ಅಜ್ಞನಂತೆ ವೇದನೆಯಿಂದ ಬಳಲಿದವನಂತೆ ಅಸುರರಿಗೆ ಮೋಹ ಉಂಟು ಮಾಡಲು ತೋರಿಸಿಕೊಂಡರೂ ವಸ್ತುತಃ ಹಾಗೆ ಆಗಿರುವುದಿಲ್ಲ'.

ಏವಮಾದಿ ಪುರಾಣೋತ್ಥ ವಾಕ್ಯಾದ್ ರಾಮಃ ಸದಾ ಜಯೀ ।
ಯಶೋ ಭೀಷ್ಮಸ್ಯ ದತ್ವಾ ತು ಸೋಂಬಾಂ ಚ ಶರಣಾಗತಾಮ್ ॥೯೭॥

ಉನ್ಮುಚ್ಯ ಭರ್ತೃದ್ವೇಷೋತ್ಥತ್ ಪಾಪಾತ್ ತೇನಾಶ್ವಯೋಜಯತ್ ।
ಅನಂತರಂ ಶಿಖಿಂಡಿತ್ವಾತ್ ತದಾ ಸಾ ಶಾಂಕರಂ ತಪಃ ॥೯೮॥

ಭೀಷ್ಮಸ್ಯ ನಿಧನಾರ್ಥಾಯ ಪುಂಸ್ತ್ವಾರ್ಥ ಚ ಚಕಾರ ಹ ।
ಭೀಷ್ಮೋ ಯಥಾ ತ್ವಾಂ ಗೃಹ್ಣೀಯಾತ್ ತಥಾ ಕುರ್ಯಾಮಿತೀರಿತಮ್ ।
ರಾಮೇಣ ಸತ್ಯಂ ತಚ್ಚಕ್ರೇ ಭೀಷ್ಮೇ ದೇಹಾಂತರಂ ಗತೇ ॥೯೯॥

ಇದೇ ಮೊದಲಾದ ಪುರಾಣ ವಾಕ್ಯಗಳಿರುವುದರಿಂದ ಪರಶುರಾಮ ಸದಾ ವಿಜಯಿಯೇ. ಭೀಷ್ಮನಿಗೆ ಯಶಸ್ಸನ್ನು ತಂದುಕೊಟ್ಟು, ಶರಣಾಗತಳಾದ ಅಂಬೆಗೂ ಅವಳ ಪತಿದ್ರೋಹದಿಂದ ಉಂಟಾಗುವ ಪಾಪದಿಂದ ಮುಕ್ತಿ ನೀಡಿ, ಅವಳ ಶಿಖಂಡಿ ಜನ್ಮ ಕಳೆದೊಡೆನೆಯೆ ಪತಿಯೊಡನೆ ಸಮಾಗಮ ಮಾಡಿಸಿದ. ಅಂಬೆ ಪರಶುರಾಮನ ಬಳಿಯಿಂದ ಹಿಂತಿರುಗಿ ಬಂದು ಭೀಷ್ಮನನ್ನು ಕೊಲ್ಲಲು ಮತ್ತು ಅದಕ್ಕಾಗಿ ಪುರುಷತ್ವವನ್ನು ಹೊಂದಲು ಆ ಶಿವನನ್ನು ಕುರಿತು ತಪಸ್ಸು ಮಾಡಿದಳು. ನಿನ್ನನ್ನು ಭೀಷ್ಮ ಪರಿಗ್ರಹಿಸುವಂತೆ ಮಾಡುತ್ತೇನೆ ಎಂದು ಪರಶುರಾಮ ತಾನು ಕೊಟ್ಟ ಮಾತನ್ನು ಭೀಷ್ಮ ಮೂಲರೂಪದಲ್ಲಿ ವಸುಶರೀರ ಪಡೆದಾಗ ನಡೆಸಿಕೊಟ್ಟ.

★ ★ ★ ★

ನೂರ ಒಂದನೆಯ ಅಧ್ಯಾಯ

(ಭೀಷ್ಮರ ದಿಗ್ವಿಜಯ, ಕಾಶೀರಾಜನ ಕನ್ಯೆಯರ ಆಹರಣ, ಅಂಬೆಯ ಪ್ರಕರಣ.)

ವೈಶಂಪಾಯನಃ

ಹತೇ ಚಿತ್ರಾಂಗದೇ ಭೀಷ್ಮೋ ಬಾಲೇ ಭ್ರಾತರಿ ಚಾನಘೇ ।
ಪಾಲಯಾಮಾಸ ತದ್ರಾಜ್ಯಂ ಸತ್ಯವತ್ಯಾ ಮತೇ ಸ್ಥಿತಃ ॥೧॥

ತನ್ನ ತಮ್ಮನಾದ ಚಿತ್ರಾಂಗದನು ಬಾಲಕನಾಗಿಯೇ ಮೃತನಾದಾಗ, ಭೀಷ್ಮನು ಸತ್ಯವತಿಯ ಅಭಿಪ್ರಾಯದಂತೆ ಆ ರಾಜ್ಯವನ್ನು ಪಾಲಿಸಿದನು.

ತಥಾ ವಿಚಿತ್ರವೀರ್ಯಂ ತು ವರ್ತಮಾನಂ ಸುಖೇऽತುಲೇ ।
ಸಂಪ್ರಾಪ್ತಯೌವನಂ ಪಶ್ಯನ್ ಭ್ರಾತರಂ ಧೀಮತಾಂ ವರಃ ।
ಭೀಷ್ಮೋ ವಿಚಿತ್ರವೀರ್ಯಸ್ಯ ವಿವಾಹಾಯೋಪಚಕ್ರಮೇ ॥೨॥

ಹಾಗೆಯೇ ವಿಚಿತ್ರವೀರ್ಯನು ಅತುಲಸುಖದಲ್ಲಿ ಬೆಳೆದು ಯೌವನವನ್ನು ಹೊಂದಿರುವುದನ್ನು ನೋಡಿ, ಧೀಮಂತರಲ್ಲಿ ಶ್ರೇಷ್ಠನಾದ ಭೀಷ್ಮನು ತಮ್ಮನಾದ ವಿಚಿತ್ರವೀರ್ಯನಿಗೆ ವಿವಾಹವನ್ನು ಮಾಡಲು ಉಪಕ್ರಮಿಸಿದನು.

ತತಃ ಕಾಶೀಪತೇರ್ಭೀಷ್ಮಃ ಕನ್ಯಾಸ್ತಿಸ್ರೋऽಪ್ಸರಃ ಸಮಾಃ ।
ಶುಶ್ರಾವ ಸಹಿತಾ ರಾಜನ್ ವೃಣ್ವಂತೀರ್ವೈ ಸ್ವಯಂವರೇ ॥೩॥

ಆ ಸಮಯಕ್ಕೆ ಭೀಷ್ಮನು ಕಾಶೀರಾಜನ ಮೂರು ಮಕ್ಕಳು, ಅಪ್ಸರೆಯಂತಿರುವವರು ಸ್ವಯಂವರದಲ್ಲಿ ರಥಿಗಳನ್ನು ವರಿಸುತ್ತಾರೆಂದು ತಿಳಿದನು.

ತತಃ ಸ ರಥಿನಾಂ ಶ್ರೇಷ್ಠೋ ರಥೇನೈಕೇನ ಧರ್ಮಭೃತ್ ।
ಜಗಾಮಾನುಮತೇ ಮಾತುಃ ಪುರೀಂ ವಾರಾಣಸೀಂ ಪ್ರತಿ ॥೪॥

ರಥಿಗಳಲ್ಲಿ ಶ್ರೇಷ್ಠನಾದ ಧರ್ಮಿಷ್ಠನಾದ ಭೀಷ್ಮನು ಒಂದು ರಥವನ್ನು ತೆಗೆದುಕೊಂಡು, ತಾಯಿಯ ಅನುಮತಿಯನ್ನು ಪಡೆದು, ವಾರಾಣಸಿಗೆ ಹೋದನು.

ತತ್ರ ರಾಜ್ಞಃ ಸಮುದಿತಾನ್ ಸರ್ವತಃ ಸಮುಪಾಗತಾನ್ ।
ದದರ್ಶ ಕನ್ಯಾಸ್ತಾಶ್ಚೈವ ಭೀಷ್ಮಃ ಶಂತನುನಂದನಃ ॥೫॥

ಅಲ್ಲಿ ಸ್ವಯಂವರಕ್ಕೆ ಎಲ್ಲ ಕಡೆಗಳಿಂದಲೂ ಸುಮುದ್ಯುಕ್ತರಾಗಿ ಬಂದ ರಾಜರನ್ನೂ, ಆ ಮೂರು ಕನ್ಯೆಯರನ್ನೂ, ಶಂತನುವಿನ ಮಗನಾದ ಭೀಷ್ಮನು ನೋಡಿದನು.

ತಾಸಾಂ ಕಾಮೇನ ಸಮ್ಮತ್ತಾಃ ಸಹಿತಾಃ ಕಾಶಿಕೋಸಲಾಃ ।
ವಂಗಾಃ ಪುಂಡ್ರಾಃ ಕಲಿಂಗಾಶ್ಚ ತೇ ಜಗ್ಮುಸ್ತಾಂ ಪುರೀಂ ಪ್ರತಿ ॥೬॥

ಆ ಕನ್ಯೆಯರ ಮೇಲಿನ ಕಾಮದಿಂದ ಮತ್ತರಾದ ಕಾಶಿ, ಕೋಸಲರಾಜರು, ವಂಗರಾಜರು, ಪುಂಡ್ರರಾಜರು ಮತ್ತು ಕಳಿಂಗರಾಜರು ಎಲ್ಲರು ಆ ಪಟ್ಟಣಕ್ಕೆ ಬಂದರು.

ಕೀರ್ತ್ಯಮಾನೇಷು ರಾಜ್ಞಾಂ ತು ನಾಮಧೇಯೇಷು ಭಾರತ ।
ಏಕಾಕಿನಂ ತದಾ ಭೀಷ್ಮಂ ವೃದ್ಧಂ ಶಂತನುನಂದನಮ್ ॥೭॥

ಸೋದ್ವೇಗಾ ಇವ ತಂ ದೃಷ್ಟ್ವಾ ಕನ್ಯಾಃ ಪರಮಶೋಭನಾಃ ।
ಅಪಾಕ್ರಮಂತ ತಾಃ ಸರ್ವಾ ವೃದ್ಧ ಇತ್ಯೇವ ಚಿಂತಯಾ ॥೮॥

ಎಲೈ ಭಾರತನೇ, ಸ್ವಯಂವರಕ್ಕೆ ಬಂದ, ರಾಜರುಗಳ ಹೆಸರನ್ನು ಘೋಷಿಸುವ ಸಮಯದಲ್ಲಿ ಶಂತನುನಂದನನಾದ ವೃದ್ಧನಾದ ಭೀಷ್ಮನು ಏಕಾಕಿಯಾಗಿ ಪ್ರವೇಶಿಸಿದನು. ಪರಮಸುಂದರಿಯರಾದ ಆ ಕನ್ಯೆಯರು ಅವನನ್ನು ನೋಡಿ, ಉದ್ವಿಗ್ನರಾಗಿ ವೃದ್ಧರೆಂಬ ಚಿಂತೆಯಿಂದ ಸ್ವಯಂವರ ಮಂಟಪದಿಂದ ಹಿಂದೆ ಸರಿದರು.

ವೃದ್ಧಃ ಪರಮಧರ್ಮಾತ್ಮಾ ವಲೀಪಲಿತದಾರುಣಃ ।
ಕಿಂ ಕಾರಣಮಿಹಾಯಾತೋ ನಿರ್ಲಜ್ಜೋ ಭರತರ್ಷಭಃ ॥೯॥

ಮಿಥ್ಯಾವೃತ್ತೋ ಹಿ ಲೋಕೇಷು ಕಿಂ ವದಿಷ್ಯತಿ ಭಾರತಮ್ ।
ಬ್ರಹ್ಮಚಾರೀತಿ ಭೀಷ್ಮೋ ಹಿ ವೃಥೈವ ಪ್ರಥಿತೋ ಭುವಿ ॥೧೦॥

ವೃದ್ಧನೂ, ಪರಮ ಧರ್ಮಿಷ್ಠನೂ ಸುಕ್ಕುಗಟ್ಟಿದ ದೇಹ ಹಣ್ಣಾದ ತಲೆ ಇವುಗಳಿಂದ ಉಗ್ರವಾಗಿ ಕಾಣುವವನೂ, ಆದ ಭರತರ್ಷಭನು ನಿರ್ಲಜ್ಜನಾಗಿ ಇಲ್ಲಿಗೆ ಯಾವ ಉದ್ದೇಶದಿಂದ ಬಂದಿದ್ದಾನೆ. ಮಿಥ್ಯಾಚಾರವುಳ್ಳವನಾಗಿ ಅವನು ತನ್ನ ತಮ್ಮನಿಗೆ ಏನನ್ನು ಹೇಳುವನು. ಭೀಷ್ಮರು ಬ್ರಹ್ಮಚಾರಿಯೆಂಬ ಪ್ರಸಿದ್ಧಿಯು ಭೂಮಿಯಲ್ಲಿ ವ್ಯರ್ಥವಾಗಿದೆ.

ಇತ್ಯೇವಂ ಪ್ರಬ್ರುವಂತಸ್ತೇ ಹಸಂತಿ ಸ್ಮ ನೃಪೋತ್ತಮಾಃ ।
ಕ್ಷತ್ರಿಯಾಣಾಂ ವಚಃ ಶ್ರುತ್ವಾ ಭೀಷ್ಮಶ್ಚುಕ್ರೋಧ ಭಾರತ ।
ಭೀಷ್ಮಸ್ತದಾ ಸ್ವಯಂಕನ್ಯಾ ವರಯಾಮಾಸ ತಾಃ ಪ್ರಭುಃ ॥೧೧॥

ಆ ರಾಜರುಗಳು ಹೀಗೆ ಮಾತನಾಡುತ್ತಾ ನಗಲು ಪ್ರಾರಂಭಿಸಿದರು. ಎಲೈ ಭಾರತನೇ, ಕ್ಷತ್ರಿಯರ ಮಾತನ್ನು ಕೇಳಿ ಭೀಷ್ಮನು ಕೋಪಗೊಂಡನು. ತಮ್ಮನ ಸಲುವಾಗಿ ಭೀಷ್ಮನು ತಾನೇ ಕನ್ಯೆಯರನ್ನು ವರಿಸಿದನು.

ಉವಾಚ ಚ ಮಹೀಪಾಲಾನ್ ರಾಜನ್ ಜಲದನಿಸ್ವನಃ ।
ರಥಮಾರೋಪ್ಯ ತಾಃ ಕನ್ಯಾ ಭೀಷ್ಮೋ ಭೀಮಪರಾಕ್ರಮಃ ॥೧೨॥

ಎಲೈ ರಾಜನೇ, ಭೀಮಪರಾಕ್ರಮನಾದ ಭೀಷ್ಮನು ಆ ಕನ್ಯೆಯರನ್ನು ರಥದಲ್ಲಿ ಕೂಡಿಸಿಕೊಂಡು ಮೇಘದಂತೆ ಗಂಭೀರವಾದ ವಾಣಿಯಿಂದ ಆ ರಾಜರನ್ನು ಕುರಿತು ಮಾತನಾಡಿದನು.

ಆಹೂಯ ದಾನಂ ಕನ್ಯಾನಾಂ ಗುಣವದ್ಭ್ಯಃ ಸ್ಮೃತಂ ಬುಧೈಃ ।
ಅಲಂಕೃತ್ಯ ಯಥಾಶಕ್ತಿ ಪ್ರದಾಯ ಚ ಧನಾನ್ಯುತ ।
ಪ್ರಯಚ್ಛಂತ್ಯಪರೇ ಕನ್ಯಾಂ ಮಿಥುನೇನ ಗವಾಮಪಿ ॥೧೩॥

ವರನನ್ನು ಆಹ್ವಾನ ಮಾಡಿ ಕನ್ಯೆಯನ್ನು ಗುಣವಂತರಿಗೆ ದಾನವನ್ನು ಮಾಡುವುದು ಶ್ರೇಷ್ಠವೆಂದು ಬುಧರು ಹೇಳುತ್ತಾರೆ. ಇನ್ನು ಕೆಲವರು ಕನ್ಯೆಯನ್ನು ಅಲಂಕಾರವನ್ನು ಮಾಡಿ ಯಥಾಶಕ್ತಿ ಧನವನ್ನು ಕೊಟ್ಟು ವಿವಾಹವನ್ನು ಮಾಡುತ್ತಾರೆ.

ವಿತ್ತೇನ ಕಥಿತೇನಾನ್ಯೇ ಬಲಾದನ್ಯೇಽನುಮಾನ್ಯ ಚ ।
ಪ್ರಮತ್ತಾಮುಪಯಾಂತ್ಯನ್ಯೇ ಸ್ವಯಂ ಗೃಹ್ಣಂತಿ ಚಾಪರೇ ॥೧೪॥

ಇನ್ನು ಕೆಲವರು ಗೋಮಿಥುನವನ್ನು ಕೊಟ್ಟು ಕನ್ಯೆಯನ್ನು ವಿವಾಹ ಮಾಡಿಕೊಳ್ಳುತ್ತಾರೆ. ಇನ್ನು ಕೆಲವರು ಕನ್ಯಾಪಿತೃಗಳು ಕೇಳುವ ಧನವನ್ನು ಕೊಟ್ಟು ವಿವಾಹ ಮಾಡಿಕೊಳ್ಳುತ್ತಾರೆ. ಇನ್ನು ಕೆಲವರು ಬಲಾತ್ಕಾರದಿಂದಲೂ, ಇನ್ನು ಕೆಲವರು ಕನ್ಯೆಯ ಅನುಮತಿಯಿಂದಲೂ ವಿವಾಹವಾಗುತ್ತಾರೆ. ಕೆಲವರು ಪ್ರಮತ್ತಳಾದ ಕನ್ಯೆಯನ್ನು ಸ್ವೀಕರಿಸುತ್ತಾರೆ. ಇನ್ನು ಕೆಲವರು ತಾವಾಗಿಯೇ ಕನ್ಯೆಯನ್ನು ತೆಗೆದುಕೊಂಡು ಹೋಗುತ್ತಾರೆ.

ಅಷ್ಟಮಂ ತು ಮಿಥೋವೃತ್ತಂ ವಿವಾಹಂ ಕವಿಭಿಃ ಸ್ಮೃತಮ್ ।
ಸ್ವಯಂವರಂ ತು ರಾಜನ್ಯಾಃ ಪ್ರಶಂಸಂತ್ಯುಪಯಾಂತಿ ಚ ॥೧೫॥

ಎಂಟನೆಯ ವಿವಾಹ ಪದ್ಧತಿಯೆಂದರೆ ಪರಸ್ಪರ ಸಮ್ಮತಿಯಿಂದ ವಿವಾಹವೆಂದು ಜ್ಞಾನಿಗಳು ಹೇಳುತ್ತಾರೆ. ರಾಜರಿಗೆ ಸ್ವಯಂವರವೇ ಪ್ರಶಸ್ತವಾದದ್ದು. ಅದಕ್ಕಾಗಿ ಅವರು ಬಂದು ಸೇರುತ್ತಾರೆ.

ಸಂಪ್ರಮಥ್ಯ ಹೃತಾಮಾಹುರ್ಜ್ಯಾಯಸೀಂ ಧರ್ಮಚಾರಿಣಃ ।
ತಾ ಇಮಾಃ ಪೃಥಿವೀಪಾಲಾ ಜಿಹೀರ್ಷಾಮಿ ಪ್ರಸಂಹ್ಯ ವಃ ॥೧೬॥

ಬಲದಿಂದ ಹರಣ ಮಾಡಿದ ಕನ್ಯೆಯು ಅದಕ್ಕಿಂತ ಶ್ರೇಷ್ಠಳಾದವಳು ಎಂದು ಧರ್ಮಿಷ್ಠರು ಹೇಳುತ್ತಾರೆ. ಆದ್ದರಿಂದ ಎಲೈ ರಾಜರೇ, ನಿಮ್ಮನ್ನು ಧಿಕ್ಕರಿಸಿ, ನಾನು ಈ ಕನ್ಯೆಯರನ್ನು ಹರಣ ಮಾಡುತ್ತಿದ್ದೇನೆ.

ತೇ ಯತಧ್ವಂ ಯಥಾಕಾಮಂ ವಿಜಯಾಯೇತರಾಯ ವಾ ।
ಸ್ಥಿತೋಽಹಂ ಪೃಥಿವೀಪಾಲಾ ಯುದ್ಧಾಯ ಕೃತನಿಶ್ಚಯಃ ॥೧೭॥

ಆದರೆ ನೀವು ಜಯಕ್ಕಾಗಲೀ ಅಥವಾ ಪರಾಜಯಕ್ಕಾಗಲೀ, ಸಿದ್ಧರಾಗಿ. ಎಲೈ ರಾಜರೇ, ನಾನು ಯುದ್ಧ ಮಾಡುವುದೆಂದು ನಿಶ್ಚಯಿಸಿ ನಿಂತಿದ್ದೇನೆ.

ವೈಶಂಪಾಯನಃ

ಏವಮುಕ್ತ್ವಾ ಮಹೀಪಾಲಾನ್ ಕಾಶಿರಾಜಂ ಚ ವೀರ್ಯವಾನ್ ।
ಸರ್ವಾಃ ಕನ್ಯಾಃ ಸ ಕೌರವ್ಯೋ ರಥಮಾರೋಪಯತ್ ಸ್ವಕಮ್ ।
ಆಮಂತ್ರ್ಯ ಪ್ರಯಯೌ ಕ್ಷಿಪ್ರಂ ಭೀಷ್ಮೋ ವೈ ಜನಮೇಜಯ ॥೧೮॥

ಬಲಿಷ್ಠನಾದ ಭೀಷ್ಮನು ಕಾಶೀರಾಜನಿಗೂ ಮತ್ತು ಬೇರೆ ರಾಜರಿಗೂ ಹೀಗೆ ಹೇಳಿ ಕುರುವಂಶದಲ್ಲಿ ಹುಟ್ಟಿದ ಅವನು ಮೂರು ಕನ್ಯೆಯರನ್ನೂ ತನ್ನ ರಥದಲ್ಲಿ ಏರಿಸಿದನು. ಜನಮೇಜಯನೇ, ನಾನು ಹೊರಡುತ್ತೇನೆ ಎಂದು ಹೇಳಿ ಭೀಷ್ಮನು ಕ್ಷಿಪ್ರವಾಗಿ ಅಲ್ಲಿಂದ ಹೊರಟನು.

ತತಸ್ತೇ ಪಾರ್ಥಿವಾಃ ಸರ್ವೇ ಸಮುತ್ಪೇತುರಮರ್ಷಿತಾಃ ।
ಸಂಸ್ಪೃಶಂತಃ ಸ್ವಕಾನ್ ಬಾಹೂನ್ ಸಂದಶ್ಯ ದಶನಚ್ಛದಾನ್ ॥೧೯॥

ಆಗ ರಾಜರೆಲ್ಲರೂ ತಮ್ಮ ತಮ್ಮ ಬಾಹುಗಳನ್ನು ಮುಟ್ಟಿಕೊಂಡು ಹಲ್ಲುಗಳನ್ನು ಕಡಿಯುತ್ತಾ ಸಿಟ್ಟಿನಿಂದ ಎದ್ದರು.

ತೇಷಾಮಾಭರಣಾನ್ಯಾಶು ಕವಚಾನಿ ಮಹಾಂತಿ ಚ ।
ಆಮುಂಚತಾಂ ಚ ವರ್ಮಾಣಿ ಸಂಭ್ರಮಃ ಸಮಪದ್ಯತ ॥೨೦॥

ತಮ್ಮ ತಮ್ಮ ಕವಚಗಳನ್ನು ಇಟ್ಟುಕೊಂಡು ಆಭರಣಗಳನ್ನು ಹಾಕಿಕೊಳ್ಳುವ ರಾಜರಿಗೆ ಗಡಿಬಿಡಿಯುಂಟಾಯಿತು.

ತಾರಾಣಾಮಿವ ಸಂಪಾತೋ ಬಭೂವ ಜನಮೇಜಯ ।
ಭೂಷಣಾನಾಂ ಚ ಹೈಮಾನಾಂ ಕವಚಾನಾಂ ಚ ಸರ್ವಶಃ ॥೨೧॥

ಚಿನ್ನದ ಭೂಷಣಗಳನ್ನು, ಕವಚಗಳನ್ನು ಅವರು ತೊಡುವಾಗ ಜನಮೇಜಯನೇ, ನಕ್ಷತ್ರವು ಒಂದಕ್ಕೊಂದು ಸೇರಿದಂತೆ ಕಾಣುತ್ತಿತ್ತು.

ವರ್ಮಭಿರ್ಭೂಷಣೈರ್ಮುಖ್ಯೈಃ ಪ್ರಜ್ವಲದ್ಭಿಃ ಸಮಂತತಃ ।
ಸಕ್ರೋಧಾಮರ್ಷಜಿಹ್ವಾಸ್ಯಾಃ ಕಷಂತೋ ದಶನಾಂಸ್ತದಾ ।
ಸೂತೋಪಕ್ಲೃಪ್ತಾನ್ ಸುದೃಢಾನ್ ಸತತೋದ್ಯತಧೂರ್ವಹಾನ್ ॥೨೨॥

ರಥಾನಾಸ್ಥಾಯ ತೇ ವೀರಾಃ ಸರ್ವೋಪಕರಣಾನ್ವಿತಾಃ ।
ಪ್ರಯಾಂತಮೇಕಂ ಕೌರವ್ಯಮನುಸಸ್ರುರುದಾಯುಧಾಃ ॥೨೩॥

ಎಲ್ಲ ಕಡೆಯಲ್ಲಿಯೂ ಹೊಳೆಯುವ ಕವಚಗಳನ್ನು, ಭೂಷಣಗಳನ್ನು ಧರಿಸಿ, ಕ್ರೋಧಾಮರ್ಷದಿಂದ ಕೂಡಿದ, ನಾಲಿಗೆಯಿಂದ ಕೂಡಿದ ಮುಖವುಳ್ಳವರಾಗಿ, ತಮ್ಮ ಹಲ್ಲುಗಳನ್ನು ಕಡಿಯುತ್ತಾ, ಸೂತರು ಸಿದ್ಧಪಡಿಸಿದ, ಸತತವಾಗಿ ಯುದ್ಧದ ಸಿದ್ಧತೆಯನ್ನು ಹೊಂದಿದ್ದ. ತಮ್ಮ ಭವ್ಯವಾದ ರಥಗಳನ್ನು ಏರಿ ಆ ವೀರರು ಸರ್ವೋಪಕರಣಗಳಿಂದ ಕೂಡಿದವರಾಗಿ ತಮ್ಮ ಆಯುಧಗಳನ್ನು ತೆಗೆದುಕೊಂಡು ಮುಂದೆ ಹೋಗುತ್ತಿದ್ದ ಭೀಷ್ಮನನ್ನು ಹಿಂಬಾಲಿಸಿದರು.

ತತಃ ಸಮಭವದ್ ಯುದ್ಧಂ ತೇಷಾಂ ತಸ್ಯ ಚ ಭಾರತ ।
ಏಕಸ್ಯ ಚ ಬಹೂನಾಂ ಚ ತುಮುಲಂ ರೋಮಹರ್ಷಣಮ್ ॥೨೪॥

ಅನಂತರ ಅವರಿಬ್ಬರಿಗೂ ಎಂದರೆ ಒಬ್ಬ ಭೀಷ್ಮನಿಗೂ ಮತ್ತು ಅನೇಕರಿಗೂ ರೋಮಾಂಚಕಾರಿಯಾದ ಯುದ್ಧವು ನಡೆಯಿತು.

ತೇ ತ್ವಿಷೂನ್ ದಶಸಾಹಸ್ರಾಂತಸ್ತನ್ಮೈ ಯುಗಪದಕ್ಷಿಪನ್ ।
ಅಪ್ರಾಪ್ತಾನ್ ಸೋಽಚ್ಛಿನತ್ ಸರ್ವಾಂಸ್ತದದ್ಭುತಮಿವಾಭವತ್ ॥೨೫॥

ಅವರು ಒಟ್ಟಿಗೆ ಹತ್ತುಸಾವಿರ ಬಾಣಗಳನ್ನು ಭೀಷ್ಮರ ಮೇಲೆ ಪ್ರಯೋಗಿಸಿದರು. ಭೀಷ್ಮರು ಆ ಬಾಣಗಳು ತಮ್ಮನ್ನು ತಲುಪುವುದಕ್ಕಿಂತ ಮುಂಚೆಯೇ ಅವುಗಳನ್ನು ಕತ್ತರಿಸಿದುದು ಅದ್ಭುತವಾಗಿತ್ತು.

ತತಸ್ತೇ ಪಾರ್ಥಿವಾಃ ಸರ್ವೇ ಸರ್ವತಃ ಪರ್ಯವಾರಯನ್ ।
ಮಹತಾ ಶರವರ್ಷೇಣ ವರ್ಷೇಣೇವಾಂಬುದಾ ಗಿರಿಮ್ ॥೨೬॥

ಅನಂತರ ಆ ರಾಜರು ದೊಡ್ಡ ಬಾಣವರ್ಷದಿಂದ ವರ್ಷಧಾರೆಯಿಂದ ಮೋಡಗಳು ಗಿರಿಯನ್ನು ಸುತ್ತುವರೆಯುವಂತೆ ಭೀಷ್ಮರನ್ನು ಸುತ್ತುವರೆದರು.

ತತ್ ತು ಬಾಣಮಯಂ ವರ್ಷಂ ಸ ತೇಷಾಮಾವೃಣೋಚ್ಛರೈಃ ।
ತಾಂಶ್ಚ ಸರ್ವಾನ್ ಮಹೀಪಾಲಾನ್ ಪ್ರತ್ಯವಿಧ್ಯತ್ ತ್ರಿಭಿಸ್ತ್ರಿಭಿಃ ॥೨೭॥

ಭೀಷ್ಮರು ಅವರೆಲ್ಲರ ಬಾಣಮಯವಾದ ಮಳೆಯನ್ನು ತಮ್ಮ ಬಾಣಗಳಿಂದ ತಡೆದು, ಆ ಎಲ್ಲ ರಾಜರನ್ನು ಮೂರುಮೂರು ಬಾಣಗಳಿಂದ ವ್ಯಥೆಪಡಿಸಿದರು.

ತಸ್ಯಾತಿಲಾಘವಂ ಕರ್ಮ ಪೌರುಷಂ ಲಘುಕಾರಿಣಃ ।
ರಕ್ಷಣಂ ಚಾತ್ಮನಃ ಸರ್ವೇ ಶತ್ರವೋ ಹ್ಯಭ್ಯಪೂಜಯನ್ ॥೨೮॥

ಕ್ಷಿಪ್ರಕಾರಿಯಾದ ಅವರ ಪೌರುಷವನ್ನೂ, ಅವರ ಲಾಘವವನ್ನೂ ಮತ್ತು ಆತ್ಮರಕ್ಷಣೆಯನ್ನೂ ಎಲ್ಲ ಶತ್ರುಗಳೂ ಸನ್ಮಾನಿಸಿದರು.

ಅಕ್ಷತಃ ಕ್ಷಪಯಿತ್ವಾಽನ್ಯಾನ್ ಅಸಂಖ್ಯೇಯಪರಾಕ್ರಮಃ ।
ಆನಿನಾಯ ಸ ಕಾಶ್ಯಸ್ಯ ಸುತಾಃ ಸಾಗರಗಾಸುತಃ ॥೨೯॥

ಅಪರಿಮಿತಪರಾಕ್ರಮವುಳ್ಳ ಭೀಷ್ಮರು ತಾವು ಗಾಯಗೊಳ್ಳದೇ ಎಲ್ಲರನ್ನು ವಿನಾಶಗೊಳಿಸಿ ಕಾಶೀರಾಜನ ಮೂರು ಮಕ್ಕಳನ್ನು ಕರೆತಂದರು.

ತಾನ್ ನಿಹತ್ಯ ರಣೇ ಸರ್ವಾನ್ ಸರ್ವಶಸ್ತ್ರವಿಶಾರದಃ ।
ಕನ್ಯಾಭಿಃ ಸಹಿತೋ ಯಾತೋ ಭಾರತೋ ಭಾರತಾನ್ ಪ್ರತಿ ॥೩೦॥

ಸರ್ವಶಸ್ತ್ರವಿಶಾರದರಾದ ಅವರು ಅವರೆಲ್ಲರನ್ನೂ ಯುದ್ಧದಲ್ಲಿ ಪರಾಭವಗೊಳಿಸಿ, ಮೂರು ಕನ್ಯೆಯರನ್ನು ಕರೆದುಕೊಂಡು ತನ್ನ ತಮ್ಮಂದಿರ ಸಮೀಪಕ್ಕೆ ಹಿಂದಿರುಗಿದರು.

ತತಸ್ತಂ ಪೃಷ್ಠತೋ ರಾಜಾ ಸಾಲ್ವಾನಾಮೀಶ್ವರಃ ಪ್ರಭುಃ ।
ಅಭ್ಯಾಗಮದಮೇಯಾತ್ಮಾ ಭೀಷ್ಮಂ ಶಾಂತನವಂ ರಣೇ ॥೩೧॥

ಆಗ ಮಹಾಪರಾಕ್ರಮಶಾಲಿಯಾದ ಸಾಲ್ವಾಧಿಪತಿಯಾದ ರಾಜನು ಶಂತನುಪುತ್ರನಾದ ಭೀಷ್ಮನ ಜೊತೆಯಲ್ಲಿ ಯುದ್ಧಮಾಡಲು ಹಿಂದಿನಿಂದ ಬಂದನು.

ಕುಂಜರಂ ಜಘನೇ ನಿಘ್ನನ್ ದಂತಾಭ್ಯಾಮಪರೋ ಯಥಾ ।
ವಾಸಿತಾಸಮಯೇ ಯತ್ತೋ ಯೂಥಪೋ ಬಲಿನಾಂ ವರಃ ॥೩೨॥

ಹೆಣ್ಣಾನೆಯ ಸಲುವಾಗಿ ಬಂದ ಒಂದು ಆನೆಯನ್ನು ಹಿಂದಿನಿಂದ ತನ್ನ ದಂತಗಳಿಂದ ತಿವಿಯುವ ಸಲಗನಂತೆ ಬಲಿಷ್ಠರಲ್ಲಿ ಶ್ರೇಷ್ಠನಾದ ಸಾಲ್ವನು ಭೀಷ್ಮರನ್ನು ಹಿಂಬಾಲಿಸಿದನು.

ಸ್ತ್ರೀಕಾಮ ತಿಷ್ಠ ತಿಷ್ಠೇತಿ ಸಾಲ್ವಶ್ಚಾಹ ಸ ಪಾರ್ಥಿವಃ ।
ಸಾಲ್ವೇನೈವಂ ಮಹಾಬಾಹುರಮರ್ಷೇಣಾಭಚೋದಿತಃ ॥೩೩॥

ತತಃ ಸ ಪುರುಷವ್ಯಾಘ್ರೋ ಭೀಷ್ಮಃ ಪರಬಲಾರ್ದನಃ ।
ಸಾಲ್ವರಾಜಂ ಸುಸಂಕ್ರುದ್ಧೋ ನ್ಯವರ್ತತ ಪರಂತಪಃ ॥೩೪॥

ಸಾಲ್ವರಾಜನು ಸ್ತ್ರೀಕಾಮನೇ ನಿಲ್ಲು, ನಿಲ್ಲೆಂದು ಹೇಳಿದನು. ಹೀಗೆ ಮಹಾಬಾಹುವಾದ ಭೀಷ್ಮನು ಸಾಲ್ವನಿಂದ ಸಿಟ್ಟಿನಿಂದ ಪ್ರಚೋದಿತನಾಗಿ ಪರಬಲಾರ್ದನನೂ, ಪರಂತಪನೂ, ಪುರುಷವ್ಯಾಘ್ರನೂ ಆದ ಅವನು ಕೋಪದಿಂದ ಸಾಲ್ವನಿಗೆ ಅಭಿಮುಖವಾಗಿ ತಿರುಗಿ ನಿಂತನು.

ಕ್ರೋಧೇನ ಸಂಪ್ರಜ್ವಲಿತೋ ವಿಧೂಮ ಇವ ಪಾವಕಃ ।
ದಹನ್ ಯಥಾ ಕೃಷ್ಣಗತಿಃ ಕಕ್ಷಂ ವಾತೇರಿತಃ ಪ್ರಭುಃ ॥೩೫॥

ಕ್ಷತ್ರಧರ್ಮಂ ಸಮಾಸ್ಥಾಯ ಅಭೀತೋ ರಾಜಸತ್ತಮಃ ।
ನಿವರ್ತಯಾಮಾಸ ರಥಂ ಭೀಷ್ಮಃ ಪ್ರಹರತಾಂ ವರಃ ॥೩೬॥

ಕ್ರೋಧದಿಂದ ಧೂಮವಿಲ್ಲದ ಅಗ್ನಿಯಂತೆ ಉರಿಯುತ್ತಾ ಶತ್ರುವಿನ ಪಕ್ಷವನ್ನು ವಾಯುವಿನಿಂದ ಎದ್ದ ಅಗ್ನಿಯಂತೆ ಜ್ವಲಿಸುತ್ತಾ ಕ್ಷತ್ರಿಯಧರ್ಮವನ್ನು ಅವಲಂಬಿಸಿ,

ನಿರ್ಭಯನಾದ ಯುದ್ಧ ಮಾಡುವರಲ್ಲಿ ಶ್ರೇಷ್ಠನಾದ ಭೀಷ್ಮನು ತನ್ನ ರಥವನ್ನು ಹಿಂದಿರುಗಿಸಿದನು.

ನಿವೃತ್ತಂ ತೇನ ತಂ ದೃಷ್ಟ್ವಾ ಹತಶೇಷಾ ಹಿ ಪಾರ್ಥಿವಾಃ ।
ಪ್ರೇಕ್ಷಕಾಃ ಸಮಪದ್ಯಂತ ಭೀಷ್ಮಸಾಲ್ವಸಮಾಗಮೇ ॥೩೭॥

ಸಾಲ್ವನಿಂದ ಹಿಂದಿರುಗಿಸಲ್ಪಟ್ಟ ಭೀಷ್ಮನನ್ನು ನೋಡಿ ಅಳಿದುಳಿದ ರಾಜರು ಭೀಷ್ಮ-ಸಾಲ್ವರ ಸಮಾಗಮದಲ್ಲಿ ಪ್ರೇಕ್ಷಕರಾಗಿ ನಿಂತರು.

ಗೋವೃಷಾವಿವ ನರ್ದಂತೌ ಬಲಿನೌ ವಾಸಿತಾಂತರೇ ।
ಅನ್ಯೋನ್ಯಮಭ್ಯವರ್ತೇತಾಂ ಬಲವಿಕ್ರಮಶಾಲಿನೌ ॥೩೮॥

ಹಸುವಿನ ಸಲುವಾಗಿ ಪರಸ್ಪರವಾಗಿ ಗರ್ಜಿಸುವ ಎರಡು ವೃಷಭಗಳಂತೆ ಬಲವಿಕ್ರಮಶಾಲಿಗಳಾದ ಅವರಿಬ್ಬರು ಪರಸ್ಪರವಾಗಿ ಅಭಿಮುಖವಾಗಿ ಮುಂದೆ ಬಂದರು.

ತತಃ ಕ್ರುದ್ಧಂ ಶಾಂತನವೋ ದೃಷ್ಟ್ವಾ ತಂ ನೃಪಮಾಗತಮ್ ।
ಸಾಲ್ವೇಶ್ವರಂ ಸ ರಾಜಾನಂ ಹಯಾನ್ ಕ್ರುದ್ಧೋಽಭ್ಯಚೋದಯತ್ ॥೩೯॥

ಭೀಷ್ಮರು, ಕ್ರುದ್ಧನಾದ ಸಾಲ್ವರಾಜನು ಬಂದಿದ್ದನ್ನು ನೋಡಿ, ತಮ್ಮ ಕುದುರೆಗಳನ್ನು ಅವನ ಕಡೆಗೆ ಪ್ರಚೋದಿಸಿದರು.

ಸಂಸ್ಪೃಶಂಶ್ಚ ಧನುಃಶ್ರೇಷ್ಠಂ ಸಜ್ಯಂ ಕೃತ್ವಾ ನರರ್ಷಭಃ ।
ಸಮುಪಸ್ಥಾಯ ದುರ್ಧರ್ಷಃ ಸಶರಃ ಸಶರಾಸನಃ ॥೪೦॥

ಅಭ್ಯದ್ರವತ್ ಸಾಲ್ವಪತಿಂ ಯುದ್ಧಾರ್ಥೀ ಕುರುಪುಂಗವಃ ।
ಕವಚೀ ಬದ್ಧನಿಸ್ತ್ರಿಂಶಸ್ತಲಬಂಧಃ ಪ್ರತಾಪವಾನ್ ॥೪೧॥

ಪುರುಷಶ್ರೇಷ್ಠರಾದ ಅವರು ಧನುಸ್ಸನ್ನು ಕೈಯಲ್ಲಿ ಹಿಡಿದು ಹೆದೆಯೇರಿಸಿ, ಬಿಲ್ಲು-ಬಾಣಗಳನ್ನು ಹಿಡಿದು ದುರ್ಧರ್ಷರಾಗಿ ಯುದ್ಧಾರ್ಥಿಗಳಾಗಿ ಕವಚವನ್ನು ಕತ್ತಿಯನ್ನು ಮತ್ತು ಹಸ್ತಸ್ತ್ರಾಣಗಳನ್ನು ಕಟ್ಟಿಕೊಂಡು, ಪ್ರತಾಪದಿಂದ ಸಾಲ್ವನ ಕಡೆಗೆ ಧಾವಿಸಿದರು.

ತಿಷ್ಠತಿಷ್ಠೇತಿ ರಾಜಾನಂ ಸಾಲ್ವಂ ಶಾಂತನವೋಽಬ್ರವೀತ್ ।
ಯುದ್ಧಾರ್ಥೀ ವೈ ತತಃ ಸಾಲ್ವಂ ಪ್ರಾವರ್ತತ ಮಹಾಬಲಃ ॥೪೨॥

ಮಹಾಬಲಿಷ್ಠರಾದ ಭೀಷ್ಮರು ನಿಲ್ಲು, ನಿಲ್ಲೆಂದು ಸಾಲ್ವನಿಗೆ ಹೇಳಿ ಯುದ್ಧಾರ್ಥಿಗಳಾಗಿ ಸಾಲ್ವನ ಕಡೆ ಹೊರಟರು.

ತತಸ್ತು ಯುದ್ಧಮಭವತ್ ತದಾ ರಾಜನ್ ಸ್ವಯಂವರೇ ।
ಭೀಷ್ಮಸ್ಯ ಚೈವ ರಾಜರ್ಷೇಃ ಸಾಲ್ವಸ್ಯ ಚ ಮಹೀಪತೇಃ ॥೪೩॥

ರಾಜನೇ, ಸ್ವಯಂವರದ ಸಂದರ್ಭದಲ್ಲಿ ರಾಜರ್ಷಿಗಳಾದ ಭೀಷ್ಮರಿಗೂ ಮತ್ತು ಸಾಲ್ವರಾಜನಿಗೂ ಯುದ್ಧವಾಯಿತು.

ತತೋ ಭೀಷ್ಮಂ ಶಾಂತನವಂ ಶರೈರಾವಾರಯತ್ ದಿಶಃ ।
ಸಾಲ್ವರಾಜೋ ನರಶ್ರೇಷ್ಠ ಬಹ್ವಶೋಭತ ಭಾರತ ॥೪೪॥

ಅನಂತರ ಸಾಲ್ವರಾಜನು ಭೀಷ್ಮರನ್ನೂ ಮತ್ತು ಹತ್ತು ದಿಕ್ಕುಗಳನ್ನೂ ತನ್ನ ಶರಗಳಿಂದ ಮುಚ್ಚಿದನು. ನರಶ್ರೇಷ್ಠನಾದ ಭಾರತನೇ, ಅದು ಬಹುವಾಗಿ ಶೋಭಿಸಿತು.

ವಿವ್ಯಾಧ ಚ ತಥಾ ಭೀಷ್ಮಂ ವಾಮಪಾರ್ಶ್ವೇ ಸ್ತನಾಂತರೇ ।
ತ್ವರಮಾಣಸ್ತ್ವರಾಕಾಲೇ ಕ್ಷತ್ರಿಯರ್ಷಭಸತ್ತಮಃ ॥೪೫॥

ಕ್ಷತ್ರಿಯಶ್ರೇಷ್ಠನಾದ ಸಾಲ್ವನು ಕ್ಷಿಪ್ರವಾಗಿ ಕಾರ್ಯವನ್ನು ಮಾಡಿ, ಭೀಷ್ಮರಿಗೆ ಸ್ತನದ ಸಮೀಪದಲ್ಲಿ ಎಡಭಾಗದಲ್ಲಿ ಗಾಯವನ್ನು ಮಾಡಿದನು.

ದೃಷ್ಟ್ವಾ ತು ಭೀಷ್ಮಂ ವ್ರಣಿನಂ ರಾಜ್ಞಾ ಸಾಲ್ವೇನ ತೇ ನೃಪಾಃ ।
ವಿಸ್ಮಿತಾಃ ಸಮಪದ್ಯಂತ ಸಾಧುಸಾಧ್ವಿತಿ ಚಾಬ್ರುವನ್ ॥೪೬॥

ಸಾಲ್ವರಾಜನಿಂದ ಭೀಷ್ಮರು ಗಾಯಗೊಂಡಿದ್ದನ್ನು ನೋಡಿ ಉಳಿದ ರಾಜರು ವಿಸ್ಮಿತರಾಗಿ 'ಸಾಧು-ಸಾಧು' ಎಂದು ಕಿರುಚಿದರು.

ಲಾಘವಂ ತಸ್ಯ ತೇ ದೃಷ್ಟ್ವಾ ಪೃಥಿವ್ಯಾಂ ಸರ್ವಪಾರ್ಥಿವಾಃ ।
ಸಾಲ್ವಂ ಸಂಪೂಜಯಾಮಾಸುರ್ವಾಗ್ಭಿರ್ನೃಪತಿಪುಂಗವಮ್ ॥೪೭॥

ಎಲ್ಲ ರಾಜರೂ ಸಾಲ್ವನ ಕೈಚಳಕವನ್ನು ನೋಡಿ, ತಮ್ಮ ಮಾತುಗಳಿಂದ ರಾಜಶ್ರೇಷ್ಠನಾದ ಸಾಲ್ವನನ್ನು ಪೂಜಿಸಿದರು.

ಕ್ಷತ್ರಿಯಾಣಾಂ ತು ತಾಃ ಶ್ರುತ್ವಾ ವಾಚಃ ಪರಪುರಂಜಯಃ ।
ಕ್ರುದ್ಧಃ ಶಾಂತನವಃ ಸಾಲ್ವಂ ತಿಷ್ಠತಿಷ್ಠೇತಿ ಚಾಬ್ರವೀತ್ ॥೪೮॥

ಪರಪುರಂಜಯರಾದ ಭೀಷ್ಮರು ಕ್ಷತ್ರಿಯರ ಆ ಮಾತುಗಳನ್ನು ಕೇಳಿ, ಕ್ರುದ್ಧರಾಗಿ ಸಾಲ್ವನನ್ನು ಕುರಿತು 'ನಿಲ್ಲು-ನಿಲ್ಲು' ಎಂದು ಹೇಳಿದರು.

ಸಾರಥಿಂ ಚಾಬ್ರವೀದ್ ಭೀಷ್ಮೋ ಯಾಹಿ ಯತ್ರೈಷ ಪಾರ್ಥಿವಃ ।
ಯಾವದೇನಂ ನಿಹನ್ಮ್ಯದ್ಯ ಭುಜಂಗಮಿವ ಪಕ್ಷಿರಾಟ್ ॥೪೯॥

ಭೀಷ್ಮರು ತಮ್ಮ ಸಾರಥಿಯನ್ನು ಕುರಿತು ಆ ರಾಜನು ಇರುವಲ್ಲಿಗೆ ನನ್ನ ರಥವನ್ನು ನಡೆಸು, ಗರುಡನು ಸರ್ಪವನ್ನು ವಿನಾಶ ಮಾಡಿದಂತೆ ನಾನು ಈ ದಿನ ಅವನನ್ನು ಕೊಲ್ಲುತ್ತೇನೆ ಎಂದು ಹೇಳಿದರು.

ತದಸ್ತ್ರಂ ದಾರುಣಂ ಸಮ್ಯಗ್ ಯೋಜಯಾಮಾಸ ಪಾರ್ಥಿವಃ ।
ತೇನಾಶ್ವಾಂಶ್ಚತುರೋಽಮೃದ್ನಾತ್ ಸಾಲ್ವರಾಜಸ್ಯ ಪಾರ್ಥಿವಃ ॥೫೦॥

ಭೀಷ್ಮರು ತಮ್ಮ ಬಿಲ್ಲಿನಲ್ಲಿ ದಾರುಣವಾದ ಅಸ್ತ್ರವನ್ನು ಹೂಡಿ ಅದರಿಂದ ಸಾಲ್ವರಾಜನ ನಾಲ್ಕು ಕುದುರೆಗಳನ್ನು ಹಿಂಸಿಸಿದರು.

ಅಸ್ತ್ರೈರಸ್ತ್ರಾಣಿ ಸಂವಾರ್ಯ ಭೀಷ್ಮಸ್ಯ ಪರಂತಪಃ ।
ತತೋ ನೃಪತಿಶಾರ್ದೂಲೋ ನ್ಯಹನತ್ ತಸ್ಯ ಸಾರಥಿಮ್ ॥೫೧॥

ಪರಂತಪರೂ, ನೃಪತಿಶಾರ್ದೂಲರೂ ಆದ ಭೀಷ್ಮರು ಸಾಲ್ವನ ಅಸ್ತ್ರಗಳನ್ನು ತಮ್ಮ ಅಸ್ತ್ರಗಳಿಂದ ತಡೆದು, ಅವನ ಸಾರಥಿಯನ್ನು ಕೊಂದರು.

ಅಸ್ತ್ರೇಣ ಚಾಸ್ಯ ಸಾಲ್ವಸ್ಯ ನ ಹನತ್ ತುರಗೋತ್ತಮಾನ್ ।
ಸಾಲ್ವಸ್ತು ವಿರಥೋ ರಾಜನ್ ಹತಾಶ್ವೋ ಹತಸಾರಥಿಃ ।
ನಿಕ್ಷಿಪ್ಯ ಚ ಧನುಃ ಶ್ರೀಮಾನ್ ಭೂಮೌ ತಿಷ್ಠದವಾಙ್ಮುಖಃ ॥೫೨॥

ಅಸ್ತ್ರದಿಂದ ಸಾಲ್ವನ ಶ್ರೇಷ್ಠವಾದ ಕುದುರೆಗಳನ್ನು ಕೊಂದರು. ತನ್ನ ರಥವನ್ನು, ಕುದುರೆಗಳನ್ನು ಮತ್ತು ಸಾರಥಿಯನ್ನು ಕಳೆದುಕೊಂಡ ಸಾಲ್ವನು ತನ್ನ ಧನುಸ್ಸನ್ನು ಎಸೆದು ಭೂಮಿಯ ಮೇಲೆ ಮುಖವನ್ನು ತಗ್ಗಿಸಿ ನಿಂತನು.

ಕನ್ಯಾಹೇತೋರ್ವಿಜಿತ್ಯೈನಂ ಭೀಷ್ಮಃ ಶಾಂತನವಸ್ತದಾ ।
ವಿಸರ್ಜಯಾಮಾಸ ನೃಪಂ ಜೀವಂತಂ ತಂ ನರಾಧಿಪಃ ॥೫೩॥

ಶಂತನುವಿನ ಮಕ್ಕಳಾದ ಭೀಷ್ಮರು ಕನ್ಯಾನಿಮಿತ್ತದಿಂದ ಅವನನ್ನು ಸೋಲಿಸಿ, ಅವನನ್ನು ಜೀವಸಹಿತವಾಗಿ ಕಳುಹಿಸಿದರು.

ತತೋ ವಿಜಿತ್ಯ ತಾಃ ಕನ್ಯಾಸ್ತಿಸ್ರೋ ರೂಪಗುಣಾನ್ವಿತಾಃ ।
ಪ್ರಯಯೌ ಹಸ್ತಿನಪುರಂ ಭೀಷ್ಮಃ ಶಾಂತನವಸ್ತದಾ ।
ಯಯೌ ಪುಣ್ಯಂ ಕುರುಕ್ಷೇತ್ರಂ ಯತ್ರ ರಾಜಾ ಸ ಕೌರವಃ ॥೫೪॥

ಅನಂತರ ಭೀಷ್ಮರು ರೂಪಗುಣಾನ್ವಿತರಾದ ಮೂರು ಕನ್ಯೆಯರನ್ನು ಕರೆದುಕೊಂಡು ಹಸ್ತಿನಪುರಕ್ಕೆ ಬಂದರು. ಎಲ್ಲಿ ಕೌರವ ರಾಜನಾದ ವಿಚಿತ್ರವೀರ್ಯನು ಇದ್ದನೋ, ಅಂತಹ ಪವಿತ್ರವಾದ ಕುರುಕ್ಷೇತ್ರವನ್ನು ತಲುಪಿದರು.

ಸಾಲ್ವೋಽಪಿ ರಾಜಾ ಸ್ವಂ ರಾಷ್ಟ್ರಂ ಸಂಪ್ರಾಪ್ತೋ ನಚಿರಾದಿವ ।
ರಾಜಾನಸ್ತತ್ರ ಯೇ ಚಾಸನ್ ಸ್ವಯಂವರದಿದೃಕ್ಷವಃ ।
ತೇಽಪಿ ಸ್ವಾನ್ಯೇವ ರಾಷ್ಟ್ರಾಣಿ ಹತಶೇಷಾಃ ಪ್ರಚಕ್ರಮುಃ ॥೫೫॥

ಸಾಲ್ವರಾಜನೂ ಸಹ ಅಲ್ಪಕಾಲದಲ್ಲಿಯೇ ತನ್ನ ರಾಷ್ಟ್ರಕ್ಕೆ ಹಿಂದಿರುಗಿದನು. ಸ್ವಯಂವರವನ್ನು ನೋಡಲು ಬಂದಿದ್ದ ಅಳಿದುಳಿದ ರಾಜರೂ ಸಹ ತಮ್ಮ ತಮ್ಮ ದೇಶಗಳಿಗೆ ಹಿಂದಿರುಗಿದರು.

ತೇ ವನಾನಿ ಚ ರಮ್ಯಾಣಿ ಶೈಲಾಂಶ್ಚ ಸರಿತಸ್ತಥಾ ।
ಅತಿಕ್ರಮ್ಯ ಚ ರಾಜಾನಃ ಸ್ವಂಸ್ವಂ ರಾಜ್ಯಂ ಪ್ರಚಕ್ರಮುಃ ॥೫೬॥

ಆ ರಾಜರು ಕಾಡುಗಳನ್ನೂ, ಪರ್ವತಗಳನ್ನೂ, ನದಿಗಳನ್ನೂ ದಾಟಿ ತಮ್ಮ ತಮ್ಮ ರಾಜ್ಯಗಳಿಗೆ ಹಿಂದಿರುಗಿದರು.

ಭೀಷ್ಮಃ ಸ್ವಯಂವರೇ ಕನ್ಯಾ ವಿಜಿತ್ಯ ಕುರುಸತ್ತಮಃ ।
ವನಾನಿ ಸರಿತಶ್ಚಾಪಿ ಶೈಲಾಂಶ್ಚ ವಿವಿಧದ್ರುಮಾನ್ ॥೫೭॥

ಅಕ್ಷತಃ ಕ್ಷಪಯಿತ್ವಾऽರೀಂಸ್ತಾನಸಂಖ್ಯೇಯವಿಕ್ರಮಃ ।
ಸೋऽಚಿರೇಣೈವ ಕಾಲೇನ ಸಮತಿಕ್ರಮ್ಯ ಬುದ್ಧಿಮಾನ್ ।
ಆನಯಾಮಾಸ ಕಾಶ್ಯಸ್ಯ ಸುತಾಃ ಸಾಗರಗಾಸುತಃ ॥೫೮॥

ಕುರುಶ್ರೇಷ್ಠರಾದ ಭೀಷ್ಮರು ಸ್ವಯಂವರದಲ್ಲಿ ಕನ್ಯೆಯರನ್ನು ಗೆದ್ದು ಅಮಿತಪರಾಕ್ರಮಿಗಳಾದ ಅವರು ತಾವು ಗಾಯಗೊಳ್ಳದೆ ಶತ್ರುಗಳ ವಿನಾಶವನ್ನು ಮಾಡಿ, ಕಾಡುಗಳನ್ನು, ನದಿಗಳನ್ನು, ಪರ್ವತಗಳನ್ನು, ವಿವಿಧ ದ್ರುಮಗಳನ್ನು ಅಲ್ಪಕಾಲದಲ್ಲಿ ದಾಟಿ, ಕಾಶಿರಾಜನ ಮೂರು ಮಕ್ಕಳನ್ನು ಕರೆತಂದರು.

ತಾಃ ಸ್ನುಷಾ ಇವ ಧರ್ಮಾತ್ಮಾ ಭಗಿನೀರನುಜಾ ಇವ ।
ಪಿತಾ ಯಥಾ ಚ ದುಹಿತೃಃ ಪ್ರಗೃಹ್ಯ ಪ್ರಯಯೌ ಕುರೂನ್ ॥೫೯॥

ಅವರು ಧರ್ಮಿಷ್ಠನಾದವನು ಸೊಸೆಯನ್ನು ಕರೆತಂದಂತೆ, ಅಣ್ಣನಾದವನು ತಂಗಿಯನ್ನು ಕರೆತಂದಂತೆ, ತಂದೆಯಾದವನು ಹೆಣ್ಣುಮಕ್ಕಳನ್ನು ಕರೆದುಕೊಂಡು ಬಂದಂತೆ ಆ ಕನ್ಯೆಯರನ್ನು ಕರೆದುಕೊಂಡು ಕುರುದೇಶಕ್ಕೆ ಬಂದರು.

ಸ ತು ಧರ್ಮೇಣ ಧರ್ಮಜ್ಞೋ ಕರ್ಮ ಕೃತ್ವಾऽತಿಮಾನುಷಮ್ ।
ತಾಃ ಸರ್ವಾ ಗುಣಸಂಪನ್ನಾ ಭ್ರಾತಾ ಭ್ರಾತ್ರೇ ಯವೀಯಸೇ ।
ಭೀಷ್ಮೋ ವಿಚಿತ್ರವೀರ್ಯಾಯ ವಿಕ್ರಮ್ಯ ಮುದಿತೋ ದದೌ ॥೬೦॥

ಧರ್ಮಜ್ಞರಾದ ಭೀಷ್ಮರು ಧರ್ಮದಿಂದ ಅತಿಮಾನುಷವಾದ ಕರ್ಮಗಳನ್ನು ಮಾಡಿ, ಆ ಗುಣಸಂಪನ್ನರಾದ ಮೂರು ಕನ್ಯೆಯರನ್ನು ತನ್ನ ತಮ್ಮನಾದ ವಿಚಿತ್ರವೀರ್ಯನಿಗೆ ಸಂತೋಷದಿಂದ ಒಪ್ಪಿಸಿದರು.

ಸ ತು ಧರ್ಮೇಣ ಧರ್ಮಜ್ಞೋ ವಿಧಿದೃಷ್ಟೇನ ಕರ್ಮಣಾ ।
ಭ್ರಾತುರ್ವಿಚಿತ್ರವೀರ್ಯಸ್ಯ ವಿವಾಹಮುಪಚಕ್ರಮೇ ॥೬೧॥

ಅನಂತರ ಧರ್ಮಜ್ಞರಾದ ಅವರು ಶಾಸ್ತ್ರೋಕ್ತರೀತಿಯಿಂದ ತಮ್ಮನಾದ ವಿಚಿತ್ರವೀರ್ಯನ ವಿವಾಹವನ್ನು ಮಾಡಲು ಉಪಕ್ರಮಿಸಿದರು.

ಸತ್ಯವತ್ಯಾಃ ಸಮೀಪೇऽಥ ಕೃತ್ವಾ ನಿಶ್ಚಯಮಾತ್ಮವಾನ್ ।
ವಿವಾಹಂ ಕಾರಯಿಷ್ಯಂತಂ ಭೀಷ್ಮಂ ಕಾಶೀಪತೇಃ ಸುತಾ ।
ಜ್ಯೇಷ್ಠಾ ತಾಸಾಮಿದಂ ವಾಕ್ಯಮಬ್ರವೀಜ್ಜನಸಂಸದಿ ॥೬೨॥

ಸತ್ಯವತಿಯ ಸಮೀಪದಲ್ಲಿ ಎಲ್ಲಾ ನಿಶ್ಚಯಗಳನ್ನೂ ಮಾಡಿ, ವಿವಾಹವನ್ನು ಮಾಡಲು ಹೊರಟ ಭೀಷ್ಮರನ್ನುಕುರಿತು ಕಾಶೀರಾಜನ ಮೂರು ಮಕ್ಕಳಲ್ಲಿ ಜ್ಯೇಷ್ಠಳಾದ ಅಂಬೆಯು ಪ್ರಜೆಗಳ ಸಂಸತ್ತಿನಲ್ಲಿ ಮಾತನಾಡಿದಳು.

ಮಯಾ ಸಾಲ್ವಪತಿಃ ಪೂರ್ವಂ ಮನಸಾ ಹಿ ವೃತಃ ಪತಿಃ ।
ತೇನ ಚಾಸ್ಮಿ ವೃತಾ ರಾಜಂಸ್ತಥಾಕಾಮಶ್ಚ ಮೇ ಪತಿಃ ॥೬೩॥

ನಾನು ಮೊದಲು ಸಾಲ್ವರಾಜನನ್ನು ಪತಿಯಾಗಿ ಮನಸ್ಸಿನಲ್ಲಿ ವರಿಸಿದ್ದೆ. ರಾಜನೇ, ಅವನೂ ನನ್ನನ್ನು ವರಿಸಿದ್ದನು. ನನ್ನ ಪತಿಯಾದ ಅವನಿಗೂ ಇದೇ ಅಭಿಪ್ರಾಯವಿದೆ.

ಮಯಾ ವರಯಿತವ್ಯೋऽಸೌ ಸಾಲ್ವಸ್ತಸ್ಮಿನ್ ಸ್ವಯಂವರೇ ।
ಏತದ್ ವಿಜ್ಞಾಯ ಧರ್ಮಜ್ಞ ಧರ್ಮತಸ್ತ್ವಂ ಸಮಾಚರ ॥೬೪॥

ಆ ಸ್ವಯಂವರದಲ್ಲಿ ನಾನು ಸಾಲ್ವನನ್ನು ವರಿಸಬೇಕಾಗಿದ್ದಿತು. ಇದನ್ನು ತಿಳಿದ ಧರ್ಮಜ್ಞನಾದ ನೀನು ಧರ್ಮದಂತೆ ನಡೆದುಕೋ.

ವೈಶಂಪಾಯನಃ

ಏವಮುಕ್ತಸ್ತತೋ ಭೀಷ್ಮಃ ಕನ್ಯಯಾ ವಿಪ್ರಸಂಸದಿ ।
ಚಿಂತಾಮಭ್ಯಗಮದ್ ವೀರೋ ಯುಕ್ತಂ ತಸ್ಯೈವ ಕರ್ಮಣಃ ॥೬೫॥

ವಿಪ್ರಸಂಸತ್ತಿನಲ್ಲಿ ಕನ್ಯೆಯಿಂದ ಈ ಮಾತುಗಳನ್ನು ಕೇಳಿದ ಭೀಷ್ಮನು ವಿವಾಹಕರ್ಮದಲ್ಲಿ ನಿಯುಕ್ತಳಾದ ಅವಳ ವಿಷಯದಲ್ಲಿ ಚಿಂತಾಕ್ರಾಂತನಾದನು.

ಅನ್ಯಾಸಕ್ತಾ ತ್ವಿಯಂ ಕನ್ಯಾ ಜ್ಯೇಷ್ಠಾ ಕ್ಷತ್ರೇ ಮಯಾऽऽರ್ಜಿತಾ ।
ವಾಚಾ ದತ್ತಾ ಮನೋದತ್ತಾ ಕೃತಮಂಗಲವಾಚನಾ ।
ನಿರ್ದಿಷ್ಟಾ ತು ಪರಸ್ಯೈವ ಸಾ ವರ್ಜ್ಯಾ ಪರಚಿಂತನೀ ॥೬೬॥

ಈ ಜ್ಯೇಷ್ಠಕನ್ಯೆಯು ಇನ್ನೊಬ್ಬನಲ್ಲಿ ಆಸಕ್ತಳಾಗಿದ್ದಾಳೆ. ನಾನು ಅವಳನ್ನು ಪರಾಕ್ರಮದಿಂದ ಸಂಪಾದಿಸಿದ್ದೇನೆ. ವಾಚಾದತ್ತಳಾದವಳು, ಮನೋದತ್ತಳಾದವಳು,

ಮಂಗಲವಾಚನವನ್ನು ಮಾಡಿಕೊಂಡವಳು, ಇನ್ನೊಬ್ಬರಿಗೆ ಎಂದು ನಿರ್ದಿಷ್ಟಳಾದವಳು ಮತ್ತು ಇನ್ನೊಬ್ಬನನ್ನೇ ಧ್ಯಾನಿಸುತ್ತಿರುವವಳು ಇವರೆಲ್ಲರೂ ವರ್ಜನೀಯರು.

ಇತ್ಯುಕ್ತಾ ಚಾನುಮಾನ್ಯೈವ ಭ್ರಾತರಂ ಸ್ವವಶಾನುಗಮ್ ।
ಸ ವಿನಿಶ್ಚಿತ್ಯ ತೈಃ ಸಾರ್ಧಂ ಬ್ರಾಹ್ಮಣೈರ್ಧರ್ಮಕೋವಿದೈಃ ।
ಅನುಜಜ್ಞೇ ತತೋ ಜ್ಯೇಷ್ಠಾಮಂಬಾಂ ಕಾಶಿಪತೇಃ ಸುತಾಮ್ ॥೬೭॥

ಹೀಗೆ ಹೇಳಿ ತನ್ನ ವಶವರ್ತಿಯಾದ ತಮ್ಮನ ಅನುಮತಿಯನ್ನು ಪಡೆದು ಧರ್ಮಕೋವಿದರಾದ ಬ್ರಾಹ್ಮಣರ ಜೊತೆಯಲ್ಲಿ ವಿಚಾರ ಮಾಡಿ ನಿಶ್ಚಯಿಸಿ, ಕಾಶೀರಾಜನ ಜ್ಯೇಷ್ಠಪುತ್ರಿಯಾದ ಅಂಬೆಗೆ ಅನುಮತಿಯನ್ನು ನೀಡಿದನು.

ಅಂಬಿಕಾಂಬಾಲಿಕೇ ಭಾರ್ಯೇ ಪ್ರಾದಾದ್ ಭ್ರಾತ್ರೇ ಯವೀಯಸೇ ।
ಭೀಷ್ಮೋ ವಿಚಿತ್ರವೀರ್ಯಾಯ ವಿಧಿದೃಷ್ಟೇನ ಕರ್ಮಣಾ ॥೬೮॥

ಅಂಬಿಕೆ ಮತ್ತು ಅಂಬಾಲಿಕೆಯರನ್ನು ತನ್ನ ತಮ್ಮನಾದ ವಿಚಿತ್ರವೀರ್ಯನಿಗೆ ಕೊಟ್ಟು ವಿಧ್ಯುಕ್ತವಾದ ಪ್ರಕಾರದಿಂದ ಭೀಷ್ಮನು ವಿವಾಹವನ್ನು ಮಾಡಿದನು.

ತಯೋಃ ಪಾಣೇ ಗೃಹೀತ್ವಾ ಸ ರೂಪಯೌವನದರ್ಪಿತಃ ।
ವಿಚಿತ್ರವೀರ್ಯೋ ಧರ್ಮಾತ್ಮಾ ನೈನಾಮೈಚ್ಛತ್ ಕಥಂಚನ ।
ಅಂಬಾಮನ್ಯಸ್ಯ ಕೀರ್ತ್ಯಂತೀಂ ಅಬ್ರವೀಚ್ಚಾರುದರ್ಶನಾಮ್ ॥೬೯॥

ಅವರಿಬ್ಬರ ಪಾಣಿಗ್ರಹಣ ಮಾಡಿದ ರೂಪಯೌವನದರ್ಪಿತನಾದ ಧರ್ಮಾತ್ಮನಾದ ವಿಚಿತ್ರವೀರ್ಯನು ಅಂಬೆಯನ್ನು ಬಯಸಲೇ ಇಲ್ಲ. ಅಲ್ಲದೇ ಇನ್ನೊಬ್ಬರ ಹೆಸರನ್ನು ಹೇಳುತ್ತಿದ್ದ ಸುಂದರಿಯಾದ ಅಂಬೆಯ ವಿಷಯದಲ್ಲಿ ಭೀಷ್ಮರನ್ನು ಕುರಿತು ಹೇಳಿದನು.

ವಿಚಿತ್ರವೀರ್ಯಃ

ಪ್ರತ್ಯಕ್ಷಫಲ ಏವೈಷ ಕಾಮೋಽಸಾಧುರ್ನಿರರ್ಥಕಃ ।
ಪರತಂತ್ರೋಪಭೋಗೇ ಮಾಮಾರ್ಯ ನಾऽऽಯೋಕ್ತುಮರ್ಹಸಿ॥೭೦॥

ಅಸಾಧುವಾದ, ನಿರರ್ಥಕವಾದ ಕಾಮವು ಪ್ರತ್ಯಕ್ಷವಾಗಿಯೇ ವಿಪರೀತ ಫಲವನ್ನು ಕೊಡುತ್ತದೆ. ಆದ್ದರಿಂದ ಪೂಜ್ಯರು ಪರತಂತ್ರವಾದ ಉಪಭೋಗದ ವಿಷಯದಲ್ಲಿ ನನಗೆ ಒತ್ತಾಯವನ್ನು ಮಾಡಬಾರದು.

ಭೀಷ್ಮಃ

ಪ್ರತಿಷ್ಠಿತಃ ಶಂತನೋರ್ವಂಶೇ ತಾತ ಯಸ್ಯ ತ್ವಮನ್ವಯೇ ।
ಅಕಾಮವೃತ್ತೋ ಧರ್ಮಾತ್ಮಾ ಸಾಧು ಮನ್ಯೇ ವ್ರತಂ ತವ ॥೭೧॥

ಮಗು ಯಾವ ಶಂತನುವಿನ ವಂಶದಲ್ಲಿ ನೀನು ಪ್ರತಿಷ್ಠಿತನಾಗಿದ್ದೀಯೋ ಅಂತಹ ಧರ್ಮಾತ್ಮನಾದ ಕಾಮಪುರಸ್ಸರವಾದ ನಡತೆಯಿಲ್ಲದ ನಿನ್ನ ವ್ರತವು ಸಾಧುವೆಂದೇ ಭಾವಿಸುತ್ತೇನೆ.

ಇತ್ಯುಕ್ತ್ವಾ ಽಂಬಾಂ ಸಮಾಲೋಕ್ಯ ವಿಧಿವದ್ ವಾಕ್ಯಮಬ್ರವೀತ್ ॥

ಹೀಗೆ ಹೇಳಿ ಅಂಬೆಯನ್ನು ನೋಡಿ, ಶಾಸ್ತ್ರರೀತಿಯಿಂದ ಮಾತನಾಡಿದನು.

ವಿಸೃಷ್ಟಾ ಹ್ಯಸಿ ಗಚ್ಛ ತ್ವಂ ಯಥಾಕಾಮಮನಿಂದಿತೇ ।
ಮಾ ಽನಿಯೋಜ್ಯೇ ಸಮರ್ಥೋ ಽಹಂ ನಿಯೋಕ್ತುಂ ಭ್ರಾತರಂ ಪ್ರಿಯಮ್ ॥

ಅನ್ಯಭಾವಗತಾಂ ಚಾಪಿ ಕೋ ನಾರೀಂ ವಾಸಯೇದ್ ಗೃಹೇ ।
ಅತಸ್ತ್ವಾಂ ನ ನಿಯೋಕ್ಷ್ಯಾಮಿ ಅನ್ಯಕಾಮಾ ಽಸಿ ಗಮ್ಯತಾಮ್ ॥೭೪॥

ಅಹಮಪ್ಯೂರ್ಧ್ವರೇತಾ ವೈ ನಿವೃತ್ತೋ ದಾರಕರ್ಮಣಿ ।
ನ ಸಂಬಂಧಸ್ತದಾವಾಭ್ಯಾಂ ಭವಿತಾ ವೈ ಕಥಂಚನ ॥೭೫॥

ನಾನು ನಿನ್ನನ್ನು ವಿಸರ್ಜಿಸಿದ್ದೇನೆ. ಅನಿಂದಿತೆಯೇ, ನೀನು ಇಷ್ಟ ಬಂದ ಕಡೆಗೆ ಹೋಗು. ಮಾಡಬಾರದ ಕಾರ್ಯವನ್ನು ಮಾಡು ಎಂದು ನಾನು ನನ್ನ ಪ್ರಿಯನಾದ ತಮ್ಮನಿಗೆ ಒತ್ತಾಯ ಮಾಡುವುದಿಲ್ಲ. ಬೇರೆಯವನಲ್ಲಿ ಪ್ರೀತಿಯಿರುವ ಹೆಂಗಸನ್ನು ಯಾವನು ತನ್ನ ಮನೆಯಲ್ಲಿಟ್ಟುಕೊಳ್ಳುತ್ತಾನೆ. ಆದ್ದರಿಂದ ನಿನಗೆ ಯಾವ ಒತ್ತಾಯವೂ ಇಲ್ಲ. ನಿನಗೆ ಬೇರೆಯವನಲ್ಲಿ ಪ್ರೀತಿಯಿದೆ. ಆದ್ದರಿಂದ ಹೊರಡಬಹುದು. ನಾನೂ ಸಹ ಊರ್ಧ್ವರೇತನಾಗಿ ವಿವಾಹಕರ್ಮದಿಂದ ನಿವೃತ್ತನಾಗಿದ್ದೇನೆ. ಆದ್ದರಿಂದ ನಮ್ಮಿಬ್ಬರಿಗೂ ಯಾವರೀತಿಯಲ್ಲಿಯೂ ಸಂಬಂಧವುಂಟಾಗುವುದಿಲ್ಲ.

ವೈಶಂಪಾಯನಃ

ಇತ್ಯುಕ್ತಾ ಸಾ ಗತಾ ತತ್ರ ಸಖೀಭಿಃ ಪರಿಪಾಲಿತಾ ।
ನಿರ್ದಿಷ್ಟಾ ಹಿ ಶನೈ ರಾಜನ್ ಸಾಲ್ವರಾಜಪುರಂ ಪ್ರತಿ ॥೭೬॥

ಎಲೈ ರಾಜನೇ, ಹೀಗೆ ಹೇಳಲ್ಪಟ್ಟ ಅಂಬೆಯು ತನ್ನ ಸ್ನೇಹಿತೆಯರಿಂದ ರಕ್ಷಿತೆಯಾಗಿ ನಿಧಾನವಾಗಿ ಸಾಲ್ವರಾಜನ ಪಟ್ಟಣಕ್ಕೆ ಹೋದಳು.

ಅಥಾಂಬಾ ಸಾಲ್ವಮಾಗಮ್ಯ ಸಾऽಬ್ರವೀನ್ಮನಸಾ ವೃತಾ ।
ಪುರಾ ನಿರ್ದಿಷ್ಟಭಾವಾ ತ್ವಾಮಾಗತಾಸ್ಮಿ ವರಾನನ ॥೭೭॥

ಅನಂತರ ಅಂಬೆಯು ಸಾಲ್ವನನ್ನು ಸಮೀಪಿಸಿ, ಮೊದಲು ನೀನು ನನ್ನನ್ನು ಮನಸ್ಸಿನಿಂದ ವರಿಸಿದ್ದೆ. ನನ್ನ ಪ್ರೀತಿಯನ್ನು ನಿನಗೂ ತಿಳಿಸಿದ್ದೆ. ಆದ್ದರಿಂದ, ಸುಂದರನೇ, ನಿನ್ನ ಸಮೀಪಕ್ಕೆ ಬಂದಿದ್ದೇನೆ.

ದೇವವ್ರತಂ ಸಮುತ್ಸೃಜ್ಯ ಸಾನುಜಂ ಪುರುಷರ್ಷಭ ।
ಪ್ರತಿಗೃಹ್ಣೀಷ್ವ ಭದ್ರಂ ತೇ ವಿಧಿವನ್ಮಾಂ ಸಮುದ್ಯತಾಮ್ ॥೭೮॥

ಪುರುಷಶ್ರೇಷ್ಠನೇ ಭೀಷ್ಮನನ್ನೂ, ಅವನ ತಮ್ಮನನ್ನೂ ಪರಿತ್ಯಾಗ ಮಾಡಿ ಬಂದಿದ್ದೇನೆ. ನಿನಗೆ ಮಂಗಳವಾಗಲಿ ಸಮುದ್ಯತಳಾದ ನನ್ನನ್ನು ವಿಧಿಪೂರ್ವಕವಾಗಿ ಸ್ವೀಕರಿಸು.

ವೈಶಂಪಾಯನಃ

ಏವಮುಕ್ತಸ್ತು ಸಾಲ್ವೋऽಪಿ ಪ್ರಹಸನ್ನಿದಮಬ್ರವೀತ್ ।
ನಿರ್ಜಿತಾಸೀಹ ಭೀಷ್ಮೇಣ ಮಾಂ ವಿನಿರ್ಜಿತ್ಯ ರಾಜಸು ॥೭೯॥

ಇದನ್ನು ಕೇಳಿದ ಸಾಲ್ವನು ನಗುತ್ತಾ ಹೀಗೆ ಹೇಳಿದನು - ರಾಜರ ಮಧ್ಯದಲ್ಲಿ ಭೀಷ್ಮನು ನನ್ನನ್ನು ಸೋಲಿಸಿ, ನಿನ್ನನ್ನು ಸಂಪಾದಿಸಿದ್ದಾನೆ.

ಅನ್ಯೇನ ನಿರ್ಜಿತಾಂ ಭದ್ರೇ ವಿಸೃಷ್ಟಾಂ ತೇನ ಚಾಲಯಾತ್ ।
ನ ಗೃಹ್ಣಾಮಿ ವರಾರೋಹೇ ತತ್ರ ಚೈವ ತು ಗಮ್ಯತಾಮ್ ॥೮೦॥

ಇನ್ನೊಬ್ಬರಿಂದ ನಿರ್ಜಿತಾಳದವಳನ್ನು, ಮತ್ತು ಅವನ ಮನೆಯಿಂದ ಹೊರಬಂದವಳನ್ನು ನಾನು ಸ್ವೀಕರಿಸುವುದಿಲ್ಲ. ಮಂಗಳಸ್ವರೂಪಳೇ, ನೀನು ಅಲ್ಲಿಗೇ ಹೋಗಬಹುದು.

ವೈಶಂಪಾಯನಃ

ಇತ್ಯುಕ್ತಾ ಸಾ ಸಮಾಗಮ್ಯ ಭೀಷ್ಮಂ ಪುನರಥಾಬ್ರವೀತ್ ।
ಭೀಷ್ಮ ತ್ವಯಾऽಹಂ ಸಹಸಾ ಹೃತಾ ತಸ್ಮಿನ್ ಸ್ವಯಂವರೇ ।
ಕ್ಷತ್ರಧರ್ಮಮವೇಕ್ಷ್ಯ ಭರ್ತಾ ತ್ವಂ ಮಮ ಧರ್ಮತಃ ॥೮೧॥

ಈ ಮಾತುಗಳನ್ನು ಕೇಳಿದ ಅಂಬೆಯು ಪುನಃ ಭೀಷ್ಮರ ಬಳಿಗೆ ಬಂದು ಹೇಳಿದಳು. ಭೀಷ್ಮ ಆ ಸ್ವಯಂವರದಲ್ಲಿ ನೀನು ನನ್ನನ್ನು ಬಲದಿಂದ ಹರಣ ಮಾಡಿದ್ದೀಯೆ. ಕ್ಷತ್ರಿಯಧರ್ಮವನ್ನು ಗಮನಿಸಿ, ನೀನು ಧರ್ಮದಿಂದ ನನಗೆ ಪತಿಯಾಗು.

ಊರ್ಧ್ವರೇತಾಽಸ್ಮ್ಯಹಮಿತಿ ಪ್ರತ್ಯುವಾಚ ಪುನಃಪುನಃ ।
ಭೀಷ್ಮಃ ಸಾ ಚಾಬ್ರವೀದ್ ಭೀಷ್ಮಂ ಯಥಾಽಜೈಷೀಸ್ತಥಾ ಕುರು ॥೮೨॥

ನಾನು ಊರ್ಧ್ವರೇತಸ್ಕನಾಗಿದ್ದೇನೆಂದು ಭೀಷ್ಮರು ಮತ್ತೆ ಮತ್ತೆ ಅವಳಿಗೆ ಹೇಳಿದರು. ಅವಳು ಭೀಷ್ಮರನ್ನು ಕುರಿತು ನೀನು ನನ್ನನ್ನು ಗೆದ್ದಿದ್ದೀಯೆ. ಅದಕ್ಕನುಗುಣವಾಗಿ ನಡೆದುಕೋ ಎಂದು ಹೇಳಿದಳು.

ಊರ್ಧ್ವರೇತಾಸ್ತ್ವಹಂ ಭದ್ರೇ ವಿವಾಹವಿಮುಖೋಽಭವಮ್ ।
ತತ್ತೇ ೀನ ಸಾಲ್ವಂ ಗಚ್ಛ ತ್ವಂ ಯಃ ಪುರಾ ಮನಸಾ ವೃತಃ ।
ಅನ್ಯಸಕ್ತಾಂ ಕಿಮರ್ಥಂ ತ್ವಮಾತ್ಮಾನಮವದಃ ಪುರಾ ॥೮೩॥

ಭದ್ರೇ, ಊರ್ಧ್ವರೇತಸ್ಕನಾಗಿ ವಿವಾಹ ವಿಮುಖನಾಗಿದ್ದೇನೆ. ನಿಶ್ಚಯವಾಗಿ ಮೊದಲೇ ಮನಸ್ಸಿನಲ್ಲಿ ವರಿಸಿದ್ದ ಸಾಲ್ವನ ಬಳಿಗೇ ಹೋಗು. ನೀನು ಏಕೆ ಮೊದಲು ನನಗೆ ಇನ್ನೊಬ್ಬನಲ್ಲಿ ಪ್ರೀತಿಯಿದೆ ಎಂದು ಹೇಳಿದೆ.

ಅನ್ಯಸಕ್ತಾಂ ವಧೂಂ ಕನ್ಯಾಂ ವಾಸಯೇತ್ ಸ್ವಗೃಹೇ ನಹಿ ।
ನಾಹಮುದ್ವಾಹಯಿಷ್ಯೇ ತ್ವಾ ಮಮ ಭ್ರಾತ್ರೇ ಯವೀಯಸೇ ।
ವಿಚಿತ್ರವೀರ್ಯಾಯ ಶುಭೇ ಯಥೇಷ್ಟಂ ಗಮ್ಯತಾಮಿತಿ ॥೮೪॥

ಇನ್ನೊಬ್ಬನಲ್ಲಿ ಪ್ರೀತಿಯಿರುವ ಕನ್ಯೆಯನ್ನು ಯಾರೂ ತನ್ನ ಮನೆಯಲ್ಲಿ ಇಟ್ಟುಕೊಳ್ಳುವುದಿಲ್ಲ. ಆದ್ದರಿಂದ ನನ್ನ ತಮ್ಮನಾದ ವಿಚಿತ್ರವೀರ್ಯನಿಗೆ ನಿನ್ನನ್ನು ಮದುವೆ ಮಾಡಿಕೊಡುವುದಿಲ್ಲ. ಶುಭಳೇ, ನೀನು ಮನಸ್ಸಿಗೆ ಬಂದಂತೆ ಹೋಗಬಹುದು (ಎಂದು ಹೇಳಿದರು)

ಭೂಯಃ ಸಾಲ್ವಂ ಸಮಭ್ಯೇತ್ಯ ರಾಜನ್ ಗೃಹ್ಣೀಷ್ವ ಮಾಮಿತಿ ।
ನಾಹಂ ಗೃಹ್ಣಾಮ್ಯನ್ಯಜಿತಾಮಿತಿ ಸಾಲ್ವನಿರಾಕೃತಾಮ್ ॥೮೫॥

ಊರ್ಧ್ವರೇತಾಸ್ತ್ವಹಮಿತಿ ಪ್ರತ್ಯುವಾಚ ಪುನಃಪುನಃ ।
ಪುನಃ ಸಾ ಚಾಬ್ರವೀದ್ ಭೀಷ್ಮಂ ಯಥಾಽಜೈಷೀಸ್ತಥಾ ಕುರು ॥೮೬॥

ಎಲೈ ರಾಜನೇ, ಹೀಗೆ ಹೇಳಲ್ಪಟ್ಟ ಅಂಬೆಯು ತನ್ನ ಸ್ನೇಹಿತೆಯರಿಂದ ರಕ್ಷಿತೆಯಾಗಿ ನಿಧಾನವಾಗಿ ಸಾಲ್ವರಾಜನ ಪಟ್ಟಣಕ್ಕೆ ಹೋದಳು.

ಅಥಾಂಬಾ ಸಾಲ್ವಮಾಗಮ್ಯ ಸಾऽಬ್ರವೀನ್ಮನಸಾ ವೃತಾ ।
ಪುರಾ ನಿರ್ದಿಷ್ಟಭಾವಾ ತ್ವಾಮಾಗತಾಸ್ಮಿ ವರಾನನ ॥೭೭॥

ಅನಂತರ ಅಂಬೆಯು ಸಾಲ್ವನನ್ನು ಸಮೀಪಿಸಿ, ಮೊದಲು ನೀನು ನನ್ನನ್ನು ಮನಸ್ಸಿನಿಂದ ವರಿಸಿದ್ದೆ. ನನ್ನ ಪ್ರೀತಿಯನ್ನು ನಿನಗೂ ತಿಳಿಸಿದ್ದೆ. ಆದ್ದರಿಂದ, ಸುಂದರನೇ, ನಿನ್ನ ಸಮೀಪಕ್ಕೆ ಬಂದಿದ್ದೇನೆ.

ದೇವವ್ರತಂ ಸಮುತ್ಸೃಜ್ಯ ಸಾನುಜಂ ಪುರುಷರ್ಷಭ ।
ಪ್ರತಿಗೃಹ್ಣೀಷ್ವ ಭದ್ರಂ ತೇ ವಿಧಿವನ್ಮಾಂ ಸಮುದ್ಯತಾಮ್ ॥೭೮॥

ಪುರುಷಶ್ರೇಷ್ಠನೇ ಭೀಷ್ಮನನ್ನೂ, ಅವನ ತಮ್ಮನನ್ನೂ ಪರಿತ್ಯಾಗ ಮಾಡಿ ಬಂದಿದ್ದೇನೆ. ನಿನಗೆ ಮಂಗಳವಾಗಲಿ ಸಮುದ್ಯತಳಾದ ನನ್ನನ್ನು ವಿಧಿಪೂರ್ವಕವಾಗಿ ಸ್ವೀಕರಿಸು.

ವೈಶಂಪಾಯನಃ

ಏವಮುಕ್ತಸ್ತು ಸಾಲ್ವೋऽಪಿ ಪ್ರಹಸನ್ನಿದಮಬ್ರವೀತ್ ।
ನಿರ್ಜಿತಾಸೀಹ ಭೀಷ್ಮೇಣ ಮಾಂ ವಿನಿರ್ಜಿತ್ಯ ರಾಜಸು ॥೭೯॥

ಇದನ್ನು ಕೇಳಿದ ಸಾಲ್ವನು ನಗುತ್ತಾ ಹೀಗೆ ಹೇಳಿದನು - ರಾಜರ ಮಧ್ಯದಲ್ಲಿ ಭೀಷ್ಮನು ನನ್ನನ್ನು ಸೋಲಿಸಿ, ನಿನ್ನನ್ನು ಸಂಪಾದಿಸಿದ್ದಾನೆ.

ಅನ್ಯೇನ ನಿರ್ಜಿತಾಂ ಭದ್ರೇ ವಿಸೃಷ್ಟಾಂ ತೇನ ಚಾಲಯಾತ್ ।
ನ ಗೃಹ್ಣಾಮಿ ವರಾರೋಹೇ ತತ್ರ ಚೈವ ತು ಗಮ್ಯತಾಮ್ ॥೮೦॥

ಇನ್ನೊಬ್ಬರಿಂದ ನಿರ್ಜಿತಾಳದವಳನ್ನು, ಮತ್ತು ಅವನ ಮನೆಯಿಂದ ಹೊರಬಂದವಳನ್ನು ನಾನು ಸ್ವೀಕರಿಸುವುದಿಲ್ಲ. ಮಂಗಳಸ್ವರೂಪಳೇ, ನೀನು ಅಲ್ಲಿಗೇ ಹೋಗಬಹುದು.

ವೈಶಂಪಾಯನಃ

ಇತ್ಯುಕ್ತಾ ಸಾ ಸಮಾಗಮ್ಯ ಭೀಷ್ಮಂ ಪುನರಥಾಬ್ರವೀತ್ ।
ಭೀಷ್ಮ ತ್ವಯಾऽಹಂ ಸಹಸಾ ಹೃತಾ ತಸ್ಮಿನ್ ಸ್ವಯಂವರೇ ।
ಕ್ಷತ್ರಧರ್ಮಮವೇಕ್ಷ್ವ ಭರ್ತಾ ತ್ವಂ ಮಮ ಧರ್ಮತಃ ॥೮೧॥

ಈ ಮಾತುಗಳನ್ನು ಕೇಳಿದ ಅಂಬೆಯು ಪುನಃ ಭೀಷ್ಮರ ಬಳಿಗೆ ಬಂದು ಹೇಳಿದಳು. ಭೀಷ್ಮ ಆ ಸ್ವಯಂವರದಲ್ಲಿ ನೀನು ನನ್ನನ್ನು ಬಲದಿಂದ ಹರಣ ಮಾಡಿದ್ದೀಯೆ. ಕ್ಷತ್ರಿಯಧರ್ಮವನ್ನು ಗಮನಿಸಿ, ನೀನು ಧರ್ಮದಿಂದ ನನಗೆ ಪತಿಯಾಗು.

ಊರ್ಧ್ವರೇತಾಽಸ್ಮ್ಯಹಮಿತಿ ಪ್ರತ್ಯುವಾಚ ಪುನಃಪುನಃ ।
ಭೀಷ್ಮಃ ಸಾ ಚಾಬ್ರವೀದ್ ಭೀಷ್ಮಂ ಯಥಾಽಜೈಷೀಸ್ತಥಾ ಕುರು ॥೮೨॥

ನಾನು ಊರ್ಧ್ವರೇತಸ್ಕನಾಗಿದ್ದೇನೆಂದು ಭೀಷ್ಮರು ಮತ್ತೆ ಮತ್ತೆ ಅವಳಿಗೆ ಹೇಳಿದರು. ಅವಳು ಭೀಷ್ಮರನ್ನು ಕುರಿತು ನೀನು ನನ್ನನ್ನು ಗೆದ್ದಿದ್ದೀಯೆ. ಅದಕ್ಕನುಗುಣವಾಗಿ ನಡೆದುಕೋ ಎಂದು ಹೇಳಿದಳು.

ಊರ್ಧ್ವರೇತಾಸ್ತ್ವಹಂ ಭದ್ರೇ ವಿವಾಹವಿಮುಖೋಽಭವಮ್ ।
ತತ್ತೇ ೀನ ಸಾಲ್ವಂ ಗಚ್ಛ ತ್ವಂ ಯಃ ಪುರಾ ಮನಸಾ ವೃತಃ ।
ಅನ್ಯಸಕ್ತಾಂ ಕಿಮರ್ಥಂ ತ್ವಮಾತ್ಮಾನಮವದಃ ಪುರಾ ॥೮೩॥

ಭದ್ರೇ, ಊರ್ಧ್ವರೇತಸ್ಕನಾಗಿ ವಿವಾಹ ವಿಮುಖನಾಗಿದ್ದೇನೆ. ನಿಶ್ಚಯವಾಗಿ ಮೊದಲೇ ಮನಸ್ಸಿನಲ್ಲಿ ವರಿಸಿದ್ದ ಸಾಲ್ವನ ಬಳಿಗೇ ಹೋಗು. ನೀನು ಏಕೆ ಮೊದಲು ನನಗೆ ಇನ್ನೊಬ್ಬನಲ್ಲಿ ಪ್ರೀತಿಯಿದೆ ಎಂದು ಹೇಳಿದೆ.

ಅನ್ಯಸಕ್ತಾಂ ವಧೂಂ ಕನ್ಯಾಂ ವಾಸಯೇತ್ ಸ್ವಗೃಹೇ ನಹಿ ।
ನಾಹಮುದ್ವಾಹಯಿಷ್ಯೇ ತ್ವಾ ಮಮ ಭ್ರಾತ್ರೇ ಯವೀಯಸೇ ।
ವಿಚಿತ್ರವೀರ್ಯಾಯ ಶುಭೇ ಯಥೇಷ್ಟಂ ಗಮ್ಯತಾಮಿತಿ ॥೮೪॥

ಇನ್ನೊಬ್ಬನಲ್ಲಿ ಪ್ರೀತಿಯಿರುವ ಕನ್ಯೆಯನ್ನು ಯಾರೂ ತನ್ನ ಮನೆಯಲ್ಲಿ ಇಟ್ಟುಕೊಳ್ಳುವುದಿಲ್ಲ. ಆದ್ದರಿಂದ ನನ್ನ ತಮ್ಮನಾದ ವಿಚಿತ್ರವೀರ್ಯನಿಗೆ ನಿನ್ನನ್ನು ಮದುವೆ ಮಾಡಿಕೊಡುವುದಿಲ್ಲ. ಶುಭಳೇ, ನೀನು ಮನಸ್ಸಿಗೆ ಬಂದಂತೆ ಹೋಗಬಹುದು (ಎಂದು ಹೇಳಿದರು)

ಭೂಯಃ ಸಾಲ್ವಂ ಸಮಭ್ಯೇತ್ಯ ರಾಜನ್ ಗೃಹ್ಣೀಷ್ವ ಮಾಮಿತಿ ।
ನಾಹಂ ಗೃಹ್ಣಾಮ್ಯನ್ಯಜಿತಾಮಿತಿ ಸಾಲ್ವನಿರಾಕೃತಾಮ್ ॥೮೫॥

ಊರ್ಧ್ವರೇತಾಸ್ತ್ವಹಮಿತಿ ಪ್ರತ್ಯುವಾಚ ಪುನಃಪುನಃ ।
ಪುನಃ ಸಾ ಚಾಬ್ರವೀದ್ ಭೀಷ್ಮಂ ಯಥಾಽಜೈಷೀಸ್ತಥಾ ಕುರು ॥೮೬॥

ಅಂಬೆಯು ಪುನಃ ಸಾಲ್ವನನ್ನು ಸಮೀಪಿಸಿ, 'ನನ್ನನ್ನು ಸ್ವೀಕರಿಸು' ಎಂದು ಹೇಳಿದಾಗ ಇನ್ನೊಬ್ಬರಿಂದ ಜಿತಳಾದವಳನ್ನು ನಾನು ಸ್ವೀಕರಿಸುವುದಿಲ್ಲವೆಂದು ಸಾಲ್ವನಿಂದ ನಿರಾಕೃತಳಾಗಿ ಮತ್ತೆ ಭೀಷ್ಮನ ಬಳಿಗೆ ಬಂದು ಕೇಳಿಕೊಂಡಳು. ನಾನು ಊರ್ಧ್ವರೇತಸ್ಕ ಎಂದು ಮತ್ತೆ ಮತ್ತೆ ಹೇಳಲ್ಪಟ್ಟರೂ ಅವಳು ಭೀಷ್ಮನನ್ನು ಕುರಿತು - ನೀನು ನನ್ನನ್ನು ಜಯಿಸಿದ್ದಕ್ಕೆ ಅನುಗುಣವಾಗಿ ನಡೆದುಕೋ ಎಂದು ಹೇಳಿದಳು.

ಅಂಬಾ ಭೀಷ್ಮಂ ಪುನಃ ಸಾಲ್ವಂ ಭೀಷ್ಮಂ ಸಾಲ್ವಂ ಪುನಃ ಪುನಃ ।
ಏವಮನ್ವಗಮದ್ ಭೀಷ್ಮಂ ಷಟ್ ಸಮಾಃ ಪುಷ್ಕರೇಕ್ಷಣಾ ।
ಅಶ್ರುಭಿರ್ಭೂಮಿಮುಕ್ಷಂತೀ ತಪಂತೀ ಚ ಮನಸ್ವಿನೀ ॥೮೭॥

ಕಮಲನೇತ್ರೆಯಾದ ಅಂಬೆಯು ಪುನಃ ಭೀಷ್ಮರ ಬಳಿಗೆ, ಪುನಃ ಸಾಲ್ವರ ಬಳಿಗೆ, ಮತ್ತೆ ಭೀಷ್ಮರ ಬಳಿಗೆ, ಮತ್ತೆ ಸಾಲ್ವರ ಬಳಿಗೆ ಹೀಗೆ ಧೈರ್ಯಶಾಲಿಯಾದ ಅವಳು ಮನಸ್ಸಿನಲ್ಲಿ ತಾಪಪಡುತ್ತಾ, ತನ್ನ ಕಣ್ಣೀರಿನಿಂದ ಭೂಮಿಯನ್ನು ಒದ್ದೆ ಮಾಡುತ್ತಾ ತಿರುಗಾಡಿದಳು.

ತತೋಽನ್ಯಾ ದ್ವಾದಶ ಸಮಾ ಬಾಹುದಾಮಭಿತೋ ನದೀಮ್ ।
ಪಾರ್ಶ್ವೇ ಹಿಮವತೋ ರಮ್ಯೇ ತಪೋ ಘೋರಂ ಸಮಾದದೇ ॥೮೮॥

ಅನಂತರ ಹನ್ನೆರಡು ವರ್ಷಗಳ ಕಾಲ ಹಿಮಾಲಯ ಪರ್ವತದ ಹತ್ತಿರ 'ಬಾಹುದಾ' ನದಿಯ ಸಮೀಪದಲ್ಲಿ ಘೋರವಾದ ತಪಸ್ಸನ್ನು ಆಚರಿಸಿದಳು.

ಸಂಕ್ಷಿಪ್ತಕರಣಾ ತತ್ರ ತಪ ಆಸ್ಥಾಯ ಸುವ್ರತಾ ।
ಪಾದಾಂಗುಷ್ಠೇನ ಸಾಽತಿಷ್ಠದಕಂಪಂತ ತತಃ ಸುರಾಃ ॥೮೯॥

ಅವಳು ಇಂದ್ರಿಯಗಳನ್ನು ನಿಯಂತ್ರಿಸಿ ಪಾದಾಂಗುಷ್ಠದಿಂದ ಭೂಮಿಯ ಮೇಲೆ ನಿಂತು ತಪಸ್ಸನ್ನು ಮಾಡಿದಾಗ ದೇವತೆಗಳು ನಡುಗಿದರು.

ತಸ್ಯಾಸ್ತೀವ್ರಂ ತಪೋ ದೃಷ್ಟ್ವಾ ಸುರಾಣಾಂ ಕ್ಷೋಭಕಾರಣಮ್ ।
ವಿಸ್ಮಿತಶ್ಚೈವ ಹೃಷ್ಟಶ್ಚ ತಸ್ಯಾನುಗ್ರಹಬುದ್ಧಿನಾ ॥೯೦॥

ಅನಂತಸೇನೋ ಭಗವಾನ್ ಕುಮಾರಃ ಸರ್ವತಃ ಪ್ರಭುಃ ।
ಮಾನಯನ್ ರಾಜಪುತ್ರೀಂ ತಾಂ ದದೌ ತಸ್ಯೈ ಶುಭಾಂ ಸ್ರಜಮ್ ॥

ದೇವತೆಗಳ ಕ್ಷೋಭೆಗೆ ಕಾರಣವಾದ ಅವಳ ತೀವ್ರವಾದ ತಪಸ್ಸನ್ನು ನೋಡಿ, ಸಂತುಷ್ಟನೂ, ವಿಸ್ಮಿತನೂ ಆದ ಶಿವನು ಆ ರಾಜಪುತ್ರಿಗೆ ಅನುಗ್ರಹ ಮಾಡುವ ದೃಷ್ಟಿಯಿಂದ ಅವಳಿಗೆ ಒಳ್ಳೆಯ ಹೂಮಾಲೆಯನ್ನು ಕೊಟ್ಟನು.

ಏಷಾ ಪುಷ್ಕರಿಣೇ ದಿವ್ಯಾ ಯಥಾವತ್ ಸಮುಪಸ್ಥಿತಾ ।
ಅಂಬೇ ತ್ವಚ್ಛೋಕಶಮನೀ ಮಾಲಾ ಭುವಿ ಭವಿಷ್ಯತಿ ॥೯೨॥

ಇದು ದಿವ್ಯವಾದ ಕಮಲಪುಷ್ಪಗಳ ಮಾಲೆಯು. ಯಥಾವತ್ತಾಗಿ ನಿನ್ನ ಕೈ ಸೇರಿದೆ. ಅಂಬೇ ಈ ಮಾಲೆಯು ಭೂಮಿಯಲ್ಲಿ ನಿನ್ನ ಶೋಕವನ್ನು ಪರಿಹರಿಸುತ್ತದೆ.

ಏತಾಂ ಚೈವ ಮಯಾ ದತ್ತಾಂ ಯೋ ಮಾಲಾಂ ಧಾರಯಿಷ್ಯತಿ ।
ಸೋಽಸ್ಯ ಭೀಷ್ಮಸ್ಯ ನಿಧನೇ ಕಾರಣಂ ವೈ ಭವಿಷ್ಯತಿ ॥೯೩॥

ನಾನು ಕೊಟ್ಟ ಈ ಕಮಲಪುಷ್ಪಮಾಲೆಯನ್ನು ಯಾವನು ಧರಿಸುವನೋ ಅವನು ಭೀಷ್ಮನ ನಿಧನಕ್ಕೆ ಕಾರಣನಾಗುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕೋತ್ತರಶತತಮೋಽಧ್ಯಾಯಃ ॥

॥ ಸಂಭವಪರ್ವಣಿ ಏಕೋನಪಂಚಾಶತ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರು ಒಂದನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ-ಅಧ್ಯಾಯ-೧೧

ರುದ್ರಸ್ತು ತಸ್ಯಾಸ್ತಪಸಾ ತುಷ್ಟಃ ಪ್ರಾದಾದ್ ವರಂ ತದಾ ।
ಭೀಷ್ಮಸ್ಯ ಮೃತಿಹೇತುತ್ವಂ ಕಾಲಾತ್ ಪುಂದೇಹಸಂಭವಮ್ ॥೧೦೦॥

ಅಂಬೆಯ ತಪಸ್ಸಿಗೆ ಸಂತುಷ್ಟನಾದ ಶಿವ ಅವಳಿಗೆ ಭೀಷ್ಮನ ಮರಣಕ್ಕೆ ಕಾರಣಳಾಗುವ ಮತ್ತು ಸ್ವಲ್ಪ ಕಾಲಾನಂತರ ಪುರುಷಶರೀರವನ್ನು ಹೊಂದುವ ವರ ನೀಡಿದ.

ಮಾಲಾಂ ಚ ಯ ಇಮಾಂ ಮಾಲಾಂ ಗೃಹ್ಣೀಯಾತ್ ಸ ಹನಿಷ್ಯತಿ ।
ಭೀಷ್ಮಮಿತ್ಯೇವ ತಾಂ ಮಾಲಾಂ ಗೃಹೀತ್ವಾ ಸಾ ನೃಪಾನ್ ಯಯೌ ॥

ಶಿವ ಅಂಬೆಗೆ ಒಂದು ಮಾಲೆಯನ್ನೂ ಕೊಟ್ಟು 'ಈ ಮಾಲೆಯನ್ನು ಯಾರು ಸ್ವೀಕರಿಸುವನೋ ಅವನು ಭೀಷ್ಮನನ್ನು ಕೊಲ್ಲುವನು' ಎಂದ. ಅಂಬೆ ಆ ಮಾಲೆಯನ್ನು ಹಿಡಿದುಕೊಂಡು ರಾಜರುಗಳ ಬಳಿಗೆ ಹೋದಳು.

ತಾಂ ನ ಭೀಷ್ಮಭಯಾತ್ ಕೇಽಪಿ ಜಗೃಹುಸ್ತಾಂ ಹಿ ಸಾ ತತಃ ।
ದ್ರುಪದಸ್ಯ ಗೃಹದ್ವಾರಿ ನ್ಯಸ್ಯ ಯೋಗಾತ್ ತನುಂ ಜಹೌ ॥೧೦೨॥

ಆದರೆ ಭೀಷ್ಮನ ಭಯದಿಂದ ಆ ಮಾಲೆಯನ್ನು ಯಾರೂ ಸ್ವೀಕರಿಸಲಿಲ್ಲ. ಕೊನೆಗೆ ಅದನ್ನು ದ್ರುಪದ ಅರಮನೆಯ ದ್ವಾರದಲ್ಲಿಟ್ಟು ಯೋಗಬಲದಿಂದ ಶರೀರ ತ್ಯಾಗ ಮಾಡಿದಳು, ಅಂಬೆ.

ಏತಸ್ಮಿನ್ನೇವ ಕಾಲೇ ತು ಸುತಾರ್ಥಂ ದ್ರುಪದಸ್ತಪಃ ।
ಚಕಾರ ಶಂಭವೇ ಚೈನಂ ಸೋಽಬ್ರವೀತ್ ಕನ್ಯಕಾ ತವ ॥೧೦೩॥

ಭೂತ್ವಾ ಭವಿಷ್ಯತಿ ಪುಮಾನಿತಿ ಸಾಂಬಾ ತತೋಽಜನಿ ।
ನಾಮ್ನಾ ಶಿಖಂಡಿನೀ ತಸ್ಯಾಃ ಪುಂವತ್ ಕರ್ಮಾಣಿ ಚಾಕರೋತ್ ।೧೦೪।

ಇದೇ ಸಮಯದಲ್ಲಿ ದ್ರುಪದ ಶಿವನನ್ನು ಕುರಿತು ಗಂಡುಮಗುವಿಗಾಗಿ ತಪಸ್ಸು ಮಾಡಿದ. ಶಿವ, 'ನಿನಗೆ ಹೆಣ್ಣು ಮಗು ಹುಟ್ಟಿ ಗಂಡಾಗುತ್ತದೆ' ಎಂದ. ಆಗ ಅಂಬೆ ಶಿಖಂಡಿನೀ ಎಂಬ ಹೆಸರಿನಿಂದ ಮಗಳಾಗಿ ಜನಿಸಿದಳು. ಅವಳಿಗೆ ಗಂಡುಮಕ್ಕಳಂತೆ ಚೌಲ ಉಪನಯನಾದಿ ಕರ್ಮ ಮಾಡಿದ ದ್ರುಪದ.

ತಸ್ಯೈ ಪಾಂಚಾಲರಾಜಃ ಸ ದಶಾರ್ಣಾಧಿಪತೇಃ ಸುತಾಮ್ ।
ಉದ್ವಾಹಯಾಮಾಸ ಸಾ ತಾಂ ಪುಂವೇಷೇಣೈವ ಗೂಹಿತಾಮ್ ॥೧೦೫॥

ಅನ್ಯತ್ರ ಮಾತಾಪಿತ್ರೋಸ್ತು ನ ವಿಜ್ಞಾತಾಂ ಬುಬೋಧ ಹ ।
ಧಾತ್ರೈನ್ಯ ವೇದಯತ್ ಸಾಥ ತತ್ತಿತ್ರೇ ಸಾ ನ್ಯವೇದಯತ್ ॥೧೦೬॥

ಶಿಖಂಡಿನಿಗೆ ದ್ರುಪದ ದಶಾರ್ಣರಾಜನಾದ ಹಿರಣ್ಯವರ್ಮನ ಮಗಳನ್ನು ಮದುವೆ ಮಾಡಿಸಿದ. ಆ ರಾಜಕುಮಾರಿ 'ಈಕೆ ವಸ್ತುತಃ ಪುರುಷವೇಷದಿಂದ ನಿಜರೂಪ ಮರೆ

ಮಾಡಿಕೊಂಡಿರುವ ಹೆಣ್ಣು, ತಂದೆ ತಾಯಿಗಳ ಹೊರತು ಇನ್ನಾರಿಗೂ ಇವಳ ನಿಜರೂಪ ತಿಳಿದಿಲ್ಲ' ಎಂದು ತಿಳಿದಳು. ದಾದಿಗೆ ತಿಳಿಸಿದಳು. ಅವಳು ಅವಳ ತಂದೆಗೆ ತಿಳಿಸಿದಳು.

ಸ ಕ್ರುದ್ಧಃ ಪ್ರೇಷಯಾಮಾಸ ನಿಹನ್ಮಿ ತ್ವಾಂ ಸಭಾಂಧವಮ್ ।
ಇತಿ ಪಾಂಚಾಲರಾಜಾಯ ನಿರ್ಜಗಾಮ ಚ ಸೇನಯಾ ॥೧೦೭॥

ತಂದೆ ಹಿರಣ್ಯವರ್ಮ ಕ್ರುದ್ಧನಾಗಿ 'ನಿನ್ನನ್ನು ಬಂಧುಗಳ ಸಮೇತ ಕೊಲ್ಲುವೆನು' ಎಂದು ದ್ರುಪದನಿಗೆ ಹೇಳಿಕಳಿಸಿ ಸೈನ್ಯ ಸಮೇತನಾಗಿ ಹೊರಟ.

ವಿಶ್ವಸ್ಯ ವಾಕ್ಯಂ ರುದ್ರಸ್ಯ ಪುಮಾನೇವೇತಿ ಪಾರ್ಷತಃ ।
ಪ್ರೇಷಯಾಮಾಸ ಧಿಗ್ ಬುದ್ಧಿರ್ಭಿನ್ನಾ ತೇ ಬಾಲವಾಕ್ಯತಃ ।
ಅಪರೀಕ್ಷಕಸ್ಯ ತೇ ರಾಷ್ಟ್ರಂ ಕಥಮಿತ್ಯೇವ ನರ್ಮಕೃತ್ ॥೧೦೮॥

ಶಿವನ ಮಾತನ್ನು ನಂಬಿ ದ್ರುಪದ 'ಶಿಖಂಡಿ ಪುರುಷನೆ. ಏನೂ ಅರಿಯದ ಜನರ ಮಾತಿನಿಂದ ನಿನ್ನ ಬುದ್ಧಿ ಕೆಟ್ಟಿದೆ. ನಿನಗೆ ಧಿಕ್ಕಾರ. ರಾಜನಾದ ನೀನು ಹೀಗೆ ವಿಚಾರಶೂನ್ಯನಾದರೆ ರಾಷ್ಟ್ರ ಹೇಗೆ ಉಳಿದೀತು?' ಎಂದು ಹಾಸ್ಯದ ಮಾತನ್ನು ಹೇಳಿ ಕಳಿಸಿದ.

ಅಥ ಭಾರ್ಯಾಸಮೇತಂ ತಂ ಪಿತರಂ ಚಿಂತಯಾಕುಲಮ್ ।
ದೃಷ್ಟ್ವಾ ಶಿಖಂಡಿನೀ ದುಃಖಾನ್ಮನ್ನಿಮಿತ್ತಾನ್ನ ನಶ್ಯತು ।
ಇತಿ ಮತ್ವಾ ವನಾಯೈವ ಯಯೌ ತತ್ರ ಚ ತುಂಬುರುಃ ॥೧೦೯॥

ತಂದೆತಾಯಿಗಳು ಚಿಂತಾಕುಲರಾಗಿರುವುದನ್ನು ಕಂಡು ಶಿಖಂಡಿನಿ ತನ್ನಿಂದಾಗಿ ಅವರು ನಾಶವಾಗಕೂಡದೆಂದು ಬಗೆದು ದುಃಖದಿಂದ ತುಂಬುರು ಗಂಧರ್ವನಿದ್ದ ಕಾಡಿಗೆ ಹೋದಳು.

ಸ್ಥೂಣಾಕರ್ಣಾಭಿಧೇಯಸ್ತಾಮಶಪ್ಯದ್ ದೃಢಕರ್ಣತಃ ।
ಸ ತಸ್ಯಾ ಅಖಿಲಂ ಶ್ರುತ್ವಾ ಕೃಪಾಂ ಚಕ್ರೇ ಮಹಾಮನಾಃ ॥೧೧೦॥

ದೃಢವಾದ ಕಿವಿಗಳಿದ್ದ ಪ್ರಯುಕ್ತ ಸ್ಥೂಣಾಕರ್ಣನೆಂದೂ ಕರೆಸಿಕೊಂಡಿದ್ದ ವಿಶಾಲಹೃದಯಿಯಾದ ತುಂಬುರು ಶಿಖಂಡಿಯ ಎಲ್ಲ ವೃತ್ತಾಂತವನ್ನು ಕೇಳಿ ಕೃಪೆ ಮಾಡಿದ.

ಸ ತಸ್ಮೈ ಸ್ವಂ ವಪುಃ ಪ್ರಾದಾತ್ ತದೀಯಂ ಜಗೃಹೇ ತಥಾ ।
ಅಂಶೇನ ಪುಂಸ್ವಭಾವಾರ್ಥಂ ಪೂರ್ವದೇಹೇ ಸಮಾಸ್ಥಿತಃ ॥೧೧೧॥

ಶಿಖಂಡಿನಿಗೆ ತನ್ನ ಶರೀರವನ್ನು ಕೊಟ್ಟ. ಹಾಗೆಯೇ ಅವಳ ಶರೀರವನ್ನು ತಾನು ಸ್ವೀಕರಿಸಿದ. ತಾನು ಕೊಟ್ಟ ಹಿಂದಿನ ಶರೀರದಲ್ಲಿ ಪುರುಷ ಸ್ವಭಾವ ಬರುವುದಕ್ಕಾಗಿ ತಾನೂ ಒಂದು ಅಂಶದಿಂದ ಅದರಲ್ಲಿದ್ದ.

ಪುಂಸಾಂ ಸ್ತ್ರೀತ್ವಮ್ ಭವೇತ್ ಕ್ವಾಪಿ ತಥಾಯಂತೇ ಪುಮಾನ್ ಭವೇತ್ ।
ಸ್ತ್ರೀಣಾಂ ನೈವ ಹಿ ಪುಂಸ್ತ್ವಂ ಸ್ಯಾದ್ ಬಲವತ್ಕಾರಣೈರಪಿ ॥೧೧೨॥

ಪುರುಷರಿಗೆ ಸ್ತ್ರೀತ್ವವೆಂದಾದರೂ ಬಂದೀತು. ಆದರೆ ಕೊನೆಗೆ ಅವರು ಪುರುಷರೇ ಆಗುತ್ತಾರೆ. ಸ್ತ್ರೀಯರಿಗೆ ಪುರುಷತ್ವ ಬಲವತ್ತಾದ ಕಾರಣಗಳಿಂದಲೂ ಬರಲಾಗದು.

ಅತಃ ಶಿವರೇಽಪ್ಯೇಷಾ ಜಜ್ಞೇ ಯೋಷೈವ ನಾನ್ಯಥಾ ।
ಪಶ್ಚಾತ್ ಪುಂದೇಹಮಪಿ ಸಾ ಪ್ರವಿವೇಶೈವ ಪುಂಯುತಮ್ ॥೧೧೩॥

ನಾಸ್ಯಾ ದೇಹಃ ಪುಂಸ್ತ್ವಮಾಪ ನ ಚ ಪುಂಸಾನಧಿಷ್ಠಿತೇ ।
ಪುಂದೇಹೇ ನ್ಯವಸತ್ ಸಾಥ ಗಂಧರ್ವೇಣ ತ್ವಧಿಷ್ಠಿತಮ್ ।
ಗಾಂಧರ್ವಂ ದೇಹಮಾವಿಶ್ಯ ಸ್ವಕೀಯಂ ಭವನಂ ಯಯೌ ॥೧೧೪॥

ಅದರಿಂದ ಶಿವವರವಿದ್ದರೂ ಶಿಖಂಡಿನಿ ಹೆಣ್ಣಾಗಿಯೆ ಹುಟ್ಟಿದಳು. ಗಂಡಾಗಿ ಅಲ್ಲ. ಅನಂತರವೂ ಪುರುಷಜೀವಯುಕ್ತವಾದ ಪುರುಷ ಶರೀರವನ್ನೇ ಪ್ರವೇಶಿಸಿದಳು ಹೊರತು ಅವಳ ಶರೀರ ಪುರುಷ ಶರೀರವಾಗಲೂ ಇಲ್ಲ. ಪುರುಷ ಜೀವನವಿಲ್ಲದ ಒಂದು ಪುರುಷಶರೀರದಲ್ಲಿ ಅವಳು ನೆಲೆಸಲೂ ಇಲ್ಲ. ಹೀಗೆ ಅವಳು ಗಂಧರ್ವಾಂಶ ಯುಕ್ತವಾದ ಗಂಧರ್ವ ಶರೀರವನ್ನು ಪ್ರವೇಶಿಸಿ ತನ್ನ ಮನೆಗೆ ಹೋದಳು.

ತಸ್ಯಾಸ್ತದ್ದೇಹಾದೃಶ್ಯಂ ಗಂಧರ್ವಸ್ಯ ಪ್ರಸಾದತಃ ।
ಪ್ರಾಪ ಗಂಧರ್ವದೇಹೋಽಪಿ ತಯಾ ಪಶ್ಚಾದಧಿಷ್ಠಿತಃ ॥೧೧೫॥

ಶ್ವೋ ದೇಹಿ ಮಮ ದೇಹಿಂ ಮೇ ಸ್ವಂ ಚ ದೇಹಂ ಸಮಾವಿಶ ।
ಇತ್ಯುಕ್ತ್ವಾ ಸ ತು ಗಂಧರ್ವಃ ಕನ್ಯಾ ದೇಹಂ ಸಮಾಸ್ಥಿತಃ ॥೧೧೬॥

ಉವಾಸೈವ ವನೇ ತಸ್ಮಿನ್ ಧನದಸ್ತತ್ರ ಚಾಗಮತ್ ।
ಅಪ್ರತ್ಯುತ್ಥಾಯಿನಂ ತಂತುಲೀಯಮಾನಂ ವಿಲಜ್ಜಯಾ ॥೧೧೭॥

ಶಶಾಪ ಧನದೋ ದೇವಶ್ಚಿರಮಿತ್ಥಂ ಭವೇತಿ ತಮ್ ॥೧೧೮॥

ಗಂಧರ್ವನ ಅನುಗ್ರಹದಿಂದಲೆ ಗಂಧರ್ವಶರೀರ ಶಿಖಂಡಿನಿಯ ಸ್ತ್ರೀಶರೀರದ ಸಾದೃಶ್ಯವನ್ನು ಹೊಂದಿತ್ತು . ಬಳಿಕ ಅವಳು ಆ ಶರೀರವನ್ನು ಪ್ರವೇಶಿಸಿದಳು. 'ನಾಳೆ ನೀನು ನನ್ನ ಶರೀರವನ್ನು ನನಗೇ ಕೊಡು, ನಿನ್ನ ಶರೀರವನ್ನು ನೀನು ಪ್ರವೇಶಿಸು' ಎಂದು ಹೇಳಿ ಆ ತುಂಬುರು ಗಂಧರ್ವ ಸ್ತ್ರೀಶರೀರವನ್ನು ಸ್ವೀಕರಿಸಿ ಆ ಕಾಡಿನಲ್ಲಿಯೆ ಇದ್ದ. ಅಲ್ಲಿಗೆ ಕುಬೇರದೇವ ಬಂದ. ತುಂಬುರು ಎದ್ದು ನಿಂತು ಇದಿರುಗೊಳ್ಳದೆ ನಾಚಿಕೆಯಿಂದ ಪೊದೆಗಳಲ್ಲಿ ಅಡಗಿ ಕುಳಿತುದನ್ನು ಕಂಡು ಶಪಿಸಿದ, 'ನೀನು ಬಹುಕಾಲ ಹೀಗೆ ಇರು' ಎಂದು.

ಯದಾ ಯುದ್ಧೇ ಮೃತಿಂ ಯಾತಿ ಸಾ ಕನ್ಯಾ ಪುಂತನುಸ್ಥಿತಾ ।
ತದಾ ಪುಂಸ್ತ್ವಂ ಪುನರ್ಯಾಸಿ ಚಪಲತ್ವಾದಿತೀರಿತಃ ॥೧೧೯॥

'ನಿನ್ನ ಪುರುಷಶರೀರದಲ್ಲಿರುವ ಆ ಹೆಣ್ಣು ಮುಂದೆ ಯುದ್ಧದಲ್ಲಿ ಮರಣ ಹೊಂದುವಾಗ ನೀನು ಪುನಃ ನಿನ್ನ ಆ ಪುರುಷ ಶರೀರವನ್ನು ಹೊಂದುತ್ತಿ . ಇದು ನಿನ್ನ ಚಾಪಲ್ಯದ ಫಲ' ಎಂದ ಕುಬೇರ.

ತಥಾವಸತ್ ಸ ಗಂಧರ್ವಃ ಕನ್ಯಾ ಪಿತ್ರೋರಶೇಷತಃ ।
ಕಥಯಾಮಾಸಾನುಭೂತಂ ತೌ ಭೃಶಂ ಮುದಮಾಪತುಃ ॥೧೨೦॥

ಪರೀಕ್ಷ್ಯ ತಾಮುಪಾಯೈಶ್ಚ ಶ್ವಶುರೋ ಲಜ್ಜಿತೋ ಯಯೌ ॥೧೨೧॥

ತುಂಬುರು ಹಾಗೇ ಸ್ತ್ರೀ ಶರೀರದಲ್ಲಿ ವಾಸ ಮಾಡಿದ. ಶಿಖಂಡಿನಿ ತಂದೆ ತಾಯಿಗಳಿಗೆ ತನ್ನ ಅನುಭವವನ್ನೆಲ್ಲ ಹೇಳಿಕೊಂಡಳು. ಅವರು ಬಹಳ ಸಂತೋಷಪಟ್ಟರು. ಮಾವ ಅವಳನ್ನು ನಾನಾ ಉಪಾಯಗಳಿಂದ ಪರೀಕ್ಷಿಸಿ ಸೋತು ಲಜ್ಜಿತನಾಗಿ ಹೊರಟುಹೋದ.

ಶ್ವೋಭೂತೇ ಸಾ ತು ಗಂಧರ್ವಂ ಪ್ರಾಪ್ಯ ತದ್ವಚನಾತ್ ಪುನಃ ।
ಯಯೌ ತೇನೈವ ದೇಹೇನ ಪುಂಸ್ತ್ವಮೇವ ಸಮಾಶ್ರಿತಾ ॥೧೨೨॥

ಸ ಶಿಖಂಡೀ ನಾಮತೋಽಭೂದಸ್ತ್ರಶಸ್ತ್ರಪ್ರತಾಪವಾನ್ ॥೧೨೩॥

ಶಿಖಂಡಿನಿ ಮರುದಿನ ಪುನಃ ಗಂಧರ್ವನ ಬಳಿಗೆ ಹೋಗಿ, ಅವನು ಹೇಳಿದ ಪ್ರಕಾರ ಅದೇ ಶರೀರದಿಂದ ಪುರುಷತ್ವವನ್ನು ತಳೆದೇ ಮನೆ ಸೇರಿದಳು. ಆ ಪುರುಷನೆ ಮುಂದೆ ಅಸ್ತ್ರಶಸ್ತ್ರಪ್ರತಾಪ ಉಳ್ಳವನಾಗಿ ಶಿಖಂಡಿ ಎಂಬ ಹೆಸರಿನಿಂದ ಪ್ರಸಿದ್ಧನಾದ.

★ ★ ★ ★

ನೂರ ಎರಡನೆಯ ಅಧ್ಯಾಯ

(ಅಂಬೆಯ ಅಲೆದಾಟ, ದ್ರುಪದನ ಗೃಹದ್ವಾರದಲ್ಲಿ ಮಾಲೆಯ ನಿಕ್ಷೇಪ. ಶಿಖಂಡಿಯಿಂದ ಅದರ ಧಾರಣೆ ಮತ್ತು ಶಿಖಂಡಿಗೆ ಪುರುಷಭಾವ.)

ಅಂಬಾ

ಅನ್ಯಪೂರ್ವೇತಿ ಮಾಂ ಪಾಪೋ ನಾಭಿನಂದತಿ ಬಾಲಿಶಃ ।
ಸಾಽಹಂ ಧರ್ಮಾಚ್ಚ ಕಾಮಾಚ್ಚ ವಿಹೀನಾ ಶೋಕಧಾರಿಣೀ ।
ಅಪತಿಃ ಕ್ಷತ್ರಿಯಾನ್ ಸರ್ವಾನಾಕ್ರಂದಾಮಿ ಸಮಂತತಃ ॥೧॥

ನಾನು ಮೊದಲು ಇನ್ನೊಬ್ಬನನ್ನು ಪ್ರೀತಿಸಿರುವೆನೆಂಬ ಕಾರಣದಿಂದ ಬಾಲಿಶನಾದ ದುಷ್ಟನಾದ ಭೀಷ್ಮನು ನನ್ನನ್ನು ಸ್ವೀಕರಿಸುತ್ತಿಲ್ಲ. ನಾನು ಪತಿಯಿಲ್ಲದೆ ಧರ್ಮದಿಂದಲೂ ಮತ್ತು ಕಾಮದಿಂದಲೂ ವಂಚಿತಳಾಗಿ ಶೋಕಪಡುತ್ತಾ ಎಲ್ಲಾ ಕಡೆಯಲ್ಲಿ ಕ್ಷತ್ರಿಯರನ್ನು ಕುರಿತು ಆಕ್ರಂದನ ಮಾಡುತ್ತಿದ್ದೇನೆ.

ಇಯಂ ವಃ ಕ್ಷತ್ರಿಯಾ ಮಾಲಾ ಯಾ ಭೀಷ್ಮಂ ನಿಹನಿಷ್ಯತಿ ।
ಅಹಂ ಚ ಭಾರ್ಯಾ ತಸ್ಯ ಸ್ಯಾಂ ಯೋ ವೀರಂ ಘಾತಯಿಷ್ಯತಿ ॥೨॥

ಎಲೈ ಕ್ಷತ್ರಿಯರೇ, ಈ ಮಾಲೆಯು ನಿಮಗಾಗಿದೆ. ಇದನ್ನು ಧರಿಸಿದವನು ಭೀಷ್ಮನನ್ನು ಕೊಲ್ಲುವನು. ಯಾರು ಭೀಷ್ಮನನ್ನು ಕೊಲ್ಲುವನೋ, ನಾನು ಅವನ ಪತ್ನಿಯಾಗುವೆನು.

ವೈಶಂಪಾಯನಃ

ತಸ್ಯಾಂ ಚಂಕ್ರಮ್ಯಮಾಣಾಯಾಂ ಸಮಾಃ ಪಂಚ ಗತಾಃ ಪರಾಃ ।
ನಾಭವಚ್ಛರಣಂ ಕಶ್ಚಿತ್ ಕ್ಷತ್ರಿಯೋ ಭೀಷ್ಮಜಾದ್ ಭಯಾತ್ ॥೩॥

ಹೀಗೆ ಅವಳು ಅಲೆದಾಡುತ್ತಾ ಐದು ಶ್ರೇಷ್ಠವಾದ ವರ್ಷಗಳು ಕಳೆದವು. ಭೀಷ್ಮರ ಮೇಲಿನ ಹೆದರಿಕೆಯಿಂದ ಯಾವ ಕ್ಷತ್ರಿಯನೂ ಅವಳಿಗೆ ಆಶ್ರಯವನ್ನು ಕೊಡಲಿಲ್ಲ.

ಅಗಚ್ಛತ್ ಸೋಮಕಂ ಸಾ ತು ಪಾಂಚಾಲೇಷು ಯಶಸ್ವಿನಮ್ ।
ಸತ್ಯಸಂಧಂ ಮಹೇಷ್ವಾಸಂ ಸತ್ಯಧರ್ಮಪರಾಯಣಮ್ ॥೪॥

ಅವಳು ಪಾಂಚಾಲದೇಶಕ್ಕೆ ಹೋಗಿ ಯಶಸ್ವಿನಿಯೂ, ಸತ್ಯಸಂಧನೂ, ಸತ್ಯಧರ್ಮಪರಾಯಣನೂ, ಧನುರ್ವೇದವನ್ನು ಬಲ್ಲವನೂ ಆದ ಸೋಮಕನನ್ನು ಸಮೀಪಿಸಿದಳು.

ಸಾ ಸಭಾದ್ವಾರಮಾಗತ್ಯ ಪಾಂಚಾಲೈರಭಿರಕ್ಷಿತಮ್ ।
ಪಾಂಚಾಲರಾಜಮಾಕ್ರಂದತ್ ಪ್ರಗೃಹ್ಯ ಸುಭುಜಾ ಭುಜೌ ॥೫॥

ಅವಳು ಪಾಂಚಾಲರಿಂದ ರಕ್ಷಿತವಾದ ಸಭಾದ್ವಾರವನ್ನು ತಲುಪಿ, ತನ್ನ ಎರಡು ಸುಂದರವಾದ ಭುಜಗಳನ್ನು ಮೇಲೆತ್ತಿ ಪಾಂಚಾಲರಾಜನನ್ನು ಕುರಿತು, ಆಕ್ರಂದನ ಮಾಡಿ ಹೇಳಿದಳು.

ಅಂಬಾ

ಭೀಷ್ಮೇಣ ಹನ್ಯಮಾನಾಂ ಮಾಂ ಮಜ್ಜತೀಮಿವ ಚ ಹ್ರದೇ ।
ಯಜ್ಞಸೇನಾಭಿಧಾವೇಹ ಪಾಣಿಮಾಲಂಬ್ಯ ಚೇಶ್ವರ ॥೬॥

ಯಜ್ಞಸೇನನೇ, ಭೀಷ್ಮನಿಂದ ಘಾತಿತಳಾಗಿ ಮಡುವಿನಲ್ಲಿ ಮುಳುಗುವಂತಿರುವ ನನ್ನನ್ನು ಹಿಡಿದು ಎತ್ತಿ ರಕ್ಷಿಸಲು ಇಲ್ಲಿಗೆ ಓಡಿ ಬಾ. ನೀನು ಸಮರ್ಥನಾಗಿದ್ದೀಯೆ.

ತೇನ ಮೇ ಸರ್ವಧರ್ಮಾಶ್ಚ ರತಿಭೋಗಾಶ್ಚ ಕೇವಲಾಃ ।
ಉಭೌ ಚ ಲೋಕೌ ಕೀರ್ತಿಶ್ಚ ಸಮೂಲೌ ಸಫಲೌ ಹೃತೌ ॥೭॥

ಆ ಭೀಷ್ಮನು ನನ್ನ ಎಲ್ಲಾ ಧರ್ಮಗಳನ್ನೂ, ರತಿಭೋಗಗಳನ್ನೂ, ಈ ಲೋಕ, ಪರಲೋಕಗಳನ್ನೂ ಮತ್ತು ಕೀರ್ತಿಯನ್ನೂ, ಅವುಗಳ ಕಾರಣ ಮತ್ತು ಫಲ ಎರಡೂ ಇಲ್ಲದಂತೆ ನಾಶಮಾಡಿದ್ದಾನೆ.

ಕ್ರೋಶಂತ್ಯೇವಂ ನ ವಿಂದಾಮಿ ರಾಜನ್ಯಂ ಶರಣಂ ಕ್ವಚಿತ್ ।
ಕಿಂ ನು ನಿಃಕ್ಷತ್ರಿಯೋ ಲೋಕೋ ಯತ್ರ ನಾಥೋಽವಸೀದತಿ ॥೮॥

ನಾನು ಹೀಗೆ ಕಿರುಚುತ್ತಿದ್ದರೂ ಯಾವ ರಾಜನೂ ನನಗೆ ಅಭಯವನ್ನು ಕೊಡುತ್ತಿಲ್ಲ. ಹೀಗೆ ಬೇಡುವವನು ನಾಶಹೊಂದುತ್ತಿರುವುದರಿಂದ, ಈ ಲೋಕದಲ್ಲಿ ಕ್ಷತ್ರಿಯರೇ ಇಲ್ಲವೇ?

ಸಮಾಗಮ್ಯ ತು ರಾಜಾನೋ ಮಯೋಕ್ತಾ ರಾಜಸತ್ತಮಾಃ ।
ಇಕ್ಷ್ವಾಕೂಣಾಂ ಚ ಯೇ ವೃದ್ಧಾಃ ಪಾಂಚಾಲಾನಾಂ ಚ ಯೇ ವರಾಃ ॥೯॥

ತ್ವತ್ಪ್ರಸಾದಾದ್ ವಿವಾಹೇಽಸ್ಮಿನ್ ಮಾಽಧರ್ಮೋ ಮಾ ಪರಾಜಯಃ।
ಪ್ರಸೀದ ಯಜ್ಞಸೇನೇಹ ಗತಿರ್ಮೇ ಭವ ಸೋಮಕ ॥೧೦॥

ನಾನು ಇಕ್ಷ್ವಾಕುವಂಶದ ಮತ್ತು ಪಾಂಚಾಲವಂಶದ ಹಿರಿಯರಾದ ಮತ್ತು ಶ್ರೇಷ್ಠರಾದ ಅನೇಕ ರಾಜರನ್ನು ಸಮೀಪಿಸಿ, ನಿಮ್ಮ ಅನುಗ್ರಹದಿಂದ ನಾನು ಬಯಸಿದ ಈ ವಿವಾಹದ ವಿಷಯದಲ್ಲಿ ಅಧರ್ಮವಾಗಲೀ, ಪರಾಜಯವಾಗಲೀ, ಉಂಟಾಗದಿರಲಿ ಎಂದು ಕೇಳಿದೆ. ಸೋಮಕ ! ರಾಜನಾದ ಯಜ್ಞಸೇನನೇ, ಅನುಗ್ರಹವನ್ನು ಮಾಡು. ನೀನು ನನಗೆ ಗತಿಯಾಗು.

ಸೋಮಕಃ

ಜಾನಾಮಿ ತ್ವಾ ಬೋಧಯಾಮಿ ರಾಜಪುತ್ರಿ ವಿಶೇಷತಃ ।
ಯಥಾಶಕ್ತಿ ಯಥೋತ್ಸಾಹಂ ಬಲಂ ಸಂಧಾರಯಾಮ್ಯಹಮ್ ॥

ರಾಜಪುತ್ರಿ, ನಾನು ನಿನ್ನ ಅಭಿಪ್ರಾಯವನ್ನು ತಿಳಿದಿದ್ದೇನೆ. ನನಗೆ ಯಥಾಶಕ್ತಿ, ಉತ್ಸಾಹಕ್ಕನುಗುಣವಾದ ಬಲವಿದೆಯೆಂದು ನಿನಗೆ ತಿಳಿಸುತ್ತಿದ್ದೇನೆ.

ಅನ್ಯಸ್ಮಾತ್ ಪಾರ್ಥಿವಾತ್ ತೇ ಯದ್ ಭಯಂ ಸ್ಯಾತ್ ಪಾರ್ಥಿವಾತ್ಮಜೇ।
ತಸ್ಯಾಪನಯನೇ ಹೇತುಂ ಸಂವಿಧಾತುಮಹಂ ಪ್ರಭುಃ ॥೧೨॥

ರಾಜಕುಮಾರಿಯೇ, ನಿನಗೆ ಬೇರೆ ರಾಜರಿಂದ ಭಯವುಂಟಾದರೆ, ನಾನು ಅದಕ್ಕೆ ಪರಿಹಾರ ನಿಮಿತ್ತವನ್ನು ಆಚರಿಸಲು ಸಮರ್ಥ.

ನಹಿ ಶಾಂತನವಸ್ಯಾಹಂ ಮಹಾಸ್ತ್ರಸ್ಯ ಪ್ರಹಾರಿಣಃ ।
ಈಶ್ವರಃ ಕ್ಷತ್ರಿಯಾಣಾಂ ಹಿ ಬಲಂ ಧರ್ಮೋನುವರ್ತತೇ ॥೧೩॥

ಆದರೆ ಮಹಾಸ್ತ್ರವುಳ್ಳವನೂ ಮತ್ತು ಪ್ರಹರಣಶೀಲನೂ ಆದ ಭೀಷ್ಮನಿಂದ ನಿನ್ನನ್ನು ರಕ್ಷಿಸಲಾರೆ. ಕ್ಷತ್ರಿಯರು ತಮ್ಮ ಬಲವನ್ನು ಅನುಸರಿಸಿ ಕಾರ್ಯ ಮಾಡುತ್ತಾರೆ. ಇದು ಕ್ಷತ್ರಿಯರ ಧರ್ಮ.

ಸಾಧು ವ್ರಜ ಹಿ ಕಲ್ಯಾಣಿ ನ ಮಾಮಭಿಷಜೇದ್ ಬಲಮ್ ।
ನಹಿ ಭೀಷ್ಮಾದಹಂ ಧರ್ಮಂ ಶಕ್ತೋ ದಾತುಂ ಕಥಂಚನ ॥೧೪॥

ಕಲ್ಯಾಣಿಯೇ, ಭೀಷ್ಮರನ್ನು ಎದುರಿಸುವ ಬಲ ನನ್ನಲ್ಲಿ ಇಲ್ಲ. ಆದ್ದರಿಂದ ಸುಮ್ಮನೆ ಹೊರಟುಹೋಗು. ಭೀಷ್ಮರನ್ನು ವಿರೋಧಿಸಿ, ನಿನಗೆ ನ್ಯಾಯವನ್ನು ಕೊಡಲು ನಾನು ಸಮರ್ಥನಲ್ಲ.

ವೈಶಂಪಾಯನಃ

ಇತ್ಯುಕ್ತಾ ಸ್ರಜಮಾಸಜ್ಯ ದ್ವಾರಿ ರಾಜ್ಞೋ ಹ್ಯಪಾದ್ರವತ್ ।
ವ್ಯದಸ್ತಾಂ ಸರ್ವಲೋಕೇನ ತಪಸಾ ಸಂಶಿತವ್ರತಾಮ್ ॥೧೫॥

ತಾಮನ್ವಗಚ್ಛತ್ ದ್ರುಪದಃ ಸಾಲ್ವಂ ಜಲ್ಪನ್ ಪುನಃ ಪುನಃ ।
ಸ್ರಜಂ ಗೃಹಾಣ ಕಲ್ಯಾಣಿ ನ ಮೇ ವೈರಂ ಪ್ರಸಂಜಯೇಃ ॥೧೬॥

ಹೀಗೆ ಹೇಳಲ್ಪಟ್ಟ ಅಂಬೆಯು ರಾಜದ್ವಾರದಲ್ಲಿ ಆ ಮಾಲೆಯನ್ನು ತೂಗುಹಾಕಿ ಓಡಿಹೋದಳು. ಒಳ್ಳೆಯ ತಪಸ್ವಿನಿಯೂ, ವ್ರತಧಾರಣೆಯೂ, ಎಲ್ಲ ಲೋಕದಿಂದ ತಿರಸ್ಕರಿಸಲ್ಪಟ್ಟವಳೂ ಆದ ಅವಳನ್ನು ಸಾಲ್ವನ ಹೆಸರನ್ನು ಮತ್ತೆ ಮತ್ತೆ ಹೇಳುತ್ತಾ ದ್ರುಪದನು ಹಿಂಬಾಲಿಸಿ ಕಲ್ಯಾಣಿ, ಮಾಲೆಯನ್ನು ತೆಗೆದುಕೊಂಡು ಹೋಗು. ನನಗೆ ಭೀಷ್ಮರ ಜೊತೆಯಲ್ಲಿ ವೈರವನ್ನು ಉಂಟುಮಾಡಬೇಡ.

ಏವಮೇವ ತ್ವಯಾ ಕಾರ್ಯಮಿತಿ ಸ್ಮ ಪ್ರತಿಭಾಷಸೇ ।
ನತು ತಸ್ಯಾನ್ಯಥಾಭಾವೋ ದೈವಮೇತದಮಾನುಷಮ್ ॥೧೭॥

ನೀನು ಹೀಗೆಯೇ ಮಾಡಬೇಕೆಂದು ನನಗೆ ಹೇಳುತ್ತಿದ್ದೀಯೆ. ಏನು ನಡೆದಿದೆಯೊ, ಅದನ್ನು ವ್ಯತ್ಯಾಸ ಮಾಡಲು ಸಾಧ್ಯವಿಲ್ಲ. ಅದು ಮನುಷ್ಯರನ್ನು ಮೀರಿದ ದೈವದ ಚಿಂತನೆಯಾಗಿದೆ. (ಎಂದು ಹೇಳಿದನು)

ಅಂಬಾ

ಯಶ್ಚೈನಾಂ ಸ್ರಜಮಾದಾಯ ಸ್ವಯಂ ಕಂಠೇ ಪ್ರಮೋಕ್ಷ್ಯತೇ ।
ಸ ಭೀಷ್ಮಂ ಸಮರೇ ಹಂತಾ ಮಮ ಧರ್ಮಪ್ರಣಾಶನಮ್ ॥೧೮॥

ಯಾವನು ಈ ಮಾಲೆಯನ್ನು ತೆಗೆದುಕೊಂಡು, ತಾನೇ ಕಂಠದಲ್ಲಿ ಹಾಕಿಕೊಳ್ಳುವನೋ, ಅವನು ಯುದ್ಧದಲ್ಲಿ ನನ್ನ ಎಲ್ಲಾ ಧರ್ಮವನ್ನು ನಾಶಮಾಡಿದ ಭೀಷ್ಮನನ್ನು ಕೊಲ್ಲುವವನು ಆಗುವನು.

ವೈಶಂಪಾಯನಃ

ತಾಂ ಸ್ರಜಂ ದ್ರುಪದೋ ರಾಜಾ ಕಂಚಿತ್ ಕಾಲಂ ರರಕ್ಷ ಸಃ ।
ತದಾ ವಿಸ್ರಂಭಮಾಸ್ಥಾಯ ತೂಷ್ಣೀಮೇತಾಮುಪೈಕ್ಷತ ॥೧೯॥

ದ್ರುಪದನು ಆ ಮಾಲೆಯನ್ನು ಸ್ವಲ್ಪಕಾಲದವರೆಗೆ ರಕ್ಷಿಸಿದನು. ಅನಂತರ ಧೈರ್ಯವನ್ನು ತಂದುಕೊಂಡು, ಸುಮ್ಮನಿದ್ದು ಮಾಲೆಯನ್ನು ಉಪೇಕ್ಷೆಮಾಡಿದನು.

ತಾಂ ಶಿಖಂಡೀ ನ್ಯಬಧ್ನಾತ್ ತು ಮಾಲಾಂ ಪಿತುರಜಾನತೀ ।
ತಾಂ ಪಿತಾ ತ್ವತ್ಯಜಚ್ಛೀಘ್ರಂ ತ್ರಸ್ತೋ ಭೀಷ್ಮಸ್ಯ ಕಿಲ್ಬಿಷಾತ್ ॥೨೦॥

ತಂದೆಗೆ ತಿಳಿಯದಂತೆ ದ್ರುಪದನ ಮಗಳಾದ ಶಿಖಂಡಿಯು ಆ ಮಾಲೆಯನ್ನು ಹಾಕಿಕೊಂಡಳು. ಭೀಷ್ಮನ ವಿರೋಧದ ಹೆದರಿಕೆಯಿಂದ ದ್ರುಪದನು ಅವಳನ್ನು ಶೀಘ್ರವಾಗಿ ತೊರೆದನು.

ಋಚೀಕಂ ಬ್ರಾಹ್ಮಣಂ ಭೀತಾ ಸಾ ಹ್ಯಗಚ್ಛತ್ ತಪಸ್ವಿನಮ್ ।
ಗಂಗಾದ್ವಾರೇ ತಪಸ್ಯಂತಂ ತುಷ್ಟಿಹೇತೋಸ್ತಪಸ್ವಿನೀ ॥೨೧॥

ಶೋಚನೀಯಳಾಧ ಶಿಖಂಡಿಯು ಹೆದರಿ ಗಂಗಾದ್ವಾರದಲ್ಲಿ ತಪಸ್ಸನ್ನು ಮಾಡುತ್ತಿದ್ದಂತಹ ವಿಪ್ರನಾದ ಋಚೀಕನನ್ನು ಸಂತೋಷಪಡಿಸಲು ಗಂಗಾದ್ವಾರಕ್ಕೆ ಹೋದಳು.

ಉಪಚಾರಾಭಿತುಷ್ಟಸ್ತಾಮಬ್ರವೀದ್ ಋಷಿಸತ್ತಮಃ ।
ಗಂಗಾದ್ವಾರೇ ವಿಭಜನಂ ಭವಿತಾ ನಾಚಿರಾದಿವ ॥೨೨॥

ತತ್ರ ಗಂಧರ್ವರಾಜಂ ತು ತಂ ಪುರುಪ್ರಿಯದರ್ಶನಮ್ ।
ಆರಾಧಯಿತುಮೀಹಸ್ವ ಸಮ್ಯಕ್ ಪರಿಚರೇರ್ವಿಭುಮ್ ॥೨೩॥

ಅವಳ ಉಪಚಾರಗಳಿಂದ ಪ್ರಸನ್ನರಾದ ಋಚೀಕ ಋಷಿಶ್ರೇಷ್ಠರು ಗಂಗಾದ್ವಾರದಲ್ಲಿ ಸದ್ಯದಲ್ಲಿಯೇ ಒಂದು ವಿಭಜನವು ಉಂಟಾಗುವುದು. (ವಿಭಜನವೆಂದರೆ ಇನ್ನೊಬ್ಬರಿಗೆ ಬೇಕಾದ ತಮ್ಮ ವಸ್ತುವನ್ನು ಅವರಿಗೆ ಕೊಟ್ಟು, ತಮಗೆ ಬೇಕಾದ ಅವರ ವಸ್ತುವನ್ನು ತಾವು ತೆಗೆದುಕೊಳ್ಳುವುದು.) ಅಲ್ಲಿಗೆ ತುಂಬ ಸುಂದರನಾದ ಗಂಧರ್ವರಾಜನು ಬರುತ್ತಾನೆ. ಸಮರ್ಥನಾದ ಅವನನ್ನು ಪರಿಚರಿಸಿ ಸಂತೋಷಪಡಿಸಲು ಪ್ರಯತ್ನಪಡು ಎಂದು ಹೇಳಿದರು.

ಅಹಮಪ್ಯತ್ರ ಸಾಚಿವ್ಯಂ ಕರ್ತಾಸ್ಮಿ ತವ ಶೋಭನೇ ।
ಸಾ ತದಾಚರ ಭದ್ರಂ ತೇ ಸ ತೇ ಶ್ರೇಯೋ ವಿಧಾಸ್ಯತಿ ॥೨೩॥

ಶೋಭನಳೇ, ನಾನು ಅಲ್ಲಿಗೆ ಬಂದು ನಿನಗೆ ಸಹಾಯವನ್ನು ಮಾಡುವೆನು. ನಿನಗೆ ಮಂಗಳವಾಗಲಿ. ನೀನು ನಾನು ಹೇಳಿದಂತೆ ಮಾಡು. ಗಂಧರ್ವರಾಜನು ನಿನಗೆ ಶ್ರೇಯಸ್ಸನ್ನು ಉಂಟುಮಾಡುವನು.

ವೈಶಂಪಾಯನಃ

ತತೋ ವಿಭಜನಂ ತತ್ರ ಗಂಧರ್ವಾಣಾಮವಾಪ ಸಾ ।
ತತ್ರ ದ್ವಾವವಶಿಷ್ಯೇತಾಂ ಗಂಧರ್ವಾಣಾಂ ಮಿತೌಜಸೌ ॥೨೪॥

ಅನಂತರ ಗಂಗಾದ್ವಾರದಲ್ಲಿ ಗಂಧರ್ವರಲ್ಲಿ ಪರಸ್ಪರವಾಗಿ ವಿಭಜನೆಯು ನಡೆಯಿತು. ಕೊನೆಯಲ್ಲಿ ಅಲ್ಲಿ ಮಿತಪರಾಕ್ರಮಿಗಳಾದ ಇಬ್ಬರು ಗಂಧರ್ವರು ಉಳಿದರು. (ಅವರಲ್ಲಿ ಒಬ್ಬನು ತುಂಬುರು)

ತಯೋರೇಕಃ ಸಮೀಕ್ಷ್ಯೈನಾಂ ಸ್ತ್ರೀಬುಭೂಷುರುವಾಚ ಹ ।
ಇದಂ ಗೃಹ್ಣೀಷ್ವ ಪುಲ್ಲಿಂಗಂ ವೃಣೇ ಸ್ತ್ರೀಲಿಂಗಮೇವ ತೇ ॥೨೫॥

ಅವರಲ್ಲಿ ಒಬ್ಬನಾದ ತುಂಬುರುವು ಶಿಖಂಡಿಯನ್ನು ನೋಡಿ, ತಾನು ಹೆಣ್ಣಾಗಲು ಬಯಸಿ, ನನ್ನ ಪುಲ್ಲಿಂಗವನ್ನು ನೀನು ತೆಗೆದುಕೊಂಡು, ನಿನ್ನ ಸ್ತ್ರೀಲಿಂಗವನ್ನು ನನಗೆ ಕೊಡು ಎಂದು ಕೇಳಿದನು.

ನಿಯಮಂ ಚಕ್ರತುಸ್ತತ್ರ ಸ್ತ್ರೀತ್ವೇ ಪುಂಸ್ತ್ವೇ ಚ ತಾವುಭೌ ।
ತತಃ ಪುಮಾನ್ ಸಮಭವಚ್ಛಿಖಂಡೀ ಪರವೀರಹಾ ।
ಸ್ತ್ರೀ ತು ಭೂತ್ವಾऽಪಚಕ್ರಾಮ ಸ ಗಂಧರ್ವೋ ಮುದಾ ಯುತಃ ॥೨೬॥

ಅವರಿಬ್ಬರೂ ವಿನಿಮಯವನ್ನು ಮಾಡಿಕೊಂಡು ಸ್ತ್ರೀತ್ವ ಮತ್ತು ಪುಂಸ್ತ್ವಗಳನ್ನು ಯಾವಾಗ ಹಿಂದಿರುಗಿಸಬೇಕೆಂಬ ವಿಷಯದಲ್ಲಿ ನಿಯಮವನ್ನು ಮಾಡಿಕೊಂಡರು. ಅನಂತರ ಪರವೀರರನ್ನು ಕೊಲ್ಲುವಂತಹ ಶಿಖಂಡಿಯು ಪುರುಷನಾದನು. ಆ ಗಂಧರ್ವನು ಸಂತೋಷದಿಂದ ಸ್ತ್ರೀರೂಪವನ್ನು ಧರಿಸಿ, ಅಲ್ಲಿಂದ ಹೊರಟುಹೋದನು.

ಲಬ್ಧ್ವಾ ತು ಮಹತೀಂ ಪ್ರೀತಿಂ ಯಾಜ್ಞಸೇನಿರ್ಮಹಾಯಶಾಃ ।
ತತೋ ಬುದ್ಬುದಕಂ ಗತ್ವಾ ಪುನರಸ್ತ್ರಾಣಿ ಸೋऽಕರೋತ್ ॥೨೭॥
ತತ್ರ ಚಾಸ್ತ್ರಾಣಿ ದಿವ್ಯಾನಿ ಕೃತ್ವಾ ಸ ಸುಮಹಾಮತಿಃ
ಸ್ವದೇಶಮಭಿಸಂಪೇದೇ ಪಾಂಚಾಲಂ ಕುರುನಂದನ । ॥೨೮॥

ಯಜ್ಞಸೇನನ ಮಹಾಯಶಸ್ವಿಯಾದ ಮಗನು ಮೊದಲು ಶಿಖಂಡಿಯಾಗಿದ್ದವನು ತುಂಬಾ ಸಂತೋಷವನ್ನು ಹೊಂದಿ, ಅಲ್ಲಿಂದ 'ಬುದ್ಬುದಕ' ಎಂಬ ಪಟ್ಟಣಕ್ಕೆ ಹೋಗಿ ಅಸ್ತ್ರವಿದ್ಯೆಯನ್ನು ಕಲಿತನು. ಎಲೈ ಕುರುನಂದನ, ಮಹಾಬುದ್ಧಿಯುಳ್ಳ ಅವನು ಅಲ್ಲಿ ದಿವ್ಯವಾದ ಅಸ್ತ್ರಗಳನ್ನು ಕಲಿತು, ತನ್ನ ಸ್ವದೇಶವಾದ ಪಾಂಚಾಲದೇಶಕ್ಕೆ ಹಿಂದಿರುಗಿದನು.

ಸೋऽಭಿವಾದ್ಯ ಪಿತುಃ ಪಾದೌ ಮಹೇಷ್ವಾಸಃ ಕೃತಾಂಜಲಿಃ ।
ಉವಾಚ ಭವತಾ ಭೀಷ್ಮಾನ್ನ ಭೇತವ್ಯಂ ಕಥಂಚನ ॥೨೯॥

ಅವನು ಧನುರ್ಧಾರಿಯಾಗಿ ತಂದೆಗೆ ಕೈಮುಗಿದು ನಮಸ್ಕರಿಸಿ, ನೀವು ಇನ್ನು ಭೀಷ್ಮರಿಗೆ ಎಂದೂ ಹೆದರಬೇಕಾಗಿಲ್ಲ ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ದ್ವ್ಯುತ್ತರಶತತಮೋऽಧ್ಯಾಯಃ

॥ ಸಂಭವಪರ್ವಣಿ ಪಂಚಾಶತ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಎರಡನೆಯ ಅಧ್ಯಾಯ ಮುಗಿಯಿತು.

★★★★★

ನೂರ ಮೂರನೆಯ ಅಧ್ಯಾಯ

(ವಿಚಿತ್ರವೀರ್ಯನಿಗೆ ಅಂಬಿಕೆ, ಅಂಬಾಲಿಕೆಯರ ಜೊತೆಯಲ್ಲಿ ವಿವಾಹ, ವಿಚಿತ್ರವೀರ್ಯನ ಮರಣ. ಅವನ ಪತ್ನಿಯರಲ್ಲಿ ಮಕ್ಕಳನ್ನು ಪಡೆಯಲು ಭೀಷ್ಮರ ನಿರಾಕರಣೆ.)

ವೈಶಂಪಾಯನಃ

ಅಂಬಾಯಾಂ ನಿರ್ಗತಾಯಾಂ ತು ಭೀಷ್ಮಃ ಶಾಂತನವಸ್ತದಾ ।
ನ್ಯಾಯೇನ ಕಾರಯಾಮಾಸ ರಾಜ್ಞೋ ವೈವಾಹಿಕೀಂ ಕ್ರಿಯಾಮ್ ॥೧॥

ಅಂಬೆಯು ಹೊರಟುಹೋಗುತ್ತಿರಲು ಶಂತನುವಿನ ಮಗನಾದ ಭೀಷ್ಮನು ವಿಚಿತ್ರವೀರ್ಯನಿಗೆ ವಿಧಿಪೂರ್ವಕವಾಗಿ ವಿವಾಹವನ್ನು ಮಾಡಿಸಿದನು.

ಅಂಬಿಕಾಂಬಾಲಿಕೇ ಚೈವ ಪರಿಣೇಯಾಗ್ನಿಸನ್ನಿಧೌ ।
ತಯೋಃ ಪಾಣೇ ಗೃಹೀತ್ವಾ ತು ಕೌರವ್ಯೋ ರೂಪದರ್ಪಿತಃ ॥೨॥

ವಿಚಿತ್ರವೀರ್ಯೋ ಧರ್ಮಾತ್ಮಾ ಕಾಮಾತ್ಮಾ ಸಮಪದ್ಯತ ।
ತೇ ಚಾಪಿ ವನಿತೇ ಶ್ಲಾಘ್ಯೇ ನೀಲಕುಂಚಿತಮೂರ್ಧಜೇ ॥೩॥

ಕೌರವನಾದ ವಿಚಿತ್ರವೀರ್ಯನು ಧರ್ಮಾತ್ಮನಾದರೂ ಅಗ್ನಿಸನ್ನಿಧಿಯಲ್ಲಿ ಅಂಬಿಕೆ, ಅಂಬಾಲಿಕೆಯರನ್ನು ವಿವಾಹ ಮಾಡಿಕೊಂಡು, ಅವರ ಪಾಣಿಗ್ರಹಣವನ್ನು ಮಾಡಿ, ತನ್ನ ಸೌಂದರ್ಯದಿಂದ ದರ್ಪಿತನಾಗಿ ಕಾಮಾತ್ಮನಾದನು.

ರಕ್ತತುಂಗನಖೇ ಶ್ಯಾಮೇ ಪೀನಶ್ರೋಣಿಪಯೋಧರೇ ।
ಆತ್ಮರೂಪಾನುರೂಪೋ ನೌ ಲಬ್ಧಃ ಪತಿರಿತಿ ಸ್ಮ ತೇ ॥೪॥

ವಿಚಿತ್ರವೀರ್ಯಂ ಕಲ್ಯಾಣಂ ತೇ ತತೋಽಭಿರತೇ ಹ್ಯುಭೇ ।
ಅನ್ಯೋನ್ಯಂ ಪ್ರೀತಿಸಕ್ತೇ ಚ ಏಕಭಾವಾವಿವ ಸ್ಥಿತೇ ॥೫॥

ಆ ಶ್ಲಾಘನೀಯರಾದ ವನಿತೆಯರೂ ಕೂಡ ನೀಲಕೇಶವುಳ್ಳವರಾಗಿ, ಕೆಂಪಾದ ಮತ್ತು ಎತ್ತರವಾದ ನಖವುಳ್ಳವರಾಗಿ, ಶ್ಯಾಮವರ್ಣದವರಾಗಿ, ಪೀನನಿತಂಬ ಮತ್ತು

ಸ್ತನಗಳನ್ನು ಹೊಂದಿದವರಾಗಿ, ತಮಗೆ ಅನುರೂಪನಾದ ಪತಿಯು ದೊರಕಿದನೆಂದು ಕಲ್ಯಾಣಕರನಾಗಿದ್ದ ವಿಚಿತ್ರವೀರ್ಯನಲ್ಲಿ ಅನುರಕ್ತರಾದರು. ಅನ್ಯೋನ್ಯವಾಗಿ ಪ್ರೀತಿಯುಳ್ಳವರಾಗಿ ಒಂದೇ ಅಭಿಪ್ರಾಯವನ್ನು ಹೊಂದಿದವರಾದರು.

ಸ ಚಾಪಿ ರೂಪಸದೃಶೋ ದೇವಸತ್ವಪರಾಕ್ರಮಃ ।
ಸರ್ವಾಸಾಮೇವ ನಾರೀಣಾಂ ಚಿತ್ತಪ್ರಮಥನೋ ರಹಃ ॥೬॥

ತಾಭ್ಯಾಂ ಸಹ ಸಮಾಸಕ್ತೋ ವಿಹೃತ್ಯ ಪೃಥಿವೀಪತಿಃ ।
ವಿಚಿತ್ರವೀರ್ಯಸ್ತರುಣೋ ಯಕ್ಷ್ಮಾಣಂ ಸಮಪದ್ಯತ ॥೭॥

ಉತ್ತಮರೂಪವುಳ್ಳ ದೇವತೆಗಳ ಸಮಾನವಾದ ಬಲಪರಾಕ್ರಮವುಳ್ಳ ಆ ವಿಚಿತ್ರವೀರ್ಯನೂ ಸಹ ಏಕಾಂತದಲ್ಲಿ ತನ್ನ ಪತ್ನಿಯರ ಮನಸ್ಸನ್ನು ಸೆಳೆಯುವನಾಗಿದ್ದನು. ಆ ವಿಚಿತ್ರವೀರ್ಯ ರಾಜನು ತರುಣನಾಗಿದ್ದರೂ ಅವರಿಬ್ಬರಲ್ಲಿ ಅತಿಯಾದ ಆಸಕ್ತಿಯನ್ನು ಹೊಂದಿ, ಕ್ಷಯರೋಗವನ್ನು ಪಡೆದನು.

ಸುಹೃದಾಂ ಯತಮಾನಾನಾಮಾಪ್ತೈಃ ಸಹ ಚಿಕಿತ್ಸಕೈಃ ।
ಜಗಾಮಾಸ್ತಮಿವಾದಿತ್ಯಃ ಕೌರವ್ಯೋ ಯಮಸಾದನಮ್ ॥೮॥

ಸುಹೃದರು ಮತ್ತು ಆಪ್ತರಾದ ವೈದ್ಯರುಗಳ ಜೊತೆಯಲ್ಲಿ ಎಷ್ಟು ಪ್ರಯತ್ನ ಮಾಡಿದರೂ ವಿಚಿತ್ರವೀರ್ಯನು ಸೂರ್ಯನು ಅಸ್ತಂಗತನಾದಂತೆ ಮರಣವನ್ನು ಹೊಂದಿದನು.

ತಸ್ಯ ಪ್ರೇತಸ್ಯ ಕಾರ್ಯಾಣಿ ಭೀಷ್ಮಃ ಸರ್ವಾಣ್ಯಕಾರಯತ್ ।
ರಾಜ್ಞೋ ವಿಚಿತ್ರವೀರ್ಯಸ್ಯ ಸತ್ಯವತ್ಯಾ ಮತೇ ಸ್ಥಿತಃ ।
ಋತ್ವಿಗ್ಭಿಃ ಸಹಿತೋ ಭೀಷ್ಮಃ ಸರ್ವೈಶ್ಚ ಕುರುಜಾಂಗಲೈಃ ॥೯॥

ಸತ್ಯವತಿಯ ಅಭಿಪ್ರಾಯದಂತೆ ನಡೆದುಕೊಂಡ ಭೀಷ್ಮನು ಋತ್ವಿಜರಿಂದಲೂ, ಕುರುಜಾಂಗಲ ಪ್ರಜೆಗಳಿಂದಲೂ ಕೂಡಿ, ವಿಚಿತ್ರವೀರ್ಯ ರಾಜನಿಗೆ ಎಲ್ಲಾ ಪ್ರೇತಕಾರ್ಯಗಳನ್ನೂ ಮಾಡಿಸಿದನು.

ತತಃ ಸತ್ಯವತೀ ದೀನಾ ಕೃಪಣಾ ಪುತ್ರಗರ್ಧಿನೀ ।
ಕೃತ್ವಾ ಪ್ರೇತಸ್ಯ ಕೃತ್ಯಾನಿ ಸ್ನುಷಾಭ್ಯಾಂ ಸಹಿತಾ ತದಾ ।
ಮಾತಾ ಸತ್ಯವತೀ ಭೀಷ್ಮಮುವಾಚ ವದತಾಂ ವರಾ ॥೧೦॥

ಮಗನಿಗೆ ಹಂಬಲಿಸುತ್ತಿದ್ದ ಸತ್ಯವತಿಯು, ಸೊಸೆಯರ ಜೊತೆಯಲ್ಲಿ ಪ್ರೇತಕಾರ್ಯಗಳನ್ನು ಮಾಡಿ, ದೈನ್ಯ ಮತ್ತು ಕೃಪಣತೆಗಳಿಂದ ಕೂಡಿದವಳಾಗಿ, ಮಾತನಾಡುವವರಲ್ಲಿ ಶ್ರೇಷ್ಠಳಾದ ಆಕೆಯು ಪುತ್ರನಾದ ಭೀಷ್ಮನನ್ನು ಕುರಿತು ಮಾತನಾಡಿದಳು.

ಧರ್ಮಂ ಚ ಪಿತೃವಂಶಂ ಚ ಮಾತೃವಂಶಂ ಚ ಶೋಭನಮ್ ।
ಸತ್ಯವತ್ಯಭಿಸಂಪ್ರೇಕ್ಷ್ಯ ಭೀಷ್ಮಂ ವಚನಮಬ್ರವೀತ್ ॥೧೧॥

ಪರಿಶುದ್ಧವಾದ ಧರ್ಮವನ್ನೂ, ಪಿತೃವಂಶ ಮತ್ತು ಮಾತೃವಂಶವನ್ನೂ ಗಮನಿಸಿ, ಸತ್ಯವತಿಯು ಭೀಷ್ಮನನ್ನು ಕುರಿತು ಮಾತನಾಡಿದಳು.

ದುಃಖಾರ್ದಿತಾ ತು ಶೋಕೇನ ಮಜ್ಜತೀವ ಚ ಸಾಗರೇ ।
ಶಂತನೋರ್ಧರ್ಮನಿತ್ಯಸ್ಯ ಪೌರವಸ್ಯ ಯಶಸ್ವಿನಃ ॥೧೨॥

ದುಃಖಾರ್ದಿತಳಾಗಿ ಪುತ್ರಶೋಕದಿಂದ ಬಳಲಿ ಸಾಗರದಲ್ಲಿ ಮುಳುಗುವವಳಂತೆ ಯಶಸ್ವಿಯಾಗಿದ್ದ, ನಿತ್ಯವೂ ಧರ್ಮಶೀಲನಾಗಿದ್ದ ಪೌರವನಾದ ಶಂತನುವಿನ ವಂಶವನ್ನು ಗಮನಿಸಿ, ಮಾತನಾಡಿದಳು.

ಸತ್ಯವತೀ

ತ್ವಯಿ ಕೀರ್ತಿಶ್ಚ ಪಿಂಡಶ್ಚ ಸಂತಾನಶ್ಚ ಪ್ರತಿಷ್ಠಿತಃ ।
ಭ್ರಾತಾ ವಿಚಿತ್ರವೀರ್ಯಸ್ತೇ ಭೂತಾನಾಮಂತಮೇಯಿವಾನ್ ॥೧೩॥

ಭೀಷ್ಮನೇ, ನಿನ್ನ ತಮ್ಮನಾದ ವಿಚಿತ್ರವೀರ್ಯನು ಮರಣಹೊಂದಿದ್ದಾನೆ. ಕುಲದ ಕೀರ್ತಿ, ಸಂತಾನ ಮತ್ತು ಅನುವೃತ್ತಿಯು ನಿನ್ನನ್ನು ಅವಲಂಬಿಸಿದೆ.

ಯಥಾ ಕರ್ಮ ಶುಭಂ ಕೃತ್ವಾ ಸ್ವರ್ಗಾಯ ಗಮನಂ ಧ್ರುವಮ್ ।
ಯಥಾ ಚಾಯುರ್ಧ್ರುವಂ ಸತ್ವೇ ತ್ವಯಿ ಧರ್ಮಸ್ತಥಾ ಧ್ರುವಃ ॥೧೪॥

ಹೇಗೆ ಶುಭಕರ್ಮವನ್ನು ಮಾಡಿದವನು ಸ್ವರ್ಗಕ್ಕೆ ಹೋಗುವುದು ನಿಶ್ಚಯವೋ, ಸತ್ವವಿದ್ದವನಲ್ಲಿ ಆಯುಷ್ಯವು ಹೇಗೆ ಧ್ರುವವೋ, ಹಾಗೇ ನಿನ್ನಲ್ಲಿ ಧರ್ಮವು ಧ್ರುವವಾಗಿದೆ.

ವೇತ್ಥ ಧರ್ಮಸ್ಯ ತತ್ತ್ವಂ ಚ ಸಾಮಾನ್ಯಸ್ಯೇತರಸ್ಯ ಚ ।
ವಿವಿಧಾಶ್ಚ ಸ್ಮೃತೀರ್ವೇತ್ಥ ವೇದಾಂಗಾನಿ ಚ ಸರ್ವಶಃ ॥೧೫॥

ನೀನು ಸಾಮಾನ್ಯವಾದ ಮತ್ತು ವಿಶೇಷವಾದ ಧರ್ಮದ ತತ್ತ್ವವನ್ನು ತಿಳಿದಿದ್ದೀಯೆ. ಅನೇಕ ಸ್ಮೃತಿಗಳನ್ನೂ, ಎಲ್ಲಾ ವೇದಾಂಗಗಳನ್ನೂ ತಿಳಿದಿದ್ದೀಯೆ.

ವ್ಯವಸಾಯಂ ಚ ಧರ್ಮೇಷು ಕುಲಾಚಾರಂ ಚ ಲಕ್ಷಯೇ ।
ಪ್ರತಿಪತ್ತಿಂ ಚ ಕೃಚ್ಛ್ರೇಷು ಶುಕ್ರಾಂಗಿರಸಯೋರಿವ ।
ತಸ್ಮಾತ್ ಸುಭೃಶಮೈಶ್ವರ್ಯಂ ತ್ವಯಿ ಧರ್ಮವತಾಂ ವರ ॥೧೬॥

ಧರ್ಮದ ನಿಶ್ಚಯವನ್ನೂ, ಕುಲಾಚಾರವನ್ನೂ ತಿಳಿದಿದ್ದೀಯೆ. ಶುಕ್ರ-ಬೃಹಸ್ಪತಿಗಳಂತೆ ಆಪತ್ತಿನಲ್ಲಿ ಮಾಡಬೇಕಾದ ಕರ್ತವ್ಯವನ್ನು ತಿಳಿದಿದ್ದೀಯೆ. ಆದ್ದರಿಂದ ಧರ್ಮಿಷ್ಠರಲ್ಲಿ ಶ್ರೇಷ್ಠನಾದ ನಿನ್ನಲ್ಲಿ ಒಳ್ಳೆಯ ಪ್ರಭುತ್ವ ಶಕ್ತಿಯಿದೆ.

ವಕ್ಷ್ಯಾಮಿ ತ್ವಾಂ ಯಥಾ ಪ್ರಾಜ್ಞ ತಚ್ಛ್ರುತ್ವಾ ಕರ್ತುಮರ್ಹಸಿ ।
ಮಮ ಪುತ್ರಸ್ಯ ವ ಭ್ರಾತಾ ಯವೀಯಾನ್ ಕುಲವಂಶಭೃತ್ ।
ಬಾಲ ಏವ ಗತಃ ಸ್ವರ್ಗಮಪುತ್ರಃ ಪುರುಷರ್ಷಭ ॥೧೭॥

ಪ್ರಾಜ್ಞನೇ, ನಾನು ಹೇಳುವಂತೆ ನೀನು ಮಾಡಬೇಕು. ಪುರುಷರ್ಷಭನೇ, ನಿನ್ನ ತಮ್ಮನಾದ ಕುಲವಂಶಧರನಾದ ನನ್ನ ಪುತ್ರನು ಚಿಕ್ಕತನದಲ್ಲಿಯೇ ಮಕ್ಕಳಿಲ್ಲದೆ ಸ್ವರ್ಗವನ್ನು ಸೇರಿದ್ದಾನೆ.

ತಸ್ಯ ತೇ ಚ ಮಹಿಷ್ಯೌ ದ್ವೇ ಕಾಶಿರಾಜಸುತೇ ಶುಭೇ ।
ರೂಪಯೌವನಸಂಪನ್ನೇ ಪುತ್ರಕಾಮೇ ಚ ಭಾರತ ॥೧೮॥

ಎಲೈ ಭಾರತನೇ, ಕಾಶಿರಾಜನ ಮಕ್ಕಳಾದ ಅವನ ಇಬ್ಬರು ಮಹಿಷಿಯರೂ ಸಹ ರೂಪಯೌವನಸಂಪನ್ನರಾಗಿ ಮಗನನ್ನು ಬಯಸುತ್ತಾರೆ.

ಧರ್ಮಮೇತತ್ ಪರಂ ಜ್ಞಾತ್ವಾ ಸಂತಾನಾಯ ಕುಲಸ್ಯ ಚ ।
ತಯೋರುತ್ಪಾದಯಾಪತ್ಯಂ ಸಂತಾನಕುಲವರ್ಧನಮ್ ॥೧೯॥

ಸಂತಾನ ಮತ್ತು ಕುಲದ ದೃಷ್ಟಿಯಿಂದ ಇದು ಧರ್ಮವೆಂದು ತಿಳಿದು, ಅವರಲ್ಲಿ ಸಂತಾನವನ್ನು ಮತ್ತು ಕುಲವನ್ನು ಬೆಳೆಸುವಂತಹ ಮಗನನ್ನು ಪಡೆ.

ಮನ್ನಿಯೋಗಾನ್ಮಹಾಭಾಗ ಧರ್ಮ್ಯಂ ಕರ್ತುಮಿಹಾರ್ಹಸಿ ।
ರಾಜನ್ ರಾಜ್ಯೇऽಭಿಷಿಂಚಸ್ವ ಭಾರತಾನನುಶಾಧಿ ಚ ।
ದಾರಾಂಶ್ಚ ಕುರು ಕೌರವ್ಯ ಮಾ ತ್ವಂ ಹಿಂಸೀಃ ಪಿತಾಮಹಾನ್ ॥೨೦॥

ಎಲೈ ಮಹಾನುಭಾವನೇ, ನನ್ನ ಆದೇಶದಂತೆ ನೀನು ಈ ಧರ್ಮಸಂಬಂಧಿಯಾದ ಕಾರ್ಯವನ್ನು ಮಾಡಬೇಕು. ರಾಜನಾಗಿ ರಾಜ್ಯದಲ್ಲಿ ಅಭಿಷೇಕವನ್ನು ಮಾಡಿಕೋ. ಭಾರತವಂಶವನ್ನು ಪಾಲಿಸು. ಕೌರವ್ಯನೇ, ವಿವಾಹವನ್ನು ಮಾಡಿಕೋ, ಪಿತಾಮಹರನ್ನು ದುಃಖದಲ್ಲಿ ತಳ್ಳಬೇಡ.

ವೈಶಂಪಾಯನಃ

ತಥೋಚ್ಯಮಾನೋ ಮಾತ್ರಾ ಚ ಸುಹೃದ್ಭಿಶ್ಚ ಪರಂತಪಃ ।
ಪ್ರತ್ಯುವಾಚ ಸ ಧರ್ಮಾತ್ಮಾ ಧರ್ಮಮೇವ ತತಃ ಪರಮ್ ॥೨೧॥

ತಾಯಿಯಿಂದಲೂ ಮತ್ತು ಸುಹೃದರಿಂದಲೂ ಹೇಳಲ್ಪಟ್ಟ ಪರಂತಪನೂ, ಧರ್ಮಾತ್ಮನೂ ಆದ ಭೀಷ್ಮನು ಧರ್ಮವೇ ಶ್ರೇಷ್ಠವೆಂದು ಉತ್ತರವನ್ನು ಕೊಟ್ಟನು.

ಅಸಂಶಯಂ ಪರೋ ಧರ್ಮಸ್ತ್ವಯಾ ಮಾತಃ ಪ್ರಕೀರ್ತಿತಃ ।
ರಾಜ್ಯಾರ್ಥೇ ನಾಭಿಷಿಂಚೇಯಂ ನೋಪೇಯಂ ಜಾತು ಮೈಥುನಮ್॥೨೨॥

ತಾಯಿ, ನೀನು ನಿಶ್ಚಯವಾಗಿ ಶ್ರೇಷ್ಠವಾದ ಧರ್ಮವನ್ನು ಹೇಳಿದ್ದೀಯೆ. ಆದರೆ ರಾಜ್ಯದ ಸಲುವಾಗಿ ಅಭಿಷೇಕವನ್ನು ಮಾಡಿಕೊಳ್ಳುವುದಿಲ್ಲ. ಪುತ್ರನ ಸಲುವಾಗಿ ಮೈಥುನವನ್ನೂ ಮಾಡುವುದಿಲ್ಲ.

ಭವತ್ಯಾ ಮತಮಾಜ್ಞಾಯ ಕೃತಮೇತದ್ ವ್ರತಂ ಮಯಾ ।
ಜಾನೀಷೇ ಯತ್ ತದಾ ದತ್ತಂ ಶುಲ್ಕಹೇತೋಸ್ತದಂತರೇ ॥೨೩॥

ನಿನ್ನ ವಿವಾಹದ ಸಮಯದಲ್ಲಿ ಕನ್ಯಾಶುಲ್ಕದ ವಿಷಯದಲ್ಲಿ ನಿನಗೆ ಏನು ನಡೆಯಿತೆಂದು ನೀನು ತಿಳಿದಿದ್ದೀಯೆ: ನಾನು ನಿನ್ನ ಅಪೇಕ್ಷೆಯಂತೆಯೇ ಈ ವ್ರತವನ್ನು ಹಿಡಿದಿದ್ದೇನಷ್ಟೆ.

ಸ ಸತ್ಯವತಿ ಸತ್ಯೇನ ಪುನರೇವ ಬ್ರವೀಮಿ ತೇ ।
ಪರಿತ್ಯಜೇಯಂ ತ್ರೈಲೋಕ್ಯಂ ರಾಜ್ಯಂ ದೇವೇಷು ವಾ ಪುನಃ ।
ಯುದ್ಧ್ವಾ ಹ್ಯಧಿಕಮೇತಾಭ್ಯಾಂ ನ ತು ಸತ್ಯಂ ಕಥಂಚನ ॥೨೪॥

ಸತ್ಯವತಿ ಪುನಃ ಸತ್ಯವಾದ ಈ ಮಾತನ್ನು ಹೇಳುತ್ತಿದ್ದೇನೆ. ನಾನು ತ್ರೈಲೋಕ್ಯ ರಾಜ್ಯವನ್ನಾಗಲೀ, ಅಥವಾ ದೇವರಾಜ್ಯವನ್ನಾಗಲೀ, ಅಥವಾ ಅದಕ್ಕಿಂತ ಹೆಚ್ಚಿನ ವಸ್ತುವನ್ನಾಗಲೀ ಬಿಟ್ಟೇನು. ಆದರೆ ಸತ್ಯವನ್ನು ಎಂದೂ ಬಿಡಲಾರೆ.

ತ್ಯಜೇಚ್ಚ ಪೃಥಿವೀ ಗಂಧಮಾಪಶ್ಚ ರಸಮಾತ್ಮಜಮ್ ।
ಜ್ಯೋತಿಸ್ತಥಾ ತ್ಯಜೇದ್ ರೂಪಂ ವಾಯುಸ್ಸ್ಪರ್ಶಗುಣಂ ತ್ಯಜೇತ್ ॥

ಪ್ರತಾಪಮುತ್ಸೃಜೇದರ್ಕೋ ಧೂಮಕೇತುಸ್ತಥೋಷ್ಣತಾಮ್ ।
ತ್ಯಜೇಚ್ಛಬ್ದಂ ತಥಾSSಕಾಶಶ್ಚಂದ್ರಃ ಶೀತಾಂಶುತಾಂ ತ್ಯಜೇತ್ ॥೨೬॥

ವೃತ್ರಹಾ ವಿಕ್ರಮಂ ಜಹ್ಯಾದ್ ಧರ್ಮಂ ಜಹ್ಯಾಚ್ಚ ಧರ್ಮರಾಟ್ ।
ನ ತ್ವಹಂ ಸತ್ಯಮುತ್ಸ್ರಷ್ಟುಂ ವ್ಯವಸ್ಯೇಯಂ ಕಥಂಚನ ॥೨೭॥

ತನ್ನಜಾತ್ವನ್ಯಥಾ ಕುರ್ಯಾಂ ಲೋಕಾನಾಮಪಿ ಸಂಕ್ಷಯೇ ।
ಅಮರತ್ವಸ್ಯ ವಾ ಹೇತೋಸ್ತ್ರೈಲೋಕ್ಯಸದನಸ್ಯ ವಾ ॥೨೮॥

ಭೂಮಿಯು ಗಂಧವನ್ನು ತ್ಯಜಿಸಬಹುದು. ಜಲವು ತನ್ನ ಸ್ವಾಭಾವಿಕ ರಸವನ್ನು ತ್ಯಜಿಸಬಹುದು. ಅಗ್ನಿಯು ತನ್ನ ರೂಪವನ್ನೂ, ವಾಯುವು ತನ್ನ ಸ್ಪರ್ಶಗುಣವನ್ನೂ ತ್ಯಜಿಸಬಹುದು. ಸೂರ್ಯನು ತನ್ನ ದಹಿಸುವ ಶಕ್ತಿಯನ್ನೂ, ಅಗ್ನಿಯು ತನ್ನ ಉಷ್ಣತೆಯನ್ನೂ ತ್ಯಜಿಸಬಹುದು. ಆಕಾಶವು ಶಬ್ದವನ್ನೂ ತ್ಯಜಿಸಬಹುದು. ಚಂದ್ರನು ಶೀತಕಿರಣಗಳನ್ನೂ ತ್ಯಜಿಸಬಹುದು. ಇಂದ್ರನು ತನ್ನ ವಿಕ್ರಮವನ್ನೂ ತ್ಯಜಿಸಬಹುದು. ಯಮನು ತನ್ನ ಧರ್ಮವನ್ನೂ ತ್ಯಜಿಸಬಹುದು. ಆದರೆ ನಾನು ಯಾವ ಕಾರಣಕ್ಕೂ ಸತ್ಯವನ್ನು ತ್ಯಜಿಸಲು ಬಯಸುವುದಿಲ್ಲ. ಮೂರುಲೋಕಗಳು ನಾಶವಾದರೂ ಅಥವಾ ದೈವತ್ವವನ್ನು ಪಡೆಯುವ ಕಾರಣದಿಂದಲೂ ಅಥವಾ ಮೂರುಲೋಕದಲ್ಲಿ ಪ್ರತಿಷ್ಠಿತನಾಗುವ ಕಾರಣದಿಂದಲಾದರೂ ಸಹ ನಾನು ಅದನ್ನು ಎಂದೂ ವ್ಯತ್ಯಾಸ ಮಾಡುವುದಿಲ್ಲ.

ವೈಶಂಪಾಯನಃ

ತಥೋಚ್ಯಮಾನಾ ಪುತ್ರೇಣ ಧಾರ್ಮಿಕೇಣ ಮಹಾತ್ಮನಾ ।
ಮಾತಾ ಸತ್ಯವತೀ ಭೀಷ್ಮಂ ಪುನರೇವಾಭ್ಯಭಾಷತ ॥೨೯॥

ಮಹಾತ್ಮನೂ, ಧಾರ್ಮಿಕನೂ ಆದ ಪುತ್ರನಿಂದ ಹೀಗೆ ಹೇಳಲ್ಪಟ್ಟವಳಾಗಿ, ತಾಯಿಯಾದ ಸತ್ಯವತಿಯು ಭೀಷ್ಮನನ್ನು ಕುರಿತು ಪುನಃ ಮಾತನಾಡಿದಳು.

ಅನುಜಾನೀಹಿ ಧರ್ಮಜ್ಞ ಸತ್ಯಂ ಸತ್ಯವತಾಂ ವರಃ ।
ಇಚ್ಛನ್ ಸೃಜೇಥಾಸ್ತ್ರೀನ್ ಲೋಕಾನ್ಯನ್ಯಾಂಶ್ಚ ಸ್ವೇನ ತೇಜಸಾ ॥೩೦॥

ಧರ್ಮಜ್ಞನೇ ಮತ್ತು ಸತ್ಯವಂತರಲ್ಲಿ ಶ್ರೇಷ್ಠನೇ, ಸತ್ಯವನ್ನು ಆಚರಿಸಲು ಅನುವು ಮಾಡಿಕೊಡು. ನೀನು ಇಚ್ಛೆಪಟ್ಟರೆ ನಿನ್ನ ಪರಾಕ್ರಮದಿಂದ ಮೂರು ಲೋಕಗಳನ್ನು ಮತ್ತು ಬೇರೆ ಯುಗಗಳನ್ನು ಸೃಷ್ಟಿಸಬಲ್ಲೆ.

ಜಾನಾಮಿ ಚೈವ ತತ್ ಸರ್ವಂ ಮದರ್ಥಂ ಯದಭಾಷಥಾಃ ।
ಆಪದ್ಧರ್ಮಮವೇಕ್ಷಸ್ವ ವಹ ಪೈತಾಮಹೀಂ ಧುರಮ್ ॥೩೧॥

ನೀನು ಹೇಳಿದ ಎಲ್ಲವನ್ನೂ ಮತ್ತು ಏತಕ್ಕೆ ಹಾಗೇ ಹೇಳಿದೆ ಎಂಬುದನ್ನು ನಾನು ತಿಳಿದಿದ್ದೇನೆ. ಆಪದ್ಧರ್ಮವನ್ನು ಗಮನಿಸು. ಪಿತಾಮಹರಿಂದ ಬಂದ ಜವಾಬ್ದಾರಿಯನ್ನು ವಹಿಸಿಕೋ.

ಯಥಾ ತು ನಃ ಕುಲಂ ಚೈವ ಲೋಕಶ್ಚ ನ ಪರಾಭವೇತ್ ।
ಸುಹೃದಶ್ಚ ಸಕಾಮಾ ವೈ ತಥಾ ತ್ವಂ ಕರ್ತುಮರ್ಹಸಿ ।
ಆತ್ಮನಶ್ಚ ಹಿತಂ ತಾತ ಪ್ರಿಯಂ ಚ ಮಮ ಭಾರತ ॥೩೨॥

ಎಲೈ ಭಾರತನೇ, ಹೀಗೆ ಮಾಡಿದರೆ ನನ್ನ ಕುಲವು ನಮ್ಮ ಪ್ರಜೆಗಳು ಪರಾಭವವನ್ನು ಹೊಂದುವುದಿಲ್ಲವೋ, ನಿನಗೆ ಹಿತವಾಗುತ್ತದೆಯೋ, ನನಗೆ ಪ್ರಿಯವಾಗುತ್ತದೋ, ಹಾಗೂ ಕೌರವರು ತಮ್ಮ ಆಸೆಯನ್ನು ಪೂರೈಸಿಕೊಂಡು ಸಂತೋಷಪಡುತ್ತಾರೋ, ಅಂತಹ ಕಾರ್ಯವನ್ನು ನೀನು ಮಾಡಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ತ್ರಯೋತ್ತರಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ಏಕಪಂಚಾಶತ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಮೂರನೆಯ ಅಧ್ಯಾಯ ಮುಗಿಯಿತು.

★★★★★

ನೂರನಾಲ್ಕನೆಯ ಅಧ್ಯಾಯ

(ಭೀಷ್ಮರಿಂದ ಸತ್ಯವತಿಯನ್ನು ಕುರಿತು ದಿರ್ಘತಮಸರ ಚರಿತ್ರಕಥನ)

ವೈಶಂಪಾಯನಃ

ತಾಂ ತು ಲಾಲಪತೀಂ ದೃಷ್ಟ್ವಾ ಕೃಪಣಾಂ ಪುತ್ರಗೃದ್ಧಿನೀಮ್ ।
ಧರ್ಮಾದಪೇತಂ ಬ್ರುವತೀಂ ಭೀಷ್ಮೋ ವಚನಮಬ್ರವೀತ್ ॥೧॥

ಮಕ್ಕಳನ್ನು ಪಡೆಯುವ ಆಸೆಯಿಂದ ಕಾರ್ಪಣ್ಯದಿಂದ ಕೂಡಿದವಳಾಗಿ ಧರ್ಮಸಮ್ಮತವಲ್ಲದ ಮಾತುಗಳನ್ನು ಬಹುವಾಗಿ ಆಡುತ್ತಿದ್ದಂತಹ ಆ ಸತ್ಯವತಿಯನ್ನು ಕುರಿತು ಭೀಷ್ಮರು ಮಾತನಾಡಿದರು.

ಕ್ಷತ್ರಧರ್ಮಮವೇಕ್ಷಸ್ವ ಮಾ ನಃ ಸರ್ವಾನ್ ವ್ಯನೀನಶಃ ।
ಧಾರಣೇನ ವ್ರತಸ್ಯಾಹುಃ ಕ್ಷತ್ರಿಯಾಃ ಪರಮಾಂ ದ್ಯುತಿಮ್ ॥೨॥

ತಾಯಿ, ಕ್ಷತ್ರಿಯ ಧರ್ಮವನ್ನು ಗಮನಿಸು. ನಮ್ಮೆಲ್ಲರನ್ನೂ ನಾಶಮಾಡಬೇಡ. ವ್ರತವನ್ನು ಧಾರಣೆ ಮಾಡುವುದರಿಂದ ಕ್ಷತ್ರಿಯರಿಗೆ ಶ್ರೇಷ್ಠವಾದ ತೇಜಸ್ಸು ಬರುವುದೆಂದು ಜ್ಞಾನಿಗಳು ಹೇಳುತ್ತಾರೆ.

ಶಂತನೋರಪಿ ಸಂತಾನೋ ಯಥಾ ಸ್ಯಾತ್ ಪುನರೇವ ಹಿ ।
ಕ್ಷತ್ರಧರ್ಮಂ ಪ್ರವಕ್ಷ್ಯಾಮಿ ಕ್ಷತ್ರಿಯಾಣಾಂ ಪುರಾತನಮ್ ॥೩॥

ಹೇಗೆ ಮಾಡಿದರೆ ಶಂತನುವಿನ ವಂಶವು ಪುನಃ ಅಭಿವೃದ್ಧಿಯನ್ನು ಹೊಂದುವುದೋ, ಅಂತಹ ಪುರಾತನವಾದ ಕ್ಷತ್ರಿಯಧರ್ಮವನ್ನು ಹೇಳುವೆನು, ಕೇಳು.

ಶ್ರುತ್ವಾ ತಂ ಪ್ರತಿಪದ್ಯೇಥಾಃ ಪ್ರಾಜ್ಞೈಃ ಸಹ ಪುರೋಹಿತೈಃ ।
ಆಪದ್ಧರ್ಮೇಷು ಕುಶಲೈರ್ಲೋಕತಂತ್ರಮವೇಕ್ಷ್ಯ ಚ ॥೪॥

ಅದನ್ನು ಕೇಳಿ ಲೋಕಾಚಾರವನ್ನು ಗಮನಿಸಿ, ಆಪದ್ಧರ್ಮಗಳಲ್ಲಿ ಕುಶಲರಾದ ಪ್ರಾಜ್ಞರಾದ ಪುರೋಹಿತರ ಜೊತೆಯಲ್ಲಿ ಏಚಾರ ಮಾಡು.

ಜಾಮದಗ್ನ್ಯೇನ ರಾಮೇಣ ಹಿತುರ್ವಧಮಮೃಷ್ಯತಾ ।
ಪುರಾ ಪರಶುಹಸ್ತೇನ ಹೇಹಯಾಧಿಪತಿರ್ಹತಃ ॥೫॥

ಹಿಂದೆ ಜಮದಗ್ನಿಗಳ ಮಗನಾದ ಪರಶುರಾಮನು ತಮ್ಮ ತಂದೆಯ ವಧೆಯಿಂದ ಕೋಪಗೊಂಡು, ಕೈಯಲ್ಲಿ ಪರಶುವನ್ನು ಹಿಡಿದು ಹೇಹಯಾಧಿಪತಿಯಾದ ಕಾರ್ತವೀರ್ಯಾರ್ಜುನನನ್ನು ಕೊಂದನು.

ಕ್ರುದ್ಧೇನ ಚ ಮಹಾಪ್ರಾಜ್ಞೇ ಹೇಹಯಸ್ಯ ಮಹಾತ್ಮನಃ ।
ಶತಾನಿ ದಶ ಬಾಹೂನಾಂ ನಿಕೃತ್ತಾನ್ಯರ್ಜುನಸ್ಯ ವೈ ॥೬॥

ಮಹಾಪ್ರಾಜ್ಞೆ, ಕೋಪಗೊಂಡ ಪರಶುರಾಮನು ಮಹಾತ್ಮನಾದ ಹೇಹಯಾಧಿಪತಿಯಾದ ಅರ್ಜುನನ ಸಹಸ್ರಬಾಹುಗಳನ್ನು ಕತ್ತರಿಸಿದರು.

ಪುನಶ್ಚ ಧನುರಾದಾಯ ಮಹಾಸ್ತ್ರಾಣಿ ವಿಮುಂಚತಾ ।
ನಿರ್ದಗ್ಧಂ ಕ್ಷತ್ರಮೇಕೇನ ರಾಮೇಣ ಜಯತಾ ಮಹೀಮ್ ॥೭॥

ಪುನಃ ಕೈಯಲ್ಲಿ ಧನುಸ್ಸನ್ನು ತೆಗೆದುಕೊಂಡು ದಿವ್ಯಾಸ್ತ್ರಗಳನ್ನು ಪ್ರಯೋಗಮಾಡುತ್ತಾ ಪರಶುರಾಮನು ಏಕಾಕಿಯಾಗಿ ಭೂಮಿಯನ್ನು ಗೆದ್ದು ಕ್ಷತ್ರಿಯಕುಲವನ್ನು ದಹನ ಮಾಡಿದನು.

ಏವಮುಚ್ಚಾವಚೈರಸ್ತ್ರೈರ್ಭಾರ್ಗವೇಣ ಮಹಾತ್ಮನಾ ।
ತ್ರಿಃ ಸಪ್ತಕೃತ್ವೋ ರೋಷೇಣ ಕೃತಾ ನಿಃಕ್ಷತ್ರಿಯಾ ಮಹೀ ॥೮॥

ಹೀಗೆ ಮಹಾತ್ಮನಾದ ಭಾರ್ಗವನಾದ ಪರಶುರಾಮನು ಶ್ರೇಷ್ಠವಾದ ಮತ್ತು ಕನಿಷ್ಠವಾದ ಅಸ್ತ್ರಗಳಿಂದ ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆಯನ್ನು ಮಾಡಿ, ಭೂಮಿಯ ಮೇಲೆ ಇದ್ದ ಕ್ಷತ್ರಿಯಕುಲವನ್ನು ಸಂಹರಿಸಿದನು.

ತತಸ್ತದ್ ವರ್ಧಿತಂ ಕ್ಷತ್ರಂ ಕ್ಷತ್ರಿಯಾಭಿಃ ಸಮಂತತಃ ।
ಉತ್ಪಾದಿತಾನ್ಯಪತ್ಯಾನಿ ಬ್ರಾಹ್ಮಣ್ಯೇಭ್ಯ ಇತಿ ಶ್ರುತಮ್ ॥೯॥

ಆಗ ಕ್ಷತ್ರಿಯಸ್ತ್ರೀಯರು ಬ್ರಾಹ್ಮಣರಿಂದ ಮಕ್ಕಳನ್ನು ಪಡೆದು, ಕ್ಷತ್ರಿಯಕುಲವನ್ನು ಪುನಃ ಅಭಿವೃದ್ಧಿಪಡಿಸಿದರು ಎಂದು ನಾನು ಕೇಳಿದ್ದೇನೆ.

ಪಾಣೌ ಗೃಹೀತಃ ಪುತ್ರೇತಿ ವೇದೇ ಚ ಕಥಿತಂ ಚೃತಮ್ ।
ಧರ್ಮಂ ಮನಸಿ ಸಂಸ್ಥಾಪ್ಯ ಬ್ರಾಹ್ಮಣಾಂಸ್ತಾಃ ಸಮಭ್ಯಯುಃ ।
ಲೋಕೇಽಪ್ಯಾಚರಿತೋ ದೃಷ್ಟಃ ಕ್ಷತ್ರಿಯಾಣಾಂ ಪುನರ್ಭವಃ ॥೧೦॥

ದಾನರೂಪವಾಗಿ ಸ್ವೀಕರಿಸಿದ ಪುತ್ರನು ಪುನ್ನಾಮ ನರಕದಿಂದ ರಕ್ಷಿಸುತ್ತಾನೆ. ಹೀಗಿರುವಾಗ ಹೊಟ್ಟೆಯಲ್ಲಿ ಹುಟ್ಟಿದ ಮಗನು ರಕ್ಷಿಸುವುದರಲ್ಲಿ ಏನು ಸಂಶಯ ಎಂಬ ವೇದದ ಮಾತನ್ನು ಚೆನ್ನಾಗಿ ಗಮನಿಸಿ, ಧರ್ಮದಲ್ಲಿ ಮನಸ್ಸಿಟ್ಟು ಕ್ಷತ್ರಿಯಸ್ತ್ರೀಯರು ಬ್ರಾಹ್ಮಣರ ಬಳಿಗೆ ಹೋದರು. ಕ್ಷತ್ರಿಯಸ್ತ್ರೀಯರು ಪುನಃ ವಿವಾಹ ಮಾಡಿಕೊಳ್ಳುವುದು ಲೋಕದಲ್ಲಿಯೂ ನಡೆದು ಬಂದ ಆಚಾರವಾಗಿದೆ.

ಅಥೋಚಥ್ಯ ಇತಿ ಖ್ಯಾತ ಆಸೀದ್ ಧೀಮಾನ್ ಮಹಾನೃಷಿಃ ।
ಭಾರ್ಯಾ ಚ ಮಮತಾ ನಾಮ ಬಭೂವಾಸ್ಯ ಮಹಾತ್ಮನಃ ॥೧೧॥

ಅಲ್ಲದೇ, ಮಹಾತಪಸ್ವಿಗಳೂ ಮತ್ತು ಮೇಧಾವಿಗಳೂ ಆದ ಉಚಥ್ಯರೆಂಬ ಋಷಿಗಳಿದ್ದರು. ಆ ಮಹಾತ್ಮರಿಗೆ 'ಮಮತಾ' ಎಂಬ ಪತ್ನಿಯಿದ್ದಳು.

ಉಚಥ್ಯಸ್ಯ ಯವೀಯಾಂಸ್ತು ಪುರೋಧಾ ಯೋ ದಿವೌಕಸಾಮ್ ।
ಬೃಹಸ್ಪತಿರ್ಮಹಾತೇಜಾ ಮಮತಾಂ ಸೋಽಭ್ಯಮನ್ಯತ ॥೧೨॥

ದೇವತೆಗಳ ಪುರೋಹಿತರಾದ ಬೃಹಸ್ಪತ್ಯಾಚಾರ್ಯರು ಉಚಥ್ಯರ ತಮ್ಮಂದಿರು. ಅವರು ಮಮತೆಯನ್ನು ಕಾಮಿಸಿದರು.

ಉವಾಚ ಮಮತಾ ತಂ ತು ದೇವರಂ ದೈವತಾತ್ ಪರಮ್ ।
ಅಂತರ್ವತ್ನ್ಯಸ್ಮಿ ತೇ ಭ್ರಾತ್ರಾ ಜ್ಯೇಷ್ಠೇನ ರಮತಾ ಮಯಿ ॥೧೩॥

ದೇವತೆಗಳಿಗಿಂತ ಶ್ರೇಷ್ಠವಾದ ತನ್ನ ಮೈದುನನನ್ನು ಕುರಿತು ಮಮತೆಯು ನಿಮ್ಮ ಅಣ್ಣನ ಜೊತೆಯಲ್ಲಿ ರಮಿಸಿ, ನಾನು ಗರ್ಭಿಣಿಯಾಗಿದ್ದೇನೆ ಎಂದು ಹೇಳಿದಳು.

ಅಯಂ ಚ ಮೇ ಮಹಾಭಾಗ ಕುಕ್ಷಾವೇವ ಬೃಹಸ್ಪತೇ ।
ಔಚಥ್ಯೋ ಗರ್ಭ ಆದತ್ತೇ ಷಡಂಗಂ ವೇದಮುತ್ತಮಮ್ ॥೧೪॥

ಅಮೋಘರೇತಾಸ್ತ್ವಂ ಚಾಪಿ ನೂನಂ ಭವಿತುಮರ್ಹಸಿ ।
ತಸ್ಮಾದೇವಂ ಗತೇ ಕಾರ್ಯೇ ಯಥಾ ಯುಕ್ತಂ ತಥಾ ಕುರು ॥೧೫॥

ಎಲೈ ಮಹಾನುಭಾವರಾದ ಬೃಹಸ್ಪತಿಗಳೇ, ಉಚಥ್ಯರ ಮಗನಾಗಿ ನನ್ನ ಗರ್ಭದಲ್ಲಿರುವ ಈ ಶಿಶುವು ಗರ್ಭದಲ್ಲಿಯೇ ಷಡಂಗ ಸಹಿತವಾದ ಉತ್ತಮವಾದ ವೇದವನ್ನು ಅಧ್ಯಯನ ಮಾಡುತ್ತಿದೆ. ನೀವಾದರೂ ಅಮೋಘವಾದ ರೇತಸ್ಸುಳ್ಳವರು

ಎಂಬುದು ನಿಶ್ಚಯ. ಪರಿಸ್ಥಿತಿಯು ಹೀಗಿರುವಾಗ ಯಾವುದು ಯುಕ್ತವೆಂದು ತಿಳಿದು, ಅದರಂತೆ ನಡೆದುಕೊಳ್ಳಿ.

ವೈಶಂಪಾಯನಃ

ಏವಮುಕ್ತಸ್ತಯಾ ಸಮ್ಯಗ್ ಬೃಹತ್ತೇಜಾ ಬೃಹಸ್ಪತಿಃ ।
ಕಾಮಾತ್ಮಾನಂ ಮಹಾತ್ಮಾऽಪಿ ನಾತ್ಮಾನಂ ಸೋऽಭ್ಯಧಾರಯತ್ ॥೧೬॥

ಮಮತೆಯಿಂದ ಹೀಗೆ ಹೇಳಲ್ಪಟ್ಟ ಮಹಾತೇಜಸ್ವಿಗಳಾದ ಬೃಹಸ್ಪತಿಗಳು ಮಹಾತ್ಮರಾದರೂ ಸಹ ತಮ್ಮ ಮನಸ್ಸಿನ ಕಾಮವನ್ನು ನಿಯಂತ್ರಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಸಂ ಬಭೂವ ತತಃ ಕಾಮೀ ತಯಾ ಸಾರ್ಧಮಕಾಮಯಾ ।
ಉತ್ಸೃಜಂತಂ ತು ತತ್ತೇಜೋ ಗರ್ಭಸ್ಥೋ ಹ್ಯಭ್ಯಭಾಷತ ॥೧೭॥

ಮಮತೆಗೆ ಇಷ್ಟವಿಲ್ಲದಿದ್ದರೂ ಕಾಮಿಯಾದ ಅವರು ಮಮತೆಯ ಸಮಾಗಮವನ್ನು ಮಾಡಿದರು. ಅವರು ರೇತಸ್ಸನ್ನು ಉತ್ಸರ್ಜನ ಮಾಡುವ ಸಮಯದಲ್ಲಿ ಗರ್ಭದಲ್ಲಿದ್ದ ಶಿಶುವು ಅವರನ್ನು ಕುರಿತು ಹೇಳಿತು -

ಕನೀಯಸ್ತಾತ ನೈವೇಹ ಸಂಭವೋ ವಿದ್ಯತೇ ದ್ವಯೋಃ ।
ಅಮೋಘಶುಕ್ಲಸ್ತ್ವಂ ಚಾಪಿ ಪೂರ್ವಂ ಚಾಹಮಿಹಾಗತಃ ॥೧೮॥

ಚಿಕ್ಕಪ್ಪ ಇಲ್ಲಿ ಇಬ್ಬರಿಗೆ ಸ್ಥಳವಿಲ್ಲ. ನಿಮ್ಮ ರೇತಸ್ಸು ಅಮೋಘವಾದುದು. ನಾನು ಮೊದಲೇ ಇಲ್ಲಿ ಬಂದಿದ್ದೇನೆ.

ಭೀಷ್ಮಃ

ಶಶಾಪ ತಂ ತತಃ ಕ್ರುದ್ಧ ಏವಮುಕ್ತೋ ಬೃಹಸ್ಪತಿಃ ।
ಪುತ್ರಂ ಭ್ರಾತುರುಚಥ್ಯಸ್ಯ ಗರ್ಭಸ್ಥಂ ಭಗವಾನ್ ಋಷಿಃ ॥೧೯॥

ಹೀಗೆ ಹೇಳಲ್ಪಟ್ಟ ಬೃಹಸ್ಪತಿಗಳು ಕೋಪಗೊಂಡು ಗರ್ಭದಲ್ಲಿದ್ದ ಉಚಿಥ್ಯರ ಪುತ್ರನಿಗೆ ಶಾಪವನ್ನು ಕೊಟ್ಟರು.

ಬೃಹಸ್ಪತಿಃ

ಯಸ್ಮಾತ್ ತ್ವಮೀದೃಶೇ ಕಾಲೇ ಸರ್ವಭೂತೇಪ್ಸಿತೇ ಸತಿ ।
ಏವಮಾತ್ಥ ವಚಸ್ತಸ್ಮಾತ್ ತಮೋ ದೀರ್ಘಂ ಪ್ರವೇಕ್ಷ್ಯತಿ ॥೨೦॥

ಎಲ್ಲ ಪ್ರಾಣಿಗಳಿಗೂ ಹಿತವಾದ ಇಂತಹ ಸಂಭೋಗಕಾಲದಲ್ಲಿ ನೀನು ನನ್ನನ್ನು ನಿಷೇಧ ಮಾಡುತ್ತಿರುವುದರಿಂದ ನೀನು ಕುರುಡನಾಗುವಿ.

ತತೋ ದೀರ್ಘತಮಾ ನಾಮ ಶಾಪಾದೃಷಿರಜಾಯತ ।
ಬೃಹಸ್ಪತೇರ್ಬೃಹತ್ಕೀರ್ತೇರ್ಬೃಹಸ್ಪತಿರಿವೌಜಸಾ ॥೨೧॥

ಅನಂತರ ಮಹಾಕೀರ್ತಿಯುಳ್ಳ ಬೃಹಸ್ಪತಿಗಳ ಶಾಪದಿಂದ ಬೃಹಸ್ಪತಿಗಳಂತೆಯೇ ಸಾಮರ್ಥ್ಯವನ್ನು ಹೊಂದಿದ್ದ 'ದೀರ್ಘತಮ' ಋಷಿಗಳು ಜನಿಸಿದರು.

ಜಾತ್ಯಂಧೋ ವೇದವಿತ್ ಪ್ರಾಜ್ಞಃ ಪತ್ನೀಂ ಲೇಭೇ ಸ್ವವಿದ್ಯಯಾ ।
ತರುಣೀಂ ರೂಪಸಂಪನ್ನಾಂ ದ್ವಿಷಂತೀಂ ನಾಮ ಬ್ರಾಹ್ಮಣೀಮ್ ॥೨೨॥

ವೇದಜ್ಞರೂ ಮತ್ತು ಹುಟ್ಟುಕುರುಡರೂ ಆದ ಅವರು ರೂಪಸಂಪನ್ನಳಾದ ಯುವತಿಯಾದ 'ದ್ವಿಷಂತೀ' ಎಂಬ ಬ್ರಾಹ್ಮಣ ಕನ್ಯೆಯನ್ನು ತಮ್ಮ ವಿದ್ಯೆಯ ಬಲದಿಂದ ಪತ್ನಿಯಾಗಿ ಪಡೆದರು.

ಋಷೇರುಚಥ್ಯಸ್ಯ ಮಹಾನ್ ಸಂತಾನಕುಲವೃದ್ಧಯೇ ।
ಸ ಪುತ್ರಾನ್ ಜನಯಾಮಾಸ ಗೌತಮಾದೀನ್ ಮಹಾಯಶಾಃ ॥೨೩॥

ಮಹಾತ್ಮರೂ, ಮಹಾಕೀರ್ತಿವಂತರೂ ಆದ ಅವರು ಉಚಥ್ಯರ ಕುಲದ ಅಭಿವೃದ್ಧಿಗಾಗಿ ಗೌತಮ ಮೊದಲಾದ ಮಕ್ಕಳನ್ನು ಪಡೆದರು.

ಪುತ್ರಲಾಭಾಚ್ಚ ಸಾ ಪತ್ನೀ ನ ತುತೋಷ ಪತಿಂ ತದಾ ।
ಪ್ರದ್ವಿಷಂತೀಂ ಪತಿರ್ಭಾರ್ಯಾಂ ಕಿಂ ಮಾಂ ದ್ವೇಷ್ಟೀತಿ ಚಾಬ್ರವೀತ್ ॥

ಮಕ್ಕಳನ್ನು ಪಡೆದರೂ ಪತ್ನಿಯು ಸಂತೋಷಪಡಲಿಲ್ಲ, ಆಗ ದೀರ್ಘತಮರು ಪತ್ನಿಯಾದ ಪ್ರದ್ವಿಷಂತಿಯನ್ನು ಕುರಿತು, ನನ್ನನ್ನು ಏಕೆ ದ್ವೇಷಿಸುತ್ತೀಯೇ ಎಂದು ಕೇಳಿದರು.

ಪ್ರದ್ವಿಷಂತೀ

ಭಾರ್ಯಾಯಾ ಭರಣಾದ್ ಭರ್ತಾ ಪಾಲನಾಚ್ಚ ಪತಿಃ ಸ್ಮೃತಃ ।
ಅಹಂ ತೇ ಭರಣಂ ಕೃತ್ವಾ ಜಾತ್ಯಂಧಂ ಸಸುತಾ ಸದಾ ।
ನಿತ್ಯಕಾಲಂ ಶ್ರಮೇಣಾರ್ತಾ ನ ಭರೇಯಂ ಮಹಾತಪಃ ॥೨೫॥

ಹೆಂಡತಿಯನ್ನು ಭರಣ ಮಾಡುವುದರಿಂದ (ಪೋಷಿಸುವುದರಿಂದ) ಪುರುಷನಿಗೆ 'ಭರ್ತಾ' ಎಂದೂ ಪಾಲನೆ ಮಾಡುವುದರಿಂದ 'ಪತಿ'ಯೆಂದೂ ಕರೆಯುತ್ತಾರೆ. ನಾನು ಮತ್ತು ನನ್ನ ಮಕ್ಕಳು ಯಾವಾಗಲೂ ನಿನ್ನ ಭರಣವನ್ನು ಮಾಡುತ್ತಾ, ಶ್ರಮದಿಂದ ಬಳಲಿದ್ದೇವೆ. ಮಹಾತಪಸ್ವಿಯೇ, ಇನ್ನು ಮುಂದೆ ನಿನ್ನನ್ನು ಭರಣ ಮಾಡುವುದಿಲ್ಲ.

ಭೀಷ್ಮಃ

ತಸ್ಯಾಸ್ತದ್ವಚನಂ ಶ್ರುತ್ವಾ ಋಷಿಃ ಕೋಪಸಮನ್ವಿತಃ ।
ಪ್ರತ್ಯುವಾಚ ತತಃ ಪತ್ನೀಂ ಪ್ರದ್ವೇಷೀಂ ಸಸುತಾಂ ತದಾ ।
ನೀಯತಾಂ ಕ್ಷತ್ರಿಯಗೃಹಂ ಧನಾರ್ಥಿ ತ್ವಂ ಭವಿಷ್ಯಸಿ ॥೨೬॥

ಅವಳ ಆ ಮಾತನ್ನು ಕೇಳಿ, ಕೋಪಗೊಂಡ ಋಷಿಗಳು ಮಕ್ಕಳ ಜೊತೆಯಲ್ಲಿದ್ದ ದ್ವಿಷಂತಿಯನ್ನು ಕುರಿತು ಹೇಳಿದರು. ನಿನಗೆ ಧನದ ಆಸೆಯಿದೆ. ಮಕ್ಕಳೇ ಇವಳನ್ನು ರಾಜನ ಮನೆಗೆ ಕರೆದುಕೊಂಡು ಹೋಗಿ. (ಎಂದು ಹೇಳಿದರು)

ಪತ್ನೀ

ತ್ವಯಾ ದತ್ತಂ ಧನಂ ವಿಪ್ರ ನೇಚ್ಛೇಯಂ ದುಃಖಕಾರಕಮ್ ।
ಯಥೇಷ್ಟಂ ಕುರು ವಿಪ್ರೇಂದ್ರ ನ ಭರೇಯಂ ಯಥಾ ಪುರಾ ॥೨೭॥

ಬ್ರಾಹ್ಮಣನೇ, ನೀನು ಕೊಡುವ ದುಃಖಪ್ರದವಾದ ಧನವನ್ನು ನಾನು ಬಯಸುವುದಿಲ್ಲ. ವಿಪ್ರೇಂದ್ರನೇ, ನಿನಗೆ ಇಷ್ಟಬಂದಂತೆ ಮಾಡು. ಮೊದಲಿನಂತೆ ನಾನು ನಿನ್ನನ್ನು ಪೋಷಿಸುವುದಿಲ್ಲ.

ದೀರ್ಘತಮಾಃ

ಅದ್ಯಪ್ರಭೃತಿ ಮರ್ಯಾದಾ ಮಯಾ ಲೋಕೇ ಪ್ರತಿಷ್ಠಿತಾ ।
ಏಕ ಏವ ಪತಿಃ ಪತ್ನ್ಯಾ ಯಾವಜ್ಜೀವಂ ಪರಾಯಣಮ್ ॥೨೮॥

ಇಂದಿನಿಂದ ನಾನು ಲೋಕದಲ್ಲಿ ಧರ್ಮಮರ್ಯಾದೆಯನ್ನು ಪ್ರತಿಷ್ಠಾಪಿಸುತ್ತೇನೆ. ಬದುಕಿರುವವರೆಗೂ ಒಬ್ಬ ಪತ್ನಿಗೆ ಒಬ್ಬ ಪತಿಯೇ ಆಶ್ರಯನಾಗಿರುತ್ತಾನೆ.

ಮೃತೇ ಜೀವತಿ ವಾ ತಸ್ಮಿನ್ ನ ಪರಂ ಪ್ರಾಪ್ನುಯಾನ್ನರಮ್ ।
ಅಭಿಗಮ್ಯ ಪರಂ ನಾರೀ ಪತಿಷ್ಯತಿ ನ ಸಂಶಯಃ ॥೨೯॥

ಅವನು ಜೀವಿಸಿರುವಾಗ, ಅಥವಾ ಮೃತನಾದ ಮೇಲೆ ಪತ್ನಿಯು ಇನ್ನೊಬ್ಬನ ಸಹವಾಸವನ್ನು ಮಾಡಿದರೆ ಅವಳು ಪತಿತಳಾಗುವಳು ಎಂಬ ವಿಷಯದಲ್ಲಿ ಸಂಶಯವಿಲ್ಲ.

ಅಪತೀನಾಂ ತು ನಾರೀಣಾಮದ್ಯಪ್ರಭೃತಿ ಪಾತಕಮ್ ।
ಯದ್ಯಸ್ತಿ ಚೇದ್ ಧನಂ ಸರ್ವಂ ವೃಥಾಭೋಗಾ ಭವಂತು ತಾಃ ।
ಅಕೀರ್ತಿಃ ಪರಿವಾದಾಶ್ಚ ನಿತ್ಯಂ ತಾಸಾಂ ಭವಂತ್ವಿತಿ ॥೩೦॥

ಪತಿಯಿಲ್ಲದ ನಾರಿಯರಿಗೆ ಇಂದಿನಿಂದ ಪಾತಕವುಂಟಾಗುತ್ತದೆ. ಅವರಿಗೆ ಒಂದು ಪಕ್ಷ ಧನವಿದ್ದರೆ ಅದೆಲ್ಲಾ ವ್ಯರ್ಥಭೋಗದಲ್ಲಿ ವ್ಯಯವನ್ನು ಹೊಂದಲಿ. ಅವರಿಗೆ ನಿತ್ಯವೂ ಅಪಕೀರ್ತಿಯೂ ಮತ್ತು ನಿಂದನೆಗಳೂ ಉಂಟಾಗಲಿ.

ಭೀಷ್ಮಃ

ತಸ್ಯ ತದ್ವಚನಂ ಶ್ರುತ್ವಾ ಬ್ರಾಹ್ಮಣೇ ಭೃಶಕೋಪಿತಾ ।
ಗಂಗಾಯಾಂ ನೀಯತಾಮೇಷ ಪುತ್ರಾ ಇತ್ಯೇವಮಬ್ರವೀತ್ ॥೩೧॥

ಅವರ ಆ ಮಾತನ್ನು ಕೇಳಿ ಬಹಳ ಸಿಟ್ಟಾದ ಪತ್ನಿಯು ಮಕ್ಕಳನ್ನು ಕುರಿತು, ಮಕ್ಕಳೇ, ಇವರನ್ನು ಗಂಗೆಗೆ ಕರೆದುಕೊಂಡು ಹೋಗಿ ಬಿಟ್ಟುಬಿಡಿ ಎಂದು ಹೇಳಿದಳು.

ಲೋಭಮೋಹಾಭಿಭೂತಾಸ್ತೇ ಪುತ್ರಾಸ್ತಂ ಗೌತಮಾದಯಃ
ಕಾಷ್ಠೇ ಸಮ್ಯದ್ಧೇ ಪ್ರಕ್ಷಿಪ್ಯ ಗಂಗಾಯಾಂ ಸಮವಾಸೃಜನ್ ॥೩೨॥

ಲೋಭಕ್ಕೂ, ಮೋಹಕ್ಕೂ ಒಳಗಾದ ಆ ಗೌತಮ ಮೊದಲಾದ ಪುತ್ರರು ಕಟ್ಟಿಗೆಗಳಿಂದ ಒಂದು ತೆಪ್ಪವನ್ನು ಮಾಡಿ, ಅವರನ್ನು ಅದರಲ್ಲಿ ಕೂಡಿಸಿ ಗಂಗೆಯಲ್ಲಿ ತೇಲಿಬಿಟ್ಟರು.

ನ ಸ್ಯಾದಂಧಶ್ಚ ವೃದ್ಧಶ್ಚ ಭರ್ತವ್ಯೋಽಯಮಿತಿ ಸ್ಮ ತೇ ।
ಕರ್ಮಣ್ಯಥ ತತಃ ಕ್ರೂರೇ ತೇಷಾಂ ಬುದ್ಧಿರಜಾಯತ ॥೩೩॥

ಇನ್ನು ಮುಂದೆ ಅಂಧನು ಮತ್ತು ವೃದ್ಧನಾದ ತಂದೆಯನ್ನು ಸಾಕುವ ಹೊಣೆ, ನಮಗಿರುವುದಿಲ್ಲ ಎಂದು ತಿಳಿದ ಅವರಿಗೆ ಈ ಕ್ರೂರಕರ್ಮವನ್ನು ಮಾಡುವ ಬುದ್ಧಿಯುಂಟಾಯಿತು.

ಚಿಂತಯಿತ್ವಾ ತತಃ ಕ್ರೂರಾಃ ಪ್ರತಿಜಗ್ಮುರ್ಯಥಾ ಗೃಹಾನ್ ।
ಸೋಽನುಸ್ರೋತಸ್ತದಾ ರಾಜನ್ ಪ್ಲವಮಾನೋ ಮುನಿಸ್ತದಾ ॥೩೪॥

ಹೀಗೆ ಆಲೋಚಿಸಿ, ಕ್ರೂರಕರ್ಮವನ್ನು ಮಾಡಿ, ಅವರು ತಮ್ಮ ಮನೆಗಳಿಗೆ ಹಿಂದಿರುಗಿದರು. ಎಲೈ ರಾಜನೇ, ದೀರ್ಘತಮ ಋಷಿಗಳಾದರೂ ಆ ಕಟ್ಟಿಗೆಯ ತೆಪ್ಪದಿಂದ ಗಂಗೆಯ ನೀರಿನಲ್ಲಿ ತೇಲುತ್ತಾ ಅನೇಕ ದೇಶಗಳನ್ನು ದಾಟಿ, ಮುಂದೆ ಹೋದರು.

ಜಗಾಮ ಸುಬಹೂನ್ ದೇಶಾನ್ ಅಂಧಸ್ತೇನೋಡುಪೇನ ಹ ।
ತಂ ತು ರಾಜಾ ಬಲಿರ್ನಾಮ ಸರ್ವಧರ್ಮವಿಶಾರದಃ ॥೩೫॥

ಅಪಶ್ಯನ್ಮಜ್ಜನಗತಃ ಸ್ರೋತಸಾಽಭ್ಯಾಶಮಾಗತಮ್ ।
ಜಗ್ರಾಹ ಚೈನಂ ಧರ್ಮಾತ್ಮಾ ಬಲಿಃ ಸತ್ಯಪರಾಕ್ರಮಃ ॥೩೬॥

ಸರ್ವಧರ್ಮವಿಶಾರದನಾದ 'ಬಲಿ' ಎಂಬ ರಾಜನು ಗಂಗೆಯಲ್ಲಿ ಸ್ನಾನಕ್ಕಾಗಿ ಬಂದು ಪ್ರವಾಹದ ರಭಸದಿಂದ ದಡದ ಸಮೀಪಕ್ಕೆ ಬಂದಿದ್ದ ಆ ತೆಪ್ಪವನ್ನು ನೋಡಿ, ಸತ್ಯಪರಾಕ್ರಮನೂ, ಧರ್ಮಾತ್ಮನೂ ಆದ ಅವನು ದೀರ್ಘತಮನನ್ನು ಹಿಡಿದುಕೊಂಡನು.

ಜ್ಞಾತ್ವಾ ಚೈನಂ ವರಂ ವವ್ರೇ ಪುತ್ರಾರ್ಥೀ ಮನುಜರ್ಷಭ ।
ತಂ ಪೂಜಯಿತ್ವಾ ರಾಜರ್ಷಿರ್ವಿಶ್ರಾಂತಂ ಮುನಿಮಬ್ರವೀತ್ ॥೩೭॥

ಎಲೈ ಮನುಜಶ್ರೇಷ್ಠನೇ, ಪುತ್ರಾರ್ಥಿಯಾದ ರಾಜರ್ಷಿಯಾದ ಅವನು ಅವರನ್ನು ಪೂಜಿಸಿ, ಅವರು ವಿಶ್ರಾಂತಿಯನ್ನು ಪಡೆದ ಮೇಲೆ, ಅವರನ್ನು ಕುರಿತು ಮಾತನಾಡಿದನು.

ಸಂತಾನಾರ್ಥಂ ಮಹಾಭಾಗ ಭಾರ್ಯಾಯಾಂ ಮಮ ಮಾನದ ।
ಪುತ್ರಾನ್ ಧರ್ಮಾರ್ಥಕುಶಲಾನುತ್ಪಾದಯಿತುಮರ್ಹಸಿ ॥೩೮॥

ಏಳ್ಗೆ ಮಾನದರೇ ಮತ್ತು ಮಹಾನುಭಾವರೇ, ನನ್ನ ಕುಲದ ಸಂತಾನದ ಸಲುವಾಗಿ ಈ ನನ್ನ ಪತ್ನಿಯಲ್ಲಿ ಧರ್ಮಾರ್ಥಕುಶಲರಾದ ಮಕ್ಕಳನ್ನು ಪಡೆಯಬೇಕು.

ಭೀಷ್ಮಃ

ಏವಮುಕ್ತಃ ಸ ತೇಜಸ್ವೀ ತಂ ತಥೇತ್ಯುಕ್ತವಾನೃಷಿಃ ।
ತಸ್ಮೈ ಸ ರಾಜಾ ಸ್ವಾಂ ಭಾರ್ಯಾಂ ಸುದೇಷ್ಣಾಂ ಪ್ರಾಹಿಣೋತ್ ತದಾ ॥

ಹೀಗೆ ಹೇಳಲ್ಪಟ್ಟ ತೇಜಸ್ವಿಗಳಾದ ಆ ಋಷಿಗಳು ಹಾಗೆಯೇ ಆಗಲಿ ಎಂದು ಹೇಳಿದರು. ಆಗ ರಾಜನು ತನ್ನ ಭಾರ್ಯೆಯಾದ ಸುದೇಷ್ಣೆಯನ್ನು ಅವರ ಬಳಿಗೆ ಕಳುಹಿಸಿದನು.

ಅಂಧಂ ವೃದ್ಧಂ ತು ತಂ ಮತ್ವಾ ನ ಸಾ ದೇವೀ ಜಗಾಮ ಹ ।
ಸ್ವಾಂ ತು ಧಾತ್ರೇಯಿಕಾಂ ತಸ್ಮೈ ವೃದ್ಧಾಯ ಪ್ರಾಹಿಣೋತ್ ತದಾ ॥

ಋಷಿಗಳು ಅಂಧರು ಮತ್ತು ವೃದ್ಧರು ಎಂದು ಚಿಂತಿಸಿದ ಆ ದೇವಿಯು ಅವರ ಬಳಿಗೆ ಹೋಗಲಿಲ್ಲ. ಬದಲಾಗಿ ತನ್ನ ದಾಸಿಯ ಮಗಳನ್ನು ಆ ವೃದ್ಧರ ಬಳಿಗೆ ಕಳುಹಿಸಿಕೊಟ್ಟಳು.

ತಸ್ಯಾಂ ಕಕ್ಷೀವದಾದೀನ್ ಸ ಶೂದ್ರಯೋನಾವೃಷಿರ್ವಶೀ ।
ಜನಯಾಮಾಸ ಧರ್ಮಾತ್ಮಾ ಪುತ್ರಾನೇಕಾದಶೈವ ತು ॥೪೧॥

ಪ್ರಭಾವಶಾಲಿಗಳೂ, ಧರ್ಮಾತ್ಮರೂ ಆದ ಋಷಿಗಳು ಶೂದ್ರಯೋನಿಗೆ ಸೇರಿದ ಅವಳಲ್ಲಿ ಕಕ್ಷೀವಾನ್ ಮೊದಲಾದ ಹನ್ನೊಂದು ಮಕ್ಕಳನ್ನು ಪಡೆದರು.

ಕಕ್ಷೀವದಾದಿಕಾನ್ ಪುತ್ರಾನ್ ಸಾಂಗಾನ್ ವೇದಾನಧೀಯತಃ ।
ಉವಾಚ ತಮೃಷಿಂ ರಾಜಾ ಮಮೈತ ಇತಿ ವೀರ್ಯವಾನ್ ॥೪೨॥

ಕಕ್ಷೀವಾನ್ ಮೊದಲಾದವರು ದೀರ್ಘತಮರ ಬಳಿ ಸಾಂಗ ವೇದಾಧ್ಯಯನವನ್ನು ಮಾಡುತ್ತಿರುವುದನ್ನು ನೋಡಿ ರಾಜನು ಋಷಿಗಳನ್ನು ಕುರಿತು ಇವರು ನನ್ನ ಮಕ್ಕಳೆಂದು ಹೇಳಿದನು.

ನೇತ್ಯುವಾಚ ಮಹರ್ಷಿಸ್ತಂ ಮಮೈತ ಇತಿ ಚಾಬ್ರವೀತ್ ।
ಶೂದ್ರಯೋನೌ ಹಿ ಮೇ ಪುತ್ರಾ ಜಾತಾಃ ಕಕ್ಷೀವದಾದಯಃ ॥೪೩॥

ಮಹರ್ಷಿಗಳು ಅಲ್ಲ, ಇವರು ನನ್ನ ಮಕ್ಕಳು. ಕಕ್ಷೀವಾನ್ ಮೊದಲಾದವರು ಶೂದ್ರಯೋನಿಯಲ್ಲಿ ಹುಟ್ಟಿದ ನನ್ನ ಮಕ್ಕಳು ಎಂದು ಹೇಳಿದರು.

ಅಂಧಂ ವೃದ್ಧಂ ಚ ಮಾಂ ದೃಷ್ಟ್ವಾ ಸುದೇಷ್ಣಾ ಮಹಿಷೀ ತವ ।
ಪ್ರಾಹಿಣೋದವಮಾನಾನ್ಮೇ ಶೂದ್ರಾಂ ಧಾತ್ರೇಯಿಕಾಂ ಸ್ವಯಮ್ ॥

ನಾನು ಅಂಧ ಮತ್ತು ವೃದ್ಧ ಎಂದು ಚಿಂತಿಸಿ, ನಿನ್ನ ರಾಣಿಯಾದ ಸುದೇಷ್ಣೆಯು ನನ್ನ ಬಳಿಗೆ ಬರಲಿಲ್ಲ. ನನ್ನನ್ನು ಅವಮಾನ ಮಾಡಲು ಶೂದ್ರಳಾದ ಅವಳ ದಾಸಿಯ ಮಗಳನ್ನು ತಾನೇ ನನ್ನ ಬಳಿಗೆ ಕಳುಹಿಸಿದಳು.

ತತಃ ಪ್ರಸಾದಯಾಮಾಸ ಪುನಸ್ತಮೃಷಿಸತ್ತಮಮ್ ।
ಬಲಿಃ ಸುದೇಷ್ಣಾಂ ಭಾರ್ಯಾಂ ಚ ತಸ್ಮೈ ತಾಂ ಪ್ರಾಹಿಣೋತ್ ಪುನಃ॥೪೫॥

ಆಗ ರಾಜನು ಋಷಿಶ್ರೇಷ್ಠರನ್ನು ಪುನಃ ಪ್ರಸನ್ನೀಕರಿಸಿಕೊಂಡು ತನ್ನ ಪತ್ನಿಯಾದ ಸುದೇಷ್ಣೆಯನ್ನು ಅವರ ಬಳಿಗೆ ಕಳುಹಿಸಿದನು.

ತಾಂ ಸ ದೀರ್ಘತಮಾಂಗೇಷು ಸ್ಪೃಷ್ಟ್ವಾ ದೇವೀಮಥಾಬ್ರವೀತ್ ।
ಭವಿಷ್ಯತಿ ಕುಮಾರಸ್ತೇ ತೇಜಸ್ವೀ ಸತ್ಯವಾಗಿತಿ ॥೪೬॥

ದೀರ್ಘತಮ ಋಷಿಗಳು ಆ ರಾಣಿಯ ದೇಹವನ್ನು ಸ್ಪರ್ಶ ಮಾಡಿ, ನಿನಗೆ ತೇಜಸ್ವಿಯೂ, ಸತ್ಯವಚನನೂ ಆದ ಮಗನು ಜನಿಸುವನು ಎಂದು ಹೇಳಿದರು.

ತತ್ರಾಂಗೋ ನಾಮ ರಾಜರ್ಷಿಃ ಸುದೇಷ್ಣಾಯಾಮಜಾಯತ ।
ಏವಮನ್ಯೇ ಮಹೇಷ್ವಾಸಾ ಬ್ರಾಹ್ಮಣೈಃ ಕ್ಷತ್ರಿಯಾ ಭುವಿ ।
ಜಾತಾಃ ಪರಮಧರ್ಮಜ್ಞಾ ವೀರ್ಯವಂತೋ ಮಹಾಬಲಾಃ ॥೪೭॥

ಆಗ ಸುದೇಷ್ಣೆಯಲ್ಲಿ 'ಅಂಗ' ಎಂಬ ರಾಜರ್ಷಿಯು ಜನಿಸಿದನು. ಇನ್ನೂ ಎಷ್ಟೋ ಪರಮಧರ್ಮಜ್ಞರೂ, ವೀರ್ಯವಂತರೂ, ಮಹಾಬಲರೂ, ಧನುರ್ವಿದ್ಯಾಪಾರಂಗತರೂ ಆದ ಕ್ಷತ್ರಿಯರು ಬ್ರಾಹ್ಮಣರಿಂದ ಜನಿಸಿದ್ದಾರೆ.

ಸಂತಾನಾರ್ಥಂ ಮಹಾಭಾಗ ಭಾರ್ಯಾಯಾಂ ಮಮ ಮಾನದ ।
ಪುತ್ರಾನ್ ಧರ್ಮಾರ್ಥಕುಶಲಾನುತ್ಪಾದಯಿತುಮರ್ಹಸಿ ॥೩೮॥

ಏಳ್ಗೆ ಮಾನದರೇ ಮತ್ತು ಮಹಾನುಭಾವರೇ, ನನ್ನ ಕುಲದ ಸಂತಾನದ ಸಲುವಾಗಿ ಈ ನನ್ನ ಪತ್ನಿಯಲ್ಲಿ ಧರ್ಮಾರ್ಥಕುಶಲರಾದ ಮಕ್ಕಳನ್ನು ಪಡೆಯಬೇಕು.

ಭೀಷ್ಮಃ

ಏವಮುಕ್ತಃ ಸ ತೇಜಸ್ವೀ ತಂ ತಥೇತ್ಯುಕ್ತವಾನೃಷಿಃ ।
ತಸ್ಮೈ ಸ ರಾಜಾ ಸ್ವಾಂ ಭಾರ್ಯಾಂ ಸುದೇಷ್ಣಾಂ ಪ್ರಾಹಿಣೋತ್ ತದಾ ॥

ಹೀಗೆ ಹೇಳಲ್ಪಟ್ಟ ತೇಜಸ್ವಿಗಳಾದ ಆ ಋಷಿಗಳು ಹಾಗೆಯೇ ಆಗಲಿ ಎಂದು ಹೇಳಿದರು. ಆಗ ರಾಜನು ತನ್ನ ಭಾರ್ಯೆಯಾದ ಸುದೇಷ್ಣೆಯನ್ನು ಅವರ ಬಳಿಗೆ ಕಳುಹಿಸಿದನು.

ಅಂಧಂ ವೃದ್ಧಂ ತು ತಂ ಮತ್ವಾ ನ ಸಾ ದೇವೀ ಜಗಾಮ ಹ ।
ಸ್ವಾಂ ತು ಧಾತ್ರೇಯಿಕಾಂ ತಸ್ಮೈ ವೃದ್ಧಾಯ ಪ್ರಾಹಿಣೋತ್ ತದಾ ॥

ಋಷಿಗಳು ಅಂಧರು ಮತ್ತು ವೃದ್ಧರು ಎಂದು ಚಿಂತಿಸಿದ ಆ ದೇವಿಯು ಅವರ ಬಳಿಗೆ ಹೋಗಲಿಲ್ಲ. ಬದಲಾಗಿ ತನ್ನ ದಾಸಿಯ ಮಗಳನ್ನು ಆ ವೃದ್ಧರ ಬಳಿಗೆ ಕಳುಹಿಸಿಕೊಟ್ಟಳು.

ತಸ್ಯಾಂ ಕಕ್ಷೀವದಾದೀನ್ ಸ ಶೂದ್ರಯೋನಾವೃಷಿರ್ವಶೀ ।
ಜನಯಾಮಾಸ ಧರ್ಮಾತ್ಮಾ ಪುತ್ರಾನೇಕಾದಶೈವ ತು ॥೪೧॥

ಪ್ರಭಾವಶಾಲಿಗಳೂ, ಧರ್ಮಾತ್ಮರೂ ಆದ ಋಷಿಗಳು ಶೂದ್ರಯೋನಿಗೆ ಸೇರಿದ ಅವಳಲ್ಲಿ ಕಕ್ಷೀವಾನ್ ಮೊದಲಾದ ಹನ್ನೊಂದು ಮಕ್ಕಳನ್ನು ಪಡೆದರು.

ಕಕ್ಷೀವದಾದಿಕಾನ್ ಪುತ್ರಾನ್ ಸಾಂಗಾನ್ ವೇದಾನಧೀಯತಃ ।
ಉವಾಚ ತಮೃಷಿಂ ರಾಜಾ ಮಮೈತ ಇತಿ ವೀರ್ಯವಾನ್ ॥೪೨॥

ಕಕ್ಷೀವಾನ್ ಮೊದಲಾದವರು ದೀರ್ಘತಮರ ಬಳಿ ಸಾಂಗ ವೇದಾಧ್ಯಯನವನ್ನು ಮಾಡುತ್ತಿರುವುದನ್ನು ನೋಡಿ ರಾಜನು ಋಷಿಗಳನ್ನು ಕುರಿತು ಇವರು ನನ್ನ ಮಕ್ಕಳೆಂದು ಹೇಳಿದನು.

ನೇತ್ಯುವಾಚ ಮಹರ್ಷಿಸ್ತಂ ಮಮೈತ ಇತಿ ಚಾಬ್ರವೀತ್ ।
ಶೂದ್ರಯೋನೌ ಹಿ ಮೇ ಪುತ್ರಾ ಜಾತಾಃ ಕಕ್ಷೀವದಾದಯಃ ॥೪೩॥

ಮಹರ್ಷಿಗಳು ಅಲ್ಲ, ಇವರು ನನ್ನ ಮಕ್ಕಳು. ಕಕ್ಷೀವಾನ್ ಮೊದಲಾದವರು ಶೂದ್ರಯೋನಿಯಲ್ಲಿ ಹುಟ್ಟಿದ ನನ್ನ ಮಕ್ಕಳು ಎಂದು ಹೇಳಿದರು.

ಅಂಧಂ ವೃದ್ಧಂ ಚ ಮಾಂ ದೃಷ್ಟ್ವಾ ಸುದೇಷ್ಣಾ ಮಹಿಷೀ ತವ ।
ಪ್ರಾಹಿಣೋದವಮಾನಾನ್ಮೇ ಶೂದ್ರಾಂ ಧಾತ್ರೇಯಿಕಾಂ ಸ್ವಯಮ್ ॥

ನಾನು ಅಂಧ ಮತ್ತು ವೃದ್ಧ ಎಂದು ಚಿಂತಿಸಿ, ನಿನ್ನ ರಾಣಿಯಾದ ಸುದೇಷ್ಣೆಯು ನನ್ನ ಬಳಿಗೆ ಬರಲಿಲ್ಲ. ನನ್ನನ್ನು ಅವಮಾನ ಮಾಡಲು ಶೂದ್ರಳಾದ ಅವಳ ದಾಸಿಯ ಮಗಳನ್ನು ತಾನೇ ನನ್ನ ಬಳಿಗೆ ಕಳುಹಿಸಿದಳು.

ತತಃ ಪ್ರಸಾದಯಾಮಾಸ ಪುನಸ್ತಮೃಷಿಸತ್ತಮಮ್ ।
ಬಲಿಃ ಸುದೇಷ್ಣಾಂ ಭಾರ್ಯಾಂ ಚ ತಸ್ಮೈ ತಾಂ ಪ್ರಾಹಿಣೋತ್ ಪುನಃ॥೪೫॥

ಆಗ ರಾಜನು ಋಷಿಶ್ರೇಷ್ಠರನ್ನು ಪುನಃ ಪ್ರಸನ್ನೀಕರಿಸಿಕೊಂಡು ತನ್ನ ಪತ್ನಿಯಾದ ಸುದೇಷ್ಣೆಯನ್ನು ಅವರ ಬಳಿಗೆ ಕಳುಹಿಸಿದನು.

ತಾಂ ಸ ದೀರ್ಘತಮಾಂಗೇಷು ಸ್ಪೃಷ್ಟ್ವಾ ದೇವೀಮಥಾಬ್ರವೀತ್ ।
ಭವಿಷ್ಯತಿ ಕುಮಾರಸ್ತೇ ತೇಜಸ್ವೀ ಸತ್ಯವಾಗಿತಿ ॥೪೬॥

ದೀರ್ಘತಮ ಋಷಿಗಳು ಆ ರಾಣಿಯ ದೇಹವನ್ನು ಸ್ಪರ್ಶ ಮಾಡಿ, ನಿನಗೆ ತೇಜಸ್ವಿಯೂ, ಸತ್ಯವಚನನೂ ಆದ ಮಗನು ಜನಿಸುವನು ಎಂದು ಹೇಳಿದರು.

ತತ್ರಾಂಗೋ ನಾಮ ರಾಜರ್ಷಿಃ ಸುದೇಷ್ಣಾಯಾಮಜಾಯತ ।
ಏವಮನ್ಯೇ ಮಹೇಷ್ವಾಸಾ ಬ್ರಾಹ್ಮಣೈಃ ಕ್ಷತ್ರಿಯಾ ಭುವಿ ।
ಜಾತಾಃ ಪರಮಧರ್ಮಜ್ಞಾ ವೀರ್ಯವಂತೋ ಮಹಾಬಲಾಃ ॥೪೭॥

ಆಗ ಸುದೇಷ್ಣೆಯಲ್ಲಿ 'ಅಂಗ' ಎಂಬ ರಾಜರ್ಷಿಯು ಜನಿಸಿದನು. ಇನ್ನೂ ಎಷ್ಟೋ ಪರಮಧರ್ಮಜ್ಞರೂ, ವೀರ್ಯವಂತರೂ, ಮಹಾಬಲರೂ, ಧನುರ್ವಿದ್ಯಾಪಾರಂಗತರೂ ಆದ ಕ್ಷತ್ರಿಯರು ಬ್ರಾಹ್ಮಣರಿಂದ ಜನಿಸಿದ್ದಾರೆ.

ತಸ್ಮಾದ್ ಭರತವಂಶಸ್ಯ ಪುನಃ ಸಂತಾನವೃದ್ಧಯೇ ।
ಹೇತುಂ ವಕ್ಷ್ಯಾಮ್ಯಹಂ ಸಮ್ಯಕ್ ನಿರ್ದೋಷಂ ನಾತ್ರ ಸಂಶಯಃ ॥

ಆದ್ದರಿಂದ ಪುನಃ ಭರತವಂಶದ ಸಂತಾನಾಭಿವೃದ್ಧಿಗಾಗಿ ನಿರ್ದುಷ್ಟವಾದ ಮತ್ತು ಸರಿಯಾದ ಉಪಾಯವನ್ನು ಸೂಚಿಸುವೆನು. ಇದರಲ್ಲಿ ಸಂಶಯವಿಲ್ಲ.

ಬ್ರಾಹ್ಮಣೋ ಗುಣವಾನ್ ಕಶ್ಚಿದ್ ಧನೇನಾಪ್ಯುಪಮಂತ್ರ್ಯತಾಮ್ ।
ವಿಚಿತ್ರವೀರ್ಯಭಾರ್ಯಾಯಾಂ ಯಃ ಸಮುತ್ಪಾದಯೇತ್ ಪ್ರಜಾಃ ।
ಏತಚ್ಛ್ರುತ್ವಾ ತ್ವಮಪ್ಯತ್ರ ಮಾತಃ ಕುರು ಯಥೇಪ್ಸಿತಮ್ ॥೪೯॥

ವಿಚಿತ್ರವೀರ್ಯನ ಪತ್ನಿಯರಲ್ಲಿ ಪುತ್ರರನ್ನು ಉತ್ಪಾದಿಸುವ ಸಾಮರ್ಥ್ಯವುಳ್ಳ ಒಬ್ಬ ಗುಣವಂತನಾದ ಬ್ರಾಹ್ಮಣನನ್ನು, ಧನವನ್ನು ಕೊಟ್ಟಾದರೂ ಆಹ್ವಾನ ಮಾಡು. ಇದು ಉಪಾಯ. ತಾಯಿ, ಈ ಮಾತನ್ನು ಕೇಳಿ, ಈ ವಿಷಯದಲ್ಲಿ ನಿನಗೆ ಹೇಗೆ ಇಷ್ಟವೋ ಹಾಗೇ ಮಾಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಚತುರಧಿಕಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ದ್ವಿಪಂಚಾಶತ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಾನಾಲ್ಕನೆಯ ಅಧ್ಯಾಯ ಮುಗಿಯಿತು

★ ★ ★ ★

ನೂರೈದನೆಯ ಅಧ್ಯಾಯ

(ಕುಲವೃದ್ಧಿಗಾಗಿ ಭೀಷ್ಮ ಮತ್ತು ಸತ್ಯವತಿಯರ ಸಂವಾದ.)

ವೈಶಂಪಾಯನಃ

ಭೀಷ್ಮಸ್ಯ ವಚನಂ ಶ್ರುತ್ವಾ ಧರ್ಮಹೇತ್ವರ್ಥಸಂಯುತಮ್ ।
ಮಾತಾ ಸತ್ಯವತೀ ಭೀಷ್ಮಂ ಪುನರೇವಾಭ್ಯಭಾಷತ ॥೧॥

ಧರ್ಮಾರ್ಥಸಂಯುತವಾದ ಯುಕ್ತಿಯುತವಾದ ಭೀಷ್ಮರ ಮಾತುಗಳನ್ನು ಕೇಳಿ ತಾಯಿಯಾದ ಸತ್ಯವತಿಯು ಭೀಷ್ಮರನ್ನು ಕುರಿತು ಪುನಃ ಮಾತನಾಡಿದಳು.

ಔಚಥ್ಯಮಧಿಕೃತ್ಯೈತದಮಂಗಂ ಚ ಯದುದಾಹೃತಮ್ ।
ಪೌರಾಣಶ್ರುತಿರಸ್ಯೈಷಾ ಪ್ರಾಪ್ತಕಾಲಮಿದಂ ಕುರು ॥೨॥

ಔಚಥ್ಯರನ್ನು ಕುರಿತು ಮತ್ತು ಅಂಗನನ್ನು ಕುರಿತು ನೀನು ಹೇಳಿದ ಈ ಪುರಾಣ ಘಟನೆಯು ಈ ಸಂದರ್ಭಕ್ಕೆ ಬಹಳ ಉಚಿತವಾಗಿದೆ. ನೀನು ಅದರಂತೆ ಮಾಡು.

ತ್ವಂ ಹಿ ಪುತ್ರಃ ಕುಲಸ್ಯಾದ್ಯ ಜ್ಯೇಷ್ಠಃ ಶ್ರೇಷ್ಠಶ್ಚ ಭಾರತ ।
ಯಥಾ ಚ ತೇ ಪಿತುರ್ವಾಕ್ಯಂ ಮಮ ಕುರ್ಯಾಸ್ತಥಾऽನಘ ॥೩॥

ಅನಘನೇ ಮತ್ತು ಭಾರತನೇ ನೀನು ಈ ಕುಲದ ಹಿರಿಯನಾದ ಮತ್ತು ಶ್ರೇಷ್ಠನಾದ ಪುತ್ರ. ತಂದೆಯ ವಾಕ್ಯವನ್ನು ಹೇಗೆ ನಡೆಸುತ್ತಿದ್ದಿಯೋ ಹಾಗೇ ನನ್ನ ಮಾತನ್ನೂ ನಡೆಸು.

ಮಮ ಪುತ್ರಸ್ತವ ಭ್ರಾತಾ ಯವೀಯಾನ್ ಸ ಪ್ರಿಯಶ್ಚ ತೇ ।
ಬಾಲ ಏವ ಗತಃ ಸ್ವರ್ಗಂ ಭರತೋ ಭರತರ್ಷಭ ॥೪॥

ನನ್ನ ಪುತ್ರನಾದ ನಿನ್ನ ತಮ್ಮನು ನಿನಗೆ ಪ್ರಿಯನಾಗಿದ್ದವನು. ಭರತರ್ಷಭನೇ, ಭರತವಂಶದಲ್ಲಿ ಜನಿಸಿದ ಅವನು ಬಾಲ್ಯದಲ್ಲಿಯೇ ಸ್ವರ್ಗವನ್ನು ಸೇರಿದನು.

ಇಮೇ ಮಹಿಷ್ಯೌ ತಸ್ಯೇಹ ಕಾಶಿರಾಜಸುತೇ ಉಭೇ ।
ರೂಪಯೌವನಸಂಪನ್ನೇ ಪುತ್ರಕಾಮೇ ಚ ಭಾರತ ॥೫॥

ಅವನ ಈ ಇಬ್ಬರು ಮಹಿಷಿಯರು ಕಾಶೀರಾಜಕುಮಾರಿಯರು. ಭಾರತನೇ, ಅವರು ರೂಪಯೌವನಸಂಪನ್ನರಾಗಿಯೂ, ಪುತ್ರಾಕಾಂಕ್ಷಿಗಳಾಗಿಯೂ ಇದ್ದಾರೆ.

ಧರ್ಮಮೇತಂ ಪರಂ ಜ್ಞಾತ್ವಾ ಸಂತಾನಾಯ ಕುಲಸ್ಯ ಚ ।
ಆಭ್ಯಾಂ ಮಮ ನಿಯೋಗಾತ್ ತ್ವಂ ಧರ್ಮಂ ಚರಿತುಮರ್ಹಸಿ ॥೬॥

ಕುಲದ ದೃಷ್ಟಿಯಿಂದ ಮತ್ತು ಸಂತಾನದ ದೃಷ್ಟಿಯಿಂದ ಇದು ಶ್ರೇಷ್ಠವಾದ ಕರ್ಮವೆಂದು ತಿಳಿದು, ನನ್ನ ಆದೇಶದಂತೆ ಇವರಿಬ್ಬರ ಜೊತೆಯಲ್ಲಿ ನೀನು ಧರ್ಮವನ್ನು ಆಚರಿಸಬೇಕು.

ಭೀಷ್ಮಃ

ಅಸಂಶಯಂ ಪರೋ ಧರ್ಮಸ್ತ್ವಯಾ ಮಾತಃ ಪ್ರಕೀರ್ತಿತಃ ।
ತ್ವಮಪ್ಯೇತಾಂ ಪ್ರತಿಜ್ಞಾಂ ತು ವೇತ್ಥ ಯಾ ಪರಮಾ ಮಯಿ ॥೭॥

ತಾಯಿ ನೀನು ಹೇಳಿದುದು ಶ್ರೇಷ್ಠವಾದ ಧರ್ಮ ಎಂಬುದರಲ್ಲಿ ಸಂಶಯವಿಲ್ಲ. ಆದರೆ ನಾನು ಮಾಡಿದ ಪರಮ ಪ್ರತಿಜ್ಞೆಯನ್ನೂ ನೀನು ತಿಳಿದಿರುವಿ.

ಜಾನೀಷ್ವ ಯತ್ ತದಾ ವೃತ್ತಂ ಶುಲ್ಕಹೇತೋಸ್ತ ವಂತಿಕೇ ।
ಯತ್ ಸತ್ಯವತಿ ಸತ್ಯಂ ವೈ ಪುನರೇವ ಬ್ರವೀಮಿ ತೇ ॥೮॥

ನಿನ್ನ ವಿವಾಹದ ಸಂದರ್ಭದಲ್ಲಿ ಕನ್ಯಾಶುಲ್ಕದ ಕಾರಣಕ್ಕಾಗಿ ನಿನ್ನ ಸಮೀಪದಲ್ಲಿ ಏನು ನಡೆಯಿತು ಎಂಬುದನ್ನು ಸ್ಮರಿಸಿಕೋ. ನನ್ನ ಸತ್ಯಪ್ರತಿಜ್ಞೆಯನ್ನು ಪುನಃ ನಿನ್ನೆದುರಿಗೆ ಉಚ್ಚರಿಸುತ್ತಿದ್ದೇನೆ. ಅದನ್ನು ಕೇಳು.

ತನ್ನ ಜಾತ್ವನ್ಯಥಾ ಕುರ್ಯಾಂ ಲೋಕಾನಾಮಪಿ ಸಂಕ್ಷಯೇ ।
ಪರಿತ್ಯಜೇಯಂ ತ್ರೈಲೋಕ್ಯಂ ರಾಜ್ಯಂ ದೇವೇಷು ವಾ ಪುನಃ ॥೯॥

ಯದ್ವಾಽಭ್ಯಧಿಕಮೇತಾಭ್ಯಾಂ ನ ಚ ಸತ್ಯಂ ಪರಿತ್ಯಜೇ ।
ತ್ಯಜೇಚ್ಚ ಪೃಥಿವೀ ಗಂಧಮಾಪಶ್ಚ ರಸಮುತ್ಸೃಜೇತ್ ॥೧೦॥

ಜ್ಯೋತಿಶ್ಚ ಪರಮಂ ರೂಪಂ ವಾಯುಃ ಸ್ಪರ್ಶಗುಣಂ ತ್ಯಜೇತ್ ।
ತ್ಯಜೇಚ್ಚ ಘೋಷಮಾಕಾಶಃ ಸೋಮಃ ಶೀತತ್ವಮುತ್ಸೃಜೇತ್ ॥೧೧॥

ಪ್ರತಾಪಮುತ್ಸೃಜೇದರ್ಕೋ ಧೂಮಕೇತುರಥೋಷ್ಣತಾಮ್ ।
ವೃತ್ರಹಾ ವಿಕ್ರಮಂ ಜಹ್ಯಾದ್ ಧರ್ಮಂ ಜಹ್ಯಾತ್ ತು ಧರ್ಮರಾಟ್ ॥

ಅಮರತ್ವಸ್ಯ ವಾ ಹೇತೋಸ್ತ್ರೈಲೋಕ್ಯಸದನಸ್ಯ ವಾ ।
ಉತ್ಸೃಜೇಯಮಹಂ ಪ್ರಾಣಾನ್ ನತು ಸತ್ಯಂ ಕಥಂಚನ ॥೧೩॥

ಲೋಕಗಳು ಕ್ಷಯವಾದರೂ ಅದನ್ನು ನಾನು ವ್ಯತ್ಯಾಸ ಮಾಡುವುದಿಲ್ಲ. ನಾನು ತ್ರೈಲೋಕ್ಯಾಧಿಪತ್ಯವನ್ನಾಗಲೀ, ದೇವರಾಜ್ಯಾಧಿಪತ್ಯವನ್ನಾಗಲೀ ಅಥವಾ ಅದಕ್ಕಿಂತ ಮಿಗಿಲಾದ ಯಾವುದನ್ನಾದರೂ ಬಿಟ್ಟೇನು. ಆದರೆ ಸತ್ಯವನ್ನು ಮಾತ್ರ ಬಿಡುವುದಿಲ್ಲ. ಭೂಮಿಯು ಗಂಧವನ್ನು ಬಿಟ್ಟೀತು. ಜಲವು ರಸವನ್ನು ಬಿಟ್ಟೀತು. ಅಗ್ನಿಯು ತನ್ನ ಶ್ರೇಷ್ಠವಾದ ರೂಪವನ್ನು, ವಾಯುವು ತನ್ನ ಸ್ಪರ್ಶಗುಣವನ್ನು ಬಿಡಬಹುದು. ಆಕಾಶವು ಶಬ್ದವನ್ನು ತ್ಯಜಿಸಬಹುದು. ಚಂದ್ರನು ಶೀತಕಿರಣಗಳನ್ನು ತ್ಯಜಿಸಬಹುದು. ಸೂರ್ಯನು ತನ್ನ ಶಾಖವನ್ನು ತೊರೆಯಬಹುದು. ಅಗ್ನಿಯು ತನ್ನ ಉಷ್ಣತೆಯನ್ನು ತೊರೆಯಬಹುದು.

ಇಂದ್ರನು ತನ್ನ ವಿಕ್ರಮವನ್ನೇ ತೊರೆಯಬಹುದು. ಯಮನು ಧರ್ಮವನ್ನೇ ತೊರೆಯಬಹುದು. ದೇವತ್ವದ ಸಲುವಾಗಿಯಾಗಲೀ, ಅಥವಾ ತ್ರೈಲೋಕ್ಯವಾಸದ ಸಲುವಾಗಿಯಾಗಲೀ, ನಾನು ಪ್ರಾಣವನ್ನು ಬೇಕಾದರೂ ಬಿಟ್ಟೇನು. ಸತ್ಯವನ್ನು ಎಂದೂ ಬಿಡಲಾರೆ.

ಸತ್ಯವತೀ

ಜಾನಾಮಿ ತ್ವಯಿ ಧರ್ಮಜ್ಞ ಸತ್ಯಂ ಸತ್ಯಪರಾಕ್ರಮ ।
ಇಚ್ಛೇಸ್ತ ತ್ವಮಿಹ ಲೋಕಾಂಸ್ತ್ರೀನ್ ಸೃಜೇರನ್ಯಾನರಿಂದಮ ॥೧೪॥

ಧರ್ಮಜ್ಞನೇ, ಸತ್ಯಪರಾಕ್ರಮನೇ, ನಿನ್ನ ಸತ್ಯವನ್ನು ನಾನು ತಿಳಿದಿದ್ದೇನೆ. ಅರಿಂದಮನೇ, ಮನಸ್ಸು ಮಾಡಿದರೆ ನಿನಗೆ ಬೇರೆ ಮೂರು ಲೋಕಗಳನ್ನೂ ಸೃಷ್ಟಿಸುವ ಸಾಮರ್ಥ್ಯವಿದೆ.

ಯಥಾ ತು ವಃ ಕುಲಂ ಚೈವ ಧರ್ಮಂ ಚ ನ ಪರಾಭವೇತ್ ।
ಸುಹೃದಶ್ಚ ಪ್ರಹೃಷ್ಯೇಯುಸ್ತಥಾ ತ್ವಂ ಕರ್ತುಮರ್ಹಸಿ ॥೧೫॥

ಆದರೆ ನಿನ್ನ ಕುಲಕ್ಕೂ, ನಿನ್ನ ಧರ್ಮಕ್ಕೂ ಪರಾಭವವಾಗದಂತೆ ನಮ್ಮ ಹಿತೈಷಿಗಳೆಲ್ಲರೂ ಸಂತೋಷ ಪಡುವಂತೆ ಏನು ಮಾಡಲು ಸಾಧ್ಯವೋ ಅದನ್ನು ಮಾಡು.

ಭೀಷ್ಮಃ

ತ್ವಮೇವ ಕುಲವೃದ್ಧಾಽಸಿ ಗೌರವಂ ಚ ಪರಂ ತ್ವಯಿ ।
ಸೋಪಾಯಂ ಕುಲಸಂತಾನೇ ವಕ್ತುಮರ್ಹಸಿ ನಃ ಪರಮ್ ॥೧೬॥

ನೀನೇ ನಮ್ಮ ಕುಲದಲ್ಲಿ ವೃದ್ಧಳಾದವಳು. ನಮ್ಮ ಕುಲದ ಭಾರವು ನಿನ್ನ ಮೇಲೆಯೇ ಇದೆ. ಆದ್ದರಿಂದ ಸಂತಾನವನ್ನು ಪಡೆಯುವ ಶ್ರೇಷ್ಠವಾದ ಉಪಾಯವನ್ನು ನೀನೇ ಸೂಚಿಸಬೇಕು.

ಸ್ತ್ರಿಯೋ ಹಿ ಪರಮಂ ಗುಹ್ಯಂ ಧಾರಯಂತಿ ಕುಲೇ ಕುಲೇ ।
ಪುರುಷಂ ಚಾಪಿ ಮಾಯಾಭಿರ್ಬಿಭ್ರತ್ಯೋಭಿರುಪಗೃಹ್ಣತೇ ॥೧೭॥

ಪ್ರತಿಯೊಂದು ಕುಲದಲ್ಲಿಯೂ ಸ್ತ್ರೀಯರು ಅನೇಕ ಪರಮರಹಸ್ಯಗಳನ್ನು ಭರಿಸಿರುತ್ತಾರೆ. ಪುರುಷರ ಜೊತೆಯಲ್ಲಿಯೂ ಸಹ ಅನೇಕ ಮಾಯಗಳಿಂದ ವ್ಯವಹರಿಸುತ್ತಾರೆ.

ಸಾ ಸತ್ಯವತಿ ಸಂಪಶ್ಯ ಕರ್ಮ ಸತ್ಯಪರಾಯಣೇ ।
ಯಥಾ ನ ಜಹ್ಯಾತ್ ಸತ್ಯಂ ಚ ನ ಸೀದೇಚ್ಚ ಕುಲಂ ಹಿ ನಃ ॥೧೮॥

ಆದ್ದರಿಂದ ಸತ್ಯಪರಾಯಣಳಾದ ಸತ್ಯವತಿಯೇ, ನನ್ನ ಸತ್ಯವಚನವು ಕೆಡದಂತೆ, ನಮ್ಮ ಕುಲವೂ ಹಾಳಾಗದಂತೆ, ಏನು ಮಾಡಬೇಕೆಂದು ನೀನೇ ವಿಚಾರ ಮಾಡಿ ನೋಡು.

ವೈಶಂಪಾಯನಃ

ತತಃ ಸತ್ಯವತೀ ಭೀಷ್ಮಂ ವಾಚಾ ವೈ ಸಜ್ಜಮಾನಯಾ ।
ಪ್ರವೇಪಮಾನಾ ಸವ್ರೀಡಮಿದಂ ವಚನಮಬ್ರವೀತ್ ॥೧೯॥

ಆಗ ಸತ್ಯವತಿಯು ನಡುಗುತ್ತಾ ನಾಚಿಕೆಯಿಂದ ಉಡುಗಿ ಹೋಗುತ್ತಿರುವ ತನ್ನ ಮಾತಿನಿಂದ ಭೀಷ್ಮನನ್ನು ಕುರಿತು ಹೀಗೆ ಹೇಳಿದಳು.

ಸತ್ಯಮೇತನ್ಮಹಾಬಾಹೋ ಯದಾತ್ಥ ಪ್ರಮದಾಂ ಪ್ರತಿ ।
ವಿಶ್ವಾಸಂ ತೇ ಪ್ರವಕ್ಷ್ಯಾಮಿ ಸಂತಾನಾಯ ಕುಲಸ್ಯ ಸಃ ॥೨೦॥

ಎಲೈ ಮಹಾಬಾಹುವೇ, ಸ್ತ್ರೀಯರ ವಿಷಯದಲ್ಲಿ ನೀನು ಏನು ಹೇಳಿದೆಯೋ, ಅದು ಸತ್ಯವಾದುದು. ನಿನಗೆ ನಾನು ನಮ್ಮ ಕುಲಕ್ಕೆ, ಮತ್ತು ಸಂತಾನಕ್ಕೆ ಕ್ಷೇಮದೊರಕುವಂತಹ ಒಂದು ನಂಬಿಕೆಯ (ವಿಶ್ವಾರ್ಹವಾದ) ವಿಷಯವನ್ನು ಹೇಳುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಪಂಚಾಧಿಕಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ತ್ರಿಪಂಚಾಶತ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರೈದನೆಯ ಅಧ್ಯಾಯ ಮುಗಿಯಿತು.

★★★★★

ನೂರ ಆರನೆಯ ಅಧ್ಯಾಯ

(ಸತ್ಯವತಿಯಿಂದ ಭೀಷ್ಮರನ್ನು ಕುರಿತು ವ್ಯಾಸರ ಜನ್ಮಕಥನ. ತಾಯಿಯಿಂದ ಸ್ಮೃತರಾಗಿ ವ್ಯಾಸರ ಆಗಮನ.)

ವೈಶಂಪಾಯನಃ

ಏವಮುಕ್ತ್ವಾ ತದಾ ಭೀಷ್ಮಂ ತನ್ಮಾತಾ ಪ್ರತ್ಯಭಾಷತ ।

ಸತ್ಯವತೀ

ರೋಚತೇ ಮೇ ವಚಸ್ತುಭ್ಯಂ ಮಮಾಪಿ ವಚನಂ ಶೃಣು ॥೧॥

ವಿಶ್ವಾಸಾತ್ ತೇ ಪ್ರವಕ್ಷ್ಯಾಮಿ ಸಂತಾನಾಯ ಕುರುಷ್ವ ನಃ ।
ನ ಚ ಶಕ್ಯಮನಾಖ್ಯಾತುಮಾಪದ್ಧೀಯಂ ತಥಾವಿಧಾ ॥೨॥

ಸತ್ಯವತಿಯು ಹೀಗೆ ಹೇಳಿ ಭೀಷ್ಮರನ್ನು ಕುರಿತು ಮಾತನಾಡಿದಳು.

ನಿನ್ನ ಮಾತು ನನಗೆ ಹಿಡಿಸುತ್ತದೆ. ನನ್ನ ಮಾತನ್ನು ಕೇಳು. ನಮ್ಮ ವಂಶದ ಸಂತಾನದ ಉದ್ದೇಶದಿಂದ ನಿನಗೆ ವಿಶ್ವಾಸದಿಂದ ಹೇಳುವ ಈ ಮಾತುಗಳನ್ನು ನಡೆಸಿಕೊಡು. ಈಗ ನಮಗೆ ಈ ವಿಷಯವನ್ನು ನಿನಗೆ ತಿಳಿಸದಿರಲು ಸಾಧ್ಯವಾಗದಂತಹ ವಿಪತ್ತು ಒದಗಿದೆ.

ತ್ವಮೇವ ನಃ ಕುಲೇ ಧರ್ಮಸ್ತ್ವಂ ಸತ್ಯಂ ತ್ವಂ ಪರಾ ಗತಿಃ ।
ಯತ್ ತ್ವಂ ವಕ್ಷ್ಯಸಿ ತತ್ ಕಾರ್ಯಮಸ್ಮಾಭಿರಿತಿ ಮೇ ಮತಿಃ ॥೩॥

ನಮ್ಮ ಕುಲದಲ್ಲಿ ನೀನೇ ಧರ್ಮ ಮತ್ತು ನೀನೇ ಸತ್ಯ. ನೀನೇ ನಮ್ಮ ಕುಲಕ್ಕೆ ದೊಡ್ಡ ಆಶ್ರಯ. ನೀನು ನಮಗೆ ಏನು ಹೇಳುವೆನೋ ಅದರಂತೆ ನಾವು ನಡೆದುಕೊಳ್ಳಬೇಕೆಂದು ನನ್ನ ಅಭಿಪ್ರಾಯ.

ತಸ್ಮಾನ್ನಿಶಮ್ಯ ವಾಕ್ಯಂ ಮೇ ಕುರುಷ್ವ ಯದನಂತರಮ್ ।
ಶೃಣು ಭೀಷ್ಮ ವಚೋ ಮಹ್ಯಂ ಧರ್ಮಾರ್ಥಸಹಿತಂ ಹಿತಮ್ ।
ನಚ ವಿಸ್ರಂಭಕಥಿತಂ ಭವಾನ್ ಸೂಚಿತುಮರ್ಹತಿ ॥೪॥

ಪ್ರತಿಯೊಂದು ಕುಲದಲ್ಲಿಯೂ ಸ್ತ್ರೀಯರು ಅನೇಕ ಪರಮರಹಸ್ಯಗಳನ್ನು ಭರಿಸಿರುತ್ತಾರೆ. ಪುರುಷರ ಜೊತೆಯಲ್ಲಿಯೂ ಸಹ ಅನೇಕ ಮಾಯಗಳಿಂದ ವ್ಯವಹರಿಸುತ್ತಾರೆ.

ಸಾ ಸತ್ಯವತಿ ಸಂಪಶ್ಯ ಕರ್ಮ ಸತ್ಯಪರಾಯಣೇ ।
ಯಥಾ ನ ಜಹ್ಯಾತ್ ಸತ್ಯಂ ಚ ನ ಸೀದೇಚ್ಚ ಕುಲಂ ಹಿ ನಃ ॥೧೮॥

ಆದ್ದರಿಂದ ಸತ್ಯಪರಾಯಣಳಾದ ಸತ್ಯವತಿಯೇ, ನನ್ನ ಸತ್ಯವಚನವು ಕೆಡದಂತೆ, ನಮ್ಮ ಕುಲವೂ ಹಾಳಾಗದಂತೆ, ಏನು ಮಾಡಬೇಕೆಂದು ನೀನೇ ವಿಚಾರ ಮಾಡಿ ನೋಡು.

ವೈಶಂಪಾಯನಃ

ತತಃ ಸತ್ಯವತೀ ಭೀಷ್ಮಂ ವಾಚಾ ವೈ ಸಜ್ಜಮಾನಯಾ ।
ಪ್ರವೇಪಮಾನಾ ಸವ್ರೀಡಮಿದಂ ವಚನಮಬ್ರವೀತ್ ॥೧೯॥

ಆಗ ಸತ್ಯವತಿಯು ನಡುಗುತ್ತಾ ನಾಚಿಕೆಯಿಂದ ಉಡುಗಿ ಹೋಗುತ್ತಿರುವ ತನ್ನ ಮಾತಿನಿಂದ ಭೀಷ್ಮನನ್ನು ಕುರಿತು ಹೀಗೆ ಹೇಳಿದಳು.

ಸತ್ಯಮೇತನ್ಮಹಾಬಾಹೋ ಯದಾತ್ಥ ಪ್ರಮದಾಂ ಪ್ರತಿ ।
ವಿಶ್ವಾಸಂ ತೇ ಪ್ರವಕ್ಷ್ಯಾಮಿ ಸಂತಾನಾಯ ಕುಲಸ್ಯ ಸಃ ॥೨೦॥

ಎಲೈ ಮಹಾಬಾಹುವೇ, ಸ್ತ್ರೀಯರ ವಿಷಯದಲ್ಲಿ ನೀನು ಏನು ಹೇಳಿದೆಯೋ, ಅದು ಸತ್ಯವಾದುದು. ನಿನಗೆ ನಾನು ನಮ್ಮ ಕುಲಕ್ಕೆ, ಮತ್ತು ಸಂತಾನಕ್ಕೆ ಕ್ಷೇಮದೊರಕುವಂತಹ ಒಂದು ನಂಬಿಕೆಯ (ವಿಶ್ವಾರ್ಹವಾದ) ವಿಷಯವನ್ನು ಹೇಳುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಪಂಚಾಧಿಕಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ತ್ರಿಪಂಚಾಶತ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರೈದನೆಯ ಅಧ್ಯಾಯ ಮುಗಿಯಿತು.

★★★★★

ನೂರ ಆರನೆಯ ಅಧ್ಯಾಯ

(ಸತ್ಯವತಿಯಿಂದ ಭೀಷ್ಮರನ್ನು ಕುರಿತು ವ್ಯಾಸರ ಜನ್ಮಕಥನ. ತಾಯಿಯಿಂದ ಸ್ಮೃತರಾಗಿ ವ್ಯಾಸರ ಆಗಮನ.)

ವೈಶಂಪಾಯನಃ

ಏವಮುಕ್ತ್ವಾ ತದಾ ಭೀಷ್ಮಂ ತನ್ಮಾತಾ ಪ್ರತ್ಯಭಾಷತ ।

ಸತ್ಯವತೀ

ರೋಚತೇ ಮೇ ವಚಸ್ತುಭ್ಯಂ ಮಮಾಪಿ ವಚನಂ ಶೃಣು ॥೧॥

ವಿಶ್ವಾಸಾತ್ ತೇ ಪ್ರವಕ್ಷ್ಯಾಮಿ ಸಂತಾನಾಯ ಕುರುಷ್ವ ನಃ ।
ನ ಚ ಶಕ್ಯಮನಾಖ್ಯಾತುಮಾಪದ್ದೀಯಂ ತಥಾವಿಧಾ ॥೨॥

ಸತ್ಯವತಿಯು ಹೀಗೆ ಹೇಳಿ ಭೀಷ್ಮರನ್ನು ಕುರಿತು ಮಾತನಾಡಿದಳು.

ನಿನ್ನ ಮಾತು ನನಗೆ ಹಿಡಿಸುತ್ತದೆ. ನನ್ನ ಮಾತನ್ನು ಕೇಳು. ನಮ್ಮ ವಂಶದ ಸಂತಾನದ ಉದ್ದೇಶದಿಂದ ನಿನಗೆ ವಿಶ್ವಾಸದಿಂದ ಹೇಳುವ ಈ ಮಾತುಗಳನ್ನು ನಡೆಸಿಕೊಡು. ಈಗ ನಮಗೆ ಈ ವಿಷಯವನ್ನು ನಿನಗೆ ತಿಳಿಸದಿರಲು ಸಾಧ್ಯವಾಗದಂತಹ ವಿಪತ್ತು ಒದಗಿದೆ.

ತ್ವಮೇವ ನಃ ಕುಲೇ ಧರ್ಮಸ್ತ್ವಂ ಸತ್ಯಂ ತ್ವಂ ಪರಾ ಗತಿಃ ।
ಯತ್ ತ್ವಂ ವಕ್ಷ್ಯಸಿ ತತ್ ಕಾರ್ಯಮಸ್ಮಾಭಿರಿತಿ ಮೇ ಮತಿಃ ॥೩॥

ನಮ್ಮ ಕುಲದಲ್ಲಿ ನೀನೇ ಧರ್ಮ ಮತ್ತು ನೀನೇ ಸತ್ಯ. ನೀನೇ ನಮ್ಮ ಕುಲಕ್ಕೆ ದೊಡ್ಡ ಆಶ್ರಯ. ನೀನು ನಮಗೆ ಏನು ಹೇಳುವೆನೋ ಅದರಂತೆ ನಾವು ನಡೆದುಕೊಳ್ಳಬೇಕೆಂದು ನನ್ನ ಅಭಿಪ್ರಾಯ.

ತಸ್ಮಾನ್ನಿಶಮ್ಯ ವಾಕ್ಯಂ ಮೇ ಕುರುಷ್ವ ಯದನಂತರಮ್ ।
ಶೃಣು ಭೀಷ್ಮ ವಚೋ ಮಹ್ಯಂ ಧರ್ಮಾರ್ಥಸಹಿತಂ ಹಿತಮ್ ।
ನಚ ವಿಸ್ರಂಭಕಥಿತಂ ಭವಾನ್ ಸೂಚಿತುಮರ್ಹತಿ ॥೪॥

ಆದ್ದರಿಂದ ನನ್ನ ಮಾತುಗಳನ್ನು ಕೇಳಿ ಅನಂತರ ಅವಶ್ಯವಾದುದನ್ನು ಮಾಡು. ಭೀಷ್ಮನೇ, ನನ್ನ ಮಾತು ಧರ್ಮಾರ್ಥಸಹಿತವಾಗಿಯೂ ಹಿತವಾಗಿಯೂ ಇದೆ. ಅದನ್ನು ಕೇಳು. ವಿಶ್ವಾಸದಿಂದ ಹೇಳುವ ಈ ವಿಷಯವನ್ನು ನೀನು ದೋಷವೆಂದು ಪರಿಗಣಿಸಬೇಡ.

ಯಸ್ತು ರಾಜಾ ವಸುರ್ನಾಮ ಶ್ರುತಸ್ತೇ ಭರತರ್ಷಭ ।
ತಸ್ಯ ಶುಕ್ಲಾದಹಂ ಮತ್ಸ್ಯಾ ಧೃತಾ ಕುಕ್ಷೌ ಪುರಾ ಕಿಲ ॥೫॥

ಎಲೈ ಭರತ ಶ್ರೇಷ್ಠನೇ, ನಾನು ವಸು ಎಂಬ ವಿಖ್ಯಾತನಾದ ರಾಜನ ವೀರ್ಯದಿಂದ ಹುಟ್ಟಿದ ಅವನ ಮಗಳು. ನನ್ನನ್ನು ಒಂದು ಮತ್ಸ್ಯವು ಹಿಂದೆ ಗರ್ಭದಲ್ಲಿ ಧರಿಸಿತು.

ಭ್ರಾತರಂ ಮೇ ಜಲಾದ್ ಹೃತ್ವಾ ದಾಶಃ ಪರಮಧರ್ಮವಿತ್ ।
ಮಾಂ ತು ಸ್ವಗೃಹಮಾನೀಯ ದುಹಿತೃತ್ವೇ ಹ್ಯಕಲ್ಪಯತ್ ।
ಧರ್ಮಯುಕ್ತಃ ಸ ಧರ್ಮೇಣ ಪಿತಾ ಚಾಸೀತ್ ತತೋ ಮಮ ॥೬॥

ಆ ಮತ್ಸ್ಯವನ್ನು ದಡಕ್ಕೆ ಎಳೆದ ಪರಮ ಧರ್ಮಜ್ಞನಾದ ದಾಶರಾಜನು ನನ್ನ ತಮ್ಮನನ್ನು ರಾಜನಿಗೆ ಕೊಟ್ಟು ನನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ತನ್ನ ಮಗಳೆಂದು ಭಾವಿಸಿದನು. ಧರ್ಮಯುಕ್ತನಾದ ಅವನು ಆ ಧರ್ಮದ ಕಾರಣದಿಂದ ನನಗೆ ತಂದೆಯಾದನು.

ಸಾ ಕದಾಚಿದಹಂ ತತ್ರ ಗತಾಽಸ್ಮಿ ಯಮುನಾತಟಮ್ ।
ಅಥ ಧರ್ಮಭೃತಾಂ ಶ್ರೇಷ್ಠಃ ಪರಮರ್ಷಿಃ ಪರಾಶರಃ ।
ಆಜಗಾಮ ತರೀಂ ತಾತ ತರಿಷ್ಯನ್ ಯಮುನಾಂ ನದೀಮ್ ॥೭॥

ಅಂತಹ ನಾನು ಒಮ್ಮೆ ಯಮುನಾನದಿಯ ದಡಕ್ಕೆ ಹೋದೆ. ಧರ್ಮಿಷ್ಠರಲ್ಲಿ ಶ್ರೇಷ್ಠರಾದ ಮಹರ್ಷಿಗಳಾದ ಪರಾಶರರು ಯಮುನಾ ನದಿಯನ್ನು ದಾಟುವ ಇಚ್ಛೆಯುಳ್ಳವರಾಗಿ ನಾನು ನಡೆಸುತ್ತಿದ್ದ ನಾವೆಯ ಬಳಿಗೆ ಬಂದರು.

ಸ ತಾರ್ಯಮಾಣೋ ಯಮುನಾಂ ಮಾಮುಪೇತ್ಯಾಬ್ರವೀನ್ಮುನಿಃ।
ಸಾಂತ್ವಪೂರ್ವಂ ಮಹಾಭಾಗಃ ಕಾಮಾರ್ತೋ ಮಧುರಂ ವಚಃ ।
ಉಕ್ತ್ವಾ ಜನ್ಮ ಕುಲೇ ಮಹ್ಯಂ ನಾಸಿ ದಾಶಸುತಾ ಇತಿ ॥೮॥

ನಾನು ಯಮುನೆಯನ್ನು ದಾಟಿಸುತ್ತಿದ್ದಂತೆ ಆ ಋಷಿಗಳು ನನ್ನ ಸಮೀಪಕ್ಕೆ ಬಂದು ಸಮಾಧಾನಪೂರ್ವಕವಾಗಿ ನನ್ನನ್ನು ಮಾತನಾಡಿಸಿ ಕಾಮಾರ್ತರಾಗಿ ಮಧುರವಚನಗಳನ್ನು ಆಡಿದರು. ಉತ್ತಮ ಕುಲದಲ್ಲಿ ನನ್ನ ಜನ್ಮವನ್ನು ತಿಳಿಸಿ ನಾನು ದಾಶನ ಮಗಳಲ್ಲವೆಂದು ಹೇಳಿದರು.

ತಮಹಂ ಶಾಪಭೀತಾ ಚ ಪಿತುರ್ಭೀತಾ ಚ ಭಾರತ ।
ವರೈರಸುಲಭೈಶ್ಚಾಹಂ ಪ್ರತ್ಯಾಖ್ಯಾತುಂ ಪ್ರಚಕ್ರಮೇ ॥೯॥

ಎಲೈ ಭಾರತನೇ, ನಾನು ಅವರ ಶಾಪಕ್ಕೂ ಹೆದರಿ ಮತ್ತು ತಂದೆಗೂ ಹೆದರಿ ಅವರನ್ನು ನಿರಾಕರಿಸುವ ಸಲುವಾಗಿ ದುರ್ಲಭವಾದ ವರಗಳನ್ನು ಕೇಳಲು ಪ್ರಾರಂಭಿಸಿದೆ.

ಪ್ರೇಕ್ಷ್ಯತಾಂಸ್ತು ಮಹಾಭಾಗಾನ್ ಪರೇ ಪಾರೇ ಋಷೀನ್ ಸ್ಥಿತಾನ್।
ಯಮುನಾತೀರವಿನ್ಯಸ್ತಾನ್ ಪ್ರದೀಪ್ತಾನಿವ ಪಾವಕಾನ್ ॥೧೦॥

ಪುರಸ್ತಾದರುಣಶ್ಚೈವ ತರುಣಃ ಸಂಪ್ರಕಾಶತೇ ।
ಯೇನೈಷಾ ತಾಮ್ರವಸ್ತ್ರೇವ ದ್ಯೌಃ ಕೃತಾ ಪ್ರತಿಜೃಂಭಿತಾ ॥೧೧॥

ನಾನು ಯಮುನೆಯ ಆಚೆಯ ದಡದಲ್ಲಿರುವ ಜ್ವಲಿಸುವ ಅಗ್ನಿಯಂತೆ ಪ್ರಕಾಶಿಸುತ್ತಿರುವ ಮಹಾನುಭಾವರಾದ ಋಷಿಗಳನ್ನು ಅವರಿಗೆ ತೋರಿಸಿದೆ. ಮುಂಭಾಗದಲ್ಲಿ ಆಗ ತಾನೇ ಉದಯಿಸಿದ ಅರುಣನು ಆಕಾಶವನ್ನೆಲ್ಲಾ ಕೆಂಪುವಸ್ತ್ರಗಳನ್ನುಟ್ಟ ಸ್ತ್ರೀಯರಂತೆ ಮಾಡಿ ಬೆಳಗುತ್ತಿದ್ದಾನೆ ಎಂದೂ ತೋರಿಸಿದೆ.

ಉಕ್ತಮಾತ್ರೇ ಮಯಾ ತತ್ರ ನೀಹಾರಮಸೃಜತ್ ಪ್ರಭುಃ ।
ಪರಾಶರಃ ಸತ್ಯಧೃತಿರ್ದ್ವೀಪಂ ಚ ಯಮುನಾಂಭಸಿ ॥೧೨॥

ನಾನು ಹೀಗೆ ಹೇಳಿದ ತಕ್ಷಣವೇ ಸಮರ್ಥರಾದ ಸತ್ಯಧೃತಿಗಳಾದ ಆ ಪರಾಶರರು ಆ ಯಮುನೆಯ ನೀರಿನಲ್ಲಿ ಒಂದು ದ್ವೀಪವನ್ನು ಸೃಷ್ಟಿಸಿ ಮಂಜನ್ನೂ ಸೃಷ್ಟಿಸಿದರು.

ಅಭಿಭೂಯ ಸ ಮಾಂ ಬಾಲಾಂ ತೇಜಸಾ ವಶಮಾನಯತ್ ।
ತಮಸಾ ಲೋಕಮಾವೃತ್ಯ ನೌಗತಾಮೇವ ಭಾರತ ॥೧೩॥

ಎಲೈ ಭಾರತನೇ, ನಾನು ನಾವೆಯಲ್ಲಿರುವಾಗಲೇ ಅವರು ಲೋಕವನ್ನು ಆವರಿಸುವ ಕತ್ತಲೆಯಂತಿರುವ ಮಂಜನ್ನು ಸೃಷ್ಟಿಸಿ ತಮ್ಮ ತೇಜಸ್ಸಿನಿಂದ ಬಾಲೆಯಾದ ನನ್ನನ್ನು ವಶಪಡಿಸಿಕೊಂಡರು.

ಮತ್ಸ್ಯಗಂಧೋ ಮಹಾನಾಸೀತ್ ಪುರಾ ಮಮ ಜುಗುಪ್ಸಿತಃ ।
ತಮಪಾಸ್ಯ ಶುಭಂ ಗಂಧಮಿಮಂ ಪ್ರಾದಾತ್ಸ ಮೇ ಮುನಿಃ ।
ಕನ್ಯಾತ್ವಂ ಚ ದದೌ ಪ್ರೀತಃ ಪುನಃ ವಿದ್ವಾಂಸ್ತಪೋಧನಃ ॥೧೪॥

ನನಗೆ ಮೊದಲು ಅಸಹ್ಯವಾದ ಮತ್ಸ್ಯಗಂಧವಿದ್ದಿತು. ಆ ಋಷಿಗಳು ಅದನ್ನು ಪರಿಹರಿಸಿ ಈ ಶುಭವಾದ ಗಂಧವನ್ನು ನನಗೆ ಕೊಟ್ಟರು. ತಪೋಧನರೂ ವಿದ್ವಾಂಸರೂ ಆದ ಅವರು ಪ್ರೀತರಾಗಿ ನನಗೆ ಪುನಃ ಕನ್ಯಾತ್ವವನ್ನು ಕೊಟ್ಟರು.

ತತಃ ಪಿತಾ ವಸುಶ್ಚೈವ ಪಿತರಶ್ಚ ತಪೋಧನಾಃ ।
ವಸಿಷ್ಠೇನ ಸಮಾನೀತಾ ಯಾಜ್ಞವಲ್ಕ್ಯಾದಯೋ ದ್ವಿಜಾಃ ।
ಕೃತ್ವಾ ವಿವಾಹಂ ಮೇ ಸರ್ವೇ ಪ್ರತಿಜಗ್ಮುರ್ಯಥಾಗತಮ್ ॥೧೫॥

ಅದಕ್ಕಿಂತ ಮೊದಲು ನನ್ನ ತಂದೆಯಾದ ವಸುವೂ, ತಪೋಧನರಾದ ಪಿತೃಗಳೂ, ಯಾಜ್ಞವಲ್ಕ್ಯ ಮೊದಲಾದ ಬ್ರಾಹ್ಮಣರೂ, ವಸಿಷ್ಠರಿಂದ ಕರೆಯಲ್ಪಟ್ಟರು. ನನ್ನ ವಿವಾಹವನ್ನು ನೆರವೇರಿಸಿ ಅವರೆಲ್ಲರೂ ಬಂದ ದಾರಿಯಲ್ಲಿ ಹಿಂದೆ ಹೋದರು.

ತಸ್ಯ ವೀರ್ಯಮಹಂ ದೃಷ್ಟ್ವಾ ತಥಾಯುಕ್ತಂ ಮಹಾತ್ಮನಃ ।
ವಿಸ್ಮಿತಾ ವ್ಯಥಿತಾ ಚೈವ ಪ್ರಾದಾಮಾತ್ಮಾನಮೇವ ಚ ॥೧೬॥

ಆ ಮಹಾತ್ಮರ ಅಂತಹ ಸಾಮರ್ಥ್ಯವನ್ನು ನೋಡಿದ ನಾನು ವಿಸ್ಮಿತಳಾಗಿ ಮತ್ತು ವ್ಯಥೆಯಿಂದ ಕೂಡಿ ನನ್ನನ್ನು ನಾನೇ ಅವರಿಗೆ ಕೊಟ್ಟುಕೊಂಡೆ.

ತತಸ್ತದಾ ಮಹಾತ್ಮಾ ಸ ಕನ್ಯಾಯಾಂ ಮಯಿ ಭಾರತ ।
ಪ್ರಹೃಷ್ಟೋಽಜನಯತ್ ಪುತ್ರಂ ದ್ವೀಪ ಏವ ಪರಾಶರಃ ॥೧೭॥

ಭಾರತನೇ, ಆಗ ಆ ಮಹಾತ್ಮರಾದ ಪರಾಶರರು ಸಂತುಷ್ಟಗೊಂಡು ಕನ್ಯೆಯಾದ ನನ್ನಲ್ಲಿ ಆ ದ್ವೀಪದಲ್ಲಿಯೇ ಒಬ್ಬ ಪುತ್ರನನ್ನು ಪಡೆದರು.

ತತೋ ಮಾಮಾಹ ಸ ಮುನಿರ್ಗರ್ಭ ಉತ್ಸ್ರಜ್ಯತಾಮಯಮ್ ।
ದ್ವೀಪೇಽಸ್ಯಾ ಏವ ಸರಿತಃ ಕನ್ಯೈವ ತ್ವಂ ಭವಿಷ್ಯಸಿ ॥೧೮॥

ಆಗ ಋಷಿಗಳು ನನ್ನನ್ನು ಕುರಿತು ಈ ಯಮುನಾ ನದಿಯ ದ್ವೀಪದಲ್ಲಿಯೇ ಗರ್ಭವನ್ನು ವಿಸರ್ಜನೆ ಮಾಡು. ನೀನು ಪುನಃ ಕನ್ಯೆಯಾಗುವಿ ಎಂದು ಹೇಳಿದರು.

ಪಾರಾಶರ್ಯೋ ಮಹಾಯೋಗೀ ಸ ಬಭೂವ ಮಹಾಯಶಾಃ ।
ಸದ್ಯೋತ್ಪನ್ನಃ ಸ ತು ಮಹಾನ್ ಸಹ ಪಿತ್ರಾಯತೋ ಗತಃ ॥೧೯॥

ತಕ್ಷಣದಲ್ಲಿಯೇ ಹುಟ್ಟಿದ ಆ ಪುತ್ರನು ಪರಾಶರರ ಮಗನಾಗಿ ಮಹಾಯೋಗಿಯೂ, ಮಹಾಕೀರ್ತಿವಂತನೂ, ಮಹಾತ್ಮನೂ ಆಗಿ ತಂದೆಯ ಅಧೀನನಾಗಿ ಹೊರಟು ಹೋದನು.

ಕನ್ಯಾಪುತ್ರೋ ಮಮ ಪುರಾ ದ್ವೈಪಾಯನ ಇತಿ ಸ್ಮೃತಃ ।
ಯೋ ವ್ಯಸ್ಯ ವೇದಾಂಶ್ಚತುರಃ ತಪಸಾ ಭಗವಾನೃಷಿಃ ॥೨೦॥

ಲೋಕೇ ವ್ಯಾಸತ್ವಮಾಪೇದೇ ಕಾಷ್ಣ್ಯಾತ್ ಕೃಷ್ಣತ್ವಮಾಗತಃ ।
ಸತ್ಯವಾದೀ ಶಮಪರಸ್ತಪಸಾ ದಗ್ಧಕಿಲ್ಬಿಷಃ ॥೨೧॥

ಆತನು ನನಗೆ ಕನ್ಯಾವಸ್ಥೆಯಲ್ಲಿ ಹುಟ್ಟಿದ ದ್ವೈಪಾಯನ ಎಂಬ ಮಗ. ಪೂಜ್ಯನಾದ ಆ ಋಷಿಯು ನಾಲ್ಕು ವೇದಗಳನ್ನು ವಿಭಾಗ ಮಾಡಿದುದರಿಂದ ಲೋಕದಲ್ಲಿ ಅವನನ್ನು ವ್ಯಾಸರೆಂದೂ ಕರೆಯುತ್ತಾರೆ. ಕೃಷ್ಣವರ್ಣವುಳ್ಳವನಾದ್ದರಿಂದ ಕೃಷ್ಣ ಎಂದೂ ಕರೆಯುತ್ತಾರೆ. ಆ ಪುತ್ರನು ಸತ್ಯವಾದಿ, ಶ್ರಮವುಳ್ಳವನು ಮತ್ತು ತಪಸ್ಸಿನಿಂದ ಎಲ್ಲಾ ದೋಷಗಳನ್ನೂ ದೂರಮಾಡಿಕೊಂಡವನು.

ಸ ನಿಯುಕ್ತೋ ಮಯಾ ವ್ಯಕ್ತಂ ತ್ವಯಾ ಚಾಪ್ಯಮಿತದ್ಯುತೇ ।
ಭ್ರಾತುಃ ಕ್ಷೇತ್ರೇ ತು ಕಲ್ಯಾಣಮಪತ್ಯಂ ಜನಯಿಷ್ಯತಿ ॥೨೨॥

ಅಮಿತದ್ಯುತಿಯಾದ ಭೀಷ್ಮನೇ ನಾನು ಅವನಿಗೆ ಆದೇಶವನ್ನು ಮಾಡಿ ನೀನು ಸಹ ಪ್ರಾರ್ಥನೆಯನ್ನು ಮಾಡಿದರೆ, ತನ್ನ ತಮ್ಮನ ಕ್ಷೇತ್ರದಲ್ಲಿ ಅವನು ಕಲ್ಯಾಣಕರನಾದ ಪುತ್ರನನ್ನು ಪಡೆಯುವನು.

ಸ ಹಿ ಮಾಮುಕ್ತಾ ವಾಂಸ್ತತ್ರ ಸ್ಮರ ಕಾರ್ಯೇಷು ಮಾಮಿತಿ ।
ಸ್ಮರಿಷ್ಯಾಮಿ ಮಹಾಬಾಹೋ ಯದಿ ಭೀಷ್ಮ ತ್ವಮಿಚ್ಛಸಿ ॥೨೩॥

ಅವನು ನನ್ನನ್ನು ಕುರಿತು ನಿನಗೆ ಅಗತ್ಯವೊದಗಿದಾಗ ನನ್ನನ್ನು ಸ್ಮರಿಸು ಎಂದು ಹೇಳಿದ್ದಾನೆ: ಮಹಾಬಾಹುವಾದ ಭೀಷ್ಮನೇ, ನಿನಗೆ ಸಮ್ಮತವಾದರೆ ನಾನು ಅವನನ್ನು ಸ್ಮರಿಸುವೆನು.

ತವ ಹ್ಯನುಮತೇ ಭೀಷ್ಮ ನಿಯತಂ ಸ ಮಹಾತಪಾಃ ।
ವಿಚಿತ್ರವೀರ್ಯಕ್ಷೇತ್ರೇ ತು ಪುತ್ರಾನುತ್ಪಾದಯಿಷ್ಯತಿ ॥೨೪॥

ಭೀಷ್ಮನೇ, ಮಹಾತಪಸ್ವಿಯಾದ ಆತನು ನಿನಗೆ ಅಭಿಪ್ರಾಯವಿದ್ದರೆ ವಿಚಿತ್ರವೀರ್ಯನ ಪತ್ನಿಯರಲ್ಲಿ ಪುತ್ರರನ್ನು ಪಡೆಯುವನು.

ವೈಶಂಪಾಯನಃ

ಇತ್ಯುಕ್ತಮಾತ್ರೇ ಭೀಷ್ಮಸ್ತು ಕೃತಾಂಜಲಿಪುಟೋಽಹೃಷತ್ ।
ಮಹರ್ಷೇಃ ಕೀರ್ತನಾತ್ ತಸ್ಯ ವಂದ್ಯ ಮಾತುಸ್ತದಾಽಬ್ರವೀತ್ ॥೨೫॥

ದೇಶಕಾಲೌ ಚ ಜಾನಾಸಿ ಕ್ರಿಯತಾಮರ್ಥಸಿದ್ಧಯೇ ।
ಧರ್ಮಮರ್ಥಂ ಚ ಕಾಮಂ ಚ ತ್ರೀನೇತಾನ್ ಯೋಽನುಪಶ್ಯತಿ ॥೨೬॥

ತಾಯಿಯು ಹೀಗೆ ಹೇಳಿದ ತಕ್ಷಣ ಭೀಷ್ಮನು ತಾಯಿಯ ಪಾದಗಳಿಗೆ ನಮಸ್ಕರಿಸಿ ಮಹರ್ಷಿಗಳಾದ ವ್ಯಾಸರನ್ನು ಹೇಳಿದ್ದರಿಂದ ಸಂತೋಷಗೊಂಡು ದೇಶಕಾಲಗಳನ್ನು ನೀನು ತಿಳಿದಿದ್ದೀಯೆ. ನಮ್ಮ ಅಭೀಷ್ಟಸಿದ್ಧಿಗಾಗಿ ಏನು ಮಾಡಬೇಕೋ ಅದನ್ನು ಮಾಡು ಎಂದು ಹೇಳಿದನು.

ಅರ್ಥಮರ್ಥಾನುಬಂಧಂ ಚ ಧರ್ಮಂ ಧರ್ಮಾನುಬಂಧನಮ್ ।
ಕಾಮಂ ಕಾಮಾನುಬಂಧಂ ಚ ವಿಪರೀತಾನ್ ಪೃಥಕ್‌ಪೃಥಕ್ ॥೨೭॥

ಶುಭಂ ಶುಭಾನುಬಂಧಂ ಚ ತಾಂಶ್ಚೈವ ತ್ರಿವಿಧಾನ್ ಪುನಃ ।
ಯೋ ವಿಚಿಂತ್ಯ ಧಿಯಾ ಸಮ್ಯಗ್ ವ್ಯವಸ್ಯತಿ ಸ ಬುದ್ಧಿಮಾನ್ ॥೨೮॥

ಯಾರು ಧರ್ಮ, ಅರ್ಥ ಮತ್ತು ಕಾಮ ಈ ಮೂರನ್ನು ಸರಿಯಾಗಿ ತಿಳಿಯುತ್ತಾನೋ, ಅರ್ಥವನ್ನೂ ಅರ್ಥದ ಸಾಧನವನ್ನೂ, ಹಾಗೆಯೇ ಧರ್ಮವನ್ನೂ,

ಧರ್ಮದ ಸಾಧನವನ್ನೂ, ಕಾಮವನ್ನೂ, ಕಾಮದ ಸಾಧನವನ್ನೂ ಇದಕ್ಕೆ ವಿರುದ್ಧವಾದವುಗಳನ್ನೂ ವಿವಿಧವಾದ ಶುಭಗಳನ್ನೂ ಮತ್ತು ಶುಭಸಾಧನಗಳನ್ನೂ ಬುದ್ಧಿಯಿಂದ ಯೋಚಿಸಿ ಸರಿಯಾದ ನಿರ್ಧಾರಕ್ಕೆ ಬರುತ್ತಾನೋ ಅವನೇ ಬುದ್ಧಿವಂತನಾದವನು.

ಸರ್ವವಿತ್ ಸರ್ವಕರ್ತಾ ಸ ಯದ್ಯೇವಂ ತತ್ ಕರೋತಿ ಚ ।
ತದಿದಂ ಧರ್ಮಯುಕ್ತಂ ಚ ಹಿತಂ ಚೈವ ಕುಲಸ್ಯ ನಃ ।
ಉಕ್ತಂ ಭವತ್ಯಾ ಯಚ್ಛ್ರೇಯಃ ಪರಮಂ ರೋಚತೇ ಮಮ ॥೨೯॥

ಸರ್ವಜ್ಞನೂ, ಸರ್ವಕರ್ತನೂ ಆದ ಅವನು ಏನು ಮಾಡುತ್ತಾನೋ, ಅದು ಧರ್ಮಯುಕ್ತವೂ ಮತ್ತು ನಮ್ಮ ಕುಲಕ್ಕೆ ಹಿತವೂ ಆಗಿರುತ್ತದೆ. ನೀನು ಯಾವ ಶ್ರೇಯಸ್ಸಿನ ಪರಮ ಮಾರ್ಗವನ್ನು ಹೇಳಿದ್ದೀಯೋ ಅದು ನನಗೆ ಸಮ್ಮತವಾಗುತ್ತದೆ.

ವೈಶಂಪಾಯನಃ

ತತಸ್ತಸ್ಮಿನ್ ಪ್ರತಿಜ್ಞಾತೇ ಭೀಷ್ಮೇಣ ಕುರುನಂದನ ।
ಚಿಂತಯಾಮಾಸ ವೈ ಕಾಳೀ ಕೃಷ್ಣದ್ವೈಪಾಯನಂ ಮುನಿಮ್ ॥೩೦॥

ಎಲೈ ಕುರುನಂದನನೇ, ಭೀಷ್ಮನು ಹಾಗೆ ಪ್ರತಿಜ್ಞೆಯನ್ನು ಮಾಡುತ್ತಿರಲು ಕಾಳಿಯು ಕೃಷ್ಣದ್ವೈಪಾಯನ ಮುನಿಯನ್ನು ಸ್ಮರಿಸಿದಳು.

ತಸ್ಯಾಃ ಸಂಚಿಂತಿತಂ ಜ್ಞಾತ್ವಾ ಸತ್ಯವತ್ಯಾ ಮಹಾತಪಾಃ ।
ಸ ವೇದಾನ್ ಪ್ರಬ್ರುವನ್ ಧೀಮಾನ್ ಕೃಷ್ಣದ್ವೈಪಾಯನಃ ಪ್ರಭುಃ ।
ಪ್ರಾದುರ್ಭಭೂವ ವಿದಿತಃ ಕ್ಷಣೇನ ಕುರುಸಂಸದಿ ॥೩೧॥

ತಾಯಿಯು ಚಿಂತಿಸಿದಳೆಂದು ತಿಳಿದು ಸತ್ಯವಂತರೂ, ಮಹಾತಪಸ್ವಿಗಳೂ, ಸಮರ್ಥರೂ, ಮೇಧಾವಿಗಳೂ ಆದ ಕೃಷ್ಣದ್ವೈಪಾಯನರು ವೇದಗಳನ್ನು ಉಚ್ಚರಿಸುತ್ತಾ ಒಂದು ಕ್ಷಣದಲ್ಲಿ ಕುರುಸಂಸತ್ತಿನಲ್ಲಿ ಪ್ರಾದುರ್ಭೂತರಾದರು.

ತಸ್ಮೈ ಪೂಜಾಂ ತತೋ ದತ್ತ್ವಾ ಸುತಾಯ ವಿಧಿಪೂರ್ವಕಮ್।
ಪರಿಷ್ವಜ್ಯ ಚ ಬಾಹುಭ್ಯಾಂ ಪ್ರಸ್ರವೈರಭಿಷಿಚ್ಯ ಚ ।
ಮುಮೋಚ ಬಾಷ್ಪಂ ದಾಶೇಯೀ ಪುತ್ರಂ ದೃಷ್ಟ್ವಾ ಚಿರಸ್ಯ ತಮ್ ॥

ದಾಶಸುತಳಾದ ಸತ್ಯವತಿಯು ಆ ಪುತ್ರನನ್ನು ವಿಧಿಪೂರ್ವಕವಾಗಿ ಪೂಜಿಸಿ, ಬಾಹುಗಳಿಂದ ಆಲಿಂಗಿಸಿ ಆನಂದಬಾಷ್ಪಗಳಿಂದ ತೋಯಿಸಿ ಬಹಳ ಕಾಲದ ಮೇಲೆ ಮಗನನ್ನು ನೋಡಿ ಕಣ್ಣೀರುಸುರಿಸಿದಳು.

ತಾಮದ್ಭಿರಭಿಷಿಂಚ್ಯಾರ್ತಾಂ ಮಹರ್ಷಿರಭಿವಾದ್ಯ ಚ ।
ಮಾತರಂ ಪೂರ್ವಜಃ ಪುತ್ರಃ ವ್ಯಾಸೋ ವಚನಮಬ್ರವೀತ್ ॥೩೩॥

ಮಹರ್ಷಿಗಳಾದ ವ್ಯಾಸರು ಆರ್ತಳಾದ ತಾಯಿಗೆ ನೀರನ್ನು ಪ್ರೋಕ್ಷಿಸಿ, ನಮಸ್ಕರಿಸಿ, ತಾಯಿಯನ್ನು ಕುರಿತು ಪ್ರಥಮ ಪುತ್ರರಾದ ಅವರು ಮಾತನಾಡಿದರು.

ಭವತ್ಯಾ ಯದಭಿಪ್ರೇತಂ ತದಹಂ ಕರ್ತುಮಾಗತಃ ।
ಶಾಧಿ ಮಾಂ ಧರ್ಮತತ್ತ್ವಜ್ಞೇ ಕರವಾಣಿ ಪ್ರಿಯಂ ತವ ॥೩೪॥

ನಿನ್ನ ಮನಸ್ಸಿನ ಅಭಿಪ್ರಾಯವನ್ನು ತಿಳಿದು ಅದನ್ನು ನೆರವೇರಿಸಲು ನಾನು ಇಲ್ಲಿಗೆ ಬಂದಿದ್ದೇನೆ. ಧರ್ಮತತ್ವವನ್ನು ತಿಳಿದವಳೇ ನನಗೆ ಆದೇಶವನ್ನು ನೀಡು. ನಿನಗೆ ಪ್ರಿಯವನ್ನು ಮಾಡುತ್ತೇನೆ.

ತಸ್ಮೈ ಪೂಜಾಂ ತತೋಽಕಾರ್ಷೀತ್ ಪುರೋಧಾಃ ಪರಮರ್ಷಯೇ।
ಸ ಚ ತಾಂ ಪ್ರತಿಜಗ್ರಾಹ ವಿಧಿವನ್ಮಂತ್ರಪೂರ್ವಕಮ್ ॥೩೫॥

ಅನಂತರ ಪುರೋಹಿತರು ಪರಮರ್ಷಿಗಳಾದ ವ್ಯಾಸರಿಗೆ ಪೂಜೆಯನ್ನು ಮಾಡಿದರು. ವಿಧಿಪೂರ್ವಕವಾಗಿ ಮತ್ತು ಮಂತ್ರಪೂರ್ವಕವಾಗಿ ಮಾಡಿದ ಆ ಪೂಜೆಯನ್ನು ವ್ಯಾಸರು ಸ್ವೀಕರಿಸಿದರು.

ಪೂಜಿತಂ ಮಂತ್ರಪೂರ್ವೇಣ ವಿಧಿನಾ ಪ್ರೀತಮಾನಸಮ್ ।
ತಮಾಶ್ರಮಗತಂ ಮಾತಾ ಪೃಷ್ಟ್ವಾ ಕುಶಲಮವ್ಯಯಮ್ ॥೩೬॥

ಸತ್ಯವತ್ಯಭಿವೀಕ್ಷ್ಯೈನಮುವಾಚೇದಮನಂತರಮ್ ।
ಮಾತಾಪಿತ್ರೋಃ ಪ್ರಜಾಯಂತೇ ಪುತ್ರಾಃ ಸಾಧಾರಣಾಃ ಕುಲೇ ॥೩೭॥

ಮಂತ್ರಪುರಸ್ಸರವಾದ, ವಿಧಿಯುಕ್ತವಾದ ಪೂಜೆಯಿಂದ ಪ್ರೀತನಾದ ಅವನನ್ನು ಕುರಿತು ತಾಯಿಯಾದ ಸತ್ಯವತಿಯು ಯೋಗಕ್ಷೇಮವನ್ನು ಕೇಳಿ ಅವನನ್ನು ನೋಡುತ್ತಾ ಹೀಗೆ ಮಾತನಾಡಿದಳು.

ತೇಷಾಂ ಪಿತಾ ಯಥಾ ಸ್ವಾಮೀ ತಥಾ ಮಾತಾ ಯಶಸ್ವಿನೀ ।
ವಿಧಾತ್ರಾ ವಿಹಿತಃ ಸ ತ್ವಂ ಯಥಾ ಮೇ ಪ್ರಥಮಃ ಸುತಃ ॥೩೮॥

ಸಾಧಾರಣ ಪುತ್ರರು ಪ್ರತಿಯೊಂದು ಕುಲದಲ್ಲಿಯೂ ಮಾತಾಪಿತೃಗಳಿಂದ ಜನಿಸುತ್ತಾರೆ. ಅವರಿಗೆ ತಂದೆಯು ಹೇಗೆ ಸ್ವಾಮಿಯೋ, ತಾಯಿಯೂ ಹಾಗೆಯೇ. ನೀನು ನನ್ನ ಪ್ರಥಮ ಪುತ್ರನೆಂದು ಬ್ರಹ್ಮದೇವರ ಸಂಕಲ್ಪವಿದ್ದಿತು.

ವಿಚಿತ್ರವೀರ್ಯೋ ಬ್ರಹ್ಮರ್ಷೇ ತಥಾ ಮೇಽವರಜಃ ಸುತಃ ।
ಯಥೈವ ಪಿತೃತೋ ಭೀಷ್ಮಃ ತಥಾ ತ್ವಮಪಿ ಮಾತೃತಃ ।
ಭ್ರಾತಾ ವಿಚಿತ್ರವೀರ್ಯಸ್ಯ ಯಥಾ ವಾ ಪುತ್ರ ಮನ್ಯಸೇ ॥೩೯॥

ಬ್ರಹ್ಮರ್ಷಿಯೇ, ವಿಚಿತ್ರವೀರ್ಯನು ಹೇಗೆ ನನಗೆ ಕೊನೆಯ ಮಗನೋ, ಹೇಗೆ ಭೀಷ್ಮನು ತಂದೆಯಿಂದ ಜನಿಸಿ ಅಣ್ಣನಾಗಿದ್ದಾನೆಯೋ ಹಾಗೆ ನೀನು ತಾಯಿಯಿಂದ ಜನಿಸಿ ವಿಚಿತ್ರವೀರ್ಯನ ಅಣ್ಣನಾಗಿದ್ದೀಯೆ. ಪುತ್ರನೇ ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು.

ಅಯಂ ಶಾಂತನವಃ ಸತ್ಯಂ ಪಾಲಯನ್ ಸತ್ಯವಿಕ್ರಮಃ ।
ಬುದ್ಧಿಂ ನ ಕುರುತೇಽಪತ್ಯೇ ತಥಾ ರಾಜ್ಯಾನುಶಾಸನೇ ॥೪೦॥

ಶಂತನುವಿನ ಮಗನಾದ ಸತ್ಯವಿಕ್ರಮನಾದ ಈ ಭೀಷ್ಮನು ತನ್ನ ಸತ್ಯವಚನವನ್ನು ಪಾಲಿಸುತ್ತಿದ್ದು ಮಕ್ಕಳನ್ನು ಪಡೆಯುವುದಕ್ಕಾಗಲೀ, ರಾಜ್ಯವನ್ನಾಳುವುದಕ್ಕಾಗಲೀ ಬಯಸುವುದಿಲ್ಲ.

ಸ ತ್ವಂ ಹ್ಯಪೇಕ್ಷಯಾ ಭ್ರಾತುಃ ಸಂತಾನಾಯ ಕುಲಸ್ಯ ತು ।
ಭೀಷ್ಮಸ್ಯ ಚಾಸ್ಯ ವಚನಾನ್ನಿಯೋಗಾಚ್ಚ ಮಮಾನಘ ॥೪೧॥

ಅನುಕ್ರೋಶಾಚ್ಚ ಭ್ರಾತೄಣಾಂ ಸರ್ವೇಷಾಂ ರಕ್ಷಣಾಯ ಚ ।
ಆನೃಶಂಸ್ಯೇನ ಯದ್ ಬ್ರೂಯಾಂ ತಚ್ಛ್ರುತ್ವಾ ಕರ್ತುಮರ್ಹಸಿ ॥೪೨॥

ಎಲೈ ಅನಘನೇ, ನೀನು ತಮ್ಮನ ಕುಲದ ಸಂತಾನದ ದೃಷ್ಟಿಯಿಂದ ತಮ್ಮನಾದ ಭೀಷ್ಮನ ವಚನದಂತೆ ಮತ್ತು ನನ್ನ ಆದೇಶದಂತೆ, ತಮ್ಮಂದಿರ ಮೇಲಿನ ದಯೆಯಿಂದ ಮತ್ತು ಎಲ್ಲರನ್ನೂ ರಕ್ಷಣೆ ಮಾಡುವ ಸಲುವಾಗಿ ನಾನು ಯಾವ ಸೌಮ್ಯವಾದ ಮಾತುಗಳನ್ನು ಆಡುವೆನೋ ಅದನ್ನು ಕೇಳಿ ನಡೆಸಿಕೊಡಬೇಕು.

ಯವೀಯಸಸ್ತವ ಭ್ರಾತುರ್ಭಾರ್ಯೇ ಪರಮಸಂಮತೇ ।
ರೂಪಯೌವನಸಂಪನ್ನೇ ಪುತ್ರಕಾಮೇ ಚ ಧರ್ಮತಃ ॥೪೩॥

ತಯೋಃ ಪ್ರಯಚ್ಛ ಪುತ್ರಾಂಸ್ತ್ವಂ ಸಮರ್ಥೋ ಹ್ಯಸಿ ಪುತ್ರಕ ।
ಅನುರೂಪಾನ್ ಕುಲಸ್ಯಾಸ್ಯ ತೇಜಃಪ್ರಶಮಸಂಯುತಾನ್ ॥೪೪॥

ನಿನ್ನ ತಮ್ಮನ ಇಬ್ಬರು ಪತ್ನಿಯರು ಪರಮ ಸಮ್ಮತರಾದವರು, ರೂಪಯೌವನಸಂಪನ್ನರಾದವರು ಮತ್ತು ಧರ್ಮದಿಂದ ಪುತ್ರರನ್ನು ಪಡೆಯುವ ಇಚ್ಛೆಯುಳ್ಳವರೂ ಆಗಿದ್ದಾರೆ. ಪುತ್ರನೇ, ನೀನು ಸಮರ್ಥನಾಗಿದ್ದೀಯೆ. ನೀನು ಅವರಿಗೆ ಈ ನಮ್ಮ ಕುಲಕ್ಕೆ ಅನುರೂಪನಾದ ತೇಜಸ್ಸನ್ನೂ, ಶಾಂತಿಯನ್ನೂ, ಹೊಂದಿರುವ ಪುತ್ರರನ್ನು ಕರುಣಿಸು.

ವ್ಯಾಸಃ

ವೇತ್ಥ ಧರ್ಮಂ ತ್ವಮೇವೇಹ ಪರಂ ಚಾಪರಮೇವ ಚ ।
ತಥಾ ತವ ಮಹಾಪ್ರಾಜ್ಞೇ ಧರ್ಮೇ ಪ್ರಣಿಹಿತಾ ಮತಿಃ ॥೪೫॥

ತಾಯಿಯೇ, ಶ್ರೇಷ್ಠವಾದ ಮತ್ತು ಕನಿಷ್ಠವಾದ ಧರ್ಮವೆಲ್ಲವನ್ನೂ ನೀನು ತಿಳಿದಿದ್ದೀಯೆ. ಮಹಾಪ್ರಾಜ್ಞಳೇ, ನಿನ್ನ ಮನಸ್ಸು ಯಾವಾಗಲೂ ಧರ್ಮದಲ್ಲಿಯೇ ನಿವಿಷ್ಟವಾಗಿದೆ.

ನಿಯೋಗಾತ್ ತವ ಚೈವಾಹಮೇತೈರಪಿ ಚ ಕಾರಣೈಃ ।
ಈಪ್ಸಿತಂ ತೇ ಕರಿಷ್ಯಾಮಿ ದೃಷ್ಟಂ ಹ್ಯೇತತ್ ಪುರಾ ಮಯಾ ॥೪೬॥

ನಿನ್ನ ಆದೇಶದಂತೆ ಮತ್ತು ಉಳಿದ ಎಲ್ಲಾಕಾರಣಗಳಿಂದ ನಾನು ನಿನಗೆ ಅಭೀಷ್ಟವನ್ನುಂಟುಮಾಡುತ್ತೇನೆ. ಈ ವಿಷಯವನ್ನು ನಾನು ಮೊದಲೇ ತಿಳಿದಿದ್ದೆ.

ಭವತ್ಯಾ ಯದಭಿಪ್ರೇತಂ ತದಹಂ ಕರ್ತುಮಾಗತಃ ।
ಭ್ರಾತುಃ ಪುತ್ರಾನ್ ಪ್ರದಾಸ್ಯಾಮಿ ಮಿತ್ರಾವರುಣಯೋಃ ಸಮಾನ್ ॥

ನಿನಗೆ ಅಭಿಪ್ರೇತವಾದುದನ್ನು ಮಾಡಲು ನಾನು ಇಲ್ಲಿಗೆ ಬಂದಿದ್ದೇನೆ. ತಮ್ಮನಿಗೆ ಮಿತ್ರಾವರುಣರಿಗೆ ಸಮರಾದ ಮಕ್ಕಳನ್ನು ಕೊಡುವೆನು.

ವ್ರತಂ ಚ ಚರಿತವ್ಯಂ ತು ನಿರ್ದಿಷ್ಟಮಿಹ ಯನ್ಮಯಾ ।
ಸಂವತ್ಸರಂ ಯಥಾನ್ಯಾಯಂ ತತಃ ಶುದ್ಧೇ ಭವಿಷ್ಯತಃ ॥೪೮॥

ಆದರೆ ನಾನು ಹೇಳಿದ ವ್ರತವನ್ನು ಒಂದು ವರ್ಷದ ಕಾಲ ಆಚರಿಸಬೇಕು. ಆಗ ಅವರಿಬ್ಬರೂ ಶುದ್ಧರಾಗುವರು.

ನಹಿ ಮಾಮವ್ರತೋಪೇತಾ ಸ್ಪೃಶತೇ ಕಾಚಿದಂಗನಾ ।
ನ ಚ ಮಾಮರ್ಹತಃ ಪ್ರಾಪ್ತುಮಶುದ್ಧೇ ಕೋಸಲಾತ್ಮಜೇ ।
ಏವಂ ಸತ್ಯವತೀ ಧರ್ಮಂ ಪರಮಾಜ್ಞಾತುಮರ್ಹಸಿ ॥೪೯॥

ವ್ರತವನ್ನು ಮಾಡದ ಯಾವ ವನಿತೆಯೂ ನನ್ನನ್ನು ಸ್ಪರ್ಶ ಮಾಡಲಾರಳು. ಅಶುದ್ಧರಾದ ಆ ಇಬ್ಬರು ಕೋಸಲರಾಜಕುಮಾರಿಯರು ನನ್ನ ಸಮೀಪಕ್ಕೆ ಬರಲು ಅರ್ಹರಾಗುವುದಿಲ್ಲ. ಸತ್ಯವತೀ, ಈ ಶ್ರೇಷ್ಠವಾದ ಧರ್ಮವನ್ನು ನೀನು ತಿಳಿಯಬೇಕು.

ಸತ್ಯವತೀ

ಯಥಾ ಸದ್ಯಃ ಪ್ರಪದ್ಯೇತಾಂ ದೇವ್ಯೌ ಗರ್ಭಂ ತಥಾ ಕುರು ।
ಅರಾಜಕೇಷು ರಾಷ್ಟ್ರೇಷು ಪ್ರಜಾಽನಾಥಾ ವಿನಶ್ಯತಿ ॥೫೦॥

ಆ ಇಬ್ಬರು ದೇವಿಯರು ಹೇಗೆ ತಕ್ಷಣದಲ್ಲಿಯೇ ಗರ್ಭವನ್ನು ಧರಿಸುವರೋ ಹಾಗೆ ಮಾಡು. ರಾಷ್ಟ್ರದಲ್ಲಿ ರಾಜನೇ ಇಲ್ಲದಿದ್ದರೆ ಪ್ರಜೆಗಳು ಅನಾಥರಾಗಿ ವಿನಾಶವನ್ನು ಹೊಂದುವರು.

ಕಥಂ ಚಾರಾಜಕಂ ರಾಜ್ಯಂ ಶಕ್ಯಂ ಧಾರಯಿತುಂ ಪ್ರಭೋ ।
ತಸ್ಮಾದ್ ಗರ್ಭಂ ನಿಷಿಂಚಸ್ವ ಭೀಷ್ಮಸ್ತಂ ವರ್ಧಯಿಷ್ಯತಿ ॥೫೧॥

ಪ್ರಭುವೇ, ಅರಾಜಕವಾದ ರಾಜ್ಯವನ್ನು ಹೇಗೆ ಹಿಡಿದುಕೊಳ್ಳಲು ಸಾಧ್ಯ. ಆದ್ದರಿಂದ ಗರ್ಭಾಧಾನವನ್ನು ಮಾಡು. ಭೀಷ್ಮನು ಮಕ್ಕಳನ್ನು ಬೆಳೆಸುತ್ತಾನೆ.

ವ್ಯಾಸಃ

ಯದಿ ಪುತ್ರಃ ಪ್ರದಾತವ್ಯೋ ಮಯಾ ಕ್ಷಿಪ್ರಮಕಾಲಿಕಮ್ ।
ವಿರೂಪತಾಂ ಮೇ ಸಹತಾಮೇತತ್ ಸ್ಯಾತ್ ಪರಮಮ್ ವ್ರತಮ್ ॥

ನಾನು ತಕ್ಷಣದಲ್ಲಿಯೇ ಅಕಾಲಿಕನಾದ ಮಗನನ್ನು ಕೊಡಬೇಕಾದರೆ, ಅವರಿಬ್ಬರೂ ನನ್ನ ವಿರೂಪವನ್ನು ಸಹಿಸಬೇಕು. ಇದು ದೊಡ್ಡ ವ್ರತವಾಗುತ್ತದೆ.

ಯದಿ ಮೇ ಸಹತೇ ವೇಷಂ ರೂಪಂ ಗಂಧಂ ತಥಾ ವಪುಃ ।
ಅದ್ಯೈವ ಗರ್ಭಂ ಕೌಸಲ್ಯಾ ವಿಶಿಷ್ಟಂ ಪ್ರತಿಪತ್ಸ್ಯತೇ ॥೫೩॥

ನನ್ನ ವೇಷವನ್ನೂ, ರೂಪವನ್ನೂ, ಗಂಧವನ್ನೂ, ಮತ್ತು ಶರೀರವನ್ನೂ, ಸಹಿಸುವುದಾದರೆ ಕೋಸಲರಾಜಕುಮಾರಿಯು ಈ ದಿನವೇ ವಿಶಿಷ್ಟವಾದ ಗರ್ಭವನ್ನು ಧರಿಸುವಳು.

ತಸ್ಯ ಚಾಪಿ ಶತಂ ಪುತ್ರಾ ಭವಿತಾರೋ ನ ಸಂಶಯಃ ।
ಗೋಪ್ತಾರಃ ಕುರುವಂಶಸ್ಯ ಭವತ್ಯಾಃ ಶೋಕನಾಶನಾಃ ॥೫೪॥

ಅವನಿಗೂ ಸಹ ನೂರು ಮಕ್ಕಳು ಜನಿಸುತ್ತಾರೆ. ಅವರು ಕುರುವಂಶವನ್ನು ರಕ್ಷಿಸುವವರೂ, ನಿನ್ನ ಶೋಕವನ್ನು ನಾಶಮಾಡುವವರೂ ಆಗುವರು. ಇದರಲ್ಲಿ ಸಂಶಯವಿಲ್ಲ.

ಶಯನೇ ತ್ವೇವ ಕೌಸಲ್ಯಾ ಶುಚಿವಸ್ತ್ರಾ ಸ್ವಲಂಕೃತಾ ।
ಮಮಾಗಮನಮಾಕಾಂಕ್ಷೇದಿತ್ಯುಕ್ತ್ವಾ ಽಂತರಧೀಯತ ॥೫೫॥

ಕೌಸಲ್ಯೆಯು (ಅಂಬಿಕೆಯು) ಶುಭ್ರವಸ್ತ್ರಗಳನ್ನುಟ್ಟು ಅಲಂಕೃತಳಾಗಿ ಹಾಸಿಗೆಯಲ್ಲಿ ಕುಳಿತು ನನ್ನ ಆಗಮನವನ್ನು ನಿರೀಕ್ಷಿಸುತ್ತಿರಬೇಕು ಎಂದು ಹೇಳಿ ವ್ಯಾಸರು ಅದೃಶ್ಯರಾದರು.

ವೈಶಂಪಾಯನಃ

ಅಭಿಗಮ್ಯ ತು ಸಾ ದೇವೀ ಸ್ನುಷಾಂ ರಹಸಿ ಸಂಗತಾ ।
ಧರ್ಮಮರ್ಥಸಮಾಯುಕ್ತಮುವಾಚ ವಚನಂ ಹಿತಮ್ ॥೫೬॥

ಅನಂತರ ಸತ್ಯವತಿಯು ಏಕಾಂತದಲ್ಲಿ ತನ್ನ ಸೊಸೆಯನ್ನು ಸಮೀಪಿಸಿ ಧರ್ಮಾರ್ಥಯುಕ್ತವಾದ ಹಿತ ವಚನವನ್ನು ಆಡಿದಳು.

ಸತ್ಯವತೀ

ಕೌಸಲ್ಯೇ ಧರ್ಮತಂತ್ರಂ ಯದ್ ಬ್ರವೀಮಿ ತ್ವಾಂ ನಿಬೋಧ ಮೇ ।
ಭರತಾನಾಂ ಸಮುಚ್ಛೇದೋ ವ್ಯಕ್ತಂ ಮದ್ಭಾಗ್ಯಸಂಕ್ಷಯಾತ್ ॥೫೭॥

ಕೌಸಲ್ಯೆಯೇ, ನಾನು ಧರ್ಮಯುಕ್ತವಾಗಿ ಆಡುವ ಮಾತುಗಳನ್ನು ನೀನು ಕೇಳು. ನನ್ನ ಭಾಗ್ಯನಾಶದಿಂದ ಭರತರ ಕುಲಕ್ಕೆ ನಾಶವು ಪ್ರಾಪ್ತವಾಗಿದೆ.

ವ್ಯಥಿತಾಂ ಮಾಂ ಚ ಸಂಪ್ರೇಕ್ಷ್ಯ ಪಿತುರ್ವಂಶಂ ಚ ಪೀಡಿತಮ್ ।
ಭೀಷ್ಮೋ ಬುದ್ಧಿಮತಾಂ ಶ್ರೇಷ್ಠೋ ಕುರುತೇ ಬುದ್ಧಿಮುತ್ತಮಾಮ್ ॥

ವ್ಯಥಿತಳಾದ ನನ್ನನ್ನು ನೋಡಿ ತಂದೆಯ ವಂಶವು ಕಷ್ಟಕ್ಕೆ ಸಿಲುಕಿರುವುದನ್ನು ನೋಡಿ ಬುದ್ಧಿವಂತರಲ್ಲಿ ಶ್ರೇಷ್ಠನಾದ ಭೀಷ್ಮನು ಒಂದು ಉತ್ತಮವಾದ ಉಪಾಯವನ್ನು ಯೋಚಿಸಿದ್ದಾನೆ.

ಸಾ ಚ ಬುದ್ಧಿಸ್ತ್ವಯ್ಯಧೀನಾ ಪುತ್ರಂ ಪ್ರಾಪ್ತುಂ ಮತಿಂ ಕುರು ।
ನಷ್ಟಂ ಚ ಭಾರತಂ ವಂಶಂ ಪುನರೇವ ಸಮುದ್ಧರ ॥೫೯॥

ಆ ಉಪಾಯವು ನಿನ್ನನ್ನು ಅವಲಂಬಿಸಿದೆ. ಮಗನನ್ನು ಪಡೆಯಲು ನಿರ್ಧರಿಸು. ನಷ್ಟವಾದ ಭಾರತವಂಶವನ್ನು ಪುನಃ ಉಜ್ಜೀವನಗೊಳಿಸು.

ಪುತ್ರಂ ಜನಯ ಕಲ್ಯಾಣಿ ದೇವರಾಜಸಮದ್ಯುತಿಮ್ ।
ಗರ್ಭಂ ಧಾರಯ ಕಲ್ಯಾಣಿ ದೇವರಾಜಸಮಪ್ರಭಮ್ ।
ಸ ತೇ ಪುತ್ರೋ ಧುರಂ ಗುರ್ವೀಂ ಧಾರಯಿಷ್ಯತಿ ಭಾರತೀಮ್ ॥೬೦॥

ಕಲ್ಯಾಣಿಯೇ, ದೇವರಾಜನ ಕಾಂತಿಯುಳ್ಳ ಮಗನನ್ನು ಪಡೆ. ಕಲ್ಯಾಣಿಯೇ, ದೇವರಾಜನ ಕಾಂತಿಯುಳ್ಳ ಗರ್ಭವನ್ನು ಧರಿಸು. ಆ ನಿನ್ನ ಮಗನು ಭರತವಂಶದ ದೊಡ್ಡ ಜವಾಬ್ದಾರಿಯನ್ನು ಹೊರುತ್ತಾನೆ.

ವೈಶಂಪಾಯನಃ

ಸಾ ಧರ್ಮತೋऽನುನೀಯೈನಾಂ ಕಥಂಚಿದ್ ಧರ್ಮಚಾರಿಣೀಮ್।
ಭೋಜಯಾಮಾಸ ವಿಪ್ರಾಂಶ್ಚ ದೇವರ್ಷೀನತಿಥೀಂಸ್ತಥಾ ॥೬೧॥

ಅವಳು ಧರ್ಮಚಾರಿಣಿಯಾದ ತನ್ನ ಸೊಸೆಯನ್ನು ಕಷ್ಟಪಟ್ಟು ಧರ್ಮದ ದೃಷ್ಟಿಯಿಂದ ಒಪ್ಪಿಸಿ ಬ್ರಾಹ್ಮಣರಿಗೂ, ದೇವರ್ಷಿಗಳಿಗೂ ಮತ್ತು ಅತಿಥಿಗಳಿಗೂ ಭೋಜನವನ್ನು ಮಾಡಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಷಡಧಿಕಶತತಮೋಽಧ್ಯಾಯಃ ॥

॥ ಸಂಭವಪರ್ವಣಿ ಚತುಃಪಂಚಾಶತ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಆರನೆಯ ಅಧ್ಯಾಯ ಮುಗಿಯಿತು,

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೧

ವಿಚಿತ್ರವೀರ್ಯಃ ಪ್ರಮದಾದ್ವಯಂ ತತ್
ಸಂಪ್ರಾಪ್ಯ ರೇಮೇಽಬ್ದಗಣಾನ್ ಸುಸಕ್ತಃ ।
ತತ್ಯಾಜ ದೇಹಂ ಚ ಸ ಯಕ್ಷ್ಮಣಾರ್ದಿತಃ
ತತೋಽಸ್ಯ ಮಾತಾಸ್ಮರದಾಶು ಕೃಷ್ಣಮ್ ॥೧೨೪॥

ವಿಚಿತ್ರವೀರ್ಯ ಇಬ್ಬರು ಹೆಂಡತಿಯರನ್ನು ಪಡೆದು ಬಹುವರ್ಷಕಾಲ ಬಹಳ ಆಸಕ್ತನಾಗಿ ರಮಿಸಿದ. ಕ್ಷಯರೋಗದಿಂದ ಪೀಡಿತನಾಗಿ ದೇಹವನ್ನು ತೊರೆದ. ಆಗ ಅವನ ತಾಯಿ ಸತ್ಯವತಿ ಬೇಗನೆ ವೇದವ್ಯಾಸರನ್ನು ನೆನೆದಳು.

ಆವಿರ್ಬಭೂವಾಶು ಜಗಜ್ಜನಿತ್ರೋ ಜನಾರ್ದನೋ ಜನ್ಮಜರಾಭಯಾಪಹಃ ।
ಸಮಸ್ತ ವಿಜ್ಞಾನತನುಃ ಸುಖಾರ್ಣವಃ ಸಂಪೂಜಯಾಮಾಸ ಚ ತಂ ಜನಿತ್ರೀ॥

ಒಡನೆ ಜಗಜ್ಜನಕರಾದ, ಜನ್ಮ ಜರಾಭಯ ಪರಿಹಾರಕರಾದ, ಪೂರ್ಣ ವಿಶೇಷಜ್ಞಾನ ಶರೀರರಾದ ಆನಂದಸಾಗರರಾದ ವೇದವ್ಯಾಸರು ಪ್ರತ್ಯಕ್ಷರಾದರು. ತಾಯಿ ಆ ಮಗನನ್ನು ಚೆನ್ನಾಗಿ ಉಪಚರಿಸಿದಳು.

ತಂ ಭೀಷ್ಮಪೂರ್ವೈಃ ಪರಮಾದರಾರ್ಚಿತಂ
ಸ್ವಭಿಷ್ಟುತಂ ಚಾವದದಸ್ಯ ಮಾತಾ ।
ಪುತ್ರೌ ಮೃತೌ ಮೇ ನ ತು ರಾಜ್ಯಮೈಚ್ಛದ್
ಭೀಷ್ಮೋ ಮಯಾ ನಿತರಾಮರ್ಥಿತೋಽಪಿ ॥೧೨೬॥

ಭೀಷ್ಮ ಮುಂತಾದವರೂ ಪರಮಾದರದಿಂದ ವೇದವ್ಯಾಸರನ್ನು ಉಪಚರಿಸಿದರು. ಪ್ರಶಂಸಿಸಿದರು. ತಾಯಿ ಸತ್ಯವತಿ ನುಡಿದಳು 'ನನ್ನ ಇಬ್ಬರು ಮಕ್ಕಳೂ ಮೃತರಾಗಿರುವರು. ನಾನು ಎಷ್ಟು ಹೇಳಿದರೂ ಭೀಷ್ಮ ರಾಜ್ಯಭಾರ ಕೈಗೊಳ್ಳಲು ಒಪ್ಪಲಿಲ್ಲ'.

ಕ್ಷೇತ್ರೇ ತತೋ ಭ್ರಾತುರಪತ್ಯಮುತ್ತಮಮುತ್ಪಾದಯಾಸ್ಮತ್ಪರಮಾದರಾರ್ಥಿತಃ ।
ಇತೀರಿತಃ ಪ್ರಣತಶ್ಚಾಪ್ಯಭಿಷ್ಟುತೋ ಭೀಷ್ಮಾದಿಭಿಶ್ಚಾಹ ಜಗದ್ಗುರುರ್ವಚಃ ॥

'ನಾವು ನಿನ್ನನ್ನು ಪರಮಾದರದಿಂದ ಕೇಳಿಕೊಳ್ಳುತ್ತೇವೆ. ನೀನು ನಿನ್ನ ಸೋದರನ ಪತ್ನಿಯಲ್ಲಿ ಒಳ್ಳೆಯ ಸಂತತಿಯನ್ನು ಹುಟ್ಟಿಸು'. ಹೀಗೆ ಸತ್ಯವತಿ ಹೇಳಿದಳು. ಭೀಷ್ಮ ಮುಂತಾದವರೂ ನಮಿಸಿ ಸ್ತೋತ್ರ ಮಾಡಿದರು. ಆಗ ಜಗದ್ಗುರು ವೇದವ್ಯಾಸರು ಹೇಳಿದರು.

ಋತೇ ರಮಾಂ ಜಾತು ಮಮಾಂಗಯೋಗಯೋಗ್ಯಾಂಗನಾ
ನೈವ ಸುರಾಲಯೇಽಪಿ ।
ತಥಾಪಿ ತೇ ವಾಕ್ಯಮಹಂ ಕರಿಷ್ಯೇ ಸಾಂವತ್ಸರಂ
ಸಾ ಚರತು ವ್ರತಂ ಚ ॥೧೨೮॥

'ರಮೆ ಹೊರತು ನನ್ನ ಅಂಗಸಂಗಕ್ಕೆ ಯೋಗ್ಯಳಾದ ಸ್ತ್ರೀ ಸ್ವರ್ಗದಲ್ಲಿ ಏಕೆ ಸತ್ಯಲೋಕಾದಿಗಳಲ್ಲಿಯೂ ಕೂಡ ಎಂದೂ ಯಾರೂ ಇಲ್ಲ. ಭೂಲೋಕದಲ್ಲಿ ಇನ್ನೇನು? ಆದರೂ ನಾನು ನಿನ್ನ ಮಾತನ್ನು ನಡೆಸಿಕೊಡುತ್ತೇನೆ. ಅದಕ್ಕೆ ಒಂದು ವರ್ಷ ಕಾಲ ವಿಚಿತ್ರವೀರ್ಯನ ಮಡದಿ ವೈಷ್ಣವ ವ್ರತ ಆಚರಿಸಲಿ'.

ಸಾ ಪೂತದೇಹಾಥ ಚ ವೈಷ್ಣವವ್ರತಾನ್ಮತ್ತಃ
ಸಮಾಪ್ನೋತು ಸುತಂ ವರಿಷ್ಠಮ್ ।
ಇತೀರಿತೇ ರಾಷ್ಟ್ರಮುಪೈತಿ ನಾಶಮಿತಿ
ಬ್ರುವಂತೀಂ ಪುನರಾಹ ವಾಕ್ಯಮ್ ॥೧೨೯॥

'ವಿಚಿತ್ರವೀರ್ಯನ ಮಡದಿ ವೈಷ್ಣವ ವ್ರತದಿಂದ ಶರೀರ ಪವಿತ್ರವಾದ ಬಳಿಕ ನನ್ನಿಂದ ಉತ್ತಮ ಪುತ್ರನನ್ನು ಪಡೆಯಲಿ'. ಹೀಗೆ ವೇದವ್ಯಾಸರು ಹೇಳಿದಾಗ, ಸತ್ಯವತಿ 'ಅಷ್ಟರೊಳಗೆ ರಕ್ಷಕರಿಲ್ಲದೆ ರಾಷ್ಟ್ರನಾಶವಾಗುವುದು' ಎಂದಳು. ಆಗ ವೇದವ್ಯಾಸರು ಹೇಳಿದರು.

ಸೌಮ್ಯಸ್ವರೂಪೋऽಪ್ಯತಿಭೀಷಣಂ ಮೃಷಾ
ತಚ್ಚಕ್ಷುಷೋ ರೂಪಮಹಂ ಪ್ರದರ್ಶಯೇ ।
ಸಹೇತ ಸಾ ತದ್ ಯದಿ ಪುತ್ರಕೋऽಸ್ಯಾ
ಭವೇದ್ ಗುಣಾಢ್ಯೋ ಬಲವೀರ್ಯಯುಕ್ತಃ ॥೧೩೦॥

'ನಾನು ಸೌಮ್ಯಸ್ವರೂಪನಾದರೂ ಅತ್ಯಂತ ಭಯಂಕರ ರೂಪವನ್ನು ಸುಮ್ಮನೆ ಅವಳ ಕಣ್ಣಿಗೆ ತೋರುತ್ತೇನೆ. ಅದನ್ನು ಅವಳು ಸಹಿಸಿಕೊಳ್ಳುವುದಾದರೆ ಅವಳಿಗೆ ಬಲವೀರ್ಯ ಯುಕ್ತನಾದ ಗುಣಾಢ್ಯನಾದ ಪುತ್ರ ಜನಿಸುತ್ತಾನೆ'.

ಇತೀರಿತೇऽಸ್ತಿ ತ್ವುದಿತಸ್ತಯಾಗಮತ್
ಕೃಷ್ಣೋऽಂಬಿಕಾಂ ಸಾ ತು ಧಿಯಾ ನ್ಯಮೀಲಯತ್ ।
ಅಭೂಚ್ಚ ತಸ್ಯಾಂ ಧೃತರಾಷ್ಟ್ರನಾಮಕೋ
ಗಂಧರ್ವರಾಟ್ ಪವನಾವೇಶಯುಕ್ತಃ ॥೧೩೧॥

ಹೀಗೆ ಹೇಳಿದಾಗ ಸತ್ಯವತಿ ಆಗಲಿ ಎಂದಳು. ವ್ಯಾಸರು ಅಂಬಿಕೆಯ ಬಳಿಗೆ ಬಂದರು. ಅವಳು ಭಯದಿಂದ ಕಣ್ಣುಮುಚ್ಚಿದಳು. ಅವಳಲ್ಲಿ ಗಂಧರ್ವ ರಾಜನೊಬ್ಬ ವಾಯ್ವಾವೇಶಯುಕ್ತನಾಗಿ ಧೃತರಾಷ್ಟ್ರನೆಂಬ ಹೆಸರಿಂದ ಜನಿಸಿದ.

ಸ ಮಾರುತಾವೇಷಬಲಾದ್ ಬಲಾಧಿಕೋ
ಬಭೂವ ರಾಜಾ ಧೃತರಾಷ್ಟ್ರನಾಮಾ ।
ಅದಾದ್ ವರಂ ಚಾಸ್ಯ ಬಲಾಧಿಕತ್ವಂ
ಕೃಷ್ಣೋऽಂಧ ಆಸೀತ್ ಸ ತು ಮಾತೃದೋಷತಃ ॥೧೩೨॥

ಆ ಧೃತರಾಷ್ಟ್ರನಾಮಕನಾದ ರಾಜ ವಾಯ್ವಾವೇಶ ಬಲದಿಂದ ಬಲದಲ್ಲಿ ಶ್ರೇಷ್ಠನಾದ. ಅವನಿಗೆ ಅಧಿಕ ಬಲವಿತ್ತರು ವ್ಯಾಸರು. ಆದರೆ ತಾಯಿಯ ದೋಷದಿಂದ ಅವನು ಹುಟ್ಟುವಾಗಲೆ ಅಂಧನಾಗಿದ್ದ.

ಜ್ಞಾತ್ವಾ ತಮಂಧಂ ಪುನರೇವ ಕೃಷ್ಣಂ
ಮಾತಾಬ್ರವೀಜ್ಜನಯಾನ್ಯಂ ಗುಣಾಢ್ಯಮ್ ।
ಅಂಬಾಲಿಕಾಯಾಮಿತಿ ತತ್ ತಥಾಕರೋತ್
ಭಯಾತ್ತು ಸಾ ಪಾಂಡುರಭೂನ್ನೃಪಾದ್ಯಕ್ ॥೧೩೩॥

ಧೃತರಾಷ್ಟ್ರ ಕುರುಡನಾಗಿ ಜನಿಸಿದುದನ್ನು ತಿಳಿದು ತಾಯಿ ಸತ್ಯವತಿ ವ್ಯಾಸರಿಗೆ ಹೇಳಿದಳು, 'ಅಂಬಾಲಿಕೆಯಲ್ಲಿಯೂ ಇನ್ನೊಬ್ಬ ಗುಣಶಾಲಿಯಾದ ಮಗನನ್ನು ಹುಟ್ಟಿಸು' ಎಂದು. ವ್ಯಾಸರು ಹಾಗೇ ಮಾಡಿದರು. ಆದರೆ ಅವರು ಸುಮ್ಮನೆ ತೋರಿದ ಭಯಂಕರ ರೂಪವನ್ನು ನೋಡುತ್ತ ಅಂಬಾಲಿಕೆ ಭಯದಿಂದ ಪಾಂಡುವರ್ಣ ತಳೆದಳು.

ಪರಾವಹೋ ನಾಮ ಮರುತ್ತತೋಽಭವತ್
ವರ್ಣೇನ ಪಾಂಡುಃ ಸ ಹಿ ನಾಮತಶ್ಚ ।
ಸ ಚಾಸ ವೀರ್ಯಾಧಿಕ ಏವ ವಾಯೋರಾವೇಶತಃ
ಸರ್ವ ಶಸ್ತ್ರಾಸ್ತ್ರವೇತ್ತಾ ॥೧೩೪॥

ಪರಾವಹನೆಂಬ ಮರುತ್ತು ಪಾಂಡುವರ್ಣದವನಾಗಿ 'ಪಾಂಡು' ಎಂಬ ಹೆಸರಿನಿಂದಲೆ ಜನಿಸಿದ. ವಾಯುವಿನ ಆವೇಶದಿಂದ ಬಲದಲ್ಲಿ ಶ್ರೇಷ್ಠನೆನಿಸಿದ. ಶಸ್ತ್ರಾಸ್ತ್ರ ನಿಪುಣನೆನಿಸಿದ.

ತಸ್ಮೈ ತಥಾ ಬಲವೀರ್ಯಾಧಿಕತ್ವವರಂ
ಪ್ರಾದಾತ್ ಕೃಷ್ಣ ಏವಾಥ ಪಾಂಡುಮ್ ।
ವಿಜ್ಞಾಯ ತಂ ಪ್ರಾಹ ಪುನಶ್ಚ ಮಾತಾ
ನಿರ್ದೋಷಮನ್ಯಂ ಜನಯೋತ್ತಮಂ ಸುತಮ್ ॥೧೩೫॥

ಪಾಂಡುವಿಗೂ ಬಲವೀರ್ಯಗಳಲ್ಲಿ ಶ್ರೇಷ್ಠನಾಗೆಂದು ವ್ಯಾಸರು ವರವಿತ್ತರು. ಬಳಿಕ ಪಾಂಡು ಪಾಂಡುವರ್ಣದವನಾದನೆಂದು ತಿಳಿದು ಸತ್ಯವತಿ ಪುನಃ ನಿರ್ದುಷ್ಟನಾದ ಉತ್ತಮನಾದ ಇನ್ನೊಬ್ಬ ಮಗನನ್ನು ಹುಟ್ಟಿಸೆಂದು ವ್ಯಾಸರಲ್ಲಿ ಹೇಳಿದಳು.

ಉಕ್ತೇತಿ ಕೃಷ್ಣಂ ಪುನರೇವ ಚ ಸ್ನುಷಾಮಾಹ
ತ್ವಯಾಕ್ಷ್ಣೋರ್ಹಿ ನಿಮೀಲನಂ ಪುರಾ ।
ಕೃತಂ ತತಸ್ತೇ ಸುತ ಆಸ ಚಾಂಧಃ ತತಃ
ಪುನಃ ಕೃಷ್ಣಮುಪಾಸ್ವ ಭಕ್ತಿತಃ ॥೧೩೬॥

ವ್ಯಾಸರಲ್ಲಿ ಹೀಗೆ ಹೇಳಿ ಸತ್ಯವತಿ ಪುನಃ ಸೊಸೆಯ ಬಳಿ ಹೇಳಿದಳು, 'ನೀನು ಹಿಂದೆ ಕಣ್ಣುಮುಚ್ಚಿಕೊಂಡೆ. ಅದರಿಂದ ನಿನಗೆ ಕುರುಡನಾದ ಮಗ ಹುಟ್ಟಿದ. ಅದರಿಂದ ಪುನಃ ವ್ಯಾಸರನ್ನು ಭಕ್ತಿಯಿಂದ ಆರಾಧಿಸು' ಎಂದು.

ಇತೀರಿತಾಪ್ಯಸ್ಯ ಹಿ ಮಾಯಯಾ ಸಾ
ಭೀತಾ ಭುಜಿಷ್ಯಾಂ ಕುಮತಿರ್ನ್ಯಯೋಜಯತ್ ।
ಸಾ ತಂ ಪರಾನಂದತನುಂ ಗುಣಾರ್ಣವಂ
ಸುಪ್ರಾಪ್ಯ ಭಕ್ತ್ಯಾ ಪರಯೈವ ರೇಮೇ ॥೧೩೭॥

ಸತ್ಯವತಿ ಹೀಗೆ ಹೇಳಿದರೂ ವೇದವ್ಯಾಸರ ಇಚ್ಛಾಬಲದಿಂದ ಅಂಬಿಕೆ ಭೀತಳಾಗಿ ದುರ್ಬುದ್ಧಿಯಿಂದ ದಾಸಿಯನ್ನು ಕಳಿಸಿಕೊಟ್ಟಳು. ದಾಸಿ ಗುಣಸಮುದ್ರನಾದ ಉತ್ಕೃಷ್ಟ ಆನಂದ ಶರೀರಿಯಾದ ವ್ಯಾಸರನ್ನು ಹೊಂದಿ ಪರಮಭಕ್ತಿಯಿಂದ ರಮಿಸಿದಳು.

ತಸ್ಯಾಂ ಸ ದೇವೋಽಜನಿ ಧರ್ಮರಾಜೋ
ಮಾಂಡವ್ಯಶಾಪಾದ್ಯ ಉವಾಹ ಶೂದ್ರತಾಮ್ ।
ವಸಿಷ್ಠಸಾಮ್ಯಂ ಸಮಭೀಪ್ಸಮಾನಂ
ಪ್ರಚ್ಯಾವಯನ್ನಿಚ್ಛಯಾ ಶಾಪಮಾಪ ॥೧೩೮॥

ದಾಸಿಯಲ್ಲಿ ಯಮದೇವ ಅವತರಿಸಿದ. ಆ ಮೂಲಕ ಅವನು ಮಾಂಡವ್ಯ ಶಾಪ ಪ್ರಯುಕ್ತವಾದ ಶೂದ್ರತ್ವವನ್ನು ಹೊಂದಿದ್ದ. ವಸಿಷ್ಠ ಸಾಮ್ಯವನ್ನು ಬಯಸಿ ತಪಸ್ಸು ಮಾಡುತ್ತಿದ್ದ ಮಾಂಡವ್ಯನನ್ನು ತಪಸ್ಸಿನಿಂದ ಚ್ಯುತಿಗೊಳಿಸುವುದಕ್ಕಾಗಿ ಸ್ವೇಚ್ಛೆಯಿಂದಲೆ ಅವನು ಆ ಶಾಪವನ್ನು ಪಡೆದಿದ್ದ.

★ ★ ★ ★

ನೂರ ಏಳನೆಯ ಅಧ್ಯಾಯ

(ವ್ಯಾಸರಿಂದ ಧೃತರಾಷ್ಟ್ರ, ಪಾಂಡು ಮತ್ತು ವಿದುರರ ಜನನ.)

ವೈಶಂಪಾಯನಃ

ತತಃ ಸತ್ಯವತೀ ಹೃಷ್ಟಾ ಸ್ನುಷಾಂ ಸ್ನಾತಾಮೃತೌ ತದಾ ।
ಸಂವೇಶಯಂತೀ ಶಯನೇ ಶನೈರ್ವಚನಮಬ್ರವೀತ್ ॥೧॥

ಅನಂತರ ಸತ್ಯವತಿಯು ಸಂತೋಷಗೊಂಡು ಋತುಸ್ನಾತಳಾಗಿದ್ದ ತನ್ನ ಸೊಸೆಯನ್ನು ಹಾಸಿಗೆಯಲ್ಲಿ ಮಲಗಿಸುತ್ತಾ ಮೆಲ್ಲನೆ ಮಾತನಾಡಿದಳು.

ಕೌಸಲ್ಯೇ ದೇವರೋ ದೇವಿ ಸಮೇತ್ಯಾನುಪ್ರವೇಕ್ಷ್ಯತಿ ।
ಅಪ್ರಮತ್ತಾऽಭಿವೀಕ್ಷೇಥಾ ನಿಶಾಯಾಮಾಗಮಿಷ್ಯತಿ ॥೨॥

ಕೌಸಲ್ಯೇ, ನಿನ್ನ ಭಾವನು ಈ ದಿನ ಬಂದು ಇಲ್ಲಿ ಪ್ರವೇಶಿಸುವನು. ಎಚ್ಚರಿಕೆಯಿಂದ ಅವನ ನಿರೀಕ್ಷಣೆಯನ್ನು ಮಾಡು. ಈ ರಾತ್ರಿ ಅವನು ಆಗಮಿಸುವನು.

ಶ್ವಶ್ರೂಸ್ತು ವಚನಂ ಶ್ರುತ್ವಾ ಶಯಾನಾ ಶಯನೇ ಶುಭೇ ।
ಸಾऽಚಿಂತಯತ್ ತದಾ ಭೀಷ್ಮಮನ್ಯಾಂಶ್ಚ ಕುರುಸತ್ತಮಾನ್ ॥೩॥

ಹಾಸಿಗೆಯಲ್ಲಿ ಮಲಗಿದ ಶುಭಳಾದ ಅವಳು ಅತ್ತೆಯ ಮಾತನ್ನು ಕೇಳಿ ಭೀಷ್ಮರನ್ನೂ ಮತ್ತು ಉಳಿದ ಕುರುಶ್ರೇಷ್ಠರನ್ನೂ ಚಿಂತಿಸಿದಳು.

ತತಃ ಸುಪ್ತಜನಪ್ರಾಯೇ ವ್ಯಾಸಃ ಸ ಭಗವಾನೃಷಿಃ ।
ದೀಪ್ಯಮಾನೇಷು ದೀಪೇಷು ಶರಣಂ ಪ್ರವಿವೇಶ ತತ್ ॥೪॥

ಅನಂತರ ಎಲ್ಲ ಜನರೂ ನಿದ್ರಾವಶರಾಗುತ್ತಿರಲು ಎಲ್ಲಾ ಕಡೆಗಳಲ್ಲಿಯೂ ದೀಪಗಳು ಬೆಳಗುತ್ತಿರಲು ಋಷಿರೂಪದಲ್ಲಿದ್ದ ಭಗವಾನ್ ವೇದವ್ಯಾಸರು ಮನೆಗೆ ಬಂದರು.

ತತೋऽಂಬಿಕಾಯಾಂ ಪ್ರಥಮಂ ನಿಯುಕ್ತಃ ಸತ್ಯವಾನ್ ಋಷಿಃ ।
ಜಗಾಮ ತಸ್ಯಾಃ ಶಯನಂ ವಿಪುಲೇ ತಪಸಿ ಸ್ಥಿತಃ ॥೫॥

ಆಗ ಅಂಬಿಕೆಯಲ್ಲಿ ಮೊದಲು ನಿಯುಕ್ತರಾದ ವಿಪುಲವಾದ ತಪಸ್ಸಿನಲ್ಲಿ ನಿಷ್ಠರಾದ ಸತ್ಯವಂತರಾದ ಅವರು ಅಂಬಿಕೆಯ ಶಯನಗೃಹಕ್ಕೆ ಹೋದರು.

ತಂ ಸಮೀಕ್ಷ್ಯ ತು ಕೌಸಲ್ಯಾ ದುಷ್ಪ್ರೇಕ್ಷ್ಯಮತಥೋಚಿತಮ್ ।
ವಿರೂಪಮಿತಿ ವಿತ್ರಸ್ತಾ ಸಂಕುಚ್ಯಾಸೀನ್ನಿಮೀಲಿತಾ ॥೬॥

ಕೌಸಲ್ಯೆಯು (ಕಾಶೀರಾಜಕುಮಾರಿಯು) ಎಂದೂ ಹಾಗಿಲ್ಲದಿರುವ ಅವರನ್ನು ನೋಡಲು ಅಸಾಧ್ಯವಾದ ರೂಪದಲ್ಲಿ ನೋಡಿ ವಿರೂಪನೆಂದು ಭಾವಿಸಿ ಹೆದರಿ ಶರೀರವನ್ನು ಮುದುಡಿಕೊಂಡು ಕಣ್ಣುಗಳನ್ನು ಮುಚ್ಚಿದಳು.

ವಿರೂಪೋ ಹಿ ಜಟೀ ಚಾಪಿ ದುರ್ವರ್ಣಃ ಪುರುಷಃ ಕೃಶಃ ।
ಸುಗಂಧೇತರಗಂಧಶ್ಚ ಸರ್ವಥಾ ದುಷ್ಪ್ರಧರ್ಷಣಃ ॥೭॥

ಅವರು ವಿರೂಪರು, ಜಟೆಗಳನ್ನು ಧರಿಸಿದ್ದಾರೆ. ದುರ್ವರ್ಣದಿಂದ ಕೂಡಿ ಕೃಶರೂ ಮತ್ತು ಒರಟರೂ ಆಗಿದ್ದಾರೆ. ದುರ್ಗಂಧವು ಬೇರೆ ಬರುತ್ತಿದೆ. ಏನಾದರೂ ಅವರನ್ನು ಪ್ರಧರ್ಷಣ (ಅವಮಾನ) ಮಾಡಲು ಸಾಧ್ಯವಿಲ್ಲ (ಎಂದು ಯೋಚಿಸಿದಳು).

ತಸ್ಯ ಕೃಷ್ಣಸ್ಯ ಕಪಿಲಾಂ ಜಟಾಂ ದೀಪ್ತೇ ಚ ಲೋಚನೇ ।
ಕದ್ರೂಣಿ ಚಾಸ್ಯ ಶ್ಮಶ್ರೂಣಿ ದೃಷ್ಟ್ವಾ ದೇವೀ ನ್ಯಮೀಲಯತ್ ॥೮೪॥

ಆ ವೇಳೆಯಲ್ಲಿ ವ್ಯಾಸರ ಕಪಿಲ ವರ್ಣದ ಜಟೆಗಳನ್ನು ಉರಿಯುತ್ತಿರುವ ಕಣ್ಣುಗಳನ್ನು, ಕೆಂಪಾದ ಮೀಸೆಗಳನ್ನು ನೋಡಿ ಅವಳು ಕಣ್ಣುಗಳನ್ನು ಮುಚ್ಚಿಕೊಂಡಳು.

ಸಂಬಭೂವ ತಯಾ ರಾತ್ರೌ ಮಾತುಃ ಪ್ರಿಯಚಿಕೀರ್ಷಯಾ ।
ಭಯಾತ್ ಕಾಶೀಸುತಾ ತಂ ತು ನಾಶಕ್ನೋದಭಿವೀಕ್ಷಿತುಮ್ ॥೯॥

ತಾಯಿಗೆ ಹಿತವನ್ನು ಉಂಟು ಮಾಡಲು ವ್ಯಾಸರು ರಾತ್ರಿಯಲ್ಲಿ ಅವಳ ಸಮಾಗಮವನ್ನು ಮಾಡಿದರು. ಭಯದಿಂದ ಕೂಡಿದ್ದ ಕಾಶೀರಾಜಕುಮಾರಿಗೆ ಅವರನ್ನು ನೋಡಲು ಸಾಧ್ಯವಾಗಲಿಲ್ಲ.

ತತೋ ನಿಷ್ಕ್ರಾಂತಮಾಸಾದ್ಯ ತನ್ಮಾತಾ ಪ್ರತ್ಯಭಾಷತ ।
ಅಪ್ಯತ್ರ ಗುಣವಾಂಸ್ತಾತ ರಾಜಪುತ್ರೋ ಭವಿಷ್ಯತಿ ॥೧೦॥

ಅನಂತರ ಹೊರಗೆ ಬಂದ ಅವರನ್ನು ಕುರಿತು ತಾಯಿಯಾದ ಸತ್ಯವತಿಯು ಇವಳಲ್ಲಿ ಗುಣವಂತನಾದ ರಾಜಕುಮಾರನು ಜನಿಸುವನೇ ಎಂದು ಕೇಳಿದಳು.

ನಿಶಮ್ಯ ವಚನಂ ಮಾತುರ್ವ್ಯಾಸಃ ಪರಮಧರ್ಮವಿತ್ ।
ಪ್ರೋವಾಚಾತೀಂದ್ರಿಯಜ್ಞಾನೋ ವಿಧಿನಾ ಸಂಪ್ರಚೋದಿತಃ ॥೧೧॥

ತಾಯಿಯ ಮಾತನ್ನು ಕೇಳಿ ಪರಮಧರ್ಮಜ್ಞರೂ ಮತ್ತು ಅತೀಂದ್ರಿಯಜ್ಞಾನಿಗಳೂ ಆದ ಅವರು ವಿಧಿಯಿಂದ ಪ್ರಚೋದಿತರಾಗಿ ಮಾತನಾಡಿದರು.

ನಾಗಾಯುತಸಮಪ್ರಾಣೋ ವಿದ್ವಾನ್ ರಾಜರ್ಷಿಸತ್ತಮಃ ।
ಮಹಾಭಾಗೋ ಮಹಾವೀರ್ಯೋ ಮಹಾಬುದ್ಧಿರ್ಭವಿಷ್ಯತಿ ॥೧೨॥

ಹತ್ತು ಸಾವಿರ ಆನೆಗಳ ಬಲವುಳ್ಳವನೂ ಮಹಾನುಭಾವನೂ, ಮಹಾವೀರ್ಯನೂ, ಮಹಾಬುದ್ಧಿಯೂ, ವಿದ್ವಾಂಸನೂ ಆದ ರಾಜರ್ಷಿಶ್ರೇಷ್ಠನು ಜನಿಸುವನು.

ತಸ್ಯ ಚಾಪಿ ಶತಂ ಪುತ್ರಾ ಭವಿಷ್ಯಂತಿ ಮಹಾಬಲಾಃ ।
ಕಿಂತು ಮಾತುಃ ಸ ವೈಗುಣ್ಯಾದಂಧ ಏವ ಭವಿಷ್ಯತಿ ॥೧೩॥

ಅವನಿಗೂ ಸಹಾ ಮಹಾಬಲಿಷ್ಠರಾದ ನೂರು ಪುತ್ರರು ಜನಿಸುವರು. ಆದರೆ ತಾಯಿಯ ದೋಷದಿಂದ ಅವನು ಅಂಧನಾಗಿ ಜನಿಸುವನು (ಎಂದು ಹೇಳಿದರು).

ನಿಶಮ್ಯ ವಚನಂ ತಸ್ಯ ತನ್ಮಾತಾ ಪುನರಬ್ರವೀತ್ ।
ಅಲಬ್ಧಲಾಭಃ ಪುತ್ರೋಽಯಂ ಯದ್ಯಂಧೋ ವೈ ಭವಿಷ್ಯತಿ ॥೧೪॥

ಅವರ ಮಾತನ್ನು ಕೇಳಿ ತಾಯಿಯು ಪುನಃ ಅವರನ್ನು ಕುರಿತು ಅವನು ಅಂಧನಾದರೆ, ಈ ಪುತ್ರನನ್ನು ಪಡೆದರೂ ಪಡೆದಂತೆ ಆಗುವುದಿಲ್ಲ ಎಂದು ಹೇಳಿದಳು.

ಅಸ್ಯ ವಂಶಸ್ಯ ಗೋಪ್ತಾರಂ ಸತಾಂ ಶೋಕವಿನಾಶನಮ್ ।
ತಸ್ಮಾದವರಜಂ ಪುತ್ರಂ ಜನಯಾನ್ಯಂ ನರಾಧಿಪಮ್ ॥೧೫॥

ಈ ವಂಶವನ್ನು ರಕ್ಷಿಸುವ ಸಜ್ಜನರ ಶೋಕವನ್ನು ಪರಿಹರಿಸುವ ಅವನ ತಮ್ಮನಾದ ರಾಜಕುಮಾರನನ್ನು ಪಡೆ.

ಭ್ರಾತುರ್ಭಾರ್ಯಾಽಪರಾ ಚೇಯಂ ರೂಪಯೌವನಶಾಲಿನೀ ।
ಅಸ್ಯಾಮುತ್ಪಾದಯಾಪತ್ಯಂ ಮನ್ನಿಯೋಗಾದ್ ಗುಣಾಧಿಕಮ್ ॥೧೬॥

ದ್ವಿತೀಯಂ ಕುರುವಂಶಸ್ಯ ರಾಜಾನಂ ದಾತುಮರ್ಹಸಿ ।
ಸ ತಥೇತಿ ಪ್ರತಿಜ್ಞಾಯ ನಿಶ್ಚಕ್ರಾಮ ಮಹಾತಪಾಃ ॥೧೭॥

ನಿನ್ನ ತಮ್ಮನ ಹೆಂಡತಿಯಾದ ಅಂಬಾಲಿಕೆ ಇನ್ನೊಬ್ಬಳಿದ್ದಾಳೆ. ಅವಳೂ ರೂಪಯೌವನದಿಂದ ಕೂಡಿದವಳು. ನನ್ನ ಆದೇಶದಂತೆ ಅವಳಲ್ಲಿ ಗುಣಾಧಿಕನಾದ ಪುತ್ರನನ್ನು ಪಡೆ. ನೀನು ಕುರುವಂಶಕ್ಕೆ ಇನ್ನೊಬ್ಬ ರಾಜನನ್ನು ಕೊಡಬೇಕು (ಎಂದು ತಾಯಿಯು ಹೇಳಿದಳು).ಮಹಾತಪಸ್ವಿಗಳಾದ ಅವರು ಹಾಗೆಯೇ ಆಗಲಿ ಎಂದು ಹೇಳಿ ಹೊರಟುಹೋದರು.

ವೈಶಂಪಾಯನಃ

ಅಂಬಾಲಿಕಾಂ ಸಮಾದಾಯ ತಸ್ಯಾಂ ಸತ್ಯವತೀ ಸುತಮ್ ।
ಭೂಯೋ ನಿಯೋಜಯಾಮಾಸ ಸಂತಾನಾಯ ಕುಲಸ್ಯ ವೈ ॥೧೮॥

ಸತ್ಯವತಿಯು ಅಂಬಾಲಿಕೆಯನ್ನು ಕರೆದುಕೊಂಡು ಬಂದು ಪುನಃ ಕುಲದ ಸಂತಾನದ ಸಲುವಾಗಿ ಅವಳನ್ನು ನಿಯೋಜಿಸಿದಳು.

ವಿಷಣ್ಣಾನ್ತಂಬಾಲಿಕಾ ಸಾಧ್ವೀ ನಿಷಣ್ಣಾ ಶಯನೋತ್ತಮೇ ।
ಕೋ ನ್ವೇಷ್ಯತೀತಿ ಧ್ಯಾಯಂತೀ ನಿಯತಾ ಸಂಪ್ರತೀಕ್ಷತೇ ॥೧೯॥

ಸಾಧ್ವಿಯಾದ ಅಂಬಾಲಿಕೆಯು ವಿಷಾದಗೊಂಡು ಶ್ರೇಷ್ಠವಾದ ಹಾಸಿಗೆಯಲ್ಲಿ ಕುಳಿತು ಯಾರು ಬರಬಹುದೆಂದು ಯೋಚಿಸುತ್ತಾ ನಿರೀಕ್ಷಿಸಿದಳು.

ತತಸ್ತೇನೈವ ವಿಧಿನಾ ಮಹರ್ಷಿಃ ಸಮಪದ್ಯತ ।
ಅಂಬಾಲಿಕಾಮಥಾಭ್ಯಾಗಾದ್ ಋಷಿಂ ದೃಷ್ಟ್ವಾ ಚ ಸಾऽಪಿ ತಮ್ ।
ವಿಷಣ್ಣಾ ಪಾಂಡುಸಂಕಾಶಾ ಸಮಪದ್ಯತ ಭಾರತ ॥೨೦॥

ಆಗ ಮೊದಲು ಬಂದ ರೀತಿಯಲ್ಲಿಯೇ ಮಹರ್ಷಿಗಳಾದ ವ್ಯಾಸರು ಅಂಬಾಲಿಕೆಯನ್ನು ಸಮೀಪಿಸಿದರು. ಎಲ್ಲೆ ಭಾರತನೇ ಅವಳಾದರೂ ಅವರನ್ನು ನೋಡಿ ವಿಷಣ್ಣಳಾಗಿ ಪಾಂಡುವರ್ಣವನ್ನು ಹೊಂದಿದಳು.

ತಾಂ ಬಾಲಾಂ ಪಾಂಡುಸಂಕಾಶಾಂ ವಿಷಣ್ಣಾಂ ಪ್ರೇಕ್ಷ್ಯ ಪಾರ್ಥಿವ ।
ವ್ಯಾಸಃ ಸತ್ಯವತೀಪುತ್ರ ಇದಂ ವಚನಮಬ್ರವೀತ್ ॥೨೧॥

ರಾಜನೇ, ಪಾಂಡುವರ್ಣವನ್ನು ಹೊಂದಿದ್ದ (ಬಿಳುಚಿಕೊಂಡಿದ್ದ) ವಿಷಾದದಿಂದ ಕೂಡಿದ ಆ ಬಾಲೆಯನ್ನು ನೋಡಿ ಸತ್ಯವತಿಯ ಪುತ್ರರಾದ ವ್ಯಾಸರು ಈ ಮಾತನ್ನು ಆಡಿದರು.

ಯಸ್ಮಾತ್ ಪಾಂಡುತ್ವಮಾಪನ್ನಾ ವಿರೂಪಂ ಪ್ರೇಕ್ಷ್ಯ ಮಾಮಸಿ ।
ತಸ್ಮಾದೇವ ಸುತಸ್ತುಭ್ಯಂ ಪಾಂಡುಸ್ತ್ವೇವ ಭವಿಷ್ಯತಿ ।
ನಾಮ ಚಾಸ್ಯ ತದೇವೇಹ ಭವಿಷ್ಯತಿ ಶುಭಾನನೇ ॥೨೨॥

ನೀನು ವಿರೂಪನಾದ ನನ್ನನ್ನು ನೋಡಿ ಪಾಂಡುವರ್ಣವನ್ನು ಹೊಂಡಿದ ಕಾರಣ ನಿನಗೆ ಅದೇ ವರ್ಣದಿಂದ ಕೂಡಿದ ಪುತ್ರನೇ ಜನಿಸುವನು. ಶುಭಾನನೆಯೇ ಅವನಿಗೆ ಪಾಂಡು ಎಂದೇ ಹೆಸರಾಗುವುದು.

ವೈಶಂಪಾಯನಃ

ಇತ್ಯುಕ್ತ್ವಾ ತಾಂ ನಿರಾಕ್ರಾಮದ್‌ಭಗವಾನೃಷಿಸತ್ತಮಃ ।
ತಮುವಾಚ ತತೋಮಾತಾ ಅಪ್ಯತ್ರ ಭವಿತಾ ಶುಭಃ ।
ಕುಮಾರೋ ಬ್ರೂಹಿ ಮೇ ಪುತ್ರ ಋಷಿಸ್ತಾಂ ಪ್ರತ್ಯುವಾಚ ಹ ॥೨೩॥

ಅವಳಿಗೆ ಹೀಗೆ ಹೇಳಿ ಋಷಿಶ್ರೇಷ್ಠರು ಹೊರಟರು. ತಾಯಿಯು ಅವರನ್ನು ಸಮೀಪಿಸಿ ಈಗಲಾದರೂ ಒಳ್ಳೆಯ ಪುತ್ರನಾಗುತ್ತಾನೆಯೇ ಹೇಳು ಎಂದು ಕೇಳಿದಳು. ವ್ಯಾಸರು ಅವಳಿಗೆ ಉತ್ತರವನ್ನು ಕೊಟ್ಟರು.

ಭವಿಷ್ಯತಿ ಸುವಿಕ್ರಾಂತಃ ಕುಮಾರೋ ದಿಕ್ಷು ವಿಶ್ರುತಃ ।
ಪಾಂಡುತ್ವಂ ವರ್ಣತಸ್ತಸ್ಯ ಮಾತೃದೋಷಾದ್ ಭವಿಷ್ಯತಿ ॥೨೪॥

ಅಸ್ಯ ಪುತ್ರಾ ಮಹೇಷ್ವಾಸಾ ಭವಿಷ್ಯಂತೀಹ ಪಂಚ ವೈ ।
ಇತ್ಯುಕ್ತ್ವಾ ಮಾತರಂ ತತ್ರ ಸೋಽಭಿವಾದ್ಯ ಜಗಾಮ ಹ ॥೨೫॥

ವಿಕ್ರಮಶಾಲಿಯಾದ ಎಲ್ಲಾ ದಿಕ್ಕುಗಳಲ್ಲೂ ಪ್ರಖ್ಯಾತನಾದ ಕುಮಾರನು ಜನಿಸುವನು. ಆದರೆ ಮಾತೃದೋಷದಿಂದ ಅವನು ಪಾಂಡುವಾಗುವನು. ಅವನಿಗೆ ವೀರರಾದ ಐದು ಮಕ್ಕಳು ಜನಿಸುವರು. ಹೀಗೆ ಹೇಳಿ ತಾಯಿಗೆ ನಮಸ್ಕರಿಸಿ ಅವರು ಹೊರಟುಹೋದರು.

ಮುನೌ ಯಾತೇಽಂಬಿಕಾ ಪುತ್ರಂ ಮಹಾಭಾಗಮಸೂಯತ ।
ಧೃತರಾಷ್ಟ್ರಂ ಮಹಾಪ್ರಾಜ್ಞಂ ಪ್ರಜ್ಞಾಚಕ್ಷುಷಮೀಶ್ವರಮ್ ॥೨೬॥

ವ್ಯಾಸರು ಹೊರಟುಹೋದ ಮೇಲೆ ಅಂಬಿಕೆಯು, ಮಹಾನುಭಾವನೂ, ಮಹಾಪ್ರಾಜ್ಞನೂ, ಪ್ರಜ್ಞಾಚಕ್ಷುಸ್ಸುಳ್ಳವನೂ, ಪ್ರಭುವೂ ಆದ ಧೃತರಾಷ್ಟ್ರನನ್ನು ಪಡೆದಳು.

ಅನುಜಾಽಂಬಾಲಿಕಾ ತತ್ರ ಪುತ್ರಂ ಕಾಲೇ ವ್ಯಜಾಯತ ।
ಪಾಂಡುಂ ಲಕ್ಷಣಸಂಪನ್ನಂ ದೀಪ್ಯಮಾನಂ ಶ್ರಿಯಾ ವೃತಮ್ ॥೨೭॥

ತಂಗಿಯಾದ ಅಂಬಾಲಿಕೆಯು ಯೋಗ್ಯಕಾಲದಲ್ಲಿ ಲಕ್ಷಣಸಂಪನ್ನನಾದ ಕಾಂತಿಯಿಂದ ಬೆಳಗುತ್ತಿರುವ ಪಾಂಡುವನ್ನು ಪುತ್ರನನ್ನಾಗಿ ಪಡೆದಳು.

ತಯೋರ್ಜನ್ಮಕ್ರಿಯಾಃ ಸರ್ವಾ ಯಥಾವದನುಪೂರ್ವಶಃ ।
ಕಾರಯಾಮಾಸ ವೈ ಭೀಷ್ಮೋ ಬ್ರಾಹ್ಮಣೈರ್ವೇದಪಾರಗೈಃ ॥೨೮॥

ಅವರಿಬ್ಬರಿಗೂ ಮೊದಲಿನಿಂದ ನಡೆಸಬೇಕಾದ ಜಾತಕರ್ಮಾದಿ- ಕ್ರಿಯೆಗಳನ್ನು ಭೀಷ್ಮರು ವೇದಪಾರಂಗತರಾದ ಬ್ರಾಹ್ಮಣರಿಂದ ಮಾಡಿಸಿದರು.

ಅಂಧಂ ದೃಷ್ಟ್ವಾಽಂಬಿಕಾಪುತ್ರಂ ಜಾತಂ ಸತ್ಯವತೀ ಸುತಮ್ ।
ಕೌಸಲ್ಯಾರ್ಥೇ ಸಮಾಹೂಯ ಪುತ್ರಮನ್ಯಮಯಾಚತ ।
ಅಂಧೋಽಯಮನ್ಯಮಿಚ್ಛಾಮಿ ಕೌಸಲ್ಯಾತನಯಂ ಶುಭಮ್ ॥೨೯॥

ಅಂಬಿಕೆಯ ಪುತ್ರನು ಅಂಧನಾಗಿರುವುದನ್ನು ನೋಡಿ ಸತ್ಯವತಿಯು ಅಂಬಿಕೆಯ ಸಲುವಾಗಿ ಪುನಃ ವ್ಯಾಸರನ್ನು ಕರೆದು ಬೇಡಿದಳು.

ಏವಮುಕ್ತೋ ಮಹರ್ಷಿಸ್ತಾಂ ಮಾತರಂ ಪ್ರತ್ಯಭಾಷತ ।
ನಿಯತಾ ಯದಿ ಕೌಸಲ್ಯಾ ಭವಿಷ್ಯತಿ ಪುನಃ ಶುಭಾ ॥೩೦॥

ಇವನು ಕುರುಡನಾಗಿದ್ದಾನೆ. ನಾನು ಶುಭನಾದ ಇನ್ನೊಬ್ಬ ಕೌಸಲ್ಯಾಪುತ್ರನನ್ನು ಬಯಸುತ್ತೇನೆ. ಹೀಗೆ ಕೇಳಲ್ಪಟ್ಟ ವ್ಯಾಸರು ತಾಯಿಯನ್ನು ಕುರಿತು ಹೇಳಿದರು.

ಭವಿಷ್ಯತಿ ಕುಮಾರೋಽಸ್ಯಾ ಧರ್ಮಶಾಸ್ತ್ರಾರ್ಥತತ್ತ್ವವಿತ್ ॥೩೧॥

ಕೌಸಲ್ಯೆಯು (ಅಂಬಿಕೆಯು) ಪುನಃ ಶುಭಳಾಗಿದ್ದು ಯಾವ ತಪ್ಪನ್ನೂ ಮಾಡದಿದ್ದರೆ ಅವಳಿಗೆ ಧರ್ಮಶಾಸ್ತ್ರವನ್ನು, ಅರ್ಥಶಾಸ್ತ್ರವನ್ನು ತಿಳಿದ ಕುಮಾರನು ಜನಿಸುವನು ಎಂದು ಹೇಳಿದರು.

ತಾಂ ಸಮಾಧಾಯ ವೈ ಭೂಯಃ ಸ್ನುಷಾಂ ಸತ್ಯವತೀ ತದಾ ।
ಋತುಕಾಲಂ ಚ ವಿಜ್ಞಾಯ ದೇವ್ಯಾ ಸಂಚೋದಿತಾಽಂಬಿಕಾ ॥೩೨॥

ಸತ್ಯವತಿಯು ಸೊಸೆಯನ್ನು ಪುನಃ ಸಮಾಧಾನ ಮಾಡಿ ಋತುಕಾಲವನ್ನು ತಿಳಿದು ಅವಳನ್ನು ಪುನಃ ಮಗನನ್ನು ಪಡೆಯಲು ಪ್ರಚೋದಿಸಿದಳು.

ಸಾ ತು ರೂಪಂ ಚ ಗಂಧಂ ಚ ಮಹರ್ಷೇಃ ಪ್ರವಿಚಿಂತ್ಯ ತಮ್ ।
ನಾಕರೋದ್ ವಚನಂ ದೇವ್ಯಾ ಭಯಾತ್ ಸುರಸುತೋಪಮಾ ॥೩೩॥

ದೇವಕನ್ಯೆಯಂತಿದ್ದ ಅವಳಾದರೋ ಮಹರ್ಷಿಗಳ ಆ ರೂಪವನ್ನು ಮತ್ತು ಗಂಧವನ್ನು ನೆನೆದು ಭಯಗೊಂಡು ಅತ್ತೆಯ ಮಾತನ್ನು ನಡೆಸಲಿಲ್ಲ.

ತತಃ ಸ್ವೈರ್ಭೂಷಣೈರ್ದಾಸೀಂ ಭೂಷಯಿತ್ವಾऽಪ್ಸರೋಪಮಾಮ್ ।
ಪ್ರೇಷಯಾಮಾಸ ಕೃಷ್ಣಾಯ ತತಃ ಕಾಶಿಪತೇಃ ಸುತಾ ॥೩೪॥

ಆಗ ಅಪ್ಸರೆಯಂತಿದ್ದ ತನ್ನ ದಾಸಿಯನ್ನು ತನ್ನ ಒಡವೆಗಳಿಂದ ಅಲಂಕರಿಸಿ ಅಂಬಿಕೆಯು ವ್ಯಾಸರ ಬಳಿಗೆ ಕಳುಹಿಸಿದಳು.

ದಾಸೀ ಋಷಿಮನುಪ್ರಾಪ್ತಂ ಪ್ರತ್ಯುತ್ಥಾಯಾಭಿವಾದ್ಯ ಚ ।
ಸಂವಿವೇಶಾಭ್ಯನುಜ್ಞಾತಾ ಸತ್ಕೃತ್ಯೋಪಚಚಾರ ಸಾ ।
ಆಹಾರ್ಯೋಪಪ್ರದಾನೇನ ಗಾತ್ರಸಂಸ್ಪರ್ಶನೇನ ಚ ॥೩೫॥

ಕಾಮೋಪಭೋಗಸಂಯುಕ್ತೋ ಮಹರ್ಷಿರ್ವಿಸ್ಮಿತೋऽಭವತ್ ।
ತಯಾ ಸಹೋಷಿತೋ ರಾತ್ರಿಂ ಮಹರ್ಷಿಃ ಪ್ರೀಯಮಾಣಯಾ ॥೩೬॥

ಆ ದಾಸಿಯು ಋಷಿಗಳು ಬಂದ ತಕ್ಷಣ ಎದ್ದುನಿಂತು ನಮಸ್ಕಾರವನ್ನು ಮಾಡಿ ಅವರ ಅನುಮತಿಯನ್ನು ಪಡೆದು ಹಾಸಿಗೆಯಲ್ಲಿ ಮಲಗಿ ಅವರ ದೇಹವನ್ನು ಸ್ಪರ್ಶಮಾಡಿ ಒಳ್ಳೆಯ ಮಾತುಗಳನ್ನು ಆಡಿ ಅವರನ್ನು ಸತ್ಕರಿಸಿ ಉಪಚರಿಸಿದಳು. ಅವಳಿಂದ ಕಾಮಭೋಗವನ್ನು ಹೊಂದಿದ ಋಷಿಗಳು ವಿಸ್ಮಿತರಾಗಿ ಸಂತೋಷಗೊಂಡು ಅವಳ ಜೊತೆಯಲ್ಲಿ ರಾತ್ರಿಯನ್ನು ಕಳೆದರು.

ಉತ್ತಿಷ್ಠನ್ನಬ್ರವೀದೇನಾಂ ತ್ವಂ ಭುಜಿಷ್ಯಾ ಭವಿಷ್ಯಸಿ ।
ಏಷ ತೇ ಸುಭಗೇ ಗರ್ಭಃ ಶ್ರೀಮಾನುದರಮಾಗತಃ ॥೩೭॥

ಧರ್ಮಾತ್ಮಾ ವಿಶ್ರುತೋ ಲೋಕೇ ಸರ್ವಧರ್ಮವಿದಾಂ ವರಃ ।
ಇತ್ಯುಕ್ತ್ವಾ ಸ ನಿರಾಕ್ರಾಮತ್ ಕೃಷ್ಣದ್ವೈಪಾಯನಃ ಪ್ರಭುಃ ॥೩೮॥

ಹಾಸಿಗೆಯಿಂದ ಏಳುತ್ತಾ ಅವರು ಅವಳನ್ನು ಕುರಿತು ನೀನು ಇನ್ನು ಭುಜಿಷ್ಯೆಯಾಗುವಿ. (ಯಜಮಾನನಿಂದ ಪುತ್ರನನ್ನು ಪಡೆದ ದಾಸಿಯನ್ನು ಭುಜಿಷ್ಯೆಯೆಂದು ಕರೆಯುತ್ತಾರೆ) ನಿನ್ನ ಗರ್ಭದಲ್ಲಿ ಕೃಷ್ಣದ್ವೈಪಾಯನರ ಮಗನಾದ ಧರ್ಮಾತ್ಮನು ಮತ್ತು ಲೋಕದಲ್ಲಿ ಸರ್ವಧರ್ಮವನ್ನು ತಿಳಿದವನು ಎಂದು

ಪ್ರಖ್ಯಾತನೂ ಆಗುವ ಕುಮಾರನಿದ್ದಾನೆ. ಹೀಗೆ ಹೇಳಿ ಕೃಷ್ಣದ್ವೈಪಾಯನರು ಹೊರಟುಹೋದರು.

ಜಜ್ಞೇ ಸ ವಿದುರೋ ನಾಮ ಕೃಷ್ಣದ್ವೈಪಾಯನಾತ್ಮಜಃ ।
ಧೃತರಾಷ್ಟ್ರಸ್ಯ ಚ ಭ್ರಾತಾ ಪಾಂಡೋಶ್ಚ ಪೃಥಿವೀಪತೇಃ ॥೩೯॥

ಕೃಷ್ಣದ್ವೈಪಾಯನರ ಮಗನಾದ ಅವನು ವಿದುರ ಎಂಬ ಹೆಸರಿನಿಂದ ಧೃತರಾಷ್ಟ್ರ ಮತ್ತು ಪಾಂಡುರಾಜನ ತಮ್ಮನಾಗಿ ಜನಿಸಿದನು.

ಧರ್ಮೋ ವಿದುರರೂಪೇಣ ಶಾಪಾತ್ ತಸ್ಯ ಮಹಾತ್ಮನಃ ।
ಮಾಂಡವ್ಯಸ್ಯಾರ್ಥತತ್ತ್ವಜ್ಞಃ ಕಾಮಕ್ರೋಧವಿವರ್ಜಿತಃ ॥೪೦॥

ಯಮಧರ್ಮನು ಮಹಾತ್ಮರಾದ ಮಾಂಡವ್ಯರ ಶಾಪದಿಂದ ಅರ್ಥತತ್ತ್ವವನ್ನು ತಿಳಿದವನಾಗಿ ಕಾಮಕ್ರೋಧವಿವರ್ಜಿತನಾಗಿ ವಿದುರ ರೂಪದಿಂದ ಅವತಾರ ಮಾಡಿದನು.

ಕ್ಷೇತ್ರೇ ವಿಚಿತ್ರವೀರ್ಯಸ್ಯ ಕೃಷ್ಣದ್ವೈಪಾಯನಾದಪಿ ।
ಜಜ್ಞಿರೇ ದೇವಗರ್ಭಾಭಾಃ ಕುರುವಂಶವಿವರ್ಧನಾಃ ॥೪೧॥

ಹೀಗೆ ವ್ಯಾಸರಿಂದ ವಿಚಿತ್ರವೀರ್ಯನ ಕ್ಷೇತ್ರದಲ್ಲಿ ಕುರುವಂಶವರ್ಧಕರಾದ ದೇವಕುಮಾರರಂತಿದ್ದ ಮೂರು ಮಕ್ಕಳು ಜನಿಸಿದರು.

ತೇಷು ತ್ರಿಷು ಕುಮಾರೇಷು ಜಾತೇಷು ಕುರುಜಾಂಗಲಮ್ ।
ಕುರವೋऽಥ ಕುರುಕ್ಷೇತ್ರಂ ಸರ್ವಂ ಕ್ಷೇಮಮವರ್ಧತ ॥೪೨॥

ಆ ಮೂರು ಕುಮಾರರು ಜನಿಸಿದ ಮೇಲೆ ಕುರುಗಳಿಗೂ, ಕುರುಜಾಂಗಲ ಮತ್ತು ಕುರುಕ್ಷೇತ್ರಕ್ಕೂ ಎಲ್ಲ ರೀತಿಯ ಕ್ಷೇಮವೂ ಮತ್ತು ಅಭಿವೃದ್ಧಿಯೂ ಉಂಟಾಯಿತು.

ಗಂಧವತ್ಯಾಸ್ತಥೈವೋಕ್ತ್ವಾ ಧರ್ಮರೂಪಂ ಸುತಂ ಪ್ರತಿ ।
ನಾಹಮಸ್ಮಿ ಪುನರ್ಯೋಕ್ತುಂ ಶಕ್ಯೋ ಮಾತಃ ಸುತಾನ್ ಪ್ರತಿ ॥೪೩॥

ತಾಯಿಯಾದ ಯೋಜನಗಂಧಿಯನ್ನು ಕುರಿತು ಯಮನ ಅವತಾರದ ವಿಷಯವನ್ನು ತಿಳಿಸಿ, ತಾಯಿ ನೀನು ಪುನಃ ಮಕ್ಕಳನ್ನು ಪಡೆ ಎಂದು ನನಗೆ ನಿರ್ಬಂಧವನ್ನು ಮಾಡಬಾರದು ಎಂದು ಹೇಳಿದರು.

ಸ ಧರ್ಮಸ್ಯಾನೃಣೋ ಭೂತ್ವಾ ಪುನರ್ಮಾತ್ರಾ ಸಮೇತ್ಯ ಚ ।
ತಸ್ಯಾಶ್ಚ ಸರ್ವಮಾಖ್ಯಾಯ ತತ್ರೈವಾಂತರಧೀಯತ ॥೪೪॥

ಅವರು ಧರ್ಮಋಣದಿಂದ ಮುಕ್ತರಾಗಿ ಪುನಃ ತಾಯಿಯ ಸಮೀಪಕ್ಕೆ ಹೋಗಿ ಎಲ್ಲವನ್ನೂ ವಿಸ್ತಾರವಾಗಿ ತಿಳಿಸಿ ಅಲ್ಲಿಯೇ ಅದೃಶ್ಯರಾದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಸಪ್ತಾಧಿಕಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ಪಂಚಪಂಚಶೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಏಳನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೧

ಅಯೋಗ್ಯಸಂಪ್ರಾಪ್ತಿಕೃತಪ್ರಯತ್ನ-
ದೋಷಾತ್ ಸಮಾರೋಪಿತಮೇವ ಶೂಲೇ ।
ಚೋರೈರ್ಹೃತೇऽರ್ಥೇऽಪಿ ತು ಚೋರಬುದ್ಧ್ಯಾ
ಮಕ್ಷ್ವೀವಧಾದಿತ್ಯವದದ್ ಯಮಸ್ತಮ್ ॥೧೩೯॥

ಯಾರೋ ಕಳ್ಳರು ಹಣವನ್ನು ಕದ್ದಿದ್ದರು. ಆದರೆ ಮುನಿಯನ್ನು ಕಳ್ಳನೆಂದು ತಿಳಿದು ರಾಜಭಟರು ಅವನನ್ನು ಶೂಲಕ್ಕೆ ಏರಿಸಿದರು. ಇದು ವಸ್ತುತಃ ಮುನಿ ಅಯೋಗ್ಯ ಪದವೀಪ್ರಾಪ್ತಿಗಾಗಿ ತಪಸ್ಸು ಮಾಡಿದ ಅಪರಾಧದ ಫಲ ಆದರೂ ನೊಣಕ್ಕೆ ಮಾಡಿದ ಹಿಂಸೆಯ ಫಲ ಎಂದ ಯಮ.

ನಾಸತ್ಯತಾ ತಸ್ಯ ಚ ತತ್ರ ಹೇತುತಃ ಶಾಪಂ ಗೃಹೀತುಂ ಸ ತಥೈವ ಚೋಕ್ತ್ವಾ ।
ಅವಾಪ ಶೂದ್ರತ್ವಮಥಾಸ್ಯ ನಾಮ ಚಕ್ರೇ ಕೃಷ್ಣಃ ಸರ್ವವಿತ್ತ್ವಂ ತಥಾದಾತ್ ॥

ಯಮ ಹೇಳಿದ್ದೂ ಸುಳ್ಳಾಗಿರಲಿಲ್ಲ. ಏಕೆಂದರೆ ಆ ಪಾಪವೂ ಶೂಲಾರೋಪಣಕ್ಕೆ ಒಂದು ಸಣ್ಣಕಾರಣವೇ ಆಗಿತ್ತು. ಆದರೆ ಮುಖ್ಯಕಾರಣವನ್ನು ಹೇಳದೆ ಕ್ಷುದ್ರ ಕಾರಣವನ್ನು ಮಾತ್ರ ಹೇಳಿದ್ದು ಮುನಿಗೆ ಕೋಪ ಉಂಟು ಮಾಡಿ ಶಾಪ

ಹೊಂದುವುದಕ್ಕಾಗಿ. ಅದರಿಂದ ಯಮ ಹಾಗೇ ಹೇಳಿ ಶೂದ್ರತ್ವವನ್ನು ಹೊಂದಿದ. ವ್ಯಾಸರು ಅವನಿಗೆ ಸರ್ವಜ್ಞಾನವನ್ನು ಅನುಗ್ರಹಿಸಿ ಹಾಗೇ ನಾಮಕರಣವನ್ನು ಮಾಡಿದರು.

ವಿದ್ಯಾರತೇರ್ವಿದುರೋ ನಾಮ ಚಾಯಂ ಭವಿಷ್ಯತಿ ಜ್ಞಾನಬಲೋಪಪನ್ನಃ ।
ಮಹಾಧನುರ್ಬಾಹುಬಲಾಧಿಕಶ್ಚ ಸುನೀತಿಮಾನಿತ್ಯವದತ್ ಸ ಕೃಷ್ಣಃ ॥

'ತತ್ವಜ್ಞಾನದಲ್ಲಿ ಆಸಕ್ತನಾದ್ದರಿಂದ 'ವಿದುರ'ನೆನಿಸುವ ಈತ ಮುಂದೆ ಜ್ಞಾನಬಲಯುಕ್ತನೂ ಮಹಾಧನುರ್ಧರನೂ ಬಾಹುಬಲದಿಂದ ಶ್ರೇಷ್ಠನೂ ಒಳ್ಳೆಯ ನೀತಿಜ್ಞನೂ ಆಗುವನು' ಎಂದರು ವ್ಯಾಸರು.

ಜ್ಞಾತ್ವಾಸ್ಯ ಶೂದ್ರತ್ವಮಥಾಸ್ಯ ಮಾತಾ
ಪುನಶ್ಚ ಕೃಷ್ಣಂ ಪ್ರಣತಾ ಯಯಾಚೇ ।
ಅಂಬಾಲಿಕಾಯಾಂ ಜನಯಾನ್ಯಮಿತ್ಯಥೋ
ನೈಚ್ಛತ್ಸ ಕೃಷ್ಣೋಽಭವದಪ್ಯದೃಶ್ಯಃ ॥೧೪೨॥

ವಿದುರನನ್ನು ಶೂದ್ರನೆಂದು ತಿಳಿದು ಸತ್ಯವತಿ ಪುನಃ ವ್ಯಾಸರನ್ನು ನಮಿಸಿ ಅಂಬಾಲಿಕೆಯಲ್ಲಿ ಇನ್ನೊಬ್ಬ ಮಗನನ್ನು ಹುಟ್ಟಿಸೆಂದು ಬೇಡಿದಳು. ಆದರೆ ವ್ಯಾಸರು ಒಪ್ಪಲಿಲ್ಲ. ಅದೃಶ್ಯರೂ ಆದರು.

★ ★ ★ ★

ನೂರ ಎಂಟನೆಯ ಅಧ್ಯಾಯ

(ಯಮನಿಗೆ ಮಾಂಡವ್ಯರ ಶಾಪ ಮತ್ತು ವಿದುರನಾಗಿ ಅವತಾರ.)

ಜನಮೇಜಯಃ

ಕಿಂ ಕೃತಂ ಕರ್ಮ ಧರ್ಮೇಣ ಯೇನ ಶಾಪಮುಪೇಯಿವಾನ್ ।
ಕಸ್ಯ ಶಾಪಾಚ್ಚ ಧರ್ಮಸ್ತು ಶೂದ್ರಯೋನಾವಜಾಯತ ॥೧॥

ಯಮನು ಶಾಪವನ್ನು ಪಡೆಯುವಂತಹ ಯಾವ ಕಾರ್ಯವನ್ನು ಮಾಡಿದನು? ಯಾರ ಶಾಪದಿಂದ ಯಮನು ಶೂದ್ರಯೋನಿಯಲ್ಲಿ ಅವತರಿಸಿದನು?

ವೈಶಂಪಾಯನಃ

ಬಭೂವ ಬ್ರಾಹ್ಮಣಃ ಕಶ್ಚಿನ್ಮಾಂಡವ್ಯ ಇತಿ ವಿಶ್ರುತಃ ।
ಏಕಾಂತಚಾರೀ ವನ್ಯಶ್ಚ ಸತ್ಯೇ ತಪಸಿ ಚ ಧ್ರುವಃ ॥೨॥

ಮಾಂಡವ್ಯರೆಂಬ ಪ್ರಖ್ಯಾತರಾದ ಒಬ್ಬ ಬ್ರಾಹ್ಮಣರಿದ್ದರು. ಅವರು ವನದಲ್ಲಿ ವಾಸಿಸುತ್ತಿದ್ದು ಏಕಾಂತಚಾರಿಗಳಾಗಿ, ಸತ್ಯದಲ್ಲಿಯೂ ಮತ್ತು ತಪಸ್ಸಿನಲ್ಲಿಯೂ ನಿಷ್ಠರಾಗಿದ್ದರು.

ಸ ತೀರ್ಥಯಾತ್ರಾಂ ವಿಚರನ್ ಜಗಾಮ ಚ ಯದೃಚ್ಛಯಾ ।
ಸನ್ನಿಕೃಷ್ಟಾನಿ ತೀರ್ಥಾನಿ ಗ್ರಾಮಾಣಾಂ ಯಾನಿ ಕಾನಿಚಿತ್ ॥೩॥

ಅವರು ಯದೃಚ್ಛೆಯಿಂದ ತೀರ್ಥಯಾತ್ರೆ ಮಾಡುತ್ತಾ ಗ್ರಾಮಕ್ಕೆ ಹತ್ತಿರದಲ್ಲಿದ್ದ ತೀರ್ಥಗಳಿಗೆ ಹೋಗುತ್ತಿದ್ದರು.

ತದಾಶ್ರಮಪದಂ ಕೃತ್ವಾ ವಸತಿ ಸ್ಮ ಮಹಾಮುನಿಃ ।
ಸ ತಾಶ್ರಮಪದದ್ವಾರಿ ವೃಕ್ಷಮೂಲೇ ಮಹಾಯಶಾಃ ।
ಊರ್ಧ್ವಬಾಹುಃ ಸ್ಥಿತೋ ಯೋಗೀ ಮೌನೀ ವ್ರತಸಮನ್ವಿತಃ ॥೪॥

ಆ ಸ್ಥಳವನ್ನು ತಮ್ಮ ಆಶ್ರಮವನ್ನಾಗಿ ಮಾಡಿಕೊಂಡ ಮುನಿಗಳೂ, ಮಹಾಕೀರ್ತಿವಂತರೂ ಆದ ಅವರು ಅಲ್ಲಿ ಆಶ್ರಮದ ಪ್ರವೇಶದ್ವಾರದಲ್ಲಿ ಇರುವ ಒಂದು ವೃಕ್ಷಮೂಲದಲ್ಲಿ ಊರ್ಧ್ವಬಾಹುಗಳಾಗಿ ಮೌನವನ್ನು ಮಾಡಿ ಯೋಗ ಮತ್ತು ವ್ರತಗಳನ್ನು ಆಚರಿಸುತ್ತಾ ವಾಸಿಸುತ್ತಿದ್ದರು.

ಕೇನಚಿತ್ತ್ವಥ ಕಾಲೇನ ತಥಾ ತಪಸಿ ತಿಷ್ಠತಃ ।
ತಸ್ಯಾಶ್ರಮಪದಂ ಪ್ರಾಪ್ತಾ ದಸ್ಯವೋ ಲೋಪ್ತ್ರಹಾರಿಣಃ ।
ಅನುಸಾರ್ಯಮಾಣಾಸ್ತೇ ಚೋರಾ ರಕ್ಷಿಭಿರ್ಭರತರ್ಷಭ ॥೫॥

ಒಂದು ಸಲ ಹಾಗೆ ಅವರು ತಪಸ್ಸು ಮಾಡುತ್ತಿರಲು, ಕಳವನ್ನು ಮಾಡಿದ ದ್ರವ್ಯವನ್ನು ತೆಗೆದುಕೊಂಡು ಕಳ್ಳರು ಅವರ ಆಶ್ರಮಕ್ಕೆ ಬಂದರು. ಎಲೈ ಭರತರ್ಷಭನೇ, ಅವರನ್ನು ರಾಜಭಟರು ಹಿಂಬಾಲಿಸಿದರು.

ತಾಮೇವ ವಸತಿಂ ಜಗ್ಮುಸ್ತದ್ಗಾಮೇ ಲೋಪ್ತ್ರಹಾರಿಣಃ ।
ತಸ್ಮಿನ್ ನಿವಸಥೇ ಲೋಪ್ತ್ರಂ ನಿದಧುರ್ಭಯಮೋಹಿತಾಃ ॥೬॥

ಆ ಕಳ್ಳಮಾಲನ್ನು ತೆಗೆದುಕೊಂಡು ಬಂದ ಚೋರರು ಭಯಗ್ರಸ್ತರಾಗಿ ಆ ಮುನಿಗಳ ವಸತಿಯಲ್ಲಿಯೇ ಆ ಕಳುವು ಮಾಡಿದ ದ್ರವ್ಯವನ್ನು ಇಟ್ಟರು.

ಅಥತಸ್ತೇऽತ್ರ ಸಂಲ್ಲೀನಾನ್ ಬಲಮನ್ವಗಮಚ್ಛ ತಾನ್ ।
ತತಃ ಶೀಘ್ರತರಂ ರಾಜಂಸ್ತತ್ರ ರಾಜಬಲಂ ಮಹತ್ ॥೭॥

ಹಾಗೆ ಮಾಡಿ ಅವರು ಆಶ್ರಮದಲ್ಲಿ ಅಲ್ಲಲ್ಲಿ ಮರಗಳ ಹಿಂದೆ ಅವಿತುಕೊಂಡರು. ರಾಜನೇ, ಸ್ವಲ್ಪಸಮಯದಲ್ಲಿಯೇ ದೊಡ್ಡಸಂಖ್ಯೆಯಲ್ಲಿ ರಾಜಭಟರು ಅಲ್ಲಿಗೆ ಬಂದರು.

ಯಸ್ಮಿನ್ನಾವಸಥೇ ಶೇತೇ ಸ ಮುನಿಃ ಸಂಶಿತವ್ರತಃ ।
ತತ್ರಾಜಗ್ಮುಸ್ತತೋऽಪಶ್ಯಂಸ್ತಂ ಮುನಿಂ ರಕ್ಷಿಣಸ್ತು ತೇ ॥೮॥

ಯಾವ ನಿವಾಸದಲ್ಲಿ ವ್ರತನಿಷ್ಠರಾದ ಆ ಮುನಿಗಳು ಮಲಗಿದ್ದರೋ ಅಲ್ಲಿಗೆ ಬಂದು ರಾಜಭಟರು ಅವರನ್ನು ನೋಡಿದರು.

ತಮಪೃಚ್ಛಂಸ್ತದಾ ರಾಜಂಸ್ತಥಾವೃತ್ತಂ ತಪೋಧನಮ್ ।
ಕತರೇಣ ಪಥಾ ಯಾತಾ ದಸ್ಯವೋ ಮುನಿಸತ್ತಮ ।
ತೇನ ಗಚ್ಛಾಮ ವೈ ಬ್ರಹ್ಮನ್ ಪಥಾ ಶೀಘ್ರತರಂ ವಯಮ್ ॥೯॥

ರಾಜಭಟರು ಹಾಗಿದ್ದ ತಪೋಧನರನ್ನು ಕುರಿತು ಮುನಿಶ್ರೇಷ್ಠರೇ, ಕಳ್ಳರು ಯಾವ ಮಾರ್ಗದಿಂದ ಇಲ್ಲಿಂದ ಹೋದರು? ಅದನ್ನು ಹೇಳಿ. ನಾವೂ ಸಹ ಶೀಘ್ರವಾಗಿ ಅವರನ್ನು ಹಿಂಬಾಲಿಸುತ್ತೇವೆ ಎಂದು ಹೇಳಿದರು.

ವಚಸ್ತದ್ ರಕ್ಷಿಣಾಂ ಶ್ರುತ್ವಾ ಬ್ರುವತಾಂ ಸ ತಪೋಧನಃ ।
ನ ಕಿಂಚಿದ್ ವಚನಂ ರಾಜನ್ ಮುನಿಸ್ತಾನ್ ಪ್ರತ್ಯಭಾಷತ ॥೧೦॥

ರಾಜಭಟರ ಆ ಮಾತುಗಳನ್ನು ಕೇಳಿ ಆ ತಪೋಧನರು ಅವರನ್ನು ಕುರಿತು ಏನೂ ಮಾತನಾಡಲಿಲ್ಲ.

ತತಸ್ತೇ ರಾಜಪುರುಷಾ ವಿಚಿನ್ವಾನಾಸ್ತದಾಶ್ರಮಮ್ ।
ದದೃಶುಸ್ತತ್ರ ವೈ ಲೀನಾಂಶ್ಚೋರಾಂಸ್ತದ್ ದ್ರವ್ಯಮೇವ ಚ ॥೧೧॥

ಆಗ ಆ ರಾಜಪುರುಷರು ಆ ಆಶ್ರಮದಲ್ಲಿ ಹುಡುಕುತ್ತಾ ಅಲ್ಲಿ ಅಡಗಿಕೊಂಡಿದ್ದ ಚೋರರನ್ನೂ ಮತ್ತು ಕದ್ದ ವಸ್ತುವನ್ನೂ ನೋಡಿದರು.

ತತಃ ಶಂಕಾ ಸಮಭವದ್ ರಕ್ಷಿಣಾಂ ತಂ ಮುನಿಂ ಪ್ರತಿ ।
ಪ್ರಸಹ್ಯ ತಂ ಮುನಿಂ ರಾಜ್ಞೇ ಚೋರಾಂಶ್ಚೈವಾನ್ವವೇದಯನ್ ॥೧೨॥

ಆಗ ಅವರಿಗೆ ಆ ಮುನಿಗಳ ಬಗ್ಗೆಯೂ ಶಂಕೆ ಉಂಟಾಯಿತು. ಅವರು ಬಲಾತ್ಕಾರದಿಂದ ಆ ಮುನಿಗಳನ್ನು ಹಿಡಿದು ಚೋರರ ಜೊತೆಯಲ್ಲಿ ರಾಜನಿಗೆ ಒಪ್ಪಿಸಿದರು.

ತಂ ರಾಜಾ ಸಹ ಚೋರೈಸ್ತೈರವದಚ್ಛಿದ್ಯತಾಮಿತಿ ।
ಸ ವಧ್ಯಘಾತೈರಾಜ್ಞಪ್ತಃ ಶೂಲೇ ಪ್ರೋತೋ ಮಹಾತಪಾಃ ।
ತತಸ್ತೇ ಶೂಲಮಾರೋಪ್ಯ ತಂ ಮುನಿಂ ರಕ್ಷಿಣಸ್ತದಾ ॥೧೩॥

ಆಗ ರಾಜನು ಚೋರರ ಜೊತೆಯಲ್ಲಿ ಆ ಬ್ರಾಹ್ಮಣನನ್ನೂ ಛೇದಮಾಡಿ ವಧೆ ಮಾಡಿ ಎಂದು ಹೇಳಿದನು. ಆಗ ವಧೆಯ ಕಾರ್ಯವನ್ನು ನಿರ್ವಹಿಸುವ ರಾಜಪುರುಷರು ಆ ಮಹಾ ತಪಸ್ವಿಗಳನ್ನು ಶೂಲಕ್ಕೆ ಏರಿಸಿದರು.

ಪ್ರತಿಜಗ್ಮುರ್ಮಹೀಪಾಲಾ ಧನಾನ್ಯಾದಾಯ ಸರ್ವತಃ ॥೧೪॥

ರಾಜಭಟರು ಮುನಿಯನ್ನು ಶೂಲಕ್ಕೆ ಏರಿಸಿ ಧನವನ್ನು ತೆಗೆದುಕೊಂಡು ಅಲ್ಲಿಂದ ಹೊರಟುಹೋದರು.

ಶೂಲಸ್ಥಃ ಸ ತು ಧರ್ಮಾತ್ಮಾ ಕಾಲೇನ ಮಹತಾ ಅಪಿ ।
ನಿರಾಹಾರಸ್ತದಾ ರಾಜನ್ ಮರಣಂ ನಾಭ್ಯುಪಾಗಮತ್ ।
ಧಾರಯಾಮಾಸ ವೈ ಪ್ರಾಣಾನ್ ಋಷೀಂಶ್ಚ ಸಮುಪಾನಯತ್ ॥೧೫॥

ರಾಜನೇ, ಆ ಧರ್ಮಿಷ್ಠರಾದ ಮಹಾತ್ಮರು, ಶೂಲಕ್ಕೆ ಏರಿಸಿ ಬಹು ಸಮಯ ಕಳೆದು ನಿರಾಹಾರರಾಗಿದ್ದರೂ, ಮರಣವನ್ನು ಹೊಂದಲಿಲ್ಲ. ಪ್ರಾಣವನ್ನು ಧರಿಸಿ ಋಷಿಗಳನ್ನು ಸಮೀಪಕ್ಕೆ ಕರೆಸಿದರು.

ಶೂಲಾಗ್ರೇ ತಪ್ಯಮಾನೇನ ತದಾऽನೇನ ಮಹಾತ್ಮನಾ ।
ಸಂತಾಪಂ ಪರಮಂ ಜಗ್ಮುರ್ಋಷಯೋ ಭರತರ್ಷಭ ॥೧೬॥

ಎಲೈ ಭರತಶ್ರೇಷ್ಠನೇ, ಶೂಲದ ಮೇಲೆ ಸಂತಾಪ ಪಡುತ್ತಿದ್ದ ಆ ಮಹಾತ್ಮರನ್ನು ನೋಡಿ ಋಷಿಗಳು ಬಹಳ ವ್ಯಥೆಪಟ್ಟರು.

ಕಾಚಿತ್ ಪತಿವ್ರತಾ ತಂ ತು ಭರ್ತೃಪಾದೇನ ಪೀಡಿತಮ್ ।
ತಯೋಕ್ಷ ಶಪತೋ ರಾತ್ರಿರಭೂತ್ ತಂ ಬ್ರಾಹ್ಮಣಾಸ್ತದಾ ॥೧೭॥

ತಾಂ ಪ್ರಸಾದ್ಯ ತತೋ ದೇವೀಂ ಶಾಪಮೋಕ್ಷಂ ಚ ತೇ ದದುಃ ।
ದುಃಖಿತಾ ಋಷಯಸ್ತತ್ರ ಆಶ್ರಮಸ್ಥಾಶ್ಚ ತಂ ತದಾ ॥೧೮॥

ಆಗ ಒಬ್ಬ ಪತಿವ್ರತೆಯು ಪತಿಯ ಪ್ರೀತಿಗಾಗಿ ಅವನನ್ನು ತನ್ನ ತಲೆಯ ಮೇಲೆ ಹೊತ್ತುಕೊಂಡು ವೇಶ್ಯಾಗೃಹಕ್ಕೆ ಹೋಗುತ್ತಿದ್ದಳು. ತಲೆಯ ಮೇಲಿದ್ದ ಅವಳ ಪತಿಯ ಪಾದವು ಶೂಲದಿಂದ ನೇತಾಡುತ್ತಿದ್ದ ಮಾಂಡವ್ಯರಿಗೆ ತಾಕಿ ಅವರಿಗೆ ಬಹಳ ಕಷ್ಟವಾಯಿತು. ಆ ನೋವಿನಿಂದ ಬಳಲಿದ ಅವರು ನಾಳೆ ಪ್ರಾತಃಕಾಲ ಸೂರ್ಯೋದಯದ ಒಳಗೆ ನಿನ್ನ ಪತಿಯು ಮೃತನಾಗಲಿ ಎಂದು ಶಾಪವನ್ನು ಕೊಟ್ಟರು. ಆ ಪತಿವ್ರತೆಯೂ ಕೂಡ ನಾಳೆ ಸೂರ್ಯೋದಯವಾಗುವುದೇ ಬೇಡ ಎಂದು ಪ್ರತಿಶಾಪವನ್ನು ಇತ್ತಳು. ಮರುದಿವಸ ಸ್ವಲ್ಪ ಸಮಯ ಸೂರ್ಯನು ಇಲ್ಲದಿರುತ್ತಿರಲು ದುಃಖಿತರಾದ ಆ ಋಷಿಗಳು ಆಶ್ರಮದಲ್ಲಿ ಮಾಂಡವ್ಯರನ್ನೂ ಮತ್ತು ಆ ಪತಿವ್ರತೆಯನ್ನೂ ಸಮಾಧಾನಪಡಿಸಿ ಎರಡೂ ಶಾಪಗಳನ್ನೂ ಮೋಚನೆ ಮಾಡಿದರು.

ತೇ ರಾತ್ರೌ ಶಕುನಾ ಭೂತ್ವಾ ತಮಾರ್ತಿಂ ಪರಮಾಂ ಗತಮ್ ।
ದರ್ಶಯಂತೋ ಯಥಾಶಕ್ತಿ ತಮಪೃಚ್ಛನ್ ದ್ವಿಜೋತ್ತಮಮ್ ॥೧೯॥

ಅನಂತರ ಬಂದ ಋಷಿಗಳು ರಾತ್ರಿಯ ವೇಳೆಯಲ್ಲಿ ಹಕ್ಕಿಗಳ ರೂಪವನ್ನು ತಾಳಿ ತಮ್ಮ ರೂಪವನ್ನು ಸಾಧ್ಯವಾದಷ್ಟು ತೋರಿಸಿ ಬಹಳಕಷ್ಟದಲ್ಲಿದ್ದ ಮಾಂಡವ್ಯರನ್ನು ಕುರಿತು ಇಂತಹ ದುಃಖವು ಬರಲು ಏನು ಕಾರಣ ಎಂದು ಕೇಳಿದರು.

ಋಷಯಃ

ಭಗವನ್ ಕೇನ್ ದೋಷೇಣ ಗಂತಾಽಸಿ ದ್ವಿಜಸತ್ತಮ ।
ಶ್ರೋತುಮಿಚ್ಛಾಮಹೇ ಬ್ರಹ್ಮನ್ ಕಿಂ ಪಾಪಂ ಕೃತವಾನಸಿ ॥೨೦॥

ತತ್ ತೇ ದ್ವಿಜವರಶ್ರೇಷ್ಠ ಸಂಶಯಸ್ತು ಮಹಾನ್ ಹಿ ನಃ ।
ಈದೃಶಸ್ಯ ನರಶ್ರೇಷ್ಠ ಉಗ್ರೇ ತಪಸಿ ವರ್ತತಃ ॥೨೧॥

ಪೂಜ್ಯರಾದ ಬ್ರಾಹ್ಮಣಶ್ರೇಷ್ಠರೇ, ಯಾವ ದೋಷದಿಂದ ಇಂತಹ ದುಃಖವನ್ನು ಹೊಂದಿದ್ದೀರಿ ಎಂದು ಕೇಳಬಯಸುತ್ತೇವೆ. ಬ್ರಾಹ್ಮಣರೇ ನೀವು ಯಾವ ಪಾಪವನ್ನು ಮಾಡಿದಿರಿ ಇಂತಹ ಉಗ್ರ ತಪಸ್ಸಿನಲ್ಲಿ ನಿರತರಾದ ನೀವು ಪಾಪವನ್ನು ಆಚರಿಸಿದಿರಿ ಎಂಬ ವಿಷಯದಲ್ಲಿ ನಮಗೆ ಬಹಳ ಸಂಶಯವಿದೆ. ಆದ್ದರಿಂದ ದ್ವಿಜಶ್ರೇಷ್ಠರೇ, ಅದನ್ನು ನಮಗೆ ತಿಳಿಸಿ.

ವೈಶಂಪಾಯನಃ

ತದೋವಾಚ ಮಹಾಪ್ರಾಜ್ಞಸ್ತಾನೃಷೀನ್ ಸಂಶಿತವ್ರತಾನ್ ।
ದೋಷತಃ ಕಂ ಗಮಿಷ್ಯಾಮಿ ನ ಹಿ ಮೇಽನ್ಯೋಽಪರಾಧ್ಯತಿ ॥೨೨॥

ಆಗ ಆ ಮಹಾಪ್ರಾಜ್ಞರಾದ ಮಾಂಡವ್ಯರು ಆ ವ್ರತನಿಷ್ಠರಾದ ಋಷಿಗಳನ್ನು ಕುರಿತು ನಾನು ಯಾವ ದೋಷದಿಂದ ಇಂತಹ ದುಃಖವನ್ನು ಹೊಂದುವೆನು? ನನಗೆ ಬೇರೆ ಯಾರೂ ಅಪರಾಧವನ್ನು ಮಾಡುವುದಿಲ್ಲ. (ಯಮನೇ ಅಪರಾಧಿ)

ತಚ್ಛ್ರುತ್ವಾ ರಕ್ಷಿಣಸ್ತತ್ರ ತಥಾ ಬಹುತಿಥೇಽಹನಿ ।
ನ್ಯವೇದಯಂಸ್ತತೋ ರಾಜ್ಞೇ ತಥಾವೃತ್ತಂ ನರಾಧಿಪ ॥೨೩॥

ರಾತ್ರಿಯಲ್ಲಿ ನಡೆದ ಈ ಘಟನೆಯನ್ನು ನೋಡಿದ ಮತ್ತು ಕೇಳಿದ ರಕ್ಷಕರು ಅನೇಕ ದಿನಗಳ ಬಳಿಕ ರಾಜನಿಗೆ ಈ ವೃತ್ತಾಂತವನ್ನು ಹೇಳಿದರು.

ರಾಜಾ ಚ ಹಿ ತಥಾ ಶ್ರುತ್ವಾ ನಿಶ್ಚಿತ್ಯ ಸಹ ಮಂತ್ರಿಭಿಃ ।
ಪ್ರಸಾದಯಾಮಾಸ ತದಾ ಶೂಲಸ್ಥಮೃಷಿಸತ್ತಮಮ್ ॥೨೪॥

ರಾಜನು ಅದನ್ನು ಕೇಳಿ, ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ವಧ್ಯಸ್ಥಾನಕ್ಕೆ ಬಂದು ಶೂಲದಲ್ಲಿದ್ದ ಋಷಿಶ್ರೇಷ್ಠರನ್ನು ಪ್ರಸನ್ನೀಕರಿಸುವ ಪ್ರಯತ್ನವನ್ನು ಮಾಡಿದನು.

ರಾಜಾ

ಯನ್ಮಯಾಽಪಕೃತಂ ಮೋಹಾದಜ್ಞಾನಾದ್ ದ್ವಿಜಸತ್ತಮ ।
ಪ್ರಸಾದಯೇ ತ್ವಾಂ ವಿಪ್ರೇಂದ್ರ ನ ಮೇ ತ್ವಂ ಕ್ರೋದ್ಧುಮರ್ಹಸಿ ॥೨೫॥

ಮುನಿಶ್ರೇಷ್ಠರೇ, ನಾನು ಮೋಹದಿಂದ ಮತ್ತು ಅಜ್ಞಾನದಿಂದ ತಮಗೆ ಮಾಡಿದ ಅಪಕಾರಕ್ಕೆ ಕ್ಷಮೆ ಕೇಳುತ್ತಿದ್ದೇನೆ. ತಾವು ನನ್ನ ಮೇಲೆ ಕೋಪಗೊಳ್ಳದೇ ನನಗೆ ಅನುಗ್ರಹವನ್ನು ಮಾಡಬೇಕು.

ವೈಶಂಪಾಯನಃ

ಏವಮುಕ್ತಸ್ತದಾ ರಾಜ್ಞಾ ಪ್ರಸಾದಮಕರೋತ್ ತದಾ ।
ಕೃತಪ್ರಸಾದೋ ರಾಜಾ ತಂ ತತಃ ಸಮವತಾರಯತ್ ॥೨೬॥

ರಾಜನಿಂದ ಹೀಗೆ ಹೇಳಲ್ಪಟ್ಟ ಮಾಂಡವ್ಯರು ರಾಜನಿಗೆ ಅನುಗ್ರಹವನ್ನು ಮಾಡಿದರು. ಅನುಗ್ರಹವನ್ನು ಪಡೆದ ರಾಜನು ಅವರನ್ನು ಕೆಳಗೆ ಇಳಿಸುವಂತೆ ಆದೇಶ ಮಾಡಿದನು.

ಅವತಾರ್ಯಮಾಣಃ ಶೂಲಾಗ್ರಾತ್ ತಚ್ಛೂಲಂ ಚ ಚಕರ್ಷ ಹ ।
ಅಶಕ್ನುವಂತೋ ನಿಷ್ಕರ್ಷುಂ ಶೂಲಂ ಮೂಲೇऽಥ ಚಿಚ್ಛಿದುಃ ॥೨೭॥

ಶೂಲದ ತುದಿಯಿಂದ ಅವರನ್ನು ಕೆಳಗೆ ಇಳಿಸುವ ಪ್ರಯತ್ನ ಮಾಡಿದಾಗ, ಕಂಠದ ಬಳಿ ನೆಟ್ಟಿದ್ದ ಶೂಲದ ಭಾಗವು ಋಷಿಗಳ ಜೊತೆಯಲ್ಲಿ ಕೆಳಗೆ ಬಂದಿತು. ಅದನ್ನು ಅವರಿಂದ ಬಿಡಿಸಲು ಸಾಧ್ಯವಾಗದೇ ರಾಜಭಟರು ಅದನ್ನು ಮೂಲದಲ್ಲಿ ಕತ್ತರಿಸಿದರು.

ಸ ತದಾಂತರ್ಗತೇನೈವ ಶೂಲೇನ ವ್ಯಚರನ್ಮುನಿಃ ।
ಕಂಠಪಾರ್ಶ್ವಾಂತರಸ್ಥೇನ ಶಂಕುನಾ ಮುನಿರಾಚರನ್ ।
ಪುಷ್ಪಭಾಜನಧಾರೀ ಸ್ಯಾದಿತಿ ಚಿಂತಾಪರೋऽಭವತ್ ॥೨೮॥

ಆಗ ದೇಹದಲ್ಲಿ ಕಂಠದ ಬಳಿ ಇದ್ದ ಶೂಲದ ಭಾಗದ ಜೊತೆಗೆ ಆ ಋಷಿಗಳು ಸಂಚಾರ ಮಾಡಿದರು. ಅವರು ಶೂಲದ ಶಂಕುವು ನನ್ನ ಪುಷ್ಪಪಾತ್ರೆಗೆ ಆಧಾರವಾಗುವುದು ಎಂದು ಆಲೋಚಿಸಿದರು.

ಸ ಚಾತಿತಪಸಾ ಲೋಕಾನ್ ವಿಜಿಗ್ಯೇ ದುರ್ಲಭಾನ್ ಪರೈಃ ।
ತಮಾಹುರಾಣಿಮಾಂಡವ್ಯಮಿತಿ ಧರ್ಮೇ ರತಂ ಮುನಿಮ್ ॥೨೯॥

ಅವರು ತಮ್ಮ ಉಗ್ರವಾದ ತಪಸ್ಸಿನಿಂದ ಪರಲೋಕಗಳನ್ನು ಜಯಿಸಿದರು. ಆ ಶಂಕುವಿನ ಕಾರಣದಿಂದಾಗಿ ಅವರನ್ನು ಜನರು ಆಣಿಮಾಂಡವ್ಯರೆಂದೇ ಕರೆದರು.

ಸ ಗತ್ವಾ ಸದನಂ ವಿಪ್ರೋ ಧರ್ಮಸ್ಯ ಪರಮಾರ್ಥವಿತ್ ।
ಆಸನಸ್ಥಂ ತತೋ ಧರ್ಮಂ ದೃಷ್ವೋಪಾಲಭತಾನಘ ॥೩೦॥

ಪರಮಾರ್ಥವನ್ನು ತಿಳಿದ ಆ ಬ್ರಾಹ್ಮಣರು ಯಮದೇವರ ಪಟ್ಟಣಕ್ಕೆ ಹೋಗಿ ಆಸನದಲ್ಲಿ ಕುಳಿತಿದ್ದ ಯಮದೇವರನ್ನು ನೋಡಿ, ನಿಂದಿಸಿದರು.

ಕಿಂ ನು ದುಷ್ಟತರಂ ಕರ್ಮ ಮಯಾ ಕೃತಮಜಾನತಾ ।
ಯಸ್ಯೇಯಂ ಫಲನಿರ್ವೃತ್ತಿರೀದೃಶ್ಯಾಸಾದಿತಾ ಮಯಾ ।
ಶೀಘ್ರಮಾಚಕ್ಷ್ವ ಮೇ ತತ್ತ್ವಂ ಪಶ್ಯ ಮೇ ತಪಸೋ ಬಲಮ್ ॥೩೧॥

ನಾನು ನನಗೆ ಗೊತ್ತಿಲ್ಲದಂತೆ ಇಂತಹ ಫಲವು ದೊರೆಯುವಂತಹ ಯಾವ ದುಷ್ಕರ್ಮವನ್ನು ಮಾಡಿದೆ? ಯಮನೇ, ನನಗೆ ಶೀಘ್ರವಾಗಿ ಹೇಳು. ಇಲ್ಲದಿದ್ದರೆ ನನ್ನ ತಪಸ್ಸಿನ ಬಲವನ್ನು ನೋಡು ಎಂದು ಹೇಳಿದರು.

ಧರ್ಮರಾಜಃ

ಪತಂಗಕಾನಾಂ ಪುಚ್ಛೇಷು ತ್ವಯೇಷಿಕಾಃ ಪ್ರವೇಶಿತಾಃ ।
ಅಹಿಂಸಕಾನಾಂ ಧರ್ಮಜ್ಞ ತೇನೈತತ್ ಪ್ರಾಪ್ತವಾನಸಿ ॥೩೨॥

ಧರ್ಮಜ್ಞರೇ, ನೀವು ಬಾಲ್ಯದಲ್ಲಿ ಯಾರಿಗೂ ಹಿಂಸೆ ಮಾಡದಿರುವ ಪತಂಗಗಳ ಬಾಲದ ಬಳಿ ಕಡ್ಡಿಗಳನ್ನು ಚುಚ್ಚಿದ್ದೀರಿ. ಅದರಿಂದ ಇಂತಹ ಫಲವು ಪ್ರಾಪ್ತವಾಯಿತು.

ಅಣಿಮಾಂಡವ್ಯಃ

ಕಸ್ಮಿನ್ ಕಾಲೇ ಮಯಾ ತತ್ ತು ಕೃತಂ ಬ್ರೂಹಿ ಯಥಾತಥಮ್ ।

ನಾನು ಯಾವ ವಯಸ್ಸಿನಲ್ಲಿ ಅಂತಹ ಕೃತ್ಯವನ್ನು ಮಾಡಿದೆ ಎಂದು ಸತ್ಯವಾಗಿ ಹೇಳು.

ವೈಶಂಪಾಯನಃ

ತೇನೋಕ್ತೋ ಧರ್ಮರಾಜಸ್ತು ಬಾಲಭಾವೇ ತ್ವಯಾ ಕೃತಮ್ ॥೩೩॥

ಆಗ ಯಮನು ನೀನು ಬಾಲಕನಾಗಿದ್ದಾಗ ಹಾಗೆ ಮಾಡಿದೆ ಎಂದು ಹೇಳಿದನು.

ಆಣಿಮಾಂಡವ್ಯಃ

ಬಾಲೋ ಹಿ ದ್ವಾದಶಾದ್ವರ್ಷಾಜ್ಜನ್ಮನೋ ಯತ್ ಕರಿಷ್ಯತಿ ।
ನ ಭವಿಷ್ಯತ್ಯಧರ್ಮೋಽಸ್ಯ ನ ಪ್ರಜ್ಞಾಸ್ಯತಿ ವೈಶಸಮ್ ॥೩೪॥

ಬಾಲಕನು ಹನ್ನೆರಡು ವರ್ಷ ತುಂಬುವವರೆಗೂ ಏನು ಮಾಡುವನೋ ಅದರಿಂದ ಪಾಪವು ಉಂಟಾಗುವುದಿಲ್ಲ. ಏಕೆಂದರೆ ಅವನಿಗೆ ಹಿಂಸೆಯ ಜ್ಞಾನವು ಇರುವುದಿಲ್ಲ.

ಗರೀಯಾನ್ ಬ್ರಾಹ್ಮಣವಧಃ ಸರ್ವಭೂತವಧಾದಪಿ ।
ಅಲ್ಪಾಪರಾಧೇ ವಿಪುಲೋ ಮಮ ದಂಡಸ್ತ್ವಯಾ ಧೃತಃ ॥೩೫॥

ಉಳಿದ ಎಲ್ಲಾ ಪ್ರಾಣಿಗಳ ವಧೆಗಿಂತಲೂ ಬ್ರಾಹ್ಮಣ ವಧೆಯು ಗುರುತರವಾದುದು. ನಾನು ಮಾಡಿದ ಅಲ್ಪಾಪರಾಧಕ್ಕೆ ನೀನು ನನಗೆ ವಿಪುಲವಾದ ಶಿಕ್ಷೆಯನ್ನು ಕೊಟ್ಟಿದ್ದೀಯೆ.

ಶೂದ್ರಯೋನಾವತೋ ಧರ್ಮ ಮಾನುಷಃ ಸಂಭವಿಷ್ಯಸಿ ।
ಮರ್ಯಾದಾಂ ಸ್ಥಾಪಯಾಮ್ಯದ್ಯ ಲೋಕೇ ಧರ್ಮಫಲೋದಯಾಮ್ ॥

ಆದ್ದರಿಂದ ಯಮನೇ, ನೀನು ಮನುಷ್ಯಲೋಕದಲ್ಲಿ ಶೂದ್ರಯೋನಿಯಲ್ಲಿ ಅವತಾರ ಮಾಡು. ನಾನು ಈ ದಿನ ಲೋಕದಲ್ಲಿ ಧರ್ಮದ ಫಲವು ಉಂಟಾಗುವ ಮರ್ಯಾದೆಯನ್ನು ಸ್ಥಾಪಿಸುತ್ತೇನೆ.

ಆಚತುರ್ದಶಮಾದ್ ವರ್ಷಾನ್ನ ಭವಿಷ್ಯತಿ ಪಾತಕಮ್ ।
ಪರೇಣ ಕುರ್ವತಾಮೇವ ದೋಷ ಏವ ಭವಿಷ್ಯತಿ ॥೩೭॥

ಹದಿನಾಲ್ಕು ವರ್ಷಗಳು ತುಂಬುವವರೆಗೂ ಮಾಡಿದ ಕಾರ್ಯದಿಂದ ಪಾಪವು ಉಂಟಾಗುವುದಿಲ್ಲ. ಅನಂತರ ಮಾಡಿದ ದುಷ್ಕೃತ್ಯಗಳಿಂದ ಪಾಪವು ಉಂಟಾಗುವುದು

ವೈಶಂಪಾಯನಃ

ಏತೇನ ತ್ವಪರಾಧೇನ ಶಾಪಾತ್ ತಸ್ಯ ಮಹಾತ್ಮನಃ ।
ಧರ್ಮೋ ವಿದುರರೂಪೇಣ ಶೂದ್ರಯೋನಾವಜಾಯತ ॥೩೮॥

ಈ ಅಪರಾಧದಿಂದ, ಆ ಮಹಾತ್ಮರ ಶಾಪದ ನಿಮಿತ್ತದಿಂದಾಗಿ ಯಮನು ವಿದುರನಾಗಿ ಶೂದ್ರಯೋನಿಯಲ್ಲಿ ಅವತರಿಸಿದನು.

ಧರ್ಮೇ ಚಾರ್ಥೇ ಚ ಕುಶಲೋ ಲೋಭಕ್ರೋಧವಿವರ್ಜಿತಃ ।
ದೀರ್ಘದರ್ಶೀ ಶಮಪರಃ ಕುರೂಣಾಂ ಚ ಹಿತೇ ರತಃ ॥೩೯॥

ಅವನು ಧರ್ಮ ಮತ್ತು ಅರ್ಥಗಳಲ್ಲಿ ಕುಶಲನಾಗಿದ್ದು, ಲೋಭ ಮತ್ತು ಕ್ರೋಧಗಳಿಂದ ರಹಿತನಾಗಿ, ದೀರ್ಘದರ್ಶಿಯಾಗಿ, ಭಗವನ್ನಿಷ್ಠನಾಗಿ ಕುರುಗಳ ಹಿತದಲ್ಲಿ ರತನಾಗಿದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಅಷ್ಟಾಧಿಕಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ಷಟ್‌ಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಎಂಟನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೧

ಯೋಗ್ಯಾನಿ ಕರ್ಮಾಣಿ ತತಸ್ತು ತೇಷಾಂ
ಚಕಾರ ಭಿಷ್ಮೋ ಮುನಿಭಿರ್ಯಥಾವತ್ ।
ವಿದ್ಯಾಃ ಸಮಸ್ತಾ ಅದದಾಚ್ಚ ಕೃಷ್ಣಃ
ತೇಷಾಂ ಪಾಂಡೋರಸ್ತ್ರಶಸ್ತ್ರಾಣಿ ಭೀಷ್ಮಃ ॥೧೪೩॥

ಬಳಿಕ ಭೀಷ್ಮ ಆ ಮಕ್ಕಳಿಗೆ ಯೋಗ್ಯವಾದ ಜಾತಕರ್ಮಾದಿಗಳನ್ನು ಮುನಿಗಳ ಮೂಲಕ ವಿಧ್ಯುಕ್ತವಾಗಿ ನೆರವೇರಿಸಿದ. ವ್ಯಾಸರು ಅವರಿಗೆ ಎಲ್ಲ ವಿದ್ಯೆಗಳನ್ನು ಉಪದೇಶಿಸಿದರು. ಭೀಷ್ಮ ಪಾಂಡುವಿಗೆ ಅಸ್ತ್ರಶಸ್ತ್ರಗಳನ್ನು ಪದೇಶಿಸಿದ.

ತೇ ಸರ್ವವಿದ್ಯಾ ಪ್ರವರಾ ಬಭೂವು
ರ್ವಿಶೇಷತೋ ವಿದುರಃ ಸರ್ವವೇತ್ತಾ ।
ಪಾಂಡುಃ ಸಮಸ್ತಾಸ್ತ್ರವಿದೇಕವೀರೋ
ಜಿಗಾಯ ಪೃಥ್ವೀಮಖಿಲಾಂ ಧನುರ್ಧರಃ ॥೧೪೪॥

ಅವರು ಎಲ್ಲ ವಿದ್ಯೆಗಳಲ್ಲಿಯೂ ಪ್ರವೀಣರಾದರು. ವಿದುರ ವಿಶೇಷವಾಗಿ ಸರ್ವಜ್ಞನೆನಿಸಿದ. ಪಾಂಡು ಸರ್ವಾಸ್ತ್ರವೇತ್ತ ಧನುರ್ಧಾರಿ, ಅಪ್ರತಿಮ ವೀರನೆನಿಸಿ ಸಮಸ್ತ ಭೂಮಂಡಲವನ್ನು ಗೆದ್ದ.

★ ★ ★ ★

ನೂರ ಒಂಭತ್ತನೆಯ ಅಧ್ಯಾಯ

(ಧೃತರಾಷ್ಟ್ರ ಮೊದಲಾದವರ ವಿದ್ಯಾಭ್ಯಾಸ, ವಿವಾಹ ಮತ್ತು ಪಾಂಡುವಿನ ರಾಜ್ಯಾಭಿಷೇಕ.)

ವೈಶಂಪಾಯನಃ

ಧೃತರಾಷ್ಟ್ರೇ ಚ ಪಾಂಡೌ ಚ ವಿದುರೇ ಚ ಮಹಾತ್ಮನಿ ।
ತೇಷು ತ್ರಿಷು ಕುಮಾರೇಷು ಜಾತೇಷು ಕುರುಜಾಂಗಲಮ್।
ಕುರವೋऽಥ ಕುರುಕ್ಷೇತ್ರಂ ತ್ರಯಮೇತದವರ್ಧತ ॥೧॥

ಧೃತರಾಷ್ಟ್ರ, ಪಾಂಡು ಮತ್ತು ಮಹಾತ್ಮನಾದ ವಿದುರ ಈ ಮೂರು ಕುಮಾರರು ಜನಿಸಿದ ಮೇಲೆ, ಕುರುಜಾಂಗಲವು, ಕುರುಕ್ಷೇತ್ರವು ಮತ್ತು ಕುರುಗಳು ಅಭಿವೃದ್ಧಿಯನ್ನು ಹೊಂದಿದವು.

ಯಥರ್ತುವರ್ಷೀ ಪರ್ಜನ್ಯೋ ಬಹುಪುಷ್ಪಫಲಾ ದ್ರುಮಾಃ ।
ವಾಹನಾನಿ ಪ್ರಹೃಷ್ಟಾನಿ ಮುದಿತಾ ಮೃಗಪಕ್ಷಿಣಃ ।
ರೂಢಸಸ್ಯಾऽಭವದ್ ಭೂಮಿಃ ಸಸ್ಯಾನಿ ಫಲವಂತಿ ಚ ॥೨॥

ಪರ್ಜನ್ಯನು ಕಾಲಕ್ಕೆ ಸರಿಯಾಗಿ ಮಳೆಯನ್ನು ಸುರಿಸಿದನು. ವೃಕ್ಷಗಳು ಬಹು ಪುಷ್ಪಫಲದಿಂದ ಕೂಡಿದವು. ಅಶ್ವ, ಗಜ ಮೊದಲಾದ ವಾಹನಗಳು ಹರ್ಷಗೊಂಡವು. ಮೃಗಪಕ್ಷಿಗಳು ಸಂತೋಷಗೊಂಡವು. ಭೂಮಿಯಲ್ಲಿ ಸಸ್ಯವು ಚೆನ್ನಾಗಿ ಬೆಳೆಯಿತು. ಆ ಸಸ್ಯಗಳು ಫಲವನ್ನು ಕೊಟ್ಟವು.

ಗಂಧವಂತಿ ಚ ಮಾಲ್ಯಾನಿ ಪುಷ್ಪಾಣಿ ರಸವಂತಿ ಚ ।
ವಣಿಗ್ಭಿಶ್ಚೋಪಕೀರ್ಯಂತೇ ನಗರಾಣ್ಯಥ ಶಿಲ್ಪಿಭಿಃ ॥೩॥

ಹೂ ಮಾಲೆಗಳು ಸುಗಂಧೋಪೇತವಾಗಿದ್ದವು. ಪುಷ್ಪಗಳಲ್ಲಿ ಮಧುರಸವಿದ್ದಿತು. ನಗರಗಳು ವರ್ತಕರಿಂದಲೂ ಮತ್ತು ಕುಶಲಕರ್ಮಿಗಳಿಂದಲೂ ತುಂಬಿ ಹೋಯಿತು.

ಶೂರಾಶ್ಚ ಕೃತವಿದ್ಯಾಶ್ಚ ಸಂತಶ್ಚ ಸುಖಿನೋऽಭವನ್ ।
ನಾಭವತ್ ಕೃಪಣಃ ಕಶ್ಚಿನ್ನ ಕಾಚಿದ್ ವಿಧವಾऽಭವತ್ ॥೪॥

ಶೂರರೂ, ವಿದ್ಯಾ ನಿಪುಣರೂ ಮತ್ತು ಸಜ್ಜನರೂ ಸುಖದಿಂದಿದ್ದರು. ಕೃಪಣರು ಇರಲ್ಲಿಲ್ಲ. ಹೆಂಗಸರು ವಿಧವೆಯರಾಗುತ್ತಿರಲಿಲ್ಲ.

ನಾಭವನ್ ದಸ್ಯವಃ ಕೇಚಿನ್ನಾಧರ್ಮರುಚಯೋ ಜನಾಃ ।
ಪ್ರದೇಶೇಷ್ವಪಿ ರಾಷ್ಟ್ರಾಣಾಂ ಕೃತಂ ಯುಗಮವರ್ತತ ॥೫॥

ಕಳ್ಳರು ಯಾರೂ ಇರಲಿಲ್ಲ. ಅಧರ್ಮಾಭಿರುಚಿಗಳಾದ ಜನರೂ ಇರಲಿಲ್ಲ. ರಾಷ್ಟ್ರಗಳಿಗೆ ಸೇರಿದ ಗ್ರಾಮಾಂತರ ಪ್ರದೇಶಗಳಲ್ಲಿಯೂ ಕೃತಯುಗದ ಧರ್ಮವೇ ನಡೆಯುತ್ತಿತ್ತು.

ತನ್ಮಹೋದಧಿಸಂಕಾಶಂ ನಗರಂ ಬಹ್ವಶೋಭತ ।
ದ್ವಾರತೋರಣನಿರ್ವ್ಯೂಹೈಶ್ಚನ್ನಮಭ್ರಂ ಘನೈರಿವ ॥೬॥

ದೊಡ್ಡ ಸಮುದ್ರದಂತಿದ್ದ ಹಸ್ತಿನಪುರವು ದ್ವಾರತೋರಣಗಳಿಂದ ಬರುವ ಸುಗಂಧ ಧೂಪಗಳಿಂದ ಆಕಾಶವನ್ನು ಮೋಡದಿಂದ ಮುಚ್ಚಿದಂತೆ ಮುಚ್ಚಿ ಬಹುವಾಗಿ ಶೋಭಿಸಿತು.

ಪ್ರಾಸಾದಶತಸಂಬಾಧಂ ಮಹೇಂದ್ರಪುರಸನ್ನಿಭಮ್ ।
ನದೀಪಾದಪಷಂಡೇಷು ವಾಪೀಪಲ್ವಲಸೇತುಷು ।
ಕಾನನೇಷು ವಿಚಿತ್ರೇಷು ವಿಹರಂತಿ ಸ್ಮ ಕೌರವಾಃ ॥೭॥

ನಗರವು ನೂರಾರು ಪ್ರಾಸಾದಗಳಿಂದ ನಿಬಿಡವಾಗಿ ಇಂದ್ರನ ಅಮರಾವತಿಯಂತೆ ಇದ್ದಿತು. ಕೌರವರು ನದಿಯ ತೀರಗಳಲ್ಲಿಯೂ, ವೃಕ್ಷಗಳ ಮೂಲಗಳಲ್ಲಿಯೂ, ಜಲಾಶಯಗಳ ಸಮೀಪದಲ್ಲಿಯೂ, ಪಲ್ವಲ ಮತ್ತು ಸೇತುವೆಗಳ ಸಮೀಪದಲ್ಲಿಯೂ ಮತ್ತು ವಿಚಿತ್ರವಾದ ಕಾಡುಗಳಲ್ಲಿಯೂ ವಿಹರಿಸುತ್ತಿದ್ದರು.

ಉತ್ತರೈಃ ಕುರುಭಿಃ ಸಾರ್ಧಂ ದಕ್ಷಿಣಾಃ ಕುರವಸ್ತದಾ ।
ಸ್ಪರ್ಧಮಾನಾಶ್ಚ ದೃಶ್ಯಂತೇ ದೇವರ್ಷೀಣಾಂ ಸಮಾಗಮೇ ।
ದಾನಧರ್ಮಕ್ರಿಯಾಯುಕ್ತಾ ಯಜ್ಞವ್ರತಪರಾಯಣಾಃ ॥೮॥

ಅಲ್ಲಿ ದಕ್ಷಿಣಕುರುಗಳು ಮತ್ತು ಉತ್ತರಕುರುಗಳು ದಾನಧರ್ಮ ಕ್ರಿಯೆಗಳಲ್ಲಿ ಆಸಕ್ತರಾಗಿದ್ದು, ಯಜ್ಞ ಮತ್ತು ವ್ರತಗಳಲ್ಲಿ ನಿಷ್ಠರಾಗಿದ್ದು ದೇವತೆಗಳ ಮತ್ತು ಋಷಿಗಳ ಸಮಾಗಮದಲ್ಲಿ ಪರಸ್ಪರವಾಗಿ ಸ್ಪರ್ಧಿಸುವಂತೆ ತೋರುತ್ತಿದ್ದರು.

ಅನ್ಯೋನ್ಯಪ್ರೀತಿಸಂಯುಕ್ತಾ ವರ್ಧಂತೇ ಸ್ಮ ಪ್ರಜಾಸ್ತದಾ ।
ಮಾನಕ್ರೋಧವಿಹೀನಾಶ್ಚ ಪ್ರಜಾ ಲೋಭವಿವರ್ಜಿತಾಃ ।
ಅನ್ಯೋನ್ಯಮಭ್ಯನಂದಂತ ಬ್ರಹ್ಮೋತ್ತರಮವರ್ಧತ ॥೯॥

ಪ್ರಜೆಗಳು ಪರಸ್ಪರ ಪ್ರೀತಿಯುಳ್ಳವರಾಗಿ ಅಭಿವೃದ್ಧಿಯನ್ನು ಹೊಂದಿದರು. ಪ್ರಜೆಗಳಿಗೆ ಅಹಂಕಾರವಾಗಲೀ, ಕ್ರೋಧವಾಗಲೀ ಅಥವಾ ಲೋಭವಾಗಲೀ ಇರಲಿಲ್ಲ. ಒಬ್ಬರನ್ನೊಬ್ಬರು ಅಭಿನಂದಿಸುತ್ತಿದ್ದರು. ಬ್ರಾಹ್ಮಣವರ್ಣವು ಶ್ರೇಷ್ಠವಾದ ಸ್ಥಾನವನ್ನು ಪಡೆದಿತ್ತು.

ತಸ್ಮಿನ್ ಜನಪದಶ್ರೇಷ್ಠೇ ಭೀಷ್ಮೇಣ ವಿಧಿನಾ ಕೃತಾಃ ।
ಕೂಪಾರಾಮಾಃ ಸಭಾ ವಾಪ್ಯೋ ಬ್ರಾಹ್ಮಣಾವಸಥಾಸ್ತದಾ ॥೧೦॥

ಆ ಜನಪದದಲ್ಲಿ ಭೀಷ್ಮರು ವಿಧಿವತ್ತಾಗಿ ಅನೇಕ ಕೂಪಗಳನ್ನೂ, ಆರಾಮಗಳನ್ನೂ, ಸಭೆಗಳನ್ನೂ, ಬಾವಿಗಳನ್ನು ಮತ್ತು ಬ್ರಾಹ್ಮಣ ನಿವಾಸಗಳನ್ನೂ ಮಾಡಿದ್ದರು.

ಸ್ವಾಹಾಕಾರೈಃ ಸ್ವಧಾಭಿಶ್ಚ ಸನ್ನಿವಾಸ ಕುರೂಷಿತಃ ।
ಬಭೂವ ಪರಮೋಪೇತೋ ಯೂಪಚೈತ್ಯಜಯಧ್ವಜೈಃ ॥೧೧॥

ಆ ನಗರವು ಒಳ್ಳೆಯ ನಿವಾಸವನ್ನು ಹೊಂದಿದ್ದ ಕುರುಗಳಿಂದ ವಾಸಿಸಲ್ಪಟ್ಟು ಸ್ವಾಹಾಕಾರ ಸ್ವಧಾಕಾರಗಳಿಂದಲೂ, ಯೂಪ, ಚೈತ್ಯ ಮತ್ತು ಜಯಧ್ವಜಗಳಿಂದಲೂ, ಕೂಡಿದುದಾಗಿ ಚೆನ್ನಾಗಿ ಶೋಭಿಸಿತು.

ಪ್ರಮೃಜ್ಯ ಪರರಾಷ್ಟ್ರಾಣಿ ಸ್ವರಾಷ್ಟ್ರಂ ಪರ್ಯರಕ್ಷತ ।
ಭೀಷ್ಮೇಣ ವಿಹಿತಂ ರಾಷ್ಟ್ರೇ ಧರ್ಮಚಕ್ರಮವರ್ಧತ ॥೧೨॥

ಕುರುಗಳು ಪರರಾಷ್ಟ್ರಗಳನ್ನು ಸೋಲಿಸಿ ತಮ್ಮ ರಾಷ್ಟ್ರವನ್ನು ರಕ್ಷಣೆ ಮಾಡಿದರು. ಕುರುಜಾಂಗಲದಲ್ಲಿ ಭೀಷ್ಮರಿಂದ ಪ್ರತಿಷ್ಠಿತವಾದ ಧರ್ಮಚಕ್ರವು ಅಭಿವೃದ್ಧಿಯನ್ನು ಹೊಂದಿತು.

ಕ್ರಿಯಮಾಣೇಷು ಕೃತ್ಯೇಷು ಕುಮಾರಾಣಾಂ ಯಶಸ್ವಿನಾಮ್।
ಪೌರಜಾನಪದಾಃ ಸರ್ವೇ ಬಭೂವುಃ ಪರಮೋತ್ಸವಾಃ ॥೧೩॥

ಈ ಯಶಸ್ವಿಗಳಾದ ಮೂವರು ಕುಮಾರರಿಗೆ ಅನೇಕ ಕಾರ್ಯಗಳನ್ನು ಮಾಡುವಾಗ ಪೌರಜಾನಪದರೆಲ್ಲರೂ ಪರಮೋತ್ಸವದಿಂದ ಕೂಡಿರುತ್ತಿದ್ದರು.

ಗೃಹೇಷು ಕುರುಮುಖ್ಯಾನಾಂ ಪೌರಾಣಾಂ ಚ ಯಶಸ್ವಿನಾಮ್।
ದೀಯತಾಂ ಭುಜ್ಯತಾಂ ಚೇತಿ ವಾಚೋಽಶ್ರೂಯಂತ ಸರ್ವಶಃ ॥೧೪॥

ಕುರುಶ್ರೇಷ್ಠರ ಮನೆಗಳಲ್ಲಿಯೂ, ಕೀರ್ತಿವಂತರಾದ ಪೌರರ ಮನೆಗಳಲ್ಲಿಯೂ ಸಹ, ಎಲ್ಲಾ ಕಡೆಗಳಲ್ಲಿಯೂ ದಾನವನ್ನು ಮಾಡಿ, ಭೋಜನವನ್ನು ಮಾಡಿಸಿ ಎಂಬ ಮಾತುಗಳು ಕೇಳಿಬರುತ್ತಿದ್ದವು.

ಧೃತರಾಷ್ಟ್ರಶ್ಚ ಪಾಂಡುಶ್ಚ ವಿದುರಶ್ಚ ಮಹಾಯಶಾಃ ।
ಜನ್ಮಪ್ರಭೃತಿ ಭೀಷ್ಮೇಣ ಪುತ್ರವತ್ ಪರಿರಕ್ಷಿತಾಃ ॥೧೫॥

ಮಹಾಕೀರ್ತಿವಂತರಾದ ಧೃತರಾಷ್ಟ್ರ, ಪಾಂಡು ಮತ್ತು ವಿದುರರು ಹುಟ್ಟಿದಾಗಿನಿಂದ ಭೀಷ್ಮರು ಅವರನ್ನು ತಮ್ಮ ಮಕ್ಕಳಂತೆ ರಕ್ಷಣೆ ಮಾಡಿದರು.

ವೈದಿಕಾಧ್ಯಯನೇ ಯುಕ್ತೋ ನೀತಿಶಾಸ್ತ್ರೇ ಚ ಪಾರಗಃ ।
ಭೀಷ್ಮೇಣ ರಾಜನ್ ಕೌರವ್ಯೋ ಧೃತರಾಷ್ಟ್ರೋಽಭಿಷೇಚಿತಃ ॥೧೬॥

ವೈದಿಕಾಧ್ಯಯನವನ್ನು ಮಾಡಿ ನೀತಿ ಶಾಸ್ತ್ರದಲ್ಲಿ ಪಾರಂಗತನಾದ ಧೃತರಾಷ್ಟ್ರನನ್ನು ಭೀಷ್ಮರು ರಾಜ್ಯದಲ್ಲಿ ಅಭಿಷೇಕ ಮಾಡಿದರು.

ಧನುರ್ವೇದೇಽಶ್ವಪೃಷ್ಠೇ ಚ ಗದಾಯುದ್ಧೇಽಸಿಚರ್ಮಣಿ ।
ತಥೈವ ಗಜಶಿಕ್ಷಾಯಾಮಸ್ತ್ರೇಷು ವಿವಿಧೇಷು ಚ ॥೧೭॥

ಅರ್ಥಧರ್ಮಪ್ರಧಾನಾಸು ವಿದ್ಯಾಸು ವಿವಿಧಾಸು ಚ ।
ಗತಃ ಪಾರಂ ಯದಾ ಪಾಂಡುಸ್ತದಾ ಸೇನಾಪತಿಃ ಕೃತಃ ॥೧೮॥

ಧನುರ್ವೇದದಲ್ಲಿಯೂ, ಅಶ್ವಪೃಷ್ಠದಲ್ಲಿಯೂ, ಗದಾಯುದ್ಧ- ದಲ್ಲಿಯೂ, ಖಡ್ಗವಿದ್ಯೆಯಲ್ಲಿಯೂ, ಗಜಶಿಕ್ಷೆಯಲ್ಲಿಯೂ, ವಿವಿಧ ಅಸ್ತ್ರವಿದ್ಯೆಯಲ್ಲಿಯೂ, ಅರ್ಥಶಾಸ್ತ್ರದಲ್ಲಿಯೂ, ಧರ್ಮಶಾಸ್ತ್ರದಲ್ಲಿಯೂ, ಇನ್ನೂ ಅನೇಕ ವಿದ್ಯೆಗಳಲ್ಲಿಯೂ ಪಾರಂಗತನಾದ ಪಾಂಡುವನ್ನು ಆಗ ಸೇನಾಪತಿಯನ್ನಾಗಿ ಮಾಡಿದರು.

ಧೃತರಾಷ್ಟ್ರ ಶ್ಚಕ್ಷುಷ್ಟಾ ದ್ವೈ ರಾಜ್ಯಂ ನ ಪ್ರತ್ಯಪದ್ಯತ ।
ಕರಣತ್ವಾಚ್ಚ ವಿದುರಃ ಪಾಂಡುಶ್ಚಾಸೀನ್ಮಹೀಪತಿಃ ॥೧೯॥

ಧೃತರಾಷ್ಟ್ರನು ನೇತ್ರಹೀನನಾದ್ದರಿಂದ ರಾಜ್ಯವನ್ನು ಪಡೆಯಲೇ ಇಲ್ಲ. ಶೂದ್ರಯೋನಿಯಲ್ಲಿ ಹುಟ್ಟಿದ ನಿಮಿತ್ತದಿಂದ ವಿದುರನೂ ರಾಜ್ಯವನ್ನು ಪಡೆಯಲಿಲ್ಲ. ಪಾಂಡುವೇ ರಾಜನಾದನು.

ಅಮಾತ್ಯೋ ಮನುಜೇಂದ್ರಸ್ಯ ಬಾಲ ಏವ ಯಶಸ್ವಿನಃ ।
ಪ್ರಣೇತಾ ಸರ್ವಧರ್ಮಾಣಾಂ ಭೀಷ್ಮೇಣ ವಿದುರಃ ಕೃತಃ ॥೨೦॥

ಯಶಸ್ವಿಯಾದ ಮನುಜೇಂದ್ರನಾದ ಪಾಂಡುವಿಗೆ ಬಾಲ್ಯದಿಂದಲೇ ಅಮಾತ್ಯನೂ, ಸರ್ವಧರ್ಮ ಉಪದೇಶಕನೂ ಆಗುವಂತೆ ಭೀಷ್ಮರು ವಿದುರನನ್ನು ಇರಿಸಿದರು.

ಸರ್ವಶಾಸ್ತ್ರಾರ್ಥತತ್ತ್ವಜ್ಞೋ ಬುದ್ಧಿಮೇಧಾಪಟುರ್ಯುವಾ ।
ಭಾವೇನಾಗಮಯುಕ್ತೇನ ಸರ್ವಂ ವೇದಯತೇ ಜಗತ್ ॥೨೧॥

ಸರ್ವಶಾಸ್ತ್ರವನ್ನು ತಿಳಿದವನೂ, ಬುದ್ಧಿವಂತನೂ, ಮೇಧಾವಿಯೂ, ಯುವಕನೂ ಆದ ಆವನು ಶಾಸ್ತ್ರಾರ್ಥಕ್ಕೆ ಅನುಗುಣವಾಗಿ ಎಲ್ಲಾ ಜಗತ್ತನ್ನು ತಿಳಿಯುತ್ತಿದ್ದನು.

ಪ್ರನಷ್ಟಃ ಶಂತನೋರ್ವಂಶೋ ಭೀಷ್ಮೇಣ ಪುನರುದ್ಧೃತಃ ।
ತತೋ ನಿರ್ವಚನಂ ಸತ್ಸು ತದಿದಂ ಪರಿಪಠ್ಯತೇ ॥೨೨॥

ನಾಶ ಹೊಂದಿದ್ದ ಶಂತನುವಿನ ವಂಶವನ್ನು ಭೀಷ್ಮರು ಪುನಃ ಪ್ರತಿಷ್ಠೆ ಮಾಡಿದರು. ಆದ್ದರಿಂದ ಸಜ್ಜನರಲ್ಲಿ ಈ ಒಂದು ಮಾತಿನ ಪರಿಪಾಠವಿದೆ.

ಕೌಸಲ್ಯಾ ವೀರಸೂಃ ಸ್ತ್ರೀಣಾಂ ದೇಶಾನಾಂ ಕುರುಜಾಂಗಲಮ್ ।
ಭೀಷ್ಮೋ ಧರ್ಮಭೃತಾಂ ಶ್ರೇಷ್ಠಃ ಪುರಾಣಾಂ ಗಜಸಾಹ್ವಯಮ್ ॥೨೩॥

ಸ್ತ್ರೀಯರಲ್ಲಿ ವೀರರನ್ನು ಪಡೆದ ಕೌಸಲ್ಯೆಯು ಶ್ರೇಷ್ಠಳಾದವಳು. ದೇಶಗಳಲ್ಲಿ ಕುರುಜಾಂಗಲವು ಶ್ರೇಷ್ಠವಾದುದು. ಧರ್ಮಿಷ್ಠರಲ್ಲಿ ಭೀಷ್ಮರು ಶ್ರೇಷ್ಠರಾದವರು. ಪಟ್ಟಣಗಳಲ್ಲಿ ಹಸ್ತಿನಪುರವು ಶ್ರೇಷ್ಠವಾದುದು.

ತೇ ತ್ರಯಃ ಕಾಲಯೋಗೇನ ಕುಮಾರಾಃ ಜನಮೇಜಯ ।
ಅವರ್ಧಂತ ಮಹಾತ್ಮನೋ ನಂದಯಂತಃ ಸುಹೃಜ್ಜನಾನ್ ॥೨೪॥

ಜನಮೇಜಯನೇ, ಆ ಮೂರು ಕುಮಾರರೂ ಕಾಲಯೋಗದಿಂದ ಸುಹೃದ್‌ಬಾಂಧವರನ್ನು ಸಂತೋಷಗೊಳಿಸುತ್ತಾ ಮಹಾತ್ಮರಾಗಿ ಬೆಳೆದರು.

ಸಂಸ್ಕಾರೈಃ ಸಂಸ್ಕೃತಾಸ್ತೇ ವೈ ವೃತ್ತೇನಾಧ್ಯಯನೇನ ಚ ।
ಶ್ರಮವ್ಯಾಯಾಮಕುಶಲಾಃ ಸಮಪದ್ಯಂತ ಯೌವನಮ್ ।
ಧನುರ್ವೇದೇ ಚ ಮುಷ್ಟೌ ಚ ಗದಾ ಯುದ್ಧೇಽಸಿಚರ್ಮಣಿ ॥೨೫॥

ಅವರು ಎಲ್ಲಾ ಸಂಸ್ಕಾರಗಳಿಂದಲೂ ಸಂಸ್ಕೃತರಾಗಿ, ಒಳ್ಳೆಯ ನಡತೆಯಿಂದಲೂ, ಅಧ್ಯಯನದಿಂದಲೂ ಕೂಡಿದವರಾಗಿ, ಶ್ರಮಯುಕ್ತವಾದ ವ್ಯಾಯಾಮಗಳನ್ನು ಮಾಡುವುದರಲ್ಲಿ ಕುಶಲರಾಗಿ ಯೌವನವನ್ನು ಹೊಂದಿದರು. ಧನುರ್ವೇದದಲ್ಲಿಯೂ, ಮುಷ್ಟಿಯುದ್ಧದಲ್ಲಿಯೂ ಗದಾಯುದ್ಧದಲ್ಲಿಯೂ, ಖಡ್ಗಯುದ್ಧದಲ್ಲಿಯೂ ಪಾರಂಗತರಾದರು.

ತಥೈವ ಗಜಶಿಕ್ಷಾಯಾಂ ನೀತಿಶಾಸ್ತ್ರೇಷು ಪಾರಗಾಃ ।
ಇತಿಹಾಸಪುರಾಣೇಷು ನಾನಾಶಾಸ್ತ್ರೇಷು ಪಾರಗಾಃ ॥೨೬॥

ಹಾಗೆಯೇ ಗಜಶಿಕ್ಷೆಯಲ್ಲಿಯೂ, ನೀತಿಶಾಸ್ತ್ರಗಳಲ್ಲಿಯೂ, ಇತಿಹಾಸಪುರಾಣಗಳಲ್ಲಿಯೂ, ನಾನಾಶಾಸ್ತ್ರಗಳಲ್ಲಿಯೂ ಪಾರಂಗತ- ರಾದರು.

ವೇದವೇದಾಂಗತತ್ತ್ವಜ್ಞಾಃ ಸರ್ವತ್ರ ಚ ಕೃತಶ್ರಮಾಃ ।
ಅತೀವ ಬಲವಾನಾಸೀದ್ ಧೃತರಾಷ್ಟ್ರೋಽಂಬಿಕಾಸುತಃ ।
ಪಾಂಡುರ್ಧನುಷಿ ವಿಕ್ರಾಂತೋ ನರೇಷ್ವಭ್ಯಧಿಕೋಽಭವತ್ ॥೨೭॥

ಅವರು ವೇದವೇದಾಂಗತತ್ತ್ವಜ್ಞರಾಗಿ ಎಲ್ಲಾ ವಿದ್ಯೆಗಳಲ್ಲಿಯೂ ಪರಿಶ್ರಮವನ್ನು ಪಡೆದವರಾದರು. ಅವರಲ್ಲಿ ಅಂಬಿಕಾತನಯನಾದ ಧೃತರಾಷ್ಟ್ರನು ಹೆಚ್ಚು ಬಲದಿಂದ

ಕೂಡಿದವನಾಗಿದ್ದನು. ಧನುರ್ವಿದ್ಯೆಯಲ್ಲಿ ಪಾರಂಗತನಾದ ಪಾಂಡುವು ಮನುಷ್ಯರಲ್ಲಿ ಅಭ್ಯಧಿಕನೆನಿಸಿದನು.

ತ್ರಿಷು ಲೋಕೇಷು ನತ್ವಾಸೀತ್ ಪ್ರಾಣೇ ವಿದುರಸಮ್ಮಿತಃ ।
ಧರ್ಮನಿತ್ಯೋ ಹಿ ಧರ್ಮಸ್ಯ ಬುದ್ಧ್ಯಾ ಚೈವ ಗತಿಂ ಗತಃ ॥೨೮॥

ವಿದುರನಿಗೆ ಸಮಾನನಾದ ಧರ್ಮನಿತ್ಯನಾದ, ಧರ್ಮದ- ಬುದ್ಧಿಯಿಂದಲೇ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದ ವ್ಯಕ್ತಿಯು ಮೂರು ಲೋಕಗಳಲ್ಲೂ ಇರಲಿಲ್ಲ.

ಅಥ ಶುಶ್ರಾವ ವಿಪ್ರೇಭ್ಯೋ ದೇವಕಸ್ಯ ಮಹೀಪತೇಃ ।
ರೂಪಯೌವನಸಂಪನ್ನಾಂ ಸುತಾಂ ಸಾಗರಗಾಸುತಃ ॥೨೯॥

ಸುಬಲಸ್ಯ ಚ ಕಲ್ಯಾಣೀಂ ಗಾಂಧಾರಾಧಿಪತೇಃ ಸುತಾಮ್ ।
ಸುತಾಂ ಚ ಮದ್ರರಾಜಸ್ಯ ರೂಪೇಣಾಪ್ರತಿಮಾಂ ಭುವಿ ॥೩೦॥

ಅನಂತರ ಭೀಷ್ಮನು ದೇವಕರಾಜನ ಮಗಳು ರೂಪಯೌವನ- ಸಂಪನ್ನಳಾಗಿ ವಿವಾಹಕ್ಕೆ ಯೋಗ್ಯಳಾಗಿದ್ದಾಳೆ ಎಂಬ ವಿಷಯವನ್ನು ಬ್ರಾಹ್ಮಣರಿಂದ ಕೇಳಿದನು. ಹಾಗೆಯೇ, ಗಾಂಧಾರರಾಜನಾದ ಸುಬಲನ ಮಗಳೂ, ಹಾಗೆಯೇ, ಮದ್ರರಾಜನ ಮಗಳೂ ಸಹಾ ಭೂಮಿಯಲ್ಲಿ ಅಪ್ರತಿಮರೂಪದಿಂದ ಕೂಡಿದವರೆಂದು ಬ್ರಾಹ್ಮಣರಿಂದ ತಿಳಿದರು.

ಭೀಷ್ಮಃ

ಗುಣೈಃ ಸಮುದಿತಂ ನಿತ್ಯಮಿದಂ ನಃ ಪ್ರಥಿತಂ ಕುಲಮ್ ।
ಅತ್ಯನ್ಯಾನ್ ಪೃಥಿವೀಪಾಲಾನ್ ಪೃಥಿವ್ಯಾಮಪಿ ರಾಜಕಾನ್ ॥೩೧॥

ನಮ್ಮ ಈ ಪ್ರಸಿದ್ಧವಾದ ಕುಲವು ಯಾವಾಗಲೂ ಗುಣಗಳಿಂದ ಉನ್ನತಿಯನ್ನು ಹೊಂದಿದೆ. ಇಲ್ಲಿಯ ರಾಜರುಗಳು ತಮ್ಮ ಗುಣಗಳಿಂದ ಭೂಮಿಯಲ್ಲಿರುವ ಬೇರೆ ರಾಜರನ್ನು ಮೀರಿದ್ದಾರೆ.

ರಕ್ಷಿತಂ ರಾಜಭಿಃ ಪೂರ್ವೈರ್ಧರ್ಮನಿತ್ಯೈರ್ಮಹಾತ್ಮಭಿಃ ।
ನೋತ್ಸಾದಮಗಮಚ್ಚೇದಂ ಕಥಂಚಿದಿಹ ನಃ ಕುಲಮ್ ॥೩೨॥

ಪೂರ್ವದಲ್ಲಿ ಧರ್ಮನಿತ್ಯರಾದ, ಮಹಾತ್ಮರಾದ, ರಾಜರಿಂದ ರಕ್ಷಿಸಲ್ಪಟ್ಟ ಈ ನಮ್ಮ ಕುಲವು ಯಾವ ರೀತಿಯಲ್ಲಿಯೂ ನಾಶವನ್ನು ಹೊಂದಲಿಲ್ಲ.

ಮಯಾ ಚ ಸತ್ಯವತ್ಯಾ ಚ ಕೃಷ್ಣೇನ ಚ ಮಹಾತ್ಮನಾ ।
ಸಮವಸ್ಥಾಪಿತಂ ಭೂಯೋ ಯುಷ್ಮಾಸು ಕುಲತಂತುಷು ॥೩೩॥

ವೇದವ್ಯಾಸರು, ಸತ್ಯವತೀ ಮತ್ತು ನಾನು, ಈ ಮೂವರೂ ಸೇರಿ ಈ ಕುಲವನ್ನು ಕುಲದ ತಂತುಗಳಾದ ನಿಮ್ಮಲ್ಲಿ ಸ್ಥಾಪಿಸಿದ್ದೇವೆ.

ವರ್ಧೇತ ತದಿದಂ ಪುತ್ರ ಕುಲಂ ಸಾಗರವದ್ ಯಥಾ ।
ತಥಾ ಮಯಾ ವಿಧಾತವ್ಯಂ ತ್ವಯಾ ಚೈವ ವಿಶೇಷತಃ ॥೩೪॥

ಪುತ್ರನೇ, ಈ ನಮ್ಮ ಕುಲವು ಸಾಗರದಂತೆ ಅಭಿವೃದ್ಧಿಯನ್ನು ಹೊಂದುವಂತೆ ನಾನು ಮತ್ತು ನೀವು ವಿಶೇಷವಾದ ಪ್ರಯತ್ನವನ್ನು ಮಾಡಬೇಕು.

ಶ್ರೂಯತೇ ಯಾದವೀ ಕನ್ಯಾ ಹ್ಯನುರೂಪಾ ಕುಲಸ್ಯ ನಃ ।
ಸುಬಲಸ್ಯಾತ್ಮಜಾ ಚೈವ ತಥಾ ಮದ್ರೇಶ್ವರಸ್ಯ ಚ ॥೩೫॥

ಯಾದವಕನ್ಯೆಯಾದ ಕುಂತಿಯೂ, ಸುಬಲನ ಮಗಳಾದ ಗಾಂಧಾರಿಯೂ, ಮದ್ರೇಶ್ವರನ ಮಗಳಾದ ಮಾದ್ರಿಯೂ ಸಹ ನಮ್ಮ ಕುಲಕ್ಕೆ ಅನುರೂಪರಾದವರೆಂದು ಕೇಳಿ ಬರುತ್ತಿದೆ.

ಕುಲೀನಾ ರೂಪವತ್ಯಶ್ಚ ನಾಥವತ್ಯಶ್ಚ ಸರ್ವಶಃ ।
ಉಚಿತಾಶ್ಚೈವ ಸಂಬಂಧೇ ತೇಽಸ್ಮಾಕಂ ಕ್ಷತ್ರಿಯೋತ್ತಮಾಃ ॥೩೬॥

ಕ್ಷತ್ರಿಯೋತ್ತಮರಾದ ಆ ಕನ್ಯೆಯರೆಲ್ಲರೂ, ಸತ್ಕುಲದಲ್ಲಿ ಜನಿಸಿದವರು, ರೂಪವತಿಯರು, ನಾಥರಾದ ತಂದೆ, ಅಣ್ಣಂದಿರನ್ನು ಹೊಂದಿದವರು ಮತ್ತು ನಮ್ಮ ಸಂಬಂಧಕ್ಕೆ ಯೋಗ್ಯರಾದವರು.

ಮನ್ಯೇ ವರಯಿತವ್ಯಾಸ್ತಾ ಇತ್ಯಹಂ ಧೀಮತಾಂ ವರ ।
ಸಮಾನಾರ್ಥಾಃ ಕುಲಸ್ಯಾಸ್ಯ ಯದ್ವಾ ವಿದುರ ಮನ್ಯಸೇ ॥೩೭॥

ಕೂಡಿದವನಾಗಿದ್ದನು. ಧನುರ್ವಿದ್ಯೆಯಲ್ಲಿ ಪಾರಂಗತನಾದ ಪಾಂಡುವು ಮನುಷ್ಯರಲ್ಲಿ ಅಭ್ಯಧಿಕನೆನಿಸಿದನು.

ತ್ರಿಷು ಲೋಕೇಷು ನತ್ವಾಸೀತ್ ಪ್ರಾಣೇ ವಿದುರಸಮ್ಮಿತಃ ।
ಧರ್ಮನಿತ್ಯೋ ಹಿ ಧರ್ಮಸ್ಯ ಬುದ್ಧ್ಯಾ ಚೈವ ಗತಿಂ ಗತಃ ॥೨೮॥

ವಿದುರನಿಗೆ ಸಮಾನನಾದ ಧರ್ಮನಿತ್ಯನಾದ, ಧರ್ಮದ- ಬುದ್ಧಿಯಿಂದಲೇ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದ ವ್ಯಕ್ತಿಯು ಮೂರು ಲೋಕಗಳಲ್ಲೂ ಇರಲಿಲ್ಲ.

ಅಥ ಶುಶ್ರಾವ ವಿಪ್ರೇಭ್ಯೋ ದೇವಕಸ್ಯ ಮಹೀಪತೇಃ ।
ರೂಪಯೌವನಸಂಪನ್ನಾಂ ಸುತಾಂ ಸಾಗರಗಾಸುತಃ ॥೨೯॥

ಸುಬಲಸ್ಯ ಚ ಕಲ್ಯಾಣೀಂ ಗಾಂಧಾರಾಧಿಪತೇಃ ಸುತಾಮ್ ।
ಸುತಾಂ ಚ ಮದ್ರರಾಜಸ್ಯ ರೂಪೇಣಾಪ್ರತಿಮಾಂ ಭುವಿ ॥೩೦॥

ಅನಂತರ ಭೀಷ್ಮನು ದೇವಕರಾಜನ ಮಗಳು ರೂಪಯೌವನ- ಸಂಪನ್ನಳಾಗಿ ವಿವಾಹಕ್ಕೆ ಯೋಗ್ಯಳಾಗಿದ್ದಾಳೆ ಎಂಬ ವಿಷಯವನ್ನು ಬ್ರಾಹ್ಮಣರಿಂದ ಕೇಳಿದನು. ಹಾಗೆಯೇ, ಗಾಂಧಾರರಾಜನಾದ ಸುಬಲನ ಮಗಳೂ, ಹಾಗೆಯೇ, ಮದ್ರರಾಜನ ಮಗಳೂ ಸಹಾ ಭೂಮಿಯಲ್ಲಿ ಅಪ್ರತಿಮರೂಪದಿಂದ ಕೂಡಿದವರೆಂದು ಬ್ರಾಹ್ಮಣರಿಂದ ತಿಳಿದರು.

ಭೀಷ್ಮಃ

ಗುಣೈಃ ಸಮುದಿತಂ ನಿತ್ಯಮಿದಂ ನಃ ಪ್ರಥಿತಂ ಕುಲಮ್ ।
ಅತ್ಯನ್ಯಾನ್ ಪೃಥಿವೀಪಾಲಾನ್ ಪೃಥಿವ್ಯಾಮಪಿ ರಾಜಕಾನ್ ॥೩೧॥

ನಮ್ಮ ಈ ಪ್ರಸಿದ್ಧವಾದ ಕುಲವು ಯಾವಾಗಲೂ ಗುಣಗಳಿಂದ ಉನ್ನತಿಯನ್ನು ಹೊಂದಿದೆ. ಇಲ್ಲಿಯ ರಾಜರುಗಳು ತಮ್ಮ ಗುಣಗಳಿಂದ ಭೂಮಿಯಲ್ಲಿರುವ ಬೇರೆ ರಾಜರನ್ನು ಮೀರಿದ್ದಾರೆ.

ರಕ್ಷಿತಂ ರಾಜಭಿಃ ಪೂರ್ವೈರ್ಧರ್ಮನಿತ್ಯೈರ್ಮಹಾತ್ಮಭಿಃ ।
ನೋತ್ಸಾದಮಗಮಚ್ಚೇದಂ ಕಥಂಚಿದಿಹ ನಃ ಕುಲಮ್ ॥೩೨॥

ಪೂರ್ವದಲ್ಲಿ ಧರ್ಮನಿತ್ಯರಾದ, ಮಹಾತ್ಮರಾದ, ರಾಜರಿಂದ ರಕ್ಷಿಸಲ್ಪಟ್ಟ ಈ ನಮ್ಮ ಕುಲವು ಯಾವ ರೀತಿಯಲ್ಲಿಯೂ ನಾಶವನ್ನು ಹೊಂದಲಿಲ್ಲ.

ಮಯಾ ಚ ಸತ್ಯವತ್ಯಾ ಚ ಕೃಷ್ಣೇನ ಚ ಮಹಾತ್ಮನಾ ।
ಸಮವಸ್ಥಾಪಿತಂ ಭೂಯೋ ಯುಷ್ಮಾಸು ಕುಲತಂತುಷು ॥೩೩॥

ವೇದವ್ಯಾಸರು, ಸತ್ಯವತೀ ಮತ್ತು ನಾನು, ಈ ಮೂವರೂ ಸೇರಿ ಈ ಕುಲವನ್ನು, ಕುಲದ ತಂತುಗಳಾದ ನಿಮ್ಮಲ್ಲಿ ಸ್ಥಾಪಿಸಿದ್ದೇವೆ.

ವರ್ಧೇತ ತದಿದಂ ಪುತ್ರ ಕುಲಂ ಸಾಗರವದ್ ಯಥಾ ।
ತಥಾ ಮಯಾ ವಿಧಾತವ್ಯಂ ತ್ವಯಾ ಚೈವ ವಿಶೇಷತಃ ॥೩೪॥

ಪುತ್ರನೇ, ಈ ನಮ್ಮ ಕುಲವು ಸಾಗರದಂತೆ ಅಭಿವೃದ್ಧಿಯನ್ನು ಹೊಂದುವಂತೆ ನಾನು ಮತ್ತು ನೀವು ವಿಶೇಷವಾದ ಪ್ರಯತ್ನವನ್ನು ಮಾಡಬೇಕು.

ಶ್ರೂಯತೇ ಯಾದವೀ ಕನ್ಯಾ ಹ್ಯನುರೂಪಾ ಕುಲಸ್ಯ ನಃ ।
ಸುಬಲಸ್ಯಾತ್ಮಜಾ ಚೈವ ತಥಾ ಮದ್ರೇಶ್ವರಸ್ಯ ಚ ॥೩೫॥

ಯಾದವಕನ್ಯೆಯಾದ ಕುಂತಿಯೂ, ಸುಬಲನ ಮಗಳಾದ ಗಾಂಧಾರಿಯೂ, ಮದ್ರೇಶ್ವರನ ಮಗಳಾದ ಮಾದ್ರಿಯೂ ಸಹ ನಮ್ಮ ಕುಲಕ್ಕೆ ಅನುರೂಪರಾದವರೆಂದು ಕೇಳಿ ಬರುತ್ತಿದೆ.

ಕುಲೀನಾ ರೂಪವತ್ಯಶ್ಚ ನಾಥವತ್ಯಶ್ಚ ಸರ್ವಶಃ ।
ಉಚಿತಾಶ್ಚೈವ ಸಂಬಂಧೇ ತೇಽಸ್ಮಾಕಂ ಕ್ಷತ್ರಿಯೋತ್ತಮಾಃ ॥೩೬॥

ಕ್ಷತ್ರಿಯೋತ್ತಮರಾದ ಆ ಕನ್ಯೆಯರೆಲ್ಲರೂ, ಸತ್ಕುಲದಲ್ಲಿ ಜನಿಸಿದವರು, ರೂಪವತಿಯರು, ನಾಥರಾದ ತಂದೆ, ಅಣ್ಣಂದಿರನ್ನು ಹೊಂದಿದವರು ಮತ್ತು ನಮ್ಮ ಸಂಬಂಧಕ್ಕೆ ಯೋಗ್ಯರಾದವರು.

ಮನ್ಯೇ ವರಯಿತವ್ಯಾಸ್ತಾ ಇತ್ಯಹಂ ಧೀಮತಾಂ ವರ ।
ಸಮಾನಾರ್ಥಾಃ ಕುಲಸ್ಯಾಸ್ಯ ಯದ್ವಾ ವಿದುರ ಮನ್ಯಸೇ ॥೩೭॥

ಮೇಧಾವಿಯಾದವರಲ್ಲಿ ಶ್ರೇಷ್ಠನೇ, ನಾನು ಕುಲಕ್ಕಾಗಿ ಅವರನ್ನು ವರಿಸಬೇಕೆಂದು ಭಾವಿಸುತ್ತೇನೆ. ಅವರು ನಮ್ಮ ಕುಲಕ್ಕೆ ಸಮಾನವಾದ ಪ್ರಯೋಜನವನ್ನು ತಂದು ಕೊಡುವರು. ಎಲ್ಲೆ ವಿದುರನೇ, ಅಥವಾ ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು?

ವಿದುರಃ

ಭವಾನ್ ಪಿತಾ ಭವಾನ್‌ಮಾತಾ ಭವಾನ್ ನಃ ಪರಮೋ ಗುರುಃ ।
ತಸ್ಮಾತ್ ಸ್ವಯಂ ಕುಲಸ್ಯಾಸ್ಯ ವಿಚಾರ್ಯ ಕುರು ಯದ್ ಹಿತಮ್ ॥

ನೀವೇ ತಂದೆ. ನೀವೇ ನಮ್ಮ ತಾಯಿ. ನೀವೇ ನಮ್ಮ ಶ್ರೇಷ್ಠರಾದ ಗುರುಗಳು. ಆದ್ದರಿಂದ ನಮ್ಮ ಕುಲಕ್ಕೆಯಾವುದು ಹಿತ ಎಂದು ಸ್ವಯಂ ವಿಚಾರ ಮಾಡಿ ಅದರಂತೆ ನಡೆಯಿರಿ.

ವೈಶಂಪಾಯನಃ

ಅಥ ಶುಶ್ರಾವ ವಿಪ್ರೇಭ್ಯೋ ಗಾಂಧಾರೀಂ ಸುಬಲಾತ್ಮಜಾಮ್ ।
ಆರಾಧ್ಯ ವರದಂ ದೇವಂ ಭಗನೇತ್ರಹರಂ ಹರಮ್ ।
ಗಾಂಧಾರೀ ಕಿಲ ಪುತ್ರಾಣಾಂ ಶತಂ ಲೇಭೇ ವರಂ ಪುರಾ ॥೩೯॥

ಆ ಸಮಯಕ್ಕೆ ಸರಿಯಾಗಿ ಸುಬಲನ ಮಗಳಾದ ಗಾಂಧಾರಿಯು ಈಶ್ವರನನ್ನು ಆರಾಧಿಸಿ ನೂರು ಮಕ್ಕಳನ್ನು ಪಡೆಯಬೇಕೆಂಬ ವರವನ್ನು ಪಡೆದಿದ್ದಾಳೆ ಎಂಬ ವಿಷಯವನ್ನು ಭೀಷ್ಮರು ಬ್ರಾಹ್ಮಣರಿಂದ ಕೇಳಿ ತಿಳಿದರು

ಇತಿ ಶ್ರುತ್ವಾ ಚ ತತ್ತ್ವೇನ ಭೀಷ್ಮಃ ಕುರುಪಿತಾಮಹಃ ।
ತತೋ ಗಾಂಧಾರರಾಜಸ್ಯ ಪ್ರೇಷಯಾಮಾಸ ಕೌರವಃ ।
ಅಚಕ್ಷುರಿತಿ ತಸ್ಯಾಸೀತ್ ಸುಬಲಸ್ಯ ವಿಚಾರಣಾ ॥೪೦॥

ಕುರುಪಿತಾಮಹರಾದ ಭೀಷ್ಮರು ಇದನ್ನು ಯಥಾರ್ಥವಾಗಿ ತಿಳಿದು ಗಾಂಧಾರ ರಾಜನ ಬಳಿಗೆ ತಮ್ಮ ದೂತನನ್ನು ಕಳುಹಿಸಿದರು. ಸುಬಲನು ಧೃತರಾಷ್ಟ್ರನು ನೇತ್ರಹೀನನೆಂದು ವಿಚಾರ ಮಾಡುತ್ತಿದ್ದನು.

ಬಲಖ್ಯಾತಿಂ ಚ ವೃದ್ಧಿಂ ಚ ಬುದ್ಧ್ಯಾ ತು ಪ್ರಸಮೀಕ್ಷ್ಯ ಚ ।
ದದೌ ತಾಂ ಧೃತರಾಷ್ಟ್ರಾಯ ಗಾಂಧಾರೀಂ ಧರ್ಮಚಾರಿಣೀಮ್ ॥೪೧॥

ಆದರೆ ಬಲದ ಪ್ರಸಿದ್ಧಿಯನ್ನೂ, ರಾಜ್ಯದ ಸಮೃದ್ಧಿಯನ್ನೂ, ಬುದ್ಧಿಯಿಂದ ವಿವೇಚಿಸಿ ಧರ್ಮಚಾರಿಣಿಯಾದ ಗಾಂಧಾರಿಯನ್ನು ಧೃತರಾಷ್ಟ್ರನಿಗೆ ಕೊಟ್ಟನು. (ಕೊಡಲು ಇಚ್ಛಿಸಿದನು)

ಗಾಂಧಾರೀ ತ್ವಥ ಶುಶ್ರಾವ ಧೃತರಾಷ್ಟ್ರಂ ತ್ವಚಕ್ಷುಷಮ್ ।
ಆತ್ಮಾನಂ ದಿತ್ಸಿತಾಂ ತತ್ರ ಪಿತುರ್ಮಾತುಶ್ಚ ಕೌರವ ॥೪೨॥

ಎಲೈ ಕೌರವನೇ ಗಾಂಧಾರಿಯು ತನ್ನನ್ನು ನೇತ್ರಹೀನನಾದ ಧೃತರಾಷ್ಟ್ರನಿಗೆ ಕೊಡುವುದಾಗಿ ತಂದೆ ಮತ್ತು ತಾಯಿಗೆ ಅಭಿಪ್ರಾಯವಿದೆ ಎಂದು ತಿಳಿದಳು.

ತತಃ ಸಾ ಪಟ್ಟಮಾನಾಯ್ಯ ಕೃತ್ವಾ ಬಹುಗುಣಂ ಶುಭಾ ।
ನ ಪಶ್ಯತೀತಿ ಭರ್ತಾ ಮೇ ವೇಷ್ಟಯಾಮಾಸ ಚಕ್ಷುಷೀ ।
ನಾತ್ಯಶ್ನೀಯಾಂ ಪತಿಮಹಮಿತ್ಯೇವಂ ಕೃತನಿಶ್ಚಯಾ ॥೪೩॥

ಆಗ ಅವಳು ಒಂದು ರೇಷ್ಮೆ ವಸ್ತ್ರವನ್ನು ತರಿಸಿ ಅನೇಕ ಬಾರಿ ಅದನ್ನು ಮಡಿಸಿ, ನನ್ನ ಪತಿಯು ನೋಡುವುದಿಲ್ಲ ಎಂಬ ಕಾರಣದಿಂದ ಆ ವಸ್ತ್ರವನ್ನು ಶುಭಳಾದ ಅವಳು ತನ್ನ ಕಣ್ಣುಗಳಿಗೆ ಕಟ್ಟಿಕೊಂಡಳು. ನನ್ನ ಪತಿಯು ಭೋಗಿಸದಿದ್ದ ವಸ್ತುವನ್ನು ನಾನು ಭೋಗಿಸುವುದಿಲ್ಲ ಎಂಬ ಅವಳ ನಿಶ್ಚಯವು ದೃಢವಾಗಿತ್ತು.

ತತೋ ಗಾಂಧಾರರಾಜಸ್ಯ ಸುತಃ ಶಕುನಿರಾವ್ರಜತ್ ।
ಸ್ವಸಾರಂ ಪರಯಾ ಲಕ್ಷ್ಮ್ಯಾ ಯುಕ್ತಾಮಾದಾಯ ಕೌರವ ॥೪೪॥

ಎಲೈ ಕೌರವನೇ, ಅನಂತರ ಗಾಂಧಾರರಾಜನ ಮಗನಾದ ಶಕುನಿಯು ಬಹಳ ಸಂಪತ್ತಿನ ಜೊತೆಯಲ್ಲಿ ಕರೆದುಕೊಂಡು ಹಸ್ತಿನಪುರಕ್ಕೆ ಬಂದನು.

ತತೋ ವಿವಾಹಂ ಚಕ್ರೇಸ್ಯಾ ನಕ್ಷತ್ರೇ ಸರ್ವಸಮ್ಮತೇ ।
ಸೌಬಲಃ ಸ ಮಹಾರಾಜಃ ಶಕುನಿಃ ಪ್ರಿಯದರ್ಶನಃ ॥೪೫॥

ಅನಂತರ ಸರ್ವಸಮ್ಮತವಾದ ಶುಭನಕ್ಷತ್ರ ಮುಹೂರ್ತದಲ್ಲಿ ಸುಬಲಪುತ್ರನೂ, ಪ್ರಿಯದರ್ಶನನೂ ಆದ ಶಕುನಿಯು, ತಂಗಿಯ ವಿವಾಹವನ್ನು ಮಾಡಿದನು.

ದತ್ತ್ವಾ ಸ್ವಭಗಿನೀಂ ತತ್ರ ಯಥಾರ್ಹಂ ಚ ಪರಿಚ್ಛದಮ್ ।
ಪುನರಾಗಾತ್ ಸ್ವನಗರಂ ಭೀಷ್ಮೇಣ ಪರಿಪೂಜಿತಃ ॥೪೬॥

ಮೇಧಾವಿಯಾದವರಲ್ಲಿ ಶ್ರೇಷ್ಠನೇ, ನಾನು ಕುಲಕ್ಕಾಗಿ ಅವರನ್ನು ವರಿಸಬೇಕೆಂದು ಭಾವಿಸುತ್ತೇನೆ. ಅವರು ನಮ್ಮ ಕುಲಕ್ಕೆ ಸಮಾನವಾದ ಪ್ರಯೋಜನವನ್ನು ತಂದು ಕೊಡುವರು. ಎಲೈ ವಿದುರನೇ, ಅಥವಾ ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು?

ವಿದುರಃ

ಭವಾನ್ ಪಿತಾ ಭವಾನ್‌ಮಾತಾ ಭವಾನ್ ನಃ ಪರಮೋ ಗುರುಃ ।
ತಸ್ಮಾತ್ ಸ್ವಯಂ ಕುಲಸ್ಯಾಸ್ಯ ವಿಚಾರ್ಯ ಕುರು ಯದ್ ಹಿತಮ್ ॥

ನೀವೇ ತಂದೆ. ನೀವೇ ನಮ್ಮ ತಾಯಿ. ನೀವೇ ನಮ್ಮ ಶ್ರೇಷ್ಠರಾದ ಗುರುಗಳು. ಆದ್ದರಿಂದ ನಮ್ಮ ಕುಲಕ್ಕೆಯಾವುದು ಹಿತ ಎಂದು ಸ್ವಯಂ ವಿಚಾರ ಮಾಡಿ ಅದರಂತೆ ನಡೆಯಿರಿ.

ವೈಶಂಪಾಯನಃ

ಅಥ ಶುಶ್ರಾವ ವಿಪ್ರೇಭ್ಯೋ ಗಾಂಧಾರೀಂ ಸುಬಲಾತ್ಮಜಾಮ್ ।
ಆರಾಧ್ಯ ವರದಂ ದೇವಂ ಭಗನೇತ್ರಹರಂ ಹರಮ್ ।
ಗಾಂಧಾರೀ ಕಿಲ ಪುತ್ರಾಣಾಂ ಶತಂ ಲೇಭೇ ವರಂ ಪುರಾ ॥೩೯॥

ಆ ಸಮಯಕ್ಕೆ ಸರಿಯಾಗಿ ಸುಬಲನ ಮಗಳಾದ ಗಾಂಧಾರಿಯು ಈಶ್ವರನನ್ನು ಆರಾಧಿಸಿ ನೂರು ಮಕ್ಕಳನ್ನು ಪಡೆಯಬೇಕೆಂಬ ವರವನ್ನು ಪಡೆದಿದ್ದಾಳೆ ಎಂಬ ವಿಷಯವನ್ನು ಭೀಷ್ಮರು ಬ್ರಾಹ್ಮಣರಿಂದ ಕೇಳಿ ತಿಳಿದರು

ಇತಿ ಶ್ರುತ್ವಾ ಚ ತತ್ತ್ವೇನ ಭೀಷ್ಮಃ ಕುರುಪಿತಾಮಹಃ ।
ತತೋ ಗಾಂಧಾರರಾಜಸ್ಯ ಪ್ರೇಷಯಾಮಾಸ ಕೌರವಃ ।
ಅಚಕ್ಷುರಿತಿ ತಸ್ಯಾಸೀತ್ ಸುಬಲಸ್ಯ ವಿಚಾರಣಾ ॥೪೦॥

ಕುರುಪಿತಾಮಹರಾದ ಭೀಷ್ಮರು ಇದನ್ನು ಯಥಾರ್ಥವಾಗಿ ತಿಳಿದು ಗಾಂಧಾರ ರಾಜನ ಬಳಿಗೆ ತಮ್ಮ ದೂತನನ್ನು ಕಳುಹಿಸಿದರು. ಸುಬಲನು ಧೃತರಾಷ್ಟ್ರನು ನೇತ್ರಹೀನನೆಂದು ವಿಚಾರ ಮಾಡುತ್ತಿದ್ದನು.

ಬಲಖ್ಯಾತಿಂ ಚ ವೃದ್ಧಿಂ ಚ ಬುದ್ಧ್ಯಾ ತು ಪ್ರಸಮೀಕ್ಷ್ಯ ಚ ।
ದದೌ ತಾಂ ಧೃತರಾಷ್ಟ್ರಾಯ ಗಾಂಧಾರೀಂ ಧರ್ಮಚಾರಿಣೀಮ್ ॥೪೧॥

ಆದರೆ ಬಲದ ಪ್ರಸಿದ್ಧಿಯನ್ನೂ, ರಾಜ್ಯದ ಸಮೃದ್ಧಿಯನ್ನೂ, ಬುದ್ಧಿಯಿಂದ ವಿವೇಚಿಸಿ ಧರ್ಮಚಾರಿಣಿಯಾದ ಗಾಂಧಾರಿಯನ್ನು ಧೃತರಾಷ್ಟ್ರನಿಗೆ ಕೊಟ್ಟನು. (ಕೊಡಲು ಇಚ್ಛಿಸಿದನು)

ಗಾಂಧಾರೀ ತ್ವಥ ಶುಶ್ರಾವ ಧೃತರಾಷ್ಟ್ರಂ ತ್ವಚಕ್ಷುಷಮ್ ।
ಆತ್ಮಾನಂ ದಿತ್ಸಿತಾಂ ತತ್ರ ಪಿತುರ್ಮಾತುಶ್ಚ ಕೌರವ ॥೪೨॥

ಎಲೈ ಕೌರವನೇ ಗಾಂಧಾರಿಯು ತನ್ನನ್ನು ನೇತ್ರಹೀನನಾದ ಧೃತರಾಷ್ಟ್ರನಿಗೆ ಕೊಡುವುದಾಗಿ ತಂದೆ ಮತ್ತು ತಾಯಿಗೆ ಅಭಿಪ್ರಾಯವಿದೆ ಎಂದು ತಿಳಿದಳು.

ತತಃ ಸಾ ಪಟ್ಟಮಾನಾಯ್ಯ ಕೃತ್ವಾ ಬಹುಗುಣಂ ಶುಭಾ ।
ನ ಪಶ್ಯತೀತಿ ಭರ್ತಾ ಮೇ ವೇಷ್ಟಯಾಮಾಸ ಚಕ್ಷುಷೀ ।
ನಾತ್ಯಶ್ನೀಯಾಂ ಪತಿಮಹಮಿತ್ಯೇವಂ ಕೃತನಿಶ್ಚಯಾ ॥೪೩॥

ಆಗ ಅವಳು ಒಂದು ರೇಷ್ಮೆ ವಸ್ತ್ರವನ್ನು ತರಿಸಿ ಅನೇಕ ಬಾರಿ ಅದನ್ನು ಮಡಿಸಿ, ನನ್ನ ಪತಿಯು ನೋಡುವುದಿಲ್ಲ ಎಂಬ ಕಾರಣದಿಂದ ಆ ವಸ್ತ್ರವನ್ನು ಶುಭಳಾದ ಅವಳು ತನ್ನ ಕಣ್ಣುಗಳಿಗೆ ಕಟ್ಟಿಕೊಂಡಳು. ನನ್ನ ಪತಿಯು ಭೋಗಿಸದಿದ್ದ ವಸ್ತುವನ್ನು ನಾನು ಭೋಗಿಸುವುದಿಲ್ಲ ಎಂಬ ಅವಳ ನಿಶ್ಚಯವು ದೃಢವಾಗಿತ್ತು.

ತತೋ ಗಾಂಧಾರರಾಜಸ್ಯ ಸುತಃ ಶಕುನಿರಾವ್ರಜತ್ ।
ಸ್ವಸಾರಂ ಪರಯಾ ಲಕ್ಷ್ಮ್ಯಾ ಯುಕ್ತಾಮಾದಾಯ ಕೌರವ ॥೪೪॥

ಎಲೈ ಕೌರವನೇ, ಅನಂತರ ಗಾಂಧಾರರಾಜನ ಮಗನಾದ ಶಕುನಿಯು ಬಹಳ ಸಂಪತ್ತಿನ ಜೊತೆಯಲ್ಲಿ ಕರೆದುಕೊಂಡು ಹಸ್ತಿನಪುರಕ್ಕೆ ಬಂದನು.

ತತೋ ವಿವಾಹಂ ಚಕ್ರೇಸ್ಯಾ ನಕ್ಷತ್ರೇ ಸರ್ವಸಮ್ಮತೇ ।
ಸೌಬಲಃ ಸ ಮಹಾರಾಜಃ ಶಕುನಿಃ ಪ್ರಿಯದರ್ಶನಃ ॥೪೫॥

ಅನಂತರ ಸರ್ವಸಮ್ಮತವಾದ ಶುಭನಕ್ಷತ್ರ ಮುಹೂರ್ತದಲ್ಲಿ ಸುಬಲಪುತ್ರನೂ, ಪ್ರಿಯದರ್ಶನನೂ ಆದ ಶಕುನಿಯು, ತಂಗಿಯ ವಿವಾಹವನ್ನು ಮಾಡಿದನು.

ದತ್ತ್ವಾ ಸ್ವಭಗಿನೀಂ ತತ್ರ ಯಥಾರ್ಹಂ ಚ ಪರಿಚ್ಛದಮ್ ।
ಪುನರಾಗಾತ್ ಸ್ವನಗರಂ ಭೀಷ್ಮೇಣ ಪರಿಪೂಜಿತಃ ॥೪೬॥

ತಂಗಿಯನ್ನು ವಿವಾಹ ಮಾಡಿಕೊಟ್ಟು ಯಥಾಯೋಗ್ಯವಾದ ಉಡುಗೊರೆಗಳನ್ನೂ ಕೊಟ್ಟು ಭೀಷ್ಮರಿಂದ ಪೂಜಿತನಾಗಿ ತನ್ನ ನಗರಕ್ಕೆ ಹಿಂದಿರುಗಿದನು.

ಗಾಂಧಾರ್ಯಪಿ ವರಾರೋಹಾ ಶೀಲಾಚಾರವಿಚೇಷ್ಟಿತೈಃ ।
ತುಷ್ಟಿಂ ಕುರೂಣಾಂ ಸರ್ವೇಷಾಂ ಜನಯಾಮಾಸ ಭಾರತ ॥೪೭॥

ಎಲೈ ಭಾರತನೇ, ಸುಂದರಿಯಾದ ಗಾಂಧಾರಿಯೂ ಕೂಡ ತನ್ನ ಶೀಲ, ಆಚಾರ ಮತ್ತು ಚೇಷ್ಟೆಗಳಿಂದ ಎಲ್ಲಾ ಕುರುಗಳಿಗೂ ಸಂತೋಷವನ್ನು ಉಂಟುಮಾಡಿದಳು.

ಗಾಂಧಾರೀ ಸ ಪತಿಂ ದೃಷ್ಟ್ವಾ ಪ್ರಜ್ಞಾಚಕ್ಷುಷಮೀಶ್ವರಮ್ ।
ಅತಿಚಾರಾದ್ ಭೃಶಂ ಭೀತಾ ಭರ್ತುಃ ಸಾ ಸಮಚಿಂತಯತ್ ।
ಸಾ ದೃಷ್ಟಿವಿನಿವೃತ್ತಾ ಹಿ ಭರ್ತುಸ್ತು ಸಮತಾಮಯಾತ್ ॥೪೮॥

ತನ್ನ ಪತಿಯು ಪ್ರಜ್ಞಾನೇತ್ರನಾಗಿರುವವನು ಎಂದು ತಿಳಿದ ಗಾಂಧಾರಿಯು ಯಾವ ವಿಷಯದಲ್ಲಿಯೂ ಅವನನ್ನು ಅತಿಕ್ರಮಿಸುವುದಕ್ಕೆ ಹೆದರಿ ಮನಸ್ಸಿನಲ್ಲಿ ಚಿಂತಿಸಿ ತನ್ನ ದೃಷ್ಟಿಯನ್ನೂ ವಸ್ತ್ರದಿಂದ ಆಚ್ಛಾದನೆ ಮಾಡಿ ತನ್ನ ಪತಿಗೆ ಸಮಾನಳಾದಳು.

ನಹಿ ಸೂಕ್ಷ್ಮೇಽಪ್ಯತೀಚಾರೇ ಭರ್ತುಃ ಸಾ ವವೃತೇ ತದಾ ।
ವೃತ್ತೇನಾರಾಧ್ಯ ತಾನ್ ಸರ್ವಾನ್ ಪತಿವ್ರತಪರಾಯಣಾ ।
ವಾಚಾಽಪಿ ಪುರುಷಾನನ್ಯಾನ್ ಸ್ವಜನಾನ್ ನಾನುಕೀರ್ತಯತ್ ॥೪೯॥

ಗಾಂಧಾರಿಯು ಅತ್ಯಂತ ಸೂಕ್ಷ್ಮವಾದ ವಿಷಯದಲ್ಲಿಯೂ ಎಂದೂ ತನ್ನ ಪತಿಯನ್ನು ಮೀರಲಿಲ್ಲ. ಪತಿವ್ರತಾ ಪರಾಯಣೆಯಾದ ಅವಳು ತನ್ನ ನಡತೆಯಿಂದ ಎಲ್ಲರನ್ನೂ ಸಂತೋಷಪಡಿಸಿದಳು. ಅವಳು ಬಾಯಿಂದಲೂ ಸಹ ಪರಪುರುಷನ ಹೆಸರನ್ನಾಗಲೀ, ಸ್ವಜನರ ಹೆಸರನ್ನಾಗಲೀ ಹೇಳುತ್ತಿರಲಿಲ್ಲ.

ತಸ್ಯಾಃ ಸಹೋದರಾಃ ಕನ್ಯಾಃ ಭೀಷ್ಮೇಣ ಪರಿಪೂಜಿತಾಃ ।
ಗಾಂಧಾರರಾಜಃ ಸುಬಲೋ ಭೀಷ್ಮೇಣ ವರಿತಸ್ತದಾ ॥೫೦॥

ಭೀಷ್ಮರು ಅವಳ ತಂಗಿಯರಾದ ಕನ್ಯೆಯರನ್ನು ಪೂಜಿಸಿ ಗಾಂಧಾರರಾಜನಾದ ಸುಬಲನನ್ನು ಕೇಳಿ ಧೃತರಾಷ್ಟ್ರನ ಸಲುವಾಗಿ ಅವರನ್ನೂ ವರಿಸಿದನು.

ಸತ್ಯವ್ರತಾಂ ಸತ್ಯಸೇನಾಂ ಸುಷೇಣಾಂ ಚ ಸುಸಂಹಿತಾಮ್ ।
ತೇಜಶ್ರವಾಂ ಸ್ವಶ್ರವಾಂ ಚ ನಭೋವರ್ಣಂ ನಿಷ್ಕೃತಿಂ ತಥಾ ॥೫೧॥

ಸಂಭವಾಂ ಚ ದಶಾರ್ಣಾಂ ಚ ಗಾಂಧಾರೀಂ ದಶ ವಿಶ್ರುತಾಃ ।
ಏಕಾಹ್ನಾ ಚೋಪಯೇಮೇ ತಾ ಧೃತರಾಷ್ಟ್ರೋ ಜನೇಶ್ವರಃ ॥೫೨॥

ತತಃ ಶಾಂತನವೋ ಭೀಷ್ಮೋ ಧನುಃಕ್ರೀತಾಸ್ತತಸ್ತತಃ ।
ಆಹರದ್ ಧೃತರಾಷ್ಟ್ರಾಯ ರಾಜಪುತ್ರೀಸ್ತತಃ ಶತಮ್ ॥೫೩॥

ಸತ್ಯವತಾ, ಸತ್ಯಸೇನಾ, ಸುಷೇಣಾ, ಸುಸಂಹಿತಾ, ತೇಜಶ್ರವಾ, ಸ್ವಶ್ರವಾ, ನಭೋವರ್ಣ, ನಿಷ್ಕೃತಿ, ಸಂಭವಾ, ದಶಾರ್ಣಾ ಹೀಗೆ ಗಾಂಧಾರಿಯೊಡನೆ ಆ ಹತ್ತು ಕನ್ಯೆಯರು ಪ್ರಸಿದ್ಧರಾದವರು. ಅವರನ್ನು ಧೃತರಾಷ್ಟ್ರರಾಜನು ಒಂದೇ ದಿವಸ ಮದುವೆಯಾದನು. ಅನಂತರ ಶಂತನುವಿನ ಮಗನಾದ ಭೀಷ್ಮನು ಧನುಸ್ಸಿನ ಬಲದಿಂದ ಗೆದ್ದು ಬೇರೆ ಬೇರೆ ನೂರು ರಾಜಪುತ್ರಿಯರನ್ನು ತಂದು ಧೃತರಾಷ್ಟ್ರನಿಗೆ ವಿವಾಹವನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ನವಾಧಿಕಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ಸಪ್ತಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಒಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೧

ಶೂರಸ್ಯ ಪುತ್ರೀ ಗುಣಶೀಲರೂಪ-
ಯುಕ್ತಾ ದತ್ತಾ ಸಖ್ಯುರೇವ ಸ್ವಪಿತ್ರಾ ।
ನಾಮ್ನಾ ಪೃಥಾ ಕುಂತಿಭೋಜಸ್ಯ ತೇನ
ಕುಂತೀ ಭಾರ್ಯಾ ಪೂರ್ವದೇಹೇऽಪಿ ಪಾಂಡೋಃ ॥೧೪೮॥

ಶೂರರಾಜನ ಮಗಳು ಪೃಥೆ, ಗುಣಶೀಲ ರೂಪಯುಕ್ತಳು. ಅವಳನ್ನು ತಂದೆಯಾದ ಶೂರ ತನ್ನ ಮಿತ್ರನಾದ ಕುಂತಿಭೋಜನಿಗೆ ದತ್ತುಕೊಟ್ಟ. ಅದರಿಂದ ಕುಂತಿ ಎನಿಸಿದ ಪೃಥೆ ಪೂರ್ವಜನ್ಮದಲ್ಲಿಯೂ ಪಾಂಡುವಿನ ಪತ್ನಿಯಾಗಿದ್ದಳು.

ಕೂರ್ಮಶ್ಚ ನಾಮ್ನಾ ಮರುದೇವ ಕುಂತಿ-
ಭೋಜೋಽಥೈನಾಂ ವರ್ಧಯಾಮಾಸ ಸಮ್ಯಕ್ ।
ತತ್ರಾಗಮಚ್ಛಂಕರಾಂಶೋಽತಿಕೋಪೋ
ದುರ್ವಾಸಾಸ್ತಂ ಪ್ರಾಹ ಮಾಂ ವಾಸಯೇತಿ ॥೧೪೯॥

ಕುಂತಿಭೋಜ ಮೂಲರೂಪದಲ್ಲಿ ಕೂರ್ಮನೆಂಬ ಮರುತ. ಈ ಕುಂತಿಭೋಜ ಕುಂತಿಯನ್ನು ಚೆನ್ನಾಗಿ ಬೆಳೆಸಿದ. ಅಲ್ಲಿಗೆ ಅತಿ ಕೋಪಿಯಾದ ಶಂಕರಾಂಶನಾದ ದುರ್ವಾಸ ಮುನಿ ಬಂದ. ನನಗೆ ವಾಸಕ್ಕೆ ಏರ್ಪಾಡು ಮಾಡು ಎಂದ.

ತಮಾಹ ರಾಜಾ ಯದಿ ಕನ್ಯಕಾಯಾಃ
ಕ್ಷಮಿಷ್ಯಸೇ ಶಕ್ತಿತಃ ಕರ್ಮಕರ್ತ್ರ್ಯಾಃ ।
ಸುಖಂ ವಸೇತ್ಯೋಮಿತಿ ತೇನ ಚೋಕ್ತೇ
ಶುಶ್ರೂಷಣಾಯಾದಿಶದಾಶು ಕುಂತೀಮ್ ॥೧೫೦॥

ರಾಜ ಮುನಿಗೆ ಹೇಳಿದ, 'ನನ್ನ ಮಗಳು ಶಕ್ತ್ಯಾನುಸಾರ ಸೇವೆ ಮಾಡುತ್ತಾಳೆ. ನ್ಯೂನಾತಿರೇಕಗಳಾದಲ್ಲಿ ನೀನು ಸಹಿಸುವುದಾದರೆ ವಾಸಮಾಡು'. 'ಆಗಲಿ' ಎಂದ ಮುನಿ. ಬಳಿಕ ರಾಜ ಮುನಿಯ ಸೇವೆಗೆ ಕುಂತಿಯನ್ನು ನೇಮಿಸಿದ.

ಚಕಾರ ಕರ್ಮ ಸಾ ಪೃಥಾ ಮುನೇಃ ಸುಕೋಪನಸ್ಯ ಹಿ ।
ಯಥಾ ನ ಶಕ್ಯತೇ ಪರೈಃ ಶರೀರವಾಙ್ಮನೋಽನುಗಾ ॥೧೫೧॥

ಪೃಥೆ ಶೀಘ್ರಕೋಪಿಯಾದ ಮುನಿಗೆ ಶರೀರ ಮಾತು ಮನಸ್ಸುಗಳಲ್ಲಿ ಅನುವರ್ತಿನಿಯಾಗಿ ಬೇರೆಯವರಿಂದ ಮಾಡಲು ಶಕ್ಯವಾಗದಂಥ ರೀತಿಯಲ್ಲಿ ಸೇವೆ ಮಾಡಿದಳು.

ಸ ವತ್ಸರತ್ರಯೋದಶಂ ತಯಾ ಯಥಾವದರ್ಚಿತಃ ।
ಉಪಾದಿಶತ್ ಪರಂ ಮನುಂ ಸಮಸ್ತದೇವವಶ್ಯದಮ್ ॥೧೫೨॥

ಹದಿಮೂರು ವರ್ಷದ ತನಕ ಪೂರ್ತಿಯಾಗಿ ಕುಂತಿಯಿಂದ ಚೆನ್ನಾಗಿ ಸೇವಿಸಲ್ಪಟ್ಟ ಮುನಿ ಅವಳಿಗೆ ಎಲ್ಲ ದೇವತೆಗಳನ್ನು ವಶೀಕರಿಸುವ ಶಕ್ತಿ ನೀಡಬಲ್ಲ ಉತ್ತಮ ಮಂತ್ರವನ್ನು ಉಪದೇಶಿಸಿದ.

ಋತೌ ತು ಸಾ ಸಮಾಪ್ತಾ ಪರೀಕ್ಷಣಾಯ ತನ್ಮನೋಃ ।
ಸಮಾಹ್ವಯದ್ ದಿವಾಕರಂ ಸ ಚಾಜಗಾಮ ತತ್‌ಕ್ಷಣಾತ್ ॥೧೫೩॥

ಋತುಕಾಲದಲ್ಲಿ ಕುಂತಿ ಸುಸ್ನಾತಳಾಗಿ ಆ ಮಂತ್ರದ ಪರೀಕ್ಷೆಗಾಗಿ ಸೂರ್ಯನನ್ನು ಕರೆದಳು. ಅವನು ತಕ್ಷಣವೆ ಬಂದ.

ತತೋ ನ ಸಾ ವಿಸರ್ಜಿತುಂ ಶಶಾಕ ತಂ ವಿನಾ ರತಿಮ್ ।
ಸುವಾಕ್ ಪ್ರಯತ್ನತೋಽಪಿ ತಾಮಥಾಸಸಾದ ಭಾಸ್ಕರಃ ॥೧೫೪॥

ಒಳ್ಳೆಯ ಮಾತು ಪ್ರಯತ್ನಗಳಿಂದ ಕುಂತಿ ಆಗ ರತಿಕ್ರೀಡೆಯಿಲ್ಲದೆ ಸೂರ್ಯನನ್ನು ಹಿಂದೆ ಕಳಿಸಲು ಶಕ್ತಳಾಗಲಿಲ್ಲ. ಸೂರ್ಯ ಅವಳನ್ನು ಕೂಡಿದ.

ಸ ತತ್ರ ಜಜ್ಞಿವಾನ್ ಸ್ವಯಂ ದ್ವಿತೀಯರೂಪಕೋ ವಿಭುಃ ।
ಸವರ್ಮದಿವ್ಯಕುಂಡಲೋ ಜ್ವಲನ್ನಿವ ಸ್ವತೇಜಸಾ ॥೧೫೫॥

ಕವಚ ದಿವ್ಯಕುಂಡಲಗಳಿಂದ ಯುಕ್ತನಾಗಿ ತನ್ನ ತೇಜಸ್ಸಿನಿಂದ ಜ್ವಲಿಸುವಂತೆ ಕಾಣುತ್ತ ಇನ್ನೊಂದು ರೂಪದಿಂದ ಸೂರ್ಯ ಸ್ವಯಂ ಕುಂತಿಯಲ್ಲಿ ಜನಿಸಿದ.

ಪುರಾ ಸ ವಾಲಿಮಾರಣಪ್ರಭೂತದೋಷಕಾರಣಾತ್ ।
ಸಹಸ್ರವರ್ಮನಾಮಿನಾಸುರೇಣ ವೇಷ್ಟಿತೋಽಜನಿ ॥೧೫೬॥

ಹಿಂದೆ ಸುಗ್ರೀವನಾಗಿ ವಾಲಿಯನ್ನು ಕೊಲ್ಲಿಸಿದ್ದರಿಂದ ಉಂಟಾದ ಪಾಪದಿಂದ ಈಗ ಸಹಸ್ರವರ್ಮನೆಂಬ ಹೆಸರಿನ ಅಸುರನಿಂದ ಆವಿಷ್ಟನಾಗಿ ಜನಿಸಿದ.

ಯಥಾ ಗ್ರಹೈರ್ವಿದೂಷ್ಯತೇ ಮತಿರ್ನೃಣಾಂ ತಥೈವ ಹಿ ।
ಅಭೂಚ್ಚ ದೈತ್ಯದೂಷಿತಾ ಮತಿರ್ದಿವಾಕರಾತ್ಮನಃ ॥೧೫೭॥

ಮನುಷ್ಯರ ಬುದ್ಧಿ ಪಿಶಾಚಾವೇಶದಿಂದ ಹೇಗೆ ಕೆಡುವುದೋ ಹಾಗೆಯೇ ಸೂರ್ಯ ಸ್ವರೂಪನಾದ ಕರ್ಣನ ಬುದ್ಧಿಯೂ ದೈತ್ಯನ ಆವೇಶದಿಂದ ಕೆಟ್ಟಿತು.

ತಥಾಪಿ ರಾಮಸೇವನಾದ್ಧರೇಶ್ಚ ಸನ್ನಿಧಾನಯಕ್ ।
ಸುದರ್ಶನೀಯಕರ್ಣತಃ ಸ ಕರ್ಣನಾಮಕೋಽಭವತ್ ॥೧೫೮॥

ಆದರೂ ಶ್ರೀರಾಮನಿಗೆ ಸುಗ್ರೀವಾವತಾರದಲ್ಲಿ ಸೇವೆ ಮಾಡಿದ್ದರಿಂದ ಹರಿಯ ಸನ್ನಿಧಾನ ಪಾತ್ರನಾದ. ಸುಂದರವಾದ ಕವಿ ಉಳ್ಳವನಾದ್ದರಿಂದ ಕರ್ಣನಾಮಕನಾದ.

ಸ ರತ್ನಪೂರ್ಣಮಂಜುಷಾಗತೋ ವಿಸರ್ಜಿತೋ ಜಲೇ ।
ಜನಾಪವಾದಭೀತಿತಸ್ತಯಾ ಯಮಸ್ವಸುರ್ಧೃತಮ್ ॥೧೫೯॥

ಕುಂತಿ ಜನಾಪವಾದ ಭೀತಿಯಿಂದ ಕರ್ಣನನ್ನು ರತ್ನಗಳಿಂದ ತುಂಬಿದ ಪೆಟ್ಟಿಗೆಯಲ್ಲಿ ಇಟ್ಟು ಬೇಗನೆ ಯಮುನೆಯ ಜಲದಲ್ಲಿ ಬಿಟ್ಟಳು.

ನದೀಪ್ರವಾಹತೋ ಗತಂ ದದರ್ಶ ಸೂತನಂದನಃ ।
ತಮಗ್ರಹೀತ್ ಸರತ್ನಕಂ ಚಕಾರ ಪುತ್ರಕಂ ನಿಜಮ್ ॥೧೬೦॥

ನದೀಪ್ರವಾಹದಲ್ಲಿ ತೇಲಿ ಹೋದ ಕರ್ಣನನ್ನು ಒಬ್ಬ ಸೂತಪುತ್ರ ಕಂಡ. ರತ್ನಗಳ ಸಮೇತವಾಗಿ ಅವನನ್ನು ಎತ್ತಿಕೊಂಡ. ತನ್ನ ಮಗನನ್ನಾಗಿ ಮಾಡಿಕೊಂಡ.

ಸೂತೇನಾಧಿರಥೇನ ಲಾಳಿತತನುಸ್ತದ್ಭಾರ್ಯಯಾ ರಾಧಯಾ
ಸಂವೃದ್ಧೋ ನಿಖಿಲಾಃ ಶ್ರುತೀರಧಿಜಗೌ ಶಾಸ್ತ್ರಾಣಿ ಸರ್ವಾಣಿ ಚ ।
ಬಾಲ್ಯಾದೇವ ಮಹಾಬಲೋ ನಿಜಗುಣೈಃ ಸಂಭಾಸಮಾನೋऽವಸನ್-
ನಾಮ್ನಾಸೌ ವಸುಷೇಣತಾಮಗಮದಸ್ಯಾऽಸೀದ್ಧ್ಯಮಾ ತದ್ ವಸು ॥

ಕರ್ಣನನ್ನು ಸೂತನಾದ ಅಧಿರಥ ಲಾಲಿಸಿದ. ಅವನ ಹೆಂಡತಿ ರಾಧೆ ಬೆಳೆಸಿದಳು. ಎಲ್ಲ ವೇದಗಳನ್ನೂ ಎಲ್ಲ ಶಾಸ್ತ್ರಗಳನ್ನೂ ಕರ್ಣ ಅಧ್ಯಯನ ಮಾಡಿದ. ಬಾಲ್ಯದಿಂದಲೆ ಮಹಾಬಲಿಷ್ಠನಾಗಿದ್ದು ತನ್ನ ಔದಾರ್ಯಾದಿಗುಣಗಳಿಂದ ಪ್ರಕಾಶಿಸುತ್ತಾ ವಾಸಮಾಡಿದ. 'ವಸು' ಅಂದರೆ ಸಂಪತ್ತು ಅವನ ಸಮೀಪದಲ್ಲಿ ಜೊತೆಗೇ ಇದ್ದಿತು. ಅದರಿಂದ ಅವನು 'ವಸುಷೇಣ' ಎಂಬ ಹೆಸರನ್ನು ಪಡೆದ.

★ ★ ★ ★

ನೂರ ಹತ್ತನೆಯ ಅಧ್ಯಾಯ

(ಕುಂತಿಯ ಪೂರ್ವವೃತ್ತಾಂತ, ದುರ್ವಾಸರ ಮಂತ್ರೋಪದೇಶ, ಕರ್ಣನ ಉತ್ಪತ್ತಿ ಮತ್ತು ಪರಿತ್ಯಾಗ. ದಾಶರಾಜನಿಂದ ಕರ್ಣನ ಸ್ವೀಕಾರ ಮತ್ತು ಸಂಕ್ಷೇಪವಾಗಿ ಕರ್ಣನ ಚರಿತ್ರೆ.)

ವೈಶಂಪಾಯನಃ

ಶೂರೋ ನಾಮ ಯದುಶ್ರೇಷ್ಠೋ ವಸುದೇವಪಿತಾಽಭವತ್ ।
ತಸ್ಯ ಕನ್ಯಾ ಪೃಥಾ ನಾಮ ರೂಪೇಣಾಸದೃಶೀ ಭುವಿ ॥೧॥

ವಸುದೇವನ ತಂದೆಯು ಶೂರ ಎಂಬ ಹೆಸರಿನ ಯದುಶ್ರೇಷ್ಠನಾಗಿದ್ದನು. ಅವನ ಮಗಳಾದ ಪೃಥೆಯು ಭೂಮಿಯಲ್ಲಿ ಅಸದೃಶ ರೂಪವುಳ್ಳವಳಾಗಿದ್ದಳು.

ಪೈತೃಷ್ವಸೇಯಾಯ ತತಃ ಸೋಽನಪತ್ಯಾಯ ವೀರ್ಯವಾನ್ ।
ಅಗ್ರಮಗ್ರೇ ಪ್ರತಿಜ್ಞಾಯ ಸ್ವಸ್ಯಾಪತ್ಯಂ ಚ ವೀರ್ಯವಾನ್ ॥೨॥

ಅಗ್ರಜಾತಾಂ ತು ತಾಂ ಕನ್ಯಾಮಗ್ರಾನುಗ್ರಹಕಾಂಕ್ಷಯಾ ।
ಅದದಾತ್ ಕುಂತಿಭೋಜಾಯ ಶೂರೋ ಗೋಪತಯೇ ಸುತಾಮ್ ॥

ವೀರ್ಯವಂತನಾದ ಶೂರನು ತನ್ನ ಮಗಳನ್ನು ಮಕ್ಕಳಿಲ್ಲದಿರುವ ತನ್ನ ತಂದೆಯ ತಂಗಿಯ ಮಗನಿಗೆ ಕೊಡುವುದಾಗಿ ಮಗಳು ಹುಟ್ಟುವುದಕ್ಕಿಂತ ಮುಂಚೆಯೇ ಪ್ರತಿಜ್ಞೆ ಮಾಡಿದ್ದನು. ಅನಂತರ ಮೊದಲು ಹುಟ್ಟಿದ ತನ್ನ ಮಗಳನ್ನು ತಾನು ಮೊದಲು ಕೊಟ್ಟ ಮಾತನ್ನು ಉಳಿಸಿಕೊಳ್ಳವುದಕ್ಕೋಸ್ಕರ ತನ್ನ ಸೋದರ ಅತ್ತೆಯ ಮಗನಾದ ಕುಂತಿಭೋಜರಾಜನಿಗೆ ಕೊಟ್ಟನು.

ಸಾ ನಿಯುಕ್ತಾ ಪಿತುರ್ಗೇಹೇ ದೇವತಾತಿಥಿಭೋಜನೇ ।
ಉಗ್ರಂ ಪರ್ಯಚರತ್ ಸಾಂಗಂ ಬ್ರಾಹ್ಮಣಂ ಸಂಶಿತವ್ರತಮ್ ॥೪॥

ಅವಳು ಕುಂತಿಭೋಜನ ಮನೆಯಲ್ಲಿ ದೇವತಾತಿಥಿಭೋಜನದಲ್ಲಿ ನಿಯೋಜಿಸಲ್ಪಟ್ಟು, ಕೋಪಶೀಲರೂ, ವ್ರತನಿಷ್ಠರೂ ಆದ ಬ್ರಾಹ್ಮಣರೊಬ್ಬರನ್ನು ಸಂಪೂರ್ಣವಾಗಿ ಪರಿಚರಿಸಿದಳು.

ನಿರೂಢನಿಶ್ಚಯಂ ಧರ್ಮೇ ದುರ್ವಾಸಾ ಇತಿ ಯಂ ವಿದುಃ ।
ತಮುಗ್ರಂ ಸಂಶಿತಾತ್ಮಾನಂ ಸರ್ವಯತ್ನೈರತೋಷಯತ್ ॥೫॥

ಧರ್ಮದಲ್ಲಿನೆಟ್ಟ ನಿಶ್ಚಯವುಳ್ಳ ಅವರ ಹೆಸರು ದುರ್ವಾಸ ಎಂದು. ಉಗ್ರರೂ, ಮಾನಜಯವುಳ್ಳವರೂ ಆದ ಅವರನ್ನು ಪೃಥೆಯು (ಕುಂತಿಭೋಜನು ಸಾಕುತ್ತಿರುವುದರಿಂದ ಈಗ ಕುಂತಿಯು) ಸರ್ವ ಪ್ರಯತ್ನಗಳಿಂದಲೂ ಸಂತೋಷಪಡಿಸಿದಳು.

ದುರ್ವಾಸಾ ವತ್ಸರಸ್ಯಾಂತೇ ದದೌ ಮಂತ್ರಮನುತ್ತಮಮ್ ।
ಯಶಸ್ವಿನ್ಯೈ ಪೃಥಾಯೈ ಸ ಆಪದ್ಧರ್ಮಾನ್ವವೇಕ್ಷಯಾ ॥೬॥

ದುರ್ವಾಸರು ಮುಂದೆ ಒದಗಲಿರುವ ಆಪದ್ಧರ್ಮವನ್ನು ಗಮನಿಸಿ ಯಶಸ್ವಿನಿಯಾದ ಕುಂತಿಗೆ ಒಂದು ವರ್ಷದ ಕೊನೆಯಲ್ಲಿ ಶ್ರೇಷ್ಠವಾದ ಮಂತ್ರವನ್ನು ಉಪದೇಶ ಮಾಡಿದರು.

ಅಭಿಸಾರಾಭಿಸಂಯುಕ್ತಮಬ್ರವೀಚ್ಚೈವ ತಾಂ ಮುನಿಃ ।
ಯಂ ಯಂ ದೇವಂ ತ್ವಮೇತೇನ ಮಂತ್ರೇಣಾವಾಹಯಿಷ್ಯಸಿ ।
ತಸ್ಯ ತಸ್ಯ ಪ್ರಸಾದಾದ್ ವೈ ಪುತ್ರಸ್ತವ ಜನಿಷ್ಯತೇ ॥೭॥

ದೇವತೆಗಳ ಆಗಮನರೂಪಫಲದಿಂದ ಯುಕ್ತವಾದ ಮಂತ್ರವನ್ನು ದುರ್ವಾಸರು ಅವಳಿಗೆ ಉಪದೇಶಿಸಿದರು. ನೀನು ಈ ಮಂತ್ರದಿಂದ ಯಾವ ಯಾವ ದೇವತೆಯನ್ನು ಕರೆಯುತ್ತೀಯೋ, ಅವನ ಅನುಗ್ರಹದಿಂದ ನೀನು ಮಗನನ್ನು ಪಡೆಯುವಿ ಎಂದು ಹೇಳಿದರು.

ತಥೋಕ್ತಾ ಸಾ ತು ಮುನಿನಾ ತಸ್ಯ ಕೌತೂಹಲಾತ್ ತದಾ ।
ಕನ್ಯಾ ಸತೀ ದೇವಮರ್ಕಮಾಜುಹಾವ ಯಶಸ್ವಿನೀ ॥೮॥

ಹಾಗೆ ಹೇಳಲ್ಪಟ್ಟ ಕುಂತಿಯು ಒಮ್ಮೆ ಕುತೂಹಲದಿಂದ ಇನ್ನೂ ಕನ್ಯಾವಸ್ಥೆಯಲ್ಲಿರುವಾಗಲೇ, ಸೂರ್ಯದೇವನನ್ನು ಆಹ್ವಾನಿಸಿದಳು.

ತತೋ ಘನಾಂತರಂ ಕೃತ್ವಾ ಸ್ವಮಾರ್ಗಂ ತಪನಸ್ತದಾ ।
ಉಪತಸ್ಥೇ ಸ ತಾಂ ಕನ್ಯಾಂ ಪೃಥಾಂ ಪೃಥುಲಲೋಚನಾಮ್ ॥೯॥

ಆಗ, ಮೋಡಗಳ ಮಧ್ಯದಲ್ಲಿ ದಾರಿಯನ್ನು ಮಾಡಿಕೊಂಡು ವಿಸ್ತಾರ ಲೋಚನವುಳ್ಳ ಆ ಕುಂತಿಯ ಎದುರಿಗೆ ಸೂರ್ಯನು ಬಂದು ನಿಂತನು.

ಸಾ ದದರ್ಶ ತಮಾಯಾಂತಂ ವಿಸ್ಮಯಾಲ್ಲೋಕಭಾವನಮ್ ।
ವಿಸ್ಮಿತಾ ಚಾನವದ್ಯಾಂಗೀ ದೃಷ್ಟ್ವಾ ತಂ ತಪನಂ ತದಾ ।
ಸಾऽಬ್ರವೀದ್ ಭಗವನ್ ಕಸ್ತ್ವಂ ಪ್ರಾದುರ್ಭೂತೋ ಮಮಾಗ್ರತಃ ॥

ಅವಳು ತನ್ನ ಕಡೆಗೆ ಬರುತ್ತಿರುವ ಲೋಕಭಾವನನಾದ ಸೂರ್ಯನನ್ನು ವಿಸ್ಮಯದಿಂದ ನೋಡಿದಳು. ವಿಸ್ಮಿತಳಾದ ಆ ಅನವದ್ಯಾಂಗಿಯು ಆಗ ಸೂರ್ಯನನ್ನು ಕುರಿತು ಪೂಜ್ಯನೇ, ನನ್ನ ಎದುರಿಗೆ ಪ್ರತ್ಯಕ್ಷನಾಗಿರುವ ನೀನು ಯಾರು ಎಂದು ಕೇಳಿದಳು.

ಸೂರ್ಯಃ

ಆಹೂತೋಽಸ್ಮಿತಂ ಭದ್ರೇ ಋಷಿಮಂತ್ರೇಣ ಚೋದಿತಮ್ ।
ವಿದ್ಧಿ ಮಾಂ ಪುತ್ರಲಾಭಾಯ ದೇಮರ್ಕಂ ಶುಭಾನನೇ ॥೧೧॥

ಮಂಗಳಸ್ವರೂಪಳೇ, ಋಷಿಗಳ ಮಂತ್ರದ ಪ್ರಭಾವದಿಂದ ಪ್ರೇರಿತನಾಗಿ ನಿನ್ನಿಂದ ಆಹ್ವಾನಿಸಲ್ಪಟ್ಟು ನಾನು ಇಲ್ಲಿಗೆ ಬಂದಿದ್ದೇನೆ. ಶುಭಾನನೆಯೇ ನಾನು ನಿನಗೆ ಪುತ್ರನನ್ನು ಕೊಡಲು ಬಂದ ಸೂರ್ಯದೇವನೆಂದು ತಿಳಿ.

ಕುಂತೀ

ಕಶ್ಚಿನ್ಮೇ ಬ್ರಹ್ಮವಿತ್ ಪ್ರಾದಾದ್ ವರವಿದ್ಯಾಂ ಚ ಶತ್ರುಹನ್ ।
ತದ್ವಿಜಿಜ್ಞಾಸಯಾऽऽಹ್ವಾನಂ ಕೃತವತ್ಯಸ್ಮಿ ತೇ ವಿಭೋ ॥೧೨॥

ಏತಸ್ಮಿನ್ನಪರಾಧೇ ತ್ವಾಂ ಶಿರಸಾऽಭಿಪ್ರಸಾದಯೇ ।
ಯೋಷಿತೋ ಹಿ ಸದಾ ರಕ್ಷ್ಯಾಸ್ತ್ವಪರಾಧೇऽಪಿ ನಿತ್ಯಶಃ ॥೧೩॥

ಶತ್ರುಸಂಹಾರಕನೇ, ವಿಭುವೇ, ನನಗೆ ಒಬ್ಬ ಶ್ರೇಷ್ಠನಾದ ಬ್ರಾಹ್ಮಣನು ಮಂತ್ರೋಪದೇಶವನ್ನು ಮಾಡಿದ್ದನು. ಅದನ್ನು ಪರೀಕ್ಷಿಸುವ ದೃಷ್ಟಿಯಿಂದ ನಾನು ನಿನ್ನನ್ನು ಆಹ್ವಾನ ಮಾಡಿದೆ. ನಾನು ಮಾಡಿದ ಈ ಅಪರಾಧಕ್ಕಾಗಿ ನಿನ್ನನ್ನು ಶಿರಸಾ ವಂದಿಸಿ ಅನುಗ್ರಹಿಸು ಎಂದು ಕೇಳಿಕೊಳ್ಳುತ್ತೇನೆ. ಸ್ತ್ರೀಯರು ಅಪರಾಧವನ್ನು ಮಾಡಿದರೂ ಸಹಾ ಯಾವಾಗಲೂ ರಕ್ಷಿಸಲ್ಪಡಬೇಕಾದವರಷ್ಟೇ.

ಸೂರ್ಯಃ

ವೇದಾಹಂ ಸರ್ವಮೇವೈತದ್ ಯದ್ ದುರ್ವಾಸಾ ವರಂ ದದೌ ।
ಸಂತ್ಯಜ್ಯೋಭ್ಯೇ ಮಾನಭಯೇ ಕ್ರಿಯತಾಂ ಸಂಗಮೋ ಮಯಾ ॥೧೪॥

ದುರ್ವಾಸರು ನಿನಗೆ ಕೊಟ್ಟವರದ ಎಲ್ಲಾ ವಿಷಯವನ್ನೂ ನಾನು ತಿಳಿದಿದ್ದೇನೆ. ಲಜ್ಜೆಯನ್ನು ಮತ್ತು ಭಯವನ್ನು ಬಿಟ್ಟು ನನ್ನ ಸಂಗವನ್ನು ಮಾಡು.

ಅಮೋಘಂ ದರ್ಶನಂ ಮಹ್ಯಮಾಹೂತಶ್ಚಾಸ್ಮಿ ತೇ ಶುಭೇ ।
ವೃಥಾಹ್ವಾನಾದ್ಧಿ ತೇ ಭೀರು ದೋಷೋ ಹಿ ಸ್ಯಾದಸಂಶಯಃ ॥೧೫॥

ನನ್ನ ದರ್ಶನವು ಎಂದೂ ವ್ಯರ್ಥವಾಗುವುದಿಲ್ಲ. ಶುಭಳಾದವಳೇ, ಜೊತೆಗೆ ನೀನು ಆಹ್ವಾನ ಮಾಡಿದ್ದೀಯೆ. ಭೀರುವೇ, ವ್ಯರ್ಥವಾಗಿ ಆಹ್ವಾನ ಮಾಡಿದ್ದರಿಂದ ನಿನಗೆ ದೋಷವುಂಟಾಗುತ್ತದೆ. ಈ ವಿಷಯದಲ್ಲಿ ಸಂಶಯವಿಲ್ಲ.

ವೈಶಂಪಾಯನಃ

ಏವಮುಕ್ತಾ ಬಹುವಿಧಂ ಸಾಂತ್ವಪೂರ್ವಂ ವಿವಸ್ವತಾ ।
ಸಾ ತು ನೈಚ್ಛದ್ ವರಾರೋಹಾ ಕನ್ಯಾಽಹಮಿತಿ ಪಾರ್ಥಿವ ॥೧೬॥

ಎಲೈ ರಾಜನೇ, ಹೀಗೆ ಸೂರ್ಯನಿಂದ ಬಹುವಿಧವಾಗಿ ಸಮಾಧಾನಪೂರ್ವಕವಾಗಿ ಹೇಳಲ್ಪಟ್ಟರೂ ನಾನು ಕನ್ಯೆಯೆಂದು ಹೇಳಿ ಆ ಸುಂದರಿಯು ಸೂರ್ಯನ ಸಮಾಗಮವನ್ನು ಬಯಸಲಿಲ್ಲ.

ಬಂಧುಪಕ್ಷಭಯಾದ್ ಭೀತಾ ಲಜ್ಜಯಾ ಚ ಯಶಸ್ವಿನೀ ।
ತಾಮರ್ಕಃ ಪುನರೇವೇದಮಬ್ರವೀದ್ ಭರತರ್ಷಭ ॥೧೭॥

ಆ ಯಶಸ್ವಿನಿಯು ಬಂಧುವರ್ಗದ ಭಯದಿಂದಲೂ, ಲಜ್ಜೆಯಿಂದಲೂ ಕೂಡಿದವಳಾಗಿ ಸುಮ್ಮನಿದ್ದಳು. ಭರತಶ್ರೇಷ್ಠನೇ, ಅವಳನ್ನು ಕುರಿತು ಸೂರ್ಯನು ಪುನಃ ಹೀಗೆ ಮಾತನಾಡಿದನು.

ಪುತ್ರಸ್ತೇ ನಿರ್ಮಿತಃ ಸುಭ್ರು ಶೃಣು ಯಾದೃಕ್ ಶುಭಾನನೇ ।
ಆದಿತ್ಯೇ ಕುಂಡಲೇ ಬಿಭ್ರತ್ ಕವಚಂ ಚೈವ ಮಾಮಕಮ್ ।
ಶಸ್ತ್ರಾಸ್ತ್ರಾಣಾಮಭೇದ್ಯಂ ಚ ಭವಿಷ್ಯತಿ ಶುಚಿಸ್ಮಿತೇ ॥೧೮॥

ಸುಂದರ ಮುಖವುಳ್ಳವಳೇ, ನಿನಗಾಗಿ ಎಂತಹ ಪುತ್ರನು ನಿರ್ಮಿತನಾಗಿದ್ದಾನೆ ಎಂದು ಕೇಳು. ಅವನು ಸೂರ್ಯನಾದ ನನಗೆ ಲಭ್ಯವಾದ ಕುಂಡಲಗಳನ್ನು ಮತ್ತು ನನ್ನ ಕವಚವನ್ನು ಧರಿಸಿದ್ದಾನೆ. ಶುಚಿಸ್ಮಿತೆಯೇ. ಆ ಕವಚವು ಶಸ್ತ್ರಾಸ್ತ್ರಗಳಿಂದ ಅಭೇದ್ಯವಾದುದು.

ನ ನ ಕಿಂಚನ ದೇಯಂ ತು ಬ್ರಾಹ್ಮಣೇಭ್ಯೋ ಭವಿಷ್ಯತಿ ।
ಚೋದ್ಯಮಾನೋ ಮಯಾ ಚಾಪಿ ನಾಕ್ಷತ್ರಂ ಚಿಂತಯಿಷ್ಯತಿ ।
ದಾಸ್ಯತ್ಯೇವ ಹಿ ವಿಪ್ರೇಭ್ಯೋ ಮಾನೀ ಚೈವ ಭವಿಷ್ಯತಿ ॥೧೯॥

ಅವನು ಬ್ರಾಹ್ಮಣರಿಗೆ ಕೊಡಲಾರದ ವಸ್ತುವು ಯಾವುದೂ ಇಲ್ಲ. ನಾನು ಒತ್ತಾಯ ಮಾಡಿದರೂ ಸಹ ಅವನು ಎಂದೂ ಕ್ಷತ್ರಿಯರಿಗೆ ಅನುಚಿತವಾದ ಯೋಚನೆಯನ್ನೂ ಸಹ ಮಾಡುವುದಿಲ್ಲ. ಅವನು ಬ್ರಾಹ್ಮಣರಿಗೆ ಎಲ್ಲವನ್ನೂ ಕೊಡುವವನಾಗಿ, ಆತ್ಮಾಭಿಮಾನವುಳ್ಳವನಾಗಿ ಬದುಕುವನು.

ವೈಶಂಪಾಯನಃ

ಏವಮುಕ್ತಾ ತತಃ ಕುಂತೀ ಗೋಪತಿಂ ಪ್ರತ್ಯುವಾಚ ಹ ।
ಕನ್ಯಾ ಪಿತೃವಶಾ ಚಾಹಮಪತ್ಯಾರ್ಥೇ ನ ಚೈವ ಮೇ ॥೨೦॥

ಸೂರ್ಯನು ಹೀಗೆ ಹೇಳಿದಾಗ ಕುಂತಿಯು ಅವನನ್ನು ಕುರಿತು ನಾನು ತಂದೆಯ ಅಧೀನದಲ್ಲಿರುವ ಕನ್ಯೆ. ನನಗೆ ಈಗ ಮಗನನ್ನು ಪಡೆಯುವ ಉದ್ದೇಶವು ಇಲ್ಲ ಎಂದು ಹೇಳಿದಳು.

ಸೂರ್ಯಃ

ಯದ್ಯೇವಂ ಮನ್ಯಸೇ ಭೀರು ಕಿಮಾಹ್ವಯಸಿ ಭಾಸ್ಕರಮ್ ।
ಯದಿ ಮಾಮವಜಾನಾಸಿ ಋಷಿಃ ಸ ನ ಭವಿಷ್ಯತಿ ॥೨೩॥

ಭೀರುವೇ, ಹಾಗಾದರೆ, ಸೂರ್ಯನನ್ನು ಏಕೆ ಆಹ್ವಾನ ಮಾಡಿದೆ? ನನಗೆ ಅವಮಾನವನ್ನು ಮಾಡಿದರೆ, ಆ ಋಷಿಗೂ ತೊಂದರೆಯಾಗುವುದು.

ಮಂತ್ರದಾನೇನ ಯಸ್ಯ ತ್ವಮವಲೇಪೇನ ದರ್ಪಿತಾ ।
ಕುಲಂ ಚ ತೇऽದ್ಯ ಧಕ್ಷ್ಯಾಮಿ ಕ್ರೋಧದೀಪ್ತೇನ ಚಕ್ಷುಷಾ ॥೨೪॥

ಯಾರ ಮಂತ್ರದ ಬಲದಿಂದ ಉಂಟಾದ ದರ್ಪದಿಂದ ನೀನು ನನಗೆ ಅವಮಾನ ಮಾಡುವಿಯೋ, ಅಂತಹ ನಿನ್ನ ಕುಲವನ್ನು ನನ್ನ ಕ್ರೋಧದೀಪ್ತವಾದ ಕಣ್ಣುಗಳಿಂದ ಇಂದು ಸುಟ್ಟುಬಿಡುವೆನು.

ಕುಂತೀ

ಪ್ರಸೀದ ಭಗವನ್‌ದೇವ ಅವಲೇಪೋ ಹಿ ನಾಸ್ತಿ ಮೇ ।
ಮಯಾತ್ವಪರಿಹಾರ್ಯಃ ಸ್ಯಾತ್ ಕನ್ಯಾಭಾವಸ್ಯ ದೂಷಣಮ್ ॥೨೫॥

ಪೂಜ್ಯನಾದ ಸೂರ್ಯದೇವನೇ, ಅನುಗ್ರಹವನ್ನು ಮಾಡು. ನನಗೆ ಗರ್ವವಿಲ್ಲ. ನಾನು ಕನ್ಯಾಭಾವವನ್ನು ಕಳೆದುಕೊಂಡರೆ, ಅಪರಿಹಾರ್ಯವಾದ ದೋಷವಾಗುತ್ತದೆ.

ಸೂರ್ಯಃ

ವ್ಯಪಯಾತು ಭಯಂ ತೇಽದ್ಯ ಕುಮಾರಂ ಪ್ರಭವಿಷ್ಯಸೇ ।
ಮಯಾ ತ್ವಂ ಚಾಭ್ಯನುಜ್ಞಾತಾ ಪುನಃ ಕನ್ಯಾ ಭವಿಷ್ಯಸಿ ॥೨೬॥

ನಿನ್ನ ಭಯವನ್ನು ಬಿಡು. ನೀನು ಮಗನನ್ನು ಪಡೆಯುವಿ. ಮತ್ತೆ ನನ್ನ ಅನುಮತಿಯಿಂದ ಪುನಃ ಕನ್ಯೆಯೇ ಆಗುವಿ.

ವೈಶಂಪಾಯನಃ

ಏವಮುಕ್ತಾ ತತಃ ಕುಂತೀ ಸಂಪ್ರಹೃಷ್ಟತನೂರುಹಾ ।
ಸಂಗತಾ ಚ ತದಾ ಸುಭ್ರೂರಾದಿತ್ಯೇನ ಮಹಾತ್ಮನಾ ॥೨೭॥

ಹೀಗೆ ಹೇಳಲ್ಪಟ್ಟ ಸುಂದರಿಯಾದ ಕುಂತಿಯು, ರೋಮಾಂಚವುಳ್ಳವಳಾಗಿ ಮಹಾತ್ಮನಾದ ಸೂರ್ಯನಿಂದ ಸಮಾಗಮವನ್ನು ಹೊಂದಿದಳು.

ಪ್ರಕಾಶಕರ್ಮಾ ತಪನಃ ಕನ್ಯಾಗರ್ಭಂ ದಧೌ ತತಃ ।
ಅಜೀಜನತ್ ತತೋ ವೀರಂ ಸರ್ವಶಸ್ತ್ರಭೃತಾಂ ವರಮ್ ॥೨೮॥

ಲೋಕವನ್ನು ಪ್ರಕಾಶಿಸುವ ಸೂರ್ಯನು ಆ ಕನ್ಯೆಯಲ್ಲಿ ಗರ್ಭಾಧಾನವನ್ನು ಮಾಡಿ ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ, ವೀರನಾದ ಮಗನನ್ನು ಉತ್ಪಾದಿಸಿದನು.

ಆಮುಕ್ತಕವಚಃಶ್ರೀಮಾನ್ ಕುಂಡಲಾಭ್ಯಾಂ ಸಮಾವೃತಃ ।
ಸೋಽಜಾಯತ ತದಾ ವೀರಃ ಸರ್ವಲೋಕೇಷು ವಿಶ್ರುತಃ ॥೨೯॥

ಆ ಮಗುವು ಹುಟ್ಟುವಾಗಲೇ ಕವಚಕುಂಡಲಗಳನ್ನು ಧರಿಸಿದ್ದು, ಎಲ್ಲಾ ಲೋಕಗಳಲ್ಲಿಯೂ ವೀರನೆಂಬ ಖ್ಯಾತಿಯನ್ನು ಪಡೆಯಿತು.

ಮಂಜೂಷಾಂ ರತ್ನಸಂಪೂರ್ಣಾಂ ಕರ್ಣನಾಮಾಭಿಸಂಜ್ಞಿತಾಮ್ ।
ಗೂಹಮಾನಾऽಪಚಾರಂ ತಂ ಬಂಧುಪಕ್ಷಭಯಾತ್ ತದಾ ॥೨೯॥

ಉತ್ಸಸರ್ಜ ಜಲೇ ಕುಂತೀ ತಂ ಕುಮಾರಂ ಸಲಕ್ಷಣಮ್ ।
ಪ್ರಾದಾಚ್ಚ ತಸ್ಯಾಃ ಕನ್ಯಾತ್ವಂ ಪುನಃ ಸ ಪರಮದ್ಯುತಿಃ ॥೩೦॥

ಕುಂತಿಯು ಬಂಧುಗಳ ಅಪವಾದಕ್ಕೆ ಹೆದರಿ ತನ್ನ ಅಪಚಾರವನ್ನು ಮರೆಮಾಚಲು ಒಂದು ಪೆಟ್ಟಿಗೆಯನ್ನು ತಂದು ಅದನ್ನು ರತ್ನಗಳಿಂದ ತುಂಬಿ ಪೆಟ್ಟಿಗೆಯ ಮೇಲೆ ಕರ್ಣ ಎಂದು ಬರೆದು ಆ ಪೆಟ್ಟಿಗೆಯನ್ನು ಸಲಕ್ಷಣವಾದ ಶಿಶುವಿನ ಸಹಿತವಾಗಿ ನೀರಿನಲ್ಲಿ ತೇಲಿಬಿಟ್ಟಳು. ಪರಮದ್ಯುತಿಯುಳ್ಳ ಸೂರ್ಯನು ಅವಳಿಗೆ ಪುನಃ ಕನ್ಯಾತ್ವವನ್ನು ದಯಪಾಲಿಸಿದನು.

ದತ್ತ್ವಾ ಚ ವರದಶ್ರೇಷ್ಠೋ ದಿವಮಾಚಕ್ರಮೇ ಪುನಃ ।
ತಮುತ್ಸೃಷ್ಟಂ ತದಾ ಗರ್ಭಂ ರಾಧಾಭರ್ತಾ ಮಹಾಯಶಾಃ ।
ಪುತ್ರತ್ವೇ ಕಲ್ಪಯಾಮಾಸ ಭಾರ್ಯಾಯಾಃ ಸೂತನಂದನಃ ॥೩೧॥

ಅವಳಿಗೆ ಮಗನನ್ನೂ, ಕನ್ಯಾಭಾವವನ್ನೂ, ಕೊಟ್ಟು ಸೂರ್ಯನು ಆಕಾಶಮಾರ್ಗದಲ್ಲಿ ಹೊರಟುಹೋದನು. ನೀರಿನಲ್ಲಿ ತೇಲಿಬಿಟ್ಟ ಆ ಶಿಶುವನ್ನು ಕೀರ್ತಿವಂತರಾದ ರಾಧೆಯ ಪತಿಯಾದ ಸೂತನಾದ ಅಧಿರಥನು ಸ್ವೀಕರಿಸಿ ತನ್ನ ಪತ್ನಿಯ ಕೈಗೆ ಮಗನೆಂದು ಕಲ್ಪಿಸಿಕೊಟ್ಟನು.

ನಾಮಧೇಯಂ ಚ ಚಕ್ರಾತೇ ತಸ್ಯ ಬಾಲಸ್ಯ ತಾವುಭೌ ।
ಸಮಾಹೃತೋऽಯಂ ವಸುನಾ ವಸುಷೇಣೇತಿ ನಾಮತಃ ॥೩೨॥

ಸ ವರ್ಧಮಾನೋ ಬಲವಾನ್ ಸರ್ವಾಸ್ತ್ರೇಷೂದ್ಯತೋऽಭವತ್।
ಆಪೃಷ್ಠತಾಪಾಚ್ಚಾದಿತ್ಯಮುಪತಸ್ಥೇ ಕೃತಾಂಜಲಿಃ ॥೩೪॥

ತುಂಬಾ ಧನದ ಜೊತೆಯಲ್ಲಿ ಬಂದ ಕಾರಣ ಆ ಶಿಶುವಿಗೆ ವಸುಷೇಣನೆಂದು ಅವರಿಬ್ಬರೂ ನಾಮಕರಣ ಮಾಡಿದರು. ಅವನು ಬೆಳೆಯುತ್ತಾ ಬಲಿಷ್ಠನಾಗಿ ಬೆಳೆದು ಸರ್ವಶಸ್ತ್ರಾಸ್ತ್ರಗಳ ವಿದ್ಯೆಯನ್ನು ಸಂಪಾದಿಸಿದನು. ಅವನು ಪ್ರಾತಃಕಾಲದಿಂದ ಕೈಗಳನ್ನು

ಮುಗಿದು ಸೂರ್ಯನನ್ನು ಆರಾಧಿಸಲು ಪ್ರಾರಂಭಿಸಿದರೆ, ಬೆನ್ನಿನ ಮೇಲೆ ಬಿಸಿಲು ಬೀಳುವವರೆಗೂ ಅದನ್ನು ಮುಂದುವರೆಸುತ್ತಿದ್ದನು.

ಯಸ್ಮಿನ್ ಕಾಲೇ ಜಪನ್ತಾಸ್ತೇ ಸ ವೀರಃ ಸತ್ಯಸಂಗರಃ ।
ನಾದೇಯಂ ಬ್ರಾಹ್ಮಣಾಯಾಸೀತ್ ತಸ್ಮಿನ್ ಕಾಲೇ ಮಹಾತ್ಮನಃ ॥೩೫॥

ತತಃ ಕಾಲೇ ತು ಕಸ್ಮಿಂಶ್ಚಿತ್ ಸ್ವಪ್ನಾಂತೇ ಕರ್ಣಮಬ್ರವೀತ್ ।
ಆದಿತ್ಯೋ ಬ್ರಾಹ್ಮಣೋ ಭೂತ್ವಾ ಶೃಣು ವೀರ ವಚೋ ಮಮ ॥೩೬॥

ಸತ್ಯಸಂಧನೂ, ವೀರನೂ, ಮಹಾತ್ಮನೂ ಆದ ಅವನು ಜಪವನ್ನು ಮಾಡುವ ಕಾಲದಲ್ಲಿ ಅವನು ಬ್ರಾಹ್ಮಣರಿಗೆ ಕೊಡಲಾರದಂತಹುದು ಯಾವುದೂ ಇರಲಿಲ್ಲ. ಅನಂತರ ಒಂದು ದಿವಸ ಸೂರ್ಯನು ಬ್ರಾಹ್ಮಣ ರೂಪದಲ್ಲಿ ಸ್ವಪ್ನದಲ್ಲಿ ಬಂದು, ವೀರನೇ! ನನ್ನ ಮಾತನ್ನು ಕೇಳು ಎಂದು ಕರ್ಣನಿಗೆ ಹೇಳಿದನು.

ಪ್ರಭಾತಾಯಾಂ ರಜನ್ಯಾಂ ತ್ವಾಮಾಗಮಿಷ್ಯತಿ ವಾಸವಃ ।
ನ ತಸ್ಯ ಭಿಕ್ಷಾ ದಾತವ್ಯಾ ವಿಪ್ರರೂಪೋ ಭವಿಷ್ಯತಿ ॥೩೭॥

ನಿಶ್ಚಯೋಽಸ್ಯಾಪಹರ್ತುಂ ತೇ ಕವಚಂ ಕುಂಡಲೇ ತಥಾ ।
ಅತಸ್ತ್ವಾಂ ಬೋಧಯಾಮ್ಯೇಷ ನಿಬೋಧ ವಚನಂ ಮಮ ॥೩೮॥

ನಾಳೆ ಪ್ರಾತಃಕಾಲದಲ್ಲಿ ಇಂದ್ರನು ಬ್ರಾಹ್ಮಣರೂಪದಲ್ಲಿ ಆಗಮಿಸಿ ಭಿಕ್ಷೆಯನ್ನು ಬೇಡುವನು. ಅವನಿಗೆ ನೀನು ಭಿಕ್ಷೆಯನ್ನು ನೀಡಬಾರದು. ಅವನು ನಿನ್ನ ಕವಚ ಕುಂಡಲಗಳನ್ನು ಅಪಹರಿಸಬೇಕೆಂಬ ನಿರ್ಧಾರದಿಂದ ನಿನ್ನ ಬಳಿಗೆ ಬರುವನು. ಆದ್ದರಿಂದ ನಿನಗೆ ಮೊದಲೇ ತಿಳಿಸುತ್ತಿದ್ದೇನೆ. ನನ್ನ ಮಾತುಗಳನ್ನು ಮನಸ್ಸಿನಲ್ಲಿಡು.

ಕರ್ಣಃ

ಶಕ್ರೋ ಮಾಂ ವಿಪ್ರರೂಪೇಣ ಯದಿ ವೈ ಯಾಚತೇ ದ್ವಿಜ ।
ಕಥಂ ಚಾಸ್ಮೈ ನ ದಾಸ್ಯಾಮಿ ಯಥಾ ಚಾಸ್ಮ್ಯವಬೋಧಿತಃ ॥೩೯॥

ಎಲೈ ಬ್ರಾಹ್ಮಣನೇ, ಇಂದ್ರನು ಬ್ರಾಹ್ಮಣರೂಪದಿಂದ ಬಂದು ನನ್ನನ್ನು ಬೇಡಿದರೆ, ನೀನು ಎಚ್ಚರಿಸಿದರೂ ಸಹ, ನಾನು ಅವನು ಬೇಡಿದುದನ್ನು ಅವನಿಗೆ ಹೇಗೆ ಕೊಡದೇ ಇರಲಿ.

ವಿಪ್ರಾಃ ಪೂಜ್ಯಾಸ್ತು ದೇವಾನಾಂ ಪ್ರಿಯಮಸ್ತೀತಿ ಬ್ರಾಹ್ಮಣ ।
ತಂ ದೇವದೇವಂ ಜಾನನ್ ವೈ ನ ಶಕ್ನೋಮ್ಯವಮಂತ್ರಣೇ ॥೪೦॥

ಎಲೈ ಬ್ರಾಹ್ಮಣನೇ, ಬ್ರಾಹ್ಮಣರು ಪೂಜಿಸಲ್ಪಟ್ಟರೆ ಪ್ರಿಯವುಂಟಾಗುವುದು ಎಂಬ ಕಾರಣದಿಂದ ದೇವತೆಗಳಿಗೂ ಪೂಜ್ಯರಾದವರು. ಅವನನ್ನು ದೇವದೇವ ಎಂದು ತಿಳಿದ ನಾನು ಹೇಗೆ ಅವನನ್ನು ನಿರಾಕರಿಸಲಿ.

ಸೂರ್ಯಃ

ಯದ್ಯೇವಂ ಶೃಣು ಮೇ ವೀರ ವರಂ ತೇ ಸೋಽಪಿ ದಾಸ್ಯತಿ ।
ಶಕ್ತಿಂ ತ್ವಮಪಿ ಯಾಚೇಥಾಃ ಸರ್ವಶತ್ರುನಿಬರ್ಹಿಣೇಮ್ ॥೪೦॥

ವೀರನೇ, ಹಾಗಾದರೆ ನನ್ನ ಮಾತನ್ನು ಕೇಳು. ಅವನೂ ನಿನಗೆ ಒಂದು ವರವನ್ನು ಕೊಡುವನು. ಆಗ ನೀನು ಸರ್ವಶತ್ರುಸಂಹಾರಕವಾದ ಶಕ್ತ್ಯಾಯುಧವನ್ನು ಬೇಡಬೇಕು.

ವೈಶಂಪಾಯನಃ

ಏವಮುಕ್ತ್ವಾ ದ್ವಿಜಃ ಸ್ವಪ್ನೇ ತತ್ರೈವಾಂತರಧೀಯತ ।
ಕರ್ಣಃ ಪ್ರಬುದ್ಧಸ್ತಂ ಸ್ವಪ್ನಂ ಚಿಂತಯಾನೋಽಭವತ್ ತದಾ ॥೪೧॥

ಬ್ರಾಹ್ಮಣನು ಸ್ವಪ್ನದಲ್ಲಿ ಹೀಗೆ ಹೇಳಿ ಅಲ್ಲಿಯೇ ಅದೃಶ್ಯನಾದನು. ಕರ್ಣನು ಎಚ್ಚರಗೊಂಡು ಆ ಸ್ವಪ್ನವನ್ನೇ ಚಿಂತಿಸುತ್ತಿದ್ದನು.

ತಮಿಂದ್ರೋ ಬ್ರಾಹ್ಮಣೋ ಭೂತ್ವಾ ಪುತ್ರಾರ್ಥಂ ಭೂತಭಾವನಃ ।
ಕುಂಡಲೇ ಪ್ರಾರ್ಥಯಾಮಾಸ ಕವಚಂ ಚ ಮಹಾದ್ಯುತಿಃ ॥೪೨॥

ಭೂತಭಾವನನಾದ ಇಂದ್ರನು ತನ್ನ ಮಗನಾದ ಅರ್ಜುನನ ಕ್ಷೇಮದ ಸಲುವಾಗಿ ಬ್ರಾಹ್ಮಣರೂಪವನ್ನು ಧರಿಸಿ, ಕರ್ಣನನ್ನು ಸಮೀಪಿಸಿ ಕವಚ ಮತ್ತು ಕುಂಡಲಗಳನ್ನು ಬೇಡಿದನು.

ಉತೃತ್ಯಾವಿಮನಾಃ ಸ್ವಾಂಗಾತ್ ಕವಚಂ ರುಧಿರಸ್ರವಮ್ ।
ಕರ್ಣಪಾಲ್ಯೌ ಚ ದ್ವೇ ಚಿತ್ತ್ವಾ ಪ್ರಾಯಚ್ಛತ್ ಸ ಕೃತಾಂಜಲಿಃ ॥೪೩॥

ಕರ್ಣನು ಸ್ವಲ್ಪವೂ ಯೋಚನೆ ಮಾಡದೆ ತನ್ನ ಶರೀರದಿಂದ ರಕ್ತವನ್ನು ಸ್ರವಿಸುತ್ತಿರುವ ಕವಚವನ್ನು ಹರಿತವಾದ ಆಯುಧದಿಂದ ಕಿತ್ತು, ತನ್ನ ಕಿವಿಗಳನ್ನು ಕತ್ತರಿಸಿ ಕುಂಡಲಗಳನ್ನೂ ತೆಗೆದು ಆ ಬ್ರಾಹ್ಮಣನಿಗೆ ಕೊಟ್ಟುಕೈ ಮುಗಿದನು.

ಅಹೋ ಸಾಹಸಮಿತ್ಯೇವಂ ಮನಸಾ ವಾಸವೋ ಹಸನ್ ।
ದೇವದಾನವಯಕ್ಷಾಣಾಂ ಗಂಧರ್ವೋರಗರಕ್ಷಸಾಮ್ ॥೪೪॥

ನ ತಂ ಪಶ್ಯಾಮಿ ಕೋ ಹ್ಯೇತತ್ ಕರ್ಮ ಕರ್ತಾ ಭವಿಷ್ಯತಿ ।
ಪ್ರೀತೋಽಸ್ಮಿ ಕರ್ಮಣಾ ತೇನ ವರಂ ಬ್ರೂಹಿ ಯಮಿಚ್ಛಸಿ ॥೪೫॥

ಎಂತಹ ಸಾಹಸದ ಕಾರ್ಯ ಎಂದು ಹೇಳಿ ಇಂದ್ರನು ಮನಸ್ಸಿನಲ್ಲಿಯೇ ನಕ್ಕನು. ದೇವ ದಾನವ ಯಕ್ಷರಲ್ಲಿ, ಗಂಧರ್ವ, ಉರಗ, ರಾಕ್ಷಸರಲ್ಲಿ ಇಂತಹ ಕೆಲಸವನ್ನು ಮಾಡುವವನನ್ನು ನಾನು ಎಂದೂ ನೋಡಿಲ್ಲ ಎಂದು ಚಿಂತಿಸಿದನು. ಕರ್ಣನನ್ನು ಕುರಿತು ನಿನ್ನ ಈ ಕರ್ಮದಿಂದ ಸಂತುಷ್ಟನಾಗಿದ್ದೇನೆ. ನಿನಗೆ ಬೇಕಾದ ವರವನ್ನು ಕೇಳು ಎಂದು ಹೇಳಿದನು.

ಕರ್ಣಃ

ಇಚ್ಛಾಮಿ ಭಗವದ್ದತ್ತಾಂ ಶಕ್ತಿಂ ಶತ್ರುನಿವರ್ಹಿಣೀಮ್ ॥೪೬॥

ಪೂಜ್ಯರಿಂದ ಶತ್ರುಸಂಹಾರಕವಾದ ಶಕ್ತ್ಯಾಯುಧವನ್ನು ಪಡೆಯಲು ಬಯಸುತ್ತೇನೆ.

ವೈಶಂಪಾಯನಃ

ಶಕ್ತಿಂ ತಸ್ಮೈ ದದೌ ಶಕ್ರೋ ವಿಸ್ಮಿತೋ ವಾಕ್ಯಮಬ್ರವೀತ್ ।
ದೇವದಾನವಯಕ್ಷಾಣಾಂ ಗಂಧರ್ವೋರಗರಕ್ಷಸಾಮ್ ॥೪೭॥

ಯಸ್ಮೈ ಕ್ಷೇಪ್ಸ್ಯಸಿ ರುಷ್ಟಃ ಸನ್ ಸೋಽನಯಾ ನ ಭವಿಷ್ಯತಿ ।
ಹತ್ವೈಕಂ ಸಮರೇ ಶತ್ರುಂ ತತೋ ಮಾಮಾಗಮಿಷ್ಯತಿ ॥೪೮॥

ವಿಸ್ಮಿತನಾದ ಇಂದ್ರನು ಆಗ ಅವನಿಗೆ ಶಕ್ತಿಯನ್ನು ಕೊಟ್ಟು ಮಾತನಾಡಿದನು. ದೇವ ದಾನವ ಯಕ್ಷರಲ್ಲಿ, ಗಂಧರ್ವ, ಉರಗ, ರಾಕ್ಷಸರಲ್ಲಿ ನೀನು ಯಾರ ಮೇಲೆ ಕೋಪದಿಂದ ಇದನ್ನು ಪ್ರಯೋಗಿಸುವೆಯೋ ಅವನು ನಾಶವನ್ನು ಹೊಂದುವನು. ಈ ಆಯುಧವು ಯುದ್ಧದಲ್ಲಿ ಒಬ್ಬನನ್ನು ಸಂಹಾರ ಮಾಡಿ ಪುನಃ ನನ್ನ ಕೈಯನ್ನು ಸೇರುವುದು.

ವೈಶಂಪಾಯನಃ

ಪುರಾ ನಾಮ ತು ತಸ್ಯಾऽऽಸೀದ್ ವಸುಷೇಣ ಇತಿ ಸ್ಮೃತಮ್ ।
ತತೋ ವೈಕರ್ತನಃ ಕರ್ಣಃ ಸ ತಸ್ಮಾನ್ ಕಾರಣಾದಿತಿ ॥೪೮॥

ಮೊದಲು ಕರ್ಣನಿಗೆ ವಸುಷೇಣ ಎಂಬ ನಾಮವಿದ್ದಿತು. ಈ ಘಟನೆಯು ನಡೆದ ಮೇಲೆ ಈ ಕಾರಣದಿಂದ ಅವನಿಗೆ ವೈಕರ್ತನ (ಶರೀರವನ್ನು ಕತ್ತರಿಸಿಕೊಂಡವನು) ಎಂಬ ನಾಮವು ಬಂದಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ದಶಾಧಿಕಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ಅಷ್ಟಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಹತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ- ಅಧ್ಯಾಯ-೧೧

ಅಥ ಕುಂತೀ ದತ್ತಾ ಸಾ ಪಾಂಡೋಃ ಸೋऽಪ್ಯೇತಯಾ ಚಿರಂ ರೇಮೇ ।
ಶೂರಾಚ್ಛೂದ್ರಾ ್ಯಂ ಜಾತಾಂ ವಿದುರೋऽವಹದಾರುಣೀಂ ಗುಣಾಢ್ಯಾಂ ಚ॥

ಬಳಿಕ ಕುಂತಿ ಪಾಂಡುವಿಗೆ ಕೊಡಲ್ಪಟ್ಟಳು. ಅವನು ಅವಳೊಡನೆ ಬಹುಕಾಲ ರಮಿಸಿದ. ಶೂರನಿಂದ ಶೂದ್ರಸ್ತ್ರೀಯಲ್ಲಿ ಜನಿಸಿದ ಗುಣಾಢ್ಯಳಾದ ಆರುಣಿಯನ್ನು ವಿದುರ ವಿವಾಹವಾದ.

ಅಥ ಚರ್ತಾಯನನಾಮಾ ಮದ್ರೇಶಃ ಶಕ್ರತುಲ್ಯಪುತ್ರಾರ್ಥೀ ।
ಕನ್ಯಾರತ್ನಂ ಚೇಚ್ಛಂಶ್ಚಕ್ರೇ ಬ್ರಾಹ್ಮಂ ತಪೋ ವರಂ ಚಾಪ ॥೧೬೩॥

ಋತಾಯನ ಎಂಬ ಹೆಸರಿನ ಮದ್ರರಾಜ ಇಂದ್ರನಂಥ ಮಗನನ್ನು ಬಯಸಿ ಜೊತೆಗೆ ಕನ್ಯಾರತ್ನವನ್ನೂ ಬಯಸಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದ. ವರವನ್ನು ಪಡೆದ.

ಪ್ರಹ್ಲಾದಾವರಜೋ ಯಃ ಸಹ್ಲಾದೋ ನಾಮತೋ ಹರೇರ್ಭಕ್ತಃ ।
ಸೋऽಭೂದ್ ಬ್ರಹ್ಮವರಾಂತೇ ವಾಯೋರಾವೇಶಯುಕ್ ಸುತೋ ರಾಜ್ಞಃ॥

ಪ್ರಹ್ಲಾದನ ತಮ್ಮನಾದ ಸಹ್ಲಾದನೆಂಬ ವಿಷ್ಣುಭಕ್ತ ಬ್ರಹ್ಮನಿಂದ ವರ ಪಡೆದು ಮುಖ್ಯಪ್ರಾಣನ ಆವೇಶಯುಕ್ತನಾಗಿ ಋತಾಯನ ರಾಜನ ಮಗನಾಗಿ ಹುಟ್ಟಿದ.

ಸ ಮಾರುತಾವೇಶವಶಾತ್ ಪೃಥಿವ್ಯಾಂ
ಬಲಾಧಿಕೋಽಭೂದ್ ವರತಶ್ಚ ಧಾತುಃ ।
ಶಲ್ಯಶ್ಚ ನಾಮ್ನಾಖಿಲಶತ್ರುಶಲ್ಯೋ-
ಬಭೂವ ಕನ್ಯಾಸ್ಯ ಚ ಮಾದ್ರಿನಾಮ್ನೀ ॥೧೬೫॥

ಅವನು ವಾಯ್ವಾವೇಶದಿಂದಲೂ ಬ್ರಹ್ಮನ ವರದಿಂದಲೂ ಭೂಮಿಯಲ್ಲಿ ಬಲಿಷ್ಠನಾದ. ಎಲ್ಲ ಶತ್ರುಗಳಿಗೂ ಶಲ್ಯದಂತೆ, ಅಂದರೆ ಈಟಿಯಂತೆ ಇದ್ದು ಶಲ್ಯ ಎಂದೆ ಹೆಸರು ಪಡೆದ. ಋತಾಯನನಿಗೆ ಮುಂದೆ ಮಾದ್ರಿ ಎಂಬ ಹೆಸರಿನ ಕನ್ಯೆಯೂ ಜನಿಸಿದಳು.

ಸಾ ಪಾಂಡುಭಾರ್ಯ್ಯೈವ ಚ ಪೂರ್ವಜನ್ಮನ್ಯಭೂತ್
ಪುನಶ್ಚ ಪ್ರತಿಪಾದಿತಾಸ್ಮೈ ।
ಶಲ್ಯಶ್ಚ ರಾಜ್ಯಂ ಪಿತೃದತ್ತಮಂಜೋ
ಜುಗೋಪ ಧರ್ಮೇಣ ಸಮಸ್ತಶಾಸ್ತ್ರವಿತ್ ॥೧೬೬॥

ಮಾದ್ರಿ ಪೂರ್ವಜನ್ಮದಲ್ಲಿ ಪಾಂಡುವಿನ ಇನ್ನೊಬ್ಬ ಹೆಂಡತಿಯೆ ಆಗಿದ್ದಳು. ಪುನಃ ಅವತಾರದಲ್ಲಿಯೂ ಅವಳನ್ನು ಶಲ್ಯ ಪಾಂಡುವಿಗೆ ಕೊಟ್ಟ. ಸಕಲ ಶಾಸ್ತ್ರವೇತ್ತನಾದ ಆತ ತಂದೆ ಕೊಟ್ಟ ರಾಜ್ಯವನ್ನು ಚೆನ್ನಾಗಿ ಧರ್ಮದಿಂದ ಪಾಲಿಸಿದ.

ಅಥಾಂಗನಾರತ್ನಮವಾಪ್ಯ ತದ್ ದ್ವಯಂ
ಪಾಂಡುಸ್ತು ಭೋಗಾನ್ ಬುಭುಜೇ ಯಥೇಷ್ಟತಃ ।
ಅಪೀಪಲದ್ ಧರ್ಮಸಮಾಶ್ರಯೋ ಮಹೀಂ
ಜ್ಯೇಷ್ಠಾಪಚಾಯೀ ವಿದುರೋಕ್ತಮಾರ್ಗತಃ ॥೧೬೭॥

ಆ ಎರಡು ಸ್ತ್ರೀರತ್ನಗಳನ್ನು ಪಡೆದು ಪಾಂಡು ಯಥೇಷ್ಟವಾಗಿ ಭೋಗಗಳನ್ನು ಅನುಭವಿಸಿದ. ಧರ್ಮಾವಲಂಬಿಯಾದ ಆತ ವಿದುರ ಹೇಳುವ ಮಾರ್ಗದಿಂದ ಅಣ್ಣ ಧೃತರಾಷ್ಟ್ರನಿಗೆ ಸಂಪತ್ತನ್ನು ತಂದುಕೊಡುತ್ತ ರಾಜ್ಯವಾಳಿದ.

ಭೀಷ್ಮೋ ಹಿ ರಾಷ್ಟ್ರೇ ಧೃತರಾಷ್ಟ್ರಮೇವ
ಸಂಸ್ಥಾಪ್ಯ ಪಾಂಡುಂ ಯುವರಾಜಮೇವ ।
ಚಕ್ರೇ ತಥಾಪ್ಯಂಧ ಇತಿ ಸ್ಮ ರಾಜ್ಯಂ
ಚಕಾರ ನಾಸಾವಕರೋಚ್ಚ ಪಾಂಡುಃ ॥೧೬೮॥

ಭೀಷ್ಮ ರಾಜ್ಯದಲ್ಲಿ ಧೃತರಾಷ್ಟ್ರನನ್ನು ಮಹಾರಾಜನನ್ನಾಗಿ ಮಾಡಿದ. ಪಾಂಡುವನ್ನು ಯುವರಾಜನನ್ನಾಗಿಯೂ ಮಾಡಿದ. ಆದರೆ ಧೃತರಾಷ್ಟ್ರ ತಾನು ಅಂಧನಾದ್ದರಿಂದ ರಾಜ್ಯಭಾರವನ್ನು ಕೈಗೊಳ್ಳಲಿಲ್ಲ. ಪಾಂಡುವೆ ಕೈಗೊಂಡ.

ಭೀಷ್ಮಾಂಬಿಕೇಯೋಕ್ತಿಪರಃ ಸದೈವ
ಪಾಂಡುಃ ಶಶಾಸಾವನಿಮೇಕವೀರಃ ।
ಅಥಾಂಬಿಕೇಯೋ ಬಹುಭಿಶ್ಚ ಯಜ್ಞೈ-
ರೀಜೇ ಸ ಪಾಂಡುಶ್ಚ ಮಹಾಧನೌಘೈಃ ॥೧೬೯॥

ಅಪ್ರತಿಮ ವೀರನಾದರೂ ಪಾಂಡು ಸದಾ ಭೀಷ್ಮಧೃತರಾಷ್ಟ್ರರ ಮಾತಿಗೆ ವಿಧೇಯನಾಗಿದ್ದು ಭೂಮಿಯನ್ನು ಆಳಿದ. ಧೃತರಾಷ್ಟ್ರನೂ ಪಾಂಡುವೂ ಮಹಾಧನ ಸಮೂಹಯುಕ್ತವಾದ ಬಹುಯಜ್ಞಗಳನ್ನು ಆಚರಿಸಿದರು.

ನೈಷಾ ವಿರೋಧೇ ಕುರುಪಾಂಡವಾನಾಂ
ತಿಷ್ಠೇದಿತಿ ವ್ಯಾಸ ಉದೀರ್ಣಸದ್ಗುಣಃ ।
ಸ್ವಮಾತರಂ ಸ್ವಾಶ್ರಮಮೇವ ನಿನ್ಯೇ
ಸುಷೇ ಚ ತಸ್ಯಾ ಯಯತುಃ ಸ್ಮ ತಾಮನು ॥೧೭೦॥

ಮುಂದೆ ಕೌರವ ಪಾಂಡವರೊಳಗೆ ವಿರೋಧ ಉಂಟಾಗುವಾಗ ತನ್ನ ತಾಯಿ ಸತ್ಯವತಿ ಅಲ್ಲಿ ಇರಕೂಡದೆಂದು ಉತ್ತಮ ಸದ್ಗುಣರಾದ ವ್ಯಾಸರು ಅವಳನ್ನು ತನ್ನ ಆಶ್ರಮಕ್ಕೆ ಕರೆದೊಯ್ದರು. ಸೊಸೆಯರಾದ ಅಂಬಿಕಾ ಅಂಬಾಲಿಕೆಯರೂ ಅವಳನ್ನು ಹಿಂಬಾಲಿಸಿದರು.

ಸುತೋಕ್ತಮಾರ್ಗೇಣ ವಿಚಿಂತ್ಯ ತಂ ಹರಿಂ
ಸುತಾತ್ಮನಾ ಬ್ರಹ್ಮತಯಾ ಚ ಸಾ ಯಯೌ ।
ಪರಂ ಪದಂ ವೈಷ್ಣವಮೇವ ಕೃಷ್ಣಪ್ರಸಾದತಃ
ಸ್ವರ್ಯಯತುಃ ಸುಷೇ ಚ ॥೧೭೧॥

ವ್ಯಾಸರು ಉಪದೇಶಿಸಿದ ಪ್ರಕಾರದಿಂದಲೆ ಸತ್ಯವತಿ ಅವರನ್ನು ಮಗನೆಂದೂ ಪರಬ್ರಹ್ಮನೆಂದೂ ಉಪಾಸನೆ ಮಾಡಿ ಅವರ ಅನುಗ್ರಹದಿಂದ ಉತ್ತಮ ವಿಷ್ಣುಲೋಕವನ್ನೇ ಹೊಂದಿದಳು. ಸೊಸೆಯರು ಸ್ವರ್ಗಲೋಕ ಪಡೆದರು.

ಮಾತಾ ಚ ಸಾ ವಿದುರಸ್ಯಾಪ ಲೋಕಂ
ವೈರಿಂಚಮನ್ವೇವ ಗತಾಂಬಿಕಾಂ ಸತೀ ।
ವ್ಯಾಸಪ್ರಸಾದಾತ್ ಸುತಸದ್ಗುಣೈಶ್ಚ ಕಾಲೇನ
ಮುಕ್ತಿಂ ಚ ಜಗಾಮ ಸನ್ಮತಿಃ ॥೧೭೨॥

ವಿದುರನ ತಾಯಿಯೂ ಅಂಬಿಕೆಯನ್ನು ಹಿಂಬಾಲಿಸಿ ಬಂದು ವ್ಯಾಸರ ಅನುಗ್ರಹದಿಂದಲೂ ಮಗನ ಸದ್ಗುಣಗಳಿಂದಲೂ ಬ್ರಹ್ಮಲೋಕವನ್ನು ಪಡೆದಳು. ಮುಕ್ತಿಯೋಗ್ಯಳಾಗಿದ್ದು ಸದ್ಬುದ್ಧಿ ಉಳ್ಳ ಅವಳು ಕಾಲಕ್ರಮದಿಂದ ಮುಕ್ತಿಯನ್ನೂ ಹೊಂದಿದಳು.

ಅಂಬಾಲಿಕಾಪಿ ಕ್ರಮಯೋಗತೋಽಗಾತ್
ಪರಾಂ ಗತಿಂ ನೈವ ತಥಾಂಬಿಕಾ ಯಯೌ ।
ಯಥಾ ಯಥಾ ವಿಷ್ಣುಪರಶ್ಚಿದಾತ್ಮಾ
ತಥಾ ತಥಾ ಹ್ಯಸ್ಯ ಗತಿಃ ಪರತ್ರ ॥೧೭೩॥

ಅಂಬಾಲಿಕೆ ಕ್ರಮವಾಗಿ ಸಾಧನೆ ಮಾಡಿ ಉತ್ತಮವಾದ ವೈಕುಂಠಾದಿ ಲೋಕವನ್ನು ಹೊಂದಿದಳು. ಅಂಬಿಕೆ ಹಾಗೆ ವಿಷ್ಣುಲೋಕವನ್ನು ಹೊಂದಲಿಲ್ಲ. ಜ್ಞಾನಸ್ವರೂಪನಾದ ಜೀವಾತ್ಮ ಹೇಗೆ ಹೇಗೆ ವಿಷ್ಣುಭಕ್ತಿ ಉಳ್ಳವನಾಗುವನೊ ಹಾಗೆ ಹಾಗೇ ಅವನಿಗೆ ಪರಗತಿಯಾಗುತ್ತದೆ.

ಪಾಂಡುಸ್ತತೋ ರಾಜ್ಯಭಾರಂ ನಿಧಾಯ
ಜ್ಯೇಷ್ಠೇಽನುಜೇ ಚೈವ ವನಂ ಜಗಾಮ ।
ಪತ್ನೀದ್ವಯೇನಾನುಗತೋ ಬದರ್ಯಾ-
ಮುವಾಸ ನಾರಾಯಣಪಾಲಿತಾಯಾಮ್ ॥೧೭೪॥

ಬಳಿಕ ಪಾಂಡು ರಾಜ್ಯಭಾರವನ್ನು ಧೃತರಾಷ್ಟ್ರನಲ್ಲಿಯೂ ವಿದುರನಲ್ಲಿಯೂ ಇರಿಸಿ ಇಬ್ಬರು ಪತ್ನಿಯರೊಂದಿಗೆ ಕಾಡಿಗೆ ಹೋದ. ನಾರಾಯಣನಿಂದ ಪಾಲಿತವಾದ ಬದರಿಯಲ್ಲಿ ವಾಸಮಾಡಿದ.

ಗೃಹಾಶ್ರಮೇಣೈವ ವನೇ ನಿವಾಸಂ
ಕುರ್ವನ್ ಸ ಭೋಗಾನ್ ಬುಭುಜೇ ತಪಶ್ಚ ।
ಚಕ್ರೇ ಮುನೀಂದ್ರೈಃ ಸಹಿತೋ ಜಗತ್ಪಿತಂ
ರಮಾಪತಿಂ ಭಕ್ತಿಯುತೋऽಭಿಪೂಜಯನ್ ॥೧೭೫॥

ಗೃಹಸ್ಥಾಶ್ರಮದಿಂದಲೆ ಕಾಡಿನಲ್ಲಿ ವಾಸ ಮಾಡುತ್ತ ಸುಖವನ್ನೂ ಅನುಭವಿಸಿದ, ಮುನಿಶ್ರೇಷ್ಠರಿಂದ ಸಹಿತನಾಗಿ ಜಗದೀಶನಾದ ರಮಾಪತಿಯನ್ನು ಭಕ್ತಿಯುಕ್ತನಾಗಿ ಪೂಜಿಸುತ್ತ ತಪಸ್ಸನ್ನೂ ಆಚರಿಸಿದ.

ಸ ಕಾಮತೋ ಹರಿಣತ್ವಂ ಪ್ರಪನ್ನಂ
ದೈವಾದೃಷ್ಟಿಂ ಗ್ರಾಮ್ಯಕರ್ಮಾನುಷಕ್ತಮ್ ।
ವಿದ್ಧ್ವಾ ಶಾಪಂ ಪ್ರಾಪ ತಸ್ಮಾತ್ ಸ್ತ್ರಿಯಾ ಯುಜ್
ಮರಿಷ್ಯಸೀತ್ಯೇವ ಬಭೂವ ಚಾರ್ತಃ ॥೧೭೬॥

ದೈವಾತ್ ಸ್ವೇಚ್ಛೆಯಿಂದ ಜಿಂಕೆ ರೂಪ ತಾಳಿ ರತಿಕ್ರೀಡೆಯಲ್ಲಿ ನಿರತನಾಗಿದ್ದ ಒಬ್ಬ ಮುನಿಯನ್ನು ಪಾಂಡು ಬಾಣದಿಂದ ಹೊಡೆದು ಅವನಿಂದ 'ಸ್ತ್ರೀಯೊಡನೆ ಕೂಡಿದರೆ ಸಾಯುವಿ' ಎಂದು ಶಾಪವನ್ನು ಹೊಂದಿದ. ದುಃಖಿತನಾದ.

ನ್ಯಸಿಷ್ಣುರುಕ್ತಃ ಪೃಥಯಾ ಸ ನೇತಿ
ಪ್ರಣಾಮಪೂರ್ವಂ ನ್ಯವಸತ್ ತಥೈವ ।
ತಾಭ್ಯಾಂ ಸಮೇತಃ ಶತಶೃಂಗಪರ್ವತೇ
ನಾರಾಯಣಸ್ಯಾಶ್ರಮಮಧ್ಯಗೇ ಪುರಃ ॥೧೭೭॥

ಪಾಂಡು ಸನ್ಯಾಸ ಸ್ವೀಕರಿಸಲು ಬಯಸಿದಾಗ ಕುಂತಿ ನಮಸ್ಕಾರ ಮಾಡಿ 'ಬೇಡ' ಎಂದಳು. ಅದರಿಂದ ಅವನು ಗೃಹಸ್ಥಧರ್ಮದಲ್ಲಿದ್ದೇ ಇಬ್ಬರು ಪತ್ನಿಯರ ಸಮೇತನಾಗಿ ಉತ್ತರದಲ್ಲಿ ನಡುವೆ ನಾರಾಯಣಾಶ್ರಮಯುಕ್ತವಾದ ಶತಶೃಂಗ ಪರ್ವತದಲ್ಲಿ ವಾಸಮಾಡಿದ.

ತಪೋ ನಿತಾಂತಂ ಸ ಚಚಾರ ತಾಭ್ಯಾಂ
ಸಮನ್ವಿತಃ ಕೃಷ್ಣಪದಾಂಬುಜಾಶ್ರಯಃ ।
ತತ್ಸಂಗಪೂತದ್ಯುಸರಿದ್ವರಾಂಭಃ
ಸದಾವಗಾಹಾತಿಪವಿತ್ರಿತಾಂಗಃ ॥೧೭೮॥

ಕುಂತಿ ಮಾದ್ರಿಯರಿಂದೊಡಗೂಡಿದ ಪಾಂಡು ಹರಿಯ ಪಾದಕಮಲಗಳನ್ನು ಆಶ್ರಯಿಸಿ ಹರಿಪಾದಸಂಗದಿಂದ ಪವಿತ್ರವಾದ ದೇವನದಿಯ ಉತ್ತಮ ಜಲದಲ್ಲಿ ನಿತ್ಯಸ್ನಾನ ಮಾಡುತ್ತ ಶರೀರ ಪಾವಿತ್ರ್ಯಗಳಿಸಿ ಬಹಳ ತಪಗೈದ.

★ ★ ★ ★

ನೂರ ಹನ್ನೊಂದನೆಯ ಅಧ್ಯಾಯ

(ಪಾಂಡುವಿನ ವಿವಾಹ, ದಿಗ್ವಿಜಯ, ಅರಣ್ಯಗಮನ ಮತ್ತು ಕಿಂದಮಶಾಪ.)

ವೈಶಂಪಾಯನಃ

ರೂಪಶೀಲಗುಣೋಪೇತಾ ಧರ್ಮಕಾಮಾ ನರರ್ಷಭ ।
ದುಹಿತಾ ಕುಂತಿಭೋಜಸ್ಯ ಕುಂತೀ ರಾಷ್ಟ್ರೇ ಪತಿಂವರಾ ॥೧॥

ಸಿಂಹದಂಷ್ಟ್ರಂ ಮಹಾಬಾಹುಮೃಷಭಾಕ್ಷಂ ಮನಸ್ವಿನಮ್ ।
ಪತಿಂ ವವ್ರೇ ಮಹೇಷ್ವಾಸಂ ಪಾಂಡುಂ ಕುಂತೀ ಯಶಸ್ವಿನೀ ॥೨॥

ಎಲೈ ನರಶ್ರೇಷ್ಠನೇ, ಕುಂತಿಭೋಜನ ಸಾಕುಮಗಳಾದ ಕುಂತಿಯು, ರೂಪಶೀಲಗುಣಗಳಿಂದ ಕೂಡಿದವಳಾಗಿದ್ದು ಧರ್ಮಕಾಮಳಾಗಿದ್ದು ತನ್ನ ರಾಷ್ಟ್ರದಲ್ಲಿ ಪತಿಯನ್ನು ವರಿಸುವವಳಾಗಿ ಸಿಂಹದಂಷ್ಟ್ರನೂ, ಮಹಾಬಾಹುವೂ, ವೃಷಭಾಕ್ಷನೂ, ಧೈರ್ಯಶಾಲಿಯೂ, ಧನುರ್ವೇದಜ್ಞನೂ ಆದ ಪಾಂಡುವನ್ನು ಪತಿಯನ್ನಾಗಿ ವರಿಸಿದಳು.

ಭೂಮಿಪಾಲಸಹಸ್ರಾಣಾಮಗ್ರತಃ ಸ ತಯಾ ವೃತಃ ।
ಯುಯುಜೇ ಭರತಶ್ರೇಷ್ಠಃ ಪೌಲೋಮ್ಯಾ ಮಘವಾನಿವ ॥೩॥

ಅವಳು ಅವನನ್ನು ಸಹಸ್ರಾರು ರಾಜರ ಎದುರಿನಲ್ಲಿ ವರಿಸಿದಳು. ಭರತಶ್ರೇಷ್ಠನಾದ ಪಾಂಡುವು, ಇಂದ್ರನು ಶಚಿಯ ಜೊತೆಯಲ್ಲಿ ಕೂಡಿದಂತೆ, ಅವಳ ಜೊತೆಯಲ್ಲಿ ಕೂಡಿದನು.

ಯಾತ್ವಾ ದೇವವ್ರತೇನಾಪಿ ಮದ್ರಾಣಾಂ ಪುಟಭೇದನಮ್ ।
ಏಶ್ರುತಾ ಸರ್ವಲೋಕೇಷು ಮಾದ್ರೀ ಮದ್ರಪತೇಃ ಸುತಾ ॥೪॥

ಸರ್ವರಾಜಸು ವಿಖ್ಯಾತಾ ರೂಪೇಣಾಸದೃಶೀ ಭುವಿ ।
ಪಾಂಡೋರರ್ಥೇ ಧನುಷ್ಮೀತಾ ಮದ್ರರಾಜೇಶ್ವರಾತ್ಮಜಾ ॥೫॥

ಭೀಷ್ಮರು ಮದ್ರದೇಶದ ಪಟ್ಟಣಕ್ಕೆ ಹೋಗಿ ಮದ್ರರಾಜನ ಮಗಳಾದ ಅಸದೃಶ ರೂಪವತಿಯಾದ ಸರ್ವಜನರಲ್ಲೂ ಪ್ರಖ್ಯಾತಳಾದ ಮದ್ರರಾಜನ ಮಗಳಾದ ಮಾದ್ರಿಯನ್ನು ಪಾಂಡುವಿನ ಸಲುವಾಗಿ ಧನುರ್ಬಲದಿಂದ ತೆಗೆದುಕೊಂಡು ಬಂದರು.

ವಿವಾಹಂ ಕಾರಯಾಮಾಸ ಭೀಷ್ಮಃ ಪಾಂಡೋರ್ಮಹಾತ್ಮನಃ ।
ಸಿಂಹೋರಸ್ಕಂ ಮಹೇಷ್ವಾಸಂ ವೃಷಭಾಕ್ಷಂ ಮನಸ್ವಿನಮ್ ॥೬॥

ದೃಷ್ಟ್ವಾ ಪಾಂಡುಂ ನರವ್ಯಾಘ್ರಂ ವ್ಯಸ್ಮಯಂತ ನರಾ ಭುವಿ ।
ಕೃತೋದ್ವಾಹಸ್ತದಾ ಪಾಂಡುರ್ಬಲೋತ್ಸಾಹಸಮನ್ವಿತಃ ॥೭॥

ಭೀಷ್ಮರು ಮಹಾತ್ಮನಾದ ಪಾಂಡುವಿಗೆ ವಿವಾಹವನ್ನು ಮಾಡಿಸಿದರು. ಸಿಂಹದಂತೆ ವಕ್ಷಸ್ಥಳವುಳ್ಳವನೂ, ದೊಡ್ಡ ಧನುಸ್ಸನ್ನು ಧರಿಸಿದವನೂ, ವೃಷಭನಂತೆ ಕಣ್ಣುಳ್ಳವನೂ, ಧೈರ್ಯಶಾಲಿಯೂ, ನರಶ್ರೇಷ್ಠನೂ ಆದ ಪಾಂಡುವನ್ನು ನೋಡಿ ಭೂಮಿಯಲ್ಲಿ ಜನರು ವಿಸ್ಮಯಪಟ್ಟರು.

ಗೋಪ್ತಾ ಭರತವಂಶಸ್ಯ ಪಾಂಡುಃ ಸರ್ವಾಸ್ತ್ರಕೋವಿದಃ ।
ಜಿಗೀಷಮಾಣೋ ವಸುಧಾಂ ಯಯೌ ಶತ್ರೂನನೇಕಶಃ ॥೮॥

ಪೂರ್ವಮಾಗಸ್ಕೃತೋ ಯಾತ್ವಾ ದಶಾರ್ಣಾಃ ಸಮರೇ ಹತಾಃ ।
ಪಾಂಡುನಾ ನರಸಿಂಹೇನ ಕೌರವಾಣಾಂ ಯಶೋಭೃತಾ ॥೯॥

ವಿವಾಹವನ್ನು ಮಾಡಿಕೊಂಡ ಪಾಂಡುವು ಸರ್ವಶಸ್ತ್ರಾಸ್ತ್ರ ಕೋವಿದನಾಗಿ, ಭರತವಂಶದ ರಕ್ಷಕನಾಗಿ, ಬಲ ಮತ್ತು ಉತ್ಸಾಹದಿಂದ ಕೂಡಿದವನಾಗಿ, ಭೂಮಿಯನ್ನು ಜಯಿಸುವ ಇಚ್ಛೆಯಿಂದ ಅನೇಕ ಶತ್ರುಗಳ ಮೇಲೆ ದಂಡೆತ್ತಿ ಹೋದನು. ಕೌರವರ ಯಶಸ್ಸನ್ನು ಧರಿಸಿದ್ದ ನರಸಿಂಹನಾದ ಪಾಂಡುವು ದಶಾರ್ಣದೇಶಕ್ಕೆ ಹೋಗಿ ಹಿಂದೆ ತಮಗೆ ಅಪರಾಧವನ್ನು ಮಾಡಿದ್ದ ದಶಾರ್ಣರನ್ನು ಯುದ್ಧದಲ್ಲಿ ಸಂಹರಿಸಿದನು.

ತತಃ ಸೇನಾಮುಪಾದಾಯ ಪಾಂಡುರ್ನಾನಾಯುಧಧ್ವಜಾಮ್ ।
ಸಮೃದ್ಧಹಯಪಾದಾತಾಮಪ್ರಮೇಯರಥದ್ವಿಪಾಮ್ ॥೧೦॥

ಗತ್ವಾ ಕಾಶೀಷು ವಂಗೇಷು ಪುಂಡ್ರೇಷು ಚ ನರಾಧಿಪಾನ್ ।
ಸ್ವಬಾಹುಬಲವೀರ್ಯೇಣ ಕುರೂಣಾಮಕರೋದ್ ಯಶಃ ॥೧೧॥

ಅನಂತರ ಪಾಂಡುವು ಅನೇಕ ಆಯುಧ ಮತ್ತು ಧ್ವಜಗಳನ್ನು ಹೊಂದಿದ, ಸಮೃದ್ಧವಾದ ಆಯಾ ಪದಾರ್ಥಗಳಿಂದ ಕೂಡಿದ ಬಲಿಷ್ಠವಾದ ಆನೆ ಮತ್ತು ರಥಗಳಿಂದ ಕೂಡಿದ ತನ್ನ ಸೈನ್ಯವನ್ನು ತೆಗೆದುಕೊಂಡು ಕಾಶಿಯಲ್ಲಿ, ವಂಗದೇಶದಲ್ಲಿ ಮತ್ತು ಪುಂಡ್ರದೇಶದಲ್ಲಿ ರಾಜರನ್ನು ಸಂಹರಿಸಿ ತನ್ನ ಬಾಹುಬಲದ ಸಾಮರ್ಥ್ಯದಿಂದ ಕುರುಗಳಿಗೆ ಕೀರ್ತಿಯನ್ನು ತಂದನು.

ಆಗಸ್ಯತ್ ಸರ್ವವೀರಾಣಾಂ ವೈರೀ ಸರ್ವಕುರುಕ್ಷಿತಾಮ್ ।
ಬಹೂನಾಮಾಗಸಾಂ ಕರ್ತಾ ವೈರೀ ಸರ್ವಮಹೀಕ್ಷಿತಾಮ್ ।
ಗೋಪ್ತಾ ಮಗಧರಾಷ್ಟ್ರಸ್ಯ ದಾರ್ವೋ ರಾಜಗೃಹೇ ಹತಃ ॥೧೨॥

ಅನಂತರ ಪಾಂಡುವು ಮಗಧದೇಶದ ರಾಜಧಾನಿಯಾದ ರಾಜಗೃಹಕ್ಕೆ ಹೋಗಿ, ಎಲ್ಲ ವೀರರಿಗೂ ಅಪಚಾರವೆಸಗಿದಂತಹ, ಎಲ್ಲ ಕುರುರಾಜರಿಗೂ ವೈರಿಯಾದಂತಹ, ಅನೇಕ ಅಪರಾಧಗಳನ್ನು ಮಾಡಿದಂತಹ ಎಲ್ಲಾ ರಾಜರಿಗೂ ಶತ್ರುವಾದಂತಹ ಮಗಧಾಧಿಪತಿಯಾದ ದಾರ್ವನನ್ನು (ದೀರ್ಘನನ್ನು) ಕೊಂದನು.

ತತಃ ಕೋಶಂ ಸಮಾದಾಯ ವಾಹನಾನಿ ಬಲಾನಿ ಚ ।
ಪಾಂಡುನಾ ಮಿಥಿಲಾಂ ಯಾತ್ವಾ ಮೈಥಿಲಾಃ ಸಮರೇ ಜಿತಾಃ ॥೧೩॥

ತಂ ಶರೌಘಂ ಮಹಾವೇಗಮಸ್ತ್ರಜ್ವಲಿತಪಾವಕಮ್ ।
ಪಾಂಡುಮಾಸಾದ್ಯ ರಾಜಾನೋ ನ ಶೇಕುರತಿವರ್ತಿತುಮ್ ॥೧೪॥

ತೇ ಸಸೇನಾಃ ಸಸೇನೇನ ವಿಧ್ವಂಸಿತಮಹಾಬಲಾಃ ।
ಪಾಂಡುನಾ ಪೃಥಿವೀಪಾಲಾಃ ಕರಕರ್ಮಸು ಯೋಜಿತಾಃ ॥೧೫॥

ಅನಂತರ ಅವನ ಕೋಶವನ್ನು, ವಾಹನಗಳನ್ನು ಮತ್ತು ಸೈನ್ಯವನ್ನು ತೆಗೆದುಕೊಂಡು ಪಾಂಡುವು ಮಿಥಿಲಾಪಟ್ಟಣಕ್ಕೆ ಹೋಗಿ ಮೈಥಿಲರನ್ನು ಯುದ್ಧದಲ್ಲಿ ಗೆದ್ದನು. ಶರಗಳ ಸಮೂಹವುಳ್ಳ ಮಹಾವೀರರಿದ್ದ, ಅಸ್ತ್ರಜ್ವಾಲೆಗಳಿಂದ ಪಾವಕನಂತಿರುವ, ಪಾಂಡುವನ್ನು ವಿರೋಧಿಸಿದ ರಾಜರು ಯಾರೂ ಅವನನ್ನು ದಾಟಲು ಸಾಧ್ಯವಾಗಲಿಲ್ಲ. ಪಾಂಡುವು ಮಹಾಬಲಿಷ್ಠರಾದ ಆ ರಾಜರನ್ನೂ, ಅವರ ಸೈನ್ಯವನ್ನೂ ಗೆದ್ದು, ಅವರೆಲ್ಲರೂ ಕಪ್ಪಕಾಣಿಕೆಗಳನ್ನು ಕೊಡುವಂತೆ ಮಾಡಿದನು.

ತೇನ ತೇ ನಿರ್ಜಿತಾಃ ಸರ್ವೇ ಪೃಥಿವ್ಯಾಂ ರಾಜಸತ್ತಮಾಃ ।
ತಮೇಕಂ ಮೇನಿರೇ ಶೂರಂ ದೇವೇಷ್ವಿವ ಪುರಂದರಮ್ ॥೧೬॥

ಅವನಿಂದ ಪರಾಭವವನ್ನು ಹೊಂದಿದ ಭೂಮಿಯ ರಾಜರೆಲ್ಲ ದೇವತೆಗಳಲ್ಲಿ ಇಂದ್ರನಂತೆ ಇವನೊಬ್ಬನೇ ಭೂಮಿಯಲ್ಲಿ ಶೂರನಾದವನು ಎಂದು ತಿಳಿದರು.

ತೇ ಕೃತಾಂಜಲಯಃ ಶೂರಮಾಸಾದ್ಯ ವಸುಧಾಧಿಪಾಃ ।
ಅಜಹ್ರುರ್ಧನಧಾನ್ಯಾನಿ ರತ್ನಾನಿ ವಿವಿಧಾನಿ ಚ ॥೧೭॥

ಮಣಿಪ್ರವಾಳಮುಕ್ತಾನಿ ಸುವರ್ಣಂ ರಜತಂ ತಥಾ ।
ಗೋರತ್ನಾನ್ಯಶ್ವರತ್ನಾನಿ ರಥರತ್ನಾನಿ ಕುಂಜರಾನ್ ॥೧೮॥

ಖರೋಷ್ಟ್ರಮಹಿಷಾನ್ ಗಾಶ್ಚ ಯಚ್ಚ ಕಿಂಚಿದಜಾವಿಕಮ್ ।
ತತ್ಸರ್ವಂ ಪ್ರತಿಜಗ್ರಾಹ ರಾಜಾ ನಾಗಪುರಾಧಿಪಃ ॥೧೯॥

ಆ ರಾಜರು ಪಾಂಡುವಿಗೆ ಕೈ ಮುಗಿದು ಧನಧಾನ್ಯಗಳನ್ನೂ, ಅನೇಕ ವಿಧವಾದ ರತ್ನಗಳನ್ನೂ, ಮುತ್ತುಹವಳ ಮಣಿಗಳನ್ನೂ, ಚಿನ್ನ ಮತ್ತು ಬೆಳ್ಳಿಯನ್ನೂ ಕಪ್ಪವಾಗಿ ತಂದರು. ಶ್ರೇಷ್ಠವಾದ ಗೋವುಗಳು, ಶ್ರೇಷ್ಠವಾದ ಅಶ್ವಗಳು, ಶ್ರೇಷ್ಠವಾದ ರಥ ಮತ್ತು ಆನೆಗಳು, ಕತ್ತೆಗಳು, ಒಂಟೆಗಳು, ಮಹಿಷಗಳು, ಗೋವುಗಳು, ಆಡುಗಳು ಮತ್ತು ಕುರಿಗಳು ಎಲ್ಲವನ್ನೂ ಹಸ್ತಿನಪುರದ ಅಧಿಪತಿಯಾದ ಪಾಂಡುವು ಸ್ವೀಕರಿಸಿದನು.

ತದಾದಾಯ ಯಯೌ ಪಾಂಡುರ್ಭೃಶಂ ಮುದಿತವಾಹನಃ ।
ಹರ್ಷಯನ್ ಸರ್ವರಾಷ್ಟ್ರಾಣಿ ಸ್ವಪುರಂ ಗಜಸಾಹ್ವಯಮ್ ॥೨೦॥

ಅವೆಲ್ಲವನ್ನೂ ತೆಗೆದುಕೊಂಡು ಸಂತೋಷಗೊಂಡ ವಾಹನವುಳ್ಳವನಾಗಿ ಪಾಂಡುವು ಎಲ್ಲ ರಾಷ್ಟ್ರಗಳಿಗೂ ಸಂತೋಷವನ್ನುಂಟು ಮಾಡುತ್ತಾ ತನ್ನ ಹಸ್ತಿನಪುರಕ್ಕೆ ಹೊರಟನು.

ಶಂತನೋ ರಾಜಸಿಂಹಸ್ಯ ಭರತಸ್ಯ ಚ ಧೀಮತಃ ।
ನಷ್ಟಾ ಕೀರ್ತಿಃ ಸ್ವವಂಶಸ್ಯ ಪಾಂಡುನಾ ಪುನರುದ್ಧತಾ ॥೨೧॥

ರಾಜಸಿಂಹನಾದ ಶಂತನುವಿನ ಮತ್ತು ಮೇಧಾವಿಯಾದ ಭರತನ ಕೀರ್ತಿಯು ಮೊದಲು ನಷ್ಟವಾಗಿದ್ದು ಈಗ ಅದೇ ವಂಶದ ಪಾಂಡುವಿನಿಂದ ಉದ್ಧಾರ ಮಾಡಲ್ಪಟ್ಟಿತು.

ಯೇ ಪೂರ್ವಾಪರರಾಷ್ಟ್ರಾಣಿ ಜಹ್ರುಃ ಪರಧನಾನಿ ಚ ।
ತೇ ನಾಗಪುರಸಿಂಹೇನ ಪಾಂಡುನಾ ವಶಗಾಃ ಕೃತಾಃ ।
ಇತ್ಯಭಾಷಂತ ರಾಷ್ಟ್ರಾಣಿ ಭೂಮಿಪಾಲಾಶ್ಚ ಸಂಗತಾಃ ॥೨೨॥

ಯಾರು ತಮ್ಮ ಅಕ್ಕಪಕ್ಕದ ರಾಷ್ಟ್ರಗಳನ್ನೂ ಮತ್ತು ಅವರ ಸಂಪತ್ತನ್ನೂ ಕಸಿದುಕೊಂಡರೋ, ಅವರೆಲ್ಲರೂ ಹಸ್ತಿನಾಪುರಸಿಂಹನಾದ ಪಾಂಡುವಿನಿಂದ ವಶಕ್ಕೆ ತೆಗೆದುಕೊಳ್ಳಲ್ಪಟ್ಟರು ಎಂದು ಎಲ್ಲ ರಾಷ್ಟ್ರಗಳು ಮತ್ತು ರಾಜರು ಒಟ್ಟಿಗೆ ಸೇರಿ ಮಾತನಾಡುತ್ತಿದ್ದರು.

ಅಭ್ಯನಂದಂಶ್ಚ ವೈ ಪಾಂಡುಮಾಶೀರ್ವಾದೈಃ ಪೃಥಗ್ವಿಧೈಃ ।
ಪ್ರಸನ್ನಮನಸಾ ಹೃಷ್ಟಾಃ ಪಾಂಡುಂ ವೈ ಕುರುಭಿಃ ಸಹ ।
ಪ್ರತ್ಯುದ್ಯಯುಸ್ತಂ ಪ್ರಹೃಷ್ಟಾಶ್ಚ ಸರ್ವೇ ಭೀಷ್ಮಪುರಃಸರಾಃ ॥೨೩॥

ಭೀಷ್ಮ ಮೊದಲಾದವರು ಅನೇಕ ವಿಧವಾದ ಆಶೀರ್ವಚನಗಳಿಂದ ಅಭಿನಂದಿಸಿದರು. ಅವರೆಲ್ಲರೂ ಪ್ರಸನ್ನಮನಸ್ಸಿನಿಂದ ಕೂಡಿದವರಾಗಿ, ಸಂತೋಷಗೊಂಡವರಾಗಿ ಪಾಂಡುವನ್ನು ಎದುರುಗೊಳ್ಳಲು ಮುಂದೆ ಬಂದರು.

ತೇ ತ್ವದೀರ್ಘಮಿವಾಯಾಂತಂ ಗತ್ವಾ ನಾಗಪುರಾಲಯಾಃ ।
ಆವೃತಂ ದದೃಶುರ್ಯೋಧಾ ಹೃಷ್ಟಾ ಬಹುವಿಧೈರ್ಧನೈಃ ।
ನಾನಾಯಾನಸಮಾನೀತೈ ರತ್ನೈರುಚ್ಚಾವಚೈಸ್ತಥಾ ॥೨೪॥

ಅವರು ಮತ್ತು ಹಸ್ತಿನಾಪುರವಾಸಿಗಳು ನಗರಕ್ಕೆ ಸಮೀಪದಲ್ಲಿ ಬರುತ್ತಿದ್ದ ಪಾಂಡುವನ್ನು ನೋಡಿ ಅವನು ಬಹು ವಿಧವಾದ ಧನದಿಂದ ಕೂಡಿರುವುದನ್ನು ನೋಡಿ ಸಂತೋಷಪಟ್ಟರು.

ಅಜಾವಿಕಾಶ್ವಸಂಘಾನಾಮುಷ್ಟ್ರಗೋಮಹಿಷಸ್ಯ ಚ ।
ನಾಂತಂ ದದೃಶುರಾಸಾದ್ಯ ಭೀಷ್ಮೇಣ ಸಹ ಕೌರವಾಃ ॥೨೫॥

ಅನೇಕ ವಾಹನಗಳಲ್ಲಿ ತೆಗೆದುಕೊಂಡು ಬಂದ ಅನೇಕ ವಿಧವಾದ ರತ್ನಗಳಿಗೂ, ಅಜ, ಆವಿಕ, ಅಶ್ವ ಮೊದಲಾದವುಗಳಿಗೂ, ಗೋವು, ಮಹಿಷ ಮತ್ತು ಒಂಟೆಗಳಿಗೂ ಎಲ್ಲೆಯನ್ನೇ ಕಾಣದೆ, ಭೀಷ್ಮರ ಮತ್ತು ಉಳಿದ ಕೌರವರ ಜೊತೆಯಲ್ಲಿ ಎಲ್ಲರೂ ಸಂತೋಷಪಟ್ಟರು.

ಸೋಽಭಿವಾದ್ಯ ಪಿತುಃ ಪಾದೌ ಕೌಸಲ್ಯಾನಂದವರ್ಧನಃ ।
ಯಥಾರ್ಹಂ ಮಾನಯಾಮಾಸ ಪೌರಜಾನಪದಾನಪಿ ॥೨೬॥

ಕೌಸಲ್ಯಾನಂದವರ್ಧನನಾದ ಪಾಂಡುವು ತಂದೆಯಾದ ಭೀಷ್ಮನ ಪಾದಗಳಿಗೆ ನಮಸ್ಕರಿಸಿ ಪೌರರನ್ನು ಮತ್ತು ಜಾನಪದರನ್ನು ಯಥೋಚಿತವಾಗಿ ಸನ್ಮಾನಿಸಿದನು.

ಪ್ರಮೃದ್ಯ ಪರರಾಷ್ಟ್ರಾಣಿ ಕೃತಾರ್ಥಂ ಪುನರಾಗತಮ್ ।
ಪುತ್ರಮಾಸಾದ್ಯ ಭೀಷ್ಮಸ್ತು ಹರ್ಷಾದಶ್ರ್ಯಾವರ್ತಯತ್ ॥೨೭॥

ಪರರಾಷ್ಟ್ರಗಳನ್ನು ಪರಾಭವಗೊಳಿಸಿ ಕೃತಾರ್ಥನಾಗಿ ಹಿಂದೆ ಬಂದ ಪುತ್ರನನ್ನು ನೋಡಿ ಭೀಷ್ಮರು ಆನಂದಬಾಷ್ಪವನ್ನು ಸುರಿಸಿದರು.

ಸ ತೂರ್ಯಶಂಖಸಂಘೈಶ್ಚ ಭೇರೀಣಾಂ ಚ ಮಹಾಸ್ವನೈಃ ।
ಹರ್ಷಯನ್ ಸರ್ವಭೂತಾನಿ ವಿವೇಶ ಗಜಸಾಹ್ವಯಮ್ ॥೨೮॥

ಪಾಂಡುವು ಶಂಖತೂರ್ಯನಿನಾದಗಳಿಂದಲೂ, ಮಹಾಸ್ವನವುಳ್ಳ ಭೇರಿಗಳ ನಿನಾದಗಳಿಂದಲೂ ಎಲ್ಲರನ್ನೂ ಸಂತೋಷಪಡಿಸುತ್ತಾ ಹಸ್ತಿನಪುರವನ್ನು ಪ್ರವೇಶಿಸಿದನು.

ಧೃತರಾಷ್ಟ್ರಾಭ್ಯನುಜ್ಞಾತಃ ಸ್ವಬಾಹುವಿಜಿತಂ ಧನಮ್ ।
ಭೀಷ್ಮಾಯ ಸತ್ಯವತ್ಯೈ ಚ ಮಾತ್ರೇ ಚೋಪಜಹಾರ ತತ್ ॥೨೯॥

ಧೃತರಾಷ್ಟ್ರನ ಅನುಮತಿಯನ್ನು ಪಡೆದು ತನ್ನ ಬಾಹುಬಲದಿಂದ ಸಂಪಾದಿಸಿದ ಧನವನ್ನು ಭೀಷ್ಮರಿಗೂ, ಸತ್ಯವತಿಗೂ, ತನ್ನ ತಾಯಿಯರಿಗೂ ಸಮರ್ಪಿಸಿದನು.

ವಿದುರಾಯ ಚ ವೈ ಪಾಂಡುಃ ಪ್ರೇಷಯಾಮಾಸ ತದ್ಧನಮ್ ।
ಸುಹೃದಶ್ಚಾಪಿ ಧರ್ಮಾತ್ಮಾ ಧನೇನ ಸಮತರ್ಪಯತ್ ॥೩೦॥

ಧರ್ಮಾತ್ಮನಾದ ಪಾಂಡುವು ವಿದುರನಿಗೂ ಧನವನ್ನು ಕಳುಹಿಸಿ ತನ್ನ ವಿಶ್ವಾಸಪಾತ್ರರೆಲ್ಲರನ್ನೂ ಧನದಿಂದ ಸಂತೋಷಪಡಿಸಿದನು.

ತತಃ ಸತ್ಯವತೀ ಭೀಷ್ಮಃ ಕೌಸಲ್ಯಾ ಚ ಯಶಸ್ವಿನೀ ।
ಶುಭೈಃ ಪಾಂಡುಜಿತೈ ರತ್ನೈರ್ಭೃಶಂ ತುತುಷುರಾಹೃತೈಃ ॥೩೧॥

ಆಗ ಸತ್ಯವತಿಯೂ, ಭೀಷ್ಮರೂ, ಕೀರ್ತಿಶಾಲಿನಿಯಾದ ಅಂಬಾಲಿಕೆಯೂ, ಪಾಂಡುವು ಯುದ್ಧದಲ್ಲಿ ಗೆದ್ದು ತೆಗೆದುಕೊಂಡು ಬಂದಂತಹ ಶುಭರತ್ನಗಳನ್ನು ನೋಡಿ ಬಹಳ ಸಂತೋಷಪಟ್ಟರು.

ನನಂದ ಮಾತಾ ಕೌಸಲ್ಯಾ ತಮಪ್ರತಿಮತೇಜಸಮ್ ।
ಜಯಂತಮಿವ ಪೌಲೋಮೀ ಪರಿಷ್ವಜ್ಯ ನರರ್ಷಭಮ್ ॥೩೨॥

ತಾಯಿಯಾದ ಅಂಬಾಲಿಕೆಯು ಮಹಾಪರಾಕ್ರಮಶಾಲಿಯಾದ ಆ ನರಶ್ರೇಷ್ಠನನ್ನು ಆಲಿಂಗಿಸಿ ಜಯಂತನನ್ನು ನೋಡಿ ಶಚಿಯು ಸಂತೋಷಪಡುವಂತೆ ಆನಂದಪರವಶಳಾದಳು.

ತಸ್ಯ ವೀರಸ್ಯ ವಿಕ್ರಾಂತೈಃ ಸಹಸ್ರಶತದಕ್ಷಿಣೈಃ ।
ಅಶ್ವಮೇಧಶತೈರೀಜೇ ಧೃತರಾಷ್ಟ್ರೋ ಮಹಾಮಖೈಃ ॥೩೩॥

ಆ ವೀರನ ಪರಾಕ್ರಮದಿಂದ ಬಂದ ಧನದಿಂದ ಧೃತರಾಷ್ಟ್ರನು ಸಹಸ್ರಶತದಕ್ಷಿಣೆಗಳನ್ನು ಕೊಟ್ಟು ಅಶ್ವಮೇಧ ಮೊದಲಾದ ಮಹಾಯಾಗಗಳನ್ನು ನೂರರ ಸಂಖ್ಯೆಯಲ್ಲಿ ಮಾಡಿದನು.

ಸಂಪ್ರಯುಕ್ತಶ್ಚ ಕುಂತ್ಯಾ ಚ ಮಾದ್ರ್ಯಾ ಚ ಸತತಂ ನೃಪಃ ।
ಜಿತೇಂದ್ರಿಯಸ್ತದಾ ಪಾಂಡುರ್ಬಭೂವ ವನಗೋಚರಃ ॥೩೪॥

ಅನಂತರ ಪಾಂಡುರಾಜನು ಯಾವಾಗಲೂ ಕುಂತಿ ಮತ್ತು ಮಾದ್ರಿಯರಿಂದ ಒಡಗೂಡಿದವನಾಗಿದ್ದು ಜಿತೇಂದ್ರಿಯನಾಗಿ ಕಾಡಿನಲ್ಲಿ ವಾಸಿಸಲು ಪ್ರಾರಂಭಿಸಿದನು.

ಹಿತ್ವಾ ಪ್ರಾಸಾದಪಂಕ್ತೀಶ್ಚ ಶುಭಾನಿ ಶಯನಾನಿ ಚ ।
ಚಾಪಪಾಣಿರ್ಮೃಗಾನ್ ನಿಘ್ನನ್ ಬಭೂವ ಮೃಗಯಾಪರಃ ॥೩೫॥

ಅವನು ಉಪ್ಪರಿಗೆ ಅರಮನೆಗಳನ್ನು, ಮೃದುವಾದ ಶುಭ್ರವಾದ ಹಾಸಿಗೆಗಳನ್ನು ಬಿಟ್ಟು, ಕೈಯಲ್ಲಿ ಬಿಲ್ಲನ್ನು ಹಿಡಿದು ಮೃಗಗಳ ಬೇಟೆಯಾಡುತ್ತಾ ಬೇಟೆಯಾಡುವುದರಲ್ಲೇ ತತ್ಪರನಾದನು.

ಸ ಚರನ್ ದಕ್ಷಿಣಾಂ ಪಾರ್ಶ್ವಂ ರಮ್ಯಂ ಹಿಮವತೋ ಗಿರೇಃ ।
ಉವಾಸ ಗಿರಿಶೃಂಗೇಷು ಮಹಾಸಾಲವನೇಷು ಚ ॥೩೬॥

ಅವನು ಹಿಮಾಲಯಪರ್ವತದ ಸುಂದರವಾದ ದಕ್ಷಿಣಪಾರ್ಶ್ವದಲ್ಲಿಯೂ, ಪರ್ವತಶಿಖರಗಳಲ್ಲಿಯೂ, ಸಾಲವೃಕ್ಷಗಳ ಮಹಾವನಗಳಲ್ಲಿಯೂ ವಾಸ ಮಾಡಿದನು.

ಬಭೂವ ಕುಂತ್ಯಾ ಮಾದ್ರ್ಯಾ ಚ ಪಾಂಡುಃ ಸಹ ವನೇಚರಃ ।
ಗಜರಾಜಃ ಕರೇಣುಭ್ಯಾಂ ಯಥಾ ಮಧ್ಯಗತಸ್ತಥಾ ॥೩೭॥

ಗಜರಾಜನು ಎರಡು ಹೆಣ್ಣಾನೆಗಳ ಮಧ್ಯದಲ್ಲಿ ವನದಲ್ಲಿ ಸಂಚರಿಸಿದಂತೆ ಪಾಂಡುವು ಕುಂತಿ ಮತ್ತು ಮಾದ್ರಿಯರಿಂದ ಸಹಿತನಾಗಿ ಕಾಡಿನಲ್ಲಿ ಸಂಚರಿಸಿದನು.

ಚರಂತಂ ಸಹ ಭಾರ್ಯಾಭ್ಯಾಂ ಬಾಣಖಡ್ಗಧನುರ್ಧರಮ್ ।
ವಿಚಿತ್ರಕವಚಂ ವೀರಂ ಪರಮಾಸ್ತ್ರವಿದಂ ನೃಪಮ್ ।
ದೇವೋಽಯಮಿತ್ಯಮನ್ಯಂತ ಚರಂತೋ ವನವಾಸಿನಃ ॥೩೮॥

ಕಾಡಿನಲ್ಲಿ ಪತ್ನಿಯರ ಜೊತೆಯಲ್ಲಿ ಬಾಣ, ಖಡ್ಗ ಮತ್ತು ಧನುಸ್ಸುಗಳನ್ನು ಹಿಡಿದು ವಿಚಿತ್ರ ಕವಚವನ್ನು ಧರಿಸಿ ಸಂಚರಿಸುವ ಪರಮಾಸ್ತ್ರಜ್ಞನಾದ ರಾಜನನ್ನು ನೋಡಿ ವನದಲ್ಲಿ ಸಂಚರಿಸುವ ವನವಾಸಿಗಳೆಲ್ಲರೂ ಅವನೊಬ್ಬ ದೇವತೆಯೆಂದು ತಿಳಿದರು.

ತಸ್ಯ ಕಾಮಾಂಶ್ಚ ಭೋಗಾಂಶ್ಚ ನರಾ ನಿತ್ಯಮತಂದ್ರಿತಾಃ ।
ಅನುಜಹ್ರುರ್ವನಾಂತೇಷು ಧೃತರಾಷ್ಟ್ರಪ್ರಚೋದಿತಾಃ ॥೩೯॥

ಧೃತರಾಷ್ಟ್ರನ ಪ್ರೇರಣೆಯಂತೆ ಸೇವಕ ಜನರು ಪ್ರತಿನಿತ್ಯವೂ ಆಲಸ್ಯವನ್ನು ಮಾಡದೆ ಅವನಿಗೆ ಬೇಕಾದ ಕಾಮಗಳನ್ನು ಮತ್ತು ಭೋಗಗಳನ್ನು ಕಾಡಿನ ಅಂಚಿಗೆ ತೆಗೆದುಕೊಂಡು ಹೋಗಿ ಕೊಡುತ್ತಿದ್ದರು.

ತದಾಸಾದ್ಯ ಮಹಾರಣ್ಯಂ ಮೃಗವ್ಯಾಳನಿಷೇವಿತಮ್ ।
ತತ್ರ ಮೈಥುನಕಾಲಸ್ಥಂ ದದರ್ಶ ಮೃಗಯೂಥಪಮ್ ॥೪೦॥

ಒಮ್ಮೆ ಪಾಂಡುವು ಮೃಗಗಳು ಮತ್ತು ವ್ಯಾಳಗಳಿಂದ ಕೂಡಿದ್ದ ದೊಡ್ಡ ಕಾಡನ್ನು ಪ್ರವೇಶಿಸಿ ಅಲ್ಲಿ ಮೈಥುನಕ್ರಿಯೆಯಲ್ಲಿ ನಿರತನಾಗಿದ್ದ ಗಂಡು ಜಿಂಕೆಯನ್ನು ನೋಡಿದನು.

ತತಸ್ತಂ ಚ ಮೃಗೀಂ ಚೈವ ರುಗ್ಮಪುಂಖೈಃ ಸವಾಜಿಭಿಃ ।
ನಿರ್ಬಿಭೇದ ಶರೈಸ್ತೂರ್ಣಂ ಪಾಂಡುಃ ಪಂಚಭಿರಾಯಸೈಃ ॥೪೧॥

ಆಗ ಪಾಂಡುವು ಚಿನ್ನದ ಗರಿಗಳನ್ನು ಹೊಂದಿದ್ದ ಐದು ಕಬ್ಬಿಣದ ಬಾಣಗಳಿಂದ ಆ ಗಂಡು ಮತ್ತು ಹೆಣ್ಣು ಜಿಂಕೆಯನ್ನು ನಿರ್ಭೇದ ಮಾಡಿದನು.

ಸ ಚ ರಾಜನ್ ಮಹಾತೇಜಾ ಋಷಿಪುತ್ರಸ್ತಪೋಯುತಃ ।
ಭಾರ್ಯಯಾ ಸಹ ತೇಜಸ್ವೀ ಮೃಗರೂಪೇಣ ಸಂಗತಃ ॥೪೨॥

ಸ ಸಂಯುಕ್ತಸ್ತಥಾ ಮೃಗ್ಯಾ ಮಾನುಷೀಂ ವಾಚಮೀರಯನ್ ।
ಕ್ಷಣೇನ ಪತಿತೋ ಭೂಮೌ ವಿಲಲಾಪಾತುರೋ ಮೃಗಃ ॥೪೩॥

ಆ ಜಿಂಕೆಯಾದರೋ ಮಹಾತೇಜಸ್ವಿಯಾದ ಮತ್ತು ತಪಸ್ವಿಯಾದ ಋಷಿಪುತ್ರ. ಅವನು ಮೃಗರೂಪವನ್ನು ಧರಿಸಿದ ತನ್ನ ಪತ್ನಿಯ ಜೊತೆಯಲ್ಲಿ ಮೈಥುನದಲ್ಲಿ ಸಂಗತನಾಗಿದ್ದನು. ಅಂತಹ ಅವಸ್ಥೆಯಲ್ಲಿದ್ದ ಅವನು ಒಂದು ಕ್ಷಣದಲ್ಲಿ ಭೂಮಿಗೆ ಬಿದ್ದು ಸಂಕಟದಿಂದ ಮನುಷ್ಯರ ಮಾತಿನಲ್ಲಿ ಪ್ರಲಾಪವನ್ನು ಪ್ರಾರಂಭಿಸಿದನು.

ಮೃಗಃ

ಕಾಮಮನ್ಯುವಶಂ ಪ್ರಾಪ್ತಾ ಬುದ್ಧ್ಯಂತರಗತಾ ಅಪಿ ।
ವರ್ಜಯಂತಿ ನೃಶಂಸಾನಿ ಪಾಪೇಷ್ವಭಿರತಾ ಜನಾಃ ॥೪೪॥

ಕಾಮಕ್ರೋಧವಶರಾದವರು, ಪ್ರಮಾದ ಮೊದಲಾದವಕ್ಕೆ ಒಳಗಾದವರು, ಪಾಪಗಳಲ್ಲಿ ಅಭಿರತರಾದವರೂ ಸಹ ಕ್ರೂರಕರ್ಮಗಳನ್ನು ಮಾಡುವುದರಿಂದ ಹಿಂದೆ ಸರಿಯುತ್ತಾರೆ.

ನ ವಿಧಿಂ ಗ್ರಸತೇ ಪ್ರಜ್ಞಾ ಪ್ರಜ್ಞಾಂ ತು ಗ್ರಸತೇ ವಿಧಿಃ ।
ವಿಧಿಪರ್ಯಾಗತಾನರ್ಥಾನ್ ಪ್ರಜ್ಞಯಾ ಪರಿಪಶ್ಯತಿ ॥೪೫॥

ಮನುಷ್ಯನ ಎಷ್ಟೇ ಶ್ರೇಷ್ಠವಾದ ಬುದ್ಧಿಯೂ ಸಹ ವಿಧಿಯ ಬರಹವನ್ನು ಮೀರಲಾರದು. ಆದರೆ ವಿಧಿಯು ಮಾತ್ರ ಮನುಷ್ಯನ ಪ್ರಜ್ಞೆಯನ್ನು ಮೀರುತ್ತದೆ. ವಿಧಿಯ ಆದೇಶದಿಂದ ಬಂದ ಅರ್ಥಗಳನ್ನು ಮನುಷ್ಯನು ಪ್ರಜ್ಞೆಯಿಂದ ವಿಚಾರ ಮಾಡಬೇಕು.

ತಸ್ಮಾದ್ ಧರ್ಮಾತ್ಮನೋ ಮುಖ್ಯೇ ಕುಲೇ ಜಾತಸ್ಯ ಭಾರತ ।
ಕಾಮಲೋಭಾಭಿಭೂತಸ್ಯ ಕಸ್ಮಾತ್ ತೇ ಚಲಿತಾ ಮತಿಃ ॥೪೬॥

ಎಲೈ ಭಾರತನೇ, ಶ್ರೇಷ್ಠವಾದ ಕುಲದಲ್ಲಿ ಜನಿಸಿದ ಧರ್ಮಾತ್ಮನಾದ ನಿನ್ನ ಬುದ್ಧಿಯು ಕಾಮ ಲೋಭಗಳಿಗೆ ವಶವಾಗಿ ಏಕೆ ಸನ್ಮಾರ್ಗದಿಂದ ಚಲಿಸಿತು?

ಪಾಂಡುಃ

ಯಾ ವೈ ಶತ್ರುವಧೇ ವೃತ್ತಿಃ ಸಾ ಮೃಗಾಣಾಂ ವಧೇ ಧ್ರುವಾ ।
ರಾಜ್ಞಾಂ ಮೃಗ ವಿಜಾನೀಹಿ ಕಿಂ ತ್ವಂ ಮೋಹಾದ್ ವಿಗರ್ಹಸೇ ॥೪೭॥

ಎಲೈ ಮೃಗವೇ, ರಾಜರಿಗೆ ಶತ್ರುವಧೆಯ ವಿಷಯದಲ್ಲಿ ಯಾವ ನಡವಳಿಕೆಯೋ, ಮೃಗಗಳನ್ನು ಕೊಲ್ಲುವ ವಿಷಯದಲ್ಲಿಯೂ ನಿಶ್ಚಯವಾಗಿ ಅದೇ ಇರುತ್ತದೆ. ಇದು ರಾಜಧರ್ಮ. ಮೋಹದಿಂದ ಏತಕ್ಕೆ ನನ್ನನ್ನು ನಿಂದಿಸುತ್ತಿರುವೆ?

ಅಮಾಯಯಾ ಹ್ಯಚ್ಛಲೇನ ಮೃಗಾಣಾಮಿಷುಧಾರಿಭಿಃ ।
ವಧ ಏವ ಭವೇದ್ ಧರ್ಮಃ ತದ್ವಿದ್ವಾನ್ ಕಿಂ ವಿಗರ್ಹಸೇ ॥೪೮॥

ಅಮಾಯೆಯಿಂದ, ಶುದ್ಧವಾದ ಬಾಣಗಳಿಂದ ಮೃಗಗಳ ವಧೆಯು ಧರ್ಮವೇ ಆಗುತ್ತದೆ. ಅದನ್ನು ತಿಳಿದ ನೀನು ಏತಕ್ಕೆ ನನ್ನನ್ನು ನಿಂದಿಸುತ್ತಿರುವೆ.

ಅಗಸ್ತ್ಯಃ ಸತ್ರಮಾಸೀನಃ ಚಚಾರ ಮೃಗಯಾಮೃಷಿಃ ।
ಆರಣ್ಯಾನ್ ಸರ್ವದೈವತ್ಯಾನ್ ಪಶೂನ್ ಪ್ರೇಕ್ಷ್ಯ ಮಹಾವನೇ ॥೪೯॥

ಸತ್ರಯಾಗದಲ್ಲಿ ಆಸೀನರಾಗಿದ್ದ ಅಗಸ್ತ್ಯರು ಮಹಾವನದಲ್ಲಿ ಸರ್ವದೇವತಾಯೋಗ್ಯವಾದ ವನ್ಯಪಶುಗಳನ್ನು ನೋಡಿ ಬೇಟೆಯಾಡಿದರು.

ಪ್ರಮಾಣದೃಷ್ಟಂ ಧರ್ಮಸ್ಯ ಶಾಸ್ತ್ರಂ ಕಿಂ ತ್ವಂ ವಿಗರ್ಹಸೇ ।
ಅಗಸ್ತ್ಯಸ್ಯಾಭಿಚಾರೇಣ ಯುಷ್ಮಾಕಂ ಹಿ ವಪಾ ಹೃತಾ ॥೫೦॥

ಇದು ಪ್ರಮಾಣದೃಷ್ಟವಾದ ಧರ್ಮಶಾಸ್ತ್ರದ ತತ್ವ. ನೀನು ಏತಕ್ಕೆ ನಿಂದಿಸುತ್ತಿರುವೆ? ಅಗಸ್ತ್ಯರಿಗೆ ಮಾಡಿದ ಅಪಚಾರದಿಂದ ನಿಮ್ಮ ಎದೆ ಮತ್ತು ಕರುಳಿನ ಮಧ್ಯದಲ್ಲಿರುವ ವಪೆಯನ್ನು ತೆಗೆದು ಹೋಮ ಮಾಡಲಾಗುತ್ತದೆ.

ರಿಪೂನೇವ ಸಮುದ್ದಿಶ್ಯ ವಿಮುಂಚಂತಿ ಪುನಃಶರಾನ್ ।
ನ ರಿಪೂಣಾಂ ಸಮಾಧಾನಂ ಪ್ರತೀಕ್ಷಂತೇ ಪುರಾತನಾಃ ॥೫೧॥

ರಾಜರು ಶತ್ರುವನ್ನು ಉದ್ದೇಶಿಸಿ ಬಾಣಗಳನ್ನು ಪ್ರಯೋಗಿಸುತ್ತಾರೆ. ಪ್ರಾಚೀನರು, ರಿಪುಗಳು ಸಮಾಧಾನದಿಂದ ಇದ್ದಾರೆಯೇ, ಇಲ್ಲವೇ ಎಂದು ಬಾಣ ಬಿಡುವಾಗ ಗಮನಿಸುತ್ತಿರಲಿಲ್ಲ.

ರಂಧ್ರ ಏಷಾಂ ವಿಶೇಷೇಣ ವಧಕಾಲಃ ಪ್ರಶಸ್ಯತೇ ।
ಪ್ರಮತ್ತಮಪ್ರಮತ್ತಂ ವಾ ನಿಕೃತ್ಯಾ ಘ್ನಂತಿ ಚೌಜಸಾ ।
ಉಪಾಯೈರಿಷುಭಿಸ್ತೀಕ್ಷ್ಣೈರ್ಮೃಗ ಕಸ್ಮಾದ್ ವಿಗರ್ಹಸೇ ॥೫೨॥

ಅವರ ದೌರ್ಬಲ್ಯದ ಕಾಲವೇ ವಧಕಾಲ ಎಂದು ವಿಶೇಷವಾಗಿ ಹೇಳಲ್ಪಡುತ್ತದೆ. ಪ್ರಮತ್ತನಾಗಿರಲಿ ಅಥವಾ ಅಪ್ರಮತ್ತನಾಗಿರಲಿ ಅಂತಹವನನ್ನು ತಮ್ಮ ಪರಾಕ್ರಮದಿಂದ, ಉಪಾಯಗಳಿಂದ, ಮೋಸದಿಂದ ಅಥವಾ ತೀಕ್ಷ್ಣವಾದ ಬಾಣಗಳಿಂದ ಕೊಲ್ಲುತ್ತಾರೆ. ಆದ್ದರಿಂದ ಎಲೈ ಮೃಗವೇ ಏಕೆ ನನ್ನನ್ನು ನಿಂದಿಸುತ್ತಿದ್ದೀಯೆ?

ಮೃಗಃ

ನಾಹಂ ಘ್ನಂತಂ ಮೃಗಾನ್ ರಾಜನ್ ವಿಗರ್ಹೇ ತ್ವಾತ್ಕಾರಣಾತ್ ।
ಮೈಥುನಂ ಸಂಪ್ರತೀಕ್ಷ್ಯಂ ಚ ತ್ವಯಾ ಸ್ಯಾದನೃಶಂಸ್ಯವತ್ ॥೫೩॥

ರಾಜನೇ, ನಾನು ನನ್ನ ಸಲುವಾಗಿ ಮೃಗಗಳನ್ನು ಕೊಲ್ಲುವ ನಿನ್ನನ್ನು ನಿಂದಿಸುತ್ತಿಲ್ಲ. ಆದರೆ ನೀನು ದಯೆ ಮತ್ತು ಸೌಮ್ಯಭಾವದಿಂದ ಮೈಥುನವನ್ನು ನಿರೀಕ್ಷಿಸಬೇಕಾಗಿದ್ದಿತು.

ಸರ್ವಭೂತಹಿತಃ ಕಾಲಃ ಸರ್ವಭೂತೇಪ್ಸಿತಶ್ಚ ಸಃ ।
ನೃಶಂಸಂ ಕರ್ಮ ಸುಮಹತ್ ಸರ್ವಲೋಕವಿಗರ್ಹಿತಮ್ ॥೫೪॥

ಮೈಥುನಕಾಲವು ಎಲ್ಲ ಪ್ರಾಣಿಗಳಿಗೂ ಹಿತವಾದ ಮತ್ತು ಎಲ್ಲ ಪ್ರಾಣಿಗಳೂ ಬಯಸುವ ಕಾಲ. ನೀನು ಸರ್ವಲೋಕನಿಂದಿತವಾದ ಅತ್ಯಂತ ಕ್ರೂರವಾದ ಕರ್ಮವನ್ನು ಮಾಡಿದ್ದೀಯೆ.

ಪುರುಷಾರ್ಥಫಲಂ ಕಾಂತಂ ಯತ್ ತ್ವಯಾ ವಿತಥಂ ಕೃತಮ್ ।
ಪೌರವಾಣಾಂ ನೃಪರ್ಷೀಣಾಂ ತೇಷಾಮಕ್ಲಿಷ್ಟಕರ್ಮಣಾಮ್ ॥೫೫॥

ವಂಶೇ ಜಾತಸ್ಯ ರಾಜೇಂದ್ರ ನಾನುರೂಪಮಿದಂ ತವ ।
ಅಸ್ವರ್ಗ್ಯಮಯಶಸ್ಯಂ ಚ ಅಧರ್ಮಿಷ್ಠಂ ಚ ಭಾರತ ॥೫೬॥

ಪುರುಷಾರ್ಥಫಲವಾದ ಎಲ್ಲರೂ ಬಯಸುವ ಮೈಥುನವನ್ನು ನೀನು ವ್ಯರ್ಥಗೊಳಿಸಿದ್ದೀಯೆ. ರಾಜೇಂದ್ರನೇ, ಉತ್ತಮ ಕರ್ಮವನ್ನು ಮಾಡುವ ರಾಜರ್ಷಿಗಳಾದ ಕೌರವರ ವಂಶದಲ್ಲಿ ಬಂದ ನಿನಗೆ ಇದು ಉಚಿತವಲ್ಲ. ಎಲೈ ಭಾರತನೇ, ಇದು ಸ್ವರ್ಗವನ್ನು ನಾಶಮಾಡಿ ಅಪಕೀರ್ತಿಯನ್ನು ಮತ್ತು ಅಧರ್ಮವನ್ನು ಉಂಟುಮಾಡುವಂತಹದು.

ಕೋ ಹಿ ವಿದ್ವಾನ್ ಮೃಗಂ ಹನ್ಯಾಚ್ಚರಂತಂ ಮೈಥುನಂ ವನೇ ।
ಸ್ತ್ರೀಭೋಗಾನಾಂ ವಿಶೇಷಜ್ಞಃ ಶಾಸ್ತ್ರಧರ್ಮಾರ್ಥತತ್ತ್ವವಿತ್ ॥೫೭॥

ಯಾವ ಈ ರೀತಿಯಾದ ಜ್ಞಾನವುಳ್ಳವನು, ಕಾಡಿನಲ್ಲಿ ಮೈಥುನದಲ್ಲಿರುವ ಪ್ರಾಣಿಯನ್ನು ಕೊಲ್ಲುತ್ತಾನೆ? ಅದರಲ್ಲಿಯೂ ಎಲ್ಲ ಶಾಸ್ತ್ರಧರ್ಮಗಳನ್ನು ಸರಿಯಾಗಿ ತಿಳಿದವನೂ, ಸ್ತ್ರೀಭೋಗವನ್ನು ವಿಶೇಷವಾಗಿ ತಿಳಿದ ನೀನು ಹೇಗೆ ಇಂತಹ ಕೆಲಸವನ್ನು ಮಾಡಿದೆ?

ನಾರ್ಹಸ್ಯಮರಸಂಕಾಶ ಕರ್ತುಮಾಚಾರಮೀದೃಶಮ್ ।
ತ್ವಯಾ ನೃಶಂಸಂ ಕರ್ತಾರಃ ಪಾಪಾಚಾರಾಶ್ಚ ಯೇ ನರಾಃ ॥೫೮॥

ನಿಗ್ರಾಹ್ಯಾಃ ಪಾರ್ಥಿವಶ್ರೇಷ್ಠ ತ್ರಿವರ್ಗಪರಿವರ್ಜಿತಾಃ ।
ಕಿಂ ಕೃತಂ ತೇ ನರಶ್ರೇಷ್ಠ ನಿಘ್ನತೋ ಮಾಮನಾಗಸಮ್ ॥೫೯॥

ಎಲೈ ದೇವತೆಯ ಕಾಂತಿಯುಳ್ಳವನೇ, ನೀನು ಇಂತಹ ಕಾರ್ಯವನ್ನು ಮಾಡಿರುವುದು ಸರಿಯಲ್ಲ. ಎಲೈ ರಾಜಶ್ರೇಷ್ಠನೇ ನೀನು ಇಂತಹ ಹೀನಕರ್ಮವನ್ನು ಮಾಡುವ ಪಾಪಾಕಾರ್ಯದಲ್ಲಿ ನಿರತರಾದ, ತ್ರಿವರ್ಗಪರಿವರ್ಜಿತರಾದ ಅಂದರೆ ಧರ್ಮಾರ್ಥಕಾಮ ಶೂನ್ಯರಾದ ಮನುಷ್ಯರನ್ನು ನಿಗ್ರಹ ಮಾಡಿ ಶಿಕ್ಷೆಯನ್ನು ಕೊಡುವವನು. ನರಶ್ರೇಷ್ಠನೇ, ನಿರಪರಾಧಿಯಾದ ನನ್ನನ್ನು ಕೊಂದುದರಿಂದ ನಿನಗೆ ಏನು ಪ್ರಯೋಜನ ಉಂಟಾಯಿತು?.

ಮುನಿಂ ಮೂಲಫಲಾಹಾರಂ ಮೃಗವೇಷಧರಂ ನೃಪ ।
ವಸಮಾನಮರಣ್ಯೇಷು ನಿತ್ಯಂ ಶಮಪರಾಯಣಮ್ ॥೬೦॥

ಎಲೈ ರಾಜನೇ, ಕಾಡಿನಲ್ಲಿ ವಾಸಮಾಡಿ ನಿತ್ಯವೂ ಶಮಪರಾಯಣನಾಗಿ, ಕಂದಮೂಲಫಲಾಹಾರನಾಗಿ ಮೃಗವೇಷವನ್ನು ಧರಿಸಿದ ನನ್ನ ವಧೆಯಿಂದ ನಿನಗೆ ಬಂದ ಲಾಭವೇನು ?

ತ್ವಯಾಽಹಂ ನಿಹತೋ ಯಸ್ಮಾತ್ ತಸ್ಮಾತ್ ತ್ವಾಮಪ್ಯನಾಗಸಮ್ ।
ಆವಯೋರ್ನೃಶಂಸಕರ್ತಾರಮವಶಂ ಕಾಮಮೋಹಿತಮ್ ।
ಜೀವಿತಾಂತಕರೋ ಭಾವೋ ಮೈಥುನೇ ಸಮುಪೇಷ್ಯತಿ ॥೬೧॥

ನೀನು ನನ್ನನ್ನು ಕೊಂದ ಕಾರಣದಿಂದ ಮತ್ತು ನಮ್ಮಿಬ್ಬರಿಗೂ ಅತ್ಯಂತ ಕ್ರೂರ ಕರ್ಮವನ್ನು ಮಾಡಿದ ಕಾರಣದಿಂದ ನಿರಪರಾಧಿಯಾಗಿ, ಅವಶನಾಗಿ, ಕಾಮಮೋಹಿತನಾದ ನಿನಗೆ ಮೈಥುನದಲ್ಲಿ ಪ್ರವೃತ್ತನಾದಾಗ ಮರಣವು ಉಂಟಾಗುವುದು.

ಅಹಂ ಹಿ ಕಿಂದಮೋ ನಾಮ ತಪಸಾಽಪ್ರತಿಮೋ ಮುನಿಃ ।
ಅಪತ್ರಪಾಭಿಭೂತತ್ವಾನ್ಮೃಗ್ಯಾಂ ಮೈಥುನಮಾಚರಮ್ ॥೬೨॥

ನಾನು ಕಿಂದಮ ಎಂಬ ಹೆಸರಿನ ತಪಸ್ಸನ್ನು ಮಾಡುವಲ್ಲಿ ಅಸದೃಶನಾದ ಋಷಿ. ನಾಚಿಕೆಯಿಂದ ಮೃಗರೂಪವನ್ನು ಧರಿಸಿ ಮೈಥುನವನ್ನು ಆಚರಿಸುತ್ತಿದ್ದೆ.

ನಹಿ ತೇ ಬ್ರಹ್ಮಹತ್ಯೇಯಂ ಭವಿಷ್ಯತ್ಯನು ಜಾನತಃ ।
ಮೃಗರೂಪಧರಂ ಹತ್ವಾ ಮಾಮೇವಂ ಕಾಮಮೋಹಿತಮ್ ॥೬೩॥

ನಿನಗೆ ಮೊದಲು ತಿಳಿಯದೆ ಈಗ ತಿಳಿಯುತ್ತಿರುವುದರಿಂದ ಕಾಮಮೋಹಿತನಾದ, ಮೃಗರೂಪಧರನಾದ ನನ್ನ ವಧೆಯಿಂದ ಬ್ರಹ್ಮಹತ್ಯಾ ದೋಷವು ಬರುವುದಿಲ್ಲ.

ಅಸ್ಯ ತು ತ್ವಂ ಫಲಂ ಮೂಢ ಪ್ರಾಪ್ಸ್ಯಸೀದೃಶಮೇವ ಹಿ ।
ಪ್ರಿಯಯಾ ಸಹ ಸಂವಾಸಂ ಪ್ರಾಪ್ಯ ಕಾಮವಿಮೋಹಿತಃ ।
ತ್ವಮಪ್ಯಸ್ಯಾಮವಸ್ಥಾಯಾಂ ಪ್ರೇತಲೋಕಂ ಗಮಿಷ್ಯಸಿ ॥೬೪॥

ಆದರೆ ಎಲೈ ಮೂಢನೇ ನಿನ್ನ ಕರ್ಮಕ್ಕೆ ಅನುಗುಣವಾದ ಇಂತಹದೇ ಫಲವನ್ನು ನೀನು ಹೊಂದುವಿ. ಕಾಮಮೋಹಿತನಾಗಿ ನಿನ್ನ ಪ್ರಿಯೆಯ ಜೊತೆಯಲ್ಲಿ ಮೈಥುನನಿರತನಾದ ನೀನು ಆ ಅವಸ್ಥೆಯಲ್ಲಿಯೇ ಮರಣವನ್ನು ಹೊಂದುವಿ.

ಅಂತಕಾಲೇ ಚ ಸಂವಾಸಂ ಯಯಾ ಗಂತಾಸಿ ಕಾಂತಯಾ ।
ಪ್ರೇತರಾಜವಶಂ ಪ್ರಾಪ್ತಂ ಸರ್ವಭೂತದುರತ್ಯಯಮ್ ।
ಭಕ್ಷ್ಯಾ ಮತಿಮತಾಂ ಶ್ರೇಷ್ಠಾ ಸಾ ವೈ ತ್ವಾಮನುಯಾಸ್ಯತಿ ॥೬೫॥

ಅಂತಕಾಲದಲ್ಲಿ ಯಾವ ಪತ್ನಿಯ ಜೊತೆಯಲ್ಲಿ ಮೈಥುನವನ್ನು ಆಚರಿಸುವೆಯೋ ಅಂತಹ ಪತಿವ್ರತೆಯಾದ, ಶ್ರೇಷ್ಠಳಾದ ಪತ್ನಿಯು ನಿನ್ನ ಮೇಲಿನ ಭಕ್ತಿಯಿಂದ ಯಾರೂ ಪರಿಹರಿಸಲು ಸಾಧ್ಯವಾಗದಂತಹ ಮೃತ್ಯುವಿನ ವಶವಾದ ನಿನ್ನನ್ನು ಅನುಸರಿಸಿ ಹಿಂದೆ ಬರುವಳು.

ವರ್ತಮಾನಃ ಸುಖೇ ದುಃಖಂ ಯಥಾऽಹಂ ಪ್ರಾಪಿತಸ್ತ್ವಯಾ ।
ತಥಾ ಸುಖಂ ತ್ವಂ ಸಂಪ್ರಾಪ್ಯ ದುಃಖಮಭ್ಯಾಗಮಿಷ್ಯಸಿ ।
ಏವಮುಕ್ತ್ವಾ ಸುದುಃಖಾರ್ತೋ ಜೀವಿತಾತ್ ಸ ವ್ಯಯುಜ್ಯತ ।
ಮೃಗಃ ಪಾಂಡುಶ್ಚ ಶೋಕಾರ್ತಃ ಕ್ಷಣೇನ ಸಮಪದ್ಯತ ॥೬೬॥

ಸುಖದಲ್ಲಿ ಇದ್ದ ನನಗೆ ಹೇಗೆ ದುಃಖವನ್ನು ತಂದು ಕೊಟ್ಟೆಯೋ ಹಾಗೆ ನೀನೂ ಸಹ ಸುಖದಲ್ಲಿರುವಾಗ ದುಃಖವನ್ನು ಹೊಂದುವಿ. ಹೀಗೆ ಹೇಳಿ ಬಹಳ ದುಃಖದಿಂದ ಕೂಡಿದವರಾಗಿ ಕಿಂದಮನು ಪ್ರಾಣ ತೊರೆದನು. ಪಾಂಡುವಾದರೋ ಆ ಕ್ಷಣದಲ್ಲಿಯೇ ಶೋಕಾರ್ತನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕದಶಾಧಿಕಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ಏಕೋನಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಹನ್ನೊಂದನೆಯ ಅಧ್ಯಾಯ ಮುಗಿಯಿತು.

★★★★★

ನೂರ ಹನ್ನೆರಡನೆಯ ಅಧ್ಯಾಯ

(ಪಾಂಡುವಿನ ಶೋಕ, ಕುಂತಿ ಮಾದ್ರಿಯರ ಜೊತೆಯಲ್ಲಿ ಸಂವಾದ, ಸಂನ್ಯಾಸವನ್ನು ಸ್ವೀಕರಿಸದೆ, ವಾನಪ್ರಸ್ಥಧರ್ಮಾಚರಣೆ, ವಿದುರನ ವಿವಾಹ ಮತ್ತು ಪುತ್ರೋತ್ಪತ್ತಿ.)

ವೈಶಂಪಾಯನಃ

ತಮತೀತಮುಪಕ್ರಮ್ಯ ರಾಜಾ ಸ್ವಮಿವ ಬಾಂಧವಮ್ ।
ಸಭಾರ್ಯಃ ಶೋಕಮೋಹಾರ್ತಃ ಪರ್ಯದೇವಯದಾತುರಃ ॥೧॥

ರಾಜನಾದ ಪಾಂಡುವು ಮೃತನಾದ ಋಷಿಪುತ್ರನಾದ ಕಿಂದಮನನ್ನು ತನ್ನ ಬಂಧುವಿನಂತೆ ಭಾವಿಸಿ ಪತ್ನಿಯರೊಡಗೂಡಿ ಶೋಕಮೋಹಗಳಿಂದ ಕೂಡಿದವನಾಗಿ ವಿಹ್ವಲನಾಗಿ ಗೋಳಾಡಿದನು.

ಪಾಂಡುಃ

ಸತಾಮಪಿ ಕುಲೇ ಜಾತಾಃ ಕರ್ಮಣಾ ಚಾತಿದುರ್ಗತಿಮ್ ।
ಪ್ರಾಪ್ನುವಂತಿ ದುರಾತ್ಮಾನಃ ಕಾಮಲೋಭಪ್ರಮೋಹಿತಾಃ ॥೨॥

ಸಜ್ಜನರ ಕುಲದಲ್ಲಿ ಹುಟ್ಟಿದರೂ ಸಹ ದುಷ್ಟರು ಕಾಮಲೋಭಗಳಿಗೆ ಒಳಗಾದವರಾಗಿ ನೀಚವಾದ ದುರ್ಗತಿಯನ್ನು ಹೊಂದುತ್ತಾರೆ.

ಕುಲೇ ಧರ್ಮಾತ್ಮನಾಂ ಜಾತಃ ಕಾಮಾತ್ಮಾ ಕಿಲ ಭಾರತಃ ।
ಜೀವಿತಾಂತಮನುಪ್ರಾಪ್ತೋ ಬಾಲಭಾವೇ ಪಿತಾ ಮಮ ॥೩॥

ಧರ್ಮಾತ್ಮನ ಕುಲದಲ್ಲಿ ಜನಿಸಿದ ನನ್ನ ತಂದೆಯಾದ ಭಾರತನು (ವಿಚಿತ್ರವೀರ್ಯ) ಕಾಮಾತ್ಮನಾಗಿ ಬಾಲ್ಯದಲ್ಲಿಯೇ ಮರಣವನ್ನು ಹೊಂದಿದನು.

ತಸ್ಯ ಕಾಮಾತ್ಮನಃ ಕ್ಷೇತ್ರೇ ರಾಜ್ಞಃ ಸಂಯತವಾಗ್ ಋಷಿಃ ।
ಕೃಷ್ಣದ್ವೈಪಾಯನಃ ಸಾಕ್ಷಾದ್ ಭಗವಾನ್ ಮಾಮಜೀಜನತ್ ॥೪॥

ಕಾಮಾತ್ಮನಾದ ಆ ರಾಜನ ಪತ್ನಿಯಲ್ಲಿ ವಾಙ್ನಿಯಮವುಳ್ಳ ಸಾಕ್ಷಾತ್ ಭಗವಂತನಾದ ವೇದವ್ಯಾಸರು ನನ್ನನ್ನು ಪಡೆದರು.

ತಸ್ಯ ಮೇ ವ್ಯಸನೇ ಬುದ್ಧಿಃ ಸಂಜಾತೇಯಮಿಹಾಧುನಾ ।
ತ್ಯಕ್ತಸ್ಯ ದೇವೈರ್ವಿಷಯಾನ್ ಮೃಗಯಾಯಾಂ ದುರಾತ್ಮನಃ ॥೫॥

ದೇವತೆಗಳ ಇಚ್ಛೆಯಂತೆ ವಿಷಯಗಳನ್ನು ತೊರೆದ ವೇದವ್ಯಾಸರ ಪುತ್ರನಾದ ದುರಾತ್ಮನಾದ ನನಗೆ ಈಗ ಬೇಟೆಯಾಡುವ ಚಟದಲ್ಲಿ ದುರ್ಬುದ್ಧಿಯುಂಟಾಯಿತು.

ಮೋಕ್ಷಮೇವ ವ್ಯವಸ್ಯಾಮಿ ಬಂಧೋ ಹಿ ವ್ಯಸನಂ ಮಹತ್ ।
ಸದ್ವೃತ್ತಿಮನುವರ್ತಿಷ್ಯೇ ತಾಮಹಂ ಪಿತುರವ್ಯಯಾಮ್ ।
ಅತೀವ ತಪಸಾऽऽತ್ಮಾನಂ ಯೋಜಯಿಷ್ಯಾಮ್ಯಸಂಶಯಮ್ ॥೬॥

ಬಂಧವು ವ್ಯಸನಕ್ಕೆ ಕಾರಣ. ಆದ್ದರಿಂದ ಮೋಕ್ಷಮಾರ್ಗದಲ್ಲಿಯೇ ಪ್ರಯತ್ನಪಡುವೆನು. ತಂದೆಯಾದ ವ್ಯಾಸರ ಅಥವಾ ಸಾಕುತಂದೆಯಾದ ಭೀಷ್ಮರ ಶಾಶ್ವತವಾದ ಸದ್ವೃತ್ತಿಯನ್ನು ಅನುಸರಿಸುವೆನು. ಉಗ್ರವಾದ ತಪಸ್ಸಿನಲ್ಲಿ ನನ್ನನ್ನು ನಾನು ನಿಯೋಗಿಸಿಕೊಳ್ಳುವೆನು. ಇದರಲ್ಲಿ ಸಂಶಯವಿಲ್ಲ.

ತಸ್ಮಾದೇಕಾರ್ಹಮೇಕೋऽಹಮೇಕೈಕಸ್ಮಿನ್ ವನಸ್ಪತೌ ।
ಚರನ್ ಭಿಕ್ಷಾಂ ಮುನಿರ್ಮುಂಡಶ್ಚರಿಷ್ಯಾಮಿ ಮಹೀಮಿಮಾಮ್ ॥೭॥

ಆದ್ದರಿಂದ ಸಂನ್ಯಾಸಕ್ಕೆ ಅರ್ಹನಾದ ನಾನು ಒಂದೊಂದು ವೃಕ್ಷದಲ್ಲಿಯೂ ಭಿಕ್ಷೆಯನ್ನು ಬೇಡಿ ಮುಂಡನ ಮಾಡಿಕೊಂಡ ಸನ್ಯಾಸಿಯಾಗಿ ಭೂಮಿಯಲ್ಲಿ ಸಂಚರಿಸುವೆನು.

ಪಾಂಸುನಾ ಚ ಪ್ರತಿಚ್ಛನ್ನಃ ಶೂನ್ಯಾಗಾರಪ್ರತಿಶ್ರಯಃ ।
ವೃಕ್ಷಮೂಲನಿಕೇತೋ ವಾ ತ್ಯಕ್ತಸರ್ವಪ್ರಿಯಾಪ್ರಿಯಃ ॥೮॥

ಧೂಳಿನಿಂದ ತುಂಬಿದ ಶರೀರವುಳ್ಳವನಾಗಿ ಶೂನ್ಯಾಗಾರಗಳನ್ನಾಗಲೀ ಅಥವಾ ವೃಕ್ಷಮೂಲವನ್ನಾಗಲೀ ಆಶ್ರಯಿಸಿ ಪ್ರಿಯಾಪ್ರಿಯಗಳೆಲ್ಲವನ್ನೂ ತ್ಯಜಿಸುವೆನು.

ನ ಶೋಚನ್ನ ಸುಹೃಷ್ಯಂಶ್ಚ ತುಲ್ಯನಿಂದಾತ್ಮಸಂಸ್ತುತಿಃ ।
ನಿರಾಶೀರ್ನಿರ್ನಮಸ್ಕಾರೋ ನಿರ್ದ್ವಂದ್ವೋ ನಿಷ್ಪರಿಗ್ರಹಃ ॥೯॥

ಹರ್ಷಶೋಕಗಳನ್ನು ತ್ಯಜಿಸಿ ನಿಂದಾಸ್ತುತಿಗಳನ್ನು ಸಮಾನವಾಗಿ ಎಣಿಸಿ ಯಾರಿಗೂ ಆಶೀರ್ವಾದವನ್ನು ಮಾಡದೆ, ಯಾರಿಂದಲೂ ನಮಸ್ಕಾರವನ್ನು ಸ್ವೀಕರಿಸದೆ, ಯಾರಿಂದಲೂ ಏನನ್ನೂ ಸ್ವೀಕಾರಮಾಡದೆ, ದ್ವಂದ್ವಾತೀತನಾಗಿ ಜೀವಿಸುವೆನು.

ನ ಜಾತ್ವಭಿಹಸನ್ ಕಿಂಚಿನ್ನಕುರ್ವನ್ ಭ್ರುಕುಟೀಂ ಕ್ವಚಿತ್ ।
ಪ್ರಸನ್ನವದನೋ ನಿತ್ಯಂ ಸರ್ವಪ್ರಾಣಭೃತಾಂ ಪ್ರತಿ ॥೧೦॥

ಯಾವ ವಿಷಯದಲ್ಲಿಯೂ, ಯಾವಾಗಲೂ ನಗದೇ, ಯಾವ ವಿಷಯದಲ್ಲಿಯೂ ಕೋಪದಿಂದ ಹುಬ್ಬನ್ನು ಗಂಟು ಹಾಕಿಕೊಳ್ಳದೇ ಪ್ರಸನ್ನವದನನಾಗಿ ಸರ್ವಪ್ರಾಣಿಗಳಿಗೂ ಹಿತಕರನಾಗಿ ಇರುವೆನು.

ಜಂಗಮಾಜಂಗಮಂ ಸರ್ವಮವಿಹಿಂಸಂಶ್ಚತುರ್ವಿಧಮ್ ।
ಪ್ರಜಾವರ್ಗೇ ಸ್ವವರ್ಗಸ್ಥಃ ಸಮಃ ಸರ್ವಪ್ರಜಾಃ ಪ್ರತಿ ॥೧೧॥

ಸ್ಥಾವರಜಂಗಮವಾದ ನಾಲ್ಕುವಿಧದ ಯಾವ ಪ್ರಾಣಿಯನ್ನೂ ಹಿಂಸೆ ಮಾಡದೆ ನನ್ನ ಗುಂಪಿನಲ್ಲಿ ನಾನಿದ್ದು ಎಲ್ಲಾ ಪ್ರಜೆಗಳಿಗೂ ಸಮಾನವಾಗಿರುವೆನು.

ಏಕಕಾಲಂ ಚರನ್ ಭಿಕ್ಷಾಂ ಕುಲಾನಿ ದ್ವೇ ಚ ಪಂಚ ಚ ।
ಅಸಂಭವೇ ವಾ ಭೈಕ್ಷಸ್ಯ ಚರನ್ನನಶನಾನ್ಯಪಿ ॥೧೨॥

ದಿವಸದಲ್ಲಿ ಒಂದು ಬಾರಿ ಏಳು ಮನೆಗಳಲ್ಲಿ ಭಿಕ್ಷೆಯನ್ನು ಬೇಡುವೆನು. ಭಿಕ್ಷೆಯು ದೊರೆಯದಿದ್ದರೆ ಉಪವಾಸವನ್ನು ಮಾಡುವೆನು.

ಅಲ್ಪಮಲ್ಪಮಥೋ ಭೋಜ್ಯಂ ಪೂರ್ವಲೋಭಾನ್ನ ಜಾತು ಚಿತ್ ।
ನಿತ್ಯಂ ನಾತಿಚರನ್ ಲಾಭೇ ಅಲಾಭೇ ಸಪ್ತ ಪೂರಯನ್ ॥೧೩॥

ದಿನದಿನಕ್ಕೆ ಆಹಾರವನ್ನು ಕಡಿಮೆ ಮಾಡಿಕೊಂಡು ಹಿಂದಿನ ದಿನದಲ್ಲಿ ಒಳ್ಳೆಯ ಆಹಾರ ದೊರೆತಿದ್ದರೆ ಅದನ್ನು ಎಂದೂ ಯೋಚಿಸದೆ, ಹೆಚ್ಚು ಭಿಕ್ಷವು ದೊರೆತರೆ ಹೆಚ್ಚು ಮನೆಗಳಿಗೆ ಹೋಗದೆ, ಭಿಕ್ಷವು ದೊರೆಯದಿದ್ದರೂ ಏಳು ಮನೆಗಳಿಗೆ ಮಾತ್ರ ಹೋಗಿ ಜೀವನವನ್ನು ಸಾಗಿಸುವೆನು.

ವಾಸ್ಯೈಕಂ ತಕ್ಷತೋ ಬಾಹುಂ ಚಂದನೇನೈಕಮುಕ್ಷತಃ ।
ನಾಕಲ್ಯಾಣಂ ನ ಕಲ್ಯಾಣಂ ಧ್ಯಾಯನ್ನುಭಯಯೋರಪಿ ॥೧೪॥

ನಾನು ಯತಿಯಾಗಿ ಬಲಭುಜವನ್ನು ಹರಿಪೂಜಾಸಾಧನವಾದ ಗಂಧಾದಿಗಳನ್ನು ಮಾಡುವುದಕ್ಕೂ, ಎಡಬಾಹುವನ್ನು ಪೂಜಾಭೂಮಿಯನ್ನು ಸಾರಿಸಿ ಗುಡಿಸುವುದಕ್ಕೂ ಉಪಯೋಗಿಸುವೆನು. ಅಥವಾ ವಾನಪ್ರಸ್ಥನಾಗಿ ಬಲಭುಜದ ಸ್ಥಾನದಲ್ಲಿರುವ ಕುಂತಿಯನ್ನು ಹರಿಪೂಜಾಸಾಧನವಾದ ಗಂಧಾದಿಗಳನ್ನು ಮಾಡುವುದಕ್ಕೂ, ವಾಮಬಾಹುಸ್ಥಾನದಲ್ಲಿರುವ ಮಾದ್ರಿಯನ್ನು ಪೂಜಾಸ್ಥಾನವನ್ನು ಗುಡಿಸಿಸಾರಿಸುವುದಕ್ಕೂ ವಿನಿಯೋಗಿಸುವೆನು. ಎರಡೂ ಸಂದರ್ಭಗಳಲ್ಲಿಯೂ ಮಂಗಳ ಮತ್ತು ಅಮಂಗಳಗಳನ್ನು ಯೋಚಿಸುವುದಿಲ್ಲ.

ಯಾಃ ಕಾಶ್ಚಜ್ಜೀವತಾ ಶಕ್ಯಾಃ ಕರ್ತುಂ ನಿತ್ಯಾಕೃತಾಃ ಕ್ರಿಯಾಃ ।
ತಾಃ ಸರ್ವಾಃ ಸಮತಿಕ್ರಮ್ಯ ನಿಮೇಷಾದಿಷ್ವವಸ್ಥಿತಃ ॥೧೫॥

ಅಂಗವೈಕಲ್ಯಾದಿರಹಿತನಾಗಿ ಬದುಕಿರುವವನು ಮಾಡಲು ಸಾಧ್ಯವಾದ ಯಜ್ಞ ಮೊದಲಾದ ಎಲ್ಲಾಕ್ರಿಯೆಗಳನ್ನು ತ್ಯಜಿಸಿ, ತೊರೆಯಲು ಅಸಾಧ್ಯವಾದ ಶ್ವಾಸ, ನಿಮೇಷ, ಮೊದಲಾದ ಕ್ರಿಯೆಗಳಲ್ಲಿಯೇ ಇರುವೆನು.

ನ ಜಿಜೀವಿಷುವತ್ ಕಿಂಚಿನ್ನ ಮುಮೂರ್ಷುವದಾಚರನ್ ।
ಜೀವಿತಂ ಮರಣಂ ಚೈವ ನಾಭಿನಂದನ್ ನಚ ದ್ವಿಷನ್ ॥೧೬॥

ಬದುಕುವ ಆಸೆಯಿಂದಾಗಲೀ ಅಥವಾ ಮರಣದ ಆಸೆಯಿಂದಾಗಲೀ ಏನನ್ನೂ ಮಾಡದೆ, ಜೀವನವನ್ನು ಅಭಿನಂದಿಸದೆ, ಮರಣವನ್ನು ದ್ವೇಷಿಸದೆ ಜೀವಿಸುವೆನು.

ತಾಸು ಚಾಪ್ಯನವಸ್ಥಾಸು ತ್ಯಕ್ತಸರ್ವೇಂದ್ರಿಯಕ್ರಿಯಃ ।
ಸಂಪರಿತ್ಯಕ್ತಸರ್ವಾತ್ಮಾ ಸುನಿರ್ಣಿಕ್ತಾತ್ಮಕಿಲ್ಬಿಷಃ ॥೧೭॥

ಅಂತಹ ಪ್ರಸಂಗಗಳಲ್ಲಿಯೂ ಎಲ್ಲಾ ಇಂದ್ರಿಯವ್ಯಾಪಾರಗಳನ್ನೂ ತ್ಯಜಿಸಿ ನನ್ನ ಪಾಪಗಳನ್ನು ಚೆನ್ನಾಗಿ ತೊಳೆದುಕೊಂಡು, ಸರ್ವಸ್ವಾಮಿಯಾದ ಭಗವಂತನನ್ನು ಮನಸ್ಸಿನಲ್ಲಿ ಚೆನ್ನಾಗಿ ಆಲಿಂಗನಮಾಡುವೆನು.

ನಿರ್ಮುಕ್ತಃ ಸರ್ವಪಾಪೇಭ್ಯೋ ವ್ಯತೀತಃ ಸರ್ವವಾಗುರಾಃ ।
ನ ವಶೇ ಕಸ್ಯಚಿತ್ ತಿಷ್ಠನ್ ಸಧರ್ಮಾ ಮಾತರಿಶ್ವನಃ ॥೧೮॥

ಎಲ್ಲಾ ಪಾಪಗಳಿಂದಲೂ ನಿರ್ಮುಕ್ತನಾಗಿ, ಎಲ್ಲಾ ಬಂಧನಗಳಿಂದಲೂ ದೂರನಾಗಿ, ಯಾರಿಗೂ ವಶನಾಗದೆ, ವಾಯುವಿನ ಸಮಾನ ಧರ್ಮವನ್ನು ಹೊಂದಿದವನಾಗಿ ಇರುವೆನು.

ಏತಯಾ ಸತತಂ ವೃತ್ತ್ಯಾ ಚರನ್ನೇವಂಪ್ರಕಾರಯಾ ।
ದೇಹಂ ಸಂತಾರಯಿಷ್ಯಾಮಿ ನಿರ್ಭಯಂ ಜ್ಞಾನಮಾಶ್ರಿತಃ ॥೧೯॥

ಇಂತಹ ಏಕಪ್ರಕಾರವಾದ ವೃತ್ತಿಯಿಂದ ಸತತವಾಗಿ ಜೀವಿಸಿ, ಭಯವನ್ನು ದೂರ ಮಾಡುವ ಜ್ಞಾನಮಾರ್ಗವನ್ನು ಆಶ್ರಯಿಸಿ, ದೇಹವನ್ನು ದಾಟಿಸುವೆನು.

ನಾಹಂ ಶ್ವಾಚರಿತೇ ಮಾರ್ಗೇ ಸ್ವವೀರ್ಯಕ್ಷಯಶೋಚಿತೇ ।
ಸ್ವಧರ್ಮಾತ್ ಸತತಾಪೇತೇ ಚರೇಯಂ ವೀರವರ್ಜಿತೇ ॥೨೦॥

ನಾನು ನನ್ನ ಮಾನ ಪರಾಕ್ರಮಗಳನ್ನು ಹಾನಿಮಾಡುವಂತಹ ಸ್ವಧರ್ಮದಿಂದ ರಹಿತವಾದಂತಹ, ವೀರರಿಂದ ಆಚರಿಸಲ್ಪಡದ, ನೀಚರು ಮಾತ್ರ ಆಚರಿಸುವ ಮಾರ್ಗದಲ್ಲಿ ಎಂದೂ ನಡೆಯುವುದಿಲ್ಲ.

ಸತ್ಯತೋಽಸತ್ಯತೋ ವಾಽಪಿ ಯೋಽನ್ಯಾಂ ಕೃಪಣಚಕ್ಷುಷಾ ।
ಉಪೈತಿ ವೃತ್ತಿಂ ಕಾಮಾತ್ಮಾ ಸ ಶುನಾಂ ವರ್ತತೇ ಪಥಿ ॥೨೧॥

ಮಾನಿತನಾಗಲೀ ಅಥವಾ ಅವಮಾನಿತನಾಗಲೀ ಯಾವನು ಕಾಮಾತ್ಮನಾಗಿ ಕಾರ್ಪಣ್ಯದೃಷ್ಟಿಯಿಂದ ತನ್ನ ಧರ್ಮದ ವೃತ್ತಿಯನ್ನು ಬಿಟ್ಟು ಇನ್ನೊಂದು ವೃತ್ತಿಯನ್ನು ಆಶ್ರಯಿಸುವನೋ ಅವನು ಶ್ವಾನಗಳ ಮಾರ್ಗದಲ್ಲಿ ನಡೆಯುವನು.

ವೈಶಂಪಾಯನಃ

ಏವಮುಕ್ತ್ವಾ ಸುದುಃಖಾರ್ತಃ ಸ ರಾಜಾ ಭರತರ್ಷಭಃ ।
ಅವೇಕ್ಷಮಾಣಃ ಕುಂತೀಂ ಚ ಮಾದ್ರೀಂ ಚ ಸಮಭಾಷತ ॥೨೨॥

ಭರತಶ್ರೇಷ್ಠನಾದ ಪಾಂಡುವು ದುಃಖಾರ್ತನಾಗಿ ಹೀಗೆ ಮಾತನಾಡಿ, ಕುಂತಿಯನ್ನು ಮತ್ತು ಮಾದ್ರಿಯನ್ನು ನೋಡುತ್ತಾ ಪುನಃ ಮಾತನಾಡಿದನು.

ಕೌಸಲ್ಯಾ ವಿದುರಃ ಕ್ಷತ್ತಾ ರಾಜಾ ಚ ಸಹಬಂಧುಭಿಃ ।
ಆರ್ಯಾ ಸತ್ಯವತೀ ಭೀಷ್ಮಃ ತೇ ಚ ಸರ್ವಹಿತಾ ಮಮ ॥೨೩॥

ಅಂಬಾಲಿಕೆ, ವಿದುರ, ಬಂಧುಗಳಿಂದ ಕೂಡಿದ ರಾಜನಾದ ಧೃತರಾಷ್ಟ್ರ ಪೂಜ್ಯರಾದ ಸತ್ಯವತಿ ಮತ್ತು ಭೀಷ್ಮರು, ಇವರೆಲ್ಲರೂ ನನಗೆ ಹಿತರಾದವರು.

ಬ್ರಾಹ್ಮಣಾಶ್ಚ ಮಹಾಭಾಗೇ ಲೋಕೇ ಯೇ ಸಂಶಿತವ್ರತಾಃ ।
ಪೌರವೃದ್ಧಾಶ್ಚ ಯೇ ತತ್ರ ನಿವಸಂತ್ಯಸ್ಮದಾಶ್ರಯಾಃ ।
ಪ್ರಸಾದ್ಯ ಸರ್ವೇ ವಕ್ತವ್ಯಾಃ ಪಾಂಡುಃ ಪ್ರವ್ರಾಜಿತೋ ವನಮ್ ॥೨೪॥

ಮಹಾನುಭಾವೆಯರೇ, ಇವರಲ್ಲದೇ, ರಾಜ್ಯದಲ್ಲಿ ವ್ರತನಿಷ್ಠರಾದ ಯಾವ ಬ್ರಾಹ್ಮಣರಿದ್ದಾರೆಯೋ, ನಮ್ಮನ್ನು ಆಶ್ರಯಿಸಿದ ಯಾವ ಪೌರವೃದ್ಧರು ಇದ್ದಾರೆಯೋ, ಅವರನ್ನೆಲ್ಲಾ ಪ್ರಸನ್ನೀಕರಿಸಿಕೊಂಡು, 'ಪಾಂಡುವು ಸಂನ್ಯಾಸ ಸ್ವೀಕಾರ ಮಾಡಿ ಕಾಡಿಗೆ ಹೋದನು' ಎಂದು ಹೇಳಬೇಕು.

ವೈಶಂಪಾಯನಃ

ಶ್ರುತ್ವಾ ಚ ವಚನಂ ಭರ್ತುಃ ತ್ಯಾಗಧರ್ಮಕೃತಾತ್ಮನಃ ।
ತೇ ಸಮಂ ವಚನಂ ಕುಂತೀ ಮಾದ್ರೀ ಚ ಸಮಭಾಷತಾಮ್ ॥೨೫॥

ತಮ್ಮ ಪತಿಯು ತಮ್ಮನ್ನು ಪರಿತ್ಯಾಗ ಮಾಡುವುದನ್ನು ನಿರ್ಧರಿಸಿ ಆಡಿದ ಮಾತುಗಳನ್ನು ಕೇಳಿದ ಕುಂತಿ ಮತ್ತು ಮಾದ್ರಿಯರು ಒಟ್ಟಿಗೆ ಮಾತನಾಡಿದರು.

ಅನ್ಯೇಽಪಿ ಹ್ಯಾಶ್ರಮಾಃ ಸಂತಿ ಯೇ ಶಕ್ಯಾ ಭರತರ್ಷಭ ।
ಆವಾಭ್ಯಾಂ ಸಹ ಸಂಚರ್ತುಂ ಧರ್ಮಮಾಶ್ರಿತ್ಯ ಚಿಂತ್ಯತಾಮ್ ॥೨೬॥

ಭರತಶ್ರೇಷ್ಠನೇ, ನಮ್ಮ ಜೊತೆಯಲ್ಲೇ ಇದ್ದು ಧರ್ಮವನ್ನು ಆಶ್ರಯಿಸಿ ತಪಸ್ಸನ್ನು ಮಾಡಬಹುದಾದ ಬೇರೆ ಆಶ್ರಮಗಳೂ ಇವೆ. ಅವುಗಳನ್ನು ಕುರಿತು ಯೋಚಿಸು.

ಆವಾಭ್ಯಾಂ ಧರ್ಮಪತ್ನೀಭ್ಯಾಂ ಸಹ ತಪ್ತ್ವಾ ಮಹತ್ತಪಃ ।
ತ್ವಮೇವ ಭವಿತಾಽಸ್ಯಾರ್ಥಂ ಸ್ವರ್ಗೇ ಚಾಪಿ ನ ಸಂಶಯಃ ॥೨೭॥

ಧರ್ಮಪತ್ನಿಯರಾದ ನಮ್ಮಿಬ್ಬರ ಜೊತೆಯಲ್ಲಿ ಶ್ರೇಷ್ಠವಾದ ತಪಸ್ಸನ್ನು ಮಾಡಿದರೂ ಅದರ ಫಲವಾಗಿ ನೀನು ಸ್ವರ್ಗವನ್ನು ಪಡೆಯುವೆ. ಇದರಲ್ಲಿ ಸಂಶಯವಿಲ್ಲ.

ಪ್ರಣಿಧಾಯೇಂದ್ರಿಯಗ್ರಾಮಂ ಭರ್ತೃಲೋಕಂ ನರರ್ಷಭ ।
ತ್ಯಕ್ತಕಾಮಸುಖೇ ಹ್ಯಾವಾಂ ರಾಜಂಸ್ತಪ್ಸ್ಯಾವಹೇ ತಪಃ ॥೨೮॥

ಎಲೈ ನರಶ್ರೇಷ್ಠನೇ, ನಾವಿಬ್ಬರೂ ಸಹ ಇಂದ್ರಿಯಸಮೂಹವನ್ನು ನಿಯಂತ್ರಿಸಿ, ಕಾಮಸುಖಗಳನ್ನು ತೊರೆದು ಪತಿಲೋಕವನ್ನು ದೊರಕಿಸಿಕೊಡುವ ತಪಸ್ಸನ್ನು ಆಚರಿಸುವೆವು.

ಯದಿ ವಾಽಽವಾಂ ಮಹಾಭಾಗ ತ್ಯಕ್ಷ್ಯಸ್ಯೇವ ವಿಶಾಂಪತೇ ।
ಅದ್ಯೈವಾವಾಂ ಪ್ರಹಾಸ್ಯಾವೋ ಜೀವಿತಂ ಭರತರ್ಷಭ ॥೨೯॥

ಎಲೈ ಮಹಾನುಭಾವನೇ, ಎಲೈ ರಾಜನೇ, ಎಲೈ ಭರತಶ್ರೇಷ್ಠನೇ, ಒಂದು ಪಕ್ಷ ನೀನು ನಮ್ಮಿಬ್ಬರನ್ನೂ ಪರಿತ್ಯಾಗ ಮಾಡುವುದೇ ಆದರೆ ನಾವು ಈ ದಿವಸವೇ ಪ್ರಾಣಗಳನ್ನು ತೊರೆಯುವೆವು.

ಪಾಂಡುಃ

ಯದಿ ವ್ಯವಸಿತಂ ತ್ವೇವಂ ಯುವಾಭ್ಯಾಂ ಧರ್ಮಮಿಶ್ರಿತಮ್ ।
ಸದ್ವೃತ್ತಿಮನುವರ್ತಿಷ್ಯೇ ತಾಮಹಂ ಪಿತುರವ್ಯಯಾಮ್ ॥೩೦॥

ನೀವಿಬ್ಬರೂ ಧರ್ಮಮಾರ್ಗದಲ್ಲಿ ಹೀಗೆ ನಿರ್ಧಾರ ಮಾಡುವುದಾದರೇ, ನಾನು ತಂದೆಯಾದ ವ್ಯಾಸರ ಅಥವಾ ಭೀಷ್ಮರ ಸನ್ಮಾರ್ಗವನ್ನು ಅನುಸರಿಸುವೆನು.

ತ್ಯಕ್ತಗ್ರಾಮ್ಯಸಮಾಚಾರಃ ತಪ್ಯಮಾನೋ ಮಹತ್ತಪಃ ।
ವಲ್ಕಲೀ ಫಲಮೂಲಾಶೀ ಚರಿಷ್ಯಾಮಿ ಮಹಾವನೇ ॥೩೧॥

ಗ್ರಾಮ್ಯಸುಖಗಳನ್ನು ತೊರೆದು ದೊಡ್ಡ ತಪಸ್ಸನ್ನು ಮಾಡುತ್ತ, ನಾರುಮಡಿಯನ್ನುಟ್ಟು ಫಲಮೂಲಾಶನನಾಗಿ ಮಹಾವನದಲ್ಲಿ ವಾನಪ್ರಸ್ಥನಾಗಿರುವೆನು.

ಅಗ್ನಿಂ ಜುಹ್ವದುಭೌ ಕಾಲಾವುಭೌ ಕಾಲಾವುಪಸ್ಪೃಶನ್ ।
ಕೃಶಃ ಪರಿಮಿತಾಹಾರಶ್ಚೀರಚರ್ಮಜಟಾಧರಃ ॥೩೨॥

ಎರಡು ಕಾಲಗಳಲ್ಲಿಯೂ ಸ್ನಾನವನ್ನು ಮಾಡಿ, ಎರಡು ಕಾಲಗಳಲ್ಲಿಯೂ ಅಗ್ನಿಯಲ್ಲಿ ಹೋಮವನ್ನು ಮಾಡಿ, ಅಲ್ಪಾಹಾರವನ್ನು ಸೇವಿಸಿ ಚೀರ, ಚರ್ಮ, ಜಟಾಧಾರಿಯಾಗಿ, ಕೃಶನಾಗಿ ತಪಸ್ಸನ್ನು ಮಾಡುವೆನು.

ಶೀತವಾತಾತಪಸಹಃ ಕ್ಷುತ್ತಿಪಾಸಾಶ್ರಮಾನ್ವಿತಃ ।
ತಪಸಾ ವಿಧಿಯುಕ್ತೇನ ಶರೀರಂ ಪರಿಶೋಷಯನ್ ॥೩೩॥

ಬಿಸಿಲು, ಗಾಳಿ ಮತ್ತೆ ಚಳಿಗಳನ್ನು ತಡೆದು, ಹಸಿವುನೀರಡಿಕೆಗಳಿಂದ ಶ್ರಮವನ್ನು ಅನುಭವಿಸಿ, ವಿಧಿಯುಕ್ತವಾದ ತಪಸ್ಸನ್ನು ಮಾಡಿ ಶರೀರವನ್ನು ಶೋಷಿಸುವೆನು.

ಏಕಾಂತಶೀಲೋ ವಿಮೃಶನ್ ಪಕ್ವಾಪಕ್ವೇನ ವರ್ತಯನ್ ।
ಪಿತೄನ್ ದೇವಾಂಶ್ಚ ವನ್ಯೇನ ವಾಗ್ಭಿರದ್ಭಿಶ್ಚ ತರ್ಪಯನ್ ॥೩೪॥

ಏಕಾಂತಶೀಲನಾಗಿ ಪಕ್ವವಾದ ಫಲಗಳಿಂದಲೂ, ಅಪಕ್ವವಾದ ಗೆಡ್ಡೆಗೆಣಸುಗಳಿಂದಲೂ ಜೀವಿಸುತ್ತಾ, ಜ್ಞಾನನಿಷ್ಠನಾಗಿದ್ದು, ದೇವತೆಗಳನ್ನೂ ಮತ್ತು ಪಿತೃಗಳನ್ನೂ ವನದಲ್ಲಿ ದೊರೆಯುವ ವಸ್ತುಗಳಿಂದಲೂ, ನೀರಿನಿಂದಲೂ ಮತ್ತು ಸ್ತೋತ್ರಗಳಿಂದಲೂ ಸಂತೋಷಪಡಿಸುವೆನು.

ವಾನಪ್ರಸ್ಥಜನಸ್ಯಾಪಿ ದರ್ಶಯನ್ ಕುಲವಾಸಿನಃ ।
ನಾಪ್ರಿಯಾಣಿ ಚರನ್ ಜಾತು ಕಿಂ ಪುನರ್ಗ್ರಾಮವಾಸಿನಃ ॥೩೫॥

ಕುಲವಾಸಿಗಳಾದ ವಾನಪ್ರಸ್ಥ ಜನರಿಗೂ, ನನ್ನ ನಡತೆಯಿಂದ ಸನ್ನ ಎಂದೂ ಅಪ್ರಿಯವಾಗಿ ಮಾತನಾಡುವುದಿಲ್ಲ. ಇನ್ನು ಗ್ರಾಮವಾಸಿಗಳನ್ನು ಕುರಿತು ಅಪ್ರಿಯವಾಗಿ ಏಕೆ ಮಾತನಾಡಲಿ.

ಏವಮಾರಣ್ಯಶಾಸ್ತ್ರಾಣಾಮುಕ್ತಮಗ್ರ್ಯಂ ತಪೋವಿಧಿಮ್ ।
ತಪಮಾನಃ ಪ್ರತೀಕ್ಷಿಷ್ಯೇ ದೇಹಸ್ಯಾಸ್ಯ ವಿಮೋಕ್ಷಣಮ್ ॥೩೬॥

ಹೀಗೆ ಶಾಸ್ತ್ರೋಕ್ತವಾದ ಉಗ್ರವಾದ ವಾನಪ್ರಸ್ಥತಪಸ್ಸಿನ ಮಾರ್ಗವನ್ನು ಆಚರಿಸುತ್ತಾ ಈ ದೇಹದ ನಾಶವನ್ನು ನಿರೀಕ್ಷಿಸುವೆನು.

ವೈಶಂಪಾಯನಃ

ಏವಮುಕ್ತ್ವಾ ಸ ಭಾರ್ಯೇ ತೇ ರಾಜಾ ಕೌರವವಂಶಜಃ ।
ತತಶ್ಚೂಡಾಮಣಿಂ ನಿಷ್ಕಾನಂಗದೇ ಕುಂಡಲಾನಿ ಚ ॥೩೭॥

ಮಕುಟಂ ಹಾರಸೂತ್ರಂ ಚ ಕಟಿಬಂಧಂ ತಥೈವ ಚ ।
ವಾಸಾಂಸಿ ವಿಮಲಾಃ ಖಡ್ಗಾಃ ಸ್ತ್ರೀಣಾಮಾಭರಣಾನಿ ಚ ॥೩೮॥

ವಾಹನಾನಿ ಚ ಮುಖ್ಯಾನಿ ಶಸ್ತ್ರಾಣಿ ವಿವಿಧಾನಿ ಚ ।
ಹೈಮಭಾಂಡಾನಿ ದಿವ್ಯಾನಿ ಪರ್ಯಂಕಾಸ್ತರಣಾನಿ ಚ ॥೩೯॥

ಮಣಿಮುಕ್ತಾಪ್ರವಾಳಾನಿ ವಸೂನಿ ವಿವಿಧಾನಿ ಚ ।
ಆಸನಾನಿ ಚ ಮುಖ್ಯಾನಿ ಬಹೂನಿ ವಿವಿಧಾನಿ ಚ ।
ಪ್ರದಾಯ ಸರ್ವಂ ವಿಪ್ರೇಭ್ಯಃ ಪಾಂಡುಃ ಪುನರಭಾಷತ ॥೪೦॥

ಆ ಕೌರವ ವಂಶದಲ್ಲಿ ಜನಿಸಿದ ಪಾಂಡುರಾಜನು ಪತ್ನಿಯರಿಗೆ ಹೀಗೆ ಹೇಳಿ ತಾನು ಧರಿಸಿದ್ದ ಚೂಡಾಮಣಿಯನ್ನು, ನಿಷ್ಕ ಮತ್ತು ಅಂಗದಗಳನ್ನು, ಕರ್ಣಕುಂಡಲಗಳನ್ನು, ಕಿರೀಟ ಮತ್ತು ಹಾರಗಳನ್ನು, ಕಟಿಬಂಧವನ್ನು, ವಿಮಲವಾದ ವಸ್ತುಗಳನ್ನು, ಖಡ್ಗಗಳನ್ನು, ಸ್ತ್ರೀಯರ ಆಭರಣಗಳನ್ನು, ತನ್ನ ಶ್ರೇಷ್ಠವಾದ ವಾಹನಗಳನ್ನು, ಅನೇಕ ವಿಧವಾದ ಶಸ್ತ್ರಗಳನ್ನು, ದಿವ್ಯವಾದ ಸುವರ್ಣ ಪಾತ್ರೆಗಳನ್ನು,

ಹಾಸಿಗೆ ಮತ್ತು ಹೊದ್ದಿಕೆಗಳನ್ನು, ಮುತ್ತು ರತ್ನಗಳನ್ನು, ವಿವಿಧವಾದ ಧನವನ್ನು, ಶ್ರೇಷ್ಠವಾದ ಆಸನವನ್ನು ತೊರೆದು, ಎಲ್ಲವನ್ನೂ ವಿಪ್ರರಿಗೆ ದಾನ ಮಾಡಿ ಪುನಃ ಮಾತನಾಡಿದನು.

ಗತ್ವಾ ನಾಗಪುರಂ ವಾಚ್ಯಂ ಪಾಂಡುಃ ಪ್ರವ್ರಾಜಿತೋ ವನೇ ।
ಅರ್ಥಂ ಕಾಮಂ ರತಿಂ ಚೈವ ವಿವಿಧಾನಿ ಧನಾನಿ ಚ ।
ಪ್ರತಸ್ಥೇ ಸರ್ವಮಸೃಜ್ಯ ಸಭಾರ್ಯೋ ಭರತರ್ಷಭಃ ॥೪೧॥

ವಿಪ್ರರೇ! ನೀವು ನಾಗಪುರಕ್ಕೆ ಹೋಗಿ 'ಪಾಂಡುವು ವಾನಪ್ರಸ್ಥನಾಗಿ ಕಾಡಿಗೆ ಹೋಗಿದ್ದಾನೆ. ಅರ್ಥವನ್ನು, ಕಾಮವನ್ನು, ರತಿಯನ್ನು, ವಿವಿಧ ಧನಗಳನ್ನು, ಉಳಿದೆಲ್ಲವನ್ನೂ ತ್ಯಾಗಮಾಡಿ, ಪತ್ನಿಯರ ಜೊತೆಯಲ್ಲಿ ಭರತರ್ಷಭನು ಕಾಡಿಗೆ ಹೊರಟನು' ಎಂದು ಎಲ್ಲರಿಗೂ ತಿಳಿಸಿ.

ವೈಶಂಪಾಯನಃ

ತತಸ್ತಸ್ಯಾನುಯಾತ್ರಾಣಿ ಸರ್ವೇ ಚ ಪರಿಚಾರಕಾಃ ।
ಶ್ರುತ್ವಾ ಭರತಸಿಂಹಸ್ಯ ವಿವಿಧಾಃ ಕರುಣಾ ಗಿರಃ ।
ಭೀಮಮಾರ್ತಸ್ವರಂ ಕೃತ್ವಾ ಹಾಹೇತಿ ಪರಿಚುಕ್ರುಶುಃ ॥೪೨॥

ಅನಂತರ ಅವನ ಜೊತೆಯಲ್ಲಿ ಹೋಗುವ ಪರಿಚಾರಕರೆಲ್ಲರೂ ಆ ಭರತಸಿಂಹನ ಕರುಣಾಜನಕವಾದ ಅನೇಕ ಮಾತುಗಳನ್ನು ಕೇಳಿ ಭಯಂಕರವಾದ ಆರ್ತ ಸ್ವರದಿಂದ 'ಅಯ್ಯೋ' ಎಂದು ಕಿರುಚಿದರು.

ಉಷ್ಣಮಾಸ್ರಂ ಪ್ರಮುಂಚತಃ ತಮಾಲೋಕ್ಯ ಯಶಸ್ವಿನಮ್।
ಯಯುರ್ನಾಗಪುರಂ ತೂರ್ಣಂ ಸರ್ವಮಾದಾಯ ತದ್ಧನಮ್ ॥೪೩॥

ಯಶಸ್ವಿಯಾದ ರಾಜನನ್ನು ನೋಡಿ ಬಿಸಿಯಾದ ಕಣ್ಣೀರನ್ನು ಸುರಿಸುತ್ತಾ ಅವನು ಕೊಟ್ಟ ಧನವನ್ನೆಲ್ಲಾ ತೆಗೆದುಕೊಂಡು ಶೀಘ್ರವಾಗಿ ನಾಗಪುರಕ್ಕೆ ತೆರಳಿದರು.

ತೇ ಗತ್ವಾ ನಗರಂ ರಾಜ್ಞೇ ಯಥಾವೃತ್ತಂ ಮಹಾತ್ಮನೇ ।
ಕಥಯಾಂಚಕ್ರಿರೇ ಸರ್ವಂ ಧನಂ ಚ ವಿವಿಧಂ ದದುಃ ॥೪೪॥

ಅವರು ನಾಗಪುರವನ್ನು ತಲುಪಿ, ಮಹಾತ್ಮನಾದ ಧೃತರಾಷ್ಟ್ರನಿಗೆ ನಡೆದ ಘಟನೆಯನ್ನೆಲ್ಲಾ ವಿವರಿಸಿ, ವಿವಿಧವಾದ ಎಲ್ಲಾ ಧನವನ್ನು ಅವನಿಗೆ ಒಪ್ಪಿಸಿದರು.

ಗೃಹೀತ್ವಾ ಧೃತರಾಷ್ಟ್ರಸ್ತು ಧನಂ ಭರತಸತ್ತಮ ।
ಕೃಪಾಯುಕ್ತೋ ಮಹಾರಾಜಃ ಪಾಂಡುಮೇವ ಸ್ಮ ಶೋಚತಿ ॥೪೫॥

ಎಲೈ ಭರತಶ್ರೇಷ್ಠನೇ, ಧೃತರಾಷ್ಟ್ರನು ಆ ಧನವನ್ನು ಸ್ವೀಕರಿಸಿ ಕೃಪಾಯುಕ್ತನಾಗಿ ಪಾಂಡುವನ್ನೇ ಚಿಂತಿಸಲು ಆರಂಭಿಸಿದನು.

ರಾಜಪುತ್ರಸ್ತು ಕೌಸಲ್ಯೋ ಮುನಿರ್ಮೂಲಫಲಾಶನಃ ।
ಜಗಾಮ ಸಹ ಭಾರ್ಯಾಭ್ಯಾಮಾಶು ನಾಗಸಹಂ ಗಿರಿಮ್ ॥೪೬॥

ಕಾಶೀರಾಜಕುಮಾರಿಯ ಮಗನಾದ ಪಾಂಡುವಾದರೋ, ಮೂಲಫಲಾಶನನಾದ ಮುನಿಯಾಗಿ ಪತ್ನಿಯರ ಜೊತೆಯಲ್ಲಿ ಶೀಘ್ರವಾಗಿ ನಾಗಸಹ ಎಂಬ ಪರ್ವತವನ್ನು ಸೇರಿದನು.

ಸ ಚೈತ್ರರಥಮಾಸಾದ್ಯ ವಾರಿಷೇಣಮವಾಪ್ಯ ಚ ।
ವಾರಿಷೇಣಮತಿಕ್ರಮ್ಯ ಗತ್ವಾ ಗಂಧರಜೋವಹಮ್ ॥೪೭॥

ರಕ್ಷ್ಯಮಾಣೋ ಮಹಾಭೂತೈಃ ಸಿದ್ಧೈಶ್ಚ ಪರಮರ್ಷಿಭಿಃ ।
ಉವಾಸ ಸತತಂ ರಾಜಾ ಸಮೇಷು ವಿಷಮೇಷು ಚ ॥೪೮॥

ಅವನು ಅಲ್ಲಿಂದ ಚೈತ್ರರಥ ಪರ್ವತಕ್ಕೆ ಹೋಗಿ, ಅಲ್ಲಿಂದ ವಾರಿಷೇಣ ಪರ್ವತಕ್ಕೆ ಹೋಗಿ, ವಾರಿಷೇಣ ಪರ್ವತವನ್ನು ದಾಟಿ ಗಂಧರಜೋವಹ ಪರ್ವತಕ್ಕೆ ಹೋಗಿ ಅಲ್ಲಿ ಸಿದ್ಧರಿಂದಲೂ, ಶ್ರೇಷ್ಠಋಷಿಗಳಿಂದಲೂ ಮತ್ತು ಮಹಾಭೂತಗಳಿಂದಲೂ ರಕ್ಷಿಸಲ್ಪಟ್ಟವನಾಗಿ, ಸಮವಿಷಮಪ್ರದೇಶಗಳಲ್ಲಿ ವಾಸಮಾಡಿದನು.

ಇಂದ್ರದ್ಯುಮ್ನಸರಃ ಪ್ರಾಪ್ಯ ಹಂಸಕೂಟಮತೀತ್ಯ ಚ ।
ಶತಶೃಂಗೇ ಮಹಾಪ್ರಾಜ್ಞಃ ತಾಪಸಃ ಸಮಪದ್ಯತ ॥೪೯॥

ಅಲ್ಲಿಂದ ಇಂದ್ರದ್ಯುಮ್ನ ಸರೋವರಕ್ಕೆ ಹೋಗಿ, ಅಲ್ಲಿಂದ ಹಂಸಕೂಟಪರ್ವತವನ್ನು ದಾಟಿ ಶತಶೃಂಗಪರ್ವತವನ್ನು ಸೇರಿ ಅಲ್ಲಿ ಮಹಾಪ್ರಾಜ್ಞನಾದ ಅವನು ತಪಸ್ವಿಯಾದನು.

ತತ್ರಾಪಿ ತಪಸಿ ಶ್ರೇಷ್ಠೇ ವರ್ತಮಾನಃ ಪರಂತಪಃ ।
ಸಿದ್ಧಚಾರಣಸಂಘಾನಾಂ ಬಭೂವ ಪರಮಪ್ರಿಯಃ ॥೫೦॥

ಅಲ್ಲಿಯೂ ಪರಂತಪನಾದ ಅವನು ಶ್ರೇಷ್ಠವಾದ ತಪಸ್ಸನ್ನು ಆಚರಿಸುತ್ತಾ ಸಿದ್ಧಚಾರಣಸಮೂಹಕ್ಕೆ ಅತ್ಯಂತ ಪ್ರಿಯನಾದನು.

ಶುಶ್ರೂಷುರನಹಂವಾದೀ ನಿಯತಾತ್ಮಾ ಜಿತೇಂದ್ರಿಯಃ ।
ಸ್ವರ್ಗಂ ಗಂತುಂ ಪರಾಕ್ರಾಂತಃ ಸ್ವೇನ ವೀರ್ಯೇಣ ಭಾರತ ॥೫೧॥

ಎಲ್ಲರ ಸೇವೆಗಳನ್ನು ಮಾಡಿಕೊಂಡು ಅಹಂಕಾರದ ಮಾತುಗಳನ್ನಾಡದೆ, ಮನಸ್ಸನ್ನೂ, ಇಂದ್ರಿಯಗಳನ್ನೂ ನಿಯಂತ್ರಿಸಿ ತನ್ನ ಸಾಮರ್ಥ್ಯದಿಂದಲೇ ಸ್ವರ್ಗವನ್ನು ಸೇರಲು ಬಯಸಿದನು.

ಕೇಷಾಂಚಿದಭವದ್ ಭ್ರಾತಾ ಕೇಷಾಂಚಿದಭವದ್ ಸಖಾ ।
ಋಷಿಭಿಸ್ತ್ವಭವತ್ ಕೈಶ್ಚಿತ್ ಪುತ್ರವತ್ ಪರಿರಕ್ಷಿತಃ ॥೫೨॥

ಅವನು ಕೆಲವರಿಗೆ ಅಣ್ಣನಂತಿದ್ದನು. ಕೆಲವರಿಗೆ ಸ್ನೇಹಿತನಾಗಿದ್ದನು. ಇನ್ನು ಕೆಲವು ಋಷಿಗಳು ಅವನನ್ನು ಪುತ್ರನಂತೆ ರಕ್ಷಿಸಿದರು.

ಸ ತು ಕಾಲೇನ ಮಹತಾ ಪ್ರಾಪ್ಯ ನಿಷ್ಕಲ್ಮಷಂ ತಪಃ ।
ಬ್ರಹ್ಮರ್ಷಿಸದೃಶಃ ಪಾಂಡುರಭವದ್ ಭರತರ್ಷಭ ॥೫೩॥

ಎಲೈ ಭರತರ್ಷಭನೇ, ಪಾಂಡುವು ಬಹುಕಾಲ ನಿರ್ದುಷ್ಟವಾದ ತಪಸ್ಸನ್ನು ಮಾಡಿ ಪಾಪಗಳಿಂದ ನಿರ್ಮುಕ್ತನಾಗಿ ಬ್ರಹ್ಮರ್ಷಿಸಮಾನನಾದನು.

ಅಮಾವಾಸ್ಯಾಂ ತು ಸಹಿತಾ ಋಷಯಃ ಸಂಶಿತವ್ರತಾಃ ।
ಬ್ರಹ್ಮಾಣಂ ದ್ರಷ್ಟುಕಾಮಾಸ್ತೇ ಸಂಪ್ರತಸ್ಥುರ್ಮನೀಷಿಣಃ ॥೫೪॥

ಒಂದು ಅಮಾವಾಸ್ಯೆಯ ದಿನದಂದು ಶ್ರೇಷ್ಠ ವ್ರತನಿಷ್ಠರಾದ ಮೇಧಾವಿಗಳಾದ ಎಲ್ಲಾ ಋಷಿಗಳೂ ಬ್ರಹ್ಮದೇವರನ್ನು ನೋಡುವ ಅಭಿಪ್ರಾಯದಿಂದ ಒಟ್ಟಿಗೆ ಹೊರಟರು.

ಸಂಪ್ರಸ್ಥಿತಾನೃಷೀನ್ ದೃಷ್ಟ್ವಾ ಪಾಂಡುರ್ವಚನಮಬ್ರವೀತ್ ।
ಭವಂತಃ ಕ್ವ ಗಮಿಷ್ಯಂತಿ ಬ್ರೂತ ಮೇ ವದತಾಂ ವರಾಃ ॥೫೫॥

ಹೊರಟಂತಹ ಋಷಿಗಳನ್ನು ನೋಡಿ ಮಾತನಾಡುವುದರಲ್ಲಿ ನಿಪುಣನಾದ ಪಾಂಡುವು ''ಎಲೈ ಮಾತನಾಡುವವರಲ್ಲಿ ಶ್ರೇಷ್ಠರಾದವರೇ, ನೀವೆಲ್ಲರೂ ಎಲ್ಲಿಗೆ ಹೊರಟಿದ್ದೀರಿ ಹೇಳಿ'' ಎಂದು ಕೇಳಿದನು.

ಋಷಯಃ

ಸಮವಾಯೋ ಮಹಾನದ್ಯ ಬ್ರಹ್ಮಲೋಕೇ ಮಹಾತ್ಮನಾಮ್ ।
ದೇವಾನಾಂ ಚ ಋಷೀಣಾಂ ಚ ಪಿತೄಣಾಂ ಚ ಮಹಾತ್ಮನಾಮ್ ।
ವಯಂ ತತ್ರ ಗಮಿಷ್ಯಾಮೋ ದ್ರಷ್ಟುಕಾಮಾಃ ಸ್ವಯಂಭುವಮ್ ॥

ಬ್ರಹ್ಮಲೋಕದಲ್ಲಿ ಈ ದಿನ ಋಷಿಗಳ, ಪಿತೃಗಳ ಮತ್ತು ಮಹಾತ್ಮರ ದೊಡ್ಡ ಸಮಾಗಮವು ಉಂಟಾಗುತ್ತದೆ. ನಾವು ಬ್ರಹ್ಮದೇವರನ್ನು ನೋಡಲು ಬಯಸಿ ಅಲ್ಲಿಗೆ ಹೊರಟಿರುವೆವು.

ವೈಶಂಪಾಯನಃ

ಪಾಂಡುಮುತ್ಥಾಯ ಸಹಸಾ ಗಂತುಕಾಮಂ ಮಹರ್ಷಯಃ ।
ಸ್ವರ್ಗಮಾರ್ಗಂ ತಿತೀರ್ಷಂತಂ ಶತಶೃಂಗಾದುದಙ್ಮುಖಮ್ ।
ಪ್ರಸ್ಥಿತಂ ಸಹ ಭಾರ್ಯಾಭ್ಯಾಮಬ್ರುವಂಸ್ತೇ ತಪೋಧನಾಃ ॥೫೭॥

ತಾನೂ ತಕ್ಷಣ ಎದ್ದು ಶತಶೃಂಗಪರ್ವತದಿಂದ ಉತ್ತರಾಭಿಮುಖವಾಗಿ ಹೊರಟು ಸ್ವರ್ಗಮಾರ್ಗವನ್ನು ದಾಟಲು ಇಚ್ಛಿಸಿದ ಸಪತ್ನೀಕನಾದ ಪಾಂಡುವನ್ನು ಕುರಿತು ತಪೋಧನರು ಹೇಳಿದರು.

ಉಪರ್ಯುಪರಿ ಗಚ್ಛಂತಃ ಶೈಲರಾಜಮುದಂಮುಖಾಃ ।
ಪ್ರಪಶ್ಯಾಮೋ ಗಿರಿಂ ತಸ್ಮಿನ್ ದುರ್ಗಾನ್ ದೇಶಾನ್ ಬಹೂನ್‌ವಯಮ್ ॥

ನಾವು ಮೇಲೆ ಮೇಲೆ ಉತ್ತರಾಭಿಮುಖವಾಗಿ ಹೋಗುತ್ತಾ ಶೈಲರಾಜನಾದ ಮೇರುವನ್ನು, ಅಲ್ಲಿರುವ ಅನೇಕ ದುರ್ಗಮವಾದ ಪ್ರದೇಶಗಳನ್ನು ನೋಡುತ್ತೇವೆ.

ಯಕ್ಷರಾಕ್ಷಸಗುಪ್ತಾನಿ ಗಂಧರ್ವಚರಿತಾನಿ ಚ ।
ಆಕ್ರೀಡಿತಾನ್ಯಪ್ಸರೋಭಿಃ ಸಹ ದೇವಗಣೈಃ ಸದಾ ॥೫೯॥

ಯಕ್ಷರಾಕ್ಷಸರಿಂದಯುಕ್ತವಾದ, ಗಂಧರ್ವರ ಸಂಚಾರವಿರುವ, ಅಪ್ಸರೆಯರ ಜೊತೆಯಲ್ಲಿ ದೇವತೆಗಳು ವಿಹಾರಮಾಡುವ ಪ್ರದೇಶಗಳನ್ನು ನೋಡುತ್ತೇವೆ.

ಸದನಾನಿ ಕುಬೇರಸ್ಯ ಹೃದ್ಯಾನಿ ಚ ಮೃದೂನಿ ಚ ।
ತೇಷಾಂ ನದಂ ನಿತಂಬಾಂಶ್ಚ ಘೋರಾಂಶ್ಚ ಗಿರಿಗಹ್ವರಾನ್ ॥೬೦॥

ಕುಬೇರನ ಮನೋಹರವಾದ ಪಟ್ಟಣಗಳನ್ನು, ಅಲ್ಲಿರುವ ನದಿಗಳನ್ನು, ಪರ್ವತದ ತಪ್ಪಲುಪ್ರದೇಶಗಳನ್ನು, ಘೋರವಾದ ಗಿರಿಗಹ್ವರಗಳನ್ನು ನೋಡುತ್ತೇವೆ.

ಸಂತಿ ನಿತ್ಯಂ ಹಿಮಾಕ್ರಾಂತಾ ನಿವೃತ್ತಮೃಗಪಕ್ಷಿಣಃ ।
ಸಂತಿ ಕೇಚಿತ್ ಸದಾವರ್ಷಾ ಘೋರರೂಪಾ ದುರಾಸದಾಃ ॥೬೧॥

ಅಲ್ಲಿ ಯಾವಾಗಲೂ ಹಿಮಾಕ್ರಾಂತವಾಗಿ, ಮೃಗಪಕ್ಷಿಗಳಿಂದ ಪರಿತ್ಯಕ್ತವಾದ ಪ್ರದೇಶಗಳಿವೆ. ಯಾವಾಗಲೂ ಮಳೆ ಬೀಳುತ್ತಿರುವ ಪ್ರದೇಶಗಳಿವೆ. ಘೋರರೂಪವಾಗಿದ್ದು ತಲುಪಲು ಅಸಾಧ್ಯವಾದ ಪ್ರದೇಶಗಳಿವೆ.

ಪಕ್ಷಿಣೋऽತ್ರ ನ ಗಚ್ಛಂತಿ ಕಥಮೇವಾಪರೇ ಮೃಗಾಃ ।
ವಾಯುರೇವಾತ್ರ ಸಂಯಾತಿ ಸಿದ್ಧಾ ಯಕ್ಷಾಶ್ಚ ಚಾರಣಾಃ ॥೬೨॥

ಅಲ್ಲಿ ಪಕ್ಷಿಗಳೂ ಹೋಗುವುದಿಲ್ಲ. ಇತರ ಮೃಗಗಳು ಹೇಗೆ ಹೋಗಲು ಸಾಧ್ಯ? ಅಲ್ಲಿ ವಾಯುವು ಮಾತ್ರ ಬೀಸುತ್ತದೆ. ಸಿದ್ಧರು, ಯಕ್ಷರು, ಚಾರಣರು ಸಂಚರಿಸುತ್ತಾರೆ.

ಗಚ್ಛಂತ್ಯೌ ಶೈಲರಾಜೇऽಸ್ಮಿನ್ ರಾಜಪುತ್ರ್ಯೌ ಕಥಂ ತ್ವಮೇ ।
ನ ಸೀದೇತಾಮದುಃಖಾರ್ಹೇ ಮಾ ಗಮೋ ಭರತರ್ಷಭ ॥೬೩॥

ಅಂತಹ ಪರ್ವತಪ್ರದೇಶಗಳಲ್ಲಿ ಹೋಗುತ್ತಾ ಈ ರಾಜಪುತ್ರಿಯರು ಹೇಗೆ ದುಃಖವನ್ನು ಸಹಿಸುತ್ತಾರೆ. ಅವರು ದುಃಖಪಡಲು ಅರ್ಹರಾದವರಲ್ಲ. ಆದ್ದರಿಂದ ಭರತಶ್ರೇಷ್ಠನೇ, ನೀನು ಬರಬೇಡ.

ಪಾಂಡುಃ

ಅಪ್ರಜಸ್ಯ ಕಿಲ ಮೇ ಸ್ವರ್ಗಮದ್ವಾರಂ ಸಂಪ್ರಚಕ್ಷತೇ ।
ಸ ಹಿ ಸಂತಾಪತಪ್ತೋऽಹಮಪ್ರಜಶ್ಚ ಬ್ರವೀಮಿ ವಃ ॥೬೪॥

ಮಕ್ಕಳಿಲ್ಲದ ನನಗೆ ಸ್ವರ್ಗಕ್ಕೆ ಪ್ರವೇಶವಿಲ್ಲವೆಂದು ಹೇಳುತ್ತಾರೆ. ಮಕ್ಕಳಿಲ್ಲದ ನಾನು ಆ ಸಂತಾಪದಿಂದ ತಪ್ತನಾಗಿ ನಿಮಗೆ ಹೇಳುತ್ತಿದ್ದೇನೆ.

ಸೋಽಹಮುಗ್ರೇಣ ತಪಸಾ ಸಭಾರ್ಯಸ್ಯ ಕ್ತಜೀವಿತಃ ।
ಅನಪತ್ಯೋಽಪಿ ವಿಂದೇಯಂ ಸ್ವರ್ಗಮುಗ್ರೇಣ ಕರ್ಮಣಾ ॥೬೫॥

ನನಗೆ ಮಕ್ಕಳಿಲ್ಲದಿದ್ದರೂ ಜೀವನದ ಆಸೆಯನ್ನು ತೊರೆದು ಪತ್ನಿಯರ ಜೊತೆಯಲ್ಲಿ ಉಗ್ರವಾದ ತಪಸ್ಸನ್ನು ಮಾಡಿ ಉಗ್ರವಾದ ಕರ್ಮವನ್ನು ಆಚರಿಸಿದುದರಿಂದ ನನಗೂ ಸ್ವರ್ಗವು ದೊರೆಯಬೇಕು.

ತಾಪಸಾಃ

ಅಪ್ರಜಶ್ಚ ಮಹಾಭಾಗ ನ ಸ್ವರ್ಗಂ ಗಂತುಮರ್ಹಸಿ ।
ಅಸ್ತಿ ವೈ ತವ ಧರ್ಮಾತ್ಮನ್ ವಿದುರ್ದೇವೋಪಮಂ ಶುಭಮ್ ॥೬೬॥

ಅಪತ್ಯಮನಘಂ ತ್ವಿಷ್ಟಂ ಪಶ್ಯಾಮೋ ದಿವ್ಯಚಕ್ಷುಷಾ ।
ದೈವಾದಿಷ್ಟಂ ಮನುಷ್ಯೇಂದ್ರ ಕಾರಣೇನೋಪಪಾದಯ ॥೬೭॥

ಎಲೈ ಮಹಾನುಭಾವನೇ, ಮಕ್ಕಳನ್ನು ಪಡೆಯದೇ ನೀನು ಸ್ವರ್ಗಕ್ಕೆ ಹೋಗುವಂತಿಲ್ಲ. ಧರ್ಮಾತ್ಮನೇ, ನಿನಗೆ ದೇವತಾಸದೃಶವಾದ, ಪ್ರಿಯವಾದ, ನಿರ್ದುಷ್ಟವಾದ ಮಕ್ಕಳಿದ್ದಾರೆ. ಅವರನ್ನು ನಾವು ದಿವ್ಯದೃಷ್ಟಿಯಿಂದ ನೋಡುತ್ತಿದ್ದೇವೆ. ಎಲೈ ರಾಜನೇ, ದೇವತಾನುಗ್ರಹದಿಂದ ನಿನಗೆ ಇಷ್ಟವಾದ ಪುತ್ರಫಲವನ್ನು ಪಡೆಯುವವನಾಗು.

ಅರಿಷ್ಟಂ ಕ್ಷೇಮಮವ್ಯಗ್ರೋ ವಿಂದೇಥಾಃ ಪರಮಾಂ ಗತಿಮ್ ।
ತಸ್ಮಾದಿಷ್ಟಫಲೇ ತಾತ ಕುರು ಯತ್ನಂ ಯಥಾಗಮಮ್ ।
ಅಪತ್ಯಂ ಗುಣಸಂಪನ್ನಂ ಲಬ್ಧ್ವಾ ಪ್ರೀತಿಮವಾಪ್ಸ್ಯಸಿ ॥೬೮॥

ರಾಜನೇ, ನೀನು ನಿಶ್ಚಯವಾಗಿ ಯಾವ ಕ್ಲೇಶವೂ ಇಲ್ಲದ ಕ್ಷೇಮಪೂರ್ಣವಾದ ಸದ್ಗತಿಯನ್ನು ಹೊಂದುತ್ತೀಯೆ. ಆದ್ದರಿಂದ ಇಷ್ಟವಾದ ಫಲವನ್ನು ಪಡೆಯಲು ಶಾಸ್ತ್ರದಲ್ಲಿ ಹೇಳಿದ ಪ್ರಯತ್ನವನ್ನು ಮಾಡು. ಗುಣವಂತರಾದ ಮಕ್ಕಳನ್ನು ಪಡೆದು ನೀನು ಸಂತೋಷಪಡುವಿ.

ವೈಶಂಪಾಯನಃ

ತಚ್ಛ್ರುತ್ವಾ ತಾಪಸವಚಃ ಕೌರವ್ಯಃ ಸಮಚಿಂತಯತ್ ।
ಮೃಗಶಾಪಾದಪಹತಾಮಾತ್ಮನೋ ಹೀಂದ್ರಿಯಕ್ರಿಯಾಮ್ ॥೬೯॥

ಆ ತಾಪಸರ ಮಾತನ್ನು ಕೇಳಿದ ಕೌರವರಾಜನಾದ ಪಾಂಡುವು ಜಿಂಕೆಯ ರೂಪದಲ್ಲಿದ್ದ ಕಿಂದಮರ ಶಾಪದಿಂದ ತಾನು ಇಂದ್ರಿಯ ಕ್ರಿಯೆಯಿಂದ ನಿವೃತ್ತನಾಗಿರುವುದನ್ನು ಗಮನಿಸಿ ಆಲೋಚಿಸಿದನು.

ಅಥ ಪಾರಶವೀಂ ಕನ್ಯಾಂ ದೇವಕಸ್ಯ ಮಹೀಪತೇಃ ।
ರೂಪಯೌವನಸಂಪನ್ನಾಂ ಸ ಶುಶ್ರಾವಾಪಗಾಸುತಃ ॥೭೦॥

ಆಗ ಭೀಷ್ಮರು ದೇವಕಮಹಾರಾಜನಿಗೆ ಶೂದ್ರ ಸ್ತ್ರೀಯಲ್ಲಿ ಹುಟ್ಟಿದ ಕನ್ಯೆಯು ರೂಪಯೌವನಸಂಪನ್ನಳಾಗಿದ್ದಾಳೆ ಎಂಬ ವಾರ್ತೆಯನ್ನು ಕೇಳಿದರು.

ತತಸ್ತು ವರಯಿತ್ವಾ ತಾಮಾನಾಯ್ಯ ಭರತರ್ಷಭಃ ।
ವಿವಾಹಂ ಕಾರಯಾಮಾಸ ವಿದುರಸ್ಯ ಮಹಾಮತೇಃ ॥೭೧॥

ಅನಂತರ ಭರತಶ್ರೇಷ್ಠರಾದ ಭೀಷ್ಮರು ಅಲ್ಲಿಗೆ ಹೋಗಿ ಅವಳನ್ನು ವರಿಸಿ, ಹಸ್ತಿನಪುರಕ್ಕೆ ಕರೆದುಕೊಂಡು ಬಂದು ಮಹಾಮತಿಯಾದ ವಿದುರನಿಗೆ ವಿವಾಹವನ್ನು ಮಾಡಿಸಿದರು.

ತಸ್ಯಾಂ ಚೋತ್ಪಯಾದಯಾಮಾಸ ವಿದುರಃ ಕುರುನಂದನಃ ।
ಪುತ್ರಾನ್ ವಿನಯಸಂಪನ್ನಾನಾತ್ಮನಃ ಸದೃಶಾನ್ ಗುಣೈಃ ॥೭೨॥

ಕುರುನಂದನನಾದ ವಿದುರನು ಅವಳಲ್ಲಿ ವಿನಯಸಂಪನ್ನರಾದ ಗುಣಗಳಲ್ಲಿ ತನಗೆ ಸದೃಶರಾದ ಪುತ್ರರನ್ನು ಪಡೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ದ್ವಾದಶಾಧಿಕಶತತಮೋಽಧ್ಯಾಯಃ ॥

॥ ಸಂಭವಪರ್ವಣಿ ಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಹನ್ನೆರಡನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ- ಅಧ್ಯಾಯ-೧೨

ತದಾ ಮುನೀಂದ್ರಸಂಯುತಃ ಸದೋ ವಿಧಾತುರುತ್ತಮಮ್ ।
ಸ ಪಾಂಡುರಾಪ್ತುಮೈಚ್ಛತ ನ್ಯವಾರಯಂಶ್ಚ ತೇ ತದಾ ॥೧೫॥

ಆ ಕಾಲದಲ್ಲಿ ಪಾಂಡು ಮುನಿಶ್ರೇಷ್ಠರ ಸಮೂಹದ ನಡುವೆ ಬ್ರಹ್ಮಲೋಕಗಮನದ ಬಯಕೆಯನ್ನು ವ್ಯಕ್ತಮಾಡಿದ. ಆಗ ಮುನಿಗಳು ತಡೆದರು.

ಯದರ್ಥಮೇವ ಜಾಯತೇ ಪುಮಾನ್ ಹಿ ತಸ್ಯ ಸೋಽಕೃತೇಃ ।
ಶುಭಾಂ ಗತಿಂ ನ ತು ವ್ರಜೇದ್ ಧ್ರುವಂ ತತೋ ನ್ಯವಾರಯನ್॥೧೬॥

ಜೀವಾತ್ಮನಾದ ಯಾವ ಉದ್ದೇಶ ಸಾಧನೆಗಾಗಿ ಹುಟ್ಟುತ್ತಾನೋ ಅದನ್ನು ಸಾಧಿಸದಿದ್ದರೆ ಆತ ನಿಶ್ಚಯವಾಗಿ ಸದ್ಗತಿಯನ್ನು ಹೊಂದುವುದಿಲ್ಲ. ಅದರಿಂದ ಮುನಿಗಳು ತಡೆದರು.

ಪ್ರಧಾನದೇವತಾಜನೇ ನಿಯೋಕ್ತುಮಾತ್ಮನಃ ಪ್ರಿಯಾಮ್ ।
ಬಭೂವ ಪಾಂಡುರೇಷ ತದ್ ವಿನಾ ನ ತಸ್ಯ ಸದ್ಗತಿಃ ॥೧೭॥

ಪಾಂಡು ಉತ್ತಮ ದೇವತೆಗಳ ಜನನದಲ್ಲಿ ತನ್ನ ಪ್ರಿಯೆಯನ್ನು ನಿಯೋಗ ಮಾಡಲೆಂದೇ ಜನಿಸಿದ್ದ. ಅದನ್ನು ಮಾಡದ ಹೊರತು ಅವನಿಗೆ ಸದ್ಗತಿ ಇಲ್ಲ.

ಅತೋಽನ್ಯಥಾ ಸುತಾನೃತೇ ವ್ರಜಂತಿ ಸದ್ಗತಿಂ ನರಾಃ ।
ಯಥೈವ ಧರ್ಮಭೂಷಣೋ ಜಗಾಮ ಸಂಧ್ಯಕಾಸುತಃ ॥೧೮॥

ಮಕ್ಕಳನ್ನು ಪಡೆಯದಿದ್ದರೂ ಬೇರೆ ರೀತಿಯಿಂದ ಮಾನವರು ಸದ್ಗತಿ ಪಡೆಯಬಲ್ಲರು. ಸಂಧ್ಯಾವಳಿಯ ಪುತ್ರ ಧರ್ಮಾಂಗದ ಹೇಗೋ ಹಾಗೆ.

ತದಾ ಕಲಿಶ್ಚ ರಾಕ್ಷಸಾ ಬಭೂವುರಿಂದ್ರ ಜಿನ್ಮುಖಾಃ ।
ವಿಚಿತ್ರವೀರ್ಯನಂದನಪ್ರಿಯೋದರೇ ಹಿ ಗರ್ಭಗಾಃ ॥೧೯॥

ಆಗ ಕಲಿಯೂ ಇಂದ್ರಜಿತ್ ಮುಂತಾದ ರಾಕ್ಷಸರೂ ಧೃತರಾಷ್ಟ್ರನ ಪತ್ನಿಯ ಗರ್ಭದಲ್ಲಿ ಜನಿಸಿದರು.

ತದಸ್ಯ ಸೋಽನುಜೋಽಶೃಣೋನ್ಮುನೀಂದ್ರದೂಷಿತಂ ಚ ತತ್ ।
ವಿಚಾರ್ಯ ಚ ಪ್ರಿಯಾಮಿದಂ ಜಗಾದ ವಾಸುದೇವಧೀಃ ॥೨೦॥

ಆಗ ಮುನಿಗಳು ಹೇಳಿದ ಗಾಂಧಾರಿ ಗರ್ಭವತಿಯಾದ ವಿಷಯವನ್ನೂ ತನಗೆ ಅವರು ಉಪದೇಶಿಸಿದ ಕರ್ತವ್ಯವನ್ನೂ ಹರಿಭಕ್ತನಾದ ಪಾಂಡು ಕೇಳಿ ವಿಚಾರ ಮಾಡಿ ಪ್ರಿಯೆಯಾದ ಕುಂತಿಗೆ ಹೇಳಿದ.

ಯ ಏವ ಮದ್ಗುಣಾಧಿಕಸ್ತತಃ ಸುತಂ ಸಮಾಪ್ನುಹಿ ।
ಸುತಂ ವಿನಾ ನ ನೋ ಗತಿಂ ಶುಭಾಂ ವದಂತಿ ಸಾಧವಃ ॥೨೧॥

'ನನಗಿಂತ ಗುಣದಲ್ಲಿ ಶ್ರೇಷ್ಠನಾದವನಿಂದ ಮಗನನ್ನು ಪಡೆ. ಮಗನಿಲ್ಲದೆ ನಮಗೆ ಸದ್ಗತಿ ಇಲ್ಲವೆಂದು ಸಾಧುಗಳು ಹೇಳುತ್ತಾರೆ'।

ತದಸ್ಯ ಕೃಚ್ಛ್ರತೋ ವಚಃ ಪೃಥಾಗ್ರಹೀಜ್ಜಗಾದ ಚ ।
ಮಮಾಸ್ತಿ ದೇವವಶ್ಯದೋ ಮನೂತ್ತಮಃ ಸುತಾಪ್ತಿದಃ ॥೨೨॥

ಕುಂತಿ ಪಾಂಡುವಿನ ಈ ಮಾತನ್ನು ಕಷ್ಟದಿಂದ ಒಪ್ಪಿದರು. ಮತ್ತು 'ನನಗೆ ದೇವತೆಗಳನ್ನು ವಶೀಕರಿಸುವ ಮತ್ತು ಪುತ್ರ ಪ್ರಾಪ್ತಿ ನೀಡುವ ಉತ್ತಮ ಮಂತ್ರೋಪದೇಶವಿದೆ' ಎಂದಳು.

ನ ತೇ ಸುರಾನೃತೇ ಸಮಃ ಸುರೇಷು ಕೇಚಿದೇವ ಚ ।
ಅತಸ್ತವಾಧಿಕಂ ಸುರಂ ಕಮಾಹ್ವಯೇ ತ್ವದಾಜ್ಞಯಾ ॥೨೩॥

'ನಿನಗೆ ದೇವತೆಗಳು ಹೊರತು ಬೇರೆ ಯಾರೂ ಸಮರಿಲ್ಲ. ದೇವತೆಗಳಲ್ಲಿಯೂ ಕೆಲವರೆ ನಿನಗೆ ಸಮರು. ಆದರಿಂದ ನಾನು ನಿನ್ನಾಜ್ಞೆಯಿಂದ ನಿನಗಿಂತ ಉತ್ತಮನಾದ ಯಾರನ್ನು ಕರೆಯಲಿ?

ವರಂ ಸಮಾಶ್ರಿತಾ ಪತಿಂ ವ್ರಜೇತ ಯಾ ತತೋಽಧಮಮ್ ।
ನ ಕಾಚಿದಸ್ತಿ ನಿಷ್ಕೃತಿರ್ನ ಭರ್ತೃಲೋಕಮೃಚ್ಛತಿ ॥೨೪॥

'ಉತ್ತಮನಾದ ಪತಿಯನ್ನು ಹೊಂದಿದವಳು ಯಾರು ಅವನಿಗಿಂತ ಕಡಿಮೆಯವನನ್ನು ಸೇರುವಳೋ ಅವಳಿಗೆ ಪ್ರಾಯಶ್ಚಿತ್ತವೂ ಇಲ್ಲ. ಅವಳು ಪತಿಲೋಕವನ್ನು ಸೇರುವುದಿಲ್ಲ.

ಕೃತೇ ಪುರಾ ಸುರಾಸ್ತಥಾ ಸುರಾಂಗನಾಶ್ಚ ಕೇವಲಮ್ ।
ನಿಮಿತ್ತತೋಽಪಿ ತಾಃ ಕ್ವಚಿನ್ನ ತಾನ್ ವಿಹಾಯ ಮೇಮಿರೇ ॥೨೫॥

ಕೃತಯುಗದಲ್ಲಿ ಮೊದಲಿಗೆ ದೇವತಾ ಪುರುಷರು ಯಾವುದೇ ಕಾರಣದಿಂದ ಎಂದೂ ತಮ್ಮ ನಿಯತ ಸ್ತ್ರೀಯರನ್ನು ಬಿಟ್ಟು ಅನಿಯತರಾದ ಅನ್ಯಸ್ತ್ರೀಯರನ್ನು ರಮಿಸಿದುದಿಲ್ಲ. ಹಾಗೇ ದೇವತೆಗಳ ನಿಯತ ಸ್ತ್ರೀಯರೂ ಎಂದೂ ಯಾವ ಕಾರಣದಿಂದಲೂ ತಮ್ಮ ನಿಯತ ಪತಿಗಳನ್ನು ಬಿಟ್ಟು ಅನ್ಯ ಪುರುಷರನ್ನು ರಮಿಸಲಿಲ್ಲ.

ಮನೋವಚಃ ಶರೀರತೋ ಯತೋ ಹಿ ತಾಃ ಪತಿವ್ರತಾಃ ।
ಅನಾದಿಕಾಲತೋಽಭವಂಸ್ತತಃ ಸಭರ್ತೃಕಾಃ ಸದಾ ॥೨೬॥

ಆ ದೇವತಾಸ್ತ್ರೀಯರು ಅನಾದಿಕಾಲದಿಂದ ಮನೋ ವಾಕ್ ಕಾರ್ಯಗಳಲ್ಲಿ ಪತಿವ್ರತೆಯಾಗಿದ್ದರು. ಅದರಿಂದ ಅವರು ಸದಾ ಪತಿಯುಕ್ತರಾಗಿಯೆ ಇದ್ದರು.

ಸ್ವಭರ್ತೃಭಿರ್ವಿಮುಕ್ತಿಗಾಃ ಸಹೈವ ತಾ ಭವಂತಿ ಹಿ ।
ಕೃತಾಂತಮಾಪ್ಯ ಚಾಪ್ಸರಃಸ್ತ್ರಿಯೋ ಬಭೂವರೂರ್ಜಿತಾಃ ॥೨೭॥

ಅದರಿಂದ ದೇವತಾಸ್ತ್ರೀಯರು ಪತಿಗಳೊಂದಿಗೇ ಮುಕ್ತಿಹೊಂದುತ್ತಾರೆ. ಕೃತಯುಗ ಸಮಾಪ್ತಿ ಹೊಂದಿದಾಗ ಶ್ರೇಷ್ಠರಾದ ಅಪ್ಸರ ಸ್ತ್ರೀಯರು ಜನಿಸಿದರು.

ಅನಾವೃತಾಶ್ಚ ತಾಸ್ತಥಾ ಯಥೇಷ್ಟಭರ್ತೃಕಾಃ ಸದಾ ।
ಅತಸ್ತು ತಾ ನ ಭರ್ತೃಭಿರ್ವಿಮುಕ್ತಿಮಾಪುರುತ್ತಮಾಮ್ ॥೨೮॥

ಅಪ್ಸರೆಯರು ಯಾರಿಂದಲೂ ಪತ್ನಿಯರಾಗಿ ವರಿಸಲ್ಪಡುವರು. ಸದಾ ತಮ್ಮಿಚ್ಛೆಯಂತೆ ಯಾರನ್ನಾದರೂ ಪತ್ನಿಗಳನ್ನಾಗಿ ಸ್ವೀಕರಿಸುವವರು. ಅದರಿಂದ ಅವರು ನಿಯತ ಪತಿಗಳೊಂದಿಗೆ ಮುಕ್ತಿಯನ್ನು ಹೊಂದುವುದಿಲ್ಲ.

ಸುರಸ್ತ್ರಿಯೋಽತಿಕಾರಣೈರ್ಯದಾನ್ಯಥಾ ಸ್ಥಿತಾಸ್ತದಾ ।
ದುರನ್ವಯಾ ಸುದುಸ್ಸಹಾ ವಿಪತ್ ತತೋ ಭವಿಷ್ಯತಿ ॥೨೯॥

ನಿಯತ ಪತಿಗಳುಳ್ಳ ದೇವತಾಸ್ತ್ರೀಯರು ಯಾವುದೇ ಪ್ರಬಲ ಕಾರಣಗಳಿಂದ ಪರಪುರುಷ ಸಂಗದಲ್ಲಿದ್ದರೂ ಅದರ ಫಲವಾಗಿ ದುಃಖದಾಯಕ ಅಸಹನೀಯ ವಿಪತ್ತು ಬರುತ್ತದೆ.

ಅಯುಕ್ತಮುಕ್ತಮಾಂಸ್ತತೋ ಭವಾಂಸ್ತಥಾಪಿ ತೇ ವಚಃ ।
ಅಲಂಘ್ಯಮೇವ ಮೇ ತತೋ ವದಸ್ವ ಪುತ್ರದಂ ಸುರಮ್ ॥೩೦॥

ಅದರಿಂದ ನೀನು ಅಯುಕ್ತವಾದ ಮಾತನ್ನಾಡಿರುವೆ. ಆದರೂ ನಿನ್ನ ಮಾತು ನನಗೆ ಅನುಲ್ಲಂಘನೀಯ. ಅದರಿಂದ ನನಗೆ ಪುತ್ರನನ್ನು ನೀಡಬೇಕಾದ ದೇವತೆ ಯಾರು ಹೇಳು'.

★ ★ ★ ★

ನೂರಹದಿಮೂರನೆಯ ಅಧ್ಯಾಯ

(ಗಾಂಧಾರಿಯ ಗರ್ಭಧಾರಣೆ, ಪಾಂಡುವಿಗೆ ಪುತ್ರಚಿಂತೆ, ಕುಂತಿಯಿಂದ ಪಾಂಡುವನ್ನು ಕುರಿತು ವ್ಯುಷಿತಾಶ್ವಚರಿತ ನಿರೂಪಣೆ.)

ವೈಶಂಪಾಯನಃ

ತತಃ ಪುತ್ರಶತಂ ಜಜ್ಞೇ ಗಾಂಧಾರ್ಯಾಂ ಜನಮೇಜಯ ।
ಧೃತರಾಷ್ಟ್ರಸ್ಯ ವೈಶ್ಯಾಯಾಮೇಕಶ್ಚೈವ ಶತಾತ್ ಪರಃ ॥೧॥

ಎಲೈ ಜನಮೇಜಯನೇ, ಅನಂತರ ಧೃತರಾಷ್ಟ್ರನಿಗೆ ಗಾಂಧಾರಿಯಲ್ಲಿ ನೂರು ಪುತ್ರರೂ, ವೈಶ್ಯಪತ್ನಿಯಲ್ಲಿ ಒಬ್ಬ ಪುತ್ರನೂ ಜನಿಸಿದರು.

ಕಥಂಚಿತ್ ಸದೃಶೀಂ ಭಾರ್ಯಾಂ ಗಾಂಧಾರೀಃ ಧರ್ಮಚಾರಿಣೀಮ್।
ವರ್ತಮಾನಂ ಪ್ರಿಯೇಷ್ವೇವ ಧೃತರಾಷ್ಟ್ರೋಽನ್ವವರ್ತತ ॥೨॥

ಧೃತರಾಷ್ಟ್ರನು ತನಗೆ ಹೇಗೋ ಸದೃಶಳಾದ, ಯಾವಾಗಲೂ ಪ್ರಿಯವನ್ನೇ ಉಂಟು ಮಾಡುವ ಧರ್ಮಚಾರಿಣಿಯಾದ ಗಾಂಧಾರಿಯನ್ನು ಅನುಸರಿಸಿದನು.

ಪಾಂಡೋಃ ಕುಂತ್ಯಾಂ ಚ ಮಾದ್ರ್ಯಾಂ ಚ ಪಂಚ ಪುತ್ರಾ ಮಹಾರಥಾಃ ।
ಸಮಪದ್ಯಂತ ದೇವೇಭ್ಯಃ ಸಂತಾನಾಯ ಕುಲಸ್ಯ ಚ ॥೩॥

ಪಾಂಡುವಿಗೆ ಕುಂತಿಯಲ್ಲಿ ಮತ್ತು ಮಾದ್ರಿಯಲ್ಲಿ ಸೇರಿ ಕುಲದ ಸಂತಾನಾಭಿವೃದ್ಧಿಗೋಸ್ಕರವಾಗಿ ದೇವತೆಗಳಿಂದ ಐದು ಪುತ್ರರು ಜನಿಸಿದರು.

ಜನಮೇಜಯಃ

ಕಥಂ ಪುತ್ರಶತಂ ಜಜ್ಞೇ ಗಾಂಧಾರ್ಯಾ ದ್ವಿಜಸತ್ತಮ ।
ಕಿಯತಾ ವಾಪಿ ಕಾಲೇನ ತೇಷಾಮಾಯುಶ್ಚ ಕಿಂ ಪರಮ್ ॥೪॥

ಬ್ರಾಹ್ಮಣಶ್ರೇಷ್ಠರೇ, ಗಾಂಧಾರಿಗೆ ಹೇಗೆ ನೂರು ಪುತ್ರರು ಜನಿಸಿದರು? ಅದಕ್ಕೆ ಎಷ್ಟು ಕಾಲವು ಹಿಡಿಯಿತು, ಆ ಪುತ್ರರ ಆಯುಸ್ಸಿನ ಪ್ರಮಾಣವೇನು?

ಕಥಂ ಚ ಶಪ್ತಸ್ಯ ತತಃ ಪಾಂಡೋಸ್ತೇನ ಮಹಾತ್ಮನಾ ।
ಸಮುತ್ಪನ್ನಾ ದೈವತೇಭ್ಯಃ ಪಂಚ ಪುತ್ರಾ ಮಹಾಯಶಾಃ ॥೫॥

ಮಹಾತ್ಮರಾದ ಕಿಂದಮರ ಶಾಪಕ್ಕೆ ಒಳಗಾಗಿದ್ದ ಪಾಂಡುವಿಗೆ ಮಹಾಕೀರ್ತಿವಂತರಾದ ಐದು ಪುತ್ರರು ದೇವತೆಗಳಿಂದ ಹೇಗೆ ಜನಿಸಿದರುಃ

ಏತತ್ ಸರ್ವಂ ಯಥಾವೃತ್ತಂ ವಿಸ್ತರೇಣ ತಪೋಧನ ।
ಕಥಯ ತ್ವಂ ನ ಮೇ ತೃಪ್ತಿಃ ಕಥ್ಯಮಾನೇಷು ಬಂಧುಷು ॥೬॥

ಎಲೈ ತಪೋಧನರೇ, ಈ ಎಲ್ಲ ವಿಷಯಗಳನ್ನು ನನಗೆ ವಿಸ್ತಾರವಾಗಿ ಹೇಳಿ. ನನ್ನ ಬಂಧುಗಳ ಕಥೆಯನ್ನು ಎಷ್ಟು ಕೇಳಿದರೂ ನನಗೆ ತೃಪ್ತಿಯಿಲ್ಲ.

ಕಥಂ ಚಾಪಿ ಸ ವೈಶ್ಯಾಯಾಮೇಕಶ್ಚೈವ ಶತಾತ್ ಪರಃ ।
ಕಥಂ ಚ ಸದೃಶೀಂ ಭಾರ್ಯಾಂ ಗಾಂಧಾರೀಂ ಧರ್ಮಚಾರಿಣೀಮ್।
ವರ್ತಮಾನಾಂ ಪ್ರಿಯೇಷ್ವೇವ ಧೃತರಾಷ್ಟ್ರೋಽನ್ವವರ್ತತ ॥೭॥

ಧೃತರಾಷ್ಟ್ರನಿಗೆ ವೈಶ್ಯ ಸ್ತ್ರೀಯಲ್ಲಿ ನೂರೊಂದನೆಯ ಮಗ ಹೇಗೆ ಜನಿಸಿದನು? ತನಗೆ ಸದೃಶಳಾದ ತನ್ನ ಪ್ರಿಯದಲ್ಲಿಯೇ ಆಸಕ್ತಳಾದ ಧರ್ಮಚಾರಿಣಿಯಾದ ಗಾಂಧಾರಿಯನ್ನು ಧೃತರಾಷ್ಟ್ರನು ಹೇಗೆ ಅನುಸರಿಸಿದನು?

ವೈಶಂಪಾಯನಃ

ತೃಷಿತಂ ಬುಭುಕ್ಷಿತಂ ಶ್ರಾಂತಂ ದ್ವೈಪಾಯನಮುಪಸ್ಥಿತಮ್ ।
ತೋಷಯಾಮಾಸ ಗಾಂಧಾರೀ ಸ ತು ತಸ್ಯೈ ವರಂ ದದೌ ॥೮॥

ಒಮ್ಮೆ ಹಸಿವು ಬಾಯಾರಿಕೆಗಳಿಂದ ಬಳಲಿ ಮನೆಗೆ ಬಂದ ಶ್ರಾಂತರಾದ ವ್ಯಾಸರನ್ನು ಗಾಂಧಾರಿಯು ಉಪಚರಿಸಿ ಸಂತೋಷಪಡಿಸಿದಳು. ಅವರು ಅವಳಿಗೆ ಒಂದು ವರವನ್ನು ಕೊಟ್ಟರು.

ಸಾ ವವ್ರೇ ಸತತಂ ಭರ್ತುಃ ಪುತ್ರಾಣಾಂ ಶತಮಾತ್ಮನಃ ।
ತತಃ ಕಾಲೇನ ಸಾ ಗರ್ಭಮಗೃಹ್ಣಾದ್ ಜ್ಞಾನಚಕ್ಷುಷಃ ॥೯॥

ಅವಳು ಸತತವಾದ ಪತಿಯ ಪ್ರೀತಿಯನ್ನು ಮತ್ತು ತನ್ನ ಪತಿಯಿಂದ ನೂರು ಮಕ್ಕಳನ್ನು ಪಡೆಯುವುದನ್ನು ವರವನ್ನಾಗಿ ಬೇಡಿದಳು. ಅನಂತರ ಕಾಲಕ್ರಮದಲ್ಲಿ ಪ್ರಜ್ಞಾಚಕ್ಷುವಾದ ಧೃತರಾಷ್ಟ್ರನಿಂದ ಅವಳು ಗರ್ಭವನ್ನು ಧರಿಸಿದಳು.

ಗಾಂಧಾರ್ಯಾಮಾಹಿತೇ ಗರ್ಭೇ ಪಾಂಡುರಂಬಾಲಿಕಾಸುತಃ ।
ಅಗಚ್ಛತ್ ಪರಮಂ ದುಃಖಮಪತ್ಯಾರ್ಥಮರಿಂದಮ ॥೧೦॥

ಎಲೈ ಅರಿಂದಮನೇ, ಗಾಂಧಾರಿಯು ಗರ್ಭಿಣಿಯಾಗುತ್ತಿರಲು ಅಂಬಾಲಿಕೆಯ ಪುತ್ರನಾದ ಪಾಂಡುವು ತನ್ನ ಪುತ್ರರ ಸಲುವಾಗಿ ಬಹಳ ದುಃಖಿಪಟ್ಟನು.

ಗರ್ಭಿಣ್ಯಾಮಥ ಗಾಂಧಾರ್ಯಾಂ ಪಾಂಡುಃ ಪರಮದುಃಖಿತಃ ।
ಮೃಗಾಭಿಶಾಪಾದಾತ್ಮಾನಂ ಶೋಚನ್ನುಪಹತಕ್ರಿಯಃ ॥೧೧॥

ಸ ಗತ್ವಾ ತಪಸಾ ಸಿದ್ಧಿಂ ವಿಶ್ವಾಮಿತ್ರೋ ಯಥಾ ಭುವಿ ।
ದೇಹನ್ಯಾಸೇ ಕೃತಮನಾ ಇದಂ ವಚನಮಬ್ರವೀತ್ ॥೧೨॥

ಗಾಂಧಾರಿಯು ಗರ್ಭಿಣಿಯಾಗುತ್ತಿರಲು ಪಾಂಡುವು ಪರಮ ದುಃಖಿತನಾಗಿ ಮೃಗರೂಪದಲ್ಲಿದ್ದ ಕಿಂದಮರ ಶಾಪದಿಂದ ಮೈಥುನ ಕ್ರಿಯೆಯಿಂದ ನಿವೃತ್ತನಾಗಿ ಭೂಮಿಯಲ್ಲಿ ವಿಶ್ವಾಮಿತ್ರರಂತೆ ತಪಸ್ಸನ್ನು ಮಾಡಿ ತಪಸ್ಸಿನ ಸಿದ್ಧಿಯನ್ನು ಪಡೆದು ದೇಹತ್ಯಾಗ ಮಾಡುವುದಕ್ಕೆ ನಿಶ್ಚಯಿಸಿ ಈ ಮಾತುಗಳನ್ನು ಆಡಿದನು.

ಪಾಂಡುಃ

ಚತುರ್ಭಿರ್ಋಣವಾನಿತ್ಥಂ ಜಾಯತೇ ಮನುಜೋ ಭುವಿ ।
ಪಿತೃದೇವಮನುಷ್ಯಾಣಾಮೃಷೀಣಾಮಥ ಭಾರತ ॥೧೩॥

ಎಲೈ ಭಾರತನೇ, ಮನುಷ್ಯನು ಭೂಮಿಯಲ್ಲಿ ಪಿತೃಋಣ, ದೇವಋಣ, ಮನುಷ್ಯಋಣ ಮತ್ತು ಋಷಿಋಣ ಎಂಬ ನಾಲ್ಕು ಋಣಗಳನ್ನು ತೆಗೆದುಕೊಂಡು ಜನಿಸುತ್ತಾನೆ.

ಏತೇಭ್ಯಸ್ತು ಯಥಾಕಾಲಂ ಯೋ ನ ಮುಚ್ಯೇತ ಧರ್ಮವಿತ್ ।
ನ ತಸ್ಯ ಲೋಕಾಃ ಸಂತೀತಿ ತಥಾ ಲೋಕವಿದೋ ವಿದುಃ ॥೧೪॥

ಕಾಲಕ್ರಮದಲ್ಲಿ ಧರ್ಮಜ್ಞನಾದ ಯಾವನು ಈ ನಾಲ್ಕು ಋಣಗಳಿಂದ ನಿರ್ಮುಕ್ತನಾಗುವುದಿಲ್ಲವೋ ಅವನಿಗೆ ಪರಲೋಕ- ವಿಲ್ಲವೆಂದು ಲೋಕಗಳನ್ನು ತಿಳಿದವರು ಹೇಳುತ್ತಾರೆ.

ಯಜ್ಞೇನ ದೇವಾನ್ ಪ್ರೀಣಾತಿ ಸ್ವಾಧ್ಯಾಯೈಸ್ತಪಸಾ ಋಷೀನ್ ।
ಪುತ್ರೈಃ ಶ್ರಾದ್ಧೈರಪಿ ಪಿತೄನಾನೃಶಂಸ್ಯೇನ ಮಾನುಷಾನ್ ॥೧೫॥

ಯಜ್ಞದಿಂದ ದೇವತೆಗಳನ್ನು ಸಂತೋಷಪಡಿಸಿ ದೇವಋಣವನ್ನು ತೀರಿಸಬೇಕು. ಸ್ವಾಧ್ಯಾಯ ಮತ್ತು ತಪಸ್ಸುಗಳನ್ನು ಮಾಡಿ ಋಷಿಋಣದಿಂದ ಮುಕ್ತನಾಗಬೇಕು. ಮಧುರವಾದ ಮಾತುಗಳನ್ನಾಡುವುದರಿಂದ ಮನುಷ್ಯಋಣದಿಂದ ಮುಕ್ತನಾಗುತ್ತಾನೆ. ಪುತ್ರರನ್ನು ಪಡೆಯುವುದರಿಂದ ಮತ್ತು ಶ್ರಾದ್ಧವನ್ನು ಮಾಡುವುದರಿಂದ ಪಿತೃಋಣದಿಂದ ಮುಕ್ತನಾಗುತ್ತಾನೆ.

ಋಷಿದೇವಮನುಷ್ಯಾಣಾಮತಿಮುಕ್ತೋಽಸ್ಮಿ ಸರ್ವದಾ ।
ನ ಪಿತೄಣಾಂ ಚ ಮುಕ್ತೋಽಸ್ಮಿ ತಚ್ಚ ತೇಭ್ಯೋ ವಿಶಿಷ್ಯತೇ ॥೧೬॥

ನಾನು ಋಷಿಋಣದಿಂದ, ದೇವಋಣದಿಂದ ಮತ್ತು ಮನುಷ್ಯಋಣದಿಂದ ಯಾವಾಗಲೂ ಮುಕ್ತನಾಗಿದ್ದೇನೆ. ಆದರೆ ಪಿತೃಋಣದಿಂದ ಮುಕ್ತನಾಗಿಲ್ಲ. ಪಿತೃಋಣವು ಉಳಿದ ಮೂರು ಋಣಗಳಿಗಿಂತ ದೊಡ್ಡದಾದುದು.

ದೇಹನಾಶೇ ಧ್ರುವೋ ನಾಶಃ ಪಿತೄಣಾಮಥ ನಿಶ್ಚಯಃ ।
ಇತರೇಷಾಂ ತ್ರಯಾಣಾಂ ತು ನಾಶೇ ಹ್ಯಾತ್ಮಾ ವಿನಶ್ಯತಿ ॥೧೭॥

ಪಿತೄಣಾಮೃಣನಾಶಾದ್ಧಿ ಸಪ್ರಜೋ ನಾಶಮೃಚ್ಛತಿ ।
ಇಹ ತಸ್ಮಾತ್ ಪ್ರಜಾಲಾಭೇ ಪ್ರಯತಂತೇ ದ್ವಿಜೋತ್ತಮಾಃ ॥೧೮॥

ರಾಜನಾದವನು ಯಜ್ಞವನ್ನು ತಪಸ್ಸನ್ನು ಮತ್ತು ಮಧುರ ವಚನವನ್ನು ಆಡದಿದ್ದರೇ ತಾನೇ ನಾಶವನ್ನು ಹೊಂದುತ್ತಾನೆ. ಆದರೆ ದೇವತೆಗಳಿಗೆ, ಋಷಿಗಳಿಗೆ ಮತ್ತು ಮನುಷ್ಯರಿಗೆ ಹಾನಿಯಾಗುವುದಿಲ್ಲ. ಏಕೆಂದರೆ, ಬೇರೆಯವರು ಯಜ್ಞದಿಂದ ದೇವತೆಗಳನ್ನು, ತಪಸ್ಸಿನಿಂದ ಋಷಿಗಳನ್ನು, ಮಧುರ ವಚನಗಳಿಂದ ಮನುಷ್ಯರನ್ನು ಸಂತೋಷಪಡಿಸಿ ತಾವು ಋಣಮುಕ್ತರಾಗುತ್ತಾರೆ. ತನ್ನ ದೇಹವು ನಾಶವನ್ನು ಹೊಂದಿದರೆ ದೇಹನಾಶಕ್ಕಿಂತ ಮುಂಚೆ ಪುತ್ರನನ್ನು ಪಡೆದಿದ್ದರೆ, ಶ್ರಾದ್ಧಾದಿಗಳನ್ನು ಮಾಡುವ ಪುತ್ರನಿರುವುದರಿಂದ ಪಿತೃಗಳಿಗೆ ಹಾನಿಯಾಗುವುದಿಲ್ಲ. ಆದರೆ, ಪುತ್ರನನ್ನು ಪಡೆಯದಿದ್ದರೆ ಪಿತೃಗಳಿಗೆ ಪಿಂಡದಾನವನ್ನು ಮಾಡುವವರು ಯಾರೂ ಇಲ್ಲವಾದ್ದರಿಂದ ಪಿತೃಗಳ ನಾಶವೂ, ಆ ಕಾರಣದಿಂದ ತನ್ನ ನಾಶವೂ, ಮತ್ತೆ ಮುಂದೆ ಉಂಟಾಗುವ ಪ್ರಜೆಗಳ ನಾಶವೂ ಆಗುತ್ತದೆ. ಆದ್ದರಿಂದ ಬ್ರಾಹ್ಮಣ ಶ್ರೇಷ್ಠರಾದವರೂ ಭೂಮಿಯಲ್ಲಿ ಪುತ್ರರನ್ನು ಪಡೆಯಲು ಪ್ರಯತ್ನಮಾಡುತ್ತಾರೆ.

ಯಥೈವಾಹಂ ಪಿತುಃ ಕ್ಷೇತ್ರೇ ಸೃಷ್ಟಸ್ತೇನ ಮಹಾತ್ಮನಾ ।
ತಥೈವಾಸ್ಮಿನ್ ಮಮ ಕ್ಷೇತ್ರೇ ಕಥಂ ಸೃಜ್ಯೇತ ವೈ ಪ್ರಜಾಃ ॥೧೯॥

ಹೇಗೆ ನಾನು ತಂದೆಯ ಕ್ಷೇತ್ರದಲ್ಲಿ ಮಹಾತ್ಮರಾದ ವ್ಯಾಸರಿಂದ ಜನಿಸಿದೆನೋ ಹಾಗೆ ನನ್ನ ಕ್ಷೇತ್ರದಲ್ಲಿ ಹೇಗೆ ಪುತ್ರರು ಉಂಟಾಗುವರೋ ಎಂದು ಯೋಚಿಸುತ್ತಿದ್ದೇನೆ.

ವೈಶಂಪಾಯನಃ

ಸ ಸಮಾನೀಯ ಕುಂತೀಂ ಚ ಮಾದ್ರೀಂ ಚ ಭರತರ್ಷಭಃ ।
ಆಚಷ್ಟ ಪುತ್ರಲಾಭಸ್ಯ ವ್ಯುಷ್ಟಿಂ ಸರ್ವಕ್ರಿಯಾಧಿಕಾಮ್ ॥೨೦॥

ಭರತರ್ಷಭನಾದ ಪಾಂಡುವು ಕುಂತಿ ಮತ್ತು ಮಾದ್ರಿಯರನ್ನು ಕರೆದು ಸರ್ವಕ್ರಿಯಾಧಿಕವಾದ ಒಂದು ಉಪಾಯವನ್ನು ಹೇಳಿದನು.

ಉತ್ತಮಾದವರಾಃ ಪುಂಸಃ ಕಾಂಕ್ಷಂತೇ ಪುತ್ರಮಾಪದಿ ।
ಅಪತ್ಯಂ ಧರ್ಮಫಲದಂ ಶ್ರೇಷ್ಠಾದಿಚ್ಛಂತಿ ಸಾಧವಃ ॥೨೧॥

ಸಜ್ಜನರಾದವರು, ಆಪತ್ತು ಬಂದಾಗ ಉತ್ತಮರಿಂದ ಪುತ್ರರನ್ನು ಬಯಸುತ್ತಾರೆ. ಉತ್ತಮರಿಂದ ಪಡೆದ ಪುತ್ರನು ಎಲ್ಲಾ ಧರ್ಮಫಲವನ್ನು ಕೊಡುತ್ತಾನೆಂದು ಸಜ್ಜನರ ಅಭಿಪ್ರಾಯ.

ಅನುನೀಯ ತು ತೇ ಸಮ್ಯಙ್ ಮಹಾಬ್ರಾಹ್ಮಣಸಂಸದಿ ।
ಬ್ರಾಹ್ಮಣಂ ಗುಣವಂತಂ ವೈ ಚಿಂತಯಾಮಾಸ ಧರ್ಮವಿತ್ ॥೨೨॥

ಬ್ರಾಹ್ಮಣರ ದೊಡ್ಡಪರಿಷತ್ತಿನಲ್ಲಿ ಕುಂತಿ ಮತ್ತು ಮಾದ್ರಿಯರನ್ನು ಈ ವಿಷಯದಲ್ಲಿ ಚೆನ್ನಾಗಿ ಒಪ್ಪಿಸಿ ಗುಣವಂತನೂ, ಧರ್ಮಜ್ಞನೂ ಆದ ಬ್ರಾಹ್ಮಣನು ಯಾರು ದೊರೆಯಬಹುದು ಎಂದು ಅವನು ಚಿಂತಿಸಿದನು.

ಸೋಽಬ್ರವೀದ್ ವಿಜನೇ ಕುಂತೀಂ ಧರ್ಮಪತ್ನೀಂ ಯಶಸ್ವಿನೀಮ್ ।
ಅಪತ್ಯಸ್ಯ ಸುಸಂಯೋಗಮಾಪದಿ ಪ್ರಸಮೀಕ್ಷ್ಯ ಚ ॥೨೩॥

ಅವನು ಆಪತ್ತಿನಲ್ಲಿ ಪುತ್ರನನ್ನು ಪಡೆಯುವ ಉಪಾಯವನ್ನು ಚೆನ್ನಾಗಿ ಆಲೋಚಿಸಿ ಏಕಾಂತದಲ್ಲಿ ತನ್ನ ಧರ್ಮಪತ್ನಿಯಾದ ಕೀರ್ತಿವಂತಳಾದ ಕುಂತಿಯನ್ನು ಕುರಿತು ಮಾತನಾಡಿದನು.

ಪಾಂಡುಃ

ನಾನಪತ್ಯಸ್ಯ ಮೇ ಲೋಕೇ ಪ್ರತಿಷ್ಠಾ ಧರ್ಮಸಮ್ಮಿತಾ ।
ಇತಿ ಕುಂತಿ ವಿದುರ್ಧರ್ಮಂ ಶಾಶ್ವತಂ ಧರ್ಮಚಾರಿಣಃ ॥೨೪॥

ಕುಂತಿಯೇ, ಮಕ್ಕಳಿಲ್ಲದ ನನಗೆ ಪರಲೋಕದಲ್ಲಿ ಧರ್ಮಸಮ್ಮತವಾದ ಸ್ಥಿತಿ ಉಂಟಾಗುವುದಿಲ್ಲವೆಂದು ಶಾಶ್ವತವಾದ ಧರ್ಮವನ್ನು ತಿಳಿದ ಧರ್ಮಜ್ಞರು ಹೇಳುತ್ತಾರೆ.

ಮಕ್ಕಳಿಲ್ಲದವರಿಗೆ ಸದ್ಗತಿಯಾಗುವುದಿಲ್ಲವೆಂಬ ನಿಯಮವೇನೂ ಇಲ್ಲ. ಆದರೆ ಭೂಭಾರಹರಣ ರೂಪವಾದ ದೇವಕಾರ್ಯದಲ್ಲಿ ಸಹಾಯಕರಾಗುವ ದೇವತೆಗಳನ್ನು ಪಡೆಯುವುದಕ್ಕೋಸ್ಕರವೇ ಪಾಂಡುವು ಹುಟ್ಟಿರುವುದರಿಂದ ಅಂತಹ ಪುತ್ರರನ್ನು ಪಡೆಯದೆ ಅವನಿಗೆ ಸದ್ಗತಿಯಾಗುವುದಿಲ್ಲವೆಂದು ಋಷಿಗಳ ಅಭಿಪ್ರಾಯ.

ಇಷ್ಟಂ ದತ್ತಂ ತಪಸ್ತಪ್ತಂ ನಿಯಮಾಶ್ಚ ಸ್ವನುಷ್ಠಿತಾಃ ।
ಸರ್ವಮೇವಾನಪತ್ಯಸ್ಯ ಮೋಘಂ ಭವತಿ ನಿಶ್ಚಯಮ್ ॥೨೫॥

ನಾನು ಯಾಗಗಳನ್ನು ಮಾಡಿದೆ, ದಾನಗಳನ್ನು ಕೊಟ್ಟೆ, ತಪಸ್ಸನ್ನು ಮಾಡಿದೆ, ನಿಯಮಗಳನ್ನು ಚೆನ್ನಾಗಿ ಅನುಷ್ಠಾನ ಮಾಡಿದೆ. ಇವೆಲ್ಲವೂ ಸಹಾ ಅನಪತ್ಯನಾದ ಕಾರಣದಿಂದ ನನ್ನ ವಿಷಯದಲ್ಲಿ ವ್ಯರ್ಥವಾಗುತ್ತವೆ. ಇದು ನಿಶ್ಚಯ.

ಸೋಽಹಮೇವಂ ವ್ಯವಸಿತಃ ಪ್ರೇಕ್ಷ್ಯಾತ್ಮಾನಂ ನ ಸಂಕ್ಷಮೇ ।
ಅನಪತ್ಯೋ ಹಿ ಮರಣಂ ಕಾಮಯೇ ನೋತ ಜೀವಿತಮ್ ॥೨೬॥

ಈ ನಿರ್ಧಾರಕ್ಕೆ ಬಂದ ನಾನು, ನಾನು ಮಾಡಿದ ಅಪರಾಧಕ್ಕಾಗಿ ನನ್ನನ್ನೇ ಕ್ಷಮಿಸಿಕೊಳ್ಳುವುದಿಲ್ಲ. ಅನಪತ್ಯನಾದ ನಾನು ಮರಣವನ್ನು ಬಯಸುತ್ತೇನೆ. ಬದುಕಿರಲು ಇಷ್ಟವಿಲ್ಲ.

ಮೃಗಾಭಿಶಾಪಾಜ್ಜಾನಾಸಿ ವೃಜಿನೇ ಮಮ ಕೇವಲಮ್ ।
ನೃಶಂಸಂ ಕರ್ಮಣಾ ಕೃತ್ಸ್ನಂ ಯಥಾ ಹ್ಯುಪಗತಂ ತಥಾ ॥೨೭॥

ನನಗೆ ಮೃಗರೂಪದಲ್ಲಿದ್ದ ಕಿಂದಮರ ಶಾಪದಿಂದ ಉಂಟಾಗಿರುವ ದೋಷವನ್ನು ನೀವೇ ತಿಳಿದಿದ್ದೀರಿ. ಈ ಕ್ರೂರಕರ್ಮವು ಹೇಗೆ ಉಂಟಾಯಿತು, ಅದರ ಫಲವೇನು ಎಂಬುದು ನಿಮಗೆ ತಿಳಿದ ವಿಷಯ.

ಷಡೇವ ಬಂಧುದಾಯಾದಾಃ ಪುತ್ರಾಃ ಸದ್ಧರ್ಮಚಾರಿಣಃ ।
ಷಡೇವಾಬಂಧುದಾಯಾದಾಃ ನಿರ್ದಿಷ್ಟಾಸ್ತಾನ್ ಶೃಣು ಪ್ರಿಯೇ ॥

ಸ್ವಯಂಜಾತಃ ಕ್ಷೇತ್ರಿಕಶ್ಚ ಪರಿಕ್ರೀತಶ್ಚ ಯಃ ಸುತಃ ।
ಪೌನರ್ಭವೇಯಃ ಕಾನೀನೋ ಸ್ವೈರಿಣ್ಯಾ ಯಶ್ಚ ಜಾಯತೇ ॥೨೯॥

ದತ್ತಃ ಕ್ರೀತೋ ಗರ್ಹಿತಶ್ಚ ಉಪಯಚ್ಛೇತ್ ಸ್ವಯಂ ಚ ಯಃ ।
ಸಹೋಢಾಜಾತರೇತಾಶ್ಚ ಹೀನಯೋನಿಧೃತಶ್ಚ ಯಃ ॥೩೦॥

ಪ್ರಿಯೆಯೇ, ಸದ್ಧರ್ಮಚಾರಿಗಳಾದ ಬಂಧುದಾಯಾದರು ಆರು ಮಕ್ಕಳು. ಬಂಧುದಾಯಾದರಲ್ಲದವರು ಆರು ಮಕ್ಕಳು. ಇದನ್ನು ವಿವರವಾಗಿ ಹೇಳುತ್ತೇನೆ ಕೇಳು. ಸ್ವಯಂ ಜಾತಃ ಎಂದರೆ ತನಗೆ ತನ್ನ ಧರ್ಮಪತ್ನಿಯಲ್ಲಿ ಹುಟ್ಟಿದ ಮಗ. ಕ್ಷೇತ್ರಿಕ ಎಂದರೆ ತನ್ನ ಧರ್ಮಪತ್ನಿಯಲ್ಲಿ ಪತಿಯ ಅನುಮತಿಯಂತೆ ಶ್ರೇಷ್ಠರಾದ ದೇವತೆಗಳಿಂದ ಅಥವಾ ಋಷಿಗಳಿಂದ ಹುಟ್ಟಿದ ಪುತ್ರ. ಪರಿಕ್ರೀತ ಎಂದರೆ ತಂದೆ, ತಾಯಿ, ಅಣ್ಣ ತಮ್ಮಂದಿರನ್ನು ಕಳೆದುಕೊಂಡು ಅವನ ದೂರದ ಬಂಧುಗಳಿಂದ ಕ್ರಯಕ್ಕೆ ತೆಗೆದುಕೊಂಡ ಪುತ್ರ. ದತ್ತ ಎಂದರೆ ವಿಧಿಪೂರ್ವಕವಾಗಿ ತನ್ನ ಪುತ್ರನೆಂದು ಸ್ವೀಕರಿಸಿದ ಪುತ್ರ. ಕ್ರೀತ ಎಂದರೆ ಶುನಶ್ಶೇಪಾದಿಗಳಂತೆ ತಾನೇ ಕೇಳಿ, ಹಣವನ್ನು ಕೊಟ್ಟು ಕ್ರಯಮಾಡಿ ತೆಗೆದುಕೊಂಡ ಪುತ್ರ. ಸ್ವಯಂ ಉಪಯಾತ ಎಂದರೆ ಯಾವ ಬಾಲಕನು ತನ್ನ ಎಲ್ಲಾ ರಕ್ಷಕರನ್ನೂ

ಕಳೆದುಕೊಂಡು ಅನಾಥನಾಗಿ ಇನ್ನೊಬ್ಬನ ಬಳಿಗೆ ಹೋಗಿ ನೀನು ಮಗನಂತೆ ನನ್ನನ್ನು ರಕ್ಷಿಸು ಎಂದು ಕೇಳಿಕೊಂಡಾಗ ಸ್ವೀಕರಿಸಿದ ಪುತ್ರ. ಇವರೆಲ್ಲರೂ ಬಂಧುದಾಯಾದ-ಪುತ್ರರೆಂದು ಕರೆಸಿಕೊಳ್ಳುತ್ತಾರೆ. ಬಂಧುದಾಯಾದರೆಂದರೆ ತಂದೆಯ ಆಸ್ತಿಯಲ್ಲಿ ಪಾಲುದಾರರು ಮತ್ತು ಬಂಧುತ್ವಯೋಗ್ಯರು ಎಂದು ಅರ್ಥ. ಪೌನರ್ಭವೇಯ ಎಂದರೆ ಪತಿಯಿದ್ದಾಗ ಪತಿಯಿಂದ ಗರ್ಭಿಣಿಯಾಗಿ ಪತಿಯನ್ನು ಕಳೆದುಕೊಂಡ ಮೇಲೆ ವಿಧವೆಯಲ್ಲಿ ಹುಟ್ಟಿದ ಮಗ. ಕಾನೀನ ಎಂದರೆ ವಿವಾಹವಾಗುವುದಕ್ಕಿಂತ ಮುಂಚೆ ಹುಟ್ಟಿದ ಪುತ್ರ. ಪತಿ ಇರುವಾಗಲೇ ವ್ಯಭಿಚಾರಿಣಿಯಾದ ಅವನ ಪತ್ನಿಯಲ್ಲಿ ಇನ್ನೊಬ್ಬನಿಂದ ಹುಟ್ಟಿದ ಪುತ್ರ ಕುಂಡ. ಇವನನ್ನು 'ಸ್ವೈರಿಣೀಜಾತ' ಎಂದು ಕರೆಯುತ್ತಾರೆ. ಗರ್ಹಿತ ಎಂದರೆ ತನಗೆ ತನ್ನ ಧರ್ಮಪತ್ನಿಯಲ್ಲಿ ಹುಟ್ಟಿದವನಾದರೂ, ದುಷ್ಕರ್ಮದಿಂದ ಜಾತಿಭ್ರಷ್ಟನಾದವನು. 'ಸಹೋಢಾಜಾತರೇತ' ಎಂದರೆ ಒಂದು ವಿವಾಹ ಮಂಟಪದಲ್ಲಿ ನೂರಾರು ವಿವಾಹಗಳಾಗುವಾಗ ಮಂಟಪದಾಹ ನಿಮಿತ್ತದಿಂದ ಎಲ್ಲವೂ ಅಸ್ತವ್ಯಸ್ತವಾಗಿ, ಅರ್ಧವಿವಾಹ ಕ್ರಿಯೆ ನಡೆದು, ತನ್ನ ಸಂಕಲ್ಪಿಸಿದ ಪತ್ನಿಯನ್ನು ಬಿಟ್ಟು, ಭ್ರಾಂತಿಯಿಂದ ಇನ್ನೊಬ್ಬಳನ್ನು ಮದುವೆ ಮಾಡಿಕೊಂಡು ಅವಳಲ್ಲಿ ಹುಟ್ಟಿದ ಪುತ್ರ. 'ಹೀನಯೋನಿಧೃತ' ಎಂದರೆ ಬ್ರಾಹ್ಮಣನಾದವನಿಗೆ ಶೂದ್ರಾದಿ ಯೋನಿಯಲ್ಲಿ ಜನಿಸಿದ ಪುತ್ರ. ಈ ಆರು ಪುತ್ರರು ಅಬಂಧುದಾಯಾದರು ಎಂದು ಕರೆಸಿಕೊಳ್ಳುತ್ತಾರೆ ಎಂದರೆ ಇವರೆಲ್ಲರೂ ತಂದೆಯ ಆಸ್ತಿಗೆ ಪಾಲುದಾರರು ಆದರೆ ಬಂಧುತ್ವಕ್ಕೆ ಯೋಗ್ಯರಲ್ಲ ಎಂದು ಅರ್ಥ. ಮೇಲಿನ ಶ್ಲೋಕಗಳಲ್ಲಿ ಕ್ರಮವನ್ನು ಪರಿಗಣಿಸದೆ, ಎರಡು ರೀತಿಯ ಪುತ್ರರನ್ನು ಮಿಶ್ರಣ ಮಾಡಿ ನಿರೂಪಿಸಿದ್ದಾರೆ.

ಪೂರ್ವಪೂರ್ವಮಸಂಭಾವಂ ಮತ್ವಾ ಲಿಪ್ಸೇತ ವೈ ಸುತಮ್ ।
ಉತ್ತಮಾದವರಂ ಜನ್ಮ ಕಾಂಕ್ಷಂತೇ ಧರ್ಮಚಾರಿಣಃ ॥೩೧॥

ಈ ಆರು ಬಂಧುದಾಯಾದಿಗಳಲ್ಲಿ, ಪೂರ್ವಪೂರ್ವಸುತನು ದೊರೆಯದಿದ್ದರೆ, ಉತ್ತರೋತ್ತರಸುತನನ್ನು ಪಡೆಯಲು ಪ್ರಯತ್ನಿಸಬೇಕು. ಧರ್ಮಚಾರಿಗಳು ತನಗೆ ತನ್ನ ಧರ್ಮಪತ್ನಿಯಲ್ಲಿ ಪುತ್ರರಿಲ್ಲದಿದ್ದಾಗ, ಉತ್ತಮರಿಂದ ಪಡೆಯುವ ಕ್ಷೇತ್ರಿಕಪುತ್ರರನ್ನು ಬಯಸುತ್ತಾರೆ.

ಫಲಂ ಮಹದಪತ್ಯಸ್ಯ ತಸ್ಯ ಭೂತಿರನುಗ್ರಹಃ ।
ಆಪದ್ಯಪತ್ಯಜನನಂ ಮನುಃ ಸ್ವಾಯಂಭುವೋಽಬ್ರವೀತ್ ॥೩೨॥

ಮಕ್ಕಳನ್ನು ಪಡೆಯುವುದರ ಫಲ ಮಹತ್ತರವಾದುದು. ಅದರಿಂದ ಸರ್ವಸಂಪತ್ತು ಮತ್ತು ಮಹತ್ತರ ಅನುಗ್ರಹವು ಉಂಟಾಗುತ್ತದೆ. ಆಪತ್ತಿನಲ್ಲಿ ಹೀಗೆ ಮಕ್ಕಳನ್ನು ಪಡೆಯಬೇಕೆಂದು ಸ್ವಾಯಂಭುವ ಮನುವು ಹೇಳಿದ್ದಾನೆ.

ತಸ್ಮಾತ್ ತ್ವಾಂ ಪ್ರಹಿಣೋಮ್ಯದ್ಯ ಪ್ರಹೀಣಃ ಪ್ರಜಯಾ ಸ್ವಯಮ್ ।
ಕ್ಷತ್ರಿಯಾಚ್ಛ್ರೇಯಸೋ ವಾऽಪಿ ಸೂಷ್ವಾಪತ್ಯಂ ಯಶಸ್ವಿನಿ ॥೩೩॥

ಮಕ್ಕಳನ್ನು ಸ್ವಯಂ ಪಡೆಯಲು ಅಸಮರ್ಥನಾದ ನಾನು ನಿನ್ನನ್ನು ಆ ಕಾರಣದಿಂದ ಇನ್ನೊಬ್ಬರ ಬಳಿಗೆ ಕಳುಹಿಸುತ್ತಿದ್ದೇನೆ. ಯಶಸ್ವಿನಿಯೇ, ಬೇರೆ ಕ್ಷತ್ರಿಯರಿಂದಾಗಲೀ ಅಥವಾ ಅವರಿಗಿಂತ ದೊಡ್ಡವರಿಂದಾಗಲೀ ಮಕ್ಕಳನ್ನು ಪಡೆ. (ದೇವತೆಗಳು ತನ್ನಲ್ಲಿ ಪುತ್ರರಾಗಿ ಜನಿಸುವುದನ್ನು ತಿಳಿಯದೆ ಪಾಂಡು ಹೀಗೆ ಮಾತನಾಡುತ್ತಿದ್ದಾನೆ.)

ಯಾ ಹಿ ತೇ ಭಗಿನೀ ಸಾಧ್ವೀ ಶ್ರುತಸೇನಾ ಯಶಸ್ವಿನೀ ।
ಉವಾಹ ಯಾಂ ತು ಕೈಕೇಯಃ ಶಾರದಂಡಾಯನಿರ್ಮಹಾನ್ ॥೩೪॥

ನಿನ್ನ ತಂಗಿಯಾದ ಯಶಸ್ವಿನಿಯಾದ ಶ್ರುತಸೇನೆಯು ಶರದಂಡನ ಮಗನಾದ ಕೇಕಯ ರಾಜನನ್ನು ವಿವಾಹವಾದಳು.

ಸಾ ವೀರಪತ್ನೀಂ ಸ್ವಜನೈರ್ನಿಯುಕ್ತಾऽಪತ್ಯಕರ್ಮಣಿ ।
ಪುಷ್ಪೇಣ ಪ್ರಯತಾ ಸ್ನಾತಾ ನಿಶಿ ಕುಂತಿ ಚತುಷ್ಪಥೇ ॥೩೫॥

ಎಲೈ ಕುಂತಿಯೇ, ಆ ವೀರಪತ್ನಿಯು ಮಕ್ಕಳನ್ನು ಪಡೆಯಲೆಂದು ಸ್ವಜನರಿಂದ ನಿಯುಕ್ತಳಾಗಿ ಋತುಸ್ನಾತಳಾಗಿ ಚತುಷ್ಪಥ ಮಾರ್ಗದಲ್ಲಿ ರಾತ್ರಿಯ ವೇಳೆ ನಿರೀಕ್ಷಿಸಿದಳು.

ಅಪತ್ಯಾರ್ಥೇ ಪ್ರಜಾಲಾಭೇ ಅನ್ವಗಚ್ಛದ್ಭವ್ರತಾ ।
ವರಯಿತ್ವಾ ದ್ವಿಜಂ ದೇವೀ ಹುತೇ ಪುಂಸವನೇ ಪುರಾ ॥೩೬॥

ತನ್ನ ಮಗನನ್ನು ಪಡೆಯಲು ಒಬ್ಬ ಶ್ರೇಷ್ಠನಾದ ಬ್ರಾಹ್ಮಣನನ್ನು ಪ್ರಸನ್ನೀಕರಿಸಿಕೊಂಡು ಶುಭವ್ರತಳಾದ ಆ ದೇವಿಯು ಪುಂಸವನ ಹೋಮವನ್ನು ಮಾಡುತ್ತಿದ್ದ ಆ ಬ್ರಾಹ್ಮಣನನ್ನು ಹಿಂಬಾಲಿಸಿದಳು.

ಕರ್ಮಣ್ಯವಸಿತೇ ತಸ್ಮಿನ್ ಸಾ ತೇನೈವ ಸಹಾವಸತ್ ।
ಸಾ ತ್ರೀನ್ ವೀರಾನಜನಯದ್ ದುರ್ಜಯಾದೀನ್ ಮಹಾರಥಾನ್ ॥೩೭॥

ಆ ಬ್ರಾಹ್ಮಣನ ಪುಂಸವನ ಕರ್ಮವು ಮುಗಿಯುತ್ತಿರಲು ಅವಳು ಅವನ ಜೊತೆಯಲ್ಲೇ ವಾಸ ಮಾಡಿ ದುರ್ಜಯ ಮೊದಲಾದ ವೀರರೂ ಮತ್ತು ಮಹಾರಥರೂ ಆದ ಮೂರು ಮಕ್ಕಳನ್ನು ಪಡೆದಳು.

ತಥಾ ತ್ವಮಪಿ ಕಲ್ಯಾಣಿ ಬ್ರಾಹ್ಮಣಂ ತಪಸಾऽಧಿಕಮ್ ।
ಮನ್ನಿಯೋಗಾತ್ ಕುರು ಕ್ಷಿಪ್ರಮಪತ್ಯೋತ್ಪಾದನಂ ಮಹತ್ ॥೩೮॥

ಆದ್ದರಿಂದ ಎಲೌ ಕಲ್ಯಾಣಿಯೇ, ನೀನು ಸಹ ನನ್ನ ಆದೇಶದಂತೆ ತಪಸ್ಸಿನಿಂದ ಶ್ರೇಷ್ಠನಾಗಿರುವ ಒಬ್ಬ ಬ್ರಾಹ್ಮಣನನ್ನು ಒಪ್ಪಿಸಿ ಪುತ್ರರನ್ನು ಪಡೆಯುವ ಪ್ರಯತ್ನ ಮಾಡು.

ವೈಶಂಪಾಯನಃ

ಏವಮುಕ್ತಾ ಮಹಾರಾಜ ಕುಂತೀ ತಂ ಪ್ರತ್ಯಭಾಷತ ।
ಕುರೂಣಾಮೃಷಭಂ ವೀರಂ ತದಾ ಭೂಮಿಪತಿಂ ಪತಿಮ್ ॥೩೯॥

ಎಲೈ ಮಹಾರಾಜನೇ, ಹೀಗೆ ಹೇಳಲ್ಪಟ್ಟ ಕುಂತಿಯು ಕುರುಶ್ರೇಷ್ಠನಾದ, ವೀರನಾದ, ರಾಜನಾದ ತನ್ನ ಪತಿಯನ್ನು ಕುರಿತು ಮಾತನಾಡಿದಳು.

ಕುಂತೀ

ನ ಮಾಮರ್ಹಸಿ ಧರ್ಮಜ್ಞ ವಕ್ತುಮೇವಂ ಕಥಂಚನ ।
ಧರ್ಮಪತ್ನೀಮಭಿರತಾಂ ರಾಜನ್ ರಾಜೀವಲೋಚನ ॥೪೦॥

ಧರ್ಮಜ್ಞನೇ, ನನ್ನನ್ನು ಕುರಿತು ನೀನು ಎಂದೂ ಹೀಗೆ ಮಾತನಾಡಬಾರದು. ಎಲೈ ರಾಜೀವಲೋಚನನಾದ ರಾಜನೇ, ನಾನು ನಿನ್ನಲ್ಲೇ ಹೆಚ್ಚು ಆಸಕ್ತಳಾಗಿರುವ ನಿನ್ನ ಧರ್ಮಪತ್ನಿಯಷ್ಟೇ?

ತ್ವಮೇವ ಹಿ ಮಹಾಬಾಹೋ ಮಯ್ಯಪತ್ಯಾನಿ ಭಾರತ ।
ವೀರ ವೀರ್ಯೋಪಪನ್ನಾನಿ ಸಂಪಾದಯಿತುಮರ್ಹಸಿ ॥೪೧॥

ಎಲೈ ಭಾರತನೇ, ಎಲೈ ಮಹಾಬಾಹುವೇ, ಎಲೈ ವೀರನೇ, ನೀನೇ ನನ್ನಲ್ಲಿ ಪರಾಕ್ರಮಶಾಲಿಗಳಾದ ಮಕ್ಕಳನ್ನು ಪಡೆಯಲು ಸಮರ್ಥನಾಗಿದ್ದೀಯೆ.

ಸ್ವರ್ಗಂ ಮನುಜಶಾರ್ದೂಲ ಗಚ್ಛಾವೋ ವಾ ತವೇಪ್ಸಿತಮ್ ।
ಅಪತ್ಯಾಯ ಚ ಮಾಂ ಗಚ್ಛ ತ್ವಮೇವ ಕುರುಪುಂಗವ ॥೪೨॥

ಎಲೈ ಮನುಜಶಾರ್ದೂಲನೇ, ಎಲೈ ಕುರುಪುಂಗವನೇ, ಮಕ್ಕಳನ್ನು ಪಡೆಯುವ ಸಲುವಾಗಿ ನೀನು ನನ್ನ ಸಮಾಗಮವನ್ನು ಮಾಡು. ನಾವಿಬ್ಬರೂ ಜೊತೆಯಲ್ಲಿ ನಿನಗೆ ಇಷ್ಟವಾದ ಸ್ವರ್ಗಕ್ಕೆ ಹೋಗೋಣ.

ನಹ್ಯಾವಾಂ ಮನಸಾऽಪ್ಯನ್ಯಂ ಗಚ್ಛಾವ ಪುರುಷರ್ಷಭ ।
ತ್ವತ್ತಃ ಪ್ರತಿವಿಶಿಷ್ಟಃ ಸನ್ ಕೋ ಯೋನ್ಯೋ ಭುವಿ ಮಾನವಃ ॥೪೩॥

ಎಲೈ ಪುರುಷರ್ಷಭನೇ, ನಾನಾಗಲೀ ಅಥವಾ ಮಾದ್ರಿಯಾಗಲೀ, ಮನಸ್ಸಿನಲ್ಲಿಯೂ ಸಹ ಪರಪುರುಷನ ಸಂಗದ ಯೋಚನೆಯನ್ನು ಮಾಡುವುದಿಲ್ಲ. ಭೂಮಿಯಲ್ಲಿ ನಿನಗಿಂತ ಶ್ರೇಷ್ಠರಾದ ಮಾನವರು ಯಾರಿದ್ದಾರೆ.

ಇಮಾಂ ಧರ್ಮ್ಯಾಂ ಧರ್ಮ್ಯಕಥಾಂ ಮಮ ಚೈವ ನಿಬೋಧಯ ।
ಪೌರಾಣಕೀಂ ವಿಶಲಾಕ್ಷ ಕೀರ್ತಯಿಷ್ಯಾಮಿ ಭಾರತ ॥೪೪॥

ಎಲೈ ವಿಶಾಲಾಕ್ಷನಾದ ಭಾರತನೇ, ನಾನು ನಿನಗೆ ಒಂದು ಧರ್ಮಯುಕ್ತವಾದ ಧಾರ್ಮಿಕರ ಪೌರಾಣಕವಾದ ಕಥೆಯನ್ನು ಹೇಳುತ್ತೇನೆ. ಅದನ್ನು ಕೇಳು.

ವ್ಯುಷಿತಾಶ್ವ ಇತಿ ಖ್ಯಾತೋ ಬಭೂವ ಕಿಲ ಭಾರತ ।
ಪುರಾ ಪರಮಧರ್ಮಜ್ಞಃ ಪೂರೋರ್ವಂಶವಿವರ್ಧನಃ ॥೪೫॥

ಭಾರತನೇ, ಹಿಂದೆ ಪರಮ ಧರ್ಮಜ್ಞನಾದ ಪುರುವಂಶಧಾರಕನಾದ ವ್ಯುಷಿತಾಶ್ವ ಎಂಬ ಪ್ರಖ್ಯಾತನಾದ ರಾಜನಿದ್ದನು.

ತಸ್ಮಿಂಶ್ಚ ಯಜಮಾನೇ ವೈ ಧರ್ಮಾತ್ಮನಿ ಮಹಾತ್ಮನಿ ।
ಆಗಚ್ಛಂಸ್ತ್ರಿದಶಾಃ ಸರ್ವೇ ಸೇಂದ್ರಾಃ ಸರ್ವಮಹರ್ಷಿಭಿಃ ॥೪೬॥

ಆ ಧರ್ಮಾತ್ಮನೂ, ಮಹಾತ್ಮನೂ ಆದ ವ್ಯುಷಿತಾಶ್ವನು ಯಾಗಗಳನ್ನು ಮಾಡುತ್ತಿರಲು, ಇಂದ್ರ ಮೊದಲಾದ ಎಲ್ಲಾ ದೇವತೆಗಳೂ, ಎಲ್ಲಾ ಮಹರ್ಷಿಗಳು ಆ ಯಾಗಕ್ಕೆ ಬಂದರು.

ಅಮಾದ್ಯದಿಂದ್ರಃ ಸೋಮೇನ ತುತುಷುರ್ಗುರವೋ ಧನೈಃ ।
ವ್ಯುಷಿತಾಶ್ವಸ್ಯ ರಾಜರ್ಷೇಸ್ತದಾ ಯಜ್ಞೇ ಮಹಾತ್ಮನಃ ॥೪೭॥

ಮಹಾತ್ಮನಾದ ರಾಜರ್ಷಿಯಾದ ವ್ಯುಷಿತಾಶ್ವನ ಯಜ್ಞದಲ್ಲಿ ಇಂದ್ರನು ಸೋಮರಸಪಾನದಿಂದ ಸಂತೋಷಗೊಂಡನು. ಬ್ರಾಹ್ಮಣರು ಮತ್ತು ಪುರೋಹಿತ ವರ್ಗದವರು ದಕ್ಷಿಣೆಗಳಿಂದ ಸಂತೋಷಪಟ್ಟರು.

ವ್ಯುಷಿತಾಶ್ವೋ ಮನುಷ್ಯೇಂದ್ರಃ ಶುಶುಭೇ ಯಜ್ಞಸಂಪದಾ ।
ಸರ್ವಭೂತೇಷು ರಾಜೇಂದ್ರ ಶರತ್ಕಾಲ ಇವಾಂಶುಮಾನ್ ॥೪೮॥

ಎಲೈ ರಾಜೇಂದ್ರನೇ, ಆ ಯಜ್ಞಸಂಪತ್ತಿನಿಂದ ರಾಜನಾದ ವ್ಯುಷಿತಾಶ್ವನು ಶರತ್ಕಾಲದ ಸೂರ್ಯನಂತೆ ಎಲ್ಲರಿಗಿಂತಲೂ ಶ್ರೇಷ್ಠನಾಗಿ ಬೆಳಗಿದನು.

ಸ ವಿಜಿತ್ಯ ಗೃಹೀತ್ವಾ ತು ನೃಪತೀನ್ ರಾಜಸತ್ತಮಃ ।
ಪ್ರಾಚ್ಯಾನುದೀಚ್ಯಾನ್ ಮತ್ಸ್ಯಾಂಶ್ಚ ದಕ್ಷಿಣಾ ಅಭ್ಯಕಲ್ಪಯತ್ ॥೪೯॥

ರಾಜಶ್ರೇಷ್ಠನಾದ ಅವನು ಪೂರ್ವ ದಿಕ್ಕಿನ ರಾಜರನ್ನು, ಉತ್ತರ ದಿಕ್ಕಿನ ರಾಜರನ್ನು, ಮತ್ಸ್ಯರಾಜರನ್ನು ಜಯಿಸಿ ಅವರು ಕಪ್ಪವನ್ನು ಕೊಡುವಂತೆ ಮಾಡಿದನು.

ಅಶ್ವಮೇಧಶತೈರಿಷ್ಟ್ವಾ ವ್ಯುಷಿತಾಶ್ವಃ ಪ್ರತಾಪವಾನ್ ।
ಬಭೂವ ನೃಪಶಾರ್ದೂಲ ನಾಗಾಯುತಬಲಃ ಕಿಲ ॥೫೦॥

ಎಲೈ ನೃಪಶಾರ್ದೂಲನೇ, ಪ್ರತಾಪಶಾಲಿಯಾದ ವ್ಯುಷಿತಾಶ್ವನು ನೂರು ಅಶ್ವಮೇಧಯಾಗಗಳನ್ನು ಮಾಡಿ ಹತ್ತುಸಾವಿರ ಆನೆಗಳ ಬಲವುಳ್ಳವನಾದನು ಎಂದು ಪ್ರಸಿದ್ಧವಾಗಿದೆ.

ಗಾಥಾಮಪ್ಯತ್ರ ಗಾಯಂತಿ ಯೇ ಪುರಾಣವಿದೋ ಜನಾಃ ।
ಅಪ್ರಮೇಯಮಪರ್ಯಂತಂ ವ್ಯುಷಿತಾಶ್ವೋ ಧನಂ ದದೌ ॥೫೧॥

ಪುರಾಣವನ್ನು ತಿಳಿದ ಜನರು ಈ ವಿಷಯದಲ್ಲಿ ಒಂದು ಗಾದೆಯನ್ನು ಹಾಡುತ್ತಾರೆ. ವ್ಯುಷಿತಾಶ್ವನು ದಾನಮಾಡಿದ ಧನಕ್ಕೆ ಎಲ್ಲೆಯೇ ಇಲ್ಲ. ಅದು ತಿಳಿಯಲು ಅಸಾಧ್ಯವಾದುದು.

ವ್ಯುಷಿತಾಶ್ವಃ ಸಮುದ್ರಾಂತಾಂ ವಿಜಿತ್ಯೇಮಾಂ ವಸುಂಧರಾಮ್ ।
ಅಪಾಲಯತ್ ಸರ್ವವರ್ಣಾನ್ ಪಿತಾ ಪುತ್ರಾನಿವೌರಸಾನ್ ॥೫೨॥

ವ್ಯುಷಿತಾಶ್ವನು ಸಮುದ್ರಪರ್ಯಂತವಾದ ಭೂಮಿಯನ್ನು ಗೆದ್ದು, ಎಲ್ಲಾ ವರ್ಣಗಳನ್ನೂ ತಂದೆಯು ಔರಸ ಪುತ್ರರನ್ನು ರಕ್ಷಿಸುವಂತೆ ರಕ್ಷಿಸಿದನು.

ಯಜಮಾನೋ ಮಹಾಯಜ್ಞೈರ್ಬ್ರಾಹ್ಮಣೇಭ್ಯೋ ಮಹದ್ಧನಮ್ ।
ಅನಂತಾಮಖಿಲಾಂ ತತ್ರ ಪೃಥಿವೀಮದದಾತ್ ತತಃ ।
ಸುಷಾವ ಚ ಬಹೂನ್ ಸೋಮಾನ್ ಸೋಮಸಂಸ್ಥಾಂ ತಥೈವ ಚ ॥

ಮಹಾಯಜ್ಞಗಳನ್ನು ಆಚರಿಸಿ ಬ್ರಾಹ್ಮಣರಿಗೆ ವಿಪುಲವಾದ ಧನವನ್ನು ಕೊಟ್ಟು ಅನಂತರ ಅನಂತವಾದ ಸಮಗ್ರವಾದ ಭೂಮಿಯನ್ನೂ ದಾನಮಾಡಿದನು. ಅನೇಕ ಸೋಮಯಾಗಗಳನ್ನು, ಸೋಮಯಾಗದ ಪ್ರಭೇದವಾದ ಬೇರೆ ಯಾಗಗಳನ್ನೂ ಮಾಡಿದನು.

ಆಸೀತ್ ಕಾಕ್ಷೀವತೀ ತಸ್ಯ ಭಾರ್ಯಾ ಪರಮಸಮ್ಮತಾ ।
ಭದ್ರಾ ನಾಮ ಮನುಷ್ಯೇಂದ್ರ ರೂಪೇಣಾಸದೃಶೀ ಭುವಿ ।
ಕಾಮಯಾಮಾಸತುಶ್ಚೈವ ಪರಸ್ಪರಮಿತಿ ಶ್ರುತಮ್ ॥೫೪॥

ಅವನಿಗೆ ಪರಮ ಸಮ್ಮತಳಾದ ಕಕ್ಷೀವಂತನ ಮಗಳಾದ ಭದ್ರಾ ಎಂಬ ಪತ್ನಿಯಿದ್ದಳು. ಎಲೈ ಮನುಷ್ಯೇಂದ್ರನೇ, ಅವಳು ಭೂಮಿಯಲ್ಲಿ ಅಸದೃಶ ರೂಪವತಿಯಾಗಿದ್ದಳು. ಅವರಿಬ್ಬರೂ ಪರಸ್ಪರವಾಗಿ ಪ್ರೀತಿಸಿದ್ದರು ಎಂದು ಕೇಳಿದ್ದೇವೆ.

ಸ ತಸ್ಯಾಂ ಕಾಮಸಂಯುಕ್ತೋ ಯಕ್ಷ್ಮಾಣಂ ಸಮಪದ್ಯತ ।
ಅಚಿರೇಣೈವ ಕಾಲೇನ ಜಗಾಮಾಸ್ತಮಿವಾಂಶುಮಾನ್ ॥೫೫॥

ಅವಳಲ್ಲಿ ವಿಶೇಷವಾಗಿ ಕಾಮರತನಾದ ವ್ಯುಷಿತಾಶ್ವನು ಕ್ಷಯರೋಗವನ್ನು ಹೊಂದಿ ಅಲ್ಪಕಾಲದಲ್ಲಿಯೇ ಸೂರ್ಯನಂತೆ ಮುಳುಗಿ ಸ್ವರ್ಗಸ್ಥನಾದನು.

ತಸ್ಮಿನ್ ಮೃತೇ ಮನುಷ್ಯೇಂದ್ರ ಭಾರ್ಯಾ ಕಾಕ್ಷೀವತೀ ತದಾ ।
ಅಪುತ್ರಾ ಪುರುಷವ್ಯಾಘ್ರ ವಿಲಲಾಪೇತಿ ನಃ ಶ್ರುತಮ್ ।
ಭದ್ರಾ ಪರಮದುಃಖಾರ್ತಾ ತನ್ನಿಬೋಧ ಕುರೂತ್ತಮ ॥೫೬॥

ಎಲೈ ಮನುಷ್ಯೇಂದ್ರನೇ, ಅವನು ಮೃತನಾಗುತ್ತಿರಲು ಕಕ್ಷೀವಂತನ ಮಗಳಾದ ಅವನ ಪತ್ನಿಯು ಬಹಳವಾಗಿ ವಿಲಾಪಮಾಡಿದಳೆಂದು ಕೇಳಿದ್ದೇವೆ. ಎಲೈ

ಕುರುಶ್ರೇಷ್ಠನೇ, ಆ ಭದ್ರೆಯು ಪರಮ ದುಃಖಾರ್ತಳಾಗಿ ವಿಲಾಪ ಮಾಡಿದ ರೀತಿಯನ್ನು ಹೇಳುತ್ತೇನೆ, ಕೇಳು.

ಭದ್ರಾ

ನಾರೀ ಪರಧರ್ಮಜ್ಞಾ ಸರ್ವಾ ಪುತ್ರವಿನಾಕೃತಾ ।
ಪತ್ಯಾ ವಿನಾ ಜೀವತಿ ಯಾ ನ ಸ ಜೀವತ್ಯಸಂಶಯಮ್ ॥೫೭॥

ಯಾವ ನಾರಿಯು ಧರ್ಮಜ್ಞಳಾಗಿ ಪುತ್ರನಿಲ್ಲದೆ ಪತಿಯನ್ನೂ ಕಳೆದುಕೊಂಡು ಜೀವಿಸುವಳೋ, ಅವಳು ನಿಶ್ಚಯವಾಗಿ ಜೀವಿಸಿರುವುದಿಲ್ಲ. ಈ ವಿಷಯದಲ್ಲಿ ಸಂಶಯವಿಲ್ಲ.

ಪತ್ಯಾ ವಿನಾ ಮೃತಂ ಶ್ರೇಯೋ ನಾರ್ಯಾಃ ಕ್ಷತಿಯಪುಂಗವ ।
ತದ್ಗತಿಂ ಗಂತುಮಿಚ್ಛಾಮಿ ಪ್ರಸೀದಸ್ವ ನಯಸ್ವ ಮಾಮ್ ॥೫೮॥

ಎಲೈ ಕ್ಷತ್ರಿಯಪುಂಗವನೇ, ಪತಿಯನ್ನು ಕಳೆದುಕೊಂಡರೆ ನಾರಿಗೆ ಮರಣವೇ ಶ್ರೇಯಸ್ಕರವಾದುದು. ರಾಜನೇ, ನೀನು ಹೋದ ಮಾರ್ಗದಲ್ಲಿ ನಾನೂ ಬರಲು ಇಚ್ಛಿಸುತ್ತೇನೆ. ಅನುಗ್ರಹಿಸಿ ನನ್ನನ್ನೂ ಕರೆದುಕೊಂಡು ಹೋಗು.

ತ್ವಯಾ ಹೀನಾ ಕ್ಷಣಮಪಿ ನಾಹಂ ಜೀವಿತುಮುತ್ಸಹೇ ।
ಪ್ರಸಾದಂ ಕುರು ಮೇ ರಾಜನ್ನಿತಃ ಕ್ಷಿಪ್ರಂ ನಯಸ್ವ ಮಾಮ್ ॥೫೯॥

ರಾಜನೇ, ನೀನಿಲ್ಲದೆ ನಾನು ಒಂದು ಕ್ಷಣವೂ ಬದುಕಿರಲಾರೆ. ನನ್ನನ್ನು ಅನುಗ್ರಹಿಸು. ತಕ್ಷಣ ಇಲ್ಲಿಂದ ನನ್ನನ್ನು ಕರೆದುಕೊಂಡು ಹೋಗು.

ಪೃಷ್ಠತೋಽನುಗಮಿಷ್ಯಾಮಿ ಸಮೇಷು ವಿಷಮೇಷು ಚ ।
ತ್ವಾಮಹಂ ನರಶಾರ್ದೂಲ ಗಚ್ಛಂತಮನುವರ್ತಿನೀ ॥೬೦॥

ಎಲೈ ನರಶಾರ್ದೂಲನೇ, ಸಮ ವಿಷಮ ಮಾರ್ಗಗಳಲ್ಲಿ ನಡೆಯುವ ನಿನ್ನನ್ನು ಅನುಸರಿಸಿ ನಾನು ನಿನ್ನ ಹಿಂದೆಯೇ ಬರುವೆನು.

ಛಾಯೇವಾನುಗತಾ ರಾಜಂಸ್ತವಾಹಂ ವಶವರ್ತಿನೀ ।
ಭವಿಷ್ಯಾಮಿ ನರವ್ಯಾಘ್ರ ನಿತ್ಯಂ ಪ್ರಿಯಹಿತೈಷಿಣೀ ॥೬೧॥

ರಾಜನೇ, ನಾನು ನಿನ್ನ ವಶವರ್ತಿನಿಯಾಗಿ ಛಾಯೆಯಂತೆ ನಿನ್ನ ಹಿಂದೆ ಬರುತ್ತೇನೆ. ನರಶ್ರೇಷ್ಠನೇ, ಯಾವಾಗಲೂ ನಿನ್ನ ಪ್ರಿಯವನ್ನು ಮತ್ತು ಹಿತವನ್ನು ಬಯಸುವವಳಾಗಿರುವೆನು.

ಅದ್ಯಪ್ರಭೃತಿ ಮೇ ರಾಜನ್ ಕಷ್ಟಾ ಹೃದಯಶೋಷಣಾಃ ।
ಆಧಯೋ ಹಿ ಭವಿಷ್ಯಂತಿ ತ್ವದೃತೇ ಪುಷ್ಕರೇಕ್ಷಣ ॥೬೨॥

ಎಲೈ ರಾಜನೇ, ಎಲೈ ಪುಷ್ಕರೇಕ್ಷಣನೇ, ಇಂದಿನಿಂದ ಆರಂಭಿಸಿ ನೀನಿಲ್ಲದೆ ನನಗೆ ನನ್ನ ಹೃದಯವನ್ನು ಹಿಂಡುವ ಸಹಿಸಲು ಅಸಾಧ್ಯವಾದ ಮನೋರೋಗಗಳು ಉಂಟಾಗುವುವು.

ಅಭಾಗ್ಯಯಾ ಮಯಾ ನೂನಂ ವಿಮುಕ್ತಾಃ ಸಹಚಾರಿಣಃ ।
ಸಂಯೋಗಾದ್ ವಿಪ್ರಯುಕ್ತಾಶ್ಚ ಪೂರ್ವದೇಹೇ ನ ಸಂಶಯಃ ॥೬೩॥

ದುರ್ಭಾಗ್ಯೆಯಾದ ನಾನು ಹಿಂದಿನ ದೇಹದಲ್ಲಿ ಜೊತೆಯಲ್ಲಿರುವ ಪತಿಪತ್ನಿಯರನ್ನು ಬೇರೆ ಮಾಡಿದ್ದೇನೆ. ಪತಿಪತ್ನಿಯರ ಸಂಯೋಗವನ್ನು ಬಿಡಿಸಿ ಅವರನ್ನು ದೂರ ಮಾಡಿದ್ದೇನೆ. ಈ ವಿಷಯದಲ್ಲಿ ಸಂಶಯವಿಲ್ಲ.

ತದಿದಂ ಕರ್ಮಭಿಃ ಪಾಪೈಃ ಪೂರ್ವದೇಹೇಷು ಸಂಚಿತೈಃ ।
ದುಃಖಂ ಮಾಮನುಸಂಪ್ರಾಪ್ತಂ ರಾಜಂಸ್ತ್ವದ್ವಿಪ್ರಯೋಗಜಮ್ ॥೬೪॥

ಎಲೈ ರಾಜನೇ, ನಾನು ಪೂರ್ವದೇಹದಲ್ಲಿ ಮಾಡಿದ ಪಾಪದ ಸಂಚಯದಿಂದ ನಿನ್ನ ವಿಯೋಗದಿಂದ ಉಂಟಾದ ದುಃಖವು ನನಗೆ ಪ್ರಾಪ್ತವಾಗಿದೆ.

ಏಷಾಹಮದ್ಯ ರಾಜೇಂದ್ರ ಕುಶಾನಾಸ್ತೀರ್ಯ ಶಾಯಿನೀ ।
ಭವಿಷ್ಯಾಮಿ ನರವ್ಯಾಘ್ರ ಭವದ್ದರ್ಶನಕಾಂಕ್ಷಿಣೀ ॥೬೫॥

ಎಲೈ ರಾಜೇಂದ್ರನೇ, ನಾನು ಈ ದಿನ ಭೂಮಿಯ ಮೇಲೆ ದರ್ಭೆಗಳನ್ನು ಹರಡಿ ಅದರ ಮೇಲೆ ಮಲಗಿಕೊಂಡು ನಿನ್ನ ದರ್ಶನವನ್ನು ಬಯಸಿ ನಿರೀಕ್ಷಿಸುವವಳಾಗುತ್ತೇನೆ.

ದರ್ಶಯಸ್ವ ಮನುಷ್ಯೇಂದ್ರ ಸಾಧು ಮಾಂ ಪುಷ್ಕರೇಕ್ಷಣ ।
ವಿಕ್ರೋಶಂತೀಂ ಸತೀಂ ಭಾರ್ಯಾಂ ದುಃಖಾರ್ತಾಂ ಚ ನರೇಶ್ವರ ॥೬೬॥

ಎಲೈ ಪುಷ್ಕರೇಕ್ಷಣನೇ, ಮನುಷ್ಯೇಂದ್ರನೇ, ನನಗೆ ಇನ್ನೊಮ್ಮೆ ದರ್ಶನವನ್ನು ಕೊಡು. ಎಲೈ ರಾಜನೇ ದುಃಖಾರ್ತಳಾಗಿ ವಿಲಾಪ ಮಾಡುತ್ತಿರುವ ನಿನ್ನ ಧರ್ಮಪತ್ನಿಯನ್ನು ಸಮಾಧಾನ ಪಡಿಸು.

ವೈಶಂಪಾಯನಃ

ಏವಂ ಬಹುವಿಧಾಸ್ತಸ್ಯಾ ವಿಲಪಂತ್ಯಾಃ ಪುನಃ ಪುನಃ ।
ತಸ್ಮಿನ್ ಶವಶರೀರೇ ವಾಕ್ ತಾಂ ಕಿಲಾಂತರ್ಹಿತಾऽಬ್ರವೀತ್ ॥೬೭॥

ಹೀಗೆ ಬಹುವಿಧವಾಗಿ ಮತ್ತೆ ಮತ್ತೆ ವಿಲಾಪ ಮಾಡುತ್ತಿದ್ದ ಸಮಯದಲ್ಲಿ ಅವಳನ್ನು ಕುರಿತು ಶವ ಶರೀರದಲ್ಲಿ ಅದೃಶ್ಯವಾದ ಒಂದು ವಾಣಿ ಉಂಟಾಯಿತು.

ಉತ್ತಿಷ್ಠ ಭದ್ರೇ ಗಚ್ಛ ತ್ವಂ ದದಾನಿ ಹಿ ವರಂ ತವ ।
ಜನಯಿಷ್ಯಾಮ್ಯಪತ್ಯಾನಿ ತ್ವಯ್ಯೇವಾಹಂ ವರಾನನೇ ॥೬೮॥

ಎಲೈ ಮಂಗಳಸ್ವರೂಪಳೇ, ನೀನು ಎದ್ದು ಹಿಂದಿರುಗು. ನಿನಗೆ ನಾನು ವರವನ್ನು ಕೊಡುತ್ತಿದ್ದೇನೆ. ಸುಂದರಿಯೇ, ನಾನು ನಿನ್ನಲ್ಲಿಯೇ ಮಕ್ಕಳನ್ನು ಪಡೆಯುವೆನು.

ಆತ್ಮೀಯೇ ತು ವರಾರೋಹೇ ಶಯನೇ ಮಾಂ ಚತುರ್ದಶೀಮ್ ।
ಅಷ್ಟಮೀಂ ವಾಪ್ಯೃತುಸ್ನಾತಾ ಸಂಭವೇಥಾಃ ಶುಚಿಸ್ಮಿತೇ ॥೬೯॥

ಎಲೈ ಸುಂದರಿಯೇ, ಶುಚಿಸ್ಮಿತೆಯೇ, ನಿನ್ನ ಹಾಸಿಗೆಯಲ್ಲಿಯೇ ಇದ್ದು ನೀನು ಋತುಸ್ನಾತಳಾಗಿ ಚತುರ್ದಶಿಯಂದು ಅಥವಾ ಅಷ್ಟಮಿಯಂದು ನನ್ನ ಸಮಾಗಮವನ್ನು ಹೊಂದುತ್ತೀಯೆ.

ಕುಂತೀ

ಏವಮುಕ್ತಾऽಥ ಸಾ ದೇವೀ ತಚ್ಚಕ್ರಾರ ಯಶಸ್ವಿನೀ ।
ತಥಾ ಕಮಲಪತ್ರಾಕ್ಷೀ ಯಥೋಕ್ತಂ ಪುತ್ರಗರ್ಧಿನೀ ॥೭೦॥

ಹೀಗೆ ಹೇಳಲ್ಪಟ್ಟ ಪುತ್ರಾಕಾಂಕ್ಷಿಣಿಯಾದ, ಯಶಸ್ವಿನಿಯಾದ, ಕಮಲನಯನೆಯಾದ ಆ ದೇವಿಯು ಹಾಗೆಯೇ ಮಾಡಿದಳು.

ಸಾ ತೇನ ಸುಷುವೇ ದೇವೀ ಶವೇನ ಮನುಜಾಧಿಪ ।
ತ್ರೀನ್ ಸಾಲ್ವಾಂಶ್ಚತುರೋ ಮದ್ರಾನ್ ಪುತ್ರಾನ್ ಭರತಸತ್ತಮ ॥೭೧॥

ಎಲೈ ಭರತಸತ್ತಮನೇ, ಎಲೈ ರಾಜನೇ, ಆ ದೇವಿಯು ಆ ಶವದಿಂದಲೇ ಮೂವರು ಸಾಲ್ವರಾಜರನ್ನೂ, ನಾಲ್ಕು ಮದ್ರರಾಜರನ್ನೂ ಪ್ರಸವಿಸಿದಳು.

ತಥಾ ತ್ವಮಪಿ ಮಯ್ಯೇವ ಮನಸಾऽಪಿ ನರರ್ಷಭ ।
ಶಕ್ತೋ ಜನಯಿತುಂ ರಾಜನ್ನಪತ್ಯಂ ತಪಸೋ ಬಲಾತ್ ॥೭೨॥

ಎಲೈ ರಾಜನೇ, ನರಶ್ರೇಷ್ಠನೇ, ಹಾಗೆ ನೀನೂ ಕೂಡ ನಿನ್ನ ತಪಸ್ಸಿನ ಬಲದಿಂದ ನನ್ನಲ್ಲಿಯೇ ಮನಸ್ಸಿನಿಂದಲೂ ಕೂಡ ಮಕ್ಕಳನ್ನು ಪಡೆಯಲು ಸಮರ್ಥನಾದವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ತ್ರಯೋದಶಾಧಿಕಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ಏಕಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಹದಿಮೂರನೆಯ ಅಧ್ಯಾಯ ಮುಗಿಯಿತು.

★★★★★

ನೂರ ಹದಿನಾಲ್ಕನೆಯ ಅಧ್ಯಾಯ

(ಪಾಂಡುವಿನ ಉತ್ತರ, ಉದ್ದಾಲಕರ ಕಥೆ, ಕುಂತಿಯಿಂದ ದುರ್ವಾಸರಿಂದ ಮಂತ್ರಪ್ರಾಪ್ತಿಯ ಕಥನ.)

ವೈಶಂಪಾಯನಃ

ಏವಮುಕ್ತಸ್ತಯಾ ರಾಜಾ ತಾಂ ದೇವೀಂ ವಾಕ್ಯಮಬ್ರವೀತ್ ।
ಧರ್ಮವಿದ್ ಧರ್ಮಸಂಯುಕ್ತಮಿದಂ ವಚನಮುತ್ತಮಮ್ ॥೧॥

ಆ ಧರ್ಮಜ್ಞನಾದ ರಾಜನು ಹೀಗೆ ಹೇಳಲ್ಪಟ್ಟವನಾಗಿ ಕುಂತಿಯನ್ನು ಕುರಿತು ಧರ್ಮಯುಕ್ತವಾದ ಮತ್ತು ಹೇಳಲು ಶ್ರೇಷ್ಠವಾದ ಈ ಉತ್ತಮ ವಚನಗಳನ್ನು ಆಡಿದನು.

ಏವಮೇತದ್ ವರಾರೋಹೇ ವ್ಯುಷಿತಾಶ್ವಶ್ಚಕಾರ ಹ ।
ತ್ವಯಾ ಯಥೋಕ್ತಂ ಕಲ್ಯಾಣಿ ಸ ಹ್ಯಾಸೀದಮರೋಪಮಃ ॥೨॥

ಸುಂದರಿಯೇ, ಕಲ್ಯಾಣಿಯೇ, ವ್ಯುಷಿತಾಶ್ವನು ನೀನು ಹೇಳಿದಂತೆಯೇ ಮಾಡಿದನು. ಅವನು ದೇವತೆಗಳಿಗೆ ಸದೃಶನಾಗಿದ್ದನು.

ಅಥ ತ್ವಿಮಂ ಪ್ರವಕ್ಷ್ಯಾಮಿ ಧರ್ಮಂ ಚೈವ ನಿಬೋಧ ಮೇ ।
ಪುರಾಣಮೃಷಿಭಿರ್ದೃಷ್ಟಂ ಸರ್ವಧರ್ಮಭೃತಾಂ ವರೈಃ ॥೩॥

ಈಗ ನಾನು ನಿನಗೆ ಸರ್ವಧರ್ಮಿಷ್ಠರಲ್ಲಿ ಶ್ರೇಷ್ಠರಾದ ಋಷಿಗಳಿಂದ ದೃಷ್ಟವಾದ ಪುರಾತನಧರ್ಮವನ್ನು ಹೇಳುವೆನು. ಅದನ್ನು ಕೇಳು.

ಅನಾವೃತಾಃ ಕಿಲ ಪುರಾ ಸ್ತ್ರಿಯೋ ಹ್ಯಾಸನ್ ವರಾಂಗನೇ ।
ಕಾಮಚಾರಪ್ರಚಾರಿಣ್ಯಃ ಸ್ವತಂತ್ರಾಶ್ಚಾರುಹಾಸಿನಿ ॥೪॥

ಎಲೌ ಸುಂದರಿಯೇ, ಹಿಂದೆ ಸ್ತ್ರೀಯರು ಅನಾವೃತರಾಗಿದ್ದರು. (ಅವರಿಗೆ ಪರಪುರುಷ ಸಂಪರ್ಕಕ್ಕೆ ನಿಷೇಧವಿರಲಿಲ್ಲ) ಚಾರುಹಾಸಿನಿಯೇ, ಅವರು ಸ್ವತಂತ್ರರಾಗಿದ್ದು ತಮ್ಮ ಮನಸ್ಸಿಗೆ ಬಂದಂತೆ ಸಂಚರಿಸುತ್ತಿದ್ದರು.

ತಾಸಾಂ ವ್ಯುಚ್ಚರಮಾಣಾನಾಂ ಕೌಮಾರಾತ್ ಸುಭಗೇ ಪತೀನ್ ।
ನಾಸೀದಧರ್ಮಸ್ತು ತದಾ ಸ ಹಿ ಧರ್ಮಃ ಸನಾತನಃ ॥೫॥

ಎಲೌ ಸುಂದರಿಯೇ, ಮದುವೆಯಾದಾಗಿನಿಂದಲೂ ಪತಿಗಳನ್ನು ಮೀರಿ ನಡೆಯುವ ಅವರಿಗೆ ಅಧರ್ಮವು ಉಂಟಾಗುತ್ತಿರಲಿಲ್ಲ ಏಕೆಂದರೆ ಆಗ ಅದೇ ಸನಾತನ ಧರ್ಮವಾಗಿತ್ತು.

ತಂ ಚೈವ ಧರ್ಮಂ ಧರ್ಮಜ್ಞೇ ತಿರ್ಯಗ್ಯೋನಿಗತಾಃ ಪ್ರಜಾಃ ।
ಪಾಲಯಂತಿ ವರಾರೋಹೇ ಯಥಾವದಸಿತೇಕ್ಷಣೇ ॥೬॥

ಸುಂದರಿಯೇ, ಕಮಲನೇತ್ರೆಯೇ, ಧರ್ಮವನ್ನು ತಿಳಿದವಳೇ, ಆ ಧರ್ಮವನ್ನು ತಿರ್ಯಗ್ಯೋನಿಯಲ್ಲಿರುವ ಪ್ರಾಣಿಗಳು ಯಥಾವತ್ತಾಗಿ ಈಗಲೂ ಆಚರಿಸುತ್ತವೆ.

ಉತ್ತರೇಷ್ವಪಿ ರಂಭೋರು ಕುರುಷ್ವದ್ಯಾಪಿ ವರ್ತತೇ ।
ಸ್ತ್ರೀಣಾಮನುಗ್ರಹೋ ಧರ್ಮಃ ಸ ಏವ ಹಿ ಸನಾತನಃ ॥೭॥

ಬಾಳೆಯ ಗಿಡದಂತೆ ಸುಂದರವಾದ ತೊಡೆಯುಳ್ಳವಳೇ ಉತ್ತರಕುರುದೇಶದಲ್ಲಿ ಈಗಲೂ ಈ ಧರ್ಮವು ಆಚರಣೆಯಲ್ಲಿದೆ. ಸ್ತ್ರೀಯರನ್ನು ನಿರ್ಬಂಧ ಪಡಿಸದಿರುವುದೇ ಧರ್ಮ. ಅದು ಸನಾತನವಾದುದು.

ನಾಗ್ನಿಸ್ತೃಪ್ಯತಿ ಕಾಷ್ಠಾನಾಂ ನಾಪಗಾನಾಂ ಮಹೋದಧಿಃ ।
ನಾಂತಕಃ ಸರ್ವಭೂತಾನಾಂ ನ ಪುಂಸಾಂ ವಾಮಲೋಚನಾ ॥೮॥

ಅಗ್ನಿಯು ಕಾಷ್ಠಗಳಿಂದ ತೃಪ್ತಿಯನ್ನು ಹೊಂದುವುದಿಲ್ಲ. ಸಮುದ್ರವು ನದಿಗಳಿಂದ ತೃಪ್ತಿಯನ್ನು ಹೊಂದುವುದಿಲ್ಲ. ಯಮನು ಎಲ್ಲ ಪ್ರಾಣಿಗಳ ಮರಣದಿಂದಲೂ ತೃಪ್ತಿಯನ್ನು ಹೊಂದುವುದಿಲ್ಲ. ಸ್ತ್ರೀಯು ಎಷ್ಟು ಪುರುಷರಿಂದಲಾದರೂ ತೃಪ್ತಿಯನ್ನು ಹೊಂದುವುದಿಲ್ಲ.

ಏವಂ ತೃಷ್ಣಾ ತು ನಾರೀಣಾಂ ಪುರುಷಂಪುರುಷಂ ಪ್ರತಿ ।
ಅಗಮ್ಯಾಗಮನಂ ಸ್ತ್ರೀಣಾಂ ನ ನಿಮಿತ್ತಂ ಕೃತಂ ಶುಭೇ ॥೯॥

ಹೀಗೆ ನಾರಿಯರಿಗೆ ಪ್ರತಿಯೊಬ್ಬ ಪುರುಷನನ್ನು ಕುರಿತು ಆಸೆಯಿರುತ್ತದೆ. ಎಲೌ ಶುಭಸ್ವರೂಪಳೇ, ಅಗಮ್ಯಾಗಮನವು ಸ್ತ್ರೀಯರಿಗೆ ದೋಷಕ್ಕೆ ಕಾರಣ ಎಂದು ಎಣಿಸಲ್ಪಡುತ್ತಿರಲಿಲ್ಲ.

ಪುತ್ರಂ ವಾ ಕಿಲ ಪೌತ್ರಂ ವಾ ಕಾಂಸಾಂಚಿದ್ ಭ್ರಾತರಂ ತಥಾ ।
ರಹಸೀಹ ನರಂ ದೃಷ್ಟ್ವಾ ಯೋನಿರುತ್ಕ್ಲಿದ್ಯತೇ ಸ್ತ್ರಿಯಾಃ ॥೧೦॥

ಪುತ್ರನನ್ನಾಗಲೀ, ಪೌತ್ರನನ್ನಾಗಲೀ, ಅಣ್ಣತಮ್ಮಂದಿರನ್ನಾಗಲೀ ಅಥವಾ ಇನ್ನೊಬ್ಬ ಪುರುಷನನ್ನಾಗಲೀ ಏಕಾಂತದಲ್ಲಿ ನೋಡಿದ ಕೆಲವು ಸ್ತ್ರೀಯರಿಗೆ ಕಾಮೋದ್ರೇಕವಾಗುತ್ತದೆ.

ಏತತ್ ಸ್ವಾಭಾವಿಕಂ ಸ್ತ್ರೀಣಾಮನಿಮಿತ್ತಂ ತು ತದ್ ಭವೇತ್ ।
ಅಸ್ಮಿಂಸ್ತು ನಚಿರಾಲ್ಲೋಕೇ ಮರ್ಯಾದೇಯಂ ಯಶಸ್ವಿನಿ ।
ಸ್ಥಾಪಿತಾ ಯೇನ ಯಸ್ಮಾಚ್ಚ ತನ್ಮೇ ವಿಸ್ತರಶಃ ಶೃಣು ॥೧೧॥

ಇದು ಸ್ತ್ರೀಯರಿಗೆ ಸ್ವಾಭಾವಿಕವಾದುದು. ದೋಷಕ್ಕೆ ನಿಮಿತ್ತವಲ್ಲ. ಎಲೌ ಯಶಸ್ವಿನಿಯೇ, ಇಂತಹ ಈ ಲೋಕದಲ್ಲಿ ತಮ್ಮ ಪತಿಗಳನ್ನು ಮೀರಬಾರದು ಎಂಬ ಮರ್ಯಾದೆಯನ್ನು ಯಾರು ಯಾವಾಗ ಸ್ಥಾಪಿಸಿದರು ಎಂದು ವಿಸ್ತಾರವಾಗಿ ಹೇಳುತ್ತೇನೆ, ಕೇಳು.

ಬಭೂವೋದ್ದಾಲಕೋ ನಾಮ ಮಹರ್ಷಿರಿತಿ ನಃ ಶ್ರುತಮ್ ।
ಶ್ವೇತಕೇತುರಿತಿ ಖ್ಯಾತಃ ಪುತ್ರಸ್ತಸ್ಯಾಭವನ್ಮುನಿಃ ॥೧೨॥

ಹಿಂದೆ ಉದ್ದಾಲಕರೆಂಬ ಮಹರ್ಷಿಗಳು ಇದ್ದರು ಎಂದು ಕೇಳಿದ್ದೇವೆ. ಅವರಿಗೆ 'ಶ್ವೇತಕೇತು' ಎಂಬ ಪುತ್ರನು ಜನಿಸಿದನು.

ಮರ್ಯಾದಾ ಸ್ಥಾಪಿತಾ ಯೇನ ಮಾನುಷೇಷು ವಿಶೇಷತಃ ।
ಕೋಪಾತ್ ಕಮಲಪತ್ರಾಕ್ಷಿ ಯದರ್ಥಂ ತನ್ನಿಬೋಧ ಮೇ ॥೧೩॥

ಎಲೌ ಕಮಲ ನಯನೆಯೇ ಶ್ವೇತಕೇತುವು ಕೋಪದಿಂದ ಮನುಷ್ಯರಲ್ಲಿ ವಿಶೇಷವಾಗಿ ಈ ಮರ್ಯಾದೆಯನ್ನು ಸ್ಥಾಪಿಸಿದನು. ಅದಕ್ಕೆ ಕಾರಣವನ್ನು ಹೇಳುತ್ತೇನೆ, ಕೇಳು.

ಶ್ವೇತಕೇತೋಃ ಪಿತಾ ದೇವಿ ತಪ ಉಗ್ರಂ ಸಮಾಸ್ಥಿತಃ ।
ಗ್ರೀಷ್ಮೇ ಪಂಚತಪಾ ಭೂತ್ವಾ ವರ್ಷಾಸ್ವಾಸಾರಗೋऽಭವತ್ ।
ಶಿಶಿರೇ ಸಲಿಲಸ್ಥಾಯೀ ಸಹ ಪತ್ನ್ಯಾ ಮಹಾತಪಾಃ ॥೧೪॥

ಶ್ವೇತಕೇತುವಿನ ತಂದೆಯಾದ ಉದ್ದಾಲಕರು ಉಗ್ರವಾದ ತಪಸ್ಸಿನಲ್ಲಿ ನಿರತರಾಗಿದ್ದರು. ಮಹಾತಪಸ್ವಿಗಳಾದ ಅವರು ಗ್ರೀಷ್ಮಕಾಲದಲ್ಲಿ ಪಂಚಾಗ್ನಿಗಳ ಮಧ್ಯದಲ್ಲಿ ನಿಂತು, ಮಳೆಗಾಲದಲ್ಲಿ ಮಳೆಯಲ್ಲಿ ನಿಂತು, ಚಳಿಗಾಲದಲ್ಲಿ ಕಂಠದ ವರೆಗಿನ ನೀರಿನಲ್ಲಿ ನಿಂತು ಪತ್ನಿಯ ಜೊತೆಯಲ್ಲಿ ತಪಸ್ಸು ಮಾಡುತ್ತಿದ್ದರು.

ಉದ್ದಾಲಕಂ ತಪಸ್ಯಂತಂ ನಿಯಮೇನ ಸಮಾಹಿತಮ್ ।
ತಸ್ಯ ಪುತ್ರಃ ಶ್ವೇತಕೇತುಃ ಪರಿಚರ್ಯಾಂ ಚಚಾರ ಹ ॥೧೫॥

ಹೀಗೆ ನಿಯಮವನ್ನು ಅನುಸರಿಸಿ ಸಮಾಧಾನದಿಂದ ತಪಸ್ಸನ್ನು ಮಾಡುತ್ತಿದ್ದ ಉದ್ದಾಲಕರಿಗೆ ಮಗನಾದ ಶ್ವೇತಕೇತುವು ಪರಿಚರ್ಯೆಯನ್ನು ಮಾಡುತ್ತಿದ್ದನು.

ಅಭ್ಯಗಚ್ಛದ್ ದ್ವಿಜಃ ಕಶ್ಚಿದ್ ವಲೀಪಲಿತಸಂತತಃ ।
ತಂ ದೃಷ್ಟ್ವೈವ ಮುನಿಃ ಶ್ರೇಷ್ಠಃ ಪೂಜಯಾಮಾಸ ಶಾಸ್ತ್ರತಃ ॥೧೬॥

ಹೀಗಿರುವಾಗ ಒಮ್ಮೆ ಅವರ ಆಶ್ರಮಕ್ಕೆ ಸುಕ್ಕುಗಟ್ಟಿದ ದೇಹವುಳ್ಳ, ನೆರೆತ ಕೂದಲುಗಳುಳ್ಳ ಒಬ್ಬ ಬ್ರಾಹ್ಮಣನು ಬಂದನು. ಅವನನ್ನು ನೋಡಿದ ತಕ್ಷಣ ಶ್ರೇಷ್ಠರಾದ ಉದ್ದಾಲಕರು ಶಾಸ್ತ್ರೋಕ್ತ ವಿಧಾನದಿಂದ ಅವನಿಗೆ ಪೂಜೆಯನ್ನು ಮಾಡಿದರು.

ಸ್ವಾಗತೇನ ಚ ಪಾದ್ಯೇನ ಮೃದುವಾಕ್ಯೈಶ್ಚ ಭಾರತ ।
ಶಾಕಮೂಲಫಲಾದ್ಯೈಶ್ಚ ವನ್ಯೈರನ್ಯೈರಪೂಜಯತ್ ॥೧೭॥

ಸ್ವಾಗತವನ್ನು ಕೋರಿ, ಪಾದಗಳನ್ನು ತೊಳೆದು, ಮೃದುವಾಕ್ಯಗಳನ್ನು ಆಡಿ, ವನದಲ್ಲಿ ದೊರೆಯುವ ಶಾಕಮೂಲಫಲಗಳಿಂದಲೂ, ಬೇರೆ ವಸ್ತುಗಳಿಂದಲೂ ಅವನನ್ನು ಪೂಜಿಸಿದರು.

ಕ್ಷುತ್ಪಿಪಾಸಾಶ್ರಮೈರಾರ್ತಃ ಪೂಜಿತಸ್ತು ಮಹರ್ಷಿಣಾ ।
ವಿಶ್ರಾಂತೋ ಮುನಿಮಾಸಾದ್ಯ ಪರ್ಯಪೃಚ್ಛದ್ ದ್ವಿಜಸ್ತದಾ ॥೧೮॥

ಹಸಿವು ಬಾಯಾರಿಕೆಗಳಿಂದ ಬಳಲಿದ ಆ ಬ್ರಾಹ್ಮಣನು ಮಹರ್ಷಿಗಳಿಂದ ಹೀಗೆ ಪೂಜಿಸಲ್ಪಟ್ಟು ವಿಶ್ರಾಂತಿಯನ್ನು ಪಡೆದ ಮೇಲೆ ಉದ್ದಾಲಕರನ್ನು ಸಮೀಪಿಸಿ ಪ್ರಶ್ನೆ ಮಾಡಿದನು.

ಉದ್ದಾಲಕ ಮಹರ್ಷೇ ತ್ವಂ ಸತ್ಯಂ ಮೇ ಬ್ರೂಹಿ ಮಾऽನೃತಮ್ ।
ಋಷಿಪುತ್ರಃ ಕುಮಾರೋऽಯಂ ದರ್ಶನೀಯೋ ವಿಶೇಷತಃ ।
ತವ ಪುತ್ರಮಿಮಂ ಮನ್ಯೇ ಕೃತಕೃತ್ಯೋऽಸಿ ತದ್ ವದ ॥೧೯॥

ಉದ್ದಾಲಕ ಮಹರ್ಷಿಗಳೇ, ಸತ್ಯವನ್ನು ಹೇಳಿ, ಸುಳ್ಳನ್ನು ಹೇಳಬೇಡಿ. ವಿಶೇಷವಾಗಿ ಸುಂದರನಾಗಿರುವ ಈ ಋಷಿಕುಮಾರನು ನಿಮ್ಮ ಮಗನೆಂದು ಭಾವಿಸುತ್ತೇನೆ. ಇಂತಹ ಮಗನನ್ನು ಪಡೆದು ನೀವು ಕೃತಕೃತ್ಯರಾಗಿದ್ದೀರಿ. ಅದನ್ನು ಹೇಳಿ.

ಉದ್ದಾಲಕಃ

ಮಮ ಪತ್ನೀ ಮಹಾಪ್ರಾಜ್ಞ ಕುಶಿಕಸ್ಯ ಸುತಾ ಮತಾ ।
ಛಾಯೇವಾನಪಗಾ ಪತ್ನೀ ಮಮ ನಿತ್ಯಮನುವ್ರತಾ ॥೨೦॥

ಮಹಾಪ್ರಾಜ್ಞರೇ, ನನ್ನ ಪತ್ನಿಯು ಕುಶಿಕರ ಪುತ್ರಿ. ಛಾಯೆಯಂತೆ ನನ್ನನ್ನು ಎಂದೂ ಬಿಡದೆ ನನಗೆ ಅನುವ್ರತಳಾಗಿದ್ದಾಳೆ.

ಅರುಂಧತೀವ ಪತ್ನೀನಾಂ ತಪಸಾ ಕರ್ಶಿತಸ್ತನೀ ।
ಅಸ್ಯಾಂ ಜಾತಃ ಶ್ವೇತಕೇತುರ್ಮಮ ಪುತ್ರೋ ಮಹಾತಪಾಃ ॥೨೧॥

ಸಪ್ತರ್ಷಿಗಳ ಪತ್ನಿಯರ ಮಧ್ಯದಲ್ಲಿಯ ಅರುಂಧತಿಯಂತೆ ತಪಸ್ಸಿನಿಂದ ತನ್ನ ಸ್ತನಗಳನ್ನು ಬತ್ತಿಸಿದ್ದಾಳೆ. ಮಹಾತಪಸ್ವಿಯಾದ ಶ್ವೇತಕೇತು ನನಗೆ ಇವಳಲ್ಲಿ ಹುಟ್ಟಿದ ಪುತ್ರ.

ವೇದವೇದಾಂಗವಿದ್ ವಿಪ್ರ ಮಚ್ಛಾಸನಪರಾಯಣಃ ।
ಲೋಕಜ್ಞಃ ಸರ್ವಲೋಕೇಷು ವಿಶ್ರುತಃ ಸತ್ಯವಾಗ್ ಘೃಣೀ ॥೨೨॥

ಬ್ರಾಹ್ಮಣನೇ, ಇವನು ವೇದವೇದಾಂಗಹಳನ್ನು ತಿಳಿದವನು. ನನ್ನ ಆದೇಶದಂತೆ ವರ್ತಿಸುವವನು. ಲೋಕನೀತಿಯನ್ನು ಬಲ್ಲವನು. ಸತ್ಯವಚನನೆಂದೂ, ದಯಾಳುವೆಂದೂ ಎಲ್ಲಾ ಲೋಕಗಳಲ್ಲಿಯೂ ಪ್ರಖ್ಯಾತನಾದವನು.

ದ್ವಿಜಃ

ಅಪೂರ್ವೀ ಭಾರ್ಯಯಾ ಚಾರ್ಥೀ ವೃದ್ಧೋಽಹಂ ಮಂದಚಾಕ್ಷುಷಃ ।
ಪಿತ್ರಾ ಽದೃಣಾದನಿರ್ಮುಕ್ತಃ ಪೂರ್ವಮೇವ ಕೃತಃ ಸ್ತ್ರಿಯಃ ॥೨೩॥

ನಾನು ಮೊದಲಿನಿಂದಲೂ ಭಾರ್ಯೆಯನ್ನು ಅಪೇಕ್ಷಿಸಿದರೂ ಭಾರ್ಯಾಸಹಿತನಾಗಲಿಲ್ಲ. ಈಗ ನಾನು ವೃದ್ಧನೂ, ಮಂದದೃಷ್ಟಿಯುಳ್ಳವನೂ ಆಗಿದ್ದೇನೆ. ಮೊದಲೇ ವಿವಾಹ ಮಾಡಿಕೊಳ್ಳದಿದ್ದ ಕಾರಣದಿಂದಾಗಿ ಪಿತೃಋಣದಿಂದ ನಿರ್ಮುಕ್ತನಾಗಿಲ್ಲ.

ಪ್ರಜಾರಣೇ ತು ಪತ್ನೀ ತೇ ಕುಲಶೀಲಸಮಾಧಿನೀ ।
ಸದೃಶೀ ಮಮ ಗೋತ್ರೇಣ ವಹಾಮ್ಯೇನಾಂ ಕ್ಷಮಸ್ವ ವೈ ॥೨೪॥

ಕುಲಶೀಲಸಮಾಧಿಗಳನ್ನು ಹೊಂದಿದ ನಿನ್ನ ಪತ್ನಿಯು, ಪುತ್ರನೆಂಬ ಅಗ್ನಿಯನ್ನು ಉತ್ಪಾದಿಸುವ ಅರಣಿಯಂತಿದ್ದಾಳೆ. ಅವಳು ನನ್ನ ಗೋತ್ರಕ್ಕೆ ಹೊಂದುತ್ತಾಳೆ. ನಾನು ಅವಳನ್ನು ಕರೆದುಕೊಂಡು ಹೋಗುತ್ತೇನೆ. ನನ್ನನ್ನು ಕ್ಷಮಿಸು.

ಪಾಂಡುಃ

ಇತ್ಯುಕ್ತ್ವಾ ಮೃಗಶಾಬಾಕ್ಷೀಂ ಚೀರಕೃಷ್ಣಾಜಿನಾಂಬರಾಮ್ ।
ಯಷ್ಟ್ಯಾಧಾರಃ ಸ್ರಸ್ತಗಾತ್ರೋ ಮಂದಚಕ್ಷುರಬುದ್ಧಿಮಾನ್ ॥೨೫॥

ಸ್ವವ್ಯಾಪಾರಾಕ್ಷಮೋ ಶ್ರೇಷ್ಠಾಮಚಿತ್ತಾಮಾತ್ಮನಿ ದ್ವಿಜಃ ।
ಶ್ವೇತಕೇತೋಃ ಕಿಲ ಪುರಾ ಸಮಕ್ಷಂ ಮಾತರಂ ಪಿತುಃ ॥೨೬॥

ಜಗ್ರಾಹ ಬ್ರಾಹ್ಮಣಃ ಪಾಣೌ ಗಚ್ಛಾವ ಇತಿ ಚಾಬ್ರವೀತ್ ।
ಋಷಿಪುತ್ರಸ್ತತಃ ಕೋಪಂ ಚಕಾರಾಮರ್ಷಿತಸ್ತದಾ ॥೨೭॥

ಹೀಗೆ ಹೇಳಿ ಕೋಲನ್ನು ಊರಿಕೊಂಡು ನಡುಗುತ್ತಿದ್ದ, ಮಂದದೃಷ್ಟಿಯುಳ್ಳ, ತನ್ನ ಕೆಲಸವನ್ನು ತಾನು ಮಾಡಿಕೊಳ್ಳಲು ಸಾಧ್ಯವಾಗದ, ಬುದ್ಧಿಹೀನನಾದ ಆ ಬ್ರಾಹ್ಮಣನು ಚೀರಕೃಷ್ಣಾಜಿನವನ್ನು ಧರಿಸಿದ್ದ, ಮೃಗಶಾಬಾಕ್ಷಿಯಾದ, ತನ್ನಲ್ಲಿ ಮನಸ್ಸಿಲ್ಲದಿರುವ ಶ್ವೇತಕೇತುವಿನ ತಾಯಿಯನ್ನು ಅವನ ತಂದೆಯ ಎದುರಿನಲ್ಲಿಯೇ ಕೈಯನ್ನು ಹಿಡಿದು 'ಬಾ, ನಾವಿಬ್ಬರೂ ಹೋಗೋಣ' ಎಂದು ಹೇಳಿದನು. ಆಗ ಋಷಿಕುಮಾರನಾದ ಶ್ವೇತಕೇತುವು ಬಹಳ ಕೋಪಗೊಂಡನು.

ಸ ಮಾತರಂ ತಥಾ ದೃಷ್ಟ್ವಾ ನೀಯಮಾನಾಂ ಬಲಾದಿವ ।
ತಪಸಾ ದೀಪ್ತವೀರ್ಯೋ ಹಿ ಶ್ವೇತಕೇತುರ್ನ ಚಕ್ಷಮೇ ॥೨೮॥

ತನ್ನ ತಾಯಿಯನ್ನು ಬಲಾತ್ಕಾರದಿಂದ ಹಾಗೆ ಎಳೆಯುತ್ತಿರುವ ಬ್ರಾಹ್ಮಣನನ್ನು ನೋಡಿ ತಪಸ್ಸಿನಿಂದ ಮಹಾಸಾಮರ್ಥ್ಯವನ್ನು ಸಂಪಾದಿಸಿದ್ದ ಶ್ವೇತಕೇತುವು ಸಹಿಸಲಿಲ್ಲ.

ಸಂಗೃಹ್ಯ ಮಾತರಂ ಹಸ್ತೇ ಶ್ವೇತಕೇತುರಭಾಷತ ।
ದುರ್ಬ್ರಾಹ್ಮಣ ವಿಮುಂಚ ತ್ವಂ ಮಾತರಂ ಮೇ ಪತಿವ್ರತಾಮ್ ॥೨೯॥

ಶ್ವೇತಕೇತುವು ತನ್ನ ತಾಯಿಯ ಕೈಯನ್ನು ಹಿಡಿದು 'ಕೆಟ್ಟ ಬ್ರಾಹ್ಮಣನೇ, ಪತಿವ್ರತೆಯಾದ ನನ್ನ ತಾಯಿಯನ್ನು ಬಿಟ್ಟುಬಿಡು' ಎಂದು ಹೇಳಿದನು.

ಅಯಂ ಪಿತಾ ಮೇ ಬ್ರಹ್ಮರ್ಷಿಃ ಕ್ಷಮಾವಾನ್ ಬ್ರಹ್ಮವಿತ್ತಮಃ ।
ಶಾಪಾನುಗ್ರಹಯೋಃ ಶಕ್ತಃ ತೂಷ್ಣೀಂಭೂತೋ ಮಹಾವ್ರತಃ ॥೩೦॥

ಈ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ, ಮಹಾವ್ರತವನ್ನು ಧರಿಸಿರುವ ಬ್ರಹ್ಮರ್ಷಿಯಾದ ನನ್ನ ತಂದೆಯು ಶಾಪಾನುಗ್ರಹ ಶಕ್ತಿಯುಳ್ಳವನು. ಕ್ಷಮಾಗುಣವನ್ನು ಅವಲಂಬಿಸಿ ಅವನು ಸುಮ್ಮನಿದ್ದಾನೆ.

ತಸ್ಯ ಪತ್ನೀ ಶಮೋಪೇತಾ ಮಮ ಮಾತಾ ವಿಶೇಷತಃ ।
ಪತಿವ್ರತಾಂ ತಪೋಯುಕ್ತಾಂ ಸಾಧ್ವಾಚಾರೈರಲಂಕೃತಾಮ್ ।
ಪ್ರಾಣದಾನೇನ ತೇ ಬ್ರಹ್ಮನ್ ಮಾತೃಭೂತಾಂ ವಿಮುಂಚ ಮೇ ॥೩೧॥

ಈ ಶಾಂತಿಯುತಳಾದ ನನ್ನ ತಾಯಿಯು ಅವನ ಶ್ರೇಷ್ಠಳಾದ ಪತ್ನಿ. ಅವಳು ಪತಿವ್ರತೆಯೂ ತಪೋಯುಕ್ತಳೂ ಒಳ್ಳೆಯ ಆಚಾರಗಳಿಂದ ಅಲಂಕೃತಳೂ ಆಗಿದ್ದಾಳೆ. ಬ್ರಾಹ್ಮಣನೇ, ನಿನಗೆ ಶಾಪವನ್ನು ಕೊಡದೆ ನಿನಗೆ ಪ್ರಾಣದಾನವನ್ನು ಮಾಡಿದ್ದಾಳೆ. ಅಂತಹ ನನ್ನ ತಾಯಿಯನ್ನು ಬಿಟ್ಟುಬಿಡು.

ವೈಶಂಪಾಯನಃ

ಏವಮುಕ್ತ್ವಾ ತು ಯಾಚಂತಂ ವಿಮುಂಚೇತಿ ಮುಹುರ್ಮುಹುಃ ।
ಪ್ರತ್ಯವೋಚದ್ ದ್ವಿಜೋ ರಾಜನ್ ಅಪ್ರಗಲ್ಭಮಿದಂ ವಚಃ ॥೩೨॥

ಎಲೈ ರಾಜನೇ, ಹೀಗೆ ಬಿಟ್ಟುಬಿಡು ಎಂದು ಮತ್ತೆ ಮತ್ತೆ ಬೇಡುತ್ತಿರುವ ಶ್ವೇತಕೇತುವನ್ನು ಕುರಿತು ಆ ಬ್ರಾಹ್ಮಣನು ಅವಿವೇಕದ ಈ ಮಾತುಗಳನ್ನು ಆಡಿದನು.

ಅಪತ್ಯಾರ್ಥೀ ಶ್ವೇತಕೇತೋ ವೃದ್ಧೋಽಹಂ ಮಂದಚಾಕ್ಷುಷಃ ।
ಪಿತಾ ತೇ ಋಣನಿರ್ಮುಕ್ತಃ ತ್ವಯಾ ಪುತ್ರೇಣ ಕಾಶ್ಯಪಃ ॥೩೩॥

ಶ್ವೇತಕೇತುವೇ, ವೃದ್ಧನೂ, ಮಂದದೃಷ್ಟಿಯುಳ್ಳವನೂ ಆದ ನಾನು ಪುತ್ರಾರ್ಥಿಯಾಗಿದ್ದೇನೆ. ನಿನ್ನ ತಂದೆಯಾದ ಕಾಶ್ಯಪನು ನಿನ್ನಂತಹ ಮಗನನ್ನು ಪಡೆದು ಪಿತೃಋಣದಿಂದ ಮುಕ್ತನಾಗಿದ್ದಾನೆ.

ಋಣಾದಹಮನಿರ್ಮುಕ್ತೋ ವೃದ್ಧೋಽಹಂ ವಿಗತಸ್ಪೃಹಃ ।
ಮಮ ಕೋ ದಾಸ್ಯತಿ ಸುತಾಂ ಕನ್ಯಾಂ ಸಂಪ್ರಾಪ್ತಯೌವನಾಮ್ ॥೩೪॥

ಆದರೆ ವೃದ್ಧನಾದ, ಎಲ್ಲಾ ಆಸೆಗಳನ್ನು ತೊರೆದ ನಾನು ಪಿತೃಋಣದಿಂದ ನಿರ್ಮುಕ್ತನಾಗಿಲ್ಲ. ನನಗೆ ಯಾರು ಯುವತಿಯಾದ ಕನ್ಯೆಯನ್ನು ಕೊಡುವವರು?

ಪ್ರಜಾರಣೇಮಿಮಾಂ ಪತ್ನೀಂ ವಿಮುಂಚ ತ್ವಂ ಮಹಾತಪಾಃ ।
ಏಕಯಾ ಪ್ರಜಯಾ ಪ್ರೀತೋ ಮಾತರಂ ತೇ ದದಾಮ್ಯಹಮ್ ॥೩೫॥

ಮಹಾತಪಸ್ವಿಯಾದ ನೀನು, ಪ್ರಜೆಯೆಂಬ ಅಗ್ನಿಯನ್ನು ಉತ್ಪಾದಿಸುವ ಅರಣಿಯಂತಿರುವ ನಿನ್ನ ತಾಯಿಯನ್ನು ಬಿಡು. ನಾನು ಒಬ್ಬ ಮಗನನ್ನು ಪಡೆದು ಸಂತೋಷದಿಂದ ನಿನಗೆ ನಿನ್ನ ತಾಯಿಯನ್ನು ಹಿಂದಿರುಗಿಸುತ್ತೇನೆ.

ಏವಮುಕ್ತಃ ಶ್ವೇತಕೇತುರ್ಲಜ್ಜಯಾ ಕ್ರೋಧಮೇಯಿವಾನ್ ।
ತಂ ಕ್ರುದ್ಧಂ ವೈ ಪಿತಾ ಜ್ಞಾತ್ವಾ ಶ್ವೇತಕೇತುಮುವಾಚ ಹ ॥೩೬॥

ಹೀಗೆ ಹೇಳಲ್ಪಟ್ಟ ಶ್ವೇತಕೇತುವು ಲಜ್ಜೆಯಿಂದ ಕ್ರೋಧಗೊಂಡನು. ಅವನು ಕ್ರೋಧಗೊಂಡಿರುವುದನ್ನು ನೋಡಿ ತಂದೆಯಾದ ಉದ್ದಾಲಕರು ಶ್ವೇತಕೇತುವನ್ನು ಕುರಿತು ಮಾತನಾಡಿದರು.

ಮಾ ತಾತ ಕೋಪಂ ಕಾರ್ಷೀಸ್ತ್ವಮೇಷ ಧರ್ಮಃ ಸನಾತನಃ ।
ಅನಾವೃತಾ ಹಿ ವರ್ಣಾನಾಂ ಸರ್ವೇಷಾಮಂಗನಾ ಭುವಿ ॥೩೭॥

ಮಗು, ಕೋಪವನ್ನು ಮಾಡಬೇಡ. ಇದು ಸನಾತನವಾದ ಧರ್ಮ. ಆಯಾ ವರ್ಣದ ಸ್ತ್ರೀಯರು ಆಯಾ ವರ್ಣಗಳಲ್ಲಿ ಅನಾವೃತರಾದವರು.

ಯಥಾ ಗಾವಃ ಸ್ಥಿತಾಸ್ತಾತ ಸ್ವೇಸ್ವೇ ವರ್ಣೇ ತಥಾ ಪ್ರಜಾಃ ।
ತಥೈವ ವೈ ಕುಟುಂಬೇಷು ನ ಪ್ರಾಪದ್ಯಂತ ಕರ್ಹಿಚಿತ್ ॥೩೮॥

ಋತುಕಾಲೇ ತು ಸಂಪ್ರಾಪ್ತೇ ಭರ್ತಾರಂ ನ ಜಹುಸ್ತದಾ ।
ಏವಮುಕ್ತೋ ಮಹಾಬಾಹುಃ ಶ್ವೇತಕೇತುರ್ನ ಚಕ್ಷಮೇ ॥೩೯॥

ಮಗು, ಯಥಾ ಗೋವುಗಳು ತಮ್ಮ ತಮ್ಮ ವರ್ಣಗಳಲ್ಲಿಯೇ ನಿರತವಾಗಿರುತ್ತವೆಯೋ, (ಗೋವು ನಿಯಮವಿಲ್ಲದೆ ಯಾವುದೇ ವೃಷಭದಲ್ಲಿ ನಿರತವಾಗಿರುತ್ತದೆ, ಆದರೆ ಎಂದೂ ಮಹಿಷದ ಸಹವಾಸ ಮಾಡುವುದಿಲ್ಲ) ಹಾಗೆಯೇ ಸ್ತ್ರೀಯರು ತಮ್ಮ ತಮ್ಮ ವರ್ಣಗಳಲ್ಲಿ ಎಂದೂ ನಿಯಮಬದ್ಧರಾಗಲಿಲ್ಲ. ಋತುಕಾಲದಲ್ಲಿ ಮಾತ್ರ ಎಂದೂ ತಮ್ಮ ಪತಿಗಳನ್ನು ಬಿಡುತ್ತಿರಲಿಲ್ಲ.

ಚಕಾರೈವ ಚ ಮರ್ಯಾದಾಮಿಮಾಂ ಸ್ತ್ರೀಪುಂಸಯೋರ್ಭುವಿ ।
ಮಾನುಷೇಷ್ವಸಿತಾಪಾಂಗೇ ನ ತ್ವೇವಾನ್ಯೇಷು ಜಂತುಷು ॥೪೦॥

ಹೀಗೆ ಹೇಳಲ್ಪಟ್ಟ ಶ್ವೇತಕೇತುವು ಆ ಮಾತನ್ನು ಸಹಿಸಲಿಲ್ಲ. ಎಲೌ ಕಪ್ಪಾದ ಕಣ್ಣುಳ್ಳವಳೇ, ಭೂಮಿಯಲ್ಲಿ ಮನುಷ್ಯರಲ್ಲಿ ಸ್ತ್ರೀಪುರುಷಸಂಯೋಗ ವಿಷಯದಲ್ಲಿ ಈ ಮರ್ಯಾದೆಯನ್ನು ಮಾಡಿದನು, ಬೇರೆ ಪ್ರಾಣಿಗಳಲ್ಲಿ ಈ ಮರ್ಯಾದೆ ಇಲ್ಲ.

ತದಾಪ್ರಭೃತಿ ಮರ್ಯಾದಾ ಸ್ಥಾಪಿತೇಯಮಿತಿ ಶ್ರುತಿಃ ।
ವ್ಯುಚ್ಚರಂತ್ಯಾಃ ಪತಿಂ ನಾರ್ಯಾ ಅದ್ಯಪ್ರಭೃತಿ ಪಾತಕಮ್ ।
ಭ್ರೂಣಹತ್ಯಾಸಮಂ ಪಾಪಂ ಭವಿಷ್ಯತ್ಯಸುಖಾವಹಮ್ ॥೪೧॥

ಅಂದಿನಿಂದ ಆರಂಭಿಸಿ ಭೂಲೋಕದಲ್ಲಿ ಈ ಮರ್ಯಾದೆ ಇದೆ ಎಂದು ಕೇಳಿದ್ದೇವೆ. ''ಈ ದಿನದಿಂದ ಆರಂಭಿಸಿ ತನ್ನ ಪತಿಯನ್ನು ಮೀರಿ ಪರಪುರುಷನನ್ನು ಹೊಂದುವ ಸ್ತ್ರೀಯರಿಗೆ ಭ್ರೂಣಹತ್ಯಾ ಸಮಾನವಾದ ದುಃಖಪ್ರದವಾದ ಪಾತಕವು ಉಂಟಾಗುವುದು''.

ಪಾಂಡುಃ

ಅದ್ಯಾಪ್ಯನುವಿಧೀಯಂತೇ ಕಾಮದ್ವೇಷವಿವರ್ಜಿತಾಃ ।
ಉತ್ತರೇಷು ಮಹಾಭಾಗೇ ಕುರುಷ್ವೇವಂ ಯಶಸ್ವಿನಿ ।
ಪುರಾಣದೃಷ್ಟೋ ಧರ್ಮೋಽಯಂ ಪೂಜ್ಯತೇ ಚ ಮಹರ್ಷಿಭಿಃ ॥೪೨॥

ಎಲೌ ಮಹಾನುಭಾವಳೇ, ಯಶಸ್ವಿನಿಯೇ, ಉತ್ತರಕುರುದೇಶದಲ್ಲಿ ಕಾಮದ್ವೇಷವಿವರ್ಜಿತರಾದ ಸ್ತ್ರೀಯರು ಈಗಲೂ ಈ ಪದ್ಧತಿಯನ್ನು ಅನುಸರಿಸುತ್ತಾರೆ. ಪುರಾಣದೃಷ್ಟವಾದ ಈ ಧರ್ಮವು ಮಹರ್ಷಿಗಳಿಂದಲೂ ಪೂಜ್ಯವಾಗಿದೆ.

ಭಾರ್ಯಾಂ ತಥಾ ವ್ಯುಚ್ಚರತಃ ಕೌಮಾರೀಂ ಬ್ರಹ್ಮಚಾರಿಣೀಮ್ ।
ಪತಿವ್ರತಾಮೇತದೇವ ಭವಿತಾ ಪಾತಕಂ ಭುವಿ ॥೪೩॥

ಯುವತಿಯಾದ, ತನಗೆ ಅನುವ್ರತೆಯಾದ ಪತಿವ್ರತೆಯಾದ, ಪತ್ನಿಯನ್ನು ಮೀರಿ ನಡೆಯುವ ಪುರುಷನಿಗೂ ಇದೇ ಭ್ರೂಣಹತ್ಯಾ ಪಾತಕವುಂಟಾಗುತ್ತದೆ.

ಪತ್ಯಾ ನಿಯುಕ್ತಾ ಯಾ ಚೈವ ಪತ್ನ್ಯಾಪತ್ಯಾರ್ಥಮೇವ ಚ ।
ನ ಕರಿಷ್ಯತಿ ತಸ್ಯಾಶ್ಚ ಭವಿಷ್ಯತ್ಯೇತದೇವ ಹಿ ।
ಇತಿ ತೇನ ಪುರಾ ಭೀರು ಮರ್ಯಾದಾ ಸ್ಥಾಪಿತಾಽಬಲೇ ॥೪೪॥

ಪತಿಯಿಂದ ಪುತ್ರಾರ್ಥಳಾಗಿ ನಿಯುಕ್ತಳಾದ ಪತ್ನಿಯು ಹಾಗೆ ಮಾಡದಿದ್ದರೆ ಅವಳಿಗೂ ಇದೇ ಪಾಪವು ಬರುವುದು. ಭೀರುವಾದ ಅಬಲೆಯೇ, ಹೀಗೆ ಶ್ವೇತಕೇತುವು ಹಿಂದೆ ಮರ್ಯಾದೆಯನ್ನು ಸ್ಥಾಪಿಸಿದನು.

ಉದ್ದಾಲಕಸ್ಯ ಪುತ್ರೇಣ ಧರ್ಮೇ ವೈ ಶ್ವೇತಕೇತುನಾ ।
ತೇನ ಭೂಯಸ್ತತೋ ದೃಷ್ಟಂ ಯಸ್ಮಿನ್ನರ್ಥೇ ನಿಬೋಧ ತತ್ ॥೪೫॥

ಉದ್ದಾಲಕರ ಮಗನಾದ ಶ್ವೇತಕೇತುವಿನಿಂದ ಪುನಃ ಯಾವ ವಿಷಯದಲ್ಲಿ ಈ ಮರ್ಯಾದೆಯನ್ನು ಮಾಡಿದನೋ, ಅದನ್ನು ತಿಳಿದುಕೋ.

ನಿಯುಕ್ತಾ ಪತಿನಾ ಭಾರ್ಯಾ ಯದ್ಯಪತ್ಯಸ್ಯ ಕಾರಣಾತ್ ।
ನ ಕುರ್ಯಾತ್ ತತ್ತಥಾ ಭೀರು ಸೈನಃ ಸುಮಹದಾಪ್ನುಯಾತ್ ॥೪೬॥

ಭಾರ್ಯೆಯಾದವಳು, ಪುತ್ರನ ಸಲುವಾಗಿ ಪತಿಯಿಂದ ನಿಯುಕ್ತಳಾಗಿ ಹಾಗೆ ಮಾಡದಿದ್ದರೆ ಎಲೌ ಭೀರುವೇ, ಅವಳಿಗೂ ಸಹ ಮಹಾಪಾತಕವುಂಟಾಗುವುದು.

ಸೌದಾಸೇನ ಚ ರಂಭೋರು ನಿಯುಕ್ತಾऽಪತ್ಯಕರ್ಮಣಿ ।
ಮದಯಂತೀ ಜಗಾಮರ್ಷಿಂ ವಸಿಷ್ಠಮಿತಿ ನಃ ಶ್ರುತಮ್ ॥೪೭॥

ಎಲೌ ರಂಭೋರುವೇ, ಪತಿಯಾದ ಸೌದಾಸನಿಂದ ಮಗನನ್ನು ಪಡೆಯಲು ನಿಯುಕ್ತಳಾದ ಅವನ ಪತ್ನಿಯಾದ ಮದಯಂತಿಯು ವಸಿಷ್ಠ ಮಹರ್ಷಿಗಳ ಸಮಾಗಮವನ್ನು ಮಾಡಿದಳೆಂದು ನಾವು ಕೇಳಿದ್ದೇವೆ.

ತಸ್ಮಾಲ್ಲೇಭೇऽಥ ಸಾ ಪುತ್ರಮಶ್ಮಕಂ ನಾಮ ಭಾಮಿನಿ ।
ಭಾರ್ಯಾ ಕಲ್ಮಾಷಪಾದಸ್ಯ ಭರ್ತುಃ ಪ್ರಿಯಹಿತೈಷಿಣೀ ॥೪೮॥

ಎಲೌ ಭಾಮಿನಿಯೇ, ಕಲ್ಮಷಪಾದನ ಪತ್ನಿಯೂ ಪತಿಯ ಪ್ರಿಯ ಮತ್ತು ಹಿತದಲ್ಲಿ ಆಸಕ್ತಳಾದವಳೂ ಆದ ಮದಯಂತಿಯು ವಸಿಷ್ಠರಿಂದ ಅಶ್ಮಕನೆಂಬ ಪುತ್ರನನ್ನು ಪಡೆದಳು.

ಅಸ್ಮಾಕಮಪಿ ವೈ ಜನ್ಮ ವಿದಿತಂ ಕಮಲೇಕ್ಷಣೇ ।
ಕೃಷ್ಣದ್ವೈಪಾಯನಾದ್ ಭೀರು ಕುರೂಣಾಂ ವಂಶವೃದ್ಧಯೇ ॥೪೯॥

ಕಮಲ ನಯನೆಯೇ, ಭೀರುವಾದವಳೇ, ಕುರುವಂಶದ ಅಭಿವೃದ್ಧಿಗಾಗಿ ನಾವೆಲ್ಲರೂ ವೇದವ್ಯಾಸರಿಂದ ಜನಿಸಿದ ವಿಷಯವು ನಿನಗೆ ತಿಳಿದೇ ಇದೆ.

ತಸ್ಮಾದೇತಾನಿ ಸರ್ವಾಣಿ ಕಾರಣಾನಿ ನಿರೀಕ್ಷ್ಯತು ।
ಸಂಪ್ರಧಾರ್ಯ ಮಯೋಕ್ತಂ ಯತ್ ತತ್ ತ್ವಂ ವೈ ಕರ್ತುಮರ್ಹಸಿ ॥

ಆದ್ದರಿಂದ ಇವೆಲ್ಲಾ ಕಾರಣಗಳನ್ನು ಗಮನಿಸಿ, ನಾನು ಹೇಳುವುದನ್ನು ನೀನು ಆಚರಿಸಬೇಕು.

ಋತಾವೃತೌ ರಾಜಪುತ್ರಿ ಸ್ತ್ರಿಯಾ ಭರ್ತಾ ಶುಭೇಕ್ಷಣೇ ।
ನಾತಿವರ್ತ್ಯ ಇತಿ ತ್ವೇವಂ ಧರ್ಮಂ ಧರ್ಮವಿದೋ ವಿದುಃ ॥೫೧॥

ಶುಭೇಕ್ಷಣೆಯಾದ ರಾಜಕುಮಾರಿಯೇ, ಪ್ರತಿಯೊಂದು ಋತುಕಾಲದಲ್ಲಿಯೂ, ಪತ್ನಿಯು ಪತಿಯನ್ನು ಮೀರಿ ಹೋಗಬಾರದು ಎಂಬ ಧರ್ಮವನ್ನು ಎಲ್ಲಾ ಧರ್ಮಜ್ಞರು ತಿಳಿದಿದ್ದಾರೆ.

ಶೇಷೇಷ್ವನ್ಯೇಷು ಕಾಲೇಷು ಸ್ವಾತಂತ್ರ್ಯಂ ಸ್ತ್ರೀ ಕಿಲಾರ್ಹತಿ ।
ಧರ್ಮಂ ಚೈವ ಜನಾಃ ಸಂತಃ ಪುರಾಣಂ ಪರಿಚಕ್ಷತೇ ॥೫೨॥

ಉಳಿದ ಕಾಲಗಳಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯವಿದೆ. ಇದು ಧರ್ಮವೆಂದು ಸಜ್ಜನರು ಮತ್ತು ಪುರಾಣಗಳು ಹೇಳುತ್ತವೆ.

ಭರ್ತಾ ಸ್ತ್ರಿಯಂ ರಾಜಪುತ್ರಿ ಶುಭಂ ವಾ ಯದಿ ವಾऽಶುಭಮ್ ।
ಕಾರ್ಯಂ ನಿಯುಜ್ಯಾತ್ ಸುಶ್ರೋಣಿ ಕರ್ತವ್ಯಂ ತದಕಾಲಿಕಮ್ ॥೫೩॥

ಎಲೌ ರಾಜಪುತ್ರಿಯೇ, ಸುಶ್ರೋಣಿಯೇ, ಪತಿಯು ಪತ್ನಿಯನ್ನು ಕುರಿತು ಯಾವ ಶುಭವಾದ ಅಥವಾ ಅಶುಭವಾದ ಕಾರ್ಯವನ್ನು ವಿಧಿಸುತ್ತಾನೋ, ಅದನ್ನು ಪತ್ನಿಯಾದವಳು ವಿಚಾರ ಮಾಡದೆ ನಡೆಸಿಕೊಡಲೇಬೇಕು.

ವಿಶೇಷತಃ ಪುತ್ರಗೃಧ್ನುರ್ಹತಃ ಪ್ರಜನನಾತ್ ಸ್ವಯಮ್ ।
ಯಥಾऽಹಮನವದ್ಯಾಂಗಿ ಪುತ್ರದರ್ಶನಲಾಲಸಃ ॥೫೪॥

ಅದರಲ್ಲೂ ವಿಶೇಷವಾಗಿ ಮೈಥುನಕ್ರಿಯೆಯಿಂದ ನಿವೃತ್ತನಾಗಿ ಮಗನನ್ನು ಬಯಸಿ, ಮಗನನ್ನು ನೋಡುವ ಲಾಲಸೆಯಿಂದ ಹೇಳುವ ನನ್ನ ಮಾತನ್ನು ಅನವದ್ಯಾಂಗಿಯೇ, ನೀನು ನಡೆಸಿಕೊಡಲೇಬೇಕು.

ಅಯಂ ರಕ್ತಾಂಗುಲಿತಳಃ ಪದ್ಮಪತ್ರನಿಭಃ ಶುಭಃ ।
ಪ್ರಸಾದನಾರ್ಥಂ ಸುಶ್ರೋಣಿ ಶಿರಸ್ಯಭ್ಯುದ್ಯತೋಽಂಜಲಿಃ ॥೫೫॥

ಸುಶ್ರೋಣಿಯೇ, ಇದೋ ಈ ಕೆಂಪಾದ ತಳವುಳ್ಳ ಬೆರಳುಗಳನ್ನು ಹೊಂದಿದ ಪದ್ಮಪತ್ರದಂತಿರುವ ನನ್ನ ಎರಡು ಕೈಗಳನ್ನು ತಲೆಯ ಮೇಲೆ ಜೋಡಿಸಿ ನಿನ್ನ ಅನುಗ್ರಹವನ್ನು ಪ್ರಾರ್ಥಿಸುತ್ತಿದ್ದೇನೆ.

ಮನ್ನಿಯೋಗಾತ್ ಸುಕೇಶಾಂತೇ ಮತ್ತಃ ಶ್ರೇಯಸ್ಕರೈರ್ದ್ವಿಜೈಃ ।
ಅಪತ್ಯಾನಿ ವಿಶಿಷ್ಟಾನಿ ಕೈಶ್ಚಿದುತ್ಪಾದಯಾಬಲೇ ।
ತಕ್ಷತೇಽಹಂ ಪೃಥುಶ್ರೋಣಿ ಗಚ್ಛೇಯಂ ಪುತ್ರಿಣಾಂ ಗತಿಮ್ ॥೫೬॥

ಸುಂದರವಾದ ಬೈತಲೆಯುಳ್ಳವಳೇ, ನನ್ನ ನಿಯೋಗದಂತೆ ನನಗಿಂತ ಶ್ರೇಷ್ಠರಾದ ಯಾರಾದರೂ ಬ್ರಾಹ್ಮಣರಿಂದ ವಿಶಿಷ್ಟವಾದ ಮಕ್ಕಳನ್ನು ಪಡೆ. ಅಬಲೆಯೇ, ನಿತಂಬಿನಿಯೇ, ನಿನ್ನ ನಿಮಿತ್ತದಿಂದಾಗಿ ನಾನು ಮಕ್ಕಳನ್ನು ಪಡೆದವರು ಹೊಂದುವ ಲೋಕವನ್ನು ಪಡೆಯುತ್ತೇನೆ.

ವೈಶಂಪಾಯನಃ

ಏವಮುಕ್ತಾ ತತಃ ಕುಂತೀ ಪಾಂಡುಂ ಪರಪುರಂಜಯಮ್ ।
ಪ್ರತ್ಯುವಾಚ ವರಾರೋಹಾ ಭರ್ತುಃ ಪ್ರಿಯಚಿಕೀರ್ಷಯಾ ॥೫೭॥

ಹೀಗೆ ಹೇಳಲ್ಪಟ್ಟ ಸುಂದರಿಯಾದ ಕುಂತಿಯು, ಪರಪುರಂಜಯನಾದ ತನ್ನ ಪತಿಗೆ ಪ್ರಿಯವನ್ನು ಮಾಡಲು ಬಯಸಿ ಮಾತನಾಡಿದಳು.

ಕುಂತೀ

ಅಧರ್ಮಃ ಸುಮಹಾನೇಷ ಸ್ತ್ರೀಣಾಂ ಭರತಸತ್ತಮ ।
ಯತ್ ಪ್ರಸಾದಯತೇ ಭರ್ತಾ ಪ್ರಸಾದ್ಯಃ ಕ್ಷತ್ರಿಯರ್ಷಭ ॥೫೮॥

ಎಲೈ ಭರತಶ್ರೇಷ್ಠನೇ, ಕ್ಷತ್ರಿಯಶ್ರೇಷ್ಠನೇ, ಪತ್ನಿಯಿಂದ ಪ್ರಸನ್ನೀಕರಿಸಿಕೊಳ್ಳಲು ಪ್ರಯತ್ನಪಡಬೇಕಾದ ಪತಿಯು ತಾನೇ ಕೈಗಳನ್ನು ಮುಗಿದು ಪತ್ನಿಯ ಪ್ರಸಾದವನ್ನು ಬೇಡಿದರೆ ಇದು ಸ್ತ್ರೀಯರಿಗೆ ದೊಡ್ಡ ಅಧರ್ಮವೇ ಸರಿ.

ಶೃಣು ಚೇದಂ ಮಹಾಬಾಹೋ ಮಮ ಪ್ರೀತಿಕರಂ ವಚಃ ।
ಪಿತೃವೇಶ್ಮನ್ಯಹಂ ಬಾಲಾ ನಿಯುಕ್ತಾऽತಿಥಿಭೋಜನೇ ॥೫೯॥

ಉಗ್ರಂ ಪರ್ಯಚರಂ ಪೂರ್ವಂ ಬ್ರಾಹ್ಮಣಂ ಸಂಶಿತವ್ರತಮ್ ।
ನಿಗೂಢನಿಶ್ಚಯಂ ಧರ್ಮೇ ಯಂ ತಂ ದುರ್ವಾಸಸಂ ವಿದುಃ ॥೬೦॥

ಮಹಾಬಾಹುವೇ, ನಿನಗೆ ಸಂತೋಷವನ್ನು ಉಂಟು ಮಾಡುವ ಈ ಮಾತುಗಳನ್ನು ಕೇಳು. ನಾನು ಬಾಲ್ಯದಲ್ಲಿ, ತಂದೆಯ ಮನೆಯಲ್ಲಿ ಅತಿಥಿಗಳ ಭೋಜನದ ನಿರ್ವಹಣೆಯನ್ನು ಮಾಡುತ್ತಾ ಶ್ರೇಷ್ಠವ್ರತಧಾರಿಗಳಾದ, ಕೋಪವಶರಾದ ಒಬ್ಬ ಬ್ರಾಹ್ಮಣರನ್ನು ಪರಿಚರಿಸಿದೆ. ಧರ್ಮದ ವಿಷಯದಲ್ಲಿ ರಹಸ್ಯವಾದ ನಿಶ್ಚಯವುಳ್ಳ ಅವರನ್ನು ಜನರು ದುರ್ವಾಸರು ಎಂದು ಕರೆಯುತ್ತಾರೆ.

ತಮುಗ್ರಂ ಸಂಶಿತಾತ್ಮಾನಂ ಸರ್ವಯತ್ನೈರತೋಷಯಮ್ ।
ಸ ಮೇ ಹ್ಯಾಚಾರಸಂಯುಕ್ತಮಾಚಷ್ಟ ಭಗವಾನ್ ಋಷಿಃ ।
ಮಂತ್ರಗ್ರಾಮಂ ಚ ಮೇ ಪ್ರಾದಾದಬ್ರವೀಚ್ಚೈವ ಮಾಮಿದಮ್ ॥೬೧॥

ಕೋಪನಶೀಲರಾದ ಶ್ರೇಷ್ಠವಾದ ಮನಸ್ಸುಳ್ಳ ಅವರನ್ನು ನಾನು ಪ್ರಯತ್ನಪಟ್ಟು ಸಂತೋಷಪಡಿಸಿದೆನು. ಆ ಪೂಜ್ಯರಾದ ಋಷಿಗಳು ನಿಯಮಯುಕ್ತವಾದ ಮಂತ್ರ ಸಮೂಹವನ್ನು ನನಗೆ ಉಪದೇಶ ಮಾಡಿ ನನ್ನನ್ನು ಕುರಿತು ಹೀಗೆ ಹೇಳಿದರು.

ಯಂಯಂ ದೇವಂ ತ್ವಮೇತೇನ ಮಂತ್ರೇಣಾವಾಹಯಿಷ್ಯಸಿ ।
ಅಕಾಮೋ ವಾ ಸಕಾಮೋ ವಾ ಸ ಭವಿಷ್ಯತಿ ತೇ ವಶಮ್ ।
ಇತ್ಯುಕ್ತಾऽಹಂ ತದಾ ತೇನ ಪಿತೃವೇಶ್ಮನಿ ಭಾರತ ॥೬೨॥

ನೀನು ಈ ಮಂತ್ರದಿಂದ ಯಾವ ಯಾವ ದೇವತೆಯನ್ನು ಆಹ್ವಾನ ಮಾಡುವೆಯೋ, ಆ ದೇವತೆಯು ಅವನಿಗೆ ಇಚ್ಛೆ ಇರಲಿ ಇಲ್ಲದಿರಲಿ ಬಂದು ನಿನ್ನ ವಶನಾಗುವನು. ಎಲೈ ಭಾರತನೇ, ತಂದೆಯ ಮನೆಯಲ್ಲಿದ್ದಾಗ ಆ ಋಷಿಗಳು ನನಗೆ ಹೀಗೆ ಹೇಳಿದ್ದರು.

ಬ್ರಾಹ್ಮಣಸ್ಯ ವಚಸ್ತಥ್ಯಂ ತಸ್ಯ ಕಾಲೋಽಯಮಾಗತಃ ।
ಅನುಜ್ಞಾತಾ ತ್ವಯಾ ದೇವಮಾಹ್ವಯೇಯಂ ಪರಂತಪ ॥೬೩॥

ಎಲೈ ಪರಂತಪನೇ, ಆ ಬ್ರಾಹ್ಮಣರ ಮಾತು ಸತ್ಯವಾದುದು. ಅದರ ಪ್ರಯೋಜನವನ್ನು ಪಡೆಯುವ ಕಾಲ ಈಗ ಬಂದಿದೆ. ನಿನ್ನ ಅನುಮತಿಯನ್ನು ಪಡೆದು ನಾನು ದೇವತೆಯನ್ನು ಆಹ್ವಾನ ಮಾಡುತ್ತೇನೆ.

ಯಾಂ ಮೇ ವಿದ್ಯಾಂ ಮಹಾರಾಜ ಅದದಾತ್ ಸ ಮಹಾಯಶಾಃ ।
ಪರಾವರಜ್ಞೋ ಮೇಧಾವೀ ಕೃಪಯಾಽಭಿಪರಿಪ್ಲುತಃ ॥೬೪॥

ತಯಾಽಽಹೂತಃ ಸುರಃ ಪುತ್ರಂ ಪ್ರದಾಸ್ಯತಿ ಸುರೋಪಮಮ್ ।
ಅನಪತ್ಯಕೃತಂ ಯಸ್ತೇ ಶೋಕಂ ಹಿ ವ್ಯಪನೇಷ್ಯತಿ ॥೬೫॥

ಮಹಾರಾಜನೇ, ಮಹಾ ಕೀರ್ತಿವಂತನೂ, ಪರಾವರ ತತ್ವಜ್ಞಾನಿಯೂ, ಮೇಧಾವಿಯೂ ಆದ ಆ ಋಷಿಯು ನನ್ನ ಮೇಲಿನ ದಯೆಯಿಂದ ಆರ್ದ್ರರಾಗಿ ನನಗೆ ಯಾವ ವಿದ್ಯೆಯನ್ನು ಕೊಟ್ಟರೋ ಆ ವಿದ್ಯೆಯಿಂದ ದೇವತೆಯನ್ನು ಆಹ್ವಾನಿಸುತ್ತೇನೆ. ಆಹ್ವಾನಿಸಲ್ಪಟ್ಟ ದೇವತೆಯು ದೇವತಾಸದೃಶನಾದ ಪುತ್ರನನ್ನು ಕೊಡುವನು. ಅದರಿಂದ ಪುತ್ರನಿಲ್ಲದ ಪ್ರಯುಕ್ತ ನಿನಗೆ ಉಂಟಾಗಿರುವ ಶೋಕವನ್ನು ನಿವಾರಿಸುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಚತುರ್ದಶಾಧಿಕಶತತಮೋಽಧ್ಯಾಯಃ ॥

॥ ಸಂಭವಪರ್ವಣಿ ಏಕಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಹದಿನಾಲ್ಕನೆಯ
ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ- ಅಧ್ಯಾಯ-೧೨

ಇತೀರಿತೋಽಬ್ರವೀನ್ನೃಪೋ ನ ಧರ್ಮತೋ ವಿನಾ ಭುವಃ ।
ನೃಪೋಽಭಿರಕ್ಷಿತಾ ಭವೇತ್ ತದಾಹ್ವಯಾಶು ತಂ ವಿಭುಮ್ ॥೩೧॥

ಕುಂತಿ ಹೀಗೆ ಹೇಳಿದಾಗ ಪಾಂಡು ನುಡಿದ. 'ಧರ್ಮವಿಲ್ಲದೆ ರಾಜ ಭೂಮಿಗೆ ರಕ್ಷಕನಾಗಲಾರ. ಅದರಿಂದ ಬೇಗನೆ ಪ್ರಭುವಾದ ಯಮಧರ್ಮರಾಜನನ್ನು ಕರೆ'.

ಸ ಧರ್ಮಜಃ ಸುಧಾರ್ಮಿಕೋ ಭವೇದ್ಧಿ ಸೂನುರುತ್ತಮಃ ।
ಇತೀರಿತೇ ತಯಾ ಯಮಃ ಸಮಾಹುತೋಽಗಮದ್ ದ್ರುತಮ್ ॥

'ಯಮಧರ್ಮರಾಜನಿಂದ ಹುಟ್ಟುವ ಮಗ ಒಳ್ಳೆಯ ಧಾರ್ಮಿಕನಾಗುತ್ತಾನೆ' ಹೀಗೆ ಪಾಂಡು ಹೇಳಿದಾಗ ಕುಂತಿ ಯಮನನ್ನು ಮಂತ್ರಪೂರ್ವಕವಾಗಿ ಕರೆದಳು. ಅವನು ಬೇಗನೆ ಬಂದ.

ತತಶ್ಚ ಸದ್ಯ ಏವ ಸಾ ಸುಷಾವ ಪುತ್ರಮುತ್ತಮಮ್ ।
ಯುಧಿಷ್ಠಿರಂ ಯಮೋ ಹಿ ಸ ಪ್ರಪೇದ ಆತ್ಮಪುತ್ರನಾಮ್ ॥೩೩॥

ಆಗ ತತ್‌ಕ್ಷಣವೆ ಕುಂತಿ ಯುಧಿಷ್ಠಿರನೆಂಬ ಉತ್ತಮ ಪುತ್ರನನ್ನು ಹಡೆದಳು. ಯಮ ಹೀಗೆ ತನಗೆ ತಾನೇ ಪುತ್ರನಾಗಿ ಜನಿಸಿದ.

ಯಮೇ ಸುತೇ ತು ಕುಂತಿತಃ ಪ್ರಜಾತ ಏವ ಸೌಬಲೀ ।
ಅದಹ್ಯತೇರ್ಷ್ಯಯಾ ಚಿರಂ ಬಭಂಜ ಗರ್ಭಮೇವ ಚ ॥೩೪॥

ಕುಂತಿಯಲ್ಲಿ ಯಮ ಮಗನಾಗಿ ಹುಟ್ಟಿದಾಗಲೆ ಗಾಂಧಾರಿ ಅಸೂಯೆಯಿಂದ ಉರಿದಳು. ಕೂಡಲೆ ತನ್ನ ಗರ್ಭವನ್ನು ಹಿಚುಕಿಕೊಂಡಳು.

ಸ್ವಗರ್ಭಪಾತನೇ ಕೃತೇ ತಯಾಜಗಾಮ ಕೇಶವಃ ।
ಪರಾಶರಾತ್ಮಜೋ ನ್ಯಧಾದ್ ಘಟೇಷು ತಾನ್ ವಿಭಾಗಶಃ ॥೩೫॥

ಗಾಂಧಾರಿ ಗರ್ಭಪಾತ ಮಾಡಿಕೊಂಡಾಗ ವೇದವ್ಯಾಸರು ಬಂದರು. ಗರ್ಭದ ತುಣುಕುಗಳನ್ನು ಬೇರೆ ಬೇರೆಯಾಗಿ ಗಡಿಗೆಗಳಲ್ಲಿ ಇರಿಸಿದರು.

ಶತಾತ್ಮನಾ ವಿಭೇದಿತಾಃ ಶತಂ ಸುಯೋಧನಾದಯಃ ।
ಬಭೂವುರನ್ವಹಂ ತತಃ ಶತೋತ್ತರಾ ಚ ದುಃಶಲಾ ॥೩೬॥

ನೂರಾಗಿ ಭಾಗಗೊಂಡು ಸುಯೋಧನ ಮುಂತಾದವರು ನೂರು ಮಂದಿ ದಿನಕ್ಕೊಬ್ಬರಂತೆ ಹುಟ್ಟಿದರು. ನೂರಕ್ಕಿಂತ ಮೇಲಿನವಳು ದುಃಶಲೆ.

ಸ ದೇವಕಾರ್ಯಸಿದ್ಧಯೇ ರರಕ್ಷ ಗರ್ಭಮೀಶ್ವರಃ ।
ಪರಾಶರಾತ್ಮಜಃ ಪ್ರಭುರ್ವಿಚಿತ್ರವೀರ್ಯಚೋದ್ಭವಮ್ ॥೩೭॥

ಸರ್ವಶಕ್ತ ಪ್ರಭು ವೇದವ್ಯಾಸರು ದೇವಕಾರ್ಯಸಿದ್ಧಿಗಾಗಿ ಧೃತರಾಷ್ಟ್ರನಿಂದ ಜನಿಸಿದ ಗರ್ಭವನ್ನು ರಕ್ಷಿಸಿದರು.

ಕಲಿಃ ಸುಯೋಧನೋಽಜನಿ ಪ್ರಭೂತ ಬಾಹುವೀರ್ಯಯುಕ್ ।
ಪ್ರಧಾನವಾಯುಸನ್ನಿಧೇರ್ಬಲಾಧಿಕತ್ವಮಸ್ಯತತ್ ॥೩೮॥

ಕಲಿ ಸುಯೋಧನನಾಗಿ ಮಹಾ ಬಾಹು ಬಲಯುಕ್ತನಾಗಿ ಜನಿಸಿದ. ಪ್ರಧಾನ ವಾಯುವಿನ ಸನ್ನಿಧಾನದಿಂದ ಅವನಲ್ಲಿ ಅಧಿಕ ಬಲಬಂದಿತ್ತು.

ಪುರಾ ಹಿ ಮೇರುಮೂರ್ಧನಿ ತ್ರಿವಿಷ್ಟಪೌಕಸಾಂ ವಚಃ ।
ವಸುಂಧರಾತಳೋದ್ಭವೋನ್ಮುಖಂ ಶ್ರುತಂ ದಿತೇಃ ಸುತೈಃ ॥೩೯॥

ಹಿಂದೆ ಮೇರುಪರ್ವತದ ಶಿಖರದಲ್ಲಿ ದೇವತೆಗಳು ಭೂತಲದಲ್ಲಿ ಅವತರಿಸುವ ಬಗ್ಗೆ ಮಾತನಾಡಿಕೊಂಡುದ್ದನ್ನು ದೈತ್ಯರು ಕೇಳಿದ್ದರು.

ತತಸ್ತು ತೇ ತ್ರಿಲೋಚನಂ ತಪೋ ಬಲಾದತೋಷಯನ್ ।
ವೃತಶ್ಚ ದೇವಕಂಟಕೋ ಹ್ಯವಧ್ಯ ಏವ ಸರ್ವತಃ ॥೪೦॥

ಬಳಿಕ ಅವರು ತಪೋಬಲದಿಂದ ಶಿವನನ್ನು ಸಂತೋಷಗೊಳಿಸಿದರು. ದೇವತೆಗಳ ಕಂಟಕ ಪ್ರಾಯನಾದ ಕಲಿ ಸರ್ವರಿಂದಲೂ ಅವಧ್ಯನಾಗಬೇಕೆಂದು ವರ ಪಡೆದರು.

ವರಾದುಮಾಪತೇಸ್ತತಃ ಕಲಿಃ ಸ ದೇವಕಂಟಕಃ ।
ಬಭೂವ ವಜ್ರಕಾಯಯುಕ್ ಸುಯೋಧನೋ ಮಹಾಬಲಃ ॥೪೧॥

ಶಿವ ವರದಿಂದ ದೇವಕಂಟಕನಾದ ಆ ಕಲಿ ವಜ್ರಕಾಯ ಉಳ್ಳ ಮಹಾಬಲಿಷ್ಠನಾಗಿ ದುರ್ಯೋಧನನಾಗಿ ಜನಿಸಿದ.

ಅವಧ್ಯ ಏವ ಸರ್ವತಃ ಸುಯೋಧನೇ ಸಮುತ್ಥಿತೇ ।
ಘೃತಾಭಿಪೂರ್ಣಕುಂಭತಃ ಸ ಇಂದ್ರಜಿತ್ ಸಮುತ್ಥಿತಃ ॥೪೨॥

ತುಪ್ಪದಿಂದ ತುಂಬಿದ ಗಡಿಗೆಯಿಂದ ಸರ್ವರಿಗೂ ಅವಧ್ಯನಾದ ಸುಯೋಧನ ಹುಟ್ಟಿಬರಲು ಅದೇ ರೀತಿಯಲ್ಲಿ ತುಪ್ಪದಿಂದ ತುಂಬಿದ ಇನ್ನೊಂದು ಗಡಿಗೆಯಿಂದ ಇಂದ್ರಜಿತ್ ಹುಟ್ಟಿದ.

ಸ ದುಃಖಿಶಾಸನೋಽಭವತ್ ತತೋಽತಿಕಾಯಸಂಭವಃ ।
ಸ ವೈ ವಿಕರ್ಣ ಉಚ್ಯತೇ ತತಃ ಖರೋಽಭವದ್ ಬಲೀ ॥೪೩॥

ಇಂದ್ರಜಿತ್ ದುಃಶಾಸನನಾಗಿ ಹುಟ್ಟಿದ. ಬಳಿಕ ಅತಿಕಾಯನ ಉತ್ಪತ್ತಿ. ಅವನು ವಿಕರ್ಣನೆನಿಸುತ್ತಾನೆ. ಬಳಿಕ ಬಲಿಷ್ಠನಾದ ಖರ ಹುಟ್ಟಿದ.

ಸ ಚಿತ್ರಸೇನನಾಮಕಃ ತಥಾಪರೇ ಚ ರಾಕ್ಷಸಾಃ ।
ಬಭೂವುರುಗ್ರಪೌರುಷೌ ವಿಚಿತ್ರ ವೀರ್ಯಜಾತ್ಮಜಾಃ ॥೪೪॥

ಖರ ಚಿತ್ರಸೇನ ನಾಮಕನಾದ. ಹಾಗೇ ಬೇರೆ ರಾಕ್ಷಸರೂ ಭಯಂಕರ ಪೌರುಷ ಉಳ್ಳ ಧೃತರಾಷ್ಟ್ರ ಪುತ್ರರಾಗಿ ಜನಿಸಿದರು.

ಸಮಸ್ತದೋಷರೂಪಿಣಃ ಶರೀರಿಣೋ ಹಿ ತೇಽಭವನ್ ।
ಮೃಷೇತಿ ನಾಮತೋ ಹಿ ಯಾ ಬಭೂವ ದುಃಶಳಾಸುರೀ ॥೪೫॥

ಕುಹೂಪ್ರವೇಶಸಂಯುತಾ ಯಯಾರ್ಜುನೇರ್ವಧಾಯ ಹಿ ।
ತಪಃ ಕೃತಂ ತ್ರಿಶೂಲಿನೇ ತತೋ ಹಿ ಸಾತ್ರ ಜಜ್ಞುಷೀ ॥೪೬॥

ಹೀಗೆ ಗಡಿಗೆಯಲ್ಲಿ ಶರೀರಧಾರಿಗಳಾಗಿ ಜನಿಸಿದವರೆಲ್ಲ ಸಕಲ ದೋಷ ರೂಪರಾದ ರಾಕ್ಷಸರು. ಮೃಷಾ ಎಂಬ ಹೆಸರಿನ ಅಸುರ ಸ್ತ್ರೀ ಕುಹೂದೇವಿಯ ಆವೇಶದಿಂದ ಯುಕ್ತಳಾಗಿ ದುಃಶಲೆಯಾಗಿ ಹುಟ್ಟಿದಳು. ಅಭಿಮನ್ಯುವಿನ ವಧೆಗಾಗಿ ಶಿವನನ್ನು ಒಲಿಸಲು ಅವಳು ತಪಸ್ಸು ಮಾಡಿದ್ದಳು. ಅದರಿಂದ ಅವಳು ಇಲ್ಲಿ ಜನಿಸಿದಳು.

ತಯೋದಿತೋ ಹಿ ಸೈಂಧವೋ ಬಭೂವ ಕಾರಣಂ ವಧೇ ।
ಸ ಕಾಲಕೇಯದಾನವಸ್ತದರ್ಥಮಾಸ ಭೂತಳೇ ॥೪೭॥

ದುಃಶಲೆ ಹೇಳಿದ್ದರಿಂದ ಸೈಂಧವ ಅಭಿಮನ್ಯುವಿನ ವಧೆ ಮಾಡಿಸಿದ. ಸೈಂಧವ ಒಬ್ಬ ಕಾಲಿಕೇಯ ದಾನವ. ಅವನು ಅಭಿಮನ್ಯು ವಧೆಗಾಗಿಯೆ ಭೂಮಿಯಲ್ಲಿ ಹುಟ್ಟಿದ.

ತಥಾ ಸ ನಿರ್ಋಥಾಭಿಧೋಽನುಜಃ ಸ ನಿರ್ಋತೇರಭೂತ್ ।
ಸ ನಾಸಿಕಾಮರುದ್ಯುತೋ ಯಯುತ್ಸುನಾಮಕಃ ಕೃತೀ ॥೪೮॥

ನಿರ್ಋತಿಯ ತಮ್ಮ ನಿರ್ಋತ ಎಂಬುವನು. ಜ್ಞಾನಿ, ನಾಸಿಕ್ಯಪ್ರಾಣ ಯುಕ್ತನಾಗಿ ಯುಯುತ್ಸು ನಾಮಕನಾಗಿ ಜನಿಸಿದ.

ಸ ಚಾಂಬಿಕೇಯವೀರ್ಯಜಃ ಸುಯೋಧನಾದನಂತರಃ ।
ಬಭೂವ ವೈಶ್ಯಕನ್ಯಕೋದರೋದ್ಭವೋ ಹರಿಪ್ರಿಯಃ ॥೪೯॥

ಯುಯುತ್ಸು ವೈಶ್ಯಕನ್ಯೆಯಲ್ಲಿ ಧೃತರಾಷ್ಟ್ರನ ವೀರ್ಯದಿಂದ ಜನಿಸಿದವ. ದುರ್ಯೋಧನನ ತಮ್ಮ. ಹರಿಪ್ರಿಯನಾಗಿದ್ದ.

ಯುಧಿಷ್ಠಿರೇ ಜಾತ ಉವಾಚ ಪಾಂಡು-
ರ್ಬಾಹ್ವೋರ್ಬಲಾಜ್ಜ್ಞಾನಬಲಾಚ್ಚ ಧರ್ಮಃ ।
ರಕ್ಷ್ಯೋಽನ್ಯಥಾ ನಾಶಮುಪೈತಿ ತಸ್ಮಾತ್
ಬಲದ್ವಯಾಢ್ಯಂ ಪ್ರಸುವಾಶು ಪುತ್ರಮ್ ॥೫೦॥

ಯುಧಿಷ್ಠಿರ ಹುಟ್ಟಿದಾಗ ಪಾಂಡು ಕುಂತಿಗೆ ಹೇಳಿದ, 'ಧರ್ಮವನ್ನು ಬಾಹುಬಲದಿಂದಲೂ ಜ್ಞಾನಬಲದಿಂದಲೂ ರಕ್ಷಿಸಬೇಕು. ಇಲ್ಲದಿದ್ದರೆ ಅದು ನಾಶಹೊಂದುತ್ತದೆ. ಅದರಿಂದ ಎರಡೂ ಬಲದಿಂದ ಆಢ್ಯನಾದ ಮಗನಿಗೆ ಜನ್ಮನೀಡು'.

ಯಜ್ಞಾಧಿಕೋ ಹ್ಯಶ್ವಮೇಧೋ ಮನುಷ್ಯ
ದೃಶ್ಯೇಷು ತೇಜಸ್ವ್ಯಧಿಕೋ ಹಿ ಭಾಸ್ಕರಃ ।
ವರ್ಣೇಷು ವಿಪ್ರಃ ಸಕಲೈರ್ಗುಣೈರ್ವರೋ
ದೇವೇಷು ವಾಯುಃ ಪುರುಷೋತ್ತಮಾದೃತೇ ॥೫೧॥

'ಯಜ್ಞಗಳಲ್ಲಿ ಶ್ರೇಷ್ಠ ಅಶ್ವಮೇಧ. ಮನುಷ್ಯರು ಕಾಣಬಲ್ಲ ತೇಜಸ್ಸುಗಳಲ್ಲಿ ಶ್ರೇಷ್ಠ ಸೂರ್ಯ. ನಾಲ್ಕು ವರ್ಣಗಳಲ್ಲಿ ಶ್ರೇಷ್ಠ ಬ್ರಾಹ್ಮಣ. ದೇವತೆಗಳಲ್ಲಿ ಎಲ್ಲ ಗುಣಗಳಲ್ಲಿಯೂ ಶ್ರೇಷ್ಠ. ಪುರುಷೋತ್ತಮನಾದ ಶ್ರೀಹರಿಯನ್ನು ಬಿಟ್ಟರೆ, ವಾಯುವೆ'.

ವಿಶೇಷತೋಽಪ್ಯೇಷ ಪಿತೈವ ಮೇ ಪ್ರಭು
ವ್ಯಾಸಾತ್ಮನಾ ವಿಷ್ಣುರನಂತ ಪುರುಷಃ ।
ಅತಶ್ಚ ತೇ ಶ್ವಶುರೋ ನೈವ ಯೋಗ್ಯೋ
ದಾತುಂ ಪುತ್ರಂ ವಾಯುಮುಪೈಹಿ ತತ್ ಪ್ರಭುಮ್ ॥೫೨॥

'ಅನಂತಶಕ್ತಿ ಉಳ್ಳ ಪ್ರಭುವಾದ ವಿಷ್ಣು ವ್ಯಾಸರೂಪದಿಂದ ನನಗೆ ವಿಶೇಷವಾಗಿ ತಂದೆ. ಆದರಿಂದ ನಿನಗೆ ಮಾವ. ನಿನಗೆ ಪುತ್ರನನ್ನು ನೀಡಲು ತಕ್ಕವನಲ್ಲ. ಆದರಿಂದ ಪ್ರಭುವಾದ ವಾಯುವನ್ನೇ ಆಶ್ರಯಿಸು.

ಇತೀರಿತೇ ಪೃಥಯಾಹೂತವಾಯು
ಸಂಸ್ಪರ್ಶಮಾತ್ರಾದಭವದ್ ಬಲದ್ವಯೇ ।
ಸಮೋ ಜಗತ್ಯಸ್ತಿ ನ ಯಸ್ಯ ಕಶ್ಚಿತ್
ಭಕ್ತೌ ಚ ವಿಷ್ಣೋರ್ಭಗವದ್ವಶಃ ಸುತಃ ॥೫೩॥

ಪಾಂಡು ಹೀಗೆ ಹೇಳಲು ಕುಂತಿ ವಾಯುವನ್ನು ಮಂತ್ರಪೂರ್ವಕವಾಗಿ ಕರೆದಳು. ಅವನ ಸ್ಪರ್ಶಮಾತ್ರದಿಂದ ಬಾಹುಬಲ ಜ್ಞಾನಬಲಗಳೆಂಬ ಎರಡು ಬಲಗಳಲ್ಲಿಯೂ ವಿಷ್ಣುಭಕ್ತರಲ್ಲಿಯೂ ಯಾರಿಗೆ ಸಮನಾದವನು ಜಗತ್ತಿನಲ್ಲಿ ಯಾರೂ ಇಲ್ಲವೊ ಯಾರು ಭಗವಂತನಿಗೆ ಮಾತ್ರ ಅಧೀನನೋ ಅಂಥ ಒಬ್ಬ ಮಗ ಹುಟ್ಟಿದ.

ಸ ವಾಯುರೇವಾಭವದತ್ರ ಭೀಮ
ನಾಮಾ ಭೃತಾ ಮಾಃ ಸಕಲಾ ಹಿ ಯಸ್ಮಿನ್ ।
ಸ ವಿಷ್ಣುನೇಶೇನ ಯುತಃ ಸದೈವ
ನಾಮ್ನಾ ಸೇನೋ ಭೀಮಸೇನಸ್ತತೋಽಸೌ ॥೫೪॥

ಆ ವಾಯುವೆ ಭೂಮಿಯಲ್ಲಿ ಹುಟ್ಟಿ ಭೀಮನೆಂದು ಹೆಸರು ಪಡೆದ. ಏಕೆಂದರೆ ಅವನಲ್ಲಿ ಎಲ್ಲ ವಿದ್ಯೆಗಳೂ ಪೂರ್ಣವಾಗಿ ಇವೆ. ಒಡೆಯನಾದ ವಿಷ್ಣುವಿನಿಂದ ಸದಾ

ಯುಕ್ತನಾಗಿಯೇ ಇರುವುದರಿಂದ ಸೇನ ಎಂದೂ ಅವನಿಗೆ ಹೆಸರು. ಅದರಿಂದ ಭೀಮಸೇನನೆನಿಸಿದ.

ತಜ್ಜನ್ಮಮಾತ್ರೇಣ ಧರಾ ವಿದಾರಿತಾ
ಶಾರ್ದೂಲಭೀತಾಜ್ಜನನೀಕರಾದ್ ಯದಾ ।
ಪಪಾತ ಸಂಚೂರ್ಣಿತ ಏವ ಪರ್ವತ
ಸ್ತೇನಾಖಿಲೋಽಸೌ ಶತಶೃಂಗನಾಮಾ ॥೫೫॥

ಭೀಮಸೇನ ಹುಟ್ಟಿದ ಮಾತ್ರಕ್ಕೆ ಭೂಮಿ ಬಿರಿಯಿತು. ಹುಲಿಯನ್ನು ಕಂಡು ನಡುಗಿದ ಕುಂತಿಯ ಕೈಯಿಂದ ಭೀಮ ಬಿದ್ದಾಗ ಶತಶೃಂಗ ಎಂಬ ಹೆಸರಿನ ಆ ಪರ್ವತವಿಡೀ ಪುಡಿಯಾಯಿತು.

ತಸ್ಮಿನ್ ಪ್ರಜಾತೇ ರುಧಿರಂ ಪ್ರಸುಸ್ರುವು
ರ್ಮಹಾಸುರಾ ವಾಹನಸೈನ್ಯಸಂಯುತಾಃ ।
ನೃಪಾಶ್ಚ ತತ್ಪಕ್ಷಭವಾಃ ಸಮಸ್ತಾ
ಸ್ತದಾ ಭೀತಾ ಆಸುರಾ ರಾಕ್ಷಸಾಶ್ಚ ॥೫೬॥

ಭೀಮಸೇನ ಹುಟ್ಟಿದಾಗ ಮೂಲರೂಪದಲ್ಲಿರುವ ಮಹಾಅಸುರರೂ ಅವರ ಪಕ್ಷದಲ್ಲಿ ಜನಿಸಿದ ವಾಹನ ಸೈನ್ಯಯುಕ್ತರಾದ ಅಸುರ ಸ್ವಭಾವದ ರಾಜರೂ ರಾಕ್ಷಸರೂ ಎಲ್ಲರೂ ಭೀತರಾದರು, ರಕ್ತ ಸುರಿಸಿದರು.

★ ★ ★ ★

ನೂರ ಹದಿನೈದನೆಯ ಅಧ್ಯಾಯ

(ಪಾಂಡುವಿನ ಹರ್ಷ, ಯಮ ವಾಯುಗಳಿಂದ ಕುಂತಿಯಲ್ಲಿ ಯುಧಿಷ್ಠಿರ ಭೀಮಸೇನರ ಉತ್ಪತ್ತಿ. ಅಶರೀರವಾಣಿ.)

ಕುಂತೀ

ಅಪತ್ಯಕಾಮ ಏವಂ ಸ್ಯಾನ್ಮಮಾಪತ್ಯಂ ಭವೇದಿತಿ ।
ವಿಪ್ರಂ ವಾ ಗುಣಸಂಪನ್ನಂ ಸರ್ವಭೂತಹಿತೇ ರತಮ್ ।
ಅನುಜಾನೀಹಿ ಭದ್ರಂ ತೇ ದೈವತಂ ಹಿ ಪತಿಃ ಸ್ತ್ರಿಯಾಃ ॥೧॥

ಅಪತ್ಯಕಾಮನಾದ ರಾಜನೇ, ನಾನು ಈ ರೀತಿ ಪುತ್ರರನ್ನು ಪಡೆಯುತ್ತೇನೆ. ನಿನಗೆ ಮಂಗಳವಾಗಲಿ. ದೇವತೆಯನ್ನಾಗಲೀ ಅಥವಾ ಸರ್ವಭೂತಹಿತದಲ್ಲಿರತನಾದ ಗುಣಸಂಪನ್ನನಾದ ಬ್ರಾಹ್ಮಣನನ್ನಾಗಲೀ ಹೊಂದಲು ಅನುಜ್ಞೆಯನ್ನು ಕೊಡು. ಪತಿಯೇ ಸ್ತ್ರೀಯರಿಗೆ ದೇವತೆ.

ಯಂ ತ್ವಂ ವಕ್ಷ್ಯಸಿ ಧರ್ಮಜ್ಞ ದೇವಂ ಬ್ರಾಹ್ಮಣಮೇವ ವಾ ।
ಯಥೋದ್ದಿಷ್ಟಂ ತ್ವಯಾ ವೀರ ತತ್ ಕರ್ತಾಸ್ಮಿ ಮಹಾಭುಜ ।
ದೇವಾತ್ ಪುತ್ರಫಲಂ ಸದ್ಯೋ ವಿಪ್ರಾತ್ ಕಾಲಾಂತರೇ ಭವೇತ್ ॥೨॥

ಎಲೈ ಧರ್ಮಜ್ಞನೇ, ನೀನು ಯಾವ ದೇವನನ್ನು ಅಥವಾ ಬ್ರಾಹ್ಮಣನನ್ನು ಸೂಚಿಸುವೆಯೋ ನಾನು ಅದರಂತೆಯೇ ನಡೆದುಕೊಳ್ಳುವೆನು. ಮಹಾಭುಜನಾದ ವೀರನೇ ದೇವತೆಯಿಂದ ತಕ್ಷಣದಲ್ಲಿಯೇ ಪುತ್ರಫಲವು ದೊರೆಯುವುದು. ಬ್ರಾಹ್ಮಣನಿಂದಾದರೆ ಕಾಲಾಂತರದಲ್ಲಿ ವಿಳಂಬವಾಗಿ ದೊರೆಯುವುದು.

ಆವಾಹಯಾಮಿ ಕಂ ದೇವಂ ಕದಾ ವಾ ಭರತರ್ಷಭ ।
ತತ್ ತ್ವದಾಜ್ಞಾಂ ಪ್ರತೀಕ್ಷಂತೀಂ ವಿದ್ಧ್ಯಸ್ಮಿನ್ ಕರ್ಮಣೇಪ್ಸಿತೇ ॥೩॥

ಭರತರ್ಷಭನೇ, ನಿನಗೆ ಇಷ್ಟವಾದ ಈ ಕಾರ್ಯದಲ್ಲಿ ನಿನಗೆ ಇಷ್ಟವಾದ ಯಾವ ದೇವನನ್ನು ಆಹ್ವಾನಿಸಲಿ ಎಂಬ ವಿಷಯದಲ್ಲಿ ನಿನ್ನ ಆಜ್ಞೆಯನ್ನು ನಿರೀಕ್ಷಿಸುತ್ತಿರುವವಳನ್ನಾಗಿ ನನ್ನನ್ನು ತಿಳಿ.

ಪಾಂಡುಃ

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ತ್ವಂ ನೋ ಧಾತ್ರೀ ಕುಲಸ್ಯ ಹಿ ।
ನಮೋ ಮಹರ್ಷಯೇ ತಸ್ಮೈ ಯೇನ ದತ್ತೋ ವರಸ್ತವ ॥೪॥

ನಾನು ಧನ್ಯನಾಗಿದ್ದೇನೆ. ಅನುಗೃಹೀತನೂ ಆಗಿದ್ದೇನೆ. ನೀನೇ ನಮ್ಮ ಕುಲದ ಸಾಕುತಾಯಿ. ನಿನಗೆ ವರವನ್ನು ನೀಡಿದ ಆ ಮಹರ್ಷಿಗಳಿಗೆ ನಮಸ್ಕಾರ.

ನ ಚಾಧರ್ಮೇಣ ಧರ್ಮಜ್ಞೇ ಶಕ್ಯಾಃ ಪಾಲಯಿತುಂ ಪ್ರಜಾಃ ।
ತಸ್ಮಾತ್ ತ್ವಂ ಪುತ್ರಲಾಭಾಯ ಸಂತಾನಾಯ ಮಮೈವ ಚ ।
ಪ್ರವರಂ ಸರ್ವದೇವಾನಾಂ ಧರ್ಮಮಾವಾಹಯಾಬಲೇ ॥೫॥

ಧರ್ಮಜ್ಞೆಯೇ, ಅಧರ್ಮದಿಂದ ಪ್ರಜೆಗಳನ್ನು ರಕ್ಷಿಸುವುದು ಸಾಧ್ಯವಿಲ್ಲ. ಅಬಲೆಯೇ, ಆದ್ದರಿಂದ ನೀನು ನಮ್ಮ ಕುಲದ ಸಂತಾನವಾದ ಪುತ್ರನನ್ನು ಪಡೆಯಲು ಸರ್ವದೇವತೆಗಳಲ್ಲಿ ಶ್ರೇಷ್ಠನಾದ ಯಮಧರ್ಮನನ್ನು ಆಹ್ವಾನಿಸು.

ವೈಶಂಪಾಯನಃ

ಪಾಂಡುನಾ ಸಮನುಜ್ಞಾತಾ ಭಾರತೇನ ಯಶಸ್ವಿನಾ ।
ಮತಿಂ ಚಕ್ರೇ ಮಹಾರಾಜ ಧರ್ಮಸ್ಯಾವಾಹನೇ ತದಾ ॥೬॥

ಮಹಾರಾಜನೇ, ಕೀರ್ತಿವಂತನಾದ ಭರತಶ್ರೇಷ್ಠನಾದ ಪಾಂಡುವಿನಿಂದ ಹೀಗೆ ಆದೇಶವನ್ನು ಸ್ವೀಕರಿಸಿದ ಕುಂತಿಯು ಧರ್ಮನನ್ನು ಆಹ್ವಾನ ಮಾಡಲು ನಿರ್ಧರಿಸಿದಳು.

ಪಾಂಡುಃ

ಅದ್ಯೈವ ತ್ವಂ ವರಾರೋಹೇ ಪ್ರಯತಸ್ವ ಯಥಾವಿಧಿ ।
ಧರ್ಮಮಾವಾಹಯ ಶುಭೇ ಸ ಹಿ ದೇವೇಷು ಧರ್ಮಭಾಕ್ ॥೭॥

ಸುಂದರಿಯೇ, ಈ ದಿನವೇ ನೀನು ವಿಧಿವತ್ತಾಗಿ ಪ್ರಯತ್ನವನ್ನು ಮಾಡು. ಶುಭಳಾದವಳೇ ಧರ್ಮನನ್ನು ಆಹ್ವಾನಿಸು. ದೇವತೆಗಳಲ್ಲಿ ಅವನು ಧರ್ಮಯುಕ್ತನಾದವನು.

ಅಧರ್ಮೇಣ ನ ಧರ್ಮೋ ವೈ ಸಂಯುಜ್ಯೇತ ಕದಾಚನ ।
ಲೋಕಶ್ಚಾಪಿ ವರಾರೋಹೇ ಧರ್ಮೋಽಯಮಿತಿ ಮನ್ಯತೇ ॥೮॥

ಧರ್ಮನು ಎಂದೂ ಅಧರ್ಮದಿಂದ ಸಂಯುಕ್ತನಾಗುವುದಿಲ್ಲ. ಸುಂದರಿಯೇ, ಅವನು ಮಾಡಿದ ಎಲ್ಲಾ ಕಾರ್ಯಗಳನ್ನೂ ಲೋಕವು ಧರ್ಮವೆಂದೇ ಸ್ವೀಕರಿಸುತ್ತದೆ.

ಧಾರ್ಮಿಕಶ್ಚ ಕುರೂಣಾಂ ಸ ಭವಿಷ್ಯತಿ ನ ಸಂಶಯಃ ।
ದತ್ತಸ್ಯ ತಸ್ಯ ಧರ್ಮೇಣ ನಾಧರ್ಮೇ ರಮತೇ ಮನಃ ॥೯॥

ಕುರುವಂಶದಲ್ಲಿ ಒಬ್ಬ ಧಾರ್ಮಿಕನು ಜನಿಸುತ್ತಾನೆ. ಯಮಧರ್ಮನು ಕೊಟ್ಟ ಆ ಪುತ್ರನಿಗೆ ಎಂದೂ ಅಧರ್ಮದಲ್ಲಿ ಮನಸ್ಸು ರಮಿಸುವುದಿಲ್ಲ. ಈ ವಿಷಯದಲ್ಲಿ ಸಂಶಯವಿಲ್ಲ.

ಧರ್ಮಾದಿಕಂ ಹಿ ಧರ್ಮಜ್ಞೇ ಧರ್ಮಾಂತಂ ಧರ್ಮಮಧ್ಯಮಮ್ ।
ಅಪತ್ಯಮಿಷ್ಟಂ ಲೋಕೇಷು ಯಶಃಕೀರ್ತಿವಿವರ್ಧನಮ್ ॥೧೦॥

ಧರ್ಮಜ್ಞೆಯೇ, ಪ್ರಾರಂಭದಲ್ಲಿಯೂ, ಮಧ್ಯದಲ್ಲಿಯೂ ಮತ್ತು ಕೊನೆಯಲ್ಲಿಯೂ ಧರ್ಮವನ್ನು ಆಚರಿಸುವ ಪುತ್ರನು ಲೋಕದಲ್ಲಿ ಬಯಸಲ್ಪಡುತ್ತಾನೆ. ಅವನಿಂದ ಯಶಸ್ಸೂ, ಕೀರ್ತಿಯೂ ಅಭಿವೃದ್ಧಿಯನ್ನು ಹೊಂದುತ್ತವೆ.

ತತೋ ಧರ್ಮಂ ಪುರಸ್ಕೃತ್ಯ ನಿಯತಾ ತ್ವಂ ಶುಚಿಸ್ಮಿತೇ ।
ಆಕಾರಾಚಾರಸಂಪನ್ನಾ ಭಜಸ್ವಾರಾಧಯ ಸ್ವಯಮ್ ॥೧೧॥

ಶುಚಿಸ್ಮಿತೆಯೇ, ಆದ್ದರಿಂದ ಧರ್ಮನನ್ನು ಉದ್ದೇಶಿಸಿ ನಿಯಮವನ್ನು ಧರಿಸಿ ಒಳ್ಳೆಯ ಆಕಾರ ಮತ್ತು ಆಚಾರಗಳಿಂದ ಕೂಡಿದವಳಾಗಿ ನೀನೇ ಅವನನ್ನು ಆರಾಧಿಸು.

ವೈಶಂಪಾಯನಃ

ಸಾ ತಥೋಕ್ತಾ ತಥೇತ್ಯುಕ್ತ್ವಾ ತೇನ ಭರ್ತ್ರಾ ವರಾಂಗನಾ ।
ಅಭಿವಾದ್ಯಾಭ್ಯನುಜ್ಞಾತಾ ಪ್ರದಕ್ಷಿಣಮಥಾಕರೋತ್ ॥೧೨॥

ಪತಿಯಿಂದ ಹಾಗೆ ಹೇಳಲ್ಪಟ್ಟ ವರಾಂಗನೆಯಾದ ಕುಂತಿಯು ಹಾಗೆಯೇ ಆಗಲಿ ಎಂದು ಹೇಳಿ ಪತಿಯ ಅನುಜ್ಞೆಯನ್ನು ಪಡೆದು ಅವನಿಗೆ ನಮಸ್ಕರಿಸಿ ಪ್ರದಕ್ಷಿಣೆಯನ್ನು ಮಾಡಿದಳು.

ಸಂವತ್ಸರೋಷಿತೇ ಗರ್ಭೇ ಗಾಂಧಾರ್ಯಾಂ ಜನಮೇಜಯ ।
ಆಜುಹಾವ ತತೋ ಧರ್ಮಂ ಕುಂತೀ ಪುತ್ರಾರ್ಥಮಚ್ಯುತಮ್ ॥೧೩॥

ಜನಮೇಜಯನೇ, ಗಾಂಧಾರಿಯು ಧರಿಸಿದ್ದ ಗರ್ಭಕ್ಕೆ ಒಂದು ವರ್ಷವು ತುಂಬುತ್ತಿರುವಾಗ ಕುಂತಿಯು ಧರ್ಮಾದಿ ಗುಣಗಳಿಂದ ಚ್ಯುತನಾಗದಂತಹ ಧರ್ಮನನ್ನು ಪುತ್ರನ ಸಲುವಾಗಿ ಆಹ್ವಾನ ಮಾಡಿದಳು.

ಸಾ ಬಲಿಂ ತ್ವರಿತಾ ದೇವೀ ಧರ್ಮಾಯೋಪಜಹಾರ ಹ ।
ಜಾನಂತೀ ಧರ್ಮಮಗ್ರ್ಯಂ ವೈ ಮಂತ್ರೈರ್ವಶಮುಪಾನಯತ್ ॥೧೪॥

ಅವಳು ಶೀಘ್ರವಾಗಿ ಧರ್ಮನಿಗೆ ಪೂಜೆಯನ್ನು ಸಲ್ಲಿಸಿದಳು. ಶ್ರೇಷ್ಠವಾದ ಧರ್ಮವನ್ನು ತಿಳಿದ ಅವಳು ಮಂತ್ರಗಳಿಂದ ಯಮನನ್ನು ವಶಪಡಿಸಿಕೊಂಡಳು.

ಆಹೂತೋ ನಿಯಮಾತ್ ಕುಂತ್ಯಾ ಸರ್ವಭೂತೈರ್ನಮಸ್ಕೃತಃ ।
ದದೃಶೇ ಭಗವಾನ್ ಧರ್ಮಃ ಸಂತಾನಾರ್ಥಾಯ ಪಾಂಡವೇ ॥೧೫॥

ನಿಯಮನಿಷ್ಠಳಾದ ಕುಂತಿಯಿಂದ ಆಹ್ವಾನಿಸಲ್ಪಟ್ಟಾಗ ಸರ್ವಪ್ರಾಣಿಗಳಿಂದಲೂ ನಮಸ್ಕೃತನಾದ ಭಗವಾನ್ ಧರ್ಮನು ಪಾಂಡುವಿಗೆ ಸಂತಾನವನ್ನು ಕೊಡುವುದಕ್ಕೋಸ್ಕರ ಪ್ರತ್ಯಕ್ಷನಾದನು.

ತಸ್ಮಿನ್ ಬಹುಮೃಗೇಽರಣ್ಯೇ ಶತಶೃಂಗೇ ನಗೋತ್ತಮೇ ।
ಪಾಂಡೋರರ್ಥೇ ಮಹಾಭಾಗ ಕುಂತೀ ಧರ್ಮಮುಪಾಗಮತ್ ॥೧೬॥

ಎಲೈ ಮಹಾಭಾಗನೇ, ಬಹು ಮೃಗಗಳಿದ್ದ ಅರಣ್ಯದಿಂದ ಕೂಡಿದ ಆ ಶತಶೃಂಗಪರ್ವತಶ್ರೇಷ್ಠದಲ್ಲಿ ಪಾಂಡುವಿನ ಸಲುವಾಗಿ ಕುಂತಿಯು ಧರ್ಮನನ್ನು ಸಮೀಪಿಸಿದಳು.

ಋತುಕಾಲೇ ಶುಚಿಃ ಸ್ನಾತಾ ಶುಕ್ಲವಸ್ತ್ರಾ ಮನಸ್ವಿನೀ ।
ಶಯ್ಯಾಂ ಜಗಾಮ ಸುಶ್ರೋಣೀ ಸಹ ಧರ್ಮೇಣ ಸುವ್ರತಾ ॥೧೭॥

ಋತುಕಾಲದಲ್ಲಿ ಸ್ನಾನ ಮಾಡಿ ಶುಚಿಯೂ, ಮನಸ್ವಿನಿಯೂ, ಸುಂದರಿಯೂ ಆದ ಅವಳು ಶುಕ್ಲವಸ್ತ್ರಗಳನ್ನು ಧರಿಸಿ ಧರ್ಮನ ಜೊತೆಯಲ್ಲಿ ಶಯನವನ್ನು ಸೇರಿದಳು.

ಧರ್ಮೇಣ ಸಹ ಸಂಗಮ್ಯ ಯೋಗಮೂರ್ತಿಧರೇಣ ಸಾ ।
ಲೇಭೇ ಪುತ್ರಂ ಮಹಾಭಾಗಂ ಸರ್ವಪ್ರಾಣಭೃತಾಂ ಹಿತಮ್ ॥೧೮॥

ಅವಳು ಯೋಗಶರೀರವನ್ನು ಧರಿಸಿದ್ದ ಯಮಧರ್ಮನ ಜೊತೆಯಲ್ಲಿ ಸಂಗಮವನ್ನು ಹೊಂದಿ ಮಹಾಭಾಗ್ಯಶಾಲಿಯೂ, ಎಲ್ಲಾ ಪ್ರಾಣಿಗಳಿಗೂ ಹಿತನೂ ಆದ ಪುತ್ರನನ್ನು ಪಡೆದಳು.

ಐಂದ್ರೇ ಚಂದ್ರಮಸಾ ಯುಕ್ತೇ ಮುಹೂರ್ತೇಽಭಿಜಿತೇಽಷ್ಟಮೇ ।
ದಿವಾಮಧ್ಯಂಗತೇ ಸೂರ್ಯೇ ತಿಥೌ ಪುಣ್ಯೇಽಭಿಪೂಜಿತೇ ।
ಸಮೃದ್ಧಯಶಸಂ ಕುಂತೀ ಸುಷಾವ ಸಮಯೇ ಸುತಮ್ ॥೧೯॥

ಚಂದ್ರನು ಜ್ಯೇಷ್ಠಾ ನಕ್ಷತ್ರದಲ್ಲಿರುವಾಗ ಅಷ್ಟಮಿಯ ದಿವಸ, ಸೂರ್ಯನು ಆಕಾಶದ ಮಧ್ಯದಲ್ಲಿದ್ದ ಅಭಿಜಿನ್ ಮುಹೂರ್ತದಲ್ಲಿ ಶ್ರೇಷ್ಠವಾದ ಪುಣ್ಯತಿಥಿಯಲ್ಲಿ ಕುಂತಿಯು ಅಪಾರ ಕೀರ್ತಿಯುಳ್ಳ ಮಗನನ್ನು ಪ್ರಸವಿಸಿದಳು.

ಜಾತಮಾತ್ರೇ ತತಸ್ತಸ್ಮಿನ್ ವಾಗುವಾಚಾಶರೀರಿಣೀ ।
ಏಷ ಧರ್ಮಭೃತಾಂ ಶ್ರೇಷ್ಠೋ ಭವಿತೇತಿ ವಿನಾದಿನೀ ॥೨೦॥

ಆ ಶಿಶುವು ಜನಿಸಿದ ತಕ್ಷಣ 'ಇವನು ಧರ್ಮಿಷ್ಠರಲ್ಲಿ ಶ್ರೇಷ್ಠನಾಗುವನು' ಎಂಬ ಆಕಾಶವಾಣಿ ಎಲ್ಲಾ ಕಡೆಯೂ ಪ್ರತಿಧ್ವನಿಸುವಂತೆ ಉಂಟಾಯಿತು.

ಯುಧಿಷ್ಠಿರ ಇತಿ ಖ್ಯಾತಃ ಪಾಂಡೋಃ ಪ್ರಥಮಜಃ ಸುತಃ ।
ಅಭವತ್ ಪ್ರಥಿತೋ ರಾಜನ್ ತ್ರಿಷು ಲೋಕೇಷು ವೀರ್ಯವಾನ್ ।
ಯಶಸಾ ತೇಜಸಾ ಚೈವ ವೃತ್ತೇನ ಚ ಸಮನ್ವಿತಃ ॥೨೧॥

ರಾಜನೇ, ಪಾಂಡುವಿನ ಮೊದಲನೆಯ ಸುತನು ಯುಧಿಷ್ಠಿರನೆಂದು ಪ್ರಖ್ಯಾತನಾದನು. ಅವನು ಮೂರು ಲೋಕಗಳಲ್ಲಿಯೂ ವೀರ್ಯಶಾಲಿಯೂ, ಯಶಸ್ಸಿನಿಂದಲೂ, ಪರಾಕ್ರಮದಿಂದಲೂ ಮತ್ತು ಒಳ್ಳೆಯ ನಡತೆಯಿಂದಲೂ ಕೂಡಿದವನೂ ಆಗಿ ಪ್ರಸಿದ್ಧನಾದನು.

ಸಂವತ್ಸರೇ ದ್ವಿತೀಯೇ ತು ಗಾಂಧಾರ್ಯಾ ಉದರಂ ಮಹತ್ ।
ನಚ ಪ್ರಾಜಾಯತ ತದಾ ತತಸ್ತಾಂ ದುಃಖಮಾವಿಶತ್ ॥೨೨॥

ಗಾಂಧಾರಿಯ ಗರ್ಭಕ್ಕೆ ಎರಡು ವರ್ಷ ತುಂಬಿದರೂ ಅವಳಿಗೆ ಪ್ರಸವವಾಗಲಿಲ್ಲ. ಆಗ ಅವಳನ್ನು ದುಃಖವು ತುಂಬಿಕೊಂಡಿತು.

ಶ್ರುತ್ವಾ ಕುಂತೀಸುತಂ ಜಾತಂ ಬಾಲಾರ್ಕಸಮತೇಜಸಮ್ ।
ಉದರಸ್ಯಾತ್ಮನಃಸ್ಥೈರ್ಯಮುಪಾಲಭ್ಯ ಚ ಸೌಬಲೀ ॥೨೩॥

ಕೌರವ್ಯಾಪರಿಜ್ಞಾತಂ ಯತ್ನೇನ ಮಹತಾ ಸ್ವಯಮ್ ।
ಉದರಂ ಘಾತಯಾಮಾಸ ಗಾಂಧಾರೀ ದುಃಖಮೂರ್ಚ್ಛಿತಾ ॥೨೪॥

ಅವಳು ಎಳೆಯ ಸೂರ್ಯನ ಕಾಂತಿಯಿಂದ ಕುಂತಿಯ ಸುತನು ಜನಿಸಿರುವುದನ್ನು ಕೇಳಿ, ತನ್ನ ಉದರದ ಸ್ಥಿರತ್ವವನ್ನು ನಿಂದಿಸಿ ಧೃತರಾಷ್ಟ್ರನಿಗೆ ತಿಳಿಯದಂತೆ ಪರಮ ದುಃಖದಿಂದ ಕೂಡಿದವಳಾದ ಕಾರಣ, ತನ್ನ ಉದರನವನ್ನು ತಾನೇ ಕುಟ್ಟಿಕೊಂಡಳು.

ತತೋ ಜಜ್ಞೇ ಮಾಂಸಪೇಶೀ ಸಾಷ್ಮೀಲಾ ಜನಮೇಜಯ ।
ದ್ವಿವರ್ಷಸಂಭೃತಾಂ ಕುಕ್ಷೌ ತಾಮುತ್ಸ್ರಷ್ಟುಂ ಮನೋ ದಧೇ ॥೨೫॥

ಜನಮೇಜಯನೇ, ಆಗ ಜರಾಯುವಿನಿಂದ ಸಹಿತವಾದ ಒಂದು ಮಾಂಸದ ಮುದ್ದೆಯು ಹೊರಗೆ ಬಂದಿತು. ಎರಡು ವರ್ಷಗಳ ಕಾಲ ತನ್ನ ಉದರದಲ್ಲಿ ಧರಿಸಿದ್ದ ಮಾಂಸದ ಮುದ್ದೆಯನ್ನು ಅವಳು ಪರಿತ್ಯಾಗ ಮಾಡಲು ನಿರ್ಧರಿಸಿದಳು.

ತತೋ ದ್ವೈಪಾಯನೋ ರಾಜನ್ ಆಜಗಾಮ ಯದೃಚ್ಛಯಾ ।
ತಾಂ ಚ ಮಾಂಸಮಯೀಂ ಪೇಶೀಂ ದದರ್ಶ ವದತಾಂ ವರಃ ॥೨೬॥

ರಾಜನೇ, ಆಗ ಅಲ್ಲಿಗೆ ಇದ್ದಕ್ಕಿದ್ದಂತೆಯೇ ವ್ಯಾಸರು ಬಂದರು. ಮಾತನಾಡುವವರಲ್ಲಿ ಶ್ರೇಷ್ಠರಾದ ಅವರು ಆ ಮಾಂಸದ ಮುದ್ದೆಯನ್ನು ನೋಡಿದರು.

ತತೋಽಬ್ರವೀತ್ ಸೌಬಲೇಯೀಂ ಕಿಮಿದಂ ತೇ ಚಿಕೀರ್ಷಿತಮ್ ।
ಸಾ ಚಾತ್ಮನೋ ಮತಂ ಸರ್ವಂ ಶಶಂಸ ಪರಮರ್ಷಯೇ ॥೨೭॥

ಆಗ ಗಾಂಧಾರಿಯನ್ನು ಕುರಿತು 'ಇದೇನು ಮಾಡಲು ಹೊರಟಿರುವೆ' ಎಂದು ಕೇಳಿದರು. ಅವಳು ಮಹರ್ಷಿಗಳಿಗೆ ತನ್ನ ಮನಸ್ಸಿನ ಅಭಿಪ್ರಾಯವನ್ನೆಲ್ಲಾ ತಿಳಿಸಿದಳು.

ಜ್ಯೇಷ್ಠಂ ಕುಂತೀಸುತಂ ಜಾತಂ ಶ್ರುತ್ವಾ ರವಿಸಮಪ್ರಭಮ್ ।
ದುಃಖೇನ ಪರಮೇಣೇದಮುದರಂ ಘಾತಿತಂ ಮಯಾ ॥೨೮॥

ಕುಂತಿಯ ಪ್ರಥಮಪುತ್ರನು ಸೂರ್ಯನ ಕಾಂತಿಯಿಂದ ಕೂಡಿ ಜನಿಸಿದ ವಾರ್ತೆಯನ್ನು ಕೇಳಿ ನಾನು ಪರಮದುಃಖದಿಂದ ನನ್ನ ಉದರವನ್ನು ಕುಟ್ಟಿಕೊಂಡೆ.

ಶತಂ ಚ ಕಿಲ ಪುತ್ರಾಣಾಂ ದತ್ತವಾನಸಿ ಮೇ ಪ್ರಭೋ ।
ಇಯಂ ಮಾಂಸಮಯೀ ಪೇಶೀ ಜಾತಾ ಪುತ್ರಶತಾಯ ತೇ ॥೨೯॥

ಪ್ರಭುವೇ, ನೀನು ನನಗೆ ವರವಾಗಿ ನೂರು ಪುತ್ರರನ್ನು ಕೊಟ್ಟಿರುವೆಯಷ್ಟೆ. ಇದೋ ನೀನು ಕೊಟ್ಟ ಶತಪುತ್ರರ ಸ್ಥಾನದಲ್ಲಿ ಈ ಮಾಂಸದ ಮುದ್ದೆಯು ಜನಿಸಿದೆ.

ವ್ಯಾಸಃ

ಏತಾವದೇತದ್ ಗಾಂಧಾರಿ ನೈತಜ್ಜಾತ್ವನ್ಯಥಾ ಭವೇತ್ ।
ಏತಥಂ ನೋಕ್ತಪೂರ್ವಂ ಮೇ ಸ್ವೈರೇಷ್ವಪಿ ಕದಾಚನ ॥೩೦॥

ಗಾಂಧಾರಿ, ಅದು ಹೀಗೆಯೇ ಸರಿ. ಎಂದೂ ವ್ಯತ್ಯಾಸವಾಗುವುದಿಲ್ಲ. ನಾನು ವಿನೋದಕ್ಕಾಗಿಯೂ, ಹಿಂದೆ ಎಂದೂ ಅನೃತವನ್ನು ನುಡಿದವನಲ್ಲ.

ಘೃತಪೂರ್ಣಂ ಕುಂಡಶತಂ ಕ್ಷಿಪ್ರಮಾನೀಯತಾಮಿತಿ ।
ಶೀತಾಭಿರಿದ್ಧಿರಾಷ್ಮೀಲಾಮಿಮಾಂ ಚ ಪರಿಷಿಂಚ ಚ ॥೩೧॥

ಘೃತದಿಂದ ತುಂಬಿದ ನೂರು ಕುಂಡಗಳನ್ನು ಬೇಗ ತರಿಸು. ಈ ಮಾಂಸದ ಮುದ್ದೆಯಿರುವ ಗರ್ಭಚೀಲವನ್ನು ತಣ್ಣೀರಿನಿಂದ ಚಿಮುಕಿಸು (ಎಂದು ಹೇಳಿದರು).

ವೈಶಂಪಾಯನಃ

ಸಂಸಿಚ್ಯಮಾನಾ ಸಾಷ್ಮೀಲಾ ಹ್ಯಭವಚ್ಛತಧಾ ತಥಾ ।
ಅಂಗುಷ್ಠಪರ್ವಮಾತ್ರಾಣಾಂ ಗರ್ಭಾಣಾಂ ಪೃಥಗೇವ ತು ॥೩೨॥

ಏಕಾಧಿಕಶತಂ ಪೂರ್ಣಂ ಯಥಾಯೋಗಂ ವಿಶಾಂಪತೇ ।
ತತಃ ಕುಂಡಶತಂ ತತ್ರ ಹ್ಯಾನಾಯ್ಯ ತು ಮಹಾನ್ ಋಷಿಃ ॥೩೩॥

ಮಾಂಸಪೇಶಿಯಿಂದ ಕೂಡಿದ ಜರಾಯುವನ್ನು ನೀರಿನಿಂದ ಚಿಮುಕಿಸಿದಾಗ ಮಾಂಸದ ಮುದ್ದೆಯು ಹೋಳು ಹೋಳಾಗಿ ಒಡೆಯಿತು. ಹೆಬ್ಬೆಟ್ಟಿನ ತುದಿಯಷ್ಟೇ ಪ್ರಮಾಣದ ಗರ್ಭಗಳು ಬೇರೆ ಬೇರೆಯಾದವು. ರಾಜನೇ, ಒಟ್ಟು ನೂರೊಂದು ಭಾಗಗಳು ಉಂಟಾದವು.

ಮಾಂಸಪೇಶ್ಯಾಸ್ತದಾ ರಾಜನ್ ಕ್ರಮಶಃ ಕಾಲಪರ್ಯಯಾತ್ ।
ತತಸ್ತಾನ್ ತೇಷು ಕುಂಡೇಷು ಗರ್ಭಾನ್ ಸರ್ವಾನ್ ಸಮಾದಧತ್ ॥

ಆಗ ಆ ಮಹರ್ಷಿಗಳು ನೂರು ಘೃತಕುಂಡಗಳನ್ನು ತರಿಸಿ ಆ ಮಾಂಸದ ಮುದ್ದೆಯಿಂದ ಕ್ರಮಿಕವಾಗಿ ಒಂದೊಂದೇ ಭಾಗವನ್ನು (ಗರ್ಭವನ್ನು) ತೆಗೆದು ಆ ಕುಂಡಗಳಲ್ಲಿ ಇಟ್ಟರು.

ಸ್ವನುಗುಪ್ತೇಷು ದೇಶೇಷು ರಕ್ಷಾಂ ಚೈಷಾಂ ವ್ಯಧಾಪಯತ್ ।
ಶಶಂಸ ಚೈವ ಕೃಷ್ಣೋ ವೈ ಗರ್ಭಾಣಾಂ ರಕ್ಷಣೇ ತಥಾ ॥೩೫॥

ವೇದವ್ಯಾಸರು ಆ ಕುಂಡಗಳನ್ನು ಸುರಕ್ಷಿತವಾದ ಸ್ಥಳದಲ್ಲಿಟ್ಟು ಗರ್ಭಗಳನ್ನು ರಕ್ಷಿಸುವಂತೆ ಆದೇಶ ನೀಡಿದರು.

ಉವಾಚ ಚೈನಾಂ ಭಗವಾನ್ ಕಾಲೇನೈತಾವತಾ ಪುನಃ ।
ಸ್ಫುಟಮಾನೇಷು ಕುಂಡೇಷು ಜಾತಾನ್ ಜಾನೀಹಿ ಶೋಭನೇ ।
ಉದ್ಘಾಟನೀಯಾನ್ಯೇತಾನಿ ಕುಂಡಾನೀತಿ ಚ ಸೌಬಲೀಮ್ ॥೩೬॥

ಪೂಜ್ಯರಾದ ವ್ಯಾಸರು ಗಾಂಧಾರಿಯನ್ನು ಕುರಿತು ಶೋಭನಳಾದವಳೇ, ಇಷ್ಟು ಕಾಲವಾದ ಮೇಲೆ ಈ ಕುಂಡಗಳು ಬಿರಿಯುತ್ತವೆ. ಆಗ ನಿನ್ನ ಮಕ್ಕಳು ಜನಿಸಿದ್ದಾರೆಂದು ತಿಳಿದು ಈ ಕುಂಡಗಳನ್ನು ತೆಗೆದು ಶಿಶುಗಳನ್ನು ಹೊರಗೆ ತೆಗೆಯಬೇಕು.

ಇತ್ಯುಕ್ತ್ವಾ ಭಗವಾನ್ ವ್ಯಾಸಃ ತಥಾ ಪ್ರತಿವಿಧಾಯ ಚ ।
ಜಗಾಮ ತಪಸೇ ಶ್ರೀಮಾನ್ ಹಿಮವಂತಂ ಶಿಲೋಚ್ಚಯಮ್ ॥೩೭॥

ಪೂಜ್ಯರಾದ ವ್ಯಾಸರು ಹೀಗೆ ಹೇಳಿ ಎಲ್ಲಾ ಆದೇಶಗಳನ್ನೂ ನೀಡಿ ತಪಸ್ಸಿಗಾಗಿ ಹಿಮಾಲಯ ಪರ್ವತಕ್ಕೆ ಹೋದರು.

ಅಹ್ನೋತ್ತರಾಃ ಕುಮಾರಾಸ್ತೇ ಕುಂಡೇಭ್ಯಸ್ತು ಸಮುತ್ಥಿತಾಃ ।
ತೇನೈವೈಷಾಂ ಕ್ರಮೇಣಾಸೀಜ್ಜ್ಯೇಷ್ಠಾನುಜ್ಯೇಷ್ಠತಾ ತದಾ ।
ಜನ್ಮತಶ್ಚ ಪ್ರಮಾಣೇನ ಜ್ಯೇಷ್ಠಃ ಕುಂತೀಸುತೋಽಭವತ್ ॥೩೮॥

ಕಾಲಕ್ರಮದಲ್ಲಿ ಆ ಕುಂಡಗಳಿಂದ ಒಂದು ದಿನಕ್ಕೆ ಒಬ್ಬೊಬ್ಬರಂತೆ ನೂರು ಮಕ್ಕಳು ಹೊರಬಂದರು. ಅವರು ಹೊರಬಂದ ಕ್ರಮದಲ್ಲಿಯೇ ಅವರಿಗೆ ಜ್ಯೇಷ್ಠತೆ ಮತ್ತು ಅನಂತರದ ಜ್ಯೇಷ್ಠತೆ ಉಂಟಾಯಿತು. ಜನ್ಮದಿಂದಲೂ, ಶರೀರ ಪ್ರಮಾಣದಿಂದಲೂ, ಕುಂತಿಯ ಸುತನಾದ ಯುಧಿಷ್ಠಿರನೇ ಎಲ್ಲರಿಗಿಂತಲೂ ಜ್ಯೇಷ್ಠನಾದವನಾಗಿದ್ದನು.

ಧಾರ್ಮಿಕಂ ಚ ಸುತಂ ದೃಷ್ಟ್ವಾ ಪಾಂಡುಃ ಕುಂತೀಮಥಾಬ್ರವೀತ್ ।
ಪ್ರಾಹುಃ ಕ್ಷತ್ರಂ ಬಲಜ್ಯೇಷ್ಠಂ ಬಲಜ್ಯೇಷ್ಠಂ ಸುತಂ ವೃಣು ॥೩೯॥

ಪಾಂಡುವು ಧಾರ್ಮಿಕನಾದ ಸುತನನ್ನು ನೋಡಿ ಕುಂತಿಯನ್ನು ಕುರಿತು, ಕ್ಷತ್ರಿಯನು ಬಲಾಧಿಕನಾಗಿರಬೇಕೆಂದು ಹೇಳುತ್ತಾರೆ. ಆದ್ದರಿಂದ ಬಲಾಧಿಕನಾದ ದೇವನನ್ನು ಆಹ್ವಾನಿಸು ಎಂದು ಹೇಳಿದನು.

ತತಃ ಕುಂತೀಮಭಿಕ್ರಮ್ಯ ಶಶಂಸಾತೀವ ಭಾರತ ।
ವಾಯುಮಾವಾಹಯಸ್ವೇತಿ ಸ ದೇವೋ ಬಲವತ್ತರಃ ॥೪೦॥

ಭಾರತನೇ, ಅನಂತರ ಕುಂತಿಯ ಎದುರಿನಲ್ಲಿ ಕುಳಿತು ವಾಯುದೇವರನ್ನು ಬಹಳವಾಗಿ ಪ್ರಶಂಸನೆ ಮಾಡಿ ವಾಯುವು ಬಲಿಷ್ಠತಮನಾದ್ದರಿಂದ ಅವನನ್ನು ಆಹ್ವಾನಿಸು ಎಂದು ಹೇಳಿದನು.

ಅಶ್ವಮೇಧಃ ಕ್ರತುಶ್ರೇಷ್ಠೋ ಜ್ಯೋತಿಃಶ್ರೇಷ್ಠೋ ದಿವಾಕರಃ ।
ಬ್ರಾಹ್ಮಣೋ ದ್ವಿಪದಾಂ ಶ್ರೇಷ್ಠೋ ದೇವಶ್ರೇಷ್ಠಸ್ತು ಮಾರುತಃ ॥೪೧॥

ಎಲ್ಲಾ ಕ್ರತುಗಳಲ್ಲಿ ಅಶ್ವಮೇಧವು ಶ್ರೇಷ್ಠವಾದುದು. ಎಲ್ಲಾ ಜ್ಯೋತಿಸ್ಸುಗಳಲ್ಲಿ ಸೂರ್ಯನು ಶ್ರೇಷ್ಠನಾದವನು. ಎಲ್ಲಾ ದ್ವಿಪದ ಪ್ರಾಣಿಗಳಲ್ಲಿ ಬ್ರಾಹ್ಮಣನು ಶ್ರೇಷ್ಠನಾದವನು. ಎಲ್ಲಾ ದೇವತೆಗಳಲ್ಲಿ ವಾಯುದೇವರು ಶ್ರೇಷ್ಠರಾದವರು.

ಮಾರುತಂ ಮರುತಾಂ ಶ್ರೇಷ್ಠಂ ಸರ್ವಪ್ರಾಣಿಭಿರೀಡಿತಮ್ ।
ಆವಾಹಯ ತ್ವಂ ನಿಯಮಾತ್ ಪುತ್ರಾರ್ಥಂ ವರವರ್ಣಿನಿ ॥೪೨॥

ಸುಂದರಿಯೇ, ನೀನು ಮರುತ್ತುಗಳಲ್ಲಿ ಶ್ರೇಷ್ಠನಾದಂತಹ ಸರ್ವಪ್ರಾಣಿಗಳಿಂದಲೂ ಸ್ತುತ್ಯನಾದಂತಹ ಮಾರುತನನ್ನು ನಿಯಮವನ್ನು ಧರಿಸಿ ಪುತ್ರನನ್ನು ಪಡೆಯುವ ಸಲುವಾಗಿ ಆಹ್ವಾನಿಸು.

ಸ ನೋ ಯಂ ದಾಸ್ಯತಿ ಸುತಂ ಸ ಪ್ರಾಣಬಲವಾನ್ ನೃಷು ।
ಭವಿಷ್ಯತಿ ವರಾರೋಹೇ ಬಲಜ್ಯೇಷ್ಠಾ ಹಿ ಭೂಮಿಪಾಃ ॥೪೩॥

ಸುಂದರಿಯೇ, ಅವನು ಯಾವ ಪುತ್ರನನ್ನು ಕೊಡುವನೋ ಅವನು ಮನುಷ್ಯರಲ್ಲಿ ಪ್ರಾಣಬಲಾಧಿಕನಾಗುವನು. ಕ್ಷತ್ರಿಯರು ಬಲಾಧಿಕ್ಯವನ್ನು ಹೊಂದಿರಬೇಕಷ್ಟೇ?

ವೈಶಂಪಾಯನಃ

ತಥೋಕ್ತವತಿ ಸಾ ಕಾಲೇ ವಾಯುಮೇವಾಜುಹಾವ ಹ ।
ದ್ವಿತೀಯೇನೋಪಹಾರೇಣ ತೇನೋಕ್ತವಿಧಿನಾ ಪುನಃ ॥೪೪॥

ಪಾಂಡುವು ಹೀಗೆ ಹೇಳುತ್ತಿರಲು ಕುಂತಿಯು ಯೋಗ್ಯವಾದ ಕಾಲದಲ್ಲಿ ವಿಧಿಯುಕ್ತವಾಗಿ ಎರಡನೆಯ ಪೂಜೆಯನ್ನು ಮಾಡಿ ವಾಯುವನ್ನು ಆಹ್ವಾನಿಸಿದಳು.

ತೈರೇವ ನಿಯಮೈಃ ಸ್ಥಿತ್ವಾ ಮಂತ್ರಗ್ರಾಮಮುದೈರಯತ್ ।
ಆಜಗಾಮ ತತೋ ವಾಯುಃ ಕಿಂ ಕರೋಮೀತಿ ಚಾಬ್ರವೀತ್ ॥೪೫॥

ಅದೇ ನಿಯಮಗಳಿಂದ ಕೂಡಿದವಳಾಗಿ ಮಂತ್ರಸಮೂಹವನ್ನು ಉಚ್ಚರಿಸಿದಳು. ವಾಯುದೇವರು ಪ್ರತ್ಯಕ್ಷರಾಗಿ ಬಂದು 'ಏನು ಮಾಡಲಿ' ಎಂದು ಕೇಳಿದರು.

ಲಜ್ಜಾನತಾ ತತಃ ಕುಂತೀ ಪುತ್ರಮೈಚ್ಛತ್ ಮಹಾಬಲಮ್ ।
ತಥಾಸ್ತಿ ತ್ವಿ ಚ ತಾಂ ವಾಯುಃ ಸಮಾಲಿಂಗ್ಯ ದಿವಂ ಗತಃ ॥೪೬॥

ಲಜ್ಜೆಯಿಂದ ಕೂಡಿದ ಕುಂತಿಯು ಆಗ ಮಹಾಬಲರಾದ ವಾಯುದೇವರನ್ನು ಕುರಿತು ಪುತ್ರನನ್ನು ಬೇಡಿದಳು. ವಾಯುದೇವರು 'ಹಾಗೆಯೇ ಆಗಲಿ' ಎಂದು ಹೇಳಿ ಅವಳನ್ನು ಆಲಿಂಗಿಸಿ ಸ್ವರ್ಗಕ್ಕೆ ಹೊರಟುಹೋದರು.

ತಸ್ಮಾಜ್ಜಾತೋ ಮಹಾವೀರ್ಯೋ ಭೀಮೋ ಭೀಮಪರಾಕ್ರಮಃ ।
ತಮಪ್ಯತಿಬಲಂ ಜಾತಂ ವಾಗುವಾಚಾಶರೀರಿಣೀ ।
ಸರ್ವೇಷಾಂ ಬಲಿನಾಂ ಶ್ರೇಷ್ಠೋ ಜಾತೋಽಯಮಿತಿ ಭಾರತ ॥೪೭॥

ಅವರಿಂದ ಮಹಾ ಸಾಮರ್ಥ್ಯವುಳ್ಳವನೂ, ಭಯಂಕರ ಪರಾಕ್ರಮವುಳ್ಳವನೂ ಆದ ಭೀಮನು ಜನಿಸಿದನು. ಭಾರತನೇ, ಅತಿಬಲಿಷ್ಠನಾದ ಭೀಮನು ಜನಿಸಿದಾಗಲೂ, 'ಇವನು ಬಲಿಷ್ಠರಲ್ಲೆಲ್ಲಾ ಶ್ರೇಷ್ಠನಾದವನಾಗಿ ಜನಿಸಿದ್ದಾನೆ' ಎಂದು ಅಶರೀರವಾಣಿಯಾಯಿತು.

ಜಾತಮಾತ್ರೇ ಕುಮಾರೇ ತು ಸರ್ವಲೋಕಸ್ಯ ಪಾರ್ಥಿವಾಃ ।
ಮೂತ್ರಂ ಪ್ರಸುಸ್ರುವುಃ ಸರ್ವೇ ವ್ಯಥಾಂ ಚಾಪಿ ಪ್ರಪೇದಿರೇ ।
ವಾಹನಾನಿ ವ್ಯಪೇಯುರ್ಯಂತ ವ್ಯಮುಂಚನ್ನಶ್ರುಬಿಂದವಃ ॥೪೮॥

ಭೀಮನು ಜನಿಸಿದ ಕ್ಷಣದಲ್ಲಿ ಲೋಕದ ಎಲ್ಲಾ ರಾಜರೂ ಮೂತ್ರವನ್ನು ಉತ್ಸರ್ಜನೆ ಮಾಡಿದರು. ಎಲ್ಲರೂ ವ್ಯಥೆಗೆ ಒಳಗಾದರು. ರಥ ಮೊದಲಾದ ವಾಹನಗಳು ಬಿರಿದವು. ಅಶ್ವ, ಗಜ ಮೊದಲಾದವುಗಳು ಕಣ್ಣೀರನ್ನು ಸುರಿಸಿದವು.

ಯಥಾಽನಿಲಃ ಸಮುದ್ಭೂತಃ ಸಮರ್ಥಃ ಕಂಪತೇ ಭುವಃ ।
ತಥಾ ಹ್ಯುಪಚಿತಾಂಗೋ ವೈ ಭೀಮೋ ಭೀಮಪರಾಕ್ರಮಃ ॥೪೯॥

ಹೇಗೆ ಅಭಿವೃದ್ಧಿಗೊಂಡ ವಾಯುವು ಭೂಮಿಯನ್ನು ನಡುಗಿಸುತ್ತದೆಯೋ ಹಾಗೆ ಪುಷ್ಟವಾದ ಅಂಗಗಳಿಂದ ಕೂಡಿದ ಭಯಂಕರ ಪರಾಕ್ರಮವುಳ್ಳ ಭೀಮನು ಭೂಮಿಯನ್ನು ನಡುಗಿಸಿದನು.

ಇದಂ ಚಾದ್ಭುತಮತ್ರಾಸೀಜ್ಜಾತಮಾತ್ರೇ ವೃಕೋದರೇ ।
ಕುಂತೀ ತು ಸಹ ಪುತ್ರೇಣ ಯಾತಾ ಸುರುಚಿರಂ ಸರಃ ॥೫೦॥

ಭೀಮನು ಜನಿಸಿದಾಗ ಅಲ್ಲಿ ಇನ್ನೊಂದು ಅದ್ಭುತವೂ ನಡೆಯಿತು. ಕುಂತಿಯು ಮಗನನ್ನು ಎತ್ತಿಕೊಂಡು ಒಂದು ಸುಂದರವಾದ ಸರೋವರಕ್ಕೆ ಹೊರಟಿದ್ದಳು.

ಸ್ನಾತ್ವಾ ಚ ಸುತಮಾದಾಯ ದಶಮೇऽಹನಿ ಯಾದವೀ ।
ದೈವತಾನ್ಯರ್ಚಯಿಷ್ಯಂತೀ ನಿರ್ಜಗಾಮಾಶ್ರಮಾತ್ ಪೃಥಾ ॥೫೧॥

ಹತ್ತನೆಯ ದಿವಸ ಕುಂತಿಯು ಮಗನನ್ನು ಎತ್ತಿಕೊಂಡು ಹೋಗಿ ಸರೋವರದಲ್ಲಿ ಸ್ನಾನವನ್ನು ಮಾಡಿ ದೇವತೆಗಳನ್ನು ಪೂಜಿಸುವ ಸಲುವಾಗಿ ಆಶ್ರಮದಿಂದ ಹೊರಗೆ ಬಂದಳು.

ಶೈಲಾಭ್ಯಾಶೇನ ಗಚ್ಛಂತ್ಯಾಸ್ತದಾ ಭರತಸತ್ತಮ ।
ನಿಶ್ಚಕ್ರಾಮ ಮಹಾವ್ಯಾಘ್ರೋ ಜಿಘಾಂಸುರ್ಗಿರಿಗಹ್ವರಾತ್ ॥೫೨॥

ಎಲೈ ಭರತಶ್ರೇಷ್ಠನೇ, ಪರ್ವತದ ಸಮೀಪದಲ್ಲಿ ಅವಳು ನಡೆಯುತ್ತಿದ್ದಾಗ ಪರ್ವತದ ಗುಹೆಯಿಂದ ಒಂದು ದೊಡ್ಡ ಹುಲಿಯು ಅವಳನ್ನು ಕೊಲ್ಲುವ ಸಲುವಾಗಿ ಹೊರಗೆ ಬಂದಿತು.

ತಮಾಪತಂತಂ ಶಾರ್ದೂಲಂ ವಿಕೃಷ್ಯ ಧನುರುತ್ತಮಮ್ ।
ನಿರ್ಬಿಭೇದೇ ಶರೈಃ ಪಾಂಡುಃ ತ್ರಿಭಿಸ್ತ್ರಿದಶವಿಕ್ರಮಃ ॥೫೩॥

ಮೇಲೆ ಎರಗುತ್ತಿದ್ದ ಆ ಹುಲಿಯನ್ನು ನೋಡಿ ದೇವತೆಗಳ ಪರಾಕ್ರಮವುಳ್ಳ ಪಾಂಡುವು ಕೈಯಲ್ಲಿ ಧನುಸ್ಸನ್ನು ತೆಗೆದುಕೊಂಡು ಮೂರು ಬಾಣಗಳಿಂದ ಆ ಹುಲಿಯನ್ನು ಹೊಡೆದನು.

ನಾದೇನ ಮಹತಾ ತಾಂ ತು ಪೂರಯಂತಂ ಗಿರೇರ್ಗುಹಾಮ್ ।
ದೃಷ್ಟ್ವಾ ಶೈಲಮುಪಾರೋಢುಮೈಚ್ಛತ್ ಕುಂತೀ ಭಯಾತ್ ತದಾ ॥೫೪॥

ಆಗ ಆ ಹುಲಿಯು ತನ್ನ ಮಹಾನಾದದಿಂದ ಪರ್ವತದ ಗುಹೆಯ ಪ್ರದೇಶವನ್ನೆಲ್ಲಾ ತುಂಬಿತು. ಅದನ್ನು ನೋಡಿದ ಕುಂತಿಯು ಭಯದಿಂದ ಪರ್ವತದ ಮೇಲೆ ಏರಿ ಹೋಗಲು ಬಯಸಿದಳು.

ತ್ರಾಸೇನಾಸ್ಯಾಃ ಸುತಸ್ತ್ವಂಕಾತ್ ಪಪಾತ ಭರತರ್ಷಭ ।
ಪರ್ವತಸ್ಯೋಪರಿಸ್ಥಾಯಾ ಅಧಸ್ತಾದಪತಚ್ಛಿಶುಃ ॥೫೫॥

ಭರತಶ್ರೇಷ್ಠನೇ, ಪರ್ವತವನ್ನು ಏರಿದ ಅವಳ ತೊಡೆಯ ಮೇಲಿದ್ದ ಶಿಶುವು ಅವಳ ಭಯದಿಂದಾಗಿ ಕೆಳಗೆ ಬಿದ್ದಿತು.

ಸ ಶಿಲಾಶ್ಚೂರ್ಣಯಾಮಾಸ ವಜ್ರೆಚೋದಿತವಜ್ರವತ್ ।
ಪುತ್ರಸ್ನೇಹಾತ್ ತತಃ ಪಾಂಡುರಭ್ಯಧಾವದ್ ಗಿರೇಸ್ತಟಮ್ ॥೫೬॥

ಕೆಳಗೆ ಬಿದ್ದ ಶಿಶುವು ಇಂದ್ರನ ವಜ್ರಾಯುಧದ ಪ್ರಯೋಗ ಮಾಡಿದಂತೆ ಆ ಪರ್ವತವನ್ನು ಪುಡಿಮಾಡಿ ಸೀಳಿತು. ಪುತ್ರಸ್ನೇಹದಿಂದ ಪಾಂಡುವು ಶಿಶುವು ಬಿದ್ದ ಸ್ಥಳಕ್ಕೆ ಓಡಿಬಂದನು.

ಪತತಾ ತೇನ ಶತಧಾ ಶಿಲಾ ಗಾತ್ರೈರ್ವಿಚೂರ್ಣಿತಾ ।
ಶಿಲಾಂ ಚ ಚೂರ್ಣಿತಾಂ ದೃಷ್ಟ್ವಾ ಪರಂ ವಿಸ್ಮಯಮಾಗಮತ್ ॥೫೭॥

ಕೆಳಗೆ ಬಿದ್ದ ಆ ಮಗುವಿನಿಂದ ಪರ್ವತದ ಆ ಬಂಡೆಯು ನೂರು ಭಾಗವಾಗಿ ಸೀಳಲ್ಪಟ್ಟಿತು. ಹಾಗೆ ಸೀಳಿದ ಶಿಲೆಯನ್ನು ನೋಡಿ ಪಾಂಡುವು ವಿಸ್ಮಿತನಾದನು.

ಸ ತು ಜನ್ಮನಿ ಭೀಮಸ್ಯ ವಿನದಂತಂ ವಿನಾದಿತಮ್ ।
ದದರ್ಶ ಗಿರಿಶೃಂಗಸ್ಥಂ ವ್ಯಾಘ್ರಂ ವ್ಯಾಘ್ರಪರಾಕ್ರಮಃ ॥೫೮॥

ಭೀಮನ ಜನನವಾದಾಗ ವ್ಯಾಘ್ರ ಪರಾಕ್ರಮವುಳ್ಳ ಪಾಂಡುವು ಗಿರಿಯ ಶೃಂಗದಲ್ಲಿ ನಿಂತು ಗರ್ಜಿಸುತ್ತಿದ್ದ ಒಂದು ಹುಲಿಯನ್ನು ನೋಡಿದನು.

ದಾರಸಂರಕ್ಷಣಾರ್ಥಾಯ ರಕ್ಷಮಾಣಸ್ತಥಾऽऽತ್ಮಜಮ್ ।
ಸದಾ ಬಾಣಧನುಷ್ಪಾಣಿರಭವತ್ ಕುರುನಂದನಃ ॥೫೯॥

ಆಗಿನಿಂದ ಆರಂಭಿಸಿ ಕುರುನಂದನನಾದ ಪಾಂಡುವು ಪತ್ನಿ ಮತ್ತು ಪುತ್ರರನ್ನು ರಕ್ಷಣೆ ಮಾಡುವುದಕ್ಕಾಗಿ ಕೈಯಲ್ಲಿ ಯಾವಾಗಲೂ ಧನುಸ್ಸು ಮತ್ತು ಬಾಣಗಳನ್ನು ಹಿಡಿದು ಸಂಚರಿಸುತ್ತಿದ್ದನು.

ಮಘೇ ಚಂದ್ರಮಸಾ ಯುಕ್ತೇ ಸಿಂಹೇ ಚಾಭ್ಯುದಿತೇ ಗುರೌ ।
ದಿವಾಮಧ್ಯಗತೇ ಸೂರ್ಯೇ ತಿಥೌ ಪುಣ್ಯೇ ತ್ರಯೋದಶೇ ।
ಮೈತ್ರೇ ಮುಹೂರ್ತೇ ಸಾ ಕುಂತೀ ಸುಷುವೇ ಭೀಮಮಚ್ಯುತಮ್ ॥

ಚಂದ್ರನು ಮಖಾ ನಕ್ಷತ್ರದಲ್ಲಿ ಕೂಡಿರುವಾಗ ಗುರುವು ಸಿಂಹರಾಶಿಯಲ್ಲಿದ್ದಾಗ ಸೂರ್ಯನು ಆಕಾಶಮಧ್ಯದಲ್ಲಿದ್ದಾಗ ತ್ರಯೋದಶಿಯ ತಿಥಿಯಂದು ಸ್ನೇಹಕಾರಕವಾದ ಮುಹೂರ್ತದಲ್ಲಿ ಕುಂತಿಯು ಭಕ್ತಿಯಿಂದಲೂ, ಬಲದಿಂದಲೂ ಎಂದೂ ಚ್ಯುತನಾಗದ ಭೀಮನನ್ನು ಪ್ರಸವಿಸಿದಳು.

ಯಸ್ಮಿನ್ನಹನಿ ಭೀಮಸ್ತು ಜಜ್ಞೇ ಭೀಮಪರಾಕ್ರಮಃ ।
ತಾಮೇವ ರಾತ್ರಿಂ ಪೂರ್ವಂ ತು ಜಜ್ಞೇ ದುರ್ಯೋಧನೋ ನೃಪಃ ।
ದುರ್ಯೋಧನೇ ಜಾತಮಾತ್ರೇ ದಿಕ್ಷು ಸರ್ವಾಸು ಭಾರತ ॥೬೧॥

ಯಾವ ದಿವಸ ಹಗಲಿನಲ್ಲಿ ಭೀಮಪರಾಕ್ರಮನಾದ ಭೀಮನು ಜನಿಸಿದನೋ ಆ ದಿನದ ಹಿಂದಿನ ರಾತ್ರಿಯಲ್ಲಿ ದುರ್ಯೋಧನನು ಜನಿಸಿದನು.

ಕ್ರವ್ಯಾದಾಃ ಪ್ರಾಣದನ್ ಘೋರಾಃ ಶಿವಾಶ್ಚಾಶಿವನಿಸ್ವನಾಃ ।
ವವರ್ಷ ರುಧಿರಂ ದೇವೋ ಭಯಮಾವೇದಯನ್ ಮಹತ್ ॥೬೨॥

ಎಲೈ ಭಾರತನೇ, ದುರ್ಯೋಧನನು ಹುಟ್ಟಿದ ತಕ್ಷಣ ಎಲ್ಲಾ ದಿಕ್ಕುಗಳಲ್ಲಿಯೂ ಮಾಂಸಾಹಾರಿಪ್ರಾಣಿಗಳು ಘೋರವಾಗಿ ಗರ್ಜಿಸಿದವು. ನರಿಗಳು ಅಮಂಗಳಸ್ವರದಿಂದ ಕೂಗಿದವು. ರಕ್ತದ ಮಳೆಯು ಬಿದ್ದು ಪ್ರಪಂಚದಲ್ಲಿ ದೊಡ್ಡ ಭಯವು ಸೂಚಿತವಾಯಿತು.

ಏತಸ್ಮಿನ್ನಂತರೇ ರಾಜಾ ಧೃತರಾಷ್ಟ್ರೋऽಂಬಿಕಾಸುತಃ ।
ಸಮಾಹೂಯ ಬಹೂನ್ ವಿಪ್ರಾನ್ ವಿದುರಂ ಚೇದಮಬ್ರವೀತ್ ॥

ಈ ಮಧ್ಯದಲ್ಲಿ ಅಂಬಿಕೆಯ ಮಗನಾದ ಧೃತರಾಷ್ಟ್ರರಾಜನು ಅನೇಕಬ್ರಾಹ್ಮಣರನ್ನು ಮತ್ತು ವಿದುರನನ್ನು ಕರೆದು ಹೀಗೆ ಮಾತನಾಡಿದನು.

ಶ್ರುತಂ ಮಯಾ ಯಥಾ ಜಾತೋ ಜ್ಯೇಷ್ಠಃ ಪಾಂಡೋಃ ಸುತಃ ಕಿಲ ।
ಸ ತು ದುರ್ಯೋಧನಾದ್ ಜ್ಯೇಷ್ಠಃ ತಸ್ಮಿನ್ ರಾಜ್ಯಂ ನ ಸಂಶಯಃ ॥

ನಾನು ಪಾಂಡುವಿನ ಸುತನಾದ ಯುಧಿಷ್ಠಿರನು ಹೇಗೆ ಜನಿಸಿದನೆಂದು ಕೇಳಿದ್ದೇನೆ. ಅವನು ದುರ್ಯೋಧನನಿಗಿಂತಲೂ ಜ್ಯೇಷ್ಠನಾದವನು. ನಿಸ್ಸಂಶಯವಾಗಿ ಅವನಿಗೇ ರಾಜ್ಯವು ದೊರೆಯುತ್ತದೆ.

ಅಯಂ ತ್ವನಂತರಂ ತಸ್ಮಾದಧಿರಾಜೋ ಭವಿಷ್ಯತಿ ।
ಏತಂ ಏಬ್ರೂತ ಮೇ ಪ್ರಶ್ನಂ ಯದ್ವಾऽಸ್ಮಿನ್ ದೃಶ್ಯತೇ ಫಲಮ್ ॥೬೫॥

ಇವನ ಅನಂತರ ಜನಿಸಿದ ದುರ್ಯೋಧನನು ಯುವರಾಜನಾಗುವನು. ನನ್ನ ಈ ಪ್ರಶ್ನೆಗೆ ಉತ್ತರವನ್ನು ನೀಡಿ ಅಥವಾ ಇದರಿಂದ ಯಾವ ಫಲವು ಸೂಚಿತವಾಗುತ್ತದೆ ಎಂದು ತಿಳಿಸಿ.

ಅಸ್ಮಿನ್ ಜಾತೇ ನಿಮಿತ್ತಾನಿ ಸಂಶಯಂತ್ಯಶಿವಂ ಮಹತ್ ।
ಅತೋ ಬ್ರವೀಮಿ ವಿದುರ ಬ್ರೂತ ಮಾಂ ಭಯಮಾವಿಶತ್ ॥೬೬॥

ವಿದುರನೇ, ಇವನು ಹುಟ್ಟಿದಾಗ ಎಲ್ಲಾ ಅಪಶಕುನಗಳು ಕಂಡುಬರುತ್ತಿವೆ. ನನಗೆ ತುಂಬಾ ಭಯವಾಗಿದೆ. ಆದ್ದರಿಂದ ಕೇಳುತ್ತಿದ್ದೇನೆ.

ವೈಶಂಪಾಯನಃ

ವಾಕ್ಯಸ್ಯೈತಸ್ಯ ನಿಧನೇ ದಿಕ್ಷು ಸರ್ವಾಸು ಭಾರತ ।
ಕ್ರವ್ಯಾದಾಃ ಪ್ರಾಣದನ್ ಘೋರಾಃ ಶಿವಾಶ್ಚಾಶಿವಶಂಸಿನಃ ॥೬೭॥

ಧೃತರಾಷ್ಟ್ರನ ಈ ಮಾತು ಮುಗಿಯುತ್ತಿದ್ದಂತೆಯೇ ಮಾಂಸಾಹಾರಿ ಪ್ರಾಣಿಗಳೆಲ್ಲವೂ ಘೋರವಾಗಿ ಗರ್ಜಿಸಿದವು. ನರಿಗಳು ಅಮಂಗಳಸ್ವರದಿಂದ ಕೂಗಿದವು.

ಲಕ್ಷಯಿತ್ವಾ ನಿಮಿತ್ತಾನಿ ತಾನಿ ಸರ್ವಾಣಿ ಭಾರತ ।
ತೇऽಬ್ರುವನ್ ಬ್ರಾಹ್ಮಣಾ ರಾಜನ್ ವಿದುರಶ್ಚ ಮಹಾಮತಿಃ ॥೬೮॥

ಭಾರತನೇ, ಈ ಎಲ್ಲಾ ಅಪಶಕುನಗಳನ್ನು ಗಮನಿಸಿ ಬ್ರಾಹ್ಮಣರು ಮತ್ತು ಮಹಾಮತಿಯಾದ ವಿದುರನು ರಾಜನನ್ನು ಕುರಿತು ಹೇಳಿದರು.

ಅಯಂ ಕುಲಾಂತಕೃಜ್ಜಾತೋ ಯಸ್ಮಾಚ್ಚ ಕುಲಪಾಂಸನಃ ।
ತಸ್ಯ ತ್ಯಾಗೇನ ಶಾಂತಿಃ ಸ್ಯಾತ್ ಪುಷ್ಟಿಸ್ತ್ವಪನಯೇ ಭವೇತ್ ॥೬೯॥

ಇವನು ಕುಲಪಾಂಸನನಾದವನು. ಇವನು ಕುಲಕ್ಷಯವನ್ನು ಮಾಡುತ್ತಾನೆ. ಇವನನ್ನು ಪರಿತ್ಯಾಗ ಮಾಡುವುದರಿಂದ ಶಾಂತಿಯೂ, ಕುಲದ ಪುಷ್ಟಿಯೂ ಉಂಟಾಗುತ್ತದೆ.

ಶತಮೇಕೋನಮಪ್ಯಸ್ತು ಪುತ್ರಾಣಾಂ ತೇ ಮಹೀಪತೇ ।
ಏಕೇನ ಕುರು ನಃ ಕ್ಷೇಮಂ ಲೋಕಸ್ಯ ಚ ಕುಲಸ್ಯ ಚ ॥೭೦॥

ರಾಜನೇ, ನೂರು ಮಕ್ಕಳಲ್ಲಿ ಒಬ್ಬನು ಕಡಿಮೆಯಾದರೂ ಚಿಂತೆಯಿಲ್ಲ. ಆ ಒಬ್ಬನನ್ನು ಪರಿತ್ಯಾಗ ಮಾಡಿ ನಮ್ಮ ಕುಲಕ್ಕೂ ಮತ್ತು ಲೋಕಕ್ಕೂ ಕ್ಷೇಮವನ್ನು ಉಂಟು ಮಾಡು.

ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥೭೧॥

ಒಂದು ಕುಲದ ಹಿತದ ಸಲುವಾಗಿ ಒಬ್ಬನನ್ನು ಬಿಡಬೇಕು. ಒಂದು ಗ್ರಾಮದ ಹಿತದ ಸಲುವಾಗಿ ಒಂದು ಕುಲವನ್ನು ಬಿಡಬೇಕು. ಒಂದು ದೇಶದ ಹಿತದ ಸಲುವಾಗಿ ಒಂದು ಗ್ರಾಮವನ್ನು ಬಿಡಬೇಕು. ತನ್ನ ಹಿತದ ಸಲುವಾಗಿ ಭೂಮಿಯನ್ನೇ ಬಿಡಬೇಕು.

ವೈಶಂಪಾಯನಃ

ಸ ತಥಾ ವಿದುರೇಣೋಕ್ತಃ ತೈಶ್ಚ ವಿಪ್ರೈರ್ಜನಾಧಿಪಃ ।
ನ ಚಕಾರ ತದಾ ರಾಜಾ ಪುತ್ರಸ್ನೇಹಸಮನ್ವಿತಃ ॥೭೨॥

ಆ ರಾಜನು ವಿದುರನಿಂದಲೂ ಮತ್ತು ಉಳಿದ ಬ್ರಾಹ್ಮಣರಿಂದಲೂ ಹಾಗೆ ಹೇಳಲ್ಪಟ್ಟರೂ ಸಹ, ಪುತ್ರಸ್ನೇಹವಶನಾಗಿ ಅವರ ಮಾತಿನಂತೆ ಮಾಡಲಿಲ್ಲ.

ತತಃ ಪುತ್ರಶತಂ ಸರ್ವಂ ಧೃತರಾಷ್ಟ್ರಸ್ಯ ಭಾರತ ।
ಅಹ್ನಾಂ ಶತೇನ ಸಂಜಜ್ಞೇ ಕನ್ಯಾ ಚೈಕಾ ಶತಾತ್ ಪರಾ ॥೭೩॥

ಭಾರತನೇ, ಅನಂತರ ನೂರು ದಿವಸಗಳಲ್ಲಿ ಒಂದೊಂದು ದಿನಕ್ಕೆ ಒಬ್ಬೊಬ್ಬರಂತೆ ನೂರು ಪುತ್ರರು ಜನಿಸಿದರು. ನೂರೊಂದನೆಯವಳಾದ ಒಬ್ಬ ಕನ್ಯೆಯೂ ಜನಿಸಿದಳು.

ಗಾಂಧಾರ್ಯಾಂ ಕ್ಲಿಶ್ಯಮಾನಾಯಾಂ ವರ್ಧಮಾನೇ ತಥೋದರೇ ।
ವೈಶ್ಯಾ ಸಾ ತ್ವಂಬಿಕಾಪುತ್ರಂ ಕನ್ಯಾ ಪರಿಚಚಾರ ಹ ॥೭೪॥

ಗಾಂಧಾರಿಯು ಗರ್ಭವನ್ನು ಧರಿಸಿ ಉದರದ ವೃದ್ಧಿಯಿಂದ ಕ್ಲೇಶಪಡುತ್ತಿರುವಾಗ ವೈಶ್ಯಕನ್ಯೆಯು ಧೃತರಾಷ್ಟ್ರನನ್ನು ಪರಿಚರಿಸುತ್ತಿದ್ದಳು.

ಅಯಂ ತ್ವನಂತರಂ ತಸ್ಮಾದಧಿರಾಜೋ ಭವಿಷ್ಯತಿ ।
ಏತಂ ಏಬ್ರೂತ ಮೇ ಪ್ರಶ್ನಂ ಯದ್ವಾಽಸ್ಮಿನ್ ದೃಶ್ಯತೇ ಫಲಮ್ ॥೬೫॥

ಅವನ ಅನಂತರ ಜನಿಸಿದ ದುರ್ಯೋಧನನು ಯುವರಾಜನಾಗುವನು. ನನ್ನ ಈ ಪ್ರಶ್ನೆಗೆ ಉತ್ತರವನ್ನು ನೀಡಿ ಅಥವಾ ಇದರಿಂದ ಯಾವ ಫಲವು ಸೂಚಿತವಾಗುತ್ತದೆ ಎಂದು ತಿಳಿಸಿ.

ಅಸ್ಮಿನ್ ಜಾತೇ ನಿಮಿತ್ತಾನಿ ಸಂಶಯಂತ್ಯಶಿವಂ ಮಹತ್ ।
ಅತೋ ಬ್ರವೀಮಿ ವಿದುರ ಬ್ರೂತ ಮಾಂ ಭಯಮಾವಿಶತ್ ॥೬೬॥

ವಿದುರನೇ, ಇವನು ಹುಟ್ಟಿದಾಗ ಎಲ್ಲಾ ಅಪಶಕುನಗಳು ಕಂಡುಬರುತ್ತಿವೆ. ನನಗೆ ತುಂಬಾ ಭಯವಾಗಿದೆ. ಆದ್ದರಿಂದ ಕೇಳುತ್ತಿದ್ದೇನೆ.

ವೈಶಂಪಾಯನಃ

ವಾಕ್ಯಸ್ಯೈತಸ್ಯ ನಿಧನೇ ದಿಕ್ಷು ಸರ್ವಾಸು ಭಾರತ ।
ಕ್ರವ್ಯಾದಾಃ ಪ್ರಾಣದನ್ ಘೋರಾಃ ಶಿವಾಶ್ಚಾಶಿವಶಂಸಿನಃ ॥೬೭॥

ಧೃತರಾಷ್ಟ್ರನ ಈ ಮಾತು ಮುಗಿಯುತ್ತಿದ್ದಂತೆಯೇ ಮಾಂಸಾಹಾರಿ ಪ್ರಾಣಿಗಳೆಲ್ಲವೂ ಘೋರವಾಗಿ ಗರ್ಜಿಸಿದವು. ನರಿಗಳು ಅಮಂಗಳಸ್ವರದಿಂದ ಕೂಗಿದವು.

ಲಕ್ಷಯಿತ್ವಾ ನಿಮಿತ್ತಾನಿ ತಾನಿ ಸರ್ವಾಣಿ ಭಾರತ ।
ತೇಽಬ್ರುವನ್ ಬ್ರಾಹ್ಮಣಾ ರಾಜನ್ ವಿದುರಶ್ಚ ಮಹಾಮತಿಃ ॥೬೮॥

ಭಾರತನೇ, ಈ ಎಲ್ಲಾ ಅಪಶಕುನಗಳನ್ನು ಗಮನಿಸಿ ಬ್ರಾಹ್ಮಣರು ಮತ್ತು ಮಹಾಮತಿಯಾದ ವಿದುರನು ರಾಜನನ್ನು ಕುರಿತು ಹೇಳಿದರು.

ಅಯಂ ಕುಲಾಂತಕೃಜ್ಜಾತೋ ಯಸ್ಮಾಚ್ಚ ಕುಲಪಾಂಸನಃ ।
ತಸ್ಯ ತ್ಯಾಗೇನ ಶಾಂತಿಃ ಸ್ಯಾತ್ ಪುಷ್ಟಿಸ್ತ್ವಪನಯೇ ಭವೇತ್ ॥೬೯॥

ಇವನು ಕುಲಪಾಂಸನನಾದವನು. ಇವನು ಕುಲಕ್ಷಯವನ್ನು ಮಾಡುತ್ತಾನೆ. ಇವನನ್ನು ಪರಿತ್ಯಾಗ ಮಾಡುವುದರಿಂದ ಶಾಂತಿಯೂ, ಕುಲದ ಪುಷ್ಟಿಯೂ ಉಂಟಾಗುತ್ತದೆ.

ಶತಮೇಕೋನಮಪ್ಯಸ್ತು ಪುತ್ರಾಣಾಂ ತೇ ಮಹೀಪತೇ ।
ಏಕೇನ ಕುರು ನಃ ಕ್ಷೇಮಂ ಲೋಕಸ್ಯ ಚ ಕುಲಸ್ಯ ಚ ॥೭೦॥

ರಾಜನೇ, ನೂರು ಮಕ್ಕಳಲ್ಲಿ ಒಬ್ಬನು ಕಡಿಮೆಯಾದರೂ ಚಿಂತೆಯಿಲ್ಲ. ಆ ಒಬ್ಬನನ್ನು ಪರಿತ್ಯಾಗ ಮಾಡಿ ನಮ್ಮ ಕುಲಕ್ಕೂ ಮತ್ತು ಲೋಕಕ್ಕೂ ಕ್ಷೇಮವನ್ನು ಉಂಟು ಮಾಡು.

ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥೭೧॥

ಒಂದು ಕುಲದ ಹಿತದ ಸಲುವಾಗಿ ಒಬ್ಬನನ್ನು ಬಿಡಬೇಕು. ಒಂದು ಗ್ರಾಮದ ಹಿತದ ಸಲುವಾಗಿ ಒಂದು ಕುಲವನ್ನು ಬಿಡಬೇಕು. ಒಂದು ದೇಶದ ಹಿತದ ಸಲುವಾಗಿ ಒಂದು ಗ್ರಾಮವನ್ನು ಬಿಡಬೇಕು. ತನ್ನ ಹಿತದ ಸಲುವಾಗಿ ಭೂಮಿಯನ್ನೇ ಬಿಡಬೇಕು.

ವೈಶಂಪಾಯನಃ

ಸ ತಥಾ ವಿದುರೇಣೋಕ್ತಃ ತೈಶ್ಚ ವಿಪ್ರೈರ್ಜನಾಧಿಪಃ ।
ನ ಚಕಾರ ತದಾ ರಾಜಾ ಪುತ್ರಸ್ನೇಹಸಮನ್ವಿತಃ ॥೭೨॥

ಆ ರಾಜನು ವಿದುರನಿಂದಲೂ ಮತ್ತು ಉಳಿದ ಬ್ರಾಹ್ಮಣರಿಂದಲೂ ಹಾಗೆ ಹೇಳಲ್ಪಟ್ಟರೂ ಸಹ, ಪುತ್ರಸ್ನೇಹವಶನಾಗಿ ಅವರ ಮಾತಿನಂತೆ ಮಾಡಲಿಲ್ಲ.

ತತಃ ಪುತ್ರಶತಂ ಸರ್ವಂ ಧೃತರಾಷ್ಟ್ರಸ್ಯ ಭಾರತ ।
ಅಹ್ನಾಂ ಶತೇನ ಸಂಜಜ್ಞೇ ಕನ್ಯಾ ಚೈಕಾ ಶತಾತ್ ಪರಾ ॥೭೩॥

ಭಾರತನೇ, ಅನಂತರ ನೂರು ದಿವಸಗಳಲ್ಲಿ ಒಂದೊಂದು ದಿನಕ್ಕೆ ಒಬ್ಬೊಬ್ಬರಂತೆ ನೂರು ಪುತ್ರರು ಜನಿಸಿದರು. ನೂರೊಂದನೆಯವಳಾದ ಒಬ್ಬ ಕನ್ಯೆಯೂ ಜನಿಸಿದಳು.

ಗಾಂಧಾರ್ಯಾಂ ಕ್ಲಿಶ್ಯಮಾನಾಯಾಂ ವರ್ಧಮಾನೇ ತಥೋದರೇ ।
ವೈಶ್ಯಾ ಸಾ ತ್ವಂಬಿಕಾಪುತ್ರಂ ಕನ್ಯಾ ಪರಿಚಚಾರ ಹ ॥೭೪॥

ಗಾಂಧಾರಿಯು ಗರ್ಭವನ್ನು ಧರಿಸಿ ಉದರದ ವೃದ್ಧಿಯಿಂದ ಕ್ಲೇಶಪಡುತ್ತಿರುವಾಗ ವೈಶ್ಯಕನ್ಯೆಯು ಧೃತರಾಷ್ಟ್ರನನ್ನು ಪರಿಚರಿಸುತ್ತಿದ್ದಳು.

ತಯಾ ಸಮಭವದ್ ರಾಜಾ ಧೃತರಾಷ್ಟ್ರೋ ಯದೃಚ್ಛಯಾ ।
ತಸ್ಯಾಮಜನಯತ್ ಪುತ್ರಂ ಯುಯುತ್ಸುಂ ನಾಮ ಭಾರತ ॥೭೫॥

ದೈವೇಚ್ಛೆಯಿಂದ ಧೃತರಾಷ್ಟ್ರನು ಅವಳ ಸಮಾಗಮವನ್ನು ಮಾಡಿದನು. ಭಾರತನೇ ಅವಳಲ್ಲಿ ಅವನಿಗೆ ಯುಯುತ್ಸು ಎಂಬ ಪುತ್ರನು ಜನಿಸಿದನು.

ಇತ್ಥಮೇಕಶತಂ ಜಜ್ಞೇ ಪುತ್ರಾಣಾಂ ಭರತರ್ಷಭ ।
ಮಹಾರಥಾನಾಂ ವೀರಾಣಾಂ ಕನ್ಯಾ ಚೈಕಾऽಥ ದುಃಶಲಾ ।
ಧೃತರಾಷ್ಟ್ರಸ್ಯ ರಾಜೇಂದ್ರ ಯಥಾ ತೇ ಕಥಿತಂ ಮಯಾ ॥೭೬॥

ಭರತರ್ಷಭನೇ, ಹೀಗೆ ಧೃತರಾಷ್ಟ್ರನಿಗೆ ಮಹಾರಥರೂ, ವೀರರೂ ಆದ ನೂರು ಪುತ್ರರೂ ದುಃಶಲೆ ಎಂಬ ಒಬ್ಬ ಮಗಳೂ ನಾನು ನಿನಗೆ ಹೇಳಿದ ರೀತಿಯಲ್ಲಿ ಜನಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಪಂಚದಶಾಧಿಕಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ತ್ರಿಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಹದಿನೈದನೆಯ ಅಧ್ಯಾಯ ಮುಗಿಯಿತು.

★★★★★

ನೂರ ಹದಿನಾರನೆಯ ಅಧ್ಯಾಯ

(ಗಾಂಧಾರಿಯಲ್ಲಿ ದುಶ್ಶಲೆಯ ಜನನ.)

ಜನಮೇಜಯಃ

ಧೃತರಾಷ್ಟ್ರಸ್ಯ ಪುತ್ರಾಣಾಮಾದಿತಃ ಕಥಿತಂ ತ್ವಯಾ ।
ಋಷೇರ್ಮತಾತ್ ಪುತ್ರಶತಂ ನ ತು ಕನ್ಯಾऽತ್ರ ಕೀರ್ತಿತಾ ॥೧॥

ಮಹರ್ಷಿಗಳಾದ ವ್ಯಾಸರ ಅಭಿಪ್ರಾಯದಂತೆ ಧೃತರಾಷ್ಟ್ರನಿಗೆ ನೂರು ಪುತ್ರರು ಜನಿಸಿದುದನ್ನು ಮೊದಲಿನಿಂದಲೂ ನೀವು ಹೇಳಿದ್ದೀರಿ. ಆದರೆ ಕನ್ಯೆಯ ವಿಷಯವನ್ನು ಹೇಳಲೇ ಇಲ್ಲ.

ವೈಶ್ಯಾಪುತ್ರೋ ಯುಯುತ್ಸುಶ್ಚ ಏತದೇಕಶತಂ ದ್ವಿಜ ।
ಜನ್ಮಾಪಿ ಧಾರ್ತರಾಷ್ಟ್ರಸ್ಯ ಉಕ್ತಮೇತನ್ಮಹರ್ಷಿಣಾ ।
ಕಥಂ ಹಿ ಸಂಭವಸ್ತಸ್ಮಾದ್ ದುಃಶಲಾಯಾ ಬ್ರವೀಹಿ ಮೇ ॥೨॥

ಬ್ರಾಹ್ಮಣರೇ, ವೈಶ್ಯಾಪುತ್ರನಾದ ಯುಯುತ್ಸುವು ನೂರ ಒಂದನೆಯ ಪುತ್ರ. ಮಹರ್ಷಿಗಳಾದ ವ್ಯಾಸರು ಧೃತರಾಷ್ಟ್ರನಿಂದ ಯುಯುತ್ಸುವಿನ ಉತ್ಪತ್ತಿಯನ್ನು ಹೇಳಿದ್ದರು. ಆದರೆ, ದುಃಶಲೆಯ ಉತ್ಪತ್ತಿ ಹೇಗೆ? ಅದನ್ನು ನನಗೆ ಹೇಳಿ.

ವೈಶಂಪಾಯನಃ

ಸಾಧ್ವಯಂ ಪ್ರಶ್ನ ಉದ್ದಿಷ್ಟಃ ಪಾಂಡವೇಯ ಬ್ರವೀಮಿ ತೇ ।
ತಾಂ ಮಾಂಸಪೇಶೀಂ ತು ತದಾ ಸ್ವಯಮೇವ ಮಹಾಮುನಿಃ ।
ಶೀತಾಭಿರದ್ಭಿಃ ಸಿಂಚನ್ ವೈ ಭಾಗಂ ಭಾಗಮಧಾರಯತ್ ॥೩॥

ಪಾಂಡುಕುಲಪ್ರಸೂತನೇ, ನೀನು ಒಳ್ಳೆಯ ಪ್ರಶ್ನೆಯನ್ನೇ ಕೇಳಿದೆ. ನಾನು ಉತ್ತರವನ್ನು ಹೇಳುತ್ತೇನೆ. ಮಹಾಮುನಿಗಳಾದ ವ್ಯಾಸರು ಆ ಮಾಂಸದ ಮುದ್ದೆಯನ್ನು ತಾವೇ ಶೀತಲವಾದ ನೀರಿನಿಂದ ಚಿಮುಕಿಸಿ, ಬಿರಿದು ಉಂಟಾದ ಭಾಗಗಳನ್ನು ಬೇರೆ ಬೇರೆ ತೆಗೆದರು.

ಯೋ ಯಥಾ ಕಲ್ಪತೇ ಭಾಗಸ್ತಂ ತು ಧಾತ್ರೀ ಸ್ಮ ವೈ ಪೃಥಕ್ ।
ಘೃತಪೂರ್ಣೇಷು ಕುಂಡೇಷು ಏಕೈಕಂ ಪ್ರಾಕ್ಷಿಪತ್ ತದಾ ॥೪॥

ಅವರ ಕೈಗೆ ಆ ಭಾಗಗಳು ಬಂದಂತೆ ಬಂದಂತೆ ಧಾತ್ರಿಯು ಬೇರೆ ಬೇರೆ ಘೃತಪೂರ್ಣವಾದ ಕುಂಭಗಳಲ್ಲಿ ಒಂದೊಂದು ಭಾಗವನ್ನು ಹಾಕಿದಳು.

ಏತಸ್ಮಿನ್ನಂತರೇ ಸಾಧ್ವೀ ಗಾಂಧಾರೀ ಸುಮಹಾಯಶಾಃ ।
ಬ್ರಹ್ಮರ್ಷಿಂ ನಾಬ್ರವೀತ್ ಕಿಂಚಿದ್ ಗೌರವಾಚ್ಚ ಯಶಸ್ವಿನೀ ॥೫॥

ಮಹಾ ಯಶಸ್ವಿನಿಯೂ, ಪತಿವ್ರತೆಯೂ ಆದ ಗಾಂಧಾರಿಯು ಬ್ರಹ್ಮರ್ಷಿಗಳಾದ ವ್ಯಾಸರ ಮೇಲಿನ ಗೌರವದಿಂದ ಈ ಮಧ್ಯೆ ಏನೂ ಮಾತನಾಡಲಿಲ್ಲ.

ಮನಸಾऽಚಿಂತಯದ್ ದೇವೀ ಏತತ್ ಪುತ್ರಶತಂ ಮಮ ।
ಭವಿಷ್ಯತಿ ನ ಸಂದೇಹೋ ನ ಚರ್ಷಿರ್ಭಾಷತೇऽನ್ಯಥಾ ॥೬॥

ಆ ದೇವಿಯು ಮನಸ್ಸಿನಲ್ಲಿ ಹೀಗೆ ಚಿಂತಿಸಿದಳು. ನನಗೆ ಪುತ್ರ ಶತರು ಜನಿಸುವರು. ಇದರಲ್ಲಿ ಸಂದೇಹವಿಲ್ಲ. ಋಷಿಗಳ ಮಾತು ಸುಳ್ಳಾಗುವುದಿಲ್ಲ.

ಮಮ ವೈ ಪರಮಾ ತುಷ್ಟಿರ್ದುಹಿತಾ ಮೇ ಭವೇದ್ ಯದಿ ।
ಏಕಾ ಶತಾಧಿಕಾ ಬಾಲಾ ಶತಸ್ಯಾಪಿ ಕನೀಯಸೀ ।
ತತೋ ದೌಹಿತ್ರಜಾನ್ ಲೋಕಾನವಾಪ್ತುಃ ಸ್ಯಾತ್ ಪತಿರ್ಮಮ ॥೭॥

ಆದರೆ ನನಗೆ ಒಬ್ಬ ಮಗಳು ಜನಿಸಿದರೆ, ನನಗೆ ತುಂಬಾ ಸಂತೋಷವಾಗುವುದು. ಅವಳು ನನಗೆ ನೂರೊಂದನೆಯವಳಾಗಿ ಈ ನೂರೂ ಪುತ್ರರ ತಂಗಿಯಾಗಿರಬೇಕು. ಅವಳ ಮುಖಾಂತರ ನನ್ನ ಪತಿಯು ದೌಹಿತ್ರರಿಂದ ಹೊಂದುವ ಲೋಕಗಳನ್ನು ಹೊಂದುವವನಾಗಬೇಕು.

ಅಹಂ ಚ ಕೃತಕೃತ್ಯಾ ಸ್ಯಾಂ ದುಹಿತ್ರಾ ಸಹ ಸಂಗತಾ ।
ಅಧಿಕಂ ಕಿಲ ನಾರೀಣಾಂ ಪ್ರೀತಿರ್ಜಾಮಾತೃಭಿರ್ಭವೇತ್ ।
ಅಪತ್ಯಂ ಯುವತಿಂ ಚಾಪಿ ದೃಷ್ಟ್ವಾ ಪ್ರೀತಿಮವಾಪ್ನುಯಾಮ್ ॥೮॥

ನಾನೂ ಸಹ ಮಗಳ ಸಹವಾಸದಿಂದ ಕೃತಕೃತ್ಯಳಾಗುತ್ತೇನೆ. ಸ್ತ್ರೀಯರಿಗೆ ಅಳಿಯನಲ್ಲಿ ಹೆಚ್ಚು ಪ್ರೀತಿಯಷ್ಟೇ. ವಯಸ್ಸಿಗೆ ಬಂದ ಮಗಳನ್ನು ನೋಡಿ ನಾನೂ ಸಂತೋಷಪಡುತ್ತೇನೆ.

ಯದಿ ಸತ್ಯಂ ತಪೋ ವಾ ಮೇ ಗುರವಸ್ತೋಷಿತಾ ಯದಿ ।
ಸುಕೃತಂ ಚೇಹ ಲೋಕೇಽಸ್ತಿ ತಥಾಽಸ್ತು ದುಹಿತಾ ಮಮ ॥೯॥

ನಾನು ತಪಸ್ಸು ಮಾಡಿದುದು ಸತ್ಯವಾಗಿದ್ದರೆ, ಗುರುಗಳು ನನ್ನ ಮೇಲೆ ಪ್ರಸನ್ನರಾಗಿದ್ದರೆ, ಈ ಲೋಕದಲ್ಲಿ ನನಗೇನಾದರೂ ಪುಣ್ಯವಿದ್ದರೆ, ಅದರಿಂದ ನನಗೆ ಒಬ್ಬ ಮಗಳು ಜನಿಸಲಿ.

ಏತಸ್ಮಿನ್ನೇವ ಕಾಲೇ ತು ಕೃಷ್ಣದ್ವೈಪಾಯನಃ ಸ್ವಯಮ್ ।
ವ್ಯಭಜತ್ ಸಹಸಾ ವಿಪ್ರಸ್ತಾಂ ಪೇಶೀಂ ಗರ್ಭಸಂಭವಾಮ್ ॥೧೦॥

ಈ ಕಾಲದಲ್ಲಿ ಸರಿಯಾಗಿ ವ್ಯಾಸರು ಅವಳ ಗರ್ಭದಿಂದ ಉಂಟಾದ ಮಾಂಸದ ಮುದ್ದೆಯನ್ನು ತಾವೇ ವಿಭಾಗ ಮಾಡುತ್ತಿದ್ದರು.

ಗಣ್ಯಮಾನೇಷು ಕುಂಡೇಷು ಶತೇ ಪೂರ್ಣೇ ಮಹಾತ್ಮನಾ ।
ಅಭವಚ್ಚಾಪರಂ ಖಿಂಡಂ ವಾಮಹಸ್ತೇ ತದಾ ಕಿಲ ॥೧೧॥

ಆ ಮಹಾತ್ಮರು ಘೃತಕುಂಭಗಳನ್ನು ಎಣಿಸುತ್ತಿರಲು ಅವು ನೂರು ಸಂಖ್ಯೆಯನ್ನು ಹೊಂದಿದಾಗ ವ್ಯಾಸರ ಎಡಗೈಯಲ್ಲಿ ಇನ್ನೂ ಒಂದು ಭಾಗವು ಉಳಿದಿತ್ತಷ್ಟೇ.

ಪೂರ್ಣಂ ಪುತ್ರಶತಂ ಹ್ಯೇವ ನ ಮಿಥ್ಯಾ ವಾಗುದೀರಿತಾ ।
ದೈವಯೋಗಾತ್ ತ್ವಯಂ ಭಾಗ ಏಕೋ ದೃಷ್ಟಃ ಶತಾನ್ ಪರಃ ।
ಏಷಾ ತೇ ಸುಭಗೇ ಕನ್ಯಾ ಭವಿಷ್ಯತಿ ಯಥೇಪ್ಸಿತಾ ॥೧೨॥

ಗಾಂಧಾರಿ ನಿನಗೆ ನೂರು ಪುತ್ರರು ಜನಿಸಿದರು. ನನ್ನ ಮಾತು ಅನ್ಯತವಾಗಿಲ್ಲ. ದೈವಯೋಗದಿಂದ ನೂರಕ್ಕಿಂತ ಹೆಚ್ಚಾದ ಒಂದು ಭಾಗವು ನನ್ನ ಕೈಯಲ್ಲಿ ಉಳಿದಿದೆ. ಸುಂದರಿಯೇ, ನಿನ್ನ ಅಭೀಷ್ಟದಂತೆ ಇವಳು ನಿನ್ನ ಮಗಳಾಗುತ್ತಾಳೆ.

ತತೋಽನ್ಯದ್ ಘೃತಕುಂಡಂ ತು ಆನಾಯ್ಯಾಶು ಮಹಾಯಶಾಃ ।
ಪ್ರಾಕ್ಷಿಪತ್ ತಂ ತದಾ ರಾಜನ್ ಕನ್ಯಾಭಾಗಂ ಪರಂತಪ ॥೧೩॥

ಎಲೈ ಪರಂತಪನಾದ ರಾಜನೇ, ಆಗ ಆ ಮಹಾಕೀರ್ತಿವಂತರಾದ ಋಷಿಗಳು ಇನ್ನೊಂದು ಘೃತಕುಂಭವನ್ನು ತರಿಸಿ ಅದರಲ್ಲಿ ಆ ಕನ್ಯಾಭಾಗವನ್ನು ಹಾಕಿದರು.

ಸಂಭೂತಾ ಚೈವ ಕಾಲೇನ ಸರ್ವೇಷಾಂ ಚ ಯವೀಯಸೀ ।
ಏತತ್ತೇ ಕಥಿತಂ ವೀರ ದುಃಶಲಾಜನ್ಮ ಚೈವ ತು ।
ಬ್ರೂಹಿ ರಾಜೇಂದ್ರ ಕಿಂ ಭೂಯಃ ಕಥಯೇ ಪಾಂಡುನಂದನ ॥೧೪॥

ಕಾಲಕ್ರಮದಲ್ಲಿ ಎಲ್ಲರಿಗಿಂತ ಚಿಕ್ಕವಳಾದ ಕನ್ಯೆಯು ಜನಿಸಿದಳು. ವೀರನೇ, ದುಃಶಲೆಯ ಜನ್ಮದ ಈ ಪ್ರಕಾರವನ್ನು ನಿನಗೆ ತಿಳಿಸಿದ್ದೇನೆ. ಪಾಂಡುನಂದನನಾದ ರಾಜೇಂದ್ರನೇ, ನಿನಗೆ ಬೇರೆ ಯಾವ ವಿಷಯವನ್ನು ಹೇಳಲಿ ಎಂದು ಹೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಷೋಡಶಾಧಿಕಶತತಮೋಽಧ್ಯಾಯಃ ॥

॥ ಸಂಭವಪರ್ವಣಿ ಚತುಃಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಹದಿನಾರನೆಯ ಅಧ್ಯಾಯ ಮುಗಿಯಿತು.

ನೂರ ಹದಿನೇಳನೆಯ ಅಧ್ಯಾಯ

(ದುರ್ಯೋಧನಾದಿ ನೂರು ಪುತ್ರರ ನಾಮ ಕಥನ, ಜಯದ್ರಥ ದುಶ್ಶಲೆಯರ ವಿವಾಹ.)

ಜನಮೇಜಯಃ

ಜ್ಯೇಷ್ಠಾನುಜ್ಯೇಷ್ಠತಾಂ ಚೈವ ನಾಮಧೇಯಾನಿ ಚ ಪ್ರಭೋ ।
ಧೃತರಾಷ್ಟ್ರಸ್ಯ ಪುತ್ರಾಣಾಮಾನುಪೂರ್ವ್ಯೇಣ ಕೀರ್ತಯ ॥೧॥

ಪೂಜ್ಯರಾದ ಪ್ರಭುಗಳೇ, ಧೃತರಾಷ್ಟ್ರನ ಪುತ್ರರ ಜ್ಯೇಷ್ಠಾನುಜ್ಯೇಷ್ಠತೆಯನ್ನು ಮತ್ತು ಅವರ ನಾಮಗಳನ್ನು ತಿಳಿಸಿ.

ವೈಶಂಪಾಯನಃ

ದುರ್ಯೋಧನೋ ಯುಯುತ್ಸುಶ್ಚ ರಾಜನ್ ದುಃಶಾಸನಸ್ತಥಾ ।
ದುರ್ಧರ್ಷೋ ದುರ್ಮುಖಶ್ಚೈವ ಜಲಸಂಧಿಃ ಸಹಃ ಸಮಃ ॥೨॥

ವಿಂದಾನುವಿಂದೌ ದುಷ್ಪ್ರಧರ್ಷಃ ಸುಬಾಹುರ್ದುಷ್ಪ್ರಧರ್ಷಣಃ ।
ದುರ್ಮದಶ್ಚಿತ್ರಯೋಧಶ್ಚ ದುಷ್ಕರ್ಣಃ ಕರ್ಣ ಏವ ಚ ॥೩॥

ವಿವಿಂಶತಿರ್ವಿಕರ್ಣಶ್ಚ ಜಯಸಂಧಃ ಸುಲೋಚನಃ ।
ಚಿತ್ರೋ ವಿಚಿತ್ರಶ್ಚಿತ್ರಾಕ್ಷಃ ಚಾರುಚಿತ್ರಃ ಶರಾಸನಃ ॥೪॥

ದುರ್ಮರ್ಷಣೋ ದುಷ್ಪ್ರಧರ್ಷೋ ವಿವಿತ್ಸುರ್ವಿಕಲಃ ಶಮಃ ।
ಊರ್ಣನಾಭಃ ಸುನಾಭಶ್ಚ ತಥಾ ನಂದೋಪನಂದಕೌ ॥೫॥

ಸೇನಾಪತಿಃ ಸುಷೇಣಶ್ಚ ಕುಂಡೋದರಮಹೋದರೌ ।
ಚಿತ್ರಧ್ವಜಶ್ಚಿತ್ರರಥಃ ಚಿತ್ರಬಾಹುರಮಿತ್ರಜಿತ್ ॥೬॥

ಚಿತ್ರಬಾಣಶ್ಚಿತ್ರವರ್ಮಾ ಸುವರ್ಮಾ ದುರ್ವಿಲೋಚನಃ ।
ಚಿತ್ರಸೇನಶ್ಚ ವಿಕ್ರಾಂತಃ ಸುಚಿತ್ರಶ್ಚಿತ್ರವರ್ಮಧೃಕ್ ॥೭॥

ಅಪರಾಜಿತಃ ಪಂಡಿತಕೋ ವಿಶಾಲಾಕ್ಷೋ ದುರಾಸದಃ ।
ಅಜಿತಶ್ಚ ಜನಂತಶ್ಚ ಜಯತ್ಸೇನೋಽಥ ದುರ್ಜಯಃ ॥೮೪॥

ದೃಢಹಸ್ತಃ ಸುಹಸ್ತಶ್ಚ ವಾತವೇಗಸುವರ್ಚಸೌ ।
ಆದಿತ್ಯಕೇತುರ್ಬಹ್ವಾಶೀ ನಾಗದಂತೋಗ್ರಶಾಯಿನೌ ॥೮೫॥

ಕವಚೀ ನಿಷಂಗೀ ಪಾಶೀ ಚ ದಂಡಧಾರ ಅನುಗ್ರಹಃ ।
ಉಗ್ರೋ ಭೀಮರಥೋ ಭೀಮೋ ಭೀಮಬಾಹುರಲೋಲುಪಃ ॥೮೦॥

ಭೀಮಕರ್ಮಾ ಸುಬಾಹುಶ್ಚ ಭೀಮವಿಕ್ರಾಂತ ಏವ ಚ ।
ಅಭಯೋ ರೌಕ್ಷಕರ್ಮಾ ಚ ತಥಾ ದೃಢರಥಶ್ಚ ಯಃ ॥೮೧॥

ಅನಾಧೃಷ್ಯಃ ಕುಂಡಭೇದೀ ಧೀರಾರಿರ್ದೀರ್ಘಲೋಚನಃ ।
ದೀರ್ಘಧ್ವಜೋ ದೀರ್ಘಜಂಘ ಆದೀರ್ಘೋ ದೀರ್ಘ ಏವ ಚ ॥೮೨॥

ದೀರ್ಘಬಾಹುರ್ಮಹಾಬಾಹುರ್ವ್ಯೂಢೋರುಃ ಕನಕಧ್ವಜಃ ।
ಮಹಾಕುಂಡಶ್ಚ ಕುಂಡಶ್ಚ ವಿಕುಂಡಶ್ಚಿತ್ರಜಸ್ತಥಾ ॥೮೩॥

ಅಸನಿಶ್ಚಿತ್ರಕಶ್ಚೈವ ದುಃಶಲಾ ಚೈವ ಭಾರತ ।
ಏತದೇಕಶತಂ ರಾಜನ್ ಕನ್ಯಾ ಚೈಕಾ ಪ್ರಕೀರ್ತಿತಾ ॥೮೪॥

ರಾಜನೇ, ದುರ್ಯೋಧನ, ಯುಯುತ್ಸು, ದುಃಶಾಸನ, ದುರ್ಧರ್ಷ, ದುರ್ಮುಖ, ಜಲಸಂಧಿ, ಸಹ ಸಮ, ವಿಂದ, ಅನುವಿಂದ, ದುಷ್ಪ್ರಾಪ, ಸುಬಾಹು, ದುಷ್ಪ್ರಧರ್ಷಣ, ದುರ್ಮದ, ಚಿತ್ರಯೋಧ, ದುಷ್ಕರ್ಣ, ಕರ್ಣ, ವಿವಿಂಶತಿ, ವಿಕರ್ಣ, ಜಯಸಂಧ, ಸುಲೋಚನ, ಚಿತ್ರ, ವಿಚಿತ್ರ, ಚಿತ್ರಾಕ್ಷ, ಚಾರುಮಿತ್ರ, ಶರಾಸನ, ದುರ್ಮರ್ಷಣ, ದುಷ್ಪ್ರಧರ್ಷ, ವಿವಿತ್ಸು, ವಿಕಲ, ಶಮ, ಊರ್ಣನಾಭ, ಸುನಾಭ, ನಂದ, ಉಪನಂದ, ಸೇನಾಪತಿ, ಸುಷೇಣ, ಕುಂಡೋದರ, ಮಹೋದರ, ಚಿತ್ರಧ್ವಜ, ಚಿತ್ರರಥ, ಚಿತ್ರಬಾಹು, ಅಮಿತ್ರಜಿತ್, ಚಿತ್ರಬಾಣ, ಚಿತ್ರವರ್ಮ, ಸುವರ್ಮ, ದುರ್ವಿಲೋಚನ, ಚಿತ್ರಸೇನ, ವಿಕ್ರಾಂತ, ಸುಚಿತ್ರ, ಚಿತ್ರವರ್ಮಧೃಕ್, ಅಪರಾಜಿತ, ಪಂಡಿತಕ, ವಿಶಾಲಾಕ್ಷ, ದುರಾಸದ, ಅಜಿತ, ಜಯಂತ, ಜಯತ್ಸೇನ, ದುರ್ಜಯ, ದೃಢಹಸ್ತ, ಸುಹಸ್ತ, ವಾತವೇಗ, ಸುವರ್ಚ, ಆದಿತ್ಯಕೇತು, ಬಹ್ವಾಶೀ, ನಾಗದಂತ, ಉಗ್ರಶಾಯಿ, ಕವಚೀ,ನಿಷಂಗೀ, ಪಾಶೀ, ದಂಡಧಾರ, ಅನುಗ್ರಹ,

ಉಗ್ರ, ಭೀಮರಥ, ಭೀಮ, ಭೀಮಬಾಹು, ಅಲೋಲುಪ, ಭೀಮಕರ್ಮ, ಸುಬಾಹು, ಭೀಮವಿಕ್ರಾಂತ, ಅಭಯ, ಸೂಕ್ಷ್ಮಕರ್ಮ, ದೃಢರಥ, ಅನಾಧೃಷ್ಯ, ಕುಂಡಭೇದಿ, ಧಿರಾರಿ, ದೀರ್ಘಲೋಚನ, ದೀರ್ಘಧ್ವಜ, ದೀರ್ಘಜಂಘ, ಅದೀರ್ಘ, ದೀರ್ಘ, ದೀರ್ಘಬಾಹು, ಮಹಾಬಾಹು, ವ್ಯೂಢೋರ, ಕನಕಧ್ವಜ, ಮಹಾಕುಂಡ, ಕುಂಡ, ವಿಕುಂಡ, ಚಿತ್ರಜ, ಅಸನ, ಚಿತ್ರಕ. ಇವರು ನೂರು ಪುತ್ರರು ಮತ್ತು ದುಃಶಲೆ. ಭಾರತನೇ, ನಾನು ನಿನಗೆ ಈ ನೂರು ಪುತ್ರರ ಮತ್ತು ಕನ್ಯೆಯ ಹೆಸರನ್ನು ಹೇಳಿದ್ದೇನೆ.

ನಾಮಧೇಯಾನುಪೂರ್ವ್ಯೇಣ ವಿದ್ಧಿ ಜನ್ಮಕ್ರಮಂ ನೃಪ ।
ಸರ್ವೇऽಪ್ಯತಿರಥಾಃ ಶೂರಾಃ ಸರ್ವೇ ಯುದ್ಧವಿಶಾರದಾಃ ॥೧೫॥

ರಾಜನೇ, ನಾನು ಅವರ ನಾಮಧೇಯವನ್ನು ಹೇಳಿದ ಕ್ರಮದಲ್ಲಿಯೇ ಅವರ ಜನ್ಮವೆಂದು ತಿಳಿ. ಎಲ್ಲರೂ ಅತಿರಥರು ಮತ್ತು ಶೂರರು ಮತ್ತು ಯುದ್ಧವಿಶಾರದರು.

ಸರ್ವೇ ವೇದವಿದಶ್ಚೈವ ರಾಜಶಾಸ್ತ್ರೇಷು ಚಾಭವನ್ ।
ಸರ್ವೇ ಸಂಸಕ್ತವಿದ್ಯಾಸ್ತು ಮುಖ್ಯಾಭಿಜನಶೋಭಿತಾಃ ॥೧೬॥

ಎಲ್ಲರೂ ವೇದವಿದ್ಯೆಯನ್ನು ಮತ್ತು ರಾಜಶಾಸ್ತ್ರವನ್ನು ತಿಳಿದವರು. ಎಲ್ಲರೂ ಮುಖ್ಯಕುಲದಲ್ಲಿ ಜನ್ಮದಿಂದ ಶೋಭಿತರಾಗಿ ವಿದ್ಯೆಯ ಸಂಸರ್ಗವನ್ನು ಹೊಂದಿದವರು.

ಸರ್ವೇಷಾಮನುರೂಪಂ ಚ ಕೃತದಾರಾಃ ಕೃತಶ್ರಮಾಃ ।
ಧೃತರಾಷ್ಟ್ರೇಣ ಸಮಯೇ ಸಮೀಕ್ಷ್ಯ ವಿಧಿವತ್ ತದಾ ॥೧೭॥

ಎಲ್ಲರೂ ಅಸ್ತ್ರಶಸ್ತ್ರಗಳಲ್ಲಿ ಪರಿಶ್ರಮವುಳ್ಳವರು. ಧೃತರಾಷ್ಟ್ರನು ಎಲ್ಲರಿಗೂ ಅನುರೂಪರಾದ ಕನ್ಯೆಯರನ್ನು ನೋಡಿ ಸೂಕ್ತಕಾಲದಲ್ಲಿ ವಿಧಿವತ್ತಾಗಿ ವಿವಾಹವನ್ನು ಮಾಡಿದನು.

ದುಃಶಲಾಂ ಸಮಯೇ ರಾಜಾ ಸಿಂಧುರಾಜಾಯ ಭಾರತ ।
ಜಯದ್ರಥಾಯ ಪ್ರದದೌ ಸೌಬಲಾನುಮತಾತ್ ತದಾ ॥೧೮॥

ಯೋಗ್ಯಕಾಲದಲ್ಲಿ ಶಕುನಿಯ ಅನುಮತಿಯನ್ನು ಪಡೆದು ದುಃಶಲೆಯನ್ನು ಸಿಂಧುರಾಜನಾದ ಜಯದ್ರಥನಿಗೆ ವಿವಾಹ ಮಾಡಿಕೊಟ್ಟನು.

ಇತಿ ಪುತ್ರಶತಂ ರಾಜನ್ ಯುಯುತ್ಸುಶ್ಚ ಶತಾಧಿಕಃ ।
ಕನ್ಯಕಾ ದುಃಶಲಾ ಚೈವ ಯಥಾವತ್ ಕೀರ್ತಿತಂ ಮಯಾ ॥೧೯॥

ರಾಜನೇ, ಹೀಗೆ ಗಾಂಧಾರಿಯ ನೂರು ಪುತ್ರರು, ನೂರೊಂದನೆಯ ಪುತ್ರನಾದ ಯುಯುತ್ಸು ಮತ್ತು ಗಾಂಧಾರಿಯ ಒಬ್ಬ ಮಗಳಾದ ದುಃಶಲೆ, ಎಲ್ಲರನ್ನೂ ನಿನಗೆ ಸರಿಯಾಗಿ ತಿಳಿಸಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಸಪ್ತದಶಾಧಿಕಶತತಮೋಽಧ್ಯಾಯಃ ॥

॥ ಸಂಭವಪರ್ವಣಿ ಪಂಚಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಹದಿನೇಳನೆಯ ಅಧ್ಯಾಯ ಮುಗಿಯಿತು

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೨

ವಿವರ್ಧಮಾನೋ ಲೋಕದೃಷ್ಟ್ಯೈವ ಕೃಷ್ಣೇ
ಪಾಂಡುಃ ಪುನಃ ಪ್ರಾಹ ಪೃಥಾಮಿದಂ ವಚಃ ।
ಧರ್ಮಿಷ್ಠೋ ನೌಸೂನುರಗ್ರೇ ಬಭೂವ
ಬಲದ್ವಯಜ್ಯೇಷ್ಠ ಉತಾಪರಶ್ಚ ॥೯॥

ಲೋಕದೃಷ್ಟಿಯಿಂದ ಕೃಷ್ಣ ಬೆಳೆಯುತ್ತಿದ್ದಂತೆ ಅತ್ತ ಪಾಂಡು ಪುನಃ ಕುಂತಿಗೆ ಹೇಳಿದ- 'ನಮಗೆ ಮೊದಲಿಗೆ ಧರ್ಮಿಷ್ಠನಾದ ಪುತ್ರ ಜನಿಸಿದ. ಬಳಿಕ ಜ್ಞಾನಬಲ ಬಾಹುಬಲ ಎರಡರಲ್ಲಿಯೂ ಉತ್ತಮನಾದ ಇನ್ನೊಬ್ಬ ಪುತ್ರನೂ ಜನಿಸಿದ.

ಯದೈಕ ಏವಾತಿಬಲೋಪಪನ್ನೋ
ಭವೇತ್ ತದಾ ತೇನ ಪರಾವಮರ್ದೇ ।
ಪ್ರವರ್ತ್ಯಮಾನೇ ಸ್ವಪುರಂ ಹರೇಯು
ಶ್ಚೌರ್ಯಾತ್ ಪರೇ ತದ್ ದ್ವಯಮತ್ರ ಯೋಗ್ಯಮ್ ॥೫॥

'ಆದರೂ ಒಬ್ಬನೆ ಮಗ ಇದ್ದರೆ ಅವನು ಅತಿ ಬಲಿಷ್ಠನಾದರೂ ಅವನು ಶತ್ರುಗಳೊಡನೆ ಯುದ್ಧ ಮಾಡುತ್ತಿರುವಾಗ ಬೇರೆ ಶತ್ರುಗಳು ನಮ್ಮ ಪಟ್ಟಣವನ್ನು ಕಳ್ಳತನದಿಂದ ನುಗ್ಗಿ ಸೂರೆ ಮಾಡಬಹುದು. ಅದರಿಂದ ಬಲಿಷ್ಠರಾದ ಇಬ್ಬರು ಮಕ್ಕಳಾಗಬೇಕು.

ಶಸ್ತ್ರಾಸ್ತ್ರವಿದ್ ವೀರ್ಯವಾನ್ ನೌ ಸುತೋಽನ್ಯೋ
ಭವೇದ್ ದೇವಂ ತಾದೃಶಮಾಹ್ವಯಾತಃ ।
ಶೇಷಸ್ತ್ವಭ್ರಾತೃಸುತೋಽಭಿಜಾತ
ಸ್ತಸ್ಮಾನ್ನಾಸೌ ಸುತದಾನಾಯ ಯೋಗ್ಯಃ ॥೯೬॥

'ಶಸ್ತ್ರಾಸ್ತ್ರಗಳನ್ನು ಬಲ್ಲ ಪರಾಕ್ರಮಿಯಾದ ಇನ್ನೊಬ್ಬ ಮಗ ನಮಗೆ ಜನಿಸಲಿ. ಅದಕ್ಕೆ ಅಂಥ ಒಬ್ಬ ದೇವನನ್ನು ಆಹ್ವಾನಿಸು. ಶೇಷ ನಿನ್ನ ಅಣ್ಣನ ಮಗನಾಗಿ ಹುಟ್ಟಿದ್ದಾನೆ. ಅದರಿಂದ ಅವನು ನಮಗೆ ಪುತ್ರದಾನ ಮಾಡಲು ಅರ್ಹನಾಗುವುದಿಲ್ಲ.

ನ ವೈ ಸುಪರ್ಣಃ ಸುತದೋ ನರೇಷು ಪ್ರಜಾಪತೇ ವಾಽಸ್ಯ ಯತಸ್ತಥಾಜ್ಞಾ।
ಕೃತಾ ಪುರಾ ಹರಿಣಾ ಶಂಕರಸ್ತು ಕ್ರೋಧಾತ್ಮಕಃ ಪಾಲನೇ ನೈವ ಯೋಗ್ಯಃ ॥

'ಗರುಡನು ಪುತ್ರದಾನ ಮಾಡುತ್ತ ಮನುಷ್ಯರಲ್ಲಿ ಹುಟ್ಟುವುದಿಲ್ಲ. ಏಕೆಂದರೆ ಹರಿ ಅವನಿಗೆ ಹಿಂದೆ ಹಾಗೇ ಆಜ್ಞೆ ಮಾಡಿದ್ದಾನೆ. ಶಿವ ಕ್ರೋಧಾಭಿಮಾನಿ. ರಾಜ್ಯಪಾಲನೆಯಲ್ಲಿ ಯೋಗ್ಯನೇ ಅಲ್ಲ.

ಅತೋ ಮಹೇಂದ್ರೋ ಬಲವಾನನಂತರ-
ಸ್ತೇಷಾಂ ಸಮಾಹ್ವಾನಮಿಹಾರ್ಹತಿ ಸ್ವರಾಟ್ ।
ಇತೀರಿತಾ ಸಾಹ್ವಯದಾಶು ವಾಸವಂ
ತತಃ ಪ್ರಜಜ್ಞೇ ಸ್ವಯಮೇವ ಶಕ್ರಃ ॥೯೯॥

'ಅದರಿಂದ ಅವರಿಗೆ ಅನಂತರದ ಬಲಿಷ್ಠನಾದ ದೇವ ಮಹೇಂದ್ರ. ಅವನೆ ಪುತ್ರದಾನ ವಿಷಯದಲ್ಲಿ ಆಹ್ವಾನಕ್ಕೆ ಯೋಗ್ಯನಾಗಿರುತ್ತಾನೆ'. ಪಾಂಡು ಹೀಗೆ ಹೇಳಿದಾಗ ಕುಂತಿ ಬೇಗನೆ ದೇವೇಂದ್ರನನ್ನು ಮಂತ್ರಪೂರ್ವಕ ಆಹ್ವಾನಿಸಿದಳು. ಆಗ ಇಂದ್ರ ತಾನೇ ಜನಿಸಿದ.

ಸ ಚಾರ್ಜುನೋ ನಾಮ ನರಾಂಶಯುಕ್ತೋ
ವಿಷ್ಣ್ವಾವೇಶೀ ಬಲವಾನಸ್ತ್ರವೇತ್ತಾ ।
ರೂಪ್ಯನ್ಯಃ ಸ್ಯಾತ್ ಸೂನುರಿತ್ಯುಚ್ಯಮಾನಾ
ಭರ್ತ್ರಾ ಕುಂತೀ ನೇತಿ ತಂ ಪ್ರಾಹ ಧರ್ಮಾತ್ ॥೯॥

ಅವನು ಅರ್ಜುನನೆನಿಸಿದ. ನರಾಂಶಯುಕ್ತನಾಗಿದ್ದು ವಿಷ್ಣುವಿನ ಆವೇಶ ಉಳ್ಳವ, ಬಲಿಷ್ಠ. ಶಸ್ತ್ರಾಸ್ತ್ರಗಳನ್ನು ಬಲ್ಲವ 'ಸುಂದರನಾದ ಇನ್ನೊಬ್ಬ ಮಗನೂ ಬೇಕೆಂದು ಪಾಂಡು ಹೇಳಿದಾಗ ಧರ್ಮದೃಷ್ಟಿಯಿಂದ ಬೇಡವೆಂದಳು ಕುಂತಿ.

★ ★ ★ ★

ನೂರ ಹದಿನೆಂಟನೆಯ ಅಧ್ಯಾಯ

(ಕುಂತಿಯಲ್ಲಿ ಇಂದ್ರನಿಂದ ಅರ್ಜುನನ ಉತ್ಪತ್ತಿ ಮತ್ತು ಅಶರೀರವಾಣಿ.)

ವೈಶಂಪಾಯನಃ

ಜಾತೇ ಬಲವತಾಂ ಶ್ರೇಷ್ಠೇ ಪಾಂಡುಶ್ಚಿಂತಾಪರೋಽಭವತ್ ।
ಕಥಮನ್ಯೋ ಮಮ ಸುತೋ ಲೋಕೇ ಶ್ರೇಷ್ಠೋ ಭವೇದಿತಿ ॥೧॥

ಬಲಾಢ್ಯರಲ್ಲಿ ಶ್ರೇಷ್ಠರಾದ ವಾಯುದೇವರು ಮಗನಾಗಿ ಅವತರಿಸುತ್ತಿರಲು ಪಾಂಡುವು ತನಗೆ ಇನ್ನೊಬ್ಬ ಶ್ರೇಷ್ಠನಾದ ಪುತ್ರನು ಹೇಗೆ ದೊರೆಯುವನು ಎಂದು ಚಿಂತಾಕ್ರಾಂತನಾದನು.

ದೈವಂ ಪುರುಷಕಾರಶ್ಚ ಯತ್ರ ಲೋಕಃ ಪ್ರತಿಷ್ಠಿತಃ ।
ಯತ್ರ ದೇವಾತ್ತು ತಪಸಾ ಲಪ್ಸ್ಯೇ ಪುತ್ರಂ ಮಹಾಬಲಮ್ ॥೨॥

ಯಾವ ಪುತ್ರನು ದೈವಬಲದಿಂದಲೂ, ಪುರುಷಪ್ರಯತ್ನದಿಂದಲೂ ಕೂಡಿದವನಾಗಿದ್ದು ಲೋಕಕ್ಕೆ ಆಶ್ರಯನಾಗುವನೋ ಅಂತಹ ಮಹಾಬಲನಾದ ಪುತ್ರನನ್ನು ಯಾವ ದೇವತೆಯನ್ನು ಕುರಿತು ತಪಸ್ಸುಮಾಡಿ ಪಡೆಯಲ್ಲಿ (ಎಂದು ಚಿಂತಿಸಿದನು).

ಇಂದ್ರೋ ಹಿ ರಾಜಾ ದೇವಾನಾಂ ಪ್ರಧಾನ ಇತಿ ಮೇ ಶ್ರುತಃ ।
ಅಪ್ರಮೇಯಬಲೋತ್ಸಾಹೋ ವೀರ್ಯವಾನುತ್ತಮದ್ಯುತಿಃ ॥೩॥

ದೇವತೆಗಳ ರಾಜನಾದ ಇಂದ್ರನು ಅಪ್ರಮೇಯವಾದ ಬಲ ಮತ್ತು ಉತ್ಸಾಹಗಳನ್ನು ಉಳ್ಳವನೂ, ಪರಾಕ್ರಮಶಾಲಿಯೂ ಮತ್ತು ಅಮಿತದ್ಯುತಿಯೂ ಆಗಿ ದೇವತೆಗಳಿಗೆ ಪ್ರಧಾನನಾದವನು ಎಂದು ನಾನು ಕೇಳಿದ್ದೇನೆ.

ತಂ ತೋಷಯಿತ್ವಾ ತಪಸಾ ಪುತ್ರಂ ಲಪ್ಸ್ಯೇ ಮಹಾಬಲಮ್ ।
ಯಂ ದಾಸ್ಯತಿ ಸ ನಃ ಪುತ್ರಂ ಸಪ್ರಧಾನೋ ಭವಿಷ್ಯತಿ ॥೪॥

ನನ್ನ ತಪಸ್ಸಿನಿಂದ ಅವನನ್ನು ಸಂತೋಷಪಡಿಸಿ ಮಹಾಬಲವುಳ್ಳ ಪುತ್ರನನ್ನು ಪಡೆಯುವೆನು. ಅವನು ಯಾವ ಪುತ್ರನನ್ನು ನನಗೆ ಕೊಡುತ್ತಾನೋ, ಅವನು ಪ್ರಧಾನನಾಗುವನು.

ಅಮಾನುಷಾನ್ ಮಾನುಷಾಂಶ್ಚ ಸ ಸಂಗ್ರಾಮೇ ಹನಿಷ್ಯತಿ ।
ತಪಸಾ ಕರ್ಮಣಾ ಚೈವ ತಸ್ಮಾತ್ ತಪ್ಸ್ಯೇ ಮಹತ್ ತಪಃ ॥೫॥

ಅವನು ಮನುಷ್ಯರನ್ನೂ, ಮನುಷ್ಯರಲ್ಲದವರನ್ನೂ ಯುದ್ಧದಲ್ಲಿ ತನ್ನ ತಪಸ್ಸಿನ ಶಕ್ತಿಯಿಂದಲೂ ಮತ್ತು ಕ್ರಿಯಾಶಕ್ತಿಯಿಂದಲೂ ಸಂಹರಿಸುವನು. ಆದ್ದರಿಂದ ದೊಡ್ಡ ತಪಸ್ಸನ್ನು ಆಚರಿಸುವೆನು.

ತತಃ ಪಾಂಡುಸ್ತು ರಾಜರ್ಷಿಃ ಮಂತ್ರಯಿತ್ವಾ ಮಹರ್ಷಿಭಿಃ ।
ಆದಿಶ್ಯ ಕುಂತ್ಯಾಃ ಕೌರವ್ಯ ವ್ರತಂ ಸಾಂವತ್ಸರಂ ಶುಭಮ್ ॥೬॥

ಆತ್ಮನಶ್ಚ ಮಹಾವೀರ್ಯ ಏಕಪಾದಸ್ಥಿತೋऽಭವತ್ ।
ಉಗ್ರಂ ತಪಃ ಸ ಆತಸ್ಥೇ ಪರಮೇಣ ಸಮಾಧಿನಾ ॥೭॥

ಅನಂತರ ರಾಜಋಷಿಯಾದ ಪಾಂಡುವು ಮಹರ್ಷಿಗಳ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿ, ಒಂದು ಸಂವತ್ಸರದವರೆಗೆ ಧರಿಸಬೇಕಾದ ಶುಭವಾದ ವ್ರತವನ್ನು ಕುಂತಿಗೆ ಆದೇಶ ಮಾಡಿ ತನಗೂ ಅಂತಹ ವ್ರತವನ್ನು ಚಿಂತನೆ ಮಾಡಿ, ಒಂದೇ ಪಾದದ ಮೇಲೆ ನಿಂತನು. ಮಹಾಪರಾಕ್ರಮಿಯಾದ ಕೌರವ್ಯನೇ, ಅವನು ಮನಸ್ಸನ್ನು ಸಮಾಧಾನ ಸ್ಥಿತಿಯಲ್ಲಿಟ್ಟು ಉಗ್ರವಾದ ತಪಸ್ಸನ್ನು ಆಚರಿಸಲು ಪ್ರಾರಂಭಿಸಿದನು.

ಆರಿರಾಧಯಿಷುರ್ದೇವಂ ತ್ರಿದಶಾನಾಂ ತಮೀಶ್ವರಮ್ ।
ಸೂರ್ಯೇಣ ಸಹ ಧರ್ಮಾತ್ಮಾ ಪರ್ಯವರ್ತತ ಭಾರತ ॥೮॥

ಎಲೈ ಭಾರತನೇ, ದೇವತೆಗಳ ರಾಜನಾದ ಇಂದ್ರನನ್ನು ಒಲಿಸುವ ಸಲುವಾಗಿ ಧರ್ಮಾತ್ಮನಾದ ಅವನು ಸೂರ್ಯನ ಜೊತೆಯಲ್ಲಿ ತಿರುಗಿದನು. (ಸೂರ್ಯನು ಪೂರ್ವದಲ್ಲಿದ್ದಾಗ ಪೂರ್ವಾಭಿಮುಖವಾಗಿ ನಿಂತು, ಪಶ್ಚಿಮಕ್ಕೆ ತಿರುಗಿದಾಗ ಪಶ್ಚಿಮಾಭಿಮುಖವಾಗಿ ನಿಂತು ತಪಸ್ಸು ಮಾಡಿದನು.)

ತಂ ತು ಕಾಲೇನ ಮಹತಾ ವಾಸವಃ ಪ್ರತ್ಯಭಾಷತ ।
ಪುತ್ರಂ ತವ ಪ್ರದಾಸ್ಯಮಿ ತ್ರಿಷು ಲೋಕೇಷು ವಿಶ್ರುತಮ್ ॥೯॥

ಬಹಳ ಕಾಲವಾದ ಮೇಲೆ ಇಂದ್ರನು ಅವನನ್ನು ಕುರಿತು, ನಿನಗೆ ಮೂರು ಲೋಕಗಳಲ್ಲಿಯೂ ಪ್ರಖ್ಯಾತನಾಗುವ ಪುತ್ರನನ್ನು ಕೊಡುವೆನು ಎಂದು ಹೇಳಿದನು.

ಮಿತ್ರೇಭ್ಯೋ ಬ್ರಾಹ್ಮಣೇಭ್ಯಶ್ಚ ಸುಹೃದ್ಭ್ಯಶ್ಚಾರ್ಥಸಾಧಕಮ್ ।
ಸುತಂ ತೇಽಗ್ರ್ಯಂ ಪ್ರದಾಸ್ಯಾಮಿ ಸರ್ವಾಮಿತ್ರವಿನಾಶನಮ್ ॥೧೦॥

ಮಿತ್ರರಿಗೂ, ಬ್ರಾಹ್ಮಣರಿಗೂ ಮತ್ತು ಎಲ್ಲಾ ಸುಹೃದಯರಿಗೂ ಇಷ್ಟಪ್ರದನಾದಂತಹ, ಸರ್ವಶತ್ರುಸಂಹಾರಕನಾದಂತಹ ಶ್ರೇಷ್ಠನಾದ ಸುತನನ್ನು ನಿನಗೆ ಕೊಡುವೆನು.

ವೈಶಂಪಾಯನಃ

ಇತ್ಯುಕ್ತಸ್ತು ಮಹೇಂದ್ರೇಣ ಕೌರವಃ ಕುರುವರ್ಧನಃ ।
ಕುಂತೀಂ ರಾಜಸುತಾಂ ಪಾಂಡುರಪತ್ಯಾರ್ಥೇಽಭ್ಯಚೋದಯತ್ ।
ಧರ್ಮಂ ಬಲಂ ಚ ನಿಶ್ಚಿತ್ಯ ಯಥಾ ಸ್ಯಾದಿತಿ ಭಾರತ ॥೧೧॥

ಮಹೇಂದ್ರನಿಂದ ಹೀಗೆ ಹೇಳಲ್ಪಟ್ಟ ಕುರುವಂಶ ಪ್ರವರ್ಧಕನಾದ ಪಾಂಡುವು ರಾಜಕುಮಾರಿಯಾದ ಕುಂತಿಯನ್ನು ಕುರಿತು ಮಗನನ್ನು ಪಡೆಯುವ ಸಲುವಾಗಿ ಪ್ರೇರೇಪಿಸಿದನು. ಎಲೈ ಭಾರತನೇ, ಇಂದ್ರನ ಧರ್ಮವನ್ನು ಮತ್ತು ಬಲವನ್ನು ಗಮನಿಸಿ ಅಂತಹ ಪುತ್ರನೇ ಜನಿಸುತ್ತಾನೆ ಎಂಬ ಕಾರಣದಿಂದ ಕುಂತಿಯನ್ನು ಪ್ರಚೋದಿಸಿದನು.

ಪಾಂಡುಃ

ನೀತಿಮಂತಂ ಮಹಾತ್ಮಾನಮಾದಿತ್ಯಸಮತೇಜಸಮ್ ।
ದುರಾಧರ್ಷಂ ರಣೇ ಶೂರಂ ದೇವರಾಜಮಿವಾನಘಮ್ ॥೧೨॥

ಪುತ್ರಂ ಜನಯ ಸುಶ್ರೋಣಿ ಧಾಮ ಕ್ಷತ್ರಿಯತೇಜಸಾಮ್ ।
ಲಬ್ಧಃ ಪ್ರಸಾದೋ ದೇವೇಂದ್ರಾತ್ ತಮಾಹ್ವಯ ಶುಚಿಸ್ಮಿತೇ ॥೧೩॥

ಎಲೌ ಸುಂದರಿಯೇ, ನೀತಿವುಳ್ಳವನೂ, ಮಹಾತ್ಮನಾದವನೂ, ಸೂರ್ಯನಂತೆ ತೇಜಸ್ಸುಳ್ಳವನೂ, ಶತ್ರುಗಳಿಗೆ ಸೋಲದವನೂ, ಯುದ್ಧದಲ್ಲಿ ಶೂರನಾದವನೂ, ಶುದ್ಧನಾದವನೂ, ಇಂದ್ರನಂತೆ ಇರುವವನೂ, ಕ್ಷತ್ರಿಯ ತೇಜಸ್ಸಿಗೆ ಆಶ್ರಯನಾದವನೂ ಆದ ಪುತ್ರನನ್ನು ಪಡೆ. ಶುಚಿಸ್ಮಿತೆಯೇ, ದೇವೇಂದ್ರನ ಅನುಗ್ರಹವನ್ನು ಪಡೆದದ್ದಾಯಿತು, ಅವನನ್ನು ಆಹ್ವಾನಿಸು.

ವೈಶಂಪಾಯನಃ

ಜಾತೇಷು ಧೃತರಾಷ್ಟ್ರಸ್ಯ ಪುತ್ರೇಷು ಚ ಮಹಾತ್ಮಸು ।
ಕುಂತೀ ಪುನರಪತ್ಯಾಯ ದೇವರಾಜಮುಪಾಹ್ವಯತ್ ॥೧೪॥

ಧೃತರಾಷ್ಟ್ರನಿಗೆ ಮಹಾಪ್ರಯತ್ನಶಾಲಿಗಳಾದ ನೂರು ಪುತ್ರರು ಜನಿಸಿದ ಮೇಲೆ ಕುಂತಿಯು ಸಂತಾನವನ್ನು ಪಡೆಯುವ ಸಲುವಾಗಿ ದೇವರಾಜನಾದ ಇಂದ್ರನನ್ನು ಆಹ್ವಾನಿಸಿದಳು.

ತತಃ ಪರ್ಯಚರತ್ ತೇನ ಬಲಿನಾ ಭಗವಾನಪಿ ।
ಅಥಾಜಗಾಮ ದೇವೇಂದ್ರೋ ಜನಯಾಮಾಸ ಚಾರ್ಜುನಮ್ ॥೧೫॥

ಆಗ ಬಲಿಷ್ಠನಾದ ಪಾಂಡುವು ಇಂದ್ರನ ಆರಾಧನೆಯನ್ನು ಮಾಡಿದನು. ದೇವೇಂದ್ರನು ಬಂದು ಅರ್ಜುನನನ್ನು ಉತ್ಪಾದಿಸಿದನು.

ಉತ್ತರಾಭ್ಯಾಂ ತು ಪೂರ್ವಾಭ್ಯಾಂ ಫಲ್ಗುನೀಭ್ಯಾಂ ತತೋ ದಿವಾ ।
ಜಾತಸ್ತು ಫಾಲ್ಗುನೇ ಮಾಸಿ ತೇನಾಸೌ ಫಲ್ಗುನಃ ಸ್ಮೃತಃ ॥೧೬॥

ಫಾಲ್ಗುಣ ಮಾಸದ ಪೂರ್ಣಿಮೆಯಂದು ಮಧ್ಯಾಹ್ನದವರೆಗೂ ಪೂರ್ವಫಲ್ಗುಣಿ ಇರುವಂತಹ ಮಧ್ಯಾಹ್ನದ ನಂತರ ಉತ್ತರಫಲ್ಗುಣಿ ಇರುವಂತಹ ನಕ್ಷತ್ರದ್ವಯಾತ್ಮಕವಾದ ದಿವಸದಲ್ಲಿ ಮಧ್ಯಾಹ್ನಕಾಲದಲ್ಲಿ ಅರ್ಜುನನು ಜನಿಸಿದನು. ಫಾಲ್ಗುಣ ಮಾಸದಲ್ಲಿ ಜನಿಸಿದುದರಿಂದ ಅವನಿಗೆ 'ಫಲ್ಗುಣ' ಎಂದು ಹೆಸರು.

ಜಾತಮಾತ್ರೇ ಕುಮಾರೇ ತು ಸರ್ವಭೂತಪ್ರಹರ್ಷಿಣೇ ।
ಸೂತಕೇ ವರ್ತಮಾನಾನಾಂ ವಾಗುವಾಚಾಶರೀರಿಣೀ ॥೧೭॥

ಕುಮಾರನು ಜನಿಸಿದ ತಕ್ಷಣ ಸೂತಕಗೃಹದ ಸಮೀಪದಲ್ಲಿರುವವರಿಗೆಲ್ಲಾ ಬಹಳ ಸಂತೋಷವಾಗುವಂತೆ ಮೇಘಗಂಭೀರವಾದ ಘೋಷದಿಂದ ಆಕಾಶವು ಪ್ರತಿಧ್ವನಿಸುವಂತೆ ಅಶರೀರವಾಣಿಯಾಯಿತು.

ಮೇಘಗಂಭೀರನಿರ್ಘೋಷಾ ನಭೋ ನಾದಯತೀ ತದಾ ।
ಕಾರ್ತವೀರ್ಯಸಮಃ ಪುತ್ರೋ ದೇವತುಲ್ಯಪರಾಕ್ರಮಃ ।
ಏಷ ಶಕ್ರ ಇವಾಜಯ್ಯಃ ಪ್ರಥಯಿಷ್ಯತಿ ತೇ ಯಶಃ ॥೧೮॥

ಕಾರ್ತವೀರ್ಯನಿಗೆ ಸಮನಾದ, ದೇವತೆಗಳಿಗೆ ಸಮಾನವಾದ ಪರಾಕ್ರಮವುಳ್ಳ ಇಂದ್ರನಂತೆ ಅಜಯ್ಯನಾದ ಈ ಪುತ್ರನು ನಿನ್ನ ಕೀರ್ತಿಯನ್ನು ವಿಸ್ತಾರಗೊಳಿಸುತ್ತಾನೆ.

ಅದಿತ್ಯಾ ವಿಷ್ಣುನಾ ಪ್ರೀತಿರ್ಯಥಾ ಸಮಭಿವರ್ಧಿತಾ ।
ತಥಾ ವಿಷ್ಣುಸಮಃ ಪ್ರೀತಿಂ ವರ್ಧಯಿಷ್ಯತಿ ತೇऽರ್ಜುನಃ ॥೧೯॥

ವಿಷ್ಣುವು ಅದಿತಿಯ ಮಗನಾಗಿ ಬೆಳೆಯುತ್ತಾ ಹೇಗೆ ಅದಿತಿಯ ಸಂತೋಷವನ್ನು ಹೆಚ್ಚಿಸಿದನೋ ಹಾಗೆ ವಿಷ್ಣು ಸಮನಾದ ಈ ಅರ್ಜುನನು ನಿನ್ನ ಸಂತೋಷವನ್ನು ಹೆಚ್ಚಿಸುತ್ತಾನೆ.

ಏಷ ಮದ್ರಾನ್ ವಶೇ ಕೃತ್ವಾ ಕೋಸಲಾನ್ ಸಹ ಕೇಕಯೈಃ ।
ಚೇದಿಕಾಶಿಕರೂಶಾಂಶ್ಚ ಕುರೂಣಾಂ ಲಕ್ಷ್ಮ ಧಾಸ್ಯತಿ ।
ಏತಸ್ಯ ಭುಜವೀರ್ಯೇಣ ತ್ರಾಸಿತಾಃ ಸರ್ವಶತ್ರವಃ ॥೨೦॥

ನಿವಾತಕವಚಾಃ ಸರ್ವೇ ಪ್ರಹಾಸ್ಯಂತೇ ಚ ಜೀವಿತಮ್ ।
ಹಿರಣ್ಯಪುರಮಾರುಜ್ಯ ನಿಹನಿಷ್ಯತಿ ಸಂಯುಗೇ ॥೨೧॥

ಇವನು ಮದ್ರರನ್ನು, ಕೋಸಲರನ್ನು, ಕೇಕೆಯರನ್ನು, ಚೇದಿ, ಕಾಶಿ ಮತ್ತು ಕರೂಶಕರನ್ನೂ ತನ್ನ ವಶದಲ್ಲಿಟ್ಟುಕೊಂಡು ಅವರು ಕುರುಗಳ ಚಿಹ್ನೆಯನ್ನು ಧರಿಸುವಂತೆ ಮಾಡುತ್ತಾನೆ. ಇವನ ಭುಜವೀರ್ಯಕ್ಕೆ ಹೆದರಿದ ನಿವಾತಕವಚರೇ ಮೊದಲಾದ ಎಲ್ಲ ಶತ್ರುಗಳೂ ಪ್ರಾಣಗಳನ್ನು ತೊರೆಯುವರು.

ಪುಲೋಮಜಾಯಾಸ್ತನಯಾನ್ ಕಾಲಕೇಯಾಂಶ್ಚ ಸರ್ವಶಃ ।
ಜಿತ್ವೋತ್ತರಾಂ ದಿಶಂ ದೇವೋ ವಿಜಿತ್ಯ ಯುಧಿ ಪಾರ್ಥಿವಾನ್ ।
ಧನರತ್ನೌಘಮಮಿತಮಾನಯಿಷ್ಯತಿ ಪಾಂಡವಃ ॥೨೨॥

ಹಿರಣ್ಯಪುರವನ್ನು ಧ್ವಂಸಮಾಡಿ ಯುದ್ಧದಲ್ಲಿ ಪೌಲೋಮಿಯ ಮಕ್ಕಳಾದ ಕಾಲಕೇಯರನ್ನೆಲ್ಲಾ ಸಂಹಾರ ಮಾಡುವನು. ಪಾಂಡುಪುತ್ರನಾದ ಇವನು ಉತ್ತರ ದಿಗ್ವಿಜಯವನ್ನು ಮಾಡಿ ಯುದ್ಧದಲ್ಲಿ ರಾಜರುಗಳನ್ನು ಗೆದ್ದು ಅಮಿತವಾದ ಧನ, ರತ್ನಗಳ ರಾಶಿಯನ್ನು ತರುವನು.

ಏತಸ್ಯ ಭುಜವೀರ್ಯೇಣ ಖಾಂಡವೇ ಹವ್ಯವಾಹನಃ ।
ಮೇದಸಾ ಸರ್ವಭೂತಾನಾಂ ತುಷ್ಟಿಂ ಯಾಸ್ಯತಿ ವೈ ಪರಾಮ್ ॥೨೩॥

ಇವನ ಭುಜವೀರ್ಯದಿಂದ ಖಾಂಡವ ವನದಲ್ಲಿ ಅಗ್ನಿಯು ಎಲ್ಲಾ ಪ್ರಾಣಿಗಳ ಮೇದಸ್ಸನ್ನು ಸೇವಿಸಿ ಬಹಳ ತೃಪ್ತಿಯುಳ್ಳವನಾಗುವನು.

ಗ್ರಾಮಣೀಂಶ್ಚ ಮಹೀಪಾಲಾನ್ ಏಷ ಜಿತ್ವಾ ಮಹಾಬಲಃ ।
ಭ್ರಾತೃಭಿಃ ಸಹಿತೋ ವೀರಃ ತ್ರೀನ್ ಮೇಧಾನಾಹರಿಷ್ಯತಿ ॥೨೪॥

ಮಹಾಬಲನಾದ ಇವನು ರಾಜರನ್ನು, ಸಾಮಂತರಾಜರುಗಳನ್ನು ಗೆದ್ದು ಅಣ್ಣತಮ್ಮಂದಿರ ಜೊತೆಯಲ್ಲಿ ಸೇರಿ ಮೂರು ಅಶ್ವಮೇಧಯಾಗಗಳನ್ನು ಮಾಡುವನು.

ಜಾಮದಗ್ನ್ಯಸಮಃ ಕುಂತಿ ಶಿವೇರೌಶೀನರಾತ್ ಪರಃ ।
ಏವಂ ವೀರ್ಯವತಾಂ ಶ್ರೇಷ್ಠೋ ಮಹಾಭಾಗೋ ಭವಿಷ್ಯತಿ ॥೨೫॥

ಕುಂತಿ, ಇವನು ಪರುಶುರಾಮನಿಗೆ ಸಮನಾದವನು. ಉಶೀನರನ ಮಗನಾದ ಶಿಬಿಗಿಂತಲೂ ಶ್ರೇಷ್ಠನಾದವನು. ಇವನು ಪರಾಕ್ರಮಗಳಲ್ಲಿ ಅಗ್ರಗಣ್ಯನೂ ಮತ್ತು ಮಹಾನುಭಾವನೂ ಆಗುವನು.

ಏಷ ಚಾಸ್ತ್ರಾಣಿ ದಿವ್ಯಾನಿ ನಿಖಿಲಾನ್ಯಾಹರಿಷ್ಯತಿ ।
ವಿಪ್ರನಷ್ಟಾಂ ಶ್ರಿಯಂ ಚಾಯಮಾಹರ್ತಾ ಪುರುಷರ್ಷಭಃ ॥೨೬॥

ಇವನು ಎಲ್ಲಾ ದಿವ್ಯಾಸ್ತ್ರಗಳನ್ನೂ ಸಂಪಾದಿಸಿ ನಷ್ಟವಾದ ಕುರುವಂಶದ ಕೀರ್ತಿಯನ್ನು ಪುನಃ ಸ್ಥಾಪಿಸುವನು.

ಏತದತ್ಯದ್ಭುತಂ ರಾಜನ್ ಕುಂತ್ಯಾಃ ಪಾರ್ಥಸ್ಯ ಸೂತಕೇ ।
ಉಕ್ತವಾನ್ ವಾಯುರಾಕಾಶೇ ಕುಂತೀ ಶುಶ್ರಾವ ಭಾರತ ॥೨೭॥

ರಾಜನೇ, ಕುಂತಿಯು ಅರ್ಜುನನ್ನು ಪ್ರಸವಿಸಿದಾಗ ಈ ಅದ್ಭುತವು ನಡೆಯಿತು. ಭಾರತನೇ, ವಾಯುವು ಆಕಾಶದಲ್ಲಿ ಆಡಿದ ಈ ಮಾತುಗಳನ್ನು ಕುಂತಿಯೂ ಕೇಳಿದಳು.

ವಾಚಮುಚ್ಚರಿತಾಮುಚ್ಚೈಸ್ತಾಂ ನಿಶಮ್ಯ ಯಶಸ್ವಿನೀಮ್ ।
ಬಭೂವ ಪರಮೋ ಹರ್ಷಃ ಶತಶೃಂಗನಿವಾಸಿನಾಮ್ ॥೨೮॥

ಅಂತರಿಕ್ಷದಿಂದ ಗಟ್ಟಿಯಾಗಿ ಕೇಳಿಬಂದ ಈ ಕೀರ್ತಿಸಂಪಾದಕವಾದ ಮಾತುಗಳನ್ನು ಕೇಳಿ ಶತಶೃಂಗ ನಿವಾಸಿಗಳೆಲ್ಲರಿಗೂ ಪರಮ ಹರ್ಷವುಂಟಾಯಿತು.

ತತೋ ದೇವರಥಾನಾಂ ಚ ಸೇಂದ್ರಾಣಾಂ ಚ ದಿವೌಕಸಾಮ್ ।
ಆಕಾಶೇ ದುಂದುಭೀನಾಂ ಚ ಬಭೂವಾತುಲನಿಸ್ವನಃ ।
ಉದತಿಷ್ಠನ್ ಮಹಾಘೋಷಃ ಪುಷ್ಪವೃಷ್ಟಿಭಿರಾವೃತಃ ॥೨೯॥

ಅನಂತರ ಆಕಾಶದಲ್ಲಿ ಇಂದ್ರ ಮೊದಲಾದ ದೇವತೆಗಳ ದೇವರಥಗಳ ಮತ್ತು ದುಂದುಭಿಗಳ ತೀವ್ರವಾದ ನಿಸ್ವನವು ಉಂಟಾಯಿತು. ಉಂಟಾದ ಮಹಾಘೋಷದ ಜೊತೆಯಲ್ಲಿ ದೇವತೆಗಳ ಪುಷ್ಪವೃಷ್ಟಿಯೂ ಉಂಟಾಯಿತು.

ಸಮವೇತ್ಯ ಚ ದೇವಾನಾಂ ಗಣಃ ಪಾರ್ಥಮಪೂಜಯತ್ ।
ಕಾದ್ರವೇಯಾ ವೈನತೇಯಾ ಗಂಧರ್ವಾಪ್ಸರಸಸ್ತಥಾ ।
ಪ್ರಜಾನಾಂ ಪತಯಃ ಸರ್ವೇ ಸಪ್ತ ಚೈವ ಮಹರ್ಷಯಃ ॥೩೦॥

ಭರದ್ವಾಜಃ ಕಾಶ್ಯಪೋ ಗೌತಮಶ್ಚ
ವಿಶ್ವಾಮಿತ್ರೋ ಜಮದಗ್ನಿರ್ವಸಿಷ್ಠಃ ।
ಯಶ್ಚೋದಿತೋ ಭಾಸ್ಕರೇಽಭೂತ್ ಪ್ರನಷ್ಟೇ
ಸೋಽಪ್ಯತ್ರಾತ್ರಿರ್ಭಗವಾನಾಜಗಾಮ ॥೩೧॥

ಇದನ್ನೆಲ್ಲಾ ಗಮನಿಸಿದ ದೇವತೆಗಳ ಸಮೂಹವು ಅರ್ಜುನನನ್ನು ಪೂಜಿಸಿತು. ಕದ್ರುವಿನ ಮಕ್ಕಳು, ವಿನತೆಯ ಮಕ್ಕಳು, ಗಂಧರ್ವರು, ಅಪ್ಸರೆಯರು, ಪ್ರಜಾಪತಿಗಳು, ಭರದ್ವಾಜ, ಕಾಶ್ಯಪ, ಗೌತಮ, ವಿಶ್ವಾಮಿತ್ರ, ಜಮದಗ್ನಿ, ವಸಿಷ್ಠ ಮತ್ತು ಸೂರ್ಯನು

ನಷ್ಟನಾದಾಗ ತಾವೇ ಉದಿಸಿ ಸೂರ್ಯನ ಕಾರ್ಯವನ್ನು ಮಾಡಿದ ಪೂಜ್ಯರಾದ ಅತ್ರಿ ಋಷಿಗಳು ಎಲ್ಲರೂ ಅಲ್ಲಿಗೆ ಬಂದರು.

ಮರೀಚಿರಂಗೀರಾಶ್ಚೈವ ಪುಲಸ್ತ್ಯಃ ಪುಲಹಃ ಕ್ರತುಃ ।
ದಕ್ಷಪ್ರಜಾಪತಿಶ್ಚೈವ ಅಥರ್ವಾऽಪ್ಸರಸಸ್ತಥಾ ॥೩೨॥

ದಿವ್ಯಮಾಲ್ಯಾಂಬರಧರಾಃ ಸರ್ವಾಲಂಕಾರಭೂಷಿತಾಃ ।
ತೇ ಚ ಪ್ರಕಾಶಾ ಮರ್ತ್ಯೇಷು ಸರ್ವೋಪಸ್ಕಾರಸಂಭೃತಾಃ ।
ಉಪಗಾಯಂತಿ ಬೀಭತ್ಸುಮುಪನೃತ್ಯಂತಿ ಚೈವ ಹಿ ॥೩೩॥

ಮರೀಚಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ದಕ್ಷಪ್ರಜಾಪತಿ, ಅಥರ್ವ ಮತ್ತು ಅಪ್ಸರೆಯರು ದಿವ್ಯಮಾಲ್ಯಾಂಬರಗಳನ್ನು ಧರಿಸಿ, ಸರ್ವಾಲಂಕಾರಗಳಿಂದ ಭೂಷಿತರಾಗಿ, ಮನುಷ್ಯರೆದುರಿಗೆ ಪ್ರತ್ಯಕ್ಷರಾಗಿ, ಎಲ್ಲಾ ವಾದ್ಯಗಳ ಸಹಿತವಾಗಿ ಅರ್ಜುನನನ್ನು ಉದ್ದೇಶಿಸಿ ಗಾನವನ್ನು ಮಾಡಿದರು. ನರ್ತನವನ್ನೂ ಮಾಡಿದರು.

ತತೋ ಗಂಧರ್ವತೂರ್ಯೇಷು ನಿನದತ್ಸು ವಿಹಾಯಸಿ ।
ಬಹುಭಿಃ ಸಹ ಗಂಧರ್ವೈರಗಾಯತ ಚ ತುಂಬುರುಃ ॥೩೪॥

ಆಗ ಆಕಾಶದಲ್ಲಿ ಗಂಧರ್ವವಾದ್ಯಗಳು ಮೊಳಗುತ್ತಿರಲು, ಅನೇಕ ಗಂಧರ್ವರ ಜೊತೆಯಲ್ಲಿ ತುಂಬುರುವು ಗಾನ ಮಾಡಿದನು.

ಭೀಷ್ಮಸೇನೋಗ್ರಸೇನೌ ಚ ಪೂರ್ಣಾಯುರನಘಸ್ತದಾ ।
ಹೋಮಶ್ಚ ಧೃತರಾಷ್ಟ್ರಶ್ಚ ಸೂರ್ಯವರ್ಚಾಸ್ತಥಾऽಪರಃ ।
ಯುಗಪಸ್ತುರ್ಣಪಃ ಕಾಶ್ಯೋ ನಂದೀ ಚಿತ್ರರಥಸ್ತಥಾ ॥೩೫॥

ತ್ರಯೋದಶಃ ಶಾಲಿಶಿರಾಃ ಪರ್ಜನ್ಯಶ್ಚ ಚತುರ್ದಶಃ ।
ಕವಿಃ ಪಂಚದಶಶ್ಚಾತ್ರ ಕಿಂತುನಾರಸ್ತು ಷೋಡಶಃ ।
ಇತ್ಯೇತೇ ದೇವಗಂಧರ್ವಾ ಉಪಗಾಯನ್ ಧನಂಜಯಮ್ ॥೩೬॥

ಭೀಷ್ಮಸೇನ, ಉಗ್ರಸೇನ, ಪೂರ್ಣಾಯು, ಅನಘ, ಹೋಮ, ಧೃತರಾಷ್ಟ್ರ, ಸೂರ್ಯವರ್ಚ, ಯುಗಪ, ತುರ್ಣಪ, ಕಾಶ್ಯೋ, ನಂದೀ, ಚಿತ್ರರಥ, ಶಾಲಿಶಿರ, ಪರ್ಜನ್ಯ, ಕಿಂತುನಾರ, ಹೀಗೆ ಹದಿನಾರು ದೇವಗಂಧರ್ವರು ಧನಂಜಯನನ್ನು ಉದ್ದೇಶಿಸಿ ಗಾನ ಮಾಡಿದರು.

ಸದ್ವಾನ್ ಬೃಹದ್ವಾನ್ ಬೃಹಕಃ ಕರಾಳಶ್ಚ ಮಹಾಯಶಾಃ ।
ಬ್ರಹ್ಮಚಾರೀ ರತಿಗುಣಃ ಸುವರ್ಣಶ್ಚೇತಿ ಸಪ್ತಮಃ ॥೩೭॥

ವಿಶ್ವಾವಸುರ್ಭುಮನ್ಯುಶ್ಚ ಸುಚಂದ್ರೋ ದಶಮಃ ಸ್ಮೃತಃ ।
ಇತ್ಯೇತೇ ದೇವಗಂಧರ್ವಾ ಉಪಗಾಯನ್ ಧನಂಜಯಮ್ ॥೩೮॥

ಸದ್ವಾನ್, ಬೃಹದ್ವಾನ್, ಬೃಹಕ, ಕರಾಳ, ಬ್ರಹ್ಮಚಾರೀ, ರತಿಗುಣ, ಸುವರ್ಣ, ವಿಶ್ವಾವಸು, ಭುಮನ್ಯು ಮತ್ತು ಹತ್ತನೆಯ ಸುಚಂದ್ರ ಈ ಹತ್ತು ದೇವಗಂಧರ್ವರು ಧನಂಜಯನ ಸಮೀಪದಲ್ಲಿ ಗಾನ ಮಾಡಿದರು.

ಹಾಹಾ ಹೂಹೂಶ್ಚ ಗಂಧರ್ವೋ ಹಂಸಶ್ಚ ಭರತರ್ಷಭ ।
ಇತ್ಯೇತೇ ದೇವಗಂಧರ್ವಾ ಉಪಗಾಯನ್ ಧನಂಜಯಮ್ ॥೩೯॥

ಎಲೈ ಭರತಶ್ರೇಷ್ಠನೇ, ಹಾಹಾ, ಹೂಹೂ, ಹಂಸ, ಈ ಮೂವರು ದೇವಗಂಧರ್ವರು ಧನಂಜಯನ ಸಮೀಪದಲ್ಲಿ ಗಾನ ಮಾಡಿದರು.

ತಥೈವಾಪ್ಸರಸೋ ಹೃಷ್ಟಾಃ ಸರ್ವಾಲಂಕಾರಭೂಷಿತಾಃ ।
ನನೃತುಶ್ಚ ವರಾರೋಹಾ ಜಗುರಾಯತಲೋಚನಾಃ ॥೪೦॥

ಹಾಗೆಯೇ, ಸರ್ವಾಲಂಕಾರಭೂಷಿತರೂ, ಸುಂದರಿಯರೂ, ಕಮಲನಯನೆಯರೂ ಆದ ಅಪ್ಸರೆಯರೂ, ಸಂತೋಷದಿಂದ ನರ್ತನವನ್ನು ಮಾಡಿ ಗಾನ ಮಾಡಿದರು.

ಅನೂಚಾನಾऽನವದ್ಯಾಂಗೀ ಕ್ರಿಯಾಮುಖ್ಯಾ ಗುಣಾವರಾ ।
ಅಂತಕೇಶೀ ತಥಾ ಸಾಚೀ ದೀರ್ಘಕೇಶೀ ತ್ವಲಂಬುಸಾ ।
ಮರೀಚಿಃ ಶುಚಿಕಾ ಚೈವ ವಿದ್ಯುದ್ವರ್ಣಾ ತಿಲೋತ್ತಮಾ ॥೪೧॥

ಅದ್ರಿಕಾ ಲಕ್ಷಣಾ ಕ್ಷೇಮಾ ದೇವೀ ರಂಭಾ ಮನೋರಮಾ ।
ಉರ್ವಶೀ ಚೈವ ರಾಜೇಂದ್ರ ನನೃತುರ್ಗೀತನಿಸ್ವನೈಃ ॥೪೨॥

ಅನೂಚಾನಾ, ಅನವದ್ಯಾಂಗಿ, ಕ್ರಿಯಾಮುಖ್ಯಾ, ಗುಣಾವರಾ, ಅಂತಕೇಶೀ, ಸಾಚೀ, ದೀರ್ಘಕೇಶೀ, ಅಲಂಬುಸಾ, ಮರೀಚಿ, ಶುಚಿಕಾ, ವಿದ್ಯುದ್ವರ್ಣಾ, ತಿಲೋತ್ತಮಾ, ಅದ್ರಿಕಾ, ಲಕ್ಷಣಾ, ಕ್ಷೇಮಾ, ದೇವೀ, ರಂಭಾ, ಮನೋರಮಾ,

ಉರ್ವಶೀ ಈ ಎಲ್ಲಾ ಅಪ್ಸರೆಯರು ಗೀತನಿಸ್ವನಗಳ ಜೊತೆಯಲ್ಲಿ ನರ್ತನವನ್ನು ಮಾಡಿದರು.

ಅಸಿತಾ ಚ ಸುಬಾಹುಶ್ಚ ಸುಪ್ರಿಯಾ ಸುವಪುಸ್ತಥಾ ।
ಪುಂಡರೀಕಾ ಸುಗಂಧಾ ಚ ಸುರಥಾ ಚ ಪ್ರಮಾಥಿನೀ ।
ಕಾಮ್ಯಾ ಶಾರದ್ವತೀ ಚೈವ ನನೃತುಸ್ತತ್ರ ಸಂಘಶಃ ॥೪೩॥

ರಾಜೇಂದ್ರನೇ, ಅಸಿತಾ, ಸುಬಾಹು, ಸುಪ್ರಿಯಾ, ಸುವಪು, ಪುಂಡರೀಕಾ, ಸುಗಂಧಾ, ಸುರಥಾ, ಪ್ರಮಾಥಿನೀ, ಕಾಮ್ಯ, ಶಾರದ್ವತೀ ಈ ಅಪ್ಸರೆಯರು ಗುಂಪುಗಳಲ್ಲಿ ನರ್ತನ ಮಾಡಿದರು.

ಮೇನಕಾ ಸಹಜನ್ಯಾ ಚ ಪರ್ಣಿಕಾ ಪುಂಜಿಕಸ್ಥಲಾ ।
ಘೃತಾಚೀ ಚೈವ ವಿಶ್ವಾಚೀ ಪೂರ್ವಚಿತ್ತಿಃ ಕ್ರತುಸ್ತಥಾ ॥೪೪॥

ಉನ್ಮೋಚೀತ್ಯಭವಿಖ್ಯಾತಾ ಪ್ರಂಲೋಚೀತಿ ಚ ತಾದೃಶೀ ।
ಉರ್ವಶ್ಯೇಕಾದಶೀತ್ಯೇತಾ ಜಗುರಾಯತಲೋಚನಾಃ ॥೪೫॥

ಮೇನಕಾ, ಸಹಜನ್ಯಾ, ಪರ್ಣಿಕಾ, ಪುಂಜಿಕಸ್ಥಲಾ, ಘೃತಾಚೀ, ವಿಶ್ವಾಚೀ, ಪೂರ್ವಚಿತ್ತಿ, ಕ್ರತು, ಉನ್ಮೋಚಾ, ಪ್ರಂಲೋಚಾ, ಉರ್ವಶೀ ಈ ಹನ್ನೊಂದು ಜನ ಪ್ರಖ್ಯಾತರಾದ ವಿಶಾಲಾಕ್ಷಿಯನೆಯರಾದ ಅಪ್ಸರೆಯರು ಗಾನವನ್ನು ಮಾಡಿದರು.

ಧಾತಾಽರ್ಯಮಾ ಚ ಮಿತ್ರಶ್ಚ ವರುಣೋಽಂಶೋ ಭಗಸ್ತಥಾ ।
ಇಂದ್ರೋ ವಿವಸ್ವಾನ್ ಪೂಷಾ ಚ ಪರ್ಜನ್ಯೋ ದಶಮಃ ಸ್ಮೃತಃ ।
ತತಸ್ತ್ವಷ್ಟಾ ತತೋ ವಿಷ್ಣುರಜಘನ್ಯೋ ಜಘನ್ಯಜಃ ॥೪೬॥

ಇತ್ಯೇತೇ ದ್ವಾದಶಾದಿತ್ಯಾ ಜ್ವಲಂತಃ ಸೂರ್ಯವರ್ಚಸಃ ।
ಮಹಿಮಾನಂ ಪಾಂಡವಸ್ಯ ಕುರ್ವಂತಸ್ತಸ್ಥುರಂಬರೇ ॥೪೭॥

ಧಾತಾ, ಅರ್ಯಮ, ಮಿತ್ರ, ವರುಣ, ಅಂಶ, ಭಗ, ಇಂದ್ರ, ವಿವಸ್ವಾನ್, ಪೂಷಾ, ಪರ್ಜನ್ಯ, ತ್ವಷ್ಟಾ ಮತ್ತು ಕೊನೆಯವನಾದರೂ ಗುಣಗಳಿಂದ ಶ್ರೇಷ್ಠನಾದ ವಿಷ್ಣು, ಈ ದ್ವಾದಶಾದಿತ್ಯರು ಸೂರ್ಯವರ್ಚಸ್ಸಿನಿಂದ ಬೆಳಗುತ್ತಾ, ಪಾಂಡವನಾದ ಅರ್ಜುನನ ಮಹಿಮೆಯನ್ನು ತೋರಿಸುತ್ತಾ, ಆಕಾಶದಲ್ಲಿ ನಿಂತರು.

ಮೃಗವ್ಯಾಧಶ್ಚ ಶರ್ವಶ್ಚ ನಿರೃತಿಶ್ಚ ಮಹಾಯಶಾಃ ।
ಅಜೈಕಪಾದಹಿರ್ಬುಧ್ನ್ಯಃ ಪಿನಾಕೀ ಚ ಪರಂತಪಃ ॥೪೮॥

ಭವನೋಽಥೇಶ್ವರಶ್ಚೈವ ಕಪಾಲೀ ಚ ವಿಶಾಂಪತೇ ।
ಸ್ಥಾಣುರ್ಭವಶ್ಚ ಭಗವಾನ್ ರುದ್ರಾಸ್ತತ್ರಾವತಸ್ಥಿರೇ ॥೪೯॥

ಮೃಗವ್ಯಾಧ, ಶರ್ವ, ನಿರೃತಿ, ಅಜೈಕಪಾತ್, ಅಹಿರ್ಬುಧ್ನ್ಯ, ಶತ್ರುತಾಪಕನಾದ ಪಿನಾಕಿ, ಭವನ, ಈಶ್ವರ, ಕಪಾಲೀ, ಸ್ಥಾಣು ಮತ್ತು ಪೂಜ್ಯನಾದ ಭವ, ಈ ಏಕಾದಶ ರುದ್ರರು ಅಲ್ಲಿ ಬಂದು ನಿಂತರು.

ಧರೋ ಧ್ರುವಶ್ಚ ಸೋಮಶ್ಚ ಆಪಶ್ಚೈವಾನಲೋಽನಿಲಃ ।
ಪ್ರತ್ಯೂಷಶ್ಚ ಪ್ರಭಾಸಶ್ಚ ವಸವಶ್ಚಾವತಸ್ಥಿರೇ ॥೫೦॥

ಧರ, ಧ್ರುವ, ಸೋಮ, ಆಪ, ಅನಲ, ಅನಿಲ, ಪ್ರತ್ಯೂಷ ಮತ್ತು ಪ್ರಭಾಸ ಈ ಎಂಟು ವಸುಗಳು ಅಲ್ಲಿ ಬಂದು ನಿಂತರು.

ಯಥೈವ ವಸವಸ್ತ್ವಷ್ಟೌ ಮರುತಶ್ಚ ಮಹಾಬಲಾಃ ।
ನಾಸತ್ಯಶ್ಚೈವ ದಸ್ರಶ್ಚ ಸ್ಮೃತೌ ದ್ವಾವಶ್ವಿನಾವಿತಿ ॥೫೧॥

ತೌ ಚಾಶ್ವಿನೌ ತಥಾ ಸಾಧ್ಯಾಸ್ತಸ್ಯ ಜನ್ಮನಿ ಸಂಸ್ಥಿತಾಃ ।
ಕ್ರತುರ್ದಕ್ಷೋ ವಸುಃ ಸತ್ಯಃ ಕಾಲಃ ಕಾಮೋ ಮುನಿಸ್ತಥಾ ॥೫೨॥

ಹೀಗೆ, ವಸುಗಳು ಎಂಟು ಮಂದಿಯೂ, ಹೀಗೆ ಮಹಾಬಲರಾದ ಮರುತ್ತುಗಳು, ನಲವತ್ತೊಂಭತ್ತು ದೇವತೆಗಳ ಸಮೂಹವೂ, ಹಾಗೆ ಅಶ್ವಿನಿಗಳೂ ಎಂದರೆ ನಾಸತ್ಯ ಮತ್ತು ದಸ್ರ ಎಂಬ ಇಬ್ಬರು ದೇವತೆಗಳ ಗಣ. ಆಗ ಅರ್ಜುನನ ಜನ್ಮಸ್ಥಳಕ್ಕೆ ಅಶ್ವಿನೀ ದೇವತೆಗಳು ಮತ್ತು ಸಾಧ್ಯರೂ ಬಂದು ನಿಂತರು.

ಪುರೂರವಾರ್ದ್ರವಶ್ಚೈವ ರೋಚಮಾನಸ್ತು ತೇ ದಶ ।
ವಿಶ್ವೇ ದೇವಾ ಇತಿ ಖ್ಯಾತಾಃ ತಸ್ಯಾಸನ್ ಜನ್ಮನಿ ಸ್ಥಿತಾಃ ॥೫೩॥

ಕ್ರತು, ದಕ್ಷ, ವಸು, ಸತ್ಯ, ಕಾಲ, ಕಾಮ, ಮುನಿ, ಪುರೂರವ, ಆರ್ದ್ರವ ಮತ್ತು ರೋಚಮಾನ ಈ ಹತ್ತು ವಿಶ್ವೇದೇವತೆಗಳು ಅರ್ಜುನನ ಜನ್ಮ ಸಮಯದಲ್ಲಿ ಸನ್ನಿಹಿತರಾದರು.

ತಾರ್ಕ್ಷ್ಯಶ್ಚಾರಿಷ್ಟನೇಮಿಶ್ಚ ಗರುಡಶ್ಚ ಮಹಾಯಶಾಃ ।
ಅರುಣಶ್ಚಾರುಣಶ್ಚೈವ ವೈನತೇಯಾ ಉಪಾಸತೇ ।
ಆಯಯುಸ್ತಪಸಾ ಯುಕ್ತಾ ಮಹಾವೇಗಾ ಮಹಾಬಲಾಃ ॥೫೪॥

ಮಹಾಬಲವುಳ್ಳವರೂ, ಮಹಾವೇಗವುಳ್ಳವರೂ, ಮಹಾತಪಸ್ಸುಳ್ಳವರೂ ಆದ ತಾರ್ಕ್ಷ್ಯ, ಅರಿಷ್ಟನೇಮಿ, ಕೀರ್ತಿವಂತನಾದ ಗರುಡ, ಅರುಣ, ಆರುಣಿ ಮೊದಲಾದ ವಿನತೆಯ ಕುಲಕ್ಕೆ ಸೇರಿದವರೆಲ್ಲಾ ಅಲ್ಲಿ ಬಂದು ನೆರೆದರು.

ಮಹಾನ್ ಪಿತಾಮಹಸ್ತ್ವೇನಂ ವಸ್ತ್ರೇಣ ರಜಸಾ ತದಾ ।
ಪ್ರತಿಜಗ್ರಾಹ ನಪ್ತಾರಂ ರಾಜರ್ಷಿಪರಿವಾರಿತಃ ॥೫೫॥

ಮಹಾನುಭಾವನೂ, ಪಿತಾಮಹನೂ ಆದ ಶಂತನುವು, ರಕ್ತವಸ್ತ್ರಗಳನ್ನುಟ್ಟು ರಾಜರ್ಷಿಗಳ ಜೊತೆಯಲ್ಲಿ ಬಂದು ತನ್ನ ಮೊಮ್ಮಗನಾದ ಅರ್ಜುನನನ್ನು ಸ್ವೀಕರಿಸಿದನು.

ಸಗರೋಂಬರೀಷೇಣ ನಹುಷೇಣ ಯಯಾತಿನಾ ।
ಧೀಮತಾ ಧುಂಧುಮಾರೇಣ ರಾಜ್ಞೋಪರಿಚರೇಣ ಹ ।
ಮುಚುಕುಂದೇನ ಮಾಂಧಾತ್ರಾ ಶಿಬಿನಾಽರಿಷ್ಟನೇಮಿನಾ ॥೫೬॥

ಭರತೇನ ದಿಲೀಪೇನ ಸರ್ವೈಶ್ಚ ಜನಮೇಜಯ ।
ಪೂರುಃ ಸಾರ್ಧಂ ನೃಪತಿಭಿರ್ಜಗ್ರಾಹ ಕುರುಪುಂಗವಮ್ ॥೫೭॥

ಎಲೈ ಜನಮೇಜಯನೇ, ಪೂರುವು, ಸಗರ, ಅಂಬರೀಷ, ನಹುಷ, ಯಯಾತಿ, ಮೇಧಾವಿಯಾದ ಧುಂಧುಮಾರ, ಉಪರಿಚರವಸು, ಮುಚುಕುಂದ, ಮಾಂಧಾತಾ, ಶಿಬಿ, ಅರಿಷ್ಟನೇಮಿ, ಭರತ, ದಿಲೀಪ ಮೊದಲಾದ ರಾಜರ ಜೊತೆಯಲ್ಲಿ ಬಂದು ಕುರುಪುಂಗವನನ್ನು ಸ್ವೀಕರಿಸಿದನು.

ಅನ್ಯೇ ಚ ಬಹವಸ್ತತ್ರ ಸಮಾಸನ್ ರಾಜಸತ್ತಮಾಃ ।
ಏತೇ ಜಾನ್ಯೇ ಚ ಬಹವೋ ನರಲೋಕಾಧಿಪಾಸ್ತಥಾ ।
ದೇವಲೋಕಾದಿಹಾಗಮ್ಯ ಪ್ರೈಕ್ಷಂತ ಭರತರ್ಷಭಮ್ ॥೫೮॥

ಅಲ್ಲಿ ಇನ್ನೂ ಅನೇಕ ರಾಜಶ್ರೇಷ್ಠರು ಬಂದರು. ಇವರೂ ಮತ್ತು ಅನೇಕ ನರಲೋಕದಲ್ಲಿ ಚಕ್ರವರ್ತಿಗಳಾಗಿ ದೇವಲೋಕಕ್ಕೆ ಹೋಗಿದ್ದ ರಾಜರು ಸಹ ದೇವಲೋಕದಿಂದ ಬಂದು ಭರತರ್ಷಭನಾದ ಅರ್ಜುನನನ್ನು ನೋಡಿದರು.

ವಿದ್ಯೋತಮಾನಂ ವಪುಷಾ ಭಾಸಯಂತಂ ದಿಶೋ ದಶ ।
ಲಕ್ಷಣೈರ್ವ್ಯಂಜಕೈಃ ಸರ್ವೈರ್ಯುಕ್ತಂ ಮಾಹಾತ್ಮ್ಯಸೂಚಕೈಃ ॥೫೯॥

ತನ್ನ ಶರೀರದಿಂದ ಹೊಳೆಯುತ್ತಿದ್ದಂತಹ ಹತ್ತು ದಿಕ್ಕುಗಳನ್ನೂ ಬೆಳಗುತ್ತಿದ್ದಂತಹ, ಮಾಹಾತ್ಮ್ಯಸೂಚಕವಾದ ಎಲ್ಲಾ ಲಕ್ಷಣಗಳಿಂದಲೂ ಯುಕ್ತವಾದ ಅರ್ಜುನನನ್ನು ನೋಡಿದರು.

ಏತಂ ದೃಷ್ಟ್ವಾ ಮಹಾವೀರ್ಯಂ ವಿಸ್ಮಿತಾ ಋಷಿಸತ್ತಮಾಃ ।
ಅಧಿಕಾಂ ಸ್ಮ ತದಾ ವೃತ್ತಿಮವರ್ತನ್ ಪಾಂಡವಾನ್ ಪ್ರತಿ ॥೬೦॥

ಈ ಮಹಾವೀರ್ಯನನ್ನು ನೋಡಿ ವಿಸ್ಮಿತರಾದ ಋಷಿಶ್ರೇಷ್ಠರು ಆಗ ಪಾಂಡವರ ವಿಷಯದಲ್ಲಿ ಬಹಳ ಗೌರವದಿಂದ ನಡೆದುಕೊಳ್ಳಲು ಪ್ರಾರಂಭಿಸಿದರು.

ಪಾಂಡುಃ ಪ್ರೀತೇನ ಮನಸಾ ದೇವತಾದೀನಪೂಜಯತ್ ।
ಪಾಂಡುನಾ ಪೂಜಿತಾ ದೇವಾಃ ಪ್ರತ್ಯೂಚುರ್ನೃಪಸತ್ತಮಮ್ ॥೬೧॥

ಪಾಂಡುವು ಸಂತೋಷಗೊಂಡ ಮನಸ್ಸಿನಿಂದ ದೇವತೆಗಳು ಮೊದಲಾದವರನ್ನು ಪೂಜಿಸಿದನು. ಪಾಂಡುವಿನಿಂದ ಪೂಜಿತರಾದ ದೇವತೆಗಳು ರಾಜಶ್ರೇಷ್ಠನಾದ ಪಾಂಡುವನ್ನು ಕುರಿತು ಹೇಳಿದರು.

ಪ್ರಾದುರ್ಭೂತೋಽಯಂ ಧರ್ಮೋ ದೇವತಾನಾಂ ಪ್ರಸಾದಜಃ ।
ಮಾತರಿಶ್ವಾ ಹ್ಯಯಂ ಭೀಮೋ ಬಲವಾನರಿಮರ್ದನಃ ॥೬೨॥

ಸಾಕ್ಷಾದಿಂದ್ರಃ ಸ್ವಯಂ ಜಾತಃ ಪ್ರಸಾದಾಚ್ಚ ಶತಕ್ರತೋಃ ।
ಫಲ್ಗುನೋ ಜಯತಾಂ ಶ್ರೇಷ್ಠಃ ಪೂರುವಂಶವಿವರ್ಧನಃ ॥೬೩॥

ಪಿತೃತ್ವಾದ್ ದೇವತಾನಾಂ ಹಿ ನಾಸ್ತಿ ಪುಣ್ಯತರಸ್ತ್ವಯಾ ।
ಧನ್ಯಸ್ತ್ವಮಚಿರಾದೇವ ಸ್ವರ್ಗಂ ಪ್ರಾಪ್ಸ್ಯಸಿ ಪುಣ್ಯಭಾಕ್ ॥೬೪॥

ದೇವತೆಗಳ ಅನುಗ್ರಹದಿಂದ ಯಮಧರ್ಮನು ಯುಧಿಷ್ಠಿರನಾಗಿ ಜನಿಸಿದ್ದಾನೆ. ಬಲಿಷ್ಠನೂ ಮತ್ತು ಶತ್ರುಸಂಹಾರಕನೂ ಆದ ಈ ಭೀಮನು ವಾಯುದೇವನೇ. ಇಂದ್ರನ ಅನುಗ್ರಹದಿಂದ ಇಂದ್ರನು ತಾನೇ ಫಲ್ಗುನನಾಗಿ ಜನಿಸಿದ್ದಾನೆ. ಈ ಫಲ್ಗುನನು ಜಯಶೀಲರಲ್ಲಿ ಶ್ರೇಷ್ಠನಾದವನು ಮತ್ತು ಪುರುವಂಶ ವಿವರ್ಧನನಾದವನು. ದೇವತೆಗಳಿಗೂ ಪಿತೃವಾದ ನಿನಗೆ ಸಮಾನವಾದ ಪುಣ್ಯಶಾಲಿಗಳು ಬೇರೆ ಯಾರೂ ಇಲ್ಲ. ನೀನು ಧನ್ಯನಾದವನು. ಪುಣ್ಯಭಾಗಿಯಾಗಿ ಬಹಳ ಬೇಗ ಸ್ವರ್ಗವನ್ನು ಸೇರುವಿ.

ವೈಶಂಪಾಯನಃ

ಇತ್ಯುಕ್ತ್ವಾ ದೇವತಾಃ ಸರ್ವಾ ವಿಪ್ರಜಗ್ಮುರ್ಯಥಾಗತಮ್ ।
ಪಾಂಡುಶ್ಚ ಪುನರೇವಾರ್ಯಾಂ ಪುತ್ರಲೋಭಾನ್ಮಹಾಯಶಾಃ ।
ಪ್ರಾದಿಶದ್ ದರ್ಶನೀಯಾರ್ಥೀ ಕುಂತೀ ತ್ವೇನಮಥಾಬ್ರವೀತ್ ॥೬೫॥

ಹೀಗೆ ಹೇಳಿ ಎಲ್ಲಾ ದೇವತೆಗಳೂ ತಾವು ಬಂದ ದಾರಿಯಲ್ಲಿ ಹಿಂದಿರುಗಿದರು. ಕೀರ್ತಿವಂತನಾದ ಪಾಂಡುವು ಪುತ್ರಲೋಭದಿಂದ ಸುಂದರನಾದ ಇನ್ನೊಬ್ಬ ಪುತ್ರನನ್ನು ನೋಡುವ ಆಸೆಯಿಂದ ಕುಂತಿಯನ್ನು ಮಗನನ್ನು ಪಡೆಯುವಂತೆ ಪುನಃ ಪ್ರಚೋದಿಸಿದನು. ಆಗ ಕುಂತಿಯು ಅವನನ್ನು ಕುರಿತು ಹೇಳಿದಳು.

ನ ವೈ ಚತುರ್ಥಪ್ರಸವಂ ವಿದುರಾಪತ್ಸು ಭಾರತ ।
ಅತಃ ಪರಮನಾಚಾರಂ ಪಂಚಮೇ ಬಂಧಕೀ ಭವೇತ್ ॥೬೬॥

ಸ ವೈ ವಿದ್ವಾನ್ ಧರ್ಮಮಿಮಂ ಸಂಚೋದಯಸಿ ಮಾಮತಃ ।
ಅಪತ್ಯಲಾಭಾತ್ ತ್ವಂ ರಾಜನ್ ಪ್ರಮತ್ತ ಇವ ಭಾಷಸೇ ॥೬೭॥

ಭಾರತನೇ, ಆಪತ್ತಿನಲ್ಲಿಯೂ ನಾಲ್ಕನೆಯ ಪುತ್ರನನ್ನು ಪಡೆಯುವುದನ್ನು ಯಾರೂ ವಿಧಾನ ಮಾಡಿಲ್ಲ. ನಾಲ್ಕನೆಯ ಪುತ್ರನನ್ನು ಪಡೆದರೆ, ನಾನು ಅನಾಚಾರ ಮಾಡಿದಂತಾಗುತ್ತದೆ. ಐದನೆಯ ಪುತ್ರನನ್ನು ಪಡೆದರೆ ನಾನು ಬಂಧಕಿ (ವೇಶ್ಯೆ) ಆಗುತ್ತೇನೆ. ಈ ಧರ್ಮವನ್ನು ತಿಳಿದ ನೀನು ಏಕೆ ನನ್ನನ್ನು ಪುನಃ ಪ್ರಚೋದಿಸುತ್ತಿದ್ದೀಯೆ? ರಾಜನೇ, ಮಕ್ಕಳನ್ನು ಪಡೆಯುವ ಆಸೆಯಿಂದ ನೀನು ಹುಚ್ಚನಂತೆ ಮಾತನಾಡುತ್ತಿರುವೆ.

ಪಾಂಡುಃ

ಏವಮೇತದ್ ಧರ್ಮಶಾಸ್ತ್ರಂ ಯಥಾ ವದಸಿ ತತ್ ತಥಾ ॥೬೮॥

ಕುಂತಿ, ನೀನು ಹೇಳಿದುದೇ ಸರಿ. ನೀನು ಹೇಳಿದಂತೆಯೇ ಧರ್ಮಶಾಸ್ತ್ರವಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಅಷ್ಟಾದಶಾಧಿಕಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ಷಟ್‌ಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಹದಿನೆಂಟನೆಯ ಅಧ್ಯಾಯ ಮುಗಿಯಿತು.

ಮಹಾಭಾರತ ತಾತ್ಪರ್ಯ ನಿರ್ಣಯ -ಅಧ್ಯಾಯ-೧೨

ಯಸ್ಮಿನ್ನಬ್ದೇ ಭಾದ್ರಪದೇ ಸ ಮಾಸೇ
ಸಿಂಹಸ್ಥಯೋರ್ಗುರುರವ್ಯೋಃ ಪರೇಶಃ ।
ಉದೈತ್ ತತಃ ಫಾಲ್ಗುನೇ ಫಲ್ಗುನೋऽಭೂತ್
ಗತೇ ತತೋ ಮಾದ್ರವತೀ ಬಭಾಷೇ ॥೧೨೦॥

ಯಾವ ವರ್ಷದ ಭಾದ್ರಪದ ಮಾಸದಲ್ಲಿ ಗುರು ಸೂರ್ಯರು ಸಿಂಹರಾಶಿಯಲ್ಲಿದ್ದಾಗ ಶ್ರೀಕೃಷ್ಣ ಅವತರಿಸಿದನೋ ಅದೇ ವರ್ಷ ಫಾಲ್ಗುನ ಮಾಸದಲ್ಲಿ ಅರ್ಜುನ ಹುಟ್ಟಿದ. ಆ ವರ್ಷ ಕಳೆದಾಗ ಪಾಂಡುವಿಗೆ ಮಾದ್ರಿ ನುಡಿದಳು.

ಜಾತಾಃ ಸುತಾಸ್ತೇ ಪ್ರವರಾಃ ಪೃಥಯಾ-
ಮೇಕಾನಪತ್ಯಾಹಮತಃ ಪ್ರಸಾದಾತ್ ।
ತವೈವ ಭೂಯಾಸಮಹಂ ಸುತೇತಾ
ವಿಧತ್ಸ್ವ ಕುಂತೀಂ ಮಮ ಮಂತ್ರದಾತ್ರೀಮ್ ॥೧೨೧॥

'ಕುಂತಿಯಲ್ಲಿ ನಿನಗೆ ಒಳ್ಳೆಯ ಮಕ್ಕಳು ಹುಟ್ಟಿದ್ದಾರೆ. ನಾನು ಮಾತ್ರ ಮಕ್ಕಳಿಲ್ಲದವಳಾದೆ. ನಿನ್ನ ಅನುಗ್ರಹದಿಂದ ನಾನೂ ಪುತ್ರವತಿಯೆನಿಸಬೇಕು. ಕುಂತಿ ನನಗೆ ಮಂತ್ರ ಉಪದೇಶಿಸುವಂತೆ ಮಾಡು'.

ಇತೀರಿತಃ ಪ್ರಾಹ ಪೃಥಾಂ ಸ ಮಾದ್ರ್ಯೈ
ದಿಶಸ್ವ ಮಂತ್ರಂ ಸುತದಂ ವರಿಷ್ಠಮ್ ।
ಇತ್ಯೂಚಿವಾಸಂ ಪತಿಮಾಹ ಯಾದವೀ
ದದ್ಯಾಂ ತ್ವದರ್ಥೇ ತು ಸಕೃತ್ಫಲಾಯ ॥೧೨೨॥

ಹೀಗೆ ಮಾದ್ರಿ ಹೇಳಿದಾಗ ಪಾಂಡು ಕುಂತಿಗೆ ಹೇಳಿದ, 'ಮಾದ್ರಿಗೆ ಪುತ್ರದಾಯಕ ಮಂತ್ರವನ್ನು ಉಪದೇಶಿಸು'. ಹೀಗೆ ಪತಿ ಹೇಳಿದಾಗ ಕುಂತಿ ಹೇಳಿದಳು, 'ನಿನಗಾಗಿ ಅವಳಿಗೆ ಈ ಮಂತ್ರವನ್ನು ಉಪದೇಶಿಸುತ್ತೇನೆ. ಆದರೆ ಒಂದೇ ಬಾರಿ ಅದು ಫಲ ನೀಡುವುದು'.

ಉವಾಚ ಮಾದ್ಯೈ ಸುತದಂ ಮನುಂ ಚ
ಪುನಃ ಫಲಂ ತೇ ನ ಭವಿಷ್ಯತೀತಿ ।
ಮಂತ್ರಂ ಸಮಾದಾಯ ಚ ಮದ್ರಪುತ್ರೀ
ವ್ಯಚಿಂತಯತ್ ಸ್ಯಾಂ ನು ಕಥಂ ದ್ವಿಪುತ್ರಾ ॥೧೨೩॥

ಕುಂತಿ ಪುತ್ರದಾಯಕ ಮಂತ್ರವನ್ನು ಮಾದ್ರಿಗೆ ಉಪದೇಶಿಸಿದಳು. 'ಎರಡನೆ ಬಾರಿ ನಿನಗೆ ಇದರಿಂದ ಫಲ ಸಿಗಲಾರದು' ಎಂದಳು. ಮಂತ್ರ ಉಪದೇಶ ಪಡೆದು ಮಾದ್ರಿ ಆಲೋಚಿಸಿದಳು. 'ಇಬ್ಬರು ಮಕ್ಕಳನ್ನು ನಾನು ಹೇಗೆ ಪಡೆಯಲಿ?' ಎಂದು.

ಸದಾವಿಯೋಗೌ ದಿವಿಜೇಷು ದಸ್ರೌ
ನ ಚೈತಯೋರ್ನಾಮಭೇದಃ ಕ್ವಚಿದ್ಧಿ ।
ಏಕಾ ಭಾರ್ಯಾ ಸೈತಯೋರಪ್ಯುಷಾ ಹಿ
ತದಾಯಾತಃ ಸಕೃದಾವರ್ತನಾದ್ ದ್ವೌ ॥೧೨೪॥

ದೇವತೆಗಳಲ್ಲಿ ಅಶ್ವಿನೀ ದೇವತೆಗಳು ಸದಾ ಜೊತೆಗೇ ಇರುವವರು. ಅವರಿಬ್ಬರಿಗೆ ಹೆಸರಿನಲ್ಲಿಯೂ ಎಲ್ಲಿಯೂ ಭೇದವಿಲ್ಲ. ಹೆಂಡತಿಯೂ ಒಬ್ಬಳೇ, ಉಷೆ. ಅದರಿಂದ ಒಮ್ಮೆ ಮಂತ್ರ ಉಚ್ಚರಿಸಿದರೆ ಇಬ್ಬರೂ ಬರುತ್ತಾರೆ.

ಇತೀಕ್ಷಂತ್ಯಾಕಾರಿತಾವಶ್ವಿನೌ ತೌ
ಶೀಘ್ರಂ ಪ್ರಾಪ್ತೌ ಪುತ್ರಕೌ ತತ್ಸುತೌ ।
ತಾವೇವ ದೇವೌ ನಕುಲಃ ಪೂರ್ವಜಾತಃ
ಸಹದೇವೋಽಭೂತ್ ಪಶ್ಚಿಮಸ್ತೌ ಯಮೌ ಚ ॥೧೨೫॥

ಹೀಗೆ ಆಲೋಚಿಸುತ್ತ ಮಾದ್ರಿ ಅಶ್ವಿನೀ ದೇವತೆಗಳನ್ನು ಆಹ್ವಾನಿಸಿದಳು. ಅವರು ಬೇಗನೆ ಬಂದರು. ಇಬ್ಬರು ಮಕ್ಕಳಾಗಿ ಅವರೇ ಅವರಿಂದ ಹುಟ್ಟಿದರು. ನಕುಲ ಅಣ್ಣನಾದ, ಸಹದೇವ ತಮ್ಮನಾದ, ಇಬ್ಬರೂ ಅವಳ ಮಕ್ಕಳು.

ಪುನರ್ಮನೋಃ ಫಲವತ್ತ್ವಾಯ ಮಾದ್ರೀ
ಸಂಪ್ರಾರ್ಥಯಾಮಾಸ ಪತಿಂ ತದುಕ್ತಾ ।
ಪೃಥಾವಾದೀತ್ ಕುಟಿಲೈಷಾ ಮದಾಜ್ಞಾ-
ಮೃತೇ ದೇವಾನಾಹ್ವಯಾಮಾಸ ದಸ್ರೌ ॥೧೨೬॥

'ಮಂತ್ರವು ಇನ್ನೊಮ್ಮೆ ನನಗೆ ಫಲಪ್ರದವಾಗಲಿ' ಎಂದು ಮಾದ್ರಿ ಪತಿಯನ್ನು ಬೇಡಿದಳು. ಅವನು ಹಾಗೇ ಕುಂತಿಗೆ ಹೇಳಿದಾಗ ಕುಂತಿ ಹೇಳಿದಳು, 'ಈ ಮಾದ್ರಿ ಮೋಸಗಾರಳು. ನನ್ನ ಅನುಮತಿ ಇಲ್ಲದೆ ಇಬ್ಬರು ಅಶ್ವಿನೀ ದೇವತೆಗಳನ್ನು ಆಹ್ವಾನಿಸಿದಳು.

ಅತೋ ವಿರೋಧಂ ಚ ಮುದಾತ್ಮಜಾನಾಂ
ಕುರ್ಯಾದೇಷೇತ್ಯೇವ ಭೀತಾಂ ನ ಮಾಂ ತ್ವಮ್ ।
ನಿಯೋಕ್ತುಮರ್ಹ ಪುನರೇವ ರಾಜ-
ನ್ನಿತೀರಿತೋಽಸೌ ವಿರರಾಮ ಕ್ಷಿತೀಶಃ ॥೧೨೭॥

'ಆದರಿಂದ ನನ್ನ ಮಕ್ಕಳಿಗೆ ಇವಳು ವಿರೋಧ ಮಾಡಬಹುದು ಎಂದು ನನಗೆ ಭಯವಾಗುತ್ತದೆ. ರಾಜನೇ, ನನಗೆ ಪುನಃ ಆಜ್ಞೆ ಮಾಡಬೇಡ' ಹೀಗೆ ಕುಂತಿ ಹೇಳಿದಾಗ ಪಾಂಡು ಸುಮ್ಮನಾದ.

ವಿಶೇಷನಾಮ್ನ್ಯೈವ ಸಮಾಹುತಾಃ ಸುತಾನ್
ದದ್ಯುಃ ಸುರಾ ಇತ್ಯವಿಶೇಷಿತಂ ಯಯೋಃ ।
ವಿಶೇಷನಾಮಾಪಿ ಸಮಾಹ್ವಯತ್ ತೌ
ಮಂತ್ರಾವೃತ್ತಿರ್ನಾಮಭೇದೇಽಸ್ಯ ಚೋಕ್ತಾ ॥೧೨೮॥

ವಿಶೇಷನಾಮದಿಂದ ಕರೆದರೆ ಮಾತ್ರ ದೇವತೆಗಳು ಮಕ್ಕಳನ್ನು ನೀಡುವರು. ಅಶ್ವಿನೀ ದೇವತೆಗಳಿಗೆ ವಿಶೇಷನಾಮವೂ ಉಭಯ ಸಾಧಾರಣವೆ. ಆದರಿಂದ ಮಾದ್ರಿ ಅವರನ್ನೇ ಆಹ್ವಾನಿಸಿದಳು. ವಿಶೇಷನಾಮ ಬೇರೆ ಇರುವಾಗ ಮಂತ್ರವನ್ನು ವಿಶೇಷ ನಾಮಯುಕ್ತವಾಗಿ ಪುನಃ ಉಚ್ಚರಿಸಬೇಕಾಗುತ್ತದೆ.

ಯುಧಿಷ್ಠಿರಾದ್ಯೇಷು ಚತುರ್ಷು ವಾಯುಃ
ಸಮಾವಿಷ್ಟಃ ಫಲ್ಗುನೇಧೋ ವಿಶೇಷಾತ್ ।
ಯುಧಿಷ್ಠಿರೇ ಸೌಮ್ಯರೂಪೇಣ ವಿಷ್ಟೋ
ವೀರೇಣ ರೂಪೇಣ ಧನಂಜಯೇಽಸೌ ॥೧೨೯॥

ಯುಧಿಷ್ಠಿರ ಮುಂತಾದವರಲ್ಲಿ ನಾಲ್ವರಲ್ಲಿಯೂ ವಾಯು ಆವೇಶಗೊಂಡ. ಅದರಲ್ಲಿಯೂ ಅರ್ಜುನನಲ್ಲಿ ವಿಶೇಷ ಆವೇಶ. ಯುಧಿಷ್ಠಿರನಲ್ಲಿ ಸೌಮ್ಯರೂಪದಿಂದ ಮತ್ತು ಅರ್ಜುನನಲ್ಲಿ ವೀರರೂಪದಿಂದ ಆವೇಶ.

ಶೃಂಗಾರರೂಪಂ ಕೇವಲಂ ದರ್ಶಯಾನೋ
ವಿವೇಶ ವಾಯುರ್ಯಮಜೌ ಪ್ರಧಾನಃ ।
ಶೃಂಗಾರ ಕೈವಲ್ಯಮಭೀಪ್ಸಮಾನಃ
ಪಾಂಡುರ್ಹಿ ಪುತ್ರಂ ಚಕಮೇ ಚತುರ್ಥಮ್ ॥೧೩೦॥

ಕೇವಲ ಸುಂದರ ರೂಪವನ್ನು ಪ್ರಕಟಪಡಿಸುತ್ತ ವಾಯು ನಕುಲ ಸಹದೇವರಲ್ಲಿ ಆವೇಶಗೊಂಡ. ಪಾಂಡು ಕೇವಲ ಸುಂದರರೂಪವನ್ನೆ ಬಯಸಿ ನಾಲ್ಕನೆ ಮಗನನ್ನು ಬಯಸಿದ್ದ.

ಶೃಂಗಾರರೂಪೋ ನಕುಲೇ ವಿಶೇಷಾತ್
ಸುನೀತಿರೂಪಃ ಸಹದೇವಂ ವಿವೇಶ ।
ಗುಣೈಃ ಸಮಸ್ತೈಃ ಸ್ವಯಮೇವ ವಾಯು
ರ್ಬಭೂವ ಭೀಮೋ ಜಗದಂತರಾತ್ಮಾ ॥೧೩೧॥

ಅದರಿಂದ ನಕುಲ ಸಹದೇವರಲ್ಲಿಯೂ ವಿಶೇಷವಾಗಿ ನಕುಲನಲ್ಲಿಯೇ ವಾಯು ಸುಂದರ ರೂಪದಾಯಕನಾಗಿ ಆವೇಶಗೊಂಡ. ಒಳ್ಳೆಯ ನೀತಿದಾಯಕನಾಗಿ ಸಹದೇವನನ್ನು ಪ್ರವೇಶಿಸಿದ. ಜಗದಂತರಾತ್ಮನಾದ ವಾಯು ಈ ಎಲ್ಲ ಗುಣಗಳಿಂದ ಕೂಡಿ ಭೀಮನಾಗಿ ತಾನೇ ಜನಿಸಿದ.

ಸುಪಲ್ಲವಾಕಾರತನುರ್ಹಿ ಕೋಮಳಃ
ಪ್ರಾಯೋ ಜನೈಃ ಪ್ರೋಚ್ಯತೇ ರೂಪಶಾಲೀ ।
ತತಃ ಸುಜಾತಂ ವರ ವಜ್ರಕಾಯೌ
ಭೀಮಾರ್ಜುನಾವಪ್ಯೃತೇ ಪಾಂಡುರೈಚ್ಛತ್ ॥೧೩೨॥

ಪ್ರಾಯಃ ಎಳೆಚಿಗುರಿನಂಥ ಕೋಮಲ ಶರೀರದವನನ್ನೇ ಜನರು ರೂಪಶಾಲಿ ಎನ್ನುತ್ತಾರೆ. ಅದರಿಂದ ಉತ್ತಮ ವಜ್ರಕಾಯದವರಾದ ಭೀಮಾರ್ಜುನರು ಮಾತ್ರವಲ್ಲದೆ ಬೇರೆ ಕೋಮಲ ಶರೀರದ ಮಕ್ಕಳೂ ಹುಟ್ಟಬೇಕೆಂದು ಪಾಂಡು ಬಯಸಿದ.

ಅಪ್ರಾಕೃತಾನಾಂ ತು ಮನೋಹರಂ ಯದ್
ರೂಪಂ ದ್ವಾತ್ರಿಂಶಲ್ಲಕ್ಷಣೋಪೇತಮಗ್ರ್ಯಮ್ ।

ತನ್ ಮಾರುತೋ ನಕುಲೇ ಕೋಮಳಾಭ
ಏವಂ ವಾಯುಃ ಪಂಚರೂಪೋಽತ್ರ ಚಾಸೀತ್ ॥೧೩೩॥

ಸೂಕ್ಷ್ಮದೃಷ್ಟಿಯವರಿಗೆ ಮಾತ್ರ ಮೂವತ್ತೆರಡು ಲಕ್ಷಣಗಳಿಂದ ಕೂಡಿದ ಉತ್ತಮ ಶರೀರವೆ ಸುಂದರವಾಗಿ ಕಾಣುವುದು. ಅಜ್ಞಾನಿಗಳಿಗೆ ಅಲ್ಲ. ಅದರಿಂದ ವಾಯು ನಕುಲನಲ್ಲಿ ಕೋಮಲ ಕಾಂತಿಪ್ರದನಾಗಿ ನಿಂತ. ಹೀಗೆ ವಾಯು ಕೃಷ್ಣಾವತಾರ ಕಾಲದಲ್ಲಿ ಐದು ರೂಪದವನಾಗಿ ಅವತರಿಸಿದ.

ಅತೀತೇಂದ್ರಾ ಏವ ತೇ ವಿಷ್ಣು ಷಷ್ಠಾಃ
ಪೂರ್ವೇಂದ್ರೋಽಸೌ ಯಜ್ಞನಾಮಾ ರಮೇಶಃ ।
ಸ ವೈ ಕೃಷ್ಣೋ ವಾಯುರಥ ದ್ವಿತೀಯಃ
ಸ ಭೀಮಸೇನೋ ಧರ್ಮ ಆಸೀತ್ ತೃತೀಯಃ ॥೧೩೪॥

ಪಂಚ ಪಾಂಡವರೂ ವಿಷ್ಣುವೂ ಸೇರಿ ಆರು ಮಂದಿಯೂ ಇಂದ್ರರೇ ಆಗಿದ್ದರು. ಮೊದಲಿನ ಇಂದ್ರನೆ ಯಜ್ಞನಾಮಕನಾದ ವಿಷ್ಣು. ಅವನೆ ಕೃಷ್ಣನಾದ. ಬಳಿಕ ಎರಡನೆ ಇಂದ್ರನೆ ವಾಯು. ಅವನೆ ಭೀಮಸೇನನಾದ. ಯಮಧರ್ಮ ಮೂರನೆ ಇಂದ್ರನಾಗಿದ್ದ.

ಯುಧಿಷ್ಠಿರೋಽಸಾವಥ ನಾಸತ್ಯದಸ್ರೌ
ಕ್ರಮಾತ್ ತಾವೇತೌ ಮಾದ್ರವತೀಸುತೌ ಚ ।
ಪುರಂದರಃ ಷಷ್ಠ ಉತಾತ್ರ ಸಪ್ತಮಃ
ಸ ಏವೈಕಃ ಫಲ್ಗುನೋ ಹ್ಯೇತ ಇಂದ್ರಾಃ ॥೧೩೫॥

ಆ ಯಮಧರ್ಮನೆ ಯುಧಿಷ್ಠಿರನಾಗಿ ಜನಿಸಿದ. ಬಳಿಕ ನಾಸತ್ಯ ಮತ್ತು ದಸ್ರರು ಇಂದ್ರರಾದರು. ಆದರೆ ಕ್ರಮವಾಗಿ ಮಾದ್ರಿಯ ಮಕ್ಕಳಾಗಿ ಜನಿಸಿದರು. ಪುರಂದರನೊಬ್ಬನೆ ಆರನೆ ಇಂದ್ರನಾದ ಮತ್ತು ಏಳನೆಯ ಇಂದ್ರನೂ ಆದ. ಅವನೆ ಅರ್ಜುನನಾಗಿ ಜನಿಸಿದ. ಹೀಗೆ ಇವರೆಲ್ಲರೂ ಇಂದ್ರರೆ.

ಕ್ರಮಾತ್ ಸಂಸ್ಕಾರಾನ್ ಕ್ಷತ್ರಿಯಾಣಾಮವಾಪ್ಯ
ತೇಽವರ್ಧಂತ ಸ್ತವಸೋ ಮಹಿತ್ವನಾ ।
ಸರ್ವೇ ಸರ್ವಜ್ಞಾಃ ಸರ್ವಧರ್ಮೋಪಪನ್ನಾಃ
ಸರ್ವೇ ಭಕ್ತಾಃ ಕೇಶವೇಽತ್ಯಂತಯುಕ್ತಾಃ ॥೧೩೬॥

ಪಾಂಡವರು ಕ್ರಮವಾಗಿ ಕ್ಷತ್ರಿಯೋಚಿತ ಸಂಸ್ಕಾರಗಳನ್ನು ಹೊಂದಿ ಸ್ವರೂಪ ಸಾಮರ್ಥ್ಯದಿಂದ ಪ್ರವರ್ಧಮಾನರಾದರು. ಅವರು ಎಲ್ಲರೂ ಸರ್ವಜ್ಞರು. ಸಕಲ ಧರ್ಮಾಚಾರಯುಕ್ತರು, ಭಕ್ತರು, ಕೇಶವನಲ್ಲಿ ಅತ್ಯಂತ ಪ್ರೀತಿಯುಕ್ತರು.

★ ★ ★ ★

ನೂರ ಹತ್ತೊಂಭತ್ತನೆಯ ಅಧ್ಯಾಯ

(ಅಶ್ವಿನೀದೇವತೆಗಳಿಂದ ಮಾದ್ರಿಯಲ್ಲಿ ನಕುಲ ಸಹದೇವರ ಜನನ, ಪಾಂಡವರ ನಾಮಕರಣ, ಉಪನಯನ ಸಂಸ್ಕಾರ, ಮತ್ತು ಶರ್ಯಾತಿಯ ಪುತ್ರನಾದ ಶುಕನಿಂದ ಶಸ್ತ್ರಾಭ್ಯಾಸ.)

ವೈಶಂಪಾಯನಃ

ಕುಂತೀಪುತ್ರೇಷು ಜಾತೇಷು ಧೃತರಾಷ್ಟ್ರಾತ್ಮಜೇಷು ಚ ।
ಮದ್ರರಾಜಸುತಾ ಪಾಂಡುಮಿದಂ ವಚನಮಬ್ರವೀತ್ ॥೧॥

ಕುಂತಿಯ ಪುತ್ರರೂ ಮತ್ತು ಧೃತರಾಷ್ಟ್ರನ ಪುತರೂ ಜನಿಸುತ್ತಿರಲು ಮದ್ರರಾಜಕುಮಾರಿಯು ಪಾಂಡುವನ್ನು ಕುರಿತು ಈ ಮಾತುಗಳನ್ನು ಆಡಿದಳು.

ನ ಮೇಽಸ್ತಿ ತ್ವಯಿ ಸಂತಾನೋ ವಿಗುಣೋಽಪಿ ನರಾಧಿಪ ।
ಮಮ ಜಾತೋ ವನಸ್ಥಾಯಾ ಹ್ಯವರತ್ವಾತ್ ಕಥಂಚನ ॥೨॥

ರಾಜನೇ, ಕಾಡಿನಲ್ಲಿರುವ ನನಗೆ ನಿನ್ನಿಂದ ಗುಣರಹಿತವಾದ ಸಂತಾನವೂ ಇಲ್ಲ. ದುರ್ವಾಸರ ವರ ನನಗೆ ಇಲ್ಲದಿರುವುದರಿಂದ ಯಾವರೀತಿಯಲ್ಲೂ ನಾನು ಪುತ್ರನನ್ನು ಪಡೆಯಲ್ಲಿಲ್ಲ.

ಗಾಂಧಾರ್ಯಾಶ್ಚಾಪಿ ಪುತ್ರಾಣಾಂ ಶತಂ ಜಜ್ಞೇ ಮಹಾತ್ಮನಾಮ್ ।
ತತ್ರಾಪಿ ನೈವ ಬಲವದ್ ದುಃಖಂ ಮಮ ವಿಶಾಂಪತೇ ॥೩॥

ಗಾಂಧಾರಿಗೂ ಸಹ, ಮಹಾ ಪ್ರಯತ್ನಶೀಲರಾದ ನೂರು ಮಕ್ಕಳು ಜನಿಸಿದರು. ರಾಜನೇ, ಆ ವಿಷಯದಲ್ಲೂ ನನಗೆ ಅಧಿಕವಾದ ದುಃಖವಿಲ್ಲ.

ಇದಂ ತು ಮೇ ಮಹದ್ದುಃಖಂ ತುಲ್ಯತಾಯಾಮಪುತ್ರತಾ ।
ದಿಷ್ಟ್ಯಾ ತ್ವಿದಾನೀಂ ಭರ್ತುರ್ಮೇ ಕುಂತ್ಯಾಮಪ್ಯಸ್ತಿ ಸಂತತಿಃ ॥೪॥

ನಾನು ಮತ್ತು ಕುಂತಿಯು ಸಮಾನರಾಗಿದ್ದರೂ, ನನಗೆ ಪುತ್ರರಿಲ್ಲದಿರುವುದು ದೊಡ್ಡ ದುಃಖಕ್ಕೆ ಕಾರಣವಾಗಿದೆ. ಭಗವದನುಗ್ರಹದಿಂದ ಈ ದಿನ ನನ್ನ ಪತಿಯಾದ ನಿನಗೆ ಕುಂತಿಯಲ್ಲೂ ಸಂತಾನವಿದೆ.

ಯದಿ ತ್ವಪತ್ಯಸಂತಾನಂ ಕುಂತೀ ರಾಜಸುತಾ ಮಯಿ ।
ಕುರ್ಯಾದನುಗ್ರಹೋ ಮೇ ಸ್ಯಾತ್ ತವ ಚೈವ ಹಿತಂ ಭವೇತ್ ॥೫॥

ರಾಜಕುಮಾರಿಯಾದ ಕುಂತಿಯು ನನಗೆ ಅನುಗ್ರಹವನ್ನು ಮಾಡಿದರೆ, ನನಗೂ ಪುತ್ರ ಸಂತಾನವಾಗುತ್ತದೆ. ನಿನಗೂ ಹಿತವಾಗುತ್ತದೆ.

ನ ಸಹೇಯಂ ಸಪತ್ನೀತ್ವಾತ್ ಕುಂತೀಂ ವಕ್ತುಂ ಸುತಾನ್ ಪ್ರತಿ ।
ಯದಿ ತು ತ್ವಂ ಪ್ರಸನ್ನೋ ಮೇ ಸ್ವಯಮೇನಾಂ ಪ್ರಚೋದಯ ॥೬॥

ಸವತಿಯಾದ ಕಾರಣದಿಂದ ನಾನೇ ಪುತ್ರರನ್ನು ಪಡೆಯುವ ವಿಷಯದಲ್ಲಿ ಕುಂತಿಗೆ ಏನೂ ಹೇಳಲಾರೆ. ನೀನು ನನ್ನ ವಿಷಯದಲ್ಲಿ ಪ್ರಸನ್ನನಾಗಿದ್ದರೆ, ನೀನೇ ಕುಂತಿಯನ್ನು ಪ್ರಚೋದಿಸು.

ಪಾಂಡುಃ

ಮಮಾಪ್ಯೇಷ ಸದಾ ಮಾದ್ರಿ ಹೃದ್ಯರ್ಥಃ ಪರಿವರ್ತತೇ ।
ನ ತು ತ್ವಾಂ ಪ್ರಸಹೇ ವಕ್ತುಮಿಷ್ಟಾನಿಷ್ಟಾಭಿಕಾಂಕ್ಷಯಾ ॥೭॥

ಮಾದ್ರಿ, ಈ ವಿಷಯವು ನನ್ನ ಮನಸ್ಸಿನಲ್ಲಿ ಯಾವಾಗಲೂ ಸಂಚರಿಸುತ್ತಿದೆ. ಆದರೆ ಇದರಲ್ಲಿ ಇಷ್ಟ ಮತ್ತು ಅನಿಷ್ಟ ಎರಡರ ಯೋಗವೂ ಇರುವುದರಿಂದ ನಾನು ನಿನಗೆ ಹೇಳಲು ಆಗಲಿಲ್ಲ.

ತವ ತ್ವನುಮತೋ ರಾಜ್ಞಿ ಪ್ರಯತಿಷ್ಯೇ ಯಥಾಸುಖಮ್ ।
ಆಶಂಸೇ ನಚಿರಾತ್ ಕುಂತೀ ವಚೋ ಮೇ ಪ್ರತಿಪತ್ಸ್ಯತೇ ॥೮॥

ರಾಣಿಯೇ, ನಿನ್ನ ಅನುಮತಿಯಂತೆ ನಾನು ಯಥಾಶಕ್ತಿ ಪ್ರಯತ್ನಮಾಡಿ ಕುಂತಿಗೆ ತಿಳಿಸುತ್ತೇನೆ. ಕುಂತಿಯು ನನ್ನ ಮಾತನ್ನು ನಡೆಸಿಕೊಡುತ್ತಾಳೆ.

ವೈಶಂಪಾಯನಃ

ತತಃ ಕುಂತೀಂ ಪುನಃ ಪಾಂಡುರೇಕಾಂತ ಇದಮಬ್ರವೀತ್ ।
ಅನುಗೃಹ್ಣೀಷ್ವ ಕಲ್ಯಾಣಿ ಮದ್ರರಾಜಸುತಾಮಪಿ ॥೯॥

ಅನಂತರ ಪಾಂಡುವು ಏಕಾಂತದಲ್ಲಿ ಕುಂತಿಯನ್ನು ಕುರಿತು, ಕಲ್ಯಾಣಿಯೇ, ಮಾದ್ರಿಗೂ ಅನುಗ್ರಹವನ್ನು ಮಾಡು ಎಂದು ಹೇಳಿದನು.

ಕುಲಸ್ಯ ಮಮ ಸಂತಾನಂ ಲೋಕಸ್ಯ ಚ ಕುರು ಪ್ರಿಯಮ್ ।
ಮಮ ವಾ ಪಿಂಡಲಾಭಾಯ ಪೂರ್ವೇಷಾಂ ಚ ಮಹಾತ್ಮನಾಮ್ ।
ಮತ್ಪ್ರಿಯಾರ್ಥಂ ಚ ಕಲ್ಯಾಣಿ ಕುರು ಕಲ್ಯಾಣಮುತ್ತಮಮ್ ॥೧೦॥

ನನಗೂ ಮತ್ತು ನನ್ನ ಪೂರ್ವಜರಿಗೂ ಪಿಂಡಲಾಭವಾಗುವುದಕ್ಕೋಸ್ಕರ ಕುಲಕ್ಕೂ ಮತ್ತು ನನಗೂ ಪ್ರಿಯವಾದ ಸಂತಾನವನ್ನುಂಟು ಮಾಡು. ಲೋಕಕ್ಕೂ ಪ್ರಿಯವಾದ ಸಂತಾನವನ್ನುಂಟು ಮಾಡು. ಕಲ್ಯಾಣಿಯೇ, ನನ್ನ ಪ್ರೀತಿಯ ಸಲುವಾಗಿಯಾದರೂ ಈ ಶ್ರೇಷ್ಠವಾದ ಕಲ್ಯಾಣ ಕಾರ್ಯವನ್ನು ಮಾಡು.

ಕುಲಸ್ಯ ಪಿಂಡವೃದ್ಧಿಶ್ಚ ಕುಲಸ್ಯ ಕುಲಸಂತತಿಃ ।
ಮಮ ಚೇಷ್ಟಸ್ಯ ನಿರ್ವೃತ್ತಿಃ ತವ ಚಾಪಿ ಪರಂ ಯಶಃ ।
ಯಶಸೋಽರ್ಥಾಯ ಚೈವ ತ್ವಂ ಕುರು ಕರ್ಮ ಸುದುಷ್ಕರಮ್ ॥೧೧॥

ಇದರಿಂದ ಕುಲದ ಸಂತತಿಯು ಉಂಟಾಗುತ್ತದೆ. ಕುಲಕ್ಕೆ ಪಿಂಡವೃದ್ಧಿ ಉಂಟಾಗುತ್ತದೆ. ನನ್ನ ಇಷ್ಟಪ್ರಾಪ್ತಿಯಾಗಿ ನನಗೆ ಬಹಳ ಸಂತೋಷವಾಗುತ್ತದೆ. ನಿನಗೂ ಅಪಾರವಾದ ಕೀರ್ತಿ ಬರುತ್ತದೆ. ಕೀರ್ತಿಗೋಸ್ಕರವಾದರೂ ಇಂತಹ ದುಷ್ಕರವಾದ ಕಾರ್ಯವನ್ನು ಮಾಡು.

ಪ್ರಾಪ್ಯ ದೇವಾದಪತ್ಯಂ ಚ ಯಜ್ಞೈರಿಷ್ಟ್ವಾ ಸಹಸ್ರಶಃ ।
ತಥಾ ಮಂತ್ರವಿದೋ ವಿಪ್ರಾನ್ ತಪಸ್ತಪ್ತ್ವಾ ಸುದುಷ್ಕರಮ್ ।
ಗುರೂನಭ್ಯುಪಗಚ್ಛಂತಿ ಯಶಸೋಽರ್ಥಾಯ ಭಾಮಿನಿ ॥೧೨॥

ಭಾಮಿನಿಯೇ, (ಸಜ್ಜನರು) ದೇವತಾನುಗ್ರಹದಿಂದ ಮಗನನ್ನು ಪಡೆದು ಸಹಸ್ರಾರು ಯಜ್ಞಗಳಿಂದ ಭಗವಂತನನ್ನು ಪೂಜಿಸಿ ಹಾಗೆಯೇ ಮಂತ್ರವಿದರಾದ

ಬ್ರಾಹ್ಮಣರನ್ನು ಪೂಜಿಸಿ ಸುದುಷ್ಕರವಾದ ತಪಸ್ಸನ್ನು ಮಾಡಿ ಕೀರ್ತಿಗೋಸ್ಕರವಾಗಿ ಗುರುಗಳಿಗೆ ಶರಣಾಗತರಾಗುತ್ತಾರೆ.

ತಥಾ ಬ್ರಹ್ಮರ್ಷಯಃ ಪೂರ್ವೇ ಬ್ರಾಹ್ಮಣಾಶ್ಚ ತಪೋಧನಾಃ ।
ಚಕ್ರುರುಚ್ಚಾವಚಂ ಕರ್ಮ ಯಶಸೋऽರ್ಥಾಯ ದುಷ್ಕರಮ್ ॥೧೩॥

ಹಾಗೆಯೇ, ಹಿಂದಿನ ಬ್ರಹ್ಮರ್ಷಿಗಳು ತಪೋಧನರಾದ ಬ್ರಾಹ್ಮಣರೂ ಸಹ, ಕೀರ್ತಿಗೋಸ್ಕರವಾಗಿ ದುಷ್ಕರವಾದ ಶ್ರೇಷ್ಠ ಅಥವಾ ಕನಿಷ್ಠ ಕರ್ಮಗಳನ್ನು ಮಾಡಿದರು.

ತಥಾ ರಾಜರ್ಷಯೋ ವೀರಾ ಮನುವೈನ್ಯಾದಯಃ ಪೃಥಕ್।
ಯಶೋರ್ಥಂ ಧರ್ಮಯುಕ್ತಾನಿ ಚಕ್ರುಃ ಕರ್ಮಾಣಿ ಶೋಭನೇ ।
ಯಶಸಾ ತ್ವಂ ಪ್ಲವೇನೈವ ತಾರಯೈನಾಮನಿಂದಿತೇ ॥೧೪॥

ಶೋಭನಳೇ, ಹಾಗೆಯೇ, ವೀರರಾದ ರಾಜರ್ಷಿಗಳು, ಮನುವೈನ್ಯಾದಿಗಳು ಸಹ ಕೀರ್ತಿಗೋಸ್ಕರವಾಗಿ ಧರ್ಮಯುಕ್ತವಾದ ಕಾರ್ಯಗಳನ್ನು ಮಾಡಿದರು. ಆದ್ದರಿಂದ ಅನಿಂದಿತಳೇ, ಕೀರ್ತಿ ಎಂಬ ಹಡಗಿನಿಂದ ನೀನು ಮಾದ್ರಿಯನ್ನು ದಾಟಿಸು.

ಅಪತ್ಯಸಂವಿಭಾಗೇನ ಪರಾಂ ಕೀರ್ತಿಮವಾಪ್ಸ್ಯಸಿ ।
ಧರ್ಮಂ ವೈ ಧರ್ಮಶಾಸ್ತ್ರೋಕ್ತಂ ಯಥಾ ವದಸಿ ತತ್ ತಥಾ ।
ತಸ್ಮಾದನುಗ್ರಹಂ ಮಾದ್ರ್ಯಾಃ ಕುರುಷ್ವ ವರವರ್ಣಿನಿ ॥೧೫॥

ಪುತ್ರರನ್ನು ಹಂಚಿಕೊಳ್ಳುವುದರಿಂದ ನಿನಗೆ ಅಪಾರವಾದ ಕೀರ್ತಿಯುಂಟಾಗುವುದು. ಧರ್ಮಶಾಸ್ತ್ರೋಕ್ತವಾದ ಧರ್ಮಸಂಬಂಧಿಯಾದ ಕಾರ್ಯಗಳನ್ನು ನೀನು ಹೇಗೆ ಹೇಳುತ್ತೀಯೋ ಅವೆಲ್ಲವೂ ಹಾಗೆಯೇ ಸರಿ. ಆದ್ದರಿಂದ ಸುಂದರಿಯೇ, ಮಾದ್ರಿಗೆ ಅನುಗ್ರಹವನ್ನು ಮಾಡು.

ಭರ್ತುಸ್ತು ವಚನಂ ಶ್ರುತ್ವಾ ಕುಂತೀ ಭರ್ತೃಹಿತೈಷಿಣೀ ।
ಮಂತ್ರಗ್ರಾಮಂ ದದೌ ತಸ್ಯೈ ಯಥಾವಿಧಿ ಶುಚಿಸ್ಮಿತಾ ॥೧೬॥

ಏವಮುಕ್ತ್ವಾऽಬ್ರವೀತ್ ಸ್ನೇಹಾತ್ ಸಕೃಚ್ಚಿಂತ್ಯ ದೈವತಮ್ ।
ತತ್ರ ತೇ ಭವಿತಾऽಪತ್ಯಮನುರೂಪಮಸಂಶಯಮ್ ॥೧೭॥

ಪತಿಯ ಮಾತುಗಳನ್ನು ಕೇಳಿದ, ಪತಿಯ ಹಿತೈಷಿಣಿಯಾದ ಕುಂತಿಯು ನಗುನಗುತ್ತಲೇ ಮಾದ್ರಿಗೆ ಮಂತ್ರಸಮೂಹವನ್ನು ವಿಧಿಪೂರ್ವಕವಾಗಿ ಕೊಟ್ಟಳು. ಹೀಗೆ ಮಂತ್ರವನ್ನು ಹೇಳಿ, ಸ್ನೇಹದಿಂದ ಮಾದ್ರಿಯನ್ನು ಕುರಿತು ದೇವತೆಯನ್ನು ಒಂದು ಸಲ ಮಾತ್ರ ಚಿಂತನೆಯನ್ನು ಮಾಡು. ನಿನಗೆ ಅನುರೂಪನಾದ ಪುತ್ರನು ಜನಿಸುವನು. ಇದರಲ್ಲಿ ಸಂಶಯವಿಲ್ಲ ಎಂದು ಹೇಳಿದಳು.

ವೈಶಂಪಾಯನಃ

ಕುಂತ್ಯಾ ಮಂತ್ರೇ ಕೃತೇ ತಸ್ಮಿನ್ ವಿಧಿದೃಷ್ಟೇನ ಕರ್ಮಣಾ ।
ತತೋ ರಾಜಸುತಾ ಸ್ನಾತಾ ಶಯನೇ ಸಂವಿವೇಶ ಹ ॥೧೮॥

ಕುಂತಿಯು ವಿಧ್ಯುಕ್ತ ಕ್ರಮದಲ್ಲಿ ಆ ಮಂತ್ರವನ್ನು ಕೊಡುತ್ತಿರಲು ರಾಜಕುಮಾರಿ ಮಾದ್ರಿಯು ಸ್ನಾನ ಮಾಡಿ ಶಯನದಲ್ಲಿ ಮಲಗಿಕೊಂಡಳು.

ತತೋ ಮಾದ್ರೀ ವಿಚಾರ್ಯೈಕಾ ಜಗಾಮ ಮನಸಾऽಶ್ವಿನೌ ।
ತಥಾ ಚ ಮಾದ್ರ್ಯಪತ್ಯಾರ್ಥೇ ಪ್ರಾಯುಂಕ್ತ ಬಲಿಮುತ್ತಮಮ್ ॥೧೯॥

ಆಗ ಮಾದ್ರಿಯು ವಿಚಾರ ಮಾಡಿ ಮನಸ್ಸಿನಲ್ಲಿ ಅಶ್ವಿನೀ ದೇವತೆಗಳನ್ನು ಸ್ಮರಣೆ ಮಾಡಿ, ಮಕ್ಕಳನ್ನು ಪಡೆಯುವ ಉದ್ದೇಶದಿಂದ ಅವರ ಪ್ರೀತಿಗೋಸ್ಕರವಾಗಿ ಶ್ರೇಷ್ಠವಾದ ಪೂಜೆಯನ್ನು ಮಾಡಿದಳು.

ತಾವಾಗಮ್ಯ ಸುತೌ ತಸ್ಯಾಂ ಜನಯಾಮಾಸತುರ್ಯಮೌ ।
ಜಾತೌ ಚ ತಾವಪಿ ಯಮೌ ವಾಗುವಾಚಾದ್ಭುತೋಪಮೌ ॥೨೦॥

ಅಶ್ವಿನೀ ದೇವತೆಗಳಿಬ್ಬರೂ ಬಂದು ಅವಳಲ್ಲಿ ಎರಡು ಅವಳಿ ಗಂಡು ಮಕ್ಕಳನ್ನು ಉತ್ಪಾದಿಸಿದರು. ಅದ್ಭುತವಾದ ಆ ಎರಡು ಶಿಶುಗಳು ಜನಿಸಿದಾಗಲೂ ಅಶರೀರವಾಣಿಯಾಯಿತು.

ಧರ್ಮತೋ ಭಕ್ತಿತಶ್ಚೈವ ಶೀಲೇನ ವಿನಯೈಸ್ತಥಾ ।
ರೂಪಸತ್ತ್ವಗುಣಶ್ರೇಷ್ಠಾವೇತಾವಿತಿ ನರಾಧಿಪ ॥೨೧॥

ಭಾಸತಸ್ತೇಜಸಾऽತ್ಯರ್ಥಂ ರೂಪದ್ರವಿಣಸಂಪದಾ ।
ಕುಂತೀಮಥ ಪುನಃ ಪಾಂಡುರ್ಮಾದ್ರ್ಯರ್ಥೇ ಸಮಚೋದಯತ್ ॥೨೨॥

ರಾಜನೇ, ಧರ್ಮದಿಂದ, ಭಕ್ತಿಯಿಂದ, ಶೀಲ ವಿನಯಗಳಿಂದ, ರೂಪ ಸತ್ತ್ವಗುಣಗಳಿಂದ, ಕಾಂತಿಯಿಂದ, ತೇಜಸ್ಸಿನಿಂದ ಮತ್ತು ಅತಿಶಯವಾದ ರೂಪದ್ರವಿಣಸಂಪತ್ತಿನಿಂದ ಇವರಿಬ್ಬರೂ ಶ್ರೇಷ್ಠರಾದವರು ಎಂದು ಅಶರೀರವಾಣಿಯಾಯಿತು. ಪಾಂಡುವು ಮಾದ್ರಿಗೆ ಮಂತ್ರವನ್ನು ಪುನಃಕೊಡುವಂತೆ ಕುಂತಿಯನ್ನು ಒತ್ತಾಯ ಮಾಡಿದನು.

ತಮುವಾಚ ಪತಿಂ ರಾಜನ್ ರಹಸ್ಯುಕ್ತಾ ಸತೀ ತದಾ ।
ಯುಕ್ತಾ ಸಕೃದ್ ದ್ವಂದ್ವಮೇಷಾ ಲೇಭೇ ತೇನಾಸ್ಮಿ ವಂಚಿತಾ ॥೨೩॥

ಕುಂತಿಯು ಏಕಾಂತದಲ್ಲಿ ರಾಜನಿಂದ ಹೀಗೆ ಹೇಳಲ್ಪಟ್ಟು, ಅವನನ್ನು ಕುರಿತು ನಾನು ಒಂದು ಸಲ ಕೊಟ್ಟಮಂತ್ರದಿಂದ ಇವಳು ಎರಡು ಮಕ್ಕಳನ್ನು ಪಡೆದು ನನಗೆ ವಂಚನೆಯನ್ನು ಮಾಡಿದ್ದಾಳೆ.

ಬಿಭೇಮ್ಯಸ್ಯಾಃ ಪರಿಭವಾನ್ನಾರೀಣಾಂ ಮತಿರೀದೃಶೀ ।
ನಾಜ್ಞಾಸಿಷಮಹಂ ಮೂಢಾ ದ್ವಂದ್ವಾಹ್ವಾನೇ ದ್ವಯಂ ಫಲಮ್ ।
ತಸ್ಮಾನ್ನಾಹಂ ನಿಯೋಕ್ತವ್ಯಾ ತ್ವಯೈಷೋऽಸ್ತು ವರೋ ಮಮ ॥೨೪॥

ಇವಳಿಂದ ನನಗೆ ಪರಿಭವ ಉಂಟಾಗಬಹುದೆಂದು ನಾನು ಹೆದರಿದ್ದೇನೆ. ಮೂಢಳಾದ ನನಗೆ ದೇವತಾದ್ವಂದ್ವವನ್ನು ಆಹ್ವಾನ ಮಾಡಿದರೆ ಎರಡು ಮಕ್ಕಳಾಗುತ್ತಾರೆ ಎಂದು ತಿಳಿಯಲಿಲ್ಲ. ಆದ್ದರಿಂದ ನನ್ನನ್ನು ಇನ್ನೊಂದು ಸಲ ಮಂತ್ರವನ್ನು ಕೊಡುವಂತೆ ಒತ್ತಾಯ ಮಾಡಬಾರದು. ಇದು ನಾನು ನಿನ್ನಲ್ಲಿ ಕೇಳುತ್ತಿರುವ ವರ.

ವೈಶಂಪಾಯನಃ

ಏವಂ ಪಾಂಡುಸುತಾಃ ಪಂಚ ದೇವದತ್ತಾ ಮಹಾಬಲಾಃ ।
ಸಂಭೂತಾಃ ಕೀರ್ತಿಮಂತಸ್ತೇ ಕುರುವಂಶವಿವರ್ಧನಾಃ ॥೨೫॥

ಹೀಗೆ ಮಹಾಬಲರಾದ ಪಾಂಡುವಿನ ಐದು ಮಕ್ಕಳು, ದೇವತೆಗಳಿಂದ ದತ್ತರಾಗಿ ಜನಿಸಿ ಕೀರ್ತಿವಂತರೂ, ಕುರುವಂಶವಿವರ್ಧನರೂ ಆದರು.

ದೇವೌಜಸಃ ಸತ್ತ್ವವಂತಃ ಸರ್ವಶಾಸ್ತ್ರವಿಶಾರದಾಃ ।
ದಿವ್ಯಸಂಹನನಾಃ ಸರ್ವೇ ಸರ್ವೇ ಭಾಸ್ವರಮೂರ್ತಯಃ ॥೨೬॥

ಎಲ್ಲರೂ ದೇವಪರಾಕ್ರಮರು, ಸತ್ವವುಳ್ಳವರು, ಸರ್ವಶಾಸ್ತ್ರವಿಶಾರದರು, ದಿವ್ಯ ಶರೀರವುಳ್ಳವರು ಮತ್ತು ಶರೀರ ಕಾಂತಿಯುಳ್ಳವರು.

ಸರ್ವಲಕ್ಷಣಸಂಪನ್ನಾಃ ಸೋಮವತ್ ಪ್ರಿಯದರ್ಶನಾಃ ।
ಸಿಂಹದರ್ಪಾ ಮಹೇಷ್ವಾಸಾಃ ಸಿಂಹವಿಕ್ರಾಂತಗಾಮಿನಃ ॥೨೭॥

ಸಿಂಹಕ್ಷೀಬಾ ಮನುಷ್ಯೇಂದ್ರಾ ವವೃಧುರ್ಭೀಮದರ್ಶನಾಃ ।
ವಿವರ್ಧಮಾನಸ್ತೇ ತತ್ರ ಪುಣ್ಯೇ ಹೈಮವತೇ ಗಿರೌ ॥೨೮॥

ಎಲ್ಲಾ ಲಕ್ಷಣಗಳಿಂದ ಯುಕ್ತರಾದವರು, ಚಂದ್ರನಂತೆ ಪ್ರಿಯದರ್ಶನರಾದವರು, ಸಿಂಹದಂತೆ ದರ್ಪವುಳ್ಳವರು, ಮಹಾಧನುಸ್ಸನ್ನು ಧರಿಸಿದವರು, ಸಿಂಹದ ವಿಕ್ರಮದ ನಡಿಗೆಯುಳ್ಳವರು, ಸಿಂಹದಂತೆ ಮತ್ತರು, ಮನುಷ್ಯೇಂದ್ರರು ಮತ್ತು ಉಗ್ರವಾದ ಆಕೃತಿಯುಳ್ಳವರೂ ಆಗಿ ಎಲ್ಲರೂ ಬೆಳೆದರು.

ವಿಸ್ಮಯಂ ಜನಯಾಮಾಸುರ್ಮಹರ್ಷೀಣಾಂ ಸಮೇಯುಷಾಮ್ ॥

ಪವಿತ್ರವಾದ ಹಿಮಾಲಯ ಪರ್ವತದಲ್ಲಿ ಬೆಳೆಯುತ್ತಿದ್ದ ಅವರು ಅಲ್ಲಿಗೆ ಬಂದ ಮಹರ್ಷಿಗಳಿಗೆ ಆಶ್ಚರ್ಯವನ್ನುಂಟು ಮಾಡಿದರು.

ನಾಮಾನಿ ಚಕ್ರಿರೇ ತೇಷಾಂ ಶತಶೃಂಗನಿವಾಸಿನಃ ।
ಋಷಯಃ ಕರ್ಮತಶ್ಚೈವ ರೂಪತಃ ಸ್ನೇಹತಸ್ತಥಾ ।
ಯುಧಿಷ್ಠಿರ ಇತಿ ಜ್ಯೇಷ್ಠಂ ದ್ವಿತೀಯಂ ಭೀಮ ಇತ್ಯಪಿ ॥೩೦॥

ತೃತೀಯಮರ್ಜುನ ಇತಿ ಕುಂತೀಪುತ್ರಾನಕಲ್ಪಯನ್ ।
ಪೂರ್ವಜಂ ನಕುಲಂ ಚೇತಿ ಸಹದೇವಂ ತತಃ ಪರಮ್ ॥೩೧॥

ಊಚುರ್ಮಾದ್ರೀಸುತಾವೇವಂ ಮಹಾಭಾಗಾಸ್ತಪಸ್ವಿನಃ ।
ಏಕವರ್ಷಾಂತರಸ್ತೌ ತೇ ಪರಸ್ಪರಮರಿಂದಮಾಃ ॥೩೨॥

ಶತಶೃಂಗ ನಿವಾಸಿಗಳಾದ ಋಷಿಗಳು, ಅವರ ಕರ್ಮವನ್ನೂ ಮತ್ತು ರೂಪವನ್ನೂ ನೋಡಿ ಪ್ರೀತಿಯಿಂದ ಅವರಿಗೆ ನಾಮಕರಣವನ್ನು ಮಾಡಿದರು. ಮೊದಲನೆಯವನನ್ನು ಯುಧಿಷ್ಠಿರ ಎಂದೂ, ಎರಡನೆಯವನನ್ನು ಭೀಮನೆಂದೂ, ಮೂರನೆಯವನನ್ನು ಅರ್ಜುನ ಎಂದೂ ಕುಂತಿಪುತ್ರರನ್ನು ಕರೆದರು. ಮಹಾಭಾಗ್ಯವಂತರಾದ ಆ ತಪಸ್ವಿಗಳು

ಮಾದ್ರಿಯ ಮಕ್ಕಳಲ್ಲಿ ಮೊದಲು ಹುಟ್ಟಿದವನನ್ನು ನಕುಲನೆಂದೂ ಅನಂತರ ಹುಟ್ಟಿದವನನ್ನು ಸಹದೇವನೆಂದೂ ಕರೆದರು. ಈ ಎಲ್ಲಾ ಶತ್ರುತಾಪಕರಾದ ಐದು ಮಕ್ಕಳು ಒಂದೊಂದು ವರ್ಷ ವ್ಯತ್ಯಾಸದ ವಯಸ್ಸುಳ್ಳವರು.

ಅನ್ವವರ್ಧಂತ ಪಾರ್ಥಾಶ್ಚ ಯಮೌ ಪುತ್ರೌ ತಥೈವ ಚ ।
ತೇ ಚ ಪಂಚ ಶತಂ ಚೈವ ಕುರುವಂಶವಿವರ್ಧನಾಃ ।
ಸರ್ವೇ ವವೃಧಿರೇ ರಾಜನ್ ಕಾಲೇನಾಪ್ಸ್ವ ನೀರಜಾಃ ॥೩೩॥

ಎಲೈ ರಾಜನೇ, ಕುರುವಂಶ ವಿವರ್ಧನರಾದ, ಕುಂತಿಯ ಮಕ್ಕಳು, ಮಾದ್ರಿಯ ಮಕ್ಕಳು ಸೇರಿ ಐದು ಜನರೂ, ಧೃತರಾಷ್ಟ್ರನ ನೂರು ಮಕ್ಕಳೂ ಸಹ ನೀರಿನಲ್ಲಿ ಕಮಲಗಳು ಅರಳಿದಂತೆ ಎಲ್ಲರೂ ಬೆಳೆದರು.

ಜಾತಮಾತ್ರಾನುಪಾದಾಯ ಶತಶೃಂಗನಿವಾಸಿನಃ ।
ಪಾಂಡೋಃ ಪುತ್ರಾನಮನ್ಯಂತ ತಾಪಸಾಃ ಸ್ವಾನಿವಾತ್ಮಜಾನ್ ।
ತತಸ್ತು ವೃಷ್ಣಯಃ ಸರ್ವೇ ವಸುದೇವಪುರೋಗಮಾಃ ॥೩೪॥

ಶತಶೃಂಗ ನಿವಾಸಿಗಳಾದ ತಾಪಸರು ಹುಟ್ಟಿದ ತಕ್ಷಣ ಪಾಂಡುವಿನ ಮಕ್ಕಳನ್ನು ಎತ್ತಿಕೊಂಡು ತಮ್ಮ ಮಕ್ಕಳೆಂದೇ ತಿಳಿದರು. ಅನಂತರ ವಸುದೇವಮೊದಲಾದ ಎಲ್ಲಾ ವೃಷ್ಣಿಗಳೂ ಹಾಗೆಯೇ ತಿಳಿದರು.

ಪಾಂಡುಃ ಶಾಪಭಯಾದ್ ಭೀತಃ ಶತಶೃಂಗಮುಪೇಯಿವಾನ್ ।
ತತ್ರೈವ ಮುನಿಭಿಃ ಸಾರ್ಧಂ ತಾಪಸೋಽಭೂತ್ ತಪಸ್ವಿಭಿಃ ॥೩೫॥

ಪಾಂಡುವು ಕಿಂದಮರ ಶಾಪದಿಂದ ಭೀತನಾಗಿ ಪುನಃ ಶತಶೃಂಗ ಪರ್ವತವನ್ನು ಸೇರಿದನು. ಅಲ್ಲಿ ತಪಸ್ವಿಗಳಾದ ಮುನಿಗಳ ಜೊತೆ ಸೇರಿ ತಾನೂ ತಾಪಸನಾದನು.

ಶಾಕಮೂಲಫಲಾಹಾರಃ ತಪಸ್ವೀ ನಿಯತೇಂದ್ರಿಯಃ ।
ಧ್ಯಾನಯೋಗಪರೋ ರಾಜಾ ಬಭೂವೇತಿ ಚ ವಾದಕಾಃ ।
ಪ್ರಬ್ರುವಂತಿ ಸ್ಮ ಬಹವಃ ತಚ್ಛ್ರುತ್ವಾ ಶೋಕಕರ್ಶಿತಾಃ ॥೩೬॥

ಶಾಕಮೂಲಫಲಾಹಾರನಾಗಿ, ಇಂದ್ರಿಯಜಯವನ್ನು ಹೊಂದಿ ತಪಸ್ವಿಯಾಗಿ ರಾಜನು ಧ್ಯಾನಯೋಗಪರನಾದನು ಎಂದು ನೋಡಿದವರು ಹೇಳುತ್ತಾರೆ. ಅದನ್ನು ಕೇಳಿ ಬಹಳ ಜನರು ಶೋಕತಪ್ತರಾದರು.

ಪಾಂಡೋಃ ಪ್ರೀತಿಸಮಾಯುಕ್ತಾಃ ಕದಾ ಶ್ರೋಷ್ಯಾಮ ಸತ್ಕಥಾಃ ।
ಇತ್ಯೇವಂ ಕಥಯಂತಸ್ತೇ ವೃಷ್ಣಯಃ ಸಹ ಬಾಂಧವೈಃ ।
ಪಾಂಡೋಃ ಪುತ್ರಾಗಮಂ ಶ್ರುತ್ವಾ ಸರ್ವೇ ಹರ್ಷಸಮನ್ವಿತಾಃ ॥೩೭॥

ಪಾಂಡುವಿನಲ್ಲಿ ಪ್ರೀತಿಯಿದ್ದ, ವೃಷ್ಣಿಗಳು ಮತ್ತು ಬಂಧುಗಳು, ನಾವು ಪಾಂಡುವಿನ ಕಡೆಯಿಂದ ಯಾವಾಗ ಒಳ್ಳೆಯ ವಾರ್ತೆಯನ್ನು ಕೇಳುತ್ತೇವೆ ಎಂದು ಮಾತನಾಡುತ್ತಿದ್ದವರು, ಪಾಂಡುವಿನ ಪುತ್ರಪ್ರಾಪ್ತಿಯನ್ನು ಕೇಳಿ ಎಲ್ಲರೂ ಹರ್ಷಯುಕ್ತರಾದರು.

ಸಭಾಜಯಂತಸ್ತೇऽನ್ಯೋನ್ಯಂ ವಸುದೇವಂ ವಚೋऽಬ್ರುವನ್ ।
ನ ಭವೇರನ್ ಕ್ರಿಯಾಹೀನಾಃ ಪಾಂಡೋಃ ಪುತ್ರಾ ಮಹಾಬಲಾಃ ।
ಪಾಂಡೋಃ ಪ್ರಿಯಹಿತಾನ್ವೇಷೀ ಪ್ರೇಷಯ ತ್ವಂ ಪುರೋಹಿತಮ್ ॥೩೮॥

ಅವರೆಲ್ಲರೂ ಪರಸ್ಪರವಾಗಿ ಅಭಿನಂದಿಸಿ, ವಸುದೇವನನ್ನು ಕುರಿತು 'ಪಾಂಡುವಿನ ಮಹಾಬಲರಾದ ಪುತ್ರರು ಸಂಸ್ಕಾರಹೀನರಾಗಬಾರದು. ಆದ್ದರಿಂದ ಪಾಂಡುವಿನ ಪ್ರಿಯದಲ್ಲೂ, ಹಿತದಲ್ಲೂ ಆಸಕ್ತನಾದ ನೀನು, ಪಾಂಡವರಿಗೆ ಸಂಸ್ಕಾರಗಳನ್ನು ಮಾಡಲು ಪುರೋಹಿತರನ್ನು ಕಳುಹಿಸು' ಎಂದು ಹೇಳಿದರು.

ವೈಶಂಪಾಯನಃ

ವಸುದೇವಸ್ತಥೇತ್ಯುಕ್ತ್ವಾ ವಿಸಸರ್ಜ ಪುರೋಹಿತಮ್ ।
ಯುಕ್ತಾನಿ ಚ ಕುಮಾರಾಣಾಂ ಪಾರಿಬರ್ಹಾಣ್ಯನೇಕಶಃ ॥೩೯॥

ವಸುದೇವನು 'ಹಾಗೆಯೇ ಆಗಲಿ' ಎಂದು ಹೇಳಿ ಕುಮಾರರಿಗೆ ಉಚಿತವಾದ ಉಡುಗೊರೆಗಳನ್ನು ಕೊಟ್ಟು ಪುರೋಹಿತರನ್ನು ಕಳುಹಿಸಿಕೊಟ್ಟನು.

ಕುಂತೀಂ ಮಾದ್ರೀಂ ಚ ಸಂದಿಶ್ಯ ದಾಸೀದಾಸಪರಿಚ್ಛದಮ್ ।
ಗಾವೋ ರೌಪ್ಯಂ ಹಿರಣ್ಯಂ ಚ ಪ್ರೇಷಯಾಮಾಸ ಭಾರತ ॥೪೦॥

ಭಾರತನೇ, ಕುಂತಿ ಮತ್ತು ಮಾದ್ರಿಯರನ್ನು ನಿರ್ದೇಶಿಸಿ ಅವರಿಗೆ ತಲುಪಿಸಬೇಕೆಂದು ದಾಸದಾಸಿಯರನ್ನೂ, ಗೃಹವಸ್ತುಗಳನ್ನೂ, ಗೋವುಗಳನ್ನೂ, ರಜತ ಮತ್ತು ಸುವರ್ಣವನ್ನೂ ಕಳುಹಿಸಿದನು.

ತಾನಿ ಸರ್ವಾಣಿ ಸಂಗೃಹ್ಯ ಪ್ರಯಯೌ ಸ ಪುರೋಹಿತಃ ।
ತಮಾಗತಂ ದ್ವಿಜಶ್ರೇಷ್ಠಂ ಕಾಶ್ಯಪಂ ವೈ ಪುರೋಹಿತಮ್ ॥೪೧॥

ಪೂಜಯಾಮಾಸ ವಿಧಿವತ್ ಪಾಂಡುಃ ಪುರಪರಂಜಯಃ ।
ಪೃಥಾ ಮಾದ್ರೀ ಚ ಸಂಹೃಷ್ಟೇ ವಸುದೇವಂ ಪ್ರಶಂಸತಾಮ್ ॥೪೨॥

ಪುರೋಹಿತರು ಆ ಎಲ್ಲಾ ವಸ್ತುಗಳನ್ನೂ ತೆಗೆದುಕೊಂಡು ಹೊರಟರು. ಆ ಪುರೋಹಿತರು ಶತಶೃಂಗಪರ್ವತಕ್ಕೆ ಬಂದುದನ್ನು ನೋಡಿ, ಪರಪುರಂಜಯನಾದ ಪಾಂಡುವು ಕಾಶ್ಯಪಗೋತ್ರಕ್ಕೆ ಸೇರಿದ ಆ ಬ್ರಾಹ್ಮಣರನ್ನು ವಿಧಿವತ್ತಾಗಿ ಪೂಜಿಸಿದನು. ಕುಂತಿ ಮತ್ತು ಮಾದ್ರಿಯರು ಸಂತೋಷಪಟ್ಟು ವಸುದೇವನನ್ನು ಹೊಗಳಿದರು.

ತತಃ ಪಾಂಡುಃ ಕ್ರಿಯಾಃ ಸರ್ವಾಃ ಪಾಂಡವಾನ್ ಸಮಕಾರಯತ್ ।
ಗರ್ಭಾಧಾನಾದಿಕೃತ್ಯಾನಿ ಚೌಲೋಪನಯನಾನಿ ಚ ॥೪೩॥

ಕಾಶ್ಯಪಃ ಕೃತವಾನ್ ಸರ್ವಮುಪಾಕರ್ಮ ಚ ಭಾರತ ।
ಚೌಲೋಪನಾಯನಾದೂರ್ಧ್ವಮೃಷಭಾಕ್ಷಾ ಯಶಸ್ವಿನಃ ॥೪೪॥

ಅನಂತರ ಪಾಂಡುವು ತನ್ನ ಮಕ್ಕಳಿಗೆ ಗರ್ಭಾಧಾನಾದಿ ಸಂಸ್ಕಾರಗಳನ್ನು, ಚೌಲೋಪನಯನಗಳನ್ನು ಮಾಡಿಸಿದನು. ಭಾರತನೇ! ಆ ಕಾಶ್ಯಪ ಪುರೋಹಿತರು ಪುತ್ರರಿಗೆ ಉಪಾಕರ್ಮವನ್ನೂ ಮಾಡಿಸಿದರು.

ವೈದಿಕಾಧ್ಯಯನೇ ಸರ್ವೇ ಸಮಪದ್ಯಂತ ಪಾರಗಾಃ ॥೪೫॥

ಚೌಲೋಪನಯನದ ನಂತರ ಯಶಸ್ವಿಗಳೂ, ಗಂಭೀರ ದೃಷ್ಟಿಯುಳ್ಳವರಾದ ಪಾಂಡವರೆಲ್ಲರೂ ವೇದವೇದಾಂಗಗಳ ಅಧ್ಯಯನದಲ್ಲಿ ತೊಡಗಿ ಪಾರಂಗತರಾದರು.

ಶರ್ಯ್ಯಾತೇಃ ಪ್ರಥಿತಃ ಪುತ್ರಃ ಶುಕೋ ನಾಮ ಪರಂತಪಃ ।
ಯೇನ ಸಾಗರಪರ್ಯಂತಾ ಧನುಷಾ ನಿರ್ಜಿತಾ ಮಹೀ ।
ಅಶ್ವಮೇಧಶತೈರಿಷ್ಟ್ವಾ ಸ ಮಹಾತ್ಮಾ ಮಹಾಮಖೈಃ ॥೪೬॥

ಆರಾಧ್ಯ ದೇವತಾಃ ಸರ್ವಾಃ ಪಿತೄನಪಿ ಮಹಾಮತಿಃ ।
ಶತಶೃಂಗೇ ತಪಸ್ತೇಪೇ ಶಾಕಮೂಲಫಲಾಶನಃ ॥೪೭॥

ಶರ್ಯಾತಿಯ ಪ್ರಖ್ಯಾತಪುತ್ರನಾದ, ಪರಂತಪನಾದ, ಶುಕನೆಂಬ ರಾಜರ್ಷಿ ಇದ್ದನು. ಅವನು ಸಾಗರಪರ್ಯಂತವಾದ ಭೂಮಿಯನ್ನು ತನ್ನ ಧನುಸ್ಸಿನ ಬಲದಿಂದ ಗೆದ್ದು, ನೂರು ಅಶ್ವಮೇಧಗಳನ್ನು ಮಾಡಿ, ಇನ್ನೂ ಅನೇಕ ಯಾಗಗಳನ್ನು ಮಾಡಿ ಎಲ್ಲಾ ದೇವತೆಗಳನ್ನೂ ಮತ್ತು ಪಿತೃಗಳನ್ನೂ ಆರಾಧಿಸಿ, ಮಹಾತ್ಮನೂ, ಮೇಧಾವಿಯೂ ಆದ ಅವನು ಶತಶೃಂಗಪರ್ವತದಲ್ಲಿ ಶಾಕಮೂಲಫಲಾಶನನಾಗಿ ತಪಸ್ಸನ್ನು ಮಾಡುತ್ತಿದ್ದನು.

ತೇನೋಪಕರಣಶ್ರೇಷ್ಠೈಃ ಶಿಕ್ಷಯಾ ಚೋಪಬೃಂಹಿತಾಃ ।
ತತ್ಪ್ರಸಾದಾದ್ ಧನುರ್ವೇದೇ ಸಮಪದ್ಯಂತ ಪಾರಗಾಃ ॥೪೮॥

ಅವನು ಪಾಂಡವರಿಗೆ ಶಸ್ತ್ರವಿದ್ಯೆಗಳನ್ನು ಕಲಿಸಿದನು. ಅವನ ಅನುಗ್ರಹದಿಂದ ಪಾಂಡವರು ಧನುರ್ವೇದದಲ್ಲಿ ಪಾರಂಗತರಾದರು.

ಗದಾಯಾಂ ಪಾರಗೋ ಭೀಮಃ ತೋಮರೇಷು ಯುಧಿಷ್ಠಿರಃ ।
ಅಸಿಚರ್ಮಣಿ ನಿಷ್ಣಾತೌ ಯಮೌ ಸತ್ಯವತಾಂ ವರೌ ॥೪೯॥

ಭೀಮನು ಗದಾಯುದ್ಧದಲ್ಲಿ ಪಾರಂಗತನಾದನು. ಯುಧಿಷ್ಠಿರನು ತೋಮರವಿದ್ಯೆಯಲ್ಲಿ ಪಾರಂಗತನಾದನು. ಸತ್ಯವಂತರಲ್ಲಿ ಶ್ರೇಷ್ಠರಾದ ನಕುಲಸಹದೇವರು ಖಡ್ಗವಿದ್ಯೆಯಲ್ಲಿ ನಿಷ್ಣಾತರಾದರು.

ಧನುರ್ವೇದೇ ಗತಃ ಪಾರಂ ಸವ್ಯಸಾಚೀ ಪರಂತಪಃ ।
ಶುಕೇನ ಸಮನುಜ್ಞಾತೋ ಮತ್ಸಮೋಽಯಮಿತಿ ಪ್ರಭೋ ॥೫೦॥

ಸವ್ಯಸಾಚಿಯಾದ ಪರಂತಪನಾದ ಅರ್ಜುನನು ಧನುರ್ವೇದದಲ್ಲಿ ಪಾರಂಗತನಾದನು. ರಾಜನೇ, 'ನೀನು ನನಗೆ ಸಮಾನನಾದವನು' ಎಂದು ಹೇಳಿ ಶುಕನು ಅರ್ಜುನನಿಗೆ ಅನುಮತಿಯನ್ನು ನೀಡಿದನು.

ಅನುಜ್ಞಾಯ ತತೋ ರಾಜಾ ಶಕ್ತಿಂ ಖಡ್ಗಂ ತಥಾ ಶರಾನ್ ।
ಧನುಶ್ಚ ದದತಾಂ ಶ್ರೇಷ್ಠಃ ತಾಲಮಾತ್ರಂ ಮಹಾಪ್ರಭಮ್ ॥೫೧॥

ವಿಪಾಠಕ್ಷುರನಾರಾಚಾನ್ ಗೃಧ್ರಪತ್ರೈರಲಂಕೃತಾನ್ ।
ದದೌ ಪಾರ್ಥಾಯ ಸಂಹೃಷ್ಟೋ ಮಹೋರಗಸಮಪ್ರಭಾನ್ ॥೫೨॥

ರಾಜನಾದ ಶುಕನು ಅರ್ಜುನನಿಗೆ ವಿದ್ಯೆಯು ಪೂರ್ಣವಾಗಿದೆ ಎಂದು ಅನುಮತಿಯನ್ನು ನೀಡಿ, ಶಕ್ತಿಯನ್ನೂ, ಖಡ್ಗವನ್ನೂ, ಒಂದು ತಾಲ ಎತ್ತರವಿರುವ ಮಹಾಧನುಸ್ಸನ್ನೂ, ಬಾಣಗಳನ್ನೂ, ವಿಪಾ ಠಕ್ಕುವಾರಾಚರಗಳನ್ನೂ, ಹದ್ದಿನ ಗರಿಗಳಿಂದ ಅಲಂಕೃತವಾದ ಮಹಾಸರ್ಪಗಳಂತಿರುವ ನಾರಾಚಗಳನ್ನೂ, ಸಂತೋಷದಿಂದ ಅರ್ಜುನನಿಗೆ ಕೊಟ್ಟನು.

ಅವಾಪ್ಯ ಸರ್ವಶಸ್ತ್ರಾಣಿ ಮುದಿತೋ ವಾಸವಾತ್ಮಜಃ ।
ಮೇನೇ ಸರ್ವಾನ್ ಮಹೀಪಾಲಾನಪರ್ಯಾಪ್ತಾನ್ ಸ್ವತೇಜಸಃ ॥೫೩॥

ಇಂದ್ರನ ಮಗನಾದ ಅರ್ಜುನನು, ಎಲ್ಲಾ ಶಸ್ತ್ರಗಳನ್ನೂ ಸ್ವೀಕರಿಸಿ ಸಂತೋಷಗೊಂಡು, ತನ್ನ ಪರಾಕ್ರಮಕ್ಕೆ ರಾಜರುಗಳಲ್ಲಿ ಯಾರೂ ತನಗೆ ಸರಿಸಾಟಿ ಇಲ್ಲವೆಂದು ಭಾವಿಸಿದನು.

ಏಕವರ್ಷಾಂತರಾಸ್ತೇ ತೇ ಪರಸ್ಪರಮರಿಂದಮಾಃ ।
ಅನ್ವವರ್ಧಂತ ಪಾರ್ಥಾಶ್ಚ ಮಾದ್ರೀಪುತ್ರೌ ತಥೈವ ಚ ॥೫೪॥

ಅರಿಂದಮರಾದ ಕುಂತಿಯ ಮೂವರು ಮಕ್ಕಳು ಮತ್ತು ಮಾದ್ರಿಯ ಇಬ್ಬರು ಮಕ್ಕಳು ಪರಸ್ಪರವಾಗಿ ಒಂದು ವರ್ಷದ ಅಂತರವುಳ್ಳವರಾಗಿ ಬೆಳೆದರು.

ತೇ ಚ ಪಂಚ ಶತಂ ಚೈವ ಕುರುವಂಶವಿವರ್ಧನಾಃ ।
ಸರ್ವೇ ವವೃಧುರಲ್ಪೇನ ಕಾಲೇನಾಪ್ಸ್ವಿವ ಪಂಕಜಾಃ ॥೫೫॥

ಆ ಐದು ಜನರೂ ಮತ್ತು ಕುರುವಂಶವಿವರ್ಧನರಾದ ಧೃತರಾಷ್ಟ್ರನ ನೂರು ಪುತ್ರರೂ ನೀರಿನಲ್ಲಿ ಕಮಲಗಳು ಅರಳಿದಂತೆ ಅಲ್ಪಕಾಲದಲ್ಲಿಯೇ ಬೆಳೆದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕೋನವಿಂಶತ್ಯಧಿಕಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ಸಪ್ತಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಹತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ನೂರ ಇಪ್ಪತ್ತನೆಯ ಅಧ್ಯಾಯ

(ಯುಧಿಷ್ಠಿರ ಮೊದಲಾದವರ ಆಯುರ್ಭಾವ ಕಥನ.)

ಜನಮೇಜಯಃ

ಕಸ್ಮಿನ್ ವಯಸಿ ಪಂಪ್ರಾಪ್ತಾಃ ಪಾಂಡವಾ ಗಜಸಾಹ್ವಯಮ್ ।
ಸಮಪದ್ಯಂತ ದೇವೇಭ್ಯಸ್ತೇಷಾಮಾಯುಶ್ಚ ಕಿಂ ಪರಮ್ ॥೧॥

ವೈಶಂಪಾಯನರೇ, ದೇವತೆಗಳಿಂದ ಜನಿಸಿದ ಪಾಂಡವರು ಯಾವ ವಯಸ್ಸಿನಲ್ಲಿ ಹಸ್ತಿನಪುರಕ್ಕೆ ಬಂದರು. ಅವರ ಪೂರ್ಣವಾದ ಆಯುಸ್ಸಿನ ಪ್ರಮಾಣವೇನು?

ವೈಶಂಪಾಯನಃ

ಪಾಂಡವಾನಾಂ ತಥಾऽऽಯುಷ್ಕಂ ಶೃಣು ಕೌರವನಂದನ ।
ಜಗಾಮ ಹಸ್ತಿನಪುರಂ ಷೋಡಶಾಬ್ದೋ ಯುಧಿಷ್ಠಿರಃ ॥೨॥

ಕೌರವನಂದನನೇ, ಪಾಂಡವರ ಆಯುರ್ದಾಯವನ್ನು ಕೇಳು. ಪಾಂಡವರು ಹಸ್ತಿನಪುರಕ್ಕೆ ಬಂದಾಗ ಯುಧಿಷ್ಠಿರನಿಗೆ ಹದಿನಾರು ವರ್ಷಗಳು.

ಪಂಚದಶಾಬ್ದೋ ಭೀಮಸ್ತು ಬೀಭತ್ಸುರ್ವೈ ಚತುರ್ದಶಃ ।
ತ್ರಯೋದಶಾಬ್ದೌ ಚ ಯಮೌ ಜಗ್ಮತುರ್ಗಜಸಾಹ್ವಯಮ್ ॥೩॥

ಭೀಮನಿಗೆ ಹದಿನೈದು ವರ್ಷ, ಅರ್ಜುನನಿಗೆ ಹದಿನಾಲ್ಕು ವರ್ಷ, ನಕುಲಸಹದೇವರಿಗೆ ಹದಿಮೂರು ವರ್ಷಗಳಾಗಿದ್ದಾಗ ಅವರು ಹಸ್ತಿನಪುರಕ್ಕೆ ಬಂದರು.

ತತ್ರ ತ್ರಯೋದಶಾಬ್ದಾನಿ ಧಾರ್ತರಾಷ್ಟ್ರೈಃ ಸಹೋಷಿತಾಃ ।
ಷಟ್ ಚ ಮಾಸಾನ್ ಜತುಗೃಹಾನ್ಮುಕ್ತಾ ಜಾತೋ ಘಟೋತ್ಕಚಃ ॥೪॥

ಅಲ್ಲಿ ಅವರು ದುರ್ಯೋಧನ ಮೊದಲಾದವರ ಜೊತೆಯಲ್ಲಿ ಹದಿಮೂರು ವರ್ಷ ವಾಸಿಸಿದರು. ಅನಂತರ ಆರು ತಿಂಗಳ ಕಾಲವನ್ನು ಅರಗಿನ ಮನೆಯಲ್ಲಿ ಕಳೆದರು. ಅರಗಿನ ಮನೆಯನ್ನು ಬಿಟ್ಟು ಹೊರಟ ಮೇಲೆ ಹುಟ್ಟಿದವನು ಘಟೋತ್ಕಚ.

ಷಣ್ಮಾಸಾನೇಕಚಕ್ರಾಯಾಂ ವರ್ಷಂ ಪಾಂಚಾಲಕೇ ಪುರೇ ।
ಧಾರ್ತರಾಷ್ಟ್ರೈಃ ಸಹೋಷಿತ್ವಾ ಪಂಚ ವರ್ಷಾಣಿ ಭಾರತ ॥೫॥

ಏಕಚಕ್ರನಗರದಲ್ಲಿ ಆರು ತಿಂಗಳ ಕಾಲ ವಾಸಿಸಿ, ಪಾಂಚಾಲ ರಾಜನ ಪಟ್ಟಣದಲ್ಲಿ ಒಂದು ವರ್ಷ ವಾಸಿಸಿದರು. ಭಾರತನೇ, ಪುನಃ ಹಸ್ತಿನಪುರಕ್ಕೆ ಬಂದು ದುರ್ಯೋಧನಾದಿಗಳ ಜೊತೆಯಲ್ಲಿ ಐದು ವರ್ಷ ವಾಸಿಸಿದರು.

ಇಂದ್ರಪ್ರಸ್ಥೇ ವಸಂತಸ್ತೇ ತ್ರೀಣಿ ವರ್ಷಾಣಿ ವಿಂಶತಿಮ್ ।
ದ್ವಾದಶಬ್ದಾತ್ ತಥೈಕಂ ಚ ಬಭ್ರಮುರ್ದ್ಯೂತಕರ್ಶಿತಾಃ ॥೬॥

ಅವರು ಇಂದ್ರಪ್ರಸ್ಥ ನಗರದಲ್ಲಿ ಇಪ್ಪತ್ಮೂರು ವರ್ಷಗಳ ಕಾಲ ವಾಸಿಸಿದರು. ಅನಂತರ ದ್ಯೂತದಲ್ಲಿ ಸೋತು ಹನ್ನೆರಡು ವರ್ಷ ವನವಾಸವನ್ನೂ, ಒಂದು ವರ್ಷ ಅಜ್ಞಾತವಾಸವನ್ನೂ ಮಾಡಿದರು.

ಭುಕ್ತ್ವಾ ಷಟ್ತ್ರಿಂಶತಂ ರಾಜ್ಯಂ ಸಾಗರಾಂತಾಂ ವಸುಂಧರಾಮ್ ।
ಮಾಸೈಃ ಷಡ್ಭಿರ್ಮಹಾತ್ಮಾನಃ ಸರ್ವೇ ಕೃಷ್ಣಪರಾಯಣಾಃ ।
ರಾಜ್ಯೇ ಪರೀಕ್ಷಿತಂ ಸ್ಥಾಪ್ಯ ಇಷ್ಟಾಂ ಗತಿಮವಾಪ್ನುವನ್ ॥೭॥

ಅನಂತರ ಸಾಗರಾಂತವಾದ ಭೂಮಿಯನ್ನು ಮೂವತ್ತಾರು ವರ್ಷಗಳ ಕಾಲ ಆಳಿದರು. ಕೃಷ್ಣಪರಾಯಣರಾದ ಅವರು ಪರೀಕ್ಷಿತನನ್ನು ರಾಜ್ಯದಲ್ಲಿ ಸ್ಥಾಪಿಸಿ ಆರು ತಿಂಗಳ ಅವಧಿಯೊಳಗೆ ತಮಗೆ ಇಷ್ಟವಾದ ಗತಿಯನ್ನು ಹೊಂದಿದರು.

ಏವಂ ಯುಧಿಷ್ಠಿರಸ್ಯಾಪಿ ಆಯುರಷ್ಟೋತ್ತರಂ ಶತಮ್ ।
ಅರ್ಜುನಾತ್ ಕೇಶವೋ ಜ್ಯೇಷ್ಠಃ ತ್ರಿಭಿರ್ಮಾಸೈರ್ಮಹಾಭುಜಃ ।
ಕೃಷ್ಣಾತ್ ಸಂಕರ್ಷಣೋ ಜ್ಯೇಷ್ಠಃ ತ್ರಿಭಿರ್ಮಾಸೈರ್ಮಹಾಬಲಃ ॥೮॥

ಹೀಗೆ ಯುಧಿಷ್ಠಿರನ ಒಟ್ಟು ಆಯುಸ್ಸು ನೂರೆಂಟು ವರ್ಷಗಳು. ಅರ್ಜುನನಿಗಿಂತ ಮಹಾಭುಜನಾದ ಕೇಶವನು ಮೂರು ತಿಂಗಳು ದೊಡ್ಡವನು. ಕೃಷ್ಣನಿಗಿಂತ ಮಹಾಬಲನಾದ ಸಂಕರ್ಷಣನು (ಬಲರಾಮನು) ಮೂರು ತಿಂಗಳು ದೊಡ್ಡವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ವಿಂಶತ್ಯಧಿಕಶತತಮೋಽಧ್ಯಾಯಃ ॥

॥ ಸಂಭವಪರ್ವಣಿ ಅಷ್ಟಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ- ಅಧ್ಯಾಯ-೧೪

ವರ್ಧತ್ಸು ಪಾಂಡುತನಯೇಷು ಚತುರ್ದಶಂ ತು
ಜನ್ಮರ್ಕ್ಷಮಾಸ ತನಯಸ್ಯ ಸಹಸ್ರದೃಷ್ಟೇಃ ।
ಪ್ರತ್ಯಾಬ್ದಿಕಂ ಮುನಿಗಣಾನ್ ಪರಿವೇಷಯಂತೀ
ಕುಂತೀ ತದಾಸ ಬಹುಕಾರ್ಯಪರಾ ನಯಜ್ಞಾ ॥೪೪॥

ಇತ್ತ ಪಾಂಡವರು ಬೆಳೆಯುತ್ತಿದ್ದಾಗ ಅರ್ಜುನನಿಗೆ ಹದಿನಾಲ್ಕನೆ ವಾರ್ಷಿಕ ಜನ್ಮನಕ್ಷತ್ರದ ದಿನ ಬಂದಿತ್ತು. ಆಗ ನೀತಿಜ್ಞಳಾದ ಕುಂತಿ ಮುನಿ ಸಮೂಹಗಳಿಗೆ ಅನ್ನ ಬಡಿಸುತ್ತ ಬಹಳ ಕಾರ್ಯತತ್ಪರಳಾಗಿದ್ದಳು.

ತತ್ಕಾಲ ಏವ ನೃಪತಿಃ ಸಹ ಮಾದ್ರವತ್ಯಾ
ಪುಂಸ್ಕೋಕಿಲಾಕುಲಿತಪುಲ್ಲವನಂ ದದರ್ಶ ।
ತಸ್ಮಿನ್ ವಸಂತಪವನಸ್ಪರ್ಶೇಧಿತಃ ಸ
ಕಂದರ್ಪಮಾರ್ಗಣವಶಂ ಸಹಸಾ ಜಗಾಮ ॥೪೫॥

ಅದೇ ಕಾಲದಲ್ಲಿ ಪಾಂಡುರಾಜ ಮಾದ್ರಿಯೊಂದಿಗೆ ಕೋಗಿಲೆಗಳಿಂದ ತುಂಬಿದ, ವಿಕಸಿತವಾದ ವನವನ್ನು ಕಂಡ. ಅಲ್ಲಿ ವಸಂತ ಮಾರುತಸ್ಪರ್ಶದಿಂದ ಉದ್ರಿಕ್ತನಾದ ಪಾಂಡು ಅಕಸ್ಮಾತ್ ಮನ್ಮಥ ಬಾಣಕ್ಕೆ ವಶನಾದ.

ಜಗ್ರಾಹ ತಾಮಥ ತಯಾ ರಮಮಾಣ ಏವ
ಯಾತೋ ಯಮಸ್ಯ ಸದನಂ ಹರಿಪಾದಸಂಗೀ ।
ಪೂರ್ವಂ ಶಚೀರಮಣಮಿಚ್ಛತ ಏಷ ವಿಘ್ನಂ
ಶಕ್ರಸ್ಯ ತದ್ದರ್ಶನೋಪಗತೋ ಹಿ ಚಕ್ರೇ ॥೪೬॥

ಪಾಂಡು ರತಿಕ್ರೀಡೆಗಾಗಿ ಮಾದ್ರಿಯನ್ನು ಹಿಡಿದುಕೊಂಡ. ಅವಳೊಡನೆ ರಮಿಸುತ್ತಿದ್ದಂತೆ ಹರಿಪಾದಸಕ್ತನಾದ ಆತ ಯಮಸದನವನ್ನು ಸೇರಿದ. ಹಿಂದೆ ಇಂದ್ರ ಶಚಿಯೊಡನೆ ರಮಿಸಲು ಬಯಸಿದ್ದಾಗ ಈತ ಅವನ ದರ್ಶನಕ್ಕಾಗಿ ಹೋಗಿ ವಿಘ್ನ ಮಾಡಿದ್ದ.

ತೇನೈವ ಮಾನುಷಮವಾಪ್ಯ ರತಿಸ್ಥ ಏವ
ಪಂಚತ್ವಮಾಪ ರತಿವಿಘ್ನಮಪುತ್ರತಾಂ ಚ ।
ಸ್ವಾತ್ಕೋತ್ತಮೇಷ್ವಥ ಸುರೇಷು ವಿಶೇಷತಶ್ಚ
ಸ್ವಲ್ಪೋಽಪಿ ದೋಷ ಉರುತಾಮಭಿಯಾತಿ ಯಸ್ಮಾತ್ ॥೪೭॥

ಅದರಿಂದಲೇ ಮನುಷ್ಯ ಜನ್ಮ ಹೊಂದಿ ರತಿಕ್ರೀಡೆಯಲ್ಲಿದ್ದಾಗ ಮರಣಹೊಂದಿದ. ಅದರಿಂದಲೇ ಅವನಿಗೆ ರತಿಕ್ರೀಡೆಗೆ ವಿಘ್ನಬಂದಿತ್ತು ಮಕ್ಕಳೂ ಆಗಲಿಲ್ಲ. ಏಕೆಂದರೆ ತನಗಿಂತ ಉತ್ತಮರಾದವರಲ್ಲಿ ಮಾಡುವ ಅಲ್ಪಾಪರಾಧವೂ ಮಹತ್ತಾಗುತ್ತದೆ. ವಿಶೇಷವಾಗಿ ಸ್ವೋತ್ತಮ ದೇವತೆಗಳಲ್ಲಿ ಮಾಡುವ ಅಪರಾಧ ಇನ್ನೂ ಮಹತ್ತಾಗುತ್ತದೆ.

ಮಾದ್ರೀ ಪತಿಂ ಮೃತಮವೇಕ್ಷ್ಯ ರುರಾವ ದೂರಾತ್
ತಚ್ಛ್ರುವುಶ್ಚ ಪೃಥಯಾ ಸಹ ಪಾಂಡುಪುತ್ರಾಃ ।
ತೇಷ್ವಾಗತೇಷು ವಚನಾದಪಿ ಮಾದ್ರವತ್ಯಾಃ
ಪುತ್ರಾನ್ನಿವಾರ್ಯ ತು ಪೃಥಾ ಸ್ವಯಮತ್ರ ಚಾಗಾತ್ ॥೪೮॥

ಪತಿ ಮೃತನಾದುದನ್ನು ಕಂಡು ಮಾದ್ರಿ ಕೂಗಿಕೊಂಡಳು. ಕುಂತಿಯೊಂದಿಗೆ ಪಾಂಡವರೂ ದೂರದಿಂದಲೆ ಅದನ್ನು ಕೇಳಿದರು. ಬರಲು ಹೊರಟರು. ಆದರೆ ಕುಂತಿ ಮಾದ್ರಿಯ ಮಾತನ್ನು ಕೇಳಿ ಅವರನ್ನು ತಡೆದು ತಾನೊಬ್ಬಳೆ ಮಾದ್ರಿಯ ಬಳಿಗೆ ಬಂದಳು.

ಪತ್ಯುಃ ಕಳೇಬರಮವೇಕ್ಷ್ಯ ನಿಶಮ್ಯ ಮಾದ್ರ್ಯಾಃ
ಕುಂತೀ ಭೃಶಂ ವ್ಯಥಿತಹೃತ್ಕಮಳೈವ ಮಾದ್ರೀಮ್ ।
ಧಿಕೃತ್ಯ ಚಾನುಮರಣಾಯ ಮತಿಂ ಚಕಾರ
ತಸ್ಯಾಃ ಸ್ವನೋ ರುದಿತಜಃ ಶ್ರುತ ಆಶು ಪಾರ್ಥೈಃ ॥೪೯॥

ಕುಂತಿ ಪತಿಯ ಮೃತಶರೀರವನ್ನು ಕಂಡು, ಮರಣ ಹೇಗಾಯಿತೆನ್ನುವುದನ್ನು ಮಾದ್ರಿಯಿಂದ ಕೇಳಿ, ಬಹಳ ವ್ಯಥೆ ತುಂಬಿದ ಹೃದಯ ಕಮಲ ಉಳ್ಳವಳಾಗಿ ಮಾದ್ರಿಯನ್ನು ಬೈದು ಪತಿಸಹಗಮನಕ್ಕೆ ಸಂಕಲ್ಪಮಾಡಿದಳು. ಕೂಡಲೆ ಅವಳು ಅಳುವ ಶಬ್ದ ಪಾಂಡವರಿಗೆ ಕೇಳಿಸಿತು.

ತೇಷ್ವಾಗತೇಷ್ವಧಿಕ ಆಸ ವಿರಾವ ಏತಂ
ಸರ್ವೇಽಪಿ ಶುಶ್ರುವು ಋಷಿಪ್ರವರಾ ಅಥಾತ್ರ ।

ಆಜಗ್ಮುರುತ್ತಮಕೃಪಾ ಋಷಿಲೋಕಮಧ್ಯೇ
ಪತ್ನೀನೃಪಾನುಗಮನಾಯ ಚ ಪಸ್ಪೃಧಾತೇ ॥೫೦॥

ಅವರು ಬಂದಾಗ ಅಳುವ ಧ್ವನಿ ಇನ್ನೂ ಹೆಚ್ಚಿತು. ಅಲ್ಲಿದ್ದ ಶ್ರೇಷ್ಠ ಋಷಿಗಳೆಲ್ಲರೂ ಅದನ್ನು ಕೇಳಿದರು, ಋಷಿ ಜನರುಗಳ ನಡುವೆ ಹೆಚ್ಚು ಕೃಪಾಶಾಲಿಗಳಾದ ಅವರು ಬಂದರು. ರಾಜನೊಡನೆ ಸಹಗಮನಕ್ಕೆ ಇಬ್ಬರು ಪತ್ನಿಯರೂ ಸ್ಪರ್ಧಿಸಿದರು.

ತೇ ಸನ್ನಿವಾರ್ಯ ತು ಪೃಥಾಮಥ ಮಾದ್ರವತ್ಯಾ
ಭರ್ತುಃ ಸಹಾನುಗಮನಂ ಬಹುಚಾರ್ಥಯಂತ್ಯಾಃ ।
ಸಂವಾದಮೇವ ನಿಜದೋಷಮವೇಕ್ಷ್ಯ ತಸ್ಯಾ-
ಶ್ಚಕ್ರುಃ ಸದಾವಗತ ಭಾಗವತೋಚ್ಚಧರ್ಮಾಃ ॥೫೧॥

ಸದಾ ಉತ್ತಮ ಭಾಗವತ ಧರ್ಮಜ್ಞರಾದ ಆ ಋಷಿಗಳು ಕುಂತಿಯನ್ನು ತಡೆದು ಪತಿಯೊಡನೆ ಸಹಗಮನಕ್ಕಾಗಿ ಬಹಳವಾಗಿ ಬೇಡುತ್ತಿದ್ದ ಮಾದ್ರಿಗೇ ಅವಳ ತಪ್ಪನ್ನು ಗಮನಿಸಿ ಸಮ್ಮತಿಸಿದರು.

ಭರ್ತುರ್ಗುಣೈರನಧಿಕೌ ತನಯಾರ್ಥಮೇವ
ಮಾದ್ರ್ಯಾ ಕೃತೌ ಸುರವರಾವಧಿಕೌ ಸ್ವತೋಽಪಿ ।
ತೇನೈವ ಭರ್ತೃಮೃತಿಹೇತುರಭೂತ್ ಸಮಸ್ತ
ಲೋಕೈಶ್ಚ ನಾತಿಮಹಿತಾ ಸುಗುಣಾಪಿ ಮಾದ್ರೀ ॥೫೨॥

ಮಾದ್ರಿ ಅಶ್ವಿನೀ ದೇವತೆಗಳನ್ನು ಸಂತತಿಗಾಗಿ ಆಹ್ವಾನಿಸಿದ್ದಳು. ಅವಳಿಗೆ ಅವರು ತನಗಿಂತ ಹೆಚ್ಚಿನವರಾದರೂ ತನ್ನ ಪತಿಯ ಗುಣಗಳಿಗಿಂತ ಹೆಚ್ಚಿನ ಗುಣದವರಲ್ಲ. ಅದರಿಂದಲೆ ಅವಳು ಪತಿಯ ಮರಣಕ್ಕೆ ಕಾರಣಳಾದಳು. ಸುಗುಣವತಿಯಾಗಿದ್ದೂ ಜನರಿಂದ ಹೆಚ್ಚಿನ ಪ್ರಶಂಸೆ ಪಡೆಯಲಾರದೆ ಹೋದಳು.

ಪಾಂಡೋಃ ಸುತಾ ಮುನಿಗಣೈಃ ಪಿತೃಮೇಧಮತ್ರ
ಚಕ್ರುರ್ಯಥಾವದಥ ತೇನ ಸಹೈವ ಮಾದ್ರೀ ।
ಹುತ್ವಾತ್ಮದೇಹಮುರುಪಾಪಮದಃ ಕೃತಂ ಚ
ಸಮ್ಮಾರ್ಜ್ಯ ಲೋಕಮಗಮನ್ನಿಜಭರ್ತುರೇವ ॥೫೩॥

ಪಾಂಡವರು ಬದರಿಕಾಶ್ರಮದಲ್ಲಿ ಮುನಿ ಸಮೂಹಗಳ ಸಹಾಯದಿಂದ ಪಿತೃಯಜ್ಞವನ್ನು ವಿದ್ಯುಕ್ತವಾಗಿ ಮಾಡಿದರು. ಬಳಿಕ ಮಾದ್ರಿ ಪತಿಯ ಶರೀರದೊಂದಿಗೆ ತನ್ನ ಶರೀರವನ್ನು ಚಿತಾಗ್ನಿಯಲ್ಲಿ ಹೋಮಿಸಿಕೊಂಡು ಈ ಜನ್ಮದಲ್ಲಿ ಮಾಡಿದ ಮಹಾಪಾಪವನ್ನು ಪರಿಹರಿಸಿಕೊಂಡು ತನ್ನ ಪತಿಲೋಕವನ್ನೇ ಸೇರಿದಳು.

ಪಾಂಡುಶ್ಚ ಪುತ್ರಕಗುಣೈಃ ಸ್ವಗುಣೈಶ್ಚ ಸಾಕ್ಷಾತ್
ಕೃಷ್ಣಾತ್ಮಜಃ ಸತತಮಸ್ಯ ಪದೈಕಭಕ್ತಃ ।
ಲೋಕಾನವಾಪ ವಿಮಲಾನ್ ಮಹಿತಾನ್ ಮಹದ್ಭಿಃ
ಕಿಂ ಚಿತ್ರಮತ್ರ ಹರಿಪಾದವಿನಮ್ರಚಿತ್ತೇ ॥೫೪॥

ಪಾಂಡು ಸಾಕ್ಷಾತ್ ವ್ಯಾಸರ ಔರಸಪುತ್ರ. ಸದಾ ಅವರ ಪಾದಗಳಲ್ಲಿಯೆ ಭಕ್ತಿ ಇಟ್ಟುಕೊಂಡವ. ಅವನು ಮಕ್ಕಳ ಸದ್ಗುಣಗಳಿಂದಲೂ ತನ್ನ ಸದ್ಗುಣಗಳಿಂದಲೂ ಮಹಾತ್ಮರು ಆದರಿಸುವ ಪವಿತ್ರ ಲೋಕಗಳನ್ನೆ ಸಂಪಾದಿಸಿದ. ಹರಿಪಾದಗಳಲ್ಲಿ ಭಕ್ತಿಪೂರ್ಣ. ಹೃದಯಶಾಲಿಯಾದ ಪಾಂಡುರಾಜನಿಗೆ ಉತ್ತಮಲೋಕ ಪ್ರಾಪ್ತಿಯಾದರೆ ಏನಾಶ್ಚರ್ಯ?

★ ★ ★ ★

ನೂರ ಇಪ್ಪತ್ತೊಂದನೆಯ ಅಧ್ಯಾಯ

(ಪಾಂಡುವಿನ ಮರಣ, ಮಾದ್ರಿಯ ಸಹಗಮನ, ಉತ್ತರಕ್ರಿಯೆ.)

ವೈಶಂಪಾಯನಃ

ದರ್ಶನೀಯಾಂಸ್ತತಃ ಪುತ್ರಾನ್ ಪಾಂಡುಃ ಪಂಚ ಮಹಾವನೇ ।
ತಾನ್ ಪಶ್ಯನ್ ಪರ್ವತೇ ರಮ್ಯೇ ಸ್ವಬಾಹುಬಲಪಾಲಿತಾನ್ ॥೧॥

ಪಾಂಡುವು ಮಹಾರಣ್ಯದಲ್ಲಿ ವಾಸಮಾಡುತ್ತಾ ತನ್ನ ಬಾಹುಬಲದಿಂದ ರಕ್ಷಿತರಾದ ಐದು ಪುತ್ರರನ್ನು ನೋಡುತ್ತಾ ರಮ್ಯವಾದ ಪರ್ವತದಲ್ಲಿ ಸ್ವಲ್ಪಕಾಲವನ್ನು ಕಳೆದನು.

ಸುಪುಷ್ಪಿತವನೇ ಕಾಲೇ ಪ್ರವೃತ್ತೇ ಮಧುಮಾಧವೇ ।
ಪೂರ್ಣೇ ಚತುರ್ದಶೇ ವರ್ಷೇ ಫಲ್ಗುನಸ್ಯ ಚ ಧೀಮತಃ ॥೨॥

ಮೇಧಾವಿಯಾದ ಅರ್ಜುನನಿಗೆ ಹದಿನಾಲ್ಕು ವರ್ಷಗಳು ತುಂಬಿದಾಗ ವಸಂತಕಾಲವು ಪ್ರಾಪ್ತವಾಗಿ ಆ ವನದ ವೃಕ್ಷಗಳೆಲ್ಲವೂ ಪುಷ್ಪಗಳಿಂದ ಕೂಡಿದ್ದವು.

ತದಾ ಉತ್ತರಫಲ್ಗುನ್ಯಾಂ ಪ್ರವೃತ್ತೇ ಸ್ವಸ್ತಿವಾಚನೇ ।
ರಕ್ಷಣೇ ವಿಸ್ಮಿತಾ ಕುಂತೀ ವ್ಯಗ್ರಾ ಬ್ರಾಹ್ಮಣಭೋಜನೇ ।
ಪುರೋಹಿತೇನ ಸಹಿತಾ ಬ್ರಾಹ್ಮಣಾನ್ ಪರ್ಯವೇಷಯತ್ ॥೩॥

ಆಗ ಉತ್ತರಫಲ್ಗುಣಿ ನಕ್ಷತ್ರದ ದಿವಸ ಅರ್ಜುನನ ಜನ್ಮದಿನದ ಪ್ರಯುಕ್ತವಾಗಿ ಸ್ವಸ್ತಿವಾಚನವು ನಡೆದಿರಲು ಮಕ್ಕಳ ರಕ್ಷಣೆಯನ್ನು ಒಂದು ಕ್ಷಣ ಮರೆತಿದ್ದ ಕುಂತಿಯು ಬ್ರಾಹ್ಮಣ ಭೋಜನದಲ್ಲಿ ನಿರತಳಾಗಿ ಬ್ರಾಹ್ಮಣರಿಗೆ ಭೋಜನವನ್ನು ಬಡಿಸುತ್ತಿದ್ದಳು.

ತಸ್ಮಿನ್ ಕಾಲೇ ಸಮಾಹೂಯ ಮಾದ್ರೀಂ ಮದನಮೋಹಿತಃ ।
ಭೂತಸಮ್ಮೋಹನೇ ಕಾಲೇ ಸಭಾರ್ಯೋ ವ್ಯಚರದ್ ವನೇ ॥೪॥

ಎಲ್ಲಾ ಪ್ರಾಣಿಗಳಿಗೂ ಸಂಮೋಹವನ್ನುಂಟು ಮಾಡುವ ವಸಂತ ಕಾಲದಲ್ಲಿ ಕಾಮಮೋಹಿತನಾದ ಪಾಂಡುವು ಮಾದ್ರಿಯನ್ನು ಕರೆದು ಅವಳ ಜೊತೆಯಲ್ಲಿ ಕಾಡಿನಲ್ಲಿ ತಿರುಗಾಡಿದನು.

ಪಲಾಶೈಸ್ತಿಲಕೈಶ್ಚೂತೈಶ್ಚಂಪಕೈಃ ಪಾರಿಭದ್ರಕೈಃ ।
ಕರ್ಣಿಕಾರೈರಶೋಕೈಶ್ಚ ಮಲ್ಲಿಕೈರತಿಮುಕ್ತಕೈಃ ।
ವಕುಲೈಸ್ತಿಂದುಕೈಃ ಸಾಲೈಃ ಪನಸೈರ್ವನಕಿಂಶುಕೈಃ ॥೫॥

ಅನ್ಯೈಶ್ಚ ಬಹುಭಿರ್ವೃಕ್ಷೈರ್ಲತಾಪುಷ್ಪಫಲೈರ್ಯುತಮ್ ।
ಜಲಸ್ಥಾನೈಶ್ಚ ಬಹುಭಿಃ ಪದ್ಮಿನೀಭಿಶ್ಚ ಶೋಭಿತಮ್ ॥೬॥

ಪಾಂಡೋರ್ವನಂ ತು ಸಂಪ್ರೇಕ್ಷ್ಯ ಪ್ರಜಜ್ಞೇ ಹೃದಿಮನ್ಮಥಃ ।
ಮತ್ತಭ್ರಮರಸಂಗೀತಂ ಕೋಕಿಲಸ್ವನಮಿಶ್ರಿತಮ್ ॥೭॥

ಪಲಾಶಗಳಿಂದಲೂ, ತಿಲಕ, ಚೂತ, ಚಂಪಕ, ಪಾರಿಭದ್ರಕ ವೃಕ್ಷಗಳಿಂದಲೂ, ಕರ್ಣಿಕಾರ, ಅಶೋಕ, ಮಲ್ಲಿಕ, ಅತಿಮುಕ್ತಕ, ಬಕುಲ, ತಿಂದುಕ, ಸಾರ, ಪನಸ, ವನಕಿಂಶುಕಗಳಿಂದಲೂ ಮತ್ತು ಇನ್ನೂ ಅನೇಕ ಲತಾ ಪುಷ್ಪ ಫಲಗಳಿಂದ ಕೂಡಿದ ವೃಕ್ಷಗಳಿಂದಲೂ, ಕಮಲದಿಂದ ಶೋಭಿತವಾದ ಜಲಸ್ಥಾನಗಳಿಂದಲೂ

ಮನೋಹರವಾಗಿದ್ದ ಆ ಕಾನನವನ್ನು ನೋಡಿ ಪಾಂಡುವಿನ ಮನಸ್ಸಿನಲ್ಲಿ ಕಾಮವು ಉಂಟಾಯಿತು.

ಗಾಯಮಾನೈಸ್ತುಗಂಧರ್ವೈಃ ಪುರಾ ನಾಗಪುರೇ ಯಥಾ ।
ಪ್ರಹೃಷ್ಟಮನಸಂ ತತ್ರ ವಿಹರಂತಂ ಯಥಾಽಮರಮ್ ।
ತಂ ಮಾದ್ರ್ಯನುಜಗಾಮೈಕಾ ವಸನೇ ಭಿಭ್ರತೀ ಶುಭೇ ॥೮॥

ಮದಿಸಿದ ಭ್ರಮರಗಳ ಝೇಂಕಾರದಿಂದ ಮತ್ತು ಕೋಕಿಲ ಸ್ವರಗಳಿಂದ ಕೂಡಿದ ಆ ಕಾನನವು ಹಸ್ತಿನಪುರದಲ್ಲಿ ಗಂಧರ್ವರು ಗಾನ ಮಾಡಿದಂತೆ ತೋರಿ, ದೇವತೆಯಂತೆ ಸಂತೋಷದಿಂದ ವಿಹರಿಸುತ್ತಿದ್ದ ಆ ರಾಜನನ್ನು ಶುಭ್ರವಾದ ತೆಳುವಸ್ತ್ರಗಳನ್ನು ಧರಿಸಿದ್ದ, ಒಳ್ಳೆಯ ವಯಸ್ಸಿನಲ್ಲಿದ್ದ ಮಾದ್ರಿಯೊಬ್ಬಳೇ ಹಿಂಬಾಲಿಸಿದಳು.

ಸಮೀಕ್ಷಮಾಣಸ್ಯ ತು ತಾಂ ವಯಃಸ್ಥಾಂ ತನುವಾಸಸಮ್ ।
ತಸ್ಯ ಕಾಮಃ ಪ್ರವವೃಧೇ ಗಹನೇಽಗ್ನಿರಿವೋತ್ಥಿತಃ ॥೯॥

ತೆಳುವಾದ ವಸ್ತ್ರವನ್ನು ಧರಿಸಿದ್ದ, ಒಳ್ಳೆಯ ವಯಸ್ಸಿನಲ್ಲಿದ್ದ ಅನುರೂಪಳಾದ ಆ ಪದ್ಮನೇತ್ರೆಯನ್ನು ಏಕಾಂತದಲ್ಲಿ ನೋಡುತ್ತಿದ್ದಂತೆ ರಾಜನಿಗೆ ಕಾಡಿನಲ್ಲಿ ಅಗ್ನಿಯು ಅಭಿವೃದ್ಧಿಯಾದಂತೆ ಕಾಮವು ಅಭಿವೃದ್ಧಿಯನ್ನು ಹೊಂದಿತು.

ರಹಸ್ಯಾತ್ಮಸಮಾಂ ದೃಷ್ಟ್ವಾ ರಾಜಾ ರಾಜೀವಲೋಚನಾಮ್ ।
ನ ಶಶಾಕ ನಿಯಂತುಂ ತಂ ಕಾಮಂ ಕಾಮಬಲಾತ್ಕೃತಃ ॥೧೦॥

ಕಾಮವಶನಾದ ರಾಜನು ವಸಂತಋತುವಿನಲ್ಲಿ ಏಕಾಂತದಲ್ಲಿ ತನಗೆ ಅನುರೂಪಳಾದ ಆ ಕಮಲನಯನೆಯನ್ನು ನೋಡಿ, ಉಂಟಾದ ಕಾಮವನ್ನು ನಿಯಂತ್ರಿಸಲು ಸಮರ್ಥನಾಗಲಿಲ್ಲ.

ಜಿಷ್ಣೋಶ್ಚತುರ್ದಶೇ ವರ್ಷೇ ಋತೌ ಮಾದ್ರೀಮಲಂಕೃತಾಮ್ ।
ಆಜುಹಾವ ತತಃ ಪಾಂಡುಃ ಪರೀತಾತ್ಮಾ ಯಶಸ್ವಿನೀಮ್ ।
ತತ ಏನಾಂ ಬಲಾದ್ ರಾಜಾ ಜಗ್ರಾಹ ಚ ರಹೋಗತಃ ॥೧೧॥

ಅರ್ಜುನನಿಗೆ ಹದಿನಾಲ್ಕು ವರ್ಷ ತುಂಬಿರಲು ವಸಂತ ಋತುವಿನಲ್ಲಿ ಕಾಲವಶನಾಗಲಿದ್ದ ಪಾಂಡುವು ಕೀರ್ತಿಶಾಲಿನಿಯಾದ ಮತ್ತು ಅಲಂಕೃತಳಾದ, ಮಾದ್ರಿಯನ್ನು ಸಮೀಪಕ್ಕೆ ಏಕಾಂತದಲ್ಲಿ ಸೆಳೆದುಕೊಂಡನು.

ವಾರ್ಯಮಾಣಸ್ತಯಾ ದೇವ್ಯಾ ವಿಸ್ಫುರಂತ್ಯಾ ಯಥಾಬಲಮ್ ।
ಸ ತು ಕಾಮಪರೀತಾತ್ಮಾ ತಂ ಶಾಪಂ ನಾನ್ವಬುಧ್ಯತ ॥೧೨॥

ಅನಂತರ ರಾಜನು, ಏಕಾಂತದಲ್ಲಿ ಅವಳು ಹೆದರಿ ತನ್ನ ಶಕ್ತಿಯಿಂದ ಬಿಡಿಸಿಕೊಳ್ಳಲು ಪ್ರಯತ್ನಪಡುತ್ತಿದ್ದರೂ, ಕಿಂದಮರ ಶಾಪವನ್ನು ಅರಿಯದೆ ಮನ್ಮಥಾಕ್ರಾಂತನಾಗಿ ಅವಳನ್ನು ಹಿಡಿದುಕೊಂಡನು.

ಮಾದ್ರೀಂ ಮೈಥುನಧರ್ಮೇಣ ಗಚ್ಛಮಾನೋ ಬಲಾದಿವ ।
ಜೀವಿತಾಂತಾಯ ಕೌರವ್ಯೋ ಮನ್ಮಥಸ್ಯ ವಶಂ ಗತಃ ॥೧೩॥

ಕಾಮವಶನಾಗಿ ಮಾದ್ರಿಯ ಜೊತೆಯಲ್ಲಿ ಮೈಥುನಕ್ರಿಯೆಗೆ ಉದ್ಯುಕ್ತನಾದ ರಾಜನು ಆ ಸಮಯದಲ್ಲಿ ಕಾಮಕ್ಕೆ ವಶನಾದನು.

ಶಾಪಜಂ ಭಯಮುತ್ಸೃಜ್ಯ ಜಗಾಮೈವ ಬಲಾತ್ ಪ್ರಿಯಾಮ್ ।
ತಸ್ಯ ಕಾಮಾತ್ಮನೋ ಬುದ್ಧಿಃ ಸಾಕ್ಷಾತ್ ಕಾಲೇನ ಮೋಹಿತಾ ।
ಸಂಪ್ರಮಥ್ಯೇಂದ್ರಿಯಗ್ರಾಮಂ ಪ್ರನಷ್ಟಾ ಸಹ ಚೇತಸಾ ॥೧೪॥

ಮರಣವನ್ನು ಹೊಂದುವುದಕ್ಕಾಗಿಯೋ ಎಂಬುವಂತೆ ಮನ್ಮಥನ ವಶನಾದ ಕುರುರಾಜನಾದ ಪಾಂಡುವು ಶಾಪದ ಭಯವನ್ನು ತ್ಯಜಿಸಿ, ತನ್ನ ಬಲದಿಂದ ಮಾದ್ರಿಯ ಸಂಗಮವನ್ನು ಮಾಡಿದನು. ಕಾಲದಿಂದ ಮೋಹಿತವಾದ, ಕಾಮಾತ್ಮನಾದ ಅವನ ಬುದ್ಧಿಯು ಇಂದ್ರಿಯ ಸಮೂಹವನ್ನು ಕಲಕಿ, ಸ್ಮರಣಶಕ್ತಿಯ ಜೊತೆಯಲ್ಲಿ ನಷ್ಟವಾಗಿದ್ದಿತು.

ಸ ತಯಾ ಸಹ ಸಂಗಮ್ಯ ಭಾರ್ಯಯಾ ಕುರುಸತ್ತಮಃ ।
ಪಾಂಡುಃ ಪರಮಧರ್ಮಾತ್ಮಾ ಯುಯುಜೇ ಕಾಲಧರ್ಮಣಾ ।
ಕ್ಷಣೇನಾಭ್ಯಪತದ್ ರಾಜಾ ರಾಜಧಾನೀಂ ಯಮಸ್ಯ ವೈ ॥೧೫॥

ಕುರುಶ್ರೇಷ್ಠನೂ, ಪರಮಧರ್ಮಾತ್ಮನೂ, ಆದ ಪಾಂಡುವು ತನ್ನ ಪತ್ನಿಯ ಜೊತೆಯಲ್ಲಿ ಸಮಾಗಮವನ್ನು ಹೊಂದಿ ವಿಧಿವಶನಾದನು. ರಾಜನು, ಒಂದು ಕ್ಷಣದಲ್ಲಿ ಯಮನ ರಾಜಧಾನಿಯನ್ನು ತಲುಪಿದನು.

ತತೋ ಮಾದ್ರೀ ಸಮಾಲಿಂಗ್ಯ ರಾಜಾನಂ ಗತಚೇತಸಮ್ ।
ಆಕ್ರೋಶಪರಮಾಯತ್ತಾ ಚಕ್ರವಾಕೀ ಯಥಾ ಪತಿಮ್ ॥೧೬॥

ಆಗ ಮಾದ್ರಿಯು ಗತಪ್ರಾಣನಾದ ರಾಜನನ್ನು ಆಲಿಂಗಿಸಿ ಪತಿಯನ್ನು ಕಳೆದುಕೊಂಡ ಚಕ್ರವಾಕ ಪಕ್ಷಿಯಂತೆ ಆಕ್ರೋಶವನ್ನು ಮಾಡಲು ಪ್ರಾರಂಭಿಸಿದಳು.

ತಂ ಶ್ರುತ್ವಾ ಕರುಣಂ ಶಬ್ದಂ ಸಹಸೋತ್ಪತಿತಂ ತದಾ ।
ಸಹಪುತ್ರಾ ತತಃ ಕುಂತೀ ಮಾದ್ರೀಪುತ್ರೌ ಚ ಪಾಂಡವೌ ।
ಆಜಗ್ಮುಃ ಸಹಿತಾಸ್ತತ್ರ ಯತ್ರ ರಾಜಾ ತಥಾಗತಃ ॥೧೭॥

ಆ ಕರುಣಾಜನಕಶಬ್ದವು ಇದ್ದಕ್ಕಿದ್ದಂತೆಯೇ ಹೊರಹೊಮ್ಮಿದುದನ್ನು ಕೇಳಿ ಕುಂತಿಯು ತನ್ನ ಮಕ್ಕಳ ಜೊತೆಯಲ್ಲಿ ಮತ್ತು ಮಾದ್ರಿಯ ಪುತ್ರರ ಜೊತೆಯಲ್ಲಿ ರಾಜನು ಆ ಪರಿಸ್ಥಿತಿಯಲ್ಲಿ ಬಿದ್ದಿದ್ದ ಸ್ಥಳಕ್ಕೆ ಧಾವಿಸಿ ಬಂದಳು.

ತತೋ ಮಾದ್ರ್ಯಬ್ರವೀದ್ ರಾಜನ್ ಆರ್ತಾ ಕುಂತೀಮಿದಂ ವಚಃ ।
ಏಕೈವ ತ್ವಮಿಹಾಗಚ್ಛ ತಿಷ್ಠತಾಂ ತತ್ರ ದಾರಕಾಃ ॥೧೮॥

ಆಗ ಮಾದ್ರಿಯು ಆರ್ತಳಾಗಿ ಕುಂತಿಯನ್ನು ಕುರಿತು 'ನೀನೊಬ್ಬಳೇ ಇಲ್ಲಿ ಬಾ, ಮಕ್ಕಳು ಅಲ್ಲಿಯೇ ಇರಲಿ' ಎಂದು ಹೇಳಿದಳು.

ಏತಚ್ಛ್ರುತ್ವಾ ವಚಸ್ತಸ್ಯಾಃ ತತ್ಸೈವಾವಾರ್ಯ ದಾರಕಾನ್ ।
ಹತಾऽಹಮಿತಿ ವಿಕ್ರುಶ್ಯ ಸಹಸೋಪಜಗಾಮ ತಾಮ್ ॥೧೯॥

ದೃಷ್ಟ್ವಾ ಮಾದ್ರೀಂ ಚ ಪಾಂಡುಂ ಚ ಶಯಾನೌ ಧರಣೀತಳೇ
ಕುಂತೀ ಶೋಕಪರೀತಾಂಗೀ ವಿಲಲಾಪ ಸುದುಃಖಿತಾ ॥೨೦॥

ಅವಳ ಈ ಮಾತನ್ನು ಕೇಳಿದ ಕುಂತಿಯು ಮಕ್ಕಳನ್ನು ದೂರದಲ್ಲಿಯೇ ನಿಲ್ಲಿಸಿ, 'ಅಯ್ಯೋ ನಾನು ಸತ್ತೆ' ಎಂದು ಕಿರುಚುತ್ತಾ ಮಾದ್ರಿ ಇದ್ದ ಸ್ಥಳಕ್ಕೆ ಶೀಘ್ರವಾಗಿ ಬಂದಳು. ಮಾದ್ರಿ ಮತ್ತು ಪಾಂಡುರಾಜನು ಭೂಮಿಯ ಮೇಲೆ ಮಲಗಿರುವುದನ್ನು ನೋಡಿ ಶೋಕತಪ್ತಳಾಗಿ ಬಹಳ ದುಃಖದಿಂದ ಕುಂತಿಯು ವಿಲಾಪವನ್ನು ಮಾಡಿದಳು.

ಕುಂತೀ

ರಕ್ಷಮಾಣೋ ಮಯಾ ನಿತ್ಯಂ ಧೀರಃ ಸತತಮಾತ್ಮವಾನ್ ।
ಕಥಂ ತ್ವಾಮಪ್ಯತಿಕ್ರಾಂತಃ ಶಾಪಂ ಜಾನನ್ ವನೌಕಸಃ ॥೨೧॥

ಋಷಿಯ ಶಾಪವನ್ನು ತಿಳಿದಿದ್ದ ಯಾವಾಗಲೂ ಧೈರ್ಯಶಾಲಿಯಾಗಿದ್ದ ರಾಜನು, ಯಾವಾಗಲೂ ನನ್ನಿಂದ ರಕ್ಷಿಸಲ್ಪಡುತ್ತಿದ್ದವನು ಹೇಗೆ ನಿನ್ನನ್ನು ಮೀರಿದನು?

ಋಷಿ ನಾಮ ತ್ವಯಾ ಮಾದ್ರಿ ರಕ್ಷಿತವ್ಯೋ ನರಾಧಿಪಃ ।
ಸಾ ಕಥಂ ಲೋಭಿತವತೀ ವಿಜನೇ ತ್ವಂ ನರಾಧಿಪಮ್ ॥೨೨॥

ಮಾದ್ರಿ ನೀನು ರಾಜನನ್ನು ರಕ್ಷಿಸಬೇಕಾದವಳಷ್ಟೇ ! ಅಂತಹ ನೀನು ಏಕಾಂತದಲ್ಲಿ ಏಕೆ ರಾಜನನ್ನು ಮೋಹಗೊಳಿಸಿದೆ?

ಮಾದ್ರೀ

ವಿಧಿನಾ ಚೋದಿತಸ್ಯಾಸ್ಯ ಮಾಂ ದೃಷ್ಟ್ವಾ ವಿಜನೇ ವನೇ ।
ಅಚಿಂತಯಿತ್ವಾ ತಚ್ಛಾಪಂ ಪ್ರಹರ್ಷಃ ಸಮಜಾಯತ ॥೨೩॥

ವಿಧಿಚೋದಿತನಾದ ಪಾಂಡುವಿಗೆ ನಿರ್ಜನವಾದ ಕಾಡಿನಲ್ಲಿ ನನ್ನನ್ನು ನೋಡಿ ಆ ಶಾಪವನ್ನು ಮರೆತು ಬಹಳ ಹರ್ಷ ಉಂಟಾಯಿತು.

ಕುಂತೀ

ಧನ್ಯಾ ತ್ವಮಸಿ ಬಾಹ್ಲೀಕೇ ಮತ್ ಸಭಾಗ್ಯತರಾ ಭುವಿ ।
ದೃಷ್ಟ್ವವತ್ಯಸಿ ಯದ್ ವಕ್ತ್ರಂ ಪ್ರಹೃಷ್ಟಸ್ಯ ಮಹೀಪತೇಃ ॥೨೪॥

ಬಾಹ್ಲೀಕ ರಾಜಕುಮಾರಿಯೇ, ನೀನು ಧನ್ಯಳಾದವಳು ಮತ್ತು ಭೂಮಿಯಲ್ಲಿ ನನಗಿಂತ ಭಾಗ್ಯವತಿಯಾದವಳು. ಏಕೆಂದರೆ, ನೀನು ಕೊನೆಯಲ್ಲಿ ರಾಜನ ಸಂತೋಷ ತುಂಬಿದ ಮುಖವನ್ನು ನೋಡಿದ್ದೀಯೆ. (ಮದ್ರ ದೇಶಕ್ಕೆ ಬಾಹ್ಲೀಕ ದೇಶವೆಂದೂ ಹೆಸರು).

ಮಾದ್ರೀ

ಅಲೋಭ್ಯಮಾನೇನ ಮಯಾ ವಾರ್ಯಮಾಣೇನ ಚಾಸಕೃತ್ ।
ಆತ್ಮಾ ನ ಧಾರಿತಸ್ತೇನ ಸತ್ಯಂ ದಿಷ್ಟಂ ಚಿಕೀರ್ಷುಣಾ ॥೨೫॥

ನಾನು ಅವನನ್ನು ಪ್ರಲೋಭನೆಗೊಳಿಸಲಿಲ್ಲ. ಬದಲಾಗಿ ಅವನ ಮನಸ್ಸನ್ನು ಬೇರೆ ಕಡೆಗೆ ತಿರುಗಿಸಿ ಅನೇಕ ಸಲ ಪ್ರತಿಷೇಧವನ್ನೇ ಮಾಡಿದೆ. ಆದರೂ, ವಿಧಿಬರಹವನ್ನು

ಸತ್ಯವನ್ನು ಮಾಡಲು ಹೊರಟ ಅವನು ತನ್ನ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ.

ವೈಶಂಪಾಯನಃ

ತಸ್ಯಾಸ್ತದ್ವಚನಂ ಶ್ರುತ್ವಾ ಕುಂತೀ ಶೋಕಾಗ್ನಿತಾಪಿತಾ ।
ಪಪಾತ ಸಹಸಾ ಭೂಮೌ ಛಿನ್ನಮೂಲ ಇವ ದ್ರುಮಃ ।
ನಿಶ್ಚೇಷ್ಟಾ ಪತಿತಾ ಭೂಮೌ ಮೋಹೇನ ನ ಚಚಾಲ ಸಾ ॥೨೬॥

ಅವಳ ಆ ಮಾತನ್ನು ಕೇಳಿ, ಕುಂತಿಯು ಶೋಕಾಗ್ನಿತಪ್ತಳಾಗಿ ಮೂಲವನ್ನು ಕತ್ತರಿಸಿದ ವೃಕ್ಷದಂತೆ ರಾಜನ ಪಾದಗಳ ಮೇಲೆ ಭೂಮಿಯಲ್ಲಿ ಇದ್ದಕ್ಕಿದ್ದಂತೆಯೇ ಬಿದ್ದಳು. ಭೂಮಿಯಲ್ಲಿ ಬಿದ್ದು ಮೂರ್ಛೆಯಿಂದ ನಿಶ್ಚೇಷ್ಟಳಾದ ಅವಳು ಅಲುಗಾಡಲಿಲ್ಲ.

ತಸ್ಮಿನ್ ಕ್ಷಣೇ ಕೃತಸ್ನಾನಮಮಲಾಂಬರ ಸಂವೃತಮ್ ।
ಅಲಂಕಾರಕೃತಂ ಪಾಂಡುಂ ಶಯಾನಂ ಶಯನೇ ಶುಭೇ ॥೨೭॥

ಕುಂತೀಮುತ್ಥಾಪ್ಯ ಮಾದ್ರೀ ಚ ಮೋಹೇನಾವಿಷ್ಟಚೇತನಾಮ್ ।
ಏಹ್ಯೇಹೀತಿ ತಾಂ ಕುಂತೀಂ ದರ್ಶಯಾಮಾಸ ಕೌರವಮ್ ॥೨೮॥

ಆಗ ಮೋಹಗೊಂಡ ಚೇತಸ್ಸುಳ್ಳ ಕುಂತಿಯನ್ನು ಮಾದ್ರಿಯ ಎಬ್ಬಿಸಿ 'ಬಾ ಬಾ' ಎಂದು ಕರೆದು ಅವಳಿಗೆ ಆಗಷ್ಟೇ ಸ್ನಾನವನ್ನು ಮಾಡಿ ಶುಭ್ರವಸ್ತ್ರಗಳನ್ನು ಧರಿಸಿ ಅಲಂಕೃತನಾಗಿ ಶಯನದಲ್ಲಿ ಮಲಗಿರುವ ಪಾಂಡುವನ್ನು ತೋರಿಸಿದಳು.

ಪಾದಯೋಃ ಪತಿತಾ ಕುಂತೀ ಪುನರುತ್ಥಾಯ ಭೂಮಿಪಮ್ ।
ರಕ್ತಚಂದನದಿಗ್ಧಾಂಗಂ ಮಹಾರಜನವಾಸಸಮ್ ।
ಸಸ್ಮಿತೇನ ತು ವಕ್ತ್ರೇಣ ಗದಂತಮಿವ ಭಾರತ ॥೨೯॥

ಪರಿರಭ್ಯ ತದಾ ಮೋಹಾದ್ ವಿಲಲಾಪಾಕುಲೇಂದ್ರಿಯಾ ।
ಮಾದ್ರೀ ಚಾಪಿ ಸಮಾಲಿಂಗ್ಯ ರಾಜಾನಂ ವಿಲಲಾಪ ಸಾ ॥೩೦॥

ಪುನಃ ಅವನ ಪಾದಗಳ ಮೇಲೆ ಬಿದ್ದ ಕುಂತಿಯು ಎದ್ದು ಮಹಾರಾಜನ ವಸ್ತ್ರಗಳನ್ನು ಉಟ್ಟಿದ್ದ, ರಕ್ತಚಂದನಗಳಿಂದ ಲೇಪಿತನಾಗಿದ್ದ, ಮುಗುಳ್ನಗೆಯಿಂದ ಏನನ್ನೋ ಮಾತನಾಡುತ್ತಿರುವಂತೆ ತೋರುವ, ರಾಜನನ್ನು ಆಲಿಂಗಿಸಿ, ಆಕುಲೇಂದ್ರಿಯಳಾಗಿ

ವಿಲಾಪವನ್ನು ಮಾಡಿದಳು. ಮಾದ್ರಿಯೂ ಸಹ, ರಾಜನನ್ನು ಆಲಿಂಗಿಸಿ ವಿಲಾಪವನ್ನು ಮಾಡಿದಳು.

ತಥಾ ಶಾಪಹತಂ ಪಾಂಡುಮೃಷಯಃ ಸಹ ಚಾರಣೈಃ ।
ಅಭ್ಯೇತ್ಯ ಸಹಿತಾಃ ಸರ್ವೇ ಶೋಕಾಶ್ರೂಣಿ ಪ್ರವರ್ತಯನ್ ॥೩೧॥

ಹಾಗೆ ಶಾಪದಿಂದ ಮೃತನಾದ ಪಾಂಡುವಿನ ಸಮೀಪಕ್ಕೆ ಋಷಿಗಳು ಮತ್ತು ಅರಣ್ಯವಾಸಿಗಳು ಜೊತೆಯಲ್ಲಿ ಬಂದು ಎಲ್ಲರೂ ಶೋಕಾಶ್ರುಗಳನ್ನು ಸುರಿಸಿದರು.

ಅಸ್ತಂಗತಮಿವಾದಿತ್ಯಂ ಸುಶುಷ್ಕಮಿವ ಸಾಗರಮ್ ।
ದೃಷ್ಟ್ವಾ ಪಾಂಡುಂ ನರವ್ಯಾಘ್ರಂ ಶೋಚಂತಿ ಸ್ಮ ಮಹರ್ಷಯಃ ॥೩೨॥

ಅಸ್ತಂಗತನಾದ ಆದಿತ್ಯನಂತೆ ಒಣಗಿಹೋದ ಸಮುದ್ರದಂತೆ ಇದ್ದ, ನರವ್ಯಾಘ್ರನಾದ ಪಾಂಡುವನ್ನು ನೋಡಿ ಮಹರ್ಷಿಗಳು ಶೋಕಪಟ್ಟರು.

ಸಮಾನಶೋಕಾ ಋಷಯಃ ಪಾಂಡವಾಶ್ಚ ಬಭೂವಿರೇ ।
ತೇ ಸಮಾಶ್ವಾಸಿತೇ ವಿಪ್ರೈರ್ವಿಲೇಪತುರನಿಂದಿತೇ ॥೩೩॥

ಋಷಿಗಳು ಮತ್ತು ಪಾಂಡುಪುತ್ರರು, ಸಮಾನವಾದ ಶೋಕವುಳ್ಳವರಾದರು. ಬ್ರಾಹ್ಮಣರಿಂದ ಸಮಾಧಾನ ಮಾಡಲ್ಪಟ್ಟ ಅನಿಂದಿತರಾದ ಕುಂತಿಮಾದ್ರಿಯರು ವಿಲಾಪವನ್ನು ಮಾಡಿದರು.

ಕುಂತೀ

ಹಾ ರಾಜನ್ ಕಸ್ಯ ನೋ ಹಿತ್ವಾ ಗಚ್ಛಸಿ ತ್ರಿದಶಾಲಯಮ್ ।
ಹಾ ರಾಜನ್ ಮಮ ಮಂದಾಯಾಃ ಕಥಂ ಮಾದ್ರೀಂ ಸಮೇತ್ಯ ವೈ ॥

ಹಾ ರಾಜನೇ, ನಮ್ಮನ್ನು ಯಾವ ಕಾರಣಕ್ಕಾಗಿ ಬಿಟ್ಟು ಸ್ವರ್ಗಲೋಕಕ್ಕೆ ಹೋಗುತ್ತಿದ್ದೀಯೆ. ಹಾ ರಾಜನೇ, ದುರದೃಷ್ಟಶಾಲಿನಿಯಾದ ನನ್ನ ಭಾಗ್ಯದ ನಾಶದಿಂದ ಹೇಗೆ ನೀನು ಮಾದ್ರಿಯನ್ನು ಸೇರಿ ನಿಧನವನ್ನು ಹೊಂದಿದೆ?

ನಿಧನಂ ಪ್ರಾಪ್ತವಾನ್ ರಾಜನ್ ಮದ್ಭಾಗ್ಯಪರಿಸಂಕ್ಷಯಾತ್ ।
ಯುಧಿಷ್ಠಿರಂ ಭೀಮಸೇನಮರ್ಜುನಂ ಚ ಯಮಾವುಭೌ ।
ಕಸ್ಯ ಹಿತ್ವಾ ಪ್ರಿಯಾನ್ ಪುತ್ರಾನ್ ಪ್ರಯಾತೋಽಸಿ ವಿಶಾಂಪತೇ ॥೩೫॥

ನಿನಗೆ ಪ್ರಿಯರಾದ ಯುಧಿಷ್ಠಿರ, ಭೀಮಸೇನ, ಅರ್ಜುನ, ನಕುಲ ಸಹದೇವರು, ಈ ಮಕ್ಕಳನ್ನು, ಎಲೈ ರಾಜನೇ, ಯಾರ ವಶಕ್ಕೆ ಕೊಟ್ಟು ಸ್ವರ್ಗಕ್ಕೆ ಹೋಗುತ್ತಿದ್ದೀಯೆ?

ನೂನಂ ತ್ವಾಂ ತ್ರಿದಶಾ ದೇವಾಃ ಪ್ರತಿನಂದಂತಿ ಭಾರತ ।
ಯಥಾ ಹಿ ತಪ ಉಗ್ರಂ ತೇ ಚರಿತಂ ವಿಪ್ರಸಂಸದಿ ।
ಆವಾಭ್ಯಾಂ ಸಹಿತೋ ರಾಜನ್ ಗಮಿಷ್ಯಾಮಿ ದಿವಂ ಶುಭಾಮ್ ॥

ಎಲೈ ಭಾರತನೇ, ಬ್ರಾಹ್ಮಣರ ಜೊತೆಯಲ್ಲಿ ನೀನು ಮಾಡಿದ ಉಗ್ರವಾದ ತಪಸ್ಸಿನ ನಿಮಿತ್ತದಿಂದಾಗಿ ಸ್ವರ್ಗಲೋಕದಲ್ಲಿ ದೇವತೆಗಳು ನಿನ್ನನ್ನು ಅಭಿನಂದಿಸುತ್ತಾರೆ. ನಮ್ಮಿಬ್ಬರ ಜೊತೆಯಲ್ಲಿ ಸ್ವರ್ಗಕ್ಕೆ ಹೋಗುವೆನೆಂದು ಹೇಳುತ್ತಿದ್ದೆಯಷ್ಟೆ.

ಅಜಮೀಢಾಜಮೀಢಾನಾಂ ಕರ್ಮಣಾಚರಿತಾಂ ಗತಿಮ್ ।
ನನು ನಾಮ ಸಹಾವಾಭ್ಯಾಂ ಗಚ್ಛೇಯಮಿತಿ ಚತ್ವಯಾ ॥೩೭॥

ರಾಜನೇ, ಅಜಮೀಢ ವಂಶದಲ್ಲಿ ಜನಿಸಿದ ನೀನು ಅಜಮೀಢ ವಂಶಕ್ಕೆ ಅನುಗುಣವಾದ ಕರ್ಮವನ್ನು ಮಾಡಿ ನಮ್ಮಿಬ್ಬರ ಜೊತೆಯಲ್ಲಿ ಶುಭವಾದ ಸ್ವರ್ಗಕ್ಕೆ ಹೋಗಬೇಕಾಗಿತ್ತಷ್ಟೆ.

ಪ್ರತಿಜ್ಞಾತಂ ಕುರುಶ್ರೇಷ್ಠ ಯದಾऽಸ್ಮಿ ವನಮಾಗತಾ ।
ಆವಾಭ್ಯಾಂ ತ್ವೇವ ಸಹಿತೋ ಗಮಿಷ್ಯಸಿ ವಿಶಾಂಪತೇ ।
ಮುಹೂರ್ತಂ ಕ್ಷಮ್ಯತಾಂ ರಾಜನ್ ಆರೋಕ್ಷ್ಯಾವಶ್ಚಿತಾಂ ತವ ॥೩೮॥

ಕುರುಶ್ರೇಷ್ಠನೇ, ನಾವು ವನಕ್ಕೆ ಬಂದಾಗ ನಿಮ್ಮಿಬ್ಬರ ಜೊತೆಯಲ್ಲೇ ನಾನು ಸ್ವರ್ಗಕ್ಕೆ ಹೋಗುವೆನು ಎಂದು ಪ್ರತಿಜ್ಞೆಯನ್ನು ಮಾಡಿದ್ದೆಯಷ್ಟೆ. ರಾಜನೇ, ಈಗಲೂ ನಮ್ಮಿಬ್ಬರ ಜೊತೆಯಲ್ಲೇ ಸ್ವರ್ಗಕ್ಕೆ ಹೋಗುವವನಾಗುವಿ. ಒಂದು ಕ್ಷಣ ತಾಳು. ರಾಜನೇ, ನಾವಿಬ್ಬರೂ ನಿನ್ನ ಚಿತೆಯನ್ನು ಏರುತ್ತೇವೆ.

ವೈಶಂಪಾಯನಃ

ವಿಲಪಿತ್ವಾ ಭೃಶಂ ತ್ವೇವಂ ನಿಃಸಂಜ್ಞೋ ಪತಿತೇ ಭುವಿ ।
ಯಥಾ ಮೃಗೇ ಹತೇ ಮೃಗ್ಯೌ ಲುಬ್ಧ್ವೌ ವನಗತೈಸ್ತದಾ ॥೩೯॥

ಹೀಗೆ ಬಹುವಾಗಿ ವಿಲಾಪವನ್ನು ಮಾಡಿ ಅವರಿಬ್ಬರೂ, ಬೇಡರು ಗಂಡು ಜಿಂಕೆಯನ್ನು ಕೊಂದಾಗ ಹೆಣ್ಣು ಜಿಂಕೆಗಳು ಭೂಮಿಯ ಮೇಲೆ ಬೀಳುವಂತೆ ನಿಃಸಂಜ್ಞರಾಗಿ ಭೂಮಿಯ ಮೇಲೆ ಬಿದ್ದರು.

ಯುಧಿಷ್ಠಿರಮುಖಾಃ ಸರ್ವೇ ಪಾಂಡವಾ ವೇದಪಾರಗಾಃ ।
ತೇऽಪ್ಯಾಗತ್ಯ ಪಿತುರ್ಮೂಲೇ ನಿಃಸಂಜ್ಞಾಃ ಪತಿತಾ ಭುವಿ ॥೪೦॥

ಯುಧಿಷ್ಠರ ಮೊದಲಾದ ವೇದಪಾರಂಗತರಾದ ಎಲ್ಲಾ ಪಾಂಡವರೂ ಬಂದು ತಂದೆಯ ಪಾದಮೂಲದಲ್ಲಿ ಸಂಜ್ಞೆಯನ್ನು ಕಳೆದುಕೊಂಡು ಭೂಮಿಯ ಮೇಲೆ ಬಿದ್ದರು.

ಪಾಂಡೋಃ ಪಾದೌ ಪರಿಷ್ವಜ್ಯ ವಿಲಪಂತಿ ಸ್ಮ ಪಾಂಡವಾಃ ।
ಹಾ ವಿನಷ್ಟಾಃ ಸ್ಮ ತಾತೇತಿ ಹಾ ಅನಾಥಾ ಭವಾಮಹೇ ॥೪೧॥

ಪಾಂಡವರು ಪಾಂಡುವಿನ ಪಾದಗಳನ್ನು ಆಲಿಂಗಿಸಿ 'ಹಾ ತಂದೆಯೇ ನಾವೆಲ್ಲರೂ ವಿನಾಶವನ್ನು ಹೊಂದಿದೆವು. ನಾವು ಅನಾಥರಾದೆವು' ಎಂದು ಗೋಳಾಡಿದರು.

ಕ್ಷಣೇನೈವ ಮಹಾರಾಜ ಅಹೋ ಲೋಕಸ್ಯ ಚಿತ್ರತಾ ।
ತ್ವದ್ವಿಹೀನಾ ಮಹಾಪ್ರಾಜ್ಞ ಕಥಂ ಜೀವಾಮ ಬಾಲಕಾಃ ॥೪೨॥

ಮಹಾರಾಜನೇ, ಲೋಕವು ಎಷ್ಟು ವಿಚಿತ್ರವಾದುದು. ಒಂದೇ ಕ್ಷಣದಲ್ಲಿ ನಿನ್ನನ್ನು ಕಳೆದುಕೊಂಡೆವು. ಮಹಾಪ್ರಾಜ್ಞನೇ, ನೀನಿಲ್ಲದೆ ಬಾಲಕರಾದ ನಾವು ಹೇಗೆ ಬದುಕುತ್ತೇವೆ?

ಲೋಕನಾಥಸ್ಯ ಪುತ್ರಾಶ್ಚ ನ ಸನಾಥಾ ಭವಾಮಹೇ ।
ನಾಸ್ಮದ್ವಿಧಾ ರಾಜಪುತ್ರಾ ಅಧನ್ಯಾಃ ಸಂತಿ ಭಾರತ ॥೪೩॥

ಭಾರತನೇ, ಲೋಕನಾಥನ ಪುತ್ರರಾಗಿ ನಾವು ಇಂದು ಅನಾಥರಾಗಿದ್ದೇವೆ. ನಮ್ಮಷ್ಟು ಅಧನ್ಯರಾದ ರಾಜಪುತ್ರರು ಯಾರೂ ಇಲ್ಲ.

ತ್ವದ್ವಿನಾಶಾಚ್ಚ ರಾಜೇಂದ್ರ ರಾಜ್ಯಪ್ರಸ್ಖಲನಾತ್ ತಥಾ ।
ಬಾಂಧವಾನಾಮಜಾತತ್ವಾತ್ ಕರ್ತವ್ಯಂ ನ ಪ್ರಸೀದತಾಮ್ ॥೪೪॥

ರಾಜೇಂದ್ರನೇ, ನೀನು ನಾಶ ಹೊಂದಿರುವುದರಿಂದ, ನಾವು ರಾಜ್ಯಚ್ಯುತರಾಗಿರುವುದರಿಂದ ಬಂಧುಗಳು ಅಪ್ರಿಯರಾಗಿರುವುದರಿಂದ, ದುಃಖದಲ್ಲಿ ಮುಳುಗುತ್ತಿರುವ ನಮಗೆ ಮಾಡಬೇಕಾದ ಕರ್ತವ್ಯವು ಯಾವುದೂ ಇಲ್ಲ.

ಹಿತ್ವಾ ರಾಜ್ಯಂ ಚ ಭೋಗಾಂಶ್ಚ ಶತಶೃಂಗೇ ನಿವಾಸಿನಾ ।
ತ್ವಯಾ ಲಬ್ಧಾಃ ಸ್ಮ ರಾಜೇಂದ್ರ ಮಹತಾ ತಪಸಾ ವಯಮ್ ॥೪೫॥

ರಾಜೇಂದ್ರನೇ, ರಾಜ್ಯವನ್ನೂ, ಭೋಗವನ್ನೂ ತೊರೆದು ಶತಶೃಂಗ ಪರ್ವತದಲ್ಲಿ ವಾಸಮಾಡಿದ ನೀನು ಬಹಳ ತಪಸ್ಸನ್ನು ಮಾಡಿ ನಮ್ಮನ್ನು ಮಕ್ಕಳಾಗಿ ಪಡೆದೆ.

ಹಿತ್ವಾ ಮಾನಂ ವನಂ ಗತ್ವಾ ಸ್ವಯಮಾಹೃತ್ಯ ಭಕ್ಷಣಮ್ ।
ಶಾಕಮೂಲಫಲೈರ್ವನ್ಯೈರ್ಭರಣಂ ವೈ ತ್ವಯಾ ಕೃತಮ್ ॥೪೬॥

ಮಾನವನ್ನು ತೊರೆದು ಕಾಡಿಗೆ ಹೋಗಿ ಸ್ವಯಂ ಆಹಾರ ಪದಾರ್ಥಗಳನ್ನು ಸಂಗ್ರಹಿಸಿ, ಕಾಡಿನಲ್ಲಿ ದೊರೆಯುವ ಶಾಕಮೂಲಫಲಗಳಿಂದ ನಮ್ಮನ್ನು ಪಾಲನೆ ಮಾಡಿದೆ.

ಪುತ್ರಾನುತ್ಪಾದ್ಯ ಪಿತರೋ ಯಮಿಚ್ಛಂತಿ ಮಹಾತ್ಮನಃ ।
ತ್ರಿವರ್ಗಫಲಮಿಚ್ಛಂತಃ ತಸ್ಯ ಕಾಲೋऽಯಮಾಗತಃ ॥೪೭॥

ಪುತ್ರನನ್ನು ಪಡೆದ ಮಹಾತ್ಮರು ಪುತ್ರನಿಂದ ಯಾವ ಫಲವನ್ನು ಬಯಸುತ್ತಾರೋ, ಆ ತ್ರಿವರ್ಗಫಲವನ್ನು ಅನುಭವಿಸುವ ಕಾಲ ಈಗ ಒದಗಿದ್ದಿತು.

ಇತ್ಯೇವಮುಕ್ತ್ವಾ ಪಿತರಂ ಭೀಮೋಪಿ ವಿಲಲಾಪ ಹ ।
ಪ್ರನಷ್ಟಂ ಭಾರತಂ ವಂಶಂ ಪಾಂಡುನಾ ಪುನರುದ್ಧೃತಮ್ ॥೪೮॥

ಪ್ರನಷ್ಟವಾದ ಭಾರತ ವಂಶವು ಪಾಂಡುವಿನಿಂದ ಪುನಃ ಉದ್ಧಾರವನ್ನು ಹೊಂದಿತು ಎಂದು ಹೇಳಿ ಭೀಮನೂ ತಂದೆಯನ್ನು ಕುರಿತು ವಿಲಾಪ ಮಾಡಿದನು.

ತಸ್ಮಿಂಸ್ತಪೋವನಗತೇ ನಷ್ಟಂ ರಾಜ್ಯಂ ಸರಾಷ್ಟ್ರಕಮ್ ।
ಪುನರ್ನಿಸ್ತಾರಿತಂ ಕ್ಷತ್ರಂ ಪಾಂಡುಪುತ್ರೈಶ್ಚ ಪಂಚಭಿಃ ॥೪೯॥

ಏತಚ್ಛ್ರುತ್ವಾऽನುಮೋದಿತ್ವಾ ಗಂತುಮರ್ಹಸಿ ಕೌರವ ।
ಇತ್ಯೇವಮುಕ್ತ್ವಾ ಪಿತರಂ ವಿಲಲಾಪ ಧನಂಜಯಃ ॥೫೦॥

ಪಾಂಡುವು ತಪೋವನಕ್ಕೆ ಹೋದಾಗ ನಷ್ಟವಾದ ರಾಜ್ಯವನ್ನು ಪಾಂಡುವಿನ ಐವರು ಪುತ್ರರು ಪುನಃ ಸಂಪಾದಿಸಿದರು ಎಂಬ ವಾರ್ತೆಯನ್ನು ಕೇಳಿ ಅನುಮೋದಿಸಿ ನೀನು ಪ್ರಯಾಣ ಮಾಡಬೇಕಾಗಿದ್ದಿತಷ್ಟೆ ಎಂದು ಹೇಳಿ ತಂದೆಯನ್ನು ಕುರಿತು ಅರ್ಜುನನು ವಿಲಾಪ ಮಾಡಿದನು.

ದುಸ್ಸಂಚಯಂ ತಪಃ ಕೃತ್ವಾ ಲಬ್ಧ್ವಾ ನೋ ಭರತರ್ಷಭ ।
ಪುತ್ರಲಾಭಸ್ಯ ಮಹತಃ ಶುಶ್ರೂಷಾದಿಫಲಂ ತ್ವಯಾ ॥೫೧॥

ನ ಚಾವಾಪ್ತಂ ತ್ವಯಾ ತಾತ ತತ್ತಥೈವ ತು ಯಥಾ ಪುರಾ ।
ದುಸ್ಸಂಚರಂ ಕಿಂಚಿದೇವ ಪುರಾ ದಶರಥೋ ಯಥಾ ।
ಏವಮುಕ್ತ್ವಾ ಯಮೌ ಚಾಪಿ ವಿಲೇಪತುರಥಾತುರೌ ॥೫೨॥

ಭರತಶ್ರೇಷ್ಠನೇ, ದುಃಸಾಧ್ಯವಾದ ತಪಸ್ಸನ್ನು ಮಾಡಿ ಶ್ರೇಷ್ಠವಾದ ಮಕ್ಕಳನ್ನು ಪಡೆದ ನೀನು, ಹಿಂದೆ ನಿನ್ನ ತಂದೆಯು ಹೇಗೆ ಪುತ್ರರಿಂದ ಸೇವಾದಿ ಫಲವನ್ನು ಅನುಭವಿಸಲಿಲ್ಲವೋ ಹಾಗೆಯೇ, ತಂದೆಯೇ ನೀನೂ ಅನುಭವಿಸಲಿಲ್ಲ. ಹಿಂದೆ ದಶರಥನು ಸ್ವಲ್ಪ ಸುಖವನ್ನು ಪಡೆದಂತೆ ನೀನೂ ಸಹ, ನಮ್ಮಂತಹ ಮಕ್ಕಳನ್ನು ಪಡೆದು ಅಲ್ಪ ಸುಖವನ್ನು ಪಡೆದೆ ಎಂದು ಹೇಳುತ್ತಾ ಶೋಕಾತುರರಾದ ನಕುಲಸಹದೇವರೂ ವಿಲಾಪವನ್ನು ಮಾಡಿದರು.

ಕುಂತೀ

ಅಹಂ ಜ್ಯೇಷ್ಠಾ ಧರ್ಮಪತ್ನೀ ಜ್ಯೇಷ್ಠಂ ಧರ್ಮಫಲಂ ಮಮ ।
ಅವಶ್ಯಂಭಾವಿನೋ ಭಾವಾನ್ ಮಾಮಾ ಮಾದ್ರಿ ನಿವರ್ತಯ ॥೫೩॥

ನಾನು ಜ್ಯೇಷ್ಠಳಾದ ಧರ್ಮಪತ್ನಿ. ಶ್ರೇಷ್ಠವಾದ ಧರ್ಮದ ಫಲವು ನನಗೆ ಇರುತ್ತದೆ. ಮಾದ್ರಿ ಅವಶ್ಯಕವಾಗಿ ನಡೆಯಲೇಬೇಕಾದ ಕಾರ್ಯಗಳನ್ನು ತಡೆಯುವ ಯೋಚನೆಯನ್ನು ಮಾಡಬೇಡ.

ಅನ್ವೇಷ್ಯಾಮೀಹ ಭರ್ತಾರಮಹಂ ಪ್ರೇತವಶಂ ಗತಮ್ ।
ಉತ್ತಿಷ್ಠೈನಂ ವಿಸೃಜ್ಯ ತ್ವಮಿಮಾನ್ ರಕ್ಷಸ್ವ ದಾರಕಾನ್ ।
ಅವಾಪ್ಯ ಪುತ್ರಾಂಲ್ಲಬ್ಧಾತ್ಮಾ ವೀರಪತ್ನೀತ್ವಮರ್ಥಯೇ ॥೫೪॥

ನಾನು ಮೃತ್ಯುವಶನಾದ ಪತಿಯನ್ನು ಇಲ್ಲಿ ಹಿಂಬಾಲಿಸುವೆನು. ನೀನು ಪತಿಯನ್ನು ಬಿಟ್ಟು ಎದ್ದು ಈ ಮಕ್ಕಳ ರಕ್ಷಣೆಯನ್ನು ಮಾಡು. ಪುತ್ರರನ್ನು ಪಡೆದು ಶರೀರವನ್ನು ಸಾರ್ಥಕಪಡಿಸಿಕೊಂಡ ನಾನು ವೀರಪತ್ನಿಯಾಗಲು ಬಯಸುತ್ತೇನೆ.

ಮದ್ರರಾಜಸುತಾ ಕುಂತೀಮಿದಂ ವಚನಮಬ್ರವೀತ್ ।
ಅಹಮೇವಾನುಯಾಸ್ಯಾಮಿ ಭರ್ತಾರಮಪಲಾಯಿನಮ್ ।
ನ ಹಿ ತೃಪ್ತಾಽಸ್ಮಿ ಕಾಮಾನಾಂ ತ್ವಂ ಜ್ಯೇಷ್ಠಾ ಹ್ಯನುಮನ್ಯತಾಮ್ ॥೫೫॥

ಮದ್ರರಾಜ ಸುತೆಯಾದ ಮಾದ್ರಿಯು ಕುಂತಿಯನ್ನು ಕುರಿತು ಹೇಳಿದಳು. ಯುದ್ಧದಲ್ಲಿ ಎಂದೂ ಹಿಮ್ಮೆಟ್ಟದ ಪತಿಯನ್ನು ನಾನೇ ಹಿಂಬಾಲಿಸುವೆನು. ನನಗೆ ಅವನಿಂದ ಕಾಮತೃಪ್ತಿಯು ಉಂಟಾಗಿಲ್ಲ. ಹಿರಿಯಳಾದ ನೀನು ನನಗೆ ಅನುಮತಿಯನ್ನು ಕೊಡು.

ಮಾಂ ಚಾಭಿಗಮ್ಯ ಕ್ಷೀಣೋಽಯಂ ಕಾಮಾದ್ ಭರತಸತ್ತಮಃ ।
ಸಮುಚ್ಛಿಂದ್ಯಾಮಸ್ಯ ಕಾಮಂ ಕಥಂ ನು ಯಮಸಾದನೇ ॥೫೬॥

ಈ ಭರತಶ್ರೇಷ್ಠನು ಕಾಮದಿಂದ ನನ್ನನ್ನು ಸೇರಿ ನಾಶವನ್ನು ಹೊಂದಿದನು. ನಾನು ಯಮಪಟ್ಟಣದಲ್ಲಿ ಅವನ ಕಾಮತೃಷೆಯನ್ನು ಹೇಗೆ ಹೋಗಲಾಡಿಸಲಿ?

ಮಮ ಹೇತೋರ್ಗತೋ ರಾಜಾ ದಿವಂ ಭರತಸತ್ತಮಃ ।
ನ ಚೈವ ತಾದೃಶೀ ಬುದ್ಧಿರ್ಬಾಂಧವಾಶ್ಚ ನ ತಾದೃಶಾಃ ॥೫೭॥

ಭರತಸತ್ತಮನಾದ ರಾಜನು, ನನ್ನ ಕಾರಣದಿಂದಾಗಿ ಸ್ವರ್ಗವನ್ನು ಸೇರಿದನು. ನನಗಾಗಲೀ, ನನ್ನ ಬಂಧುಗಳಿಗಾಗಲೀ ನಿನಗೆ ಇರುವಂತಹ ಒಳ್ಳೆಯ ಬುದ್ಧಿ ಇಲ್ಲ.

ನ ಚೋತ್ಸಹೇ ಧಾರಯಿತುಂ ಪ್ರಾಣಾನ್ ಭರ್ತ್ರಾ ವಿನಾಕೃತಾ ।
ತಸ್ಮಾತ್ ತಮನುಯಾಸ್ಯಾಮಿ ಯಾಂತಂ ವೈವಸ್ವತಕ್ಷಯಮ್ ॥೫೮॥

ಪತಿಯನ್ನು ಕಳೆದುಕೊಂಡು ನಾನು ಪ್ರಾಣವನ್ನು ಧರಿಸಿರಲಾರೆ. ಆದ್ದರಿಂದ ಯಮಪಟ್ಟಣಕ್ಕೆ ಹೋಗುವ ಪತಿಯನ್ನು ಹಿಂಬಾಲಿಸುವೆನು.

ವರ್ತೇಯಂ ನ ಸಮಾಂ ವೃತ್ತಿಂ ಜಾತ್ವಹಂ ಚ ಸುತೇಷು ತೇ ।
ತಥಾ ಹಿ ವರ್ತಮಾನಾಂ ಮಾಮಧರ್ಮಃ ಸಂಸ್ಪೃಶೇನ್ನರಾನ್ ॥೫೯॥

ನಾನು ಒಂದು ಪಕ್ಷ ಬದುಕಿದರೆ, ನಿನ್ನ ಮಕ್ಕಳನ್ನು ಎಂದೂ ಸಮವಾದ ಬುದ್ಧಿಯಿಂದ ನೋಡುವುದಿಲ್ಲ. ಹಾಗಿರುವ ನನಗೆ ದೊಡ್ಡ ಅಧರ್ಮವು ಉಂಟಾಗುತ್ತದೆ.

ತಸ್ಮಾನ್ಮೇ ಸುತಯೋರ್ದೇವಿ ವರ್ತಿತವ್ಯಂ ಸ್ವಪುತ್ರವತ್ ।
ಅನ್ವೇಷ್ಯಾಮಿ ಚ ಭರ್ತಾರಂ ವ್ರಜಂತಂ ಯಮಸಾದನಮ್ ॥೬೦॥

ಆದ್ದರಿಂದ ಕುಂತಿದೇವಿಯೇ, ನನ್ನ ಮಕ್ಕಳನ್ನು ನಿನ್ನ ಮಕ್ಕಳಂತೆ ನೋಡಿಕೋ. ನಾನು ಯಮಲೋಕಕ್ಕೆ ಹೋಗುವ ರಾಜನನ್ನು ಹಿಂಬಾಲಿಸುವೆನು.

ಮಾಂ ಹಿ ಕಾಮಯಮಾನೋಽಯಂ ರಾಜಾ ಪ್ರೇತವಶಂ ಗತಃ ।
ರಾಜ್ಞಃ ಶರೀರೇಣ ಸಹ ಮಮಾಪೀದಂ ಕಳೇಬರಮ್ ॥೬೧॥

ದಗ್ಧವ್ಯಂ ಸುಪ್ರತಿಚ್ಛನ್ನಮೇತದಾರ್ಯೇ ಪ್ರಿಯಂ ಕುರು ।
ದಾರಕೇಷ್ವಪ್ರಮತ್ತಾ ತ್ವಂ ಭವೇಥಾಶ್ಚ ಹಿತಾ ಮಮ ।
ಅತೋಽನ್ಯನ್ನ ಪ್ರಪಶ್ಯಾಮಿ ಸಂದೇಷ್ಟವ್ಯಂ ಹಿ ಕಿಂಚನ ॥೬೨॥

ನನ್ನ ಮೇಲಿನ ಕಾಮದಿಂದ ರಾಜನು ಪ್ರೇತವಶನಾದನು. ಆದ್ದರಿಂದ ರಾಜನ ಶರೀರದ ಜೊತೆಯಲ್ಲಿ ನನ್ನ ಶರೀರವನ್ನೂ ಚೆನ್ನಾಗಿ ಮುಚ್ಚಿ ದಹನಮಾಡಬೇಕು. ಪೂಜ್ಯೆಯೇ, ನನಗೆ ಈ ಪ್ರಿಯವನ್ನು ಮಾಡು. ಮಕ್ಕಳ ವಿಷಯದಲ್ಲಿ ಯಾವಾಗಲೂ ಜಾಗರೂಕಳಾಗಿದ್ದು, ನನ್ನ ಹಿತಚಿಂತನೆಯನ್ನು ಮಾಡು. ಇದನ್ನು ಬಿಟ್ಟು ನಿನಗೆ ಸಂದೇಶ ಕೊಡಬೇಕಾದ ಯಾವ ವಿಷಯವೂ ನನಗೆ ತೋರುವುದಿಲ್ಲ.

ವೈಶಂಪಾಯನಃ

ಋಷಯಸ್ತಾನ್ ಸಮಾಶ್ವಾಸ್ಯ ಪಾಂಡವಾನ್ ಸತ್ಯವಿಕ್ರಮಾನ್ ।
ಊಚುಃ ಕುಂತೀಂ ಚ ಮಾದ್ರೀಂ ಚ ಸಮಾಶ್ವಾಸ್ಯ ತಪಸ್ವಿನಃ ॥೬೩॥

ತಪಸ್ವಿಗಳಾದ ಋಷಿಗಳು ಸತ್ಯವಿಕ್ರಮರಾದ ಪಾಂಡವರನ್ನು ಸಮಾಧಾನಗೊಳಿಸಿ, ಕುಂತಿ ಮತ್ತು ಮಾದ್ರಿಯರನ್ನೂ ಸಮಾಧಾನಗೊಳಿಸಿ ಮಾತನಾಡಿದರು.

ಸುಭಗೇ ಬಾಲಪುತ್ರೇ ತು ನ ಮರ್ತವ್ಯಂ ಕಥಂಚನ ।
ಪಾಂಡವಾಂಶ್ಚಾಪಿ ನೇಷ್ಯಾಮಃ ಕುರುರಾಷ್ಟ್ರಂ ಪರಂತಪಾನ್ ॥೬೪॥

ಸುಂದರಿಯರೇ ಮತ್ತು ಚಿಕ್ಕಮಕ್ಕಳನ್ನು ಹೊಂದಿದವರೇ, ನೀವು ಯಾವ ರೀತಿಯಲ್ಲೂ ಮರಣವನ್ನು ಹೊಂದಬಾರದು. ನಾವು ಶತ್ರುತಾಪನರಾದ ಪಾಂಡವರನ್ನು ಕುರುರಾಷ್ಟ್ರಕ್ಕೆ ಕರೆದೊಯ್ಯುತ್ತೇವೆ.

ಅಧರ್ಮೇಷ್ವರ್ಥಜಾತೇಷು ಧೃತರಾಷ್ಟ್ರಶ್ಚ ಲೋಭವಾನ್ ।
ಸ ಕದಾಚಿನ್ನ ವರ್ತೇತ ಪಾಂಡವೇಷು ಯಥಾವಿಧಿ ॥೬೫॥

ಧೃತರಾಷ್ಟ್ರನಿಗೆ ಅಧರ್ಮದಲ್ಲಿಯೂ ಮತ್ತು ಸಂಪತ್ತಿನಲ್ಲಿಯೂ ಲೋಭವಿದೆ. ಅವನು ಎಂದೂ ಪಾಂಡವರ ವಿಷಯದಲ್ಲಿ ನಡೆದುಕೊಳ್ಳಬೇಕಾದ ರೀತಿಯಲ್ಲಿ ನಡೆದುಕೊಳ್ಳಲಾರ.

ಕುಂತ್ಯಾಶ್ಚ ವೃಷ್ಣಯೋ ನಾಥಾಃ ಕುಂತಿಭೋಜಸ್ತಥೈವ ಚ ।
ಮಾದ್ರ್ಯಾಶ್ಚ ಬಲಿನಾಂ ಶ್ರೇಷ್ಠಃ ಶಲ್ಯೋ ಭ್ರಾತಾ ಮಹಾರಥಃ ॥೬೬॥

ಕುಂತಿಗೆ ವೃಷ್ಣಿಗಳು ಮತ್ತು ಕುಂತಿಭೋಜನು ನಾಥರಾಗಿದ್ದಾರೆ. ಮಾದ್ರಿಗೆ ಬಲಿಷ್ಠನೂ, ಗುಣವಂತನೂ, ಮಹಾರಥನೂ, ಅಣ್ಣನೂ ಆದ ಶಲ್ಯನು ನಾಥನಾಗಿದ್ದಾನೆ.

ಭರ್ತ್ರಾನುಮರಣಂ ಸಾರ್ಧಂ ಫಲವಾನ್ ನಾತ್ರ ಸಂಶಯಃ ।
ಯುವಾಭ್ಯಾಂ ದುಷ್ಕರಂ ಚೈತದ್ ವದಂತಿ ದ್ವಿಜಪುಂಗವಾಃ ॥೬೭॥

ಪತಿಯ ಜೊತೆಯಲ್ಲಿ ಸಹಗಮನ ಮಾಡುವುದು ಬಹಳ ಫಲದಾಯಕವಾದುದು ಎಂಬ ವಿಷಯದಲ್ಲಿ ಸಂಶಯವಿಲ್ಲ. ಆದರೆ, ನೀವಿಬ್ಬರೂ ಸಹಗಮನ ಮಾಡಬಾರದೆಂದು ಬ್ರಾಹ್ಮಣಶ್ರೇಷ್ಠರು ಹೇಳುತ್ತಿದ್ದಾರೆ.

ಮೃತೇ ಭರ್ತರಿ ಯಾ ಸಾಧ್ವೀ ಬ್ರಹ್ಮಚರ್ಯವ್ರತೇ ಸ್ಥಿತಾ ।
ಯಮೈಶ್ಚ ನಿಯಮೈಃ ಶ್ರಾಂತಾ ಮನೋವಾಕ್ಕಾಯಜೈಃ ಶುಭೈಃ ॥೬೮॥

ಭರ್ತಾರಂ ಚಿಂತಯಂತೀ ಸಾ ಭರ್ತಾರಂ ನಿಸ್ತರೇಚ್ಛುಭಾ ।
ತಾರಿತಶ್ಚಾಪಿ ಭರ್ತಾ ಸ್ಯಾದಾತ್ಮಾ ಪುತ್ರಸ್ತಥೈವ ಚ ।
ತಸ್ಮಾಜ್ಜೀವಿತಮೇವೈತದ್ ಯುವಯೋರ್ವಿದ್ಮ ಶೋಭನಮ್ ॥೬೯॥

ಪತಿಯು ಮೃತನಾದ ಮೇಲೆ ಯಾವ ಪತಿವ್ರತೆಯು ಬ್ರಹ್ಮಚರ್ಯವ್ರತದಲ್ಲಿದ್ದು ಮನೋವಾಕ್ಕಾಯಸಂಬಂಧಿಯಾದ ಶುಭವಾದ ಯಮನಿಯಮಗಳಿಂದ ಶರೀರವನ್ನು ದಂಡಿಸಿ ಪತಿಯನ್ನು ಚಿಂತಿಸುತ್ತಾಳೋ, ಅಂತಹ ಶುಭಳಾದವಳು ಪತಿಯನ್ನು ಎಲ್ಲಾ ಸಂಕಟಗಳಿಂದಲೂ ದಾಟಿಸುತ್ತಾಳೆ. ಪತಿಯು ಸಂಕಟದಿಂದ ಪಾರಾದರೆ, ತಾನೂ ಮತ್ತು ತನ್ನ ಮಕ್ಕಳೂ ಸಂಕಟದಿಂದ ಪಾರಾಗುತ್ತಾರೆ. ಆದ್ದರಿಂದ ನೀವಿಬ್ಬರೂ ಜೀವಿಸಿರುವುದೇ ಶ್ರೇಷ್ಠವೆಂದು ನಮಗೆ ತೋರುತ್ತದೆ.

ಕುಂತೀ

ಯಥಾ ಪಾಂಡೋಶ್ಚ ನಿರ್ದೇಶಃ ತಥಾ ವಿಪ್ರಗಣಸ್ಯ ಚ ।
ಆಜ್ಞಾ ಶಿರಸಿ ನಿಕ್ಷಿಪ್ತಾ ಕರಿಷ್ಯಾಮಿ ಚ ತತ್ ತಥಾ ॥೭೦॥

ಪಾಂಡುವಿನ ಆದೇಶವು ಹೇಗೋ ಹಾಗೆ ವಿಪ್ರಸಮೂಹದ ಆದೇಶವನ್ನು ತಲೆಯ ಮೇಲೆ ಧರಿಸಿ ಅದರಂತೆ ನಡೆದುಕೊಳ್ಳುವೆನು.

ಯಥಾऽऽಹುರ್ಭಗವಂತೋ ಹಿ ತನ್ಮನ್ಯೇ ಶೋಭನಂ ವರಮ್ ।
ಭರ್ತುಶ್ಚ ಮಮ ಪುತ್ರಾಣಾಂ ಮಮ ಚೈವ ನ ಸಂಶಯಃ ॥೭೧॥

ಪೂಜ್ಯರಾದ ತಾವು ಏನನ್ನು ಹೇಳುತ್ತೀರೋ ಅದೇ ಆದೇಶವು ನನಗೂ ಮತ್ತು ಪುತ್ರರಿಗೂ ಶುಭಫಲಪ್ರದವೆಂದು ತಿಳಿಯುತ್ತೇನೆ. ಇದರಲ್ಲಿ ಸಂಶಯವಿಲ್ಲ.

ಮಾದ್ರೀ

ಕುಂತೀ ಸಮರ್ಥಾ ಪುತ್ರಾಣಾಂ ಯೋಗಕ್ಷೇಮಸ್ಯ ಧಾರಣೇ ।
ಅಸ್ಯಾ ಹಿ ನ ಸಮಾ ಬುದ್ಧ್ಯಾ ದೇವ್ಯಪಿ ಸ್ಯಾದರುಂಧತೀ ॥೭೨॥

ಕುಂತಿಯು ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳಲು ಸಮರ್ಥಳಾಗಿದ್ದಾಳೆ. ಅರುಂಧತಿದೇವಿಯೂ ಸಹ ಇವಳಿಗೆ ಸಮಾನವಾದ ಬುದ್ಧಿಯನ್ನು ಹೊಂದಿದವಳಲ್ಲ.

ಕುಂತ್ಯಾಶ್ಚ ವೃಷ್ಣಯೋ ನಾಥಾಃ ಕುಂತಿಭೋಜಸ್ತಥೈವ ಚ ।
ನಾಹಂ ತ್ವಮಿವ ಪುತ್ರಾಣಾಂ ಸಮರ್ಥಾ ಧಾರಣೇ ತಥಾ ॥೭೩॥

ಕುಂತಿಗೆ ವೃಷ್ಣಿಗಳು ಮತ್ತು ಕುಂತಿಭೋಜನು ನಾಥರಾಗಿದ್ದಾರೆ. ನಾನು ನಿನ್ನಂತೆ ಮಕ್ಕಳನ್ನು ನೋಡಿಕೊಳ್ಳಲು ಸಮರ್ಥಳಲ್ಲ.

ಸಾऽಹಂ ಭರ್ತಾರಮನ್ವೇಷ್ಯೇ ಅತೃಪ್ತಾ ನನ್ವಹಂ ತಥಾ ।
ಭರ್ತೃಲೋಕಸ್ಯ ತು ಜ್ಯೇಷ್ಠಾ ದೇವೀ ಮಾಮನುಮನ್ಯತಾಮ್ ॥೭೪॥

ಅಂತಹ ನಾನು ಪತಿಯನ್ನು ಹಿಂಬಾಲಿಸುವೆನು. ನಾನು ಅತೃಪ್ತಳಾಗಿದ್ದೇನಷ್ಟೆ. ಪತಿಲೋಕಕ್ಕೆ ಹೋಗುವುದಕ್ಕೆ ಜ್ಯೇಷ್ಠಳಾದ ಕುಂತಿದೇವಿಯು ನನಗೆ ಅನುಮತಿಯನ್ನು ನೀಡಬೇಕು.

ಧರ್ಮಜ್ಞಸ್ಯ ಕೃತಜ್ಞಸ್ಯ ಸತ್ಯಸಂಧಸ್ಯ ಧೀಮತಃ ।
ಪಾದೌ ಪರಿಚರಿಷ್ಯಾಮಿ ತದಾರ್ಯೇ ಹ್ಯನುಮನ್ಯತಾಮ್ ॥೭೫॥

ಧರ್ಮಜ್ಞನೂ, ಕೃತಜ್ಞನೂ, ಸತ್ಯಸಂಧನೂ, ಧೀಮಂತನೂ ಆದ ಪತಿಯ ಪಾದವನ್ನು ಪರಲೋಕದಲ್ಲಿ ಪರಿಚರಿಸುವೆನು. ಆದ್ದರಿಂದ ಆರ್ಯೆಯು ಅನುಮತಿಯನ್ನು ನೀಡಬೇಕು.

ವೈಶಂಪಾಯನಃ

ಏವಮುಕ್ತ್ವಾ ಮಹಾರಾಜ ಮದ್ರರಾಜಸುತಾ ಶುಭಾ ।
ದದೌ ಕುಂತ್ಯೈ ಯಮೌ ಮಾದ್ರೀ ಶಿರಸಾऽಭಿಪ್ರಣಮ್ಯ ಚ ॥೭೬॥

ಮಹಾರಾಜನೇ, ಶುಭಳಾದ ಮಾದ್ರಿಯು ಹೀಗೆ ಮಾತನಾಡಿ ನಕುಲಸಹದೇವರನ್ನು ಕುಂತಿಯ ಕೈಯಲ್ಲಿಟ್ಟು, ಕುಂತಿಗೆ ಶಿರಸಾಪ್ರಣಾಮವನ್ನು ಮಾಡಿದಳು.

ಅಭಿವಾದ್ಯ ಋಷೀನ್ ಸರ್ವಾನ್ ಪರಿಷ್ವಜ್ಯ ಚ ಪಾಂಡವಾನ್ ।
ಮೂರ್ಧ್ನ್ಯುಪಾಘ್ರಾಯ ಬಹುಶಃ ಪಾರ್ಥಾನಾತ್ಮಸುತೌ ತಥಾ ।
ಹಸ್ತೇ ಯುಧಿಷ್ಠಿರಂ ಗೃಹ್ಯ ಮಾದ್ರೀ ವಾಕ್ಯಮಭಾಷತ ॥೭೭॥

ಎಲ್ಲಾ ಋಷಿಗಳಿಗೂ ನಮಸ್ಕರಿಸಿ ಎಲ್ಲಾ ಪಾಂಡವರನ್ನೂ ಆಲಿಂಗಿಸಿ ಕುಂತಿಯ ಮಕ್ಕಳನ್ನು ತನ್ನ ಮಕ್ಕಳಂತೆಯೇ ಶಿರಸ್ಸಿನಲ್ಲಿ ಆಘ್ರಾಣಿಸಿ ಯುಧಿಷ್ಠಿರ ಕೈಯನ್ನು ಹಿಡಿದುಕೊಂಡು ಮಾದ್ರಿಯು ಮಾತನಾಡಿದಳು.

ಕುಂತೀ ಮಾತಾ ಅಹಂ ಧಾತ್ರೀ ಯುವಾऽऽಭ್ಯಾಂ ಚ ಪಿತಾ ಮೃತಃ।
ಯುಧಿಷ್ಠಿರಃ ಪಿತಾ ಜ್ಯೇಷ್ಠಃ ಚತುರ್ಣಾಂ ಧರ್ಮತಃ ಸದಾ ॥೭೮॥

ಕುಂತಿಯು ತಾಯಿ. ನಾನು ಸಾಕಿದ ದಾದಿ ಮಾತ್ರ . ನಮ್ಮಿಬ್ಬರ ದೋಷದಿಂದಾಗಿ ರಾಜನು ಮೃತನಾದನು. ಇನ್ನು ಮುಂದೆ ಯುಧಿಷ್ಠಿರನು ನಾಲ್ಕು ಜನ ತಮ್ಮಂದಿರಿಗಿಂತ ಜ್ಯೇಷ್ಠನಾಗಿ ಪಿತೃಸ್ಥಾನದಲ್ಲಿ ಇರುತ್ತಾನೆ. (ಬೇರೆ ಕಾರ್ಯದಲ್ಲಿ ಮಗ್ನಳಾದುದು ಕುಂತಿಯ ದೋಷ. ಸಂಗವನ್ನು ಪ್ರತಿಷೇಧ ಮಾಡಲು ಸಾಧ್ಯವಾಗದಿದ್ದುದು ಮಾದ್ರಿಯ ದೋಷ. ಹೀಗೆ ಇಬ್ಬರ ದೋಷಗಳಿಂದ ರಾಜನು ಮೃತನಾಗಿದ್ದಾನೆ.)

ವೃದ್ಧಾನುಶಾಸನೇ ಸಕ್ತಾಃ ಸತ್ಯಧರ್ಮಪರಾಯಣಾಃ ।
ತಾದೃಶಾ ನ ವಿನಶ್ಯಂತಿ ನೈವ ಯಾಂತಿ ಪರಾಭವಮ್ ।
ತಸ್ಮಾತ್ ಸರ್ವೇ ಕುರುಧ್ವಂ ವೈ ಗುರುವೃತ್ತಿಮತಂದ್ರಿತಾಃ ॥೭೯॥

ಹಿರಿಯರ ಮಾತನ್ನು ಕೇಳಿಕೊಂಡು ಸತ್ಯಧರ್ಮ ಪರಾಯಣರಾಗಿರುವರು ಎಂದೂ ಪರಾಭವವನ್ನಾಗಲೀ ವಿನಾಶವನ್ನಾಗಲೀ ಹೊಂದುವುದಿಲ್ಲ. ಆದ್ದರಿಂದ ಎಲ್ಲರೂ ಧರ್ಮರಾಜನಲ್ಲಿ ಎಚ್ಚರಿಕೆಯಿಂದ ಗುರುವೃತ್ತಿಯನ್ನು ಮಾಡಿ.

ವೈಶಂಪಾಯನಃ

ಋಷೀಣಾಂ ಚ ಪೃಥಾಯಾಶ್ಚ ನಮಸೃತ್ಯ ಪುನಃ ಪುನಃ ।
ಆವಾಸಕೃಪಣಾ ಮಾದ್ರೀ ಪ್ರತ್ಯುವಾಚ ಪೃಥಾಂ ತಥಾ ॥೮೦॥

ರಾಜನ ಸಹವಾಸದಿಂದ ಕೃಪಣಳಾದ ಮಾದ್ರಿಯು ಋಷಿಗಳಿಗೂ ಮತ್ತು ಕುಂತಿಗೂ ಪುನಃ ಪುನಃ ನಮಸ್ಕಾರಗಳನ್ನು ಮಾಡಿ ಕುಂತಿಯನ್ನು ಕುರಿತು ಹೇಳಿದಳು.

ಧನ್ಯಾ ತ್ವಮಸಿ ವಾರ್ಷ್ಣೇಯಿ ನಾಸ್ತಿ ಸ್ತ್ರೀ ಸದೃಶೀ ತ್ವಯಾ ।
ವೀರ್ಯಂ ತೇಜಶ್ಚ ಯೋಗಂ ಚ ಮಾಹಾತ್ಮ್ಯಂ ಚ ಯಶಸ್ವಿನಾಮ್॥
ಕುಂತಿ ದ್ರಕ್ಷ್ಯಸಿ ಪುತ್ರಾಣಾಂ ಪಂಚಾನಾಮಮಿತೌಜಸಾಮ್ ।
ಋಷೀಣಾಂ ಸನ್ನಿಧಾವೇಷಾ ಮಯಾ ವಾಗಭ್ಯುದೀರಿತಾ ॥೮೨॥

ವೃಷ್ಣಿಕುಲದಲ್ಲಿ ಜನಿಸಿದವಳೇ, ನೀನು ಧನ್ಯಳಾದವಳು. ನಿನಗೆ ಸಮಾನಳಾದ ಇನ್ನೊಬ್ಬ ಸ್ತ್ರೀ ಇಲ್ಲ. ನೀನು ಯಶಸ್ವಿಗಳೂ, ಅಮಿತಪರಾಕ್ರಮಿಗಳೂ ಆದ ಐದೂ ಮಕ್ಕಳ ಶೌರ್ಯವನ್ನು, ಕಾಂತಿಯನ್ನು, ಯೋಗವನ್ನು ಮತ್ತು ಮಹಾತ್ಮೆಯನ್ನೂ ನೋಡುವಿ. ಋಷಿಗಳ ಸನ್ನಿಧಿಯಲ್ಲಿ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ದಿದೃಕ್ಷಮಾಣಾಯಾಃ ಸ್ವರ್ಗಂ ಮಮೈಷಾ ನ ವೃಥಾ ಭವೇತ್ ॥೮೩॥

ಋಷಿಗಳ ಸನ್ನಿಧಿಯಲ್ಲಿ ಸ್ವರ್ಗವನ್ನು ನೋಡಲು ಬಯಸಿ ಹೋಗುತ್ತಿರುವ ಈ ನನ್ನ ಮಾತುಗಳು ಎಂದೂ ಸುಳ್ಳಾಗುವುದಿಲ್ಲ.

ಆಚಾರ್ಯಾ ಚಾಭಿವಾದ್ಯಾ ಚ ಮಮ ಪೂಜ್ಯಾ ಚ ಸರ್ವದಾ ।
ಜ್ಯೇಷ್ಠಾ ವರಿಷ್ಠಾ ತ್ವಂ ದೇವಿ ಭೂಷಿತಾ ಸದ್ಗುಣೈಃ ಶುಭೈಃ ।
ಅಭ್ಯನುಜ್ಞಾತುಮಿಚ್ಛಾಮಿ ತ್ವಯಾ ಯಾದವನಂದಿನಿ ॥೮೪॥

ನೀನು ನನಗೆ ಆಚಾರ್ಯಳು, ನನ್ನ ನಮಸ್ಕಾರಕ್ಕೆ ಪಾತ್ರಳಾದವಳು, ನನಗೆ ಯಾವಾಗಲೂ ಪೂಜ್ಯಳಾದವಳು, ವಯಸ್ಸಿನಿಂದ ಹಿರಿಯಳಾದವಳು, ಗುಣಗಳಿಂದ ಶ್ರೇಷ್ಠಳಾದವಳು. ಎಲ್ಲಾ ಸದ್ಗುಣಗಳಿಂದಲೂ ಭೂಷಿತಳಾದವಳು. ಯಾದವ ನಂದಿನಿಯೇ, ನಿನ್ನ ಅನುಮತಿಯನ್ನು ಪಡೆದು ನಾನು ಹೊರಡಲು ಬಯಸುತ್ತೇನೆ.

ಧರ್ಮಂ ಸ್ವರ್ಗಂ ಚ ಕೀರ್ತಿಂ ಚ ತ್ವತ್ಕೃತೇऽಹಮವಾಪ್ನುಯಾಮ್ ।
ಯಥಾ ತಥಾ ವಿಧತ್ಸ್ವೇಹ ಮಾ ಚ ಕಾರ್ಷೀರ್ವಿಚಾರಣಾಮ್ ॥೮೫॥

ನಿನ್ನ ಅನುಗ್ರಹದಿಂದಾಗಿ ನಾನು ಧರ್ಮವನ್ನೂ, ಸ್ವರ್ಗವನ್ನೂ ಮತ್ತು ಕೀರ್ತಿಯನ್ನೂ ಪಡೆಯುವೆನು. ನಾನು ಅವುಗಳನ್ನು ಪಡೆಯುವಂತೆ ನೀನು ಮಾಡು. ಇದನ್ನು ಪುನಃ ವಿಚಾರ ಮಾಡಬೇಡ.

ವೈಶಂಪಾಯನಃ

ಬಾಷ್ಪಸಂದಿಗ್ಧಯಾ ವಾಚಾ ಕುಂತ್ಯುವಾಚ ಯಶಸ್ವಿನೀ ।
ಅನುಜ್ಞಾತಾಸಿ ಕಲ್ಯಾಣಿ ತ್ರಿದಿವೇ ಸಂಗಮೋऽಸ್ತು ತೇ ॥೮೬॥

ಬಾಷ್ಪಗದ್ಗದವಾದ ಮಾತುಗಳಿಂದ ಯಶಸ್ವಿನಿಯಾದ ಕುಂತಿಯು ಹೇಳಿದಳು. 'ಕಲ್ಯಾಣಿಯೇ, ನಾನು ಅನುಮತಿಯನ್ನು ಕೊಟ್ಟಿದ್ದೇನೆ. ಸ್ವರ್ಗದಲ್ಲಿ ನಿನಗೆ ಪತಿಯ ಸಂಗಮವಾಗಲಿ.'

ಭರ್ತ್ರಾ ಸಹ ವಿಶಾಲಾಕ್ಷಿ ಕ್ಷಿಪ್ರಮದ್ಯೈವ ಭಾಮಿನಿ ।
ಸಂಗತಾ ಸ್ವರ್ಗಲೋಕೇ ತ್ವಂ ರಮೇಥಾಃ ಶಾಶ್ವತೀಃ ಸಮಾಃ ॥೮೭॥

ಭಾಮಿನಿಯೇ, ವಿಶಾಲಾಕ್ಷಿಯೇ, ಈ ದಿನವೇ ಸ್ವರ್ಗದಲ್ಲಿ ಪತಿಯ ಸಂಯೋಗವನ್ನು ಪಡೆದು ಬಹುಕಾಲ ಸುಖವನ್ನು ಅನುಭವಿಸುವವಳಾಗು.

ವೈಶಂಪಾಯನಃ

ತತಃ ಪುರೋಹಿತಃ ಸ್ನಾತ್ವಾ ಪ್ರೇತಕರ್ಮಣಿ ಪಾರಗಃ ।
ಹಿರಣ್ಯಶಕಲಾನ್ಯಾಜ್ಯಂ ತಿಲಾನ್ ದಧಿ ಚ ತಂಡುಲಾನ್ ॥೮೮॥

ಉದಕುಂಭಂ ಸಪರಶುಂ ಸಮಾನೀಯ ತಪಸ್ವಿಭಿಃ ।
ಅಶ್ವಮೇಧಾಗ್ನಿಮಾಹೃತ್ಯ ಯಥಾನ್ಯಾಯಂ ಸಮಂತತಃ ॥೮೯॥

ಕಾಶ್ಯಪಃ ಕಾರಯಾಮಾಸ ಪಾಂಡೋಃ ಪುತ್ರೋ ಯುಧಿಷ್ಠಿರಃ ।
ತೇನಾಗ್ನಿನಾऽದಹತ್ ಪಾಂಡುಂ ಕೃತ್ವಾ ಚಾಪಿ ಕ್ರಿಯಾಂ ತದಾ ॥೯೦॥

ಆಗ ಪ್ರೇತಕರ್ಮದಲ್ಲಿ ಪಾರಂಗತನಾದ ಪುರೋಹಿತನು ಹಿರಣ್ಯಕಲವನ್ನೂ, ಆಜ್ಯವನ್ನೂ, ತಿಲ ದಧಿ ತಂಡುಲಗಳನ್ನೂ, ಉದಕುಂಭವನ್ನೂ, ಪರಶುವನ್ನೂ ತಪಸ್ವಿಗಳಿಂದ ತರಿಸಿ, ಅಶ್ವಮೇಧಾಗ್ನಿಯನ್ನು ಶಾಸ್ತ್ರೋಕ್ತವಾದ ರೀತಿಯಲ್ಲಿ ತರಿಸಿದನು. ಕಾಶ್ಯಪಗೋತ್ರದ ಆ ಪುರೋಹಿತನು ಎಲ್ಲವನ್ನೂ ಸಿದ್ಧಮಾಡುತ್ತಿರಲು ಪಾಂಡುವಿನ ಪುತ್ರನಾದ ಯುಧಿಷ್ಠಿರನು ಉಳಿದ ಕ್ರಿಯೆಗಳನ್ನು ಮಾಡಿ ಪಾಂಡುವಿನ ಶರೀರವನ್ನು ಅಶ್ವಮೇಧಾಗ್ನಿಯಿಂದ ದಹಿಸಿದನು.

ರುದನ್‌ಶೋಕಾಭಿಸಂತಪ್ತಃ ಪಪಾತ ಭುವಿ ಪಾಂಡವಃ ।
ಋಷೀನ್ ಪುತ್ರಾನ್ ಪೃಥಾಂ ಚೈವ ವಿಸೃಜ್ಯ ಚ ನೃಪಾತ್ಮಜಾನ್ ॥೯೧॥

ನಮಸೃತ್ಯ ಚಿತಾಗ್ನಿಸ್ಥಂ ಧರ್ಮಪತ್ನೀ ನರಾಧಿಪಮ್ ।
ಮದ್ರರಾಜಾತ್ಮಜಾ ತೂರ್ಣಮನ್ವಾರೋಹದ್ ಯಶಸ್ವಿನೀ ॥೯೨॥

ಧರ್ಮರಾಜನು ಶೋಕತಪ್ತನಾಗಿ ಅಳುತ್ತಾ ಭೂಮಿಯ ಮೇಲೆ ಬಿದ್ದನು. ಮಾದ್ರಿಯು ಋಷಿಗಳನ್ನೂ, ಮಕ್ಕಳನ್ನೂ, ಕುಂತಿಯನ್ನೂ ಬಿಟ್ಟು ಚಿತಾಗ್ನಿಯಲ್ಲಿದ್ದ ರಾಜನಿಗೆ ನಮಸ್ಕಾರವನ್ನು ಮಾಡಿ ಧರ್ಮಪತ್ನಿಯೂ, ಯಶಸ್ವಿನಿಯೂ ಆದ ಅವಳು ಬೇಗ ಚಿತೆಯನ್ನು ಏರಿದಳು.

ಅಹತಾಂಬರಸಂವೀತೋ ಭ್ರಾತೃಭಿಃ ಸಹಿತೋಽನಘಃ ।
ಉದಕಂ ಕೃತವಾಂಸ್ತತ್ರ ಪುರೋಹಿತಮತೇ ಸ್ಥಿತಃ ॥೯೩॥

ಅಹತವಾದ ವಸ್ತ್ರವನ್ನುಟ್ಟ ನಿರ್ದೋಷನಾದ ಯುಧಿಷ್ಠಿರನು ಪುರೋಹಿತರು ಹೇಳಿದಂತೆ ತಮ್ಮಂದಿರಿಂದ ಸಹಿತನಾಗಿ ತಂದೆಗೆ ಉದಕ ಕ್ರಿಯೆಯನ್ನು ಮಾಡಿದನು.

ಯುಕ್ತಾನಿ ತಸ್ಯ ಕೃತ್ಯಾನಿ ಶತಶೃಂಗನಿವಾಸಿನಃ ।
ತಾಪಸಾ ವಿಧಿವಚ್ಚಕ್ರುಶ್ಚಾರಣಾ ಋಷಿಭಿಃ ಸಹ ॥೯೪॥

ಶತಶೃಂಗ ನಿವಾಸಿಗಳಾದ ತಾಪಸರು ಮತ್ತು ಅರಣ್ಯವಾಸಿಗಳು, ಋಷಿಗಳ ಜೊತೆಯಲ್ಲಿ ಸೇರಿ ಮಾಡಬೇಕಾದ ಯೋಗ್ಯವಾದ ವಿಧಿಗಳನ್ನು ವಿಧಿವತ್ತಾಗಿ ನೆರವೇರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕವಿಂಶತ್ಯಧಿಕಶತತಮೋಽಧ್ಯಾಯಃ॥

॥ ಸಂಭವಪರ್ವಣಿ ಏಕೋನಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು

★ ★ ★ ★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೪

ಪಾಂಡೋಃ ಸುತಾಶ್ಚ ಪೃಥಯಾ ಸಹಿತಾ ಮುನೀಂದ್ರೈ
ರ್ನಾರಾಯಣಾಶ್ರಮತ ಆಶು ಪುರಂ ಸ್ವಕೀಯಮ್ ।
ಜಗ್ಮುಸ್ತಥೈವ ಧೃತರಾಷ್ಟ್ರಪುರೋ ಮುನೀಂದ್ರಾ
ವೃತ್ತಂ ಸಮಸ್ತಮವದನ್ನನುಜಂ ಮೃತಂ ಚ ॥೫೫॥

ಪಾಂಡವರು ಕುಂತೀಸಹಿತರಾಗಿ ಮುನಿಶ್ರೇಷ್ಠರಿಂದಲೂ ಕೂಡಿ ಬದರಿಕಾಶ್ರಮದಿಂದ ಬೇಗನೆ ತಮ್ಮ ಹಸ್ತಿನಾವತಿ ನಗರಕ್ಕೆ ಹೋದರು. ಮುನಿಶ್ರೇಷ್ಠರು ಧೃತರಾಷ್ಟ್ರನ ಮುಂದೆ ನಡೆದುದನೆಲ್ಲ ಯಥಾವತ್ತಾಗಿ ಹೇಳಿದರು. ತಮ್ಮನಾದ ಪಾಂಡುವಿನ ಮರಣ ವಾರ್ತೆಯನ್ನು ತಿಳಿಸಿದರು.

ತೂಷ್ಣೀಂ ಸ್ಥಿತೇ ತು ನೃಪತೌ ತನುಜೇ ಚ ನದ್ಯಾಃ
ಕ್ವತ್ಥರ್ಯುತಾಪ್ತ ಉರುಮೋದಮತೀವ ಪಾಪಾಃ ।
ಊಚುಃ ಸುಯೋಧನಮುಖಾಃ ಸಹ ಸೌಬಲೇನ
ಪಾಂಡೋರ್ಮೃತಿಃ ಕಿಲ ಪುರಾ ತನಯಾಃ ಕ್ವ ತಸ್ಯ ॥೫೬॥

ಧೃತರಾಷ್ಟ್ರನೂ ಭೀಷ್ಮನೂ ಸುಮ್ಮನಿರಲು, ವಿದುರನು ಬಹಳ ಸಂತೋಷಪಡುತ್ತಿರಲು ಅತ್ಯಂತ ಪಾಪಿಗಳಾದ ಸುಯೋಧನಾದಿಗಳು ಹೇಳಿದರು, 'ಪಾಂಡುವಿನ ಮರಣ ಹಿಂದೆಯೆ ಆಗಿಹೋಗಿತ್ತು! ಅವನಿಗೆಲ್ಲಿಯ ಮಕ್ಕಳು?' ಎಂದು.

ನ ಕ್ಷೇತ್ರಜಾ ಅಪಿ ಮೃತೇ ಪಿತರಿ ಸ್ವಕೀಯೈಃ
ಸಮ್ಯಙ್ನಿಯೋಗಮನವಾಪ್ಯ ಭವಾಯ ಯೋಗ್ಯಾಃ ।
ತೇಷಾಮಿತೀರಿತ ವಚೋಽನು ಜಗಾದ ವಾಯು-
ರಾಭಾಷ್ಯ ಕೌರವಗಣಾನ್ ಗಗನಸ್ಥ ಏವ ॥೫೭॥

'ತಂದೆ ಸತ್ತಮೇಲೆ ತಾಯಿ ತಮ್ಮ ಬಂಧುಗಳಿಂದ ಸರಿಯಾಗಿ ನಿಯೋಗ ಪಡೆಯದೆ ಇದ್ದಾಗ ಹುಟ್ಟುವ ಮಕ್ಕಳು ಕ್ಷೇತ್ರಜ ಪುತ್ರರೂ ಆಗುವುದಿಲ್ಲ' ಎಂದರು ದುರ್ಯೋಧನಾದಿಗಳು. ಅವರು ಈ ಮಾತನ್ನು ಹೇಳಿದೊಡನೆ ವಾಯುದೇವ ಆಕಾಶದಲ್ಲಿನಿಂತು ಕೌರವ ಸಮೂಹಗಳನ್ನು ಕರೆದು ಹೇಳಿದ.

ಏತೇ ಹಿ ಧರ್ಮಮರುದಿಂದ್ರಭಿಷಗ್ವರೇಭ್ಯೋ
ಜಾತಾಃ ಪ್ರಜೇವತಿ ಪಿತರ್ಯುರುಧಾಮಸಾರಾಃ ।
ಶಕ್ಯಾಶ್ಚ ನೈವ ಭವತಾಂ ಕ್ವಚಿದಗ್ರಹಾಯ
ನಾರಾಯಣೇನ ಸತತಂ ಪರಿರಕ್ಷಿತಾ ಯತ್ ॥೫೮॥

'ಪಾಂಡವರು ತಂದೆ ಚೆನ್ನಾಗಿ ಬದುಕಿದ್ದಾಗಲೇ ಯಮ ವಾಯು ಇಂದ್ರ ಅಶ್ವಿನೀ ದೇವತೆಗಳಿಗೆ ಹುಟ್ಟಿದವರು, ಮಹಾಧರ್ಮಿಷ್ಠರು, ಉತ್ತಮರು, ಯಾವ ದೃಷ್ಟಿಯಿಂದಲೂ ಇವರು ನಿಮಗೆ ಪರಿತ್ಯಾಗ ಮಾಡಲು ಶಕ್ಯರಲ್ಲ. ಏಕೆಂದರೆ ವೇದವ್ಯಾಸರಿಂದ ಸದಾ ರಕ್ಷಿತರಾಗಿದ್ದಾರೆ'.

ವಾಯೋರದೃಶ್ಯವಚನಂ ಪರಿಶಂಕಮಾನೇ-
ಷ್ವಾವಿರ್ಬಭೂವ ಭಗವಾನ್ ಸ್ವಯಮಬ್ಜನಾಭಃ ।

ವ್ಯಾಸಸ್ವರೂಪ ಉರುಸರ್ವಗುಣೈಕದೇಹ
ಆದಾಯ ತಾನಗಮದಾಶು ಚ ಪಾಂಡುಗೇಹಮ್ ॥೫೯॥

ವಾಯುದೇವನ ಅದೃಶ್ಯವಾಣಿಯನ್ನೂ ಕೌರವರು ನಂಬದಿದ್ದಾಗ ಭಗವಾನ್ ವ್ಯಾಸರೂಪಿ ಪದ್ಮನಾಭ ಸ್ವತಃ ಮೈದೋರಿದ. ಪೂರ್ಣ ಸರ್ವಗುಣರೂಪ ಶರೀರದವನಾದ ಹರಿ ಪಾಂಡವರನ್ನು ಬೇಗನೆ ಪಾಂಡುವಿನ ಅರಮನೆಗೇ ಒಯ್ದ.

ತತ್ಸ್ವೀಕೃತೇಷು ಸಕಲಾ ಅಪಿ ಭೀಷ್ಮಮುಖ್ಯಾ
ವೈಚಿತ್ರವೀರ್ಯಸಹಿತಾಃ ಪರಿಪೂಜ್ಯ ಸರ್ವಾನ್ ।
ಕುಂತ್ಯಾ ಸಹೈವ ಜಗೃಹುಃ ಸುಭೃಶಂ ತದಾರ್ತಾ
ವೈಚಿತ್ರವೀರ್ಯತನಯಾಃ ಸಹ ಸೌಬಲೇನ ॥೬೦॥

ವ್ಯಾಸರು ಪಾಂಡವರನ್ನು ಸ್ವೀಕರಿಸಿದಾಗ ಧೃತರಾಷ್ಟ್ರ ಸಮೇತರಾಗಿ ಭೀಷ್ಮಾದಿಗಳೆಲ್ಲರೂ ಎಲ್ಲ ಪಾಂಡವರನ್ನು ಕುಂತಿಯೊಂದಿಗೆ ಅದರ ಪೂರ್ವಕವಾಗಿ ಸ್ವೀಕರಿಸಿದರು. ಆಗ ಕೌರವರೂ ಶಕುನಿಯೂ ಬಹಳ ಸಂಕಟಪಟ್ಟರು.

★ ★ ★ ★

ನೂರ ಇಪ್ಪತ್ತೆರಡನೆಯ ಅಧ್ಯಾಯ

(ಯುಧಿಷ್ಠಿರಾದಿಗಳನ್ನು ಕರೆದುಕೊಂಡು ಹಸ್ತಿನಪುರಕ್ಕೆ ಬಂದು ಭೀಷ್ಮಾದಿಗಳಿಗೆ ಪಾಂಡವರನ್ನು ಸಮರ್ಪಿಸಿ ಋಷಿಗಳ ಪ್ರತಿನಿವೃತ್ತಿ.)

ವೈಶಂಪಾಯನಃ

ಪಾಂಡೋರವಭೃಥಂ ಕೃತ್ವಾ ದೇವಕಲ್ಪಾ ಮಹರ್ಷಯಃ ।
ತತೋ ಮಂತ್ರಮಕುರ್ವಂತ ತೇ ಸಮೇತ್ಯ ತಪಸ್ವಿನಃ ॥೧॥

ಪಾಂಡುವಿಗೆ ಉತ್ತರಕ್ರಿಯೆಗಳನ್ನು ಮಾಡಿದ ನಂತರ ಮಾಡಬೇಕಾದ ಮಂಗಳಸ್ನಾನವನ್ನು ಮಾಡಿದ ಮೇಲೆ ದೇವಸದೃಶರಾದ ತಪಸ್ವಿಗಳಾದ ಮಹರ್ಷಿಗಳು ಎಲ್ಲರೂ ಸೇರಿ ಮಂತ್ರಾಲೋಚನೆಯನ್ನು ಮಾಡಿದರು.

ತೂಷ್ಣೀಂ ಸ್ಥಿತೇ ತು ನೃಪತೌ ತನುಜೇ ಚ ನದ್ಯಾಃ
ಕ್ಷತ್ತರ್ಯುತಾಪ್ತ ಉರುಮೋದಮತೀವ ಪಾಪಾಃ ।
ಊಚುಃ ಸುಯೋಧನಮುಖಾಃ ಸಹ ಸೌಬಲೇನ
ಪಾಂಡೋರ್ಮೃತಿಃ ಕಿಲ ಪುರಾ ತನಯಾಃ ಕ್ವ ತಸ್ಯ ॥೫೬॥

ಧೃತರಾಷ್ಟ್ರನೂ ಭೀಷ್ಮನೂ ಸುಮ್ಮನಿರಲು, ವಿದುರನು ಬಹಳ ಸಂತೋಷಪಡುತ್ತಿರಲು ಅತ್ಯಂತ ಪಾಪಿಗಳಾದ ಸುಯೋಧನಾದಿಗಳು ಹೇಳಿದರು, 'ಪಾಂಡುವಿನ ಮರಣ ಹಿಂದೆಯೆ ಆಗಿಹೋಗಿತ್ತು! ಅವನಿಗೆಲ್ಲಿಯ ಮಕ್ಕಳು?' ಎಂದು.

ನ ಕ್ಷೇತ್ರಜಾ ಅಪಿ ಮೃತೇ ಪಿತರಿ ಸ್ವಕೀಯೈಃ
ಸಮ್ಯಙ್ನಿಯೋಗಮನವಾಪ್ಯ ಭವಾಯ ಯೋಗ್ಯಾಃ ।
ತೇಷಾಮಿತೀರಿತ ವಚೋಽನು ಜಗಾದ ವಾಯು-
ರಾಭಾಷ್ಯ ಕೌರವಗಣಾನ್ ಗಗನಸ್ಥ ಏವ ॥೫೭॥

'ತಂದೆ ಸತ್ತಮೇಲೆ ತಾಯಿ ತಮ್ಮ ಬಂಧುಗಳಿಂದ ಸರಿಯಾಗಿ ನಿಯೋಗ ಪಡೆಯದೆ ಇದ್ದಾಗ ಹುಟ್ಟುವ ಮಕ್ಕಳು ಕ್ಷೇತ್ರಜ ಪುತ್ರರೂ ಆಗುವುದಿಲ್ಲ' ಎಂದರು ದುರ್ಯೋಧನಾದಿಗಳು. ಅವರು ಈ ಮಾತನ್ನು ಹೇಳಿದೊಡನೆ ವಾಯುದೇವ ಆಕಾಶದಲ್ಲಿನಿಂತು ಕೌರವ ಸಮೂಹಗಳನ್ನು ಕರೆದು ಹೇಳಿದ.

ಏತೇ ಹಿ ಧರ್ಮಮರುದಿಂದ್ರಭಿಷಗ್ವರೇಭ್ಯೋ
ಜಾತಾಃ ಪ್ರಜೇವತಿ ಪಿತರ್ಯುರುಧಾಮಸಾರಾಃ ।
ಶಕ್ಯಾಶ್ಚ ನೈವ ಭವತಾಂ ಕ್ವಚಿದಗ್ರಹಾಯ
ನಾರಾಯಣೇನ ಸತತಂ ಪರಿರಕ್ಷಿತಾ ಯತ್ ॥೫೮॥

'ಪಾಂಡವರು ತಂದೆ ಚೆನ್ನಾಗಿ ಬದುಕಿದ್ದಾಗಲೇ ಯಮ ವಾಯು ಇಂದ್ರ ಅಶ್ವಿನೀ ದೇವತೆಗಳಿಗೆ ಹುಟ್ಟಿದವರು, ಮಹಾಧರ್ಮಿಷ್ಠರು, ಉತ್ತಮರು, ಯಾವ ದೃಷ್ಟಿಯಿಂದಲೂ ಇವರು ನಿಮಗೆ ಪರಿತ್ಯಾಗ ಮಾಡಲು ಶಕ್ಯರಲ್ಲ. ಏಕೆಂದರೆ ವೇದವ್ಯಾಸರಿಂದ ಸದಾ ರಕ್ಷಿತರಾಗಿದ್ದಾರೆ'.

ವಾಯೋರದೃಶ್ಯವಚನಂ ಪರಿಶಂಕಮಾನೇ-
ಷ್ವಾವಿರ್ಬಭೂವ ಭಗವಾನ್ ಸ್ವಯಮಬ್ಜನಾಭಃ ।

ವ್ಯಾಸಸ್ವರೂಪ ಉರುಸರ್ವಗುಣೈಕದೇಹ
ಆದಾಯ ತಾನಗಮದಾಶು ಚ ಪಾಂಡುಗೇಹಮ್ ॥೫೯॥

ವಾಯುದೇವನ ಅದೃಶ್ಯವಾಣಿಯನ್ನೂ ಕೌರವರು ನಂಬದಿದ್ದಾಗ ಭಗವಾನ್ ವ್ಯಾಸರೂಪಿ ಪದ್ಮನಾಭ ಸ್ವತಃ ಮೈದೋರಿದ. ಪೂರ್ಣ ಸರ್ವಗುಣರೂಪ ಶರೀರದವನಾದ ಹರಿ ಪಾಂಡವರನ್ನು ಬೇಗನೆ ಪಾಂಡುವಿನ ಅರಮನೆಗೇ ಒಯ್ದ.

ತತ್‌ಸ್ವೀಕೃತೇಷು ಸಕಲಾ ಅಪಿ ಭೀಷ್ಮಮುಖ್ಯಾ
ವೈಚಿತ್ರವೀರ್ಯಸಹಿತಾಃ ಪರಿಪೂಜ್ಯ ಸರ್ವಾನ್ ।
ಕುಂತ್ಯಾ ಸಹೈವ ಜಗೃಹುಃ ಸುಭೃಶಂ ತದಾರ್ತಾ
ವೈಚಿತ್ರವೀರ್ಯತನಯಾಃ ಸಹ ಸೌಬಲೇನ ॥೬೦॥

ವ್ಯಾಸರು ಪಾಂಡವರನ್ನು ಸ್ವೀಕರಿಸಿದಾಗ ಧೃತರಾಷ್ಟ್ರ ಸಮೇತರಾಗಿ ಭೀಷ್ಮಾದಿಗಳೆಲ್ಲರೂ ಎಲ್ಲ ಪಾಂಡವರನ್ನು ಕುಂತಿಯೊಂದಿಗೆ ಅದರ ಪೂರ್ವಕವಾಗಿ ಸ್ವೀಕರಿಸಿದರು. ಆಗ ಕೌರವರೂ ಶಕುನಿಯೂ ಬಹಳ ಸಂಕಟಪಟ್ಟರು.

★ ★ ★ ★

ನೂರ ಇಪ್ಪತ್ತೆರಡನೆಯ ಅಧ್ಯಾಯ

(ಯುಧಿಷ್ಠಿರಾದಿಗಳನ್ನು ಕರೆದುಕೊಂಡು ಹಸ್ತಿನಪುರಕ್ಕೆ ಬಂದು ಭೀಷ್ಮಾದಿಗಳಿಗೆ ಪಾಂಡವರನ್ನು ಸಮರ್ಪಿಸಿ ಋಷಿಗಳ ಪ್ರತಿನಿವೃತ್ತಿ.)

ವೈಶಂಪಾಯನಃ

ಪಾಂಡೋರವಭೃಥಂ ಕೃತ್ವಾ ದೇವಕಲ್ಪಾ ಮಹರ್ಷಯಃ ।
ತತೋ ಮಂತ್ರಮಕುರ್ವಂತ ತೇ ಸಮೇತ್ಯ ತಪಸ್ವಿನಃ ॥೧॥

ಪಾಂಡುವಿಗೆ ಉತ್ತರಕ್ರಿಯೆಗಳನ್ನು ಮಾಡಿದ ನಂತರ ಮಾಡಬೇಕಾದ ಮಂಗಳಸ್ನಾನವನ್ನು ಮಾಡಿದ ಮೇಲೆ ದೇವಸದೃಶರಾದ ತಪಸ್ವಿಗಳಾದ ಮಹರ್ಷಿಗಳು ಎಲ್ಲರೂ ಸೇರಿ ಮಂತ್ರಾಲೋಚನೆಯನ್ನು ಮಾಡಿದರು.

ಪಾಂಡು ಮತ್ತು ಮಾದ್ರಿಯರ ದೇಹವಿಲ್ಲದೆ ಕೇವಲ ಪಾಂಡವರನ್ನು ಹಸ್ತಿನಪುರಕ್ಕೆ ಕರೆದುಕೊಂಡು ಹೋದರೆ ದುರ್ಯೋಧನಾದಿಗಳೂ ಅಪಹಾಸ ಮಾಡುವುದರಿಂದ ಪಾಂಡು ಮತ್ತು ಮಾದ್ರಿಯರ ಶರೀರದ ಪ್ರತಿನಿಧಿಗಳಾದ ಅಸ್ಥಿಗಳನ್ನೂ ತೆಗೆದುಕೊಂಡು ಹೋಗಬೇಕು ಎಂಬುದು ಒಂದು ಮಂತ್ರಾಲೋಚನೆ. ಶತಶೃಂಗ ಪರ್ವತದಲ್ಲಿ ಅವರಿಬ್ಬರಿಗೂ ಉತ್ತರ ಕ್ರಿಯೆಗಳು ನಡೆದಿದ್ದರೂ ರಾಜೋಚಿತವಾದ ಉತ್ತರಕ್ರಿಯೆಗಳು ನಡೆದಿಲ್ಲ. ಅವರ ಶರೀರಗಳಿಲ್ಲದೇ ಹಾಗೆಯೇ ಹಸ್ತಿನಪುರಕ್ಕೆ ಹೋದರೆ ರಾಜೋಚಿತವಾದ ಉತ್ತರಕ್ರಿಯೆಗಳನ್ನು ಮಾಡುವುದರಲ್ಲಿ ಉದಾಸೀನವನ್ನು ಮಾಡಬಹುದು. ಆದ್ದರಿಂದ ಅವರ ಶರೀರದ ಭಾಗವಾದ ಅಸ್ಥಿಯನ್ನು ತೆಗೆದುಕೊಂಡು ಹೋಗಬೇಕು ಎಂಬುದು ಎರಡನೆಯ ಮಂತ್ರಾಲೋಚನೆ.

ಹಿತ್ವಾ ರಾಜ್ಯಂ ಚ ಭೋಗಾಂಶ್ಚ ಸ ಮಹಾತ್ಮಾ ಮಹಾಯಶಾಃ ।
ಅಸ್ಮಿನ್ ಸ್ಥಾನೇ ತಪಸ್ತಪ್ತುಂ ತಾಪಸಾನ್ ಶರಣಂ ಗತಃ ॥೨॥

ಮಹಾತ್ಮನೂ, ಮಹಾಕೀರ್ತಿವಂತನೂ ಆದ ಆ ಪಾಂಡುವು ರಾಜ್ಯವನ್ನೂ, ಭೋಗವನ್ನೂ ತೊರೆದು ಈ ಸ್ಥಾನಕ್ಕೆ ಬಂದು ತಪಸ್ಸನ್ನು ಮಾಡಲು ತಪಸ್ವಿಗಳನ್ನು ಆಶ್ರಯಿಸಿದನು.

ಸಂಜಾತಮಾತ್ರಾನ್ ಪುತ್ರಾಂಶ್ಚ ದಾರಾಂಶ್ಚ ಭವತಾಮಿಹ ।
ಪ್ರದಾಯೋಪನಿಧಿಂ ರಾಜಾ ಪಾಂಡುಃ ಸ್ವರ್ಗಮಿತೋ ಗತಃ ॥೩॥

ಪುತ್ರರನ್ನು ಪಡೆದ ತಕ್ಷಣವೇ ಪುತ್ರರನ್ನೂ ಮತ್ತು ಪತ್ನಿಯರನ್ನೂ ನಿಮ್ಮಲ್ಲಿ ನ್ಯಾಸವಾಗಿಟ್ಟು ಪಾಂಡುರಾಜನು ಇಲ್ಲಿಂದ ಸ್ವರ್ಗಕ್ಕೆ ಪ್ರಯಾಣ ಮಾಡಿದ್ದಾನೆ.

ತಸ್ಮಾತ್ ಕೃತ್ಯಂ ಪರೀಕ್ಷಧ್ವಮಿತಿ ಹೋವಾಚ ಧರ್ಮವಿತ್ ।
ಶುಕಃ ಪರಮಧರ್ಮಜ್ಞೋ ಮಹರ್ಷಿಃ ಸಂಶಿತವ್ರತಃ ॥೪॥

ಆದ್ದರಿಂದ ಮುಂದೆ ಮಾಡಬೇಕಾದ ಕರ್ತವ್ಯವನ್ನು ವಿಚಾರ ಮಾಡಿ ಎಂದು ಸಂಶಿತವ್ರತನೂ, ಪರಮಧರ್ಮಜ್ಞನೂ ಆದ ರಾಜರ್ಷಿಯಾದ ಶುಕನು (ಶರ್ಯಾತಿಯ ಪುತ್ರನು) ಹೇಳಿದನು.

ತೇ ಪರಸ್ಪರಮಾಮಂತ್ರ್ಯ ಸರ್ವಭೂತಹಿತೇ ರತಾಃ ।
ಧರ್ಮಂ ಚೈವ ಪುರಸ್ಕೃತ್ಯ ಜ್ಯೇಷ್ಠಂ ಮತಿಮಕುರ್ವತ ॥೫॥

ಸರ್ವಭೂತಹಿತದಲ್ಲಿರತರಾದ ಆ ಮುನಿಗಳು ಧರ್ಮವನ್ನೇ ಪ್ರಧಾನವಾಗಿರಿಸಿಕೊಂಡು ಪರಸ್ಪರಮಂತ್ರಾಲೋಚನೆಯನ್ನು ಮಾಡಿ ಶ್ರೇಷ್ಠವಾದ ನಿರ್ಧಾರವನ್ನು ಮಾಡಿದರು.

ಕುರುಕ್ಷೇತ್ರಮಿತಃ ಕುಂತೀಂ ತಾಂ ಸಪುತ್ರಾಂ ನಯಾಮಹೇ ।
ಇತ್ಯುಕ್ತ್ವಾ ತೇ ಮಹಾತ್ಮಾನೋ ಗಮನೇ ಚಕ್ರಿರೇ ಮನಃ ॥೬॥

ಇಲ್ಲಿಂದ ಕುಂತಿಯನ್ನು ಮತ್ತು ಮಕ್ಕಳನ್ನು ಕರೆದುಕೊಂಡು 'ಕುರುಕ್ಷೇತ್ರಕ್ಕೆ ಹೋಗೋಣ' ಎಂದು ಹೇಳಿ ಆ ಮಹಾತ್ಮರು ಹೊರಡಲು ನಿರ್ಧರಿಸಿದರು.

ತಸ್ಮಿನ್ನೇವ ಕ್ಷಣೇ ಸರ್ವೇ ಪರಿವಾರ್ಯ ಪ್ರತಸ್ಥಿರೇ ।
ಪಾಂಡೋಃ ಪುತ್ರಾನ್ ಪುರಸ್ಕೃತ್ಯ ನಗರಂ ನಾಗಸಾಹ್ವಯಮ್ ॥೭॥

ಆ ಕ್ಷಣದಲ್ಲಿಯೇ ಎಲ್ಲರೂ ಒಟ್ಟಿಗೆ ಸೇರಿ ಪಾಂಡುಪುತ್ರರನ್ನು ಮುಂದೆ ಮಾಡಿಕೊಂಡು ಹಸ್ತಿನಪುರಕ್ಕೆ ಹೊರಟರು.

ಉದಾರಮನಸಃ ಸಿದ್ಧಾ ಗಮನೇ ಚಕ್ರಿರೇ ಮನಃ ।
ಭೀಷ್ಮಾಯ ಪಾಂಡವಾನ್ ದಾತುಂ ಧೃತರಾಷ್ಟ್ರಾಯ ಚೈವ ಹಿ ॥೮॥

ಉದಾರಮನಸ್ಸುಳ್ಳ ಸಿದ್ಧಪುರುಷರಾದ ಆ ಮುನಿಗಳು ಭೀಷ್ಮನಿಗೂ ಮತ್ತು ಧೃತರಾಷ್ಟ್ರನಿಗೂ ಪಾಂಡವರನ್ನು ಒಪ್ಪಿಸಲು ನಿರ್ಧರಿಸಿ ಹೊರಟರು.

ತಸ್ಮಿನ್ನೇವ ಕ್ಷಣೇ ಸರ್ವೇ ತಾನಾದಾಯ ಪ್ರತಸ್ಥಿರೇ ।
ಪಾಂಡೋರ್ದಾರಾಂಶ್ಚ ಪುತ್ರಾಂಶ್ಚ ಶರೀರೇ ಚೈವ ತಾಪಸಾಃ ॥೯॥

ಆ ಕ್ಷಣದಲ್ಲಿಯೇ ಎಲ್ಲಾ ತಾಪಸರು ಪಾಂಡವರನ್ನೂ, ಕುಂತಿಯನ್ನೂ, ಪಾಂಡು ಮತ್ತು ಮಾದ್ರಿಯರ ಅಸ್ಥಿಗಳನ್ನೂ ತೆಗೆದುಕೊಂಡು ಹೊರಟರು.

ಸುಖಿನೀ ಸಾ ಪುರಾ ಭೂತ್ವಾ ಸತತಂ ಪುತ್ರವತ್ಸಲಾ ।
ಪ್ರಪನ್ನಾ ದೀರ್ಘಮಧ್ವಾನಂ ಸಂಕ್ಷಿಪ್ತಂ ತಮಮನ್ಯತ ॥೧೦॥

ಹಿಂದೆ ಹಸ್ತಿನಪುರದಲ್ಲಿ ಸುಖವಾಗಿ ಬದುಕಿದ್ದ ಪುತ್ರವತ್ಸಲಳಾದ ಕುಂತಿಯು ದೀರ್ಘವಾದ ಮಾರ್ಗದಲ್ಲಿ ಹೋಗುತ್ತಾ ಅದನ್ನು ಸಂಕ್ಷಿಪ್ತವೆಂದೇ ಭಾವಿಸಿದಳು.

ಸಾ ನದೀರ್ಘೇಣ ಕಾಲೇನ ಸಂಪ್ರಾಪ್ತಾ ಕುರುಜಾಂಗಲಮ್ ।
ವರ್ಧಮಾನಪುರದ್ವಾರಮಾಸಸಾದ ಯಶಸ್ವಿನೀ ॥೧೧॥

ಯಶಸ್ವಿನಿಯಾದ ಆ ಕುಂತಿಯು ಅಲ್ಪಕಾಲದಲ್ಲಿಯೇ ಕುರುಜಾಂಗಲವನ್ನು ತಲುಪಿ ನಗರದ ದೊಡ್ಡ ಹೆಬ್ಬಾಗಿಲನ್ನು ಸಮೀಪಿಸಿದಳು.

ತಚ್ಚಾರಣಸಹಸ್ರೇಣ ಮುನೀನಾಂ ಸಂಘಮಾಗತಮ್ ।
ಶ್ರುತ್ವಾ ನಾಗಪುರೇಂದ್ರಾಣಾಂ ವಿಸ್ಮಯಃ ಸಮಜಾಯತ ॥೧೨॥

ಸಹಸ್ರಾರು ಚಾರಣರ ಜೊತೆಯಲ್ಲಿ ಸಹಸ್ರಾರು ಋಷಿಗಳು ಬಂದ ವಾರ್ತೆಯನ್ನು ಕೇಳಿ ನಾಗಪುರವಾಸಿಗಳಿಗೆ ವಿಸ್ಮಯವುಂಟಾಯಿತು.

ಮುಹೂರ್ತೋದಿತ ಆದಿತ್ಯೇ ಸರ್ವೇ ಭೀಷ್ಮಪುರೋಗಮಾಃ ।
ಸದಾರಾಸ್ತಾಪಸಾನ್ ದ್ರಷ್ಟುಂ ನಿರ್ಯಯುಃ ಪುರವಾಸಿನಃ ॥೧೩॥

ಸೂರ್ಯನು ಉದಯಿಸಿ ಒಂದು ಮುಹೂರ್ತವಾಗುತ್ತಿರಲು ಭೀಷ್ಮ ಮೊದಲಾದವರೆಲ್ಲರೂ, ಪತ್ನಿಯ ಸಹಿತರಾದ ನಗರವಾಸಿಗಳೂ ತಾಪಸರನ್ನು ನೋಡಲು ಹೊರಗೆ ಬಂದರು.

ಸ್ತ್ರೀಸಂಘಾಃ ಕ್ಷತ್ರಸಂಘಾಶ್ಚ ಯಾನಸಂಘಾನ್ ಸಮಾಶ್ರಿತಾಃ ।
ಬ್ರಾಹ್ಮಣೈಃ ಸಹ ನಿರ್ಜಗ್ಮುರ್ಬ್ರಾಹ್ಮಣಾಶ್ಚ ಸಯೋಷಿತಃ ॥೧೪॥

ಸ್ತ್ರೀಯರ ಸಮೂಹವೂ, ಕ್ಷತ್ರಿಯರ ಸಮೂಹವೂ, ಅನೇಕ ಯಾನಗಳನ್ನು ಏರಿ ಬ್ರಾಹ್ಮಣರ ಜೊತೆಯಲ್ಲಿ ಹೊರಗೆ ಬಂದರು. ಬ್ರಾಹ್ಮಣರೂ ಸಹ ತಮ್ಮ ಪತ್ನಿಯರ ಜೊತೆಯಲ್ಲಿ ಹೊರಗೆ ಬಂದರು.

ತಥಾ ವಿಟ್‌ಚ್ಛೂದ್ರಸಂಘಾನಾಂ ಮಹಾನ್ ವ್ಯತಿಕರೋಽಭವತ್ ।
ನ ಕಶ್ಚಿದಕರೋದೀರ್ಷ್ಯಾಮಭವನ್ ಧರ್ಮಬುದ್ಧಯಃ ॥೧೫॥

ಹಾಗೆಯೇ ವೈಶ್ಯರ ಸಮೂಹವೂ, ಶೂದ್ರರ ಸಮೂಹವೂ ಹೊರಗೆ ಬಂದು ದೊಡ್ಡ ಜಾತ್ರೆಯಾದಂತೆ ಆಯಿತು. ಅವರಲ್ಲಿ ಯಾರೂ ಅಸೂಯೆ ಪಡಲಿಲ್ಲ. ಎಲ್ಲರೂ ಧರ್ಮಬುದ್ಧಿಯುಳ್ಳವರಾಗಿದ್ದರು.

ತಥಾ ಭೀಷ್ಮಃ ಶಾಂತನವಃ ಸೋಮದತ್ತೋಽಥ ಬಾಹ್ಲಿಕಃ ।
ಪ್ರಜ್ಞಾಚಕ್ಷುಶ್ಚ ರಾಜರ್ಷಿಃ ಕ್ಷತ್ತಾ ಚ ವಿದುರಃ ಸ್ವಯಮ್ ॥೧೬॥

ಸಾ ಚ ಸತ್ಯವತೀ ದೇವೀ ಕೌಸಲ್ಯಾ ಚ ಯಶಸ್ವಿನೀ ।
ರಾಜದಾರೈಃ ಪರಿವೃತಾ ಗಾಂಧಾರೀ ಚಾಪಿ ನಿರ್ಯಯೌ ॥೧೭॥

ಶಂತನುವಿನ ಮಗನಾದ ಭೀಷ್ಮರು, ಸೋಮದತ್ತ ಬಾಹ್ಲಿಕರು, ಪ್ರಜ್ಞಾಚಕ್ಷುವಾದ ಧೃತರಾಷ್ಟ್ರ, ವಿದುರ, ಸತ್ಯವತಿ, ಕೀರ್ತಿವಂತಳಾದ ಅಂಬಿಕೆ, ಮತ್ತು ಬೇರೆ ರಾಜಪತ್ನಿಯರಿಂದ ಕೂಡಿದ ಗಾಂಧಾರಿ ಎಲ್ಲರೂ ಹೊರಗೆ ಬಂದರು.

ಧೃತರಾಷ್ಟ್ರಸ್ಯ ದಾಯಾದಾ ದುರ್ಯೋಧನಪುರೋಗಮಾಃ ।
ಭೂಷಿತಾ ಭೂಷಣೈಶ್ಚಿತ್ರೈಃ ಶತಸಂಖ್ಯಾ ವಿನಿರ್ಯಯುಃ ॥೧೮॥

ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನ ಮೊದಲಾದವರು ವಿಚಿತ್ರವಾದ ಭೂಷಣಗಳಿಂದ ಅಲಂಕೃತರಾಗಿ ಶತಸಂಖ್ಯೆಯಲ್ಲಿ ಹೊರಗೆ ಬಂದರು.

ತಾನ್ ಮಹರ್ಷಿಗಣಾನ್ ಸರ್ವಾನ್ ಶಿರೋಭಿರಭಿವಾದ್ಯ ಚ ।
ಸ್ವಾಗತಂ ವಚನಂ ಚೋಕ್ತ್ವಾ ಪಾಂಡೋರ್ಭವನಮಾವಿಶನ್ ॥೧೯॥

ಅವರೆಲ್ಲರೂ ಆ ಮಹರ್ಷಿಗಳ ಸಮೂಹಕ್ಕೆ ಶಿರಸಾ ನಮಸ್ಕಾರವನ್ನು ಮಾಡಿ ಸ್ವಾಗತವನ್ನು ಕೋರಿ ಪಾಂಡುವು ಮೊದಲು ವಾಸಮಾಡಿದ ಭವನವನ್ನು ಪ್ರವೇಶಿಸಿದರು.

ಉಪೋಪವಿವಿಶುಃ ಸರ್ವೇ ಕೌರವಸ್ಯ ಪುರೋಹಿತಾಃ ।
ತಥೈವ ಶಿರಸಾ ಭೂಮಾವಭಿವಾದ್ಯ ಪ್ರಸಾದ್ಯ ಚ ॥೨೦॥

ಧೃತರಾಷ್ಟ್ರನ ಪುರೋಹಿತರೆಲ್ಲರೂ ಋಷಿಗಣಕ್ಕೆ ಶಿರಸಾ ನಮಸ್ಕಾರವನ್ನು ಮಾಡಿ ಅವರ ಅನುಗ್ರಹವನ್ನು ಪ್ರಾರ್ಥಿಸಿ ಸಮೀಪದಲ್ಲಿ ಭೂಮಿಯ ಮೇಲೆ ಕುಳಿತರು.

ಉಪೋಪವಿವಿಶುಃ ಸರ್ವೇ ಪೌರಜಾನಪದಾ ಅಪಿ ।
ತಮಕೂಜಮಿವಾಜ್ಞಾಯ ಜನೌಘಂ ಸರ್ವಶಸ್ತದಾ ॥೨೧॥

ಭೀಷ್ಮೋ ರಾಜ್ಯಂ ಚ ರಾಷ್ಟ್ರಂ ಚ ಮಹರ್ಷಿಭ್ಯೋ ನ್ಯವೇದಯತ್ ।
ತೇಷಾಂ ವೃದ್ಧತಮಃ ಕಶ್ಚಿತ್ ಪ್ರತ್ಯುತ್ಥಾಯ ಜಟಾಜಿನೀ ।
ಮಹರ್ಷಿಮತಮಾಜ್ಞಾಯ ಮಹರ್ಷಿರಿದಮಬ್ರವೀತ್ ॥೨೨॥

ಪೌರಜಾನಪದರೆಲ್ಲರೂ ಸಹ ಸಮೀಪದಲ್ಲಿ ಕುಳಿತರು. ಆ ಜನಸಾಗರವೆಲ್ಲವೂ ನಿಶ್ಶಬ್ದದಿಂದ ಕುಳಿತಿರುವುದನ್ನು ಗಮನಿಸಿದ ಭೀಷ್ಮರು ಎದ್ದು ನಿಂತು ರಾಜ್ಯವನ್ನು ಮತ್ತು ರಾಷ್ಟ್ರವನ್ನು ಮಹರ್ಷಿಗಳಿಗೆ ನಿವೇದಿಸಿದರು. ಆ ಋಷಿಗಳ ಮಧ್ಯದಲ್ಲಿ ಜಟಾಜಿನಗಳನ್ನು ಧರಿಸಿದ್ದ ಅತ್ಯಂತ ವಯಸ್ಸಾಗಿದ್ದ ಮಹರ್ಷಿಗಳೊಬ್ಬರು ಎದ್ದು ನಿಂತು ಉಳಿದ ಮಹರ್ಷಿಗಳ ಅಭಿಪ್ರಾಯದಂತೆ ಈ ಮಾತುಗಳನ್ನು ಆಡಿದರು.

ಮಹರ್ಷಿಃ

ಯಃ ಸ ಕೌರವ್ಯದಾಯಾದಃ ಪಾಂಡುರ್ನಾಮ ನರಾಧಿಪಃ ।
ಹಿತ್ವಾ ರಾಷ್ಟ್ರಂ ಧನಂ ಸರ್ವಂ ಶತಶೃಂಗಮಿತೋ ಗತಃ ॥೨೩॥

ಕೌರವ ವಂಶಧರನಾದ ಪಾಂಡುರಾಜನು ತನ್ನ ರಾಷ್ಟ್ರವನ್ನೂ ಮತ್ತು ಸರ್ವಧನವನ್ನೂ ಪರಿತ್ಯಾಗ ಮಾಡಿ ಇಲ್ಲಿಂದ ಶತಶೃಂಗಪರ್ವತಕ್ಕೆ ಬಂದನು.

ಕಾಮಭೋಗಾನ್ ಪರಿತ್ಯಜ್ಯ ತಪಸ್ವೀ ಸಂಬಭೂವ ಹ ।
ಸ ಯಥೋಕ್ತಂ ತಪಸ್ತೇಪೇ ಪತ್ರಮೂಲಫಲಾಶನಃ ॥೨೪॥

ಕಾಮಭೋಗಗಳನ್ನು ತೊರೆದು ತಪಸ್ವಿಯಾಗಿ ಅವನು ಎಲೆಗಳನ್ನು, ಗೆಡ್ಡೆಗೆಣಸುಗಳನ್ನು ಹಣ್ಣುಗಳನ್ನು ಆಹಾರವಾಗಿ ಸೇವಿಸಿ ಶಾಸ್ತ್ರೋಕ್ತ ವಿಧಾನದಿಂದ ತಪಸ್ಸನ್ನು ಮಾಡಿದನು.

ಪತ್ನೀಭ್ಯಾಂ ಸಹ ಧರ್ಮಾತ್ಮಾ ಕಂಚಿತ್ ಕಾಲಮತಂದ್ರಿತಃ ।
ತೇನ ವೃತ್ತಸಮಾಚಾರೈಃ ತಪಸಾ ಚ ತಪಸ್ವಿನಃ ।
ತೋಷಿತಾಸ್ತಾಪಸಾಸ್ತತ್ರ ಶತಶೃಂಗನಿವಾಸಿನಃ ॥೨೫॥

ಆ ಧರ್ಮಾತ್ಮನು ತನ್ನ ಪತ್ನಿಯರ ಜೊತೆಯಲ್ಲಿ ಸ್ವಲ್ಪಕಾಲ ಜಾಗರೂಕನಾಗಿ ತಪಸ್ಸು ಮಾಡಿದನು. ಅವನು ತನ್ನ ನಡತೆಯಿಂದ ಶ್ರೇಷ್ಠವಾದ ಆಚಾರಗಳಿಂದ ಮತ್ತು ತಪಸ್ಸಿನಿಂದ ಶತಶೃಂಗನಿವಾಸಿಗಳಾದ ಎಲ್ಲಾ ತಪಸ್ವಿಗಳನ್ನೂ ಸಂತೋಷಪಡಿಸಿದನು.

ಸ್ವರ್ಗಲೋಕಂ ಗಂತುಕಾಮಂ ತಪಸಾ ವಿನಿವಾರ್ಯ ತಮ್ ।
ಉದ್ಯಂತಂ ಸಹ ಪತ್ನೀಭ್ಯಾಂ ವಿಪ್ರಾ ವಚನಮಬ್ರುವನ್ ॥೨೬॥

ತಪಸ್ಸನ್ನು ಮಾಡಿ ಪತ್ನಿಯರ ಜೊತೆಯಲ್ಲಿ ಸ್ವರ್ಗಲೋಕಕ್ಕೆ ಹೋಗಲು ಉದ್ಯುಕ್ತನಾದ ಅವನನ್ನು ಕುರಿತು ಬ್ರಾಹ್ಮಣರೆಲ್ಲರೂ ಹೇಳಿದರು.

ಅನಪತ್ಯಸ್ಯ ರಾಜೇಂದ್ರ ಪುಣ್ಯಲೋಕಾ ನ ಸಂತಿ ತೇ ತಸ್ಮಾದ್ಧರ್ಮಂ ಚ
ವಾಯುಂ ಚ ಮಹೇಂದ್ರಂ ಚ ತಥಾऽಶ್ವಿನೌ ।
ಆರಾಧಯಸ್ವ ರಾಜೇಂದ್ರ ಪತ್ನೀಭ್ಯಾಂ ಸಹ ದೇವತಾಃ ॥೨೭॥

ರಾಜೇಂದ್ರನೇ, ನೀನು ಮಕ್ಕಳನ್ನು ಪಡೆಯದಿದ್ದಿರೆ, ನಿನಗೆ ಸದ್ಗತಿಯಾಗುವುದಿಲ್ಲ. ಆದ್ದರಿಂದ ನಿನ್ನ ಪತ್ನಿಯರ ಜೊತೆಯಲ್ಲಿ ಯಮ, ವಾಯು, ಇಂದ್ರ ಮತ್ತು ಅಶ್ವಿನೀದೇವತೆಗಳನ್ನು ಆರಾಧಿಸು.

ತೃಪ್ತಾಃ ಪುತ್ರಾನ್ ಪ್ರಯಚ್ಛಂತಿ ಋಣಮುಕ್ತೋ ಭವಿಷ್ಯಸಿ ।
ತಪಸಾ ದಿವ್ಯಚಕ್ಷುಷ್ಟ್ವಾತ್ ಪಶ್ಯಾಮಸ್ತೇ ತಥಾ ಸುತಾನ್ ॥೨೮॥

ಪ್ರಸನ್ನರಾದ ದೇವತೆಗಳು ನಿನಗೆ ಪುತ್ರರನ್ನು ಕರುಣಿಸುತ್ತಾರೆ. ಆಗ ನೀನು ಋಣಮುಕ್ತನಾಗುವಿ. ನಮ್ಮ ತಪಸ್ಸಿನಿಂದ ಉಂಟಾದ ದಿವ್ಯದೃಷ್ಟಿಯಿಂದ ನಿನ್ನ ಅಂತಹ ಪುತ್ರರನ್ನು ನಾವು ನೋಡುತ್ತಿದ್ದೇವೆ.

ಅಸ್ಮಾಕಂ ವಚನಂ ಶ್ರುತ್ವಾ ದೇವಾನಾರಾಧಯತ್ ತದಾ ।
ಬ್ರಹ್ಮಚರ್ಯವ್ರತಸ್ಥಸ್ಯ ತಸ್ಯ ದಿವ್ಯೇನ ಹೇತುನಾ ।
ತಸ್ಮಾದ್ ಧರ್ಮಾದಯಂ ಪುತ್ರಃ ಕುಂತ್ಯಾಂ ಜಾತೋ ಯುಧಿಷ್ಠಿರಃ ॥

ನಮ್ಮ ಮಾತುಗಳನ್ನು ಕೇಳಿ ಬ್ರಹ್ಮಚರ್ಯವ್ರತಸ್ಥನಾದ ಪಾಂಡುವು ದೇವತೆಗಳನ್ನು ಆರಾಧಿಸಿದನು. ಅವನಿಗೆ ದಿವ್ಯವಾದ ನಿಮಿತ್ತದಿಂದ ಯಮನಿಂದ ಕುಂತಿಯಲ್ಲಿ ಈ ಯುಧಿಷ್ಠಿರನೆಂಬ ಪುತ್ರನು ಜನಿಸಿದನು.

ತಥೇಮಂ ಬಲಿನಾಂ ಶ್ರೇಷ್ಠಂ ತಸ್ಯ ರಾಜ್ಞೋ ಮಹಾತ್ಮನಃ ।
ಮಾತರಿಶ್ವಾ ದದೌ ಪುತ್ರಂ ಭೀಮಂ ಸತ್ತ್ವವತಾಂ ವರಮ್ ।
ಪುರುಹೂತಾದಯಂ ಜಜ್ಞೇ ಕುಂತ್ಯಾಮೇವ ಧನಂಜಯಃ ॥೩೦॥

ಹಾಗೆಯೇ, ವಾಯುದೇವನು ಮಹಾತ್ಮನಾದ ರಾಜನಿಗೆ ಶ್ರೇಷ್ಠವಾದ ಬಲವುಳ್ಳ ಮತ್ತು ಪ್ರಾಣಾಧಿಕನಾದ ಭೀಮನೆಂಬ ಈ ಪುತ್ರನನ್ನು ಕೊಟ್ಟನು. ಇಂದ್ರನಿಂದ ಕುಂತಿಯಲ್ಲಿ ಧನಂಜಯನು ಜನಿಸಿದನು.

ಅಸ್ಮಿನ್ ಜಾತೇ ಮಹೇಷ್ವಾಸೇ ದೇವೈರಿಂದ್ರಸ್ತಥಾऽಬ್ರವೀತ್ ।
ಮತ್ಪ್ರಸಾದಾದಯಂ ಜಾತಃ ಕುಂತಿ ಸತ್ಯಪರಾಕ್ರಮಃ ॥೩೧॥

ಮಹಾಧನುರ್ವಿದ್ಯೆಯನ್ನು ಬಲ್ಲ ಅರ್ಜುನನು ಜನಿಸುತ್ತಿರಲು ದೇವತೆಗಳ ಜೊತೆಯಲ್ಲಿದ್ದ ಇಂದ್ರನು ಹೀಗೆ ಹೇಳಿದನು. ಕುಂತಿ, ನನ್ನ ಅನುಗ್ರಹದಿಂದ ಸತ್ಯಪರಾಕ್ರಮನಾದ ಈ ಪುತ್ರನು ಜನಿಸಿದ್ದಾನೆ.

ಅಜೇಯೋ ಯುಧಿ ಜೇತಾऽರೀನ್ ದೇವತಾದೀನ್ ಸ ಸಂಶಯಃ ।
ಯಸ್ಯ ಕೀರ್ತಿರ್ಮಹೇಷ್ವಾಸಾನ್ ಸರ್ವಾನ್ ನೋऽಭಿಭವಿಷ್ಯತಿ ॥೩೨॥

ಅವನು ಯುದ್ಧದಲ್ಲಿ ಯಾರಿಗೂ ಸೋಲುವುದಿಲ್ಲ. ಅವನು ಶತ್ರುಗಳನ್ನೂ ಮತ್ತು ದೇವತೆಗಳನ್ನೂ ನಿಃಸ್ಸಂಶಯವಾಗಿ ಗೆಲ್ಲುವನು. ಅವನ ಕೀರ್ತಿಯು ಎಲ್ಲಾ ಧನುರ್ಧಾರಿಗಳ ಕೀರ್ತಿಯನ್ನೂ ಪರಾಭವ- ಗೊಳಿಸುವುದು.

ಯುಧಿಷ್ಠಿರೋ ರಾಜಸೂಯಂ ಭ್ರಾತೃವೀರ್ಯಾದವಾಪ್ಸ್ಯತಿ ।
ಏಷ ಜೇತಾ ಮನುಷ್ಯಾಂಶ್ಚ ಸರ್ವಾನ್ ಗಂಧರ್ವರಾಕ್ಷಸಾನ್ ॥೩೩॥

ತಮ್ಮನಾದ ಇವನ ಸಾಮರ್ಥ್ಯದಿಂದ ಯುಧಿಷ್ಠಿರನು ರಾಜಸೂಯಯಾಗವನ್ನು ಮಾಡುವನು. ಇವನು ಎಲ್ಲಾ ಮನುಷ್ಯರನ್ನೂ ಮತ್ತು ಗಂಧರ್ವರಾಕ್ಷಸರನ್ನೂ ಜಯಿಸುವನು.

ಏಷ ದುರ್ಯೋಧನಂ ಕೀರ್ತ್ಯಾ ಭಾರತಾಂಶ್ಚ ವಿಜೇಷ್ಯತಿ ।
ವೀರಸ್ಯೈತಸ್ಯ ವಿಕ್ರಾಂತೈರ್ಧರ್ಮಪುತ್ರೋ ಯುಧಿಷ್ಠಿರಃ ॥೩೪॥

ಯಕ್ಷ್ಯತೇ ರಾಜಸೂಯಾದ್ಯೈರ್ಧರ್ಮ ಏವ ಪರಃ ಸದಾ ।
ಇಂದ್ರಸ್ಯ ವಚನಂ ಶ್ರುತ್ವಾ ಪಾಂಡುಃ ಪ್ರೀತಿಮವಾಪ ಸಃ ॥೩೫॥

ಇವನು ತನ್ನ ಕೀರ್ತಿಯಿಂದ ದುರ್ಯೋಧನನನ್ನೂ ಮತ್ತು ಉಳಿದ ಭರತವಂಶದ ರಾಜರುಗಳನ್ನೂ ಗೆಲ್ಲುವನು. ಈ ವೀರನ ಪರಾಕ್ರಮದ ನಿಮಿತ್ತದಿಂದ ಧರ್ಮಪುತ್ರನಾದ ಯುಧಿಷ್ಠಿರನು ಧರ್ಮದಲ್ಲಿಯೇ ತತ್ಪರನಾಗಿದ್ದು ರಾಜಸೂಯಾದಿ ಅನೇಕ ಯಾಗಗಳನ್ನು ಮಾಡುವನು. ಇಂದ್ರನ ಈ ಮಾತುಗಳನ್ನು ಕೇಳಿ, ಪಾಂಡುವು ಸಂತೋಷಗೊಂಡನು.

ದ್ವಂದ್ವೌ ಮಾದ್ರೀ ಮಹೇಷ್ವಾಸಾವಸೂತ ಕುರುಸತ್ತಮೌ ।
ಅಶ್ವಿಭ್ಯಾಂ ಮನುಜವ್ಯಾಘ್ರಾವಿಮೌ ತಾವಪಿ ತಿಷ್ಠತಃ ॥೩೬॥

ಮಾದ್ರಿಯು ಅಶ್ವಿನೀದೇವತೆಗಳ ಅನುಗ್ರಹದಿಂದ ಧನುರ್ಧಾರಿಗಳೂ, ಕುರುಶ್ರೇಷ್ಠರೂ ಆದ ಅವಳಿಮಕ್ಕಳನ್ನು ಪಡೆದಳು. ಆ ಇಬ್ಬರು ಮನುಷ್ಯಶ್ರೇಷ್ಠರೂ ಸಹ ಇಲ್ಲಿ ನಿಮ್ಮ ಎದುರಿಗೆ ಇದ್ದಾರೆ.

ನಕುಲಃ ಸಹದೇವಶ್ಚ ತಾವಪ್ಯಮಿತತೇಜಸೌ ।
ಪಾಂಡವೌ ನರಶಾರ್ದೂಲಾವಿಮಾವಪ್ಯಪರಾಜಿತೌ ॥೩೭॥

ನಕುಲಸಹದೇವರಾದ ಅವರಿಬ್ಬರೂ ಸಹ, ಅಮಿತ ಪರಾಕ್ರಮಿಗಳು, ಯುದ್ಧದಲ್ಲಿ ಪರಾಜಯವನ್ನು ಹೊಂದದವರು ಮತ್ತು ಪಾಂಡುವಿನ ಮಕ್ಕಳಾದ ನರಶಾರ್ದೂಲರು.

ಚರತಾ ಧರ್ಮನಿತ್ಯೇನ ವನವಾಸಂ ಯಶಸ್ವಿನಾ ।
ಏಷ ಪೈತಾಮಹೋ ವಂಶಃ ಪಾಂಡುನಾ ಪುನರುದ್ಧೃತಃ ॥೩೮॥

ಕೀರ್ತಿವಂತನಾದ ಪಾಂಡುವು ವನದಲ್ಲಿ ವಾಸವನ್ನು ಮಾಡಿ ನಿತ್ಯವೂ ಧರ್ಮಾನುಷ್ಠಾನ ಮಾಡಿ ಪಿತೃಪಿತಾಮಹರ ವಂಶವನ್ನು ಪುನಃ ಉದ್ಧಾರ ಮಾಡಿದನು.

ಪುತ್ರಾಣಾಂ ಜನ್ಮ ವೃದ್ಧಿಂ ಚ ವೈದಿಕಾಧ್ಯಯನಾನಿ ಚ ।
ಪಶ್ಯತಃ ಸತತಂ ಪಾಂಡೋಃ ಶಶ್ವತ್ ಪ್ರೀತಿರವರ್ಧತ ॥೩೯॥

ಮಕ್ಕಳ ಜನನವನ್ನೂ, ಅಭಿವೃದ್ಧಿಯನ್ನೂ, ವೇದಾಧ್ಯಯನಾದಿಗಳನ್ನೂ ಯಾವಾಗಲೂ ನೋಡುತ್ತಾ ಪಾಂಡುವು ಬಹಳ ಸಂತೋಷಪಟ್ಟನು.

ವರ್ತಮಾನಃ ಸತಾಂ ಮಾರ್ಗೇ ಪುತ್ರಲಾಭಮವಾಪ್ಯ ಚ ।
ಪಿತೃಲೋಕಂ ಗತಃ ಪಾಂಡುರಿತಃ ಸಪ್ತದಶೇऽಹನಿ ॥೪೦॥

ಸಜ್ಜನರ ಮಾರ್ಗದಲ್ಲಿ ನಡೆಯುತ್ತಿದ್ದ ಅವನು ಪುತ್ರಲಾಭವನ್ನು ಪಡೆದು ಇವತ್ತಿಗೆ ಹದಿನೇಳು ದಿವಸಗಳ ಹಿಂದೆ ಪಿತೃಲೋಕವನ್ನು ಸೇರಿದನು.

ತಂ ಚಿತಾಗತಮಾಸಾದ್ಯ ವೈಶ್ವಾನರಮುಖೇ ಹುತಮ್ ।
ಪ್ರವಿಷ್ಟಾ ಪಾವಕಂ ಮಾದ್ರೀ ಹಿತ್ವಾ ಜೀವಿತಮಾತ್ಮನಃ ॥೪೧॥

ಸಾ ಗತಾ ಸಹ ತೇನೈವ ಪತಿಲೋಕಮನುವ್ರತಾ ।
ತಸ್ಯಾಸ್ತಸ್ಯ ಚ ಯತ್ ಕಾರ್ಯಂ ಕ್ರಿಯತಾಂ ತದನಂತರಮ್ ॥೪೨॥

ಮಹಾಧನುರ್ವಿದ್ಯೆಯನ್ನು ಬಲ್ಲ ಅರ್ಜುನನು ಜನಿಸುತ್ತಿರಲು ದೇವತೆಗಳ ಜೊತೆಯಲ್ಲಿದ್ದ ಇಂದ್ರನು ಹೀಗೆ ಹೇಳಿದನು. ಕುಂತಿ, ನನ್ನ ಅನುಗ್ರಹದಿಂದ ಸತ್ಯಪರಾಕ್ರಮನಾದ ಈ ಪುತ್ರನು ಜನಿಸಿದ್ದಾನೆ.

ಅಜೇಯೋ ಯುಧಿ ಜೇತಾऽರೀನ್ ದೇವತಾದೀನ್ ಸ ಸಂಶಯಃ ।
ಯಸ್ಯ ಕೀರ್ತಿರ್ಮಹೇಷ್ವಾಸಾನ್ ಸರ್ವಾನ್ ನೋऽಭಿಭವಿಷ್ಯತಿ ॥೩೨॥

ಅವನು ಯುದ್ಧದಲ್ಲಿ ಯಾರಿಗೂ ಸೋಲುವುದಿಲ್ಲ. ಅವನು ಶತ್ರುಗಳನ್ನೂ ಮತ್ತು ದೇವತೆಗಳನ್ನೂ ನಿಃಸ್ಸಂಶಯವಾಗಿ ಗೆಲ್ಲುವನು. ಅವನ ಕೀರ್ತಿಯು ಎಲ್ಲಾ ಧನುರ್ಧಾರಿಗಳ ಕೀರ್ತಿಯನ್ನೂ ಪರಾಭವ- ಗೊಳಿಸುವುದು.

ಯುಧಿಷ್ಠಿರೋ ರಾಜಸೂಯಂ ಭ್ರಾತೃವೀರ್ಯಾದವಾಪ್ಸ್ಯತಿ ।
ಏಷ ಜೇತಾ ಮನುಷ್ಯಾಂಶ್ಚ ಸರ್ವಾನ್ ಗಂಧರ್ವರಾಕ್ಷಸಾನ್ ॥೩೩॥

ತಮ್ಮನಾದ ಇವನ ಸಾಮರ್ಥ್ಯದಿಂದ ಯುಧಿಷ್ಠಿರನು ರಾಜಸೂಯಯಾಗವನ್ನು ಮಾಡುವನು. ಇವನು ಎಲ್ಲಾ ಮನುಷ್ಯರನ್ನೂ ಮತ್ತು ಗಂಧರ್ವರಾಕ್ಷಸರನ್ನೂ ಜಯಿಸುವನು.

ಏಷ ದುರ್ಯೋಧನಂ ಕೀರ್ತ್ಯಾ ಭಾರತಾಂಶ್ಚ ವಿಜೇಷ್ಯತಿ ।
ವೀರಸ್ಯೈತಸ್ಯ ವಿಕ್ರಾಂತೈರ್ಧರ್ಮಪುತ್ರೋ ಯುಧಿಷ್ಠಿರಃ ॥೩೪॥

ಯಕ್ಷ್ಯತೇ ರಾಜಸೂಯಾದ್ಯೈರ್ಧರ್ಮ ಏವ ಪರಃ ಸದಾ ।
ಇಂದ್ರಸ್ಯ ವಚನಂ ಶ್ರುತ್ವಾ ಪಾಂಡುಃ ಪ್ರೀತಿಮವಾಪ ಸಃ ॥೩೫॥

ಇವನು ತನ್ನ ಕೀರ್ತಿಯಿಂದ ದುರ್ಯೋಧನನನ್ನೂ ಮತ್ತು ಉಳಿದ ಭರತವಂಶದ ರಾಜರುಗಳನ್ನೂ ಗೆಲ್ಲುವನು. ಈ ವೀರನ ಪರಾಕ್ರಮದ ನಿಮಿತ್ತದಿಂದ ಧರ್ಮಪುತ್ರನಾದ ಯುಧಿಷ್ಠಿರನು ಧರ್ಮದಲ್ಲಿಯೇ ತತ್ಪರನಾಗಿದ್ದು ರಾಜಸೂಯಾದಿ ಅನೇಕ ಯಾಗಗಳನ್ನು ಮಾಡುವನು. ಇಂದ್ರನ ಈ ಮಾತುಗಳನ್ನು ಕೇಳಿ, ಪಾಂಡುವು ಸಂತೋಷಗೊಂಡನು.

ದ್ವಂದ್ವೌ ಮಾದ್ರೀ ಮಹೇಷ್ವಾಸಾವಸೂತ ಕುರುಸತ್ತಮೌ ।
ಅಶ್ವಿಭ್ಯಾಂ ಮನುಜವ್ಯಾಘ್ರಾವಿಮೌ ತಾವಪಿ ತಿಷ್ಠತಃ ॥೩೬॥

ಮಾದ್ರಿಯು ಅಶ್ವಿನೀದೇವತೆಗಳ ಅನುಗ್ರಹದಿಂದ ಧನುರ್ಧಾರಿಗಳೂ, ಕುರುಶ್ರೇಷ್ಠರೂ ಆದ ಅವಳಿಮಕ್ಕಳನ್ನು ಪಡೆದಳು. ಆ ಇಬ್ಬರು ಮನುಷ್ಯಶ್ರೇಷ್ಠರೂ ಸಹ ಇಲ್ಲಿ ನಿಮ್ಮ ಎದುರಿಗೆ ಇದ್ದಾರೆ.

ನಕುಲಃ ಸಹದೇವಶ್ಚ ತಾವಪ್ಯಮಿತತೇಜಸೌ ।
ಪಾಂಡವೌ ನರಶಾರ್ದೂಲಾವಿಮಾವಪ್ಯಪರಾಜಿತೌ ॥೩೭॥

ನಕುಲಸಹದೇವರಾದ ಅವರಿಬ್ಬರೂ ಸಹ, ಅಮಿತ ಪರಾಕ್ರಮಿಗಳು, ಯುದ್ಧದಲ್ಲಿ ಪರಾಜಯವನ್ನು ಹೊಂದದವರು ಮತ್ತು ಪಾಂಡುವಿನ ಮಕ್ಕಳಾದ ನರಶಾರ್ದೂಲರು.

ಚರತಾ ಧರ್ಮನಿತ್ಯೇನ ವನವಾಸಂ ಯಶಸ್ವಿನಾ ।
ಏಷ ಪೈತಾಮಹೋ ವಂಶಃ ಪಾಂಡುನಾ ಪುನರುದ್ಧೃತಃ ॥೩೮॥

ಕೀರ್ತಿವಂತನಾದ ಪಾಂಡುವು ವನದಲ್ಲಿ ವಾಸವನ್ನು ಮಾಡಿ ನಿತ್ಯವೂ ಧರ್ಮಾನುಷ್ಠಾನ ಮಾಡಿ ಪಿತೃಪಿತಾಮಹರ ವಂಶವನ್ನು ಪುನಃ ಉದ್ಧಾರ ಮಾಡಿದನು.

ಪುತ್ರಾಣಾಂ ಜನ್ಮ ವೃದ್ಧಿಂ ಚ ವೈದಿಕಾಧ್ಯಯನಾನಿ ಚ ।
ಪಶ್ಯತಃ ಸತತಂ ಪಾಂಡೋಃ ಶಶ್ವತ್ ಪ್ರೀತಿರವರ್ಧತ ॥೩೯॥

ಮಕ್ಕಳ ಜನನವನ್ನೂ, ಅಭಿವೃದ್ಧಿಯನ್ನೂ, ವೇದಾಧ್ಯಯನಾದಿಗಳನ್ನೂ ಯಾವಾಗಲೂ ನೋಡುತ್ತಾ ಪಾಂಡುವು ಬಹಳ ಸಂತೋಷಪಟ್ಟನು.

ವರ್ತಮಾನಃ ಸತಾಂ ಮಾರ್ಗೇ ಪುತ್ರಲಾಭಮವಾಪ್ಯ ಚ ।
ಪಿತೃಲೋಕಂ ಗತಃ ಪಾಂಡುರಿತಃ ಸಪ್ತದಶೇऽಹನಿ ॥೪೦॥

ಸಜ್ಜನರ ಮಾರ್ಗದಲ್ಲಿ ನಡೆಯುತ್ತಿದ್ದ ಅವನು ಪುತ್ರಲಾಭವನ್ನು ಪಡೆದು ಇವತ್ತಿಗೆ ಹದಿನೇಳು ದಿವಸಗಳ ಹಿಂದೆ ಪಿತೃಲೋಕವನ್ನು ಸೇರಿದನು.

ತಂ ಚಿತಾಗತಮಾಸಾದ್ಯ ವೈಶ್ವಾನರಮುಖೇ ಹುತಮ್ ।
ಪ್ರವಿಷ್ಟಾ ಪಾವಕಂ ಮಾದ್ರೀ ಹಿತ್ವಾ ಜೀವಿತಮಾತ್ಮನಃ ॥೪೧॥

ಸಾ ಗತಾ ಸಹ ತೇನೈವ ಪತಿಲೋಕಮನುವ್ರತಾ ।
ತಸ್ಯಾಸ್ತಸ್ಯ ಚ ಯತ್ ಕಾರ್ಯಂ ಕ್ರಿಯತಾಂ ತದನಂತರಮ್ ॥೪೨॥

ಚಿತೆಯಲ್ಲಿಟ್ಟು ಅಗ್ನಿಮುಖದಲ್ಲಿ ಹೋಮ ಮಾಡಿದ ಅವನ ಶರೀರದ ಜೊತೆಯಲ್ಲಿ ಮಾದ್ರಿಯೂ ಸಹ ತನ್ನ ಜೀವನವನ್ನು ತೊರೆದು ಅನುವ್ರತಳಾದ ಅವಳು ಪತಿಲೋಕವನ್ನು ಸೇರಿದಳು. ಪಾಂಡುವಿಗೂ ಮತ್ತು ಮಾದ್ರಿಗೂ ಮುಂದೆ ಮಾಡಬೇಕಾದ ಕಾರ್ಯಗಳನ್ನು ಮಾಡಿ.

ಪೃಥಾಂ ಚ ಶರಣಂ ಪ್ರಾಪ್ತಾಂ ಪಾಂಡವಾಂಶ್ಚ ಯಶಸ್ವಿನಃ ।
ಯಥಾವದನುಗೃಹ್ಣಂತಾಂ ಧರ್ಮೋ ಹ್ಯೇಷ ಸನಾತನಃ ॥೪೩॥

ಶರಣಾಗತಳಾದ ಕುಂತಿಯನ್ನೂ ಮತ್ತು ಕೀರ್ತಿವಂತರಾದ ಪಾಂಡವರನ್ನೂ ನಿರ್ಮಲವಾದ ಹೃದಯದಿಂದ ಅನುಗ್ರಹಿಸಿ. ಇದು ಸನಾತನವಾದ ಧರ್ಮ.

ಇಮೇ ತಯೋಃ ಶರೀರೇ ದ್ವೇ ಸುತಾಶ್ಚೇಮೇ ತಯೋರ್ವರಾಃ ।
ಕ್ರಿಯಾಭಿರನುಗೃಹ್ಣಂತಾಂ ಸಹ ಮಾತ್ರಾ ಪರಂತಪಾಃ ॥೪೪॥

ಇವೆರಡು ಅವರಿಬ್ಬರ ಅಸ್ಥಿರೂಪವಾದ ಶರೀರಗಳು. ಈ ಐದು ಜನರೂ ಅವನ ಶ್ರೇಷ್ಠವಾದ ಮಕ್ಕಳು. ಪರಂತಪರಾದ ಕೌರವರೇ, ಉಚಿತವಾದ ಕ್ರಿಯೆಗಳನ್ನು ಮಾಡಿ ತಾಯಿಯಾದ ಕುಂತಿಯನ್ನು ಮತ್ತು ಪಾಂಡವರನ್ನು ಅನುಗ್ರಹಿಸಿ.

ಪ್ರೇತಕರ್ಮಣಿ ನಿರ್ವೃತ್ತೇ ಪಿತೃಮೇಧೇ ಚ ಪಾಂಡವಾಃ ।
ಲಭಂತಾಂ ಸರ್ವದಾಯಾದ್ಯಂ ಪಾಂಡೋಃ ಕುರುಕುಲೋದ್ವಹಾಃ ॥೪೫॥

ಪ್ರೇತಕಾರ್ಯಗಳನ್ನು ಮುಗಿಸಿ ಪಿತೃಮೇಧವನ್ನು ಮಾಡಿದ ಮೇಲೆ, ಕುರುಕುಲೋದ್ವಹರಾದ ಪಾಂಡವರು ಪಾಂಡುವಿನ ಎಲ್ಲಾ ಆಸ್ತಿಯನ್ನೂ ಪಡೆಯಲಿ.

ವೈಶಂಪಾಯನಃ

ಏವಮುಕ್ತ್ವಾ ಕುರೂನ್ ಸರ್ವಾನ್ ಕೌರವಾಣಾಂ ಚ ಪಶ್ಯತಾಮ್ ।
ಕ್ಷಣೇನಾಂತರ್ಹಿತಾಃ ಸರ್ವೇ ಚಾರಣಾ ಗುಹ್ಯಕೈಃ ಸಹ ॥೪೬॥

ಹೀಗೆ ಎಲ್ಲಾ ಕುರುಗಳನ್ನೂ ಉದ್ದೇಶಿಸಿ ಮಾತನಾಡಿ ಕೌರವರು ನೋಡುತ್ತಿರುವಂತೆಯೇ ಒಂದು ಕ್ಷಣದಲ್ಲಿ ಬಂದಿದ್ದ ಎಲ್ಲಾ ಚಾರಣರೂ ಮತ್ತು ಗುಹ್ಯಕರೂ ಅಂತರ್ಧಾನವನ್ನು ಹೊಂದಿದರು.

ಋಷಿಸಿದ್ಧಗಣಾನ್ ದೃಷ್ಟ್ವಾ ವಿಸ್ಮಯಂ ತೇ ಪರಂ ಯಯುಃ ।
ಗಂಧರ್ವನಗರಾಕಾರಾಂಸ್ತತ್ಕೈವಾಂತರ್ಹಿತಾಂಸ್ತದಾ ।
ಕೌರವಾಃ ಸಹಸೋತ್ಪತ್ಯ ಸಾಧುಸಾಧ್ವಿತಿ ವಿಸ್ಮಿತಾಃ ॥೪೭॥

ಕೌರವರು ಬಂದಿದ್ದ ಋಷಿಸಿದ್ಧಸಮೂಹವು ಗಂಧರ್ವನಗರದಂತೆ ಒಂದೇ ಕ್ಷಣದಲ್ಲಿ ಅಂತರ್ಧಾನವನ್ನು ಹೊಂದಿದುದನ್ನು ನೋಡಿ ವಿಸ್ಮಯಚಕಿತರಾಗಿ ಎದ್ದು ನಿಂತು ಎಲ್ಲರೂ 'ಸಾಧು ಸಾಧು' ಎಂದು ಉಚ್ಚಸ್ವರದಲ್ಲಿ ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ದ್ವಾವಿಂಶತ್ಯಧಿಕಶತತಮೋऽಧ್ಯಾಯಃ ॥
॥ ಸಂಭವಪರ್ವಣಿ ಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ನೂರ ಇಪ್ಪತ್ಮೂರನೆಯ ಅಧ್ಯಾಯ

(ಪಾಂಡು ಮತ್ತು ಮಾದ್ರಿಯರಿಗೆ ರಾಜೋಚಿತ ಉತ್ತರಕ್ರಿಯಾವಿಧಿ.)

ವೈಶಂಪಾಯನಃ

ಆನೀಯ ಸುಹೃದಃ ಸರ್ವಾನ್ ಕ್ಷತ್ತಾರಮಿದಮಬ್ರವೀತ್ ।

ಧೃತರಾಷ್ಟ್ರನು ಎಲ್ಲಾ ಬಂಧುಗಳನ್ನೂ ಕರೆದು ವಿದುರನನ್ನು ಕುರಿತು ಹೀಗೆ ಮಾತನಾಡಿದನು.

ಧೃತರಾಷ್ಟ್ರಃ

ಶ್ರಾದ್ಧಂ ದಾಸ್ಯಾಮಿ ಪಾಂಡೋಸ್ತು ಸ್ವಪ್ನೇ ದರ್ಶಿತವಾನ್ ಹಿ ಮಾಮ್ ।
ಅಸ್ಥೀನಿ ತೀರೇ ಗಂಗಾಯಾ ಗಾಂಗೇನಾಪ್ಯುದಕೇನ ಚ ।
ಪ್ಲಾವಯಿತ್ವಾ ಮಹಾನದ್ಯಾಂ ಜಾಹ್ನವ್ಯಾಂ ವೈ ಮಹಾಮತೇ ॥೨॥

ತ್ರಿಲೋಕಪಾವನೀಂ ಪುಣ್ಯಾಂ ಗತ್ವಾ ತ್ವಂ ಸ್ವರ್ಗಗಾಮಿನೀಮ್ ।
ಪಾಂಡೋರ್ವಿದುರ ಸರ್ವಾಣಿ ಪ್ರೇತಕಾರ್ಯಾಣಿ ಕಾರಯ ॥೩॥

ನಾನು ಪಾಂಡುವಿಗೆ ಶ್ರಾದ್ಧವನ್ನು ಮಾಡುತ್ತೇನೆ. ಪಾಂಡುವು ನನ್ನ ಸ್ವಪ್ನದಲ್ಲಿ ಬಂದು ಶ್ರಾದ್ಧವನ್ನು ಮಾಡಬೇಕೆಂದು ತಿಳಿಸಿದ್ದಾನೆ. ಮಹಾಮತಿಯಾದ ವಿದುರನೇ ಅಸ್ಥಿಗಳನ್ನು ಗಂಗಾತೀರಕ್ಕೆ ತೆಗೆದುಕೊಂಡು ಹೋಗಿ ಮಹಾನದಿಯಾದ ಗಂಗೆಯ ಜಲದಿಂದ ತೊಳೆಯಬೇಕು. ವಿದುರನೇ ತ್ರಿಲೋಕಪಾವನೆಯಾದ, ಸ್ವರ್ಗಗಾಮಿನಿಯಾದ, ಪುಣ್ಯಪ್ರದವಾದ ಗಂಗಾನದಿಯ ಸಮೀಪಕ್ಕೆ ಹೋಗಿ ಎಲ್ಲಾ ಪ್ರೇತಕಾರ್ಯಗಳನ್ನೂ ಮಾಡಿಸು.

ರಾಜವದ್ ರಾಜಸಿಂಹಸ್ಯ ಮಾದ್ರ್ಯಾಶ್ಚೈವ ವಿಶೇಷತಃ ।
ಪಶೂನ್ ವಾಸಾಂಸಿ ರತ್ನಾನಿ ಧನಾನಿ ವಿವಿಧಾನಿ ಚ ॥೪॥

ಪಾಂಡೋಃ ಪ್ರಯಚ್ಛ ಮಾದ್ರ್ಯಾಶ್ಚ ಯೇಭ್ಯೋ ಯಾವಚ್ಚ ವಾಂಛಿತಮ್।
ಯಥಾ ಚ ಕುಂತೀ ಸತ್ಕಾರಂ ಕುರ್ಯಾನ್ಮಾದ್ರ್ಯಾಸ್ತಥಾ ಕುರು ॥೫॥

ರಾಜಸಿಂಹನಾದ ಪಾಂಡುವಿಗೂ ಮತ್ತು ಮಾದ್ರಿಗೂ ವಿಶೇಷವಾಗಿ ರಾಜೋಚಿತವಾದ ಸಂಸ್ಕಾರಗಳನ್ನು ಮಾಡಿಸು. ಪಾಂಡು ಮತ್ತು ಮಾದ್ರಿಯರ ಸದ್ಗತಿಯನ್ನು ಉದ್ದೇಶಿಸಿ, ಯಾರು ಎಷ್ಟು ಬಯಸುತ್ತಾರೋ ಅಷ್ಟು ಗೋವುಗಳನ್ನೂ, ವಸ್ತ್ರಗಳನ್ನೂ, ಅನೇಕ ರೀತಿಯ ಧನವನ್ನೂ ಕೊಡು.

ಯಥಾ ನ ವಾಯುರ್ನಾದಿತ್ಯಃ ಪಶ್ಯೇತ್ ಕುಂತೀಂ ಸುಸಂವೃತಾಮ್ ।
ನ ಶೋಚ್ಯಃ ಪಾಂಡುರಸ್ಮಾಕಂ ಪ್ರಶಸ್ಯಃ ಸ ನರಾಧಿಪಃ ।
ಯಸ್ಯ ಪಂಚ ಸುತಾ ವೀರಾ ಜಾತಾಃ ಸುರಸುತೋಪಮಾಃ ॥೬॥

ವಾಯುವಾಗಲೀ, ಸೂರ್ಯನಾಗಲೀ ತನ್ನನ್ನು ನೋಡದಂತೆ ಸುಸಂವೃತಳಾದ ಕುಂತಿಯು ಮಾದ್ರಿಗೆ ಸತ್ಕಾರ ಮಾಡುವಂತೆ ಎಲ್ಲವನ್ನೂ ಮಾಡು. ನಾವು ಪಾಂಡುವನ್ನು ಕುರಿತು ಶೋಕಪಡಬೇಕಾಗಿಲ್ಲ. ದೇವಕುಮಾರರಂತಿರುವ ಐದು ಮಕ್ಕಳನ್ನು ಪಡೆದ ಅವನು ಪ್ರಶಂಸನೀಯನಾದ ರಾಜ.

ವೈಶಂಪಾಯನಃ

ವಿದುರಃ ಸ ತಥೇತ್ಯುಕ್ತ್ವಾ ಭೀಷ್ಮೇಣ ಸಹ ಭಾರತ ।
ಪಾಂಡೋರಸ್ಥೀನಿ ಸಂಸ್ಕಾರ್ಯ ದೇಶೇ ಪರಮಸಮ್ಮತೇ ।
ಬ್ರಾಹ್ಮಣೈಃ ಸಹಿತಾಃ ಪೌರಾ ಗಂಗಾಂ ಜಗ್ಮುಃ ಸಹಸ್ರಶಃ ॥೭॥

ಎಲೈ ಭಾರತನೇ, ವಿದುರನು 'ಹಾಗೆಯೇ ಆಗಲಿ' ಎಂದು ಹೇಳಿ ಭೀಷ್ಮರ ಜೊತೆಯಲ್ಲಿ ಪಾಂಡುವಿನ ಅಸ್ಥಿಯನ್ನು ತೆಗೆದುಕೊಂಡು ಎಲ್ಲರಿಗೂ ಪರಮಸಮ್ಮತವಾದ ದೇಶದಲ್ಲಿ ಬ್ರಾಹ್ಮಣರಿಂದಲೂ, ಸಹಸ್ರ ಸಂಖ್ಯೆಯಲ್ಲಿ ಬಂದ ಪೌರರಿಂದಲೂ ಒಡಗೂಡಿ ಗಂಗಾನದಿಯ ಸಮೀಪಕ್ಕೆ ಬಂದನು.

ತತಸ್ತು ನಗರಾತ್ ತೂರ್ಣಮಾಜ್ಯಹೇಮಪುರಸ್ಕೃತಾಃ ।
ನಿರ್ಯತಾಃ ಪಾವಕಾ ದೀಪ್ತಾಃ ಪಾಂಡೋ ರಾಜನ್ ಪುರೋಹಿತೈಃ ।
ಅಥೈತಮಾರ್ತವೈರ್ಗಂಧೈರ್ಮಾಲ್ಯೈಶ್ಚ ವಿವಿಧೈರ್ವರೈಃ ॥೮॥

ಅನಂತರ, ಎಲೈ ರಾಜನೇ, ಪುರೋಹಿತರು ಪಾಂಡುವಿನ ಸಲುವಾಗಿ ಆಜ್ಯಹೇಮಪುರಸ್ಕೃತವಾದ ಅಗ್ನಿಯನ್ನು ಪ್ರಜ್ವಲಿಸಿದರು.

ಶಿಬಿಕಾಸ್ಥಮಲಂಚಕ್ರುರ್ವಸ್ತ್ರೈರಾಚ್ಛಾದ್ಯ ಸರ್ವಶಃ ।
ತಂ ತಥಾ ಶೋಭಿತಂ ಮಾಲ್ಯೈರ್ವಿವಿಧೈಶ್ಚ ಮಹಾಧನೈಃ ॥೯॥

ಅನಂತರ ಪಾಂಡುವಿನ ಅಸ್ಥಿಯ ಜೊತೆಯಲ್ಲಿದ್ದ ಅವನ ಸುವರ್ಣ ಪ್ರತಿಮೆಯನ್ನು ಶಿಬಿಕೆಯಲ್ಲಿಟ್ಟು ಅನೇಕ ವಸ್ತ್ರಗಳಿಂದ ಅಲಂಕರಿಸಿ ಶ್ರೇಷ್ಠವಾದ ಆಯಾ ಋತುವಿನಲ್ಲಿ ದೊರಕುವ ಸುಂಗಧಯುಕ್ತಮಾಲೆಗಳಿಂದಲೂ ಅಲಂಕರಿಸಿದರು.

ಅಮಾತ್ಯಾ ಜ್ಞಾತಯಶ್ಚೈವ ಸುಹೃದಶ್ಚೋಪತಸ್ಥಿರೇ ।
ನೃಸಿಂಹಂ ನರಯುಕ್ತೇನ ಪರಮಾಲಂಕೃತೇನ ತಮ್ ॥೧೦॥

ವಿವಿಧವಾದ ಮಾಲೆಗಳಿಂದ ಮತ್ತು ಮುತ್ತುರತ್ನಗಳಿಂದ ಶೋಭಿತವಾದ ಪಾಂಡುವಿನ (ಪ್ರತಿಮೆಯ) ಸುತ್ತಲೂ ಅಮಾತ್ಯರು, ಬಂಧುಗಳು ಮತ್ತು ಸುಹೃದರು ನೆರೆದರು.

ಅವಹನ್ ಯಾನಮುಖ್ಯೇನ ಸಹ ಮಾದ್ರ್ಯಾ ಸುಸಂಭೃತಮ್ ।
ಪಾಂಡರೇಣಾತಪತ್ರೇಣ ಚಾಮರವ್ಯಜನೇನ ಚ ॥೧೧॥

ಆ ನರಸಿಂಹನನ್ನು ಮಾದ್ರಿಯ ಜೊತೆಯಲ್ಲಿ (ಮಾದ್ರಿಯ ಸುವರ್ಣ ಪ್ರತಿಮೆಯ ಜೊತೆಯಲ್ಲಿ) ಅಲಂಕೃತವಾದ, ಶ್ರೇಷ್ಠವಾದ ನರವಾಹನದಲ್ಲಿ ಕರೆದುಕೊಂಡು ಹೋದರು.

ಸರ್ವವಾದಿತ್ರನಾದೈಶ್ಚ ಸಮಲಂಚಕ್ರೀರೇ ತತಃ ॥೧೨॥

ಶ್ವೇತಚ್ಛತ್ರಗಳಿಂದಲೂ, ಚಾಮರವ್ಯಜನಗಳಿಂದಲೂ, ಎಲ್ಲಾ ವಾದಿತ್ರನಾದಗಳಿಂದಲೂ, ಶೋಭೆ ಉಂಟಾಗುವಂತೆ ಮಾಡಿದರು.

ತತಃ ಸರ್ವಾಣಿ ರತ್ನಾನಿ ಬಹೂನಿ ಶತಶೋ ನರಾಃ ।
ಪ್ರದದುಃ ಕಾಂಕ್ಷಮಾಣೇಭ್ಯಃ ಪಾಂಡೋಸ್ತತ್ರೌರ್ಧ್ವದೈಹಿಕೇ ॥೧೩॥

ಪಾಂಡುವಿನ ಔರ್ಧ್ವದೈಹಿಕ ಕ್ರಿಯೆಯ ಸಂದರ್ಭದಲ್ಲಿ ಪೌರಜಾನಪದರು ಬಯಸಿದವರಿಗೆ ನೂರರ ಸಂಖ್ಯೆಯಲ್ಲಿ ರತ್ನಗಳನ್ನು ಮತ್ತು ಧನವನ್ನೂ ಕೊಟ್ಟರು.

ಅಚ್ಛದ್ಯಾನಿ ಚ ಶುಭ್ರಾಣಿ ಪಾಂಡರಾಣಿ ಬಹೂನಿ ಚ ।
ಆಜಹ್ರುಃ ಕೌರವಸ್ಯಾರ್ಥೇ ವಾಸಾಂಸಿ ರುಚಿರಾಣಿ ಚ ॥೧೪॥

ಪಾಂಡುವನ್ನು ಅಲಂಕಾರ ಮಾಡುವ ಸಲುವಾಗಿ ಹರಿಯದ ಶುಭ್ರವಾದ ಮನೋಹರವಾದ ಅನೇಕ ಶ್ವೇತವಸ್ತ್ರಗಳನ್ನು ಪೌರರು ತಂದರು.

ಯಾಜಕೈಃ ಶುಕ್ಲವಾಸೋಭಿರ್ಹೂಯಮಾನಾ ಹುತಾಶನಾಃ ।
ಅಗಚ್ಛನ್ನಗ್ರತಸ್ತಸ್ಯ ದೀಪ್ಯಮಾನಾಃ ಸ್ವಲಂಕೃತಾಃ ॥೧೫॥

ಶುಕ್ಲವಸ್ತ್ರವನ್ನು ಧರಿಸಿದ ಯಾಜಕರು ಕೈಯಲ್ಲಿ ಹಿಡಿದಿರುವ ಅಗ್ನಿಯಲ್ಲಿ ಹೋಮವನ್ನು ಮಾಡುತ್ತಿರುವಂತೆ ರಾಜನ ಮುಂಭಾಗದಲ್ಲಿ ಅಲಂಕೃತವಾದ ಜ್ವಲಿಸುವ ಅಗ್ನಿಗಳು ಸಾಗಿದವು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚೈವ ಸಹಸ್ರಶಃ ।
ರುದಂತಃ ಶೋಕಸಂತಪ್ತಾ ಅನುಜಗ್ಮುರ್ನರಾಧಿಪಮ್ ।
ಅಯಮಸ್ಮಾನಪಾಹಾಯ ದುಃಖಂ ಚಾಧಾಯ ಶಾಶ್ವತಮ್ ॥೧೬॥

ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು, ಶೋಕತಪ್ತರಾಗಿ ಅಳುತ್ತಾ, ರಾಜನನ್ನು ಸಹಸ್ರಸಂಖ್ಯೆಯಲ್ಲಿ ಹಿಂಬಾಲಿಸಿದರು.

ಕೃತ್ವಾಽನಾಥಾನ್ ಪರೋ ನಾಥಾನ್ ಕ್ವ ಯಾಸ್ಯತಿ ನರಾಧಿಪಃ ॥೧೭॥

ಈ ರಾಜನು ನಮ್ಮನ್ನು ತೊರೆದು ಶಾಶ್ವತವಾದ ದುಃಖವನ್ನು ಕೊಟ್ಟು ಅನಾಥರಾದ ನಮ್ಮನ್ನು ಯಾಚಕರನ್ನಾಗಿ ಮಾಡಿ ಎಲ್ಲಿಗೆ ಹೋಗುತ್ತಿದ್ದಾನೆ.

ಕ್ರೋಶಂತಃ ಪಾಂಡವಾಃ ಸರ್ವೇ ಭೀಷ್ಮೋ ವಿದುರ ಏವ ಚ ।
ಬಾಹ್ಲೀಕಃ ಸೋಮದತ್ತಶ್ಚ ತಥಾ ಭೂರಿಶ್ರವಾ ನೃಪಾಃ ।
ಅನ್ಯೋನ್ಯಂ ವೈ ಸಮಾಶ್ಲಿಷ್ಯ ಅನುಜಗ್ಮುಃ ಸಹಸ್ರಶಃ ॥೧೮॥

ಎಲ್ಲಾ ಪಾಂಡವರು, ಭೀಷ್ಮ, ವಿದುರ, ಬಾಹ್ಲೀಕ, ಸೋಮದತ್ತ, ಭೂರಿಶ್ರವ ಮತ್ತು ಉಳಿದ ರಾಜರುಗಳು ದುಃಖದಿಂದ ಕಿರುಚುತ್ತಾ ಪರಸ್ಪರವಾಗಿ ಆಲಿಂಗಿಸಿಕೊಂಡು ಸಹಸ್ರ ಸಂಖ್ಯೆಯಲ್ಲಿ ರಾಜನ ಹಿಂದೆ ಹೊರಟರು.

ರಮಣೀಯೇ ವನೋದ್ದೇಶೇ ಗಂಗಾತೀರೇ ಸಮೇ ಶುಭೇ ।
ವಾಸಯಾಮಾಸುರಥ ತಾಂ ಶಿಬಿಕಾಂ ಸತ್ಯವಾದಿನಃ ॥೧೯॥

ಸತ್ಯವಾದಿಗಳಾದ ಅವರು ಕಾಡಿನ ಒಂದು ಸುಂದರವಾದ ಸ್ಥಳದಲ್ಲಿ ಗಂಗಾತೀರದ ಒಂದು ಸಮತಟ್ಟಾದ ಪುಣ್ಯಪ್ರದೇಶದಲ್ಲಿ ರಾಜನನ್ನು ಹೊತ್ತ ಶಿಬಿಕೆಯನ್ನು ಇಳಿಸಿದರು.

ಸಭಾರ್ಯಸ್ಯ ನೃಸಿಂಹಸ್ಯ ಪಾಂಡೋರಕ್ಲಿಷ್ಟಕರ್ಮಣಃ ।
ತತಸ್ತಸ್ಯ ಶರೀರಂ ತತ್ ಸರ್ವಗಂಧನಿಷೇವಿತಮ್ ॥೨೦॥

ಶುಚಿಕಾಲೇಯಕಾದಿಗ್ಧಂ ಮುಖ್ಯಸ್ನಾನಾಧಿವಾಸಿತಮ್ ।
ಕ್ಷೀರೇಣ ಮಧುನಾऽऽಜ್ಯೇನ ಪಾಂಡವಾಃ ಶೋಕಕರ್ಶಿತಾಃ ॥೨೧॥

ಪರ್ಯಷಿಂಚನ್ ಜಲೇನಾಶು ಶಾತಕುಂಭಮಯೈರ್ಘಟೈಃ ।
ಅಸ್ಥೀನಿ ಯಾಜಕಾಃ ಸರ್ವೇ ಗಂಗಾಯಾಮೌರ್ಧ್ವದೈಹಿಕೇ ।
ಚಂದನೇನಾಪಿ ಮುಖ್ಯೇನ ಶುಕ್ಲೇನ ಸಮಲೇಪಯನ್ ॥೨೨॥

ನರಸಿಂಹನಾದ ಪಾಂಡು ಮತ್ತು ಮಾದ್ರಿಯ ಶಿಬಿಕೆಯನ್ನು ಅಲ್ಲಿ ಇಳಿಸಿ, ಅಕ್ಲಿಷ್ಟಕಾರಿಯಾದ ಪಾಂಡುವಿನ ಶರೀರವನ್ನು ಮತ್ತು ಅಸ್ಥಿಗಳನ್ನು ಎಲ್ಲಾ ಗಂಧಗಳಿಂದಲೂ, ಶುಭ್ರವಾದ ಕಾಲೇಯಕ(ರಸ)ದಿಂದಲೂ ಲೇಪಿಸಿ, ಮುಖ್ಯಸ್ನಾನವನ್ನು ಮಾಡಿಸಿ ಶೋಕಕರ್ಶಿತರಾದ ಪಾಂಡವರು, ಸುವರ್ಣಘಟಗಳಲ್ಲಿ ತುಂಬಿದ ಕ್ಷೀರದಿಂದಲೂ, ಮಧುವಿನಿಂದಲೂ, ಆಜ್ಯದಿಂದಲೂ ಮತ್ತು

ಗಂಗಾಜಲದಿಂದಲೂ ಅಭಿಷೇಕವನ್ನು ಮಾಡಿದರು. ಪುರೋಹಿತರು ಆ ಉತ್ತರಕ್ರಿಯೆ ಸಂದರ್ಭದಲ್ಲಿ ಪಾಂಡುವಿನ ಅಸ್ಥಿಗಳನ್ನು ಶುಭ್ರವಾದ ಚಂದನದಿಂದ ಲೇಪಿಸಿದರು.

ಕಾಲಾಗರುವಿಮಿಶ್ರೇಣ ತಥಾ ತುಂಗರಸೇನ ಈ ।
ಆಚ್ಛನ್ನಃ ಸಹ ವಾಸೋಭಿರ್ದೇವನ್ನಿವ ನರರ್ಷಭಃ ॥೨೩॥

ಆಗ ಕಾಲಾಗರು ಮಿಶ್ರಿತವಾದ ತುಂಗರಸದಿಂದ ಲೇಪಿಸಲ್ಪಟ್ಟ ಪಾಂಡುವು ವಸ್ತ್ರಗಳಿಂದ ಅಲಂಕರಿಸಲ್ಪಟ್ಟನು. (ತುಂಗರಸವೆಂದರೆ, ಅನೇಕ ಪರಿಮಳದ್ರವ್ಯಗಳಿಂದ ಮಿಶ್ರಿತವಾದ ತೈಲ ವಿಶೇಷ).

ಅಥೈನಂ ದೇಶಜೈಃ ಶುಭ್ರೈರ್ವಾಸೋಭಿಃ ಸಮಯೋಜಯನ್ ।
ಶುಶುಭೇ ಪುರುಷವ್ಯಾಘ್ರೋ ಮಹಾರ್ಹಶಯನೋಚಿತಃ ॥೨೪॥

ಅನಂತರ ಪಾಂಡುವನ್ನು ದೇಶಗಳಿಂದ ತರಿಸಿದ ಶುಭ್ರವಸ್ತ್ರಗಳನ್ನು ಉಡಿಸಿ ಅಲಂಕರಿಸಿದರು. ಅನರ್ಘ್ಯವಾದ ಶಯನಾದಿಗಳಿಗೆ ಯೋಗ್ಯವಾದ ಪುರುಷವ್ಯಾಘ್ರನಾದ ಪಾಂಡುವು ಆ ಅಲಂಕಾರದಲ್ಲಿ ಶೋಭಿಸಿದನು.

ಹಯಮೇಧಾಗ್ನಿನಾ ಸರ್ವೇ ಯಾಜಕಾಃ ಸಪುರೋಹಿತಾಃ ।
ವೇದೋಕ್ತೇನ ವಿಧಾನೇನ ಕ್ರಿಯಾಂ ಚಕ್ರುಃ ಸಮಂತ್ರಕಮ್ ।
ಯಾಜಕೈರಭ್ಯನುಜ್ಞಾತಾಃ ಪ್ರೇತಕರ್ಮಣಿ ನಿಷ್ಠಿತೈಃ ॥೨೫॥

ಎಲ್ಲಾ ಯಾಜಕರೂ ಮತ್ತು ಪುರೋಹಿತರೂ ಸೇರಿ ವೇದೋಕ್ತವಿಧಾನದಿಂದ ಅಶ್ವಮೇಧಾಗ್ನಿಯಿಂದ ಮಂತ್ರಪುರಸ್ಸರವಾಗಿ ಎಲ್ಲಾ ಕ್ರಿಯೆಗಳನ್ನೂ ಮಾಡಿದರು.

ಘೃತಾವಸಿಕ್ತಂ ರಾಜಾನಂ ಸಹ ಮಾದ್ರ್ಯಾ ಸ್ವಲಂಕೃತಮ್ ।
ತುಂಗಪದ್ಮಕಮಿಶ್ರೇಣ ಚಂದನೇನ ಸುಗಂಧಿನಾ ॥೨೬॥

ಸರಲಂ ದೇವದಾರುಂ ಚ ಗುಗ್ಗುಲಂ ಲಾಕ್ಷಯಾ ಸಹ ।
ರಕ್ತಚಂದನಕಾಷ್ಠೈಶ್ಚ ಹರಿವೇರೈರುಶೀರಜೈಃ ॥೨೭॥

ಅನ್ಯೈಶ್ಚ ವಿವಿಧೈರ್ಗಂಧೈ ರಾಜಾನಂ ಸಮದಾಹಯನ್ ।
ಘೃತಪೂರ್ಣೈಸ್ತಥಾ ಕುಂಭೈರ್ವಿಧಿನಾ ಸಮದಾಹಯನ್ ॥೨೮॥

ಪ್ರೇತಕರ್ಮದಲ್ಲಿ ನಿಷ್ಣಾತರಾದ ಪುರೋಹಿತರಿಂದ ಅನುಜ್ಞೆಯನ್ನು ಪಡೆದ ಪಾಂಡವರು ಆಜ್ಯದಿಂದ ಲೇಪಿತನಾಗಿ ಅಲಂಕೃತನಾಗಿದ್ದ ಪಾಂಡುವನ್ನು (ಪಾಂಡು ಪ್ರತಿಮೆಯನ್ನು) ಮಾದ್ರಿಯ (ಪ್ರತಿಮೆಯ) ಜೊತೆಯಲ್ಲಿ ತುಂಗರಸಗಳಿಂದಲೂ, ಪದ್ಮರಸದಿಂದಲೂ ಮಿಶ್ರಿತವಾದ, ಸುಗಂಧವುಳ್ಳ ಚಂದನ, ಸರಲ, ದೇವದಾರು, ಗುಗ್ಗುಳ, ಲಾಕ್ಷ, ಹರಿವೇರ, ಉಶೀರಜ ಮತ್ತು ಇನ್ನೂ ಅನೇಕ ಸುಗಂಧಯುಕ್ತವಾದ ಕಾಷ್ಠಗಳಿಂದ ದಹನ ಮಾಡಿದರು. ಘೃತಪೂರ್ಣವಾದ ಕುಂಭಗಳಿಂದ ಆಜ್ಯವನ್ನು ಸುರಿದು ವಿಧಿಪೂರ್ವಕವಾಗಿ ದಹನ ಮಾಡಿದರು.

ತತಸ್ತಯೋಃ ಶರೀರೇ ತು ದೃಷ್ಟ್ವಾ ಮೋಹವಶಂ ಗತಾಃ ।
ಹಾಹಾ ಪುತ್ರೇತಿ ಕೌಸಲ್ಯಾ ಪತಿತಾ ಸಹಸಾ ಭುವಿ ॥೨೯॥

ಚಿತೆಯ ಮೇಲಿದ್ದ ಅವರ ಶರೀರವನ್ನು ನೋಡಿ ಮೋಹವಶಳಾದ ಅಂಬಾಲಿಕೆಯು 'ಅಯ್ಯೋ ಪುತ್ರನೇ' ಎಂದು ಹೇಳುತ್ತಾ ಭೂಮಿಯ ಮೇಲೆ ಕುಸಿದಳು.

ತಾಂ ಪ್ರೇಕ್ಷ್ಯ ಪತಿತಾಮಾರ್ತಾಂ ಪೌರಜಾನಪದಾ ಜನಾಃ ।
ರುರುದುಃ ಸಸ್ವರಂ ಸರ್ವೇ ರಾಜಭಕ್ತ್ಯಾ ಕೃಪಾನ್ವಿತಾಃ ॥೩೦॥

ಹಾಗೆ ಬಿದ್ದ ಆರ್ತಳಾದ ಅಂಬಾಲಿಕೆಯನ್ನು ನೋಡಿ ಪೌರಜಾನಪದರು ರಾಜಭಕ್ತಿಯಿಂದ ಅವಳಲ್ಲಿ ಕೃಪೆಯುಳ್ಳವರಾಗಿ ಎಲ್ಲರೂ ಸ್ವರಸಹಿತವಾಗಿ ಅತ್ತರು.

ಶ್ವಾದೀನಿ ಚಾರ್ತನಾದೇನ ಸರ್ವಾಣಿ ಚ ವಿಚುಕ್ರುಶುಃ ।
ಮಾನುಷ್ಯೈಃ ಸಹ ಭೂತಾನಿ ತಿರ್ಯಗ್ಯೋನಿಗತಾನ್ಯಪಿ ॥೩೧॥

ಮನುಷ್ಯರ ಜೊತೆಯಲ್ಲಿ ನೀಚಯೋನಿಗತವಾದ ನಾಯಿ ಮೊದಲಾದ ಪ್ರಾಣಿಗಳೆಲ್ಲವೂ ಆರ್ತನಾದದಿಂದ ಕಿರುಚಿದವು.

ತಥಾ ಭೀಷ್ಮಃ ಶಾಂತನವೋ ವಿದುರಶ್ಚ ಮಹಾಮತಿಃ ।
ಜ್ಞಾತಯಃ ಕೌರವಾಶ್ಚೈವ ಪ್ರಾಣದನ್ ಭೃಶದುಃಖಿತಾಃ ॥೩೨॥

ಹಾಗೆಯೇ ಶಂತನುವಿನ ಮಗನಾದ ಭೀಷ್ಮನೂ, ಮಹಾಮತಿಯಾದ ವಿದುರನೂ, ಬಂಧುಗಳಾದ ಕೌರವರೂ, ಬಹಳ ದುಃಖದಿಂದ ಸಶಬ್ದವಾಗಿ ರೋದನ ಮಾಡಿದರು.

ಚುಕ್ರುಶುಃ ಪಾಂಡವಾಃ ಸರ್ವೇ ಧೃತರಾಷ್ಟ್ರಶ್ಚ ಭಾರತ ।
ರಮಣೀಯೇ ತತೋ ದೇಶೇ ಗಂಗಾತೀರೇ ಸಮೇ ಶುಭೇ ॥೩೩॥

ಎಲೈ ಭಾರತನೇ, ಗಂಗಾತೀರದ ರಮಣೀಯವಾದ ಸಮತಲವಾದ ಆ ದೇಶದಲ್ಲಿ ಧೃತರಾಷ್ಟ್ರನೂ ಮತ್ತು ಎಲ್ಲಾ ಪಾಂಡವರೂ ದುಃಖದಿಂದ ಸಶಬ್ದವಾಗಿ ಅತ್ತರು.

ಪ್ರಕ್ಷಿಪ್ಯ ಕುಂಡಕೇ ತಾನಿ ಭೂಮೌ ಸನ್ನಿಹಿತಂ ಕೃಶಮ್ ।
ಶೋಚಂತ ಜ್ಞಾತಯಃ ಸರ್ವೇ ದೃಷ್ಟ್ವಾಽಸ್ಥೀನಿ ಪುನಃಪುನಃ ॥೩೪॥

ಯಾಜಕರು ಮತ್ತು ಪುರೋಹಿತರು ಅಶ್ವಮೇಧಾಗ್ನಿಯಿಂದ ದಹನವನ್ನು ಮಾಡಿದರು. ಅನಂತರ, ದಗ್ಧಶೇಷವಾದ ಅಸ್ಥಿಯನ್ನೂ ಮತ್ತು ಭಸ್ಮವನ್ನೂ ಭೂಮಿಯಲ್ಲಿ ಬಂಗಾರದ ಕುಂಡಕಗಳಲ್ಲಿಟ್ಟು ಅದನ್ನು ಮತ್ತೆ ಮತ್ತೆ ನೋಡುತ್ತಾ ಬಂಧುಗಳೆಲ್ಲರೂ ಶೋಕಪಟ್ಟರು.

ತಥಾ ಭೀಷ್ಮೋಽಥ ವಿದುರೋ ರಾಜಾ ಚ ಸಹ ಬಾಂಧವೈಃ ।
ಉದಕಂ ಚಕ್ರಿರೇ ಪಾಂಡೋಃ ಸರ್ವಾಶ್ಚ ಕುರುಯೋಷಿತಃ ॥೩೫॥

ಅನಂತರ ಭೀಷ್ಮನೂ, ವಿದುರನೂ, ಧೃತರಾಷ್ಟ್ರನೂ, ಬಂಧುಗಳ ಜೊತೆಯಲ್ಲಿ ಪಾಂಡುವಿಗೆ ಉದಕಕ್ರಿಯೆಯನ್ನು ಮಾಡಿದರು. ಎಲ್ಲಾ ಕೌರವ ಸ್ತ್ರೀಯರೂ ಉದಕಕ್ರಿಯೆಯನ್ನು ಮಾಡಿದರು.

ಕೃತೋದಕಾಂಸ್ತಾನಾದಾಯ ಪಾಂಡವಾನ್ ಶೋಕಕರ್ಶಿತಾನ್ ।
ಸರ್ವಾಃ ಪ್ರಕೃತಯೋ ರಾಜನ್ ಶೋಚಂತ್ಯಃ ಪರ್ಯವಾರಯನ್ ॥೩೬॥

ಎಲೈ ರಾಜನೇ, ಉದಕಕ್ರಿಯೆಯನ್ನು ಮಾಡಿ ಶೋಕಕರ್ಶಿತರಾದ ಪಾಂಡವರನ್ನು ಕೈಯಲ್ಲಿ ಹಿಡಿದುಕೊಂಡು ಪ್ರಜೆಗಳೆಲ್ಲರೂ ಶೋಕದಿಂದ ಅವರನ್ನು ಸುತ್ತುವರಿದರು.

ಯಥಾ ಚ ಪಾಂಡವಾ ಭೂಮೌ ಶೇರತೇ ಸಹ ಬಾಂಧವಾಃ ।
ತಥೈವ ನಾಗರಾ ರಾಜನ್ ಶಿಶ್ಯಿರೇ ಬ್ರಾಹ್ಮಣಾದಯಃ ॥೩೭॥

ಎಲೈ ರಾಜನೇ, ಪಾಂಡವರು ಹೇಗೆ ಭೂಮಿಯ ಮೇಲೆ ಮಲಗಿಕೊಂಡರೋ ಹಾಗೆ ಬಂಧುಗಳು, ನಗರವಾಸಿಗಳು, ಬ್ರಾಹ್ಮಣರು ಎಲ್ಲರೂ ಭೂಶಯನ ಮಾಡಿದರು.

ತದನಾನಂದಮಸ್ವಸ್ಥಮಾಕುಮಾರಮಹೃಷ್ಟವತ್ ।
ಬಭೂವ ಪಾಂಡವೈಃ ಸಾರ್ಧಂ ನಗರಂ ದ್ವಾದಶ ಕ್ಷಪಾಃ ॥೩೮॥

ಆ ಹಸ್ತಿನಪುರವು ಹನ್ನೆರಡು ದಿನಗಳವರೆಗೆ ಮಕ್ಕಳಿಂದ ಆರಂಭಿಸಿ ಪಾಂಡವರ ಜೊತೆಯಲ್ಲಿ ಶೋಕ ಪಡುತ್ತಾ ಅಸ್ವಸ್ಥವಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ತ್ರಯೋವಿಂಶತ್ಯಧಿಕಶತತಮೋಽಧ್ಯಾಯಃ ॥
॥ ಸಂಭವಪರ್ವಣಿ ಏಕಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ನೂರ ಇಪ್ಪತ್ನಾಲ್ಕನೆಯ ಅಧ್ಯಾಯ

(ಪಾಂಡುವಿಗೆ ಶ್ರಾದ್ಧದಾನ, ವ್ಯಾಸರ ಮಾತಿನಂತೆ, ಸತ್ಯವತಿ, ಅಂಬಿಕೆ ಅಂಬಾಲಿಕೆಯರ ತಪೋವನಗಮನ.)

ವೈಶಂಪಾಯನಃ

ತತಃ ಕ್ಷತ್ತಾ ಚ ಭೀಷ್ಮಶ್ಚ ವ್ಯಾಸೋ ರಾಜಾ ಚ ಪಾಂಡುಭಿಃ ।
ದದುಃ ಶ್ರಾದ್ಧಂ ತಥಾ ಪಾಂಡೋಃ ಸ್ವಧಾಮೃತಸಮಂ ತದಾ ।
ಪುರೋಹಿತಸಹಾಯಾಸ್ತೇ ಯಥಾನ್ಯಾಯಮಕುರ್ವತ ॥೧॥

ಅನಂತರ, ವಿದುರನು, ಭೀಷ್ಮರು, ವ್ಯಾಸರು ಸಹ ಪಾಂಡವರ ಜೊತೆಯಲ್ಲಿ ಪಾಂಡುವಿಗೆ ಅಮೃತಸಮವಾದ ಸ್ವಧಾಮಯವಾದ ಶ್ರಾದ್ಧವನ್ನು ಕೊಟ್ಟರು. ಅವರು ಪುರೋಹಿತರ ಸಹಾಯದಿಂದ ಎಲ್ಲವನ್ನೂ ನ್ಯಾಯಯುಕ್ತವಾಗಿ ಮಾಡಿದರು.

ಕುರೂಂಶ್ಚ ದ್ವಿಜಮುಖ್ಯಾಂಶ್ಚ ಭೋಜಯಿತ್ವಾ ಸಹಸ್ರಶಃ ।
ರತ್ನೌಘಾನ್ ವಿಪ್ರಮುಖ್ಯೇಭ್ಯೋ ದತ್ತ್ವಾ ಗ್ರಾಮವರಾನಪಿ ॥೨॥

ಕೃತಶೌಚಾಂಸ್ತತಸ್ತಾಂಸ್ತು ಪಾಂಡವಾನ್ ಭರತರ್ಷಭ ।
ಆದಾಯ ವಿವಿಶುಃ ಪೌರಾಃ ಪುರಂ ವಾರಾಣಸಾಹ್ವಯಮ್ ॥೩॥

ಎಲೈ ಭರತರ್ಷಭನೇ, ಸಹಸ್ರಸಂಖ್ಯೆಯಲ್ಲಿ ಬ್ರಾಹ್ಮಣರಿಗೂ ಮತ್ತು ಕುರುಗಳಿಗೂ ಭೋಜನವನ್ನು ಮಾಡಿಸಿ, ಬ್ರಾಹ್ಮಣಶ್ರೇಷ್ಠರಿಗೆ ರತ್ನರಾಶಿಗಳನ್ನೂ, ಶ್ರೇಷ್ಠವಾದ ಗ್ರಾಮಗಳನ್ನೂ ಕೊಟ್ಟು ಉತ್ತರಕ್ರಿಯೆಯನ್ನು ಮಾಡಿ ಶುದ್ಧರಾದ ಪಾಂಡವರನ್ನು ಕರೆದುಕೊಂಡು ಎಲ್ಲಾ ಪೌರರೂ ಹಸ್ತಿನಪುರವನ್ನು ಪ್ರವೇಶಿಸಿದರು.

ಸತತಂ ಸ್ಮಾನ್ವತಪ್ಯಂತ ತಮೇವ ಭರತರ್ಷಭಮ್ ।
ಪೌರಜಾನಪದಾಃ ಸರ್ವೇ ಮೃತಂ ಸ್ವಮಿವ ಬಾಂಧವಮ್ ॥೪॥

ಪೌರಜಾನಪದರೆಲ್ಲರೂ ತಮ್ಮ ಬಂಧುವೇ ಮೃತನಾದಂತೆ ಭರತಶ್ರೇಷ್ಠನಾದ ಪಾಂಡುವನ್ನು ಯಾವಾಗಲೂ ಸ್ಮರಿಸಿ ಅನುತಾಪ ಪಟ್ಟರು.

ಶ್ರಾದ್ಧಾವಸಾನೇಷು ತದಾ ದೃಷ್ಟ್ವಾ ತಂ ದುಃಖಿತಂ ಜನಮ್ ।
ಸಮ್ಮೂಢಾಂ ದುಃಖಶೋಕಾರ್ತಾಂ ವ್ಯಾಸೋ ಮಾತರಮಬ್ರವೀತ್॥

ಶ್ರಾದ್ಧವು ಮುಗಿದ ಮೇಲೆ ದುಃಖಿತರಾದ ಪೌರಜಾನಪದರನ್ನು ನೋಡಿ ದುಃಖಶೋಕಾರ್ತಳಾಗಿ ಸಮ್ಮೋಹಕ್ಕೆ ಒಳಗಾದ ತಾಯಿಯನ್ನು ಕುರಿತು ವ್ಯಾಸರು ಮಾತನಾಡಿದರು.

ಅಪಕ್ರಾಂತಸುಖಾಃ ಕಾಲಾಃ ಪ್ರತ್ಯುಪಸ್ಥಿತದಾರುಣಾಃ ।
ಶಶ್ವತ್ ಪಾಪೀಯದಿವಸಾಃ ಪೃಥಿವೀ ಗತಯೌವನಾ ।
ಬಹುಮಾಯಾಸಮಾಕೀರ್ಣಾ ನಾನಾದೇಶಾಃ ಸಮಾಕುಲಾಃ ॥೬॥

ಸುಖದ ಕಾಲವು ಕಳೆಯಿತು. ಮುಂದೆ ಬರುವ ಕಾಲವು ದಾರುಣವಾಗಿದೆ. ಮುಂದಿನ ದಿವಸಗಳು ಅತಿಶಯವಾದ ಪಾಪದಿಂದ ಕೂಡಿರುತ್ತವೆ. ಭೂಮಿಯ ಯೌವನವು ಕಳೆದು ಹೋಗಿದೆ. ಜನರು ಅನೇಕ ವಂಚನೆಗಳಿಂದ ವ್ಯವಹರಿಸುತ್ತಾರೆ. ಅನೇಕ ದೇಶಗಳು ಉಪದ್ರವಕ್ಕೆ ಒಳಗಾಗಿವೆ.

ಲುಪ್ತಧರ್ಮಕ್ರಿಯಾಚಾರೋ ಘೋರಃ ಕಾಲೋ ಭವಿಷ್ಯತಿ ।
ಗಚ್ಛ ತ್ವಂ ತ್ಯಾಗಮಾಸ್ಥಾಯ ಯುಕ್ತಾ ವಸ ತಪೋವನೇ ॥೭॥

ಮಾ ದ್ರಕ್ಷ್ಯಸಿ ಕುಲಸ್ಯಾಸ್ಯ ಘೋರಂ ಸಂಕ್ಷಯಮಾತ್ಮನಃ ।
ತಥೇತಿ ಸಮನುಜ್ಞಾಯ ಸಾ ಪ್ರವಿಶ್ಯಾಬ್ರವೀತ್ ಸ್ನುಷಾಮ್ ॥೮॥

ಧರ್ಮಕ್ರಿಯೆ ಮತ್ತು ಆಚಾರಗಳಿಂದ ಶೂನ್ಯವಾದ ಘೋರವಾದ ಕಾಲವು ಬರಲಿದೆ. ನೀನು ಎಲ್ಲವನ್ನೂ ತ್ಯಾಗ ಮಾಡಿ ಯೋಗಯುಕ್ತಳಾಗಿ ತಪೋವನದಲ್ಲಿ ವಾಸಿಸು. ನಿನ್ನ ಕುಲಕ್ಕೆ ಒದಗಲಿರುವ ಘೋರ ವಿನಾಶವನ್ನು ನೀನು ನೋಡಬಾರದು. ಹಾಗೆಯೇ ಆಗಲಿ ಎಂದು ಹೇಳಿ ಒಳಗೆ ಪ್ರವೇಶಿಸಿ ಸತ್ಯವತಿಯು ಸೊಸೆಯನ್ನು ಕುರಿತು ಮಾತನಾಡಿದಳು.

ಸತ್ಯವತೀ

ಅಂಬಿಕೇ ತವ ಪುತ್ರಸ್ಯ ದುರ್ನಯಾತ್ ಕಿಲ ಭಾರತಾಃ ।
ಸಾನುಬಂಧಾ ವಿನಂಕ್ಷ್ಯಂತಿ ಪೌತ್ರಾಶ್ಚೈವೇತಿ ನಃ ಶ್ರುತಮ್ ॥೯॥

ಅಂಬಿಕೆ ನಿನ್ನ ಮಗನ ದುರ್ನೀತಿಯಿಂದಾಗಿ ಎಲ್ಲಾ ಭಾರತರೂ ಮೊಮ್ಮಕ್ಕಳು ಮತ್ತು ಬಂಧುಗಳ ಜೊತೆಯಲ್ಲಿ ವಿನಾಶವನ್ನು ಹೊಂದುವರು ಎಂದು ಕೇಳಿದ್ದೇನೆ.

ತತ್ ಕೌಸಲ್ಯಾಮಿಮಾಮಾರ್ತಾಂ ಪುತ್ರಶೋಕಾಭಿಪೀಡಿತಾಮ್ ।
ವನಮಾದಾಯ ಗಚ್ಛಾಮೋ ಭದ್ರಂ ತೇ ಯದಿ ಮನ್ಯಸೇ ॥೧೦॥

ನಿನಗೆ ಮಂಗಳವಾಗಲಿ. ನಿನ್ನ ಅಭಿಪ್ರಾಯವಿದ್ದರೆ, ಈ ಪುತ್ರಶೋಕಪೀಡಿತಳಾದ ಕೋಸಲದೇಶದಲ್ಲಿ ಜನಿಸಿದ ಅಂಬಾಲಿಕೆಯನ್ನು ಕರೆದುಕೊಂಡು ನಾವು ವನಕ್ಕೆ ಹೋಗುತ್ತೇವೆ.

ವೈಶಂಪಾಯನಃ

ತಥೇತ್ಯುಕ್ತಾ ತ್ವಂಬಿಕಯಾ ಭೀಷ್ಮಮಾಮಂತ್ರ್ಯ ಸುವ್ರತಾ ।
ವನಂ ಯಯೌ ಸತ್ಯವತೀ ಸ್ನುಷಾಭ್ಯಾಂ ಸಹ ಭಾರತ ॥೧೧॥

ಅಂಬಿಕೆಯು ಹಾಗೆಯೇ ಆಗಲಿ ಎಂದು ಹೇಳಿದ ಮೇಲೆ ಸುವ್ರತಳಾದ ಸತ್ಯವತಿಯು ಭೀಷ್ಮರ ಅನುಮತಿಯನ್ನು ಪಡೆದು ತನ್ನ ಇಬ್ಬರು ಸೊಸೆಯರ ಜೊತೆಯಲ್ಲಿ ವನಕ್ಕೆ ತೆರಳಿದಳು.

ತಾಃ ಸುಘೋರಂ ತಪಃ ಕೃತ್ವಾ ದೈವಾದ್ ಭರತಸತ್ತಮ ।
ದೇಹಂ ತ್ಯಕ್ತ್ವಾ ಮಹಾರಾಜ ಗತಿಮಿಷ್ಟಾಂ ಯಯುಸ್ತದಾ ॥೧೨॥

ಎಲೈ ಭರತಶ್ರೇಷ್ಠನಾದ ಮಹಾರಾಜನೇ, ಆ ಮೂವರೂ ವನಕ್ಕೆ ಹೋಗಿ ಘೋರವಾದ ತಪಸ್ಸನ್ನು ಆಚರಿಸಿ ದೈವಯೋಗದಿಂದ ದೇಹತ್ಯಾಗವನ್ನು ಮಾಡಿ ತಮಗೆ ಇಷ್ಟವಾದ ಗತಿಯನ್ನು ಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಚತುರ್ವಿಂಶತ್ಯಧಿಕಶತತಮೋऽಧ್ಯಾಯಃ ॥
॥ ಸಂಭವಪರ್ವಣಿ ದ್ವಿಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಇಪ್ಪತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೪

ವೈಚಿತ್ರವೀರ್ಯತನಯಾಃ ಕೃಪತೋ ಮಹಾಸ್ತ್ರ-
ಜ್ಞಾಪುಶ್ಚ ಪಾಂಡುತನಯೈಃ ಸಹ ಸರ್ವರಾಜ್ಞಾಮ್ ।
ಪುತ್ರಾಶ್ಚ ತತ್ರ ವಿವಿಧಾ ಅಪಿ ಬಾಲಚೇಷ್ಟಾಃ
ಕುರ್ವತ್ತು ವಾಯುತನಯೇನ ಜಿತಾಃ ಸಮಸ್ತಾಃ ॥೬೧॥

ಕೌರವರೂ ಪಾಂಡವರೊಂದಿಗೆ ಬೇರೆ ಎಲ್ಲ ರಾಜಕುಮಾರರೂ ಕೃಪಾಚಾರ್ಯರಿಂದ ಮಹಾ ಅಸ್ತ್ರಗಳನ್ನು ಉಪದೇಶ ಪಡೆದರು. ಆ ಕಾಲದಲ್ಲಿ ಅವರು ನಾನ ಬಗೆಯ ಬಾಲಚೇಷ್ಟೆ ಮಾಡುತ್ತಿದ್ದಾಗ ಭೀಮನಿಂದ ಎಲ್ಲರೂ ಪರಾಜಿತರಾಗುತ್ತಿದ್ದರು.

ಪಕ್ವೋರುಭೋಜ್ಯಫಲಸನ್ನಯನಾಯ ವೃಕ್ಷೇ-
ಷ್ವಾರೂಢರಾಜತನಯಾನಭಿವೀಕ್ಷ್ಯ ಭೀಮಃ ।
ಪಾದಪ್ರಹಾರಮುರುವೃಕ್ಷತಳೇ ಪ್ರದಾಯ
ಸಾಕಂ ಫಲೈರ್ವಿನಿಪತತ್ಸು ಫಲಾನ್ಯಭುಂಕ್ತ ॥೬೨॥

ಮಾಗಿದ ದೊಡ್ಡ ಭೋಜ್ಯ ಫಲಗಳನ್ನು ತರಲು ರಾಜಕುಮಾರರು ಮರಗಳನ್ನು ಏರಿದಾಗ ಭೀಮಸೇನ ಕಂಡು ಆ ಹೆಮ್ಮರದ ಬುಡಕ್ಕೆ ಕಾಲಿಂದ ಒದ್ದು ಹಣ್ಣುಗಳ ಜೊತೆಗೆ ಅವರೆಲ್ಲರೂ ಬೀಳುತ್ತಿದ್ದರೆ ತಾನು ಆ ಹಣ್ಣುಗಳನ್ನು ತಿನ್ನುತ್ತಿದ್ದ.

ಯುದ್ಧೇ ನಿಯುದ್ಧ ಉತ ಧಾವನ ಉತ್‌ಪ್ಲವೇ ಚ
ಪಾರಿಪ್ಲವೇ ಚ ಸಹಿತಾನ್ ನಿಖಿಲಾನ್ ಕುಮಾರಾನ್ ।
ಏಕೋ ಜಿಗಾಯ ತರಸಾ ಪರಮಾರ್ಯಕರ್ಮಾ
ವಿಷ್ಣೋಃ ಸುಪೂರ್ಣಸದನುಗ್ರಹತಃ ಸುನಿತ್ಯಾತ್ ॥೬೩॥

ಯುದ್ಧದಲ್ಲಾಗಲಿ ನಿಯುದ್ಧದಲ್ಲಾಗಲಿ ಓಟದಲ್ಲಾಗಲಿ ಹಾರಾಟದಲ್ಲಾಗಲಿ ನೀರಾಟದಲ್ಲಾಗಲಿ ಎಲ್ಲ ರಾಜಕುಮಾರರೂ ಒಂದಾಗಿ ಸೇರಿದರೂ ಅವರನ್ನು ಪರಮ ಉತ್ತಮ ಕರ್ಮಕಾರಿಯಾದ ಭೀಮನೊಬ್ಬನೆ ಹರಿಯ ನಿರಂತರಪೂರ್ಣ ಪರಮಾನುಗ್ರಹದಿಂದ ಬೇಗನೆ ಗೆಲ್ಲುತ್ತಿದ್ದ.

ಸರ್ವಾನ್ ಪ್ರಗೃಹ್ಯ ವಿನಿಮಜ್ಜತಿ ವಾರಿಮಧ್ಯೇ
ಶ್ರಾಂತಾನ್ ವಿಸೃಜ್ಯ ಹಸತಿ ಸ್ಮ ಸ ವಿಷ್ಣುಪದ್ಯಾಮ್ ।
ಸರ್ವಾನುದೂಹ್ಯ ಚ ಕದಾಚಿದುರುಪ್ರವಾಹಾಂ
ಗಂಗಾಂ ಸುತಾರಯತಿ ಸಾರಸುಪೂರ್ಣಪೌಂಸ್ಯಃ ॥೬೪॥

ಭೀಮ ಎಲ್ಲರನ್ನೂ ಹಿಡಿದುಕೊಂಡು ಗಂಗೆಯಲ್ಲಿ ನೀರಿನ ನಡುವೆ ಮುಳುಗುತ್ತಿದ್ದ. ಅವರು ಆಯಾಸಗೊಂಡಾಗ ನಡುವೆ ಬಿಟ್ಟುನಗುತ್ತಿದ್ದ. ಉತ್ತಮ ಪರಿಪೂರ್ಣ ಪೌರುಷ ಉಳ್ಳ ಆತ ಕೆಲವೊಮ್ಮೆ ಎಲ್ಲರನ್ನೂ ಹೊತ್ತು ಮಹಾಪ್ರವಾಹ ಪೂರ್ಣವಾದ ಗಂಗಾನದಿಯನ್ನು ದಾಟಿಸುತ್ತಿದ್ದ.

ದ್ವೇಷಂ ಹ್ಯನೃತೇನ ಹಿ ಹರೌ ತಮಸಿ ಪ್ರವೇಶಃ
ಪ್ರಾಣೇ ಚ ತೇನ ಜಗತೀಮನು ತೌ ಪ್ರಪನ್ನೌ ।
ತತ್ಕಾರಣಾನ್ಯಕುರುತಾಂ ಪರಮೌ ಕರಾಂಸಿ
ದೇವದ್ವಿಷಾಂ ಸತತವಿಸ್ಮೃತಸಾಧುಪೌಂಸ್ಯೈ ॥೬೫॥

ಹರಿಯಲ್ಲಿಯೂ ವಾಯುವಿನಲ್ಲಿಯೂ ದ್ವೇಷ ಮಾಡದ ಹೊರತು ಅಸುರರಿಗೆ ತಮಸ್ಸಿನಲ್ಲಿ ಪ್ರವೇಶವಿಲ್ಲ. ಅದರಿಂದ ನಿರಂತರ ಮಹತ್ತಾದ ಸ್ವಾಭಾವಿಕ ಪೌರುಷ ಉಳ್ಳ ಉತ್ತಮರಾದ ಕೃಷ್ಣ ಭೀಮರ ಜೊತೆಯಾಗಿ ಭೂಮಿಗೆ ಬಂದು ಅಸುರರಿಗೆ ತಮ್ಮ ದ್ವೇಷ ಮೂಡುವಂತೆ ಕರ್ಮಗಳನ್ನು ಮಾಡುತ್ತಿದ್ದರು.

ದೃಷ್ಟ್ವಾಮಿತಾನ್ಯಥ ಕರಾಂಸಿ ಮರುತ್ಸುತೇನ
ನಿತ್ಯಂ ಕೃತಾನಿ ತನಯಾ ನಿಖಿಲಾಶ್ಚ ರಾಜ್ಞಾಮ್ ।
ತಸ್ಯಾಮಿತಂ ಬಲಮುದೀಕ್ಷ್ಯ ಸದೋರುವೃದ್ಧ
ದ್ವೇಷಾ ಬಭೂವುರಥ ಮಂತ್ರಮಮಂತ್ರಯಂಶ್ಚ ॥೬೬॥

ನಿತ್ಯವೂ ಭೀಮ ಮಾಡುತ್ತಿದ್ದ ಅನುಪಮವಾದ ಕರ್ಮಗಳನ್ನು ಕಂಡು, ಅವನ ಆ ಪರಿಮಿತ ಶಕ್ತಿಯನ್ನು ತಿಳಿದು, ರಾಜಕುಮಾರರು ಎಲ್ಲರೂ ನಿರಂತರ ಬಲು ದೀರ್ಘ ದ್ವೇಷ ಮಾಡಿದರು. ರಹಸ್ಯವಾಗಿ ಸೇರಿ ಮಾತನಾಡಿಕೊಂಡರು.

ಯೇ ಯೇ ಹಿ ತತ್ರ ನರದೇವಸುತಾಃ ಸುರಾಂಶಾಃ
ಪ್ರೀತಿಂ ಪರಾಂ ಪವನಜೇ ನಿಖಿಲಾ ಅಕುರ್ವನ್ ।
ತಾಂಸ್ತಾನ್ ವಿಹಯಾ ದಿತಿಜಾ ನರದೇವವಂಶ
ಜಾತಾ ವಿಚಾರ್ಯ ವಧನಿಶ್ಚಯಮಸ್ಯ ಚಕ್ರುಃ ॥೬೭॥

ಯಾರು ಯಾರು ದೇವಾಂಶರಾದ ರಾಜಕುಮಾರರು ಭೀಮನಲ್ಲಿ ಬಹಳ ಪ್ರೀತಿ ಮಾಡಿದರೋ ಅವರೆಲ್ಲರನ್ನೂ ದೂರವಿಟ್ಟು ರಾಜವಂಶ ಜಾತರಾದ ದೈತ್ಯರು ವಿಚಾರ ಮಾಡಿ ಭೀಮನನ್ನು ಕೊಲ್ಲುವ ನಿರ್ಣಯವನ್ನು ಕೈಗೊಂಡರು.

ಅಸ್ಮಿನ್ ಹತೇ ವಿನಿಹತಾ ಅಖಿಲಾಶ್ಚ ಪಾರ್ಥಾಃ
ಶಕ್ಯೋ ಬಲಾಶ್ಚ ನ ನಿಹಂತುಮಯಂ ಬಲಾಢ್ಯಃ ।
ಛದ್ಮಪ್ರಯೋಗತ ಇಮಂ ವಿನಿಹತ್ಯ ವೀರ್ಯಾತ್
ಪಾರ್ಥಂ ನಿಹತ್ಯ ನಿಗಳೇ ಚ ವಿದಧ್ಮಹೇಽನ್ಯಾನ್ ॥೬೮॥

'ಭೀಮನೊಬ್ಬ ಹತನಾದರೆ ಎಲ್ಲ ಪಾರ್ಥರೂ ಹತರಾದಂತೆಯೆ. ಆದರೆ ಭೀಮ ಬಸ್ಲಾಢ್ಯ. ಬಲದಿಂದ ಕೊಲ್ಲಲು ಶಕ್ಯನಲ್ಲ. ಅದರಿಂದ ಅವನನ್ನು ವಂಚನ ಪ್ರಯೋಗದಿಂದಲೂ ಅರ್ಜುನನನ್ನು ಬಲಪ್ರಯೋಗದಿಂದಲೂ ಕೊಂದು ಇತರರನ್ನು ಬಂಧನದಲ್ಲಿಡೋಣ'.

ಏವಂ ಕೃತೇ ನಿಹತಕಂಟಕಮಸ್ಯ ರಾಜ್ಯಂ
ದುರ್ಯೋಧನಸ್ಯ ಹಿ ಭವೇನ್ನ ತತೋಽನ್ಯಥಾ ಸ್ಯಾತ್ ।
ಅಸ್ಮಿನ್ ಹತೇ ನಿಪತಿತೇ ಚ ಸುರೇಂದ್ರಸೂನೌ
ಶೇಷಾ ಭವೇಯುರಪಿ ಸೌಬಲಿಪುತ್ರದಾಸಾಃ ॥೬೯॥

'ಹೀಗೆ ಮಾಡಿದಾಗಲೆ ದುರ್ಯೋಧನನಿಗೆ ರಾಜ್ಯ ನಿಷ್ಕಂಟಕವಾದೀತು. ಬೇರೆ ರೀತಿಯಿಂದ ಆಗದು. ಭೀಮ ಹತನಾಗಬೇಕು, ಅರ್ಜುನನು ಬೀಳಬೇಕು. ಆಗ ಉಳಿದವರು ಕೌರವರ ದಾಸರಾಗುವರು'.

ಏವಂ ವಿಚಾರ್ಯ ವಿಷಮುಲ್ಬಣಮಂತಕಾಭಂ
ಕ್ಷೀರೋದಧೇರ್ಮಥನಜಂ ತಪಸಾ ಗಿರೀಶಾತ್ ।
ಶುಕ್ರೇಣ ಲಬ್ಧಮಮುತಃ ಸುಬಲಾತ್ಮಜೇನ
ಪ್ರಾಪ್ತಂ ಪ್ರತೋಷ್ಯ ಮರುತಸ್ತನಯಾಯ ಚಾದುಃ ॥೭೦॥

ಹೀಗೆ ವಿಚಾರ ಮಾಡಿ ಮೃತ್ಯುವಿನಂತೆ ಘೋರವಾದ ವಿಷವನ್ನು ಭೀಮನಿಗೆ ಉಣಿಸಿದರು. ಆ ವಿಷ ಕ್ಷೀರಸಮುದ್ರದ ಮಥನದಿಂದ ಉದ್ಭವಿಸಿದುದು. ಶುಕ್ರಾಚಾರ್ಯರು ತಪಸ್ಸಿನ ಮೂಲಕ ಶಿವನಿಂದ ಪಡೆದುದು. ಶುಕ್ರಾಚಾರ್ಯರನ್ನು ಒಲಿಸಿ ಅವರಿಂದ ಶಕುನಿ ಪಡೆದುದು.

ಸಮ್ಮಂತ್ರ್ಯ ರಾಜತನಯೈರ್ಧೃತರಾಷ್ಟ್ರಜೈಸ್ತದ್
ದತ್ತಂ ಸ ಸೂದಮುಖತೋಽಖಿಲ ಭಕ್ಷ್ಯಭೋಜ್ಯೇ ।
ಜ್ಞಾತ್ವಾ ಯುಯುತ್ಸುಗದಿತಂ ಬಲವಾನ್ ಸ ಭೀಮೋ
ವಿಷ್ಣೋರನುಗ್ರಹಬಲಾಜ್ಜರಯಾಂಚಕಾರ ॥೭೧॥

ರಾಜಕುಮಾರೊಡನೆ ಕೌರವರು ಮಂತ್ರಾಲೋಚನೆ ಮಾಡಿ ಅಡುಗೆಯವನ ಮೂಲಕ ಎಲ್ಲ ಭಕ್ಷ್ಯಭೋಜ್ಯಗಳಲ್ಲಿರುವ ವಿಷವಿಕ್ಕಿದರು. ಅದನ್ನು ಯುಯುತ್ಸು ಹೇಳಿದ್ದರಿಂದ ಮೊದಲೇ ತಿಳಿದಿದ್ದರೂ ಬಲಿಷ್ಠನಾದ ಭೀಮ ಉಂಡು ವಿಷ್ಣುವಿನ ಅನುಗ್ರಹದಿಂದ ಜೀರ್ಣಿಸಿಕೊಂಡ.

ಜೀರ್ಣೇ ವಿಷೇ ಕುಮತಯಃ ಪರಮಾಭಿತಪ್ತಾಃ
ಪ್ರಾಸಾದಮಾಶು ವಿದಧುರ್ಹರಿಪಾದತೋಯೇ ।
ಜ್ಞಾತ್ವಾ ಯುಯುತ್ಸುಮುಖಿತಃ ಸ್ವಯಮತ್ರ ಚಾಂತೇ
ಸುಷ್ವಾಪ ಮಾರುತಿರಮಾ ಧೃತರಾಷ್ಟ್ರಪುತ್ರೈಃ ॥೭೨॥

ಭೀಮ ಉಂಡ ವಿಷ ಜೀರ್ಣವಾದಾಗ ದುರ್ಬುದ್ಧಿಗಳಾದ ಕೌರವರು ಬಹಳ ಸಂತಾಪಪಟ್ಟು ಬೇಗನೆ ಗಂಗಾಪ್ರವಾಹದಲ್ಲಿ ಒಂದು ಮಾಳಿಗೆ ಮನೆಯನ್ನು ಕಟ್ಟಿಸಿದರು.

ಅದರ ಉದ್ದೇಶವನ್ನೂ ಯುಯುತ್ಸುವಿನ ಮುಖದಿಂದ ಭೀಮ ಮೊದಲೇ ತಿಳಿದರೂ ಆ ಮಾಳಿಗೆ ಮನೆಯಲ್ಲಿ ಕೌರವರೊಂದಿಗೆ ಸಮೀಪದಲ್ಲಿ ತಾನೆ ಮಲಗಿದ.

ದೋಷಾನ್ ಪ್ರಕಾಶಯಿತುಮೇವ ವಿಚಿತ್ರ ವೀರ್ಯ
ಪುತ್ರಾತ್ಮಜೇಷು ನೃವರಂ ಪ್ರತಿಸುಪ್ತವೀಕ್ಷ್ಯ ।
ಬದ್ಧಾಭಿಮಂತ್ರಣದೃಢೈರಯಸಾ ಕೃತೈಸ್ತಂ
ಪಾಶೈರ್ವಿಚಿಕ್ಷಿಪುರುದೇ ಹರಿಪಾದಜಾಯಾಃ ॥೭೩॥

ಕೌರವರ ದುರ್ಬುದ್ಧಿಯನ್ನು ಲೋಕಕ್ಕೆ ತೋರಿಸುವುದಕ್ಕಾಗಿಯೆ ಹಾಗೆ ಮಲಗಿದ್ದ ಜೀವೋತ್ತಮನಾದ ಭೀಮ. ಅದನ್ನು ಕಂಡು ಕೌರವರು ಮಂತ್ರಶಕ್ತಿಯಿಂದ ದೃಢವಾಗಿಸಿದ್ದ ಕಬ್ಬಿಣದ ಸರಪಣಿಗಳಿಂದ ಅವನನ್ನು ಕಟ್ಟಿ ಗಂಗಾಜಲದಲ್ಲಿ ಎಸೆದರು.

ತತ್ಕೋಟಿಯೋಜನಗಭೀರಮುದಂ ವಿಗಾಹ್ಯ
ಭೀಮೋ ವಿಜಂಭೃಣತ ಏವ ವಿವೃಶ್ಚ್ಯ ಪಾಶಾನ್ ।
ಉತ್ತೀರ್ಯ ಸಜ್ಜನಗಣಸ್ಯ ವಿಧಾಯ ಹರ್ಷಂ
ತಸ್ಥಾವನಂತಗುಣವಿಷ್ಣುಸದಾತಿಹಾರ್ದಃ ॥೭೪॥

ಅನಂತಗುಣಭರಿತನಾದ ವಿಷ್ಣುವಿನಲ್ಲಿ ಸದಾ ಮಹಾಭಕ್ತಿ ಉಳ್ಳ ಭೀಮ ಕೋಟಿಯೋಜನ ಆಳದ ಆ ಜಲವನ್ನು ಹೊಕ್ಕು ಆಕಳಿಕೆಯಿಂದ ಸರಪಣಿಗಳನ್ನು ಕಡಿದುಕೊಂಡು ಮೇಲೆ ಬಂದು ಸಜ್ಜನ ಸಮುದಾಯಕ್ಕೆ ಹರ್ಷ ಉಂಟುಮಾಡುತ್ತ ನಿಂತ!

★ ★ ★ ★

ನೂರ ಇಪ್ಪತ್ತೈದನೆಯ ಅಧ್ಯಾಯ

(ಕುಮಾರರ ವಿಹಾರ, ಭೀಮನ ಪ್ರಾಬಲ್ಯ, ದುರ್ಯೋಧನನ ಈರ್ಷ್ಯೆ, ಭೀಮನನ್ನು ಕೊಲ್ಲಲು ಪ್ರಯತ್ನ.)

ವೈಶಂಪಾಯನಃ

ಅವಾಪ್ತವಂತೋ ವೇದೋಕ್ತಾನ್ ಸಂಸ್ಕಾರಾನ್ ಪಾಂಡವಾಸ್ತದಾ ।
ಅವರ್ಧಂತ ಮಹಾಭೋಗಾನ್ ಭುಂಜಾನಾಃ ಪಿತೃವೇಶ್ಮನಿ ॥೧॥

ವೇದೋಕ್ತ ಸಂಸ್ಕಾರಗಳನ್ನು ಪಡೆದ ಪಾಂಡವರು ತಂದೆಯ ಮನೆಯಲ್ಲಿ ದಿವ್ಯವಾದ ಭೋಗಗಳನ್ನು ಭೋಗಿಸುತ್ತಾ ಬೆಳೆದರು.

ತೇ ಧಾರ್ತರಾಷ್ಟ್ರೈಃ ಸಹಿತಾಃ ಕ್ರೀಡಂತಿ ಪಿತೃವೇಶ್ಮನಿ ।
ಬಾಲಕ್ರೀಡಾಸು ಸರ್ವಾಸು ವಿಶಿಷ್ಟಾಃ ಪಾಂಡವಾ ಭವನ್ ॥೨॥

ಅವರು ತಂದೆಯ ಮನೆಯಲ್ಲಿ ದುರ್ಯೋಧನಾದಿಗಳ ಜೊತೆಯಲ್ಲಿ ಆಡುತ್ತಿದ್ದರು. ಎಲ್ಲಾ ಬಾಲಕ್ರೀಡೆಗಳಲ್ಲಿಯೂ ಪಾಂಡವರೇ ಶ್ರೇಷ್ಠರಾಗಿದ್ದರು.

ಜವೇ ಲಕ್ಷ್ಯಾಭಿಹರಣೇ ಭೇದ್ಯೇ ಪಾಂಸುವಿಕರ್ಷಣೇ ।
ಧಾರ್ತರಾಷ್ಟ್ರಾನ್ ಭೀಮಸೇನಃ ಸರ್ವಾಂಸ್ತು ಪರಿಮರ್ದತಿ ॥೩॥

ಭೀಮಸೇನನು ವೇಗದಲ್ಲಿ, ಲಕ್ಷ್ಯವನ್ನು ತರುವುದರಲ್ಲಿ, ವಸ್ತುಗಳನ್ನು ಒಡೆಯುವುದರಲ್ಲಿ ಮತ್ತು ಧೂಳೆರಚುವುದರಲ್ಲಿ ದುರ್ಯೋಧನಾದಿ- ಗಳೆಲ್ಲರನ್ನೂ ಪರಾಭವಗೊಳಿಸುತ್ತಿದ್ದನು.

ಹರ್ಷಾದ್ಭೀತಾನ್ ಕ್ರೀಡಮಾನಾನ್ ಗೃಹ್ಯ ಕಾಕಲೀಯನೇ ।
ಶಿರಸ್ಸು ಚ ನಿಗೃಹ್ಯೈತಾನ್ ಯೋಧಯಾಮಾಸ ಪಾಂಡವಃ ॥೪॥

ಸಂತೋಷದಿಂದ ಆಡುತ್ತಿರುವ ದುರ್ಯೋಧನಾದಿಗಳನ್ನು ಪಾಂಡುವಿನ ಮಗನಾದ ಭೀಮನು ಶಿಖೆಯಲ್ಲಿ ಹಿಡಿದುಕೊಂಡು ಬೀಳಿಸಿ ಅನಂತರ ಬಿದ್ದ ಮೇಲೆ ಶಿರಸ್ಸನ್ನು ಹಿಡಿದು ಯುದ್ಧಮಾಡುತ್ತಿದ್ದನು.

ಶತಮೇಕೋತ್ತರಂ ತೇಷಾಂ ಕುಮಾರಾಣಾಂ ಮಹೌಜಸಾಮ್ ।
ಏಕ ಏವ ವಿಮೃದ್ನಾತಿ ನಾತಿಕೃಚ್ಛ್ರಾದ್ ವೃಕೋದರಃ ॥೫॥

ಮಹಾಸಾಮರ್ಥ್ಯವುಳ್ಳ ಧೃತರಾಷ್ಟ್ರನ ನೂರೊಂದು ಮಕ್ಕಳನ್ನು (ಯುಯುತ್ಸವೂ ಸೇರಿ) ವೃಕೋದರನೊಬ್ಬನೇ ಅತಿಪ್ರಯಾಸವಿಲ್ಲದೆ ಮರ್ದಿಸುತ್ತಿದ್ದನು.

ಜಲೇಷು ಚ ನಿಗೃಹ್ಯೈನಾನ್ ವಿನಿಹತ್ಯ ಬಲಾದ್ ಬಲೀ ।
ಚಕರ್ಷ ಕ್ರೋಶತೋ ಭೂಮೌ ಘೃಷ್ಟಜಾನುಶಿರೋರುಹಾನ್ ॥೬॥

ಬಲಿಷ್ಠನಾದ ಭೀಮನು ಅವರನ್ನು ನೀರಿನಲ್ಲಿ ಬಲಾತ್ಕಾರದಿಂದ ಹಿಡಿದುಕೊಂಡು ಅವರಿಗೆ ಹೊಡೆದು ಮಂಡಿ ಮತ್ತು ತಲೆಯ ಕೂದಲುಗಳನ್ನು ಮುದುರಿಕೊಂಡು ಕಿರುಚುತ್ತಿದ್ದ ಅವರನ್ನು ಭೂಮಿಯ ಮೇಲೆ ಎಳೆಯುತ್ತಿದ್ದನು.

ದಶ ಬಾಲಾನ್ ಜಲೇ ಕ್ರೀಡನ್ ಭುಜಾಭ್ಯಾಂ ಪರಿಗೃಹ್ಯ ಸಃ ।
ಆಸ್ತೇ ಸ್ಮ ಸಲಿಲೇ ಮಗ್ನಃ ಪ್ರಮೃದ್ನಂಶ್ಚ ವಿಮುಂಚತಿ ॥೭॥

ಅವನು ನೀರಿನಲ್ಲಿ ಆಟವಾಡುತ್ತಾ ತನ್ನ ಭುಜದಿಂದ ಹತ್ತು ಮಕ್ಕಳನ್ನು ಹಿಡಿದು ತಾನೂ ಅವರೊಂದಿಗೆ ನೀರಿನಲ್ಲಿ ಮುಳುಗಿ ಅವರಿಗೆ ತುಂಬಾ ಸಂಕಟವಾದಾಗ ಬಿಡುತ್ತಿದ್ದನು.

ಫಲಾನಿ ವೃಕ್ಷಮಾರುಹ್ಯ ಪ್ರಚಿನ್ವಂತಿ ಚ ತೇ ಯದಾ ।
ತದಾ ಪಾದಪ್ರಹಾರೇಣ ಭೀಮಃ ಕಂಪಯತೇ ದ್ರುಮಮ್ ॥೮॥

ಅವರು ಮರಗಳನ್ನು ಹತ್ತಿ ಹಣ್ಣುಗಳನ್ನು ತೆಗೆದುಕೊಳ್ಳುವಾಗ ಭೀಮನು ತನ್ನ ಪಾದದಿಂದ ಒದ್ದು ಆ ಮರವನ್ನು ಅಲುಗಾಡಿಸುತ್ತಿದ್ದನು.

ಪ್ರಹಾರಾಭಿಹತಾಚ್ಚಾಪಿ ದ್ರುಮಾದ್ ವ್ಯಾಘೂರ್ಣಿತಾತ್ ತತಃ ।
ಸಫಲಾಃ ಪ್ರಪತಂತಿ ಸ್ಮ ದ್ರುಮಾತ್ ಸ್ರಸ್ತಾಃ ಕುಮಾರಕಾಃ ॥೯॥

ಪಾದಪ್ರಹಾರದಿಂದ ಆ ಮರವು ತುಂಬಾ ಅಲುಗಾಡಿದಾಗ ಹಣ್ಣುಗಳ ಜೊತೆಯಲ್ಲಿ ಆ ಕುಮಾರರೂ ಮರಗಳಿಂದ ಕಳಚಿ ಬೀಳುತ್ತಿದ್ದರು.

ನ ತೇ ನಿಯುದ್ಧೇ ನ ಜವೇ ಯೋಗ್ಯಾಸು ನ ಕದಾಚನ ।
ಕುಮಾರಾ ಉತ್ತರಂ ಚಕ್ರುಃ ಸ್ಪರ್ಧಮಾನಾ ವೃಕೋದರಮ್ ॥೧೦॥

ಭೀಮಸೇನ ಜೊತೆಯಲ್ಲಿ ಸ್ಪರ್ಧೆಯ ಭಾವವನ್ನು ಹೊಂದಿದ್ದ ಆ ಕುಮಾರರು ಕುಸ್ತಿಯಲ್ಲಾಗಲೀ, ವೇಗದಲ್ಲಾಗಲೀ ಅಥವಾ ಯೋಗ್ಯವಾಗ ಯಾವುದೇ ಕ್ರೀಡೆಯಲ್ಲಾಗಲೀ, ಭೀಮಸೇನನಿಗೆ ಪತ್ಯುತ್ತರವನ್ನು ಮಾತ್ರ ಕೊಡುತ್ತಿದ್ದರು. ಪ್ರತಿಕ್ರಿಯೆಯನ್ನು ಮಾಡಲು ಎಂದೂ ಸಾಧ್ಯವಾಗಲಿಲ್ಲ.

ಏಕಃ ಸ ಧಾರ್ತರಾಷ್ಟ್ರಾಣಾಂ ಸ್ಪರ್ಧಮಾನೋ ವೃಕೋದರಃ ।
ಅಪ್ರಿಯೇಽತಿಷ್ಠದತ್ಯರ್ಥಂ ಬಾಲ್ಯಾನ್ನ ದ್ರೋಹಚೇತಸಾ ॥೧೧॥

ಧೃತರಾಷ್ಟ್ರನ ಕುಮಾರರ ಜೊತೆಯಲ್ಲಿ ತಾನೊಬ್ಬನೇ ಸ್ಪರ್ಧೆಯನ್ನು ಮಾಡುತ್ತಾ ಭೀಮಸೇನನು ಅವರಿಗೆ ಬಾಲಭಾವದಿಂದ ಬಹಳ ಅಪ್ರಿಯವನ್ನು ಮಾಡುತ್ತಿದ್ದನು. ದ್ರೋಹ ಮಾಡುವ ಬುದ್ಧಿಯಿಂದ ಮಾಡುತ್ತಿರಲಿಲ್ಲ.

ತತೋ ಬಲಮಭಿಖ್ಯಾತಂ ಧಾರ್ತರಾಷ್ಟ್ರಃ ಪ್ರತಾಪವಾನ್ ।
ಭೀಮಸೇನಸ್ಯ ತಜ್ಜ್ಞಾತ್ವಾ ದುಷ್ಟಭಾವಮದರ್ಶಯತ್ ॥೧೨॥

ಆಗ ಪ್ರತಾಪಶಾಲಿಯಾದ ದುರ್ಯೋಧನನು ಭೀಮಸೇನನ ಪ್ರಖ್ಯಾತವಾದ ಬಲವನ್ನು ತಿಳಿದು ದುಷ್ಟ ಆಲೋಚನೆಗಳನ್ನು ಮಾಡಿದನು.

ತಸ್ಯ ಧರ್ಮಾದಪೇತಸ್ಯ ಪಾಪಾನಿ ಪರಿಪಶ್ಯತಃ ।
ಮೋಹಾದ್ಐಶ್ವರ್ಯಭಾವಾಚ್ಚ ಪಾಪಾ ಮತಿರಜಾಯತ ॥೧೩॥

ಧರ್ಮದಿಂದ ದೂರನಾದ ಪಾಪಗಳಿಗೆ ಹೆದರದ ಅವನಿಗೆ ಮೋಹದಿಂದಲೂ ಐಶ್ವರ್ಯದ ಬಲದಿಂದಲೂ ದುರ್ಬುದ್ಧಿ- ಯುಂಟಾಯಿತು.

ಅಯಂ ಬಲವತಾಂ ಶ್ರೇಷ್ಠಃ ಕುಂತೀಪುತ್ರೋ ವೃಕೋದರಃ ।
ಮಧ್ಯಮಃ ಪಾಂಡುಪುತ್ರಾಣಾಂ ನಿಕೃತ್ಯಾ ವಿನಿಹನ್ಯತಾಮ್ ॥೧೪॥

ಪಾಂಡುಕುಮಾರರಲ್ಲಿ ಮಧ್ಯಮನಾದ, ಬಲಿಷ್ಠರಾದವರಲ್ಲಿ ಶ್ರೇಷ್ಠನಾದ, ಕುಂತಿಯ ಸುತನಾದ ಈ ವೃಕೋದರನನ್ನು ಮೋಸದಿಂದ ಕೊಲ್ಲಬೇಕು.

ಅಥ ತಸ್ಮಾದವರಜಂ ಜ್ಯೇಷ್ಠಂ ಚೈವ ಯುಧಿಷ್ಠಿರಮ್ ।
ಪ್ರಸಹ್ಯ ಬಂಧನೇ ಬದ್ಧ್ವಾ ಪ್ರಶಾಸಿಷ್ಯೇ ವಸುಂಧರಾಮ್ ॥೧೫॥

ಅನಂತರ, ಅವನ ತಮ್ಮನಾದ ಅರ್ಜುನನನ್ನು ಮತ್ತು ಅಣ್ಣನಾದ ಯುಧಿಷ್ಠಿರನನ್ನು ನನ್ನ ಶಕ್ತಿಯಿಂದ ಬಂಧನದಲ್ಲಿಟ್ಟು ನಾನೇ ಭೂಮಿಯನ್ನು ಆಳುವೆನು.

ಏಪಂ ಸ ನಿಶ್ಚಯಂ ಪಾಪಂ ಕೃತ್ವಾ ದುರ್ಯೋಧನಸ್ತದಾ ।
ನಿತ್ಯಮೇವಾಂತರಂ ಪ್ರೇಕ್ಷನ್ ಭೀಮಸ್ಯಾಸೀನ್ಮಹಾತ್ಮನಃ ॥೧೬॥

ದುರ್ಯೋಧನನು ಹೀಗೆ ಪಾಪನಿಶ್ಚಯವನ್ನು ಮಾಡಿ ಮಹಾತ್ಮನಾದ ಭೀಮಸೇನನಲ್ಲಿ ತನ್ನ ಸೇಡನ್ನು ತೀರಿಸಿಕೊಳ್ಳಲು ಅವಕಾಶವನ್ನು ಕಾಯುತ್ತಾ ಕುಳಿತನು.

ತತೋ ಜಲವಿಹಾರಾರ್ಥಂ ಕಾರಯಾಮಾಸ ಭಾರತ ।
ಚೇಲಕಂ ಬಲವೇಶ್ಮಾನಿ ವಿಚಿತ್ರಾಣಿ ಮಹಾಂತಿ ಚ ॥೧೭॥

ಪ್ರಮಾಣಕೋಟ್ಯಾಂ ತದ್ದೇಶಂ ಸ್ಥಲಂ ಕಿಂಚಿದುಪೇತ್ಯ ಚ ।
ಕ್ರೀಡಾವಸಾನೇ ಸರ್ವೇ ಚ ಶುಚಿವಸ್ತ್ರಾಃ ಸ್ವಲಂಕೃತಾಃ ।
ಸರ್ವಕಾಮಸಮೃದ್ಧಂ ತದನ್ನಂ ಬುಭುಜಿರೇ ಶನೈಃ ॥೧೮॥

ಭಾರತನೇ, ಅನಂತರ ದುರ್ಯೋಧನನು ಜಲವಿಹಾರವನ್ನು ಮಾಡುವ ಸಲುವಾಗಿ ಗಂಗಾತೀರದಲ್ಲಿ ಪ್ರಮಾಣಕೋಟಿ ಮಡುವಿನ ಸಮೀಪದಲ್ಲಿ ಸ್ವಲ್ಪ ಉನ್ನತವಾದ ಸ್ಥಳವನ್ನು ಆರಿಸಿ ಅಲ್ಲಿ ಕಂಬಳಿಗಳಿಂದಲೂ ಮತ್ತು ವಸ್ತ್ರಗಳಿಂದಲೂ ವಿಚಿತ್ರವಾದ ದೊಡ್ಡ ಗುಡಾರಗಳನ್ನು ಮಾಡಿಸಿದನು. ಜಲವಿಹಾರದ ನಂತರ ಕುಮಾರರೆಲ್ಲರೂ ಅಲ್ಲಿಗೆ ಬಂದು ಶುಭ್ರವಾದ ವಸ್ತ್ರವನ್ನುಟ್ಟು ಚೆನ್ನಾಗಿ ಅಲಂಕೃತರಾಗಿ ಸರ್ವಸಮೃದ್ಧವಾದ ಭಕ್ಷ್ಯಭೋಜ್ಯಗಳನ್ನು ನಿಧಾನವಾಗಿ ತಿನ್ನುತ್ತಿದ್ದರು.

ದಿವಸಾಂತೇ ಪರಿಶ್ರಾಂತಾ ವಿಹೃತ್ಯ ಚ ಕುರೂದ್ವಹಾಃ ।
ವಿಹಾರಾವಸಥೇಷ್ವೇವ ವೀರಾ ವಾಸಮರೋಚಯನ್ ॥೧೯॥

ದಿವಸದ ಕೊನೆಯವರೆಗೂ ಜಲವಿಹಾರವನ್ನು ಮಾಡಿ ದಣಿದ ವೀರರಾದ ಆ ಕುರೂದ್ವಹರು ಆ ವಿಹಾರನಿವಾಸಗಳ್ಲಯೇ ವಾಸವನ್ನು ಮಾಡಲು ಬಯಸಿದರು.

ಸ್ವಿನ್ನಸ್ತು ಬಲವಾನ್ ಭೀಮೋ ವ್ಯಾಯಾಮಾಭ್ಯಧಿಕಸ್ತದಾ ।
ವಾಹಯಿತ್ವಾ ಕುಮಾರಾಂಸ್ತಾನ್ ಜಲಕ್ರೀಡಾಗತಾನ್ ವಿಭುಃ ।
ಪ್ರಮಾಣಕೋಟ್ಯಾಂ ವಾಸಾರ್ಥಂ ಸುಪ್ತಾವಾರುಹ್ಯ ತತ್ಸ್ಥಲಮ್ ॥೨೦॥

ಬಲಿಷ್ಠನಾದ ಭೀಮನು ಹೆಚ್ಚಿನ ವ್ಯಾಯಾಮದಿಂದ ಬೆವರುತ್ತಾ ಜಲಕ್ರೀಡಾರತರಾದ ಎಲ್ಲಾ ಬಾಲಕರನ್ನೂ ದಡಕ್ಕೆ ತಂದು ಹಾಕಿ ಪ್ರಮಾಣಕೋಟಿಯ ಬಳಿ ವಾಸಕ್ಕಾಗಿ ಕಲ್ಪಿಸಿದ್ದ ಉನ್ನತವಾದ ಸ್ಥಳವನ್ನು ಏರಿ ನಿದ್ರೆಮಾಡಿದನು.

ಶೀತಂ ವಾಸಂ ಸಮಾಸಾದ್ಯ ಶ್ರಾಂತೋ ಮದವಿಮೋಹಿತಃ ।
ನಿಶ್ಚೇಷ್ಟಃ ಪಾಂಡವೋ ರಾಜನ್ ಸುಷ್ವಾಪ ಮೃತಕಲ್ಪವತ್ ॥೨೧॥

ಎಲೈ ರಾಜನೇ, ಶಾಂತನೂ, ಮದವಿಮೋಹಿತನೂ ಆದ ಭೀಮನು ತಂಪಾದ ಮನೆಯನ್ನು ಸೇರಿ ಅಲುಗಾಡದೆ ಮೃತನಂತೆ ಮಲಗಿ ನಿದ್ದೆಮಾಡಿದನು.

ತತೋ ಬದ್ವಾ ಲತಾಪಾಶೈರ್ಭೀಮಂ ದುರ್ಯೋಧನಃ ಶನೈಃ ।
ಪ್ರಮಾಣಕೋಟ್ಯಾಂ ತಂ ಸುಪ್ತಂ ಗಂಗಾಯಾಂ ಬಲಿನಾಂ ವರಮ್ ।
ಭೀಮಸೇನಂ ತದಾ ರಾಜನ್ ಬದ್ವಾ ಪ್ರಾಕ್ಷೇಪಯಜ್ಜಲೇ ॥೨೨॥

ಆಗ ದುರ್ಯೋಧನನು ಮೆಲ್ಲನೆ ಉಕ್ಕಿನಪಾಶಗಳಿಂದ ಭೀಮನನ್ನು ಬಿಗಿದು ಬಲಿಷ್ಠರಲ್ಲಿ ಶ್ರೇಷ್ಠನಾದ ನಿದ್ರಿಸುತ್ತಿದ್ದ ಅವನನ್ನು ಗಂಗೆಯ ಪ್ರಮಾಣಕೋಟಿ ಎಂಬ ಮಡುವಿನಲ್ಲಿ ಹಾಕಿದನು.

ತತಃ ಪ್ರಬುದ್ಧಃ ಕೌಂತೇಯಃ ಸರ್ವಾನ್ ಸಂಛಿದ್ಯ ಬಂಧನಾನ್ ।
ಉದತಿಷ್ಠಜ್ಜಲಾದ್ ಭೂಯೋ ಭೀಮಃ ಪ್ರಹರತಾಂ ವರಃ ॥೨೩॥

ಎಚ್ಚರಗೊಂಡ ಭೀಮಸೇನನು ತನ್ನ ಬಂಧನಗಳನ್ನೆಲ್ಲಾ ಕಿತ್ತು ಪುನಃ ಮಡುವಿನಿಂದ ಮೇಲೆದ್ದು ಬಂದನು.

ಸಮಾಸಾದ್ಯ ತತಃ ಕಾಂಶ್ಚಿನ್ಮಮರ್ದ ಚ ಶಿರಾಂಸಿ ಚ ।
ಶಿರೋಭಿಃ ಶಿರಸಾ ವೀರಃ ಕೃತವಾನ್ ಯುದ್ಧಮದ್ಭುತಮ್ ॥೨೪॥

ಪ್ರಹಾರ ಮಾಡುವವರಲ್ಲಿ ಶ್ರೇಷ್ಠನಾದ ಭೀಮನು ದಡಕ್ಕೆ ಬಂದು ಕೆಲವರನ್ನು ಮರ್ದಿಸಿ ತನ್ನ ತಲೆಯಿಂದ ಅವರ ತಲೆಗೆ ಹೊಡೆದು ಅದ್ಭುತವಾದ ಯುದ್ಧವನ್ನು ಮಾಡಿದನು.

ಸ ವಿಮುಕ್ತೋ ಮಹಾತೇಜಾ ನಾಜ್ಞಾಸೀತ್ ತೇನ ತತ್ಕೃತಮ್ ।
ಪುನರ್ನಿದ್ರಾವಶಂ ನೀತಸ್ತತ್ರೈವ ಪ್ರಾಸ್ವಪದ್ ಬಲೀ ॥೨೫॥

ಗಂಗೆಯ ಮಡುವಿನಿಂದ ವಿಮುಕ್ತನಾದ ಮಹಾತೇಜಸ್ವಿಯೂ, ಬಲಿಷ್ಠನೂ ಆದ ಅವನು ಯಾರು ತನ್ನನ್ನು ಮಡುವಿನಲ್ಲಿ ಹಾಕಿದರು ಎಂದು ತಿಳಿಯದೇ (ತಿಳಿಯದವನಂತೆ) ಪುನಃ ನಿದ್ರಾವಶನಾಗಿ ಅಲ್ಲಿಯೇ ಮಲಗಿದನು.

ಅಥ ರಾತ್ರ್ಯಾಂ ವ್ಯತೀತಾಯಾಮುತ್ತಸ್ಥುಃ ಕುರುಪಾಂಡವಾಃ ।
ದುರ್ಯೋಧನಸ್ತು ಕೌಂತೇಯಂ ದೃಷ್ಟ್ವಾ ನಿರ್ವೇದಮಭ್ಯಗಾತ್ ॥೨೬॥

ರಾತ್ರಿಯು ಕಳೆಯುತ್ತಿರಲು ಕುರುಪಾಂಡವರೆಲ್ಲರೂ ಎದ್ದು ಬಂದರು. ದುರ್ಯೋಧನನು ಭೀಮನು ಇನ್ನೂ ಬದುಕಿರುವುದನ್ನು ನೋಡಿ ನಿರ್ವೇದಗೊಂಡನು.

ಸುಪ್ತಂ ಚಾಪಿ ಪುನಃ ಸರ್ಪೈಃ ತೀಕ್ಷ್ಣದಂಷ್ಟ್ರೈರ್ಮಹಾವಿಷೈಃ ।
ಕುಪಿತೈರ್ದಂಶಯಾಮಾಸ ಸರ್ವೇಷ್ವೇವಾಂಗಸಂಧಿಷು ।
ದಂಷ್ಟ್ರಾಶ್ಚ ದಂಷ್ಟ್ರಿಣಾಂ ತೇಷಾಂ ಮರ್ಮಸ್ವಪಿ ನಿಪಾತಿತಾಃ ॥೨೭॥

ಪುನಃ ಅವನು ಇನ್ನೊಮ್ಮೆ ತೀಕ್ಷ್ಣವಾದ ಹಲ್ಲುಗಳುಳ್ಳ ಮಹಾವಿಷವುಳ್ಳ ಕೋಪಗೊಂಡ ಸರ್ಪಗಳಿಂದ ಮಲಗಿರುವ ಭೀಮಸೇನನನ್ನು ಎಲ್ಲಾ ಮರ್ಮಸ್ಥಳಗಳಲ್ಲಿಯೂ ಕಚ್ಚಿಸಿದನು.

ತ್ವಚಂ ನ ಚಾಸ್ಯ ಬಿಭಿದುಃ ಸಾರತ್ವಾತ್ ಪೃಥುವಕ್ಷಸಃ ।
ಪ್ರಬುದ್ಧೋ ಭೀಮಸೇನಸ್ತಾನ್ ಸರ್ವಾನ್ ಸರ್ಪಾನಪೋಥಯತ್ ॥

ವಜ್ರಶರೀರನೂ, ವಿಸ್ತಾರವಕ್ಷಸ್ಥಳವುಳ್ಳವನೂ ಆದ ಆ ಭೀಮನ ಸರ್ವಮರ್ಮಗಳಲ್ಲಿ ತಮ್ಮ ಕೋರೆಹಲ್ಲುಗಳನ್ನು ಊರಿದ ಆ ಸರ್ಪಗಳು ಅವನ ಚರ್ಮವನ್ನೂ ಭೇದಿಸಲು ಸಾಧ್ಯವಾಗಲಿಲ್ಲ.

ಸಾರಥಿಂ ಚಾಸ್ಯ ದಯಿತಮಪಹಸ್ತೇನ ಜಘ್ನಿವಾನ್ ।
ತಥಾಽನ್ಯದಿವಸೇ ರಾಜನ್ ಹಂತುಕಾಮೋಽತ್ಯಮರ್ಷಣಃ ॥೨೯॥

ಎಚ್ಚರಗೊಂಡ ಭೀಮಸೇನನು ಕಣ್ಣುಮುಚ್ಚಿಕೊಂಡೇ ಆ ಸರ್ಪಗಳನ್ನೆಲ್ಲಾ ಕೊಂಡು ಆ ಸರ್ಪಗಳನ್ನು ತಂದಿದ್ದ ದುರ್ಯೋಧನನ ಪ್ರಿಯಸಾರಥಿಯನ್ನೂ ಸಹ ಎಡಗೈಯಿಂದಲೇ ಸಂಹರಿಸಿದನು.

ಸೌಬಲೇನ ಸಹಾಮಂತ್ರ್ಯ ಸೌಬಲಸ್ಯ ಮತೇ ಸ್ಥಿತಃ ।
ಭೋಜನೇ ಭೀಮಸೇನಸ್ಯ ತತಃ ಪ್ರಾಕ್ಷೇಪಯದ್ ವಿಷಮ್ ॥೩೦॥

ರಾಜನೇ, ಇನ್ನೊಂದು ದಿವಸ ಅತಿಕೋಪಿಷ್ಟನಾದ ದುರ್ಯೋಧನನು ಭೀಮಸೇನನನ್ನು ಕೊಲ್ಲಲು ಬಯಸಿ ಶಕುನಿಯ ಜೊತೆಯಲ್ಲಿ ಮಂತ್ರಾಲೋಚನೆಯನ್ನು ನಡೆಸಿ ಶಕುನಿಯ ಅಭಿಪ್ರಾಯದಂತೆ ಭೀಮಸೇನನ ಭೋಜನದಲ್ಲಿ ವಿಷವನ್ನು ಬೆರೆಸಿದನು.

ವೈಶ್ಯಾಪುತ್ರಸ್ತದಾಚಷ್ಟ ಪಾರ್ಥಾನಾಂ ಹಿತಕಾಮ್ಯಯಾ ।
ಕಾಲಕೂಟಂ ವಿಷಂ ತೀಕ್ಷ್ಣಂ ಸಂಭೂತಂ ರೋಮಹರ್ಷಣಮ್ ॥೩೧॥

ಧೃತರಾಷ್ಟ್ರನ ವೈಶ್ಯಾಪುತ್ರನಾದ ಯುಯುತ್ಸುವು ಪಾಂಡವರ ಮೇಲಿನ ಹಿತದೃಷ್ಟಿಯಿಂದ ರೋಮಾಂಚಕಾರಿಯಾದ ತೀಕ್ಷ್ಣವಾದ ಕಾಲಕೂಟವಿಷವು ಭೋಜನದಲ್ಲಿ ಬೆರೆತಿದೆ ಎಂದು ತಿಳಿಸಿದನು.

ತಚ್ಚಾಪಿ ಭುಂಕ್ತಾ ೞಜರಯದವಿಕಾರೋ ವೃಕೋದರಃ ।
ವಿಕಾರಂ ನಾಭ್ಯಜನಯತ್ ಸುತೀಕ್ಷ್ಣಮಪಿ ತದ್ ವಿಷಮ್ ॥೩೨॥

ಭೀಮಸಂಹನನೋ ಭೀಮಸ್ತಸ್ಮಾದಜರಯಚ್ಚ ತತ್ ।
ತತೋೞನ್ಯದಿವಸೇ ರಾಜನ್ ಹಂತುಕಾಮೋ ವೃಕೋದರಮ್ ॥೩೩॥

ವೃಕೋದರನು ಅದನ್ನೂ ತಿಂದು ಅರಗಿಸಿಕೊಂಡು ನಿರ್ವಿಕಾರನಾಗಿದ್ದನು. ಅತ್ಯಂತ ತೀಕ್ಷ್ಣವಾದ ಕಾಲಕೂಟವಿಷವೂ ಸಹ ಅವನಲ್ಲಿ ವಿಕಾರವನ್ನು ಉಂಟುಮಾಡಲಿಲ್ಲ. ಭೀಮನು ಭೀಮಕಾಯನಾದ ಕಾರಣದಿಂದ ಆ ವಿಷವನ್ನು ಅರಗಿಸಿಕೊಂಡನು.

ಸೌಬಲೇನ ಸಹಾಯೇನ ಧಾರ್ತರಾಷ್ಟ್ರೋೞಭ್ಯಚಿಂತಯತ್ ।
ಚಿಂತಯನ್ ನಾಲಭನ್ನಿದ್ರಾಂ ದಿವಾರಾತ್ರಮತಂದ್ರಿತಃ ॥೩೪॥

ರಾಜನೇ, ಇನ್ನೊಂದು ದಿವಸ ವೃಕೋದರನನ್ನು ಕೊಲ್ಲಬೇಕೆಂದು ನಿಶ್ಚಯಿಸಿ ದುರ್ಯೋಧನನು ಶಕುನಿಯ ಜೊತೆಯಲ್ಲಿ ಚಿಂತಿಸಿದನು. ಹಾಗೆ ಎಚ್ಚರಿಕೆಯಿಂದ ಚಿಂತಿಸುತ್ತಿದ್ದ ಅವನಿಗೆ ಹಗಲಾಗಲೀ ರಾತ್ರಿಯಾಗಲೀ ನಿದ್ರೆಯು ಬರುತ್ತಿರಲಿಲ್ಲ.

ಏವಂ ದುರ್ಯೋಧನಃ ಕರ್ಣಃ ಶಕುನಿಶ್ಚಾಪಿ ಸೌಬಲಃ ।
ಅನೇಕೈರಪ್ಯುಪಾಯೈಸ್ತಾನ್ ಜಿಘಾಂಸಂತಿ ಸ್ಮ ಪಾಂಡವಾನ್ ॥೩೫॥

ಹೀಗೆ ದುರ್ಯೋಧನ, ಕರ್ಣ ಮತ್ತು ಶಕುನಿ ಈ ಮೂವರೂ, ಅನೇಕ ಉಪಾಯಗಳಿಂದ ಆ ಪಾಂಡವರನ್ನು ಕೊಲ್ಲಲು ಬಯಸಿದರು.

ನ ಜಜ್ಞಿರೇ ತು ತದ್ವೃತ್ತಂ ಪಾಂಡವಾ ಮಂದಚೇತಸಃ ।
ವೈಶ್ಯಾಪುತ್ರಸ್ತದಾಚಷ್ಟ ಪಾರ್ಥಾನಾಂ ಹಿತಕಾಮ್ಯಯಾ ॥೩೬॥

ಮಂದಮತಿಗಳಾದ ಪಾಂಡವರಿಗೆ ಈ ವೃತ್ತಾಂತವು ತಿಳಿಯುತ್ತಿರಲಿಲ್ಲ. ಆದರೆ, ಪಾಂಡವರಿಗೆ ಹಿತವನ್ನು ಬಯಸಿ ವೈಶ್ಯಾಪುತ್ರನಾದ ಯುಯುತ್ಸುವು ಎಲ್ಲವನ್ನೂ ತಿಳಿಸುತ್ತಿದ್ದನು.

ಪಾಂಡವಾ ಹ್ಯಪಿ ತತ್ಸರ್ವಂ ಪ್ರತ್ಯಜಾನನ್ನರಿಂದಮಾಃ ।
ಉದ್ಭಾವನಮಕುರ್ವಂತೋ ವಿದುರಸ್ಯ ಮತೇ ಸ್ಥಿತಾಃ ॥೩೭॥

ಅರಿಂದಮರಾದ ಪಾಂಡವರು ಎಲ್ಲವನ್ನೂ ಗಮನಿಸಿದರೂ, ವಿದುರನ ಅಭಿಪ್ರಾಯದಂತೆ ಏನನ್ನೂ ಸೂಚಿಸದೆ, ಸುಮ್ಮನಿದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಪಂಚವಿಂಶತ್ಯಧಿಕಶತತಮೋಽಧ್ಯಾಯಃ ॥
॥ ಸಂಭವಪರ್ವಣಿ ತ್ರಿಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೪

ತಂ ವೀಕ್ಷ್ಯ ದುಷ್ಟಮನಸೋಽತಿವಿಷಣ್ಣಚಿತ್ತಾಃ
ಸಮ್ಮಂತ್ರ್ಯ ಭೂಯ ಉರುನಾಗಗಣಾನಥಾಷ್ಟೌ ।
ಶುಕ್ರೋಕ್ತಮಂತ್ರಬಲತಃ ಪುರ ಆಹ್ವಯಿತ್ವಾ
ಪಶ್ಚಾತ್ ಸುಪಂಜರಗತಾನ್ ಪ್ರದದುಃ ಸ್ವಸೂತೇ ॥೭೫॥

ಅವನನ್ನು ನೋಡಿ ದುರ್ಬುದ್ಧಿಗಳಾದ ಕೌರವರು ಅತ್ಯಂತ ವಿಷಣ್ಣಚಿತ್ತರಾಗಿ, ಮತ್ತೂ ಮಂತ್ರಾಲೋಚನ ಮಾಡಿ, ಎಂಟು ಮಹಾನಾಗಸಮೂಹಗಳನ್ನು ಶುಕ್ರಾಚಾರ್ಯರು ಉಪದೇಶಿಸಿದ ಮಂತ್ರಬಲದಿಂದ ಎದುರಿಗೆ ಆಹ್ವಾನಿಸಿ, ಒಳ್ಳೆಯ ಪಂಜರದಲ್ಲಿ ಹಿಡಿದಿಟ್ಟು, ತಮ್ಮ ಸಾರಥಿಯ ವಶದಲ್ಲಿ ಕೊಟ್ಟರು.

ದುರ್ಯೋಧನೇನ ಪೃಥುಮಂತ್ರ ಬಲೋಪಹೂತಾನ್
ತತ್ಸಾರಥಿಃ ಫಣಿಗಣಾನ್ ಪದನಾತ್ಮಜಸ್ಯ ।
ಸುಪ್ತಸ್ಯ ವಿಸ್ಮೃತ ಉರಸ್ಯಮುಚದ್ ವಿಶೀರ್ಣ
ದಂತಾ ಬಭೂವುರಮುಮಾಶು ವಿದಶ್ಯ ನಾಗಾಃ ॥೭೬॥

ದುರ್ಯೋಧನ ಮಹಾಮಂತ್ರಬಲದಿಂದ ತಂದಿರಿಸಿದ್ದ ಈ ಹಾವುಗಳ ಸಮೂಹಗಳನ್ನು ಅವನ ಸಾರಥಿ ಮಲಗಿದ್ದ ಭೀಮನ ವಿಶಾಲವಾದ ಎದೆಯ ಮೇಲೆ ಬಿಟ್ಟ. ಆ ಹಾವುಗಳು ಭೀಮನನ್ನು ಕಡಿದು ತಕ್ಷಣ ಹಲ್ಲುಗಳನ್ನು ಕಳೆದುಕೊಂಡವು.

ಕ್ಷಿಪ್ತ್ವಾ ಸುದೂರ ಸುದೂರಮುರುನಾಗವರಾನಥಾಷ್ಟೌ
ತದ್ವಂಶಜಾನ್ ಸ ವಿನಿಹತ್ಯ ಪಿಪೀಲಿಕಾವತ್ ।
ಜಘ್ನೇ ಚ ಸೂತ್ರಮಪಹಸ್ತತ ಏವ ಭೀಮಃ
ಸುಷ್ವಾಪ ಪೂರ್ವವದನುತ್ಥಿತ ಏವ ತಲ್ಪಾತ್ ॥೭೭॥

ಭೀಮ ಎಂಟು ಮಹಾನಾಗ ಸಮೂಹಗಳನ್ನು ಬಲುದೂರಕ್ಕೆ ಎಸೆದು ಅವುಗಳ ವಂಶದಲ್ಲಿ ಹುಟ್ಟಿದ ಕೆಟ್ಟ ಹಾವುಗಳನ್ನು ಇರುವೆಗಳಂತೆ ಕೊಂದು ಸಾರಥಿಯನ್ನೂ ಮುಂಗೈಯಿಂದಲೆ ಕೊಂದ. ಹಾಸಿಗೆಯಿಂದ ಏಳದೆಯೆ ಹಿಂದಿನಂತೆಯೆ ಮಲಗಿದ.

ತತ್ ತಸ್ಯ ನೈಜಬಲಮಪ್ರತಿಮಯಂ ನಿರೀಕ್ಷ್ಯ
ಸರ್ವೇ ಕ್ಷಿತೀಶತನಯಾ ಅಧಿಕಂ ವಿಷೇದುಃ ।
ನಿಶ್ವಾಸತೋ ದರ್ಶನಾದಪಿ ಭಸ್ಮ ಯೇಷಾಂ
ಭೂಯಾಸುರೇವ ಭುವನಾನಿ ಚ ತೇ ಮೃಷಾಸನ್ ॥೭೮॥

ಭೀಮನ ಅಪ್ರತಿಮವಾದ ಸ್ವಾಭಾವಿಕವಾದ ಬಲವನ್ನು ಕಂಡು ಎಲ್ಲ ರಾಜಕುಮಾರರೂ ಬಹಳ ವಿಷಾದ ಹೊಂದಿದ್ದರು. ಯಾವ ಹಾವುಗಳ ವಿಶ್ವಾಸದಿಂದಲೂ ದರ್ಶನದಿಂದಲೂ ಲೋಕಗಳು ಭಸ್ಮವಾಗುವುವೋ ಅವು ವ್ಯರ್ಥವಾದುವು.

ದದ್ಭಿರ್ವಿದಶ್ಯ ನ ವಿಕಾರಮಮುಷ್ಯ ಕರ್ತುಂ
ಶೇಕುರ್ಭುಜಂಗಮವರಾ ಅಪಿ ಸುಪ್ರಯತ್ನಾಃ ।
ಕಸ್ಯಾಪಿ ನೇದೃಶಬಲಂ ಶ್ರುತಪೂರ್ವಮಾಸೀತ್
ದೃಷ್ಟಂ ಕಿಮು ಸ್ಮ ತನಯೇಽಪಿ ಹಿರಣ್ಯಕಸ್ಯ ॥೭೯॥

ಮಹಾಸರ್ಪಗಳು ಹಲ್ಲುಗಳಿಂದ ಕಡಿದು ಬಹಳ ಪ್ರಯತ್ನ ಮಾಡಿಯೂ ಭೀಮನಿಗೆ ನೋವು ಉಂಟು ಮಾಡಲು ಶಕ್ತವಾಗಲಿಲ್ಲ. ಇನ್ನು ಯಾರಿಗೂ ಇಂಥ ಬಲ ಹಿಂದೆ ಕೇಳಿಲ್ಲ. ಕಂಡಿಲ್ಲವೆಂದು ಇನ್ನೇನು ಹೇಳಬೇಕು? ಪ್ರಹ್ಲಾದನಲ್ಲಿಯೂ ಇಂಥ ಬಲವಿತ್ತೆಂದು ಕೇಳಿಲ್ಲ.

ಸ್ವಾತ್ಮಾವನಾರ್ಥಮಧಿಕಾಂ ಸ್ತುತಿಮೇವ ಕೃತ್ವಾ
ವಿಷ್ಣೋಃ ಸ ದೈತ್ಯತನಯೋ ಹರಿಣಾವಿತೋಽಭೂತ್ ।
ನ ತ್ವೌರಸಂ ಬಲಮಮುಷ್ಯ ಸ ಕೃಷ್ಯತೇ ಹಿ
ಭೃತ್ಯೈರ್ಬಲಾತ್ ಸ್ವಪಿತುರೌರಸಮಸ್ಯ ವೀರ್ಯಮ್ ॥೮೦॥

ಪ್ರಹ್ಲಾದ ತನ್ನ ರಕ್ಷಣೆಗಾಗಿ ವಿಷ್ಣುವನ್ನು ಬಹಳ ಸ್ತುತಿ ಮಾಡಿಯೆ ವಿಷ್ಣುವಿನಿಂದ ರಕ್ಷಿತನಾಗಿದ್ದ. ಅವನದು ಸ್ವಾಭಾವಿಕ ಬಲವಲ್ಲ. ಏಕೆಂದರೆ ತನ್ನ ತಂದೆಯ ಭಟರು ಅವನನ್ನು ಬಲಾತ್ಕಾರವಾಗಿ ಸೆಳೆಯುತ್ತಿದ್ದರು. ಭೀಮನ ಬಲ ಸ್ವಾಭಾವಿಕ.

★ ★ ★ ★

ನೂರ ಇಪ್ಪತ್ತಾರನೆಯ ಅಧ್ಯಾಯ

(ದುರ್ಯೋಧನನಿಂದ ಪುನಃ ಭೀಮನಿಗೆ ವಿಷದಾನ, ಭೀಮನ ನಾಗಲೋಕ ಪ್ರಾಪ್ತಿ ಮತ್ತು ಅಲ್ಲಿ ಸನ್ಮಾನ.)

ವೈಶಂಪಾಯನಃ

ತತಸ್ತೇ ಮಂತ್ರಯಾಮಾಸುರ್ದುರ್ಯೋಧನಪುರೋಗಮಾಃ ।
ಪ್ರಾಣವಾನ್ ವಿಕ್ರಮೀ ಚಾಪಿ ಶೌರ್ಯೇ ಮಹತಿ ಚ ಸ್ಥಿತಃ ॥೦॥

ಸ್ಪರ್ಧತೇ ಚಾಪಿ ಸತತಮಸ್ಮಾನೇಕೋ ವೃಕೋದರಃ ।
ತಂ ತು ಸುಪ್ತಂ ಪುರೋದ್ಯಾನೇ ಜಲೇ ಶೂರಂ ಕ್ಷಿಪಾಮಹೇ ॥೨॥

ಅನಂತರ ಆ ದುರ್ಯೋಧನ ಮೊದಲಾದವರೆಲ್ಲರೂ ಸೇರಿ ಮಂತ್ರಾಲೋಚನೆಯನ್ನು ಮಾಡಿದರು. ವೃಕೋದರನು ಪ್ರಾಣಶಕ್ತಿ- ಯುಳ್ಳವನು, ವಿಕ್ರಮವುಳ್ಳವನು ಮತ್ತು ಮಹಾಶೌರ್ಯಸಂಪನ್ನನು. ಯಾವಾಗಲೂ ನಮ್ಮೆಲ್ಲರ ಜೊತೆಯಲ್ಲಿ ಅವನೊಬ್ಬನೇ ಎದುರಾಗಿ ಸ್ಪರ್ಧಿಸುತ್ತಾನೆ. ಪುರೋದ್ಯಾನದಲ್ಲಿ ನಿದ್ದೆಮಾಡುವ ಆ ಶೂರನನ್ನು ನೀರಿನಲ್ಲಿ ಹಾಕೋಣ.

ತತೋ ಜಲವಿಹಾರಾರ್ಥಂ ಕಾರಯಾಮಾಸ ಭಾರತ ।
ಚೇಲಕಂಬಲವೇಶ್ಮಾನಿ ಚಿತ್ರಾಣಿ ಚ ಶುಭಾನಿ ಚ ॥೩॥

ಭಾರತನೇ, ಅನಂತರ ಜಲವಿಹಾರದ ಸಲುವಾಗಿ ಚೇಲ ಮತ್ತು ಕಂಬಳಿಗಳಿಂದ ಸುಂದರವಾದ ಮತ್ತು ಮನೋಹರವಾದ ಅನೇಕ ಗುಡಾರಗಳನ್ನು ಮಾಡಿಸಿದನು.

ತತ್ರ ಸಂಸ್ಕಾರಯಾಮಾಸುರ್ನಾನಾಗಾರಾಣ್ಯನೇಕಶಃ ।
ಉದಕಕ್ರೀಡನಾರ್ಥಾನಿ ಕಾರಯಾಮಾಸ ಭಾರತ ॥೪॥

ಅನಂತರ ಉದಕ ಕ್ರೀಡೆಗಾಗಿ ನಿರ್ಮಿಸಿದ ಆ ವಸ್ತ್ರಗೃಹಗಳಿಗೆ ಅನೇಕ ಅಲಂಕಾರಗಳನ್ನು ಮಾಡಿಸಿದನು.

ತತೋ ದುರ್ಯೋಧನಸ್ತ್ವಾಹ ಪಾಂಡವಾಂಸ್ತು ಸುದುರ್ಮತಿಃ ।
ಗಂಗಾಮಿಮಾಂ ನಯಾಮೋऽದ್ಯ ಉದ್ಯಾನವನಶೋಭಿತಾಮ್ ॥೫॥

ಸಹಿತಾ ಭ್ರಾತರಃ ಸರ್ವೇ ಜಲಕ್ರೀಡಾಮವಾಪ್ನುಮಃ ।
ಏವಮಸ್ತಿ ತ್ವಿ ತಂ ಚಾಪಿ ಪ್ರತ್ಯುವಾಚ ಯುಧಿಷ್ಠಿರಃ ॥೬॥

ಅನಂತರ ಮಹಾದುರ್ಬುದ್ಧಿಯುಳ್ಳ ದುರ್ಯೋಧನನು ಪಾಂಡವರನ್ನು ಕುರಿತು 'ನಾವೆಲ್ಲಾ ಅಣ್ಣತಮ್ಮಂದಿರೂ ಉದ್ಯಾನವನ ಶೋಭಿತವಾದ ಗಂಗೆಗೆ ಹೋಗಿ ಅಲ್ಲಿ ಜಲಕ್ರೀಡೆಯನ್ನು ಆಡೋಣ' ಎಂದು ಹೇಳಿದನು. 'ಹಾಗೆಯೇ ಆಗಲಿ' ಎಂದು ಯುಧಿಷ್ಠಿರನು ಅವನಿಗೆ ಉತ್ತರವನ್ನು ಕೊಟ್ಟನು.

ತೇ ರಥೈರ್ನಗರಾಕಾರೈರ್ದೇಶಜೈಶ್ಚ ಹಯೋತ್ತಮೈಃ ।
ನಿರ್ಯಯುರ್ನಗರಾದ್ ವೀರಾಃ ಕುರವಃ ಪಾಂಡವೈಃ ಸಹ ॥೭॥

ಅನಂತರ ಆ ಕೌರವರು ಮತ್ತು ಪಾಂಡವರು ವಿದೇಶದ ಕುದುರೆಗಳನ್ನು ಹೂಡಿದ ದೊಡ್ಡ ದೊಡ್ಡ ರಥಗಳಲ್ಲಿ ನಗರದಿಂದ ಹೊರಗೆ ಹೊರಟರು.

ಉದ್ಯಾನವನಮಾಸಾದ್ಯ ಸಂಪ್ರಸೃಜ್ಯ ಚ ವಾಹನಮ್ ।
ಪ್ರಾವಿಶಂಸ್ತು ಮಹಾವೀರ್ಯಾಃ ಸಿಂಹಾ ಇವ ಗಿರೇರ್ಗುಹಾಃ ॥೮॥

ಮಹಾವೀರ್ಯರಾದ ಅವರು ಉದ್ಯಾನವನವನ್ನು ತಲುಪಿ ವಾಹನಗಳನ್ನು ಬಿಚ್ಚಿ ಸಿಂಹಗಳು ಗಿರಿಯ ಗುಹೆಗಳನ್ನು ಪ್ರವೇಶಿಸುವಂತೆ ಉದ್ಯಾನವನವನ್ನು ಪ್ರವೇಶಿಸಿದರು.

ಉದ್ಯಾನಂ ಸ್ಮಾಥ ಪಶ್ಯಂತಿ ಭ್ರಾತರಃ ಸರ್ವ ಏವ ತೇ ।
ಉಪಸ್ಥಾನಗೃಹೈಃ ಶುಭ್ರೈರ್ವಲಭೀಭಿಶ್ಚ ಶೋಭಿತಮ್ ॥೯॥

ಎಲ್ಲಾ ಅಣ್ಣತಮ್ಮಂದಿರೂ ಶುಭ್ರವಾದ ವಿಶ್ರಾಂತಿಗೃಹಗಳಿಂದಲೂ ವಲಭಿಗಳಿಂದಲೂ ಶೋಭಿಸುವ ಉದ್ಯಾನವನ್ನು ನೋಡಿದರು.

ಗವಾಕ್ಷೈಸ್ತಥಾ ಜಾಲೈರ್ಜಲಸಂಸಾರಕೈಸ್ತಥಾ ।
ಸೂಪಾಕೃತಂ ಸುಧಾಕಾರೈಃ ಚಿತ್ರಕಾರೈಶ್ಚ ಶಿಲ್ಪಿಭಿಃ ॥೧೦॥

ಆ ಗೃಹಗಳಿಗೆ ಗವಾಕ್ಷಗಳು ಮತ್ತು ನೀರನ್ನು ನೂಕುವ ಸಾಧನಗಳು, ಮತ್ತು ಜಾಲಗಳು ಇದ್ದವು. ಬಣ್ಣವನ್ನು ಹಚ್ಚುವವರಿಂದ ಚೆನ್ನಾಗಿ ಅಲಂಕಾರ ಮಾಡಲ್ಪಟ್ಟಿದ್ದು. ಚಿತ್ರಕಾರರಾದ ಶಿಲ್ಪಿಗಳು ಅಲ್ಲಿ ಅನೇಕ ಚಿತ್ರಗಳನ್ನು ನಿರ್ಮಿಸಿದ್ದರು.

ದೀರ್ಘಿಕಾಭಿಶ್ಚ ಪುಣ್ಯಾಭಿಃ ತಥಾ ಕಾರಂಡಕೈರಪಿ ।
ಜಲಂ ತು ಶುಶುಭೇ ಚ್ಛನ್ನಂ ಪುಲ್ಲೈರ್ಜಲರುಹೈಸ್ತಥಾ ॥೧೧॥

ಅಲ್ಲಿ ಪವಿತ್ರವಾದ ಬಾವಿಗಳು ಮತ್ತು ಕಾರಂಡಕಗಳು ಇದ್ದವು. ಅದರಲ್ಲಿನ ನೀರು ಅರಳಿದ ಜಲಪುಷ್ಪಗಳಿಂದ ಮತ್ತು ಜಲಸಸ್ಯಗಳಿಂದ ಆವೃತವಾಗಿ ಶೋಭಿಸುತ್ತಿತ್ತು.

ಉಪಕೀರ್ಣಾ ವಸುಮತೀ ತಥಾ ಪುಷ್ಪೈರ್ಯಥರ್ತುಕೈಃ ।
ಉಪವಿಷ್ಟಾಸ್ತಥಾ ಸರ್ವೇ ಪಾಂಡವಾಃ ಕುರವಸ್ತಥಾ ॥೧೨॥

ಉದ್ಯಾನ ಭೂಮಿಯು ಆಯಾ ಋತುಗಳಿಗೆ ಯೋಗ್ಯವಾದ ಪುಷ್ಪಗಳಿಂದ ಎಲ್ಲಾ ಕಡೆಯಲ್ಲಿಯೂ ತುಂಬಿದ್ದಿತು. ಪಾಂಡವರು ಮತ್ತು ಕೌರವರೆಲ್ಲರೂ ಆ ಉದ್ಯಾನದಲ್ಲಿ ಕುಳಿತುಕೊಂಡರು.

ಉಪಪನ್ನಾನ್ ಬಹೂನ್ ಕಾಮಾಂಸ್ತಥಾ ಭುಕ್ತ್ವಾ ತತಸ್ತತಃ ।
ಅಥೋದ್ಯಾನವನೇ ತಸ್ಮಿನ್ ತಥಾ ಕ್ರೀಡಾಗತಾಶ್ಚ ತೇ ॥೧೩॥

ಯೋಗ್ಯವಾದ ಮತ್ತು ಇಷ್ಟವಾದ ಅನೇಕ ವಸ್ತುಗಳನ್ನು ಭುಂಜಿಸಿ ಆ ಉದ್ಯಾನವನದಲ್ಲಿ ಕ್ರೀಡೆಗಾಗಿ ಹೊರಟರು.

ಪರಸ್ಪರಸ್ಯ ವಕ್ತ್ರೇಷು ದದುರ್ಭಕ್ಷ್ಯಾಂಸ್ತತಸ್ತತಃ ।
ತತೋ ದುರ್ಯೋಧನಃ ಪಾಪಃ ತದ್ ಭಕ್ಷ್ಯೇ ಕಾಲಕೂಟಕಮ್ ॥೧೪॥

ವಿಷಂ ಪ್ರಕ್ಷೇಪಯಾಮಾಸ ಭೀಮಸೇನಜಿಘಾಂಸಯಾ ।
ಸ್ವಯಮುತ್ಥಾಯ ಚೈವಾಥ ಹೃದಯೇನ ಕ್ಷುರೋಪಮಃ ॥೧೫॥

ಪರಸ್ಪರವಾಗಿ ಒಬ್ಬರ ಬಾಯಿಯಲ್ಲಿ ಇನ್ನೊಬ್ಬರು ಭಕ್ಷ್ಯಗಳನ್ನಿಟ್ಟು ತಿನ್ನಿಸಿದರು. ಆಗ ಪಾಪಿಯಾದ ದುರ್ಯೋಧನನು ಭಕ್ಷ್ಯದಲ್ಲಿ ಕಾಲಕೂಟವಿಷವನ್ನು ಬೆರೆಸಿ ಭೀಮನನ್ನು ಕೊಲ್ಲುವ ಅಭಿಪ್ರಾಯದಿಂದ ಭೀಮನ ಬಾಯಿಯಲ್ಲಿ ಹಾಕಿದನು.

ಸತೃತ್ಯ ಭ್ರಾತೃವತ್ ತತ್ರ ವಾಚಾ ಚಾಮೃತಕಲ್ಪಯಾ ।
ಪ್ರಾಕ್ಷಿಪದ್ ವೈ ಸ್ವಯಂ ಭಕ್ಷ್ಯಂ ವಕ್ತ್ರೇ ಭೀಮಸ್ಯ ಪಾಪಕೃತ್ ॥೧೬॥

ಹರಿತವಾದ ಕತ್ತಿಯಂತಿರುವ ಹೃದಯವನ್ನು ಹೊಂದಿದ್ದ ಅವನು ತಾನೇ ಸ್ವತಃ ಎದ್ದು ಅಣ್ಣನಂತೆ ಸತ್ಕಾರವನ್ನು ಮಾಡಿ ಮಧುರವಾದ ಮಾತುಗಳನ್ನಾಡಿ ಭೀಮನ ಬಾಯಿಯಲ್ಲಿ ಪಾಪನಿಶ್ಚಯವುಳ್ಳ ಅವನು ಸ್ವಯಂ ಭಕ್ಷ್ಯಗಳನ್ನು ಹಾಕಿದನು.

ಪ್ರಭಕ್ಷಿತಂ ಚ ಭೀಮೇನ ಹ್ಯಸ್ಯ ದೋಷಮಜಾನತಾ ।
ತತೋ ದುರ್ಯೋಧನಸ್ತತ್ರ ಹೃದಯೇನ ಹಸನ್ನಿವ ॥೧೭॥

ಕೃತಕೃತ್ಯಮಿವಾತ್ಮಾನಂ ಮನ್ಯತೇ ಪುರುಷಾಧಮಃ ।
ತತಸ್ತೇ ಸಹಿತಾಃ ಸರ್ವೇ ಜಲಕ್ರೀಡಾಮಕುರ್ವತ ॥೧೮॥

ದುರ್ಯೋಧನನ ದೋಷವನ್ನು ತಿಳಿಯದಿದ್ದ ಭೀಮನು ಅದನ್ನು ತಿಂದನು. ಆಗ ಪುರುಷಾಧಮನಾದ ದುರ್ಯೋಧನನು ಮನಸ್ಸಿನಲ್ಲಿಯೇ ನಗುತ್ತಾ ತಾನು ಕೃತಕೃತ್ಯನೆಂದು ಭಾವಿಸಿದನು. ಅನಂತರ ಎಲ್ಲರೂ ಸೇರಿ ಜಲಕ್ರೀಡೆ ಆಡಿದರು.

ದಿವಾಸಾಂತೇ ಪರಿಶ್ರಾಂತಾ ವಿಹೃತ್ಯ ಕುರುನಂದನಾಃ ।
ವಿಹಾರಾಯತನೇಷ್ವೇವ ವೀರಾ ವಾಸಮರೋಚಯನ್ ॥೧೯॥

ದಿನದ ಕೊನೆಯ ವೇಳೆಗೆ ಜಲಕ್ರೀಡೆಯಾಡಿ ದಣಿದ ಕುರುನಂದನರು ವಿಹಾರಗೃಹಗಳಲ್ಲಿಯೇ ವಾಸಮಾಡಲು ಬಯಸಿದರು.

ಭೀಮಸ್ತು ಬಲವಾನ್ ಭುಕ್ತ್ವಾ ವ್ಯಾಯಾಮಾಭ್ಯಧಿಕೋ ಜಲೇ ।
ವಾಹಯಿತ್ವಾ ಕುಮಾರಾಂಸ್ತಾನ್ ಜಲಕ್ರೀಡಾಂ ಮಹಾಬಲಃ ॥೨೦॥

ಪ್ರಮಾಣಕೋಟ್ಯಾಂ ವಾಸಾರ್ಥೀ ಪುನಶ್ಚಾರುಹ್ಯ ತತ್ಸ್ಥಲಮ್ ।
ಸ ಹಿ ತತ್ಸ್ಥಲಮಾರುಹ್ಯ ಶ್ರಾಂತಶ್ಚಾಪ್ಸು ವಿಶೇಷತಃ ।
ಶ್ರಮೇಣ ಚ ಪರೀತಾಂಗಃ ಸುಷ್ವಾಪ ಮೃತಕಲ್ಪವತ್ ॥೨೧॥

ಬಲಿಷ್ಠನಾದ ಭೀಮನು ಭಕ್ಷ್ಯಗಳನ್ನು ತಿಂದು ಜಲವಿಹಾರ ಮಾಡುತ್ತಾ ಹೆಚ್ಚು ವ್ಯಾಯಾಮವನ್ನು ಮಾಡಿ ಎಲ್ಲಾ ಕುಮಾರರನ್ನೂ ದಡಕ್ಕೆ ಕರೆದುಕೊಂಡು ಬಂದು ಪ್ರಮಾಣಕೋಟಿಯ ಬಳಿ ವಾಸಮಾಡಲು ಬಯಸಿ ಪುನಃ ಆ ಉನ್ನತ ಸ್ಥಳವನ್ನು ಹತ್ತಿದನು. ಅವನು ಆ ಎತ್ತರದ ಸ್ಥಳವನ್ನು ಏರಿ ನೀರಿನಲ್ಲಿ ವಿಶೇಷವಾಗಿ ದಣಿದ ಕಾರಣದಿಂದ ಶ್ರಮವುಳ್ಳವನಾಗಿ ಶವದಂತೆ ಮಲಗಿ ನಿದ್ರೆಮಾಡಿದನು.

ತತೋ ಬದ್ಧ್ವಾ ದೃಢಂ ಪಾಶೈರ್ಭೀಮಂ ದುರ್ಯೋಧನಃ ಸ್ವಯಮ್।
ಶೂಲಾನ್ಯಪ್ಸು ನಿಖಾಯಾಶು ಸ್ಥಲಾಜ್ಜಲಮಪಾತಯತ್ ॥೨೨॥

ಸಶೇಷತ್ವಾನ್ನ ಸಂಪ್ರಾಪ್ತೋ ಜಲೇ ಶೂಲಾನಿ ಪಾಂಡವಃ ।
ಪಪಾತ ಯತ್ರ ತತ್ರಾಸ್ಯ ಶೂಲಂ ನಾಸೀದ್ ಯದೃಚ್ಛಯಾ ॥೨೩॥

ಆಗ ದುರ್ಯೋಧನನು ಭೀಮನನ್ನು ಉಕ್ಕಿನ ಪಾಶಗಳಿಂದ ಸ್ವಯಂ ಬಿಗಿದು ಹರಿತವಾದ ಗೂಟಗಳನ್ನು ನೆಟ್ಟಿರುವ ನೀರಿನಲ್ಲಿ ಭೂಮಿಯಿಂದ ಉರುಳಿಸಿದನು. ಆ ಗೂಟಗಳ ಮೇಲೆ ನೀರಿನ ಪ್ರಮಾಣವು ಅಧಿಕವಾಗಿದ್ದುದರಿಂದ ಭೀಮನು ಆ ಶೂಲಗಳನ್ನು ತಲುಪಲಿಲ್ಲ. ಅಲ್ಲದೇ, ಭೀಮನು ಎಲ್ಲಿ ಬಿದ್ದನೋ ಆ ಸ್ಥಳದಲ್ಲಿ ಜಲದಲ್ಲಿ ಯಾವ ಶೂಲವೂ ಇರಲಿಲ್ಲ.

ಸ ನಿಸ್ಸಂಜ್ಞೋ ಜಲಸ್ಯಾಂತರವಾಗ್ ವೈ ಪಾಂಡವೋಽವಿಶತ್ ।
ಆಕ್ರಮ್ಯ ನಾಗಭವನೇ ತಥಾ ನಾಗಕುಮಾರಕಾನ್ ॥೨೪॥

ತತಃ ಸಮೇತ್ಯ ಬಹುಭಿಃ ತಥಾ ನಾಗೈರ್ಮಹಾವಿಷೈಃ ।
ದಶ್ಯತೇ ಪಾಂಡವಸ್ತತ್ರ ವಿಷದಿಗ್ಧೋ ಮಹಾವಿಷೈಃ ॥೨೫॥

ಭೀಮನು ಮೈಮೇಲೆ ಎಚ್ಚರವಿಲ್ಲದೆ ತಲೆಕೆಳಗಾಗಿ ನೀರನ್ನು ಪ್ರವೇಶಿಸಿ ನಾಗಭವನವನ್ನು ತಲುಪಿ ಅಲ್ಲಿ ನಾಗಕುಮಾರಕರ ಮೇಲೆ ಬಿದ್ದನು. ಆಗ ಮಹಾವಿಷವುಳ್ಳ ಅನೇಕ ನಾಗಗಳು ಒಟ್ಟಿಗೆ ಭೀಮನನ್ನು ಕಚ್ಚಿ ಅವನ ಶರೀರವು ಮಹಾವಿಷದಿಂದ ಕೂಡಿರುವಂತೆ ಮಾಡಿದವು.

ತತೋಽಸ್ಯ ದಶ್ಯಮಾನಸ್ಯ ತದ್ ವಿಷಂ ಕಾಲಕೂಟಕಮ್ ।
ಹತಂ ಸರ್ಪವಿಷೇಣಾಶು ಸ್ಥಾವರಂ ಜಂಗಮೇನ ತು ॥೨೬॥

ನಾಗಗಳು ಹಾಗೆ ಕಚ್ಚುತ್ತಿರಲು ಹೊಸದಾಗಿ ಬಂದ ನಾಗವಿಷದಿಂದ ದೇಹದಲ್ಲಿ ಮೊದಲೇ ಇದ್ದ ಕಾಲಕೂಟವಿಷವು ನಾಶವನ್ನು ಹೊಂದಿತು.

ತತಃ ಪ್ರಬುದ್ಧಃ ಕೌಂತೇಯಃ ಸ ಸಂಛಿದ್ಯ ಚ ಬಂಧನಮ್ ।
ಪೋಥಯಾಮಾಸ ತಾನ್ ಸರ್ಪಾನ್ ಕಾಂಶ್ಚಿತ್ ಪ್ರಾಣೈರ್ವ್ಯಯೋಜಯತ್ ।
ತೇ ಹನ್ಯಮಾನಾಃ ಪಾರ್ಥೇನ ಸರ್ಪಾ ವಾಸುಕಿಮಭ್ಯಯುಃ ॥೨೭॥

ಆಗ ಎಚ್ಚರಗೊಂಡ ಕೌಂತೇಯನಾದ ಭೀಮನು ತನ್ನ ಬಂಧನಗಳನ್ನು ಕಡಿದು ಹಾಕಿ ಆ ಸರ್ಪಗಳನ್ನು ಗುದ್ದಿ ಕೆಲವು ಸರ್ಪಗಳನ್ನು ಕೊಂದನು. ಭೀಮನ ಪ್ರಹಾರಕ್ಕೆ ಸಿಲುಕಿದ ನಾಗಗಳು ವಾಸುಕಿಯ ಬಳಿಗೆ ಹೋದವು.

ಊಚುಶ್ಚ ಸರ್ಪರಾಜಾನಂ ವಾಸುಕಿಂ ವಾಸವೋಪಮಮ್ ।
ಅಹನ್ನರೋ ವೈ ನಾಗೇಂದ್ರ ಹ್ಯಪ್ಸು ಬದ್ಧ್ವಾ ಪ್ರವೇಶಿತಃ ॥೨೮॥

ಇಂದ್ರನಂತಿದ್ದ ಸರ್ಪರಾಜನಾದ ವಾಸುಕಿಯನ್ನು ಕುರಿತು ಆ ನಾಗಗಳು 'ಎಲೈ ನಾಗೇಂದ್ರನೇ ನೀರಿನಲ್ಲಿ ಕೈಕಾಲುಗಳನ್ನು ಕಟ್ಟಿ ಪ್ರವೇಶಿಸಲ್ಪಟ್ಟ ಒಬ್ಬ ಮನುಷ್ಯನು ನಮ್ಮನ್ನು ಹಿಂಸಿಸುತ್ತಿದ್ದಾನೆ.'

ತಥಾ ಚ ನೋ ಮತಿರ್ವೀರ ವಿಷಪೀತೋ ಭವಿಷ್ಯತಿ ।
ನಿಶ್ಚೇಷ್ಟೋಽಸ್ಮಾನನುಪ್ರಾಪ್ತಃ ಸ ಚ ದಷ್ಟೋಽನ್ವಬುಧ್ಯತ ॥೨೯॥

ವಿನಿವಿಷ್ಟೋಽಂತರಪ್ರಾಪ್ತಃ ತಮಪಾಸ್ಯಾಪ್ಯನೇಕಶಃ ।
ಸಸಂಜ್ಞಶ್ಚ ಸುಸಂವೃತ್ತಃ ಛಿತ್ತ್ವಾ ಬಂಧನಮಾಶು ಸಃ ।
ಪೋಥಯನ್ನೋ ಮಹಾಬಾಹುಸ್ತಂ ವೈ ತ್ವಂ ಜ್ಞಾತುಮರ್ಹಸಿ ॥೩೦॥

ವೀರನೇ, ನಾವು ಕಚ್ಚಿದರೆ ಅವನು ವಿಷಪೂರ್ಣನಾಗುವನು ಎಂದು ನಮ್ಮ ಅಭಿಪ್ರಾಯವಿದ್ದಿತು. ಆದರೆ, ನಿಶ್ಚೇಷ್ಟನಾಗಿ ನಮ್ಮನ್ನು ತಲುಪಿದವನು, ನಾವು ಕಚ್ಚಿದ ಮೇಲೆ ಎಚ್ಚರಗೊಂಡಿದ್ದಾನೆ. ನೀರಿನ ಒಳಗೆ ಬಂದವನು, ಬಂಧನಗಳನ್ನು ಕಡಿದು ಹಾಕಿ ಸಂಜ್ಞೆಯನ್ನು ಮರಳಿ ಪಡೆದು ಅನೇಕ ನಾಗಗಳನ್ನು ದೂರ ತಳ್ಳಿ ನಮಗೆ ಗುದ್ದುತ್ತಿದ್ದಾನೆ. ಆ ಮಹಾಬಾಹುವು ಯಾರೆಂದು ನೀನು ತಿಳಿಯಬೇಕು.

ವೈಶಂಪಾಯನಃ

ತತೋ ವಾಸುಕಿರಭ್ಯೇತ್ಯ ನಾಗೈರನುಗತಸ್ತದಾ ।
ಪಶ್ಯತಿ ಸ್ಮ ಮಹಾನಾಗೋ ಭೀಮಂ ಭೀಮಪರಾಕ್ರಮಮ್ ॥೩೧॥

ಆಗ ಮಹಾನಾಗನಾದ ವಾಸುಕಿಯು ಉಳಿದ ನಾಗಗಳಿಂದ ಹಿಂಬಾಲಿಸಲ್ಪಟ್ಟು ಭೀಮನಿದ್ದ ಸ್ಥಳಕ್ಕೆ ಬಂದು ಭೀಮಪರಾಕ್ರಮನಾದ ಭೀಮನನ್ನು ನೋಡಿದನು.

ಆರ್ಯಕೌತುಕದೃಷ್ಟಃ ಸ ಪ್ರಯಾತಸ್ತಾರ್ಯಕೇಣ ತು ।
ತತೋ ದೃಷ್ಟಶ್ಚ ತೇನಾಪಿ ಪರಿಷ್ವಕ್ತಶ್ಚ ಪಾಂಡವಃ ।
ಸುಪ್ರೀತಶ್ಚಾಭವತ್ ತಸ್ಯ ವಾಸುಕಿಃ ಸುಮಹಾಯಶಾಃ ॥೩೨॥

ಆರ್ಯಕನಾಗನ ಜೊತೆಯಲ್ಲಿ ಬಂದ ವಾಸುಕಿಯು ಆರ್ಯಕನು ಕುತೂಹಲದಿಂದ ನೋಡುತ್ತಿರುವಂತೆಯೇ ಭೀಮನಿಂದಲೂ ನೋಡಲ್ಪಟ್ಟವನಾಗಿ ಭೀಮನನ್ನು ಆಲಿಂಗಿಸಿದನು. ಮಹಾಕೀರ್ತಿವಂತನಾದ ವಾಸುಕಿಯು ಅವನನ್ನು ನೋಡಿ ಸುಪ್ರೀತನಾದನು.

ಅಬ್ರವೀತ್ ತಂ ಚ ನಾಗೇಂದ್ರಃ ಕಿಮಸ್ಯ ಕ್ರಿಯತಾಮಿತಿ ।
ಪ್ರಿಯಂ ಧನೌಘಂ ರತ್ನಾನಿ ಯಾವದಸ್ಯ ಪ್ರದೀಯತಾಮ್ ॥೩೩॥

ಆಗ ನಾಗೇಂದ್ರನಾದ ವಾಸುಕಿಯು ಆರ್ಯಕನನ್ನು ಕುರಿತು 'ಇವನಿಗೆ ಏನು ಮಾಡೋಣ? ಅವನು ಅಪೇಕ್ಷಿಸಿದಷ್ಟು ಅವನಿಗೆ ಪ್ರಿಯವಾದ ಧನವನ್ನೂ ಮತ್ತು ರತ್ನಸಮೂಹವನ್ನೂ ಕೊಡಿ' ಎಂದು ಹೇಳಿದನು.

ಏವಮುಕ್ತಸ್ತದಾ ನಾಗೋ ವಾಸುಕಿಂ ಪ್ರತ್ಯಭಾಷತ ।
ಯದಿ ನಾಗೇಂದ್ರ ಪ್ರೀತೋಽಸಿ ಕಿಮಸ್ಯ ಧನಸಂಚಯೈಃ ।
ರಸಂ ಪಿಬೇತ್ ಕುಮಾರೋಽಯಂ ತ್ವಯಿ ಪ್ರೀತೇ ಮಹಾಬಲಃ ॥೩೪॥

ವಾಸುಕಿಯು ಹೀಗೆ ಹೇಳಿದಾಗ ಆರ್ಯಕನು ಅವನನ್ನು ಕುರಿತು ಹೀಗೆ ಹೇಳಿದನು. 'ನಾಗೇಂದ್ರನಾದ ವಾಸುಕಿಯೇ ನೀನು ಪ್ರಸನ್ನನಾದರೆ, ಇವನಿಗೆ ಧನರಾಶಿಯಿಂದ ಏನು ಆಗಬೇಕಾಗಿದೆ. ನೀನು ಪ್ರಸನ್ನನಾದರೆ, ಈ ಮಹಾಬಲನಾದ ಕುಮಾರನು ರಸವನ್ನು ಪಾನ ಮಾಡಲಿ'.

ಬಲಂ ನಾಗಸಹಸ್ರಸ್ಯ ಕುಂಡೇ ಚಾಸ್ಮಿನ್ ಪ್ರತಿಷ್ಠಿತಮ್ ।
ಯಾವತ್ ಪಿಬತಿ ಬಾಲೋಽಯಂ ತಾವದಸ್ಮೈ ಪ್ರದೀಯತಾಮ್ ॥

ಇಲ್ಲಿ ಒಂದೊಂದು ಕುಂಡದಲ್ಲಿರುವ ರಸವೂ ಒಂದು ಸಾವಿರ ಆನೆಗಳ ಬಲವನ್ನು ಕೊಡುವಂತಹದು . ಈ ಬಾಲಕನು ಎಷ್ಟು ಕುಡಿಯುತ್ತಾನೋ ಅಷ್ಟು ರಸವನ್ನು ಅವನಿಗೆ ಕೊಡಿ.

ವೈಶಂಪಾಯನಃ

ಏವಮಸ್ತ್ವಿತಿ ತಂ ನಾಗಂ ವಾಸುಕಿಃ ಪ್ರತ್ಯಭಾಷತ ।
ತತೋ ಭೀಮಸ್ತದಾ ನಾಗೈಃ ಕೃತಸ್ವಸ್ತ್ಯಯನಃ ಶುಚಿಃ ॥೩೬॥

ಪ್ರಾಙ್ಮುಖಶ್ಚೋಪವಿಷ್ಟಶ್ಚ ರಸಂ ಪಿಬತ ಪಾಂಡವಃ ।
ಏಕೋಚ್ಛ್ವಾಸಾತ್ ತದಾ ಕುಂಡಂ ಪಿಬತಿ ಸ್ಮ ಮಹಾಬಲಃ ॥೩೭॥

ಹೀಗೆ ಹೇಳಿದ ಆರ್ಯಕನನ್ನು ಕುರಿತು ವಾಸುಕಿಯು 'ಹಾಗೆಯೇ ಆಗಲಿ' ಎಂದು ಹೇಳಿದನು. ಆಗ ಭೀಮನು ನಾಗಗಳಿಂದ ಸ್ವಸ್ತಿವಾಚನವನ್ನು ಮಾಡಲ್ಪಟ್ಟವನಾಗಿ ಶುಚಿಯಾಗಿ ಪೂರ್ವಾಭಿಮುಖವಾಗಿ ಕುಳಿತು ರಸವನ್ನು ಪಾನಮಾಡಿದನು. ಮಹಾಬಲನಾದ ಪಾಂಡವನು ಒಂದೇ ಉಸಿರಿಗೆ ಒಂದು ಕುಂಡದಲ್ಲಿದ್ದ ರಸವನ್ನೆಲ್ಲಾ ಕುಡಿಯುತ್ತಿದ್ದನು.

ಏವಮಷ್ಟೌ ತು ಕುಂಡಾನಿ ಸೋಽಪಿಬತ್ ಪಾಂಡುನಂದನಃ ।
ದಿವ್ಯೇ ತತಸ್ತು ಶಯನೇ ನಾಗದತ್ತೇ ಮಹಾಭುಜಃ ।
ಶೇತೇ ಸ್ಮ ಚ ತದಾ ಭೀಮೋ ದಿವಸಾನ್ಯಷ್ಟ ಚೈವ ತು ॥೩೮॥

ಪಾಂಡುನಂದನನಾದ ಭೀಮನು ಹೀಗೆ ಎಂಟು ಕುಂಡಗಳಲ್ಲಿದ್ದ ರಸವನ್ನು ಕುಡಿದನು. ಅನಂತರ ಮಹಾಭುಜನಾದ ಅವನು ನಾಗಗಳೂ ಕೊಟ್ಟ ದಿವ್ಯವಾದ ಹಾಸಿಗೆಯಲ್ಲಿ ಎಂಟು ದಿನಗಳ ಕಾಲ ಮಲಗಿ ನಿದ್ರಿಸಿದನು.

ದುರ್ಯೋಧನೋಽಪಿ ಪಾಪಾತ್ಮಾ ಭೀಮಮಾಶೀವಿಷಹ್ರದೇ ।
ಪ್ರಕ್ಷಿಪ್ಯ ಕೃತಕೃತ್ಯಂ ಸ್ವಮಾತ್ಮಾನಂ ಮನ್ಯತೇ ತದಾ ॥೩೯॥

ಇತ್ತ ಕಡೆ ಪಾಪಾತ್ಮನಾದ ದುರ್ಯೋಧನನು ಭೀಮನನ್ನು ಸರ್ಪಹ್ರದದಲ್ಲಿ ಕೆಡವಿ ತನ್ನನ್ನು ಕೃತಕೃತ್ಯನೆಂದು ಭಾವಿಸಿದನು.

ಪ್ರಭಾತಾಯಾಂ ರಜನ್ಯಾಂ ಚ ಪ್ರವಿವೇಶ ಪುರಂ ತತಃ ।
ಬ್ರುವಾಣೋ ಭೀಮಸೇನಸ್ತು ಯಾತೋ ಹ್ಯಗ್ರತ ಏವ ನಃ ॥೪೦॥

ರಾತ್ರಿಯು ಕಳೆದು ಬೆಳಗಾಗುತ್ತಿರಲು ದುರ್ಯೋಧನನು ಪಟ್ಟಣವನ್ನು ಪ್ರವೇಶಿಸಿ 'ಭೀಮಸೇನನು ನಮಗಿಂತ ಮೊದಲೇ ಹೊರಟು ಬಂದಿದ್ದಾನೆ' ಎಂದು ಹೇಳುತ್ತಿದ್ದನು.

ಯುಧಿಷ್ಠಿರಸ್ತು ಧರ್ಮಾತ್ಮಾ ಚಿಂತಯನ್ ಪಾಪಮಾತ್ಮನಿ ।
ಸ್ವೇನಾऽನುಮಾನೇನ ಪರಂ ತದಾऽಸ್ಯಾನುಪಪಶ್ಯತಿ ॥೪೧॥

ಧರ್ಮಾತ್ಮನಾದ ಯುಧಿಷ್ಠಿರನು ತಾನು ಯಾರಿಗೂ ಅಪರಾಧವನ್ನು ಮಾಡದಿರುವುದರಿಂದ ಇನ್ನೊಬ್ಬರ ಬಗ್ಗೆಯೂ ಹಾಗೆಯೇ ಚಿಂತಿಸಿ ಭೀಮನೂ ಯಾರಿಗೂ ಅಪರಾಧವನ್ನು ಮಾಡಿಲ್ಲದ ಕಾರಣ ಅವನಿಗೆ ಯಾರೂ ಅಪರಾಧವನ್ನು ಮಾಡುವುದಿಲ್ಲವೆಂದು ತಿಳಿದು ಸುಮ್ಮನಿದ್ದನು.

ಉಪಗಮ್ಯ ತತಃ ಪಾರ್ಥಾ ಮಾತರಂ ಮಾತೃವತ್ಸಲಾಃ ।
ಅಭಿವಾದ್ಯಾಬ್ರುವಂಸ್ತೇ ವೈ ಅಂಬ ಭೀಮ ಇಹಾಗತಃ ॥೪೨॥

ಪಾಂಡುವಿನ ಮಾತೃವತ್ಸಲರಾದ ಉಳಿದ ಮಕ್ಕಳು ತಾಯಿಯನ್ನು ಸಮೀಪಿಸಿ ನಮಸ್ಕರಿಸಿ 'ಅಮ್ಮಾ ಭೀಮನು ಇಲ್ಲಿ ಬಂದನೇ?' ಎಂದು ಕೇಳಿದರು.

ನೇತಿ ಸ್ಮಾಹ ತದಾ ಕುಂತೀ ತತಸ್ತೇ ವ್ಯಥಿತಾ ಭವನ್ ।
ದೂರಂ ಗತ್ವಾ ಪುರೋದ್ಯಾನಂ ವಿಚಿನ್ವಂತಿ ಸ್ಮ ಪಾಂಡವಾಃ ।
ಭೀಮಭೀಮೇತಿ ತೇ ವಾಚಂ ನಿತ್ಯಮುಚ್ಚೈರುದೀರಯನ್ ॥೪೩॥

ಆಗ ಕುಂತಿಯು 'ಇಲ್ಲ' ಎಂದು ಹೇಳಿದಳು. ಆಗ ಉಳಿದ ಪಾಂಡವರು ವ್ಯಥಿತರಾಗಿ ದೂರದಲ್ಲಿದ್ದ ಪುರೋದ್ಯಾನಕ್ಕೆ ಹೋಗಿ ಭೀಮನನ್ನು ಹುಡುಕಲು ಪ್ರಾರಂಭಿಸಿ 'ಭೀಮ, ಭೀಮ' ಎಂದು ಉಚ್ಚಸ್ವರದಲ್ಲಿ ಕರೆಯುತ್ತಿದ್ದರು.

ವಿಚಿನ್ವಂತೋऽಥ ತೇ ಸರ್ವೇ ನ ಸ್ಮ ಪಶ್ಯಂತಿ ಭ್ರಾತರಮ್ ।
ಆಗತಾಃ ಸ್ವಗೃಹಂ ಭೂಯ ಇದಮೂಚುಃ ಪೃಥಾ ತದಾ ॥೪೪॥

ಎಷ್ಟು ಹುಡುಕಿದರೂ ತಮ್ಮ ಸಹೋದರನಾದ ಭೀಮನು ಕಾಣದಿರಲು ಪುನಃ ತಮ್ಮ ಮನೆಗೆ ಹಿಂದಿರುಗಿ ತಾಯಿಯಾದ ಕುಂತಿಯನ್ನು ಕುರಿತು ಹೀಗೆ ಹೇಳಿದರು.

ನ ದೃಶ್ಯತೇ ಮಹಾಬಾಹುರಂಬ ಭೀಮೋ ವನೇ ಗತಃ ।
ವಿಚಿತಾನಿ ಚ ಸರ್ವಾಣಿ ಉದ್ಯಾನಾನಿ ನದೀಸ್ತಥಾ ॥೪೫॥

ಅಮ್ಮಾ, ವನಕ್ಕೆ ಹೋದ ಮಹಾಬಾಹುವಾದ ಭೀಮನು ಎಲ್ಲೂ ಕಾಣುವುದಿಲ್ಲ, ನಾವು ಉದ್ಯಾನವನವನ್ನೂ ಮತ್ತು ನದಿಯನ್ನೂ, ಎಲ್ಲಾ ಕಡೆಗಳಲ್ಲೂ ಹುಡುಕಿದೆವು.

ತತೋ ವಿದುರಮಾನಾಯ್ಯ ಕುಂತೀ ಸಾ ಸ್ವಂ ನಿವೇಶನಮ್ ।
ಉವಾಚ ಕ್ಷತ್ತಾ ಬಲವಾನ್ ಭೀಮಸೇನೋ ನ ದೃಶ್ಯತೇ ॥೪೬॥

ಆಗ ಕುಂತಿಯು ವಿದುರನನ್ನು ತನ್ನ ಮನೆಗೆ ಕರೆಸಿ ಅವನನ್ನು ಕುರಿತು ಹೇಳಿದಳು, ಬಲಿಷ್ಠನಾದ ಭೀಮನು ಕಾಣುತ್ತಿಲ್ಲ.

ಉದ್ಯಾನಾನ್ನಿರ್ಗತಾಃ ಸರ್ವೇ ಭ್ರಾತರೋ ಭ್ರಾತೃಭಿಃ ಸಹ ।
ತತ್ರ ಹ್ಯೇಕೋ ಮಹಾಬಾಹುರ್ಭೀಮೋ ನಾಭ್ಯೇತಿ ಮಾಮಿಹ ॥೪೭॥

ಉದ್ಯಾನಕ್ಕೆ ಹೋಗಿದ್ದ ಅಣ್ಣತಮ್ಮಂದಿರು ಸಹೋದರರ ಜೊತೆಯಲ್ಲಿ ಹಿಂದಿರುಗಿದ್ದಾರೆ. ಮಹಾಬಾಹುವಾದ ಭೀಮನು ಒಬ್ಬಮಾತ್ರ ನನ್ನ ಬಳಿಗೆ ಬಂದಿಲ್ಲ.

ನಚ ಮೇ ಪ್ರೀಯತೇ ಚಕ್ಷುಃ ಸದಾ ದುರ್ಯೋಧನಸ್ಯ ಹ ।
ತತಃ ಪ್ರಸುಪ್ತಂ ಮನ್ಯೇಽಹಂ ಪಾಪೇನ ನಿಹತಂ ಸುತಮ್ ॥೪೮॥

ನನ್ನ ಮನಸ್ಸಿಗೂ ಕಣ್ಣಿಗೂ ದುರ್ಯೋಧನನನ್ನು ಚಿಂತಿಸಿ ಸಮಾಧಾನವಿಲ್ಲ. ಮಲಗಿದ್ದ ನನ್ನ ಮಗನನ್ನು ಪಾಪಿಷ್ಠನಾದ ದುರ್ಯೋಧನನು ಕೊಂದಿದ್ದಾನೆ ಎಂದು ನನ್ನ ಭಾವನೆ.

ವಿದುರಃ

ಮಾ ಮೈವಂ ವದ ಕಲ್ಯಾಣಿ ಶೇಷಸಂರಕ್ಷಣಂ ಕುರು ।
ಪ್ರತ್ಯಾದಿಷ್ಟೋ ಹಿ ಪಾಪಾತ್ಮಾ ಶೇಷೇಷು ಪ್ರಹರೇತ ಹ ॥೪೯॥

ಕಲ್ಯಾಣಿಯೇ, ಹೀಗೆ ಮಾತನಾಡಬೇಡ. ಉಳಿದವರನ್ನು ರಕ್ಷಣೆ ಮಾಡು. ನಾವು ಮಾತನಾಡಿದ ಈ ವಿಷಯವು ದುರ್ಯೋಧನನಿಗೆ ತಿಳಿದರೆ, ಆ ಪಾಪಾತ್ಮನು ಉಳಿದವರ ಮೇಲೂ ಪ್ರಹಾರ ಮಾಡಬಹುದು.

ದೀರ್ಘಾಯುಷಸ್ತವ ಸುತಾನ್ ತಥಾ ಹ್ಯೃಷಿರಭಾಷತ ।
ಆಗಮಿಷ್ಯತಿ ತೇ ಪುತ್ರಃ ಪ್ರೀತಿಂ ತೇ ಜನಯಿಷ್ಯತಿ ॥೫೦॥

ನಿನ್ನ ಮಕ್ಕಳು ದೀರ್ಘಾಯುಷ್ಯವುಳ್ಳವರೆಂದು ವೇದವ್ಯಾಸರು ಹೇಳಿದ್ದಾರೆ. ನಿನ್ನ ಪುತ್ರನು ಬಂದು ನಿನಗೆ ಸಂತೋಷವನ್ನುಂಟು ಮಾಡುವನು.

ವೈಶಂಪಾಯನಃ

ಏವಮುಕ್ತಾ ತದಾ ಕುಂತೀ ನಿಃಶ್ವಸಂತೀ ಮುಹುರ್ಮುಹುಃ ।
ಶಯ್ಯಾಪರಾ ಮಹಾಭಾಗಾ ಪುತ್ರೈಃ ಪರಿವೃತಾ ತದಾ ॥೫೧॥

ಹೀಗೆ ಹೇಳಲ್ಪಟ್ಟ ಮಹಾನುಭಾವಳಾದ ಕುಂತಿಯು ಮತ್ತೆ ಮತ್ತೆ ನಿಟ್ಟುಸಿರನ್ನು ಬಿಡುತ್ತಾ ಹಾಸಿಗೆಯನ್ನು ಹಿಡಿದು ಉಳಿದ ಮಕ್ಕಳಿಂದ ಸುತ್ತುವರೆಯಲ್ಪಟ್ಟಳು.

ತತೋಽಷ್ಟಮೇಽಥ ದಿವಸೇ ಪ್ರತ್ಯಬುದ್ಧ್ಯತ ಪಾಂಡವಃ ।
ತಸ್ಮಿಂಸ್ತದಾ ವಿಷೇ ಜೀರ್ಣೇ ಹ್ಯಪ್ರಮೇಯಬಲೋ ಬಲೀ ॥೫೨॥

ಆ ಸರ್ಪವಿಷವೆಲ್ಲವೂ ಜೀರ್ಣವಾಗುತ್ತಿರಲು ಅಪ್ರಮೇಯ ಬಲವುಳ್ಳ ಬಲಿಷ್ಠನಾದ ಭೀಮನು ಎಂಟನೆಯ ದಿವಸ ಎಚ್ಚರಗೊಂಡನು.

ಔಷಧೀಭಿರ್ವನಘ್ನೀಭಿಃ ಸುರಭೀಭಿರ್ವಿಭೂಷಿತಃ ।
ಭುಕ್ತ್ವಾ ತು ಪರಮಾನ್ನಂ ಚ ನಾಗೈರ್ದತ್ತಂ ಮಹಾಭುಜಃ ॥೫೩॥

ಮಹಾಭುಜನಾದ ಅವನು ವನದಲ್ಲಿ ದೊರೆಯುವ ಸುಗಂಧವುಳ್ಳ ಔಷಧಿಗಳಿಂದ ಅಲಂಕೃತನಾಗಿ ನಾಗಗಳು ಕೊಟ್ಟ ಪರಮಾನ್ನವನ್ನು ಭುಂಜಿಸಿ ಮೇಲೆ ಬಂದನು.

ಉತ್ಕ್ಷಿಪ್ಯ ಚ ತದಾ ನಾಗೈರ್ಜಲಾಜ್ಜಲರುಹೇಕ್ಷಣಃ ।
ತಸ್ಮಿನ್ನೇವ ವನೋದ್ದೇಶೇ ಸ್ಥಾಪಿತಃ ಪಾಂಡುನಂದನಃ ॥೫೪॥

ಆಗ ನಾಗಗಳು ಕಮಲನಯನನಾದ ಅವನನ್ನು ನೀರಿನ ಆಳದಿಂದ ಮೇಲಕ್ಕೆತ್ತಿ ಮೊದಲು ಇದ್ದ ಅದೇ ವನಪ್ರದೇಶದಲ್ಲಿಯೇ ಆ ಪಾಂಡುನಂದನನನ್ನು ಸ್ಥಾಪಿಸಿದವು.

ಅಂತರ್ದಧುಶ್ಚ ತೇ ನಾಗಾಃ ಪಾಂಡವಸ್ಯೈವ ಪಶ್ಯತಃ ।
ತತ ಉತ್ಥಾಯ ಭೀಮಸ್ತು ಆಜಗಾಮ ಸ್ವಯಂ ಗೃಹೇ ॥೫೫॥

ಭೀಮನು ನೋಡುತ್ತಿರುವಂತೆಯೇ ಆ ನಾಗಗಳು ಅಂತರ್ಧಾನವನ್ನು ಹೊಂದಿದವು. ಅನಂತರ ಭೀಮನು ಎದ್ದು ಅಲ್ಲಿಂದ ತಾನೇ ಮನೆಗೆ ಬಂದನು.

ಅಭಿವಾದ್ಯ ಪರಿಷ್ವಕ್ತಃ ಸಂಪ್ರಾಘ್ರ್ಯಾತಶ್ಚ ಮೂರ್ಧನಿ ।
ಪ್ರಣಮ್ಯ ಧರ್ಮಪುತ್ರಾಯ ಸಸ್ವಜೇ ಫಲ್ಗುನಂ ತದಾ ॥೫೬॥

ಕುಂತಿಗೆ ನಮಸ್ಕಾರವನ್ನು ಮಾಡಿ ಅವಳಿಂದ ಶಿರಸ್ಸಿನಲ್ಲಿ ಆಘ್ರಾಣಿಸಿ ಆಲಿಂಗಿಸಲ್ಪಟ್ಟು ಧರ್ಮರಾಜನಿಗೂ ನಮಸ್ಕಾರವನ್ನು ಮಾಡಿ ಅರ್ಜುನನನ್ನು ಆಲಿಂಗಿಸಿದನು.

ಅಭಿವಾದಿತಶ್ಚ ತೈರ್ವೀರೈಃ ಸಸ್ವಜೇ ಚ ಯಮಾವಪಿ ।
ತಚ್ಚ ಸರ್ವಂ ಯಥಾವೃತ್ತಮಾಖ್ಯಾತಿ ಸ್ಮ ವೃಕೋದರ. ॥೫೭॥

ತನಗೆ ನಮಸ್ಕಾರ ಮಾಡಿದ ವೀರರಾದ ನಕುಲಸಹದೇವರನ್ನು ಆಲಿಂಗಿಸಿ ನಡೆದ ವೃತ್ತಾಂತವನ್ನೆಲ್ಲಾ ವೃಕೋದರನು ಯಥಾವತ್ತಾಗಿ ತಿಳಿಸಿದನು.

ಯದಾ ತ್ವವಗಮಂಸ್ತೇ ವೈ ಪಾಂಡವಾಸ್ತಸ್ಯ ಕರ್ಮ ತತ್ ।
ತತ್ಕೈನಂ ಬಹುಲಂ ಚಕ್ರುಃ ಪ್ರಯತಂತಃ ಸ್ವರಕ್ಷಣೇ ॥೫೮॥

ಉಳಿದ ಪಾಂಡವರು ಅವನ ಆ ಕರ್ಮವನ್ನು ತಿಳಿದ ಮೇಲೆ ತಮ್ಮ ರಕ್ಷಣೆಗೆ ವಿಶೇಷ ಪ್ರಯತ್ನವನ್ನು ಪಡುತ್ತಾ ಭೀಮನನ್ನು ಬಹುಪರಾಕ್ರಮಶಾಲಿಯೆಂದು ತಿಳಿದರು.

ಧರ್ಮಾತ್ಮಾ ವಿದುರಸ್ತೇಷಾಂ ಪ್ರದದೌ ಮತಿಮಾನ್ ಮತಿಮ್ ।
ದುರ್ಯೋಧನೋಽಪಿ ತಂ ದೃಷ್ಟ್ವಾ ಪಾಂಡವಂ ಪುನರಾಗತಮ್ ।
ನಿಶ್ವಸಂಶ್ಚಿಂತಯಂಶ್ಚೈವಮಹನ್ಯಹನಿ ತಪ್ಯತೇ ॥೫೯॥

ಧರ್ಮಾತ್ಮನಾದ ವಿದುರನು ಅವರಿಗೆ ಯೋಗ್ಯವಾದ ಬುದ್ಧಿಯನ್ನು ಉಪದೇಶ ಮಾಡಿದನು. ದುರ್ಯೋಧನನಾದರೋ ಭೀಮನು ಪುನಃ ಹಿಂದಿರುಗಿದುದನ್ನು ನೋಡಿ ನಿಟ್ಟುಸಿರು ಬಿಡುತ್ತಾ ಹಗಲೂ ರಾತ್ರಿ ಚಿಂತಿಸಿ ತಾಪವನ್ನು ಹೊಂದಿದನು.

ಏವಂ ದುರ್ಯೋಧನಃ ಪಾಪಃ ಶಕುನಿಶ್ಚಾಪಿ ಸೌಬಲಃ ।
ಅನೇಕೈರಪ್ಯುಪಾಯೈಸ್ತಾನ್ ಜಿಘಾಂಸಂತಿ ಸ್ಮ ಪಾಂಡವಾನ್ ॥೬೦॥

ಹೀಗೆ ಪಾಪಿಯಾದ ದುರ್ಯೋಧನನು ಮತ್ತು ಶಕುನಿಯು ಅನೇಕ ಉಪಾಯಗಳಿಂದ ಪಾಂಡವರನ್ನು ಕೊಲ್ಲಲು ಪ್ರಯತ್ನಿಸಿದರು.

ಪಾಂಡವಾಶ್ಚಾಪಿ ತತ್ ಸರ್ವಂ ಪ್ರತ್ಯಜಾನನ್ನರಿಂದಮ ।
ಉದ್ಭಾವನಮಕುರ್ವಂತೋ ವಿದುರಸ್ಯ ಮತೇ ಸ್ಥಿತಾಃ ।
ಅಧಿಜಗ್ಮುಶ್ಚ ಕುರವೋ ಧನುರ್ವೇದಂ ಕೃಪಾತ್ ತು ತೇ ॥೬೧॥

ಅರಿಂದಮನೇ, ಪಾಂಡವರಿಗೆ ಎಲ್ಲವೂ ತಿಳಿದಿದ್ದರೂ ಅದರ ಉದ್ಭವನೆಯನ್ನು ಮಾಡದೆ ವಿದುರನ ಅಭಿಪ್ರಾಯದಂತೆ ನಡೆದುಕೊಂಡು ಕೃಪಾಚಾರ್ಯರಿಂದ ಧನುರ್ವೇದವನ್ನು ಸಂಪಾದಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಷಡ್‌ವಿಂಶತ್ಯಧಿಕಶತತಮೋಽಧ್ಯಾಯಃ ॥
॥ ಸಂಭವಪರ್ವಣಿ ಚತುಃಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೧

ಯದೈವ ಗಂಗಾ ಸುಷುವೇಽಷ್ಟಮಂ ಸುತಂ
ತದೈವ ಯಾತೋ ಮೃಗಯಾಂ ಸ ಶಂತನುಃ ।
ಶರದ್ವತೋ ಜಾತಮಪಶ್ಯದುತ್ತಮಂ
ವನೇ ವಿಸೃಷ್ಟಂ ಮಿಥುನಂ ತ್ವಯೋನಿಜಮ್ ॥೫೬॥

ಗಂಗೆ ಎಂಟನೆ ಮಗುವನ್ನು ಪ್ರಸವಿಸಿದಾಗಲೆ, ಶಂತನು ಬೇಟೆಗೆ ಹೋಗಿದ್ದಾಗ ಶರದ್ವಾನ್ ಋಷಿಗಳಿಂದ ಹುಟ್ಟಿದ ಅಯೋನಿಜರಾದ ಉತ್ತಮ ಹೆಣ್ಣುಗಂಡು ಅವಳಿ ಮಕ್ಕಳು ಕಾಡಿನಲ್ಲಿ ಪರಿತ್ಯಕ್ತರಾಗಿದ್ದುದನ್ನು ಕಂಡ.

ಶರದ್ವಾಂಸ್ತು ತಪಃ ಕುರ್ವನ್ ದದರ್ಶ ಸಹಸೋರ್ವಶೀಮ್ ।
ಚಸ್ಕಂದ ರೇತಸ್ತಸ್ಯಾಥ ಶರಸ್ತಂಬೇ ತತೋಽಭವತ್ ॥೫೭॥

ವಿಷ್ಕಂಭೋನಾಮ ರುದ್ರಾಣಾಂ ಭೂಭಾರಹರಣೇಽಂಗತಾಮ್ ।
ಹರೇಃ ಪ್ರಾಪ್ತುಂ ತಥಾ ತಾರಾ ಭಾರ್ಯಾ ಯಾ ಹಿ ಬೃಹಸ್ಪತೇಃ ॥೫೮॥

ಶರದ್ವಾನ್ ತಪಸ್ಸು ಮಾಡುತ್ತಿದ್ದಾಗ ಏಕಸ್ಮಾತ್ ಊರ್ವಶಿಯನ್ನು ಕಂಡ. ಆಗ ಅವನ ರೇತಸ್ಸು ಲಾಳದ ಕಡ್ಡಿಯ ಪೊದರಿನಲ್ಲಿ ಬಿದ್ದಿತು. ಅದರಿಂದ ರುದ್ರರಲ್ಲಿ ವಿಷ್ಕಂಭನೆಂಬುವನು ಹರಿಗೆ ಭೂಭಾರಹರಣದಲ್ಲಿ ಸಹಾಯಕನಾಗಬೇಕೆಂದು ಜನಿಸಿದ. ಹಾಗೇ ಬೃಹಸ್ಪತಿಯ ಪತ್ನಿ ತಾರೆಯೂ ಜನಿಸಿದಳು.

ಕುಂತಿಗೆ ನಮಸ್ಕಾರವನ್ನು ಮಾಡಿ ಅವಳಿಂದ ಶಿರಸ್ಸಿನಲ್ಲಿ ಆಘ್ರಾಣಿಸಿ ಆಲಿಂಗಿಸಲ್ಪಟ್ಟು ಧರ್ಮರಾಜನಿಗೂ ನಮಸ್ಕಾರವನ್ನು ಮಾಡಿ ಅರ್ಜುನನನ್ನು ಆಲಿಂಗಿಸಿದನು.

ಅಭಿವಾದಿತಶ್ಚ ತೈರ್ವೀರೈಃ ಸಸ್ವಜೇ ಚ ಯಮಾವಪಿ ।
ತಚ್ಚ ಸರ್ವಂ ಯಥಾವೃತ್ತಮಾಖ್ಯಾತಿ ಸ್ಮ ವೃಕೋದರ. ॥೫೭॥

ತನಗೆ ನಮಸ್ಕಾರ ಮಾಡಿದ ವೀರರಾದ ನಕುಲಸಹದೇವರನ್ನು ಆಲಿಂಗಿಸಿ ನಡೆದ ವೃತ್ತಾಂತವನ್ನೆಲ್ಲಾ ವೃಕೋದರನು ಯಥಾವತ್ತಾಗಿ ತಿಳಿಸಿದನು.

ಯದಾ ತ್ವವಗಮಂಸ್ತೇ ವೈ ಪಾಂಡವಾಸ್ತಸ್ಯ ಕರ್ಮ ತತ್ ।
ತತ್ಸೈನಂ ಬಹುಲಂ ಚಕ್ರುಃ ಪ್ರಯತಂತಃ ಸ್ವರಕ್ಷಣೇ ॥೫೮॥

ಉಳಿದ ಪಾಂಡವರು ಅವನ ಆ ಕರ್ಮವನ್ನು ತಿಳಿದ ಮೇಲೆ ತಮ್ಮ ರಕ್ಷಣೆಗೆ ವಿಶೇಷ ಪ್ರಯತ್ನವನ್ನು ಪಡುತ್ತಾ ಭೀಮನನ್ನು ಬಹುಪರಾಕ್ರಮಶಾಲಿಯೆಂದು ತಿಳಿದರು.

ಧರ್ಮಾತ್ಮಾ ವಿದುರಸ್ತೇಷಾಂ ಪ್ರದದೌ ಮತಿಮಾನ್ ಮತಿಮ್ ।
ದುರ್ಯೋಧನೋಽಪಿ ತಂ ದೃಷ್ಟ್ವಾ ಪಾಂಡವಂ ಪುನರಾಗತಮ್ ।
ನಿಶ್ವಸಂಶ್ಚಿಂತಯಂಶ್ಚೈವಮಹನ್ಯಹನಿ ತಪ್ಯತೇ ॥೫೯॥

ಧರ್ಮಾತ್ಮನಾದ ವಿದುರನು ಅವರಿಗೆ ಯೋಗ್ಯವಾದ ಬುದ್ಧಿಯನ್ನು ಉಪದೇಶ ಮಾಡಿದನು. ದುರ್ಯೋಧನನಾದರೋ ಭೀಮನು ಪುನಃ ಹಿಂದಿರುಗಿದುದನ್ನು ನೋಡಿ ನಿಟ್ಟುಸಿರು ಬಿಡುತ್ತಾ ಹಗಲೂ ರಾತ್ರಿ ಚಿಂತಿಸಿ ತಾಪವನ್ನು ಹೊಂದಿದನು.

ಏವಂ ದುರ್ಯೋಧನಃ ಪಾಪಃ ಶಕುನಿಶ್ಚಾಪಿ ಸೌಬಲಃ ।
ಅನೇಕೈರಪ್ಯುಪಾಯೈಸ್ತಾನ್ ಜಿಘಾಂಸಂತಿ ಸ್ಮ ಪಾಂಡವಾನ್ ॥೬೦॥

ಹೀಗೆ ಪಾಪಿಯಾದ ದುರ್ಯೋಧನನು ಮತ್ತು ಶಕುನಿಯು ಅನೇಕ ಉಪಾಯಗಳಿಂದ ಪಾಂಡವರನ್ನು ಕೊಲ್ಲಲು ಪ್ರಯತ್ನಿಸಿದರು.

ಪಾಂಡವಾಶ್ಚಾಪಿ ತತ್ ಸರ್ವಂ ಪ್ರತ್ಯಜಾನನ್ನರಿಂದಮ ।
ಉದ್ಭಾವನಮಕುರ್ವಂತೋ ವಿದುರಸ್ಯ ಮತೇ ಸ್ಥಿತಾಃ ।
ಅಧಿಜಗ್ಮುಶ್ಚ ಕುರವೋ ಧನುರ್ವೇದಂ ಕೃಪಾತ್ ತು ತೇ ॥೬೧॥

ಅರಿಂದಮನೇ, ಪಾಂಡವರಿಗೆ ಎಲ್ಲವೂ ತಿಳಿದಿದ್ದರೂ ಅದರ ಉದ್ಭಾವನೆಯನ್ನು ಮಾಡದೆ ವಿದುರನ ಅಭಿಪ್ರಾಯದಂತೆ ನಡೆದುಕೊಂಡು ಕೃಪಾಚಾರ್ಯರಿಂದ ಧನುರ್ವೇದವನ್ನು ಸಂಪಾದಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಷಡ್‌ವಿಂಶತ್ಯಧಿಕಶತತಮೋऽಧ್ಯಾಯಃ ॥
॥ ಸಂಭವಪರ್ವಣಿ ಚತುಃಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೧

ಯದೈವ ಗಂಗಾ ಸುಷುವೇऽಷ್ಟಮಂ ಸುತಂ
ತದೈವ ಯಾತೋ ಮೃಗಯಾಂ ಸ ಶಂತನುಃ ।
ಶರದ್ವತೋ ಜಾತಮಪಶ್ಯದುತ್ತಮಂ
ವನೇ ವಿಸೃಷ್ಟಂ ಮಿಥುನಂ ತ್ವಯೋನಿಜಮ್ ॥೫೬॥

ಗಂಗೆ ಎಂಟನೆ ಮಗುವನ್ನು ಪ್ರಸವಿಸಿದಾಗಲೆ, ಶಂತನು ಬೇಟೆಗೆ ಹೋಗಿದ್ದಾಗ ಶರದ್ವಾನ್ ಋಷಿಗಳಿಂದ ಹುಟ್ಟಿದ ಅಯೋನಿಜರಾದ ಉತ್ತಮ ಹೆಣ್ಣುಗಂಡು ಅವಳ ಮಕ್ಕಳು ಕಾಡಿನಲ್ಲಿ ಪರಿತ್ಯಕ್ತರಾಗಿದ್ದುದನ್ನು ಕಂಡ.

ಶರದ್ವಾಂಸ್ತು ತಪಃ ಕುರ್ವನ್ ದದರ್ಶ ಸಹಸೋರ್ವಶೀಮ್ ।
ಚಸ್ಕಂದ ರೇತಸ್ತಸ್ಯಾಥ ಶರಸ್ತಂಬೇ ತತೋऽಭವತ್ ॥೫೭॥

ವಿಷ್ಕಂಭೋನಾಮ ರುದ್ರಾಣಾಂ ಭೂಭಾರಹರಣೇऽಂಗತಾಮ್ ।
ಹರೇಃ ಪ್ರಾಪ್ತುಂ ತಥಾ ತಾರಾ ಭಾರ್ಯಾ ಯಾ ಹಿ ಬೃಹಸ್ಪತೇಃ ॥೫೮॥

ಶರದ್ವಾನ್ ತಪಸ್ಸು ಮಾಡುತ್ತಿದ್ದಾಗ ಆಕಸ್ಮಾತ್ ಊರ್ವಶಿಯನ್ನು ಕಂಡ. ಆಗ ಅವನ ರೇತಸ್ಸು ಲಾಳದ ಕಡ್ಡಿಯ ಪೊದರಿನಲ್ಲಿ ಬಿದ್ದಿತು. ಅದರಿಂದ ರುದ್ರರಲ್ಲಿ ವಿಷ್ಕಂಭನೆಂಬುವನು ಹರಿಗೆ ಭೂಭಾರಹರಣದಲ್ಲಿ ಸಹಾಯಕನಾಗಬೇಕೆಂದು ಜನಿಸಿದ. ಹಾಗೇ ಬೃಹಸ್ಪತಿಯ ಪತ್ನಿ ತಾರೆಯೂ ಜನಿಸಿದಳು.

ತಾವುಭೌ ಶಂತನುರ್ದೃಷ್ಟ್ವಾ ಕೃಪಾವಿಷ್ಟಃ ಸ್ವಕಂ ಗೃಹಮ್ ।
ನಿನಾಯ ನಾಮ ಚಕ್ರೇಽಥ ಕೃಪಾಯಾ ವಿಷಯೌ ಯತಃ ॥೫೯॥

ಕೃಪಃ ಕೃಪೀತಿ ಸ ಕೃಪಸ್ತಪೋ ವಿಷ್ಣೋಶ್ಚಕಾರ ಹ ।
ತಸ್ಯ ಪ್ರೀತಸ್ತದಾ ವಿಷ್ಣುಃ ಸರ್ವಲೋಕೇಶ್ವರೇಶ್ವರಃ ॥೬೦॥

ಪ್ರಾದಾದೇಷ್ಯತ್ಸಪ್ತರ್ಷಿತ್ವಮಾಯುಃ ಕಲ್ಪಾಂತಮೇವ ಚ ।
ಸ ಶಂತನುಗೃಹೇ ತಿಷ್ಠನ್ ದೇವವ್ರತಸಖೋಭವತ್ ॥೬೧॥

ಅವರಿಬ್ಬರನ್ನೂ ಕಂಡು ಶಂತನು ದಯೆದುಂಬಿ ತನ್ನ ಅರಮನೆಗೆ ಒಯ್ದ. ಕೃಪೆಗೆ ಪಾತ್ರರಾದ್ದರಿಂದ ಅವರಿಗೆ ಕೃಪ ಕೃಪೀ ಎಂದೇ ನಾಮಕರಣ ಮಾಡಿದ. ಕೃಪ ವಿಷ್ಣುವನ್ನು ಕುರಿತು ತಪಸ್ಸು ಮಾಡಿದ. ಆಗ ಎಲ್ಲ ಜಗದೊಡೆಯರಿಗೂ ಒಡೆಯನಾದ ವಿಷ್ಣು ಸಂತುಷ್ಟನಾಗಿ ಅವನನ್ನು ಮುಂದಿನ ಮನ್ವಂತರದ ಸಪ್ತರ್ಷಿಗಳಲ್ಲಿ ಒಬ್ಬನನ್ನಾಗಿ ಮಾಡಿದ. ಮನುಕಲ್ಪಾಂತ್ಯದವರೆಗಿನ ಆಯುಷ್ಯನನ್ನೂ ಅವನಿಗೆ ಕೊಟ್ಟ. ಈ ಕೃಪ ಶಂತನುವಿನ ಅರಮನೆಯಲ್ಲಿದ್ದು ದೇವವ್ರತನಿಗೆ ಮಿತ್ರನಾದ.

ಪುತ್ರವಚ್ಛಂತನೋಶ್ಚಾಸೀತ್ ಸ ಚ ಪುತ್ರವದೇವ ತತ್ ।
ಮಿಥುನಂ ಪಾಲಯಾಮಾಸ ಕೃಪೋಽಪ್ಯಸ್ತ್ರಾಣ್ಯವಾಪ ಚ ॥೬೨॥

ಸರ್ವವೇದಾನಧಿಜಗೌ ಸರ್ವಶಾಸ್ತ್ರಾಣಿ ಕೌಶಿಕಾತ್ ।
ತತ್ತತ್ಜ್ಞಾನಂ ತಥಾ ವ್ಯಾಸಾದಾಪ್ಯ ಸರ್ವಜ್ಞತಾಂ ಗತಃ ॥೬೩॥

ಕೃಪ ಶಂತನುವಿಗೆ ಮಗನಂತಿದ್ದ. ಶಂತನು ಆ ಹೆಣ್ಣು ಗಂಡು ಮಕ್ಕಳಿಬ್ಬರನ್ನೂ ಮಕ್ಕಳಂತೆ ರಕ್ಷಿಸಿದ. ಕೃಪ ಮುಂದೆ ಅಸ್ತ್ರಗಳನ್ನು ಕಲಿತ. ಎಲ್ಲ ವೇದಗಳನ್ನೂ ಅಭ್ಯಾಸ ಮಾಡಿದ. ಎಲ್ಲ ಶಾಸ್ತ್ರಗಳನ್ನೂ ವಿಶ್ವಾಮಿತ್ರರಿಂದ ಕಲಿತ. ತತ್ತಜ್ಞಾನವನ್ನು ವ್ಯಾಸರಿಂದ ಪಡೆದು ಸರ್ವಜ್ಞತ್ವವನ್ನು ಹೊಂದಿದ.

★ ★ ★ ★

ನೂರ ಇಪ್ಪತ್ತೇಳನೆಯ ಅಧ್ಯಾಯ

(ಗೌತಮರಿಂದ ಶರಸ್ತಂಬದಲ್ಲಿ ಕೃಪ ಮತ್ತು ಕೃಪಿಯರ ಜನನ. ಶಂತನುವಿನಿಂದ ಆ ಶಿಶುಗಳ ಸ್ವೀಕಾರ.)

ಜನಮೇಜಯಃ

ಕೃಪಸ್ಯಾಪಿ ಮಮ ಬ್ರಹ್ಮನ್ ಸಂಭವಂ ವಕ್ತುಮರ್ಹಸಿ ।
ಶರಸ್ತಂಬಾತ್ ಕಥಂ ಜಾತಃ ಕಥಂ ಚಾಸ್ತ್ರಾಣ್ಯವಾಪ್ತವಾನ್ ॥೧॥

ಪೂಜ್ಯರೇ, ಕೃಪಾಚಾರ್ಯರ ಜನ್ಮವನ್ನು ನನಗೆ ತಿಳಿಸಿ. ಅವರು ಶರಸ್ತಂಬದಿಂದ (ನೊದೆಹುಲ್ಲಿನ ಗೆಡ್ಡೆಯಿಂದ) ಹೇಗೆ ಜನಿಸಿದರು ಮತ್ತು ಹೇಗೆ ಅಸ್ತ್ರಗಳನ್ನು ಸಂಪಾದಿಸಿದರು?

ವೈಶಂಪಾಯನಃ

ಮಹರ್ಷೇರ್ಗೌತಮಸ್ಯಾಸೀತ್ ಶರದ್ವಾನ್ನಾಮ ನಾಮತಃ ।
ಪುತ್ರಃ ಕಿಲ ಮಹಾರಾಜ ಜಾತಃ ಸಹ ಶರೈರ್ವಿಭೋ ॥೨॥

ಮಹಾರಾಜನೇ, ಮಹರ್ಷಿಗಳಾದ ಗೌತಮರಿಗೆ ಶರದ್ವಾನ್ ಎಂಬ ಪುತ್ರನಿದ್ದನು. ಪ್ರಭುವೇ ಅವನು ಶರಗಳ ಜೊತೆಯಲ್ಲಿ ಜನಿಸಿದ ಕಾರಣ ಅವನಿಗೆ ಶರದ್ವಾನ್ ಎಂದು ಹೆಸರು.

ನ ತಸ್ಯ ವೇದಾಧ್ಯಯನೇ ತಥಾ ಬುದ್ಧಿರಜಾಯತ ।
ಯಥಾಽಸ್ಯ ಬುದ್ಧಿರಭವದ್ ಧನುರ್ವೇದೇ ಪರಂತಪ ॥೩॥

ಪರಂತಪನೇ, ಅವನಿಗೆ ಧನುರ್ವಿದ್ಯೆಯನ್ನು ಕಲಿಯುವುದರಲ್ಲಿ ಇದ್ದ ಆಸಕ್ತಿಯು ವೇದಾಧ್ಯಯನವನ್ನು ಮಾಡುವುದರಲ್ಲಿ ಇರಲಿಲ್ಲ.

ಅಧಿಜಗ್ಮುರ್ಯಥಾ ವೇದಾನ್ ತಪಸಾ ಬ್ರಹ್ಮವಾದಿನಃ ।
ತಥಾ ಸ ತಪಸೋಪೇತಃ ಸರ್ವಾಣ್ಯಸ್ತ್ರಾಣ್ಯವಾಪ ಹ ॥೪॥

ಬ್ರಹ್ಮವಾದಿಗಳು ಹೇಗೆ ತಪಸ್ಸು ಮಾಡಿ ವೇದಗಳನ್ನು ಕಲಿಯುತ್ತಾರೋ, ಹಾಗೆ ಆ ಪುತ್ರನು ತಪಸ್ಸನ್ನು ಮಾಡಿ ಎಲ್ಲಾ ಅಸ್ತ್ರಗಳನ್ನು ಸಂಪಾದಿಸಿದನು.

ಧನುರ್ವೇದಪರತ್ವಾಚ್ಚ ತಪಸಾ ವಿಪುಲೇನ ಚ ।
ಭೃಶಂ ಸಂತಾಪಯಾಮಾಸ ದೇವರಾಜಂ ಸ ಗೌತಮಃ ॥೫॥

ಯಾವಾಗಲೂ ಧನುರ್ವಿದ್ಯಾಪರನಾಗಿದ್ದು ವಿಪುಲವಾದ ತಪಸ್ಸಿನಿಂದ ಕೂಡಿದ ಆ ಗೌತಮಕುಲೋತ್ಪನ್ನನನ್ನು ನೋಡಿ ದೇವರಾಜನಾದ ಇಂದ್ರನು ಬಹಳ ಸಂತಾಪವನ್ನು ಹೊಂದಿದನು.

ತತೋ ಜಾಲವತೀಂ ನಾಮ ದೇವಕನ್ಯಾಂ ಸುರೇಶ್ವರಃ ।
ಪ್ರಾಹಿಣೋತ್ ತಪಸೋ ವಿಘ್ನಂ ಕುರು ತಸ್ಯೇತಿ ಕೌರವ ॥೬॥

ಆ ಸುರೇಶ್ವರನು ತನ್ನ ಲಾವಣ್ಯಜಾಲದಿಂದ ಎಲ್ಲರನ್ನೂ ವಶೀಕರಿಸಿಕೊಳ್ಳುವ ಅಪ್ಸರೆಯಾದ ಊರ್ವಶಿಯನ್ನು ಅವನ ತಪಸ್ಸಿಗೆ ವಿಘ್ನವನ್ನು ಮಾಡು ಎಂದು ಹೇಳಿ ಅವನ ಬಳಿಗೆ ಕಳುಹಿಸಿದನು.

ಸಾऽಭಿಗಮ್ಯಾಶ್ರಮಂ ತಸ್ಯ ರಮಣೀಯಂ ಶರದ್ವತಃ ।
ಧನುರ್ಬಾಣಧರಂ ದೃಷ್ಟ್ವಾ ಲೋಭಯಾಮಾಸ ಗೌತಮಮ್ ॥೭॥

ಊರ್ವಶಿಯು ರಮಣೀಯವಾದ ಶರದ್ವಂತನ ಆಶ್ರಮದ ಬಳಿಗೆ ಬಂದು ಧನುರ್ಬಾಣಗಳನ್ನು ಧರಿಸಿದ ಅವನನ್ನು ನೋಡಿ ಆ ಗೌತಮ ಕುಲೋತ್ಪನ್ನನನ್ನು ಮೋಹಿಸಿದಳು.

ತಾಮೇಕಾಂತಚರಾಂ ದೃಷ್ಟ್ವಾ ಗೌತಮೋऽಪ್ಸರಸಂ ವನೇ ।
ಲೋಕೇऽಪ್ರತಿಮಸಂಸ್ಥಾನಾಮುತ್ಫುಲ್ಲನಯನೋऽಭವತ್ ॥೮॥

ಶರದ್ವಂತನು ಲೋಕದಲ್ಲಿ ಕಾಣದ ಸೌಂದರ್ಯರಾಶಿಯಾದ ಅವಳು ಕಾಡಿನಲ್ಲಿ ಒಬ್ಬಳೇ ಸಂಚರಿಸುವುದನ್ನು ನೋಡಿ ಅರಳಿದ ಕಣ್ಣುಳ್ಳವನಾದನು.

ಧನುಶ್ಚ ಹಿ ಶರಾಸ್ತಸ್ಯ ಕರಾಭ್ಯಾಂ ಪ್ರಾಪತನ್ ಭುವಿ ।
ವೇಪಥುಶ್ಚಾಸ್ಯ ಸಹಸಾ ಶರೀರೇ ಸಮಜಾಯತ ॥೯॥

ಅವನ ಕೈಯಿಂದ ಧನುಸ್ಸು ಮತ್ತು ಬಾಣಗಳು ಬಿದ್ದವು. ಅವನ ಶರೀರದಲ್ಲಿ ನಡುಕವುಂಟಾಯಿತು.

ಸ ತು ಜ್ಞಾನಗರೀಯಸ್ತಾ ತ್ವ್ ತಪಸಶ್ಚ ಸಮನ್ವಯಾತ್ ।
ಅವತಸ್ಥೇ ಮಹಾಪ್ರಾಜ್ಞೋ ಧೈರ್ಯೇಣ ಪರಮೇಣ ಹ ॥೧೦॥

ಆದರೆ ಆ ಮಹಾಪ್ರಾಜ್ಞನಾದ ಅವನು ಶ್ರೇಷ್ಠವಾದ ಜ್ಞಾನವನ್ನು ಹೊಂದಿದ್ದುದರಿಂದ ಮತ್ತು ತಪಸ್ಸಿನಿಂದ ಕೂಡಿದ್ದುದರಿಂದ, ಶ್ರೇಷ್ಠವಾದ ಧೈರ್ಯವನ್ನು ಅವಲಂಬಿಸಿ ಹಾಗೆಯೇ ನಿಂತನು.

ಶಸ್ತಸ್ಯ ಸಹಸಾ ರಾಜನ್ ವಿಕಾರಃ ಸಮಜಾಯತ ।
ತೇನ ಸುಸ್ರಾವ ರೇತೋಽಸ್ಯ ಸ ಚ ತನ್ನಾವಬುಧ್ಯತ ॥೧೧॥

ರಾಜನೇ, ಗುಣವಂತನಾದ ಅವನಿಗೆ ತಕ್ಷಣ ಮನಸ್ಸಿನಲ್ಲಿ ವಿಕಾರವುಂಟಾಯಿತು. ಅದರಿಂದ ಅವನಿಗೆ ವೀರ್ಯಸ್ಖಲನವಾಯಿತು. ಅದು ಅವನಿಗೆ ತಿಳಿಯಲಿಲ್ಲ.

ತಂ ವಿಹಾಯಾಶ್ರಮಂ ಚಾಪಿ ತಾಂ ಚೈವಾಪ್ಸರಸಂ ಮುನಿಃ ।
ಜಗಾಮ ರೇತಸ್ತತ್ ತಸ್ಯ ಶರಸ್ತಂಬೇ ಪಪಾತ ಹ ॥೧೨॥

ಆ ಋಷಿಯು ಆ ಅಪ್ಸರೆಯನ್ನೂ ಮತ್ತು ಆಶ್ರಮವನ್ನೂ ಬಿಟ್ಟು ಹೊರಟು ಹೋದನು. ಸ್ಖಲನವನ್ನು ಹೊಂದಿದ ಅವನ ರೇತಸ್ಸು ಶರಸ್ತಂಬದಲ್ಲಿ ಬಿದ್ದಿತು.

ಶರಸ್ತಂಬೇ ಚ ಪತಿತಂ ದ್ವಿಧಾ ತದಭವನ್ನೃಪ ।
ತಸ್ಯಾಥ ಮಿಥುನಂ ಜಜ್ಞೇ ಗೌತಮಸ್ಯ ಶರದ್ವತಃ ॥೧೩॥

ರಾಜನೇ, ಶರಸ್ತಂಭದಲ್ಲಿ ಬಿದ್ದ ಅವನ ವೀರ್ಯವು ಎರಡು ಭಾಗವಾಯಿತು. ಅದರಿಂದ ಗೌತಮ ಕುಲೋತ್ಪನ್ನನಾದ ಶರದ್ವಂತನಿಗೆ ಅವಳಿ ಮಕ್ಕಳು ಜನಿಸಿದವು.

ಮಹರ್ಷೇರ್ಗೌತಮಸ್ಯಾಸ್ಯ ಆಶ್ರಮಸ್ಯ ಸಮೀಪತಃ ।
ಮೃಗಯಾಂ ಚರತೋ ರಾಜ್ಞಃ ಶಂತನೋಸ್ತು ಯದೃಚ್ಛಯಾ ।
ಕಶ್ಚಿತ್ಸೈನಾಚರೋಽರಣ್ಯೇ ಮಿಥುನಂ ತದಪಶ್ಯತ ॥೧೪॥

ಆ ಗೌತಮ ಮಹರ್ಷಿಗಳ ಆಶ್ರಮದ ಸಮೀಪದಲ್ಲಿ ಶಂತನುರಾಜನು ಬೇಟೆಯಾಡುತ್ತಿರುವಾಗ ಅವನ ಸೈನಿಕನೊಬ್ಬನು ಅರಣ್ಯದಲ್ಲಿ ಅಕಸ್ಮಾತ್ತಾಗಿ ಈ ಅವಳಿ ಮಕ್ಕಳನ್ನು ನೋಡಿದನು.

ಧನುಶ್ಚ ಸಶರಂ ದೃಷ್ಟ್ವಾ ತಥಾ ಕೃಷ್ಣಾಜಿನಾನಿ ಚ ।
ವ್ಯವಸ್ಯ ಬ್ರಾಹ್ಮಣಾಪತ್ಯಂ ಧನುರ್ವೇದಾಂತಗಸ್ಯ ಚ ।
ಸ ರಾಜ್ಞೇ ದರ್ಶಯಾಮಾಸ ಮಿಥುನಂ ಸಶರಂ ತದಾ ॥೧೫॥

ಶಿಶುಗಳ ಸಮೀಪದಲ್ಲಿ ಬಿಲ್ಲು, ಬಾಣ ಮತ್ತು ಕೃಷ್ಣಾಜಿನಗಳು ಇರುವುದನ್ನು ನೋಡಿ, ಈ ಮಕ್ಕಳು ಧನುರ್ವೇದಪಾರಂಗತನಾದ ಬ್ರಾಹ್ಮಣನ ಮಕ್ಕಳೆಂದು ನಿರ್ಧರಿಸಿ ರಾಜನಿಗೆ ಆ ಮಕ್ಕಳನ್ನೂ ಮತ್ತು ಬಿಲ್ಲುಬಾಣಗಳನ್ನೂ ತೋರಿಸಿದನು.

ಸ ತದಾದಾಯ ಮಿಥುನಂ ರಾಜಾ ಚ ಕೃಪಯಾನ್ವಿತಃ ।
ಆಜಗಾಮ ಗೃಹಾನೇವ ಮಮ ಪುತ್ರಾವಿತಿ ಬ್ರುವನ್ ॥೧೬॥

ಕೃಪೆಯಿಂದ ಕೂಡಿದ ಶಂತನುವು ಆ ಅವಳಿ ಮಕ್ಕಳನ್ನು ತೆಗೆದುಕೊಂಡು 'ಇವು ನನ್ನ ಮಕ್ಕಳು' ಎಂದು ಹೇಳುತ್ತಾ ಮನೆಗೆ ಹಿಂದಿರುಗಿದನು.

ಪ್ರೀತಿಯುಕ್ತೋ ನರಶ್ರೇಷ್ಠೋ ಮಿಥುನಂ ಗೌತಮಸ್ಯ ತತ್ ।
ತತಃ ಸಂವರ್ಧಯಾಮಾಸ ಸಂಸ್ಕಾರೈಶ್ಚಾಪ್ಯಯೋಜಯತ್ ॥೧೭॥

ಶಂತನುವು ಸಂತೋಷದಿಂದ ಗೌತಮರ ಆ ಅವಳಿ ಮಕ್ಕಳನ್ನು ಬೆಳೆಸಿ ಅವರಿಗೆ ಎಲ್ಲಾ ಸಂಸ್ಕಾರಗಳನ್ನೂ ಮಾಡಿಸಿದನು.

ಕೃಪಯಾ ಯನ್ಮಯಾ ಬಾಲಾವಿಮೌ ಸಂವರ್ಧಿತಾವಿತಿ ।
ತಸ್ಮಾತ್ತಯೋರ್ನಾಮ ಚಕ್ರೇ ತದೇವ ಸ ಮಹೀಪತಿಃ ॥೧೮॥

ಶಂತನುವು ಕೃಪೆಯಿಂದ ಆ ಮಕ್ಕಳನ್ನು ಬೆಳೆಸಿದ ಕಾರಣ ಅವನು ಆ ಮಕ್ಕಳಿಗೆ ಅದೇ ಹೆಸರನ್ನು ಇಟ್ಟನು.

ತಸ್ಮಾತ್ ಕೃಪ ಇತಿ ಖ್ಯಾತಃ ಕೃಪೀ ಕನ್ಯಾ ಚ ಸಾऽಭವತ್ ।
ಪಿತಾऽಪಿ ಗೌತಮಸ್ತತ್ರ ತಪಸಾ ತಾವವಿಂದತ ॥೧೯॥

ಆದ್ದರಿಂದ ಆ ಗಂಡು ಮಗುವು ಕೃಪ ಎಂಬ ಹೆಸರಿನಿಂದ ಪ್ರಖ್ಯಾತವಾಯಿತು. ಹೆಣ್ಣುಮಗುವು ಕೃಪೀ ಎಂಬ ಹೆಸರಿನಿಂದ ಬೆಳೆದಳು. ತಂದೆಯಾದ ಶರದ್ವಂತರು ತಮ್ಮ ತಪಸ್ಸಿನ ಬಲದಿಂದ ಈ ವಿಷಯವನ್ನು ತಿಳಿದರು.

ಆಗಮ್ಯ ಚಾಸ್ಮೈ ಗೋತ್ರಾದಿ ಸರ್ವಮಾಖ್ಯಾತವಾಂಸ್ತದಾ ।
ಗೌತಮೋಽಪಿ ಚ ತದಾ ರಾಜನ್ ಧನುರ್ವೇದಪರೋಽಭವತ್ ॥೨೦॥

ಗೌತಮಗೋತ್ರದಲ್ಲಿ ಜನಿಸಿದ ಶರದ್ವಂತರು ಶಂತನುವಿನ ಬಳಿಗೆ ಬಂದು ತಮ್ಮ ಗೋತ್ರ ಮೊದಲಾದ ಎಲ್ಲಾ ವಿಷಯಗಳನ್ನು ಅವನಿಗೆ ತಿಳಿಸಿ ಪುನಃ ಧನುರ್ವಿದ್ಯೆಯಲ್ಲೇ ನಿರತರಾದರು.

ಚತುರ್ವಿಧಂ ಧನುರ್ವೇದಮಸ್ತ್ರಾಣಿ ವಿವಿಧಾನಿ ಚ ।
ನಿಖಿಲೇನಾಸ್ಯ ತತ್ ಸರ್ವಂ ಗುಹ್ಯಮಾಖ್ಯಾತವಾನ್ ಪಿತಾ ।
ಸೋಽಚಿರೇಣೈವ ಕಾಲೇನ ಪರಮಾಚಾರ್ಯತಾಂ ಗತಃ ॥೨೧॥

ರಾಜನೇ, ಅವರು ತಮ್ಮ ಪುತ್ರನಿಗೆ ಚತುರ್ವಿಧವಾದ ಧನುರ್ವೇದವನ್ನೂ ವಿವಿಧವಾದ ಅಸ್ತ್ರಗಳನ್ನೂ ಮತ್ತು ರಹಸ್ಯವಾದ ಅನೇಕ ವಿಷಯಗಳನ್ನೂ ಸಮಗ್ರವಾಗಿ ಕಲಿಸಿದರು. ಕೃಪನು ಅಲ್ಪಕಾಲದಲ್ಲಿಯೇ ಪರಮಾಚಾರ್ಯನಾದನು.

ಕೃಪಮಾಹೂಯ ಗಾಂಗೇಯಃ ತವ ಶಿಷ್ಯಾ ಇತಿ ಬ್ರುವನ್।
ಪೌತ್ರಾನ್ ಪರಿಸಮಾದಾಯ ಕೃಪಮಾರಾಧಯತ್ ತದಾ ॥೨೨॥

ಭೀಷ್ಮರು ಕೃಪಾಚಾರ್ಯರನ್ನು ಕರೆದು ಅವರನ್ನು ಆರಾಧಿಸಿ ತನ್ನ ಮೊಮ್ಮಕ್ಕಳನ್ನು ಅವರಿಗೆ ಒಪ್ಪಿಸಿ 'ಇವರು ನಿಮ್ಮ ಶಿಷ್ಯರು' ಎಂದು ಹೇಳಿದರು.

ತತೋಧಿಜಗ್ಮುಃ ಸರ್ವೇ ತೇ ಧನುರ್ವೇದಂ ಮಹಾರಥಾಃ ।
ಧೃತರಾಷ್ಟ್ರಾತ್ಮಜಾಶ್ಚೈವ ಪಾಂಡವಾಶ್ಚ ಮಹಾಬಲಾಃ ॥೨೩॥

ವೃಷ್ಣಯಶ್ಚ ನೃಪಾಶ್ಚಾನ್ಯೇ ನಾನಾದೇಶಸಮಾಗತಾಃ ।
ಕೃಪಮಾಚಾರ್ಯಮಾಸಾದ್ಯ ಪರಮಾಸ್ತ್ರಜ್ಞತಾಂ ಗತಾಃ ॥೨೪॥

ಅನಂತರ ಮಹಾಬಲರೂ, ಮಹಾರಥರೂ ಆದ ಎಲ್ಲಾ ಪಾಂಡವರೂ ಮತ್ತು ಧೃತರಾಷ್ಟ್ರನ ಮಕ್ಕಳೂ ಅವರಿಂದ ಧನುರ್ವೇದವನ್ನು ಕಲಿತರು.

ವೃಷ್ಣಿಗಳು ಮತ್ತು ಬೇರೆ ರಾಜರುಗಳು ನಾನಾ ದೇಶಗಳಿಂದ ಬಂದು ಕೃಪಾಚಾರ್ಯರ ಬಳಿ ಅಭ್ಯಾಸ ಮಾಡಿ ಶ್ರೇಷ್ಠರಾದ ಅಸ್ತ್ರಜ್ಞರಾದರು.

ವೈಶಂಪಾಯನಃ

ವಿಶೇಷಾರ್ಥೀ ತತೋ ಭೀಷ್ಮಃ ಪೌತ್ರಾಣಾಂ ಹಿತಕಾಮ್ಯಯಾ ।
ಇಷ್ವಸ್ತ್ರಜ್ಞಾನ್ ಪರ್ಯಪೃಚ್ಛದಾಚಾರ್ಯಾನ್ ವೀರ್ಯಸಂಗತಾನ್ ॥೨೫॥

ನಾಲ್ಪಧೀರ್ನಾಮಹಾಭಾಗಃ ತಥಾऽನಾನಾಸ್ತ್ರಕೋವಿದಃ ।
ನಾದೇವಸತ್ತ್ವೋ ವಿನಯೇತ್ ಕುರೂನಸ್ತ್ರೇ ಮಹಾಬಲಾನ್ ॥೨೬॥

ತಮ್ಮ ಮೊಮ್ಮಕ್ಕಳಿಗೆ ವಿಶೇಷವಾದ ನಿಪುಣತೆಯು ಬರಬೇಕೆಂಬ ಕಾರಣದಿಂದ ಅವರ ಹಿತವನ್ನು ಬಯಸಿ ಅಲ್ಪಬುದ್ಧಿಯುಳ್ಳವನೂ, ಮಹಾನುಭಾವನಲ್ಲದಿದ್ದವನೂ, ನಾನಾಸ್ತ್ರಗಳಲ್ಲಿ ಕೋವಿದನಾಗದವನೂ, ದೇವಸತ್ವವನ್ನು ಹೊಂದದವನೂ, ಮಹಾಬಲರಾದ ಕುರುಗಳಿಗೆ ಅಸ್ತ್ರವಿದ್ಯೆಯನ್ನು ಕಲಿಸಲು ಸಾಧ್ಯವಿಲ್ಲ ಎಂದು ತಿಳಿದು ಪರಾಕ್ರಮಿಗಳಾದ ಧನುರ್ವೇದಪಾರಂಗತರಾದ ಆಚಾರ್ಯರನ್ನು ಹುಡುಕಲು ಪ್ರಾರಂಭಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಸಪ್ತವಿಂಶತ್ಯಧಿಕಶತತಮೋऽಧ್ಯಾಯಃ ॥
॥ ಸಂಭವಪರ್ವಣಿ ಪಂಚಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೧

ಯದಾಹಿ ಜಾತಃ ಸ ಕೃಪಸ್ತದೈವ
ಬೃಹಸ್ಪತೇ ಸೂನುರಗಾಚ್ಚ ಗಂಗಾಮ್ ।
ಸ್ನಾತುಂ ಘೃತಾಚೀಂ ಸ ದದರ್ಶ ತತ್ರ
ಶ್ಲಥದ್ದುಕೂಲಾಂ ಸುರವರ್ಯ ಕಾಮಿನೀಮ್ ॥೬೪॥

ಕೃಪ ಹುಟ್ಟಿದ ಸಮಯದಲ್ಲಿಯೆ ಬೃಹಸ್ಪತಿಯ ಪುತ್ರ ಭರದ್ವಾಜ ಒಮ್ಮೆ ಸ್ನಾನಕ್ಕಾಗಿ ಗಂಗೆಗೆ ಹೋಗಿದ್ದ. ಅಲ್ಲಿ ದೇವೋತ್ತಮರಿಂದ ಉಪಭೋಗ್ಯಳಾದ ಘೃತಾಚಿಯನ್ನು, ಅವಳು ಉಟ್ಟ ಸೀರೆ ಜಾರಿದ್ದಾಗ ನೋಡಿದ.

ತದ್ದರ್ಶನಾತ್ ಸ್ಕನ್ನಮಥೇಂದ್ರಿಯಂ ಸ
ದ್ರೋಣೇ ದಧಾರಾಶು ತತೋಽಭವತ್ ಸ್ವಯಮ್ ।
ಅಂಭೋಜಜಾವೇಶಯುತೋ ಬೃಹಸ್ಪತಿಃ
ಕರ್ತುಂ ಹರೇಃ ಕರ್ಮ ಭುವೋ ಭರೋದ್ಧೃತೌ ॥೬೫॥

ಘೃತಾಚಿಯ ದರ್ಶನದಿಂದ ಬಿದ್ದ ವೀರ್ಯವನ್ನು ಭರದ್ವಾಜ ದ್ರೋಣದಲ್ಲಿಟ್ಟ. ಒಡನೆ ಅದರಿಂದ ಸ್ವತಃ ಬೃಹಸ್ಪತಿಯೆ ಬ್ರಹ್ಮಾವೇಶಯುಕ್ತನಾಗಿ ಭೂಭಾರಹರಣದಲ್ಲಿ ಕೃಷ್ಣನಿಗೆ ಸೇವೆ ಮಾಡುವುದಕ್ಕಾಗಿ ಹುಟ್ಟಿದ.

ದ್ರೋಣೇತಿ ನಾಮಾಸ್ಯ ಚಕಾರ ತಾತೋ
ಮುನಿರ್ಭರದ್ವಾಜ ಉತಾಸ್ಯ ವೇದಾನ್ ।
ಅಧ್ಯಾಪಯಾಮಾಸ ಸ ಶಾಸ್ತ್ರಸಂಘಾನ್
ಸರ್ವಜ್ಞತಾಮಾಪ ಚ ಸೋಽಚಿರೇಣ ॥೬೬॥

ತಂದೆಯಾದ ಭರದ್ವಾಜ ಮುನಿ ಮಗನಿಗೆ ದ್ರೋಣನೆಂದೇ ನಾಮಕರಣ ಮಾಡಿದ. ಅವನಿಗೆ ವೇದಗಳನ್ನೂ ಶಾಸ್ತ್ರಸಮೂಹಗಳನ್ನೂ ಕಲಿಸಿದ. ಹೀಗೆ ದ್ರೋಣ ಬೇಗನೆ ಸರ್ವಜ್ಞತ್ವವನ್ನು ಪಡೆದ.

ಕಾಲೇ ಚ ತಸ್ಮಿನ್ ಪೃಷತೋಽನಪತ್ಯೋ
ವನೇ ತು ಪಾಂಚಾಲ ಪತಿಶ್ಚಚಾರ ।
ತಪೋ ಮಹತ್ ತಸ್ಯ ತಥಾ ವರಾಪ್ಸರಾ-
ವಲೋಕನಾತ್ ಸ್ಕಂದಿತಮಾಶು ರೇತಃ ॥೬೭॥

ಅದೇ ಸಮಯದಲ್ಲಿ ಪಾಂಚಾಲದೇಶದ ದೊರೆ ಪೃಷತ ಮಕ್ಕಳಿಲ್ಲದವನಾದ್ದರಿಂದ ಅರಣ್ಯದಲ್ಲಿ ದೊಡ್ಡ ತಪಸ್ಸು ಮಾಡಿದ. ಅವನಿಗೆ ಓರ್ವ ಉತ್ತಮ ಅಪ್ಸರೆಯ ದರ್ಶನದಿಂದ ತಕ್ಷಣ ವೀರ್ಯ ಕೆಳಗೆ ಬಿದ್ದಿತು.

ಸ ತದ್ ವಿಲಜ್ಜಾವಶತಃ ಪದೇನ
ಸಮಾಕ್ರಮತ್ ತಸ್ಯ ಬಭೂವ ಸೂನುಃ ।
ಹಹೂ ತು ನಾಮ್ನಾ ಸ ವಿರಿಂಚಗಾಯಕೋ
ನಾಮ್ನಾವಹೋ ಯೋ ಮರುತಾಂ ತದಂಶಯುಕ್ ॥೬೮॥

ಪೃಷತ ನಾಚಿಕೆಯಿಂದ ವೀರ್ಯವನ್ನು ಕಾಲಿಂದ ಮುಚ್ಚಿದ. ಆ ವೀರ್ಯದಿಂದ ಅವನಿಗೆ ಒಬ್ಬ ಮಗ ಜನಿಸಿದ. ಅವನು ವಿಶೇಷವಾಗಿ ಬ್ರಹ್ಮನ ಗಾಯಕ. ಹೆಸರು ಹಹೂ ಎಂದು. ಮರುತ್ತುಗಳಲ್ಲಿ ಒಬ್ಬನಾದ ಆವಹನ ಅಂಶಯುಕ್ತನಾಗಿದ್ದ.

ಸ ದ್ರೋಣತಾತಾತ್ ಸಮವಾಪ ವೇದಾನ್
ಅಸ್ತ್ರಾಣಿ ವಿದ್ಯಾಶ್ಚ ತಥಾ ಸಮಸ್ತಾಃ ।
ದ್ರೋಣೇನ ಯುಕ್ತಃ ಸ ತದಾ ಗುರೋಃ ಸುತಂ
ಸಹೈವ ನೌ ರಾಜ್ಯಮಿತಿ ಹ್ಯವಾದೀತ್ ॥೬೯॥

ದ್ರುಪದ ದ್ರೋಣನ ಜೊತೆ ಸೇರಿ ದ್ರೋಣನ ತಂದೆಯಾದ ಭಾರದ್ವಾಜನಿಂದ ವೇದಗಳನ್ನೂ ಅಸ್ತ್ರಗಳನ್ನೂ ಎಲ್ಲ ವಿದ್ಯೆಗಳನ್ನೂ ಪಡೆದ. ಆಗ ಅವನು ಗುರುಪುತ್ರನಾದ ದ್ರೋಣನಿಗೆ 'ನಾವಿಬ್ಬರೂ ಜೊತೆಯಾಗಿಯೇ ರಾಜ ಸುಖ ಅನುಭವಿಸೋಣ' ಎಂದ.

ಪದೇ ದ್ರುತತ್ವಾದ್ ದ್ರುಪದಾಭಿಧೇಯಃ
ಸ ರಾಜ್ಯಮಾಪಾಥ ನಿಜಾಂ ಕೃಪೀಂ ಸಃ ।
ದ್ರೋಣೋऽಪಿ ಭಾರ್ಯಾಂ ಸಮವಾಪ್ಯ ಸರ್ವ-
ಪ್ರತಿಗ್ರಹೋಜ್ಝಶ್ಚ ಪುರೇऽವಸತ್ ಸುಖೀ ॥೭೦॥

ಕಾಲಿಂದ ಮುಚ್ಚಿದ ಪ್ರಯುಕ್ತ ಅವನಿಗೆ ದ್ರುಪದ ಎಂದೇ ಹೆಸರಾಯಿತು. ಮುಂದೆ ಆತ ರಾಜ್ಯವನ್ನು ಹೊಂದಿದ. ಇತ್ತ ದ್ರೋಣ ತನ್ನವಳೇ ಆದ ಕೃಪಿಯನ್ನು ಮದುವೆಯಾಗಿ ಎಲ್ಲ ಪ್ರತಿಗ್ರಹವನ್ನೂ ಪರಿತ್ಯಜಿಸಿ ಪಟ್ಟಣದಲ್ಲಿ ಸುಖಿಯಾಗಿ ವಾಸಮಾಡಿದ.

★ ★ ★ ★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೫

ಯದಾ ಭರದ್ವಾಜಸುತಸ್ತ್ವಸಂಚಯೀ
ಪ್ರತಿಗ್ರಹೋಜ್ಝೋ ನಿಜಧರ್ಮವರ್ತೀ ।
ದ್ರೌಣಿಸ್ತದಾ ಧಾರ್ತರಾಷ್ಟ್ರೈಃ ಸಮೇತ್ಯ ಕ್ರೀಡನ್
ಪಯಃ ಪಾತುಮುಪೈತಿ ಸದ್ಮ ॥೭॥

ದ್ರೋಣ ಸ್ವಧರ್ಮದಲ್ಲಿದ್ದವ ಸಂಪತ್ತನ್ನು ಕೂಡಿಡುತ್ತಿರಲಿಲ್ಲ. ಇನ್ನೊಬ್ಬರಿಂದ ಸ್ವೀಕರಿಸುತ್ತಲೂ ಇರಲಿಲ್ಲ. ಆಗ ಅವನ ಮಗ ಅಶ್ವತ್ಥಾಮ ಕೌರವರೊಡಗೂಡಿ ಆಟವಾಡುತ್ತಿದ್ದು ಹಾಲು ಕುಡಿಯಲು ಮನೆಗೆ ಬರುತ್ತಿದ್ದ.

ತಸ್ಮೈ ಮಾತಾ ಪಿಷ್ಟಮಾಲೋಡ್ಯ ಪಾತುಂ
ದದಾತಿ ಪೀತ್ವೈತಿ ತದೈಷ ನಿತ್ಯಮ್ ।
ಪೀತಕ್ಷೀರಾನ್ ಧಾರ್ತರಾಷ್ಟ್ರಾನ್ ಸಮೇತ್ಯ
ಮಯಾ ಪೀತಂ ಕ್ಷೀರಮಿತ್ಯಾಹ ನಿತ್ಯಮ್ ॥೮॥

ತಾಯಿ ನಿತ್ಯ ಹಿಟ್ಟು ಕಲಿಸಿ ಅಶ್ವತ್ಥಾಮನಿಗೆ ಕುಡಿಯಲು ಕೊಡುತ್ತಿದ್ದಳು. ಅವನು ಕುಡಿದು ಹೋಗುತ್ತಿದ್ದ. ನಿತ್ಯ ಹಾಲನ್ನೆ ಕುಡಿಯುತ್ತಿದ್ದ ಕೌರವರ ಬಳಿಗೆ ಬಂದು ನಾನು ಹಾಲು ಕುಡಿದೆನೆನ್ನುತ್ತಿದ್ದ.

ನೃತ್ಯಂತಮೇನಂ ಪಾಯಯಾಮಾಸುರೇತೇ
ಪಯಃ ಕದಾಚಿದ್ ರಸಮಸ್ಯ ಸೋಽವೈತ್ ।
ಪುನಃ ಕದಾಚಿತ್ ಸ ತು ಮಾತೃದತ್ತೇ
ಪಿಷ್ಟೇ ನೇದಂ ಕ್ಷೀರಮಿತ್ಯಾರುರಾವ ॥೯॥

ಕುಣಿಯುತ್ತಿದ್ದ ಅಶ್ವತ್ಥಾಮನಿಗೆ ಕೌರವರು ಒಮ್ಮೆ ಹಾಲು ಕುಡಿಸಿದರು. ಅವನು ಅದರ ರುಚಿ ಕಂಡ. ಬಳಿಕ ತಾಯಿ ಹಿಟ್ಟು ಕಲಿಸಿದ ನೀರನ್ನು ಕೊಟ್ಟಾಗ ಇದು ಹಾಲಲ್ಲವೆನ್ನುತ್ತ ಅಳತೊಡಗಿದ.

ದೃಷ್ಟ್ವಾರುವಂತಂ ಸುತಮಾತ್ಮಜನ್ಯ
ಸ್ನೇಹಾನ್ನಿಯತ್ಯೈವ ಜನಾರ್ದನಸ್ಯ ।
ಸಂಪ್ರೇರಿತಃ ಕೃಪಯಾ ಚಾರ್ತರೂಪೋ
ದ್ರೋಣೇ ಯಯಾವಾರ್ಜಯಿತುಂ ತದಾ ಗಾಮ್ ॥೧೦॥

ಮಗ ಅಳುವುದನ್ನು ಕಂಡು ದ್ರೋಣ ಹರೀಚ್ಛೆಯಿಂದ ಉಂಟಾದ ಪುತ್ರ ಸ್ನೇಹದಿಂದ ಮತ್ತು ಕರುಣೆಯಿಂದ ಪ್ರೇರಿತನಾಗಿ ದುಃಖಿತನಾಗಿ ಗೋವನ್ನು ಸಂಪಾದಿಸಲು ಹೊರಟ.

ಪ್ರತಿಗ್ರಹಾತ್ ಸನ್ನಿವೃತ್ತಃ ಸ ರಾಮಂ
ಯಯೌ ನ ಏಷ್ಟೋರ್ಹಿ ಭವೇತ್ ಪ್ರತಿಗ್ರಹಃ ।
ದೋಷಾಯ ಯಸ್ಮಾತ್ ಸ ಪಿತಾಖಿಲಸ್ಯ
ಸ್ವಾಮೀ ಗುರುಃ ಪರಮಂ ದೈವತಂ ಚ ॥೧೧॥

ಇನ್ನೊಬ್ಬರಿಂದ ಏನೂ ಸ್ವೀಕರಿಸುವುದನ್ನೇ ಬಿಟ್ಟಿದ್ದರೂ ದ್ರೋಣ ಪರಶುರಾಮನ ಬಳಿಗೆ ಹೋದ. ಹರಿಯಿಂದ ಸ್ವೀಕರಿಸುವುದು ದೋಷಕರವಲ್ಲ ತಾನೆ! ಏಕೆಂದರೆ ಅವನು ಎಲ್ಲರಿಗೂ ತಂದೆ, ಸ್ವಾಮಿ, ಗುರು ಮತ್ತು ಪರದೇವತೆ!

ದೃಷ್ಟ್ವಾಚ್ಛೈನಂ ಜಾಮದಗ್ನ್ಯೋಽಪ್ಯಚಿಂತಯತ್
ದ್ರೋಣಂ ಕರ್ತುಂ ಕ್ಷಿತಿಭಾರಾಪನೋದೇ ।
ಹೇತುಂ ಸುರಾಣಾಂ ನರಯೋನಿಜಾನಾಂ
ಹಂತಾ ಚಾಯಂ ಸ್ಯಾತ್ ಸಹ ಪುತ್ರೇಣ ಚೇತಿ ॥೧೨॥

ಪರಶುರಾಮ ದ್ರೋಣನನ್ನು ಕಂಡು ಈತ ಮಗನೊಂದಿಗೆ ಮಾನವಯೋನಿಯಲ್ಲಿ ಅವತರಿಸಿದ ದೇವತೆಗಳಿಗೆ ಹಂತಕನಾಗಬಲ್ಲ ಎಂದು ಅವನನ್ನು ಭೂಭಾರಹರಣ ಕಾರ್ಯದಲ್ಲಿ ನಿಮಿತ್ತವಾಗಿ ಮಾಡಲು ಆಲೋಚಿಸಿದ.

ತೇಷಾಂ ವೃದ್ಧಿಃ ಸ್ಯಾತ್ ಪಾಂಡವಾರ್ಥೇ ಹತಾನಾಂ
ಮೋಕ್ಷೋಽಪಿ ಸೌಖ್ಯಸ್ಯ ನ ಸಂತತಿಶ್ಚ ।
ಯೋಗ್ಯಾ ಸುರಾಣಾಂ ಕಲಿಜಾ ಸುಪಾಪಾಃ
ಪ್ರಾಯೋ ಯಸ್ಮಾತ್ ಕಲಿಜಾಃ ಸಂಭವಂತಿ ॥೧೩॥

ಪಾಂಡವರಿಗಾಗಿ ಹೋರಾಡಿ ಮಡಿದರೆ ಆ ದೇವತೆಗಳಿಗೆ ಮೋಕ್ಷದಲ್ಲಿ ಆನಂದ ವೃದ್ಧಿಯಾಗುವುದು. ಮತ್ತು ಕಲಿಯುಗದಲ್ಲಿ ಹುಟ್ಟುವ ಸಂತತಿ ಅವರಿಗೆ ಯೋಗ್ಯವೂ ಆಗುವುದಿಲ್ಲ. ಏಕೆಂದರೆ ಕಲಿಯುಗದಲ್ಲಿ ಹುಟ್ಟುವವರು ಪ್ರಾಯಃ ಮಹಾ ಪಾಪಿಗಳಾಗಿರುತ್ತಾರೆ.

ನ ದೇವಾನಾಮಾಶತಂ ಪೂರುಷಾ ಹಿ
ಸಂತಾನಜಾಃ ಪ್ರಾಯಶಃ ಪಾಪಯೋಗ್ಯಾಃ ।
ನಾಕಾರಣಾತ್ ಸಂತತೇರಪ್ಯಭಾವೋ
ಯೋಗ್ಯಃ ಸುರಾಣಾಂ ಸದಮೋಘರೇತಸಾಮ್ ॥೧೪॥

ದೇವತೆಗಳ ಸಂತತಿಯಲ್ಲಿ ಹುಟ್ಟುವವರು ನೂರು ತಲೆಗಳವರೆಗೆ ಪ್ರಾಯಃ ಪಾಪಯೋಗ್ಯರಿರುವುದಿಲ್ಲ. ನಿರ್ದುಷ್ಟ ಅಮೋಘ ರೇತಸ್ಸುಳ್ಳ ದೇವತೆಗಳಿಗೆ ಶಾಪಾದಿ ಪ್ರಬಲಕಾರಣವಿಲ್ಲದೆ ಸಂತತಿ ನಿಲ್ಲುವುದೂ ಕೂಡುವುದಿಲ್ಲ.

ಅವ್ಯುಚ್ಛಿನ್ನೇ ಸಕಲಾನಾಂ ಸುರಾಣಾಂ
ತಂತೌ ಕಲಿರ್ನೋ ಭವಿತಾ ಕಥಂಚಿತ್ ।
ತಸ್ಮಾದುತ್ಪಾದ್ಯಾಃ ಸರ್ವ ಏತೇ ಸುರಾಂಶಾ
ಏತೇನ ಸಾಕಂ ತನಯೇನ ವೀರಾಃ ॥೧೫॥

ಎಲ್ಲ ದೇವತೆಗಳ ಸಂತತಿಯೂ ಅವಿಚ್ಛಿನ್ನವಾಗಿ ಮುಂದುವರಿದರೆ ಕಲಿಯುಗ ಸರ್ವಥಾ ಉಂಟಾಗದು. ಅದರಿಂದ ದೇವಾಂಶರಾದ ಈ ವೀರರೆಲ್ಲರೂ ದ್ರೋಣ ಅಶ್ವತ್ಥಾಮರಿಂದ ನಾಶಹೊಂದಬೇಕು.

ಏವಂ ವಿಚಿಂತ್ಯಾಪ್ರತಿಮಃ ಸ ಭಾರ್ಗವೋ
ಬಭಾಷ ಈಷತ್ ಸ್ಮಿತಶೋಚಿಷಾ ಗಿರಾ ।
ಅನಂತಶಕ್ತಿಃ ಸಕಲೇಶ್ವರೋಽಪಿ ತ್ಯಕ್ತಂ
ಸರ್ವಂ ನಾದ್ಯ ವಿತ್ತಂ ಮಮಾಸ್ತಿ ॥೧೬॥

ಹೀಗೆ ಆಲೋಚಿಸಿ ಅನುಪಮನಾದ ಪರಶುರಾಮ ಅನಂತಶಕ್ತಿ ಉಳ್ಳವ ಸರ್ವೇಶ್ವರನಾಗಿದ್ದರೂ ಮಂದಹಾಸದ ಕಾಂತಿ ಬೀರುತ್ತ ಹೇಳಿದ, 'ನಾನು ಎಲ್ಲವನ್ನೂ ಕೊಟ್ಟುಬಿಟ್ಟಿದ್ದೇನೆ. ಈಗ ನನ್ನಲ್ಲಿ ಏನೂ ಸಂಪತ್ತು ಇಲ್ಲ.

ಆತ್ಮಾ ವಿದ್ಯಾ ಶಸ್ತ್ರಮೇತಾವದಸ್ತಿ
ತೇಷಾಂ ಮಧ್ಯೇ ರುಚಿತಂ ತ್ವಂ ಗೃಹಾಣ ।
ಉಕ್ತಃ ಸ ಇತ್ಥಂಪ್ರವಿಚಿಂತ್ಯ ವಿಪ್ರೋ
ಜಗಾದ ಕಸ್ತ್ವದ್ಗ್ರಹಣೇ ಸಮರ್ಥಃ ॥೧೭॥

'ಈಗ ನಾನು, ನನ್ನ ಬ್ರಹ್ಮವಿದ್ಯೆ, ಆಯುಧ- ಇಷ್ಟು ಮಾತ್ರ ಇವೆ. ಅವುಗಳಲ್ಲಿ ನಿನಗೆ ಇಷ್ಟವಾದುದನ್ನು ನೀನು ಪಡೆಯಬಹುದು'. ಪರಶುರಾಮ ಹೀಗೆ ಹೇಳಿದಾಗ ದ್ರೋಣ ಆಲೋಚಿಸಿ ಹೇಳಿದ, 'ನಿನ್ನನ್ನು ಪಡೆದು ಆಳುವ ಸಮರ್ಥರು ಯಾರು?'

ಸರ್ವೇಶಿತಾ ಸರ್ವಪರಃ ಸ್ವತಂತ್ರ-
ಸ್ತ್ವಮೇವ ಕೋಽನ್ಯಃ ಸದೃಶಸ್ತವೇಶ ।
ಸಾಮ್ಯಂ ತವೇಚ್ಛನ್ ಪ್ರತಿಯಾತ್ಯಧೋ ಹಿ
ಯಸ್ಮಾನ್ನ ಚೋತ್ಥಾತುಮಲಂ ಕದಾಚಿತ್ ॥೧೮॥

ಸರ್ವೇಶ್ವರ ಸ್ವತಂತ್ರ ಸರ್ವೋತ್ತಮ ನೀನೆ. ಪ್ರಭು, ನಿನಗೆ ಸದೃಶನಿನ್ನೊಬ್ಬ ಯಾರು? ನಿನ್ನ ಸಾಮ್ಯವನ್ನು ಬಯಸುವವ ಅಧೋಗತಿ ಹೊಂದುತ್ತಾನೆ. ಅಲ್ಲಿಂದ ಎಂದೂ ಮೇಲೆ ಬರಲು ಶಕ್ತನಾಗುವುದಿಲ್ಲ. ಇನ್ನು ನಿನ್ನನ್ನು ಆಳಲು ಬಯಸಿದರೆ ಹೇಗೆ?

ಸರ್ವೋತ್ತಮಸ್ಯೇಶ ತವೋಚ್ಚಶಸ್ತ್ರೈಃ
ಕಾರ್ಯಂ ಕಿಮಸ್ಮಾಕಮನುದ್ಬಲಾನಾಮ್ ।
ವಿದ್ಯೈವ ದೇಯಾ ಭವತಾ ತತೋಽಜ
ಸರ್ವಪ್ರಕಾಶಿನ್ಯಮಲಾ ಸುಸೂಕ್ಷ್ಮಾ ॥೧೯॥

ಜನನ ರಹಿತನಾದ ಪ್ರಭುವೆ, ಸರ್ವೋತ್ತಮನಾದ ನಿನ್ನ ಉನ್ನತವಾದ ಆಯುಧಗಳಿಂದ ದುರ್ಬಲರಾದ ನಮಗೆ ಏನು ಪ್ರಯೋಜನ? ಆದ್ದರಿಂದ ನಿರ್ಮಲವಾದ ಅತ್ಯಂತ ಸೂಕ್ಷ್ಮವಾದ ಸರ್ವಪ್ರಕಾಶಕವಾದ ವಿದ್ಯೆಯನ್ನೆ ನನಗೆ ನೀಡು.

ಇತೀರಿತಸ್ತತ್ತ್ವವಿದ್ಯಾದಿಕಾಃ ಸ
ವಿದ್ಯಾಃ ಸರ್ವಾಃ ಪ್ರದದೌ ಸಾಸ್ತ್ರಶಸ್ತ್ರಾಃ ।
ಅಬ್ದದ್ವಿಷಟ್ಕೇನ ಸಮಾಪ್ಯ ತಾಃ ಸ
ಯಯೌ ಸಖಾಯಾಂ ದ್ರುಪದಂ ಮಹಾತ್ಮಾ ॥೨೦॥

ದ್ರೋಣ ಹೀಗೆ ಹೇಳಿದಾಗ ಪರಶುರಾಮ ಅವನಿಗೆ ತತ್ತ್ವವಿದ್ಯೆ ಮುಂತಾದ ಸಕಲ ವಿದ್ಯೆಗಳನ್ನೂ ಜೊತೆಗೆ ಅಸ್ತ್ರಶಸ್ತ್ರವಿದ್ಯೆಗಳನ್ನೂ ನೀಡಿದ.

★ ★ ★ ★

ನೂರ ಇಪ್ಪತ್ತೆಂಟನೆಯ ಅಧ್ಯಾಯ

(ದ್ರೋಣರ ಉತ್ಪತ್ತಿ, ಪರಶುರಾಮರಿಂದ ಅಸ್ತ್ರಪ್ರಾಪ್ತಿ. ಅಶ್ವತ್ಥಾಮರ ಜನನ.)

ವೈಶಂಪಾಯನಃ

ಮಹರ್ಷಿಸ್ತು ಭರದ್ವಾಜೋ ಹವಿರ್ಧಾನೇऽಭವತ್ ಪುರಾ ।
ಗಂಗಾದ್ವಾರಂ ಪ್ರತಿ ಮಹಾನ್ ಬಭೂವರ್ಷಿರ್ಮಹಾತಪಾಃ ॥೧॥

ಮಹರ್ಷಿಗಳಾದ ಭರದ್ವಾಜರು ಗಂಗಾದ್ವಾರದ ಸಮೀಪದಲ್ಲಿ ಹವಿರ್ಧಾನ ಎಂಬ ಆಶ್ರಮದಲ್ಲಿ ಹಿಂದೆ ಉಗ್ರವಾದ ತಪಸ್ಸನ್ನು ಆಚರಿಸಿಕೊಂಡಿದ್ದರು.

ಭರದ್ವಾಜೋ ಮಹಾಪ್ರಾಜ್ಞಃ ಸತತಂ ಸಂಶಿತವ್ರತಃ ।
ಸೋऽಭಿಷೇಕ್ತುಂ ತತೋ ಗಂಗಾಂ ಪೂರ್ವಮೇವಾಗತಾಂ ನದೀಮ್ ।
ದದರ್ಶಾಪ್ಸರಸಂ ಸಾಕ್ಷಾದ್ ಘೃತಾಚೀಮಾಪ್ಲುತಾಮೃಷಿಃ ॥೨॥

ಮಹಾಪ್ರಾಜ್ಞರೂ, ಯಾವಾಗಲೂ ವ್ರತನಿಷ್ಠರೂ ಆದ ಆ ಭರದ್ವಾಜರು ಸ್ನಾನ ಮಾಡುವ ಸಲುವಾಗಿ ಗಂಗೆಯ ಬಳಿಗೆ ಹೋಗಿ ತಮಗಿಂತಲೂ ಮೊದಲು ನದಿಗೆ ಬಂದು ಆಗ ತಾನೇ ಸ್ನಾನವನ್ನು ಮಾಡಿದ್ದ ಅಪ್ಸರೆಯಾದ ಘೃತಾಚಿಯನ್ನು ನೋಡಿದರು.

ರೂಪಯೌವನಸಂಪನ್ನಾಂ ಮದದೃಪ್ತಾಂ ಮದಾಲಸಾಮ್ ।
ತಸ್ಯಾ ವಾಯುರ್ನದೀತೀರೇ ವಸನಂ ವ್ಯಹರತ್ ತದಾ ।
ಅಪಕೃಷ್ಟಾಂಬರಾಂ ದೃಷ್ಟ್ವಾ ತಾಮೃಷಿಶ್ಚಕಮೇ ತದಾ ॥೩॥

ರೂಪಯೌವನಸಂಪನ್ನಳಾದ, ಮದಾಲಸಳಾದ ಮತ್ತು ಮದದ ದರ್ಪದಿಂದ ಕೂಡಿದ್ದ ಅವಳ ವಸ್ತ್ರವನ್ನು, ನದಿತೀರದಲ್ಲಿದ್ದ ವಾಯುವು ಹಾರಿಸಿತು. ಶರೀರದ ಮೇಲೆ ವಸ್ತ್ರವಿಲ್ಲದ ಅವಳನ್ನು ನೋಡಿ ಋಷಿಗಳು ಅವಳನ್ನು ಕಾಮಿಸಿದರು.

ತತ್ರ ಸಂರಕ್ತಮನಸೋ ಭರದ್ವಾಜಸ್ಯ ಧೀಮತಃ ।
ಹೃಷ್ಟಸ್ಯ ರೇತಃ ಚಸ್ಕಂದ ತದೃಷಿರ್ದ್ರೋಣ ಆದಧತ್ ॥೪॥

ಅವಳಲ್ಲಿ ಲಗ್ನವಾದ ಮನಸ್ಸುಳ್ಳವರಾಗಿ ಸಂತೋಷಗೊಂಡ ಮೇಧಾವಿಗಳಾದ ಭರದ್ವಾಜರಿಗೆ ವೀರ್ಯಸ್ಖಲನವಾಯಿತು. ಅವರು ಅದನ್ನು ಒಂದು ದ್ರೋಣ ಪರಿಮಾಣವುಳ್ಳ ತಮ್ಮ ಕಲಶದಲ್ಲಿ (ಕಮಂಡಲುವಿನಲ್ಲಿ) ಹಿಡಿದರು.

ತತಃ ಸಮಭವದ್ ದ್ರೋಣಃ ಕುಮಾರಸ್ತಸ್ಯ ಧೀಮತಃ ।
ಅಧ್ಯಗೀಷ್ಟ ಸ ವೇದಾಂಶ್ಚ ವೇದಾಂಗಾನಿ ಚ ಸರ್ವಶಃ ॥೫॥

ಆ ಕಲಶದಿಂದ ಮೇಧಾವಿಗಳಾದ ಅವರಿಗೆ ಪುತ್ರರಾಗಿ ದ್ರೋಣರು ಉದಯಿಸಿದರು. ಅವರು ಎಲ್ಲಾ ವೇದಗಳನ್ನೂ ಮತ್ತು ವೇದಾಂಗಗಳನ್ನೂ ಅಧ್ಯಯನ ಮಾಡಿದರು.

ಅಗ್ನೇರಸ್ತ್ರಮುಪಾದಾಯ ಯದ್ ಋಷಿರ್ವೇದ ಕಾಶ್ಯಪಃ ।
ಅಧ್ಯಗಚ್ಛದ್ ಭರದ್ವಾಜಸ್ತದಸ್ತ್ರಂ ದೇವಕಾರ್ಯತಃ ॥೬॥

ಕಾಶ್ಯಪಋಷಿಗಳು ಯಾವ ಶ್ರೇಷ್ಠವಾದ ಅಗ್ನ್ಯಸ್ತ್ರವನ್ನು ತಿಳಿದಿದ್ದರೋ, ದ್ರೋಣರ ತಂದೆಯಾದ ಭರದ್ವಾಜರು ದೇವಕಾರ್ಯದ ಸಲುವಾಗಿ ಆ ಅಸ್ತ್ರವನ್ನು ಸಂಪಾದಿಸಿದರು.

ಅಗ್ನಿವೇಶ್ಯಂ ಮಹಾಭಾಗಂ ಭಾರದ್ವಾಜಃ ಪ್ರತಾಪವಾನ್ ।
ಪ್ರತ್ಯಪಾದಯದಾಗ್ನೇಯಮಸ್ತ್ರಮಸ್ತ್ರವಿದಾಂ ವರಃ ।
ಕನಿಷ್ಠಜಾತಂ ಸ ಮುನಿರ್ಭ್ರಾತಾ ಭ್ರಾತರಮಂತಿಕೇ ॥೭॥

ಅಸ್ತ್ರವೇತ್ತರಲ್ಲಿ ಶ್ರೇಷ್ಠರೂ, ಪ್ರತಾಪಶಾಲಿಗಳೂ ಆದ ಭರದ್ವಾಜರು ತಮ್ಮ ತಮ್ಮನ ಮಗನಾದ ಮಹಾನುಭಾವರಾದ ಅಗ್ನಿವೇಶ್ಯ ಋಷಿಗಳಿಗೆ ಆ ಆಗ್ನೇಯಾಸ್ತ್ರವನ್ನು ಉಪದೇಶ ಮಾಡಿದರು.

ಅಗ್ನಿವೇಶ್ಯಸ್ತಥಾ ದ್ರೋಣಂ ತದಾ ಭರತಸತ್ತಮ ।
ಭಾರದ್ವಾಜೇ ಸ ಚಾಗ್ನೇಯಂ ಮಹಾಸ್ತ್ರಂ ಪ್ರತ್ಯವೇದಯತ್ ॥೮॥

ಎಲೈ ಭರತಶ್ರೇಷ್ಠನೇ. ಅಗ್ನಿವೇಶ್ಯರು ತನ್ನ ತಮ್ಮಂದಿರಾದ ಭರದ್ವಾಜರ ಪುತ್ರರಾದ ದ್ರೋಣರಿಗೆ ಆ ಶ್ರೇಷ್ಠವಾದ ಆಗ್ನೇಯಾಸ್ತ್ರವನ್ನು ಉಪದೇಶಿಸಿದರು.

ಸ ವೈ ಯುಕ್ತೋ ಗುರೋರ್ಭಾವೇ ಯದೀಚ್ಛೇತ್ ಕೃಪಣಃ ಸುಖಮ್ ।
ಭೀಷ್ಮೋಽಪ್ಯಲಪದೇವಂ ಸ ಭಾರದ್ವಾಜಪರೀಪ್ಸಯಾ ।
ಇತಿ ಸಂಚಿಂತ್ಯ ಗಾಂಗೇಯಃ ತದಾ ಭರತಸತ್ತಮಃ ॥೯॥

ಸ್ವತಃ ಕಷ್ಟದಲ್ಲಿರುವ ಅವರು ಸುಖವನ್ನು ಬಯಸಿದರೆ, ನಮ್ಮ ಪೌತ್ರರಿಗೆ ಆಚಾರ್ಯರಾಗಲು ಅರ್ಹರಾಗಿದ್ದಾರೆ ಎಂದು ಅವರನ್ನು ಸಂಪಾದಿಸುವ ದೃಷ್ಟಿಯಿಂದ ಭರತಶ್ರೇಷ್ಠರಾದ ಭೀಷ್ಮರು ತಮ್ಮ ಮನಸ್ಸಿನಲ್ಲಿ ಹೀಗೆ ಹೇಳಿಕೊಂಡರು.

ದ್ರೋಣಾಯ ವೇದವಿದುಷೇ ಭಾರದ್ವಾಜಾಯ ಧೀಮತೇ ।
ಪಾಂಡವಾನ್ ಕೌರವಾಂಶ್ಚೈವ ದದೌ ಶಿಷ್ಯಾನ್ ನರರ್ಷಭ ॥೧೦॥

ಎಲೈ ರಾಜನೇ, ಭರತಶ್ರೇಷ್ಠರಾದ ಭೀಷ್ಮರು ಹೀಗೆ ಯೋಚಿಸಿ, ಆಗ ವೇದಜ್ಞರೂ, ಮೇಧಾವಿಗಳೂ, ಭರದ್ವಾಜ ಪುತ್ರರೂ ಆದ ದ್ರೋಣರಿಗೆ ಪಾಂಡವರನ್ನು ಮತ್ತು ಕೌರವರನ್ನು ಶಿಷ್ಯರನ್ನಾಗಿ ಒಪ್ಪಿಸಿದರು.

ಶಾಸ್ತ್ರತಃ ಪೂಜಿತಶ್ಚೈವ ಸಮ್ಯಕ್ ತೇನ ಮಹಾತ್ಮನಾ ।
ಸ ಭೀಷ್ಮೇಣ ಮಹಾಭಾಗಃ ತುಷ್ಟೋಽಸ್ತ್ರವಿದುಷಾಂ ವರಃ ।
ಪ್ರತಿಜಗ್ರಾಹ ತಾನ್ ಸರ್ವಾನ್ ಶಿಷ್ಯತ್ವೇನ ಮಹಾಯಶಾಃ ॥೧೧॥

ಎಲೈ ರಾಜನೇ, ಶಾಸ್ತ್ರೋಕ್ತವಾಗಿ, ಮಹಾತ್ಮರಾದ ಭೀಷ್ಮರಿಂದ ಚೆನ್ನಾಗಿ ಪೂಜಿಸಲ್ಪಟ್ಟ ಮಹಾನುಭಾವರಾದ, ಅಸ್ತ್ರವೇತ್ತರಲ್ಲಿ ಶ್ರೇಷ್ಠರಾದ, ಮಹಾಕೀರ್ತಿವಂತರಾದ ದ್ರೋಣರು ಸಂತೋಷಗೊಂಡು ಅವರೆಲ್ಲರನ್ನೂ ಶಿಷ್ಯರನ್ನಾಗಿ ಸ್ವೀಕರಿಸಿದರು.

ಶಿಕ್ಷಯಾಮಾಸ ಚ ದ್ರೋಣೋ ಧನುರ್ವೇದಮಶೇಷತಃ ।
ತೇಽಚಿರೇಣೈವ ಕಾಲೇನ ಸರ್ವಶಸ್ತ್ರವಿಶಾರದಾಃ ।
ಬಭೂವುಃ ಕೌರವಾ ರಾಜನ್ ಪಾಂಡವಾಶ್ಚಾಮಿತೌಜಸಃ ॥೧೨॥

ದ್ರೋಣರು ಅವರೆಲ್ಲರಿಗೂ ಸಮಗ್ರವಾದ ಧನುರ್ವೇದವನ್ನು ಕಲಿಸಿದರು. ಎಲೈ ರಾಜನೇ, ಕೌರವರು ಮತ್ತು ಅಮಿತ ಪರಾಕ್ರಮಿಗಳಾದ ಪಾಂಡವರು ಅಲ್ಪಕಾಲದಲ್ಲಿಯೇ ಸರ್ವಶಸ್ತ್ರವಿಶಾರದರಾದರು.

ಜನಮೇಜಯಃ

ಕಥಂ ಸಮಭವದ್ ದ್ರೋಣಃ ಕಥಂ ಚಾಸ್ತ್ರಾಣ್ಯವಾಪ್ತವಾನ್ ।
ವಾಽಸ್ತಿ ಕುತ್ರ ನನು ಬ್ರಹ್ಮನ್ ಕಸ್ಯ ಪುತ್ರಃ ಪ್ರತಾಪವಾನ್ ॥೧೩॥

ಕಥಂ ಚಾಸ್ಯ ಸುತೋ ಜಾತಃ ಮಹಾಶಸ್ತ್ರಾಸ್ತ್ರವಿಕ್ರಮಃ ।
ಏತದಿಚ್ಛಾಮ್ಯಹಂ ಬ್ರಹ್ಮನ್ ನಿಖಿಲೇನಾನುವೇದಿತುಮ್ ॥೧೪॥

- ಬ್ರಾಹ್ಮಣರೇ, ದ್ರೋಣರು ಹೇಗೆ ಜನಿಸಿದರು? ಹೇಗೆ ಅಸ್ತ್ರಗಳನ್ನು ಸಂಪಾದಿಸಿದರು? ಎಲ್ಲಿವಾಸ ಮಾಡಿದರು? ಮಹಾಶಸ್ತ್ರಾಸ್ತ್ರಪರಾಕ್ರಮಿಗಳಾದ ಅವರ ಪ್ರತಾಪಶಾಲಿಗಳಾದ ಪುತ್ರರು ಹೇಗೆ ಜನಿಸಿದರು? ನಾನು ಇದನ್ನೆಲ್ಲಾ ಸರಿಯಾಗಿ ತಿಳಿಯಲು ಬಯಸುತ್ತೇನೆ.

ವೈಶಂಪಾಯನಃ

ಭರದ್ವಾಜಸಖಾ ಚಾಸೀತ್ ಪೃಷತೋ ನಾಮ ಪಾರ್ಥಿವಃ ।
ತಸ್ಯಾಪಿ ದ್ರುಪದೋ ನಾಮ ತದಾ ಸಮಭವತ್ ಸುತಃ ॥೧೫॥

ಭರದ್ವಾಜರಿಗೆ ಪೃಷತ ಎಂಬ ಪಾಂಚಾಲರಾಜನು ಸ್ನೇಹಿತನಾಗಿದ್ದನು. ಅವನಿಗೆ ದ್ರುಪದನೆಂಬ ಪುತ್ರನು ಜನಿಸಿದನು.

ಸ ನಿತ್ಯಮಾಶ್ರಮಂ ಗತ್ವಾ ದ್ರೋಣೇನ ಸಹ ಪಾರ್ಷತಃ ।
ಚಿಕ್ರೀಡಾಧ್ಯಯನಂ ಚೈವಂ ಚಕಾರ ಕ್ಷತ್ರಿಯರ್ಷಭಃ ॥೧೬॥

ಕ್ಷತ್ರಿಯಶ್ರೇಷ್ಠನಾದ ಪೃಷತನ ಮಗನಾದ ಪಾರ್ಷತನು (ದ್ರುಪದನು) ನಿತ್ಯವೂ ಭರದ್ವಾಜರ ಆಶ್ರಮಕ್ಕೆ ಬಂದು ದ್ರೋಣರ ಜೊತೆಯಲ್ಲಿ ಆಟವನ್ನು ಆಡಿ ಅಧ್ಯಯನವನ್ನೂ ಮಾಡುತ್ತಿದ್ದನು.

ಕ್ಷತ್ರೇ ವ್ಯತೀತೇ ಪೃಷತೇ ಸ ರಾಜಾ ದ್ರುಪದೋಽಭವತ್ ।
ಪಾಂಚಾಲೇಷು ಮಹಾಬಾಹುರುತ್ತರೇಷು ನರೇಶ್ವರಃ ।
ಭರದ್ವಾಜೋಽಪಿ ಭಗವಾನ್ ಆರುರೋಹ ದಿವಂ ತದಾ ॥೧೭॥

ಪೃಷತನು ಕಾಲವಶನಾಗುತ್ತಿರಲು, ಮಹಾಬಾಹುವಾದ ದ್ರುಪದನು ಉತ್ತರ ಪಾಂಚಾಲದಲ್ಲಿ ರಾಜನಾದನು. ಪೂಜ್ಯರಾದ ಭರದ್ವಾಜರು ಸಹ ಸ್ವರ್ಗವನ್ನು ಸೇರಿದರು.

ತತಃ ಪಿತೃನಿಯುಕ್ತಾತ್ಮಾ ಪುತ್ರಲೋಭಾದ್ ಯಶಸ್ವಿನೀಮ್ ।
ಶಾರದ್ವತೀಂ ತದಾ ದ್ರೋಣಃ ಕೃಪೀಂ ಭಾರ್ಯಾಮವಿಂದತ ।
ಅಗ್ನಿಹೋತ್ರೇ ಚ ಧರ್ಮೇ ಚ ಯಮೇ ಚ ಸತತಂ ರತಾಮ್ ॥೧೮॥

ತಂದೆಯ ಆದೇಶವನ್ನು ಹೊಂದಿದ್ದ ದ್ರೋಣರು ಪುತ್ರನನ್ನು ಪಡೆಯುವ ಆಸೆಯಿಂದ ಅಗ್ನಿಹೋತ್ರದಲ್ಲಿಯೂ, ಧರ್ಮದಲ್ಲಿಯೂ, ಯಮನಿಯಮಗಳಲ್ಲಿಯೂ

ಯಾವಾಗಲೂ ಆಸಕ್ತಳಾದ ಶರದ್ವಂತನ ಮಗಳಾದ ಕೀರ್ತಿಶಾಲಿನಿಯಾದ ಕೃಪಿಯನ್ನು ಪತ್ನಿಯಾಗಿ ಪಡೆದರು.

ಅಲಭದ್ ಗೌತಮೀ ಪುತ್ರಮಶ್ವತ್ಥಾಮಾನಮಚ್ಯುತಮ್ ।
ಸ ಜಾತಮಾತ್ರೋ ವ್ಯನದದ್ ಯಥೈವೋಚ್ಚೈಶ್ರವಾ ಹಯಃ ॥೧೯॥

ಗೌತಮಕುಲದಲ್ಲಿ ಜನಿಸಿದ ಕೃಪಿಯು ಪರಾಕ್ರಮಚ್ಯುತಿಯನ್ನು ಹೊಂದದ ಅಶ್ವತ್ಥಾಮನೆಂಬ ಪುತ್ರನನ್ನು ಪಡೆದಳು. ಅವನು ಹುಟ್ಟಿದ ತಕ್ಷಣ ಉಚ್ಚೈಶ್ರವ ಹಯದಂತೆ ಕೆನೆದನು.

ತಚ್ಛ್ರುತ್ವಾಽಂತರ್ಹಿತಂ ಭೂತಮಂತರಿಕ್ಷಸ್ಥಮಬ್ರವೀತ್ ।
ಅಶ್ವಸ್ಯೇವಾಸ್ಯ ಯತ್ ಥಾಮ ನದತಃ ಪ್ರದಿಶೋ ಗತಮ್ ॥೨೦॥

ಅಶ್ವತ್ಥಾಮೈವ ಬಾಲೋಽಯಂ ತಸ್ಮಾನ್ನಾಮ್ನಾ ಭವಿಷ್ಯತಿ ।
ಸುತೇನ ತೇನ ಸುಪ್ರೀತೋ ಭಾರದ್ವಾಜಸ್ತತೋಽಭವತ್ ॥೨೧॥

ಅದನ್ನು ಕೇಳಿದ ಅದೃಶ್ಯರಾದ ಒಂದು ಭೂತವು (ದೇವತೆಯು) ಇವನ ನಾದವು ಅಶ್ವದ ಕೆನೆತದಂತೆ ದಿಕ್ಕುದಿಕ್ಕುಗಳಿಗೆ ಹೋದದ್ದರಿಂದ ಈ ಬಾಲಕನಿಗೆ ಅಶ್ವತ್ಥಾಮನೆಂದೇ ಹೆಸರಾಗುವುದು ಎಂದು ಹೇಳಿತು. ಆ ಮಗನನ್ನು ಪಡೆದು ದ್ರೋಣರು ಸಂತೋಷಗೊಂಡರು.

ತತ್ರೈವ ಚ ವಸನ್ ಧೀಮಾನ್ ಧನುರ್ವೇದಪರೋಽಭವತ್ ।
ಸ ಶುಶ್ರಾವ ಮಹಾತ್ಮಾನಂ ಜಾಮದಗ್ನ್ಯಂ ಪರಂತಪಮ್ ।
ಬ್ರಾಹ್ಮಣೇಭ್ಯಸ್ತದಾ ರಾಜನ್ ದಿತ್ಸಂತಂ ವಸು ಸರ್ವಶಃ ॥೨೨॥

ಮೇಧಾವಿಗಳಾದ ದ್ರೋಣರು ಅಲ್ಲಿಯೇ ವಾಸ ಮಾಡುತ್ತಾ ಧನುರ್ವೇದಪರರಾದರು. ಎಲೈ ರಾಜನೇ ಅವರು ಮಹಾತ್ಮರೂ, ಜಮದಗ್ನಿಪುತ್ರರೂ, ಪರಂತಪರೂ ಆದ ಪರಶುರಾಮರು ಬ್ರಾಹ್ಮಣರಿಗೆ ತಮ್ಮ ಎಲ್ಲಾ ಧನವನ್ನೂ ಕೊಡುವರೆಂಬ ವಾರ್ತೆಯನ್ನು ಕೇಳಿದರು.

ಸ ರಾಮಸ್ಯ ಧನುರ್ವೇದೇ ದಿವ್ಯೇಷು ವಿವಿಧೇಷು ಚ ।
ಶ್ರುತ್ವಾಽಸ್ತ್ರೇಷು ಮತಿಂ ಚಕ್ರೇ ನೀತಿಶಾಸ್ತ್ರೇಷು ಕೌಶಲಮ್ ॥೨೩॥

ಅವರು ಧನುರ್ವೇದದಲ್ಲಿಯೂ, ವಿವಿಧವಾದ ದಿವ್ಯಾಸ್ತ್ರಗಳಲ್ಲಿಯೂ, ನೀತಿಶಾಸ್ತ್ರಗಳಲ್ಲಿಯೂ ಪರಶುರಾಮರ ನಿಪುಣತೆಯನ್ನು ಕೇಳಿ ಅವರ ಬಳಿಗೆ ಹೋಗಲು ನಿರ್ಧರಿಸಿದರು.

ತತಃ ಸಮಾನೈರ್ವ್ರತಿಭಿಸ್ತಪೋಯುಕ್ತೈರ್ಮಹಾತಪಾಃ ।
ವೃತಃ ಪ್ರಾಯಾನ್ಮಹಾಬಾಹುರ್ಮಹೇಂದ್ರಂ ವಸುಧಾಧರಮ್ ॥೨೪॥

ಅನಂತರ ಅವರು ಸಮಾನ ವ್ರತವನ್ನು ಧರಿಸಿದ ತಪೋನಿಷ್ಠರಾದ ಅನೇಕ ಋಷಿಗಳ ಜೊತೆಯಲ್ಲಿ ಹೋಗಿ ಮಹೇಂದ್ರ ಪರ್ವತದಲ್ಲಿದ್ದ ಪರಶುರಾಮರನ್ನು ಸೇರಿದರು.

ತತೋ ಮಹೇಂದ್ರಮಾಸಾದ್ಯ ಭಾರದ್ವಾಜೋ ಮಹಾತಪಾಃ ।
ಕ್ಷತ್ರಘ್ನಂ ತಮಮಿತ್ರಘ್ನಮಪಶ್ಯದ್ ಭೃಗುನಂದನಮ್ ॥೨೫॥

ಮಹಾತಪಸ್ವಿಗಳಾದ, ಭರದ್ವಾಜರ ಪುತ್ರರಾದ ದ್ರೋಣರು ಮಹೇಂದ್ರ ಪರ್ವತವನ್ನು ತಲುಪಿ, ಕ್ಷತ್ರಿಯ ಕುಲವನ್ನೂ, ಶತ್ರುಗಳನ್ನೂ ಸಂಹಾರ ಮಾಡಿದ ಭೃಗುನಂದನರಾದ ಪರಶುರಾಮರನ್ನು ನೋಡಿದರು.

ಸ ರಾಮಾಯಾತ್ಮನೋ ನಾಮ ಜನ್ಮ ಚಾಂಗಿರಸೇ ಕುಲೇ ।
ನಿವೇದ್ಯಾಂಗಿರಸೋ ಭೂಮೌ ಪಾದಾವಸ್ಯಾಭ್ಯವಾದಯತ್ ॥೨೬॥

ತಮಬ್ರವೀನ್ಮಹಾತೇಜಾ ಕ್ಷತ್ರಹಾ ವಿಪ್ರಸತ್ತಮಃ ।
ಸ್ವಾಗತಂ ಕುಶಲಂ ತೇಽಸ್ತು ಕಿಮಿಚ್ಛಸಿ ಮಹಾದ್ಯುತೇ ॥೨೭॥

ಅವರು ತಮ್ಮ ನಾಮವನ್ನೂ ಆಂಗೀರಸಕುಲದಲ್ಲಿ ತಮ್ಮ ಜನ್ಮವನ್ನೂ ಅವರಿಗೆ ನಿವೇದಿಸಿ ಭೂಮಿಯ ಮೇಲೆ ಪರಶುರಾಮರ ಪಾದಗಳಿಗೆ ನಮಸ್ಕರಿಸಿದರು. ಮಹಾತೇಜಸ್ವಿಯೂ, ಕ್ಷತ್ರಕುಲಾಂತಕರೂ, ವಿಪ್ರಶ್ರೇಷ್ಠರೂ ಆದ ಪರಶುರಾಮರು ದ್ರೋಣರನ್ನುದ್ದೇಶಿಸಿ ಮಹಾದ್ಯುತಿಯೇ, ನಿನಗೆ ಸ್ವಾಗತ. ನಾವು ಕುಶಲದಿಂದಿದ್ದೇವೆ. ನೀನು ಏನು ಬಯಸುತ್ತೀಯೆ ಎಂದು ಕೇಳಿದರು.

ವೈಶಂಪಾಯನಃ

ಏವಮುಕ್ತಃ ಸ ರಾಮೇಣ ಭಾರದ್ವಾಜೋಽಬ್ರವೀತ್ ದ್ವಿಜಃ ।
ಆಗತಂ ವಿತ್ತಕಾಮಂ ಮಾಂ ವಿದ್ಧಿ ದ್ರೋಣಂ ದ್ವಿಜರ್ಷಭ ॥೨೮॥

ಪರಶುರಾಮರಿಂದ ಹೀಗೆ ಹೇಳಲ್ಪಟ್ಟ ಭಾರದ್ವಾಜರು ಅವರನ್ನು ಕುರಿತು ಬ್ರಾಹ್ಮಣಶ್ರೇಷ್ಠರೇ, ನನ್ನನ್ನು ಧನಕಾಮನಾಗಿ ಬಂದ ದ್ರೋಣರೆಂದು ತಿಳಿಯಿರಿ ಎಂದು ಹೇಳಿದರು.

ರಾಮಃ

ಹಿರಣ್ಯಂ ಪಶವೋ ರೌಪ್ಯಂ ಯದ್ವಾಽನ್ಯದ್ವಸು ಕಿಂಚನ ।
ಬ್ರಾಹ್ಮಣೇಭ್ಯೋ ಮಯಾ ದತ್ತಂ ಸರ್ವಮೇವ ತಪೋಧನ ॥೨೯॥

ತಪೋಧನರೇ, ಹಿರಣ್ಯ , ಪಶುಗಳು, ರಜತ ಅಥವಾ ಬೇರೆ ಏನೇನು ಧನವಿದ್ದಿತೋ ಅವೆಲ್ಲವನ್ನೂ ನಾನು ಬ್ರಾಹ್ಮಣರಿಗೆ ಕೊಟ್ಟುಬಿಟ್ಟಿದ್ದೇನೆ.

ತಥೈವೇಯಂ ಧರಾ ದೇವೀ ಸಾಗರಾಂತಾ ಸಪತ್ತನಾ ।
ಕಾಶ್ಯಪಾಯ ಮಯಾ ದತ್ತಾ ಕೃತ್ಸ್ನಾ ನಗರಮಾಲಿನೀ ॥೩೦॥

ಹಾಗೆಯೇ. ಅನೇಕ ಪಟ್ಟಣಗಳಿಂದ ಕೂಡಿರುವ ಸಾಗರ ಪರ್ಯಂತವಾದ ಈ ಸಮಗ್ರ ಭೂಮಿಯನ್ನು ಕಾಶ್ಯಪರಿಗೆ ದಾನ ಮಾಡಿದ್ದೇನೆ.

ಶರೀರಮಾತ್ರಮೇವಾದ್ಯ ಮಮೇದಮವಶೇಷಿತಮ್ ।
ಅಸ್ತ್ರಾಣಿ ಚ ಮಹಾರ್ಹಾಣಿ ಶಸ್ತ್ರಾಣಿ ವಿವಿಧಾನಿ ಚ ॥೩೧॥

ಈಗ ನನ್ನ ಬಳಿ ನನ್ನ ಶರೀರ ಅನರ್ಘ್ಯವಾದ ಅಸ್ತ್ರಗಳು ಮತ್ತು ವಿವಿಧವಾದ ಶಸ್ತ್ರಗಳು ಮಾತ್ರ ಉಳಿದಿವೆ.

ಅಸ್ತ್ರಾಣಿ ವಾ ಶರೀರಂ ವಾ ಬ್ರಹ್ಮನ್ ಶಸ್ತ್ರಾಣಿ ವಾ ಪುನಃ ।
ವೃಣೀಷ್ವ ಕಿಂ ಪ್ರಯಚ್ಛಾಮಿ ತುಭ್ಯಂ ದ್ರೋಣ ವದಸ್ವ ಮಾಮ್ ॥೩೨॥

ಬ್ರಾಹ್ಮಣನಾದ ದ್ರೋಣನೇ ನನ್ನ ಅಸ್ತ್ರಗಳು, ಶರೀರ ಮತ್ತು ಶಸ್ತ್ರಗಳಲ್ಲಿ ನಿನಗೆ ಏನನ್ನು ಕೊಡಲಿ ಎಂದು ಹೇಳು.

ದ್ರೋಣಃ

ಅಸ್ತ್ರಾಣಿ ಮೇ ಸಮಗ್ರಾಣಿ ಸಸಂಹಾರಾಣಿ ಭಾರ್ಗವ ।
ಸಪ್ರಯೋಗರಹಸ್ಯಾನಿ ದಾತುಮರ್ಹಸ್ಯಶೇಷತಃ ।
ಏತದ್ ವಸು ವಸೂನಾಂ ಹಿ ಸರ್ವೇಷಾಂ ವಿಪ್ರಸತ್ತಮ ॥೩೩॥

ಭಾರ್ಗವರೇ, ನನಗೆ ಶ್ರೇಷ್ಠವಾದ ಅಸ್ತ್ರಗಳನ್ನು, ಅವುಗಳಪ್ರಯೋಗ ಮತ್ತು ಸಂಹಾರ ರಹಸ್ಯಗಳ ಜೊತೆಯಲ್ಲಿ ತಾವು ಸಮಗ್ರವಾಗಿ ಉಪದೇಶಿಸಬೇಕು. ಬ್ರಾಹ್ಮಣ ಶ್ರೇಷ್ಠರೇ, ಇದು ಎಲ್ಲಾ ಧನಗಳಿಗಿಂತ ಶ್ರೇಷ್ಠವಾದ ಧನ.

ವೈಶಂಪಾಯನಃ

ತಥೇತ್ಯುಕ್ತ್ವಾ ತತಸ್ತಸ್ಮೈ ಪ್ರಾದಾದಸ್ತ್ರಾಣಿ ಭಾರ್ಗವಃ ।
ಸರಹಸ್ಯವ್ರತಂ ಚೈವ ಧನುರ್ವೇದಮಶೇಷತಃ ॥೩೪॥

ಭಾರ್ಗವ ಪರಶುರಾಮರು ಹಾಗೆಯೇ ಆಗಲಿ ಎಂದು ಹೇಳಿ ಅವರಿಗೆ ರಹಸ್ಯ ಮತ್ತು ವ್ರತನಿಯಮಗಳಿಂದ ಸಹಿತವಾದ ಸಮಗ್ರವಾದ ಧನುರ್ವೇದವನ್ನು ಉಪದೇಶಿಸಿದರು.

ಪ್ರತಿಗೃಹ್ಯ ತು ತತ್ ಸರ್ವಂ ಕೃತಾಸ್ತ್ರೋ ದ್ವಿಜಸತ್ತಮಃ ।
ಪ್ರಿಯಂ ಸಖಾಯಂ ಸುಪ್ರೀತೋ ಜಗಾಮ ದ್ರುಪದಂ ಪ್ರತಿ ॥೩೫॥

ಬ್ರಾಹ್ಮಣಶ್ರೇಷ್ಠರಾದ ದ್ರೋಣರು ಅವೆಲ್ಲವನ್ನೂ ಸ್ವೀಕರಿಸಿ, ಅಸ್ತ್ರವಿದ್ಯಾಪಾರಂಗತರಾಗಿ ಸಂತೋಷಗೊಂಡು ಪ್ರಿಯಸ್ನೇಹಿತನಾದ ದ್ರುಪದನನ್ನು ನೋಡಲು ಹೊರಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಅಷ್ಟವಿಂಶತ್ಯಧಿಕಶತತಮೋऽಧ್ಯಾಯಃ ॥
॥ ಸಂಭವಪರ್ವಣಿ ಷಟ್‌ಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೫

ದಾನೇಽರ್ಧರಾಜ್ಯಸ್ಯ ಹಿ ತತ್ಪ್ರತಿಜ್ಞಾಂ
ಸಂಸ್ಮೃತ್ಯ ಪೂರ್ವಾಮುಪಯಾಂತಂ ಸಖಾಯಮ್ ।
ಸಖಾ ತವಾಸ್ಮೀತಿ ತದೋದಿತೋಽಪಿ
ಜಗಾದ ವಾಕ್ಯಂ ದ್ರುಪದೋಽತಿದರ್ಪಾತ್ ॥೨೧॥

ಅರ್ಧರಾಜ್ಯ ಕೊಡುವೆನೆಂದು ದ್ರುಪದ ಹಿಂದೆ ಮಾಡಿದ್ದ ಪ್ರತಿಜ್ಞೆಯನ್ನು ನೆನೆದು ಮಿತ್ರ ದ್ರೋಣ ಅವನ ಬಳಿಗೆ ಬಂದ. 'ನಾ ನಿನ್ನ ಮಿತ್ರ' ಎಂದ. ಆದರೆ ದ್ರುಪದ ಬಲು ದರ್ಪದಿಂದ ಈ ಮಾತನ್ನು ಹೇಳಿದ.

ನ ನಿರ್ಧನೋ ರಾಜಸಖೋ ಭವೇತ
ಯಥೇಷ್ಟತೋ ವಿಪ್ರ ಗಚ್ಛೇತಿ ದೈವಾತ್ ।
ಇತೀರಿತೇಽಸ್ಯಾಶು ಬಭೂವ ಕೋಪೋ
ಜಿತೇಂದ್ರಿಯಸ್ಯಾಪಿ ಮುನೇರ್ಹರೀಚ್ಛಯಾ ॥೨೨॥

'ದರಿದ್ರನು ಎಂದೂ ರಾಜನಿಗೆ ಮಿತ್ರನೆನಿಸಲಾರ. ಬ್ರಾಹ್ಮಣ, ನೀನು ನಿನ್ನ ಇಷ್ಟಾನುಸಾರ ಹೊರಟುಹೋಗಬಹುದು' ಎಂದು. ದ್ರುಪದ ದೈವಾತ್ ಹೀಗೆ ಹೇಳಿದಾಗ ಹರೀಚೇಯಿಂದ ಜಿತೇಂದ್ರಿಯನಾದ ದ್ರೋಣನಿಗೂ ಕೋಪ ಬಂದಿತು.

ಪ್ರತಿಗ್ರಹಾತ್ ಸನ್ನಿವೃತ್ತೇನ ಸೋಽಯಂ
ಮಯಾ ಪ್ರಾಪ್ತೋ ಮತ್ಪಿತುಃ ಶಿಷ್ಯಕತ್ವಾತ್ ।
ಪಿತುಃ ಶಿಷ್ಯೋ ಹ್ಯಾತ್ಮ ಶಿಷ್ಯೋ ಭವೇತ
ಶಿಷ್ಯಸ್ಯಾರ್ಥಃ ಸ್ವೀಯ ಏವೇತಿ ಮತ್ವಾ ॥೨೩॥

ಈ ದ್ರುಪದ ನನ್ನ ತಂದೆಯ ಶಿಷ್ಯ . ತಂದೆಯ ಶಿಷ್ಯ ನನಗೂ ಶಿಷ್ಯನೆ ಆಗುತ್ತಾನೆ. ಶಿಷ್ಯನ ಸೊತ್ತು ನನ್ನದೆ ಆಗಿರುತ್ತದೆ ಎಂದು ತಿಳಿದು ಪ್ರತಿಗ್ರಹವನ್ನು ತೊರೆದ ನಾನು ಇವನ ಬಳಿಗೆ ಬಂದೆ.

ಸೋಽಯಂ ಪಾಪೋ ಮಾಮವಜ್ಞಾಯ ಮೂಢೋ
ದುಷ್ಟಂ ವಚೋಽಶ್ರಾವಯದಸ್ಯ ದರ್ಪಮ್ ।
ಹನಿಷ್ಯ ಇತ್ಯೇವ ಮತಿಂ ವಿಧಾಯ
ಯಯೌ ಕುರೂನ್ ಶಿಷ್ಯತಾಂ ನೇತುಮೇತಾನ್ ॥೨೪॥

ಮೂಢನೂ ಪಾಪಿಯೂ ಆದ ಇವನು ನನ್ನನ್ನು ಅವಮಾನಿಸಿ ಕೆಟ್ಟ ಮಾತನ್ನಾಡಿದ್ದಾನೆ. ಇವನ ದರ್ಪವನ್ನು ಮುರಿಯುವೆನು ಎಂದು ನಿರ್ಧಾರ ಮಾಡಿ ದ್ರೋಣ ಕೌರವರ ಬಳಿಗೆ ಅವರನ್ನು ಶಿಷ್ಯರನ್ನಾಗಿ ಮಾಡಿಕೊಳ್ಳಲು ಹೊರಟ.

★ ★ ★ ★

ನೂರ ಇಪ್ಪತ್ತೊಂಭತ್ತನೆಯ ಅಧ್ಯಾಯ

(ದ್ರುಪದನಿಂದ ದ್ರೋಣರಿಗೆ ಅವಮಾನ, ದ್ರೋಣರ ಹಸ್ತಿನಪುರಗಮನ.)

ವೈಶಂಪಾಯನಃ

ತತೋ ದ್ರುಪದಮಾಗಮ್ಯ ಭಾರದ್ವಾಜಃ ಪ್ರತಾಪವಾನ್ ।
ಅಬ್ರವೀತ್ ಪುರುಷವ್ಯಾಘ್ರಂ ಸಖಾಯಂ ವಿದ್ಧಿ ಮಾಮಿತಿ ॥೧॥

ಅನಂತರ ಪ್ರತಾಪಶಾಲಿಯಾದ ದ್ರೋಣರು ದ್ರುಪದನ ಪಟ್ಟಣಕ್ಕೆ ಬಂದು ಪುರುಷವ್ಯಾಘ್ರನಾದ ಅವನನ್ನು ಕುರಿತು ನನ್ನನ್ನು ನಿನ್ನ ಸ್ನೇಹಿತನೆಂದು ತಿಳಿ ಎಂದು ಹೇಳಿದರು.

ಇತ್ಯೇವಮುಕ್ತಃ ಸಖ್ಯಾ ಸ ಪ್ರೀತಿಪೂರ್ವಂ ಜನೇಶ್ವರಃ ।
ಭಾರದ್ವಾಜೇನ ಪಾಂಚಾಲೋ ರೋಷಾತ್ ಸಂರಕ್ತಲೋಚನಃ ।
ನಾಮೃಷ್ಯತ ವಚಃ ಸಖ್ಯುಃ ಪ್ರೀತಿಪೂರ್ವಮುದಾಹೃತಮ್ ॥೨॥

ಹೀಗೆ ಸ್ನೇಹಿತರಾದ ದ್ರೋಣರಿಂದ ಪ್ರೀತಿಪೂರ್ವಕವಾಗಿ ಹೇಳಲ್ಪಟ್ಟ ಪಾಂಚಾಲರಾಜನು ರೋಷದಿಂದ ಕೆಂಪಾದ ಕಣ್ಣುಳ್ಳವನಾಗಿ ಸ್ನೇಹಿತನ ಪ್ರೀತಿಪೂರ್ವಕವಾದ ವಚನವನ್ನು ಸಹಿಸಲಿಲ್ಲ.

ಸ ಚೈಶ್ವರ್ಯಮದೇನಾಂಧ ಇತಿ ರಾಜಾಽಬ್ರವೀದ್ ವಚಃ ।
ಅಕೃತೇಯಂ ತವ ಪ್ರಜ್ಞಾ ಬ್ರಹ್ಮನ್ ನಾತಿಸಮಂಜಸೀ ।
ಯನ್ಮಾಂ ಬ್ರವೀಷಿ ಪ್ರಸಭಂ ಸಖಾ ತೇಽಹಮಿತಿ ದ್ವಿಜ ॥೩॥

ಐಶ್ವರ್ಯಮದದಿಂದ ಅಂಧನಾದ ದ್ರುಪದರಾಜನು ಹೀಗೆ ಮಾತನಾಡಿದನು. ಬ್ರಾಹ್ಮಣನೇ ನಿನ್ನ ಬುದ್ಧಿಯು ಸಮಂಜಸವಾಗಿಲ್ಲ, ಪರಿಷ್ಕಾರವನ್ನು ಪಡೆದಿಲ್ಲ. ಏಕೆಂದರೆ, ನೀನು ನನ್ನನ್ನು ನಿನ್ನ ಸ್ನೇಹಿತನೆಂದು ಹೇಳುತ್ತಿದ್ದೀಯೆ.

ನ ಹಿ ರಾಜ್ಞಾಮುದೀರ್ಣಾನಾಮೇವಂಭೂತೈರ್ನರೈಃ ಕ್ವಚಿತ್ ।
ಸಖ್ಯಂ ಭವತಿ ಮಂದಾತ್ಮನ್ ಹ್ರಿಯಾ ಹೀನೈರ್ಧನಚ್ಯುತೈಃ ॥೪॥

ಎಲೈ ಮಂದಾತ್ಮನೇ, ಸಂಪತ್ತಿನಿಂದ ಪೂರ್ಣರಾದ ರಾಜರುಗಳಿಗೆ ಧನದಿಂದ ದರಿದ್ರರಾದ, ಲಜ್ಜೆಯನ್ನು ಬಿಟ್ಟ ಮನುಷ್ಯರ ಜೊತೆಯಲ್ಲಿ ಎಂದೂ ಸಖ್ಯವುಂಟಾಗುವುದಿಲ್ಲ.

ಸೌಹೃದಾನ್ಯಪಿ ಜೀರ್ಯಂತೇ ಕಾಲೇನ ಪರಿಜೀರ್ಯತಾ ।
ಸೌಹೃದಂ ಮೇ ತ್ವಯಾ ಹ್ಯಾಸೀತ್ ಪೂರ್ವಂ ಸಾಮರ್ಥ್ಯಬಂಧನಮ್ ॥

ಕಾಲವು ಕಳೆದಂತೆ ಸ್ನೇಹಗಳು ನಶಿಸಿ ಹೋಗುತ್ತವೆ. ಹಿಂದೆ ನಿನ್ನ ಸಾಮರ್ಥ್ಯದ ನಿಮಿತ್ತದಿಂದಾಗಿ ನಿನ್ನಲ್ಲಿ ನನಗೆ ಸ್ನೇಹವಿದ್ದಿತು.

ನ ಸಖ್ಯಮಜರಂ ಲೋಕೇ ದೃಶ್ಯತೇ ಜಾತು ಕರ್ಹಿಚಿತ್ ।
ಕಾಮಶ್ಚೈನಂ ನಾಶಯತಿ ಕ್ರೋಧಶ್ಚೈನಂ ಪ್ರಮರ್ದತಿ ॥೬॥

ಪ್ರಪಂಚದಲ್ಲಿ ಸ್ನೇಹವು ಎಂದೂ ಅಜರಾಮರವಲ್ಲ. ಕಾಮವು ಅದನ್ನು ನಾಶಗೊಳಿಸುತ್ತದೆ, ಕ್ರೋಧವು ಅದನ್ನು ಮರ್ದಿಸುತ್ತದೆ.

ನ ವೈ ಜೀರ್ಣಮುಪಾತಿಷ್ಠ ಸಖ್ಯಂ ನವಮುಪಾಕುರು ।
ಆದತ್ಸ್ವೈನಂ ದ್ವಿಜಶ್ರೇಷ್ಠ ಸೌಹೃದಂ ಹ್ಯರ್ಥಬಂಧನಮ್ ॥೭॥

ಬ್ರಾಹ್ಮಣಶ್ರೇಷ್ಠನೇ, ಹಳೆಯ ಸ್ನೇಹವನ್ನು ಬಿಡು, ಹೊಸ ಸ್ನೇಹವನ್ನು ಪ್ರಾರಂಭಿಸು. ಪ್ರಯೋಜನ ನಿಮಿತ್ತವಾದ ಸ್ನೇಹವನ್ನು ಸ್ವೀಕರಿಸು.

ನ ದರಿದ್ರೋ ವಸುಮತೋ ನಾವಿದ್ವಾನ್ ವಿದುಷಃ ಸಖಾ ।
ನ ಶೂರಸ್ಯ ಸಖಾ ಕ್ಲೀಬಃ ಸಖಿಪೂರ್ವಂ ಕಿಮಿಷ್ಯತೇ ॥೮॥

ದರಿದ್ರನು ಧನಿಕನಿಗೆ, ಅಜ್ಞಾನಿಯು ಜ್ಞಾನಿಗೆ, ಹೇಡಿಯು ಶೂರನಿಗೆ ಎಂದೂ ಸ್ನೇಹಿತನಾಗುವುದಿಲ್ಲ. ಹಳೆಯ ಸ್ನೇಹವನ್ನು ಯಾವ ಉದ್ದೇಶದಿಂದ ಬಯಸುತ್ತಿದ್ದೀಯೆ.

ಯಯೋರೇವ ಸಮಂ ವಿತ್ತಂ ಯಯೋಃ ಪ್ರಜ್ಞಾ ಯಯೋಶ್ಶ್ರುತಮ್ ।
ತಯೋಃ ಸಂಬಂಧಕಂ ತುಲ್ಯಂ ನತು ಪುಷ್ಟವಿಪುಷ್ಟಯೋಃ ॥೯॥

ಯಾರಿಬ್ಬರಿಗೆ ವಿತ್ತವೂ, ಪ್ರಜ್ಞೆಯೂ, ಶ್ರುತವೂ ಸಮಾನವಾಗಿರುತ್ತವೆಯೊ, ಅವರಿಗೆ ಸ್ನೇಹಸಂಬಂಧವುಂಟಾಗುವುದು. ಪುಷ್ಟನಾದವನಿಗೂ ಮತ್ತು ಕೃಶನಾದವನಿಗೂ ಸ್ನೇಹವು ಉಂಟಾಗುವುದಿಲ್ಲ.

ನಾಶ್ರೋತ್ರಿಯಃ ಶ್ರೋತ್ರಿಯಸ್ಯ ನಾರಥೀ ರಥಿನಃ ಸಖಾ ।
ನಾರಾಜ್ಞಃ ಸಂಗತಂ ರಾಜ್ಞಃ ಸಖಿಪೂರ್ವಂ ಕಿಮಿಷ್ಯತೇ ॥೧೦॥

ಅಶ್ರೋತ್ರಿಯನಾದವನು ಶ್ರೋತ್ರಿಯನಿಗೂ, ರಥವಿಲ್ಲದವನು ರಥಿಕನಿಗೂ ಸ್ನೇಹಿತನಾಗುವುದಿಲ್ಲ. ರಾಜನಲ್ಲದವನಿಗೆ ರಾಜನಿಂದ ಯಾವ ಸಂಬಂಧವೂ ಇರುವುದಿಲ್ಲ. ಹಳೆಯ ಸ್ನೇಹವನ್ನು ಏಕೆ ಬಯಸುತ್ತಿದ್ದೀಯೆ?

ತ್ವದ್ವಿಧೈರ್ಮದ್ವಿಧಾನಾಂ ಹಿ ಪ್ರಕ್ಷೀಣಾರ್ಥೈರ್ನ ಜಾತುಚಿತ್ ।
ಸಖ್ಯಂ ಭವತಿ ಮಂದಾತ್ಮನ್ ಸಖಿಪೂರ್ವಂ ಕಿಮಿಷ್ಯತೇ ॥೧೧॥

ಎಲೈ ಮಂದಾತ್ಮನೇ, ನಿನ್ನಂತಹ ದರಿದ್ರನ ಜೊತೆಯಲ್ಲಿ ನನ್ನಂತಹವರಿಗೆ ಎಂದೂ ಸ್ನೇಹವಿರುವುದಿಲ್ಲ. ಕಳೆದುಹೋದ ಸ್ನೇಹವನ್ನು ಏಕೆ ಬಯಸುತ್ತಿದ್ದೀಯೆ ?

ವೈಶಂಪಾಯನಃ

ದ್ರುಪದೇನೈವಮುಕ್ತಸ್ತು ಭಾರದ್ವಾಜಃ ಪ್ರತಾಪವಾನ್ ।
ಮೂಹೂರ್ತಂ ಚಿಂತಯಾಮಾಸ ಮನ್ಯುನಾऽಭಿಪರಿಪ್ಲುತಃ ॥೧೨॥

ದ್ರುಪದನಿಂದ ಹೀಗೆ ಹೇಳಲ್ಪಟ್ಟ ಪ್ರತಾಪಶಾಲಿಯಾದ ದ್ರೋಣರು ಕ್ರೋಧವಶರಾಗಿ ಒಂದು ಮಹೂರ್ತದ ಕಾಲ ಆಲೋಚನೆಯನ್ನು ಮಾಡಿದರು.

ಸ ವಿನಿಶ್ಚಿತ್ಯ ಮನಸಾ ಪಾಂಚಾಲಂ ಪ್ರತಿ ಬುದ್ಧಿಮಾನ್ ।
ಶಿಷ್ಯೈಃ ಪರಿವೃತಃ ಶ್ರೀಮಾನ್ ಪುತ್ರೇಣಾನುಗತಸ್ತದಾ ॥೧೩॥

ಜಗಾಮ ಕುರುಮುಖ್ಯಾನಾಂ ನಗರಂ ನಾಗಸಾಹ್ವಯಮ್ ।
ಸ್ಯಾಲಸ್ಯೈವ ಗೃಹಂ ದ್ರೋಣಃ ಸದಾರಃ ಪರ್ಯುಪಸ್ಥಿತಃ ॥೧೪॥

ಮೇಧಾವಿಗಳಾದ ಅವರು ಪಾಂಚಾಲರಾಜನಾದ ದ್ರುಪದನಿಗೆ ಏನು ಮಾಡಬೇಕೆಂದು (ಮನಸ್ಸಿನಲ್ಲಿಯೇ) ನಿಶ್ಚಯಿಸಿ ಶಿಷ್ಯರ ಮತ್ತು ಪುತ್ರನ ಜೊತೆಯಲ್ಲಿ ಕೂಡಿದವರಾಗಿ ಅವರು ಕುರುಶ್ರೇಷ್ಠರ ನಗರವಾದ ಹಸ್ತಿನಪುರಕ್ಕೆ ಹೊರಟರು.

ಅಶ್ವತ್ಥಾಮ್ನಾ ಚ ಪುತ್ರೇಣ ಮಹಾಬಲವತಾ ಸಹ ।
ಅವಸತ್ ತತ್ರ ರಾಜೇಂದ್ರ ಗೌತಮಸ್ಯ ನಿವೇಶನೇ ॥೧೫॥

ಎಲೈ ರಾಜೇಂದ್ರನೇ, ದ್ರೋಣರು ಪತ್ನಿ ಮತ್ತು ಮಹಾಬಲನಾದ ಪುತ್ರನಾದ ಅಶ್ವತ್ಥಾಮರ ಜೊತೆಯಲ್ಲಿ ತಮ್ಮ ಭಾವಮೈದುನರಾದ ಕೃಪಾಚಾರ್ಯರ ಮನೆಯಲ್ಲಿ ವಾಸಿಸಿದರು.

ಸ ಕೃಪಸ್ಯಾಂತರೇ ಪಾರ್ಥಾನ್ ಭಾರದ್ವಾಜಃ ಪ್ರತಾಪವಾನ್ ।
ಅಸ್ತ್ರಾಣಿ ಶಿಕ್ಷಯಾಮಾಸ ಬುಬೋಧ ಚ ಸ ತಂ ಕೃಪಃ ।
ಅವಾಸೇ ತತ್ರ ಗೂಢಾತ್ಮಾ ಕಂಚಿತ್ಕಾಲಮುವಾಸ ಹ ॥೧೬॥

ಭಾರದ್ವಾಜರಾದ, ಪ್ರತಾಪಶಾಲಿಗಳಾದ ದ್ರೋಣರು ಕೃಪಾಚಾರ್ಯರು ಇಲ್ಲದಿರುವಾಗ ಪಾಂಡವರಿಗೆ ಅಸ್ತ್ರಗಳನ್ನು ಕಲಿಸುತ್ತಿದ್ದರು. ಈ ವಿಷಯವು ಕೃಪಾಚಾರ್ಯರಿಗೆ ತಿಳಿಯಿತು. ದ್ರೋಣರು ಯಾರಿಗೂ ತಿಳಿಯದಂತೆ ತಮ್ಮ ಸ್ವರೂಪವನ್ನು ಮರೆಮಾಡಿಕೊಂಡು ಸ್ವಲ್ಪ ಕಾಲದವರೆಗೆ ಕೃಪಾಚಾರ್ಯರ ಮನೆಯಲ್ಲಿ ವಾಸ ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕೋನತ್ರಿಂಶತ್ಯಧಿಕಶತತಮೋಽಧ್ಯಾಯಃ ॥
॥ ಸಂಭವಪರ್ವಣಿ ಸಪ್ತಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಇಪ್ಪತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೫

ಪ್ರತಿಗ್ರಹಾದ್ ಏನಿವೃತ್ತಸ್ಯ ಚಾರ್ಥಃ
ಸ್ಯಾಚ್ಛಿಷ್ಯೇಭ್ಯಃ ಕೌರವೇಭ್ಯೋ ಮಮಾತ್ರ ।
ಏವಂ ಮನ್ವಾನಃ ಕ್ರೀಡತಃ ಪಾಂಡವೇಯಾನ್
ಸಧಾರ್ತರಾಷ್ಟ್ರಾನ್ ಪುರಬಾಹ್ಯತೋಽಖ್ಯತ್ ॥೨೫॥

ಪ್ರತಿಗ್ರಹವನ್ನು ತೊರೆದ ನನಗೆ ಕೌರವರು ಶಿಷ್ಯರಾದರೆ ಅವರಿಂದ ಅಭೀಷ್ಟ ಸಿದ್ಧಿಯಾದೀತು ಎಂದು ಬಗೆದು ದ್ರೋಣ ನಗರದ ಹೊರಪ್ರದೇಶದಲ್ಲಿ ಆಟವಾಡುತ್ತಿದ್ದ ಪಾಂಡವರನ್ನೂ ಕೌರವರನ್ನೂ ಕಂಡ.

ಏಕ್ರೀಡತೋ ಧರ್ಮಸೂನೋಸ್ತದೈವ
ಸಹಾಂಗುಲೀಯೇನ ಚ ಕಂದುಕೋಽಪತತ್ ।
ಕೂಪೇ ನ ಶೇಕುಃ ಸಹಿತಾಃ ಕುಮಾರಾ
ಉದ್ಧರ್ತುಮೇನಂ ಪವಾನಾತ್ಮಜೋಽವದತ್ ॥೨೬॥

ಆಗಲೆ ಆಟವಾಡುತ್ತಿದ್ದ ಧರ್ಮರಾಜನ ಉಂಗುರವೂ ಚೆಂಡೂ ಬಾವಿಯಲ್ಲಿ ಬಿದ್ದಿತ್ತು. ಕುಮಾರರೆಲ್ಲ ಸೇರಿದರೂ ಅವುಗಳನ್ನು ಎತ್ತಲು ಶಕ್ತರಾಗಿರಲಿಲ್ಲ. ಆಗ ಭೀಮ ಹೇಳಿದ.

ನಿಷ್ಪತ್ಯ ಚೋದ್ಧೃತ್ಯ ಸಮುತ್ಪತಿಷ್ಯೇ
ಕೂಪಾದಮುಷ್ಮಾದ್ ಭೃಶನೀಚಾದಪಿ ಸ್ಮ ।
ಸಕಂದುಕಾಂ ಮುದ್ರಿಕಾಂ ಪಶ್ಯತಾದ್ಯ
ಸರ್ವೇ ಕುಮಾರಾ ಇತಿ ವೀರ್ಯಸಂಶ್ರಯಾತ್ ॥೨೭॥

'ಕುಮಾರರೆ, ನಾನು ನನ್ನ ಶಕ್ತಿಯನ್ನು ಉಪಯೋಗಿಸಿ ಬಾವಿಯಲ್ಲಿ ಮುಳುಗಿ ಬಹು ಆಳವಾದ ಈ ಬಾವಿಯಿಂದಲೂ ಚೆಂಡನ್ನು ಮತ್ತು ಉಂಗುರವನ್ನು ಎತ್ತಿಕೊಂಡು ಮೇಲೆ ಬರುತ್ತೇನೆ, ಎಲ್ಲರೂ ನೋಡಿರಿ'.

ತದಾ ಕುಮಾರಾನವದತ್ ಸ ವಿಪ್ರೋ
ಧಿಗಸ್ತ್ರಬಾಹ್ಯಾಂ ಭವತಾಂ ಪ್ರವೃತ್ತಿಮ್ ।
ಜಾತಾಃ ಕುಲೇ ಭರತಾನಾಂ ನ ವಿತ್ಥ
ದಿವ್ಯಾನಿ ಚಾಸ್ತ್ರಾಣಿ ಸುರಾರ್ಚಿತಾನಿ ॥೨೮॥

ಆಗ ಕುಮಾರರಿಗೆ ದ್ರೋಣ ನುಡಿದ 'ಅಸ್ತ್ರವನ್ನು ಬಿಟ್ಟು ಪ್ರಯತ್ನಿಸುವ ನಿಮ್ಮ ಪ್ರವೃತ್ತಿಗೆ ಧಿಕ್ಕಾರ. ನೀವು ಭರತನ ವಂಶದಲ್ಲಿ ಹುಟ್ಟಿದ್ದೂ ದೇವತೆಗಳು ಪೂಜಿಸುವ ದಿವ್ಯ ಅಸ್ತ್ರಶಸ್ತ್ರಗಳನ್ನು ತಿಳಿದಿಲ್ಲ!'

ಇತೀರಿತಾ ಅಸ್ತ್ರವಿದಂ ಕುಮಾರಾ ವಿಜ್ಞಾಯ
ವಿಪ್ರಂ ಸುರಪೂಜ್ಯಪೌತ್ರಮ್ ।
ಸಂಪ್ರಾರ್ಥಯಾಮಾಸುರಥೋದ್ಧೃತಿಂ ಪ್ರತಿ
ಪ್ರಧಾನಮುದ್ಯಾಯುತಕಂದುಕಸ್ಯ ॥೨೯॥

ದ್ರೋಣ ಹೀಗೆ ಹೇಳಿದಾಗ ಕುಮಾರರು ಅವನನ್ನು ಅಸ್ತ್ರವೇತ್ತನಿರಬಹುದೆಂದು ತಿಳಿದು ಉತ್ತಮವಾದ ಉಂಗುರವನ್ನೂ ಚೆಂಡನ್ನೂ ಎತ್ತಿಕೊಡಲು ಅವನನ್ನೇ ಕೇಳಿಕೊಂಡರು.

ಸಚಾಶ್ವಿಷೀಕಾಭಿರಥೋತ್ತರೋತ್ತರಂ
ಸಂಪ್ರಾಸ್ಯ ದಿವ್ಯಾಸ್ತ್ರಬಲೇನ ಕಂದುಕಮ್ ।
ಉದ್ಧೃತ್ಯ ಮುದ್ಯೋದ್ಧರಣಾರ್ಥಿನಃ ಪುನ
ರ್ಜಗಾದ ಭುಕ್ತಿರ್ಮಮ ಕಲ್ಪ್ಯತಾಮಿತಿ ॥೩೦॥

ದ್ರೋಣ ಬೇಗನೆ ದಿವ್ಯಾಸ್ತ್ರ ಬಲದಿಂದ ಹುಲ್ಲುಕಡ್ಡಿಗಳನ್ನು ಮೇಲಿಂದ ಮೇಲೆ ಎಸೆದು ಅವುಗಳ ಮೂಲಕ ಚೆಂಡನ್ನೆತ್ತಿದ. ಕುಮಾರರು ಪುನಃ ಉಂಗುರವನ್ನೂ ಎತ್ತಲು ಬೇಡಿದಾಗ ದ್ರೋಣ 'ನನಗೆ ಜೀವನೋಪಾಯದ ವ್ಯವಸ್ಥೆ ಮಾಡಿಕೊಡಿರಿ' ಎಂದ.

ಯಥೇಷ್ಟ ವಿತ್ತಾಶನಪಾನಮಸ್ಯ
ಧರ್ಮಾತ್ಮಜಃ ಪ್ರತಿಜಜ್ಞೇ ಸುಶೀಘ್ರಮ್ ।
ತಥೈವ ತೇನೋದ್ಧೃತಮಂಗುಲೀಯಂ
ತ್ರಿವರ್ಗಮುಖ್ಯಾತ್ಮಜವಾಕ್ಯತೋಽನು ॥೩೧॥

ಧರ್ಮರಾಜ ಬೇಗನೆ, ದ್ರೋಣನಿಗೆ ಯಥೇಚ್ಛ ಧನಸಂಪತ್ತನ್ನೂ ಅನ್ನಪಾನಗಳನ್ನೂ ವ್ಯವಸ್ಥೆ ಮಾಡಿಕೊಡುವೆನೆಂದು ಆಶ್ವಾಸನೆ ನೀಡಿದ. ಧರ್ಮರಾಜನು ಹೀಗೆ ಆಶ್ವಾಸನೆ ನೀಡಿದೊಡನೆ ದ್ರೋಣ ಉಂಗುರವನ್ನೂ ಹಾಗೇ ಎತ್ತಿಕೊಟ್ಟ.

ಪಪ್ರಚ್ಛುರೇನಂ ಸಹಿತಾಃ ಕುಮಾರಾಃ
ಕೋಽಸೀತಿ ಸೋಽಪ್ಯಾಹ ಪಿತಾಮಹೋ ವಃ ।
ವಕ್ತೇತಿ ತೇ ದುದ್ರುವುರಾಶು ಭೀಷ್ಮಂ
ದ್ರೋಣೋಽಯಮಿತ್ಯೇವ ಸ ತಾಂಸ್ತದೋಚೇ ॥೩೨॥

ಆಗ ಕುಮಾರರೆಲ್ಲರೂ ಸೇರಿ ದ್ರೋಣನನ್ನು ನೀವಾರೆಂದು ಕೇಳಿದರು. ದ್ರೋಣ ಹೇಳಿದ, 'ನಿಮ್ಮ ತಾತ ಹೇಳುತ್ತಾನೆ, ಕೇಳಿ. 'ಕುಮಾರರು ಬೇಗನೆ ತಾತನಾದ ಭೀಷ್ಮನ ಬಳಿಗೆ ಓಡಿದರು. ಆಗ ಭೀಷ್ಮ ಅವರಿಗೆ 'ಈತ ದ್ರೋಣ' ಎಂದ.

ನ ರಾಜಗೇಹಂ ಸ ಕದಾಚಿದೇತಿ
ತೇನಾದೃಷ್ಟಃ ಸ ಕುಮಾರ್ಯೈಃ ಪುರಾತಃ ।
ಭೀಷ್ಮೋ ವಿದ್ಯಾಸ್ತೇನ ಸಹೈವ ಚಿಂತಯ-
ನ್ನಸ್ತ್ರಪ್ರಾಪ್ತಿಂ ತಸ್ಯ ಶುಶ್ರಾವ ರಾಮಾತ್ ॥೩೩॥

ದ್ರೋಣ ಎಂದೂ ಅರಮನೆಗೆ ಹೋಗುತ್ತಿರಲಿಲ್ಲ. ಅದರಿಂದ ಕುಮಾರರು ಹಿಂದೆ ಎಂದೂ ಅವನನ್ನು ಕಂಡಿರಲಿಲ್ಲ. ಆದರೆ ಭೀಷ್ಮ ದ್ರೋಣನೊಡನೆ ಶಾಸ್ತ್ರಾರ್ಥ ವಿಚಾರ ಮಾಡುತ್ತಿದ್ದವ. ದ್ರೋಣನಿಲ್ಲದಿದ್ದಾಗ ಅವನು ಪರಶುರಾಮನಿಂದ ಅಸ್ತ್ರವಿದ್ಯೆ ಪಡೆಯುತ್ತಿದ್ದುದನ್ನು ಚಾರರ ಮೂಲಕ ಕೇಳಿ ತಿಳಿದಿದ್ದ.

ಶ್ರುತ್ವಾವೃದ್ಧಂ ಕೃಷ್ಣವರ್ಣಂ ದ್ವಿಜಂ ತಂ
ಮಹಾಸ್ತ್ರವಿದ್ಯಾಮಪಿ ತಾಂ ಮಹಾಮತಿಃ ।
ದ್ರೋಣಂ ಜ್ಞಾತ್ವಾ ತಸ್ಯ ಶಿಷ್ಯತ್ವ ಏತಾನ್
ದದೌ ಕುಮಾರಾಂಸ್ತತ್ರ ಗತ್ವಾ ಸ್ವಯಂ ಚ ॥೩೪॥

ಮಹಾಜ್ಞಾನಿಯಾದ ಭೀಷ್ಮ ಆ ಬ್ರಾಹ್ಮಣ ಕಪ್ಪು ಬಣ್ಣದವ ವೃದ್ಧನೆಂದು ಕೇಳಿ, ಅವನ ಆ ಮಹಾ ಅಸ್ತ್ರವಿದ್ಯೆಯನ್ನೂ ಕೇಳಿ, ಆತ ದ್ರೋಣನೆ ಎಂದು ತಿಳಿದು, ತಾನೆ ಅಲ್ಲಿಗೆ ಹೋಗಿ ಕುಮಾರರನ್ನು ಅವನಲ್ಲಿ ವಿದ್ಯಾಭ್ಯಾಸಕ್ಕೆ ಒಪ್ಪಿಸಿಕೊಟ್ಟ.

ನೂರಮೂವತ್ತನೆಯ ಅಧ್ಯಾಯ

(ದ್ರೋಣ ಮತ್ತು ರಾಜಕುಮಾರರ ಸಮಾಗಮ, ದ್ರೋಣರ ಕೌಶಲ, ಭೀಷ್ಮರ ಆದೇಶದಂತೆ ಎಲ್ಲಾ ಕುಮಾರರಿಗೆ ದ್ರೋಣರಲ್ಲಿ ಶಿಷ್ಯವೃತ್ತಿ.)

ವೈಶಂಪಾಯನಃ

ದ್ರೋಣಃ ಸಮುದಿತಾನ್ ದೃಷ್ಟ್ವಾ ಕುರೂನ್ ವೃತ್ತಿಪರೀಪ್ಸಯಾ ।
ಆಜಗಾಮ ಮಹಾತೇಜಾ ವಿಪ್ರೋ ನಾಗಪುರಂ ಪ್ರತಿ ॥೧॥

ಮಹಾತೇಜಸ್ವಿಗಳಾದ ದ್ರೋಣರು ಕುರುದೇಶವು ಸಮೃದ್ಧವಾಗಿರುವುದನ್ನು ಗಮನಿಸಿ ಜೀವನವೃತ್ತಿಯನ್ನು ಪಡೆಯುವ ಉದ್ದೇಶದಿಂದ ನಾಗಪುರಕ್ಕೆ (ಹಸ್ತಿನಪುರಕ್ಕೆ) ಬಂದರು.

ಸ ತಥೋಕ್ತಸ್ತಥಾ ತೇನ ಸದಾರಃ ಪ್ರಾದ್ರವತ್ ಕುರೂನ್ ।
ತಾಂ ಪ್ರತಿಜ್ಞಾಂ ಪ್ರತಿಜ್ಞಾಯ ಯಾಂ ಕರ್ತಾ ನಚಿರಾದಿವ ॥೨॥

ದ್ರುಪದನಿಂದ ಹಾಗೆ ಹೇಳಲ್ಪಟ್ಟ ದ್ರೋಣರು ಇನ್ನೊಬ್ಬರು ಮಾಡಲು ಸಾಧ್ಯವಲ್ಲದ ಪ್ರತಿಜ್ಞೆಯನ್ನು ಮನಸ್ಸಿನಲ್ಲಿಯೇ ಮಾಡಿ ಪತ್ನೀಸಹಿತರಾಗಿ ಶೀಘ್ರವಾಗಿ ಕುರುದೇಶಕ್ಕೆ ಬಂದರು.

ಭಾರದ್ವಾಜೋऽವಸತ್ ತತ್ರ ಹ್ಯುಂಛೇನ ದ್ವಿಜಸತ್ತಮಃ ।
ತತೋऽಸ್ಯ ತನುಜಃ ಪಾರ್ಥಾನ್ ಕೃತಾಸ್ತ್ರಾನಂತರಂ ಪ್ರಭೋ ॥೩॥

ಶಸ್ತ್ರಾಣಿ ಶಿಕ್ಷಯಾಮಾಸ ನಾಬುಧ್ಯತ ಚ ತಂ ಜನಾಃ ।
ಏವಂ ಸ ತತ್ರ ಗೂಢಾತ್ಮಾ ಕಂಚಿತ್ಕಾಲಮುವಾಸ ಹ ॥೪॥

ದ್ವಿಜಶ್ರೇಷ್ಠರಾದ ದ್ರೋಣರು ಅಲ್ಲಿ ಉಂಛವೃತ್ತಿಯಿಂದ ವಾಸಿಸಿದರು. ದ್ರೋಣರು ಅಸ್ತ್ರಗಳನ್ನು ಉಪದೇಶಿಸಿದ ನಂತರ, ಅವರ ಮಕ್ಕಳಾದ ಅಶ್ವತ್ಥಾಮಾಚಾರ್ಯರು ಪಾಂಡವರಿಗೆ ವಿರಾಮವಿದ್ದಾಗ ಶಸ್ತ್ರಗಳನ್ನು ಕಲಿಸುತ್ತಿದ್ದರು. ಇದು ಬೇರೆ ಯಾರಿಗೂ ತಿಳಿಯಲಿಲ್ಲ. ಹೀಗೆ ದ್ರೋಣರು ಗೂಢವಾಗಿ ಅಲ್ಲಿ ಸ್ವಲ್ಪಕಾಲ ವಾಸಮಾಡಿದರು.

ತತಃ ಕುಮಾರಾ ನಿಷ್ಕಮ್ಯ ಸಹಿತಾ ನಾಗಸಾಹ್ವಯಾತ್ ।
ಕ್ರೀಡಂತೋ ವೀಡಯಾ ವೀರಾಃ ತತ್ರ ಪರ್ಯಚರನ್ಮುದಾ ॥೫॥

ಅನಂತರ ಒಮ್ಮೆ ಕುಮಾರರು ಹಸ್ತಿನಪುರದಿಂದ ಹೊರಗೆ ಬಂದು ಚೆಂಡಿನಿಂದ ಆಟವಾಡುತ್ತಾ ವೀರರಾದ ಅವರು ಸಂತೋಷದಿಂದ ತಿರುಗಾಡಿದರು.

ತೇಷಾಂ ಸಂಕ್ರೀಡಮಾನಾನಾಮುದಪಾನೇऽಂಗುಲೀಯಕಮ್ ।
ಪಪಾತ ಧರ್ಮರಾಜಸ್ಯ ವೀಡಾ ತತ್ರೈವ ಚಾಪತತ್ ॥೬॥

ಅವರು ಹಾಗೆ ಆಡುತ್ತಿರುವಾಗ ಧರ್ಮರಾಜನ ಉಂಗುರ ಮತ್ತು ಚೆಂಡು ಅಲ್ಲಿಯೇ ಒಂದು ಬಾವಿಯಲ್ಲಿ ಬಿದ್ದಿತು.

ತತ್ತ್ವಂಬುನಾ ಪ್ರತಿಚ್ಛನ್ನಂ ತಾರಾರೂಪಮಿವಾಂಬರೇ ।
ದೃಷ್ಟ್ವಾ ತೇ ವೈ ಕುಮಾರಾಶ್ಚ ತಂ ಯತ್ನಾತ್ ಪರ್ಯವಾರಯನ್ ॥೭॥

ಅಲ್ಪ ನೀರಿನಲ್ಲಿ ಮುಳುಗಿದ ಆ ಉಂಗುರವು ಆಕಾಶದಲ್ಲಿ ನಕ್ಷತ್ರದಂತೆ ಹೊಳೆಯುತ್ತಿತ್ತು. ಅದನ್ನು ನೋಡಿದ ಕುಮಾರರು ಎಲ್ಲರೂ ಪ್ರಯತ್ನಪಟ್ಟು ಬಾವಿಯನ್ನು ಸುತ್ತುವರಿದರು.

ತೇ ಪರಸ್ಪರಮೈಕ್ಷಂತ ಕುಮಾರಾಃ ಸಹಿತಾಸ್ತದಾ ।
ತಸ್ಯ ಯೋಗಮವಿಂದಂತೋ ಭೃಶಂ ಮೂಕಾ ಇವಾऽಭವನ್ ॥೮॥

ಎಲ್ಲ ಕುಮಾರರೂ ಒಟ್ಟಿಗೆ ಸೇರಿ ಒಬ್ಬರ ಮುಖವನ್ನು ಒಬ್ಬರು ನೋಡಿದರು. ಚೆಂಡು ಮತ್ತು ಉಂಗುರವನ್ನು ಮೇಲೆ ತೆಗೆಯುವ ಉಪಾಯವನ್ನು ಕಾಣದೆ ಎಲ್ಲರೂ ಮೂಕರಂತೆ ಆದರು.

ನ ಕಿಂಚಿತ್ ಪ್ರತ್ಯಪದ್ಯಂತ ಕರ್ಮ ವೀಡೋಪಲಬ್ಧಯೇ ।
ತತಸ್ತೇ ಯತ್ನತಃ ಸರ್ವೇ ವೀಡಾಮುದ್ಧರ್ತುಮುದ್ಯತಾಃ ॥೯॥

ಚೆಂಡನ್ನು ಮೇಲಕ್ಕೆತ್ತಲು ಏನು ಮಾಡಬೇಕೆಂದು ಅವರಿಗೆ ತಿಳಿಯಲಿಲ್ಲ. ಅನಂತರ ಎಲ್ಲರೂ ಚೆಂಡನ್ನು ತೆಗೆಯಲು ಏನೇನೋ ಪ್ರಯತ್ನಗಳನ್ನು ಮಾಡಿದರು.

ವಿಫಲೀಭೂತಯತ್ನಾಸ್ತೇ ವ್ರೀಡಯಾऽವನತಾನನಾಃ ।
ತೇऽಪಶ್ಯನ್ ಬ್ರಾಹ್ಮಣಂ ಶ್ಯಾಮಮಾಸನ್ನಪಲಿತಂ ಕೃಶಮ್ ॥೧೦॥

ತಮ್ಮ ಪ್ರಯತ್ನಗಳೆಲ್ಲವೂ ವಿಫಲವಾಗುತ್ತಿರಲು ನಾಚಿಕೆಯಿಂದ ತಲೆತಗ್ಗಿಸಿದ ಅವರು ಕಪ್ಪಾದ, ಕೃಶರಾದ, ವೃದ್ಧಾಪ್ಯದ ಸಮೀಪದಲ್ಲಿರುವ ಒಬ್ಬ ಬ್ರಾಹ್ಮಣರನ್ನು ನೋಡಿದರು.

ಕೃತ್ಯವಂತಃ ಸಮೀಪಸ್ಥಮಗ್ನಿಹೋತ್ರಪುರಸ್ಕೃತಮ್ ।
ತೇ ತಂ ವಿಪ್ರಂ ಮಹಾತ್ಮಾನಮುಪಾಗಮ್ಯ ಕುಮಾರಕಾಃ ।
ಭಗ್ನೋತ್ಸಾಹಕ್ರಿಯಾಮಾನಾಃ ಬ್ರಾಹ್ಮಣಂ ಪರ್ಯವಾರಯನ್ ॥೧೧॥

ಕಾರ್ಯಸಾಧನೆ ಮಾಡಬೇಕಾಗಿದ್ದ ಅವರು ಅಗ್ನಿಹೋತ್ರ ಪುರಸ್ಸರವಾಗಿ ಸಮೀಪದಲ್ಲಿದ್ದ ಆ ಮಹಾತ್ಮರಾದ ಬ್ರಾಹ್ಮಣರನ್ನು ಸಮೀಪಿಸಿ ತಮ್ಮ ಉತ್ಸಾಹ, ಪ್ರಯತ್ನ ಮತ್ತು ಮಾನವನ್ನು ಕಳೆದುಕೊಂಡು ಅವರನ್ನು ಸುತ್ತುವರಿದರು.

ಸ ತಾನ್ ಕೃತ್ಯವತೋ ದೃಷ್ಟ್ವಾ ಕುಮಾರಾಂಸ್ತು ವಿಚೇತಸಃ ।
ಬ್ರಾಹ್ಮಣಃ ಪ್ರಹಸನ್ ಮಂದಂ ಕೌಶಲೇನಾಭ್ಯಭಾಷತ ॥೧೨॥

ಆ ಬ್ರಾಹ್ಮಣರು ಕಾರ್ಯಾರ್ಥಿಗಳಾಗಿ ವಿಮನಸ್ಕರಾದ ಆ ಕುಮಾರರನ್ನು ನೋಡಿ ಮಂದಹಾಸದಿಂದ ನಗುತ್ತಾ ತಮ್ಮ ಕೌಶಲ ನಿಮಿತ್ತದಿಂದ ಮಾತನಾಡಿದರು.

ಧಿಗ್ ವೀರ್ಯಂ ಧಿಗ್ಬಲಂ ಕ್ಷಾತ್ರಂ ಧಿಗ್ ಧೈರ್ಯಂ ವಃ ಕೃತಾಸ್ತ್ರತಾಮ್ ।
ಭರತಸ್ಯಾನ್ವಯೇ ಜಾತಾ ಯೇ ವೀಡಾಂ ನಾಧಿಗಚ್ಛತ ॥೧೩॥

ನಿಮ್ಮ ವೀರ್ಯಕ್ಕೂ, ನಿಮ್ಮ ಕ್ಷತ್ರಿಯಬಲಕ್ಕೂ, ನಿಮ್ಮ ಧೈರ್ಯಕ್ಕೂ, ನಿಮ್ಮ ಅಸ್ತ್ರವಿದ್ಯೆಗೂ ಧಿಕ್ಕಾರ. ಭರತನ ಕುಲದಲ್ಲಿ ಜನಿಸಿದ ನೀವು ಒಂದು ಚೆಂಡನ್ನು ಮೇಲೆ ತೆಗೆಯಲು ಸಮರ್ಥರಾಗಲಿಲ್ಲ.

ವೀಡಾಂ ಚ ಮುದ್ರಿಕಾಂ ಚೈವ ಅಹಮೇತದಪಿ ದ್ವಯಮ್ ।
ಉದ್ಧರಿಷ್ಯೇ ತ್ವಿಷೀಕಾಭಿರ್ಭೋಜನಂ ಮೇ ಪ್ರದೀಯತಾಮ್ ॥೧೪॥

ನಾನು ಈ ಚೆಂಡು ಮತ್ತು ಮುದ್ರೆ ಎರಡನ್ನೂ ಸಣ್ಣ ಕಡ್ಡಿಗಳ ಮೂಲಕ ಮೇಲೆ ತೆಗೆಯುವೆನು. ನನಗೆ ಭೋಜನವನ್ನು ಕಲ್ಪಿಸಿ.

ತತೋಽಬ್ರವೀದ್ ಭರದ್ವಾಜಂ ಕುಂತೀಪುತ್ರೋ ಯುಧಿಷ್ಠಿರಃ ।
ಗೌತಮೀಂ ಚ ಮಹಾಭಾಗಾಂ ಭಿಕ್ಷಾಮಶ್ನೀತ ಶಾಶ್ವತೀಮ್ ॥೧೫॥

ಆಗ ಕುಂತೀಪುತ್ರನಾದ ಯುಧಿಷ್ಠಿರನು ದ್ರೋಣರನ್ನೂ ಮತ್ತು ಮಹಾನುಭಾವಳಾದ ಕೃಪಿಯನ್ನೂ ಕುರಿತು ನಿಮಗೆ ಶಾಶ್ವತವಾದ ಜೀವಿಕೆಯ ವ್ಯವಸ್ಥೆಯನ್ನು ಮಾಡುವೆನು ಎಂದು ಹೇಳಿದನು.

ತತೋಽಬ್ರವೀದ್ ಭರದ್ವಾಜಃ ಪ್ರಹಸ್ಯ ಭರತಾನಿದಮ್ ।
ಏಷಾ ಮುಷ್ಟಿರಿಷೀಕಾಣಾಂ ಮಯಾಽಸ್ತ್ರೇಣಾಭಿಮಂತ್ರಿತಾ ।
ಅಸ್ಯ ವೀರ್ಯಂ ಸಮೀಕ್ಷಧ್ವಂ ಯದನ್ಯೇಷು ನ ವಿದ್ಯತೇ ॥೧೬॥

ಆಗ ದ್ರೋಣರು ನಗುತ್ತಾ ಆ ಭರತಕುಮಾರರನ್ನು ಕುರಿತು ಹೀಗೆ ಹೇಳಿದರು. ಇದು ಸಣ್ಣಕಡ್ಡಿಗಳ ಒಂದು ಮುಷ್ಟಿ ನಾನು ಅಸ್ತ್ರದಿಂದ ಅಭಿಮಂತ್ರಿಸಿದ್ದೇನೆ, ಬೇರೆಲ್ಲೂ ಕಾಣಸಿಗದಿರುವ ಈ ಅಸ್ತ್ರದ ಸಾಮರ್ಥ್ಯವನ್ನು ನೋಡಿ.

ವೇತ್ಸ್ಯಾಮೀಷಿಕಯಾ ವೀಡಾಂ ತಾಮಿಷೀಕಾಮಿಷೀಕಯಾ ।
ತಾಮಪೀಷೀಕಯಾ ಚೈವ ಅನ್ಯಾಮಪ್ಯನ್ಯಯಾ ಪುನಃ ।
ತಥಾಽನ್ಯೋನ್ಯಸಮಾಯೋಗಃ ವೀಡಾಯಾ ಗ್ರಹಣೇ ಮತಃ ॥೧೭॥

ನಾನು ಚೆಂಡನ್ನು ಒಂದು ಕಡ್ಡಿಯಿಂದ ಚುಚ್ಚುತ್ತೇನೆ, ಆ ಕಡ್ಡಿಯನ್ನು ಇನ್ನೊಂದು ಕಡ್ಡಿಯಿಂದ ಚುಚ್ಚುತ್ತೇನೆ, ಇನ್ನೊಂದು ಕಡ್ಡಿಯನ್ನು ಮತ್ತೊಂದು ಕಡ್ಡಿಯಿಂದ ಚುಚ್ಚುತ್ತೇನೆ. ಹೀಗೆ ಅನೇಕ ಕಡ್ಡಿಗಳ ಸಂಯೋಗದಿಂದ ಚೆಂಡನ್ನು ತೆಗೆಯಬೇಕು.

ವೈಶಂಪಾಯನಃ

ತತೋ ಯಥೋಕ್ತಂ ತತ್ ಸರ್ವಂ ಕೃತವಾಂಸ್ತತ್ರ ಬ್ರಾಹ್ಮಣಃ ।
ತದಪಶ್ಯನ್ ಕುಮಾರಾಸ್ತೇ ವಿಸ್ಮಯೋತ್ಫುಲ್ಲಲೋಚನಾಃ ॥೧೮॥

ಅನಂತರ ಆ ಬ್ರಾಹ್ಮಣರು ತಾವು ಹೇಳಿದಂತೆಯೇ ಎಲ್ಲವನ್ನೂ ಮಾಡಿದರು. ಆ ಕುಮಾರರು ಆಶ್ಚರ್ಯದಿಂದ, ಅರಳಿದ ಕಣ್ಣುಗಳಿಂದ ಅದನ್ನು ನೋಡಿದರು.

ಅವಾಪ್ಯ ಚೋದ್ಧೃತಾಂ ವೀಡಾಂ ವೀಡಾವೇಧಿನಮಬ್ರುವನ್ ।
ಮುದ್ರಿಕಾಮಪಿ ವಿಪ್ರೇಂದ್ರ ಕ್ಷಿಪ್ರಮೇತಾಂ ಸಮುದ್ಧರ ॥೧೯॥

ಮೇಲೆ ತೆಗೆದ ಚೆಂಡನ್ನು ಪಡೆದು, ಚೆಂಡನ್ನು ಚುಚ್ಚಿ ತೆಗೆದ ಆ ಬ್ರಾಹ್ಮಣರನ್ನು ಕುರಿತು ವಿಪ್ರೇಂದ್ರನೇ, ಬೇಗ ಮುದ್ರಿಕೆಯನ್ನು ಮೇಲೆ ತೆಗಿ ಎಂದು ಹೇಳಿದರು.

ತತಃ ಸಶರಮಾದಾಯ ಧನುಶ್ಚಾಪಿ ಮಹಾಬಲಃ ।
ಶರೇಣ ವಿದ್ಧ್ವಾ ಮುದ್ರಾಂ ತಾಮೂರ್ಧ್ವಮಾವಾಹಯಚ್ಛರೈಃ ॥೨೦॥

ಆಗ ಆ ಮಹಾಬಲರಾದ ಬ್ರಾಹ್ಮಣರು ಧನುಸ್ಸು ಮತ್ತು ಬಾಣವನ್ನು ತೆಗೆದುಕೊಂಡು ಬಾಣಪ್ರಯೋಗ ಮಾಡಿ, ಆ ಮುದ್ರಿಕೆಗೆ ಹೊಡೆದು ಅದು ಮೇಲೆ ಬರುವಂತೆ ಮಾಡಿದರು.

ಸಶರಸ್ತದುಪಾದಾಯ ಕೂಪಾದಂಗುಲಿವೇಷ್ಟಕಮ್ ।
ಪ್ರದದೌ ತಂ ಕುಮಾರಾಣಾಂ ವಿಸ್ಮಿತಾನಾಮವಿಸ್ಮಿತಃ ॥೨೧॥

ಶರಸಹಿತವಾದ ಆ ಉಂಗುರವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ತಮಗೆ ಏನೂ ವಿಸ್ಮಯವಿಲ್ಲದೆ, ವಿಸ್ಮಿತರಾದ ಆ ಕುಮಾರರಿಗೆ ಕೊಟ್ಟರು.

ಮುದ್ರಿಕಾಂ ತೂದ್ಧೃತಾಂ ದೃಷ್ಟ್ವಾ ಪ್ರಾಬ್ರುವಂಸ್ತೇ ಕುಮಾರಕಾಃ ।
ಅಭಿವಾದಯಾಮಹೇ ಬ್ರಹ್ಮನ್ ನೈತದನ್ಯೇಷು ವಿದ್ಯತೇ ।
ಕೋಽಸಿ ಕಂ ತ್ವಾಂ ವಿಜಾನೀಮೋ ಬ್ರೂಹಿ ಕಿಂ ಕರವಾಮಹೇ ॥೨೨॥

ಮುದ್ರಿಕೆಯನ್ನು ಮೇಲೆ ಎತ್ತಿದುದನ್ನು ನೋಡಿ ಆ ಕುಮಾರರು ಬ್ರಾಹ್ಮಣರೇ, ನಿಮಗೆ ನಮಸ್ಕರಿಸುತ್ತೇವೆ, ಈ ಕೌಶಲವು ಬೇರೆ ಎಲ್ಲಿಯೂ ಇಲ್ಲ, ನೀವು ಯಾರು? ನಾವು ನಿಮ್ಮನ್ನು ಯಾರೆಂದು ತಿಳಿಯಬೇಕು? ನಾವು ನಿಮಗೆ ಏನು ಮಾಡಬಹುದು? ಎಂದು ತಿಳಿಸಿ ಎಂದು ಹೇಳಿದರು.

ವೈಶಂಪಾಯನಃ

ಏವಮುಕ್ತಸ್ತಥಾ ವಿಪ್ರಃ ಪ್ರತ್ಯುವಾಚ ಕುಮಾರಕಾನ್ ।
ಆಚಕ್ಷಧ್ವಂ ಹಿ ಭೀಷ್ಮಾಯ ರೂಪೇಣ ಚ ಗುಣೈರಪಿ ॥೨೩॥

ಸ ಮಾಂ ಬುದ್ಧಿಮತಾಂ ಶ್ರೇಷ್ಠಃ ಶ್ರುತ್ವಾ ಜ್ಞಾಸ್ಯತಿ ಕೌರವಃ ।
ತಥೇತ್ಯುಕ್ತ್ವಾ ತು ತೇ ಗತ್ವಾ ಭೀಷ್ಮಮೂಚುಃ ಪಿತಾಮಹಮ್ ॥೨೪॥

ಆ ಕುಮಾರರಿಂದ ಹೀಗೆ ಹೇಳಲ್ಪಟ್ಟ ಬ್ರಾಹ್ಮಣರು ಅವರನ್ನು ಕುರಿತು ನೀವು ಭೀಷ್ಮರ ಬಳಿಗೆ ಹೋಗಿ ನನ್ನ ರೂಪವನ್ನೂ ಮತ್ತು ಗುಣವನ್ನೂ ಅವರಿಗೆ ತಿಳಿಸಿ. ಮೇಧಾವಿಗಳಲ್ಲಿ ಶ್ರೇಷ್ಠರಾದ ಕುರುಕುಲೋತ್ಪನ್ನರಾದ ಅವರು ಎಲ್ಲವನ್ನೂ ತಿಳಿಯುವರು ಎಂದು ಹೇಳಿದರು.

ಬ್ರಾಹ್ಮಣಸ್ಯ ವಚಃ ಕೃತ್ಸ್ನಂ ತಚ್ಚ ಕರ್ಮ ವಿಶೇಷತಃ ।
ಶ್ರುತ್ವಾ ಭೀಷ್ಮಃ ಕುಮಾರಾಣಾಂ ದ್ರೋಣ ಇತ್ಯೇವ ಜಜ್ಞಿವಾನ್ ॥೨೫॥

ಹಾಗೆಯೇ ಆಗಲಿ ಎಂದು ಹೇಳಿ ಆ ಕುಮಾರರು ಪಿತಾಮಹರಾದ ಭೀಷ್ಮರ ಬಳಿಗೆ ಹೋಗಿ ಆ ಬ್ರಾಹ್ಮಣರ ಎಲ್ಲಾ ಮಾತುಗಳನ್ನು ಮತ್ತು ವಿಶೇಷವಾಗಿ ಅವರು ಮಾಡಿದ ಕರ್ಮದ ಕೌಶಲವನ್ನು ತಿಳಿಸಿದರು. ಕುಮಾರರಿಂದ ಎಲ್ಲವನ್ನೂ ಕೇಳಿದ ಭೀಷ್ಮರು ಅವರು ದ್ರೋಣರೆಂದು ತಿಳಿದರು.

ಯುಕ್ತರೂಪಃ ಸ ಹಿ ಗುರುರಿತ್ಯೇವಮಭಿಚಿಂತ್ಯ ಚ ।
ತತ ಆನಾಯ್ಯ ದ್ರೋಣಂ ತು ಭೀಷ್ಮಃ ಶಾಂತನವಸ್ತದಾ ॥೨೬॥

ಅರ್ಹಣೀಯೇನ ಕಾಮ್ಯೇಶ್ಚ ಯಥಾನ್ಯಾಯಮಪೂಜಯತ್ ।
ತತಸ್ತಂ ಪರಿಪಪ್ರಚ್ಛ ಭೀಷ್ಮಃ ಶಸ್ತ್ರಭೃತಾಂ ವರಃ ।
ಹೇತುಮಾಗಮನೇ ಸರ್ವಂ ತಂ ದ್ರೋಣಃ ಪ್ರತ್ಯಭಾಷತ ॥೨೭॥

ದ್ರೋಣರು ಕುಮಾರರಿಗೆ ಧನುರ್ವಿದ್ಯೆಯಲ್ಲಿ ಆಚಾರ್ಯರಾಗಲು ಅರ್ಹರಾದವರು ಎಂದು ಯೋಚಿಸಿ ಶಂತನುವಿನ ಮಗನಾದ ಭೀಷ್ಮರು ದ್ರೋಣರನ್ನು ಕರೆಸಿ ಪೂಜ್ಯ ಮತ್ತು ಅಪೇಕ್ಷಣೀಯವಾದ ವಸ್ತುಗಳಿಂದ ಅವರನ್ನು ವಿಧಿವತ್ತಾಗಿ ಪೂಜಿಸಿದರು. ಅನಂತರ ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ಭೀಷ್ಮರು ಅವರ ಆಗಮನಕ್ಕೆ ಕಾರಣವನ್ನು ಕೇಳಿದರು. ಆಗ ದ್ರೋಣರು ಪ್ರತ್ಯುತ್ತರವಾಗಿ ಎಲ್ಲವನ್ನೂ ಹೇಳಿದರು.

ದ್ರೋಣಃ

ಮಹರ್ಷೇರಗ್ನಿವೇಶ್ಯಸ್ಯ ಸಕಾಶಮಹಮಪ್ಯುತ ।
ಅಸ್ತ್ರಾರ್ಥಮಗಮಂ ಪೂರ್ವಂ ಧನುರ್ವೇದಜಿಘೃಕ್ಷಯಾ ॥೨೮॥

ನಾನೂ ಸಹ ಹಿಂದೆ ಧನುರ್ವೇದವನ್ನು ಕಲಿಯಲು ಉದ್ದೇಶಿಸಿ ಅಸ್ತ್ರಗಳ ಸಂಪಾದನೆಯನ್ನು ಮಾಡಲು ಮಹರ್ಷಿಗಳಾದ ಅಗ್ನಿವೇಶ್ಯರ ಬಳಿಗೆ ಹೋಗಿದ್ದೆನು.

ಬ್ರಹ್ಮಚಾರೀ ವಿನೀತಾತ್ಮಾ ಜಟಿಲೋ ಬಹುಲಾಃ ಸಮಾಃ ।
ಅವಸಂ ತತ್ರ ಸುಚಿರಮಗ್ನಿವೇಶ್ಯಸ್ಯ ಸನ್ನಿಧೌ ॥೨೯॥

ನಾನು ಬ್ರಹ್ಮಚಾರಿಯಾಗಿ, ವಿನಯಶೀಲನಾಗಿ ಜಟಿಲ ವೇಶವನ್ನು ಧರಿಸಿ ಅಗ್ನಿವೇಶ್ಯರ ಸನ್ನಿಧಿಯಲ್ಲಿ ಅನೇಕ ವರ್ಷಗಳವರೆಗೆ ವಾಸಮಾಡಿದೆ.

ಪಾಂಚಾಲರಾಜಪುತ್ರಶ್ಚ ಯಜ್ಞಸೇನೋ ಮಹಾಬಲಃ ।
ಬಾಲ್ಯಾತ್ ಪ್ರಭೃತಿ ಕೌರವ್ಯ ಸಹಾಧ್ಯಯನಮೇವ ಚ ।
ಮಯಾ ಸಹಾಕರೋದ್ ವಿದ್ಯಾಂ ಗುರೌ ತಸ್ಮಿನ್ ಸಮಾಹಿತಃ ॥೩೦॥

ಪಾಂಚಾಲರಾಜಕುಮಾರನೂ, ಮಹಾಬಲನೂ ಆದ ಯಜ್ಞಸೇನನು ಬಾಲ್ಯದಿಂದಲೂ ನನ್ನ ಜೊತೆಯಲ್ಲಿ ಅಧ್ಯಯನವನ್ನು ಮಾಡಿದನು. ಕುರುಕುಲೋತ್ತನ್ನರಾದ ಭೀಷ್ಮರೇ ಅವನು ಗುರುಕುಲದಲ್ಲಿ ನನ್ನ ಜೊತೆಯಲ್ಲಿ ವಾಸಿಸಿ ಸಮಾಹಿತನಾಗಿದ್ದು ವಿದ್ಯೆಯನ್ನು ಕಲಿತನು.

ಸ ಮೇ ತತ್ರ ಸಖಾ ಚಾಸೀತ್ ಪ್ರಿಯವಾಗುಪಕಾರಕಃ ।
ತೇನಾಹಂ ಸಹ ಸಂಗಮ್ಯ ರತವಾನ್ ಸುಚಿರಂ ಬತ ॥೩೧॥

ಅಗ್ನಿವೇಶ್ಯರ ಸನ್ನಿಧಿಯಲ್ಲಿ ಅವನು ನನಗೆ ಸ್ನೇಹಿತನೂ, ಹಿತವಾಗಿ ಮಾತನಾಡುವವನೂ ಮತ್ತು ಉಪಕಾರಕನೂ ಆಗಿದ್ದನು. ನಾನು ಅವನ ಜೊತೆಯಲ್ಲಿ ಬಹುಕಾಲ ಸುಖವಾಗಿದ್ದೆನು.

ಸ ಮಾಂ ಸಂಪ್ರಸ್ಥಿತಃ ಪೂರ್ವಂ ಪ್ರಿಯಕಾರೀ ಪ್ರಿಯಂವದಃ ।
ಅಬ್ರವೀದಿತಿ ಮಾಂ ಭೀಷ್ಮ ವಚನಂ ಪ್ರೀತಿವರ್ಧನಮ್ ॥೩೨॥

ಭೀಷ್ಮರೇ, ಅವನು ಅಗ್ನಿವೇಶ್ಯರ ಸನ್ನಿಧಿಯಿಂದ ನನಗಿಂತ ಮೊದಲೇ ಹೊರಟನು. ಪ್ರಿಯಕಾರಿಯೂ, ಪ್ರಿಯಂವದನೂ ಆದ ಅವನು ಹೊರಡುವ ಸಂದರ್ಭದಲ್ಲಿ ಹೀಗೆ ಸಂತೋಷದಾಯಕವಾದ ಮಾತುಗಳನ್ನು ಆಡಿದನು.

ಅಹಂ ಪ್ರಿಯತಮಃ ಪುತ್ರಃ ಪಿತುರೇಕೋ ಮಹಾತ್ಮನಃ ।
ಅಭಿಷೇಕ್ಷ್ಯತಿ ಮಾಂ ರಾಜ್ಯೇ ಸ ಪಾಂಚಾಲೋ ಯದಾ ತದಾ ।
ಭವಿಷ್ಯತಿ ಚ ತೇ ಭೋಜ್ಯಂ ಸಖ್ಯುಃ ಸಖಿಧನಂ ಯಥಾ ॥೩೩॥

ನಾನು ಮಹಾತ್ಮನಾದ ನನ್ನ ತಂದೆಗೆ ಬಹಳ ಪ್ರಿಯನಾದ ಒಬ್ಬನೇ ಪುತ್ರ. ನನಗೆ ಅವನು ಪಾಂಚಾಲ ರಾಜ್ಯದಲ್ಲಿ ಅಭಿಷೇಕ ಮಾಡಿದಾಗ ಸ್ನೇಹಿತನಿಗೆ ಸ್ನೇಹಿತನ ಧನವು ಭೋಗ್ಯವಾಗುವಂತೆ ನಿನಗೆ ಪಾಂಚಾಲ ರಾಜ್ಯವು ಭೋಗ್ಯವಾಗುವುದು

ತದ್ ಭೋಜ್ಯಂ ಭವಿತಾ ರಾಜ್ಯಂ ಸಖೇ ಸತ್ಯೇನ ತೇ ಶಪೇ ।
ಮಮ ಭೋಗಾಶ್ಚ ವಿತ್ತಂ ಚ ತ್ವದಧೀನಾಃ ಸುಖಾನಿ ಚ ॥೩೪॥

ಸ್ನೇಹಿತನೇ, ಪಾಂಚಾಲರಾಜ್ಯವು ನಿಶ್ಚಯವಾಗಿ ನಿನಗೆ ಭೋಗ್ಯವಾಗುತ್ತದೆ. ನಾನು ಪ್ರಮಾಣ ಮಾಡಿ ಹೇಳುತ್ತಿದ್ದೇನೆ. ನನ್ನ ಭೋಗವೂ, ನನ್ನ ಧನವೂ, ನನ್ನ ಸುಖಗಳೂ ಎಲ್ಲವೂ ನಿನ್ನ ಅಧೀನವಾಗಿರುತ್ತವೆ.

ಮಮ ರಾಜ್ಯಂ ಮಹಾಭಾಗ ತ್ವಯಾ ಭೋಕ್ತವ್ಯಮಿಚ್ಛತಾ ।
ಏವಮುಕ್ತ್ವಾ ಪ್ರಚಕ್ರಾಮ ಕೃತಾಸ್ತ್ರಃ ಪೂಜಿತೋ ಮಯಾ ॥೩೫॥

ಮಹಾನುಭಾವನೇ, ನನ್ನ ರಾಜ್ಯವನ್ನು ನಿನ್ನ ಇಚ್ಛೆಯಂತೆ ನೀನು ಭೋಗಿಸಬೇಕು. ಹೀಗೆ ಹೇಳಿ ಅಸ್ತ್ರವಿದ್ಯೆಯನ್ನು ಸಂಪಾದಿಸಿದ್ದ ಅವನು ನನ್ನಿಂದ ಸತ್ಕೃತನಾಗಿ ಪಾಂಚಾಲ ದೇಶಕ್ಕೆ ಹೊರಟನು.

ಉಕ್ತವಾಕ್ಯಮಹಂ ಜ್ಞಾತ್ವಾ ಪ್ರಹೃಷ್ಟೇನಾಂತರಾತ್ಮನಾ ।
ಸೋಽಹಂ ಪಿತೃನಿಯುಕ್ತತ್ವಾತ್ ಪುತ್ರಲೋಭಾದ್ ಯಶಸ್ವಿನೀಮ್ ॥೩೬॥

ಶಾರದ್ವತೀಂ ಮಹಾಪ್ರಾಜ್ಞ ಉಪಯೇಮೇ ಸಮಾಹಿತಃ ।
ಅಗ್ನಿಹೋತ್ರೇ ಚ ಧರ್ಮೇ ಚ ಯಮೇ ಚ ಸತತಂ ರತಾಮ್ ॥೩೭॥

ಅವನ ಮಾತುಗಳನ್ನು ಕೇಳಿ ನಾನು ಮನಸ್ಸಿನಲ್ಲಿ ಬಹಳ ಸಂತೋಷಪಟ್ಟೆನು. ಅನಂತರ ತಂದೆಯ ಅಪ್ಪಣೆಯಂತೆ ಮತ್ತು ಸತ್ಪುತ್ರನನ್ನು ಪಡೆಯುವ ಆಸೆಯಿಂದ ಅಗ್ನಿಹೋತ್ರದಲ್ಲಿಯೂ, ಧರ್ಮದಲ್ಲಿಯೂ, ನಿಯಮಗಳಲ್ಲಿಯೂ ಯಾವಾಗಲೂ ರತಳಾದ, ಕೀರ್ತಿಶಾಲಿನಿಯಾದ ಶರದ್ವಂತರ ಮಗಳಾದ ಕೃಪಿಯನ್ನು ವಿವಾಹ ಮಾಡಿಕೊಂಡೆನು.

ಲೇಭೇ ಚ ಗೌತಮೀ ಪುತ್ರಮಶ್ವತ್ಥಾಮಾನಮಾತ್ಮಜಮ್ ।
ಭೀಮವಿಕ್ರಮಕರ್ಮಾಣಮಾದಿತ್ಯಸಮತೇಜಸಮ್ ।
ಆತ್ಮಜೇನಾಭವಂ ಪ್ರೀತೋ ಭರದ್ವಾಜೋ ಯಥಾ ಮಯಾ ॥೩೮॥

ಮಹಾಪ್ರಾಜ್ಞರೇ, ಗೌತಮಿಯು (ಕೃಪಿಯು) ಭೀಮಪರಾಕ್ರಮವುಳ್ಳ, ಉಗ್ರಕರ್ಮವುಳ್ಳ, ಆದಿತ್ಯನ ಕಾಂತಿಯುಳ್ಳ ಅಶ್ವತ್ಥಾಮನನ್ನು ಮಗನನ್ನಾಗಿ ಪಡೆದಳು. ಭರದ್ವಾಜರು ನನ್ನನ್ನು ಪಡೆದು ಸಂತೋಷಪಟ್ಟಂತೆ ನಾನು ಅಶ್ವತ್ಥಾಮರನನ್ನು ಮಗನಾಗಿ ಪಡೆದು ಸಂತೋಷಪಟ್ಟೆನು.

ಗೋಕ್ಷೀರಂ ಪಿಬತೋ ದೃಷ್ಟ್ವಾ ಧನಿನಾಂ ಸ್ಮ ಕುಮಾರಕಾನ್ ।
ಅಶ್ವತ್ಥಾಮಾऽರುದತ್ ತಾತ ದಿಶೋ ಮೇ ದಶ ಮೋಹಯನ್ ॥೩೯॥

ಪ್ರೀತಿಪಾತ್ರರೇ, ಶ್ರೀಮಂತರ ಕುಮಾರರು ಗೋಕ್ಷೀರವನ್ನು ಕುಡಿಯುವುದನ್ನು ನೋಡಿ ಅಶ್ವತ್ಥಾಮನು ಹಠಹಿಡಿದು ಅತ್ತನು. ಆಗ ನಾನು ದಿಗ್ಭ್ರಮೆಗೆ ಸಿಲುಕಿದೆ.

ಅಥ ಪಿಷ್ಟೋದಕೇನೈವ ಲೋಭಯಂ ವೈ ಕುಮಾರಕಮ್ ।
ಪೀತ್ವಾ ಪಿಷ್ಟೋದಕಂ ತಚ್ಚ ಮಾತೃದತ್ತಂ ಪ್ರಿಯೇಣ ಚ ।
ನೃತ್ಯತಿ ಪ್ರಹಸನ್ ಸ ಸ್ಮ ಪೀತಕ್ಷೀರೋऽಹಮಿತ್ಯುತ ॥೪೦॥

ಆಗ ಕುಮಾರನಿಗೆ ನೀರಿನಲ್ಲಿ ಹಿಟ್ಟನ್ನು ಕದರಿಕೊಟ್ಟು ಪ್ರಲೋಭನೆಗೊಳಿಸಿದೆ. ತಾಯಿಯು ಕೊಟ್ಟ ಪ್ರಿಯವಾದ ಹಿಟ್ಟು ಕದರಿದ ನೀರನ್ನು ಕುಡಿದ ಅವನು ನಾನು ಹಾಲನ್ನು ಕುಡಿದೆ ಎಂದು ನಗುತ್ತಾ ಕುಣಿಯುತ್ತಿದ್ದನು.

ನನರ್ತೋತ್ಥಾಯ ಕೌರವ್ಯ ಹೃಷ್ಟೋ ಬಾಲ್ಯಾದ್ ವಿಮೋಹಿತಃ ।
ತಂ ದೃಷ್ಟ್ವಾ ನೃತ್ಯಮಾನಂ ತು ಬಾಲೈಃ ಪರಿವೃತಂ ಸುತಮ್ ।
ಹಾಸ್ಯತಾಮುಪಸಂಪ್ರಾಪ್ತಂ ಕಶ್ಮಲಂ ತತ್ರ ಮೇऽಭವತ್ ॥೪೧॥

ಬಾಲ್ಯದ ನಿಮಿತ್ತದಿಂದ ವಿಮೋಹಿತನಾಗಿ ಸಂತೋಷದಿಂದ ಎದ್ದು ಕುಣಿಯುತ್ತಿದ್ದನು. ಕುರುಕುಲೋತ್ಪನ್ನರಾದ ಭೀಷ್ಮರೇ, ಕುಣಿಯುತ್ತಿದ್ದ ಅವನನ್ನು ನೋಡಿ ಸುತ್ತುವರಿದ ಬಾಲಕರೆಲ್ಲ (ನಿನಗೆ ಎಲ್ಲಿಯ ಗೋಕ್ಷೀರ ಎಂದು ಹೇಳಿ) ಅವನನ್ನು ಹಾಸ್ಯ ಮಾಡಲು ನನಗೆ ಬಹಳ ಸಂಕಟವಾಯಿತು.

ದ್ರೋಣಂ ಧಿಗಸ್ತ್ವಧನಿನಂ ಯೋ ಧನಂ ನಾಧಿಗಚ್ಛತಿ ।
ಕ್ಷೀರಾರಸಜ್ಞಃ ಕ್ಷೀರಮಿತಿ ಪೀತ್ವಾ ಪಿಷ್ಟಂ ಪ್ರನೃತ್ಯತಿ ।
ಇತಿ ಸಂಭಾಷತಾಂ ವಾಚಂ ಶ್ರುತ್ವಾ ಮೇ ಬುದ್ಧಿರಚ್ಯವತ್ ॥೪೨॥

ಧನವನ್ನು ಸಂಪಾದಿಸದೆ ದರಿದ್ರರಾದ ದ್ರೋಣರಿಗೆ ಧಿಕ್ಕಾರವಿರಲಿ. ಹಾಲಿನ ರುಚಿಯನ್ನು ತಿಳಿಯದ ಅಶ್ವತ್ಥಾಮನು ಹಿಟ್ಟಿನ ನೀರನ್ನು ಕುಡಿದು ಹಾಲು ಎಂದು ಕುಣಿಯುತ್ತಿದ್ದಾನೆ ಎಂದು ಮಾತನಾಡುವವರ ಮಾತುಗಳನ್ನು ಕೇಳಿ ನನಗೆ ಬುದ್ಧಿಭ್ರಂಶವಾಯಿತು.

ಆತ್ಮಾನಂ ಚಾತ್ಮನಾ ಗರ್ಹನ್ ಮನಸೇದಂ ವ್ಯಚಿಂತಯಮ್ ।
ನ ಸ್ನಾತಕೋಽವಸೀದೇತ ವರ್ತಮಾನಃ ಸ್ವಕರ್ಮಣಿ ॥೪೩॥

ನನ್ನನ್ನು ನಾನೇ ನಿಂದಿಸಿಕೊಳ್ಳುತ್ತಾ ಮನಸ್ಸಿನಲ್ಲಿ ವೇದಜ್ಞನಾಗಿ ಸ್ವಕರ್ಮದಲ್ಲಿ ನಿರತನಾದವನು ಎಂದೂ ಸಂಕಟಕ್ಕೆ ಗುರಿಯಾಗಬಾರದು ಎಂದು ಯೋಚಿಸಿದೆನು.

ಇತಿ ಸಂಚಿಂತ್ಯ ಮನಸಾ ತಂ ದೇಶಂ ಬಹುಶೋಭಿತಮ್ ।
ವಿಶುದ್ಧಮಿಚ್ಛನ್ ಗಾಂಗೇಯ ಧರ್ಮೋಪೇತಂ ಪ್ರತಿಗ್ರಹಮ್ ।
ಅನ್ನಾದನ್ಯತ್ ಪರಿಕ್ರಮ್ಯ ನಾಧ್ಯಗಚ್ಛಂ ಪ್ರತಿಗ್ರಹಮ್ ॥೪೪॥

ಗಾಂಗೇಯನೇ, ಹೀಗೆ ಮನಸ್ಸಿನಲ್ಲಿ ಯೋಚಿಸಿ ಧರ್ಮಯುಕ್ತವಾದ, ವಿಶುದ್ಧವಾದ ಅನ್ನಭಿನ್ನವಾದ ಪ್ರತಿಗ್ರಹವನ್ನು ಬಯಸಿ ಸಮೃದ್ಧವಾದ ದೇಶಗಳಿಗೆ ವೃತ್ತಿಯ ನಿಮಿತ್ತವಾಗಿ ಹೋಗುತ್ತಾ ಯಾವ ಪ್ರತಿಗ್ರಹವನ್ನೂ ಪಡೆಯಲಿಲ್ಲ.

ಆಗಚ್ಛತೀತಿ ಜಾನಂಸ್ತಾನಹಂ ದೇಶಾನ್ ಬಹೂನಪಿ ।
ಅವಿಲೋಪೇನ ಧರ್ಮಸ್ಯ ಸ ತ್ವಹಂ ಧರ್ಮಸಂಸ್ಥಿತಃ ।
ಅಯಾಚಿತ್ವಾ ಪರಿಕ್ರಾಮನ್ ನಾಧ್ಯಗಚ್ಛಂ ಧನಂ ಕ್ವಚಿತ್ ॥೪೫॥

ಧರ್ಮಸಂಸ್ಥಿತನಾದ ನಾನು ಧರ್ಮದ ಲೋಪವಾಗದಂತೆ ನನಗೆ ಪ್ರತಿಗ್ರಹವು ದೊರೆಯಬಹುದು ಎಂಬ ಆಸೆಯಿಂದ ಅನೇಕ ದೇಶಗಳಿಗೆ ಹೋಗಿ ಯಾಚನೆಯನ್ನು ಮಾಡದೆ ತಿರುಗಾಡಿದರೂ ನನಗೆ ಧನವು ದೊರೆಯಲಿಲ್ಲ.

ಅಪಿ ನಾಹಂ ಸುರೈರ್ವಿಪ್ರೈರ್ವರ್ಜಿತಾಂ ಗರ್ಹಿತಾಂ ಭೃಶಮ್ ।
ಪರೋಪಸೇವಾಂ ಪಾಪಿಷ್ಠಾಮಾಚರೇಯಂ ಧನಾಶಯಾ ॥೪೬॥

ನಾನಾದರೋ ಧನದ ಆಶೆಯಿಂದ ದೇವತೆಗಳಿಂದಲೂ ಮತ್ತು ಬ್ರಾಹ್ಮಣರಿಂದಲೂ ವರ್ಜಿತವಾದ ಅತ್ಯಂತ ನಿಂದ್ಯವೂ ಮತ್ತು ಪಾಪಿಷ್ಠವೂ ಆದ ಪರಸೇವೆಯನ್ನು ಮಾಡಲಾರೆ.

ಇತಿ ಮತ್ವಾ ಪ್ರಿಯಂ ಪೂರ್ವಂ ವಕ್ತಾರಂ ಸೂನೃತಾಂ ಗಿರಮ್ ।
ಪೂರ್ವಸಂಗತಸಂಸಿದ್ಧಂ ಸದಾರಃ ಸೋಮಕಂ ಗತಃ ॥೪೭॥

ಹೀಗೆ ಯೋಚಿಸಿ, ಹಿಂದೆ ನನಗೆ ಪ್ರಿಯನಾಗಿದ್ದವನೂ, ಒಳ್ಳೆಯ ಮಾತುಗಳನ್ನು ಆಡುವವನೂ, ನನ್ನ ಸ್ನೇಹಿತನಾಗಿ ಸಂಗತನಾದವನೂ ಆದ ಸೋಮಕರಾಜನ ಬಳಿಗೆ ಪತ್ನೀಸಹಿತನಾಗಿ ಹೋದೆನು.

ಅಭಿಷಿಕ್ತಂ ಚ ಶ್ರುತ್ವೈನಂ ಕೃತಾರ್ಥೋಽಸ್ಮೀತಿ ಚಿಂತಯನ್ ।
ಪ್ರಿಯಂ ಸಖಾಯಂ ಸುಪ್ರೀತೋ ರಾಜ್ಯಸ್ಥಂ ಸಮುಪಾಗಮಮ್ ॥೪೮॥

ಅವನು ಅಭಿಷಿಕ್ತನಾಗಿದ್ದಾನೆ ಎಂಬ ವಾರ್ತೆಯನ್ನು ಕೇಳಿ ನಾನು ಕೃತಾರ್ಥ ಎಂದು ಯೋಚಿಸುತ್ತಾ ರಾಜ್ಯಸ್ಥನಾದ ನನ್ನ ಪ್ರಿಯಸ್ನೇಹಿತನ ಬಳಿಗೆ ಸಂತೋಷದಿಂದ ಹೋದೆನು.

ಸಂಸ್ಮರನ್ ಸಂಗತಂ ಚೈವ ವಚನಂ ಚೈವ ತಸ್ಯ ತತ್ ।
ತತೋ ದ್ರುಪದಮಾಗಮ್ಯ ಸಖಿಪೂರ್ವಮಹಂ ಪ್ರಭೋ ॥೪೯॥

ಅಬ್ರುವಂ ಪುರುಷವ್ಯಾಘ್ರ ಸಖಾಯಂ ವಿದ್ಧಿ ಮಾಮಿತಿ ।
ಉಪಸ್ಥಿತಂ ತು ದ್ರುಪದಃ ಸಖಿಪೂರ್ವಂ ಸಮಾಗತಮ್ ॥೫೦॥

ಭೀಷ್ಮರೇ, ಪೂರ್ವಸಂಬಂಧವನ್ನೂ, ಅವನು ಆಡಿದ ಆ ಮಾತುಗಳನ್ನೂ ಸ್ಮರಿಸಿಕೊಂಡು ಹಿಂದೆ ಸ್ನೇಹಿತನಾಗಿದ್ದ ನಾನು ದ್ರುಪದನನ್ನು ಸಮೀಪಿಸಿ, ಪುರುಷವ್ಯಾಘ್ರನೇ ನನ್ನನ್ನು ನಿನ್ನ ಸ್ನೇಹಿತ ಎಂದು ತಿಳಿ ಎಂದು ಹೇಳಿದೆನು.

ಸ ಮಾಂ ನಿರಾಕಾರಮಿವ ಪ್ರಹಸನ್ನಿದಮಬ್ರವೀತ್ ।
ಅಕೃತೇಯಂ ತವ ಪ್ರಜ್ಞಾ ಬ್ರಹ್ಮನ್ ನಾತಿಸಮಂಜಸೀ ।
ಯದಾತ್ಥ ಮಾಂ ತ್ವಂ ಪ್ರಸಭಂ ಸಖಾ ತೇಽಹಮಿತಿ ದ್ವಿಜ ॥೫೧॥

ಪೂರ್ವ ಸ್ನೇಹಿತನಾದ ಆ ದ್ರುಪದನು ಬಳಿಗೆ ಬಂದಿದ್ದ ನನ್ನನ್ನು ನೋಡಿ ನಗುತ್ತಾ ನನ್ನನ್ನು ಅಪ್ರಯೋಜಕನೆಂದು ತಿಳಿದು ಹೀಗೆ ಹೇಳಿದನು. ಬ್ರಾಹ್ಮಣನೇ, ನಿನ್ನ ಬುದ್ಧಿಯು ಸರಿಯಾಗಿಲ್ಲ, ಅದು ಸಂಸ್ಕಾರ ಶೂನ್ಯವಾಗಿದೆ. ಆದ್ದರಿಂದ ನೀನು ನನ್ನ ಬಳಿಗೆ ಶೀಘ್ರವಾಗಿ ಬಂದು ನಾನು ನಿನ್ನ ಸ್ನೇಹಿತ ಎಂದು ಹೇಳುತ್ತಿದ್ದೀಯೆ.

ನಹಿ ರಾಜ್ಞಾಮುದೀರ್ಣಾನಾಮೇವಂಭೂತೈರ್ನರೈಃ ಕ್ವಚಿತ್ ।
ಸಖ್ಯಂ ಭವತಿ ಮಂದಾತ್ಮನ್ ಶ್ರಿಯಾ ಹೀನೈರ್ಧನಚ್ಯುತೈಃ ॥೫೨॥

ನಾಶ್ರೋತ್ರಿಯಃ ಶ್ರೋತ್ರಿಯಸ್ಯ ನಾರಥೀ ರಥಿನಃ ಸಖಾ ।
ನಾರಾಜಾ ಪಾರ್ಥಿವಸ್ಯಾಪಿ ಸಖಿಪೂರ್ವಂ ಕಿಮಿಷ್ಯತೇ ॥೫೩॥

ಮಂದಾತ್ಮನೇ, ಸಂಪತ್ತಿನಿಂದ ಸಮೃದ್ಧರಾದ ರಾಜರಿಗೆ ಧನದಿಂದಲೂ, ಸಂಪತ್ತಿನಿಂದಲೂ ಚ್ಯುತರಾದ ಮನುಷ್ಯರ ಜೊತೆಯಲ್ಲಿ ಎಂದೂ ಸ್ನೇಹವು ಉಂಟಾಗುವುದಿಲ್ಲ. ಅಶ್ರೋತ್ರಿಯನಾದವನು ಶ್ರೋತ್ರಿಯನಿಗೂ, ರಥವಿಲ್ಲದವನು ರಥಿಕನಿಗೂ ಸ್ನೇಹಿತನಾಗುವುದಿಲ್ಲ. ರಾಜನಲ್ಲದವನು ರಾಜನಿಗೆ ಎಂದೂ ಸ್ನೇಹಿತನಾಗುವುದಿಲ್ಲ. ಕಳೆದುಹೋದ ಸ್ನೇಹವನ್ನು ಏತಕ್ಕೆ ಬಯಸುತ್ತಿದ್ದೀಯೆ?

ದ್ರುಪದೇನೈವಮುಕ್ತೋಽಹಂ ಮನ್ಯುನಾಽಭಿಪರಿಪ್ಲುತಃ ।
ಅಭ್ಯಾಗಚ್ಛಂ ಕುರೂನ್ ಭೀಷ್ಮ ಶಿಷ್ಯೈರರ್ಥೀ ಗುಣಾನ್ವಿತೈಃ ॥೫೪॥

ಭೀಷ್ಮರೇ, ದ್ರುಪದನಿಂದ ಹೀಗೆ ಹೇಳಲ್ಪಟ್ಟನಾನು ಕೋಪದಿಂದ ಕೂಡಿದವನಾಗಿ ಗುಣಾನ್ವಿತರಾದ ಶಿಷ್ಯರಿಂದ ನನ್ನ ಕಾರ್ಯವನ್ನು ಸಾಧಿಸುವ ದೃಷ್ಟಿಯಿಂದ ಶಿಷ್ಯರನ್ನು ಹುಡುಕುತ್ತಾ ಕುರುದೇಶಕ್ಕೆ ಬಂದೆನು.

ವೈಶಂಪಾಯನಃ

ಪ್ರತಿಜಗ್ರಾಹ ತಂ ಭೀಷ್ಮೋ ಕುರುಪಾಂಡುಸುತೈಃ ಸಹ ।
ಪೌತ್ರನಾದಾಯ ತಾನ್ ಸರ್ವಾನ್ ವಸೂನಿ ವಿವಿಧಾನಿ ಚ ।
ಶಿಷ್ಯಾ ಇತಿ ದದೌ ರಾಜನ್ ದ್ರೋಣಾಯ ವಿಧಿಪೂರ್ವಕಮ್ ॥೫೫॥

ಭೀಷ್ಮರು ಕುರುಪಾಂಡುಕುಮಾರರ ಜೊತೆಯಲ್ಲಿ ಅವರನ್ನು ಸ್ವೀಕರಿಸಿದರು. ವಿಧವಿಧವಾದ ದ್ರವ್ಯವನ್ನು ದ್ರೋಣರಿಗೆ ಕೊಟ್ಟುತನ್ನ ಮೊಮ್ಮಕ್ಕಳನ್ನು ಕರೆದುಕೊಂಡು ಬಂದು, ಇವರು ನಿಮ್ಮ ಶಿಷ್ಯರು ಎಂದು ಹೇಳಿ ದ್ರೋಣರಿಗೆ ವಿಧಿಪೂರ್ವಕವಾಗಿ ಒಪ್ಪಿಸಿದರು.

ಸ ಚ ಶಿಷ್ಯಾನ್ ಮಹೇಷ್ವಾಸಃ ಪ್ರತಿಜಗ್ರಾಹ ಕೌರವಾನ್ ।
ಪ್ರತಿಗೃಹ್ಯ ಚ ತಾನ್ ಸರ್ವಾನ್ ದ್ರೋಣೋ ವಚನಮಬ್ರವೀತ್ ।
ರಹಸ್ಯೇತಾನ್ ಪ್ರತೀತಾತ್ಮಾ ಕೃತೋಪಸದನಾಂಸ್ತಥಾ ॥೫೬॥

ಮಹಾಧನುರ್ಧಾರಿಗಳಾದ ದ್ರೋಣರು ಕೌರವರೆಲ್ಲರನ್ನೂ ಶಿಷ್ಯರನ್ನಾಗಿ ಸ್ವೀಕರಿಸಿ ರಹಸ್ಯದಲ್ಲಿ ಸಮೀಪದಲ್ಲಿ ಕುಳಿತಿದ್ದ ಅವರನ್ನು ಕುರಿತು ತಮ್ಮ ಸ್ಪಷ್ಟವಾದ ಮನಸ್ಸಿನಿಂದ ಮಾತನಾಡಿದರು.

ಕಾರ್ಯಂ ಮೇ ಕಾಂಕ್ಷಿತಂ ಕಿಂಚಿದ್ ಹೃದಿ ಸಂಪರಿವರ್ತತೇ ।
ಕೃತಾಸ್ತ್ರೈಸ್ತತ್ ಪ್ರದೇಯಂ ಮೇ ತದ್ ದ್ರುತಂ ವದತಾನಘಾಃ ॥೫೭॥

ನನಗೆ ಒಂದು ಅಪೇಕ್ಷಿತವಾದ ಕಾರ್ಯವಾಗಬೇಕೆಂದು ನನ್ನ ಮನಸ್ಸಿನಲ್ಲಿದೆ. ನೀವು ಅಸ್ತ್ರಸಂಪಾದನೆಯನ್ನು ಮಾಡಿದ ಮೇಲೆ ಅದನ್ನು ನನಗೆ ಮಾಡಿಕೊಡಬೇಕು. ಅನಘರೇ ಯಾರು ಮಾಡಿಕೊಡುವಿರಿ ಎಂದು ಬೇಗ ಹೇಳಿ ಎಂದು ಹೇಳಿದರು.

ವೈಶಂಪಾಯನಃ

ತಚ್ಛ್ರುತ್ವಾ ಕೌರವೇಯಾಸ್ತೇ ತೂಷ್ಣೀಮಾಸನ್ ವಿಶಾಂಪತೇ ।
ಅರ್ಜುನಸ್ತು ತತಃ ಸರ್ವಂ ಪ್ರತಿಜಜ್ಞೇ ಪರಂತಪ ॥೫೮॥

ಪರಂತಪನಾದ ರಾಜನೇ, ಆ ಮಾತನ್ನು ಕೇಳಿದ ದುರ್ಯೋಧನ ಮೊದಲಾದವರು ಸುಮ್ಮನಿದ್ದರು. ಅರ್ಜುನನು, ನಾನು ಎಲ್ಲವನ್ನೂ ಮಾಡಿಕೊಡುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿದನು.

ತತೋಽರ್ಜುನಂ ಮೂರ್ಧ್ನಿತದಾ ಸಮಾಘ್ರಾಯ ಪುನಃ ಪುನಃ ।
ಪ್ರೀತಿಪೂರ್ವಂ ಪರಿಷ್ವಜ್ಯ ಪ್ರರುರೋದ ಮುದಾ ತದಾ ॥೫೯॥

ಆಗ ದ್ರೋಣರು ಅರ್ಜುನನನ್ನು ಪ್ರೀತಿಪೂರ್ವಕವಾಗಿ ಆಲಿಂಗಿಸಿ ಅವನ ಶಿರಸ್ಸನ್ನು ಮತ್ತೆ ಮತ್ತೆ ಆಘ್ರಾಣಿಸಿ ಸಂತೋಷದಿಂದ ಅತ್ತರು.

ಅಶ್ವತ್ಥಾಮಾನಮಾಹೂಯ ದ್ರೋಣೋ ವಚನಮಬ್ರವೀತ್ ।
ಸಖಾಯಂ ವಿದ್ಧಿ ತೇ ಪಾರ್ಥಂ ಮಯಾ ದತ್ತಂ ಪ್ರಗೃಹ್ಯತಾಮ್ ॥೬೦॥

ದ್ರೋಣರು ಅಶ್ವತ್ಥಾಮರನ್ನು ಕರೆದು ಅರ್ಜುನನನ್ನು ನಿನ್ನ ಸ್ನೇಹಿತನೆಂದು ತಿಳಿ ನಾನು ನಿನಗೆ ಅವನನ್ನು ಕೊಡುತ್ತಿದ್ದೇನೆ, ಸ್ವೀಕರಿಸು ಎಂದು ಹೇಳಿದರು.

ಸಾಧು ಸಾಧ್ವಿತಿ ತಂ ಪಾರ್ಥಃ ಪರಿಷ್ವಜ್ಯೇದಮಬ್ರವೀತ್ ।
ಅದ್ಯಪ್ರಭೃತಿ ವಿಪ್ರೇಂದ್ರ ಪರವಾನಸ್ಮಿ ಧರ್ಮತಃ ॥೬೧॥

ಶಿಷ್ಯೋಽಹಂ ತ್ವತ್ಪ್ರಸಾದೇನ ಜೀವಾಮಿ ದ್ವಿಜಸತ್ತಮ ।
ಇತ್ಯುಕ್ತ್ವಾ ತು ತದಾ ಪಾರ್ಥಃ ಪಾದೌ ಜಗ್ರಾಹ ಪಾಂಡವಃ ॥೬೨॥

ಒಳ್ಳೆಯದು ಒಳ್ಳೆಯದು ಎಂದು ಹೇಳಿ ಅರ್ಜುನನು ಅಶ್ವತ್ಥಾಮರನ್ನು ಆಲಿಂಗಿಸಿ, ಏಪ್ರೇಂದ್ರರೇ, ನಾನು ಈ ದಿನದಿಂದ ಧಾರ್ಮಿಕವಾಗಿ ನಿಮ್ಮ ಅಧೀನನಾಗಿದ್ದೇನೆ. ದ್ವಿಜಶ್ರೇಷ್ಠರೇ, ನಿಮ್ಮ ಶಿಷ್ಯನಾಗಿ ನಿಮ್ಮ ಅನುಗ್ರಹದಿಂದ ಬದುಕಿದ್ದೇನೆ ಎಂದು ಹೇಳಿ ಪಾಂಡುಪುತ್ರನಾದ ಅರ್ಜುನನು ಅವರ ಪಾದಗಳನ್ನು ಹಿಡಿದುಕೊಂಡನು.

ತತೋ ದ್ರೋಣಃ ಪಾಂಡುಪುತ್ರಾನಸ್ತ್ರಾಣಿ ವಿವಿಧಾನಿ ಚ ।
ಗ್ರಾಹಯಾಮಾಸ ದಿವ್ಯಾನಿ ಮಾನುಷಾಣಿ ಚ ವೀರ್ಯವಾನ್ ॥೬೩॥

ಅನಂತರ ಪರಾಕ್ರಮಶಾಲಿಗಳಾದ ದ್ರೋಣರು ಪಾಂಡುಪುತ್ರರಿಗೆ ಅನೇಕ ದಿವ್ಯಾಸ್ತ್ರಗಳನ್ನೂ ಮತ್ತು ಮಾನುಷಾಸ್ತ್ರಗಳನ್ನೂ ಕಲಿಸಿದರು.

ರಾಜಪುತ್ರಾಸ್ತಥೈವಾನ್ಯೇ ಸಮೇತ್ಯ ಭರತರ್ಷಭಾಃ ।
ಅಭಿಜಗ್ಮುಸ್ತತೋ ದ್ರೋಣಮಸ್ತ್ರಾರ್ಥಂ ದ್ವಿಜಸತ್ತಮಮ್ ॥೬೪॥

ಹಾಗೆಯೇ, ಬೇರೆ ರಾಜಕುಮಾರರೂ, ಭರತವಂಶದ ಬೇರೆ ರಾಜರೂ ಸಹ ದ್ವಿಜಶ್ರೇಷ್ಠರಾದ ದ್ರೋಣರ ಬಳಿಗೆ ಅಸ್ತ್ರಗಳನ್ನು ಕಲಿಯುವ ಸಲುವಾಗಿ ಬಂದರು.

ವೃಷ್ಣಯಶ್ಚಾಂಧಕಾಶ್ಚೈವ ನಾನಾದೇಶ್ಯಾಶ್ಚ ಪಾರ್ಥಿವಾಃ ।
ಸೂತಪುತ್ರಶ್ಚ ರಾಧೇಯೋ ಗುರುಂ ದ್ರೋಣಮಿಯಾತ್ ತದಾ ॥೬೫॥

ಆಗ ವೃಷ್ಣಿಗಳು, ಅಂಧಕರು, ಅನೇಕ ದೇಶದ ರಾಜರುಗಳು, ಸೂತಪುತ್ರನಾದ ಕರ್ಣ, ಎಲ್ಲರೂ ದ್ರೋಣರ ಬಳಿಗೆ ಬಂದರು.

ಸ್ಪರ್ಧಮಾನಸ್ತು ಪಾರ್ಥೇನ ಸೂತಪುತ್ರೋಽತ್ಯಮರ್ಷಣಃ ।
ದುರ್ಯೋಧನಮುಪಾಶ್ರಿತ್ಯ ಪಾಂಡವಾನವಮನ್ಯತ ॥೬೬॥

ಸೂತಪುತ್ರನಾದ ಕರ್ಣನು ಯಾವಾಗಲೂ ಸಿಟ್ಟಿನಿಂದ ಕೂಡಿದವನಾಗಿ ಅರ್ಜುನನ ಜೊತೆಯಲ್ಲಿ ಸ್ಪರ್ಧೆಯನ್ನು ಮಾಡುತ್ತಾ ದುರ್ಯೋಧನನನ್ನು ಆಶ್ರಯಿಸಿ ಪಾಂಡವರಿಗೆ ಅವಮಾನವನ್ನು ಮಾಡುತ್ತಿದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ತ್ರಿಂಶತ್ಯಧಿಕಶತತಮೋಽಧ್ಯಾಯಃ ॥
॥ ಸಂಭವಪರ್ವಣಿ ಅಷ್ಟಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಮೂವತ್ತನೆಯ ಅಧ್ಯಾಯ ಮುಗಿಯಿತು.

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೫

ತತಃ ಕದಾಚಿದ್ ಧೃತರಾಷ್ಟ್ರಪುತ್ರೈಃ
ಪಾಂಡೋಃ ಸುತಾ ಮೃಗಯಾಂ ಸಂಪ್ರಯಾತಾಃ ।
ಅಗ್ರೇ ಗಚ್ಛನ್ ಸಾರಮೇಯೋ ರುರಾವ
ಧರ್ಮಾತ್ಮಜಸ್ಯಾತ್ರ ವನೇ ಮೃಗಾರ್ಥೀ ॥೬೦॥

ಒಂದು ದಿನ ಕೌರವರೊಂದಿಗೆ ಪಾಂಡವರು ಬೇಟೆಗೆ ಹೊರಟರು. ಕಾಡಿನಲ್ಲಿ ಮುಂದೆ ಹೋಗುತ್ತಿದ್ದ ಧರ್ಮರಾಜನೆ ಬೇಟೆನಾಯಿ ಮೃಗಾರ್ಥಿಯಾಗಿ ಬೊಗಳಿತು.

ಶ್ರುತ್ವಾರಾವಂ ಸಾರಮೇಯಸ್ಯ ದೂರಾ
ಚ್ಛರೈರ್ಮುಖಂ ಶಬ್ದವೇಧೀ ಪುಪೂರೇ ।
ಸ ಏಕಲವ್ಯೋ ವ್ರಣಮಸ್ಯ ನಾಕರೋತ್
ಶ್ವಾ ಪೂರಿತಾಸ್ಯ ಪಾಂಡವಾನಭ್ಯಯಾತ್ ಸಃ ॥೬೧॥

ದೂರದಿಂದ ನಾಯಿ ಬೊಗಳುವ ಶಬ್ದ ಕೇಳಿ ಶಬ್ದವೇಧಿಯಾದ ಏಕಲವ್ಯ ಬಾಣಗಳಿಂದ ನಾಯಿಯ ಬಾಯಿಯನ್ನು ತುಂಬಿಸಿದ. ಗಾಯ ಉಂಟುಮಾಡಲಿಲ್ಲ. ಬಾಯಿ ತುಂಬ ಬಾಣವಿಟ್ಟುಕೊಂಡು ನಾಯಿ ಪಾಂಡವರ ಬಳಿಗೆ ಬಂದಿತು.

ದೃಷ್ಟ್ವಾ ಚಿತ್ರಂ ಕುರವಃ ಪಾಂಡವಾಶ್ಚ
ದ್ರಷ್ಟುಂ ಕರ್ತಾರಂ ಮಾರ್ಗಯಾಮಾಸುರತ್ರ ।
ದ್ರೋಣಾಕೃತಿಂ ಮಾರ್ತಿಕೀಂ ಪೂಜಯಂತಂ
ದದೃಶುಶ್ಚೈನಂ ಧನುರೇವಾಭ್ಯಸಂತಮ್ ॥೬೨॥

ಕೌರವರೂ ಪಾಂಡವರೂ ಈ ವಿಚಿತ್ರವನ್ನು ಕಂಡು ಅದರ ಕರ್ತನನ್ನು ಕಾಣಲು ಕಾಡಿನಲ್ಲಿ ಅನ್ವೇಷಣೆ ಮಾಡಿದರು. ಮಣ್ಣಿನ ದ್ರೋಣಮೂರ್ತಿಯನ್ನು ಪೂಜಿಸುತ್ತ ಬಿಲ್ಲನ್ನು ಅಭ್ಯಾಸಮಾಡುತ್ತಿದ್ದ ಏಕಲವ್ಯನನ್ನು ಕಂಡರು.

ಪೈಶಾಚಮೇವೈಷ ಪಿಶಾಚಕೇಭ್ಯಃ
ಪೂರ್ವಂ ವಿವೇದಾಸ್ತ್ರವೃಂದಂ ನಿಷಾದಃ ।
ದಿವ್ಯಾನ್ಯಸ್ತ್ರಾಣ್ಯಾಪ್ತುಮೇತಾಂ ಚ ಶಿಕ್ಷಾಂ
ದ್ರೋಣಂ ಸದಾ ಪೂಜಯತಿ ಸ್ಮ ಭಕ್ತ್ಯಾ ॥೬೩॥

ಬೇಡನಾದ ಈ ಏಕಲವ್ಯ ಹಿಂದೆ ಪಿಶಾಚಿಗಳಿಂದಲೆ ಪೈಶಾಚಾಸ್ತ್ರಗಳ ಸಮೂಹವನ್ನು ಚೆನ್ನಾಗಿ ತಿಳಿದಿದ. ಈಗ ದಿವ್ಯ ಅಸ್ತ್ರಗಳನ್ನೂ ತಿಳಿಯಬೇಕೆಂದು ಈ ಶಿಕ್ಷಣಕ್ಕಾಗಿ ದ್ರೋಣನ್ನು ಸದಾ ಭಕ್ತಿಯಿಂದ ಪೂಜಿಸುತ್ತಿದ್ದ.

ದೃಷ್ಟ್ವಾ ವಿಶೇಷಂ ತಮಮುಷ್ಯ ಪಾರ್ಥೋ
ದ್ರೋಣಾಯೋಚೇ ತ್ವದ್ವಚೋ ಮೇ ಮೃಷಾಸೀತ್ ।
ಇತ್ಯುಕ್ತ ಏನಂ ತ್ವಭಿಗಮ್ಯ ದಕ್ಷಿಣಾಂ
ವಿಪ್ರೋ ಯಯಾಚೇ ದಕ್ಷಿಣಾಂಗುಷ್ಠಮೇವ ॥೬೪॥

ಏಕಲವ್ಯನ ಈ ವಿಶೇಷ ವಿದ್ಯೆಯನ್ನು ನೋಡಿ ಅರ್ಜುನ ದ್ರೋಣನಿಗೆ ಹೇಳಿದ. 'ನನಗೆ ನೀವು ಕೊಟ್ಟ ಮಾತು ಸುಳ್ಳಾಯಿತು'. ಹೀಗೆ ಹೇಳಿದಾಗ ದ್ರೋಣ ಏಕಲವ್ಯನ ಬಳಿಗೆ ಬಂದು ಬಲಗೈ ಹೆಬ್ಬೆಟ್ಟನ್ನು ಗುರುದಕ್ಷಿಣೆಯಾಗಿ ಕೇಳಿದ.

ತಸ್ಯ ಪ್ರಸಾದೋಪಚಿತೋರುಶಿಕ್ಷೋ
ನಿಷಾದೋಽದಾದ್ ದಕ್ಷಿಣಾಂಗುಷ್ಠಮಸ್ಯೈ ।
ತತಃ ಪರಂ ನಾಸ್ಯ ಬಭೂವ
ಶಿಕ್ಷಾ ಸನ್ಮುಷ್ಟಿಹೀನಸ್ಯ ಸಮಾರ್ಜುನೇನ ॥೬೫॥

ದ್ರೋಣನ ಅನುಗ್ರಹದಿಂದ ಹೆಚ್ಚಿನ ಉತ್ತಮ ಶಿಕ್ಷಣ ಹೊಂದಿದ್ದ ಏಕಲವ್ಯ ಅವನಿಗೆ ಬಲಗೈ ಹೆಬ್ಬೆರಳನ್ನು ದಕ್ಷಿಣೆಯಾಗಿ ಕೊಟ್ಟ. ಇದಾದ ಬಳಿಕ ಸರಿಯಾದ ಮುಷ್ಟಿಬಲವಿಲ್ಲದ ಏಕಲವ್ಯನಿಗೆ ಅರ್ಜುನನಿಗೆ ಸಾಟಿಯಾದ ಧನುರ್ವಿದ್ಯೆ ಇಲ್ಲದಾಯಿತು.

ಪುನಃ ಕೃಪಾಲೂ ರೈವತಪರ್ವತೇ ತಂ
ದ್ರೋಣಃ ಪ್ರಾದಾದಸ್ತ್ರವರಾಣಿ ತಸ್ಮೈ ।
ಏಕಾಂತ ಏಕಾಸ್ಯ ಭಕ್ತ್ಯಾಸುತುಷ್ಟೋ
ಧನುಶ್ರೇಷ್ಠಂ ಕೃತವಾನರ್ಜುನಂ ಚ ॥೬೬॥

ಕೃಪಾಳುವಾದ ದ್ರೋಣನೇ ಪುನಃ ಏಕಲವ್ಯನ ಭಕ್ತಿಗೆ ಮೆಚ್ಚಿ ರೈವತ ಪರ್ವದಲ್ಲಿ ಏಕಾಂತದಲ್ಲಿ ಅವನಿಗೆ ಉತ್ತಮ ಅಸ್ತ್ರಗಳನ್ನು ಉಪದೇಶಿಸಿದ. ಅವನನ್ನು ಶ್ರೇಷ್ಠ ಬಿಲ್ಲುಗಾರನನ್ನಾಗಿ ಮಾಡಿದ. ಅರ್ಜುನನನ್ನು ಅವನಿಗಿಂತಲೂ ಶ್ರೇಷ್ಠ ಧನುರ್ಧರನನ್ನಾಗಿ ಮಾಡಿದ.

ನೂರಮೂವತ್ತೊಂದನೆಯ ಅಧ್ಯಾಯ

(ಏಕಲವ್ಯಕಥಾ, ಅವನ ಗುರುಭಕ್ತಿ ಮತ್ತು ಗುರುದಕ್ಷಿಣಾದಾನ)

ವೈಶಂಪಾಯನಃ

ಅರ್ಜುನಸ್ತು ಪರಂ ಯತ್ನಮಾತಸ್ಥೇ ಗುರುಪೂಜನೇ ।
ಅಸ್ತ್ರೇ ಚ ಪರಮೇ ಯೋಗೇ ಪ್ರಿಯೋ ದ್ರೋಣಸ್ಯ ಚಾಭವತ್ ॥೧॥

ಅರ್ಜುನನು ಗುರುಪೂಜೆಯನ್ನು ಮಾಡುವುದರಲ್ಲಿ ಬಹಳ ಪ್ರಯತ್ನಶೀಲನಾದನು. ಅಸ್ತ್ರಗಳಲ್ಲಿಯೂ, ಉಳಿದ ಶ್ರೇಷ್ಠ ಯೋಗಗಳಲ್ಲಿಯೂ ದ್ರೋಣರಿಗೆ ಅತ್ಯಂತ ಪ್ರಿಯನಾದನು.

ದ್ರೋಣೇನ ಚ ಸಮಾಹೂಯ ರಹಸ್ಯುಕ್ತೋऽನ್ನಸಾಧಕಃ ।
ಅಂಧಕಾರೇऽರ್ಜುನಾಯಾನ್ನಂ ನ ದೇಯಂ ತೇ ಕದಾಚನ ॥೨॥

ದ್ರೋಣರು ಅರ್ಜುನನಿಗೆ ಊಟವನ್ನು ಬಡಿಸುವವನನ್ನು ಏಕಾಂತದಲ್ಲಿ ಕರೆದು ನೀನು ಅರ್ಜುನನಿಗೆ ಕತ್ತಲಿನಲ್ಲಿ ಎಂದೂ ಬಡಿಸಬಾರದು ಎಂದು ಹೇಳಿದರು.

ತತಃ ಕದಾಚಿತ್ ಭುಂಜಾನೇ ಪ್ರವವೌ ವಾಯುರರ್ಜುನೇ ।
ತೇನ ದೀಪಸ್ತು ಸಹಸಾ ನಿರ್ವಾಪಿತ ಇತಿ ಶ್ರುತಿಃ ॥೩॥

ಅನಂತರ ಒಮ್ಮೆ ರಾತ್ರಿ ಅರ್ಜುನನು ಊಟ ಮಾಡುತ್ತಿದ್ದಾಗ ಬಲವಾದ ಗಾಳಿಯು ಬೀಸಿ ಉರಿಯುತ್ತಿದ್ದ ದೀಪವು ಆರಿಹೋಯಿತು ಎಂದು ಕೇಳಿದ್ದೇವೆ.

ಭುಕ್ತವಾನೇವ ಕೌಂತೇಯೋ ನಚಾಸ್ಮಾತ್ ಸ ನ್ಯವರ್ತತ ।
ಹಸ್ತತೇಜಸ್ವಿನೋ ನಿತ್ಯಮಭ್ಯಾಸಕೃತಕಾರಣಾತ್ ॥೪॥

ನಿತ್ಯವೂ ಧನುರ್ವಿದ್ಯೆಯನ್ನು ಅಭ್ಯಾಸ ಮಾಡುವ ಕಾರಣದಿಂದ ಹಸ್ತದಲ್ಲಿ ಪ್ರಕಾಶವುಳ್ಳ ಅರ್ಜುನನು ಭೋಜನವನ್ನು ಮುಂದುವರಿಸಿದನು, ನಿಲ್ಲಿಸಲಿಲ್ಲ.

ಕತ್ತಲಿನಲ್ಲಿ ಅವನ ಹಸ್ತದ ಪ್ರಕಾಶವು ಇನ್ನೊಬ್ಬರಿಗೆ ಕಾಣುತ್ತದೆ. ಬೆಳಕಿನಲ್ಲಾದರೆ ಕಾಣುವುದಿಲ್ಲ. ಆದ್ದರಿಂದ ಅರ್ಜುನನ ಹಸ್ತಪ್ರಕಾಶವು ಇನ್ನೊಬ್ಬರಿಗೆ ತಿಳಿಯಬಾರದೆಂಬ ಉದ್ದೇಶದಿಂದ ದ್ರೋಣರು ಬಡಿಸುವವನಿಗೆ ಕತ್ತಲೆಯಲ್ಲಿ ಬಡಿಸಬಾರದು ಎಂದು ಹೇಳಿದ್ದರು.

ತದಭ್ಯಾಸಕೃತಂ ಮತ್ವಾ ರಾತ್ರಾವಭ್ಯಸ್ತ ಪಾಂಡವಃ ।
ಯೋಗಂ ಚಕ್ರೇ ಮಹಾಬಾಹುರ್ಧನುಷಾ ಪಾಂಡುನಂದನಃ ॥೫॥

ಹಸ್ತದ ಪ್ರಕಾಶವು ತನ್ನ ಅಭ್ಯಾಸದಿಂದ ಉಂಟಾಗಿದೆ ಎಂದು ತಿಳಿದ ಪಾಂಡುನಂದನನಾದ, ಮಹಾಬಾಹುವಾದ ಅರ್ಜುನನು ರಾತ್ರಿಯಲ್ಲೂ ಧನುಸ್ಸಿನಿಂದ ಅಭ್ಯಾಸಮಾಡಲು ಪ್ರಾರಂಭಿಸಿದನು.

ತಸ್ಯ ಜ್ಯಾತಲನಿರ್ಘೋಷಂ ದ್ರೋಣಃ ಶುಶ್ರಾವ ತಂ ನಿಶಿ ।
ಉಪೇತ್ಯಾರ್ಜುನಮುತ್ಥಾಪ್ಯ ಪರಿಷ್ವಜ್ಯೇದಮಬ್ರವೀತ್ ॥೬॥

ದ್ರೋಣರು ರಾತ್ರಿಯ ವೇಳೆಯಲ್ಲಿ ಅರ್ಜುನನ ಹೆದೆಯ ಝೇಂಕಾರವನ್ನು ಕೇಳಿ ಅರ್ಜುನನ ಸಮೀಪಕ್ಕೆ ಬಂದು ಅವನನ್ನು ಎಬ್ಬಿಸಿ, ಆಲಿಂಗಿಸಿ ಈ ಮಾತುಗಳನ್ನು ಹೇಳಿದರು.

ಪ್ರಯತಿಷ್ಯೇ ತಥಾ ಕರ್ತುಂ ಯಥಾ ನಾನ್ಯೋ ಧನುರ್ಧರಃ ।
ತ್ವತ್ಸಮೋ ಭವಿತಾ ಲೋಕೇ ಸತ್ಯಮೇತದ್ ಬ್ರವೀಮಿ ತೇ ॥೭॥

ನಿನ್ನಂತಹ ಧನುರ್ಧರನು ಲೋಕದಲ್ಲಿ ಇನ್ನೊಬ್ಬನು ಇರಲಾರದಂತೆ ನಾನು ಪ್ರಯತ್ನಿಸುವೆನು. ಈ ಮಾತನ್ನು ಸತ್ಯವಾಗಿ ನಿನಗೆ ಹೇಳುತ್ತಿದ್ದೇನೆ.

ವೈಶಂಪಾಯನಃ

ತತೋ ದ್ರೋಣೋऽರ್ಜುನಂ ಭೂಯೋ ಹಯೇಷು ಚ ಗಜೇಷು ಚ ।
ರಥೇಷು ಭೂಮಾವಪಿ ಚ ರಣಶಿಕ್ಷಾಮಶಿಕ್ಷಯತ್ ॥೮॥

ಆನಂತರದಲ್ಲಿ ದ್ರೋಣರು ಪುನಃ ಅಶ್ವಗಳಲ್ಲಿ, ಗಜಗಳಲ್ಲಿ, ರಥಗಳಲ್ಲಿ ಮತ್ತು ಭೂಮಿಯಲ್ಲಿ ಯುದ್ಧ ಮಾಡುವ ಕೌಶಲವನ್ನು ಅರ್ಜುನನಿಗೆ ಶಿಕ್ಷಿಸಿದರು.

ಗದಾಯುದ್ಧೇಽಸಿಚರ್ಯಾಯಾಂ ತೋಮರಪ್ರಾಸಶಕ್ತಿಷು ।
ದ್ರೋಣಃ ಸಂಕೀರ್ಣಯುದ್ಧೇಷು ಶಿಕ್ಷಯಾಮಾಸ ಕೌರವಮ್ ॥೯॥

ದ್ರೋಣರು ಗದಾಯುದ್ಧದಲ್ಲಿಯೂ, ಖಡ್ಗಯುದ್ಧದಲ್ಲಿಯೂ, ತೋಮರ, ಪ್ರಾಸ, ಶಕ್ತಿಗಳ ಯುದ್ಧದಲ್ಲಿಯೂ ಮತ್ತು ಸಂಕೀರ್ಣ ಯುದ್ಧಗಳಲ್ಲಿಯೂ ಅರ್ಜುನನಿಗೆ ಶಿಕ್ಷಣವನ್ನು ಕೊಟ್ಟರು.

ತಸ್ಯ ತತ್ ಕೌಶಲಂ ದೃಷ್ಟ್ವಾ ಧನುರ್ವೇದಜಿಘೃಕ್ಷವಃ ।
ರಾಜಾನೋ ರಾಜಪುತ್ರಾಶ್ಚ ತತ್ರಾಜಗ್ಮುಃ ಸಹಸ್ರಶಃ ॥೧೦॥

ಅರ್ಜುನನ ಕೌಶಲವನ್ನು ನೋಡಿ ಧನುರ್ವೇದವನ್ನು ಕಲಿಯುವ ಆಸೆಯುಳ್ಳ ರಾಜರು ಮತ್ತು ರಾಜಪುತ್ರರು ಸಹಸ್ರಸಂಖ್ಯೆಯಲ್ಲಿ ಅಲ್ಲಿಗೆ ಬಂದರು.

ತಾನ್ ಸರ್ವಾನ್ ಶಿಕ್ಷಯಾಮಾಸ ದ್ರೋಣಃ ಶಸ್ತ್ರಭೃತಾಂ ವರಃ ।
ತತೋ ನಿಷಾದರಾಜಸ್ಯ ಹಿರಣ್ಯಧನುಷಃ ಸುತಃ ॥೧೧॥

ಏಕಲವ್ಯೋ ಮಹಾವೀರ್ಯೋ ದ್ರೋಣಮಭ್ಯಾಜಗಾಮ ಹ ।
ನ ಸ ತಂ ಪ್ರತಿಜಗ್ರಾಹ ನೈಷಾದಿರಿತಿ ಚಿಂತಯನ್ ।
ಶಿಷ್ಯಂ ಧನುಷಿ ಧರ್ಮಜ್ಞಃ ತೇಷಾಮೇವಾನ್ವವೇಕ್ಷಯಾ ॥೧೨॥

ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರು ಅವರೆಲ್ಲರಿಗೂ ಶಿಕ್ಷಣವನ್ನು ನೀಡಿದರು. ಆಗ ನಿಷಾದರಾಜ್ಯದ ರಾಜನಾದ ಹಿರಣ್ಯಧನುವಿನ ಮಗನಾದ ಏಕಲವ್ಯನು ದ್ರೋಣರ ಸಮೀಪಕ್ಕೆ ಬಂದನು.. ಧರ್ಮಜ್ಞರಾದ ದ್ರೋಣರು ಅವನು ಬೇಡರವನು ಎಂದು ಚಿಂತಿಸಿ ಧನುರ್ವಿದ್ಯೆಯಲ್ಲಿ ಅವನನ್ನು ಶಿಷ್ಯನೆಂದು ಸ್ವೀಕರಿಸಲಿಲ್ಲ. ಅವನನ್ನು ಪಾಂಡವರ ಮೇಲಿನ ಹಿತದೃಷ್ಟಿಯಿಂದಲೂ ಶಿಷ್ಯನೆಂದು ಸ್ವೀಕರಿಸಲಿಲ್ಲ.

ದ್ರೋಣಃ

ಶಿಷ್ಯೋಽಸಿ ಮಮ ನೈಷಾದೇ ಪ್ರಯೋಗೇ ಬಲವತ್ತರಃ ।
ನಿವರ್ತಸ್ವ ಗೃಹಾನೇವ ಅನುಜ್ಞಾತೋಽಸಿ ನಿತ್ಯಶಃ ॥೧೩॥

ನಿಷಾದಪುತ್ರನೇ, ನೀನು ನನ್ನ ಶಿಷ್ಯನಾಗಿದ್ದೀಯೆ, ಬಾಣಪ್ರಯೋಗದಲ್ಲಿಯೂ ನೀನು ಬಲಿಷ್ಠನಾಗಿದ್ದೀಯೆ, ಮನೆಗೆ ಹಿಂತಿರುಗು. ನಾನು ನಿನಗೆ ಯಾವಾಗಲೂ ಅನುಮತಿ ನೀಡಿದ್ದೇನೆ ಎಂದು ಹೇಳಿದರು.

ವೈಶಂಪಾಯನಃ

ಸ ತು ದ್ರೋಣಸ್ಯ ಶಿರಸಾ ಪಾದೌ ಗೃಹ್ಯ ಪರಂತಪಃ ।
ಅರಣ್ಯಮನುಸಂಪ್ರಾಪ್ಯ ಕೃತ್ವಾ ದ್ರೋಣಂ ಮಹೀಮಯಮ್ ॥೧೪॥

ತಸ್ಮಿನ್ನಾಚಾರ್ಯವೃತ್ತಿಂ ಚ ಪರಮಾಮಾಸ್ಥಿತಸ್ತದಾ ।
ಇಷ್ವಸ್ತ್ರೇ ಯೋಗಮಾತಸ್ಥೇ ಪರಂ ನಿಯಮಮಾಸ್ಥಿತಃ ॥೧೫॥

ಪರಂತಪನಾದ ಏಕಲವ್ಯನು ದ್ರೋಣರ ಪಾದಗಳಿಗೆ ಶಿರಸಾ ನಮಸ್ಕರಿಸಿ ಅರಣ್ಯಕ್ಕೆ ಹಿಂದಿರುಗಿ ದ್ರೋಣರ ಒಂದು ಮಣ್ಣಿನ ಪ್ರತಿಮೆಯನ್ನು ಮಾಡಿ ಅದರಲ್ಲಿ ಶ್ರೇಷ್ಠವಾದ ಗುರುವೃತ್ತಿಯನ್ನು ಮಾಡಿದನು.

ಸ ತೇನ ತಪಸಾ ಯುಕ್ತೋ ಯೋಗೇನ ಪರಮೇಣ ಚ ।
ವಿಮೋಕ್ಷಾದಾನಸಂಧಾನೇ ಲಘುತ್ವಂ ಪರಮಾಪ ಸಃ ॥೧೬॥

ಲಾಘವಂ ಚಾಸ್ತ್ರಯೋಗಂ ಚ ನಚಿರಾತ್ ಪ್ರತ್ಯಪದ್ಯತ ।
ಅಥ ದ್ರೋಣಾಭ್ಯನುಜ್ಞಾತಾಃ ಕದಾಚಿತ್ ಕುರುಪಾಂಡವಾಃ ।
ತಥೈವ ನಿರ್ಯಯುಃ ಸರ್ವೇ ಮೃಗಯಾಮರಿಮರ್ದನಾಃ ॥೧೭॥

ಅಸ್ತ್ರಗಳಲ್ಲಿ ಮತ್ತು ಬಾಣಪ್ರಯೋಗದಲ್ಲಿ ಸತತವಾಗಿ ಪ್ರಯತ್ನವನ್ನು ಮಾಡುತ್ತಾ, ಆ ಶ್ರೇಷ್ಠವಾದ ಅಭ್ಯಾಸದಿಂದ ಮತ್ತು ತಪಸ್ಸಿನಿಂದ ಕೂಡಿದವನಾಗಿ ಬಾಣವನ್ನು ಬತ್ತಳಿಕೆಯಿಂದ ತೆಗೆದು ಬಿಲ್ಲಿನಲ್ಲಿ ಹೂಡಿ ವಿಮೋಕ್ಷ ಮಾಡುವ ವಿಷಯದಲ್ಲಿ ಬಹಳ ವೇಗವನ್ನು ಸಂಪಾದಿಸಿದನು. ಅಲ್ಪ ಕಾಲದಲ್ಲಿಯೇ ಲಾಘವವನ್ನೂ ಮತ್ತು ಅಸ್ತ್ರಗಳ ಸಿದ್ಧಿಯನ್ನೂ ಪಡೆದನು. ಒಮ್ಮೆ ದ್ರೋಣರ ಅಪ್ಪಣೆಯನ್ನು ಪಡೆದ ಅರಿಮರ್ದನರಾದ ಕುರುಪಾಂಡವರು ಬೇಟೆಯಾಡಲು ಹೊರಟರು.

ತತ್ರೋಪಕರಣಂ ಗೃಹ್ಯ ನರಃ ಕಶ್ಚಿದ್ ಯದೃಚ್ಛಯಾ ।
ರಾಜನ್ನನುಜಗಾಮೈಕಃ ಶ್ವಾನಮಾದಾಯ ಪಾಂಡವಾನ್ ॥೧೮॥

ಆಗ ಬೇಟೆಯ ಸಲಕರಣೆಗಳನ್ನು ಮತ್ತು ನಾಯಿಯನ್ನೂ ತೆಗೆದುಕೊಂಡು ಒಬ್ಬ ಅನುಚರನು ಪಾಂಡವರನ್ನು ಹಿಂಬಾಲಿಸಿದನು.

ತೇಷಾಂ ವಿಚರತಾಂ ತತ್ರ ತತ್ತತ್ಕರ್ಮ ಚಿಕೀರ್ಷತಾಮ್ ।
ಶ್ವಾ ಚರನ್ ಸ ವನೇ ಮೂಢೋ ನೈಷಾದಿಂ ಪ್ರತಿ ಜಗ್ಮಿವಾನ್ ॥೧೯॥

ಅವರು ಅಲ್ಲಲ್ಲಿ ಸಂಚರಿಸುತ್ತಾ ಬೇಟೆಯಾಡುತ್ತಿರಲು ನಾಯಿಯು ಅಲ್ಲಿ ತಿರುಗಾಡುತ್ತಾ ನಿಷಾದಪುತ್ರನಾದ ಏಕಲವ್ಯನ ಬಳಿ ಹೋಯಿತು.

ಸ ಕೃಷ್ಣಂ ಮಲದಿಗ್ಧಾಂಗಂ ಕೃಷ್ಣಾಜಿನಧರಂ ಕೃಶಮ್ ।
ನೈಷಾದಿಂ ಶ್ವಾ ಸಮುದ್ವೀಕ್ಷ್ಯ ಭಷಂಸ್ತಸ್ಥೌ ತದಂತಿಕೇ ॥೨೦॥

ಕಪ್ಪಾಗಿದ್ದು, ಕೃಶನಾಗಿ, ದೇಹದಲ್ಲಿ ಕೊಳೆಯಿದ್ದು ಕೃಷ್ಣಾಜಿನವನ್ನು ಧರಿಸಿದ ಆ ಏಕಲವ್ಯನನ್ನು ನೋಡಿ ನಾಯಿಯು ಅವನ ಸಮೀಪದಲ್ಲಿ ಬೊಗಳುತ್ತಾ ನಿಂತುಕೊಂಡಿತು.

ತಸ್ಯೈಕಲವ್ಯೋ ಭಷತಃ ಶುನಃ ಸಪ್ತ ಶರಾನ್ ಮುಖೇ ।
ಲಾಘವಾದರ್ಪಯಾಮಾಸ ಶಬ್ದವೇಧ್ಯಮದರ್ಶಯನ್ ।
ಸ ತು ಶ್ವಾ ಶರಪೂರ್ಣಾಸ್ಯಃ ಪಾಂಡವಾನಾಜಗಾಮ ಹ ॥೨೧॥

ಏಕಲವ್ಯನು ತನ್ನ ಶಬ್ದವೇಧಿವಿದ್ಯೆಯನ್ನು ತೋರಿಸುವವನಾಗಿ ಬೊಗಳುತ್ತಿದ್ದ ಆ ನಾಯಿಯ ಬಾಯಿಯಲ್ಲಿ ಏಳು ಬಾಣಗಳನ್ನು ಸೇರಿಸಿದನು. ಆ ನಾಯಿಯು ಬಾಯಿಯಲ್ಲಿ ಬಾಣಗಳನ್ನು ತುಂಬಿಕೊಂಡು ಪಾಂಡವರ ಸಮೀಪಕ್ಕೆ ಬಂದಿತು.

ತಂ ದೃಷ್ಟ್ವಾ ಕೌರವಾ ರಾಜನ್ ವಿಸ್ಮಯಂ ಪರಮಂ ಗತಾಃ ।
ಲಾಘವಂ ಶಬ್ದವೇಧಿತ್ವಂ ದೃಷ್ಟ್ವಾ ತಂ ಚಿಂತಯಂಸ್ತದಾ ॥೨೨॥

ರಾಜನೇ, ಅದನ್ನು ನೋಡಿ ಬಹಳ ವಿಸ್ಮಯಗೊಂಡ ಪಾಂಡವರು ಬಾಣಪ್ರಯೋಗವನ್ನು ಮಾಡಿದವನ ಲಾಘವವನ್ನು ಮತ್ತು ಶಬ್ದವೇಧಿತ್ವವನ್ನು ಕುರಿತು ಚಿಂತಿಸಿದರು.

ಪ್ರೇಕ್ಷ್ಯ ತಂ ವ್ರೀಳಿತಾಶ್ಚಾಸನ್ ಪ್ರಶಶಂಸುಶ್ಚ ಶಿಕ್ಷಿತಮ್ ।
ತಂ ತತೋಽನ್ವೇಷಮಾಣಾಸ್ತೇ ವನೇ ವನಚರೇಶ್ವರಮ್ ॥೨೩॥

ದದೃಶುಃ ಪಾಂಡವಾ ರಾಜನ್ನಸ್ಯಂತಮನಿಶಂ ಶರಾನ್ ।
ನ ಚೈನಮಭ್ಯಜಾನಂಸ್ತೇ ತದಾ ವಿಕೃತದರ್ಶನಮ್ ।
ಅಥೈನಂ ಪರಿಪಪ್ರಚ್ಛುಃ ಕೋ ಭವಾನ್ ಕಸ್ಯ ಚೇತಿ ಹ ॥೨೪॥

ಅದನ್ನು ನೋಡಿ ಅವರು ನಾಚಿಕೆಗೊಂಡು ಅವನ ವಿದ್ಯೆಯನ್ನು ಹೊಗಳಿದರು. ಅವನನ್ನು ಹುಡುಕುತ್ತಾ ಹೊರಟ ಪಾಂಡವರು ಕಾಡಿನಲ್ಲಿ ಒಂದೇ ಸಮನೆ ಬಾಣಗಳನ್ನು ಬಿಡುತ್ತಿದ್ದಂತಹ ಅವನ ಬಳಿಗೆ ಬಂದರು. ವಿಕೃತದರ್ಶನನಾದ ಅವನನ್ನು ಅವರು ಗುರುತಿಸಲು ಸಾಧ್ಯವಾಗಲಿಲ್ಲ. ಆಗ ಅವರು ಅವನನ್ನು ನೀನು ಯಾರು? ಮತ್ತು ಯಾರ ಮಗ? ಎಂದು ಕೇಳಿದರು.

ಏಕಲವ್ಯಃ

ನಿಷಾದಾಧಿಪತೇರ್ವೀರಾ ಹಿರಣ್ಯಧನುಷಃ ಸುತಮ್ ।
ದ್ರೋಣಶಿಷ್ಯಂ ಚ ಮಾಂ ವಿತ್ತ ಧನುರ್ವೇದಕೃತಶ್ರಮಮ್ ॥೨೫॥

ವೀರರೇ, ನಾನು ನಿಷಾದಾಧಿಪತಿಯಾದ ಹಿರಣ್ಯಧನುವಿನ ಪುತ್ರ. ನನ್ನನ್ನು ದ್ರೋಣರ ಶಿಷ್ಯನೆಂದು, ಧನುರ್ವೇದದಲ್ಲಿ ಪರಿಶ್ರಮವುಳ್ಳವನೆಂದು ತಿಳಿಯಿರಿ.

ವೈಶಂಪಾಯನಃ

ತೇ ತಮಾಜ್ಞಾಯ ತತ್ತ್ವೇನ ಪುನರಾಗಮ್ಯ ಪಾಂಡವಾಃ ।
ಯಥಾವೃತ್ತಂ ವನೇ ರಾಜನ್ ದ್ರೋಣಾಯಾಚಖ್ಯುರದ್ಭುತಮ್ ॥೨೬॥

ರಾಜನೇ, ಆ ಪಾಂಡವರು ಅವನ ನಿಜಸ್ವರೂಪನ್ನು ತಿಳಿದು ಊರಿಗೆ ಮರಳಿ ಬಂದು ಕಾಡಿನಲ್ಲಿ ನಡೆದ ಅದ್ಭುತವನ್ನು ದ್ರೋಣರಿಗೆ ಹೇಳಿದರು.

ಕೌಂತೇಯಸ್ತ ವ್ಜರ್ಜುನೋ ರಾಜನ್ನೇಕಲವ್ಯಮನುಸ್ಮರನ್ ।
ರಹೋ ದ್ರೋಣಂ ಸಮಾಗಮ್ಯ ಪ್ರಣಯಾದಿದಮಬ್ರವೀತ್ ॥೨೭॥

ರಾಜನೇ, ಕುಂತಿಯ ಸುತನಾದ ಅರ್ಜುನನು ಏಕಲವ್ಯನನ್ನೇ ಸ್ಮರಿಸುತ್ತಾ ಏಕಾಂತದಲ್ಲಿ ದ್ರೋಣರನ್ನು ಸಂಧಿಸಿ ಪ್ರೀತಿಯಿಂದ ಈ ಮಾತನ್ನು ಆಡಿದನು.

ನನ್ವಹಂ ಪರಿರಭ್ಯೈಕಃ ಪ್ರೀತಿಪೂರ್ವಮಿದಂ ವಚಃ ।
ಭವತೋಕ್ತೋ ನ ಮೇ ಶಿಷ್ಯಃ ತ್ವದ್ವಿಶಿಷ್ಟೋ ಭವಿಷ್ಯತಿ ॥೨೮॥

ಅಥ ಕಸ್ಮಾನ್ಮದ್ವಿಶಿಷ್ಟೋ ಲೋಕಾದಪಿ ಚ ವೀರ್ಯವಾನ್ ।
ಅಸ್ಯನ್ಯೋ ಭವತಃ ಶಿಷ್ಯೋ ನಿಷಾದಾಧಿಪತೇಃ ಸುತಃ ॥೨೯॥

ಪೂಜ್ಯರೇ, ನೀವು ನನ್ನನ್ನು ಆಲಿಂಗಿಸಿ ಪ್ರೀತಿಪೂರ್ವಕವಾಗಿ ನಿನಗಿಂತ ಶ್ರೇಷ್ಠನಾದ ನನ್ನ ಶಿಷ್ಯನು ಇರುವುದಿಲ್ಲ ಎಂದು ಹೇಳಿದ್ದಿರಿ. ಹೀಗಿರುವಾಗ ನನಗಿಂತಲೂ ಮತ್ತು ಉಳಿದವರಿಗಿಂತಲೂ ಶ್ರೇಷ್ಠನಾದ, ಪರಾಕ್ರಮಶಾಲಿಯಾದ ನಿಷಾದಾಧಿಪತಿಯ ಪುತ್ರನಾದ ಏಕಲವ್ಯನು ಹೇಗೆ ನಿಮ್ಮ ಶಿಷ್ಯನಾಗಿದ್ದಾನೆ?

ವೈಶಂಪಾಯನಃ

ಮುಹೂರ್ತಮಿವ ತಂ ದ್ರೋಣಶ್ಚಿಂತಯಿತ್ವಾ ವಿನಿಶ್ಚಯಮ್ ।
ಸವ್ಯಸಾಚಿನಮಾದಾಯ ನೈಷಾದಿಂ ಪ್ರತಿ ಜಗ್ಮಿವಾನ್ ॥೩೦॥

ದ್ರೋಣರು ಒಂದು ಮಹೂರ್ತಕಾಲ ಚಿಂತಿಸಿ ಏನು ಮಾಡಬೇಕೆಂದು ನಿಶ್ಚಯಿಸಿ ಅರ್ಜುನನನ್ನು ಕರೆದುಕೊಂಡು ಏಕಲವ್ಯನ ಬಳಿಗೆ ಹೋದರು.

ದದರ್ಶ ಮಲದಿಗ್ಧಾಂಗಂ ಜಟಿಲಂ ಚಿರವಾಸಸಮ್ ।
ಏಕಲವ್ಯಂ ಧನುಷ್ಪಾಣಿಮಸ್ಯಂತಮನಿಶಂ ಶರಾನ್ ॥೩೧॥

ಕೊಳೆಯಿಂದ ಕೂಡಿದ ಶರೀರವುಳ್ಳವನಾಗಿ, ಜಟಿಲನಾಗಿ, ಚೀರವಸ್ತ್ರವನ್ನುಟ್ಟು ಕೈಯಲ್ಲಿ ಧನುಸ್ಸನ್ನು ಹಿಡಿದು ಸತತವಾಗಿ ಬಾಣಗಳನ್ನು ಪ್ರಯೋಗಿಸುವ ಏಕಲವ್ಯನನ್ನು ನೋಡಿದರು.

ಏಕಲವ್ಯಸ್ತು ತಂ ದೃಷ್ಟ್ವಾ ದ್ರೋಣಮಾಯಾಂತಮಂತಿಕಾತ್ ।
ಅಭಿಗಮ್ಯೋಪಸಂಗೃಹ್ಯ ಜಗಾಮ ಶಿರಸಾ ಮಹೀಮ್ ॥೩೨॥

ಏಕಲವ್ಯನಾದರೋ, ಸಮೀಪಕ್ಕೆ ಬಂದ ದ್ರೋಣರನ್ನು ನೋಡಿ ಬೇಗ ಎದುರಿಗೆ ಬಂದು, ಭೂಮಿಯ ಮೇಲೆ ಬಿದ್ದು ಶಿರಸಾ ನಮಸ್ಕಾರವನ್ನು ಮಾಡಿದನು.

ಪೂಜಯಿತ್ವಾ ತತೋ ದ್ರೋಣಂ ವಿಧಿವತ್ ಸ ನಿಷಾದಜಃ ।
ನಿವೇದ್ಯ ಶಿಷ್ಯಮಾತ್ಮಾನಂ ತಸ್ಥೌ ಪ್ರಾಂಜಲಿರಗ್ರತಃ ॥೩೩॥

ಏಕಲವ್ಯನು ದ್ರೋಣರಿಗೆ ವಿಧಿವತ್ತಾಗಿ ಪೂಜೆಯನ್ನು ಸಲ್ಲಿಸಿ ತನ್ನನ್ನು ಶಿಷ್ಯನೆಂದು ನಿವೇದಿಸಿಕೊಂಡು ಕೈಗಳನ್ನು ಮುಗಿದು ಎದುರಿನಲ್ಲಿ ನಿಂತನು.

ತತೋ ದ್ರೋಣೋಽಬ್ರವೀದ್ ರಾಜನ್ ಏಕಲವ್ಯಮಿದಂ ವಚಃ ।
ಯದಿ ಶಿಷ್ಯೋಽಸಿ ಮೇ ತಾತ ವೇತನಂ ದೀಯತಾಮಿತಿ ॥೩೪॥

ರಾಜನೇ, ಆಗ ದ್ರೋಣರು ಏಕಲವ್ಯನನ್ನು ಕುರಿತು ನೀನು ನನ್ನ ಶಿಷ್ಯನಾದರೆ ಗುರುದಕ್ಷಿಣೆಯನ್ನು ಕೊಡಬೇಕು ಎಂದು ಹೇಳಿದರು.

ಏಕಲವ್ಯಸ್ತು ತಚ್ಛ್ರುತ್ವಾ ಪ್ರೀಯಮಾಣೋಽಬ್ರವೀದಿದಮ್ ।
ಕಿಂ ಪ್ರಯಚ್ಛಾಮಿ ಭಗವಾನಾಜ್ಞಾಪಯತು ಮಾಂ ಗುರುಃ ।
ನ ಹಿ ಕಿಂಚಿದದೇಯಂ ಮೇ ಗುರವೇ ಬ್ರಹ್ಮವಿತ್ತಮ ॥೩೫॥

ಏಕಲವ್ಯನು ಅದನ್ನು ಕೇಳಿ ಬಹಳ ಸಂತೋಷಗೊಂಡು ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದವರೇ, ನಾನು ಏನು ಕೊಡಬೇಕೆಂದು ಪೂಜ್ಯಗುರುಗಳಾದ ತಾವೇ ತಿಳಿಸಬೇಕು? ತಮಗೆ ಕೊಡಲಾರದುದು ನನ್ನ ಬಳಿ ಏನೂ ಇಲ್ಲ ಎಂದು ಹೇಳಿದನು.

ತಮಬ್ರವೀತ್ ತ್ವಯಾಽಂಗುಷ್ಠೋ ದಕ್ಷಿಣೋ ದೀಯತಾಮಿತಿ ।
ಏಕಲವ್ಯಸ್ತು ತಚ್ಛ್ರುತ್ವಾ ವಚೋ ದ್ರೋಣಸ್ಯ ದಾರುಣಮ್ ॥೩೬॥

ಪ್ರತಿಜ್ಞಾಮಾತ್ಮನೋ ರಕ್ಷನ್ ಸತ್ಯೇ ಚ ನಿರತಃ ಸದಾ ।
ತಥೈವ ಹೃಷ್ಟವದನಃ ತಥೈವಾದೀನಮಾನಸಃ ॥೩೭॥

ಆಗ ದ್ರೋಣರು ನಿನ್ನ ಬಲಗೈನ ಅಂಗುಷ್ಠವನ್ನು ಕೊಡು ಎಂದು ಹೇಳಿದರು. ಏಕಲವ್ಯನು ದ್ರೋಣರ ದಾರುಣವಾದ ಆ ವಚನವನ್ನು ಕೇಳಿ ತನ್ನ ಪ್ರತಿಜ್ಞೆಯನ್ನು ರಕ್ಷಿಸಿಕೊಂಡು ಸತ್ಯದಲ್ಲೇ ಇರಲು ಬಯಸಿ ಮನಸ್ಸಿನಲ್ಲಿ ದೈನ್ಯವನ್ನು ತಂದುಕೊಳ್ಳದೆ ಸಂತೋಷದಿಂದ ಕೂಡಿದ ಮುಖವುಳ್ಳವನಾಗಿದ್ದನು.

ಸತ್ಯಸಂಧಂ ತಂ ನೈಷಾದಿಂ ದೃಷ್ಟ್ವಾ ದ್ರೋಣೋಽಬ್ರವೀದಿದಮ್ ।
ಏವಂ ಕರ್ತವ್ಯಮಿತಿ ವೈ ಏಕಲವ್ಯಮಭಾಷತ ।
ಛಿತ್ತ್ವಾ ತ್ವವಿಚಾರ್ಯ ತಂ ಪ್ರಾದಾದ್ ದ್ರೋಣಾಯಾಂಗುಷ್ಠಮಾತ್ಮನಃ ॥

ಸತ್ಯಸಂಧನಾದ, ನಿಷಾದಪುತ್ರನಾದ ಏಕಲವ್ಯನನ್ನು ನೋಡಿ ದ್ರೋಣರು ಹಾಗೆಯೇ ಮಾಡಬೇಕು ಎಂದು ಹೇಳಿದರು. ಏಕಲವ್ಯನು ಏನೂ ವಿಚಾರ ಮಾಡದೆ ತನ್ನ ದಕ್ಷಿಣಾಂಗುಷ್ಠವನ್ನು ಕತ್ತರಿಸಿ ದ್ರೋಣರಿಗೆ ಅರ್ಪಿಸಿದನು.

ಅತಃ ಪರಂ ತು ನೈಷಾದಿರಂಗುಲೀಭಿರಕರ್ಷತ ।
ನ ತಥಾ ಸ ತು ಶೀಘ್ರೋಽಭೂದ್ ಯಥಾ ಪೂರ್ವಂ ನರಾಧಿಪ ॥

ಅಲ್ಲಿಂದ ಮುಂದಕ್ಕೆ ಏಕಲವ್ಯನು ತನ್ನ ಉಳಿದ ಬೆರಳುಗಳಿಂದಲೇ ಹೆದೆಯನ್ನು ಎಳೆಯುತ್ತಿದ್ದನು. ಆದರೆ ರಾಜನೇ, ಮೊದಲಿನ ಕ್ಷಿಪ್ರತೆಯು ಇರಲಿಲ್ಲ.

ತತೋಽರ್ಜುನಃ ಪ್ರೀತಮನಾ ಬಭೂವ ವಿಗತಜ್ವರಃ ।
ದ್ರೋಣಶ್ಚ ಸತ್ಯವಾಗಾಸೀನ್ನಾಧಿಕೋಽನ್ಯೋಽರ್ಜುನಾದಭೂತ್ ॥೪೦॥

ಅನಂತರ ಅರ್ಜುನನು ಸಂತೋಷಗೊಂಡು ತನ್ನ ಮನೋಜ್ವರದಿಂದ ಮುಕ್ತನಾದನು. ದ್ರೋಣರೂ ಸತ್ಯವಚನರಾದರು. ಅರ್ಜುನನಿಗಿಂತ ಶ್ರೇಷ್ಠರಾದ ದ್ರೋಣರ ಶಿಷ್ಯರು ಯಾರೂ ಇರಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕತ್ರಿಂಶತ್ಯಧಿಕಶತತಮೋಽಧ್ಯಾಯಃ ॥
॥ ಸಂಭವಪರ್ವಣಿ ಏಕೋನಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

ತಪೋ ನ ಕಲ್ಕೋಽಧ್ಯಯನಂ ನ ಕಲ್ಕಃ
ಸ್ವಾಭಾವಿಕೋ ವೇದವಿಧಿರ್ನ ಕಲ್ಕಃ ।
ಪ್ರಸಹ್ಯ ವಿತ್ತಾಹರಣಂ ನ ಕಲ್ಕಃ
ತಾನ್ಯೇವ ಭಾವೋಪಹತಾನಿ ಕಲ್ಕಃ ॥

ತಪಸ್ಸು ಬಂಧಕವಲ್ಲ,
ಅಧ್ಯಯನವು ಬಂಧಕವಲ್ಲ.
ವೇದವಿಧಿಗಳು ಬಂಧಕಗಳಲ್ಲ.
ಬಲಾತ್ಕರಿಸಿ ಕರ ಸ್ವೀಕರಿಸುವುದು
ಕ್ಷತ್ರಿಯರಿಗೆ ಬಂಧಕವಲ್ಲ.
ಉದ್ದೇಶವು ದುಷ್ಟವಾದಾಗ
ಇವೆಲ್ಲವೂ ಬಂಧಕಗಳಾಗುತ್ತವೆ.

ISBN 978-93-81807-44-6